Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಖಾಕ್ಸಾರ ಮುಖಂಡನು ಮರಿಹಿಟ್ಲರ್

ಖಾಕ್ಸಾರ ಚಳವಳಿದ ಸೂಕ್ಷ್ಮ ಪರಿಚಯ

ಖಾಕ್ಸಾರರ ವಿಷಯವು ಇಂದು ಬಹಳವಾಗಿ ಕೇಳಿ ಬರುತ್ತಿದೆ. ಅದರಲ್ಲಿ ಇತ್ತೀಚೆಗೆ ಲಾಹೋರಿನಲ್ಲಿ ಗುಂಡು ಹಾರಿಸಲಾದ ಮೇಲೆ ಅದು ಅತ್ಯಂತ ಕುತೂಹಲ ಜನಕವಾದ ವಾರ್ತೆಯಾಗಿ ಪರಿಣಮಿಸಿದೆ. ಇದು ಒಂದು ರೀತಿಯ ಜಾತೀಯ ಆಂದೋಲನವೇ ಆಗಿದ್ದರೂ ಅನೇಕ ಧುರೀಣರ ಹೇಳಿಕೆಗಳನ್ನು ವಿಚಾರಿಸಿದರೆ, ಇದು ನಾಜಿಸಂ ಫೇಸಿಸಂಗಳಂತೆ ಹಿಂಸಾಮಯವಾದ ಚಳವಳಿವೆಂದು ತೋರುತ್ತದೆ.

ಇದು ೧೯೩೧ರಲ್ಲಿ ಸುಮಾರು ೫೦ ವರ್ಷ ಪ್ರಾಯದ ಇನಯತುಲ್ಲ ಮಶ್ರಿಕಿ ಎಂಬ ಪಠಾಣ ಮುಖಂಡನಿಂದ ಸ್ಥಾಪಿತವಾಯಿತು. ಆತನು ಲಾಹೋರನ್ನು ಕೇಂದ್ರಸ್ಥಳವನ್ನಾಗಿ ಆರಿಸಿದ್ದನು. ಅಲ್ ಇಸ್ಲಾಂ ಎಂಬ ಹೆಸರಿನ ಪತ್ರಿಕೆಯ ಮೂಲಕ ತನ್ನ ಪಕ್ಷದ ಚಟುವಟಿಕೆಗಳನ್ನು ಪ್ರಚಾರಪಡಿಸಿದನು.

ಹಿಟ್ಲರನ ದರ್ಶನ

ಅಲಮಾ ಎಂಬವನು ಬಹಳ ಚುರುಕು ಬುದ್ಧಿಯ ವಿದ್ಯಾರ್ಥಿಯು. ತನ್ನ ೧೯ನೇ ವರ್ಷ ಪ್ರಾಯದಲ್ಲಿಯೇ ಆತನು ಪಂಜಾಬು ವಿಶ್ವವಿದ್ಯಾಲಯದ ಎಂ. ಎ. ಪದವಿಯನ್ನು ಪಡೆದಿದ್ದನು. ಆ ಮೇಲೆ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ತೆರಳಿದ. ೧೯೦೯ರಲ್ಲಿ ಆತನು ಗಣಿತದಲ್ಲಿ ಟ್ರೈಪೋಸ್ ಪರೀಕ್ಷೆಯನ್ನು ಉಚ್ಚ ತರಗತಿಯಲ್ಲಿ ತೇರ್ಗಡೆ ಮಾಡಿಕೊಂಡು ವಿದ್ಯಾರ್ಥಿವೇತನವೊಂದನ್ನೂ ಗಳಿಸಿಕೊಂಡನು. ಎರಡು ವರ್ಷಗಳ ಮೇಲೆ ಪರ್ಶಿಯನ್ ಮತ್ತು ಅರೇಬಿಕ್‌ಗಳಲ್ಲಿ ಟ್ರಿಪೋಸ್ ಪರೀಕ್ಷೆಗಳನ್ನು ಉತ್ತೀರ್ಣ ಮಾಡಿಕೊಂಡು ಫಿಸಿಕ್ಸಿನಲ್ಲಿ ಬಿ. ಎಸ್. ಸಿ. ಡಿಗ್ರಿಯನ್ನು ಪಡೆದನು. ಮೆಕೆನಿಕಲ್ ಸಯಿನ್ಸಿನಲ್ಲಿಯೂ ಡಿಗ್ರಿಯನ್ನು ಪಡೆದನು.

ಸ್ವದೇಶಕ್ಕೆ ಮರಳಿದ ಮೇಲೆ ಅಲಮಾನು ಪೇಶಾವರದ ಇಸ್ಲಾಮಿಯಾ ಕಾಲೇಜಿನ ವೈಸ್ ಪ್ರಿನ್ಸಿಪಾಲನಾಗಿ ನಿಯುಕ್ತನಾದನು. ವಿದ್ಯಾಂಗದಲ್ಲಿ ಹೆಚ್ಚಿನ ಗೌರವದ ಪದವಿಯಲ್ಲಿದ್ದನು. ೧೯೨೬ರಲ್ಲಿ ಆತನು ಜರ್ಮನಿಗೆ ತೆರಳಿದ್ದನು. ಹಿಟ್ಲರನನ್ನು ಸಂದರ್ಶಿಸಿದನು. ಆತನು ಖಾಕ್ಸಾರ ಚಳವಳಿವನ್ನು ತಿರುಗಿ ಭಾರತಕ್ಕೆ ಬಂದ ಮೇಲೆ ೧೯೩೧ರಲ್ಲಿ ಆರಂಭಿಸಿದನು.

ಉದ್ದೇಶ

ಈ ಚಳವಳಿದ ಉದ್ದೇಶವೇನಿರಬಹುದು? ಅದರ ಮುಖಂಡನೇ ಅದನ್ನು ಕುರಿತು ಹೀಗೆಂದು ಹೇಳಿರುವನು. 'ಖಾಕ್ಸಾರ ಸಿಪಾಯಿಯ ಉದ್ದೇಶವು ಅಖಿಲ ಜಗತ್ತಿನ ಮೇಲೆ ತನ್ನ ಸದ್ಗುಣ ಹಾಗೂ ಸತ್ಕಾರ್ಯಗಳಿಂದ [illegible] ತನವನ್ನು ಸ್ಥಾಪಿಸುವದು" ಅಲ್ಲಾಮನಿಗೆ ಪೈಗಂಬರರ ಸಂದೇಶವು ಸ್ವಪ್ನದಿಂದಲೂ ಹೇಳಲಾಗಿದೆ.

ಆದರೆ ಈ ಚಳವಳಿದ ರಾಜಕೀಯ ಧೋರಣೆಯೇನು? "ಖಾಕ್ಸಾರ ಚಳವಳಿವು ಐಕ್ಯತೆಯನ್ನು ಸ್ಥಾಪಿಸಿ ಜಗತ್ತಿನ ಮೇಲೆ ಪ್ರಾಮುಖ್ಯತೆಯನ್ನು ಹೊಂದುವದು" ಹೀಗೆಂದು ಅವರ ಪ್ರಕಟಣೆಗಳಲ್ಲಿದೆ.

ಜಗತ್ತಿನ ಜಯ

'ನೀವು ಇನ್ನೊಮ್ಮೆ ಜಗತ್ತನ್ನೇ ಜಯಿಸಬೇಕು. ಇದೇ ಕುರಾನಿನ ನಿಜವಾದ ಬೋಧನೆಯಾಗಿದೆ. ಮುಸಲ್ಮಾನರು ಸೈನಿಕ ಜೀವನವನ್ನು ಬಿಟ್ಟು, ಅದರಿಂದ ಧರ್ಮವನ್ನು ಬೇರೆ ಮಾಡಿ, ಧರ್ಮಕ್ಕೆ ಆಘಾತ ತಂದ ಕಾರಣ ದೇವರು ಅವರ ಮೇಲೆ ಮುನಿದು ಅವರ ರಾಜ್ಯಗಳು ಇತರರಿಗೆ ಕೊಟ್ಟನು. ಇದರಿಂದಲೇ ಸೈನಿಕ ಜೀವನವೂ ಇಸ್ಲಾಮರ ಧರ್ಮವೂ ಅಭೇದ್ಯವಾಗಿದೆಯೆಂದು ತಿಳಿಯುವುದಿಲ್ಲವೇ?'

"ಯಾವ ಕಾಫರನೂ ಮೂರ್ತಿಪೂಜಕನೂ ಈ ಸುಂದರ ಜಗತ್ತಿನಲ್ಲಿ ಜೀವಿಸಬಾರದು. ಇದೇ ನಿಜವಾದ ದೈವಾರಾಧನೆಯಾಗಿದೆ. ದೇವರ ಸೇವಕರಾಗಲು ಇವೇ ಯೋಗ್ಯ ನಡತೆಗಳು. ಖಾಕ್ಸಾರ ಸಿಪಾಯಿಗಳನ್ನು ಅನುಸರಿಸಿ ಇಸ್ಲಾಮಿ ಧರ್ಮವನ್ನು ಹಿಂಬಾಲಿಸಿರಿ. ಇದರಿಂದಲೇ ಮುಳುಗುವ ಇಸ್ಲಾಮ್ ಹಡಗವನ್ನು ನೀವು ಬದುಕಿಸಬಹುದು." ಇದೆಲ್ಲಾ ಅವರ ಪ್ರಕಟಣೆಗಳಲ್ಲಿರುವ ವಿಷಯಗಳು.

ಮರಿ ಹಿಟ್ಲರ್

ಅಲ್ಲಾಮನು ಮರಿ ಹಿಟ್ಲರನೇ ಆಗಿರುವನೆಂದು ಲಾಹೋರಿನ ಪತ್ರಿಕೆಯೊಂದು ಬರೆಯುತ್ತದೆ. ಆತನ ಸಂಗಡಿಗನಾದ ಸಲಾರಿ ಅಸ್ಗಾನನು ಇನ್ನೊಬ್ಬ ಗೊಬೆಲ್ಸನು, ಇವರಿಬ್ಬರೂ ಆಯಾಯ ಕಾರ್ಯಗಳಲ್ಲಿ ಹೆಸರಾದವರು. ಅವರು ಭಾರತದ ಹಲವು ಪತ್ರಿಕೆಗಳ ಸಂಪರ್ಕ ಮಾಡಿಕೊಂಡಿರುವರು. ತನ್ನ ತನ್ನ ಊರಲ್ಲಿ ಖಾಕ್ಸಾರರ ಕುರಿತು ಪ್ರಕಟವಾಗುವ ಚಳವಳಿವನ್ನು ಅಲ್ಲಲ್ಲಿನ ಖಾಕ್ಸಾರ ಸಿಪಾಯಿಯು ತಿಳಿಸಿ ವರದಿ ಮಾಡುವನು.

ಅವರು ಪತ್ರಿಕಾ ಸಂಪಾದಕರನ್ನು ಬಹಳವಾಗಿ ಪೀಡಿಸುತ್ತಿರುವರು. ಅವರ ವಿರುದ್ಧ ಲೇಖನ ಬರೆದ ಯಾವುದೇ ಪತ್ರಿಕೆಯಾಗಲಿ ಅದನ್ನು ಹೊರಡದಂತೆ ನೋಡುವುದು ಅಲ್ಲಾಮನ ಹಠವಾಗಿದೆ.

HALFTONE & LINE
BLOCK MAKING
UNDERTAKEN
Sharada Press,
MANGALORE

ಒಂದು ರುಚಿಕರವಾದ
ಪಾನೀಯ
ತಂಪಾದ, ಪೋಷಿಸುವ
ಮತ್ತು
ಸಂರಕ್ಷಿಸುವ

ತಣ್ಣಗಾದ "ಓವಲ್ಟಿನ್" ಪಾನೀಯವನ್ನು ಒಂದು ಗ್ಲಾಸ್ ತಣ್ಣಗಿನ ಹಾಲಿಗೆ ಎರಡು ಚಮಚೆಯಷ್ಟು 'ಓವಲ್ಟಿನ್'ನ್ನು ಬೆರಸಿ ಚೆನ್ನಾಗಿ ಕದಡಿಸಿ ಕೂಡಲೇ ತಯಾರಿಸಬಹುದು. ಇದರ ಗುಣವು ಮೆಚ್ಚತ್ತಿಗೆಯ ಪಾನೀಯ ಮಾತ್ರವಲ್ಲದೆ ದೇಹವನ್ನು ಪೋಷಿಸಿ ಬಲವನ್ನೂ ಧಾತುವನ್ನೂ ವೃದ್ಧಿ ಮಾಡುತ್ತದೆ.

ಒಂದು ಗ್ಲಾಸು ತಂಪಾದ 'ಓವಲ್ಟಿನ್'ನ್ನು ಇಂದೇ ಪರೀಕ್ಷಿಸಿರಿ. 'ಓವಲ್ಟಿನ್' ತಣ್ಣಗಾಗಿ ಯಾ ಬಿಸಿಯಾಗಿ ಸೇವಿಸಿದರೂ ಒಂದೇ ತರನಾಗಿರುತ್ತದೆ. ಅದು ಮಾಗಿ ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು, ಅನುಕೂಲ್ಯವಾದ ಪ್ರಾಕೃತಿಕ ವಿಟಮಿನ್ (ಆಹಾರ ಸತ್ವ) ಮತ್ತು ಅನೇಕ ರಂಜಕಗಳಿಂದ ಕೂಡಿದ ಪೌಷ್ಟಿಕ ಆಹಾರವಾಗಿರುತ್ತದೆ. 'ಓವಲ್ಟಿನ್'ನೊಡನೆ ಗುಣದಲ್ಲಿಯೂ, ಪರಿಮಾಣದಲ್ಲಿಯೂ, ಬೆಲೆಯಲ್ಲಿಯೂ ಸಮತೋಲಿಕೆಯ ಬೇರೆ ಪಾನೀಯಗಳೇ ಇಲ್ಲ. ಬದಲಿ ಪಾನೀಯಗಳ ಗೊಡವೆಯನ್ನೇ ಬಿಡಿರಿ.

'ಓವಲ್ಟಿನ್'
OVALTINE ಒಂದು ಶಕ್ತಿಕರವಾದ ಆಹಾರ [illegible]

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು: ಜೇಮ್ಸ್ ರೈಟ್ ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು. ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕುಟುಗಳು. ಅವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. ನಾಲ್ಕು ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ರಾತ್ತಲ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV 40/10

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

5—4—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೫—೪—೧೯೪೦

★ ಕಾಂಗ್ರೆಸು ಕಮಿಟಿಗಳು ಸತ್ಯಾಗ್ರಹ ಶಿಬಿರಗಳಾಗಬೇಕು ★

ಸತ್ಯಾಗ್ರಹಿಗಳಿಗೆ ತರಬೇತಿ
ಆಚಾರ್ಯ ಕೃಪಾಲನಿಯವರ ಹೇಳಿಕೆ

'ಗಾಂಧಿಜಿಯವರ ಸೂಚನೆಗಳನ್ನು ವಿಶ್ವಾಸದಿಂದ ಅನುಸರಿಸಿದರೆ, ಪ್ರತಿಯೊಂದು ಕಾಂಗ್ರೆಸು ಸಂಸ್ಥೆಯೂ ಕೂಡಲೇ ಸತ್ಯಾಗ್ರಹ ಶಿಬಿರವಾಗಿ ಪರಿವರ್ತನೆ ಹೊಂದಬೇಕು?' ಹೀಗೆಂದು ಅಖಿಲಭಾರತ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲನಿಯವರು ಸತ್ಯಾಗ್ರಹಿಗಳು ಅನುಸರಿಸಬೇಕಾದ ನಿಯಮಗಳನ್ನು ಸೂಚಿಸುತ್ತಾ ಒಂದು ಪ್ರಕಟಣೆಯನ್ನು ಕೊಟ್ಟಿರುವರು

'ಹಲವು ಕಡೆಗಳಲ್ಲಿ, ಕಾಂಗ್ರೆಸು ಕಮಿಟಿಯ ಬಹುಮಂದಿ ಸದಸ್ಯರು ಸತ್ಯಾಗ್ರಹಕ್ಕೆ ಸಿದ್ಧರಾಗದೆ ಇರಬಹುದು. ಇಂತಹ ಸಂದರ್ಭದಲ್ಲಿ ಪ್ರತ್ಯೇಕ ಸತ್ಯಾಗ್ರಹ ಕಮಿಟಿಯನ್ನು ಆರಂಭಿಸಬೇಕು. ಚರಕಾ, ಅಲ್ಪ ಸಂಖ್ಯಾಕ, ಹರಿಜನ ಮತ್ತು ಪ್ರಚಾರ ಹೀಗೆಂದು ನಾಲ್ಕು ವಿಭಾಗಗಳಿರಬೇಕೆಂದು ನಾನು ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸು ಕಮಿಟಿಗೂ ಪ್ರಕಟಣೆಯನ್ನು ಕಳುಹಿಸಿದ್ದೇನೆ ಈ ಎಲ್ಲಾ ಇಲಾಖೆಗಳಿಗೆ ಬೇಕಾದ ನಿಧಿಗಳನ್ನೆತ್ತಿಕೊಂಡು ಕೂಡಲೇ ಅನ್ಯೋನ್ಯ ಸಹಕಾರದಿಂದ ಕೆಲಸವನ್ನು ಆರಂಭಿಸಬೇಕು

"ಪ್ರತಿಯೊಬ್ಬ ಗಂಡುಸೂ, ಹೆಂಗುಸೂ ತಾವು ಸೆರೆಮನೆಯಲ್ಲಿರುವುದಾಗಿ ತಿಳಿದುಕೊಳ್ಳಲಿ. ಹೀಗೆ ಅವರು ತಮ್ಮ ಹೋರಾಟದ ಸಿದ್ಧತೆಗಳನ್ನು ಮಾಡಲಿ, ಶಿಬಿರ-ಕಮಿಟಿಗಳನ್ನು ಮಾಡಲಿ ಅಂತಹ ಶಿಬಿರಗಳ ವಾಸಿಗಳೆಲ್ಲರೂ ಸೆರೆಮನೆಗೆ ಹೋಗುವ ತನಕ ಮುಂದುವರಿಯಲಿ. ಹೀಗೆ ಮಾಡಿದರೆ ಗಾಂಧಿಜಿಯವರು ಹೇಳಿದಂತೆ ತಿಂಗಳೊಂದರಲ್ಲಿ ಆಂದೋಲನವನ್ನು ಅವರು ಆರಂಭಿಸಬಹುದು. ಗಾಂಧಿಜಿಯವರು ಹೇಳಿದಂತೆ ಹಿಂಸೆಯು ತಲೆದೋರಿದಲ್ಲಿ ಅವರು ಕೂಡಲೇ ಸತ್ಯಾಗ್ರಹವನ್ನು ನಿಲ್ಲಿಸಿ ಬಿಡಲೂ ಬಹುದು. ಆದಾಗ ಲೋಕದ ಜನತೆಯ ಸುಖಶಾಂತಿಗಾಗಿ ಪ್ರತಿಯೊಬ್ಬನೂ ಹಿಂಸಾ ಭಾವನೆಗೆ ತಿಲಾಂಜಲಿಯೀಯುವಂತಾಗಲಿ"

ಗಾಂಧಿಜಿಯವರ ಸೂಚನೆ
ಕಾಂಗ್ರೆಸಿನ ಅನುಮೋದನೆ
ಕಾಂಗ್ರೆಸು ಹಿಂದೂ ಸಂಸ್ಥೆಯಲ್ಲ

ಸತ್ಯಾಗ್ರಹಿಯ ಪ್ರತಿಜ್ಞೆ

ಸತ್ಯಾಗ್ರಹ ಕಮಿಟಿಯಲ್ಲಿ ಅಥವಾ ಕಾಂಗ್ರೆಸು ಕಮಿಟಿಯಲ್ಲಿ ತೆಗೆದುಕೊಳ್ಳುವ ಪ್ರತಿಜ್ಞೆಯು ಈ ಕೆಳಗಿನಂತಿದೆ

ನಾನು ಪ್ರತ್ಯಕ್ಷ ಸತ್ಯಾಗ್ರಹಿಯಾಗಿ ಸೇರಲು ಇಚ್ಛೆ ಪಡುತ್ತೇನೆ. ಆದಕಾರಣ ಈ ಕೆಳಗಿನ ಪ್ರತಿಜ್ಞೆಯನ್ನು ಗಂಭೀರವಾಗಿ ತೆಗೆದು ಕೊಳ್ಳುತ್ತೇನೆ

ನಾನು ಪ್ರತ್ಯಕ್ಷ ಸತ್ಯಾಗ್ರಹಿಯಾಗಿರುವ ವರೆಗೆ ಮನೋವಾಕ್ ಕಾಯಗಳಿಂದ ಅಹಿಂಸೆಯನ್ನು ಪಾಲಿಸುವೆನು

ಇಂದಿನ ಪರಿಸ್ಥಿತಿಯಲ್ಲಿ ಭಾರತವು ಅಹಿಂಸೆಯಿಂದ ಮಾತ್ರ ಪೂರ್ಣ ಸ್ವರಾಜ್ಯವನ್ನು ಪಡೆಯಬಲ್ಲುದೆಂದೂ, ಅಹಿಂಸೆಯು ಮಾತ್ರ ಭಾರತದ ಹಿಂದೂ ಮುಸ್ಲಿಮ್, ಕ್ರಿಶ್ಚಿಯನ್, ಸಿಕ್ಖ್, ಪಾರ್ಸಿ, ಮೊದಲಾದ ಎಲ್ಲಾ ಜಾತಿಯವರಲ್ಲಿಯೂ ಐಕ್ಯವನ್ನುಂಟು ಮಾಡಬಲ್ಲುದೆಂದೂ ನಾನು ನಂಬುತ್ತೇನೆ

ನಾನು ಅಂತಹ ಐಕ್ಯಸಾಧನೆಗಾಗಿ ಯತ್ನಮಾಡಲು ಸರ್ವದಾ ಯತ್ನ ಮಾಡುತ್ತೇನೆ

ನಾನು ದೇಶದ ಅಸ್ಪೃಶ್ಯತೆಯನ್ನು ನೀಗಲಾಡಿಸಲು ಯತ್ನ ಮಾಡುತ್ತೇನೆ ಮತ್ತು ಹಿಂದುಳಿದ ಜಾತಿಯವರಿಗೆ ಯೋಗ್ಯ ನ್ಯಾಯವನ್ನು ಕೊಡಲು ಯತ್ನಿಸುತ್ತೇನೆ ಅಸ್ಪೃಶ್ಯತೆಯನ್ನು ನೀಗಲಾಡಿಸಲು, ವೈಯುಕ್ತಿಕ ಸಂಸರ್ಗದಿಂದಲೂ ಹೆಚ್ಚಿಸುತ್ತೇನೆ

ವರ್ಕಿಂಗ್ ಕಮಿಟಿ, ಕಾಂಗ್ರೆಸ್ ಕಮಿಟಿ ಮತ್ತು ಯಾವುದೇ ಮೇಲಿನ ಸಂಸ್ಥೆಗಳಿಗೆ ನಾನು ವಿಧೇಯತೆಯನ್ನು ತೋರಿಸುವೆನು

ದೇಶದ ಸ್ವಾತಂತ್ರ್ಯದ ಸಲುವಾಗಿ ನಾನು ಸೆರೆಮನೆ ಇಲ್ಲವೇ ಮರಣವನ್ನಾದರೂ ಎದುರಿಸಲು ಸಿದ್ಧನಿದ್ದೇನೆ

ನನ್ನ ಸೆರೆಮನೆಯ ಹಾಗೂ ಸಂಕಷ್ಟದ ಕಾಲದಲ್ಲಿ ನನ್ನ ಜೀವನಕ್ಕಾಗಿ ಹಾಗೂ ನನ್ನ ಸಂಬಂಧಿಕರ ಕುಟುಂಬದ ಜೀವನಕ್ಕಾಗಿ ಕಾಂಗ್ರೆಸಿನಿಂದ ಯಾವ ಸಹಾಯವನ್ನು ಅಪೇಕ್ಷಿಸುವುದಿಲ್ಲ

ಪಂಚ್ಯದಾಯಿ
(ಕೊಂಕಣಿ ಭಾಷೆನ)

ಲೇಖಕು: ಕೊಂಕಣಿ ಬಾಷಾಪ್ರೇಮಿ
ಪ್ರಕಾಶಕು: ಕೊಂಕಣಿ ಬಾಷಾ ಸಾಹಿತ್ಯ ಮಂದಿರ, ಬಂಟ್ವಾಳ ದ. ಕ.

ನವರಸ ಭರಿತ ಶೃಂಗಾರಯುಕ್ತ ಜಾವ್ನು ಆಶ್ಶಿಲೊ
ಪಾಂಚ್ ಕಾಣ್ಯೆಂಚೆ ಪುಸ್ತಕ
ತುಮ್ಕಾಂ ಕುರುಛೋನ್ರ್ಯ ಆಪೇರಿತಾಹಿ ಆನಂದಸಾಗರಾಂತು ಲೊಳ್ಳಿತಾ. ವಾಚ್ಚೂನಿ ಪಳೆ ಪಾವ್ಯಾಂ.
ಹೀ ಪಂಚ್ಯದಾಯಿ ಸರ್ವಾನಿ ಘಾಲ್ನು ಮಾತೃಬಾಷಾ ಸೇವೆಕ ಪಾತ್ರ ಜಾವ್ಯಾಮ್ಮಣು ಬಾಷಾಭಿಮಾನಿಲ್ಯಾಂಗ ಅಮ್ಗೆಲೆ ವಿನಂತಿ.
ಕೊಂಕಣಿ ಬಾಷೇನ ನವೀನ ಆತ್ಯಾಧುನಿಕ ರೀತಿನ ಬರೈಲೆಲೆ ಸಾಮಾಜಿಕ ವ ನೈತಿಕ ಕಾಣ್ಯೊ ಮೋಲ 0—1—0
[illegible] ನಂಬ್ರಾ ಕೆ. ಎಂ. ಪ್ರಭು ವಿರಚಿತ ಭಜನಾವಳಿ [illegible] ಶಾಸ್ತ್ರ, ವ ಪಟಾಲಿ ಪುಸ್ತಕ ಅಮ್ಗೆಲಾಯ ವಿಕ್ರಾಕ ಮೆಳ್ತಾತ.
ದಿ. ಕೊಂಕಣಿ ಬಾಷಾ ಸಾಹಿತ್ಯ ಮಂದಿರ, ಬಂಟ್ವಾಳ, ದ. ಕ.

ಕಾಂಗ್ರೆಸು ಹಿಂದೂ ಸಮಸ್ಯೆಯಲ್ಲ

"ನಾನೊಬ್ಬ ಹಿಂದುವಾಗಿ ಹಿಂದೂ-ಮುಸ್ಲಿಂ ಐಕ್ಯವನ್ನು ಸಾಧಿಸಲು ಯತ್ನ ಮಾಡಲು ಇದುವರೆಗೆ ಹೋಗಿಲ್ಲ, ಏಕೆಂದರೆ ನನ್ನ ಹಿಂದೂ ಧರ್ಮವು ಯಾವ ಒಪ್ಪಂದವನ್ನೂ ಹಾರೈಸುವುದಿಲ್ಲ' ಹಾಗೆಂದು ಮಹಾತ್ಮಾಜಿಯವರು ಜಿನ್ನರಿಗೆ ಉತ್ತರವಾಗಿ ಕಳೆದ ವಾರದ ಹರಿಜನದಲ್ಲಿ ಬರೆದೊಂದು ಪತ್ರದಲ್ಲಿ ಹೇಳಿರುವರು ಅದರಲ್ಲಿ ಹೀಗಿದೆ.

"ನನ್ನ ಸ್ಥಿತಿಯು ಹಿಂದಿನಂತೆ ಇಂದೂ ಸ್ಪಷ್ಟವಿದೆ. ನಾನು ಹಿಂದುವಾಗಿರಲು ಅಭಿಮಾನ ಪಡುತ್ತೇನೆ ಆದರೆ ಇದುವರೆಗೆ ಒಬ್ಬ ಹಿಂದುವಾಗಿ —ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ ಯತ್ನ ಮಾಡಲಿಲ್ಲ. ನನ್ನ ಹಿಂದೂ ಧರ್ಮವು ಯಾವ ಒಪ್ಪಂದವನ್ನೂ ಅಪೇಕ್ಷಿಸುವುದಿಲ್ಲ ಖಿಲಾಫತ್ತಿಗೆ ನಾನು ಬೆಂಬಲವಿತ್ತದ್ದು ಯಾವುದೇ ಪ್ರತ್ಯುಪಕಾರ ಬುದ್ಧಿಯಿಂದಲ್ಲ. ನಾನು ಕ್ವೈದೇ ಆಜಾಮ ಜಿನ್ನರೊಡನಾಗಲಿ, ಇತರರೊಡನಾಗಲಿ ಯಾವುದೇ ರೀತಿಯ ಹಿಂದೂ-ಮುಸ್ಲಿಂ ಐಕ್ಯದ ವಿಚಾರವಾಗಿ ಮಾತುಕತೆ ನಡೆಸಿದ್ದರೂ, ಅವುಗಳೆಲ್ಲವೂ ಕಾಂಗ್ರೆಸಿನ ಪ್ರತಿನಿಧಿಯಾಗಿಯಲ್ಲದೆ ಒಬ್ಬ ಹಿಂದುವಾಗಿಯಲ್ಲ. ಕಾಂಗ್ರೆಸು ಹಿಂದೂ ಸಂಸ್ಥೆಯಲ್ಲ. ಏಕೆಂದರೆ ಹಿಂದು ಸಂಸ್ಥೆಯಲ್ಲಿ ಮುಸ್ಲಿಮರು ಅಧ್ಯಕ್ಷರಾಗಿರುವುದೂ ಅದರ ವರ್ಕಿಂಗ್ ಕಮಿಟಿಯಲ್ಲಿ ಹದಿನೈದರಲ್ಲಿ ನಾಲ್ವರು ಮುಸ್ಲಿಮ್ ಸದಸ್ಯರಿರುವುದೂ ಸಾಧ್ಯವಿಲ್ಲ.

"ಹಿಂದೂ ಮುಸ್ಲಿಂ ಐಕ್ಯವಿಲ್ಲದೆ ಸ್ವಾತಂತ್ರ್ಯವಿಲ್ಲವೆಂದು ನಾನು ಇಂದೂ ಅಭಿಪ್ರಾಯ ಪಡುತ್ತೇನೆ. 'ರಾಷ್ಟ್ರ ಘಟನಾ ಸಮಿತಿಯು ಪ್ರಜೆಗಳಿಂದ ಆರಿಸಲ್ಪಡುವ ಕಾರಣ ಅದು ಮಾತ್ರ ಜಾತಿಯ ಸಮಸ್ಯೆಯನ್ನು ಪರಿಹರಿಸಬಲ್ಲುದು. ಜನರಿಂದ ಆರಿಸಲ್ಪಟ್ಟವರು ಜನಾಂಗದ ಪ್ರತಿನಿಧಿಗಳೆಂಬುದನ್ನು ಯಾರು ಅಲ್ಲವೆನ್ನುವರು?' ಅದಕ್ಕೂ ಮುಸ್ಲಿಂ ಲೀಗು ವಿರೋಧ ಹೇಳುವುದರ ಅರ್ಥವೇನೆಂದು ನನಗೆ ಗೊತ್ತಾಗುವುದಿಲ್ಲ.

ಸ್ವದೇಶಾಭಿಮಾನಿ

ತಾರೀಕು 29—3—1940

ಸತ್ಯಾಗ್ರಹ ಶಿಬಿರಗಳು

ಮಹಾತ್ಮಾ ಗಾಂಧಿಜಿಯವರು, ರಾಷ್ಟ್ರವನ್ನು ಸ್ವಾತಂತ್ರ್ಯದ ಹಾದಿಯಲ್ಲಿ ಮುನ್ನಡೆಸುವ ತನ್ನ ಹೊಣೆಗಾರಿಕೆಯ ಕಾರ್ಯದಲ್ಲಿ ಇಂದು ಒಂದು ಹೆಜ್ಜೆಯನು ಮುಂದಿಟ್ಟಿರುವರೆನ್ನುವ ವಿಷಯವು, ಅವರು, ಪ್ರತಿಯೊಂದು ಕಾಂಗ್ರೆಸು ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಿ ಪರಿವರ್ತನೆ ಹೊಂದಬೇಕೆಂದು ಕೊಟ್ಟ ಸೂಚನೆಯಿಂದ ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಜನತೆಯನ್ನು ಅಕಸ್ಮಿಕವಾಗಿ ಆಂದೋಲನಕ್ಕೆ ಕರೆಯುವುದು ಯೋಗ್ಯವಲ್ಲವೆಂದು ಚೆನ್ನಾಗಿ ಮನಗಂಡ ಮಹಾತ್ಮರು, ದೇಶವು ಹೋರಾಟಕ್ಕೆ ಸಿದ್ಧವಾಗಿದೆಯೆಂದು ಹೇಳುತ್ತಿರುವ ಭಾರತೀಯರ ಇಂದಿನ ಬಾಯಿಯ ಮಾತನ್ನು ಎಲ್ಲರೂ ಕಾರ್ಯರೂಪವಾಗಿ ಮಾಡಿ ತೋರಿಸಬೇಕೆಂದು ಆಗ್ರಹ ಮಾಡಿದಂತೆ ಈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದೇಶದಲ್ಲಿ ಅವರ ಪ್ರಕಟಣೆಗೆ ಸಿಗುವ ಉತ್ತರ, ಜನರು ಆ ಮೂಲಕ ರಚನಾತ್ಮಕ ಕಾರ್ಯಗಳ ಕಡೆಗೆ ಅಂದರೆ ಸತ್ಯಾಗ್ರಹ ತತ್ವಗಳ ಕಡೆಗೆ ಕೊಡುವ ಆದರವನ್ನು ವಿಚಾರಮಾಡಿಕೊಂಡು, ತಿಂಗಳೊಂದರ ಅವಧಿಯಲ್ಲಿ ಪ್ರತ್ಯಕ್ಷ ಆಂದೋಲನವನ್ನು ಆರಂಭಿಸುವ ವಿಷಯವಾಗಿ ಗಾಂಧಿಜಿಯವರು ಸ್ಪಷ್ಟ ನಿರ್ಧಾರವನ್ನು ಕೊಡಲಿರುವರು. ಇದರಿಂದ ಆಂದೋಲನವನ್ನು ಮುನ್ನಡೆಸುವುದು ಮಹಾತ್ಮರ ಮೇಲಿನ ದೊಡ್ಡ ಹೊಣೆಗಾರಿಕೆಯಾಗಿದ್ದರೂ; ಅದನ್ನು ಯೋಗ್ಯರೀತಿಯಲ್ಲಿ ಅನುಸರಿಸಬೇಕಾದ ಅತ್ಯಂತ ಹೊಣೆಗಾರಿಕೆಯನ್ನು ಎಲ್ಲಾ ಕಾಂಗ್ರೆಸು ಕಾರ್ಯಕರ್ತರ ತಲೆ ಮೇಲೆಯೂ ಅವರು ಹೊರಿಸಿದಂತಾಗಿದೆ.

ಕೃಪಾಲನಿಯವರ ಪ್ರಕಟಣೆ

ಗಾಂಧಿಜಿಯವರ ಈ ಹೇಳಿಕೆಯನ್ನು ಆಧರಿಸಿ ಅಖಿಲಭಾರತ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲನಿಯವರು ಒಂದು ಪ್ರಕಟಣೆಯನ್ನು ಹೊರಡಿಸಿ ಪ್ರತಿಯೊಂದು ಕಾಂಗ್ರೆಸು ಕಮಿಟಿಯನ್ನೂ, ಕಾಂಗ್ರೆಸು ಕಾರ್ಯಕರ್ತರನ್ನೂ ಎಚ್ಚರಿಸಿದ್ದಾರೆ. ಪ್ರತಿಯೊಂದು ಕಾಂಗ್ರೆಸು ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಿ ಮಾರ್ಪಡಬೇಕೆಂದು ಅವರು ಸೂಚಿಸಿರುವರು. ಕಾಂಗ್ರೆಸು ಕಮಿಟಿಯ ಬಹುಮಂದಿ ಸದಸ್ಯರು ಒಪ್ಪದಿದ್ದ ಪಕ್ಷದಲ್ಲಿ ಅದಕ್ಕೆ ಒಪ್ಪುವ ಕೆಲವುಮಂದಿಯನ್ನಾದರೂ ಸೇರಿಸಿಕೊಂಡು ಅಲ್ಲಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಏರ್ಪಡಿಸಬೇಕೆಂಬುದು ಅವರ ಪ್ರಕಟಣೆಯಾಗಿದೆ.

ಸತ್ಯಾಗ್ರಹಿಯ ಪ್ರತಿಜ್ಞೆ

ಈಗ ದೇಶದ ಉದ್ದಗಲದಲ್ಲಿ ಸರ್ವತ್ರ ಸ್ಥಾಪಿತವಾಗಲಿರುವ ಸತ್ಯಾಗ್ರಹ ಸಮಿತಿಗಳಲ್ಲಿ ಸತ್ಯಾಗ್ರಹಿಗಳು ಬಂದು ಸೇರಬೇಕು. ಅವರು ಮನೋವಾಕ್ಕಾಯಗಳಿಂದ ಅಹಿಂಸೆಯನ್ನು ಪಾಲಿಸುವ ಪ್ರತಿಜ್ಞೆಯನ್ನು ಮಾಡಬೇಕು. ಎಲ್ಲಾ ಜಾತಿಯವರಲ್ಲಿಯೂ ಐಕ್ಯ ಸೌಹಾರ್ದಗಳನ್ನು ಹೆಚ್ಚಿಸಬೇಕು. ಮಾತ್ರವಲ್ಲದೆ ಅಹಿಂಸೆಯಿಂದಲೇ ಜಾತೀಯ ಐಕ್ಯವು ಸಾಧಿಸಲ್ಪಡುವುದು ಎಂದು ಚೆನ್ನಾಗಿ ತಿಳಿದಿರಬೇಕು. ಸತ್ಯಾಗ್ರಹವು ಆರಂಭವಾದರೆ ಎಲ್ಲರೂ ಸೆರೆಮನೆಗೆ ಹೋಗಬೇಕು ಇಲ್ಲವೇ ಎಷ್ಟೇ ಸಂಕಷ್ಟಗಳು ಬಂದರೂ ಅವುಗಳನ್ನು ಎದುರಿಸಲು ಸಂಪೂರ್ಣ ಸಿದ್ಧರಿರಬೇಕು. ಪ್ರತಿಯೊಬ್ಬನೂ ಸದಾ ನೂಲುವವನಾಗಿರಬೇಕು. ಇಷ್ಟು ಮಾತ್ರವಲ್ಲದೆ ಅಸ್ಪೃಶ್ಯರಲ್ಲಿ ಹಾಗೂ ಹಿಂದುಳಿದ ಜಾತಿಯವರಲ್ಲಿ ಹೆಚ್ಚಿನ ಆದರವಿಟ್ಟು ಅವರೊಡನೆ ಸಂಪರ್ಕವಿಟ್ಟುಕೊಂಡು ಅವರ ಏಳಿಗೆಗೆ ನೆರವಾಗಬೇಕು.

ಎಲ್ಲೆಲ್ಲೂ ಸಿದ್ಧತೆಗಳು

ಇಂತಹ ಸತ್ಯಾಗ್ರಹಿ ಶಿಬಿರಗಳು ಎಲ್ಲೆಡೆಗಳಲ್ಲಿಯೂ ಇಂದು ಸ್ಥಾಪಿತವಾಗುತ್ತಿವೆಯೆಂಬುದು ಬಹಳ ಸಂತೋಷದ ಸಂಗತಿಯಾಗಿದೆ. ದೇಶದ ಮುಖಂಡರು ಕಾಂಗ್ರೆಸು ಕಮಿಟಿಗಳು ಸತ್ಯಾಗ್ರಹ ಶಿಬಿರಗಳನ್ನು ರಚಿಸುತ್ತಿವೆ. ಇದರಿಂದ ಜನತೆಯು ಅದ್ಭುತ ಶಿಕ್ಷಣವನ್ನು ಹೊಂದುವುದು. ಗಾಂಧಿಜಿಯವರ ಸತ್ಯಾಗ್ರಹ ತತ್ವಗಳು ಜನತೆಯ ಹೃದಯದಲ್ಲಿ ಪರಿಣಾಮಕಾರಿಯಾಗಿ ನೆಲೆಯೂರುವವು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ನಿಶ್ಚಯದಿಂದ ಭಾರತವು ಹೋರಾಟ ಮಾಡಬೇಕಾಗಿದೆ. ಹೋರಾಟಕ್ಕಿಳಿದ ಮೇಲೆ ಎಂತಹ ಸಹನೆ ವಿಚಕ್ಷಣತೆ ನ್ಯಾಯಶೀಲತೆಗಳಿರಬೇಕೆಂಬುದನ್ನು ವಿಚಾರಿಸಲು ಎಡೆಯಿಲ್ಲ. ಅದಕ್ಕೆ ಬೇಕಾದ ಶಿಕ್ಷಣವು ಈಗ ಪ್ರತಿಯೊಬ್ಬ ಸತ್ಯಾಗ್ರಹಿಗೂ ಮೊದಲೇ ಸಿಗಬೇಕಾಗಿದೆ. ಈ ರೀತಿಯ ಸತ್ಯಾಗ್ರಹ ಶಿಕ್ಷಣವನ್ನು ಹೊಂದಲು ನಮ್ಮ ಜಿಲ್ಲೆಯಲ್ಲಿಯೂ ಬೇಗನೇ ಸತ್ಯಾಗ್ರಹ ಶಿಬಿರಗಳು ಸ್ಥಾಪಿತವಾಗಿ, ಮುಂದಕ್ಕೆ ರಾಷ್ಟ್ರದ ಸ್ವಾತಂತ್ರ್ಯ ಸಾಧನೆಯಲ್ಲಿ ನಮ್ಮ ಜಿಲ್ಲೆಯ ಯತ್ನವೂ ಕಡಿಮೆಯಾಗದಂತೆ ಮಾಡುವುದು ಪ್ರತಿಯೊಬ್ಬ ಜಿಲ್ಲೆಯ ಕಾಂಗ್ರೆಸು ಕೆಲಸಗಾರನ ಕರ್ತವ್ಯವಾಗಿದೆ.

ಚೈನದಲ್ಲಿ ಕೈಗೊಂಬೆ ಸರಕಾರ

ಮೂರು ವರ್ಷಗಳ ದೀರ್ಘಕಾಲದ ಹೋರಾಟವನ್ನು ಮಾಡಿದ ಮೇಲೆ ಇಂದು ಜಪಾನು ವಾಂಗ್ ಚಿಂಗ್ ವಿಯೆಂಬವರ ಮುಂದಾಳುತನದಿಂದ ನಾನ್ಕಿಂಗಿನಲ್ಲಿ ತನ್ನ ಕೈಗೊಂಬೆ ಸರಕಾರವನ್ನು ಸ್ಥಾಪಿಸಲು ಸಮರ್ಥವಾಯಿತು.

ಜಪಾನು ಪೂರ್ಣ ಚೈನವನ್ನು ಗೆಲ್ಲಲು ಸಾಧ್ಯವಿಲ್ಲದೆ ಹೀಗೆ ಮಾಡಿರುವ ಕಾರಣವಾದರೂ ಸ್ಪಷ್ಟವಾಗಿದೆ. ಗೊರಿಲ್ಲಾ ಯುದ್ಧವೇ ಮೊದಲಾದವುಗಳಿಂದ ಚೈನೀಯರು ಜಪಾನೀಯರನ್ನು ಈ ಕಳೆದ ಹಲವು ಕಾಲದಿಂದ ಹದಗೆಡಿಸಿದ್ದಾರೆ. ಜಪಾನಿನಲ್ಲಿಯೇ ಜನತೆಗೆ ದೀರ್ಘ ಕಾಲದ ಈ ಯುದ್ಧದಿಂದ ಅಸಂತೃಪ್ತಿಯುಂಟಾಗಿದೆ. ಚೈನದ ಯುದ್ಧದಿಂದ ಜಪಾನರು ತಾಳ್ಮೆಗೆಟ್ಟಿರುವರು. ಚೈನವನ್ನು ಗೆದ್ದು ತನ್ನ ಅಧೀನಕ್ಕೆ ತರಲು ಸಾಧ್ಯವಿಲ್ಲದ ಜಪಾನು ಇಂದು ಹೀಗೆ ವಿಭಜಿಸಿ ಆಳುವ ತತ್ವದಂತೆ ಅಲ್ಲಿ ಕೈಗೊಂಬೆ ಸರಕಾರವನ್ನು ಸ್ಥಾಪಿಸಿದೆ.

ವಾಂಗರು ಹೀಗೆ ಜಪಾನಿನ ಸಾಮ್ರಾಜ್ಯಶಾಹೀ ಶಕ್ತಿಯ ಕೈಯಲ್ಲಿ ಕುಣಿಯುತ್ತಿರುವುದನ್ನೂ, ಅದರಿಂದ ರಾಷ್ಟ್ರಕ್ಕೆ ಒದಗುತ್ತಿರುವ ವಿದ್ರೋಹವನ್ನೂ ಚೈನೀಯರು ಖಂಡಿಸಿದ್ದಾರೆ. ಚೈನದ ಸ್ವಾತಂತ್ರ್ಯ ವೀರರಾದ ಚಿಯಾಂಗ್ ಕೈಶೇಕರು ತಮ್ಮ ಪ್ರಕಟಣೆಯೊಂದರಲ್ಲಿ 'ವಾಂಗರ ಕೃತ್ಯವು ಚೈನದ ಗೌರವವನ್ನು ಕೆಡಿಸುವಂತಹುದು ಎಂದಿರುವರು.

ಆದರೆ ಚೈನದ ಮುಂದಿನ ಪರಿಸ್ಥಿತಿಯು ಇತರ ಬಲವಂತ ರಾಷ್ಟ್ರಗಳ ಅಧೀನವಾಗಿದೆ. "ಸ್ವತಂತ್ರ ಚೈನವನ್ನು ಉಳಿಸಲು ಇನ್ನೂ ಸಾಧ್ಯವಿದೆ. ಆಂಗ್ಲ ಅಮೇರಿಕಗಳಿಗೆ, ಜಪಾನು, ಮಾಡುತ್ತಿರುವ ಕೊಲೆಪಾತಕ ಕೃತ್ಯವನ್ನು ನಿಲ್ಲಿಸುವ ಸಾಮರ್ಥ್ಯವಿದೆ. ಆದರೆ ಇಂದು ಜಗತ್ತಿನ ರಾಷ್ಟ್ರಗಳು ತಮಗೆ ವಿಪತ್ತು ಬರುವುದೆಂದು ತಿಳಿದಾಗ ಮಾತ್ರ ಮುರಿದು ಸಲ್ಲುವವಲ್ಲದೆ ತಮ್ಮ ನೆರೆಕರೆಯ ರಾಷ್ಟ್ರಗಳಲ್ಲಿ ಎಷ್ಟೇ ಅನ್ಯಾಯವಾಗುತ್ತಿದ್ದರೂ ಕಣ್ಣುಚ್ಚಿ ಕುಳಿತುಕೊಳ್ಳುತ್ತವೆ. ಇದರಿಂದಲೇ ಇಂದು ಅಂತರ್ರಾಷ್ಟ್ರೀಯ ಶಾಂತಿಯು ಕದಡಿದೆ. ವಿಭಜಿಸಿ ಆಳುವ ಜಪಾನಿನ ಧೋರಣೆಯು ಅನೀತಿಯಾದರೂ ಅದನ್ನು ಹಾಗೆಂದು ಪ್ರತಿಭಟಿಸುವ ಎದೆಗಾರಿಕೆಯು ಇತರ ಯಾವ ಪ್ರಬಲರಾಷ್ಟ್ರಕ್ಕೂ ಇದ್ದಂತೆ ಕಂಡು ಬರುವುದಿಲ್ಲ.

ಇಬ್ಬರು ತಾಯಂದಿರ ವಿವಾದವಂತೆ!

'ಮುಸ್ಲಿಮರಿಂದಾಗಬಹುದಾದ ಯಾವುದೇ ತೊಂದರೆಯನ್ನು ತಡೆಯಲು ಕಾಂಗ್ರೆಸು, ಬ್ರಿಟನಿನ ಸಹಾಯವನ್ನು ಪಡೆಯಲಾರದು. ನಾನು ಮುಸ್ಲಿಮರ ರಾಜ್ಯದಲ್ಲೇ ಇರಬಲ್ಲೆ; ಅವರೂ ಭಾರತೀಯರೇ ಆಗಿದ್ದಾರೆ' ಹೀಗೆಂದು ಗಾಂಧಿಜಿಯವರು, ಇತ್ತೀಚೆಗೆ ಕೊಟ್ಟಿರುವ ಪ್ರಕಟಣೆಯೊಂದರಲ್ಲಿ, ಭಾರತವನ್ನು ಎರಡು ಜನಾಂಗವಾಗಿ ವಿಭಜಿಸಬೇಕೆಂಬ ಜಿನ್ನರಿಗೂ ಹಾಗೂ ಭಾರತದಿಂದ ಮುಸ್ಲಿಮರನ್ನು ಹೊರಹಾಕಬೇಕೆನ್ನುವ ಸಾವರ್ಕಾರರಿಗೂ ಯೋಗ್ಯ ಉತ್ತರವನ್ನು ಕೊಟ್ಟಿದ್ದಾರೆ. ಈ ಪ್ರಕಟಣೆಯಿಂದ ಜಾತೀಯತೆಯ ಸಂಕೋಚ ಬುದ್ಧಿಯುಳ್ಳ ಮುಸ್ಲಿಂ ಲೀಗಿನ ಮತ್ತು ಹಿಂದೂ ಮಹಾಸಭೆಯ ಮುಖಂಡರು ಬುದ್ಧಿ ಕಲಿಯಬೇಕಾಗಿದೆ.

ಇಬ್ಬರು ಹೆಂಗುಸರು ಒಂದು ಮಗುವನ್ನು ಮಗು ತಮ್ಮದು ತಮ್ಮದು ಎಂದು ವಾದಿಸುತ್ತಿರುವಾಗ, ನ್ಯಾಯಾಧೀಶರು ಅದನ್ನು ಇಬ್ಬರೂ ಹಂಚಿಕೊಳ್ಳಿರಿ ಎಂದರಂತೆ. ನಿಜವಾದ ತಾಯಿಗೆ ಅಂತಹ ಘೋರಕೃತ್ಯವು ಸಹಿಸಲಾರದ ಸಂಕಟವಿತ್ತಿತು. ಮಗುವು ಎಲ್ಲಿಯಾದರೂ ಜೀವಿಸಿರಲಿ ಎಂದು ಮಗುವು ತನ್ನದಲ್ಲ ಅವಳದೇ ಎಂದಳಂತೆ ಮಗುವಿನ ತಾಯಿ. ಗಾಂಧಿಜಿಯವರೂ ಭಾರತವನ್ನು ವಿಭಜಿಸಬೇಕೆಂಬ ಜಿನ್ನರ ಮಾತಿಗೆ ಅದೇ ರೀತಿಯ ಹೃದಯದ್ರಾವಕವಾದ ಉತ್ತರವನ್ನು ಕೊಟ್ಟರು ಎಂದು ಗಾಂಧಿಜಿಯವರ ಮಾತನ್ನು ವ್ಯಾಖ್ಯಾನಿಸುತ್ತಾ ರಾಜಾಜಿಯವರು ಹೇಳಿದರು. ಆದರೆ, ಗಾಂಧಿಜಿಯವರ ಶುದ್ಧಾಂತಕರಣವನ್ನೂ, ಜಿನ್ನರ ವಿಭಜನಾ ನೀತಿಯನ್ನೂ ವಿಚಾರ ಮಾಡಿ, ಸತ್ಯಾಂಶವನ್ನು ತಿಳಿದುಕೊಳ್ಳುವ ನ್ಯಾಯಾಧೀಶರನ್ನು ಮಾತ್ರ ಇನ್ನೂ ಶೋಧಿಸಬೇಕಾಗಿದೆ. ಜನತೆಯೇ ಮುಂದಕ್ಕೆ ನ್ಯಾಯವನ್ನು ತೀರ್ಮಾನಿಸುವುದು. ಜನತಾ ಸರಕಾರವೇ ರಾಷ್ಟ್ರದ ಹೃದಯದಲ್ಲಿರುವ ಮರುಕ ಸಂಕಟಗಳನ್ನು ಅರಿತು ಯೋಗ್ಯ ಕಾರ್ಯವನ್ನು ಕೈಕೊಳ್ಳಬೇಕು. ಅಂತಹ ಸರಕಾರವು ಸ್ಥಾಪನೆಯಾಗುವುದರೊಡನೆ ಇತರ ಎಲ್ಲಾ ಸಮಸ್ಯೆಗಳೂ ತಮ್ಮಷ್ಟಕ್ಕೆ ಪರಿಹಾರವಾಗುವವು. ತಾಯ ಸಂಕಟವು ಆಗ ಸಮಾಧಾನ ಹೊಂದುವುದು.

ಸ್ತುತ್ಯದಾನ

ಮಿಜಾರ ಕೃಷ್ಣ ಪೈ ಎಂಡ ಬ್ರದರ್ಸರವರು ಅವರ ದಿವಂಗತ ತಂದೆ ಮಿಜಾರ ಅಣ್ಣಪ್ಪ ಅನಂತಪೈಯವರ ಸ್ಮಾರಕಾರ್ಥವಾಗಿ ಮಂಗಳೂರಿನ ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮಕ್ಕೆ ವರುಷಂಪ್ರತಿ ರೂ. ೧೨೦ ಕೊಡುವರೆ ಸಂಕಲ್ಪಿಸಿ, ಈ ವರುಷದ ಬಗ್ಗೆ ರೂ. ೧೨೦ ಕಳುಹಿಸಿ ಕೊಟ್ಟಿರುವರೆಂದು, ಆಶ್ರಮದ ಅಧಿಕಾರಿಗಳು ತಿಳಿಸುತ್ತಾರೆ. ಈ ಸಂಸ್ಥೆಗೆ ಬರುವ ಬಡ ಬಗ್ಗರು ದಿನೇ ದಿನೇ ಹೆಚ್ಚುತ್ತಿರುವ ಕಾರಣ ಇಂತಹ ಧನ ಸಹಾಯವು ಸ್ತುತ್ಯವಾಗಿರುತ್ತದೆ.

ಕಳೆದುಹೋದ ಪುರುಷತ್ವವನ್ನೂ ಚೈತನ್ಯವನ್ನೂ

ಜೀವಾಮೃತಂ

ಸೇವನೆಯಿಂದ ಪುನಃ ಪಡೆಯಿರಿ

ಯೋಗ್ಯ ಉತ್ತರವಿತ್ತರೆ

ಒಂದು ತಿಂಗಳಲ್ಲಿ ಸತ್ಯಾಗ್ರಹ

ಗಾಂಧಿಜಿಯವರ ವಿಶೇಷ ಪ್ರಕಟಣೆ

‘ಪ್ರತಿಯೊಂದು ಕಾಂಗ್ರೆಸು ಕಮಿಟಿಯೂ ಸತ್ಯಾಗ್ರಹ ಕಮಿಟಿ ಆಗಬೇಕು. ಅವರು ನಿತ್ಯ ನೂಲುವವರಾಗಿದ್ದು ಖಾದಿ ಧರಿಸುವವರಾಗಬೇಕು. ಅಂತಹವರು ಸತ್ಯಾಗ್ರಹಿಗಳೆಂದು ತಮ್ಮ ಹೆಸರುಗಳನ್ನು ದಾಖಲು ಮಾಡಬೇಕು. ಸತ್ಯಾಗ್ರಹಿಗಳು ತಮ್ಮ ಬಿಡುವಿನ ಸಮಯದಲ್ಲಿ ರಚನಾತ್ಮಕ ಕಾರ್ಯಗಳನ್ನು ಮಾಡಬೇಕು. ಹರಿಜನರೊಡನೆ ಸಂಪರ್ಕ ಬೆಳೆಸಬೇಕು. ಶಿಕ್ಷೆ, ಸೆರೆಮನೆಗಳನ್ನು ಅನುಭವಿಸಲು ಸಿದ್ಧರಿರುವವರು ಮಾತ್ರ ಹೀಗೆ ಮಾಡುವುದು. ಹೀಗೆ ಸತ್ಯಾಗ್ರಹಿಗಳಾಗಿ ಜನರು ಮುಂದೆ ಬಂದರೆ ನಾನು ಖಂಡಿತ ಸತ್ಯಾಗ್ರಹ ಹೂಡುತ್ತೇನೆ.’

ಹೀಗೆಂದು ಮೊನ್ನೆಯ ಹರಿಜನ ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು ಕಾಂಗ್ರೆಸು ಕೆಲಸಗಾರರಿಗೆ ಒಂದು ಎಚ್ಚರ ಕೊಟ್ಟಿದ್ದಾರೆ, ತಮ್ಮ ಮುಂದಿನ ಕಾರ್ಯಕ್ರಮದ ನಿಶ್ಚಯ ವಿವರವನ್ನು ತಿಳಿಸಿದ್ದಾರೆ. ಅದರ ಸಾರಾಂಶವು ಹೀಗಿದೆ.

“ರಾಮಗಢ ಕಾಂಗ್ರೆಸಿನ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಮಾಡಿದ ಭಾಷಣದಲ್ಲಿ ನಾನು ಪ್ರತಿಯೊಂದ ಕಾಂಗ್ರೆಸು ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಬೇಕೆಂದು ಹೇಳಿದ್ದೆ. ಆದರೆ ಹಾಗೆ ಹೇಳುವಾಗ ನಾನು ಬಹಳ ದೀರ್ಘ ಆಲೋಚನೆ ಮಾಡಿದ್ದೆ. ಸತ್ಯಾಗ್ರಹ ಸೈನ್ಯದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬನೂ ನನ್ನ ಆ ಭಾಷಣಗಳನ್ನೂ ಹರಿಜನ ಪತ್ರಿಕೆಯಲ್ಲಿ ಸತ್ಯಾಗ್ರಹದ ಕುರಿತು ಆಗಾಗ ಕೊಡುತ್ತಿರುವ ಲೇಖನಗಳ ಕುರಿತೂ ಓದಿ ಅಭ್ಯಾಸ ಮಾಡಬೇಕೆಂದು ಸೂಚಿಸುತ್ತೇನೆ.

“ಮುಂದೆ ಅಂದೋಲನವು ಆರಂಭವಾಗಬಹುದಾದರೆ, ಸತ್ಯಾಗ್ರಹ ತತ್ವದಲಿ ಅರ್ಧ ಮನಸ್ಸುಳ್ಳವರಿಂದ ಆ ಸತ್ಯಾಗ್ರಹವು ಯಶಸ್ವಿಯಾಗಲಾರದು. ಸಿದ್ಧರಿಲ್ಲದ ಸೈನಿಕರನ್ನು ಯುದ್ಧಕ್ಕೆ ಕರೆದುಕೊಂಡು ಹೋದರೆ, ಅದರ ಪರಿಣಾಮವು ಒಳ್ಳೆಯದಾಗಲಾರದು. ನಾನು ಅಪಾಯಕರವಾದ ಪರೀಕ್ಷೆಗೆ ಇಳಿಯಲಾರೆನು. ಕಾಂಗ್ರೆಸು ಕೆಲಸಗಾರರನ್ನು ಹೆದರಿಸುವ ಸಲುವಾಗಿ ನಾನು ಈ ರೀತಿ ಬರೆಯುವುದಲ್ಲ. ಸತ್ಯಾಗ್ರಹವನ್ನು ಮಾಡಬೇಕೆಂಬ ಸಂಪೂರ್ಣ ವಿಶ್ವಾಸವು ಅವರಿಗಿದ್ದರೆ ನನ್ನ ಸೂಚನೆಗಳನ್ನು ಹಿಂಬಾಲಿಸುವುದು ಅವರಿಗೆ ಕಷ್ಟವಾಗಲಾರದು.

ಚರಕ ಮತ್ತು ಅಹಿಂಸೆ

“ಚರಕದಲ್ಲಿ ತಮಗೆ ನಂಬಿಗೆ ಇಲ್ಲದಿದ್ದರೂ ಕಾಂಗ್ರೆಸಿನ ಶಿಸ್ತು ಪಾಲನೆಗಾಗಿ ತಾವು ಅದನ್ನುಉಪಯೋಗಿಸುತ್ತೇವೆಂದು ಕೆಲವರು ನನಗೆ ತಿಳಿಸಿರುವರು. ತನ್ನಲ್ಲಿ ನಂಬಿಕೆಯಿಲ್ಲದೆ ಸೈನ್ಯವನ್ನು ನಂಬಿ ಒಬ್ಬ ಸೇನಾಧಿಪತಿಯು ಕೆಲಸ ಮಾಡಲಾರನು. ಅಂದೋಲನದಲ್ಲಿ ಮಾತ್ರ ತಮಗೆ ವಿಶ್ವಾಸವಿದೆಯಲ್ಲದೆ, ಅಂದೋಲನಕ್ಕೂ ಚರಕಕ್ಕೂ ಸಂಬಂಧವಿಲ್ಲವೆಂದು ಅವರು ತಿಳಕೊಂಡಿದ್ದಾರೆ. ನನ್ನ ಅಂದೋಲನವು ಅಹಿಂಸಾಮಯವಾಗಿರಬೇಕಾದರೆ ಚರಕವನ್ನು ಬಿಟ್ಟು ಬಿಡಲಾಗುವುದಿಲ್ಲ. ಜನರ ಮೇಲೆ ನನಗೆ ಹಿಡಿತವುಂಟೆಂದು ಅವರು ತಿಳಕೊಂಡಿದ್ದಾರೆ. ಯಾವುದರಿಂದ ನನಗೆ ಆ ಹಿಡಿತ ಬಂತೆಂಬುದನ್ನು ವಿಚಾರಿಸುವಷ್ಟು ತಾಳ್ಮೆ ಅವರಿಗೆ ಇಲ್ಲವೆಂದಾಯಿತು. ಶಿಸ್ತು ಪಾಲಿಸಬೇಕಾದರೆ ದಳಪತಿಯ ಆಜ್ಞೆಯನ್ನು ಮೀರಬಾರದು. ತನ್ನ ನಾಯಕನನ್ನು ಆರಿಸುವ ತನಕ ಒಬ್ಬ ಸೈನಿಕನು ತನ್ನ ಬುದ್ಧಿಯನ್ನುಪಯೋಗಿಸುತ್ತಾನೆ. ಆರಿಸಿ ಸೈನ್ಯಕ್ಕೆ ಸೇರಿದ ಬಳಿಕ ವಿಧೇಯತೆಯನ್ನು ಕಾಪಾಡಬೇಕು.

ಸತ್ಯಾಗ್ರಹಿಗೆ ಸೂಚನೆಗಳು

‘ಪ್ರತಿಯೊಂದು ಕಾಂಗ್ರೆಸು ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಬೇಕು. ಪರಸ್ಪರ ಮೈತ್ರಿ, ಹರಿಜನ ಪ್ರೇಮ, ಖಾದೀಧಾರಣ ಇರುವವರಾಗಿದ್ದು ಅವರು ಸತತ ನೂಲುವವರಾಗಿರಬೇಕು. ಅಂತಹವರು ಸತ್ಯಾಗ್ರಹಿಗಳೆಂದು ತಮ್ಮ ಹೆಸರುಗಳನ್ನು ‘ದಾಖಲು’ ಮಾಡಿಸಿಕೊಳ್ಳಬೇಕು. ಹೀಗೆ ಪ್ರತಿಯೊಂದು ಕಾಂಗ್ರೆಸು ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಬೇಕು. ಅಖಿಲಭಾರತ ಚರಕಾಸಂಘದ ನಿಯಮದಂತೆ ಇವರು ತಮ್ಮ ನೂಲುವ ಕೆಲಸಗಳನ್ನು ಮುಂದುವರಿಸಬಹುದು.

‘ಹೀಗೆ ತಮ್ಮ ಹೆಸರುಗಳನ್ನು ದಾಖಲು ಮಾಡಿಕೊಂಡ ಸತ್ಯಾಗ್ರಹಿಗಳು ತಾವು ಮಾಡಿದ ಕೆಲಸಗಳ ವಿಷಯ ಬರೆದು ಡೈರಿಯನ್ನು ಇಟ್ಟುಕೊಳ್ಳಬೇಕು. ಇವರು ತಾವು ಸ್ವತಃ ರಚನಾತ್ಮಕ ಕಾರ್ಯಗಳನ್ನು ಮಾಡುವುದಲ್ಲದೆ, ಇತರರಿಗೂ ಅದನ್ನು ಬೋಧಿಸಬೇಕು. ಪ್ರಾಥಮಿಕ ಸದಸ್ಯರೊಡನೆ ಪ್ರೀತಿಯ ಸಂಬಂಧವನ್ನು ಬೆಳೆಸುತ್ತಾ ಬರಬೇಕು. ಹರಿಜನ ವಾಸಸ್ಥಾನಗಳನ್ನು ಸಂದರ್ಶಿಸಿ ಆಗಾಗ ಅವರಿಗೆ ಹಿತಬೋಧೆಗಳನ್ನು ಕೊಡಬೇಕು. ಶಿಕ್ಷೆ ಸೆರೆಮನೆಗಳನ್ನು ಅನುಭವಿಸಲು ಅವರು ಸಿದ್ಧರಿರಬೇಕು.

“ಕಾರಣಾಂತರಗಳಿಂದ ನನ್ನ ಸೂಚನೆಗೆ ವಿರೋಧ ಬಂದರೆ ನಾನು ಸತ್ಯಾಗ್ರಹವನ್ನು ನಿಲ್ಲಿಸಬೇಕಾಗುವುದು. ಲೋಕವು ಹಿಂಸೆಯಿಂದ ಮತ್ತವಾಗಿ ವಿನಾಶಕರ ಧೋರಣೆಯನ್ನು ಅನುಸರಿಸುತ್ತಿರುವಾಗ ಭಾರತವು ಅಹಿಂಸೆಯಿಂದಲೇ ಸ್ವಾತಂತ್ರ್ಯವನ್ನು ಪಡೆಯಿತೆಂದು ಜಗತ್ತಿಗೆ ಸಾರಬೇಕಾಗಿದೆ. ಸತ್ಯಾಗ್ರಹಿಗಳ ಹೃದಯದಲ್ಲಿ ಹಿಂಸೆಯ ಯೋಚನೆ ಇರುವವರೆಗೆ ನಾನು ಅಂದೋಲನವನ್ನು ಆರಂಭಿಸಲು ಸಾಧ್ಯವಿಲ್ಲ. ಆದರೆ ತಮ್ಮ ಹೆಸರನ್ನು ದಾಖಲು ಮಾಡಿದ ಸತ್ಯಾಗ್ರಹಿಗಳು ಪ್ರಾಮಾಣಿಕರಾಗಿ ಇತರರು ನಮ್ಮ ಕಾರ್ಯಗಳಿಗೆ ಆತಂಕ ತರದಿದ್ದರೆ ನಾನು ಸತ್ಯಾಗ್ರಹವನ್ನು ಆರಂಭಿಸಬಲ್ಲೆನು. ಸಂಪೂರ್ಣ ಪಕ್ವವಾದ ಅಹಿಂಸಾ ತತ್ವದಲ್ಲಿ ಭರವಸೆಯುಳ್ಳವರಿಂದ ನಾನು ಒಂದು ಹೋರಾಟ ನಡೆಸುವೆನು. ಸತ್ಯಾಗ್ರಹ ತತ್ವದಲ್ಲಿ ಭರವಸೆಯಿಲ್ಲದ ಒಂದು ದೊಡ್ಡ ಸೈನ್ಯದಿಂದಲಾದರೂ ನಾನು ತೊಡಕಿನಲ್ಲಿ ಬೀಳಬೇಕಾಗುವುದು.

“ನನ್ನ ಈ ಸೂಚನೆಗಳಿಗೆ ಒಂದು ತಿಂಗಳಲ್ಲಿ ಉತ್ತರ ಸಿಕ್ಕಿದರೆ ಮುಂದಿನ ಅಂದೋಲನದ ವಿಚಾರ ಹೆಚ್ಚು ಗಮನ ಕೊಡಲು ಸಾಧ್ಯವಾಗುವುದು.

ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ



ಲೋಧ್ರ

ತಯಾರಿಸುವವರು:
ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯ ಸ್ಟೋಕಿಸ್ಟರು:
ಸೋಷ್ಯಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

Wanted.

Applications are invited from Regd Medical Practitioners and Licentiates in Indian Medicine for appointment as organizers of the Company. Applications furnishing qualifications, age, caste and previous experience if any, and the minimum salary expected, should reach the undersigned on or before 25-4-1940.

P. Janardhan Nayak,
Managing Director.
Office of Bhuvanendra Products Ltd., Katapadi,
South Kanara.

Dated 29-3-1940

ಸಮುದ್ರ ಯುದ್ಧದ ವಿಚಿತ್ರ ಹೋರಾಟ!

ಜಲಾಂತರ್ಗಾಮಿಗಳ ಪರಿಚಯ

ಇಂದಿನ ಭೀಕರವಾದ ಯುದ್ಧದಲ್ಲಿ ಅತ್ಯಂತ ಭೀಕರವೂ, ಪರಮ ಕುತೂಹಲಕರವೂ ಆದ ವಿಷಯವೆಂದರೆ ಸಮುದ್ರ ಯುದ್ಧವಾಗಿದೆ. ಜರ್ಮನಿಯ ಹಾಗೂ ಮಿತ್ರ ರಾಷ್ಟ್ರಗಳ ಯುದ್ಧದ ವಿಷಯ, ಪರಿಚಯ ಮಾಡಿಕೊಳ್ಳಬೇಕಾದರೆ, ಜಲಾಂತರ್ಗಾಮಿ ನಾವೆಯೆಂದರೇನು? ಅದರ ರಚನೆಯೆಂತು? ಅದರೊಳಗೆ ನೆಲಸಿರುವ ಜನರ ವಿಚಾರವೇನು? ಇತ್ಯಾದಿ ವಿಷಯಗಳು ಅಗತ್ಯವಾಗಿ ತಿಳಿದಿರಬೇಕಾಗಿದೆ

ಅದರಲ್ಲಿರುವ ಮುಖ್ಯ ಅಸ್ತ್ರಗಳು

ಒಂದು ಜಲಾಂತರ್ಗಾಮಿ ನಾವೆಗಳಲ್ಲಿ ಟಾರ್ಪೆಡೋ ಮತ್ತು ತೋಟೆಗಳು ಯಾವಾಗಲೂ ಅದರೊಳಗಿರುವ ಮುಖ್ಯ ಅಸ್ತ್ರಗಳಾಗಿವೆ ಏಕೆಂದರೆ ಹೆಚ್ಚಿನ ಅವುಗಳ ಕೆಲಸವು ಈ ಎರಡು ಆಯುಧಗಳಿಂದಲೇ ಜರಗುವುದು ಈ ಜಲಾಂತರ್ಗಾಮಿ ನಾವೆಗಳು ಹಗಲು ಸಮಯ ವೈರಿಗಳ ಕಣ್ಣಿಗೆ ಬೀಳದಂತೆ ನೀರಿನೊಳಗೆ ಅವಿತುಕೊಂಡಿರುತ್ತವೆ ರಾತ್ರಿ ಹೊತ್ತು ಮಾತ್ರ ಮೇಲೆದ್ದು ಬರುತ್ತವೆ ಆದರೆ ಇಡೀ ದಿನವೂ ರಾತ್ರಿ ಹಗಲೆನ್ನದೆ ನೀರಿನೊಳಗೇ ಮುಳುಗಿರಲು ಅವುಗಳಿಗೆ ಸಾಧ್ಯವಿಲ್ಲ ಏಕೆಂದರೆ ಅವುಗಳಿಗೂ ಆಗಾಗ ಗಾಳಿಯನ್ನು ಬದಲಾಯಿಸಿ, ಹೊಸ ಗಾಳಿಯನ್ನು ತುಂಬಿಸಿಕೊಳ್ಳಬೇಕಾಗಿದೆ

ಒಂದು ದೊಡ್ಡ ಪಾತ್ರದಲ್ಲಿ ಗಾಳಿಯನ್ನು ತುಂಬಿಸಿ ಬಾಯಿ ಕಟ್ಟಿ ಅದರೊಳಗಿರುವವರೂ ಇರುತ್ತಾರೆ. ಆದರೆ ಅಲ್ಲಿ ಗಾಳಿಯನ್ನು ಶುದ್ಧಮಾಡುವ ಸಾಧನವಿದೆ, ಆದರೆ ಬಹುಕಾಲ ಶುದ್ಧವಾದ ಗಾಳಿಯೇ ಇಲ್ಲಿ ದೊರಕಲಾರದು. ಅದರೊಳಗೆ ಸಿಗರೇಟು ಮೊದಲಾದವುಗಳನ್ನು ಸೇದದಂತೆ ನಿಯಮವಿದೆ!

ಮೃತ್ಯುವಿನ ಪವಡೆಯಲ್ಲಿ

ಜಲಾಂತರ್ಗಾಮಿ ನಾವೆಯೊಳಗಿರುವ ಜನರ ಜೀವನವು ಯಾವಾಗಲೂ ಮೃತ್ಯುವಿನ ದವಡೆಯಲ್ಲಿ ಸಿಲುಕಿರುವಂತೆ ಬಹಳ ಕಠಿಣ ಪರಿಸ್ಥಿತಿಯಲ್ಲಿರುತ್ತದೆ ಏಕೆಂದರೆ ಯಾವಾಗ ಶತ್ರು ಹಡಗುಗಳು ಬೆನ್ನಟ್ಟಿ ತನ್ನನ್ನು ನಾಶ ಮಾಡಬಹುದೋ ಎಂಬ ವಿಷಯ ಪ್ರತಿಯೊಂದು ನಾವೆಯೂ ಭಯಭೀತವಾಗಿರುತ್ತದೆ.

ಜಲಾಂತರ್ಗಾಮಿ ನಾವೆಯಲ್ಲಿ ಸರಿಯಾದ ಶಿಸ್ತು ವಿಧೇಯತೆ ಸೌಹಾರ್ದಗಳಿರಬೇಕು ಯಾರಾದರೊಬ್ಬನು ಒಂದು ತಪ್ಪು ಮಾಡಿದರೆ, ಇಡೀ ಹಡಗದವರೇ ಅದರಿಂದ ಪ್ರಾಣಾಪಾಯಕ್ಕೆ ಗುರಿಯಾಗಬೇಕಾಗುವುದು ಪ್ರತಿಯೊಬ್ಬನೂ ತನ್ನ ಕೆಲಸವನ್ನು ಅತ್ಯಂತ ಜಾಗ್ರತೆಯಿಂದ ಮಾಡುತ್ತಾನೆ ದೊಡ್ಡ ನಾವೆಯಲ್ಲಿ ಆರು ಟಾರ್ಪೆಡೋಗಳಿರುತ್ತವೆ. ಟಾರ್ಪೆಡೋಗಳಿಂದಲೇ ಅವುಗಳು ಹೆಚ್ಚು ಕೆಲಸ ಮಾಡುತ್ತವೆ ಅವುಗಳನ್ನು ಯಾವಾಗಲೂ ಎಚ್ಚರದಿಂದ ನೋಡಿ ಇಟ್ಟುಕೊಳ್ಳಬೇಕು. ಇಲ್ಲವಾದರೆ ಎಲ್ಲಾ ಪರಿಶ್ರಮವೂ ವ್ಯರ್ಥವಾಗುವುದು

ನಿದ್ರಿಸುವುದು ಹೆಚ್ಚು

ಜಲಾಂತರ್ಗಾಮಿ ನಾವೆಗಳಲ್ಲಿ ಹೆಚ್ಚಿನವರು ಮಲಗಿ ನಿದ್ರೆ ಮಾಡಿರುತ್ತಾರೆ ಅವಿಶ್ರಾಂತರಾಗಿ ದುಡಿದವರು ಇಲ್ಲಿ ಬರುತ್ತಾರೆ ಸರಿಯಂತೆ ಕೇವಲ ನಾಲ್ಕೋ ಐದೋ ಜನರು ಎಚ್ಚರವಾಗಿದ್ದರೆ ಸಾಕು ಕೆಲವರು ಏನಾದರೂ ಓದುತ್ತಾ ಇರುತ್ತಾರೆ

ಜಲಾಂತರ್ಗಾಮಿ ನಾವೆಯು ಬಹಳ ಎಚ್ಚರದಿಂದ ಶತ್ರು ಹಡಗದ ಆಗಮನ, ಪ್ರತ್ಯಾಗಮನಗಳನ್ನು ಸಿರೀಕ್ಷಿಸುತ್ತಾ ಇರಬೇಕಾಗಿದೆ ತನ್ನನ್ನು ನೋಡದಂತೆ ಮಾತ್ರವಲ್ಲ, ತಾನು ಅಡಗಿದ್ದು ಶತ್ರು ಹಡಗವನ್ನು ಭಗ್ನಮಾಡುವಂತೆ ಕೆಲಸ ಮಾಡಬೇಕಾದರೆ ಪ್ರತಿಯೊಂದು ನಾವೆಯು ಬದುಕುವ ಆಶೆಯನ್ನು ಬಿಟ್ಟಿರಲೇ ಬೇಕಾಗಿದೆ

ಹೇಗಿದ್ದರೂ ಜಲಾಂತರ್ಗಾಮಿ ನಾವೆಗಳು ಇಂದಿನ ಯುದ್ಧದಲ್ಲಿ ಬಹಳ ಭಾಗದ ಕಾರ್ಯವನ್ನು ಮಾಡುತ್ತವೆ ಶತ್ರುಗಳ ಗಮನವನ್ನು ತಡೆಯುತ್ತವೆ. ಶತ್ರುಗಳಿಗೆ ಹಿಂಸೆ ಕೊಡುವ ಉದ್ದೇಶದಿಂದ ಸ್ವಂತ ಜೀವನವನ್ನು ಅಪಾಯ ಪರಿಸ್ಥಿತಿಯಲ್ಲಿಯೇ ಇಟ್ಟುಕೊಂಡಿವೆ ಜರ್ಮನಿಯು ಬ್ರಿಟಿಷ್ ಫ್ರಾನ್ಸುಗಳ ಹಡಗಗಳನ್ನು ಅವುಗಳ ಸಂಚಾರವನ್ನೂ ತಡೆಯಬೇಕೆಂದು ನಾನಾ ವಿಧದಿಂದ ಸಾಹಸ ಮಾಡುತ್ತಿದೆ. ಆದರೆ ಜರ್ಮನಿಯ ಜೀವನದ ಭದ್ರತೆಯಾದರೂ ಎಲ್ಲಿ ಉಂಟು?



ಜಲಾಂತರ್ಗಾಮಿ ನಾವೆ

ಸೆಕೆಕಾಲದ ಚರ್ಮವ್ಯಾಧಿಯನ್ನು ಗುಣಪಡಿಸಿಕೊಳ್ಳಿರಿ!

ಗಾಯಗಳಿಗೆ, ಕಡಿತಗಳಿಗೆ ಮತ್ತು ವ್ರಣಗಳಿಗೆ ಜ್ಯಾಂಬಕನ್ನು ಉಪಯೋಗಿಸಿರಿ

ಯಾವಾಗಲೂ ರಾತ್ರಿ ಸಮಯ ಜ್ಯಾಂಬಕನ್ನು ಚರ್ಮದ ಮೇಲೆ ಸವರಿದರೆ ಸೆಕೆಕಾಲದ ಚರ್ಮವ್ಯಾಧಿಗಳಿಂದ ನೀವು ವಿಮುಕ್ತರಾಗುವಿರಿ ಜ್ಯಾಂಬ... ಕ್ರಿಮಿಕೀಟಗಳ ಕಡಿತ, ಗಾಯ ವ್ರ... ಮೊದಲಾದುವುಗಳಿಗೆ ಅಮೂಲ್ಯವಾ... ಔಷಧಿಯಾಗಿರುತ್ತದೆ ಜ್ಯಾಂಬಕಿನಲ್ಲಿ... ವ ಉತ್ತಮವಾದ ಗಿಡಮೂಲಿಕೆ... ಎಷ್ಟೆಯು ನರನಾಡಿಗಳನ್ನು ಪ್ರವೇಶಿ... ತ್ತದೆ ತದ್ರೀತಿ ನೋವು ಗುಣವಾಗಿ ಬಾತುವಿಕೆಯು ಕಡಿಮೆಯಾಗುತ್ತ... ಎಲ್ಲಾ ಡಾಕ್ಟರರೂ ನರ್ಸುಗಳೂ ಪ್ರತೀ ಒಂದು ಚರ್ಮವ್ಯಾಧಿ... ಜ್ಯಾಂಬಕನ್ನೇ ಶಿಫಾರಸು ಮಾಡುತ್ತಾರೆ ಎಲ್ಲಾ ಔಷಧಿ ವ್ಯಾಪಾರಿ... ಜ್ಯಾಂಬಕನ್ನು ರೂ 1 ಮತ್ತು 2 1 0ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪನಿ ಪಾರ್ಕ್‌ಟೌನ್ ಮದ್ರಾ...

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ ಅತಿಸಾರ ವಾತ ಕ್ಷಯ ... ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿದೆ

ಕೇವಲ ಕೆಲವೇ ಪ್ರತಿಗಳು ಉಳಿದಿವೆ ಬೆಲೆ ರೂ. 1 ಮಾತ್ರ

... ಪ್ರತಿಗಳನ್ನು ಒಮ್ಮೆಲೇ ತರಿಸುವವರಿಗೆ ... ಚಾರ್ಜ ... ವ್ಯಾಪಾರಸ್ಥರಿಗೆ ಧಾರಾಳ ಕಮಿಷನು

ವಿ. ಪಿ. ... ರೂ 1 ಕಳುಹಿಸುವವರಿಗೆ ನಮ್ಮ ... ಳಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟು | ಸೋಲ್ ಏಜೆಂಟ್ಸ್

ಯು ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು | ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ...

ಎಂಡ್ರೂಸ್ ಲಿವರ್ ಸೋಲ್ಟ್



ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ!

ಈ ವಾರದ ಕತೆ:

ಪ್ರೇಮ ಪ್ರಸಾದ

ಬಾಲ್ಯದ. ಆ ದಿನಗಳು—ಅವೆಷ್ಟು ಸುಂದರ ಮತ್ತು ಮಧುರವಾಗಿದ್ದುವು!

ಆ ದಿನಗಳ ನನ್ನ ಆ ಪ್ರಪಂಚ—ನೆನೆದರೆ ಅಂಗಾಂಗಗಳು ಆನಂದದಿಂದ ಪುಳಕಿತವಾಗುತ್ತವೆ. ಆ ನನ್ನ ಪ್ರಪಂಚದಲ್ಲಿ ಕ್ರೀಡೆ ಮತ್ತು ಕಲರವ ಅಲ್ಲದೆ ಮತ್ತೇನಿರಲಿಲ್ಲ. ಅದು ನನ್ನ ಪ್ರಪಂಚ—ನನ್ನ ಲೀಲಾಭೂಮಿ. ಅದರಲ್ಲಿ ರಾಜ ಪ್ರಜೆ ನಾವೇ; ನಾನು ಮತ್ತು ನನ್ನ ಶಾಂತಿ ನಾವೇ ಶಾಸಿತರು ಎಷ್ಟು ಸುಂದರ ಮತ್ತು ಮಧುರವಾಗಿತ್ತು,—ಆ ನನ್ನ ಪ್ರಪಂಚ!

ನನ್ನ ಮನೆ ಮುಂದುಗಡೆ ಒಂದು ಹಂಚಿನ ಮನೆ ಇದ್ದಿತು ಅದರಲ್ಲಿ ನನ್ನ ಶಾಂತಿ ವಾಸವಾಗಿದ್ದಳು. ಅವಳೊಡನೆ ನನ್ನ ಬಾಲ್ಯದ ಸ್ನೇಹ ನನ್ನನ್ನು ಬಿಟ್ಟು ಅವಳಿಗೆ, ಅವಳನ್ನು ಬಿಟ್ಟು ನನಗೆ ನೆಮ್ಮದಿ ಇದ್ದಿಲ್ಲ, ಸುಖವಿದ್ದಿಲ್ಲ ಎಚ್ಚರವಾದ ಮೇಲೆ, ನಿದ್ರಿಸಲಿಕ್ಕೆ ಹೋಗುವ ತನಕ ನಾನು ಮತ್ತು ನನ್ನ ಶಾಂತಿ ಯಾವಾಗಲೂ ಒಟ್ಟೊಟ್ಟಿಗೆ ಇರುತಿದ್ದೆವು

ಶಾಂತಿಯ ತಂದೆ ದೊಡ್ಡ ಧರ್ಮಾತ್ಮರು. ಧರ್ಮದಲ್ಲಿ ಅವರಿಗೆ ತುಂಬಾ ಶ್ರದ್ಧೆ, ಬಹಳ ವಿಶ್ವಾಸ ಸ್ವಭಾವದಿಂದ ಅವರು ಹೆಚ್ಚು ಸರಳರು ಮಾತನಾಡುತ್ತ ಕಾಲಕಳೆಯುವುದು ಕಡಿಮೆ ಆದರೆ ಮಾತನಾಡಿದ ಅವರ ಅಷ್ಟು ಮಾತೂ ಬಹಳ ಸುಂದರ, ಬಹಳ ಮಧುರ

ಹಲವು ದಿನಗಳಿಗೊಮ್ಮೆ ಪ್ರತಿ ಶನಿವಾರ ಶಾಂತಿಯ ಮನೆಯಲ್ಲಿ ಸತ್ಯನಾರಾಯಣ ಪೂಜೆ ಆಗುತ್ತಿದ್ದಿತು ಕತೆ ಓದಲಿಕ್ಕೆ ಪುರೋಹಿತರು ಬರುತಿದ್ದರು ಕೇಳುವವರ ಸಂಖ್ಯೆ ಕಡಿಮೆ ಇರುತ್ತಿರಲಿಲ್ಲ, ನಮ್ಮ ಓಣಿ—ಕೇರಿಯ ಎಲ್ಲಾ ಜನರು ಕತೆ ಕೇಳಲಿಕ್ಕೆ ಬರುತಿದ್ದರು.

ನಾನೂ ಕತೆ ಕೇಳಲಿಕ್ಕೆ ಹೋಗುತಿದ್ದೆ—ಕೇಳುವ ಮನಸ್ಸಿನಿಂದ ಅಲ್ಲ ಪುಣ್ಯ ಗಳಿಸುವ ಆಸೆಯಿಂದಲ್ಲ ಮಂಗಳಾರತಿ ಆದ ಮೇಲೆ ಶಾಂತಿ ಪ್ರಸಾದ ಹಾಕುತಿದ್ದಳು ಅದಕ್ಕಾಗಿ ನಾನು ಪೂಜೆಗೆ ಹೋಗುತಿದ್ದೆ ಪ್ರಸಾದ ತಿಂದು ನನ್ನ ಹೊಟ್ಟೆ ತುಂಬುತಿತ್ತು ಬಾಯಿ ಚಪ್ಪರಿಸಿ, ಕೈ ನೆಕ್ಕುತ್ತ, ಪೂಜೆ ಮುಗಿದ ಮೇಲೆ ನಾನು ಮನೆಗೆ ಬರುತಿದ್ದೆ

೨

ಮತ್ತೆ ಐದು ವರ್ಷಗಳು ಕಳೆದವು.

ಆಗ ನಾವು ಪ್ರಾಯಕ್ಕೆ ಬಂದೆವು. ಬಾಲ್ಯದ ಆ ದಿನಗಳು ಉಳಿಯಲಿಲ್ಲ. ಆ ಚಿಕ್ಕ ಪ್ರಪಂಚವೂ ಉಳಿಯಲಿಲ್ಲ. ಪೂಜೆ ಆಗಲೂ ಆಗುತಿತ್ತು. ಪುರೋಹಿತರು ಆಗಲೂ ಬರುತಿದ್ದರು. ಜನರು ಆಗಲೂ ಸೇರುತಿದ್ದರು. ಆದರೆ ಎಷ್ಟು ವ್ಯತ್ಯಾಸ!

ಶಾಂತಿಯು ಪ್ರಸಾದಹಂಚಲಿಕ್ಕೆ ಬರುತ್ತಿರಲಿಲ್ಲ. ಒಳಗೇ ಕೂತು ಎಲ್ಲವನ್ನು ನೋಡುತಿದ್ದಳು, ಕೇಳುತಿದ್ದಳು. ಆಗಾಗ ಹಟಮಾಡಿ ತಾಯಿಯನ್ನು ಪೀಡಿಸುತ್ತಲೂ ಇದ್ದಳು—'ಅಮ್ಮ, ಸ್ವಲ್ಪ ಪ್ರಸಾದ ಹಂಚಿ ಬರಲೆ?' ತಾಯಿ—'ಮಗು! ನೀನು ದೊಡ್ಡವಳಾದೆ. ಪ್ರಸಾದ ಹಂಚಿ ಸಿಕ್ಕದಲ್ಲಿ ತಿರುಗುವುದು ಹೇಗಾಗುತ್ತದೆ? ಜನರು ಏನಂದಾರು?' ಎಂದು ಶಾಂತಿಯ ಬಾಯಿ ಮುಚ್ಚಿಸುತಿದ್ದಳು

★

ಒಂದು ದಿನ ಪೂಜೆಗೆ ಹೋಗಿದ್ದೆ. ಕತೆ ಅರ್ಧ ಓದಿ ಆಗಿತ್ತು ಜನರು ತದೇಕ ಧ್ಯಾನದಿಂದ ಕೇಳುತಿದ್ದರು ಆಗಾಗ ಜಯಕಾರ ಶಂಖನಾದ ಆಗುತಿದ್ದವು ನಾನು ಒಂದು ಬದಿಗ ಹೋಗಿ ಕೂತುಕೊಂಡೆ

ಪೂಜೆ ಮುಗಿಯಿತು ಪ್ರಸಾದ ಹಂಚಿತು ಆದರೆ ಹಂಚುವವರು ಬೇರೆ ಯಾರೋ ಆಗಿದ್ದರು. ನನ್ನ ಕೈಗೆ ಸ್ವಲ್ಪ ಪ್ರಸಾದ ಬಿದ್ದಿತು ಅದನ್ನು ನಾನು ತಿನ್ನಲಿಲ್ಲ ಕಿಟಕಿಯ ಮೇಲಿಟ್ಟು ಹಾಗೆಯೇ ಹೋಗಿದ್ದೆ

೩

ಆ ದಿನದಿಂದ ನನ್ನ ಸ್ವಾಸ್ಥ್ಯ ಸ್ವಲ್ಪ ಸ್ವಲ್ಪ ಕೆಡುತ್ತ ಬಂದಿತು. ಎಲ್ಲಿಯೂ ಯಾವದರಲ್ಲಿಯೂ ಮನಸ್ಸು ನಾಟುತ್ತಿರಲಿಲ್ಲ ಚಳಿಯಿಲ್ಲ ಕೆಸೆಯಿಲ್ಲ, ಕೆಮ್ಮಿಲ್ಲ, ಜ್ವರವಿಲ್ಲ ನನ್ನದು ಈಗ ಒಂದು ವಿಚಿತ್ರ ರೀತಿಯ ರೋಗವಾಗಿತ್ತು! ದೇಹವು ಒಂದೊಂದು ಸಲ ಬಹಳ ತಣ್ಣಗಾಗುತಿತ್ತು, ಒಂದೊಂದು ಸಲ ಬಹಳ ಬಿಸಿ ಏರುತಿತ್ತು

★

ಕಾಯಿಲೆ ಬಿದ್ದ ಏಳನೆ ದಿನ, ಆದಿತ್ಯವಾರ ನನ್ನ ದೇಹಸ್ಥಿತಿ ಹಾಗೆಯೇ ಇತ್ತು ಮುಖಮುದ್ರೆ ಮೊದಲಿಗಿಂತ ಹೆಚ್ಚು ಬಾಡಿತ್ತು, ಉದಾಸವಾಗಿತ್ತು ತಿಂಗಳುಗಟ್ಟಲೆ ಕಾಯಿಲೆ ಬಿದ್ದಹಾಗೆ ನಾನಾಗಿದ್ದೆ. ಕಿಟಕಿಯ ಸಂದಿನೊಳಗಿಂದ ಕೋಣೆ ಒಳಗೆ ಬಂದ ಒಂದು ಸೂರ್ಯಕಿರಣವನ್ನು ನೋಡುತ್ತ ನಾನು ಹಾಸಿಗೆ ಮೇಲೆ ಮಲಗಿದ್ದೆ

ಹಾಸ್ಯಗಾರರಾದ ಲೋರಲ್ ಮತ್ತು ಹಾರ್ಡಿ

ಅಷ್ಟರಲ್ಲಿ ಕಿತ್ತಳೆ ರಸ ತೆಗೆದುಕೊಂಡು ತಾಯಿ ಒಳಗೆ ಬಂದಳು. ಎಡಕೈಯನ್ನು ನನ್ನ ಹಣೆಯ ಮೇಲಿಟ್ಟು—'ಅಪ್ಪಾ, ಇದು ಕಿತ್ತಳೆ ರಸ—ಸ್ವಲ್ಪ ಕುಡಿ ಹುಶ್ಯಾರಾಗುವಿ' ಎಂದಳು

ನಾನು ಮೋರೆ ತಿರುಗಿಸಿ—'ಈಗ ಬೇಡ ಎಂದೆ

ಹಾಗಲ್ಲ ಮಗು' ಹಟ ಹಿಡಿಯಬೇಡ. ಸ್ವಲ್ಪ ಕುಡಿ; ಬೇಗನೆ ಹುಶ್ಯಾರಾಗುವಿ!

'ಈಗ ಬೇಡ ಅಮ್ಮ! ಸ್ವಲ್ಪ ತಡೆದು ಕುಡಿಯುತ್ತೇನೆ.'

ತಾಯಿ ಕೊನೆಗೂ ತಾಯಿಯೇ ಆಗಿದ್ದಳು. ಅವಳು ನನ್ನ ಮಾತನ್ನು ಒಪ್ಪಿದಳು. 'ಆಗಬಹುದು ಮಗು; ಸ್ವಲ್ಪ ತಡೆದೇ ಕುಡಿ' ಎಂದು ಹೇಳಿ ಅವಳು ಗ್ಲಾಸನ್ನು ಕಿಟಕಿಯ ಮೇಲೆ ಇಡಲಿಕ್ಕೆ ಹೋದಳು. ಅಲ್ಲಿ ದೊಡ್ಡದೊಂದು ಇರುವೆಯ ಸಾಲು ಹರಿದು ಹೋಗುತಿತ್ತು. ಅದನ್ನು ನೋಡಿ ಅವಳು ಬೆಚ್ಚಿಬಿದ್ದಳು. ಅಲ್ಲಿಯೇ ಒಂದು ಮೂಲೆಯಲ್ಲಿ ಉಗುರಿ ದ್ರಾಕ್ಷಿ ದಾಳಿಂಬೆ ಬದಾಮು ಸಕ್ಕರೆ ಬಾಳೆತುಂಡುಗಳು ಬಿದ್ದಿದ್ದವು ಇರುವೆಗಳ ಸಾಲು ಅವನ್ನೇ ಮುತ್ತಿತ್ತು

ತಾಯಿ ಕೇಳಿದಳು—'ಇಲ್ಲಿ ಇದನ್ನು ಯಾರು ಇಟ್ಟರು?

ನಾನು ಹೇಳಿದೆ—'ಮೊನ್ನೆ ಆಚೆ ಮನೆಯಿಂದ ಪ್ರಸಾದ ತಂದಿದ್ದೆ ಅದೇ ಆಗಿರಬಹುದು.'

ತಾಯಿ—'ರಾಮರಾಮಾ! ಶಿವ ಶಿವಾ! ಇದೇನು ಮಾಡಿದೆ ಮಗು? ಪ್ರಸಾದ ತಂದಿ ಮತ್ತು ಅದನ್ನು ಸಿಕ್ಕಿದಲ್ಲಿ ಚೆಲ್ಲಿಬಿಟ್ಟೆ. ಗೊತ್ತಾಯಿತು. ಪ್ರಸಾದ ಚೆಲ್ಲಿದ್ದರಿಂದಲೇ ದೇವರು ಸಿಟ್ಟಾದ ಆದ್ದರಿಂದಲೇ ನೀನು ಕಾಯಿಲೆ ಬಿದ್ದೆ. ದೇವರೆ! ಕಾಪಾಡು ನನ್ನ ಕಂದನ ಅಪರಾಧವನ್ನು ಕ್ಷಮಿಸು.'

ನಾನು ಮಾತನಾಡಲಿಲ್ಲ

ತಾಯಿ ಪುನಃ ಹೇಳಿದಳು—'ಒಳ್ಳೇದು ಮಗು, ಚಿಂತಿಲ್ಲ, ದೇವರು ಕರುಣಾಳು ಕ್ಷಮಿಸುವನ ಶಾಂತಿ ಬೆಳಿಗ್ಗೆ ಬಂದಿದ್ದಳು ಸ್ವಲ್ಪ ಪ್ರಸಾದ ಕೊಟ್ಟು ಹೋಗಿದ್ದಾಳೆ ತಿನ್ನು ಹುಶ್ಯಾರಾಗುವೆ'

ಅವಳು ಆ ಕೂಡಲೆ ಒಳಗೆ ಹೋಗಿ ಪ್ರಸಾದ ತೆಗೆದುಕೊಂಡು ಬಂದಳು ಈ ಬಾರಿ ನಾನು ಸ್ವಲ್ಪವಾದರೂ—ಬೇಡ ಬೇಡ ಅನ್ನಲಿಲ್ಲ ಸಂತೋಷದಿಂದ ಪ್ರಸಾದವನ್ನು ತಿನ್ನತೊಡಗಿದೆ. ಅದು ಎಂದೆಂದಿಗಿಂತ ಸಿಹಿ ಆಗಿತ್ತು. 'ಶಾಂತಿ ಪ್ರಸಾದ ಕೊಟ್ಟು ಹೋದಳು ಇದು ಅವಳ ಪ್ರೇಮದ ಪ್ರಸಾದ' ಎಂದು ನನ್ನ ಮನಸ್ಸಿನಲ್ಲಿ ಯಾರೋ ರಹಸ್ಯವಾಗಿ ನನಗೆ ಹೇಳಿದ ಹಾಗಾಯಿತು. ನನ್ನ ಕಿವಿಗಳು ಅವೇ ಮಾತುಗಳನ್ನು ಕೇಳುತಲಿದ್ದವು

ಆ ಮೇಲೆ ನಾನು ಬಹು ಬೇಗ ಗುಣಮುಖನಾದೆ ಕೆಲವೇ ದಿನಗಳಲ್ಲಿ ಪೂರ್ಣ ಆರೋಗ್ಯವನ್ನು ಸಂಪಾದಿಸಿದೆ ಅನಂತರ ನನಗೂ ಶಾಂತಿಗೂ ವಿಜೃಂಭಣೆಯಿಂದ ವಿವಾಹವಾಯಿತು.

'ಇದನ್ನು ನೋಡಿ ತಾಯಿಯ ಸಂತೋಷಕ್ಕೆ ಪಾರವೇ ಉಳಿಯಲಿಲ್ಲ. ದೇವರ ಪ್ರಸಾದದಿಂದ ಹಾಗಾಯಿತೆಂದು ತಾಯಿ ಹೇಳಿದಳು. ಆದರೆ ನಾನು ಮಾತ್ರ ಆ ಮಾತನ್ನು ಈಗಲೂ ಒಪ್ಪುವುದಿಲ್ಲ. ಶಾಂತಿಯ ಪ್ರೇಮಪ್ರಸಾದದಿಂದ ಹಾಗಾಯಿತೆಂದು ನನ್ನ ಮನಸ್ಸು ಹೇಳುತ್ತದೆ. ಆದರೆ 'ಯಾರು' ಬಲ್ಲರು, 'ಯಾವುದು ನಿಜವೆಂದು'?

[ಹಿಂದಿಯಿಂದ]

Canara Bank Limited

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೪೫ನೇ ಇಸವಿ ಡಿಸೆಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ

ಮೂಲಧನ	ರೂ. ಆ. ಪೈ.
ತೆತ್ತಲ್ಪಟ್ಟ	6,00,000-0-0
ಪೈಡ್ ಅಪ್	3,91,842-0-0
ರಿಸರ್ವ್ ಫಂಡು	4,50,000 0-0
ಡಿಪೊಸಿಟ್	
ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ
ವಿವಿಧ	10,51,799-1-7
ಈ ವರ್ಷದ ಲಾಭ	55,003-0-6
ಒಟ್ಟು	1,00,69,766-10-2

	ರೂ. ಆ. ಪೈ.
ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ	95,469-4-3
ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟಿದ್ದು	
ಬೆಲೆಬಾಳುವ ಸೆಕ್ಯುರಿಟಿ	40,97,741-5-6
ಹುಂಡಿ ಪತ್ರ ಮೊದಲಾದುವುಗಳು	10,30,649-2-10
ಲೇವಣಿ	20,64,586-2-0
ವಿವಿಧ	9,82,093-10-4
ನಗದಿ	17,99,207-1-3
ಒಟ್ಟು	1,00,69,766-10-2

ಕಾಂಗ್ರೆಸಿನೊಡನೆ ಒಡಂಬಡಿಕೆಯಾಗಬೇಕು

ಇಲ್ಲದಿದ್ದರೆ ಅನರ್ಥವಾಗಬಹುದು

—ಬ್ರಿಟಿಷ್ ಪತ್ರಿಕೆಯ ಹೇಳಿಕೆ—

ಚೇಂಬರ್ಲೇನರು

"ಕಾಂಗ್ರೆಸಿನೊಳಗೆ ಪಕ್ಷ ವಿಪಕ್ಷಗಳಿವೆ. ಅಂತಃಕಲಹಗಳಿವೆ. ಆದರೆ ವಿಶಾಲವಾದ, ದೊಡ್ಡದಾದ ಯಾವತ್ತು ಸಂಘ ಸಂಸ್ಥೆಗಳಲ್ಲಿ ಇಂಥ ದೋಷಗಳಿರುವದು ಅನಿವಾರ್ಯವಾಗಿದೆ. ಯಾವದೊಡ್ಡ ಸಂಸ್ಥೆಯೂ ಸಂಪೂರ್ಣ ನಿರ್ದೋಷವಾಗಿರುವದಿಲ್ಲ. ಕಾಂಗ್ರೆಸಿನೊಳಗೆ ಪಕ್ಷ ವಿಪಕ್ಷಗಳಿವೆ ಎಂಬ ಕಾರಣದಿಂದಷ್ಟೇ ಅದು ಹಿಂದುಸ್ಥಾನದ ಪರವಾಗಿ ಮಾತನಾಡಲು ಅಧಿಕಾರವುಳ್ಳದ್ದಲ್ಲವೆನ್ನುವದು ಮೂರ್ಖತನ ಎಂದು ವಿಲಾಯತಿಯ ಕನ್ಸರ್ವೇಟಿವ್ ಅಥವಾ ಟೋರಿ ಪಕ್ಷದ ಟ್ಯಾಮ್ಷ ಎಂಡ್ ಟ್ವೈಡ್ ಎಂಬ ಪ್ರಖ್ಯಾತ ಪತ್ರಿಕೆಯು ಬರೆದು ಹಿಂದುಸ್ಥಾನದ ಪರಿಸ್ಥಿತಿಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಚರ್ಚಿಸಿದೆ.

ಒಡಂಬಡಿಕೆಯಾಗದಿದ್ದರೆ ಅನರ್ಥವಾದೀತು

ಹಿಂದುಸ್ಥಾನದಲ್ಲಿ ಹಿಂದು ಮುಸಲ್ಮಾನರೊಳಗೆ ಐಕ್ಯವಿಲ್ಲದಿರುವದು ಅವರ ಸ್ವಾತಂತ್ರ್ಯ ಸಂಪಾದನೆಗೆ ದೊಡ್ಡ ವಿಘ್ನವಾಗಿದೆ ಎಂಬದು ನಿಜ. ಆದರೆ ಈ ಜಾತೀಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಎಂಟು ಪ್ರಾಂತ್ಯಗಳಲ್ಲಿ ಕಾಂಗ್ರೆಸು ಮಂತ್ರಿ ಪದವಿಗಳಿಗೆ ರಾಜಿನಾಮೆಯನ್ನು ಕೊಡಲಿಲ್ಲ. ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಹಿಂದುಸ್ಥಾನದ ಸ್ಥಾನಮಾನಗಳು ಯಾವುವು ಎಂಬ ಪ್ರಶ್ನೆಯ ಮೇಲೆ ಬ್ರಿಟಿಷ ಸರಕಾರಕ್ಕೂ ಕಾಂಗ್ರೆಸಿಗೂ ಭಿನ್ನಾಭಿಪ್ರಾಯವುಂಟಾದುದರಿಂದಲೇ ಕಾಂಗ್ರೆಸ ಮಂತ್ರಿಗಳು ರಾಜಿಕೊಟ್ಟರು. ಕಾಂಗ್ರೆಸಿಗೂ ಬ್ರಿಟಿಷ ಸರಕಾರವು ಬೇಕುಬೇಕೆಂದೇ ಹಿಂದು ಮುಸಲ್ಮಾನ ಸಮಸ್ಯೆಯನ್ನು ಎಳೆದು ತಂದು ಗೊಂದಲವನ್ನೆಬ್ಬಿಸಿದೆ.

ಕಾಂಗ್ರೆಸಿಗೂ ಬ್ರಿಟಿಷ ಸರಕಾರಕ್ಕೂ ಒಂದು ಗೌರವಕರ ಒಡಂಬಡಿಕೆಯಾಗದಿದ್ದರೆ ಅನರ್ಥವಾಗಬಹುದು. ಯೂರೋಪಿನಲ್ಲಿ ಯುದ್ಧವು ಭಯಂಕರ ಸ್ವರೂಪವನ್ನು ತಾಳಿದಾಗ, ಬ್ರಿಟಿಷರು ಹಿಂದುಸ್ಥಾನದಲ್ಲಿ ಸ್ವಾರ್ಥವಶರಾಗಿ ಬಿತ್ತಿದ ಕಲಹ ಬೀಜದ ಬೆಳೆಯನ್ನು ಅವರೇ ಕೊಯ್ದು ಅದರ ಫಲವನ್ನು ಅನುಭವಿಸಬೇಕಾದ ಪ್ರಸಂಗ ಬರುವದು. ಮುಸ್ಲಿಂ ಲೀಗು ಸಂಘಟಿತವಾದ ಹಲವು ಸಂಸ್ಥೆಗಳಲ್ಲಿ ಮುಸ್ಲಿಮರ ಪರವಾಗಿ ಮಾತನಾಡುವ ಒಂದು ಸಂಸ್ಥೆಯಾಗಿರುವದಾದರೂ ಭಾರತ ಸರಕಾರವು ಅದಕ್ಕೆ ಅನಾವಶ್ಯಕವಾದ ಪ್ರಾಮುಖ್ಯತೆಯನ್ನು ಕೊಟ್ಟು, ಹಿಂದು ಮುಸಲ್ಮಾನ ಐಕ್ಯಕ್ಕೆ ಭಂಗ ತಂದಿದೆ. ಹಿಂದು ಮುಸಲ್ಮಾನ ಐಕ್ಯವಾಗದೆ ಭಾರತಕ್ಕೆ ಸ್ವರಾಜ್ಯವೇ ಇಲ್ಲವೆನ್ನುವದಾದರೆ, ಭಾರತದಲ್ಲಿ ಯಾವ ಕಾಲಕ್ಕೂ ಹಿಂದು ಮುಸಲ್ಮಾನ ಐಕ್ಯವು ಆಗಲಾರದು.

ಬ್ರಿಟಿಷರ ನಿಜ ಕರ್ತವ್ಯ

ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವ ಉದ್ದೇಶವು ನಿಜಕ್ಕೂ ಬ್ರಿಟನಿಗೆ ಇರುವದಾದರೆ ಅದು ಭಾರತೀಯ ಅಲ್ಪಸಂಖ್ಯಾಕರ—ಅರ್ಥಾತ್ ಮುಸಲ್ಮಾನರು ತಮ್ಮ ಕಾಲಮೇಲೆ ತಾವು ನಿಂತುಕೊಳ್ಳುವಷ್ಟರ ಶೈಕ್ಷಣಿಕ ಮತ್ತು ಸಾಂಪತ್ತಿಕ ಉನ್ನತಿಯನ್ನು ಪಡೆಯುವ ತನಕ ಅವರಿಗೆ ಎಸೆಂಬ್ಲಿ ಕೌನ್ಸಿಲು ಮತ್ತು ಸರಕಾರಿ ನೌಕರಿ ಉದ್ಯೋಗಗಳಲ್ಲಿ ಸ್ಥಾನಗಳನ್ನು ಕಾದಿಟ್ಟು ಈ ಸಮಸ್ಯೆಯ ಪರಿಹಾರ ಮಾಡಬಹುದು. ಮತ್ತು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬಹುದು. ಇದಕ್ಕೆ ವ್ಯತಿರಿಕ್ತವಾಗಿ ಅದು ನಡೆಯುವದಾದರೆ ಬಾಯಲ್ಲಿ ಏನು ಹೇಳುತ್ತಿದ್ದರೂ ಭಾರತಕ್ಕೆ ನಿಜ ಸ್ವಾತಂತ್ರ್ಯವನ್ನು ಕೊಡುವ ಉದ್ದೇಶ ಬ್ರಿಟನಿಗೆ ಇಲ್ಲವೆಂದೇ ಜಗತ್ತು ಅಭಿಪ್ರಾಯ ಮಾಡಿಕೊಳ್ಳಬೇಕಾಗುತ್ತದೆ.

ಕಾಂಗ್ರೆಸಿನ ಅಧಿಕಾರ ಸ್ವಾತಂತ್ರ್ಯ

ಭಾರತದ ಹನ್ನೊಂದು ಪ್ರಾಂತ್ಯಗಳಲ್ಲಿ ಎಂಟು ದೊಡ್ಡ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಬಹುಸಂಖ್ಯೆಯನ್ನು ಪಡೆದು ಚುನಾವಣೆಗಳಲ್ಲಿ ಆರಿಸಿ ಬಂದುದರಿಂದ, ಹಿಂದೀ ಜನತೆಯ ಪರವಾಗಿ ಮಾತನಾಡಲು ಮತ್ತು ಸಂಧಾನ ಅಥವಾ ಸಂಗ್ರಾಮವನ್ನು ಹೂಡುವ ಅಧಿಕಾರ ಸ್ವಾತಂತ್ರ್ಯವು ಆ ಒಂದು ರಾಷ್ಟ್ರೀಯ ಸಂಸ್ಥೆಗೆ ಮಾತ್ರ ಇರುತ್ತದೆ ಎಂದು ನೇಟಾಲ್ ವಿಟ್‌ನೆಸ್ ಎಂಬ ಇನ್ನೊಂದು ಆಂಗ್ಲೇಯ ಪತ್ರಿಕೆಯು ಸಾರಿದೆ. ಬ್ರಿಟಿಷ ಜನಾಂಗದ ಪರವಾಗಿ ಮಾತನಾಡಲಿಕ್ಕೂ ಜರ್ಮನಿ ಅಥವಾ ಬೇರೆ ಯಾವದಾದರೂ ರಾಷ್ಟ್ರದೊಡ[ನೆ] ಯುದ್ಧ ಮತ್ತು ಸಂಧಾನವನ್ನು ಸಾರು[ವ] ಎಷ್ಟು ಅಧಿಕಾರವು ಬ್ರಿಟನಿನಲ್ಲಿ ಅಧಿಕಾ[ರ]ದಲ್ಲಿರುವ ಕನ್ಸರ್ವೇಟಿವ್ ಪಕ್ಷ[ಕ್ಕೆ] ಇರುವದೋ ಅಷ್ಟೇ ಅಧಿಕಾರವು ಕಾಂಗ್ರೆಸಿಗೆ ಭಾರತದ ಪರವಾಗಿ ಇದೆ. ಕಾಂಗ್ರೆಸು ಬ್ರಿಟನಿನೊಂದಿಗೆ ಕೇಳುವದಾದರೂ ಏನು? ಯೂರೋಪಿನ ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾಪಾಡಿ ಪ್ರಜಾತಂತ್ರವನ್ನು ರಕ್ಷಿಸುವ ಯಾವ ತತ್ವಕ್ಕಾಗಿ ಬ್ರಿಟನು ಜರ್ಮನಿಯೊಡನೆ ಯುದ್ಧವನ್ನು ಸಾರಿದೆಯೋ ಅದೇ ತತ್ವವನ್ನು ಹಿಂದುಸ್ಥಾನಕ್ಕೂ ಅನ್ವಯಿಸಬೇಕೆಂದು ಕಾಂಗ್ರೆಸು ಹೇಳುತ್ತದೆ. ಹೀಗೆ ಹೇಳುವದರಲ್ಲಿ ಅನ್ಯಾಯವೇನೂ ಇಲ್ಲ. ಕಾಂಗ್ರೆಸಿ[ಗೆ] ವಿರೋಧವಾಗಿ ಕೆಲವು ಅಲ್ಪ ಸಂಖ್ಯಾ[ಕ] ಪಕ್ಷಗಳಿವೆ ಎಂದ ಮಾತ್ರಕ್ಕೆ ಕಾಂಗ್ರೆಸ ಹೇಳುವದನ್ನು—ಅಥವಾ ಹಿಂದುಸ್ಥಾನಕ[ ] ಸ್ವಾತಂತ್ರ್ಯ ಕೊಡುವದನ್ನು ಬ್ರಿಟನಿನಿಂ[ದ] ತಿರಸ್ಕರಿಸಲಾಗುವದಿಲ್ಲ. ಬ್ರಿಟನಿನಲ್ಲಿ ಕನ್ಸರವೇಟಿವ್ ಪಕ್ಷಕ್ಕೆ ಪ್ರಬಲ ವಿರೋಧವಿದೆ. ಆದರೂ ಆ ಪಕ್ಷವು ತನ್ನ ಅ[ಧಿ]ಕಾರ ಸ್ವಾತಂತ್ರ್ಯಗಳನ್ನು ಉಪಯೋ[ಗಿ]ಸಿಯೇ ಇದೆ. ಕಾಂಗ್ರೆಸಿಗೆ ಮಾತ್ರ ಅಂ[ ] ಅಧಿಕಾರ ಸ್ವಾತಂತ್ರ್ಯಗಳನ್ನು ಆದೇ ಕನ್ಸ[ರ]ವೇಟಿವ್ ಪಕ್ಷವು ಯಾಕೆ ಅಲ್ಲಗಳೆಯ[ ] ಬೇಕು? ಅದಕ್ಕೆ ಇರುವ ಅಧಿಕಾ[ರ] ಸ್ವಾತಂತ್ರ್ಯಗಳು ಕಾಂಗ್ರೆಸಿಗೆ ಯಾ[ಕೆ] ಇರಕೂಡದು? ಹೌದು. ಭಾರತ[ದ] ರಾಜಕೀಯ ಭವಿಷ್ಯದ ಕುರಿತು ಒಡಬಡಿಕೆಯಾಗಬೇಕಾದ್ದು. ಕಾಂಗ್ರೆ[ಸಿ]ನೊಂದಿಗಲ್ಲದೆ, ಬೇರೆ ಯಾವ ಪಕ್ಷದೊ[ಂ]ದಿಗೂ ಅಲ್ಲ.

ಜೀವವಿಮೆಯೇ ಸುಲಭವಾದ ಕಂತುಗಳಲ್ಲಿ ಹಣವನ್ನು ಪಾವತಿಮಾಡಿ, ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಮಾಡಿಕೊಳ್ಳಲು ಜನ ಕೈಕೊಳ್ಳಬಹುದಾದ ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನಾಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ, ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್' ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 1874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್
ಸೌತ್ ಪರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳೂ, ಪ್ರತಿನಿಧಿಗಳೂ ಇದ್ದಾರೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ[ರ] ಕೋರ್ಟಿನಲ್ಲಿ

O. P. No. 83/194[0]

1. ಮರಿಯುಮ್ಮ, ಅಬ್ದುಲ್ಲ ಕಾದ್ರಿ ಬ್ಯಾರಿ ಮಗಳು. ಮತ್ತು ಮೃತಪಟ್ಟ ಬಾಪುಂಞಿ ಹಾಜಿ ಹೆಂಡ್ತಿ.
2. ಮಹಮ್ಮದ
3. ಬೀಪಾತುಮ್ಮ
4. ಕುಂಞಾಲೀಮ
5. ಅಬ್ದುಲ್ಲಾ
6. ಅಬ್ಬಾಸ
7. ಅಬ್ದುಲ್ಲ ಖಾದರ್

(2–7:) ಮೃತಪಟ್ಟ ಬಾಪುಂಞಿ ಹಾಜಿಗೆ 1ನೇ ಅರ್ಜಿದಾರಳಲ್ಲಿ ಹುಟ್ಟಿದ ಮಕ್ಕಳು. ಇವರ ಕ್ಷೇಮಚಿಂತಕಳು ಇವರ ತಾಯಿ 1ನೇ ಅರ್ಜಿದಾರಳು.

ಕಾಸರಗೋಡು ತಾಲೂಕು ಮುಗುಗ್ರಾಮದಲ್ಲಿರುವವರು.

1ನೇ ಅರ್ಜಿದಾರಳ ಗಂಡ ವ ಬಾಕಿ ಅರ್ಜಿದಾರರ ತಂದೆ ಮೃತಪಟ್ಟ ಬಾಪುಂಞಿ ಹಾ[ಜಿ]ಯು ಕೆನರಾ ಬ್ಯಾಂಕಿನಲ್ಲಿಯೂ, ಇಂಪೀರಿಯಲ್ ಬ್ಯಾಂಕಿನಲ್ಲಿಯೂ ಕೂಡ ಅಡವಿಟ್ಟ [ ] ಗಳನ್ನು ಬಿಡಿಸಿಕೊಳ್ಳುವರೆ ಕೂಡ ವಾರ್ಸ ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಮೇಲ್ಕಂ[ಡ] ಅರ್ಜಿಯು ತಾ: 4-6-1940ರಲ್ಲು ತನಿಖೆ[ಗೆ] ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಉ[ಳ್ಳ]ವರು ಆ ದಿವಸ ಕೋರ್ಟಿನ ಮುಂದೆ ಹಾಜರಾ[ಗಿ] ಜ್ಯಾಹೀರು ಮಾಡಬೇಕಾಗಿ ಆ ಮೂಲಕ [ತಿಳಿ]ಸಲಾಗಿಯದೆ.

(By order of the Court)

Kasaragod 29-3-1940 } (Sd) P. Ahma[ ] Advocate for Pet[ ]

ಜಿಲ್ಲಾ ಸಮಾಚಾರ

ಮಂಗಳೂರು

ನಗರ ಸಭೆ:— ನಗರಸಭೆಯ ಮೀಟಿಂಗು ಕಳೆದ ಶನಿವಾರ ಸಂಜೆ ೫॥ ಘಂಟೆಗೆ ಮುನ್ಸಿಪಲ್ ಆಫೀಸಿನಲ್ಲಿ ಚ್ಯಾರ್ ಮ್ಯಾನರಾದ ಶ್ರೀ ವೆಂಕಟ ರ್‍ಆಯ ಬಾಳಿಗ ಎಂ. ಯಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ದ. ಕ. ಜಿಲ್ಲಾ ಹರಿಜನ ಸೇವಾ ಸಂಘದ ವಿನಂತಿ:— ನಮ್ಮ ಜಿಲ್ಲೆಯಲ್ಲಿ ಹರಿಜನ ಸೇವಕ ಸಂಘವು ಎಷ್ಟೊಂದು ಕಷ್ಟಗಳನ್ನು ಸಹಿಸಿಯಾದರೂ ಕೆಲಸಮಾಡುತ್ತಿರುವುದು ಮಹಾ ಜನರಿಗೆ ಗೊತ್ತಿರಬಹುದು. ಈ ಸಂದರ್ಭದಲ್ಲಿ ಉತ್ತಮ ಹರಿಜನ ಸೇವಾಸಕ್ತರೂ, ಕಾಂಗ್ರೆಸ್ ಕೆಲಸಗಾರರೂ ಆಗಿರುವ ಶ್ರೀ. ಬಿ. ದೇವಪ್ಪಾಳ್ವರು ಮುಂದೆ ಬಂದು ಮಡಿಕೇರಿ, ಮೈಸೂರು, ಬೆಂಗಳೂರು ಮತ್ತು ಮದ್ರಾಸು ಪಟ್ಟಣಗಳಿಗೆ ಹೋಗಿ ಆದಷ್ಟು ಧನ ಸಂಗ್ರಹ ಮಾಡಿಕೊಂಡು ಬರುವುದಾಗಿ ಹೇಳಿ ಹೋಗಿದ್ದರು. ೪ನೇ ತಾರೀಕಿನಿಂದ ೧೩ನೇ ತಾರೀಕಿನ ವರೆಗೆ ಕೇವಲ ೯ ದಿನಗಳಲ್ಲಿ ರೂ. ೧೭೦—೪—೦ ಸಂಗ್ರಹಿಸಿರುತ್ತಾರೆ.

ಶ್ರೀ. ದೇವಪ್ಪಾಳ್ವರ ಕೆಲಸದಿಂದ ಜಿಲ್ಲಾ ಸಂಘಕ್ಕೆ ಸ್ವಲ್ಪ ಧನ ಸಹಾಯವು ದೊರಕಿದೆ. ಮತ್ತು ಬೇರೆ ಬೇರೆ ಪಟ್ಟಣಗಳಲ್ಲಿರುವ ನಮ್ಮೂರವರಿಗೆ ಇಲ್ಲಿಯ ಹರಿಜನ ಸೇವಕ ಸಂಘದ ಪರಿಚಯವೂ ಆದಂತಾಗಿದೆ. ಅವರ ಈ ಉತ್ತಮ ಸಾಹಸದಲ್ಲಿ ನೆರವಾದವರಿಗೆಲ್ಲಾ ನಮ್ಮ ಅಭಿವಂದನೆಗಳು. ಇದೇ ರೀತಿಯಲ್ಲಿ ಮಹಾಜನರೆಲ್ಲರೂ ಸಹಕರಿಸಬೇಕೆಂದು ದ. ಕ. ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಡಾ॥ ಯಚ್. ವಿ. ಅವರು ತಿಳಿಸುತ್ತಾರೆ.

ಸಾರ್ವಜನಿಕ ಸಭೆ:— ಕಳೆದ ವಾರ ಸ್ಥಳೀಯ ಮೈದಾನಿನಲ್ಲಿ ಶ್ರೀ ಕೊಂಚಾಡಿ ಕೇಶವ ಶೆಣೈಗಳವರ ಅಧ್ಯಕ್ಷತೆಯಲ್ಲಿ, ಸಾರ್ವಜನಿಕ ಸಭೆಯೊಂದು ಜರುಗಿತು. ಶ್ರೀ ಎಸ್. ಎನ್. ಹೊಳ್ಳರು, ಮದ್ರಾಸ್ ಸರಕಾರದ ಸಾರ್ವಜನಿಕ-ಖಾತೆಯ ಮಂತ್ರಿಗಳಾಗಿದ್ದ ದೇಶ ಭಕ್ತ ದಿವಂಗತ ಜನಾಬ್ ಯಾಕೂಬ್ ಹಸನ್‌ರವರ ಜೀವನ ಚರಿತ್ರೆಯನ್ನು ತಿಳಿಸಿ, ಸಂತಾಪಸೂಚಕ ಠರಾವನ್ನು ಮಂಡಿಸಿದರು. ಠರಾವು ಪಾಸಾದ ಬಳಿಕ ಶ್ರೀಗಳಾದ ರಾಮದಾಸ್ ನಾಯಕ್ ಮತ್ತು ಎಂ. ಡಿ. ಅಧಿಕಾರಿಗಳು ರಾಮಘರ ಕಾಂಗ್ರೆಸ್ ಹಾಗೂ ಅಲ್ಲಿ ಪಾಸಾದ ಪ್ರಾಮುಖ್ಯ ಠರಾವಿನ ಕುರಿತಾಗಿ ಭಾಷಣವಿತ್ತರು.

ಪುತ್ತೂರು

ಸುಬ್ರಹ್ಮಣ್ಯ:— ಇಲ್ಲಿಯ ಪಂಚ್ಯಾತು ಬೋರ್ಡ್ ಶಾಲೆಗೆ, ಉಡುಪಿ ತಾಲೂಕು ತಹಶೀಲ್ದಾರರಾದ ಶ್ರೀ. ಬಿ. ಗಣೇಶನವರು ಸಂದರ್ಶನೆಯಿತ್ತರು. ಶಾಲೆಯ ಮಕ್ಕಳ ಸಂಖ್ಯೆಯನ್ನೂ, ಉತ್ಸಾಹಿಗಳಾದ ಉಪಾಧ್ಯಾಯರು ಮಕ್ಕಳಿಗೆ ಕಲಿಸಿರುವ ಆಟಪಾಠಗಳನ್ನೂ ನೋಡಿ ಸಂತೋಷಪಟ್ಟಿದ್ದು ಮಾತ್ರವಲ್ಲದೆ ಇಲ್ಲಿ ಒಂದು ಹಯರ್ ಎಲಿಮೆಂಟರಿ ಶಾಲೆಯನ್ನು ನಡೆಸುವುದಕ್ಕೆ ಸಾಕಷ್ಟು ಅನುಕೂಲವಿರುವುದರಿಂದ ಮುಂದಕ್ಕೆ ಈ ಶಾಲೆಯನ್ನು ಹಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡುವುದು ಅತೀ ಅಗತ್ಯವೆಂಬ ತಮ್ಮ ಅಭಿಪ್ರಾಯವನ್ನು ರಿಮಾರ್ಕು ಪುಸ್ತಕದಲ್ಲಿ ಬರೆದಿರುತ್ತಾರೆ.

ಕಾರ್ಕಳ

ಬೊಂಬಾಯಿಯ ಶ್ರೀಮಂತರಾದ ಶ್ರೀ ಲಕ್ಷ್ಮೀಕಾಂತ ಜಾಂಕವಾಡು ವಾಟೋಳಕರರು ತಾ. ೨೮—೩—೧೯೪೦ರ ದಿನ ಇಲ್ಲಿಯ ಶ್ರೀ ಕೆ. ಟಿ. ಶೇಷಗಿರಿ ಪ್ರಭುಗಳವರ ಸನ್ನಾನ್ಯ ಅತಿಥಿಗಳಾಗಿ ಸ್ಥಳೀಯ ಎಲ್ಲಾ ಸಂಘ ಸಂಸ್ಥೆಗಳನ್ನು ಸಂದರ್ಶಿಸಿ ಅವುಗಳ ಕಾರ್ಯ ಕಲಾಪಗಳ ಕುರಿತು ತಮ್ಮ ತೃಪ್ತಿಯನ್ನೂ, ಸಂತೋಷವನ್ನೂ ವ್ಯಕ್ತಮಾಡಿದರು.

ಹಿಂದೀ ಪ್ರಚಾರ:— ಕಳೆದ ಫೆಬ್ರವರಿ ತಿಂಗಳಲ್ಲಿ ಈ ಕೇಂದ್ರದಿಂದ ದ. ಭಾ. ಹಿಂದೀ ಪ್ರಚಾರ ಸಭೆಯ ಪ್ರಾರಂಭಿಕ ಪರೀಕ್ಷೆಗಳನ್ನು ಕೊಟ್ಟ ೩೧ ಮಂದಿಯಲ್ಲಿ ಪ್ರಾಥಮಿಕದ ೬ರಲ್ಲಿ ೫, ಮಧ್ಯಮದ ೧೪ ರಲ್ಲಿ ೬, ಮತ್ತು ರಾಷ್ಟ್ರಭಾಷೆಯ ೧೧ ರಲ್ಲಿ ೧೦ ಮಂದಿ ತೇರ್ಗಡೆಯಾಗಿದ್ದಾರೆ. ಅವರ ಪೈಕಿ ಪ್ರಾಥಮಿಕದಲ್ಲಿ ಶ್ರೀಮತಿ ಸೀತಾದೇವಿಯವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣವಾಗಿರುವರೆಂದು ಸ್ಥಳೀಯ ಕಾರ್ಯಕರ್ತ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಭಾಷಣ:— ಉತ್ತರ ಕೊರೋನೇಶನ ಕ್ಲಬ್ಬಿನಲ್ಲಿ ತಾ. ೨೩—೩—೪೦ರ ದಿನ ಕೂಡಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಎ. ಬಿ. ಶೆಟ್ಟಿ, ಯಂ. ಯಲ್. ಎ ರವರು ಪ್ರಪಂಚದ ಸ್ಥಿತಿಯೂ ಅದನ್ನು ಸುಧಾರಿಸುವ ಬಗೆಯೂ ಎಂಬ ಕುರಿತು ಇಂಗ್ಲೀಷಿನಲ್ಲಿ ಒಂದು ಅಮೋಘವಾದ ಭಾಷಣವನ್ನು ಕೊಟ್ಟರು.

ದ. ಕ. ಜಿಲ್ಲಾ ಹರಿಜನ ಪರಿಷತ್ತು:— ಜಿಲ್ಲಾ ಹರಿಜನ ಪರಿಷತ್ತು, ಕಳೆದ ತಿಂಗಳ ತಾ. ೨೭—೨೮ರಲ್ಲು ಮೂಲ್ಕಿಯಲ್ಲಿ ಶ್ರೀ ವಿ. ಎ. ಮುನಿಸ್ವಾಮಿ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲೆಯ ವಿವಿಧ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಪ್ರೇಕ್ಷಕರ ಸಂಖ್ಯೆ ಕಿಕ್ಕಿರಿದಿತ್ತು. ಅನೇಕಾನೇಕ ಅಧ್ಯಗೃಹಸ್ಥರು ಹಾಜರಿದ್ದರು. ಮುಳ್ಕ ಶ್ರೀ. ಐತಪ್ಪ ರೈಗಳವರು ಕಾಂಗ್ರೆಸ್ ಧ್ವಜಾರೋಹಣ ನಡೆಸಿದರು. ಮೆರವಣಿಗೆಯೊಂದಿಗೆ ಅಧ್ಯಕ್ಷರನ್ನು ಸಭಾಸ್ಥಳಕ್ಕೆ ಒಯ್ಯಲಾಯಿತು. 'ವಂದೇ ಮಾತರಂ' ಗೀತೆಯೊಡನೆ ಪರಿಷತ್ತು ಆರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ, ಶ್ರೀ ಎಂ. ಆರ್. ಪೂಂಜರು ತನ್ನ ಭಾಷಣವನ್ನೀಯುತ್ತಾ, ಹರಿಜನರಿಗಾಗಿ ಮೂಲ್ಕಿಯಲ್ಲಿ ನಡೆದ ಸೇವೆಯ ಕುರಿತಾಗಿ ವಿವರಿಸಿದರು. ಈ ಕಾರ್ಯದಲ್ಲಿಯೂ ಸುತ್ತಲಿನ ೩೬ ಗ್ರಾಮಗಳ ಹರಿಜನರು ಅಸಮಾನ ಶ್ರದ್ಧೆ ತೋರಿದ್ದಾರೆ. ಅತೀ ಹಿಂದುಳಿದ ಕೊರಗರಲ್ಲಿ ೧೮ ಮಂದಿ ಮಾದಕ ದ್ರವ್ಯ ಪಾನ ಹಾಗೂ ಹೊಲಸು ಭೋಜನಗಳನ್ನೀವ ಪ್ರತಿಜ್ಞೆ ಮಾಡಿಕೊಂಡುದು ಆನಂದದ ಸಂಗತಿ. ಉತ್ತಮ ಜಾತಿಯರು ಹರಿಜನರ ಉದ್ಧಾರಕ್ಕೆ ಮುಂದಾಗುವದು ತಮ್ಮ ಧರ್ಮವೆಂದರಿತಿರಬೇಕು. ಹರಿಜನರಿಗಾಗಿ ಕೈಗಾರಿಕೆ ಶಾಲೆಯೊಂದು ರಚಿತವಾಗುವಂತೆ ಸರಕಾರವನ್ನು ವಿನಂತಿಸಬೇಕು. ಹರಿಜನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿರುವಂತೆ ಮಾಡಬೇಕು ಎಂದು ಮೊದಲಾಗಿ ನುಡಿದರು.

ಮೂಲ್ಕಿ ಪಂಚಾಯತಿ ಬೋರ್ಡು ಮತ್ತು ಸಾರ್ವಜನಿಕರ ಪರವಾಗಿ ಅಧ್ಯಕ್ಷರಿಗೆ ಸ್ವಾಗತ ಪತ್ರಗಳು ಅರ್ಪಿಸಲ್ಪಟ್ಟವು. ಶ್ರೀ ಪಿಳ್ಳೆಯವರು ಇವೆಲ್ಲವನ್ನು ಉತ್ತರಿಸುತ್ತಾ "ಅವರ ವಿಚಾರವೇ ನಮ್ಮದು, ಅವರ ಪ್ರಗತಿ ನಮ್ಮ ಪ್ರಗತಿ, ಅವರ ಏಳಿಗೆ ನಮ್ಮ ಏಳಿಗೆ, ಅವರ ಮೇಲ್ಮೆ ನಮ್ಮ ಮೇಲ್ಮೆ" ಎಂಬ ನಿಮ್ಮ ಆ ನುಡಿಗಳು ಬಂಗಾರಕ್ಕಿಂತಲೂ ಮೇಲಿನವು. ಪ್ರತಿಯೊಬ್ಬನನ್ನೂ, ಸಮಾನ ದೃಷ್ಟಿಯಿಂದ ನೋಡಬೇಕೆಂದು ಶ್ರೀಕೃಷ್ಣನೇ ಗೀತೆಯಲ್ಲಿ ಹೇಳಿದ್ದಾನೆ. ಚೈತನ್ಯ ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ಶಂಕರಾಚಾರ್ಯ ರಾಮಾನುಜಾಚಾರ್ಯರೆಲ್ಲ ಗೀತೆಯ ಅರ್ಥವನ್ನು ಮಾಡಿನಡೆದುಕೊಂಡ ಪುಣ್ಯಜೀವಿಗಳು. ಆದರೆ, ಇಂದು, ಈ ನುಡಿಗಳೆಲ್ಲ ಬರಹದಲ್ಲೇ ಉಳಿದಿವೆ, ಧಾರ್ಮಿಕ ಗುರುಗಳಿಗೇ ಇದರ ಆಚರಣೆ ಒಪ್ಪದಾಗಿದೆ. ಗಾಂಧೀಜೀಯವರು ಇದರ ಅರ್ಥವನ್ನು ಸಂಗ್ರಹಿಸಿ ಹರಿಜನರಿಗಾಗಿ ಜೀವವನ್ನು ಧಾರೆ ಎರೆಯಲು ನಿಂದಿರುವರು" ಎಂದರು.

ಮೌಲಾನಾ ಯಾಕೂಬ್ ಹಸನ್ ಮತ್ತು ಶ್ರೀಮತಿ ಸುಮತಿ ಬಿ. ಕೆ. ಭಂಡಾರಿಗಳ ನಿಧನದ ಬಗ್ಗೆ ಸಂತಾಪ ಸೂಚಕ ಠರಾವುಗಳು ಪಾಸಾದುವು.

ಅಧ್ಯಕ್ಷರ ಭಾಷಣ:— "ಹರಿಜನರಿಗಾಗಿ ಕೆಲಸ ಮಾಡಿದ ಮೌಲಾನಾ ಯಾಕೂಬ್ ಹಸನ್ ಮತ್ತು ಮೈಸೂರಿನ ಯುವರಾಜರು ದಿವಂಗತರಾದ ವಿಚಾರದಲ್ಲಿ ನಾನು ದುಃಖಿತನಾಗಿದ್ದೇನೆ. ಜಿಲ್ಲೆಯ ಈ ಪರಿಷತ್ತಿನ ವ್ಯವಸ್ಥಾಪಕರು ಪ್ರಶಂಸೆಗೆ ಅರ್ಹರು. ಅಲ್ಪ ಸಂಖ್ಯಾತರ ರಕ್ಷಣೆಗಾಗಿ ಇರುವ ಏಕಮಾತ್ರ ಸಂಸ್ಥೆ ಕಾಂಗ್ರೆಸ್. ಕಾಂಗ್ರೆಸ್ ಮಂತ್ರಿಮಂಡಲದ ಆಳ್ವಿಕೆಯಾದರೂ, ಹರಿಜನರಿಗೆ ಅಧಿಕ ಉಪಕಾರ ಮಾಡಿದೆ. ಇಂದಿಗೆ ಪರರಾಷ್ಟ್ರಗಳ ರಕ್ತಪಾತಕ್ಕಾದರೂ ಧನಿಕರ ಅಧಿಕಾರವೇ ಕಾರಣ; ಬಡವರ ಗೋಳು, ಕಾಮನದ ಗೋಳು ರಕ್ತ ಹರಿಯಿಸದೆ ಶಾಂತಿಯುದ್ಧ ನಡೆಸುವ ವ್ಯಕ್ತಿಯನ್ನು ಭಗವಂತ ನಮಗೆ ದೊರಕಿಸಿದ್ದಾನೆ. ಒಗ್ಗಟ್ಟು, ಒಮ್ಮನ, ಸಮಾನತೆಗಳಿಂದ ಸಕಲರೂ ಈ ಪವಿತ್ರ ಕರ್ತವ್ಯದಲ್ಲಿ ಭಾಗಿಗಳಾಗಬೇಕು" ಎಂದರು.

ನಿರ್ಣಯಗಳು:— ಪರಿಷತ್ತು, ಮಹಾತ್ಮರಲ್ಲಿ ಅಚಲ ವಿಶ್ವಾಸ ಸೂಚಿಸಿ, ಕಾಂಗ್ರೆಸ ಮಂತ್ರಿಮಂಡಳವನ್ನು ಶ್ಲಾಘಿಸಿತು. ಕೈಗಾರಿಕೆ ಶಾಲೆ ಸ್ಥಾಪಿಸಬೇಕೆಂದೂ, ಗ್ರಾಮಕೋರ್ಟು, ಪಂಚಾಯತಬೋರ್ಡು ಮುಂತಾದವುಗಳಲ್ಲಿ ಶೇಕಡ ೧೦ರಷ್ಟು ಪ್ರಾತಿನಿಧ್ಯವೀಯಬೇಕೆಂದೂ ಹರಿಜನ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕಶಿಕ್ಷಣವೀಯಬೇಕೆಂದೂ, ಸರಕಾರವನ್ನು ಕೇಳಬೇಕೆಂಬ ಠರಾವುಗಳಾದುವು. ದೇವಸ್ಥಾನಗಳು, ಹಾಗೂ ಇತರರೂ ಹರಿಜನರಿಗೆ ಉತ್ತಮ ಆಹಾರವೀವಂತೆ, ಅನ್ನದಾನ ಮಾಡುವಂತೆ ವಿನಂತಿಸಬೇಕೆಂದಾಯಿತು. ಹರಿಜನರ ಪ್ರಗತಿಗಾಗಿ, ವಿವಿಧ ಕಾರ್ಯಗಳನ್ನು, ಸರಕಾರವು ಲೇಬರ್ ಇಲಾಖೆ ಮೂಲಕ ನಡೆಸಬೇಕೆಂದೂ, ಹರಿಜನರನ್ನು ಧರ್ಮಭ್ರಷ್ಟರನ್ನಾಗಿ ಮಾಡಬೇಕೆಂದೇ ಸ್ಥಾಪಿತವಾಗಿ ನಡೆಸಲ್ಪಡುತ್ತಿರುವ, ಅನ್ಯ ಧರ್ಮೀಯ ಶಾಲೆಗಳಿಗೆ ಸರಕಾರ ಸಹಾಯವನ್ನೀಯಲಾಗದಲ್ಲದೆ, ಸರಕಾರ ಅನ್ಯ ಧರ್ಮಕ್ಕೆ ಸೇರಿದ ಹರಿಜನರಿಗೆ ಶಾಲಾ ವೇತನದಲ್ಲಿ, ರಿಯಾಯಿತಿ ತೋರಬಾರದೆಂದೂ ಪರಿಷತ್ತು ಸೂಚಿಸಿತು. ಕಾಫಿ ತೋಟಗಳಿಗೆ ಲೇಬರ್ ಖಾತೆಯ ಮೂಲಕ ಕೂಲಿಗಳನ್ನು ಕಳುಹುವಂತಾಗಬೇಕೆಂಬ ಠರಾವಾಯಿತು. ತಿರುವಾಂಕೂರಿನ ಮಹಾರಾಜರನ್ನು ದೇವಳ ಪ್ರವೇಶ ಮಸೂದೆಗಾಗಿ ವಂದಿಸುವುದು ಮುಂತಾದ ಹಲವು ಉಪಯುಕ್ತ ಠರಾವುಗಳು ಪಾಸಾದುವು.

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
Rs. 50/-, 100/-, 500/-, 1,000/- & 5,000/-
are now issued at all our Branches.
For particulars call at or write to
Any of our nearest Branches

ಸ್ವೀಕಾರ

ಪಂಚ್ಕದಾಯಿ:— ಕನ್ನಡ ಲಿಪಿಯಿಂದ ಕೊಂಕಣಿ ಭಾಷೋದ್ಧಾರಕ್ಕಾಗಿ ಕೊಂಕಣಿಭಾಷಾ ಪ್ರೇಮಿಯೊಬ್ಬರಿಂದ ಬರೆಯಲ್ಪಟ್ಟು ದ ಕೊಂಕಣಿ ಭಾಷಾ ಸಾಹಿತ್ಯ ಮಂದಿರ ಬಂಟ್ವಾಳ ಇವರಿಂದ ಪ್ರಕಾಶಿಸಲ್ಪಟ್ಟ ಕಥಾ ಪುಸ್ತಕವಿದು. ಸಮಾಜದ ತೊಡಕುಗಳನ್ನು ಹೋಗಲಾಡಿಸಿ, ಸಮಾಜದಲ್ಲಿ ಅನನ್ಯಪ್ರೀತಿ, ವಿಶ್ವಾಸ ಶ್ರದ್ಧೆ, ಒಗ್ಗಟ್ಟು ಇವುಗಳನ್ನುಂಟುಮಾಡುವುದೇ ಈ ಪುಸ್ತಕದ ಉದ್ದೇಶವಾಗಿದೆ. ಕಥೆಗಳು ಮನೋರಂಜಕವಾಗಿ, ಶೃಂಗಾರಯುಕ್ತವಾಗಿಯದೆ. ಇಂತಹ ಕಥೆ ಕವನ ಇತ್ಯಾದಿಗಳು ಸಮಾಜದಲ್ಲಿ ಬೆಳಕಿಗೆ ಬಂದು ಸಮಾಜಕ್ಕೆ ಹೆಚ್ಚಿನ ಪ್ರಯೋಜನಕಾರಿಯಾಗಲೆಂದೂ ಹಾರೈಸುತ್ತೇವೆ. ಮಾತೃಭಾಷಾ ಸೇವೆಯಲ್ಲಿ ಇಂತಹ ಕೆಲಸಗಳು ಬಹಳ ಉಪಕಾರಿಯೆಂದು ಭಾವಿಸುತ್ತೇವೆ.

ಚೈನಾದಲ್ಲಿ ಕೈಗೊಂಬೆ ಸರಕಾರ!

★ ಲೋಕವಾರ್ತೆ



ದಳಪತಿ ಕೈಶೇಕರ ಪ್ರತಿಭಟನೆ

ಪಶ್ಚಿಮ ರಣರಂಗದಲ್ಲಿ ವಿಮಾನ ಯುದ್ಧ

ಸಮ್ನರ್‌ವೆಲ್ಸರು ಮರಳಿ ಬಂದರು

ಫಿನ್ಲೆಂಡಿನ ಜೀರ್ಣೋದ್ಧಾರ!

ಜರ್ಮನಿಯು ಕಳೆದ ೭ ತಿಂಗಳಿನ ಯುದ್ಧದಲ್ಲಿ ೧೨೮ ವಿಮಾನಗಳನ್ನು ಕಳೆದುಕೊಂಡಿದೆ ಎಂದು ಘೂಟ ವಾರ್ತೆ. ಹಾಗೂ ೪೪ ಶತ್ರು ವಿಮಾನಗಳು ಉಪಯೋಗಕ್ಕೆ ಬೀಳಲಾರದಷ್ಟರ ಮಟ್ಟಿಗೂ ಕೆಟ್ಟು ಹೋಗಿವೆ ಎಂದೂ ತಿಳಿದು ಬಂದಿದೆ.

ಪಶ್ಚಿಮ ರಣರಂಗದಲ್ಲಿ

ಈ ರಣರಂಗದಲ್ಲಿ ೧೨ ಶತ್ರುವಿಮಾನಗಳು ಕಾದಾಟಕ್ಕೆ ಹೊರಟಾಗ, ರಾಯಲ್ ವಿಮಾನ ಬಲವು ಅವುಗಳಲ್ಲಿ ... ನ್ನು ಕೆಳಗಿಳಿಸಿದವೆಂದು ಪ್ರಕಟವಾಗಿದೆ. ಶತ್ರುಗಳ ಎರಡು ವಿಮಾನಗಳಿಗೆ ಬೆಂಕಿ ಬಿದ್ದು ಬೂದಿಯಾದುವು.

ಜಲಾಹುತಿ

ನಾರ್ವೆಯ ಹಡಗವಾದ 'ಕೊವೆಟ' (... ಟನ್ನಿನದು) ಡಚ್ ಸ್ಟೀಮರು 'ಸಟು'ವೂ "ಧಗೆಸ್ತಾನ್" ಎಂಬ ... ಟನ್ನಿನ ಎಣ್ಣೆಯ ಟ್ಯಾಂಕರೂ, ಬ್ರಿಟಿಷ್ ಸ್ಟೀಮರು "ಕೆಸಲ್ ಮೂರೂ" ... ವು ಮುಳುಗಿ ಹೋದುವೆಂದು ನಂಬಲಾಗಿದೆ.

ಫಿನ್ಲ್ಯಾಂಡಿನ ಜೀರ್ಣೋದ್ಧಾರ

ಫಿನ್‌ಲ್ಯಾಂಡಿನಲ್ಲಿ ಹೊಸ ಸರಕಾರದ ಸ್ಥಾಪನೆಯಾಗಿದೆ. ಆ ಸರಕಾರವು, ಫಿನ್‌ಲ್ಯಾಂಡಿನ ಜೀರ್ಣೋದ್ಧಾರ ಕಾರ್ಯದ ಯೋಜನೆಯನ್ನು ಬೇಗನೇ ಪೂರೈಸಲಿರುವುದು. ಹೆಲ್ಸಿಂಕಿಯ ಬೀದಿಗಳು ಮೊದಲಿನಂತೆ ಜನಗಳಿಂದ ತುಂಬಿವೆ. ಅಂಗಡಿಗಳಲ್ಲಿ, ಹೊಟೆಲ್, ಕೆಫೆಗಳಲ್ಲಿ ವ್ಯಾಪಾರ ಚೆನ್ನಾಗಿ ಸಾಗುತ್ತಿದೆ. ಈಗ ಏರ್ಪಾಡಾಗಿರುವ ಹೊಸ ಮಂತ್ರಿಮಂಡಲವು ತೃಪ್ತಿಕರವೆಂದು ಹೇಳಲಾಗಿದೆ.

ಸಮ್ನರ್ ವೆಲ್ಸರು

ಇವರು ನ್ಯೂಯಾರ್ಕಿಗೆ ಹಿಂದಿರುಗಿ, ಪ್ರೆಸಿಡೆಂಟ್ ರೂಸ್‌ವೆಲ್ಟರ ಭೇಟಿ ಮಾಡಿದರು. ತಮ್ಮ ಯೂರೋಪಿನ ಪ್ರವಾಸದ ವರದಿಯನ್ನೂ ಪ್ರೆಸಿಡೆಂಟರಿಗೊಪ್ಪಿಸಿರುವರು.

ಇಂಡಿಯಾ ಸೆಕ್ರೆಟರಿ

ಇಂಡಿಯಾ ಸೆಕ್ರೆಟರಿಗಳಾಗಿರುವ ಲಾರ್ಡ್ ಜೆಟ್ಲ್ಯಾಂಡರು, ಮುಂದಿನ ಜೂನ್ ತಿಂಗಳಲ್ಲಿ ನಿವೃತ್ತರಾಗುವುದರಿಂದ, ಅವರ ಸ್ಥಾನಕ್ಕೆ ಮಿ. ಅರ್. ಏ. ಬಟ್ಲರ್‌ರವರು ನೇಮಿಸಲ್ಪಡಬಹುದೆಂದು ತಿಳಿದು ಬಂದಿದೆ.

ತೃಪ್ತಿಕರವಾದ ಒಪ್ಪಂದವಿಲ್ಲ

ಲಂಡನಿನಲ್ಲಿ ಸುಪ್ರೀಮ್ ವಾರ್ ಕೌನ್ಸಿಲಿನ ಒಂದು ಸಭೆ ಜರುಗಿ ಅದರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಪರಸ್ಪರ ಯೋಚಿಸಿ, ಪ್ರತ್ಯೇಕವಾಗಿ ಸಂಧಿ ಮಾಡಿಕೊಳ್ಳಬೇಕಲ್ಲದೆ, ಪ್ರತ್ಯೇಕವಾಗಿ ಮಾಡಲಾಗದೆಂದು ನಿರ್ಧಾರವಾಗಿದೆ.

ಟರ್ಕಿಯಲ್ಲಿ ತೆರಿಗೆ

ರಾಷ್ಟ್ರದ ರಕ್ಷಣೆಗೆ ಕಡಿಮೆ ಬಿದ್ದ ೮ ಮಿಲ್ಯ ಪವನುಗಳನ್ನು ಭರ್ತಿಮಾಡುವುದಕ್ಕಾಗಿ ಧನಿಕರ ಮೇಲೆ ಶೇ. ೫೦ರ ದರದ ತೆರಿಗೆ ಹೊರಿಸುವ ಯೋಚನೆಯನ್ನು ಸರಕಾರ ಮಾಡಲಿದೆ.

ಚೀನದಲ್ಲಿ ಜಪಾನಿನ ಸರಕಾರ

ಚೀನದಲ್ಲಿನ ತಾನು ಗೆದ್ದ ಸ್ಥಳದಲ್ಲಿ, ಜಪಾನು ತಾನಂದಂತೆ ಕುಣಿವ ವಾಂಗ್-ಚಿಂಗ್-ವೀಯ ಸಹಾಯದಿಂದ ಒಂದು ಸರಕಾರ ಸ್ಥಾಪಿಸಿದೆ. ಆದರೆ, ಬ್ರಿಟನು ಇದನ್ನು ಒಪ್ಪಿಕೊಳ್ಳುವುದಿಲ್ಲವೆಂದು ತಿಳಿದುಬಂದಿದೆ.

ಚಿಯಾಂಗ್ ಕೈಶೇಕರು ಮತ್ತು ಅವರ ಪತ್ನಿ

ಅಮೇರಿಕೆಯ ವಿಮಾನ ತಯಾರಿ

೧೯೪೦ರ ಅಂತ್ಯದೊಳಗೆ, ವರ್ಷಕ್ಕೆ ೩೦ರಿಂದ ೪೦ ಸಾವಿರಗಳ ವರೆಗೆ ವಿಮಾನಗಳು ತಯಾರಾಗುವಂತೆ ವ್ಯವಸ್ಥೆ ಮಾಡಬೇಕೆಂದೂ, ಉತ್ಕೃಷ್ಟ ರೀತಿಯ ವಿಮಾನಗಳನ್ನು ಬೇಕಾದಷ್ಟು ಮಿತ್ರರಾಷ್ಟ್ರಗಳಿಗೆ ಕಳುಹಬಹುದೆಂದೂ, ಜಗತ್ತಿನಲ್ಲೆಲ್ಲಾ ಉತ್ತಮ ವಿಧಾನದ ೬ ರೀತಿಯ ವಿಮಾನಗಳನ್ನು, ಯಾರಿಗೂ ಕೊಡದೆ, ತಮ್ಮ ಉಪಯೋಗಕ್ಕಾಗಿಯೇ ಇರಿಸಲಾಗುವುದೆಂದೂ ಅಮೇರಿಕೆಯ ಯುದ್ಧ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಫ್ರಾನ್ಸಿನ ಪ್ರಧಾನ ಮಂತ್ರಿ

ಫ್ರಾನ್ಸಿನಲ್ಲಿ, ಇದೀಗ ಹೊಸದಾಗಿ ರಚಿತವಾದ ಮಂತ್ರಿಮಂಡಲದ ಪ್ರಧಾನ ಎಂ. ರೆನಾಡ್‌ರವರು, ತನ್ನ ಮಂತ್ರಿಮಂಡಲದ ಧ್ಯೇಯವನ್ನು ಸಾರುತ್ತಾ, "ಅದು ವೈರಿಯನ್ನು ಸದೆಬಡಿವುದೇ ಆಗಿದೆ. ಪ್ರತಿಯೊಂದು ಬಗೆಯಲ್ಲೂ ಜನಬಲ ಬೇಕಾಗಿದೆ. ಪ್ರತಿಯೊಬ್ಬನೂ ಒಂದುಗೂಡಬೇಕು. ಜರ್ಮನಿಯನ್ನು ಹುಡಿಗೂಡಿಸಬೇಕು" ಎಂದರು.

ಗೊಬೆಲ್ಸನ ಆಜ್ಞೆ

ಜರ್ಮನಿಯ ಪ್ರಚಾರ ಮಂತ್ರಿಗಳಾದ ಡಾ| ಗೊಬೆಲ್ಸರು, ಹೋಟೆಲುಗಳಲ್ಲೂ ರೆಸ್ಟೋರೆಂಟುಗಳಲ್ಲೂ ದೇಶಾಭಿಮಾನದ ರಾಷ್ಟ್ರಗೀತೆಗಳನ್ನು ಹಾಡಬಾರದೆಂದು ಆಜ್ಞೆ ಹೊರಡಿಸಿದ್ದಾರೆ.

ಚೈನದಲ್ಲಿ ಕೈಗೊಂಬೆ ಸರಕಾರ

ಚೈನಾದಲ್ಲಿ ಕೈಗೊಂಬೆ ಸರಕಾರವು ಸ್ಥಾಪಿತವಾಗಿದೆ. ಅದರ ಅಧ್ಯಕ್ಷರಾಗಿ ವಾಂಗರು ನೇಮಿಸಲ್ಪಟ್ಟಿದ್ದಾರೆ. ಇದನ್ನು ಖಂಡಿಸುತ್ತಾ ವಾಂಗರ ರಾಷ್ಟ್ರದ್ರೋಹಬುದ್ಧಿಯನ್ನು ಚೈನದ ವೀರ ದಳಪತಿ ಚಿಯಾಂಗ್ ಕೈಶೇಕರು ಇದು ಜನಾಂಗದ ಗೌರವಕ್ಕೆ ಅವಮಾನಕರವೆಂದಿರುವುದು.

ಒಡ್ವಾಯರ ಕೊಲೆಯ ಪ್ರಕರಣ

ನಾನು ದೇಶಕ್ಕಾಗಿ ಸಾಯುತ್ತೇನೆ

ಕ್ಯಾಕ್ಸ್ಟನ್ ಹಾಲಿನಲ್ಲಿ ಗುಂಡುಹಾಕಿ ಒಡ್ವಾಯರನ್ನು ಕೊಂದ ಉದ್ಧಾಮಸಿಂಗನೆಂದು ಹೇಳಲ್ಪಡುವ ಭಾರತೀಯರ ವಿಚಾರಣೆ ತಾ. ೧ ರಲ್ಲು ನಡೆಯಿತು. ಅವರು ಹೀಗೆಂದರು

"ನಾನು ಕೊಂದದ್ದೇಕೆಂದರೆ, ಅವನ ಮೇಲೆನನಗೆ ದ್ವೇಷವಿತ್ತು. ನಾನು ಯಾವುದನ್ನೂ ಗಣ್ಯ ಮಾಡುವುದಿಲ್ಲ. ನಾನು ಸಾಯುವ ವಿಷಯ ದುಃಖಿಸುವುದಿಲ್ಲ. ಮುದುಕನಾಗುವ ವರೆಗೆ ಕಾದು ಸಾಯುವುದರಿಂದೇನು? ತರುಣನಿರುವಾಗಲೇ ಸಾಯಬೇಕು. ನಾನು ಯಾವುದಕ್ಕಾಗಿ ಸಾಯುತ್ತೇನೋ ಅದು ಒಳ್ಳೆಯದಾಗಿದೆ. ನಾನು ನನ್ನ ದೇಶದ ಸಲುವಾಗಿ ಸಾಯುತ್ತೇನೆ" ಎಂದರು. ಸ್ವಲ್ಪ ತಡೆದು 'ಜೆಟ್ಲೆಂಡನು ಸತ್ತನೇ? ನಾನು ಎರಡು ಗುಂಡು ಸರಿಯಾಗಿ ಹೊಡೆದಿದ್ದೆ' ಎಂದರು ಕಡೆಗೆ "ನನ್ನ ಹೆಸರು ಉದ್ಧಾಮಸಿಂಗನೆಂದಲ್ಲವಯ್ಯ" ಎಂದರು.

ಜರ್ಮನ್ ಚಟುವಟಿಕೆಗಳು

ಪಶ್ಚಿಮ ರಣರಂಗದಲ್ಲಿ ಜರ್ಮನರು ವಿಶೇಷ ಚಟುವಟಿಕೆಗಳನ್ನು ತೋರಿಸುತ್ತಿದ್ದಾರೆ. ಹಲವು ಸಮಯ ಹಲವು ವಿಮಾನಗಳು ಒಟ್ಟಾಗಿ ಶತ್ರು ಪಡೆಯ ಮೇಲ್ಗಡೆ ಹಾರಾಡುತ್ತಿದ್ದುವು.

ಶ್ರೀ ಎನ್. ಜಿ. ರಂಗರಿಗೆ ಶಿಕ್ಷೆ

ಕೃಷಿಕ ಮುಖಂಡರಾದ ಶ್ರೀ ಎನ್. ಜಿ. ರಂಗ ಎಂ. ಎಲ್. ಎ. (ಕೇಂದ್ರ) ಇವರನ್ನು ತಾ. ೧ ರಂದು ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿನನುಗುಣವಾಗಿ ಸೆರೆಹಿಡಿದು ಒಂದು ವರ್ಷದ ಕಠಿಣ ಸಜೆ ಮತ್ತು ೫೦೦ ರೂಪಾಯಿಗಳ ದಂಡ ಅದನ್ನು ವಿತ್ತದಿದ್ದರೆ ಮುಂದೆ ಆರು ತಿಂಗಳ ಕಠಿಣ ಸಜೆಯು ವಿಧಿಸಲಾಗಿದೆ.

ಡಿಫೆನ್ಸ್ ಇಂಡಿಯಾ ಆಕ್ಟ್

ಸರ್ದಾರ ಸಂತ ಸಿಂಗರ ಹೇಳಿಕೆ

ಡಿಫೆನ್ಸ್ ಇಂಡಿಯಾ ಆಕ್ಟಿನಂತೆ ಇಂದು ನಾಗರಿಕರನ್ನು ಹಲವರನ್ನು ಸೆರೆಹಿಡಿಯಲಾಗುತ್ತದೆ. ನಾಗರಿಕರ ಸಾಮಾನ್ಯ ಸ್ವಾತಂತ್ರ್ಯಗಳಿಗೆ ವಿರೋಧ ಬರುವಂತಹ ಆ ಶಾಸನದಿಂದ ಹಾನಿಯುಂಟೆಂದೂ ಸೆಂಟ್ರಲ್ ಎಸೆಂಬ್ಲಿಯಲ್ಲಿ ಸರ್ದಾರ ಸಂತ ಸಿಂಗರು ಅಭಿಪ್ರಾಯ ಕೊಟ್ಟಿರುವರು.

ಮದ್ರಾಸು ಕಾಂಗ್ರೆಸು ಭವನ ನಿಧಿ

ಮದ್ರಾಸಿನಲ್ಲಿ ಸುಟ್ಟು ಹೋದ ಕಾಂಗ್ರೆಸು ಭವನದ ನಿಧಿಯು ತಾ. ೨೮ ವರೆಗೆ ರೂ. ೫೩,೫೮೦-೧೨-೧೧ ಆಗಿದೆ.

ಸತ್ಯಾಗ್ರಹ ಸಿದ್ಧತೆ

ಸಂಯುಕ್ತ ಪ್ರಾಂತದ ಚಟುವಟಿಕೆ

ಸಂಯುಕ್ತ ಪ್ರಾಂತದಲ್ಲಿ ಸತ್ಯಾಗ್ರಹ ಶಿಬಿರಗಳು ಭರದಿಂದ ಏರ್ಪಡುತ್ತಿವೆ. ಪ್ರತ್ಯಕ್ಷ ಮತ್ತು ಪರೋಕ್ಷ ಸತ್ಯಾಗ್ರಹಿಗಳು ಸೇರಿಸಲ್ಪಡುತ್ತಿದ್ದಾರೆ. ಅಲ್ಲಿನ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಕಾರ್ಯನಿರ್ವಾಹಕ ಮಂಡಳಿಯೇ 'ಮುಖ್ಯ ಸತ್ಯಾಗ್ರಹ ಸಮಿತಿ'ಯಾಗಿದೆ.

ಗಡಿನಾಡಿನಲ್ಲಿ ಗಲಭೆ

ಗಡಿನಾಡಿನಲ್ಲಿ ದತ್ತಖೇಲಿನ ಪೋಸ್ಟ್ ಮಾಸ್ಟರರಾದ ಇಸ್ರಾಯೆಲ್ ಷಹರನ್ನು ಅಲ್ಲಿನ ಪುಂಡರು ಅಪಹರಿಸಿಕೊಂಡು ಹೋಗಿದ್ದಾರೆ.

ಲೀಗಿನ ಯೋಜನೆಯ ಖಂಡನೆ

ಆಸಫ್ ಅಲಿಯವರ ಹೇಳಿಕೆ

ಜಿನ್ನರ ಮುಸ್ಲಿಮ್ ಲೀಗಿನ ಯೋಜನೆಗಳನ್ನೂ ನೀತಿಗಳನ್ನೂ ಖಂಡಿಸಿ ಕಾಂಗ್ರೆಸ ವರ್ಕಿಂಗ್ ಕಮಿಟಿ ಸದಸ್ಯರಾದ ಶ್ರೀ ಅಸಫ್ ಅಲಿ ಎಮ್. ಎಲ್. ಎ. (ಕೇಂದ್ರ) ಇವರು ಒಂದು ದೀರ್ಘ ಪ್ರಕಟಣೆ ಕೊಟ್ಟಿರುವರು. ಲೀಗಿನ ಧೋರಣೆಯು ರಾಷ್ಟ್ರದ ಹಿತದೃಷ್ಟಿಯಲ್ಲಿ ಅತ್ಯಂತ ಭಯಾನಕವಾದುದೆಂದು ಸಾರಿರುವರು.

ರಾಷ್ಟ್ರೀಯ ವಾರ

ರಾಷ್ಟ್ರಪತಿಗಳ ಹೇಳಿಕೆ

ಈ ವರ್ಷದ ರಾಷ್ಟ್ರೀಯ ವಾರವನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಬೇಕೆಂದು ಮೌಲಾನಾ ಆಜಾದರು ಒಂದು ದೀರ್ಘವಾದ ಪ್ರಕಟಣೆಯನ್ನು ಕೊಡುತ್ತಾ, ಮುಂಬರಲಿರುವ ಹೋರಾಟಕ್ಕೆ ಕಾಂಗ್ರೆಸಿನ ಸಂಪೂರ್ಣ ಸಿದ್ಧತೆಯನ್ನು ಪ್ರತಿಯೊಂದು ಕಾಂಗ್ರೆಸು ಕಮಿಟಿಯೂ ಈ ವಾರದಲ್ಲಿ ಪ್ರದರ್ಶಿಸಬೇಕೆಂದು ಹೇಳಿರುವರು.

ಮುಖಂಡರಿಗೆ ನಿರ್ಬಂಧ

ಕಾಶಿಯ ಕೂಲಿಗಾರರ ಸಂಘದ ಮುಖಂಡರಾದ ಪ್ರಮೋದಲಾಲ್, ಟಟಾನಗರ ಕೂಲಿಗಾರ ಮುಖಂಡರಾದ ಚಟರ್ಜಿ ಇವರನ್ನು ನಿರ್ಬಂಧಿಸಲಾಗಿದೆ. ಬೀಹಾರಿನ ಕೂಲಿಗಾರರ ಮುಖಂಡರಾದ ಮಜುಮದಾರರಿಗೆ ಚೋಟಾನಾಗಪುರಿಗೆ ಬರಲಾಗದೆಂದು ಆಜ್ಞೆಯಾಗಿದೆ.

ವರ್ಕಿಂಗ್ ಕಮಿಟಿ ಸಭೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದಿನ ಅಧಿವೇಶನವು ವರ್ಧಾದಲ್ಲಿ ಇದೇ ಎಪ್ರಿಲ್ ತಾ. ೧೫ ರಲ್ಲಿ ಮತ್ತು ಅನಂತರ ದಿನಗಳಲ್ಲಿ ಜರಗುವುದೆಂದು ಪ್ರಕಟವಾಗಿದೆ.

ಬಂಗಾಳದಲ್ಲಿ ಬಿರುಗಾಳಿ

ಬಂಗಾಳದಲ್ಲಿ ಬಿರುಗಾಳಿ ಬೀಸಿ ಅನೇಕಲ್ಲು ಗಳು ಸುರಿದು, ಅಲ್ಲಿನ ಮಾವಿನ ಬೆಳೆಗೆ ಬಹಳ ಹಾನಿಯಾಗಿದೆ. ಅಲ್ಲದೆ ಸಿಡಿಲು ಬಡಿದು ಮೈಮನ್‌ಸಿಂಗಿನಲ್ಲಿ ಒಬ್ಬ ರೈತ ಮಡಿದ. ಹಾಗೆಯೇ ಇನ್ನಿಬ್ಬರೂ ಹೆಂಗಸರಿಗೂ ಸಿಡಿಲು ಹೊಡೆದು ಅವರೂ ಸತ್ತರು. ಅವರಲ್ಲಿ ಒಬ್ಬಳು ತನ್ನ ಗುಡಿಸಲಲ್ಲಿ ಹೆರಿಗೆಯಲ್ಲಿದ್ದಳು; ಹೊಲದ ಬಳಿ ಇದ್ದ ಮುತ್ತೊಬ್ಬಳ ಕೈಯಲ್ಲಿ ಅವಳದೊಂದು ಮಗು ಬಿದ್ದಿತು. ಮಗುವಿಗೇನೂ ಪೆಟ್ಟಾಗಲಿಲ್ಲ.

ಗ್ರಾಮ ನಗರಗಳಲ್ಲಿ ಸತ್ಯಾಗ್ರಹ ಶಿಬಿರಗಳು

ಆಂದೋಲನದ ಪೂರ್ವಸಿದ್ಧತೆ

ಸಮತಾವಾದಿ ಮುಖಂಡರ ಬಂಧನ

ಉದ್ದಾಮಸಿಂಗರ ಹೇಳಿಕೆ!

ಕಾಕ್ಸ್ಟನರ ವಿಚಾರಣೆ

ಕಾಕ್ಸ್ಟನರ ಮೇಲೆ ಗುಂಡು ಹಾರಿಸಿದ ಪ್ರಕರಣದ ವಿಚಾರಕ್ಕಾಗಿ, ಪಂಜಾಬ್ ಸರಕಾರವು ನೇಮಿಸಿದ ಸಮಿತಿಗೆ ಲಾಹೋರ್ ಹೈಕೋರ್ಟಿನ ಚೀಫ್ ಜಸ್ಟೀಸರಾದ ಸರ್ ಡೌಗ್ಲಸ್ ಯಂಗ್ ರವರು ಅಧ್ಯಕ್ಷರು.

ಬೊಂಬಯಿಯಲ್ಲಿ ಗಲಭೆ

ಬೊಂಬಯಿಯಲ್ಲಿ ಅರಳೆ ಕಾರ್ಖಾನೆಯ ಮುಷ್ಕರಗಾರರು ಪೋಲೀಸರ ಮೇಲೆ ಕಲ್ಲು ಹೊಡೆದು ಗಲಭೆ ಮಾಡಿದುದರಿಂದ, ಪೋಲೀಸರು ಗುಂಡು ಹಾರಿಸಬೇಕಾಗಿ ಬಂದಿತು. ಗುಂಡಿನಿಂದ ಯಾರಿಗೂ ಗಾಯಗಳಾಗಿಲ್ಲ.

ಇಂದೂರು ಸುಧಾರಣೆ

ಕಳೆದ ವರ್ಷ ನೇಮಿಸಲಾದ ಒಂದು ಸಮಿತಿಯ ಸೂಚನೆಗಳನ್ನು ಒಪ್ಪಿಕೊಂಡು ಇಂದೋರಿನ ಮಹಾರಾಜರು, ಅಲ್ಲಿನ ನ್ಯಾಯವಿಧಾಯಕ ಕೌನ್ಸಿಲನ್ನು ದೊಡ್ಡದು ಮಾಡಲು ಒಪ್ಪಿರುವರು. ಅದರಲ್ಲಿ ೫೦ ಮಂದಿ ಸದಸ್ಯರಿದ್ದು, ೩೫ ಸದಸ್ಯರು ಪ್ರಜೆಗಳಿಂದಲೇ ಚುನಾಯಿಸಲ್ಪಡುವವರೇ, ಮುಖ್ಯವಾದ ಸುಧಾರಣೆ ಎಂದರೆ ಇದೇ.

ಗೀತಾ ಮಂದಿರ

ಸ್ವಾಮಿ ವಿದ್ಯಾನಂದಜಿ ಮಹಾರಾಜರೆಂಬ ಗೀತಾ ಉಪದೇಶಿಗಳು, ಗುಜರಾತಿನಲ್ಲಿ ಒಂದು ಗೀತಾ ಮಂದಿರವನ್ನು ಸ್ಥಾಪಿಸಲೆತ್ನಿಸುತ್ತಿದ್ದಾರೆ. ಇವರಾಗಲೇ ಬಡೋದಾ ಸಂಸ್ಥಾನದಲ್ಲಿ ಒಂದು ಕಡೆ ರೂ. ೨೫ ಸಾವಿರದ ವೆಚ್ಚದಿಂದ ಒಂದು ಗೀತಾ ಮಂದಿರವನ್ನೂ ಅದರೊಡನೆ ೨೫ ಸಾವಿರದ ವೆಚ್ಚದಿಂದ ಒಂದು ಸೆನಿಟೋರಿಯಮ್ಮನ್ನೂ ಸ್ಥಾಪಿಸಿ ಕೀರ್ತಿ ಪಡೆದವರು.

ಮೈಸೂರಿನಲ್ಲಿ ವಕೀಲಿಯಲ್ಲಿರಲಾಗದು

ಮೈಸೂರು ಕಾಂಗ್ರೆಸ್ ಮುಖಂಡರಾದ ಹಲವು ವಕೀಲರ ಹೆಸರು ಮೈಸೂರು ಹೈಕೋರ್ಟಿನ ವಕೀಲರುಗಳ ಹೆಸರಿನ ಪಟ್ಟಿಯಿಂದ ದಾಖಲು ಇರಲಾಗದೆಂದು ಹೈಕೋರ್ಟಿನ ನ್ಯಾಯಾಧೀಶರು ಅಪ್ಪಣೆ ಮಾಡಿರುವರು. ಶ್ರೀ ಭಾಷ್ಯಂರೇ ಮೊದಲಾದವರು ಇವರಲ್ಲಿರುವರು.

ಪಂಜಾಬಿನಲ್ಲಿ ಬಂಧನ

ಪಂಜಾಬ್ ಅಸೆಂಬ್ಲಿಯ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ, ಪ್ರಧಾನ ಕಾರ್ಯದರ್ಶಿಗಳು; ಇದು ವರೆಗೆ "ಡಿಫೆನ್ಸ್ ಒಫ್ ಇಂಡಿಯಾ ರೂಲ್ಸ್" ಪ್ರಕಾರ ಆ ಸಂಸ್ಥಾನದಲ್ಲಿ ನಡೆದ ಸೆರೆ ೩೦೪ ಎಂದರು.

ಬಂಗಾಳದಲ್ಲಿ, "ಡಿಫೆನ್ಸ್" ಕಾನೂನಿನ ಪ್ರಕಾರ ನಡೆದ ಸೆರೆಗಳು ೫೩೫ ಅಲ್ಲದೆ ೫೪ ಮಂದಿಯ ಚಲನವಲನಗಳನ್ನೂ ತಡೆಯಲಾಗಿದೆ.

ತೋಟಿಗಳ ಮುಷ್ಕರ

ಕಲ್ಕತ್ತೆಯ ಮುನ್ಸಿಪಲ್ ಕಾರ್ಪೋರೇಶನಿನ ೧೫೦೦೦ ತೋಟಿಗಳು, ಮುಷ್ಕರ ಹೂಡಿದ್ದಾರೆ. ಸುಮಾರು ೫ ಸಾವಿರ ಮಂದಿಯಿಂದ, ಈಗ ಆ ಕಾರ್ಯ ಸ್ವಲ್ಪ ಸಾಗುತ್ತಿದೆ. ಮಜೂರ ನಾಯಕರ ಸೆರೆ ನಡೆದಿರುವದಲ್ಲದೆ, ೩೫ ಮಂದಿ ತೋಟಿಗಳು ಸೆರೆಹಿಡಿಯಲ್ಪಟ್ಟಿದ್ದಾರೆ. ತೋಟಿಗಳ ಮುಷ್ಕರದಲ್ಲಿ, ಸಂತಾಪ ಸೂಚಿಸಲು, ಮುನ್ಸಿಪಲ್ ಇಂಜಿನಿಯರಿಂಗ್ ಖಾತೆಯ ೩ ಸಾವಿರ ಮಂದಿ ಒಂದು ದಿನ ಮುಷ್ಕರ ನಡೆಸಿದರು. ಕಲ್ಕತ್ತೆಯ



೬೦ ಮಿಲಿಯ ಗೆಲನ್ ಹೊಲಸು ನೀರನ್ನು ಹೊರಗೆ ಹಾಕುವ ಸ್ಟೇಶನಿನಲ್ಲಿ, ಮುಷ್ಕರ ಉಂಟಾಗದಂತೆಯೂ, ಮುಷ್ಕರ ಇತರ ಕಡೆಗಳಿಗೆ ಹರಡದಂತೆಯೂ ಪೋಲೀಸರು ಜಾಗ್ರತೆ ವಹಿಸುತ್ತಿದ್ದಾರೆ. ನಗರಕ್ಕೆ ನೀರು ಹಾಕುವ ಸಾವಿರ ಮಂದಿ ಕೆಲಸಗಾರರೂ ಮುಷ್ಕರ ಹೂಡಿದ್ದಾರೆ.

ರೈತ ಪರಿಷತ್ತು

ಅಖಿಲ ಭಾರತ ರೈತ ಪರಿಷತ್ತು, ಬಾಬಾ ಸೋಹನ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ, ಪಲಸಾ ಎಂಬಲ್ಲಿ ವೈಭವದಿಂದ ಜರಗಿತು. ಸುಮಾರು ೫೦ ಸಾವಿರ ರೈತರು ನೆರೆದಿದ್ದರು. ಯುದ್ಧದ ವಿಚಾರದಲ್ಲಿ ತಮ್ಮ ಅತೃಪ್ತಿಯನ್ನು ಸೂಚಿಸಿ, ಮುಂದೆ ಆರಂಭವಾಗಬಹುದಾದ ಸತ್ಯಾಗ್ರಹ ಸಮರಕ್ಕೆ ಯೋಗ್ಯ ಸಿದ್ಧತೆ ನಡೆಸಬೇಕೆನ್ನುವ ಹಾಗೂ ಇತರ ವಿಚಾರಗಳ ನ್ನೊಳಗೊಂಡ, ಠರಾವು ಮಂಜೂರಾಯಿತು.

ಬಂಧನ!

ಕೂಲಿಗಾರರ ಮುಖಂಡರಾದ ಶ್ರೀ. ಎಸ್. ಜಿ. ಪಾಟ್ಕರ್‌ರನ್ನು ಕೈದುಮಾಡಿದ್ದಿಯಾಗಿ ಬೊಂಬಯಿಯ ವಾರ್ತೆ. ಅಲ್ಲದೆ ಕಲ್ಕತ್ತೆಯ ನಗರ ಮತ್ತು ಹುಗ್ಲಿ ಹೌರಾ ಜಿಲ್ಲೆಗಳ ಕೈಗಾರಿಕೆಯ ಪ್ರದೇಶಗಳಿಂದ ಕೂಡಲೇ ತೊಲಗಿ ಹೋಗತಕ್ಕುದೆಂದು, ಕಲ್ಕತ್ತೆಯ ನಾಲ್ಕು ಮಂದಿ ಲೇಬರ್ ಮುಖಂಡರಿಗೂ ಸರಕಾರದಿಂದ ನೋಟೀಸ್ ಹೋಗಿದೆ.

ಕಲ್ಕತ್ತಾ ತೋಟಿಗಳ ಮುಷ್ಕರ ನಿಂತಿತು

ಕಲ್ಕತ್ತದಲ್ಲಿ ಮುಷ್ಕರ ಹಿಡಿದಿದ್ದ ತೋಟಿಗಳ ಮುಷ್ಕರವು ಇತ್ಯರ್ಥವಾಗಿ ಹಿಂತೆಗೆಯಲ್ಪಟ್ಟಿದೆ.

ಜಯಪ್ರಕಾಶ ನಾರಾಯಣರ ವರಿಗೆ ಒಂಭತ್ತು ತಿಂಗಳ ಕಠಿಣ ಶಿಕ್ಷೆ

ಅಖಿಲ ಭಾರತ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಜನರಲ್ ಸೆಕ್ರೆಟರಿ ಶ್ರೀ ಜಯಪ್ರಕಾಶ ನಾರಾಯಣರಿಗೆ ಯುದ್ಧ ವಿರೋಧದ ಭಾಷಣ ಮಾಡಿದರೆಂದು ೯ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದರು.

ಸರ್ ಸ್ಯಾಮುಯಲ್ ಹೋರರು ಮುಂದಿನ ವೈಸರಾಯರೇ

ಇಂಡಿಯಾದ ಈಗಿನ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋವರ ಅಧಿಕಾರ ಅವಧಿಯು ಮುಗಿಯುತ್ತ ಬಂದಿರುವುದರಿಂದ ಭಾರತದ ಮುಂದಿನ ವೈಸರಾಯರಾಗಿ ಸರ್ ಸ್ಯಾಮುಯಲ್ ಹೋರರನ್ನು ನೇಮಿಸಬಹುದೆಂದು ಹೇಳಲಾಗುತ್ತಿದೆ.

ರಾಜಾಜಿಯವರು

ವರ್ಧಾದ ಗ್ರಾಮೋದ್ಯೋಗ ಸಂಘದ ವಾರ್ಷಿಕಾಧಿವೇಶನದಲ್ಲಿ ಅಧ್ಯಕ್ಷತೆ ವಹಿಸುತ್ತ ರಾಜಾಜಿಯವರು ಆತ್ಮಶಿಕ್ಷಣ ಪಡೆಯಬೇಕೆಂಬ ಒಳ್ಳೆಯ ಉಪದೇಶವನ್ನಿತ್ತರು.

ಜವಾಹರಲಾಲರೂ ಒಬ್ಬ ಸ್ವಯಂ ಸೇವಕರು

ಕಳೆದ ತಿಂಗಳು ೨೮ನೇ ತಾರೀಕು ಗುರುವಾರದಿಂದ ಸಂಯುಕ್ತ ಪ್ರಾಂತ್ಯ ಸ್ವಯಂಸೇವಕ ಶಿಕ್ಷಣ ಶಿಬಿರವನ್ನು ತೆರೆಯಲಾಗಿದೆ. ಜವಾಹರಲಾಲರು ಸ್ವಯಂಸೇವಕರಂತೆ ಸಿದ್ಧರಾಗಿರುವರು.

ಸಂಯುಕ್ತ ಪ್ರಾಂತ್ಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರುಗಳಿಗೂ, ಪ್ರಾಂತ್ಯದ ಮಾಜಿ ಕಾಂಗ್ರೆಸ್ ಮಂತ್ರಿಗಳಿಗೂ ಮತ್ತು ಅವರ ಪಾರ್ಲಿಮೆಂಟರಿ ಸೆಕ್ರೆಟರಿಗಳಿಗೂ ಸ್ವಯಂಸೇವಕ ಶಿಕ್ಷಣವನ್ನು ಕೊಡಲಾಗುವುದು.

ಪನ್ನೀರ ಸಲ್ವಂರ ಸ್ಥಾನಕ್ಕೆ

ಇಂಡಿಯಾ ಸೆಕ್ರೆಟರಿ ಓಫ್ ಸ್ಟೇಟರಿಗೆ ಎಡ್ವೈಸರರಾಗಿ ಸರ್. ಎ. ಟಿ. ಪನ್ನೀರ ಸಲ್ವಂರವರು ಆಕಸ್ಮಿಕವಾಗಿ ತೀರಿಹೋದ ನಿಮಿತ್ತ ಅವರ ಸ್ಥಾನದಲ್ಲಿ ಮದ್ರಾಸು ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರಾದ ಶ್ರೀ. ಎಸ್. ಐ. ರಂಗನಾಥನ್‌ರವರು ನೇಮಕ ಹೊಂದಿರುವರು.

ಸಾದರ ಸ್ವೀಕಾರ

ಭಾರತೀಯ ಆರೋಗ್ಯ ಸೂತ್ರಗಳು

ಆಯುರ್ವೇದ ವಿಶಾರದ ಮತ್ತು ಭೂಷಣ ಬಿ. ಕೆ. ವಿ. ಶರ್ಮ ಮಂಗಳೂರು. ಪ್ರಕಾಶಕರು ಶ್ರೀ ಟಿ. ರಾಮದಾಸ ಶೆಣೈ. ರಾಮದಾಸ ಆಯುರ್ವೇದಿಕ್ ಫಾರ್ಮಸಿ ಮಂಗಳೂರು ಬೆಲೆ ೦-೭-೦

ತೊಟ್ಟಿಲ್ಲ:- ಬರೆದವರು ದಿವಂಗತಾ ಗೌರಮ್ಮನವರು (ಮಿಸೆಸ್, ಬಿ. ಟಿ. ಜಿ. ಕೃಷ್ಣ) ಪ್ರಕಾಶಕರು ಮನೋಹರ ಗ್ರಂಥ ಭಾಂಡಾರ ಧಾರವಾಡ, ಬೆಲೆ ೦-೧-೬

ನೋಟೀಸು

ದಕ್ಷಿಣ ಕನ್ನಡಾ ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ.

O. S. 628/1939

ದಿ. ಕರ್ನಾಟಕ ಬೇಂಕ್ ಲಿಮಿಟೆಡ್ ಮಂಗಳೂರು. ಇದರ ಸೆಕ್ರೆಟರಿ ಪಿ. ರಾಮಚಂದ್ರರಾವ್ ಪಿ. ನಾಗಪ್ಪಯ್ಯನ ಮಗ, ಮಂಗ್ಳೂರು ಶಹರದಲ್ಲಿರುವವರು. } ವಾದಿ.

ಮತ್ತು

1. ಎ. ಕೃಷ್ಣೋಜಿರಾವ್. 2. ಎ. ರಾಜುರಾವ್. ಎ. ವೆಂಕೋಜಿರಾಯರ ಮಕ್ಕಳು.
1ನೇ ಪ್ರತಿವಾದಿಯು ಶ್ರೀ ಕೃಷ್ಣ ಸಿನಿಮ ಕಂಪೆನಿಯ ಪ್ರೊಪ್ರೈಟರ್. 2ನೇ ಪ್ರತಿವಾದಿಯು ಮಾರ್ಕೆಟ್ ರಸ್ತೆಯಲ್ಲಿ ವ್ಯಾಪಾರಸ್ಥ. ಇಬ್ಬರೂ ಶಹರದಲ್ಲಿರುವವರು. 3. ಪಿ. ವಿಷ್ಣುಮೂರ್ತಿರಾವ್. } ಪ್ರತಿವಾದಿಗಳು.

ಸದ್ರಿ ಮೇಲಿನ ವಾದಿರಿಗೆ ಸದ್ರಿ ಮೇಲಿನ ಪ್ರತಿವಾದಿರು ತಾ. 5-7-1938ರಲ್ಲಿ ಬರೆಕೊಟ್ಟ ಹುಂಡಿ ದಾಖಲು ಬರೆಕಳ್ಳಿ ಅಸ್ಲು, ಬಡ್ಡಿ ರಿಜಿಸ್ಟ್ರಿ ನೋಟೀಸಿನ ಖರ್ಚು ಕೂಡಾ ರೂ. 1726-7-4 ಕ್ಕೆ ವ ಮುಂದಿನ ಬಡ್ಡಿ ಕೋರ್ಟು ಖರ್ಚು ವಗೈರೆ ಬರಮಾಡಿಕೊಳ್ಳುವರೆ ಹಾಕಲ್ಪ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 6-6-1940ನೇ ಪೂರ್ವಾಹ್ನ 11 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ. ಸದ್ರಿ ದಿವಸ ಪ್ರತಿವಾದಿರು ಖುದ್ದಾಗಿಯೂ ವಕೀಲರ ಮುಖಾಂತ್ರ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪ ಇದ್ದರೆ ಮನವಿ ಮಾಡಿಕೊಳ್ಳಬಹುದು. ತಪ್ಪಿದ್ದು ಸದ್ರಿ ವ್ಯಾಜ್ಯವು ಅವರ ಗೈರ ಹಾಜರಿಯಲ್ಲಿ ತೀರ್ಮಾನಿಸಲಾಗುವದು ಎಂತ ಕೋರ್ಟು ಹುಕುಂ ಪ್ರಕಾರ ಪ್ರಕಟಿಸಲಾಗಿಯದೆ.

Mangalore } P. Vasudeva Rao.
4-4-1940 } Advocate for Plaintiff

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ರಾಷ್ಟ್ರೀಯ ಸಪ್ತಾಹ

(೬-೪-೧೯೪೦ ರಿಂದ ೧೩-೪-೧೯೪೦)

ಪ್ರತೀ ವರ್ಷ ಏಪ್ರಿಲ್ ೬ ರಿಂದ ೧೩ ತಾರೀಖಿನ ವರೆಗಿನ ದಿನಗಳನ್ನು ರಾಷ್ಟ್ರೀಯ ವಾರವೆಂದು ೧೯೧೯ ಸಾಲಿನಿಂದ ಇಡೀ ಹಿಂದೂಸ್ಥಾನವು ಆಚರಿಸುತ್ತ ಬಂದಿದೆ. ಪ್ರತಿಸಲ ಈ ಸಮಯದಲ್ಲಿ ಸ್ವಾತಂತ್ರ್ಯಗಳಿಸುವ ನಮ್ಮ ಧ್ಯೇಯವನ್ನು ಪುನರುಚ್ಚರಿಸುತ್ತಾ ಹೋರಾಟದ ಸಿದ್ಧತೆಯನ್ನು ಮಾಡುತ್ತಾ ಬರಲಾಗಿದೆ. ಈ ಕಾರಣದಿಂದ ಈ ಸಪ್ತಾಹದ ಆಚರಣೆಯಲ್ಲಿ ವಿಧಾಯಕ ಕಾರ್ಯಕ್ರಮಗಳಿಗೆ ಪ್ರಾಮುಖ್ಯ ಸ್ಥಾನ ಕೊಡಲಾಗಿದೆ. ಬರಲಿರುವ ಹೋರಾಟ ಮತ್ತು ಕಾಂಗ್ರೆಸ್ಸಿನ ವಿಧಾಯಕ ಕಾರ್ಯ ಕ್ರಮವನ್ನು ಯಶಸ್ವಿ ರೀತಿಯಲ್ಲಿ ಸಾಗಿಸಿದ ಹೊರತು ತಾವು ಯಾವುದೇ ಹೋರಾಟವನ್ನು ಪ್ರಾರಂಭಿಸಲು ತಯಾರಿಲ್ಲವೆಂದು ಗಾಂಧಿಜೀಯವರ ಸ್ಪಷ್ಟ ಅಭಿಪ್ರಾಯ. ಇವುಗಳಿಂದ ಈ ಸಲದ ರಾಷ್ಟ್ರೀಯ ಸಪ್ತಾಹಕ್ಕೆ ಹೆಚ್ಚಿನ ಮಹತ್ವವು ಬಂದಿರುವದು. ರಾಷ್ಟ್ರೀಯ ವಾರವನ್ನು ಯೋಗ್ಯ ರೀತಿಯಿಂದ ಆಚರಿಸುವುದರ ಕುರಿತು ಗಾಂಧಿಜಿಯವರು ತಮ್ಮ ೩೧-೩-೪೦ ರ 'ಹರಿಜನ'ದಲ್ಲಿ ಕೆಳಗಿನಂತೆ ಬರೆದಿರುವರು:

'೧೯೧೯ನೇ ಸಾಲಿನ ಎಪ್ರಿಲ್ ೬ನೇ ತಾರೀಖಿನ ದಿನ ಹಿಂದುಸ್ಥಾನದ ಜನತೆಯು ತನ್ನ ಶಕ್ತಿಯನ್ನು ಅರಿತುಕೊಂಡಿತು. ಅಂದೇ ಸವಿನಯ ಕಾಯಿದೇ ಭಂಗವು ಪ್ರಾರಂಭವಾದುದು. ಅಂದಿನ ಪ್ರಾರ್ಥನೆ ಉಪವಾಸಗಳು ಅದರ ಶಾಂತಿಮಯ ಸ್ವರೂಪದ ದ್ಯೋತಕವಾಗಿದ್ದವು. ಹಿಂದೆ ಎಂದೂ ತೋರದ ಬಾಂಧವ್ಯವು ಹಿಂದು-ಮುಸಲ್ಮಾನರಲ್ಲಿ ತೋರಿಬಂತು. ಏಷ್ಟಾದ ಜನರು ಸ್ವದೇಶಿ ವ್ರತ ಕೈಕೊಂಡರು. ಅದೇ ಎಪ್ರಿಲ್ ೧೩ಕ್ಕೆ ಜಲಿಯಾನ್‌ವಾಲಾ ಬಾಗಿನ ಹತ್ಯಾಕಾಂಡವಾಗಿ ಹಿಂದು ಮುಸಲ್ಮಾನರ ಐಕ್ಯಮತ್ಯವು ಒಂದುಗೂಡಿ ನಡೆಯಿತು. ರಾಷ್ಟ್ರೀಯ ಸಾಪ್ತಾಹವು ಅಂದಿನಿಂದ ಆತ್ಮ ಶಿದ್ಧಿಯ ವಾರವೆಂದು ಆಚರಿಸಲ್ಪಡುತ್ತಿರುವುದು. ಈ ಅವಧಿಯಲ್ಲಿ ಖಾದಿ ಹಾಗು ಗ್ರಾಮೋದ್ಯೋಗದ ಸರಕುಗಳಷ್ಟು ಮಾರಾಟವನ್ನು ಸುಸಂಘಟಿತ ದಳಿಯಿಂದ ಏರ್ಪಡಿಸುವದುಂಟು. ಖಾದಿ ಹಾಗು ಇತರ ಗ್ರಾಮೋದ್ಯೋಗ ಕೈಗಾರಿಕೆಗಳನ್ನುಳಿದು ಇನ್ನಾವುದರಿಂದಲೂ ಸಾಮಾನ್ಯ ಜನತೆಗೆ ಸ್ವರಾಜ್ಯವು ದೊರೆಯಲಾರದೆಂದು ಹಿಂದೆ ಎಷ್ಟೋ ಸಲ ಹೇಳಿರುವೆನು. ಈಗಾದರೂ ಅದನ್ನೇ ಸಾರಿ ಹೇಳುವೆನು. ವಿಧಾಯಕ ಕಾರ್ಯಕ್ರಮವನ್ನು ಸತತವಾಗಿ ತತ್ಪರತೆಯಿಂದ ಮುಂದುವರಿಸದಿದ್ದರೆ ಶಾಂತಿಮಯ ಸತ್ಯಾಗ್ರಹವು ಸಾಧಿಸಲಾರದು. ಪ್ರತಿನಿತ್ಯ ಕಾರ್ಯಕರ್ತರಿಗೆ ಸಾಮಾನ್ಯ ಜನತೆಯೊಡನೆ ಸಂಬಂಧ ಬರುವಂತಹ ಯಾವುದೊಂದು ವಿಧಾಯಕ ಕಾರ್ಯಕ್ರಮವನ್ನು ಕೈಕೊಳ್ಳದೆ ನಮ್ಮ ಜೀವನವು ಜನತೆಯ ಜೀವನದೊಡನೆ ಬೆರೆಯುವದು ಅಶಕ್ಯ. ಅದುದರಿಂದ ಹಂಬಲವಿದ್ದ ಎಲ್ಲ ಕಾರ್ಯಕರ್ತರೂ ಒಳ್ಳೆ ನಿಷ್ಠೆಯಿಂದ ಖಾದಿ ಹಾಗು ಗ್ರಾಮ ಕೈಗಾರಿಕೆಯ ವಸ್ತುಗಳ ಮಾರಾಟವನ್ನು ಹೆಚ್ಚಾಗಿ ಮುಂಬರುವ ರಾಷ್ಟ್ರೀಯ ಸಪ್ತಾಹವನ್ನು ಜರಗಿಸುವರೆಂದು ನನ್ನ ನಂಬಿಕೆ.'

ಗಾಂಧಿಜೀಯವರ ಮೇಲಿನ ಮಹತ್ವದ ವಾಕ್ಯಗಳನ್ನು ಮುಂದಿಟ್ಟುಕೊಂಡು ಈ ಸಲದ ರಾಷ್ಟ್ರೀಯ ಸಪ್ತಾಹದ ಕಾರ್ಯಕ್ರಮವನ್ನು ಸ್ಥಳೀಯ ಸಮಿತಿಗಳು ನಿರ್ಧರಿಸಬೇಕು. ರಾಷ್ಟ್ರೀಯ

ಮೈಸೂರು ಕಾಂಗ್ರೆಸ್

ವಕೀಲಿ ವೃತ್ತಿಯಿಂದ ವಜಾ ಮಾಡಲ್ಪಟ್ಟರು

ಚಿತ್ರದುರ್ಗದ ಅಡ್ವೋಕೇಟ್ ಶ್ರೀ ಎಂ. ಗೋವಿಂದ ರೆಡ್ಡಿಯವರ ಹೆಸರನ್ನು ಹೈ ಕೋರ್ಟಿನ ವಕೀಲರ ಪಟ್ಟಿಯಿಂದ ವಜಾ ಮಾಡಬೇಕೆಂದೂ, ಅವರು ಸಂಸ್ಥಾನದ ಯಾವ ಕೋರ್ಟಿನಲ್ಲಿಯೂ ವಕೀಲಿ ವೃತ್ತಿಯನ್ನು ನಡೆಸಕೂಡದೆಂದೂ ಮೈಸೂರು ಹೈ ಕೋರ್ಟಿನ ಚೀಫ್ ಜಸ್ಟಿಸರು ತೀರ್ಪಿತ್ತರು.

ತುಮಕೂರಿನ ಅಡ್ವೋಕೇಟರಾದ (ಮತ್ತು ಕಾಂಗ್ರೆಸ್ ಮುಖಂಡರಾದ) ಶ್ರೀ ಕೆ. ಹಂಜಾರಪ್ಪನವರ ಮೇಲೆ ಕೋಲಾರದ ಜಿಲ್ಲಾ ಮ್ಯಾಜಿಸ್ಟ್ರೇಟರು ಮಾಡಿದ್ದ ರಿಫರೆನ್ಸಿನಲ್ಲಿ ಮೈಸೂರು ಹೈ ಕೋರ್ಟಿನಲ್ಲಿ ಚೀಫ್ ಜಸ್ಟಿಸರೂ ಶ್ರೀ ಟಿ. ಸಿಂಗಾರುವೇಲು ಮೊದಲಿಯಾರರೂ ತೀರ್ಪು ಕೊಡುತ್ತಾ, ಶ್ರೀ ಕೆ. ಹಂಜಾರಪ್ಪನವರನ್ನು, ಅವರು ತರುಣ ವಯಸ್ಕರಾಗಿರುವುದರಿಂದ, ಒಂದು ವರ್ಷ ವಕೀಲಿ ವೃತ್ತಿಯಿಂದ ಸಸ್ಪೆಂಡ್ ಮಾಡಿರುವುದಾಗಿ ಹೇಳಿದರು.

ಮೈಸೂರು ಕಾಂಗ್ರೆಸ್ಸಿನ ಮೈಸೂರು ನಗರದ ಪ್ರತಿನಿಧಿಗಳು ಮಾರ್ಚಿ ೨೦ರಲ್ಲಿ ಸಭೆ ಸೇರಿದ್ದರು. ನಗರ ಸಮಿತಿಯನ್ನು ರಚಿಸಲಾಯಿತು. ಶ್ರೀ ಹೆಚ್. ಸಿ. ದಾಸಪ್ಪನವರನ್ನು ಅಧ್ಯಕ್ಷರನ್ನಾಗಿಯೂ ಮತ್ತು ಖಜಾನ್ಚಿಯನ್ನಾಗಿಯೂ, ಶ್ರೀ ಬಿ. ನಾರಾಯಣ ಸ್ವಾಮಿಯವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀಯುತರಾದ ಎಂ. ಎನ್. ಜೋಯಿಸ್, ಎ. ಸ್ವಾಮಿ ನಾರಾಯಣ ಪಂಡಿತ್ ಮುಂತಾದ ೧೨ ಜನರನ್ನು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿಯೂ ಚುನಾಯಿಸಲಾಯಿತು.

ಮೈಸೂರು ಕಾಂಗ್ರೆಸ್ಸಿನ ಮೈಸೂರು ಜಿಲ್ಲಾ ಪ್ರತಿನಿಧಿಗಳು ಮಾರ್ಚಿ ೨೨ರಲ್ಲಿ ಸಭೆ ಸೇರಿದ್ದರು. ಶ್ರೀ ಎಂ. ಸಿ. ಮಲ್ಲಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಸ್. ರಂಗರಾಮಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು. ಶ್ರೀಯುತರಾದ ಅಗರಂ ರಂಗಯ್ಯ, ಎಂ. ಎನ್. ಜೋಯಿಸ್, ಎಂ. ಆರ್. ಎನ್. ಶಾಸ್ತ್ರಿ ಮುಂತಾದ ೧೩ ಜನರು ಕಾರ್ಯನಿರ್ವಾಹಕ ಸಮಿತಿಗೆ ಚುನಾಯಿತರಾದರು.

ಸಪ್ತಾಹದ ಆಚರಣೆಯಲ್ಲಿ ಜನರು ಹೆಚ್ಚು ಹೆಚ್ಚು ಭಾಗವಹಿಸುವಂತೆ ಹಾಗು ಪ್ರಾಂತ್ಯದಲ್ಲಿನ ಕಾಂಗ್ರೆಸ್ ಸಮಿತಿಗಳು ಕಾಂಗ್ರೆಸ್ಸಿಗರು ಮತ್ತು ಸಾರ್ವಜನಿಕರು ರಾಷ್ಟ್ರೀಯ ವಾರವನ್ನು ಅತ್ಯುತ್ತಮ ರೀತಿಯಿಂದ ಸಾಂಗಗೊಳಿಸಬೇಕೆಂದು ಸವಿನಯ ವಿನಂತಿ.

ಸಪ್ತಾಹದ ಆಚರಣೆಯ ವಿವರವಾಗಿ ವರದಿಯನ್ನು ಪ್ರಾಂತೀಯ ಕಚೇರಿಗೆ ೨೦-೪-೧೯೪೦ ರೊಳಗೆ ಮುಟ್ಟುವಂತೆ ಕಳಿಸಿಕೊಡಲು ತಪ್ಪಬಾರದು ಎಂದು ಪ್ರಧಾನ ಕಾರ್ಯದರ್ಶಿಯವರು ತಿಳಿಸುತ್ತಾರೆ.

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest

For	3 months	3¼%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted

G T 1

ಹೊಸ ತೆಳುವಾದ ಜಿಲ್ಲೆಟು ಬ್ಲೇಡುಗಳು! ಇದರ ಅಗ್ಗವಾದ ಬೆಲೆಯು—ತೆಳುವಾದ ಉಕ್ಕನ್ನು ಉಪಯೋಗಿಸುದರಿಂದಲೇ ಸಾಧ್ಯವಾಯಿತು—ಇದು ಜನರ ಅಗ್ಗವಾದ ಉತ್ತಮ ಬ್ಲೇಡುಗಳ ಆವಶ್ಯಕತೆಯನ್ನು ಪೂರೈಸುತ್ತದೆ. ನಡುವೆ ಸಿಗಿಯಲ್ಪಟ್ಟ ಬಂಗಾರದ ಹೊಳಪಿರುವ ಈ ತೆಳುವಾದ ಜಿಲ್ಲೆಟು ಬ್ಲೇಡುಗಳು ಇದರ ಸಮಾನ ಕ್ರಯದ ಯಾವ ಬ್ಲೇಡುಗಳಿಂದಲೂ ಆಗದಂತ ನಯವೂ, ಉತ್ತಮವೂ ಆದ ಕ್ಷೌರವನ್ನು ಮಾಡುವುದು. ಇಂದೇ ಒಂದು ಪೆಕೆಟನ್ನು ಕೊಂಡುಕೊಳ್ಳಿರಿ—ಮತ್ತು ಇಂದಿನಿಂದಲೇ ಇಷ್ಟು ಅಗ್ಗ ಬೆಲೆಗೆ ಉತ್ತಮವಾದ ಕ್ಷೌರವನ್ನು ಮಾಡಿ ಹರ್ಷಗೊಳ್ಳಿರಿ!



ಎಲ್ಲಾ ಡೀಲರುಗಳಿಗೂ ಅಚ್ಚುಕಟ್ಟಾಗಿವೆ.

ನೀಲಿ ಜಿಲ್ಲೆಟು ಬ್ಲೇಡುಗಳು—ಮಿಲಿಯಗಟ್ಟಲೆ ಜನರಿಂದ ಉಪಯೋಗಿಸಲ್ಪಡುತ್ತದೆ—ಜಗತ್ತಿನಲ್ಲಿ ಹೆಸರಾಂತ ಜನರ ಮೆಚ್ಚುಗೆಗೆ ಪಾತ್ರವಾದ ಹಳೇಯ ಬ್ಲೇಡುಗಳು ಎಲ್ಲಾ ವ್ಯಾಪಾರಸ್ಥರಲ್ಲಿವೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ವಜ್ರಹೃದಯಿ ಹಿಟ್ಲರನೂ ಆತನ ಕೈಗೊಂಬೆ!

ಹೊಶೋಫರನ ಅದ್ಭುತ ವ್ಯಕ್ತಿತ್ವ!

ಮ್ಯೂನಿಕ್ ನಗರದಿಂದ ಸುಮಾರು ೪೯ ಮೈಲುಗಳ ದೂರ, ಭವ್ಯವಾದ ಒಂದು ಹಳ್ಳಿಯಲ್ಲಿ ಸುತ್ತಲೂ ಪುಸ್ತಕಗಳನ್ನೋ ನಕಾಶೆಗಳನ್ನೋ ರಾಶಿ ಹಾಕಿಕೊಂಡು ಅದರಲ್ಲಿ ಯಾರಿಗೂ ಕಾಣಿಸದ ಹಾಗೆ ಜರ್ಮನಿಯ ಒಬ್ಬ ಗಣನೀಯ ವ್ಯಕ್ತಿಯು ತನ್ನ ದಿನಗಳನ್ನು ಕಳೆಯುತ್ತಾ ಇದ್ದಾನೆ. ನೋಡಲಿಕ್ಕೆ ಅವನು ಸುಂದರನಾಗಿದ್ದನಾದರೂ, ಈಗ ವೃದ್ಧನಾಗಿ ಅಂಗಾಂಗಗಳು ಶಿಥಿಲವಾಗಿರುವವು. ಆದರೂ ಮೊದಲು ಸೇನೆಯಲ್ಲಿ ಕೆಲಸಮಾಡಿಕೊಂಡಿದ್ದವನ ಹಾಗೆ ಅವನ ವೇಷಭೂಷಣಗಳು ಇರುವವು. ನಿಜ, ಮೊದಲು ಅವನು ಜರ್ಮನಿಯ ಒಂದು ಸೇನೆಯ ಮೇಜರಜನರಲನಾಗಿದ್ದನು. ಈಗ ಅವನು ಮ್ಯೂನಿಕದ ಜರ್ಮನ ಎಕೆಡೆಮಿಯ ಅಧ್ಯಕ್ಷಪದವಿಯಲ್ಲಿದ್ದಾನೆ. ಆದರೂ ಕೂಡ ಹೊರಗಿನ ಪ್ರಪಂಚಕ್ಕೆ ಅಜ್ಞಾತನಂತೆ ಇರುವದು ಅವನ ಒಂದು ವಿಶೇಷವಾಗಿದೆ.

ಏನೋ ಒಂದು ಉದ್ದೇಶವನ್ನಿಟ್ಟುಕೊಂಡು ಕನಸು ಕಾಣುವ ಈ ಮಹಾ ವ್ಯಕ್ತಿಯ ಹೆಸರು ಕಾರ್ಲ ಹೊಶೊಫರನೆಂದು. ಹೊಶೊಫರನು ಎಕೆಡೆಮಿಯ ಅಧ್ಯಕ್ಷನಾಗಿದ್ದರೂ, ತನ್ನ ಬಳಿಗೆ ಬಂದ ವಿದ್ಯಾರ್ಥಿಗಳಿಗೆ ಉಪದೇಶಮಾಡಿ ಅವನ ಕೆಲಸ ಕೀರ್ತಿಗಳು ಮುಗಿಯುವದಿಲ್ಲ. ಭೂಗೋಳ, ಜಗತ್ತಿನ ಇತಿಹಾಸ, ಜಗತ್ತಿನ ರಾಜಕೀಯಗಳಲ್ಲಿ ಹೊಶೊಫರ ಅದ್ವಿತೀಯ ಪಂಡಿತನು. ಇವೇ ವಿಷಯಗಳಲ್ಲಿ ಅವನು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಾನೆ. ಆದರೆ ಅಷ್ಟಕ್ಕಾಗಿ ನಾವು ಅವನನ್ನು ಜರ್ಮನಿಯ ಒಬ್ಬ ಮಹಾ ಶಕ್ತಿಸಂಪನ್ನ ಪುರುಷನೆಂದು ಕರೆಯುವದಲ್ಲ. ಅವನು ಜರ್ಮನಿಯ ಸರ್ವಾಧಿಕಾರಿ ಹಿಟ್ಲರನ ಕಿವಿ ಊದುವವ, ಅವನಿಗೆ ಮಾರ್ಗ ತೋರಿಸುವವ. ಆತ ರಿಬೆನ್‌ಟ್ರಾಪನನ್ನು ಟೆಲಿಫೋನಿನಲ್ಲಿ ಯಾವಾಗ ಕರೆದರೂ, ಅವನು ತನ್ನ ಮಿಕ್ಕ ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಹೊಶೊಫರನ ಮಾತುಗಳಿಗೆ ಕಿವಿಕೊಡಬೇಕು. ಹಿಟ್ಲರನ ಬಲಕೈ ಎನ್ನಿಸುವ ಹರ್ ಹೆಸ್ಸನು ಹೊಶೊಫರನ ಅಚ್ಚುಮೆಚ್ಚಿನ ವಿದ್ಯಾರ್ಥಿ! ಆದುದರಿಂದ ಹೊಶೊಫರ ಇವರೆಲ್ಲರನ್ನು ಮೀರಿಸುವ ಒಬ್ಬ ಮಹಾ ವ್ಯಕ್ತಿ.

ಹೊಶೋಫರನು ಪರಮ ಮೇಧಾವಿ

ಜರ್ಮನಿಯಲ್ಲಿ ಹೊಶೋಫರ ಅಸಾಧಾರಣ ಮೇಧಾವಿ ಆಗಿರುವನು. ಆ ದೇಶದಲ್ಲಿ ನಾಝಿ ತತ್ವಗಳ ವಿವಿಧ ವಿಚಾರ ಭಾವನೆಗಳನ್ನು ಒತ್ತಿ ಹಿಟ್ಲರನು ಸರ್ವಾಧಿಕಾರ ಪದವಿಗೆ ಬರುವಂತೆ ಮಾಡಿದವನೇ ಈ ಹೊಶೋಫರ ಎಂಬಾತನಾಗಿರುವನು. ನಾಝಿಗಳ ಒಂದು ತತ್ವ ಅಥವಾ ಭಾವನೆಯು ಹಳತಾಗಿ ಜನರ ಮನಸ್ಸನ್ನು ರಂಜಿಸುವ ಗುಣವನ್ನು ಕಳಕೊಂಡಾಗ ಹೊಶೋಫರನೇ ಅದರ ಸ್ಥಾನದಲ್ಲಿ ಇನ್ನೊಂದನ್ನ ಕಲ್ಪಿಸುವನು. ಜರ್ಮನಿಯ ಜನರನ್ನು ಮಂಕರನ್ನಾಗಿ ಮಾಡಿ, ಅವರನ್ನು ಹಿಟ್ಲರನ ಅಂಧಭಕ್ತರನ್ನಾಗಿ ಮಾಡಲಿಕ್ಕೆ, ನಾಝಿಧರ್ಮಕ್ಕೆ ಬೇಕಾದ ನವೀನ ರೂಪು ಸೌಂದರ್ಯವನ್ನು ಅವನು ಕೊಡುವನು. ಜರ್ಮನರನ್ನು ಮೋಹಗೊಳಿಸಲಿಕ್ಕೆ ಅವನು ಮೊದಲು ಸಂಘಟಿತ ಜರ್ಮನ ಜನಾಂಗದ ಮನಮೋಹಕ ಚಿತ್ರವನ್ನು ಅವರ ಮುಂದಿಟ್ಟನು. ಜರ್ಮನರು ಸಂಘಟಿತರಾದ ಒಂದು ಜನಾಂಗವಾದಾಗ, ಅವರನ್ನು ಹುರುಪುಗೊಳಿಸಲಿಕ್ಕೆ ವಿಶಾಲ ಜರ್ಮನಿಯ ಭಾವವನ್ನು ಒತ್ತಿ, ಆಸ್ಟ್ರಿಯ, ಜೆಕೊಸ್ಲೊವೇಕಿಯಗಳನ್ನು ಮುಕ್ತಿ ಸ್ವಾಧೀನಮಾಡಲಿಕ್ಕೆ ಅವನೇ ಪ್ರೇರೇಪಿಸಿದ.

ಜರ್ಮನರಲ್ಲಿ ಸಾಮ್ರಾಜ್ಯದಾಹವನ್ನು ಉಂಟುಮಾಡಿದವನೇ ಇವನು. ಜರ್ಮನರಂಥ ಪ್ರಸಿದ್ಧ ಸುಬಲ ಸುಸಂಘಟಿತ ಜನರಿಗೆ ಸಾಮ್ರಾಜ್ಯವಿಲ್ಲದಿರುವದು ಒಂದು ನಾಚಿಕೆ ಎಂದು ಅವನು ಹೇಳಿದ. ಆಗಿನಿಂದಲೇ ಕಳೆದ ಮಹಾ ಯುದ್ಧದಲ್ಲಿ ಕಳಕೊಂಡ ವಸಾಹತುಗಳನ್ನು ಮರಳಿ ಜರ್ಮನಿಗೆ ಕೊಡಬೇಕೆಂದು ಹಿಟ್ಲರ್ ಕೂಗಲಾರಂಭಿಸಿದ. ಮಹತ್ವಾಕಾಂಕ್ಷಿಯಾದ ತರುಣ ಜನಾಂಗವು ಹೇಗೆ ಮುಂದೊತ್ತಿ ತನ್ನ ಆಸೆ ಪ್ರತ್ಯಾಶೆಗಳನ್ನು ಪೂರೈಸಿಕೊಂಡು ಉನ್ನತಿಯ ಉಚ್ಚ ಶಿಖರವನ್ನೇರಲಿ ಬಲ್ಲುದೆಂಬದನ್ನು ಹೊಶೋಫರ ಜಪಾನಿನಿಂದ ಕಲಿತುಕೊಂಡ. ದುರ್ಬಲರನ್ನು ಮುರಿದಿಕ್ಕಿ ತಾನು ಸಬಲನಾಗುವ ಉಪಾಯವನ್ನು ಅವನು ಮೊದಲು ಕಲಿತುಕೊಂಡುದು ಜಪಾನಿನ ರಾಜಕಾರಣಿಗಳಿಂದ. ಹೊಶೊಫರ ಕೆಲವು ವರ್ಷಗಳ ತನಕ ಜಪಾನಿನಲ್ಲಿ ಜರ್ಮನಿಯ ಒಬ್ಬ ದೂತನಾಗಿ ಇದ್ದ.

ಅವನ ಕಾರ್ಯ ಕುಶಲತೆ

ಹೊಶೋಫರ ಮೇಧಾವಿ ಆಗಿದ್ದಂತೆ ಕಾರ್ಯಕುಶಲನೂ ಆಗಿರುವನು. ಹೇಳಬೇಕಾದ್ದನ್ನು ಮಾಡಬೇಕಾದ್ದನ್ನು, ಇಂಪಾದ ಸುಂದರವಾದ ಕೆಲವೇ ಮಾತುಗಳಿಂದ ಹೇಳಿ ಜನರ ಮನಸ್ಸನ್ನು ಮೋಹಗೊಳಿಸುವನು. ಹೊಶೊಫರನ ಸಿದ್ಧಾಂತಗಳಲ್ಲಿ ಪಾಪ ಪುಣ್ಯ ವಿವೇಕಗಳಿಗೆ ಸ್ಥಾನವಿಲ್ಲ. ತಾನು ಕೀರ್ತಿಶಾಲಿ ಶಕ್ತಿಸಂಪನ್ನ ಆಗಲಿಕ್ಕೆ ಮನುಷ್ಯನು ಏನು ಬೇಕಾದರೂ ಮಾಡಬಹುದೆಂದು ಅವನು ಹೇಳುವನು. ಹಿಟ್ಲರನನ್ನು ಮುಂದೆ ತರಲಿಕ್ಕೆ ಇಂಥಾ ಒಬ್ಬ ವ್ಯಕ್ತಿ ಬೇಕಾಗಿದ್ದ. ಅವನ ಮೋಹಗೊಳಿಸುವ ಮಾತುಗಳು, ನೀತಿ ಧರ್ಮಗಳ ಕಡೆಗಿದ್ದ ಅಲಕ್ಷ್ಯ, ವಿಶಾಲ ಜರ್ಮನಿಯ ಸುಂದರ ಕಲ್ಪನೆ, ಇವೆಲ್ಲ ಯುದ್ಧಾನಂತರದ ಹಿಟ್ಲರನನ್ನೂ ಜರ್ಮನಿಯನ್ನೂ ಇಂದಿನ ಸ್ಥಿತಿಗೆ ತಂದುವು. ೧೯೨೩ರಲ್ಲಿ ಹಿಟ್ಲರ ಸೆರೆಮನೆಯ ಬಂಧನದಲ್ಲಿ ಮೈನ ಕೇಫ ಎಂಬ ಗ್ರಂಥವನ್ನು ಬರೆಯತೊಡಗಿದ್ದಾಗ, ಮೊದಲಾಬಾರಿಗೆ ಹೊಶೊಫರ ಜೈಲಿನಲ್ಲಿ ಅವನ ಭೇಟಿ ತೆಗೆದುಕೊಂಡು ಹೆಪ್ಪು ಕಟ್ಟಿದ ರಕ್ತವನ್ನು ಕುದಿಸುವಂಥ ವಿಚಾರಗಳನ್ನು ಅವನ ಮನಸ್ಸಿನೊಳಗೆ ತುಂಬಿಸಿದ. ಅಂದಿನಿಂದ ಹೊಶೊಫರ ಹಿಟ್ಲರನ ಆರಾಧ್ಯ ದೇವತೆ ಆಗಿರುವನು. ಅವನ ಆಲೋಚನೆ ಸಲಹೆ ಕೇಳದೆ ಹಿಟ್ಲರ ಒಂದು ಹೆಜ್ಜೆ ಕೂಡ ಮುಂದಿಡುವದಿಲ್ಲ.

ಹಿಟ್ಲರನ ಹಸ್ತಕರಾಗಿ ರೋಜೆನಬರ್ಗ, ಫೀಟರ್, ಸ್ಟ್ರಾಸ್ಸರ, ರಿಬ್ಬೆನ ಟ್ರಾಪ ಮೊದಲಾದವರು ಮುಂದೆ ಬಂದರು. ಆದರೆ ಯಾರಿಗೂ ಹಿಟ್ಲರನಿಗೆ ಹೊಶೊಫರನ ಮೇಲಿದ್ದ ಮೋಹವನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಯಾಕಂದರೆ ಇವರೆಲ್ಲರ ನುಡಿಗಳು ಸುಳ್ಳಾಗಿವೆ, ಕಾರ್ಯಗಳ ವಿಫಲವಾಗಿವೆ. ಪರಂತು ಹೊಶೊಫರ ಪ್ರವಾದಿಯಂತೆ ನುಡಿದಿದ್ದಾನೆ, ದೇವದೂತನಂತೆ ಕೆಲಸ ಮಾಡಿದ್ದಾನೆ. ನಾಝಿಗಳು ರಸ್ಯದ ಕಮ್ಯುನಿಸ್ಟರ ಪರಮ ದ್ವೇಷಿಗರಾಗಿದ್ದಾಗಲೇ ಹೊಶೊಫರನು ಜರ್ಮನ ರಸ್ಯಗಳ ಸ್ನೇಹದಿಂದಾಗುವ ಲಾಭಗಳನ್ನು ತೋರಿಸಿ, ಮಿತ್ರ ಪಕ್ಷವನ್ನು ಒಂದು ಹಾದಿಗೆ ತಂದು, ಕಳೆದು ಹೋದ ವಸಾಹತುಗಳನ್ನು ಹಿಂದಕ್ಕೆ ಪಡೆಯಲಿಕ್ಕೂ ಯೂರೋಪದಲ್ಲಿ ಜರ್ಮನ ಸಾಮ್ರಾಜ್ಯದ ಭದ್ರತೆಗೂ ಜರ್ಮನ ರಸ್ಯ ಸ್ನೇಹವು ಪರಮಾವಶ್ಯಕ ಎಂದನು.

ಪಥ ಪ್ರದರ್ಶಕ ಹೊಶೊಫರ

ಹೊಶೊಫರನು ಹಿಟ್ಲರನಿಗೆ ಬೋಧಿಸಿದ್ದು ಮಾತ್ರವಲ್ಲ, ಅವನಿಗೆ ಮಾರ್ಗವನ್ನು ತೋರಿಸಿ ಕೊಟ್ಟನು. ಮಿತ್ರರಾಷ್ಟ್ರಗಳೊಡನೆ ಸ್ನೇಹಬೆಳೆಸಿ, ರಸ್ಯವನ್ನು ಗೆದ್ದು ಜರ್ಮನ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂದು ಮೊದಲು ಹಿಟ್ಲರ ಎಣಿಸಿದ್ದ. ಆದರೆ ಹೀಗೆ ಮಾಡಿ ಹಿಟ್ಲರನಿಗೆ ಸಫಲತೆಯು ದೊರೆಯಲಾರದೆಂದು ಹೊಶೊಫರ ಹೇಳಿದ. ಬರಬರುತ್ತ ಅವನು ಹೇಳಿದಂತೆ ಮಿತ್ರರಾಷ್ಟ್ರಗಳೊಡನೆ ಜರ್ಮನಿಯ ಸ್ನೇಹವು ಅಸಾಧ್ಯವಾಯಿತು. ಆದರೆ ರಸ್ಯ ಜರ್ಮನಿ ಸ್ನೇಹವು ಸಾಧ್ಯವಾಯಿತು. ಹೊಶೊಫರ ಹಿಟ್ಲರನಿಗೆ ಯೂರೋಪಿನ ಇತಿಹಾಸವನ್ನು ತೋರಿಸಿದ. ಹೂಣರು, ವಂಡಾಲರು, ಅಟ್ಟಿಲರು, ಜೇಂಗ್ಲಿಸ್ ಖಾನ್, ತೈಮೂರಲೇನ್ ಮೊದಲಾದವರು ಮೈದಾನುಗಳಿಂದ ದಂಡು ತೆಗೆದುಕೊಂಡು ಸಮುದ್ರ ಕರಾವಳಿಯ ರಾಜ್ಯಗಳನ್ನು ಗೆದ್ದ ವಿಷಯವನ್ನು ಸ್ಪಷ್ಟಮಾಡಿದ. ಅವರಂತೆ ಮೈದಾನು ರಾಷ್ಟ್ರಗಳಾದ ಜರ್ಮನಿ ರಸ್ಯಗಳು ಒಂದಾಗಿ ಕರಾವಳಿ ರಾಷ್ಟ್ರಗಳನ್ನು ಬಗ್ಗುಬಡೆಯುವದು ಸುಲಭವೆಂದ. ಅವನು ಹೇಳಿದಂತೆ ಈಗ ರಸ್ಯ ಜರ್ಮನಿ ಒಂದಾಗಿವೆ, ಯೂರೋಪಿನ ಕರಾವಳಿ ರಾಷ್ಟ್ರಗಳ ಮೇಲೆ ಕತ್ತಿ ಎತ್ತಿವೆ. ಇನ್ನು ನೋಡಬೇಕು — ಹೊಶೊಫರು ಹೇಳುವ ಪ್ರಕಾರ ಹೂಣರಂತೆ ಜೇಂಗ್ಲಿಸಖಾನನಂತೆ ಜರ್ಮನಿ ರಸ್ಯಗಳ ಸಮ್ಮಿಳಿತ ಶಕ್ತಿಯು ಬ್ರಿಟನ ಫ್ರಾನ್ಸು ಮೊದಲಾದ ಕರಾವಳಿ ರಾಷ್ಟ್ರಗಳನ್ನು ಸೋಲಿಸುವವೋ ಅಥವ ತಾನೇ ಸೋತು ಹೋಗುವದೋ ಎಂದು. ಈಗ ಯೂರೋಪದಲ್ಲಿ ಯುದ್ಧವಾರಂಭವಾಗಿರುವದು — ಎಲ್ಲರು ಹೇಳುವಂತೆ ಹಿಟ್ಲರನಿಂದಲ್ಲ — ಪರಂತು ಕೆಲವರೇ ತಿಳಿದಿರುವ ಪ್ರಕಾರ ಹಿಟ್ಲರನ ಪ್ರೇರಕನಾಗಿರುವ ಆ ಅದ್ಭುತವ್ಯಕ್ತಿ ಕಾರ್ಲ ಹೊಶೊಫರನ ಪ್ರೇರಣೆಯಿಂದ ಆಗಿದೆ!

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 3½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

DIAMONDS! DIAMONDS!
BEST BRILLIANCY!

K. R. K. SHET,
MANGALORE
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಜಂಕಣಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್ಸ್

ರಾಷ್ಟ್ರದ ಐಕ್ಯಕ್ಕಾಗಿ ಹೋರಾಡಿದ ಪುಣ್ಯ ಜೀವಿ!

ಯಾಕೂಬ ಹಸನರ ಪರಿಚಯ



ಕೆಲವೇ ದಿನಗಳ ಹಿಂದೆ, ಮೌಲಾನಾ ಯಾಕೂಬ್ ಹಸನರು ರಾಷ್ಟ್ರಿಯ ಮಹಾಮಂಡಳದ ಪರಿಷತ್ತೊಂದನ್ನು ಕರೆಯಬೇಕೆಂದೂ ಅದರಿಂದ ಐಕ್ಯವನ್ನು ಸಾಧಿಸಬೇಕೆಂದೂ ಪ್ರಕಟಿಸಿದ್ದಾಗ, ಆ ಕುರಿತು ಬಂಗಾಳದಂತಹ ಪ್ರಾಂತದಲ್ಲಿಯೂ ಕೂಡಾ ಅವರಿಗೆ ಹೊಗಳಿಕೆ ಸಿಕ್ಕಿತು ಅಂತಹ ದೂರದರ್ಶಿಯಾದ ಕಾರ್ಯದಕ್ಷನು ಕಂಡ ರಾಷ್ಟ್ರದ ಉಜ್ವಲವಾದ ಐಕ್ಯದರ್ಶನವು ಅವರ ಆಕಸ್ಮಾತ್ ನಿಧನದಿಂದ ಹೀಗೆ ಸಾಧಿಸಲಾರದೆ ಹಿಂದೆ ಬಿದ್ದಿತಲ್ಲಾ ಎಂದು ಎಣಿಸುವಾಗ, ನಮ್ಮ ಎದೆಯು ದುಃಖಪೂರ್ಣವಾಗುತ್ತದೆ

ಮೌಲಾನಾ ಅಜಾದರಿಗೆ ಎಲ್ಲಾ ರಾಷ್ಟ್ರೀಯ ಕಾರ್ಯಗಳೂ ಅತ್ಯಂತ ಪ್ರಿಯವಾಗಿದ್ದರೂ ಹಿಂದೂ ಮುಸ್ಲಿಂ ಐಕ್ಯ ಪ್ರಚಾರಕಾರ್ಯದಷ್ಟು ಪ್ರಿಯವಾದುದು ಬೇರೊಂದರಲಿಲ್ಲ ಆಗ ಕಾಂಗ್ರೆಸು ಮಂತ್ರಿ ಸ್ಥಾನದಲ್ಲಿತ್ತು! ಮದ್ರಾಸಿನಲ್ಲಿ ಜರಗಿದ ಒಂದು ಸಾರ್ವಜನಿಕ ಸಭೆಯಲ್ಲಿ ಶ್ರೀ ವಿ ವಿ ಗಿರಿಯವರು ಭಾಷಣವಿತ್ತರು ಮೌಲಾನಾ ಯಾಕೂಬ್ ಹಸನರು ಅಧ್ಯಕ್ಷತೆ ವಹಿಸಿದ್ದರು ಅಲ್ಲಿ ಅವರು ಹೇಳಿದ ಮಾತುಗಳು ಅಮೃತ ಹೃದಯದ ನುಡಿಗಳು 'ನಾವು ನಿಮ್ಮ ಕೆಲಸಗಾರರ ಬೆಂಬಲಕ್ಕೇ ಇದ್ದೇವೆ ಆದರೆ ವಿದೇಶೀಯರಿಂದಲೇ ಸೃಷ್ಟವಾದ ಜಾತೀಯತೆಯನ್ನು ಕೆರಳಿಸುವ ಜಯಕಾರಗಳಿಂದ ಅನ್ಯೋನ್ಯ ಸೌಹಾರ್ದಗಳನ್ನು ಕೆಡಿಸಬೇಡಿ, ಏಕೆಂದರೆ ಅವುಗಳಿಂದ ಒಳ್ಳೆತಿಲ್ಲ ಜಾತಿ ಜಾತಿಗಳ ಸೌಹಾರ್ದದಿಂದಲೇ ದೇಶದ ಸಂಪತ್ತು ಬೆಳೆಯಬೇಕಾಗಿದೆ' ಎಂದಿದ್ದರು.

ಮುಸ್ಲಿಂ ಲೀಗಿಗೆ ವಿರೋಧ

ದೇಶದ ಐಕ್ಯವನ್ನು ಕೆಡಿಸುವ ಅರಾಷ್ಟ್ರಿಯ ಧೋರಣೆಗಳಿಗೆ ಯಾಕೂಬ ಹಸನರು ತೀರಾ ವಿರುದ್ಧರಾಗಿದ್ದರು. ರಾಷ್ಟ್ರವನ್ನು ಎರಡು ಜನಾಂಗಗಳಿಗೆ ಸರಿಯಾಗಿ ವಿಭಾಗಿಸಬೇಕೆಂಬ ಜಿನ್ನರ ಹೇಳಿಕೆಯನ್ನು ಅವರು ಖಂಡಿಸಿದ್ದರು. ಅಖಿಲ ಭಾರತದ ರಾಷ್ಟ್ರಭಾಷೆಯಾಗಿ ಹಿಂದುಸ್ತಾನಿಯಾಗುವುದು ಅತ್ಯಂತ ಅವಶ್ಯವಿದೆಯೆಂದು ಅವರು ಸಾರಿದ್ದರು

ಶುದ್ಧ ಧಾರ್ಮಿಕರು

ಅವರು ಶುದ್ಧ ಧಾರ್ಮಿಕರಾದ ಮುಸಲ್ಮಾನರು ಕುರಾನನ್ನು ಎಲ್ಲರೂ ಓದಿ ಅರ್ಥಮಾಡಿಕೊಳ್ಳಲಾಗುವಂತೆ ಭಾಷಾಂತರಿಸಿದರು

ರಾಷ್ಟ್ರದ ಸಲುವಾಗಿ ಸೆರೆಮನೆಯ ಸಂಕಷ್ಟಗಳನ್ನು ಅನುಭವಿಸಿದರು ಚುನಾವಣೆಗಳಲ್ಲಿ ನಿಂತು ಕಾಂಗ್ರೆಸಿನ ವಿರುದ್ಧ ಪಕ್ಷದವರು ನಿರ್ಜೀವರಾಗುವಂತೆ ಕಾದಾಡಿದರು ಹಿಂದೆ ಬಹು ಕಾಲದ ಹಿಂದೆಯೇ ಮದ್ರಾಸ್ ಕೋರ್ಪರೇಶನಿನ ಸದಸ್ಯರಾಗಿದ್ದರ ಎರಡು ಪಕ್ಷದವರಿಗೂ ಅತ್ಯಂತ ಹಿತರಾಗಿದ್ದರ

ಹೀಗೆ ಯಾಕೂಬ್ ಹಸನರು ದಕ್ಷಿಣ ಭಾರತದ ಮುಸ್ಲಿಮರಿಗೆ ಆದರ್ಶ ಮುಖಂಡರಾಗಿದ್ದರು. ಮಾತ್ರವಲ್ಲದೆ ಮುಸ್ಲಿಂ ಲೀಗಿನ ದುಷ್ಟ ಪ್ರೇರಣೆಯಿಂದ ಮುಸಲ್ಮಾನರ ಮನಸ್ಸು ಕದಡಿಹೋಗದಂತೆ ಒಳ್ಳೆಯ ಹಿತೋಪದೇಶಗಳನ್ನೂ ಒಹಳವಾಗಿ ಕೊಡುತ್ತಿದ್ದರು

ಜನನ–ವಿದ್ಯೆ

ಇವರು ೧೮೭೫ರಲ್ಲಿ ಜನ್ಮವೆತ್ತಿದರು ಆಲಿಘರ್ ಎಂಬಲ್ಲಿರುವ ಪ್ರಸಿದ್ಧ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಅವರು ವಿದ್ಯಾಭ್ಯಾಸವನ್ನು ಪಡೆದರ ವ್ಯಾಪಾರ ವೃತ್ತಿಯನ್ನು ಮುಂದುವರಿಸುವ ನಿಮಿತ್ತ ಅವರ ಸುಮಾರು ೪೦ ವರ್ಷಗಳ ಹಿಂದೆ ಮದ್ರಾಸಿಗೆ ಬಂದಿದ್ದರ ಇಲ್ಲಿಗೆ ಒಂದ ವೇಳೆ ಅನೇಕ ಜನಹಿತ ಕಾರ್ಯಗಳಲ್ಲಿ ತೊಡಗಿದರ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮೊದಲಾದವುಗಳನ್ನು ಏರ್ಪಡಿಸಿ ಒಹಳ ಪ್ರೋತ್ಸಾಹದಿಂದ ಕೆಲಸಮಾಡುತ್ತಿದ್ದರೂ ಇತರ ಮತದವರಿಗೆ ಒಂದಿಷ್ಟು ಮನನೋಯಿಸುವಂತಹ ಯಾವುದೇ ಸಾರ್ವಜನಿಕ ಕಾರ್ಯಗಳಿಗೆ ಕೈಹಚ್ಚುತ್ತಿರಲಿಲ್ಲ.

ದೇಶಸೇವೆ

ಇವರು ಪರ್ಶಿಯನ್ ಅರೇಬಿಕ್, ಹಿಂದೂಸ್ತಾನಿ, ಇಂಗ್ಲಿಷು ಭಾಷೆಗಳಲ್ಲಿ ಅಪ್ರತಿಮ ವಿದ್ವಾಂಸರು. ಹಲವು ಗ್ರಂಥಗಳನ್ನು ಬರೆದಿದ್ದಾರೆ ಒಂದು ಉರ್ದು ವಾರಪತ್ರಿಕೆಯನ್ನೂ, ಒಂದು ಇಂಗ್ಲಿಷ್ ವಾರಪತ್ರಿಕೆಯನ್ನೂ ನಡೆಸುತ್ತಿದ್ದರು

ಮದ್ರಾಸು ಕಾರ್ಪರೇಶನಿಗೆ ಹಲವು ವರ್ಷಗಳಿಂದ ಸದಸ್ಯರಾಗಿದ್ದ ವಿಷಯವು ಅವರ ಮೇಲೆ ಜನರಿಗಿದ್ದ ಆದರವನ್ನು ತಿಳಿಸುತ್ತದೆ ಕಾಂಗ್ರೆಸು ಚುನಾವಣೆಯಲ್ಲಿ ವಿಜಯಿಗಳಾಗಿ, ಮಂತ್ರಿಮಂಡಳದಲ್ಲಿ ವಿರಾಜಿತರಾದ ಇವರು, ತುಂಗಭದ್ರೆಯ ಅಣೆಕಟ್ಟಿನ ಕುರಿತು ಹೆಚ್ಚಿನ ಅನುಕೂಲರೂ ಆಸಕ್ತರೂ ಆಗಿದ್ದರು.

ಇವರ ಬಹಳ ಕಾಲದಿಂದಲೇ ರಾಷ್ಟ್ರೀಯ ಚಳವಳದಲ್ಲಿ ಭಾಗವಹಿಸಿದ್ದರು. ಖಿಲಾಫತ್ ಪ್ರಕರಣದಲ್ಲಿ ಯಾಕೂಬ್ ಹಸನರ ಪ್ರಮುಖರಿದ್ದರು. ೧೯೩೦ರಲ್ಲಿ ಅವರು ಲಂಡನಿಗೆ ತೆರಳಿದ್ದರ ಅಂತರ್‌ರಾಷ್ಟ್ರೀಯ ಮುಸ್ಲಿಮರ ಕ್ಷೇಮ ಚಿಂತನೆಯ ವಿಚಾರವೂ ಅವರಲ್ಲಿತ್ತು!

ಎರಡು ಸಲ ಸೆರೆಮನೆ

೧೯೨೧ರಲ್ಲಿ ಕಲ್ಲಿಕೋಟೆಗೆ ಹೋಗಿ ಅಲ್ಲಿ ಮಸ್ಲಿಮರಿಗೆ ಯೋಗ್ಯ ಸಲಹೆಗಳನ್ನಿತ್ತು ಯಾಕೂಬ್ ಹಸನರು ಮರಳಿ ಬರುವಾಗ ಸೆರೆಮನೆಗೊಯ್ಯಲ್ಪಟ್ಟರು! ಆ ಸಲ ಆರ ತಿಂಗಳ ಸಜೆಯಾಯಿತು ಆ ವೇಳೆ ತಂಜಾವೂರಿನ ರಾಜಕೀಯ ಪರಿಷತ್ತಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟು ಅಲ್ಲಿ ಮಾಡಿದ ಭಾಷಣಕ್ಕಾಗಿ ಸೆರೆಮನೆಯನ್ನ ಎರಡು ವರ್ಷಗಳ ತನಕ ಅನುಭವಿಸಿದರು!

ಇವರ ಪತ್ನಿ ಟರ್ಕಿಯ ಮುಸಲ್ಮಾನ ಮಹಿಳೆ ಕಾಂಗ್ರೆಸ ಚಟುವಟಿಕೆಗಳಲ್ಲಿ ಬಹಳ ಸಹಾನುಭೂತಿಯವರು! ಮಗನು ಇನ್ನೂ ವಿದ್ಯಾರ್ಥಿಯಾಗಿರುವನು! ಇಂತಹ ಪುಣ್ಯಾತ್ಮರು ಇಂದು ಕಣ್ಮರೆಯಾದುದರಿಂದ ಭಾರತಕ್ಕೆ ಮಹತ್ತಾದ ನಷ್ಟವಾಗಿದೆ! ದಕ್ಷಿಣ ಭಾರತವು ಸಹಿಸಲಾರದ ನಷ್ಟವನ್ನು ಹೊಂದಿದೆ!

ಅಖಿಲ ಕರ್ನಾಟಕ ಮಕ್ಕಳ ಕೂಟ

ಇದು ಬೆಂಗಳೂರು ನಗರ ಚಾಮರಾಜಪೇಟೆಯಲ್ಲಿ ತಾ ೫-೪-೧೯೪೦ರಿಂದ ಮೂರು ದಿನಗಳ ವರೆಗೆ ಅತ್ಯಂತ ವಿಜೃಂಭಣೆಗಳಿಂದ ಜರಗಿತು ಸರ್ ಮಿರ್ಜಾ ಎಂ ಇಸ್ಮಾಯಿಲ್, ಇವರು ಪ್ರಾರಂಭೋತ್ಸವ ಮಾಡಿದರು.

ನಿಮ್ಮ ಜಾಹಿರಾತುಗಳನ್ನು ಸ್ವದೇಶಾಭಿಮಾನಿಗೆ ಕೊಡಿರಿ

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.



ನಿಮ್ಮ ಅದೃಷ್ಟ!

ಪೋಸ್ಟು ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿರಿ. ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ಮಹಿವಾಟುಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ, ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ. 1-9-0ಕ್ಕೆ ವಿ. ಪಿ. ಮೂಲಕ ತಿಳಿಸುವೆವು. ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.

ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು. ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 100 ಇನಾಮು ಕೊಡಲಾಗುವುದು

ANAND JOTISH ASHRAM,
Post Box No 27 (S.A.M.) Amritsar.

ರಾಷ್ಟ್ರದ ವಿಭಜನೆಯು ವಿದ್ರೋಹಕರವು!

ಮುಸ್ಲಿಂ ಮುಖಂಡರ ಪ್ರತಿಭಟನೆ

ರಾಜಾಜಿಯವರ ಖಂಡನೆ



ರಾಜಾಜಿ

ಭಾರತವನ್ನು ಎರಡು ಭಾಗ ಮಾಡಬಾರದು

ಮುಸ್ಲಿಂ ಮುಖಂಡರ ಹೇಳಿಕೆ

"ಭಾರತವನ್ನು ಮುಸ್ಲಿಂ ಭಾರತವೆಂದೂ ಹಿಂದೂ ಭಾರತವೆಂದೂ ಎರಡು ಭಾಗ ಮಾಡುವ ಸಲಹೆಯು ಮುಸ್ಲಿಮರಿಗೂ ಹಿಂದುಗಳಿಗೂ ಬಹಳ ಹಾನಿಕರ. ಉಭಯತ್ರರ ಪ್ರಗತಿಗೆ ಇದು ತೀರಾ ವಿರುದ್ಧವಾಗುತ್ತದೆ" ಎಂಬುದಾಗಿ ಮಹಮ್ಮದ್ ರಾಷೀದ್ ಅಲಿ ಬೇಗರು ಒಂದು ಹೇಳಿಕೆಯನ್ನು ಕೊಟ್ಟಿರುತ್ತಾರೆ. ಇತ್ತೀಚೆಗೆ ಇವರು ಮುಸ್ಲಿಂ ಲೀಗಿನ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ. ಇವರು ಮುಸ್ಲಿಂ ಲೀಗಿನ ಪ್ರಗತಿಪರ ಪಂಗಡದ ಅಧ್ಯಕ್ಷರಾಗಿದ್ದರು.

"ಭಾರತವನ್ನು ಮುಸ್ಲಿಂ ಭಾರತ ಮತ್ತು ಹಿಂದೂ ಭಾರತ ಎಂಬುದಾಗಿ ಭಾಗ ಮಾಡಿದರೆ ಜಾತೀಯ ಐಕ್ಯಮತ್ಯವು ರೂಪುಗೊಳ್ಳುವುದಿಲ್ಲ. ಅಲ್ಪಸಂಖ್ಯಾಕರ ಸಮಸ್ಯೆಯು ಹಾಗೆಯೇ ಉಳಿಯುತ್ತದೆ. ಜಾತೀಯ ಪಂಗಡಗಳ ಭಾವನೆಯು ಹೆಚ್ಚುತ್ತದೆ. ಹಿಂದೂಗಳೇ ಹೆಚ್ಚಾಗಿರುವ ಭಾಗಗಳಲ್ಲಿ ಮುಸ್ಲಿಮರಿಗೆ ಹೆಚ್ಚು ಕಷ್ಟಗಳು ಬರುತ್ತವೆ. ಆದ್ದರಿಂದ ಭಾರತವನ್ನು ಎರಡು ಭಾಗ ಮಾಡಬಾರದು' ಎಂದಿರುತ್ತಾರೆ.

ಇಬ್ಭಾಗದಿಂದ ಸರ್ವನಾಶವಾಗುವುದು

ಭಾರತವನ್ನು ಹಿಂದೂ ಮುಸ್ಲಿಮರೊಳಗೆ ಎರಡು ರಾಷ್ಟ್ರಗಳನ್ನಾಗಿ ಮಾಡಬೇಕೆಂದು ಹೇಳಲಾಗುತ್ತಿರುವ ಅಭಿಪ್ರಾಯವನ್ನು ಶ್ರೀ ಸಿ. ರಾಜಗೋಪಾಲಾಚಾರಿಯವರು ಬಹಳ ತೀವ್ರವಾಗಿ ಖಂಡಿಸಿ ಈ ರೀತಿ ಹೇಳುತ್ತಾರೆ.

"ಭಾರತವು ಒಂದು ರಾಷ್ಟ್ರವೆಂದು ಹೇಳುವುದು ತಪ್ಪು ಭಾವನೆಯೆಂದು ಜಿನ್ನಾರವರು ಹೇಳುತ್ತಾರೆ. ಭಾರತವು ಒಂದು ಎಂಬುದಾಗಿ ಹೇಳುವುದು ತಪ್ಪು ಭಾವನೆಯಲ್ಲ. ಆದರೆ ಎರಡು ರಾಷ್ಟ್ರಗಳನ್ನು ಮಾಡಬೇಕೆಂಬುದು ತೀರಾ ಕೆಡುಕಾದ ಭಾವನೆ. ಇದರಿಂದ ಭಾರತಕ್ಕೆ ಬಹಳ ಅನಿಷ್ಟವಾಗುವುದು.

"ಭಾರತವನ್ನು ಎರಡು ಪಾಲು ಮಾಡುವುದು ಯಾವ ದೃಷ್ಟಿಯಿಂದಲೂ ಕೂಡ ಸರಿಯಾದುದಲ್ಲ, ಮತ್ತು ವ್ಯವಹಾರಯೋಗ್ಯವಾದುದೂ ಅಲ್ಲವೆಂದು ಕಾಣುತ್ತದೆ. ಮುಸ್ಲಿಂ ಪ್ರಾಂತ್ಯಗಳನ್ನು ನಿರ್ಮಿಸಿ ಭಾರತದ ಪ್ರಜೆಗಳ ಅವಶ್ಯಕತೆಗೆ ತಕ್ಕಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡದೆ ಕೇವಲ ತಮ್ಮ ಅಭಿವೃದ್ಧಿಯನ್ನು ನೋಡಿಕೊಂಡು ಕೇಂದ್ರ ಸರಕಾರದಲ್ಲಿ ರಾಜಕೀಯ ಶಕ್ತಿಯನ್ನು ಪ್ರಯೋಗಿಸಬೇಕೆಂಬುದು ಜಿನ್ನಾರವರ ಇಷ್ಟ. ಜಿನ್ನಾರವರು ತಮ್ಮ ಇಷ್ಟವನ್ನು ಪೂರ್ತಿ ಮಾಡಿಕೊಳ್ಳುವುದಕ್ಕಾಗಿ ಭಾರತವನ್ನು ಎರಡು ಪಾಲು ಮಾಡುವುದೊಂದೇ ಅಲ್ಲದೆ ಇನ್ನೂ ಏನಾದರೂ ಸಂಬಂಧನೆಗಳನ್ನು ಕೇಳಬಹುದು"

ಭಾರತವೇ ಮುಸ್ಲಿಮರ ಮಾತೃಭೂಮಿ

ಚಾಗ್ಲಾರವರ ಹೇಳಿಕೆ

'ಭಾರತವೇ ತಮ್ಮ ಮಾತೃಭೂಮಿಯೆಂದು ನಂಬಿಕೊಂಡಿರುವ ಮುಸ್ಲಿಮರಿಗೆಲ್ಲಾ ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಜಿನ್ನಾರವರು ಮಾಡಿದ ಅಧ್ಯಕ್ಷ ಭಾಷಣವೂ, ಈ ಬಗ್ಗೆ ಮುಸ್ಲಿಂ ಲೀಗ್ ನಿರ್ಣಯವೂ ಅತ್ಯಂತ ನಿರಾಶೆಯನ್ನುಂಟು ಮಾಡಿದೆ. ಜಿನ್ನಾರವರ ವರ್ತನೆ ಸರಿಯಲ್ಲ. ಭಾರತದಲ್ಲಿರುವ ಮುಸ್ಲಿಮರು ಘನತೆಯುಳ್ಳ ನಮ್ಮ ದೊಡ್ಡ ಭಾರತೀಯ ಜನಾಂಗದ ಒಂದು ಮುಖ್ಯ ಭಾಗವಾಗಿದ್ದಾರೆ. ಭಾರತದ ಮುಸ್ಲಿಮರು ಭಾರತೀಯ ಜನಾಂಗಕ್ಕೆ ಸೇರಿದವರೆಂದು ಹೇಳಿಕೊಳ್ಳಲು ಹೆಮ್ಮೆ ಪಡುವವರಾಗಿದ್ದಾರೆ' ಎಂಬದಾಗಿ ಶ್ರೀ ಚಾಗ್ಲಾರವರು ಒಂದು ಅಮೌಲ್ಯವಾದ ಹೇಳಿಕೆಯನ್ನು ಹೊರಡಿಸಿದ್ದಾರೆ.

"ಜಿನ್ನಾರವರ ರಾಜಕೀಯ ತಿಳುವಳಿಕೆ ಇಷ್ಟು ವಕ್ರವಾಗಿರುವುದು ಖೇದವೆನಿಸುತ್ತದೆ. ಅವರು ರಾಜಕೀಯ ದೂರದರ್ಶಿಗಳಲ್ಲ. ಮುಸ್ಲಿಮರ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಮುಸ್ಲಿಂ ರಾಜ್ಯವನ್ನು ಭಾರತದಲ್ಲಿ ರಚಿಸಬೇಕೆಂದು ಜಿನ್ನಾರವರು ಹೇಳುವುದು ತೀರಾ ಅಕ್ರಮವಾದುದು, ರಾಷ್ಟ್ರಘಾತುಕವಾದುದು. ಭಾರತವೇ ಮುಸ್ಲಿಮರ ಮಾತೃಭೂಮಿಯಾಗಿದೆ. ಭಾರತದ ಮುಸ್ಲಿಮರಿಗೆ ಬೇರೊಂದು ಮಾತೃಭೂಮಿ ಬೇಕೆಂದು ವಾದಿಸುವುದು ಜಿನ್ನಾರವರ ಕುತಂತ್ರವನ್ನು ವ್ಯಕ್ತಗೊಳಿಸುತ್ತದೆ. ಹಿಂದುಗಳೂ ಮಹಮ್ಮದೀಯರೂ ಬೇರೆ ಬೇರೆ ರಾಜ್ಯಗಳಾಗಿ ವಿಂಗಡಿಸಲ್ಪಟ್ಟನಂತರ ಹಿಂದೂ ಮುಸ್ಲಿಂ ಐಕ್ಯಮತ್ಯವೂ ಸೌಹಾರ್ದತೆಯೂ ಸಾಧ್ಯವಾಗುವುದೆಂದು ಜಿನ್ನಾರವರು ನಂಬುತ್ತಾರೆಯೇ?



ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೀಕರಾನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತವೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳೆಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇರುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದುದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ

ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು   ಬ್ರಾಂಚ್: ಬೆಂಗ್ರೆ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000.   ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಆಸ್ತಿ ಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು.   ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%   ನಿರಖು ಠೇವಣಾತಿ 12 ತಿಂಗಳಿಗೆ 4½

6 ತಿಂಗಳಿಗೆ 4%   24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೆಂಕಟಕೃಷ್ಣ, ಮೆನೇಜಿಂಗ್ ಡೈರೆಕ್ಟರ್.

ಸಿನೆಮಾ ಪುಟ

ದುರ್ಗಾ ಖೋಟೆ

ಕಥೆಯನ್ನು ಹಿಂದಿರುಗಿ ಕೊಟ್ಟುಬಿಡಿ

ಶಾಂತಾರಾಮರೊಡನೆ ಕೇಳಿದರಂತೆ

ಪೂನಾ ಪ್ರಭಾತ ಚಿತ್ರ ಸ್ಟುಡಿಯೋದಿಂದ ಇದೊಂದು ಸುದ್ದಿ! ಮರಾಠಿಯ ಪ್ರಸಿದ್ಧ ಚಲನಚಿತ್ರ ಕಥಾ ನಿರ್ಮಾಪಕರಾದ ಪ್ರೊ। ಎನ್. ಎಸ್. ಫಾಡ್ಕೆಯವರು ಪ್ರಭಾತ ಚಿತ್ರಕ್ಕಾಗಿ ಒಂದು ಕಥೆಯನ್ನು ಬರೆದು ಕೊಟ್ಟರು. ನಿರ್ದೇಶಕ ಶಾಂತಾರಾಮರು ಆ ಕಥೆಯಲ್ಲಿ ಕೆಲವು ವ್ಯತ್ಯಾಸಗಳಾಗಬೇಕೆಂದು ಸೂಚಿಸಿದರು ಆದರೆ ಪ್ರೊಫೆಸರರು ಅದಕ್ಕೆ ಒಪ್ಪಲಿಲ್ಲ. ಏನುಮಾಡಿದರೂ ಇಬ್ಬರೊಳಗೆ ಯೋಗ್ಯ ಒಪ್ಪಂದವಾಗದಿರಲು ಕಡೆಗೆ ಶಾಂತಾರಾಮರ ಕೈಯಿಂದ ತನ್ನ ಕಥೆಯನ್ನೇ ಅವರು ಹಿಂದೆ ಪಡಕೊಂಡರು.

ಮಿನೆರ್ವಾ ಚಿತ್ರದಿಂದ

ಪ್ರಭಾತದ ನಿರ್ದೇಶಕ ಶಾಂತಾರಾಮರು ತನ್ನ ಮುಂದಿನ ಚಿತ್ರವಾದ ಪಡೋಶಿಯ ತಯಾರಿಯಲ್ಲಿರುವರು. ಅದಕ್ಕೆ ಬೇಕಾದ ನಟವರ್ಗದವರನ್ನು ಆರಿಸುವುದಕ್ಕಾಗಿ ಅವರು ಬೊಂಬಯಿಗೆ ತೆರಳಿರುವರು.

ಅವರಲ್ಲಿ ಈಗಾಗಲೇ ಆರಿಸಿದ ನಟರೆಂದರೆ ಶ್ರೀ ಗಜಾನನ ಜಹಗೀರ್ದಾರರು. ಅವರು ಮೊದಲು ಮಿನೆರ್ವಾ ಚಿತ್ರದಲ್ಲಿ ನಿರ್ದೇಶಕರೂ ನಟರೂ ಆಗಿದ್ದರು. ಆ ಸ್ಟುಡಿಯೋದಲ್ಲಿ ಕೆಲಸ ಮಾಡುವುದನ್ನು ಈಗ ಅವರು ಬಿಟ್ಟು ಕೊಟ್ಟಿರುವರು.

ಜಗದೀಶ ಫಿಲ್ಮ್ಸ

ಮಿಸ್ ಲೀಲಾಳ ಮುಖ್ಯಪಾತ್ರವೆ?

ಜಗದೀಶ ಫಿಲ್ಮ್ ಕಂಪೆನಿಯ ಮುಂದಿನ ಚಿತ್ರವನ್ನು ಶ್ರೀ। ವೈ. ವಿ. ರಾಯರು ಬೇಗನೇ ತಯಾರಿಸುವರು. ಇದು ತೆಲುಗು ಸಾಮಾಜಿಕ ಚಿತ್ರವು. ಅದರ ಹೆಸರು ಇಧುವರೆಗೂ ತಿಳಿದಿಲ್ಲ. ವಿಶ್ವಮೋಹಿನಿಯೆಂದಿರಬಹುದೆಂದು ಸುದ್ದಿಯಿದೆ.

ಇದರಲ್ಲಿ ಕಾಂಚನಮಾಲಳಿಗೆ ಪಾತ್ರವೇ ಕೊಡಲಾಗುವುದಿಲ್ಲವೆಂದು ವಾರ್ತೆ. ಮಿಸ್ ಲೀಲಳಿಗೆ ಚಂದಿಕೆಯ ಮುಖ್ಯ ಪಾತ್ರವು ಕೊಡಲಾಗುವುದಂತೆ. ಶ್ರೀ। ವೈ. ವಿ. ರಾಯರು ನಿರ್ದೇಶಕರೂ ಅಭಿನೇತರೂ ಆಗುವರು.

'ರಾಜಾ ಗೋಪೀಚಂದ್'

ತಮಿಳು ಭಾಷಾಂತರ

ತಿರುಚಿನಾಪಳ್ಳಿ ಜ್ಯೋತಿ ಪಿಕ್ಚರ್ಸವರು ಬೇಗನೇ ತಮ್ಮ ಅರುಣಗಿರಿ ಚಿತ್ರವನ್ನು ಪೂರ್ಣ ಮುಗಿಸಿ, ಬೊಂಬಯಿಗೆ ಹೋಗಿ ರಾಜಗೋಪಿಚಂದ್ ಚಿತ್ರವನ್ನು ತಮಿಳಿನಲ್ಲಿ ಭಾಷಾಂತರಿಸಿ ಮಾಡಿಸುವುದಾಗಿ ಒಂದು ಆಲೋಚನೆಯಿದೆ.

ಸುಮಂಗಲಿಯಲ್ಲಿ ಆಶ್ರಮದೃಶ್ಯ

ಒಂದು ಇಡೀ ಶ್ರಮದರ್ಶನ ಮತ್ತು ಒಂದು ಇಡೀ ರೈಲ್ವೆ ಮೂರನೆ ಕ್ಲಾಸ್ ಕಂಪಾರ್ಟುಮೆಂಟು ಸುಮಂಗಲಿ ಚಿತ್ರದಲ್ಲಿ ಅಂದವಾಗಿ ಕೊಡಲಾಗಿದೆ. ಇದು ಆನಂದ ಸೇವಾಶ್ರಮದ ದೃಶ್ಯ. ನಾಗಯ್ಯ ಪಂತುಲು ಅದರಲ್ಲಿ ಉತ್ಕೃಷ್ಟ ಅಭಿನಯವನ್ನು ತೋರಿಸುತ್ತಾರೆ. ಆಶ್ರಮದ ಮೇಲ್ವಿಚಾರಕರಾದವರೇ ಪಂತುಲು ಅವರು.

ಶಾಂತಾ ಆಪ್ಟೆ

ಶಾಂತಾ ಆಪ್ಟೆಯು ಬರುವ ಮೇ ತಿಂಗಳಲ್ಲಿ ಮದ್ರಾಸಿಗೆ ಬರಲಿರುವಳು. ತಮಿಳು ಚಿತ್ರದಲ್ಲಿ ಅಭಿನಯಿಸಲುಸಿದ್ಧತೆ ಮಾಡುವಳು. ತ್ಯಾಗರಾಜ ಭಾಗವತರು ಸಹ ನಟರಾಗುವರು. ಶ್ರೀ। ವೈ. ವಿ. ರಾಯರು ಅದರ ನಿರ್ದೇಶಕರಾಗುವರೆಂದೂ ತಿಳಿದಿದೆ. ಬಹುಶಃ ಬರುವ ಆಗೋಸ್ತು ತಿಂಗಳಲ್ಲಿ ಅದು ಸಿದ್ಧವಾಗುವುದು.

ಬರ್ನಾರ್ಡ್ ಷಾರವರ ನಾಟಕಗಳು

ಇನ್ನೂ ಮೂರು ಚಲನಚಿತ್ರಕ್ಕೆ ಬರುವವು

ಬರ್ನಾರ್ಡ್ ಷಾರವರ ನಾಟಕಗಳನ್ನು ಚಲಚಿತ್ರಕ್ಕೆ ತರುವ ಪ್ರಯತ್ನವು ಹೆಚ್ಚಾಗಿ ನಡೆದು ಈಚೆಗೆ ಷಾರವರು ತಮ್ಮ ಮೂರು ನಾಟಕಗಳನ್ನು ಚಲನಚಿತ್ರದಲ್ಲಿ ತಯಾರಿಸಲು ಅನುಮತಿಯಿತ್ತಿರುವರು. ಇವರು ಬರೆದಿರುವ ನಾಟಕಗಳಲ್ಲಿ ಪಿಗ್ಮೇಲಿಯನ್ ಎಂಬುದು ಚಲನಚಿತ್ರದಲ್ಲಿ ತಯಾರಾಗಿ ಅದು ಯುರೋಪು ಮತ್ತು ಅಮೇರಿಕಾಗಳಲ್ಲೆಲ್ಲಾ ಬಹುಮಟ್ಟಿಗೆ ಪ್ರಶಂಸಿಸಲ್ಪಟ್ಟಿದ್ದಿತು. ಆ ಚಿತ್ರದಲ್ಲಿ ಮಿಸ್ ವೆಂಡಿಹಿಲ್ಲರಳು ಪಾತ್ರವಹಿಸಿದ್ದಳು. ಆಕೆಯೇ ಈಗ ಬರ್ನಾರ್ಡ್ ಷಾರವರ ಹೊಸ ನಾಟಕಗಳ ಚಲನಚಿತ್ರಗಳಲ್ಲಿಯೂ ಪಾತ್ರವಹಿಸುವಳು. ಆದರೆ ಅವರ ಯಾವ ನಾಟಕಗಳನ್ನು ಆರಿಸಿಕೊಳ್ಳಲಾಗುವದೆಂಬುದು ಗೊತ್ತಾಗಿಲ್ಲ. 'ಮೇಜರ್ ದರ್ಬಾರಾ' 'ಡಾಕ್ಟರ್ ಡೈಲೆಮ್ಮಾ' ಈ ಎರಡು ನಾಟಕಗಳನ್ನೂ ಆರಿಸಿಕೊಳ್ಳಲಾಗುವದೆಂದು ಊಹಿಸಲಾಗಿದೆ. ಈ ಎರಡು ನಾಟಕಗಳೂ ಷಾರವರ ಮೊದಮೊದಲಿನ ನಾಟಕಗಳು.

ಫ್ರೆಢರಿಕ್ ಮಾರ್ಚ್ ಹಿಂತಿರುಗಿದ್ದಾನೆ

ಫ್ರೆಡರಿಕ್ ಮಾರ್ಚನು ಬಹಳ ದಿನಗಳಿಂದ ಚಲನಚಿತ್ರದಲ್ಲಿ ಪಾತ್ರವಹಿಸಿರಲಿಲ್ಲ. 'ಎನ್ಸ್ಟಾರ್ ಈಸ್ ಬಾರನ್' ಎಂಬುದೇ ಆತನು ಪಾತ್ರವಹಿಸಿದ್ದ ಕೊನೆಯ ಚಿತ್ರ. ಆದರೆ ಈಗ ಆತನು ಸೆಸಿಲ್ ಬಿ. ಡಿಮಿಲ್ಲೆಯ ತಯಾರಿಕೆಯಾದ 'ನಾರ್ತ್ ವೆಸ್ಟ್ ಮೌಂಟೆಡ್ ಪೊಲೀಸ್' ಎಂಬ ಚಿತ್ರದಲ್ಲಿ ಪಾತ್ರವಹಿಸಲಿರುವನು. ಫ್ರೆಡರಿಕ್ ಮಾರ್ಚನಿಗೂ ಡಿಮೆಲ್ಲಿಗೂ ಬಹಳ ಅನ್ಯೋನ್ಯ 'ದಿ ಸೈನ್ ಆಫ್ ದಿ ಕ್ರಾಸ್' ಮತ್ತು 'ಬಕ್ಕನೀರ್' ಎಂಬ ಚಿತ್ರಗಳಲ್ಲಿ ಮಾರ್ಚನು ಪಾತ್ರವಹಿಸಿದಾಗ ಡಿಮಿಲೆಯೇ ಅವುಗಳನ್ನು ತಯಾರಿಸಿದ್ದನು

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Pandurang Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕೊಡುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ನೋಟಗಳು

ಮೂರು ವರ್ಷಗಳ ವರೆಗೆ ಹೋರಾಡಿದ ಜಪಾನು, ಇಂದು ಹಲವು ಮಿಲಿಯ ಜನಸಂಖ್ಯೆಯುಳ್ಳ ಚೈನಾವನ್ನು 'ತನ್ನ ಪಶುಶಕ್ತಿಯಿಂದ ಹದಕ್ಕೆ ತರುವುದು ಅಸಾಧ್ಯವಾಗಿದೆಯೆಂದು ತಿಳಿದುಕೊಂಡಂತಿದೆ!

❖

ಒಂದು ಜನಾಂಗದ ರಾಷ್ಟ್ರೀಯತೆಯನ್ನು ಸಿಡಿ ಗುಂಡುಗಳಿಂದ—ಭಗ್ನಗೊಳಿಸಲು ಸಾಧ್ಯವಿಲ್ಲವೆಂದು, ಜಗತ್ತಿನ ಎಲ್ಲಾ ಸಾಮ್ರಾಜ್ಯ ಶಾಹೀ ರಾಷ್ಟ್ರಗಳಿಗೂ ಇದು ದೊಡ್ಡದೊಂದು ಪಾಠವಾಗಿದೆ

❖

ಜಪಾನೀಯರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವ ಪ್ರಜಾಪ್ರಭುತ್ವ ರಾಜ್ಯಪದ್ಧತಿಯನ್ನು ಅನುಸರಿಸುವುದರಲ್ಲಿ ಬಹಳ ಪ್ರಖ್ಯಾತರಾದವರು

❖

ಜಪಾನೀಯರು ಯಾವುದನ್ನಾಗಲಿ, ಎಂತಹುದನ್ನಾಗಲಿ ಅನುಸರಿಸಬಲ್ಲರು!

❖

ಈಗ ಅವರು ಚಿಯಾಂಗರನ್ನು ಸೋಲಿಸಿ ವಾಂಗರನ್ನು ತಮ್ಮ ಕೈಗೊಂಬೆ ಸರಕಾರದ ಒಡೆಯರಾಗಿ ಮಾಡಿಕೊಂಡಿದ್ದಾರೆ

❖

ಇಂದಿನ ಯುದ್ಧವನ್ನು ಹಿಟ್ಲರನು ಕುಶಲತೆಯಿಂದಾಗಲಿ, ಹೆದರಿಕೆಯಿಂದಾಗಲಿ ಒಮ್ಮೆ ಕೊನೆಗಾಣಿಸಿ ಬಿಡಬೇಕೆಂದೇ ಆಲೋಚಿಸಿರುವಂತಿದೆ

❖

ಹಾಗಾದರೆ ಇಂಗ್ಲೆಂಡಿನ ಮೇಲಾಗಲಿ ಪೋಲೆಂಡಿನ ಮೇಲಾಗಲಿ ಬಾಂಬುಗಳನ್ನು ಸುರಿಸಬೇಕೆಂಬ ಹಿಟ್ಲರನ ಮಹತ್ವಾಕಾಂಕ್ಷೆಯು ಪೂರೈಸಿದಂತಾಗಲಿಲ್ಲವಷ್ಟೆ?

❖

ಹಿಂದಿನ ಆರ್ಭಟೆಗಳೆಲ್ಲಾ ಬರಿಯ ಶುಷ್ಕವಾದ ವಿಚಾರಗಳು ಹಿಟ್ಲರನೇ ಮುಸಲನಿಯೊಡನೆ ಸಂಧಿಮಾಡಿಕೊಳ್ಳಲು ಅಪೇಕ್ಷಿಸುತ್ತಾನೆ

❖

ಹಾಗೆಂದೇ ಉಭಯ ಸರ್ವಾಧಿಕಾರಿಗಳೂ ಮೊನ್ನೆ ಮೊನ್ನೆ ಭೇಟಿಯಾದರು.

❖

ಹಿಟ್ಲರನು ಮುಸಲನಿಯನ್ನು ಮಂಕುಮರುಳುಮಾಡುತ್ತಾನೆ.

❖

ಇದರಲ್ಲಿ ಕೊನೆಗೆ ಯಾರು ಗೆಲ್ಲಲಿರುವರೆಂಬ ವಿಷಯ ಮಾತ್ರ ಮುಂದಕ್ಕೆ ನೋಡತಕ್ಕದ್ದಿದೆ.

❖

ಒಂದು ಕಡೆಯಿಂದ ಸುಭಾಸ ಬೋಸರು, ಇನ್ನೊಂದು ಕಡೆಯಿಂದ ಜಿನ್ನರು ಕಾಂಗ್ರೆಸ್ಸನ್ನು ಬಹಳವಾಗಿ ಬಾಧಿಸುತ್ತಾರೆ!

❖

ಬ್ರಿಟನಿನೊಡನೆ ಒಪ್ಪಂದಕ್ಕೆ ಬರುವುದನ್ನು ನಾನು ಸಹಿಸೆನೆಂದು ಬೋಸರೂ ಕಾಂಗ್ರೆಸು ತಿರಿಗಿ ಅಧಿಕಾರಕ್ಕೆ ಬರುವುದನ್ನು ನಾನು ಸಹಿಸೆನೆಂದು ಜಿನ್ನರೂ ಆರ್ಭಟಿಸುವರು!

❖

ಮೂರನೆಯ ಪಂಗಡವು ಇದರ ಪ್ರಯೋಜನವನ್ನು ಪಡೆದಿದೆ

❖

ಕಾಂಗ್ರೆಸ್ಸಿನಲ್ಲಿ ಕಲಹಗಳುಂಟಾಗಿವೆಯೆಂದೂ ಕಾಂಗೆಸನ್ನು ಮುರಿಯಲು ಮುಸ್ಲಿಂ ಲೀಗು ಯೋಗ್ಯ ಆಯುಧವೆಂದೂ ಬ್ರಿಟಿಷರು ನಂಬುತ್ತಿದ್ದಾರೆ

❖

ಭಾರತವನ್ನು ಎರಡು ಭಾಗವಾಗಿ ಮಾಡಿಬಿಟ್ಟರೆ ಮುಸ್ಲಿಂ ಲೀಗಿನ ಜಿನ್ನರಿಗೂ, ಅವರ ಪ್ರೋತ್ಸಾಹಕರಿಗೂ ಹಿಡಿದ ಕೆಲಸ ಪೂರೈಸಿದ ಹಾಗಾಯಿತು! ಆದರೆ ಅನೇಕ ವರ್ಷಗಳ ಸಂಕಷ್ಟ ಸ್ವಾರ್ಥತ್ಯಾಗಗಳು ನೀರಿನ ಮೇಲೆ ಹೋಮವಿಟ್ಟಂತಾಯಿತೆಂದು ದೇಶಾಭಿಮಾನಿಗಳು ಮಾತ್ರ ಕೊರಗುತ್ತಿದ್ದಾರೆ!

❖

ಆದರೆ ಪುಣ್ಯಕ್ಕೆ ಮುಸಲ್ಮಾನರೇ ಜಿನ್ನರ ಈ ಎರಡು ಜನಾಂಗವಾದವನ್ನು ತೀವ್ರ ಪ್ರತಿಭಟಿಸಿರುವರು ಹಲವರು ಮುಸ್ಲಿಂ ಲೀಗಿನ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿರುವರು!

❖

ಗಾಂಧಿಜಿಯವರು ಬೇರೆಯೇ ಕಾರ್ಯಕ್ರಮಕ್ಕೆ ತೊಡಗಿದ್ದಾರೆ! ಬೆದರಿಕೆ, ಆರ್ಭಟೆಗಳಿಂದ ಇತರ ಮುಖಂಡರು ಮುಂದೊತ್ತುವಾಗ, ಚರಕಾ ಖಾದಿಗಳಿಂದ ಪರ್ಯಾದ ಋಷಿಯು ಹೊಸ ಹೆಜ್ಜೆಯಿಡುತ್ತಿದ್ದಾರೆ

❖

ಎಲ್ಲೆಲ್ಲೂ ಸತ್ಯಾಗ್ರಹ ಸಮಿತಿಗಳು ಸ್ಥಾಪಿತವಾಗುತ್ತಲಿವೆ

❖

ಸತ್ಯಾಗ್ರಹಿಗಳು ತನ್ನನ್ನು ಒಂದು ತಿಂಗಳೊಳಗೆ ತೃಪ್ತಿಪಡಿಸಬೇಕೆಂದು ಅವರ ಹೇಳಿಕೆ

❖

ದೇಶದಲ್ಲೆಲ್ಲೂ ಇಂದು ಪ್ರಚಂಡ ಜಾಗೃತಿಯುಂಟಾಗಿದೆ

❖

ಪ್ರಪಂಚದಲ್ಲಿ ಜನ್ಮವೆತ್ತಿದ ಸುಳ್ಳುಗಾರರಲ್ಲಿ ಗೊಬೆಲ್ಸನು ಬಹಳ ಹೆಸರುವಾಸಿಯಾದವನೆಂದು ಪ್ರಕಟವಾಗಿದೆ

❖

ಈ ಮಹಾ ಮಿಥ್ಯವಾದಿಯು ಅನೇಕ ಹೊಸ ಹೊಸ ಯೋಜನೆಗಳನ್ನು ಕಂಡುಹುಡುಕಿರುವನು

❖

ಜಿನ್ನರು ಸುಳ್ಳುಗಾರರೆಂದು ಹೆಸರುವಾಸಿ ಪಡೆಯಲಿಲ್ಲ ಆದರೆ, ಅವರ ಯೋಜನೆಗಳು ಗೊಬೆಲ್ಸನ ಯೋಜನೆಗಳನ್ನೂ ಮಿಗುವಂತಹವುಗಳು

❖

ಭಾರತದಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ರಾಜ್ಯವಿರಬೇಕೆನ್ನುವ ಜಿನ್ನರ ಯೋಜನೆಯು ಗೊಬೆಲ್ಸರ ಬುದ್ಧಿವಂತಿಕೆಯನ್ನೂ ಮೀರಿದುದು

❖

ಗಾಂಧಿಜಿ ಮತ್ತು ರಾಜಾಜಿಯವರು ಇಂತಹ ಸಂಭವಗಳಿಗಾಗಿ ಬಹಳ ಮರುಕಗೊಳ್ಳುತ್ತಾರೆ

❖

ಮುಸ್ಲಿಂ ರಾಜ್ಯದಲ್ಲಿಯೇ ತಾನು ಇರಬಲ್ಲೆನೆಂದರು ಗಾಂಧಿಜಿಯವರು

❖

ರಾಜಾಜಿಯವರು ಒಂದು ಕಥೆ ಹೇಳಿದರು ಇಬ್ಬರು ತಾಯಂದಿರು ಒಂದು ಮಗುವಿನ ಕುರಿತು ವಿವಾದ ಹೂಡಲು, ನ್ಯಾಯಾಧೀಶರು, ಆ ಮಗುವನ್ನು ಇಬ್ಬರೂ ಹಂಚಿಬಿಡಿರೆಂದು ಹೇಳಿದರಂತೆ! ಆಗ ನಿಜವಾದ ತಾಯಿಯು ಆ ಮಾತನ್ನು ಕೇಳಿ, ದುಃಖಿತಳಾಗಿ, ಮಗು ನನ್ನದಲ್ಲ; ಅವಳದೇ ಎಂದಳಂತೆ! ಗಾಂಧಿಜಿಯವರೂ ಹಾಗೆಯೇ ತಾನು ಮುಸ್ಲಿಂ ರಾಜ್ಯದಲ್ಲಿಯೇ ಇರಬಲ್ಲೆನೆನ್ನುತ್ತಾರೆ!

❖

ಜಿನ್ನರ ಯೋಜನೆಯನ್ನು ಹಲವು ಮುಸ್ಲಿಂ ಮುಖಂಡರು ಖಂಡಿಸಿರುವರು. ಅದರಿಂದ ರಾಷ್ಟ್ರಕ್ಕೆ ಮಹಾ ಅನ್ಯಾಯವೇ ಒದಗುವುದೆಂದು ಎಲ್ಲರೂ ಎಚ್ಚರಿಸಿರುವರು.

❖

ರಾಷ್ಟ್ರದ್ರೋಹವನ್ನುಂಟುಮಾಡುವ ಇಂತಹ ಸೂಚನೆಗಳಿಂದ ಜಿನ್ನರು ಧರ್ಮಾಂಧರಾದ ತಮ್ಮ ಕೆಲವು ಹಿಂಬಾಲಕರ ಹೆಚ್ಚು ಬೇಗನೇ ಕಳೆದುಕೊಳ್ಳಲಿರುವರು.

ಧೂಳಿಂದ ಸೇರಿದ ಬಿಸಿ ವಾಯುವು ಶ್ವಾಸಕೋಶಗಳಿಗೆ ರೋಗವನ್ನು ಹಬ್ಬಿಸುತ್ತದೆ

ಗಂಟಲು, ಎದೆ, ಶ್ವಾಸಕೋಶಗಳ ಬೇನೆಗೆ ಪೆಪ್ಸ್ ಶಕ್ತಿದಾದ ಗುಣಕಾರಿ ಔಷಧಿ

ಎಲ್ಲಾ ಕಡೆಗಳಲ್ಲಿ ಬಾಟ್ಲಿಗೆ ರೂ 1ರಂತೆ ಮಾರಲ್ಪಡುತ್ತದೆ

ಪೆಪ್ಸನುಪಯೋಗಿಸಿರಿ

PEPS

ಶ್ವಾಸನೀಯ ಗುಳಿಗೆಗಳು

ರೂ. 550 ಬಹುಮಾನ

ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು ಬೆಲೆ ತಾಮ್ರದ ಆವರಣದ್ದು ರೂ. 1-15-0 ಮೂರಕ್ಕೆ ರೂ 5, ಬೆಳ್ಳಿಯ ಆವರಣದ್ದು ರೂ 2-12-0 ಮತ್ತು ಚಿನ್ನದ ಆವರಣದ್ದು ರೂ 6-8-0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ ವ್ಯಾಪಾರ, ಪರೀಕ್ಷೆ, ಮಹಿಮಾಟು, ಸೋಡ್ರಿ ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು ಬೆಲೆ ತಾಮ್ರದ ಆವರಣ ರೂ. 1-15-0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ. 2-12-0, ಚಿನ್ನದ ಆವರಣ ರೂ. 6-8-0, ಯಾವುದಾದರೂ ಸಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್‌ಫುಲ್ ನಂ. 4ಕ್ಕೆ ಕೇಳಿರಿ, ಬೆಲೆ 5-4-0, 5 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್ ಪವರ್‌ಫುಲ್ ನಂ. 5ಕ್ಕೆ ಕೇಳಿರಿ ಬೆಲೆ 7-8-0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ

ಸೂಚನೆ: ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮು, ಸರಿಯಾಗಿ ಕಾರ್ಯಸಫಲವಾದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ಸರಿಯಾಗಿ ಕಾರ್ಯಸಬೇಕಾದರೆ ಏನೇನಾದರು ಕಷ್ಟಪಡಬೇಕೆಂದಿಲ್ಲ.

ANAND SWAMI,

Anand Bhawan, Post Box No. 27 (S.A.M.) Amritsar.

ಸ್ವಾಸ್ಥ್ಯಕ್ಕೆ ಬ್ರಹ್ಮಚರ್ಯವು ಹಾನಿಕರವಂತೆ

ಒಂದು ಜನಾಂಗವು ಯೋಗ್ಯವೂ ಸುದೃಢವೂ, ಸಬಲವೂ ಆಗಬೇಕಾದರೆ ಅದಕ್ಕೆ ಸೇರಿದ ವ್ಯಕ್ತಿಗಳು ಬ್ರಹ್ಮಚಾರಿಗಳಾಗಿರಬೇಕೆಂದು ಹೇಳುತ್ತಾರೆ. ಬ್ರಹ್ಮಚರ್ಯವನ್ನು ಪುರಸ್ಕರಿಸುವ ಆಧುನಿಕ ಮಹಾತ್ಮರಲ್ಲಿ ಗಾಂಧಿಯವರು ಅಗ್ರಗಣ್ಯರಾಗಿದ್ದಾರೆ. ಹಾಗೆ; ನಮ್ಮ ದೇಶದ ಹಿಂದಿನ ಕಾಲದ ಮುನಿಗಳೂ, ಪುರುಷ ಶ್ರೇಷ್ಠರೂ ಬಹುಮಟ್ಟಿಗೆ ಬ್ರಹ್ಮಚಾರಿಗಳೇ ಆಗಿದ್ದರು. ಪ್ರಪಂಚದಲ್ಲಿ ಜನ್ಮ ತಾಳಿದ ಹೆಚ್ಚಿನ ವಿಭೂತಿ ಪುರುಷರು ಬ್ರಹ್ಮಚರ್ಯದ ವ್ರತವನ್ನಿಟ್ಟುಕೊಂಡಿದ್ದರು. ಆದರೆ ಸ್ವಾಸ್ಥ್ಯಕ್ಕೆ ಬ್ರಹ್ಮಚರ್ಯವು ಹಾನಿಕರವಾಗಿರುವದೆಂದು ಹೇಳುವ ಒಂದು ಪಕ್ಷವು ಈಗ ಬಲವಾಗತೊಡಗಿದೆ. ಲೋಕೋಪಕಾರಿಗಳಾದ ಬ್ರಹ್ಮಚಾರಿಗಳ ಸಾವಿರಾರು ಉದಾಹರಣೆಗಳನ್ನು ಕೊಟ್ಟು ಬ್ರಹ್ಮಚರ್ಯದ ಪ್ರಶಸ್ತ್ಯವನ್ನು ಸಿದ್ಧಮಾಡಬಹುದಾಗಿದೆಯಾದರೂ, ಈ ಪಕ್ಷವು ಕೂಡ ಅಂಕೆ ಸಂಖ್ಯೆಗಳ ಪ್ರಮಾಣಗಳನ್ನು ಕೊಟ್ಟು ಬ್ರಹ್ಮಚರ್ಯದ ಹಾನಿಯನ್ನು ಸಿದ್ಧಮಾಡಿದೆ! ಯುರೋಪಿನ ೧೩ ರಾಷ್ಟ್ರಗಳಲ್ಲಿ ಮಾಡಿದ ಶೋಧನೆಯಿಂದ ತಿಳಿಯುವ ಪ್ರಕಾರ ಅವಿವಾಹಿತ ಬ್ರಹ್ಮಚಾರಿಗಳಲ್ಲಿ ಪ್ರತಿ ಸಾವಿರಕ್ಕೆ ೨೭೫ ಜನರು ಸಾಯುವಾಗ, ವಿಧವೆಯರೂ ವಿಧುರರೂ ಸಾವಿರಕ್ಕೆ ೩೦೫ ರಂತೆ ಸಾಯುತ್ತಾರೆ. ಆದರೆ ವಿವಾಹಿತರು ಸಾಯುವದು ಸಾವಿರಕ್ಕೆ ಕೇವಲ ೧೩೭ರಂತೆ ಮಾತ್ರ ಇರುವದು. ಇದರಿಂದ ದಾಂಪತ್ಯದಿಂದಲೇ ಮನುಷ್ಯನ ಶರೀರಾರೋಗ್ಯವು ಬೆಳೆದು ಅವನು ದೀರ್ಘಾಯುವಾಗುತ್ತಾನೆಂಬುದು ಇದರಿಂದ ಸ್ಪಷ್ಟವಾಗುವದು.

ಲೋಹದ ಕಡಲೆ ತಿಂದರೂ ಜೀರ್ಣವಾಗುವದು

ಅಭ್ಯಾಸ ಬಲದಿಂದ ಯಾರೂ ಏನನ್ನೂ ಮಾಡಬಹುದು. ಸಾಧಿಸಿದವನು ಸಬಲವನ್ನಾದರೂ ನುಂಗುತ್ತಾನೆ. ಈ ಮಾತು ನಿಜವಾಗಿದೆ. ಅಸಾಧ್ಯ ಕೆಲಸದ ಉಪಮೆಯನ್ನು ಕೊಡುವಾಗ 'ಕಬ್ಬಿಣದ ಕಾಳು ತಿಂದ ಹಾಗೆ' ಹೇಳಿದರೆ ತಪ್ಪಾದೀತು. ಅಭ್ಯಾಸವಿದ್ದರೆ ಕಬ್ಬಿಣದ ಕಾಳು ತಿನ್ನುವದು ಹಲ್ವಾ ಜಿಲೇಬಿ ತಿಂದಷ್ಟೇ ಸುಲಭವೆಂಬುದನ್ನು ವಿಜ್ಞಾನಿಗಳು ತೋರಿಸಿ ಕೊಟ್ಟಿರುವರು. ಅಮೇರಿಕದ ಚಿಕಾಗೋ ವಿಶ್ವವಿದ್ಯಾಲಯದ ಒಬ್ಬ ವಿಜ್ಞಾನಿಯು ಒಂದು ಅದ್ಭುತ ಪ್ರಯೋಗವನ್ನು ಮಾಡಿದ್ದಾನೆ. ಅವನು ಒಂದು ಇಲಿಗೆ ಕೆಲವು ಕಬ್ಬಿಣದ ಕಾಳುಗಳನ್ನು ತಿನ್ನಲಿಕ್ಕೆ ಕೊಟ್ಟು, ೧೫ ದಿನಗಳ ತನಕ ಅವು ಆ ಇಲಿಯ ಕರುಳುಗಳಲ್ಲಿ ಬಿದ್ದುಕೊಂಡಿದ್ದವು. ೧೬ನೇ ದಿನ ಅವನ್ನು ಹೊರತೆಗೆದಾಗ ಅವುಗಳ ಭಾರವು ಕಾಲಂಶದಷ್ಟು ಕಡಿಮೆಯಾಗಿತ್ತು! ಬೇರೆ ಕೆಲವು ಇಲಿಗಳಿಗೆ ಇದೇ ರೀತಿ ಲೋಹ ತುಂಡುಗಳ ಭಾರವು ೧/೪ರಷ್ಟು ಕಡಿಮೆಯಾಗಿತ್ತು! ಅಂದರೆ ಅಷ್ಟು ದಿನಗಳಲ್ಲಿ ಇಲಿಗಳು ಅಷ್ಟು ಭಾರದ ಲೋಹಾಂಶವನ್ನು ತಿಂದು ಜೀರ್ಣಿಸಿಕೊಂಡಿದ್ದವು. ಮನುಷ್ಯನ ಹೊಟ್ಟೆಯಲ್ಲಿ ಕೂಡ ಲೋಹದ ಚೂರುಗಳು ಕೆಲವು ದಿನಗಳ ತನಕ ಉಳಿದರೆ ಹೀಗೆಯೇ ಜೀರ್ಣವಾಗುವವು ಎಂಬುದು ಆ ವಿಜ್ಞಾನಿಯ ಸಿದ್ಧಾಂತವಾಗಿದೆ.

ತನ್ನಂತೆ ನಿಲ್ಲುವ ಗಾಡಿ

ಅಪಘಾತಗಳಾಗುವ ಸಂದರ್ಭದಲ್ಲಿ ಗಾಡಿಗಳು ತಮ್ಮಷ್ಟಕ್ಕೆ ನಿಲ್ಲುವ ಹಾಗೆ ಇಂಗ್ಲಾಂಡಿನ ಒಬ್ಬ ಪರಿಶೋಧಕನು ಒಂದು ಹೊಸ ಉಪಾಯವನ್ನು ಕಂಡು ಹಿಡಿದಿದ್ದಾನೆ. ರೈಲು ಗಾಡಿಗಳ ವಿಷಯದಲ್ಲಿ ಅವನ ಈ ಪರಿಶೋಧನೆಯು ಬಹಳಮಟ್ಟಿಗೆ ಸಫಲವಾಗಿದೆ. ರೈಲುಗಾಡಿಯು ಸ್ಟೇಶನಿಗೆ ಸಮೀಪವಾಗುತ್ತಿದ್ದಂತೆ, ಸ್ಟೇಶನಿನ ಸಿಗ್ನಲು ಕೆಳಗೆ ಬಿದ್ದಿರದಿದ್ದರೆ, ಸಮೀಪವಾಪಿಸ ರೈಲು ಗಾಡಿಯ ಇಂಜಿನಿನೊಳಗೆ ಒಂದು ವಿಚಿತ್ರ ಶಬ್ದವು ಉಂಟಾಗುತ್ತದೆ. ಮತ್ತೆ ಆ ಶಬ್ದವು ಕೆಲವು ಸೆಕುಂದಗಳಲ್ಲಿ ... ಯು ತನ್ನಷ್ಟಕ್ಕೆ ... ನಿನ ಸಮೀಪ ರೈಲ... ನಡುವೆ ಈ ... ತ್ತಾರೆ. ಸಿಗ್ನಲ ... ಪಟ್ಟಿಗಳ ಮೇಲೆ ... ಗಾಡಿಗೂ ಈ ... ಸಂಘರ್ಷವು ಆಗ... ಲು ಕೆಳಗೆ ಬೀಳದ ... ಘರ್ಷವು ಆಗ ... ಬೀಳುತ್ತದೆ; ... ಆಗುತ್ತಾ ಒಂದ... ಸಂಪೂರ್ಣ ... ಲನ್ನು ಕೆಳಗಿ... ಬಂಧನದಿಂದ ... ಮುಂದಕ್ಕೆ ನಡೆ... ಇಂಗ್ಲಾಂಡಿನ ... ಕಂಪನಿಯವ... ಖರ್ಚುಮಾಡಿ ... ತನಕ ಈ ಹೊಸ ... ರ್ಥ ತೋರಿಸಿ... ದೂರದ ಮ... ಗುವದು ...

ಸ್ವಾವಿಲಂಬ... ... ವಿಲಾಯ...

... ಬಾರಿ ಉರಿಯುವ ಒಂದು ... ತ ಬೆಂಕಿಕಡ್ಡಿಯನ್ನು ಕಂಡು ಹಿಡಿದ್ದಾನೆ. ಈ ಒಂದು ಕಡ್ಡಿಯಿಂದ ... ಬಾರಿ ಬೆಂಕಿ ಉರಿಸಲಿಕ್ಕಾಗುವದೆ. ಕಡ್ಡಿಯನ್ನು ಯಾವದಾದರೂ ... ಗಟ್ಟಿ ಪದಾರ್ಥದೊಂದಿಗೆ ತಿಕ್ಕಿದಾಗ ಅದಕ್ಕೆ ಬೆಂಕಿ ಹೊತ್ತಿಕೊಳ್ಳುತ್ತದೆ. ... ಯಾವದಾದರೊಂದು ಬೇರೆ ವಸ್ತುವಿನ ... ಸಂಪರ್ಕವಾದ ಒಂದೆರಡು ...ಗಳಲ್ಲಿ ನೊಂದಿಹೋಗುತ್ತದೆ. ಪುನಃ ...ದಾಗ ಪುನಃ ಹೊತ್ತಿಕೊಳ್ಳುವುದು ... ಪುನಃ ಸಂಪರ್ಕವಾದಾಗ ಪುನಃ ...ಕೊಳ್ಳುತ್ತದೆ. ಹೀಗೆ ಸಾವಿರ ... ಆಗುವದು. ವಿಜ್ಞಾನಿಯು ಈ ... ತ ಆ ಸಂಶೋಧನೆಯನ್ನು ಕ್ರಯಕ್ಕೆ ...ಕೊಳ್ಳಲಿಕ್ಕೆ ಪಾಶ್ಚಾತ್ಯ ದೇಶಗಳ ...ಕಿಪೆಟ್ಟಿಗೆ ಕಾರ್ಖಾನೆಯವರು ಬಹಳ ... ಸ್ಪರ್ಧಿಸುತ್ತಿದ್ದಾರೆ. ಅವನಿಗೆ ಕೋಟ್ಯಂತರ ರೂಪಾಯಿಗಳನ್ನು ಕೊಡಲಿಕ್ಕೆ ... ಸಿದ್ಧರಾಗಿದ್ದಾದರೂ, ಅವನು ... ಆವಿಷ್ಕಾರವನ್ನು ಮಾತ್ರ ಯಾರಿಗೂ ...ರಿಲ್ಲ. ಈ ಅದ್ಭುತ ಬೆಂಕಿ ಕಡ್ಡಿಗಳು ...ಪೇಟೆಕ್ಕೆ ಬಂದರೆ ಮತ್ತೆ ಈಗಿನ ... ಕಡ್ಡಿಗಳನ್ನು ಕೇಳುವವರೇ ...ಗ ಬಹುದು.

ಭಯಂಕರವಾದ ಮೂ... ...ಘಗಳ ಮೇಲೆ
ಆಶ್ಚರ್ಯಕರವಾ... ...ಷಧಿ.

ಡಾ| ಜಸಾನಿಯವರ
ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಗೊನೊಕಿ... ...ಸ್ಟರ್)

...ರಾದು ...

ಇದನ್ನು ಹೊಗಳುತ್ತಿರುವರು.

...ಲ್ಲಾ ತರದ ಮೂತ್ರರೋಗಗಳ ಮೇಲೆ ... ಸಂಬಂಧದ ರೋಗಗಳ ಮೇಲೆ 'ಗೊನೊ... ಆಶ್ಚರ್ಯಕರವಾದ ಮತ್ತು ರಾಮಬಾಣ ... ಪ್ರಾರಂಭಿಸಿದಮೊದಲ ದಿವಸಗಳಲ್ಲಿ ... ಚಮತ್ಕಾರವನು ತೋರಿಸುತ್ತೆ. ಸಾವಿ... ಮತ್ತು ಸಂಪೂರ್ಣವಾಗಿ ಗುಣಹೊಂದಿ... ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ... ತೀವ್ರ ಮೋಗುವುದು, ವೀರ್ಯಸ್ರಾವ ... ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವ್ರ ಬೀಳ... ಆಗಿರುವ ಬಾವು ಅಥವಾ ಗಾಯ, ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ... ವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ ಎಂಬ ... ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ... ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3—0—0 (...

...ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ... ಪಟೇಲ್ ರೋಡ್, ಮುಂಬಾಯಿ 4

Sole Manufacturer: Dr. D. N. JASANI, ... Patel Road, BOMABY

ಸ್ಟಾಕಿಸ್ಟರು: ಮೆಸರ್ಸ ಇಲೆಕ್ಟ್ರೊ ಹೋಮ್ಯೋಪತ್ ಡಿಸ್ಪೆನ್ಸ... ಮತ್ತು ಡ್ರಗ್ಗಿಸ್ಟ್ಸ್, ಹಂಪನಕಟ್ಟಾ, ಮಂಗಳೂರು.

Moodabidri.

The Joint Managers,
The Combined Booking Agency
Mangalore.

Gentlemen,

It is particularly gratifying to note what special conveniences you had catered for the unusual rush of all India Digamber Jain pilgrims in this part of the District for their sight seeing in Venoor, Moodabidri, Karkala, Varanga at the time of the Sravana Belgola Mahamasthakabhishekam in February 1940.

As the premier Booking Agency in Motor Travel in this District you have done a signal service and earned well merited gratitude from all classes of Digamber Jains coming from the various Indian States of India; By your earnest efforts, South Kanara has been brought into lime light from the estimation of all India Jains.

The real credit of this goes to your Joint Manager Sri C. V. Kamath who was camping in Moodabidri for the last two weeks attending to all the comforts of the pilgrims day and night, without least annoying to anybody.

Sri Subbannacharya, clerk to your C. B. A., I. Koggauna Pai, B. C., Moodabidri also deserve our thanks for attending to all duties at even odd hours.

Really you have won laurels for your excellent and speedy arrangements in motor travel and the gratitude of all the Digamber Jains coming from distant Ajmere, Rajputana, Cutch, Delhi, Calcutta, Dehra Dun, Mussorie, will ever remain in their hearts. Wishing you once again a service of usefulness and fame for your Combined Booking Agency in the whole of India.

Yours ever in service,
The Members of the Jain Vidya Verdhaka Sangha (Regd) and Moodabidri Jain pilgrim Helping Committee.

SD. Sri Charukirthi Pandithacharya Swami,
,, B. Dharmapal Jaini,
,, M. Nagaraja Shastry,
,, M. Jagathpal,
,, Dharmapal Jaini Anadak,
,, S. Ananthayya Shetty,
,, B. Chandappa Indra,

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ನಡುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ವಿ. ಎಮ್ಮ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೇಳಬಹುದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆದ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦

ವಿ. ಪಿ. :

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ವಿರಜಿ, S. M. C.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

HOUNSA
ಹಂಸಾ ಸ್ನೋ
ಮತ್ತು
ಬ್ರಿಲ್ಲಂಟೈನ್
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಕರ್ಣಟ್ಟ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ, ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಖರ್ಚು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದೀಯ ಸಹಾಯ, ಪೆರಿಡೆಪಿ,
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕೆರದ ಗುಡ್ಡು ಮುಡಿಗೆ	1—13—0	1—14—
,, ದುಯಂ ,, ,,		
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	4—8—0	4—9—0
,, ದುಯಂ ,, ,,	4—5—0	4—6—0
,, ಅವ್ವಲ್ ಸುಗ್ಗಿ ,,	4—5—0	4—5—
,, ದುಯಂ ,, ,,	4—3—0	4—3—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	32—8—0	37—8—0
,, ಸಿಪ್ಪೆ ಇದ್ದದು ,,	35—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	62—8—0	62—8—
,, ದರ್‌ಪಸಂದ ,,	66—0—0	—
ತೆಂಗಿನ ಎಣ್ಣೆ ಮಣಕ್ಕೆ	4—8—0	4—8—0
ಸಿಪ್ಪೆಯುದ್ದ ಅಡಕೆ 1000ಕ್ಕೆ	2—12—0	3—4—0
ಗೇರುಬೀಜ ಮುಡಿಗೆ	3—12—0	4—1—0
ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
ಒಳ್ಳೇಮೆಣಸು ಹಂಡ್ರೆಡ್ವೆಟಿಗೆ	14—8—0	15—4—0

Date 5-4-1940 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸಹಿತ ರೂ. 2-12-0 Regd.No.M3406

ಸ್ವದೇಶಾಭಿಮಾನಿ

ಸಂಪುಟ 34] ಶನಿವಾರ 5-4-1940 [ಸಂಚಿಕೆ 14

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live, Life Insurance takes the place of your professional income during your old age

If you die it provides your family with enough income for their maintenance and the education of your children

'BOMBAY LIFE' offers all that is best in LIFE ASSURANCE

1938 RECORD

Completed Business	Rs	1 44 91,000
Life Assurance Fund	Rs	1,17,69 748
Total Assets	Rs	1,31,28 998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road.

Gandhi Nagar, UDIPI

OR ANY OF THEIR FOLLOWING OFFICES

Puthiyara, Calicut — Car Street, Mangalore — Visweswarapuram Circle, Bangalore City — Post Box No. [illegible], Mount Road, Madras

Gautam Nivas, Chunam Road, Girgaum, Bombay No 4 — Central Station Road, Trivandrum

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ದೊಮ್ಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ಹುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ESTD. 1906
ಸ್ವದೇಶಾಭಿಮಾನಿ
SWADESHABHIMANI

KANNADA ILLUSTRATED WEEKLY

ಮುಸಲ್ಮಾನರ ರಾಜಕೀಯ ಅಧಿಕಾರವೆಷ್ಟು?

ಚರಿತ್ರೆಯ ವಿಪುಲ ಆಧಾರ

"ಭಾರತೀಯ ಮುಸಲ್ಮಾನರು ಸುಮಾರು ಸಾವಿರ ವರ್ಷಗಳ ತನಕ ಹಿಂದೂಸ್ಥಾನದಲ್ಲಿ ರಾಜ್ಯಭಾರ ಮಾಡಿದ್ದರು. ಅವರು ಹಿಂದೂಸ್ಥಾನವನ್ನು ಗೆದ್ದು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರು. ಆದ್ದರಿಂದ ಭಾರತದ ರಾಜಕೀಯ ಕ್ಷೇತ್ರದಲ್ಲಿ ಮುಸಲ್ಮಾನರಿಗೆ ವಿಶೇಷತರದ ಹಕ್ಕು ಅಧಿಕಾರಗಳಿವೆ" ಎಂದು ಕೆಲವರು ಆಡಿಕೊಳ್ಳುತ್ತಾರೆ. ಜಿನ್ನಾ ಸಾಹೇಬರು ಕೂಡ 'ಹಿಂದುಸ್ಥಾನವನ್ನು' ಮುಸಲ್ಮಾನರ ಹಿಂದುಸ್ಥಾನ ಮತ್ತು ಹಿಂದುಗಳ ಹಿಂದುಸ್ಥಾನವೆಂದು ಪಾಲುಮಾಡಿಕೊಳ್ಳಬೇಕು ಎಂಬ ಧೋರಣೆಯನ್ನು ಇಟ್ಟುಕೊಂಡಿರುವರು. ಆದರೆ ಇತರ ನಿವಾಸಿಗಳಿಗಿಲ್ಲದ ವಿಶೇಷ ತರದ ಹಕ್ಕುಗಳು ಮುಸಲ್ಮಾನರಿಗೆ ಎಲ್ಲಿಂದ ಬರುವವು? ಹಿಂದುಸ್ಥಾನವನ್ನು ವಿಭಾಗಿಸುವ ಸ್ವಾತಂತ್ರ್ಯ ಮುಸಲ್ಮಾನರಿಗೆ ಎಷ್ಟು ಇದೆ? ಇದನ್ನು ವಿಚಾರದ ಒರೆಗಲ್ಲಿನಲ್ಲಿಟ್ಟುಕೊಂಡು ನೋಡಬೇಕು. ಇದನ್ನೀಗ ನಾವು ಆಲೋಚಿಸಬೇಕು.

ಮುಸಲ್ಮಾನ ರಾಜವಂಶಗಳೆಂಟೆ?

ಅಫಘಾನಿಸ್ಥಾನದ ಕೆಲವು ರಾಜವಂಶೀಯರು, ಮತ್ತು ಮೊಗಲಾಯಿಗಳು ಹತ್ತನೇ ಶತಮಾನದಿಂದ ಆರಂಭಿಸಿ ೧೮ನೇ ಶತಮಾನದ ತನಕ ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದು, ಸ್ವಲ್ಪ ಸ್ವಲ್ಪ ಸಮಯದ ತನಕ ರಾಜ್ಯವನ್ನಾಳಿದ್ದರೆಂಬುದು ನಿಜ. ಆದರೆ ಅವರ ಅಧಿಕಾರವು ಯಾವ ಸಮಯದಲ್ಲೂ ಈ ದೇಶದಲ್ಲಿ ಪರಿಪೂರ್ಣವಾಗಿಯೂ ಪರಿಣಾಮಕಾರಿಯಾಗಿಯೂ ಇದ್ದಿರಲಿಲ್ಲ. ಆ ಎಲ್ಲಾ ರಾಜಕುಟುಂಬಗಳು ಈಗ ನಾಮಾವಶೇಷವಾಗಿವೆ.

ನಾದಿರಶಹ ಮತ್ತು ಅಹಮ್ಮದ ಶಹ ಎಂಬಿಬ್ಬರು ಹದಿನೆಂಟನೇ ಶತಮಾನದಲ್ಲಿ ಹಿಂದುಸ್ಥಾನದ ಮೇಲೆ ದಂಡೆತ್ತಿಬಂದಿದ್ದರು. ಅವರು ಗೆದ್ದ ಪ್ರದೇಶಗಳನ್ನು ಆಳಿಕೊಂಡಿರಲಿಲ್ಲ; ಅವರು ಯಾರನ್ನೂ ಇಟ್ಟು ಹೋಗಲಿಲ್ಲ. ರೋಹಿಲರು, ಮೊಗಲರು, ಪರ್ಶಿಯನರು, ತುರುಕರು ಮತ್ತು ಅರಬರು ಎಂದುಕೊಂಡು ಇರುವ ಬರೇ ಒಂದೆರಡು ಲಕ್ಷ ಮುಸಲ್ಮಾನರನ್ನು ಬಿಟ್ಟರೆ, ೮ ಕೋಟಿ ಭಾರತೀಯ ಮುಸಲ್ಮಾನರಲ್ಲಿ, ಉಳಿದವರೆಲ್ಲ ಹಿಂದೂ ಧರ್ಮದಿಂದ ಮತಾಂತರ ಹೊಂದಿದ ಭಾರತೀಯರೇ ಆಗಿರುವರು. ಹಿಂದುಸ್ಥಾನದಲ್ಲಿರುವ ಎಂಟುಕೋಟಿ ಮುಸಲ್ಮಾನರಲ್ಲಿ ಸುಮಾರು ೭-೭॥ ಕೋಟಿ ಮುಸಲ್ಮಾನರು ವಿದೇಶೀಯ ಮುಸ್ಲಿಂ ರಾಜ್ಯಭಾರಕ್ಕೆ ತಲೆ ಬಗ್ಗಿಸಿದ ಹಿಂದುಗಳ ವಂಶಜರಾಗಿದ್ದಾರೆ.

ಯಾರಿಂದ ಅಧಿಕಾರ ಹೋಯಿತು?

ಬ್ರಿಟಿಷರು ಮುಸಲ್ಮಾನರ ಕೈಯಿಂದ ಭಾರತದ ರಾಜಕೀಯ ಅಧಿಕಾರವನ್ನು ಕಿತ್ತುಕೊಂಡವರಾದ್ದರಿಂದ, ಅವರು ತನ್ನ ಆ ಅಧಿಕಾರವನ್ನು ಪುನಃ ಬಿಟ್ಟುಕೊಡಬೇಕಾಗಿದ್ದರೆ, ಮುಸಲ್ಮಾನರಿಗೆ ವಿಶೇಷ ಅಧಿಕಾರ ಕೊಟ್ಟು ಬಿಟ್ಟುಕೊಡಬೇಕಲ್ಲವೇ? ಎಂದು ಕೆಲವು ಜನ ಮುಸಲ್ಮಾನರು ಹೇಳುತ್ತಾರೆ. ಬ್ರಿಟಿಷರು ಮುಸಲ್ಮಾನರಿಂದ ಅಧಿಕಾರವನ್ನು ಕಿತ್ತುಕೊಂಡರೆಂಬುದು ಸುಳ್ಳು, ಎಂದು ಇತಿಹಾಸ ತಿಳಿದವರು ಬಲ್ಲರು. ಬ್ರಿಟಿಷರು ಇಲ್ಲಿ ನೆಲಸಿದ್ದ ಕಾಲಕ್ಕೆ ಭಾರತವನ್ನು ಆಳುತಿದ್ದವರು, ಮರಾಟಾ ವಂಶಕ್ಕೆ ಸೇರಿದ ಪೇಶ್ವೆಯರು, ಭೋಂಸ್ಲೆಗಳು, ಗಾಯಕವಾಡರು, ಹೋಳ್ಕರರು, ಸಿಂಧಿಯರು, ಹಾಗೂ ರಾಜಪುತ್ರರು ಮತ್ತು ಸೀಖರೇ ಅಲ್ಲದೆ ಮುಸಲ್ಮಾನರಲ್ಲ. ದಿಲ್ಲಿಯಲ್ಲಿ ಮುಸಲ್ಮಾನರ ಅಧಿಕಾರವು ಕೇವಲ ನಾಮ ಮಾತ್ರವಾಗಿದ್ದಿತು. ಬ್ರಿಟಿಷರು ಭಾರತೀಯರಿಂದ ರಾಜ್ಯಾಡಳಿತದ ಅಧಿಕಾರವನ್ನು ಕಿತ್ತುಕೊಂಡರೇ ಹೊರತು ಮುಸಲ್ಮಾನರಿಂದ ಅಲ್ಲ.

ಮುಸಲ್ಮಾನರ ಅಧಿಕಾರವೆಷ್ಟು?

ಆದುದರಿಂದ ಮುಸಲ್ಮಾನರು ಹಿಂದುಸ್ಥಾನವನ್ನು, ಸಾವಿರ ವರ್ಷಗಳ ತನಕ ಆಳಿಕೊಂಡಿದ್ದರೆಂಬುದು ಸುಳ್ಳು. ಒಂದೊಂದು ಕಾಲದಲ್ಲಿ ಒಂದೊಂದು ಕಡೆ ಆಳಿಕೊಂಡಿದ್ದ ಮುಸಲ್ಮಾನ ರಾಜಕುಟುಂಬಗಳು ಈಗ ನಾಶವಾಗಿರುವವು. ವಿದೇಶೀ ಮುಸಲ್ಮಾನರಿಗೆ ಭಾರತದಲ್ಲಿ ಪ್ರತ್ಯೇಕವಾದ ಅಸ್ತಿತ್ವವಿಲ್ಲ. ಭಾರತದ ಮುಸಲ್ಮಾನರೆಲ್ಲ ಮತಾಂತರ ಹೊಂದಿದ ಹಿಂದುಗಳಾಗಿದ್ದರೆ ಭಾರತೀಯ ಮುಸಲ್ಮಾನರು ಕ್ರೈಸ್ತರಂತೆ, ಸೀಖರಂತೆ ಒಂದು ಅಲ್ಪ ಸಂಖ್ಯಾತ ಜಾತಿ ಎನ್ನಿಸಿಕೊಂಡು ತಮ್ಮ ಜಾತಿ, ಮತ, ಧರ್ಮ, ಸಂಸ್ಕೃತಿಗೆ ಅನುಕೂಲವಾಗಿ ಕೆಲವು ರಕ್ಷಣೆಗಳನ್ನು ಪಡೆದು ಇರಬಹುದು. ಇದಕ್ಕೆ ಪ್ರತಿಕೂಲವಾಗಿ, ತಮಗಾಗಿ ಹಿಂದುಸ್ಥಾನದ ಒಂದು ಭಾಗವನ್ನು ಪಾಲುಮಾಡಿಕೊಂಡು ಅಥವಾ ಅಲ್ಪ ಸಂಖ್ಯಾತರಾಗಿರುವ ತಾವು ಬಹು ಸಂಖ್ಯಾತರ ಹಕ್ಕು ಅಧಿಕಾರ ಸ್ವಾತಂತ್ರ್ಯಗಳನ್ನು ಪಡೆದು ಹಿಂದುಸ್ಥಾನದಲ್ಲಿ ಇರಲಿಕ್ಕೆ ಮುಸಲ್ಮಾನರಿಗೆ ಯಾವ ಅಧಿಕಾರವೂ ಹಕ್ಕೂ ಸ್ವಾತಂತ್ರ್ಯವೂ ಇರುವದಿಲ್ಲ.

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು "ಓವಲ್ ಟೀನ್" ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯೂ ಉಂಟಾಗುತ್ತವೆಂದು ಖಂಡಿತ ಹೇಳಬಹುದು.

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದನದ ಹಾಲು ಮತ್ತು ತತ್ತಿ ಅವುಗಳಿಂದಾದ ವಿಟಮಿನ್ ಮತ್ತು ಫಾಸ್ಫೈಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ ರಾತ್ರೆ ಸುಖವಾದ ನಿದ್ದೆಯನ್ನೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,
149 ಬ್ರೋಡ್‌ವೇ; ಮದ್ರಾಸು
ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣೆಯುಕ್ತವಾದುವು. ಎಲ್ಲಾ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು, ಇವುಗಳಲ್ಲಿ ಸ್ವಲ್ಪ ಹೆಚ್ಚು 'ಓವಲ್‌ಟಿನ್' ಸೇರಿರುವುದು. ೪ ಮತ್ತು ೮ ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV

"ನ ಹಿ ಕೃತಾರ್ಥಾ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

12-4-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರ್ತಾಪತ್ರಿಕೆ [೧೨-೪-೧೯೪೦

ದೇವರು ಒಂದಾಗಿ ಮಾಡಿದುದನ್ನು ಮಾನವನು ಬಿಂಗಡಿಸಲಾರನು

ಜಿನ್ನರ ರಾಷ್ಟ್ರವಿಭಜನೆಗೆ ಮಹಾತ್ಮಾಜಿಯವರ ಉತ್ತರ!

ಲಾಹೋರಿನಲ್ಲಿ ಮುಸ್ಲಿಂ ಲೀಗಿನವರು ತೆಗೆದುಕೊಂಡ ಹೆಜ್ಜೆಯು ನಿಜವಾಗಿಯೂ ರಾಷ್ಟ್ರೀಯ ಧೋರಣೆಯಲ್ಲಿ ಬಹಳ ಗೊಂದಲವನ್ನುಂಟುಮಾಡತಕ್ಕದ್ದಿದೆ, ಆದರೆ ಅದನ್ನು ಮಹಾತ್ಮಾಜಿಯವರು, ಮುಂದಿನ ರಾಷ್ಟ್ರೀಯ ಆಂದೋಲನದ ವಿಘ್ನಕಾರಿಯೆಂದು ತಿಳಿಯುವುದಿಲ್ಲವೆಂಬ ವಿಷಯವಾಗಿ ಹರಿಜನದಲ್ಲಿ ಒಂದು ಲೇಖನವನ್ನು ಬರೆದಿರುವರು. ಅದರಲ್ಲಿ ಅವರು, ರಾಷ್ಟ್ರವು ಸಿದ್ಧವಾಗಿದೆಯೆಂಬ ಕುರಿತು ನನಗೆ ಭರವಸೆ ಹುಟ್ಟುವ ವರೆಗೆ ನಾನು ಶಾಸನಭಂಗ ಆಂದೋಲನವನ್ನು ಆರಂಭಿಸಲಾರೆನೆಂದೂ ಹೇಳಿರುವರು. ಆ ಲೇಖನದಲ್ಲಿಯೇ ಗಾಂಧಿಜಿಯವರು, ರಾಷ್ಟ್ರೀಯ ಪ್ರಗತಿಯ ಪ್ರಶ್ನೆ ಬಂದಾಗ, ಮುಸ್ಲಿಮರು ಖಂಡಿತವಾಗಿಯೂ, ರಾಷ್ಟ್ರವನ್ನು ವಿಭಜಿಸುವಂತಹ ಧೋರಣೆಯನ್ನು ವಹಿಸಲಾರರೆಂದೂ, ರಾಷ್ಟ್ರವಿಭಜನೆಯಂತಹ ಮಾರಣಾತ್ಮಕ ನೀತಿಯನ್ನು ಕೈಕೊಳ್ಳದಂತೆ, ಅವರ ವಿಚಾರ, ನೀತಿ, ಧರ್ಮಗಳು ತಡೆಯುವವೆಂದೂ ಹೇಳಿರುವರು. ಎರಡು ರಾಷ್ಟ್ರದ ವಾದವು ಅಸತ್ಯವೆಂದೂ ಹಿಂದೂ-ಮುಸ್ಲಿಮರು ಎರಡು ರಾಷ್ಟ್ರದವರಲ್ಲವೆಂದೂ ಹೇಳುತ್ತಾ, ದೇವರು ಒಂದಾಗಿ ಮಾಡಿರುವುದನ್ನು ಮಾನವನು ಬೇರ್ಪಡಿಸಲಾರನೆಂದು ಹೇಳಿ ಲೇಖನವನ್ನು ಕೊನೆಗಾಣಿಸಿರುವರು.

ಅದರ ಸಾರಾಂಶವು ಹೀಗಿದೆ:—

'ಜಾತೀಯ ಸೌಹಾರ್ದವಿಲ್ಲದೆ ಸ್ವರಾಜ್ಯವಿಲ್ಲವೆಂದು ನೀವು ಹೇಳುತ್ತಿರುವಾಗ ಜಿನ್ನರು ಲಾಹೋರಿನಲ್ಲಿ ಮಾಡಿದ ತೀರ್ಮಾನದಂತೆ, ರಾಷ್ಟ್ರವಿಭಜನೆಯ ವಿಷಯದಲ್ಲಿ ಹಿಂದುಗಳ ಮೇಲೆ ಅವರು ಕಾಳಗವನ್ನೇ ಹೂಡಿರಲು ನೀವು ಶಾಸನಭಂಗ ಆಂದೋಲನವನ್ನು ಆರಂಭಿಸುವಿರಿ' ಎಂದು ನನ್ನೊಡನೆ ಕೆಲವರು ಪ್ರಶ್ನಿಸುತ್ತಾರೆ. ಲಾಹೋರಿನಲ್ಲಿ ಮುಸ್ಲಿಂ ಲೀಗು ತೆಗೆದುಕೊಂಡ ಹೆಜ್ಜೆಯು ಅಂತಹ ಗೊಂದಲದ್ದೆಂದು ನಾನು ಒಪ್ಪುತ್ತೇನೆ. ಆದರೆ ಅದು ಕಾಂಗ್ರೆಸ್ಸನ್ನು ಶಾಸನಭಂಗ ಚಳವಳಿ ಮಾಡದಂತೆ ತಡೆಯಲಾರದೆಂದೂ ನಾನು ಖಂಡಿತ ತಿಳಿದಿದ್ದೇನೆ.

ಒಂದೇ ಅವಿಭಕ್ತ ಕುಟುಂಬ

ನಾವು ಯುದ್ಧ ಮಾಡುವುದು ಬಹುಸಂಖ್ಯಾಕರೊಡನಲ್ಲ, ವಿದೇಶೀಯ ರಾಜ್ಯಭರಣದೊಡನೆ. ಆದರೆ ನನಗೆ ಭರವಸೆಯಾಗದ ವಿನಹ ನಾನು ಖಂಡಿತ ಶಾಸನಭಂಗ ಚಳವಳಿಯನ್ನು ಆರಂಭಿಸಲಾರೆ. ಹಿಂದೂದೇಶವು ಸ್ವತಂತ್ರ ರಾಜ್ಯಭರಣಕ್ಕೆ ಸಿದ್ಧವಾಗಿದೆ. ವಿದೇಶೀಯರ ಹೇಳಿಕೆಯಂತೆ ನಡೆಯಲಾರದೆಂದು ಹೇಳಬೇಕಾದ ಇಂದಿನ ರಾಷ್ಟ್ರದ ಧೋರಣೆಯನ್ನು ಮುಸ್ಲಿಂ ಲೀಗಾಗಲೀ ಇಸ್ಲಾಮವಕ್ತಾಗಲಿ ಇದಿರಿಸಲಾರದು. ಇತರರಂತೆ ಮುಸ್ಲಿಮರಿಗಾದರೂ ಸ್ವತಂತ್ರ ನಿರ್ಣಯಾಧಿಕಾರವಿದೆ. ನಾವಿಂದು ಒಂದೇ ಅವಿಭಕ್ತ ಕುಟುಂಬದವರಾಗಿದ್ದೇವೆ. ಯಾವನೊಬ್ಬ ಕುಟುಂಬದ ಮೆಂಬರನೂ ಪಾಲು ಕೇಳಬಹುದು. ಆದರೆ ಇಂದು ಸ್ವರಾಜ್ಯ ಪಡೆಯುವ ವಿಷಯದಲ್ಲಿ ನಾವೆಲ್ಲರೂ ಒಂದಾಗಬೇಕೆಂಬ ಸಿದ್ಧಾಂತದಿಂದ ನಾನು ಇಂದೂ ಕೂಡಾ ಇಂಗ್ಲೀಷರಂತೆ ಜಾತೀಯ ಸೌಹಾರ್ದವಿಲ್ಲದೆ ಸ್ವರಾಜ್ಯವಿಲ್ಲವೆಂಬ ಅಭಿಪ್ರಾಯವುಳ್ಳವನೇ ಆಗಿದ್ದೇನೆ.

ಶಾಸನಭಂಗ ಚಳವಳಿಯು ಎಲ್ಲರಿಗೂ ತೆರೆದಿಟ್ಟಿದೆ. ಒಬ್ಬನೇ ಆಗಿಯೂ ಅದನ್ನು ಆರಂಭಿಸಬಹುದು. ಅದರಿಂದಾಗುವ ಒಳ್ಳೆಯದು ಇಡೀ ರಾಷ್ಟ್ರಕ್ಕೇ ಸಿಗುವುದು. ಕೆಡುಕಾದರೆ ಅವನಿಗೆ ಮಾತ್ರ.

ಮುಸ್ಲಿಮರು ಬೇರಾಗಲೊಪ್ಪರು

'ರಾಷ್ಟ್ರದ ವಿಷಯವಾಗಿ ನಿಜವಾದ ನಿರ್ಣಯ ಮಾಡುವ ಕಾಲ ಬಂದಲ್ಲಿ ಮುಸ್ಲಿಮರು ರಾಷ್ಟ್ರವನ್ನು ವಿಭಜಿಸಲು ಇಚ್ಛಿಸಲಾರರೆಂದು ನಾನು ನಂಬಿರುವೆನು. ಅವರ ಒಳ್ಳೆಯ ವಿಚಾರ, ಅವರ ಸದ್ಧರ್ಮ ಇವುಗಳು ಅದನ್ನು ತಡೆಯುವವು. ಏಕೆಂದರೆ ಅಂತಹ ವಿಭಜನಾ ನೀತಿಯು ಆತ್ಮಹತ್ಯೆಯಂತಹುದಾಗಿದೆ. ನಾವು ಎರಡು ರಾಷ್ಟ್ರದವರೆಂಬ ಧೋರಣೆಯು ಅಸತ್ಯವು. ಭಾರತದ ಬಹುಮಂದಿ ಮುಸ್ಲಿಮರು ಮತಾಂತರಹೊಂದಿದವರು. ಇಲ್ಲವೇ ಮತಾಂತರಹೊಂದಿದವರ ಸಂತಾನದವರು. ಮತಾಂತರಹೊಂದಿದ ಕೂಡಲೇ ಅವರು ಬೇರೆ ರಾಷ್ಟ್ರದವರಾಗಲಾರರು. ಬಂಗಾಳಿ ಮುಸ್ಲಿಮನೊಬ್ಬನು ಬಂಗಾಳದ ಹಿಂದುವು ಮಾತನಾಡುವ ಮಾತನ್ನೇ ಆಡುತ್ತಾನೆ. ಅದೇ ಆಹಾರವನ್ನು ತಿನ್ನುತ್ತಾನೆ. ನೆರೆಕರೆಯ ಹಿಂದೂವಿನಂತೆಯೇ ಆಮೋದಗೊಳ್ಳುತ್ತಾನೆ. ಬಂಗಾಳದ ಹಿಂದೂ ಮತ್ತು ಮುಸ್ಲಿಮರನ್ನು ಗುರುತುಹಚ್ಚುವುದು ನನಗೆ ಅನೇಕ ಸಲ ಕಷ್ಟವಾಗಿದೆ. ಇದೇ ತತ್ವವು ದೊಡ್ಡವ ಬಡವರೆನ್ನದೆ ದೇಶದ ಎಲ್ಲಾ ಕಡೆಗಳಲ್ಲಿಯೂ ಅನ್ವಯಿಸುತ್ತದೆ. ಸರ್ ಅಲಿ ಇಮಾಮ್, ಜಿನ್ನಾ ಮೊದಲಾದವರನ್ನು ಮೊಟ್ಟಮೊದಲು ಕಂಡಾಗ ನನಗೆ ಅವರು ಮುಸ್ಲಿಮರೆಂದೇ ಗೊತ್ತಾಗಲಿಲ್ಲ. ಅವರ ಮಾತು, ನಡತೆಗಳೆಲ್ಲಾ ಒಂದೇ ಆಗಿವೆ. ಅವರ ಹೆಸರು ಮಾತ್ರ ಜಾತಿಯನ್ನು ತಿಳಿಸುತ್ತವೆ. ಅವರ ನಡತೆಗಳಲ್ಲಿ ಅವರು ಏಕರಾಷ್ಟ್ರದ ಸಹೋದರರೆಂದು ಅವರ ಮುಖದಲ್ಲಿ ಬರೆದಂತೆ ಕಾಣುತ್ತದೆ. ಅಂತೆಯೇ ದಿವಂಗತ ವಿಟ್ಠಲಭಾಯಿ ಪಟೇಲರನ್ನು ಅವರ ಗಡ್ಡ ಮೊದಲಾದವುಗಳಿಂದ ನಾನು ಒಬ್ಬ ಮುಸ್ಲಿಮರೆಂದೇ ತಿಳಕೊಂಡಿದ್ದೆ. ಸರ್ ಮಹಮ್ಮದ್ ಇಕ್ಬಾಲರು ತಾವು ಬ್ರಾಹ್ಮಣ ವಂಶದವರೆಂದು ಅಭಿಮಾನದಿಂದ ಹೇಳುತ್ತಿದ್ದರು. ಇಕ್ಬಾಲ್ ಮತ್ತು ಕಿಚ್ಲೂ ಇದು ಹಿಂದೂ ಮುಸ್ಲಿಮರಿಗೆ ಸಮಾನವಾಗಿರುವ ಹೆಸರು. ಭಾರತದ ಹಿಂದುಗಳು ಮತ್ತು ಮುಸ್ಲಿಮರು ಎರಡು ರಾಷ್ಟ್ರದವರಲ್ಲ. ದೇವರು ಒಂದಾಗಿ ಮಾಡಿರುವುದನ್ನು ಮನುಷ್ಯನು ಬೇರ್ಪಡಿಸಲಾರನು'. ಹೀಗೆಂದು ಹೇಳುತ್ತಾ ಗಾಂಧಿಜಿಯವರು ಹಿಂದೂ ಧರ್ಮವನ್ನು ಇಸ್ಲಾಮಿ ಧರ್ಮವು ಶತ್ರುವೆಂದು ತಿಳಿಯಬೇಕೆ? ಅಲೀ ಸಹೋದರರು ಹಿಂದೂಗಳನ್ನು ರಕ್ಷಿಸಕೂಡದರೆಂದು ತಿಳಿದಿದ್ದುದು ಅವರ ಧರ್ಮಕ್ಕೆ ಅನುಗುಣವಾಗಿರಲಿಲ್ಲವೆ ಎಂಬೀ ಹಲವು ಆಧಾರಗಳನ್ನು ಕೊಟ್ಟು ವಿವರಿಸಿ, ಜಿನ್ನರು ಇಸ್ಲಾಮಿನ ತತ್ವವನ್ನು ಅಪವ್ಯಾಖ್ಯಾನ ಮಾಡುತ್ತಿರುವರೆಂದೂ ಮುಸ್ಲಿಂ ಲೀಗು ಇಸ್ಲಾಮಿನ ಹೆಸರಲ್ಲಿ ಮಾಡುವ ತಪ್ಪು ಹೆಜ್ಜೆಯನ್ನು ಕಂಡು ನಾನು ನೊಂದುಕೊಂಡಿರುವೆನೆಂದೂ ಹೇಳಿರುವರು. ಆದುದರಿಂದ ಈ ಅಸತ್ಯದ ಪ್ರಚಾರವನ್ನು ತಡೆಯದಿದ್ದರೆ ನಾನು ಕರ್ತವ್ಯಚ್ಯುತನಾದೇನಾಗುವೆನೆಂದೂ ತಿಳಿಸಿರುವರು.

THE

BANK OF MANGALORE LTD.,

MANGALORE.

ESTD. 1931.

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted

ಸ್ವದೇಶಾಭಿಮಾನಿ

ತಾರೀಕು 12—4—1940

ಹೊಸತೊಂದು ಯುದ್ಧರಂಗ

ಯುರೋಪಿನ ಯುದ್ಧದ ಜ್ವಾಲಾಮುಖಿಯು ಇನ್ನೊಂದು ಕಡೆಯಲ್ಲಿಯೂ ತಲೆದೋರಿದೆ! ಕಳೆದ ಒಂದೆರಡು ದಿನಗಳಲ್ಲಿ ಪ್ರಚಂಡ ಪರಿವರ್ತನೆಯುಂಟಾಗಿದೆ! ತಟಸ್ಥ ರಾಷ್ಟ್ರಗಳಾಗಿದ್ದ ನಾರ್ವೆ ಮತ್ತು ಡೆನ್ಮಾರ್ಕುಗಳು ಇಂದು ಹೊಸ ರಣರಂಗಗಳಾಗಿವೆ! ಮಿತ್ರರಾಷ್ಟ್ರಗಳಾದ ಬ್ರಿಟನು ಫ್ರಾನ್ಸುಗಳು ನಾರ್ವೆಯ ಜಲಸಂಧಿಯಲ್ಲಿ ತೋಟೆಗಳನ್ನು ಇಟ್ಟಿರುವವೆಂಬ ವಾರ್ತೆಯೊಡನೆ ಈ ಎರಡು ರಾಷ್ಟ್ರಗಳಿಗೆ ಜರ್ಮನಿಯು ಧಾಳಿಯಿಟ್ಟಿತೆಂಬ ಸುದ್ದಿಯೂ ತೀವ್ರ ವೇಗದಿಂದ ಬಂದಿದೆ! ಜರ್ಮನರು ನೂರಾರು ಯುದ್ಧ ಹಡಗುಗಳೊಡನೆ ನಾರ್ವೆ ಡೆನ್ಮಾರ್ಕುಗಳನ್ನು ಆಕ್ರಮಿಸಿರುವರು. ಮಿತ್ರರಾಷ್ಟ್ರಗಳು ಮುಡಗಿದ್ದ ತೋಟೆಗಳನ್ನು ಕಿತ್ತಿಕ್ಕಲು ಜರ್ಮನಿಯ ಹಡಗುಗಳು ಉತ್ತರ ಸಾಗರದಲ್ಲಿ ಸಂಚರಿಸುತ್ತಿವೆಯೆಂದು ಸುದ್ದಿ ಬಂದಿತ್ತು! ಆದರೆ ಈಗ ಅಸಂಖ್ಯ ಜರ್ಮನ್ ಯುದ್ಧ ಹಡಗಗಳು ಆಕ್ರಮಣಕ್ಕಾಗಿಯೇ ನಾರ್ವೆಯ ಬಂದರಗಳನ್ನು ಬಂದು ಹಿಡಿದುಕೊಂಡಿವೆಯೆಂದೂ ವಾರ್ತೆ ಬಂದಿದೆ. ಜರ್ಮನಿಯು ಹಿಂದಿನ ತನ್ನ ಆಕ್ರಮಣಗಳಂತೆ, ಈ ಸಲದ ದಾಳಿಯನ್ನೂ ಪ್ರಚಂಡ ರೂಪದಿಂದ ಆಕಸ್ಮಾತ್ತಾಗಿಯೇ ಮಾಡಿ ಪ್ರಪಂಚವನ್ನೇ ದಿಗ್ಭ್ರಮೆಗೊಳಿಸಿದೆ. ಹೀಗಾಗಿ ಇಂದು ಯುದ್ಧರಂಗವು ಈ ಕಡೆಯಲ್ಲಿಯೂ ಆರಂಭವಾಗಿ ಶಾಂತಿಯ ಸಂಧಾನದ ಮಾತು ಕೇವಲ ಅರಣ್ಯರೋದನವಾಯಿತು!

ನಾರ್ವೆ ಡೆನ್ಮಾರ್ಕುಗಳು ಇಂದು [illegible]ರುಣಾಜನಕ ಪರಿಸ್ಥಿತಿಯಲ್ಲಿವೆ. ಅವು[illegible]ಳ ಸ್ವಾತಂತ್ರ್ಯ ಮತ್ತು ಸಂಪತ್ತಿ[illegible] ಬಲಾಢ್ಯ ರಾಷ್ಟ್ರಗಳ ಅಪಹಾರವಾಗಿದೆ. ಆಕ್ರಮಣವನ್ನು ತಡೆಗಟ್ಟದಿರಲು ಹೇಗಿದ್ದರೂ ಸಾಧ್ಯವಿಲ್ಲ. ಆದರೆ ಜಯಶೀಲತೆಯು ಅವುಗಳಿಗೆ ತೀವ್ರವಾಗಿ ದೊರೆಯತಕ್ಕ ಬೆಂಬಲವನ್ನು ಅವಲಂಬಿಸಿಕೊಂಡಿದೆ. ಬ್ರಿಟನೂ ಈ ಸಂದರ್ಭದಲ್ಲಿ ಈ ಉಭಯ ರಾಷ್ಟ್ರಗಳಿಗೆ ಬೆಂಬಲ ನಿಲ್ಲಲೇಬೇಕು; ಆದರೆ ಇದನ್ನು ಮೊದಲೇ ಗಮನಿಸಿಕೊಂಡಿದ್ದ ಜರ್ಮನಿಯು ಆದರ ಸಮುದ್ರ ಕರಾವಳಿಯಲ್ಲಿ ಅಸಂಖ್ಯಾತ ತೋಟೆಗಳನ್ನು ಇಕ್ಕಿ ಸಂಚಾರವು ದುರ್ಗಮವಾಗುವಂತೆ ಮಾಡಿರುತ್ತದೆ. ಬೇಕಾದ ಸಹಾಯವು ರಕ್ಷದಿಂದ ದೊರಕಬೇಕಾಗಿದೆ. ಆದರೆ ಪರಿಸ್ಥಿತಿಯನ್ನು ವಿಚಾರಿಸಿದರೆ ರಕ್ಷವು ಜರ್ಮನಿಗೆ ವಿರುದ್ಧ ಹೋರಾಟಕ್ಕಿಳಿಯುವ ಸೂಚನೆಯು [illegible] ರಕ್ಷಾ ಜರ್ಮನಿ[illegible]ಗಳು ಸ್ಕಾಂಡಿನೇವಿಯ ರಾಷ್ಟ್ರಗಳನ್ನು ಹರಿದು ಹಂಚಿಕೊಳ್ಳುವ ಒಪ್ಪಂದ ಮಾಡಿಕೊಂಡಿಯೆಂಬ ವಾರ್ತೆಯು ಸಾಧಾರವಾದುದೆಂದು ಎಲ್ಲರೂ ವಿಚಾರಗ್ರಸ್ತರಾಗಿದ್ದಾರೆ. ಆದಕಾರಣ, ಇಂದು ನಾರ್ವೆ ಡೆನ್ಮಾರ್ಕಗಳಿಗೆ ಅಗತ್ಯವಾದ ಸಹಾಯವು ಬ್ರಿಟನು ಫ್ರಾನ್ಸುಗಳದ್ದು. ಅದು ಎಷ್ಟು ಬೇಗನೇ ಅವುಗಳಿಗೆ ದೊರಕಬಹುದೋ ಅಷ್ಟು ಜಯದಾಶೆಯು ಹೆಚ್ಚಾಗಬಹುದು. ಮಿತ್ರರಾಷ್ಟ್ರಗಳ ಬಲ ಮತ್ತು ಸಹಾಯಗಳನ್ನು ಪರೀಕ್ಷಿಸುವ ಒರೆಗಲ್ಲು ಇದಾಗಿದೆ.

ಸ್ಕಾಂಡಿನೇವಿಯದಲ್ಲಿ ಮಿತ್ರರಾಷ್ಟ್ರಗಳು ತೋಟೆಗಳನ್ನು ಇಕ್ಕಿ ತಾಟಸ್ಥ್ಯನೀತಿಗೆ ಭಂಗ ತಂದ ಕಾರಣದಿಂದ ಯುದ್ಧವು ತೀವ್ರ ಆರಂಭವಾಯಿತು. ಆದರೆ ಅಂತರ್ ರಾಷ್ಟ್ರೀಯ ನಿಯಮವನ್ನು ಮಿತ್ರರಾಷ್ಟ್ರಗಳು ಮೀರದೆ ಸಾಧ್ಯವಿರಲಿಲ್ಲ. ಎಲ್ಲಿ ವರೆಗೆ ಒಂದು ರಾಷ್ಟ್ರವು ಅಂತರ್ ರಾಷ್ಟ್ರೀಯ ನಿಯಮವನ್ನು ಮೀರದಿರುವುದೋ ಅಲ್ಲಿ ವರೆಗೆ ಇನ್ನೊಂದು ರಾಷ್ಟ್ರವೂ ಮೀರುವುದು ತಪ್ಪಾಗುವುದು. ಆದರೆ ಜರ್ಮನಿಯು ಆದಿಯಿಂದಲೇ ಯಾವ ನಿಯಮವನ್ನೂ ಅನುಸರಿಸದೇ ಇರುವಾಗ ಮಿತ್ರರಾಷ್ಟ್ರಗಳ ಈ ಕಾರ್ಯವು ನಿಯಮೋಲ್ಲಂಘನವೆನಲು ಆಗುವುದಿಲ್ಲ. ಹೇಗಿದ್ದರೂ ಪ್ರಬಲ ರಾಷ್ಟ್ರಗಳು ಹೋರಾಟಕ್ಕಿಳಿದಾಗ್ಯ ತಟಸ್ಥ ರಾಷ್ಟ್ರಗಳು ಸಂಕಷ್ಟಕ್ಕೆ ಗುರಿಯಾಗುವುದು ನ್ಯಾಯವಲ್ಲದಿದ್ದರೂ ತಪ್ಪಿಸಲಸಾಧ್ಯವಾದ ದೌರ್ಭಾಗ್ಯದ ವಿಷಯವಾಗಿದೆ.

ಸಾಮ್ರಾಜ್ಯ ಲಾಲಸೆಯಿಂದ ಇಂದು ಯುರೋಪಿನ ಪ್ರಬಲ ರಾಷ್ಟ್ರಗಳು ಮುಂದುವರಿಯುತ್ತಿವೆ. ನ್ಯಾಯ ಅನ್ಯಾಯಗಳ ವಿಚಾರವಿಲ್ಲದೆ ಪ್ರಪಂಚದ ಶಾಂತಿಯನ್ನು ಕದಡಿ ತಮ್ಮ ಸಾಮ್ರಾಜ್ಯ ಶಾಹೀತೃಷೆಯನ್ನು ಅಡಗಿಸಲು ಅವುಗಳು ಯತ್ನಿಸುತ್ತಿವೆ! ಪ್ರಬಲ ರಾಷ್ಟ್ರಗಳ ಸಾಮ್ರಾಜ್ಯಲಾಲಸೆಯು ಬುದ್ಧಿಯು ನಾಶವಾಗದ ವಿನಹ ಪ್ರಪಂಚಕ್ಕೆ ಶಾಂತಿಯು ಖಂಡಿತ ದೊರಕಲಾರದು.

ದಿವಂಗತ ದೀನಬಂಧು ಅಂಡ್ರೂಸರು

ದಲಿತ ದೀನ ಮಾನವ ಜನಾಂಗದ ಸೇವೆಗಾಗಿ, ಮಹಾತ್ಮಾ ಯೇಸುಕ್ರಿಸ್ತನ ಉಪದೇಶದಂತೆ ಶುದ್ಧಾಂತಕರಣದಿಂದ ದುಡಿಯುತ್ತಿದ್ದ, ಆದರಲ್ಲೂ ಯುರೋಪಿನಲ್ಲಿ ಹುಟ್ಟಿದ್ದು, ಭಾರತದ ದೌರ್ಭಾಗ್ಯವನ್ನು ಕಂಡು, ಅದರ ಉದ್ಧಾರಕ್ಕಾಗಿ ತನ್ನ ಜೀವಮಾನದ ಅಮೂಲ್ಯ ಸಮಯಗಳನ್ನು ಕಳೆದ ದೀನಬಂಧು ಸಿ. ಎಫ್. ಅಂಡ್ರೂಸರು ಕಳೆದವಾರ ತಾ. ೫ರಂದು ರಾತ್ರಿ ೧ ಗಂಟೆಗೆ ಕಲ್ಕತ್ತದಲ್ಲಿ ದಿವಂಗತರಾದರೆಂಬ ವಿಷಯವು ಅತ್ಯಂತ ವಿಷಾದಜನಕವಾಗಿದೆ. ಜಗತ್ತಿನ ಜನಾಂಗಗಳ ಸಾಲಿನಲ್ಲಿ ತನ್ನ ಸ್ಥಾನವನ್ನೂ ಗೌರವಯುತವಾಗಿ ಮಾಡಲು, ಭಾರತವು ಹೆಣಗಾಡುತ್ತಿರುವಾಗ, ಭಾರತೀಯರು ಉಡಲು ಬಟ್ಟೆ, ಉಣ್ಣಲು ಅನ್ನಗಳಿಲ್ಲದೆ ಆರೆಹೊಟ್ಟೆಯಿಂದ ನರಳುತ್ತಿರುವಾಗ ಆ ದಾರಿದ್ರ್ಯವನ್ನು ನೀಗಾಡಿಸಬೇಕೆಂದು, ಅದರ ಮೂಲಕಾರಣವಾದ ಪಾರತಂತ್ರ್ಯವನ್ನು ಕಿತ್ತೊಗೆಯಬೇಕೆಂದು ಸೆಣಸಾಡುತ್ತಿರುವ ಕಾಲದಲ್ಲಿ, ಭಾರತೀಯರ ಹೋರಾಟವು ನ್ಯಾಯವೆಂದೂ, ಅವರ ಉದ್ಧಾರವು ಲೋಕಹಿತವೆಂದೂ ಅವರಿಗಾಗಿ ಮರುಕಗೊಂಡು, ತನ್ನ ಆಪ್ತಸಂಕಷ್ಟ ಪರಂಪರೆಗಳನ್ನು ಪರಿಗಣಿಸಿ, ವಿದೇಶಿಯರಾಗಿದ್ದರೂ ಸ್ವದೇಶೀಯರೇ ಎಂದೆನಿಸಿ, ಭಾರತೀಯರ ಆದರ ಗೌರವ ನಲ್ಮೆಗಳಿಗೆ ಪಾತ್ರರಾಗಿದ್ದ ಮಹಾನುಭಾವರು ಕಣ್ಮರೆಯಾಗಿರುವುದರಿಂದ ನಿಜವಾಗಿಯೂ ಇಂದು ಭಾರತಕ್ಕೆ ಮಹಾನಷ್ಟವುಂಟಾಗಿದೆ. ಭರತಮಾತೆಯು ಕಂಬನಿಯ ಕಡಲಲ್ಲಿ ಮುಳುಗಿಹೋಗಿದ್ದಾಳೆ! ಅವರ ನಿಧನದ ಸಲುವಾಗಿ ದೇಶಕ್ಕೆ ದೇಶವೇ ಬಾಷ್ಪಾಂಜಲಿಯನ್ನು ಸುರಿಸುತ್ತಿದೆ! ರೆವೆರೆಂಡ್ ಸಿ. ಎಫ್. ಅಂಡ್ರೂಸರು ತಮ್ಮ ಪಾರ್ಥಿವ ಶರೀರದಿಂದ ಮುಕ್ತರಾದರೂ, ಮಾಸಲಾರದ ಕೀರ್ತಿಯನ್ನು ಗಳಿಸಿ ಯಶಶ್ಶರೀರಿಗಳಾದರು!

ದೀನಬಂಧು ಅಂಡ್ರೂಸರು ೧೮೭೧ರಲ್ಲಿ ಜನ್ಮವೆತ್ತಿದರು. ಇಂಗ್ಲೆಂಡಿನಲ್ಲಿಯೇ ಉಚ್ಚಶಿಕ್ಷಣಾಲಯಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದರು. ತನ್ನ ಚಿಕ್ಕಪ್ರಾಯದಲ್ಲಿಯೇ ಮಹಾ ವಿದ್ವಾಂಸರೆಂದು ಪ್ರಶಂಸೆಗೆ ಪಾತ್ರರಾದರು. ಜೀವನದ ಸೌಭಾಗ್ಯವನ್ನು ಕಡೆಗಣಿಸಿ, ಸಂಸಾರದ ಮೋಹಕ್ಕೆ ಸಿಲುಕದೆ, ದೀನ ದಲಿತರ ಸೇವೆಗೆಂದು ಕ್ರಿಸ್ತನಧರ್ಮೋಪದೇಶಕರಾದರು! ಅದೇ ಉದ್ದೇಶದಿಂದ ಕಡಲನ್ನು ದಾಟಿ, ಬಂದು ಭಾರತವನ್ನು ಪ್ರವೇಶಿಸಿದರು! ಭರತಮಾತೆಯ ಕರುಣೆಯ ಕೂಗು ಅವರ ದಯಾರ್ದ್ರ ಹೃದಯವನ್ನು ತನ್ನ ಕಡೆಗೆ ಆಕರ್ಷಿಸಿಕೊಂಡಿತು!

ಭಾರತಕ್ಕೆ ಬಂದಿಳಿದವರು ಕೆಲ ಕಾಲಗಳ ವರೆಗೆ ಗುಪ್ತವಾಗಿದ್ದು ಇಲ್ಲಿನ ಪರಿಸ್ಥಿತಿಗಳನ್ನು ಅಭ್ಯಾಸಮಾಡಿಕೊಂಡರು. ಇಲ್ಲಿನ ಸಂಸ್ಕೃತಿಗೆ ತಲೆದೂಗಿದರು! ಸ್ವಾತಂತ್ರ್ಯವನ್ನು ಕಳೆದು ನಿರ್ವೀರ್ಯರಾದ ಈ ಮಾನವ ಕುಲದ ಅಪದೆಶೆಗಾಗಿ ಕಂಬನಿಗರೆದರು. ಅದೇ ಸಮಯ ವಿಶ್ವಕವಿ ಠಾಗೂರರು, ಮಹಾತ್ಮಾ ಗಾಂಧಿಜಿಯವರು ಇಂತಹ ವಿಭೂತಿಪುರುಷರ ಪರಿಚಯವು ಅವರಿಗಾಯಿತು. ಭಾರತದ ಉದ್ಧಾರಕ್ಕೆ ಅವರೊಡನೆ ಅಂಡ್ರೂಸರೂ ಪ್ರತಿಜ್ಞಾಬದ್ಧರಾಗಿ ಕಾರ್ಯರಂಗಕ್ಕೆ ಧುಮುಕಿದರು.

ಆಫ್ರಿಕದಲ್ಲಿ ಭಾರತೀಯರ ಹೋರಾಟವು ನಡೆದಿತ್ತು! ವಿದೇಶಗಳಲ್ಲಿ ಭಾರತೀಯರು ಸಹಿಸಲಾರದ ಸಂಕಷ್ಟಗಳಿಗೆ ಗುರಿಯಾಗುತ್ತಿರುವುದನ್ನು ಕಂಡು ಅವರು ಆ ಕಡೆಗಳಿಗೆ ತೆರಳಿದರು. ಭಾರತೀಯರಿಗೆ ಬ್ರಿಟಿಷರಿಂದ ಒದಗುತ್ತಿರುವ ಅನ್ಯಾಯವು ಬ್ರಿಟಿಷರಾದ ಅಂಡ್ರೂಸರಿಂದಲೇ ತಿಳಿಸಲ್ಪಟ್ಟಿತು. ಪ್ರಪಂಚದಲ್ಲಿರುವ ದಲಿತ ಮಾನವ ವರ್ಗದ ಉದ್ಧಾರಕ್ಕಾಗಿ ಅಹರ್ನಿಶಿ ದುಡಿದು ಅವರು ನಿಜವಾದ 'ದೀನಬಂಧು'ಗಳೆನಿಸಿದರು.

ಭಾರತದ ಸ್ವಾತಂತ್ರ್ಯ ಚಳವಳಿಯು ಉಗ್ರರೂಪವನ್ನು ತಾಳಿತು. ಒಡಾಯರ ಒಡೆತನದಲ್ಲಿ ಪಂಜಾಬಿನ ಜಲಿಯಾನ್ ವಾಲಾಬಾಗಿನಲ್ಲಿ ಭೀಕರ ನರಹತ್ಯೆಯಾಯಿತು! ಅಂಡ್ರೂಸರಿಗೆ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಮುಂದೆ ಸತ್ಯಾಗ್ರಹದಲ್ಲಿ ಭಾಗವಹಿಸಿದರು! ಸೆರೆಮನೆಯ ಸಂಕಷ್ಟವೂ ಒದಗಿತು!

ಮಿಸ್ ಮೇಯೋಳು ಭಾರತದ ವಿಷಯವನ್ನೆತ್ತಿ ಪ್ರಪಂಚವನ್ನು ಹೊಲಸು ಮಾಡಲು ಹೊರಟಿದ್ದಳು! ತನ್ನ ವಿಚಾರಪೂರ್ಣ ಲೇಖನಿಯಿಂದ ಅವಳಿಗೆ ಮಾತ್ರವಲ್ಲ ಇಡೀ ಪ್ರಪಂಚಕ್ಕೇ ಭಾರತದ ಪರಿಸ್ಥಿತಿಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿವರಿಸಿದರು. ರಾಷ್ಟ್ರೀಯ, ಅಂತರ್ ರಾಷ್ಟ್ರೀಯ ವಿಚಾರಗಳನ್ನೆತ್ತಿ ಅನೇಕ ಲೇಖನಗಳನ್ನು ದೇಶ ವಿದೇಶಗಳ ಪತ್ರಿಕೆಗಳಲ್ಲಿ ಬರೆದುದು ಮಾತ್ರವಲ್ಲದೆ ಅನೇಕ ಉಜ್ವಲ ಗ್ರಂಥಗಳನ್ನೂ ಹೊರಪಡಿಸಿದರು. ಅವುಗಳಲ್ಲಿ ಅನೇಕ ಧಾರ್ಮಿಕ ವಿಚಾರದ ಗ್ರಂಥಗಳೂ ಇವೆ.

ಹೀಗೆ ಕೊನೆಯುಸಿರು ಉಳಿವ ವರೆಗೆ ದೀನರ ಸೇವೆಗಾಗಿಯೇ ನಿತ್ಯ ನಿರಂತರ ತನ್ನ ಸೇವೆಯನ್ನು ಸಲ್ಲಿಸಿ ಕೀರ್ತಿಶಾಲಿಗಳಾದರು! ಅಂತಹ ಪವಿತ್ರಾತ್ಮರ ಆತ್ಮಕ್ಕೆ ಪರಮಾತ್ಮನು ಚಿರ ಶಾಂತಿಯೀಯಲಿ!

ರಾಷ್ಟ್ರೀಯ ವಾರ

ಪ್ರತಿ ವರ್ಷದಂತೆ ಈ ವರ್ಷವೂ ಕಳೆದ ತಾ. ೬ರಿಂದ ೧೩ರ ತನಕ ರಾಷ್ಟ್ರೀಯ ವಾರವು ದೇಶದ ಮೂಲೆ ಮೂಲೆಗಳಲ್ಲಿಯೂ ಆಚರಿಸಲ್ಪಟ್ಟಿತು. ಈ ವರ್ಷದ ರಾಷ್ಟ್ರೀಯ ವಾರದ ದಿನಾಚರಣೆಗಳಲ್ಲಿ ಖಾದಿ ಪ್ರಚಾರವೇ ಮೊದಲಾದ ರಚನಾತ್ಮಕ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದೂ, ಅದರಿಂದ ದೇಶದ ಸಂಗ್ರಾಮ ಸಿದ್ಧತೆಯನ್ನು ವಿಶದ ಪಡಿಸಬೇಕೆಂದೂ, ಆ ರೀತಿಯ ಭರವಸೆಯಾದ ಮೇಲೆ ಮಾತ್ರ ತಾನು ಆಂದೋಲನವನ್ನು ಆರಂಭಿಸಬಲ್ಲೆನೆಂದೂ ಗಾಂಧಿಜಿಯವರು ಸಾರಿದ್ದರು. ಅದೇ ರೀತಿಯಲ್ಲಿ ಎಲ್ಲಾ ನಗರ ಗ್ರಾಮಗಳಲ್ಲಿಯೂ ರಾಷ್ಟ್ರೀಯ ವಾರವು ಯಶಸ್ವಿಯಾಗಿ ಆಚರಿಸಲ್ಪಟ್ಟಿದೆ.

ರಾಷ್ಟ್ರಪತಿಗಳಾದ ಮೌಲಾನಾ ಅಬುಲ್ ಕಲಂ ಆಜಾದರೂ ಕೂಡಾ ರಾಷ್ಟ್ರೀಯ ವಾರದ ವಿಶೇಷತೆಯನ್ನು ಹೇಳುತ್ತಾ ರಚನಾತ್ಮಕ ಕಾರ್ಯಗಳ ಕಡೆಗೆ ಗಮನ ಕೊಡಿರೆಂದೂ, ಖಾದಿಯನ್ನು ಬಹಳವಾಗಿ ಕೊಂಡುಕೊಳ್ಳಿರೆಂದೂ ಪ್ರಕಟಣೆ ಹೊರಡಿಸಿರುವರು! ನಿಜವಾಗಿ, ಜನರು ಆಂದೋಲನ, ಸತ್ಯಾಗ್ರಹಗಳಿಗಾಗಿ ಆತುರರಾಗಿರುವೆವೆಂದು ತಿಳಿದುಕೊಳ್ಳುವುದಕ್ಕಿಂತ, ವಿಚಾರಶೀಲರೆನಿಸಿ, ರಾಷ್ಟ್ರದ ಉದ್ಧಾರಕ್ಕೆ ಯಾವುದು ನಿಜವಾದ ಸಹಕಾರಿಯಾಗಿದೆಯೋ ಅಂತಹ ರಚನಾತ್ಮಕ ಕಾರ್ಯಗಳನ್ನು ಮುನ್ನುಗ್ಗಿ ಮಾಡುವುದು ಅತ್ಯಂತ ಅವಶ್ಯವಾಗಿದೆ. ಎಲ್ಲದಕ್ಕಿಂತಲೂ ಮಿಗಿಲಾಗಿ ಖಾದಿಯನ್ನು ಪ್ರೋತ್ಸಾಹಿಸುವ ಮೂಲಕ, ಜನತೆಯು ಸತ್ಯಾಗ್ರಹ ಸೇನಾನಿಗೆ, ಗಾಂಧಿಜಿಯವರಿಗೆ ತಮ್ಮ ಸಿದ್ಧತೆಯ ಪ್ರಮಾಣವನ್ನು ತೋರಿಸಬಹುದಾಗಿದೆ. ಆದಕಾರಣ ಈ ವಾರದಲ್ಲಿ ಹಾಗೂ ಮುಂದಿನ ದಿನಗಳಲ್ಲಿ ಜನರು ಖಾದಿಯನ್ನೇ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸಬೇಕಾಗಿ ನಾವು ಆಗ್ರಹದಿಂದ ವಿನಂತಿಸಿ ಕೊಳ್ಳುತ್ತೇವೆ

ನಮ್ಮ ರೈತರು ಮತ್ತು ಕಾಂಗ್ರೆಸ್ಸು

ಸ್ವಾತಂತ್ರ್ಯವೇ ಮೊದಲ ಹೆಜ್ಜೆ!

ಸಮಸ್ಯೆಗಳು ಕೂಡಲೇ ಪರಿಹಾರವಾಗುವವು!!

(ಲೇಖಕ: ಭಾರತೀಯ)

"ಕಾಂಗ್ರೆಸು ರೈತರ ಸಹಾಯಕ್ಕೆ ಮನಕೊಟ್ಟು ದುಡಿದುದಿಲ್ಲ. ಅಶಿಕ್ಷಿತ ರೈತರ ಶಿಕ್ಷಣಕ್ಕೆ, ಸಹಕಾರಿ ಸಂಘಗಳ ಮೂಲಕ ಕಡಿಮೆ ದರದ ಬಡ್ಡಿಯಲ್ಲಿ ಸಾಲಕೊಡಲಿಕ್ಕೆ, ಮತ್ತೆ ಗುಡಿ ಕೈಗಾರಿಕೆಗಳ ಪ್ರೋತ್ಸಾಹದಿಂದ ಸ್ವಲ್ಪ ಹಣ ಸಹಾಯ ಮಾಡಲಿಕ್ಕೆ ಕಾಂಗ್ರೆಸು ಪರಿಶ್ರಮಿಸಿರಬಹುದು. ಹಾಗೆಯೇ ಜಮೀನುದಾರರಿಂದ ರೈತರ ಮೇಲಾಗುವ ಅತ್ಯಾಚಾರ ದಬ್ಬಾಳಿಕೆಗಳನ್ನು ಕಡಿಮೆ ಮಾಡಲು, ಕಾಂಗ್ರೆಸು ಅಧಿಕಾರದಲ್ಲಿದ್ದಾಗ ಕೆಲವು ಕಾಯದೆ ಕಾನೂನುಗಳನ್ನು ಮಾಡಿದ್ದಿರಬಹುದು. ಆದರೆ ಜಮೀನುದಾರಿ ಪದ್ಧತಿಯನ್ನು ಸಂಪೂರ್ಣ ಕೊನೆಗಾಣಿಸಿ ರೈತರನ್ನು ಎಲ್ಲಾ ಸಾಲಗಳಿಂದ ಋಣಮುಕ್ತರನ್ನಾಗಿ ಮಾಡುವಂಥ ಕ್ರಾಂತಿಕಾರೀ ಕಾರ್ಯಕ್ರಮವನ್ನು ಕಾಂಗ್ರೆಸು ಕೈಕೊಂಡುದಿಲ್ಲ ಎಂದು ಅಲ್ಲಲ್ಲಿಂದ ಆಕ್ಷೇಪಗಳು ಕೇಳಿ ಬರುತ್ತವೆ. ಆದುದರಿಂದ ರೈತರು ತಮ್ಮದೆ ಸಭೆಗಳನ್ನು ಸ್ಥಾಪಿಸಿ, ಅವುಗಳ ಮೂಲಕ ತಮ್ಮ ಉದ್ಧಾರ ಮಾಡಿಕೊಳ್ಳಬೇಕೆಂದು ಈ ಆಕ್ಷೇಪಗಳನ್ನು ಎತ್ತುವಂಥ ಕಿಸಾನ ಸಭೆಗಳ ಮುಖಂಡರು ಹೇಳುತ್ತಾರೆ.

ಪರಿಸ್ಥಿತಿಯು ಹೇಗಿದೆ?

ಈ ಮುಖಂಡರು ಪರಿಸ್ಥಿತಿಯ ಕಡೆಗೆ ಸ್ವಲ್ಪ ವಿವೇಕದಿಂದ ನೋಡಿದ್ದಾದರೆ, ಪ್ರಕೃತ ಪರಿಸ್ಥಿತಿಯಲ್ಲಿ ರೈತರ ಸ್ಥಿತಿ ಸುಧಾರಣೆಗೆ ಯಾರು ಏನು ಮಾಡಬಹುದಾಗಿದ್ದಿತೋ, ಅವನ್ನೆಲ್ಲವನ್ನೂ ಕಾಂಗ್ರೆಸು ಮಾಡಿದೆ ಎಂಬುದು ಅವರಿಗೆ ಸ್ಪಷ್ಟವಾಗಬಹುದು. ಕಾಂಗ್ರೆಸಿನ ಆಡಳಿತದಲ್ಲಿ ರೈತರ ಕಷ್ಟ ಪರಂಪರೆಯು ಕೊನೆಯಾಗಲಿಲ್ಲ ಎಂಬುದು ನಿಜ. ಆದರೂ ಕೈಗೆ ಸಿಕ್ಕಿದ ಎಷ್ಟು ಅಧಿಕಾರವಿತ್ತೋ ಅದನ್ನು ಉಪಯೋಗಿಸಿ ಕಾಂಗ್ರೆಸ್ ಮುಖಂಡರು ರೈತರಿಗಾಗಿ ಮಾಡಬಹುದಾದುದನ್ನೆಲ್ಲ ಮಾಡಿದ್ದಾರೆ. ಎಲ್ಲಾ ಕಾಂಗ್ರೆಸ ಪ್ರಾಂತಗಳಲ್ಲಿ ರೈತರ ಸಾಲ ನಿವಾರಣೆಗೆ ಕಾನೂನುಗಳಾದುವು. ಜಮೀನುದಾರರಿಗೆ ಪರಿಹಾರ ಕೊಟ್ಟು ಜಮೀನುದಾರಿ ಕ್ರಮವನ್ನು ಕೊನೆಗೊಳಿಸುವ ಒಂದು ಆಲೋಚನೆ ಸಂಯುಕ್ತ ಪ್ರಾಂತ್ಯದ ಮಂತ್ರಿಮಂಡಲಕ್ಕಿದ್ದಿತ್ತು, ಆ ಬಗ್ಗೆ ಒಂದು ಕಾನೂನು ಕೂಡ ಮಾಡುವವರಲ್ಲಿತ್ತು. ಮಧ್ಯದಲ್ಲಿಯೇ ಅದು ಸ್ವಾತಂತ್ರ್ಯ ಪ್ರಶ್ನೆಯ ಮೇಲೆ ರಾಜಿ ಕೊಡಬೇಕಾಗಿ ಬಂದುದರಿಂದ ಮನಸ್ಸಿನ ಆಲೋಚನೆ ಮನಸ್ಸಿನಲ್ಲಿಯೇ ಉಳಿಯಿತು. ರೈತರ ಸ್ಥಿತಿಯನ್ನು ಈಗಿಂತ ಚೆನ್ನಾಗಿ ಕಾಂಗ್ರೆಸು ಸುಧಾರಿಸಲಿಲ್ಲವಾದರೆ, ಅದಕ್ಕೆ ಪರಿಸ್ಥಿತಿಯು ಪ್ರತಿಕೂಲವಾಗಿತ್ತೆಂದೇ ತಿಳಿದುಕೊಳ್ಳಬೇಕು.

ಆಗಹೋಗದ ಮಾತು

ರಶ್ಯದ ಸೋವಿಯಟ್ ಕ್ರಮದಲ್ಲಿ ಎಲ್ಲಾ ಆಸ್ತಿಗಳ ಒಡೆತನವನ್ನು ಸರಕಾರವೇ ತೆಗೆದುಕೊಂಡು ಕೃಷಿ ಕಾರ್ಯವನ್ನು ಮುಂದೊತ್ತಬೇಕೆಂದೂ, ಅದರಿಂದ ಮಾತ್ರ ರೈತರಿಗೆ ಸುಖದೊರೆಯುವದೆಂದೂ ರೈತರ ಮುಖಂಡರು ಹೇಳುತ್ತಾರೆ. ಆದರೆ ಇಲ್ಲಿ ರಶ್ಯದ ಮತ್ತು ನಮ್ಮ ದೇಶದಲ್ಲಿರುವ ಸ್ಥಿತ್ಯಂತರಗಳನ್ನು ಅವರು ಗಣನೆಗೆ ತಂದಿರುವದಿಲ್ಲ. ರಶ್ಯವು ಕೃಷಿಕ್ಷೇತ್ರದಲ್ಲಿ ಅಂಥ ಕ್ರಾಂತಿಯನ್ನು ಉಂಟುಮಾಡುವ ಮೊದಲು ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿತ್ತು. ಹಿಂದುಸ್ಥಾನವು ರಶ್ಯದ ಮಾದರಿಯನ್ನು ಅನುಸರಿಸಲಿಕ್ಕೆ ಅದಕ್ಕೆ ಇನ್ನೂ ಸ್ವಾತಂತ್ರ್ಯವು ಪ್ರಾಪ್ತವಾಗಿರುವದಿಲ್ಲ. ದೇಶವು ಸ್ವಾತಂತ್ರ್ಯವಾದ ಹೊರತು ರೈತರ ಏಳಿಗೆಯ ಯಾವ ದೊಡ್ಡ ಸುಧಾರಣೆಯನ್ನೂ ಮಾಡಲಾಗುವದಿಲ್ಲ. ಆದ್ದರಿಂದ ಈಗ ಎಲ್ಲರು ವರ್ಗಭೇದವನ್ನು ಮನಸ್ಸಿಗೆ ತಾರದೆ ಒಮ್ಮನಸ್ಸಿನಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿ ಸಫಲರಾಗಬೇಕಾಗಿದೆ. ಕಿಸಾನ ಸಭೆಗಳ ಮುಖಂಡರು ಸ್ವಾತಂತ್ರ್ಯ ಸಂಪಾದನೆಯ ಪ್ರಶ್ನೆಯನ್ನು ಕಡೆಗಣಿಸಿ ರೈತರ ಏಳಿಗೆಯನ್ನೇ ಮುಖ್ಯವಾಗಿಟ್ಟುಕೊಳ್ಳುವುದು ಆಗಹೋಗದ ಮಾತಾಗಿದೆ.

ರೈತರ ಉದ್ಧಾರದ ಒಂದೇ ಮಾರ್ಗ

ಪ್ರಾಚೀನ ಕಾಲದ ಗ್ರಾಮ ಪದ್ಧತಿಯ ಅನುಸರಣದಿಂದ ಮಾತ್ರ ನಮ್ಮ ರೈತರ ಉದ್ಧಾರವಾಗಬಹುದು. ಗುಡಿ ಕೈಗಾರಿಕೆ ಮತ್ತು ಕೈಕೆಲಸದ ಕಾರ್ಯಕ್ಕೆ ಕಾಂಗ್ರೆಸು ಪ್ರೋತ್ಸಾಹವನ್ನು ಕೊಡುತ್ತದೆ.

ಸ್ವಾತಂತ್ರ್ಯವಿಲ್ಲದೆ ರೈತರ ಉದ್ಧಾರವಾಗದು ಮತ್ತು ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನು ಮುಂದೊತ್ತುವದರಿಂದಲೇ ರೈತರ ಉದ್ಧಾರವಾಗುವುದು ಎಂಬ ಈ ಎರಡು ಕಾರಣಗಳಿಂದ ರೈತರು ಕೇವಲ ಕಾಂಗ್ರೆಸಿಗೆ ಸಹಾಯಕರಾಗಿ, ಅದಕ್ಕೆ ಬೆಂಬಲರಾಗಿರಬೇಕಾದುದು ಅಗತ್ಯವಾಗಿದೆ. ಬಹುಸಂಖ್ಯಾಕರಾದ ಅವರ ಸಹಾಯ ಕಾಂಗ್ರೆಸಿಗೆ ಪ್ರಾಪ್ತವಾಗುವುದರಿಂದಲೂ, ಅವರು ಕಾಂಗ್ರೆಸಿನ ಕಾರ್ಯಕ್ರಮವನ್ನು ಮುಂದೊತ್ತುವುದರಿಂದಲೂ ದೇಶದ ಸ್ವಾತಂತ್ರ್ಯ ಸಂಪಾದನೆಯು ಶೀಘ್ರ ಮತ್ತು ಸುಲಭವಾಗುವುದು ಮಾತ್ರವಲ್ಲದೆ, ರೈತರ ಉದ್ಧಾರವೂ ಆಗುವುದು.

[illegible]

ಎಲ್ಲಾ ಅಡಿಗೆಗೂ ಅತ್ಯುಪಯುಕ್ತವಾದ

ಡಾಲ್ಡ ವನಸ್ಪತಿ

ಇದರಲ್ಲಿ ಪ್ರಾಣಿಗಳ ಕೊಬ್ಬು ಸೇರಿರುವುದಿಲ್ಲ! ಕೈಯಿಂದ ಮುಟ್ಟಲ್ಪಡುವುದಿಲ್ಲ! ಸೀಲುಮಾಡಿದ ಟಿನ್ನುಗಳಲ್ಲಿ ಮಾತ್ರ ಮಾರಲ್ಪಡುವುದು.

ಅದನ್ನು ಮೂಸಿನೋಡಿರಿ!

ಡಾಲ್ಡ ವನಸ್ಪತಿಯು ಶುದ್ಧವಾಗಿಯೂ, ಆರೋಗ್ಯಕರವಾಗಿಯೂ ಮತ್ತು ರುಚಿಯನ್ನುಂಟುಮಾಡುವುದಾಗಿಯೂ ಇರುವ ಸುವಾಸನೆಯುಳ್ಳದಾಗಿದೆ.

ಅದನ್ನು ಮುಟ್ಟಿನೋಡಿರಿ!

ಡಾಲ್ಡ ವನಸ್ಪತಿಯು ಶ್ರೇಷ್ಠವಾದ ಹರಳಿನಂತಿರುವ ರಚನೆ ಮತ್ತು ಅದರ ಸಾರಗಳನ್ನು ನೀವೇ ಪರೀಕ್ಷಿಸಿರಿ.

ಅದನ್ನು ರುಚಿನೋಡಿ!

ಸ್ವಾಭಾವಿಕವಾಗಿ ಮಧುರವೂ, ಮನೋಹರವೂ ಆದ ಸುವಾಸನೆಯು ಡಾಲ್ಡ ವನಸ್ಪತಿಯ ಶ್ರೇಷ್ಠಗುಣವನ್ನು ಕೂಡಲೇ ವ್ಯಕ್ತಪಡಿಸುವುದು

ಆಮೇಲೆ ಡಾಲ್ಡ ವನಸ್ಪತಿಯಿಂದ ಅಡಿಗೆಮಾಡಿರಿ! ಹುರಿಯುವುದಕ್ಕೂ, ರುಚಿಯನ್ನುಂಟುಮಾಡುವುದಕ್ಕೂ, ಬಳಸಿಕೊಳ್ಳುವುದಕ್ಕೂ, ಪೂರಿ ಮುಂತಾದುವುಗಳನ್ನು ತಯಾರಿಸುವುದಕ್ಕೂ ಅತ್ಯುಪಯುಕ್ತವಾಗಿದೆಯೆಂದು ನೀವೇ ತಿಳಿಯುವಿರಿ. ಡಾಲ್ಡ ವನಸ್ಪತಿಯು ಖರ್ಚನ್ನು ಕಡಿಮೆಮಾಡುವುದು, ಶುದ್ಧವಾಗಿಯೂ, ರುಚಿಕರವಾಗಿಯೂ ಇರುವುದು. ವಿಟಮಿನ್ ಇರುವುದರಿಂದ ನಿಮ್ಮನ್ನು ಆರೋಗ್ಯವಂತರನ್ನಾಗಿ ಮಾಡುವುದು.

ಸೀಲುಮಾಡಿದ

2, 5, 10 ಪೌಂಡುಗಳ ಟಿನ್ನುಗಳಲ್ಲಿ

ಮಾತ್ರ ಮಾರಲ್ಪಡುವುದು

ರೂ. 1000 ಬಹುಮಾನ.

ಡಾಲ್ಡ ವನಸ್ಪತಿಯು ಸರಕಾರಿ ಪರಿಶೋಧಕನಿಂದ ಪರಿಶೋಧಿಸಲ್ಪಟ್ಟು ಅತಿ ಶುದ್ಧವಾಗಿರುವುದೆಂದು ಗ್ಯಾರಂಟಿಯುಳ್ಳದ್ದಾಗಿದೆ. ಇದರಲ್ಲಿ ಹಾನಿಕರ ಪದಾರ್ಥಗಳೇನಾದರೂ ಸೇರಿರುವುದೆಂದು ತೋರಿಸಿಕೊಟ್ಟವರಿಗೆ ರೂ. 1000 ಬಹುಮಾನವು ಕೊಡಲಾಗುವುದು.

HVM. 5M-160—KN THE HINDUSTAN VANASPATI MANUFACTURING CO. LTD., BOMBAY

ಪಂಡಿತ ತಾರಾನಾಥರ ಸುಲಭ ಚಿಕಿತ್ಸೆ!

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ಕೊಳ್ಳುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು.

ಮಂಗಳೂರು ಏಜೆಂಟರು: ಸೋಲ್ ಏಜೆಂಟ್ಸ್:

ಯು. ಪಾಂಡುರಂಗ ನಾಯಕ್, ಪ್ರೇಮ ಮೆಡಿಕಲ್ ಹಾಲ್,

ರಥಬೀದಿ, ಮಂಗಳೂರು. ಗುತ್ತಿಗಾರ್ ದ. ಕ.

ಯೂರೋಪಿನ ವಿಷಮ ವಾತಾವರಣ!

ಬಾಲ್ಕನ್ ರಾಷ್ಟ್ರಗಳ ಗಲಿಬಿಲಿ!

ಮುಳ್ಳಿನ ಮೇಲೆ ನಿಂತ ಇಟಲಿ!

ತಟಸ್ಥ ರಾಷ್ಟ್ರಗಳಿಗೆ ಎಚ್ಚರಿಕೆ!!

ಜರ್ಮನಿಯ ಮೇಲೆ ಮಿತ್ರರಾಷ್ಟ್ರಗಳು ಹಾಕಿದ್ದ ವ್ಯಾಪಾರ ದಿಗ್ಬಂಧನವು ಇಚ್ಛಿಸಿದ ತನಕ ನಿರೀಕ್ಷಿಸಿದಷ್ಟು ಪರಿಣಾಮಕಾರಿಯಾಗಿಲ್ಲದಿರುವದರಿಂದ ಅದನ್ನು ಮತ್ತಷ್ಟು ಬಲಗೊಳಿಸಬೇಕೆಂದು ಬ್ರಿಟನ್ ಫ್ರಾನ್ಸುಗಳು ನಿರ್ಧರಿಸಿವೆ. ಈ ಸಂಬಂಧ ಈ ಎರಡು ರಾಷ್ಟ್ರಗಳು ಜರ್ಮನಿಯ ಸುತ್ತಮುತ್ತಲಿನ ಚಿಕ್ಕ ದೊಡ್ಡ ತಟಸ್ಥ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧವಾದ ಕರಾರುಗಳನ್ನು ಮಾಡಿಕೊಂಡಿವೆ. ಈ ಕರಾರುಗಳ ಪ್ರಕಾರ ತಟಸ್ಥ ರಾಷ್ಟ್ರಗಳು ಜರ್ಮನಿಗೆ ಕಳುಹಿಸಬಹುದಾದ ಸಾಮುಗ್ರಿಗಳಿಗೆ ಒಂದು ಮಿತಿ ಬಿದ್ದಿದೆ. ಈ ಎಲ್ಲ ತಟಸ್ಥ ರಾಷ್ಟ್ರಗಳಲ್ಲಿ ಖರ್ಚಾಗಿ ಉಳಿಯುವ ಸರಕುಗಳನ್ನು ತಾನೇ ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಿತ್ರ ರಾಷ್ಟ್ರಗಳು ಮಾಡಿವೆ.

ತಟಸ್ಥ ರಾಷ್ಟ್ರಗಳ ಉಭಯ ಸಂಕಟ

ಜರ್ಮನಿಯೊಡನೆ ತಟಸ್ಥರಾಷ್ಟ್ರಗಳ ವ್ಯಾಪಾರ ಸಂಬಂಧವನ್ನು ಅವುಗಳು ಮಿತಗೊಳಿಸಿ ಅದನ್ನು ತಮಗೆ ತಿಳಿಸದಿದ್ದರೆ, ತಾವು ಸಾಮ್ರಾಜ್ಯದ ಸರಕುಗಳು ಆ ತಟಸ್ಥರಾಷ್ಟ್ರಗಳಿಗೆ ಮುಟ್ಟದ ಹಾಗೆ ಬಹಿಷ್ಕಾರ ಹಾಕಬೇಕಾಗುವದೆಂದು ಚೆಂಬರಲೀನರು ಆ ರಾಷ್ಟ್ರಗಳಿಗೆ ಎಚ್ಚರಿಕೆಯನ್ನು ಕಳುಹಿಸಿದ್ದಾರೆ. ಅತ್ತ ಹಿಟ್ಲರನು ಸಹ—ಯುದ್ಧಪೂರ್ವದಂತೆ ತನಗೆ ಸರಕುಗಳನ್ನು ಕೊಡದಿದ್ದರೆ ತಾನು ಪ್ರತೀಕಾರ ಉಪಾಯಗಳನ್ನು ಕೈಕೊಳ್ಳ ಬೇಕಾಗುವದೆಂದೂ ಆ ರಾಷ್ಟ್ರಗಳಿಗೆ ತಿಳಿಸಿರುವನು. ಆದುದರಿಂದ ನೋರ್ವೆ, ಸ್ವಿಡನ್, ಹೊಲ್ಲೆಂಡ ಬೆಲ್ಜಿಯಂ ಗಳಂಥ ತಟಸ್ಥ ರಾಷ್ಟ್ರಗಳ ಸ್ಥಿತಿಯು 'ಅತ್ತಹೋದರೆ ಪುಲಿ ಇತ್ತ ಬಂದರೆ ದರಿ'ಎಂಬಂತೆ ಕರುಣಾಸ್ಪದವಾಗಿರುವದು. ಹಲವು ಜನರನ್ನು ಮೆಚ್ಚಿಸಲಿಕ್ಕೆ ಹೋದ ಕಂಥೆಮಗನಂತೆ ಇವುಗಳ ಸ್ಥಿತಿಯಾಗಿವೆ. ಅವುಗಳಿಗೆ ರಣಕ್ಷೇತ್ರವನ್ನು ಪ್ರವೇಶಿಸುವದು ಬೇಡವಾಗಿದೆ. ಆದರೆ ಒಂದಿಲ್ಲ ಒಂದು ಕಡೆಯಿಂದ ಯುದ್ಧಾಸಕ್ತ ರಾಷ್ಟ್ರಗಳ ಆಕ್ರಮಣದ ಭಯವು ಅವುಗಳಿಗೆ ಇದ್ದೇ ಇದೆ. ಈ ಕಾರಣದಿಂದ ಅವು ಯಾವದಾದರೊಂದು ಒಂದು ಪಕ್ಷವನ್ನು ಸೇರುವದು ಅನಿವಾರ್ಯವಾಗಿದೆ.

ಮುಸಲೋನಿ

ಯುದ್ಧ ಪರಿಸ್ಥಿತಿ

ಈ ತಟಸ್ಥ ರಾಷ್ಟ್ರಗಳು ಮೊದಲೇ ಒಂದು ಕೊನೆಯ ನಿರ್ಧಾರಮಾಡಿ ತಾವು ಯುದ್ಧಾಸಕ್ತ ರಾಷ್ಟ್ರಗಳಲ್ಲಿ ಯಾವದಾದರೊಂದರ ಪಕ್ಷವನ್ನು ಸೇರಿದ್ದರೆ ಯುದ್ಧವು ಶೀಘ್ರದಲ್ಲಿ ಮುಗಿಯುವ ಸಂಭವವಿರುತಿತ್ತು. ಪರಂತು ಯುದ್ಧವು ಎಷ್ಟು ದೀರ್ಘಕಾಲ ನಡೆಯುವದಾದರೂ ಮಿತ್ರ ರಾಷ್ಟ್ರಗಳು ಅದಕ್ಕೆ ಸಿದ್ಧವಾಗಿಯೇ ಇವೆ. ಈ ರಾಷ್ಟ್ರಗಳ ಯುದ್ಧ ಸಿದ್ಧತೆಯು ಈಗ ಕೂಡ ನಡೆಯುತ್ತಾ ಇದೆ. ಜರ್ಮನಿಯ ಸೇನಾಬಲ ೭೦ ಮಿಲಿಯದಷ್ಟಿರುವಾಗ ಬ್ರಿಟನ ಫ್ರಾನ್ಸುಗಳ ಸಮ್ಮಿಲಿತ ಬಲವು ೧೧೦ ಮಿಲಿಯದಷ್ಟಿರುವದು. ಮತ್ತೆ ಸಮುದ್ರದ ಮೇಲೆ ಬ್ರಿಟನಿನ ಅಧಿಕಾರವು ಪ್ರಬಲವಾಗಿದೆ. ಆದುದರಿಂದ ಮಿತ್ರ ರಾಷ್ಟ್ರಗಳು ಈ ಯುದ್ಧದಲ್ಲಿ ಗೆಲ್ಲುವದು ಖಂಡಿತ.

ಮುಳ್ಳಿನ ಮೇಲೆ ನಿಂತ ಇಟಲಿ

ಆದ್ದರಿಂದ ನೊರ್ವೆ, ಸ್ವಿಡನ್, ಬೆಲ್ಜಿಯಂ, ಪೋಲೆಂಡ, ಆಸ್ಟ್ರೇಲಿಯಗಳು ಮಿತ್ರರಾಷ್ಟ್ರಗಳೊಂದಿಗೆ ವ್ಯಾಪಾರದ ಒಡಂಬಡಿಕೆಗಳನ್ನು ಮಾಡಿಕೊಂಡಿರುವವು. ಸ್ವಿಜರ್ಲೆಂಡ, ಸ್ಪೈನ, ಗ್ರೀಸ ತುರ್ಕಿಗಳು ಈ ಸಂಬಂಧ ಮಾತುಕತೆಯನ್ನು ಪ್ರಾರಂಭಿಸಿರುವವು. ಅವೆಲ್ಲ ಜರ್ಮನಿಗೆ ಸರಕು ಕಳುಹಿಸುವದನ್ನು ಮಿತಗೊಳಿಸಲಿಕ್ಕೆ ಒಪ್ಪಿರುವವು. ಆದರೆ ಇಟಲಿಯೊಂದು ಮಾತ್ರ ಮುಳ್ಳಿನ ಮೇಲೆ ಕೂತುಕೊಂಡು ಯಾವ ಕಡೆಗೆ ಹಾರುವದೆಂದು ಯೋಚಿಸುತ್ತಾ ಇದೆ. ಪ್ರಾಯಶಃ ಹಿಟ್ಲರನೇ ಗೆಲ್ಲಬಹುದೆಂದು ಮುಸಲೋನಿಗೆ ವಿಶ್ವಾಸವಾಗಿರಬಹುದು. ಆದ್ದರಿಂದ ಅವನೊಡನೆ ಸ್ನೇಹ ಕಟ್ಟಿಕೊಳ್ಳಲಿಕ್ಕೆ ಮಿ। ಚೆಂಬರ್ಲೆನರು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾಗಿವೆ. ಮಾತ್ರವಲ್ಲ ಜರ್ಮನಿಗೆ ಕಲ್ಲಿದ್ದಲು ಮೊದಲಾದ ಪದಾರ್ಥಗಳನ್ನು ನೆಲಮಾರ್ಗವಾಗಿ ಕಳುಹಿಸಿಕೊಡಲಿಕ್ಕೂ ಒಪ್ಪಿದ್ದಾನೆ.

ಬಾಲ್ಕನ ರಾಷ್ಟ್ರಗಳಲ್ಲಿ ಗಲಿಬಿಲಿ

ಇಟಲಿಯ ಈ ಧೋರಣೆಯಿಂದ ಬಾಲ್ಕನ ರಾಷ್ಟ್ರಗಳಲ್ಲಿ ಗಲಿಬಿಲಿ ಎದ್ದಿರುವದು. ಅವುಗಳ ಸಹಾನುಭೂತಿ ಬ್ರಿಟನ್ ಫ್ರಾನ್ಸುಗಳ ಕಡೆಗೆ ಇದೆ. ಅವು ಮಿತ್ರರಾಷ್ಟ್ರಗಳೊಂದಿಗೆ ವ್ಯಾಪಾರದ ಒಡಂಬಡಿಕೆಗಳನ್ನು ಮಾಡಿಕೊಂಡು ಸ್ನೇಹದಿಂದಿವೆ. ಆದರೆ ಇಟಲಿಯ ಧೋರಣೆಯಿಂದ ಯುದ್ಧವು ಪ್ರಬಲವಾದರೆ, ಈ ಚಿಕ್ಕ ರಾಷ್ಟ್ರಗಳ ಸ್ಥಿತಿ ಏನಾದೀತೆಂದು ಹೇಳಬರುವದಿಲ್ಲ. ಯುದ್ಧದ ಕೊನೆಯ ಪರಿಣಾಮವು ಏನಾದರೂ ಯುದ್ಧದ ಕಾರ್ಯವು ಮುಂದರಿಯುತ್ತಿರುವಾಗ ಹಿಟ್ಲರ ಮುಸಲೋನಿಯರ ಇವ ಕ್ರಮೆಗೆ ಪಾತ್ರವಾದ ಈ ರಾಷ್ಟ್ರಗಳು ಅಸಹಾಯ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಗುವದು. ಅವುಗಳನ್ನು ಈ ದುರಂತದಿಂದ ಕಾಪಾಡುವದಕ್ಕೋಸ್ಕರ ಉಪಾಯಗಳನ್ನು ಹುಡುಕಲಿಕ್ಕಾಗಿಯೇ ಬ್ರಿಟನ ಫ್ರಾನ್ಸುಗಳು ಆ ರಾಷ್ಟ್ರಗಳಲ್ಲಿದ್ದ ತಮ್ಮ ರಾಯಭಾರಿಗಳನ್ನು ರಾಜಧಾನಿಗೆ ಕರೆಯಿಸಿಕೊಂಡು ಅವರೊಡನೆ ಮಂತ್ರಾಲೋಚನೆ ಮಾಡುತ್ತಾ ಇದ್ದಾರೆ.

ರೂ. 550 ಬಹುಮಾನ



ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು. ಬೆಲೆ ತಾಮ್ರದ ಆವರಣದ್ದು ರೂ. 1–15–0 ಮೂರಕ್ಕೆ ರೂ. 5, ಬೆಳ್ಳಿಯ ಆವರಣದ್ದು ರೂ. 2-12-0 ಮತ್ತು ಚಿನ್ನದ ಆವರಣದ್ದು ರೂ. 6–8–0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ. ವ್ಯಾಪಾರ, ಪರೀಕ್ಷೆ, ವಹಿವಾಟು, ನೌಕರಿ ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು. ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು. ಬೆಲೆ: ತಾಮ್ರದ ಆವರಣ ರೂ. 1–15–0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ. 2–12–0, ಚಿನ್ನದ ಆವರಣ ರೂ, 6–8–0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್‌ಫುಲ್ ನಂ. 4ಕ್ಕೆ ಕೇಳಿರಿ. ಬೆಲೆ 5–4–0, 5 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್ ಪವರ್‌ಫುಲ್ ನಂ. 5ಕ್ಕೆ ಕೇಳಿರಿ ಬೆಲೆ 7–8–0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ.

ಸೂಚನೆ: ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮು, ಸಂ ಕಾರ್ಯಯಾಗದಿದ್ದಲ್ಲಿವಾದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ತರಿಯಾಗಿ ಕಾರ್ಯಗೊಸಬೇಕಾದರೆ ಏನೇನಾದರೂ ಕಷ್ಟಪಡಬೇಕೆಂದಿಲ್ಲ.

ANAND SWAMI

Anand Flavour Pct Ts No. 27 (S.A.M.) Amritsar

ಎಂಡ್ರೂಸ್ ಲಿವರ್ ಸ್ಟೋಲ್ಟ



ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮಸೂತ್ರ

ಈ ವಾರದ ಕತೆ:

ನಾನು ನೋಡಿದ ಕುಮುದ

[ಹಿಂದೀ ಕತೆಯೊಂದರ ಅನುವಾದ]

ಅದು ಅವಳಿಗೊಂದು ಅಭ್ಯಾಸವಾಗಿ ಹೋಗಿತ್ತು. ಪ್ರತಿ ದಿನ ಸಾಯಂಕಾಲವಾಗುವಾಗ ಅವಳು ಮಾಳಿಗೆಯ ಜಗಲಿಗೆ ಬರುತಿದ್ದಳು; ಅವನು ಬರುವ ದಾರಿಯನ್ನು ಎದುರು ನೋಡುತ್ತ ಇರುತಿದ್ದಳು. ಮುಖದರ್ಶನವಾದೊಡನೆ ಅವನಿಗೆ ಮನಸ್ಸಿನಲ್ಲೇ ನಮಸ್ಕಾರ ಮಾಡುತಿದ್ದಳು. ಅವನು ಕೂಡ ಆ ಮನೆಯ ಸಮೀಪಸ್ಥನಾದಾಗ ಒಮ್ಮೆ ಕಣ್ಣೆತ್ತಿ ಮೇಲೆ ನೋಡುತಿದ್ದನು. ಕೂಡಲೆ ನತಮಸ್ತಕನಾಗಿ ಮುನ್ನಡೆದು ಹೋಗುತಿದ್ದನು. ಎಷ್ಟು ದೂರದ ತನಕ ಅವನನ್ನು ನೋಡಬಹುದಾಗಿತ್ತೋ, ಅಲ್ಲಿ ನಿಂತು ಅವಳು ಅಷ್ಟು ದೂರದ ತನಕವೂ ಅವನನ್ನು ನೋಡುತ್ತ ಇರುತಿದ್ದಳು. ಆ ಮೇಲೆ ಅವಳು—'ಅಯ್ಯೋ ದೇವರೇ! ಈ ಹೊತ್ತೂ ಆಗಲಿಲ್ಲ' ಎಂದುಕೊಂಡು ಒಳಗೆ ತನ್ನ ಮಂಚದ ಮೇಲೆ ಹೋಗಿ ಬಿದ್ದುಕೊಳ್ಳುತಿದ್ದಳು.

ಅವಳು ಒಬ್ಬ ವೇಶ್ಯೆಯ ಹುಡುಗಿ. ಪ್ರಾಯ ಇಪ್ಪತ್ತು ಆಗಿದ್ದೆ. ಪ್ರತಿ ದಿನ ದೀಪ ಹಚ್ಚುವ ಸಮಯವೆಂದರೆ, ವೇಶ್ಯೆಯರಿಗೆ ತಮ್ಮ ರೂಪ ಸೌಂದರ್ಯಗಳನ್ನು ಪ್ರದರ್ಶನಕ್ಕೆ ಡುವ ಅಮೂಲ್ಯ ಹೊತ್ತದು! ಆಗಲೇ ಅವರು ವಿವಿಧ ಶೃಂಗಾರಗಳಿಂದ ತಮ್ಮನ್ನು ಶೃಂಗರಿಸಿಕೊಳ್ಳುವರು. ಮೈಗೆ ಲೇಪಿಸಿಕೊಂಡ ಅವರ ಸುಗಂಧದ ಸುವಾಸನೆಯು ಆ ಮಾರ್ಗವಾಗಿ ಹೋಗುವ ಕಣ್ಣುಕಾಣದ, ಬುದ್ಧಿ ಇಲ್ಲದ ಯುವಕರನ್ನು ಮತ್ತರನ್ನಾಗಿ ಮಾಡುವುದು. ಬಾಗಿಲನ್ನು ಅರ್ಧ ತೆರೆದಿಟ್ಟು ಬೀದಿ ಕಡೆಗೆ ನೋಡುತ್ತಿರುವ ವೇಶ್ಯೆಯರ ಆ ಕಾಲದ ಒನಪು ಒಯ್ಯಾರ, ಭಾವಭಂಗಿ ದೃಷ್ಟಿಪಾತಗಳು ಎಂಥ ನೈಷ್ಠಿಕ ಬ್ರಹ್ಮಚಾರಿಯ ವ್ರತವನ್ನಾದರೂ ಭಂಗ ಮಾಡುವವು. ಕಾಮುಕರನ್ನು ಮೋಹಜಾಲದಲ್ಲಿ ಕೆಡವಿ, ಅವರ ಹಣ ಕಾಸು, ಬದುಕು, ಬಾಳನ್ನು ಸೂರೆಮಾಡಲಿಕ್ಕೆ ವೇಶ್ಯೆಯರಿಗೆ ಸಾಯಂಕಾಲದ ಸಮಯವು ಅತ್ಯಂತ ಅನುಕೂಲವಾದ ಸಮಯವಾಗಿದೆ. ಅವಳಿಗೆ ಮಾತ್ರ ಸಮಯದ ಬೆಲೆ ತಿಳಿಯದು. ಪ್ರತಿದಿನ ಅವನ ಮುಖ ನೋಡಬೇಕೆಂಬುದು ಅವಳ ಜೀವನದ ಒಂದೇ ಒಂದು ಗುರಿ; ಒಂದೇ ಒಂದು ಆಸೆ. ಆ ಆಸೆಯು ಮುಗಿದೊಡನೆ ಜೀವನದಲ್ಲಿ ಅವಳಿಗೆ ಬೇರೆ ಏನೂ ಬೇಕಾಗುವದಿಲ್ಲ. ಅವಳು ನೆಟ್ಟಗೆ ಜಗುಲಿಯಿಂದ ಕೋಣೆಗೆ ಹೋಗಿ ತನ್ನ ಮಂಚದ ಮೇಲೆ ಮಲಗಿಕೊಳ್ಳುವಳು. ಕಿಟಕಿಯ ಮೂಲಕದಿಂದ ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ನೋಡುತ್ತ ಇರುವಳು. ನೋಡುತ್ತ ನೋಡುತ್ತ ಅವಳ ಕಣ್ಣುಗಳಲ್ಲಿ ನೀರು ತುಂಬಿ ಬರುವದು. ಹಾಗೆಯೇ ರಾತ್ರಿ ಕಳೆದು ಹಗಲಾಗುವದು.

ಆ ದಿನ ರಾತ್ರಿ ಎಂಟು ಗಂಟೆಯಾಗಿತ್ತಾದರೂ ಅವನು ಆ ಮಾರ್ಗವಾಗಿ ಬಂದು ಹೋಗಿರಲಿಲ್ಲ. ಅವಳು ಸಾಯಂಕಾಲ ಐದು ಹೊಡೆದಾಗಿನಿಂದ ಅಷ್ಟರ ತನಕವೂ ಮಾಳಿಗೆ ಜಗಲಿಯಲ್ಲಿ ನಿಂತುಕೊಂಡೇ ಇದ್ದಳು. ಸಮಯವು ಬಹಳ ಕಳೆದಿದೆಯಾದರೂ, ಅದು ಅವಳಿಗೆ ತಿಳಿಯಲಿಲ್ಲ. 'ಮನಸ್ಸಿನಲ್ಲಿ ಒಂದು ಚಿಂತೆ, ಒಂದು ಯೋಚನೆ—ನಿತ್ಯ ಐದಾಗುವದರೊಳಗೆ ಬರುವ ಅವನು ಇಂದು ಯಾಕೆ ಎಂಟಾದರೂ ಬರಲಿಲ್ಲ? ಅಥವಾ ನನ್ನ ಕಣ್ಣು ತಪ್ಪಿಸಿಕೊಂಡು ಅವನು ಬಂದು ಹೋದನೇ? ಏನು ಮಾಡಿದ? ಯಾಕೆ ಹಾಗೆ ಮಾಡಿದ?' ದಾರಿಯನ್ನು ನೋಡಿ ನೋಡಿ ಅವಳ ಕಣ್ಣುಗಳು ನೋತುಹೋದುವು. ತನ್ನ ಭಾಗ್ಯವನ್ನು ಯೋಚಿಸಿ ಯೋಚಿಸಿ ಅವಳ ಕಣ್ಣುಗಳಿಂದ ಎರಡು ಹನಿ ನೀರು ತೊಟ್ಟಿಕ್ಕಿತು. ಅವಳು ಅಲ್ಲೇ ಜಗುಲಿಯಲ್ಲಿ ಕೂತಳು. ತಲೆಯನ್ನು ಮೊಣಕಾಲಿಗೆ ಕೊಟ್ಟು ಅಳತೊಡಗಿದಳು. ಪುನಃ ಎದ್ದು ನೋಡುವಾಗ ಅವನು ಬಂದು ಅಷ್ಟು ದೂರ ಹೋಗಿ ಬಿಟ್ಟಿದ್ದನು. 'ಅಯ್ಯೋ ದೇವರೇ!' ಎಂದು ಅವಳು ಒಂದು ನಿಟ್ಟುಸಿರನ್ನು ಬಿಟ್ಟಳು.

ಅವನು ಮತ್ತೆ ಪುನಃ ಹಿಂದಿರುಗುವಾಗ ಹನ್ನೆರಡಾಗಿತ್ತು. ಅದೇ ಮಾರ್ಗವಾಗಿ ಬರುತ್ತ ಇದ್ದ. ಅವನ ಮುಂದಿನ ದೃಶ್ಯವನ್ನು ನೋಡಿ ಅವನಿಗೆ ಪರಮಾಶ್ಚರ್ಯವಾಯಿತು. ಅವಳ ಕೋಣೆಯ ಕೋಣೆಯಲ್ಲಿ ಸಣ್ಣದೊಂದು ದೀಪವು ಆಗಲೂ ಮಿಣ ಮಿಣ ಉರಿಯುತಿತ್ತು. ಅವಳು ಆಗಲೂ ಅವನು ಬರುವದನ್ನು ಎದುರು ನೋಡುತ್ತ ಜಗಲಿಯಲ್ಲಿ ನಿಂತಿದ್ದಳು. ಎಲ್ಲರೂ ಘೋರ ನಿದ್ದೆಯಲ್ಲಿರುವ ಸಮಯವದು. ಅವನಿಗೆ ಕೆಲಸದ ಅವಸರ ಬಹಳ. ಆದ್ದರಿಂದ ಜೋರು ಜೋರಾಗಿ ಹೆಜ್ಜೆಯನ್ನಿಟ್ಟಿದ್ದನು. ನಡೆದು ಹೋಗುವಾಗ ಥಕ್ಕನೆ ಯಾರೋ ಅವನನ್ನು ತಡೆದು ನಿಲ್ಲಿಸಿದ ಹಾಗಾಯಿತು. ಬೀದಿಯ ದೀಪಕಂಬದ ಮಸುಕು ಬೆಳಕಿನಲ್ಲಿ ಕಣ್ತೆರೆದು ನೋಡಿದ. ಅವಳು—ವೇಶ್ಯೆಯ ಹುಡುಗಿ—ಎದುರು ನಿಂತಿದ್ದಳು. ಏನೆಂದು ಕೇಳಿದ. ಆದರೆ ಅವಳು ಯಾವ ಉತ್ತರವನ್ನೂ ಕೊಡಲಿಲ್ಲ. ಪುನಃ ಕೇಳಿದ. ಅವಳ ಕಣ್ಣುಗಳಿಂದ ನೀರು ಧಾರೆಕಟ್ಟಿ ಹರಿಯಲಾರಂಭಿಸಿತು. ಸಣ್ಣ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳುತಿದ್ದಳು. ಮೂರನೆ ಬಾರಿಗೆ ಪುನಃ ಏನೆಂದು ಕೇಳಿದಾಗ ಅವಳಿಂದ ದುಃಖಾವೇಗವನ್ನು ತಡೆಯಲಾಗಲಿಲ್ಲ. ಅಲ್ಲೇ ನಡು ಬೀದಿಯಲ್ಲಿ ಕೂತು ತನ್ನ ಕಣ್ಣೀರುಗಳಿಂದ ಅವನ ಎರಡೂ ಕಾಲುಗಳನ್ನು ತೊಳೆಯತೊಡಗಿದಳು. ಹೃದಯವು ದುಃಖದಿಂದ ತುಂಬಿ ಹೋದಾಗ, ಇಂಥ ಪ್ರಶ್ನೆಗಳನ್ನು ಕೇಳುತಿದ್ದರೆ ತುಂಬಿದ ಹೃದಯವು ಬಿರಿದು ಹೋಗುತ್ತದೆ. ಹಾಗೆಯೇ ಆಯಿತು. ಅವಳ ಆಗಿನ ಸ್ಥಿತಿ ಅವಳ ಬಾಯಿಯಿಂದ ಒಂದಾದರೂ ಮಾತು ಹೊರಡಲಿಲ್ಲ. ಗಡಿಯಾರದಲ್ಲಿ ಒಂದು ಹೊಡೆಯಿತು. ಅವನು ಒಂದು ಹೆಜ್ಜೆ ಮುಂದಿಟ್ಟು—ನೀನು ಒಂದೂ ಮಾತಾಡುವುದಿಲ್ಲ; ನನಗೊಂದೂ ತಿಳಿಯುವದಿಲ್ಲ. ನಾನು ಹೋಗುತ್ತೇನೆ' ಎಂದ.

ತುಂಬಿದ ಕಣ್ಣುಗಳಿಂದ ಅವನನ್ನೇ ನೋಡುತ್ತ, ಅವಳು ಬಹು ಪ್ರಯಾಸಪಟ್ಟು 'ಈಗ ಕೂಡದು' ಎಂದಳು. ಅವನು ಅವಳನ್ನು ಎತ್ತಿ ನಿಲ್ಲಿಸಿ, ಪ್ರೇಮದಿಂದ ತಲೆಯಮೇಲೆ ಕೈ ಆಡಿಸುತ್ತ—'ಹಾಗಾದರೆ ಯಾಕೆ ಅಳುತ್ತೀ ಎಂದು ಹೇಳು. ಕೈಲಾದ ಸಹಾಯ ಮಾಡುತ್ತೇನೆ' ಎಂದ.

'ಹಾಗಿದ್ದರೆ ಒಳಗೆ ನಡೆಯಿರಿ, ಹೇಳುತ್ತೇನೆ' ಎಂದವಳು ಬಿಕ್ಕಳಿಸುತ್ತ ಅಂದಳು.

ಇಬ್ಬರೂ ಒಳಗೆ ನಡೆದರು. ಅವನು ಅವಳ ಮಂಚದ ಮೇಲೆ ಕೂತುಕೊಂಡ. ಅವಳು ಕೆಳಗೆ ನೆಲದ ಮೇಲೆ ಅವನ ಕಾಲಬುಡದಲ್ಲಿ ಕೂತಿದ್ದಳು. ಅವಳ ಕಣ್ಣುಗಳಿಂದ ಗಂಗಾ ಪ್ರವಾಹಕ್ಕೆ ಆರಂಭವಾಗಿತ್ತು. ಅವನು ಬಹಳ ವ್ಯಾಕುಲಪಟ್ಟು ಪುನಃ ಏನೆಂದು ಕೇಳಿದ. ಅವಳು ಮಾತಾಡಲೊಲ್ಲಳು. ಅವನು ಅವಳ ಕೈ ಹಿಡಿದಾಗ ಎದ್ದು ಅವನ ಎಡಗಡೆಗೆ ಮಂಚದ ಮೇಲೆ ಕೂತಳು. ತನ್ನ ತಲೆಯನ್ನು ಅವನ ವಕ್ಷಸ್ಥಳದ ಮೇಲಿಟ್ಟು ಪುನಃ ಅಳಲಾರಂಭಿಸಿದಳು.

ಅವಳ ಆ ಭಂಗಿ ನೋಡಿ ಅವನಿಗೆ ಗಾಬರಿಯಾಯಿತು. ಅವಳ ಅಂಗಸ್ಪರ್ಶನದಿಂದ ಅವನ ಅಂಗೋಪಾಂಗಗಳು ನಡುಗತೊಡಗಿದುವು. ಇಂಥ ಪರಿಸ್ಥಿತಿಯನ್ನು ಎದುರಿಸುವ ಅಭ್ಯಾಸವು ಅವನಿಗಾಗಿರಲಿಲ್ಲ. ಅವನು ಎದ್ದು ನಿಂತು—'ಸರಿ, ಹೋಗಿಬರುತ್ತೇನೆ. ಸಮಯ ಬಹಳ ಆಯಿತು' ಎಂದ.

'ಹೋಗಲೇ ಬೇಕೆ?' ಎಂದವಳು ಬಹಳ ಕಾತರಳಾಗಿ ಕೇಳಿದಳು.

'ಪುನಃ ಎಂದು ಬರುವಿರಿ?'

'ಅನುಕೂಲವಾದರೆ ನಾಳೆ ಹಗಲುಹೊತ್ತಿಗೆ ಬರುವೆನು.'

'ಯಾವಾಗಲಾದರೂ ಸರಿಯೆ; ಬರುವಿರಷ್ಟೆ?'

'ಆದಷ್ಟು ಪ್ರಯತ್ನ ಮಾಡುತ್ತೇನೆ. ಕೆಲಸ ಬಹಳ ಇದೆ.'

ಅವನು ಅಲ್ಲಿಂದ ಹೊರಟ. ಬಾಗಿಲಿನ ತನಕ ಬಂದು ಅವಳು ಅವನನ್ನು ಕಳುಹಿಸಿಕೊಟ್ಟಳು. ಆದರೆ ಆಗಿನಿಂದ ಆ ಮಾರ್ಗವಾಗಿ ಹೋಗಿಬರುವದನ್ನು ನಿಲ್ಲಿಸಿಬಿಟ್ಟ. ಮರುದಿನ ಅವನು ಅವಳ ಮನೆಗೆ ಹೋಗಲಿಲ್ಲ. ಎರಡು ಮೂರು ದಿನಗಳು ಕಳೆದ ಮೇಲೆಯೂ ಹೋಗಲಿಲ್ಲ. ಅವಳ ನಾಲ್ಕೈದು ಪತ್ರಗಳು ಬಂದುವು. ಅವಕ್ಕೆ ಉತ್ತರವನ್ನು ಸಹ ಕೊಡಲಿಲ್ಲ. ಕೊನೆಗೆ ಆ ದಿನ ಪೇಪರುಗಳನ್ನು ಓದುವಾಗ ಹೀಗೊಂದು ಸಮಾಚಾರವು ಮುಖ್ಯ ಸ್ಥಾನದಲ್ಲಿ ಪ್ರಕಟವಾಗಿತ್ತು—'ಯಾವನೋ ಒಬ್ಬ ಯುವಕನ ಪ್ರೇಮಪಾಶದಲ್ಲಿ ಸಿಲುಕಿದ ಕುಮುದ ಕುಮಾರಿ ಎಂಬ ವೇಶ್ಯೆಯ ಹುಡುಗಿ ಆಶಾಭಂಗವಾದುದರಿಂದ ಆತ್ಮಘಾತ ಮಾಡಿಕೊಂಡಳು.' ಅವನು ಓದುತ್ತಿದ್ದ ಹಾಗೆ ಟಪ್ಪಾಲಿನವನು ಅವನಿಗೊಂದು ಪತ್ರವನ್ನು ಕೊಟ್ಟು ಹೋದ.

ಅವನು ಅವಸರದಿಂದ ಪತ್ರವನ್ನು ಓದತೊಡಗಿದ. ಓದುತಿದ್ದ ಹಾಗೆ ಅವನ ತುಟಿಗಳು ಒಣಗಿದುವು. ಕಂಠವು ಆರಿತು, ಕಣ್ಣುಗಳ ಮುಂದೆ ಕತ್ತಲೆ ಕವಿದ ಹಾಗೆ ಆಯಿತು. 'ಕುಮುದ ವೇಶ್ಯೆಯ ಹುಡುಗಿ ಎಲ್ಲರಂತೆ ಅವಳು' ಎಂದು ಅವನು ಎಣಿಸಿದ್ದ. ಆದರೆ ಆಗ ಅವನಿಗೆ ತನ್ನ ತಪ್ಪಿನ ಕುರಿತು ಬಹಳ ಪಶ್ಚಾತ್ತಾಪವಾಯಿತು; ಅವನು ಪತ್ರವನ್ನು ತೆಗೆದುಕೊಂಡು ಪುನಃ ಓದತೊಡಗಿದ. ಅದರಲ್ಲಿ ಹೀಗೆಂದು ಬರೆದಿತ್ತು:—

'ಪ್ರಾಣೇಶ್ವರ! ಬಾಲ್ಯವನ್ನು ಕಳೆದು ಯೌವನಕ್ಕೆ ಬರುತಿದ್ದ ಹಾಗೆ, ಅಖಿಲ ಬ್ರಹ್ಮಾಂಡದಲ್ಲಿ ನನ್ನ ಈ ಪರಿವಾರ ಆ ಚಿಕ್ಕ ಪರಿವಾರದೊಳಗಿನ ನನ್ನ ಭವಿಷ್ಯವನ್ನು ಆಲೋಚಿಸುತ್ತ ನನ್ನ ಹೃದಯವು ಕಂಪಿಸಿತ್ತು. ನನ್ನ ಜೀವನದ ಕೊನೆ ಹೀಗಾಗುವದೆಂಬುದನ್ನು ಆಲೋಚಿಸಿ ಜೀವನವು ನನಗೆ ಬಹಳ ಭಯಂಕರವಾಗಿ ತೋರಿತ್ತು. ಗಿಡದಲ್ಲಿ ಅರಳಿದ ಸುಗಂಧಪೂರಿತ ಸುಂದರ ಹೂವನ್ನು ಕಿತ್ತು ತಂದು ಜಡೆಯಲ್ಲಿ ಮುಡಿದು, ಒಣಗಿದ ಮೇಲೆ ಕಸದ ರಾಶಿಗೆ ಒಗೆಯುವಂತೆ ವೇಶ್ಯೆಯರ ಸ್ಥಿತಿ ಇದೆ. ಅದೇ ಸ್ಥಿತಿಯು ನನಗೂ ಪ್ರಾಪ್ತವಾಗುವದೆಂಬುದನ್ನು ತಿಳಿದು ನನಗೆ ಈ ಪ್ರಪಂಚದಲ್ಲಿ ಬದುಕುವದೇ ಬೇಡವೆನ್ನಿಸಿತು. ನಾನು ತಾರುಣ್ಯವನ್ನು ಪಡೆದಾಗ—ಮಧುಪೂರ್ಣ ಮನೋಹರ ಪುಷ್ಪವನ್ನು ಎಲ್ಲೆಲ್ಲಿಂದಲೋ ಬಂದು ಮುತ್ತುವ ಚಿಟ್ಟೆ ಪತಂಗಗಳಂತೆ ಎಲ್ಲಿದು ಬಂದು ನನ್ನನ್ನು ಮುತ್ತುವರು. ನನ್ನ ರೂಪು ಯೌವನದ ಸವಿಯನ್ನು ಸವಿಯುವರು. ಆದರೆ ಯೌವನವು ಇಳಿದಾಗ, ಕಂಠದಲ್ಲಿ ಮಾಧುರ್ಯವು ಇಲ್ಲದಿದ್ದಾಗ, ನೇತ್ರಗಳ ಮಾದಕತೆ, ಅಧರಗಳ ಚಂಚಲತೆ, ಎಲ್ಲ ಮಾಯವಾದಾಗ, ಅಂಗೋಪಾಂಗಗಳು ಶಿಥಿಲವಾದಾಗ, ಯಾರು ನನ್ನಷ್ಟು ಮೆಚ್ಚುವರು? ಯಾರು ನನ್ನನ್ನು ಕೇಳುವರು, ನೋಡುವರು? ಅದನ್ನು ಆಲೋಚಿಸಿಯೇ ಕಂಗೆಟ್ಟ ನಾನು ಯಾರೊಬ್ಬ ಯೋಗ್ಯನ ಕೈಹಿಡಿದು ಗೃಹಿಣಿಯಾಗಿ ಸ್ವತಂತ್ರ ಜೀವನವನ್ನು ಸಾಗಿಸಬೇಕೆಂದು ನನಗೆ ಅನ್ನಿಸಿತು. ಅದರಲ್ಲಿಯೇ ಪರಮ ಶಾಶ್ವತ ಸುಖವಿದೆ ಎಂದು ನನಗೆ ತೋರಿತು. ಆಗಲೇ ನಿಮ್ಮ ಸುಂದರ ಮನೋಹರ ಮೂರ್ತಿಯು ನನ್ನ ಹೃದಯ ಸಿಂಹಾಸನದ ಮೇಲೆ ಪ್ರತಿಷ್ಠಿಸಲ್ಪಟ್ಟಿತು. ಆದರೆ ನನ್ನ ದೌರ್ಭಾಗ್ಯ! ನನ್ನ ಹೃದಯ ಸಿಂಹಾಸನವು ತಮಗೆ ಮೆಚ್ಚುಗೆಯದ್ದಾಗಲಿಲ್ಲ. ತಾವು ಅದನ್ನು ಕಡೆಗಣ್ಣಿನಿಂದ ನೋಡಿ ತಿರಸ್ಕರಿಸಿ ಹೋದಿರಿ. ಆಗ ನನ್ನ ಹೃದಯವು ಎಷ್ಟು ಪ್ರೇಮಪೂರ್ಣವಾಗಿತ್ತು. ಅದು ನಿಮ್ಮ ಮೇಲೆ ಎಂಥ ಭಕ್ತಿ ಆದರ ವಿಶ್ವಾಸಗಳನ್ನು ಇಟ್ಟಿತ್ತು ಎಂಬುದನ್ನು ತಿಳಿದಿದ್ದರೆ.., ಅನುಭವಿಸಿದ್ದರೆ... ಇಲ್ಲ, ಅದನ್ನು ಚಿಂತಿಸಿ ಫಲವಿಲ್ಲ. ನೀವು ನಿಜಕ್ಕೂ ಸಮಾಜ ಸುಧಾರಕರು. ದೇಶ ಸೇವಕರು ಎಂದು ನಾನು ಭಾವಿಸಿದ್ದೆ; ಪ್ರೇಮ ಪ್ರೀತಿ, ಸಹೃದಯತೆಯಿಂದ ತುಂಬಿದ ದೇವರು ಎಂದು ತಿಳಿದಿದ್ದೆ. ಅದ್ದರಿಂದ ನನ್ನ ಹೃದಯ, ಮನಸ್ಸು, ಶರೀರ ಎಲ್ಲವನ್ನು ನಿಮ್ಮ ಪಾದತಲದಲ್ಲಿ ಅರ್ಪಿಸಿದ್ದೆ. ಆದರೆ ನಿಮ್ಮ ಉಪದೇಶವು ನಿಮಗಾಗಿ ಅಲ್ಲ; ಅದು ಇತರರಿಗಾಗಿ ಇದೆ ಎಂಬುದು ಈಗ ನನಗೆ ತಿಳಿಯಿತು.

'...ಹೇಗೂ ಇರಲಿ. ದೇವರ ಇಚ್ಛೆಯನ್ನು ಮೀರಲಾಗುವದಿಲ್ಲ. ದುಃಖವನ್ನು ಸಹಿಸಲಿಕ್ಕಾದರೂ ಒಂದು ಮಿತಿ ಇದೆ, ಮೇರೆ ಇದೆ. ಈಗ ನನ್ನ ಹೃದಯವು ಸ್ಮಶಾನದಂತಾಗಿದೆ. ಎಷ್ಟೋ ಕೋಮಲ ಭಾವನೆಗಳು, ಆಸೆ ಪ್ರತೀಕ್ಷೆಗಳು, ಸ್ನಿಗ್ಧಸ್ಮೃತಿಗಳು ಅದರಲ್ಲಿ ಸ್ವಾಹಾಕ್ಕೆ ಸುಟ್ಟು ಭಸ್ಮವಾಗಿವೆ. ಆ ಉರಿಯ ಜ್ವಾಲೆಯು ಈಗ ನನಗೆ ಅಸಹ್ಯವಾಗಿದೆ. ಹೆಚ್ಚಿಗೆ ಏನು ಹೇಳಲಿ? ಹೋಗಿ ಬರುತ್ತೇನೆ. ಹೀಗೆಂದು ಪತ್ರ ಬರೆದ ದಾಸಿಯ ಅಪರಾಧವನ್ನು ಕ್ಷಮಿಸಿರಿ.—ಕುಮುದಾ.'

ವೇಶ್ಯೆಯ ಹುಡುಗಿ!—ಕುಮುದೆ!—ಇಂಥವಳು ಇಂಥವಳಾಗುವಳು ಅಥವಾ ಇಂಥವಳಾಗಿದ್ದಳು ಎಂದು ಅವನು ಕನಸು ಮನಸ್ಸುಗಳಲ್ಲಿ ಊಹಿಸಿರಲಿಲ್ಲ. ಕೆಸರು ನೀರಿನಲ್ಲಿ ಹುಟ್ಟಿದ ಕುಮುದ, ದೇವರ ಮುಡಿಗೂ ಮುಡಿಸಲು ಎಷ್ಟು ಪವಿತ್ರವಾಗಬಲ್ಲುದೆಂಬುದು ಅವನಿಗೆ ಆ ಪತ್ರ ಓದಿದ ಅನಂತರ ಗೊತ್ತಾಯಿತು. ವೇದನೆಯಿಂದ ತುಂಬಿದ ಹೃದಯವು ಕಾತರ ಕ್ರಂದನ, ಘೋರ ನಿರಾಶೆಯ ತೀಕ್ಷ್ಣ ದಾಹ, ಅದರ ಮೇಲೆ ಪವಿತ್ರ ನಿಷ್ಕಲಂಕ ಪ್ರೇಮದ ಪ್ರಬಲ ಪ್ರವಾಹ, ಆ ಪ್ರವಾಹದಲ್ಲಿ ಸರ್ವಸ್ವ ತ್ಯಾಗ ಇವನ್ನೆಲ್ಲ ಆಲೋಚಿಸಿ ಯುವಕನ ಹೃದಯವು ಸಂತಾಪ, ಪಶ್ಚಾತ್ತಾಪಗಳಿಂದ ನೊಂದು ಬೆಂದು ಹೋಯಿತು. ಪತ್ರವನ್ನು ಓದಿದ ಹಾಗೆ ಅವನು ಅಲ್ಲಿಯೇ ಒರಗಿ ಮೂರ್ಛೆ ಹೋದನು.

ಸಾವಕಾರ ಶ್ರೀನಿವಾಸ ರಂಗಪ್ಪೈ
[ಸ್ಥಾಪನೆ: ಕ್ರಿ. ಶ. 1858]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಲ್, ಮಂಗಳೂರು.

ಜಿನ್ನರ ಧೋರಣೆಗೆ ದೇಶವಿದೇಶಗಳ ವಿರೋಧ!

ಸರ್ ಸಿಕಂದರರ ಖಂಡನ

ಮೆಂಚೆಸ್ಟರ್ ಗಾರ್ಡಿಯನ್ ಲೇಖನ



ಜಿನ್ನಾ

ಭಾರತವನ್ನು ಹಿಂದುಗಳ ಹಿಂದೂದೇಶ ಮತ್ತು ಮುಸಲ್ಮಾನರ ಹಿಂದೂದೇಶ ಎಂದು ವಿಭಾಗಿಸಬೇಕಾಗಿ ಜಿನ್ನರು ಹೇಳುತ್ತಿರುವ ವ್ಯಾಕಿಗೆ ದೇಶವಿದೇಶಗಳ ಯಾವ ಭಾಗದಿಂದಲೂ ಪುರಸ್ಕಾರವು ದೊರೆಯುತ್ತಿಲ್ಲ. ಮುಸಲ್ಮಾನರಿಗೆ ದೇಶವನ್ನು ಹಂಚಿ ಕೊಡುವುದಾದರೆ, ಇತರ ಅಲ್ಪಸಂಖ್ಯಾಕರಿಗೂ ಒಂದೊಂದು ಅಂಶವನ್ನು ಯಾಕೆ ಹಂಚಿ ಕೊಡಬಾರದು? ಎಂಬ ಪ್ರಶ್ನೆಗೆ ಜಿನ್ನರ ಉತ್ತರವಿಲ್ಲ. ಉತ್ತರ ಹಿಂದುಸ್ಥಾನದ ಗಡಿನಾಡು, ಪಂಜಾಬು, ಸಿಂಧ, ಬಂಗಾಳದಂಥ ಪ್ರಾಂತ್ಯಗಳು ಮುಸಲ್ಮಾನರ ನಿರಂಕುಶ ಅಧಿಕಾರಕ್ಕೆ ಒಳಪಡಬೇಕೆಂದು ಜಿನ್ನರು ಹೇಳಿದಂತೆ, ಸೀಖರೂ ತಮ್ಮ ಪ್ರಾಂತ್ಯವನ್ನು ತಮಗೆ ಬೇರೆ ಮಾಡಿಕೊಡಬೇಕೆಂದು ಹೇಳತೊಡಗಿದ್ದಾರೆ. ಅವರಿಗೆ ಪಂಜಾಬನ್ನು ಕೊಡುವದಲ್ಲದೆ, ಬೇರೆ ಯಾವ ಭಾಗವನ್ನು ಕೊಡಬಹುದು? ಜಿನ್ನರ ತರ್ಕವನ್ನು ಇತರ ಅಲ್ಪ ಸಂಖ್ಯಾಕರ ಮಟ್ಟಿಗೂ ಅನ್ವಯಿಸಿಕೊಳ್ಳುವದಾದರೆ ಹಿಂದೂದೇಶವು ಚೂರು ಚೂರಾಗಿ ಒಡೆದುಹೋಗಬೇಕಾಗುವದು. ಈ ವಿಷಯವಾಗಿ ಜಿನ್ನರ ಸ್ವಧರ್ಮೀಯರಿಂದಲೇ ವಿರೋಧವು ಬಂದಿದೆ. ರಾಷ್ಟ್ರೀಯ ಮುಸಲ್ಮಾನರು, ಅಹರಾರ ಮುಸಲ್ಮಾನರು ಜಿನ್ನರಿಗೆ ಮೊದಲಿನಿಂದಲೂ ವಿರೋಧಿಗಳು; ಈಗ ಮುಸ್ಲಿಂ ಲೀಗಿನ ದೊಡ್ಡ ಮನುಷ್ಯರೂ ಕೂಡ ಜಿನ್ನರಿಗೆ ಪ್ರತಿಕೂಲರಾಗಿರುವರು. ಸರ್ ಸಿಕಂದರ ಹಯ್ಯಾತ್ ಖಾನರು ಇಂವರಲ್ಲಿ ಪ್ರಮುಖರಾಗಿದ್ದಾರೆ. ಇವರು ಬೇರೆ ಜಾತಿಮತ ಧರ್ಮೀಯರ ಸಹಕಾರ ಬೆಂಬಲವಿಲ್ಲದ ಯಾವ ಸರಕಾರದಲ್ಲಿ ಯೂ ತಾನು ಅಧಿಕಾರ ಪದವಿಯನ್ನು ಸ್ವೀಕರಿಸಲಾರೆನೆಂದಿದ್ದಾರೆ.

ವಿಲಾಯತಿಯಲ್ಲಿ ವಿರೋಧ

ಎಲ್ಲಿ ಮುಸ್ಲಿಂ ಲೀಗಿಗೆ ಬೆಂಬಲವು ಚೆನ್ನಾಗಿರುವದೆಂದು ಊಹಿಸಲಾಗಿತ್ತೋ, ಆ ಪ್ರಾಂತ್ಯಗಳಲ್ಲಿಯೇ ಜಿನ್ನರ ಧೋರಣೆಯ ದೆಸೆಯಿಂದಾಗಿ, ಮುಸ್ಲಿಂ ಲೀಗು ಮುಸಲ್ಮಾನರ ಬೆಂಬಲವನ್ನು ಕಳಕೊಳ್ಳುತ್ತಾ ಇದೆ. ಹಿಂದೆ ಕೌನ್ಸಿಲು ಎಸೆಂಬ್ಲಿಗಳಿಗೆ ನಡೆದ ಚುನಾವಣೆಯ ಫಲವು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಗಡಿನಾಡು, ಪಂಜಾಬು, ಸಿಂಧ, ಬಂಗಾಳ, ಅಸ್ಸಾಮುಗಳಲ್ಲಿ ಕೂಡ, ಮುಸ್ಲಿಂ ಲೀಗು ತನ್ನದೆ ಆದ ಮಂತ್ರಿಮಂಡಲವನ್ನು ಸ್ಥಾಪಿಸಲಿಕ್ಕೆ ಸಮರ್ಥವಾಗಿಲ್ಲ. ಜಿನ್ನರ ಮಾತಿಗೆ ಅವರ ಮುಸಲ್ಮಾನ ಧರ್ಮಾನುಯಾಯಿಗಳ ಪ್ರೋತ್ಸಾಹವೇ ಇಲ್ಲ ಎಂದು ಮಿ. ಹೊರೆಸ ಅಲೆಕ್ಸಾಂಡರರು ಮೆಂಚೆಸ್ಟರ ಗಾರ್ಡಿಯನ್ ಪತ್ರಿಕೆಗೆ ಒಂದು ಲೇಖನವನ್ನು ಬರೆದು ವಿಲಾಯತಿ ಜನರ ಲಕ್ಷ್ಯವನ್ನು ಈ ಸತ್ಯದ ಕಡೆಗೆ ಸೆಳೆದಿದ್ದಾರೆ. ಹಿಂದೂದೇಶದ ಹೆಚ್ಚಾಗಿ ಪೇಟೆ ಶಹರುಗಳಲ್ಲಿರುವ ಹಿಂದು ಮುಸಲ್ಮಾನರ ಸ್ನೇಹ ಸಂಬಂಧವು ಶಿಥಿಲವಾಗುತ್ತ ಬಂದಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಅಷ್ಟರಿಂದ ಮಾತ್ರ ಇಲ್ಲಿಯ ಅಲ್ಪ ಸಂಖ್ಯಾಕ ಸಮಸ್ಯೆಯನ್ನು ಬಗೆಹರಿಸುವದು ಅಸಾಧ್ಯವೆಂದು ತಿಳಿಯುವದು ತಪ್ಪಾಗಿದೆ. ಹಿಂದೂದೇಶದ ಎಲ್ಲಾ ಮುಸಲ್ಮಾನರ ಪರವಾಗಿ ಮಾತನಾಡಬಲ್ಲ ಸಂಸ್ಥೆ ಎಂದರೆ ಮುಸ್ಲಿಂ ಲೀಗು ಮಾತ್ರ ಎಂದು ತಪ್ಪಭಿಪ್ರಾಯ ಮಾಡಿಕೊಂಡಿರುವದರಿಂದಲೇ ಇಲ್ಲಿ ಅಲ್ಪಸಂಖ್ಯಾಕ ಸಮಸ್ಯೆಯನ್ನು ಬಿಡಿಸುವುದು ಕಠಿಣವಾಗಿದೆ. ಹೀಗೆ ಕಾಂಗ್ರೆಸು ಕೇವಲ ಹಿಂದುಗಳ ಪರವಾದ ಪ್ರಾತಿನಿಧಿಕ ಸಂಸ್ಥೆ ಅಲ್ಲವೋ, ಹಾಗೆ ಮುಸ್ಲಿಂ ಲೀಗು ಎಲ್ಲಾ ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆ ಆಗಿರುವದಿಲ್ಲ. ಎಷ್ಟೋ ಲಕ್ಷ ಮುಸಲ್ಮಾನರು ಮುಸ್ಲಿಂ ಲೀಗಿನೊಡನೆ ಯಾವ ಸಂಬಂಧವೂ ಇಲ್ಲದ ಅಹರಾರ, ಜಮಾಯತ್ ಉಲ್ ಉಲೇಮುಗಳಲ್ಲಿ ಇದ್ದಾರೆ. ಮತ್ತೆ ಎಷ್ಟೋ ಲಕ್ಷ ಮುಸಲ್ಮಾನರು ಕಾಂಗ್ರೆಸಿನೊಳಗೆ ಸೇರಿದ್ದಾರೆ. ಈ ಸಂಗತಿಯನ್ನು ಈಗೀಗ ವಿಲಾಯತಿ ಜನರು ಚೆನ್ನಾಗಿ ತಿಳಕೊಳ್ಳತೊಡಗಿದ್ದಾರೆ. ಆದ್ದರಿಂದ ಆ ದೇಶಗಳಲ್ಲಿಯೂ ಜಿನ್ನರಿಗೆ ಅವರ ಜನರೂ ಪ್ರತಿಕೂಲರಾಗಲಾರಂಭಿಸಿದ್ದಾರೆ.

ಪರಿಹಾರೋಪಾಯ

ಜಿನ್ನರು ಎಲ್ಲಾ ಮುಸಲ್ಮಾನರ ಪರವಾಗಿ ಮಾತನಾಡುವ ಅಧಿಕಾರ ಪಡೆದವರಲ್ಲ. ಗಾಂಧಿಯವರು ಎಲ್ಲಾ ಹಿಂದುಗಳ ಪರವಾಗಿ ಮಾತನಾಡಬಲ್ಲರು. ಬೇರೆ ಬೇರೆ ಸಂಖ್ಯಾಕ ಪರವಾಗಿ ಮಾತನಾಡಬಲ್ಲ ಒಬ್ಬೊಬ್ಬರು ಯಾರೂ ಇರುವದಿಲ್ಲ. ಆದ್ದರಿಂದ ಕಾಂಗ್ರೆಸು ಹೇಳುವಂಥ ಕಾನ್‌ಸ್ಟಿಟ್ಯೂಯೆಂಟ್ ಎಸೆಂಬ್ಲಿಯ ಮೂಲಕವೇ ಹಿಂದೂದೇಶದ ಭಾವೀರಾಜ್ಯ ಘಟನೆಯಾಗಬೇಕು, ಅದರಲ್ಲಿ ಅಲ್ಪಸಂಖ್ಯಾಕರಿಗೆ ಯಾವ ಸ್ಥಾನಮಾನ ಹಕ್ಕು ರಕ್ಷಣೆಗಳು ದೊರೆಯಬೇಕು ಎಂಬುದರ ನಿರ್ಧಾರವಾಗಬಹುದು. ಬೇರೆ ಬೇರೆ ವರ್ಗ ಪಂಗಡಗಳಿಂದ ಆರಿಸಿ ಬಂದವರೇ ಈ ಎಸೆಂಬ್ಲಿಯ ಕಾರ್ಯವನ್ನು ನಿರ್ವಹಿಸುವರು. ಆದ್ದರಿಂದ ಈ ಸಂದಿಗ್ಧ ಸಮಯದಲ್ಲಿ ಮುಸಲ್ಮಾನರು ಕಾಂಗ್ರೆಸಿಗೆ ಬೆಂಬಲ ಕೊಟ್ಟು, ಭಾವೀರಾಜ್ಯ ಘಟನೆಯನ್ನು ತಯಾರಿಸಲಿಕ್ಕೆ ಬ್ರಿಟಿಷ ಸರಕಾರದ ಮೇಲೆ ಒತ್ತಾಯವನ್ನು ಹಾಕುವದರಿಂದ ಮಾತ್ರ ಹಿಂದೂ ಮುಸಲ್ಮಾನ ಸಮಸ್ಯೆಯು ಪರಿಹಾರವಾಗುತ್ತದೆ. ಅದಕ್ಕೆ ಇದೇ ಒಂದು ಉಪಾಯವಾಗಿದೆ.

ಅರುಣ
ಗರ್ಭಾಶಯ
ರೋಗಗಳನ್ನು ನಿವಾರಿಸಿ
ಆರೋಗ್ಯವನ್ನು
ಉಂಟುಮಾಡುವದು
ತ.ಪೆ. 287., ಮದ್ರಾಸ್

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

PHYSICAL FITNESS
is the first essential in games and in every social activity.

You need not worry hereafter for your impaired vitality, premature old age and nervous break-down if you try

BHUVANENDRA "AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ್ಯ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಜಿಲ್ಲಾ ಸಮಾಚಾರ



ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿ

೩-೪-೧೯೪೦ ನೇ ಶುಕ್ರವಾರ ಸಾಯಂಕಾಲ ೫ ಘಂಟೆ ೩ಕ್ಕೆ ಶ್ರೀಯುತ ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಸಭೆಯ ವರದಿ - ಹಾಜರಿದ್ದ ಸದಸ್ಯರು ೮

ದುಃಖಸೂಚಕ ಠರಾವು— ಮದರಾಸು ಸರಕಾರದ ಮಾಜಿ ಮಂತ್ರಿಗಳಾಗಿದ್ದ ಶ್ರೀ ಯಾಕೂಬ್ ಹಸನರ ಅಕಾಲ ನಿಧನದ ಬಗ್ಗೆ ಈ ಸಭೆಯು ಅತ್ಯಂತ ವಿಷಾದದವನ್ನು ವ್ಯಕ್ತಪಡಿಸಿ, ಎರಡು ನಿಮಿಷಗಳ ಮೌನವನ್ನಾಚರಿಸುತ್ತ, ಮೃತರ ಆತ್ಮಕ್ಕೆ ಶಾಂತಿಯನ್ನು ಬಯಸಿ, ಅವರ ಕುಟುಂಬದೊಡನೆ ಸಹತಾಪವನ್ನು ಸೂಚಿಸುತ್ತದೆ

ಸರ್ಕಲು ಚುನಾವಣೆ: ಕಾಸರಗೋಡು ಮತ್ತು ಹೊಸದುರ್ಗ ಈ ಎರಡು ಸರ್ಕಲುಗಳ ಹೊರತು ಸಿಕ್ಕ ಸರ್ಕಲುಗಳಿಗೆ ನೂರು ಮೆಂಬರಿಗೆ ಒಬ್ಬ ಕಮಿಟಿ ಮೆಂಬರನಂತೆ ಚುನಾವಣೆ ನಡೆಯತಕ್ಕದೆಂದೂ, ಕಾಸರಗೋಡು ಮತ್ತು ಹೊಸದುರ್ಗ ಸರ್ಕಲುಗಳಿಗೆ ಆರಾರು ಮೆಂಬರರಂತೆ ಚುನಾವಣೆ ನಡೆಯತಕ್ಕದೆಂದೂ, ಇಡೀ ಜಿಲ್ಲೆಗೆ ಚುನಾವಣಾಧಿಕಾರಿಗಳಾಗಿ ಶ್ರೀ ಎನ್ ಶೇಷಗಿರಿ ರಾಯರು ನೇಮಿಸಲ್ಪಡತಕ್ಕದೆಂದೂ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯವರು ರಚಿಸಿದ ಚುನಾವಣೆಗಳನ್ನು ನಡೆಸತಕ್ಕದೆಂದೂ ನಿರ್ಣಯವಾಯಿತು.

ಸತ್ಯಾಗ್ರಹ ಸಮಿತಿ:—ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯೇ ಸತ್ಯಾಗ್ರಹ ಸಮಿತಿಯಾಗಿರತಕ್ಕದೆಂದೂ ಕಾರ್ಯಕಾರಿ ಮಂಡಲಿಯ ಸದಸ್ಯರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳ ಕೊಟ್ಟ ಪ್ರಕಟಣೆಗಳನ್ನನುಸರಿಸಿ, ಸತ್ಯಾಗ್ರಹ ನಿಯಮಗಳನ್ನು ಪಾಲಿಸುವ ಒಪ್ಪಿಗೆ ಕೊಡುವಂಥವರನ್ನು ಸತ್ಯಾಗ್ರಹಿಗಳಾಗಿ ಸೇರಿಸಿಕೊಳ್ಳಬಹುದೆಂದೂ ನಿರ್ಣಯಿಸಲಾಯಿತು

ರಾಮಘರ ಕಾಂಗ್ರೆಸ್ ಅಧಿವೇಶನದಲ್ಲಾದ ಗೊತ್ತುವಳಿಯನ್ನು ಈ ಕಮಿಟಿಯ ಪೂರ್ಣ ಪುಷ್ಟೀಕರಿಸುವುದರೊಂದಿಗೆ ಸತ್ಯಾಗ್ರಹಕ್ಕೆ ಅರ್ಹತೆ ತೋರುವ ರಚನಾತ್ಮಕ ಕಾರ್ಯ ಕ್ರಮ (Constructive work) ವನ್ನು ಕೈಕೊಳ್ಳುವಂತೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಎಲ್ಲ ಸದಸ್ಯರೊಡನೆ ಕೇಳಿಕೊಳ್ಳುತ್ತದಲ್ಲದೆ ಈ ವಿಭಾಗದಲ್ಲಿ ಮಹಾಜನರು ತ್ರಿಕರಣ ಪೂರ್ವಕ ಸಹಾಯ ಸಹಕಾರಗಳನ್ನು ಕೊಡುವರೆಂದು ಭರವಸೆ ಪಡುತ್ತದೆಂದು ದ. ಕ. ಜಿ. ಕಾ. ಕಮಿಟಿ ಮಂಗಳೂರು ಇದರ ಪ್ರಧಾನ ಕಾರ್ಯದರ್ಶಿಯರಾದ ಕುದ್ಮಿ ವಾಸುದೇವ ಶೆಣೈಯವರು ತಿಳಿಸುತ್ತಾರೆ

ಮಂಗಳೂರು ನಗರ ಸಭೆ.—ಮಂಗಳೂರು ನಗರ ಸಭೆಯ ಸಾಮಾನ್ಯ ಮೀಟಿಂಗು ಕಳೆದ ತಾ ೩ನೇ ಸಾಯಂಕಾಲ ಶ್ರೀ ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು

ಸಭಾರಂಭದಲ್ಲಿ ಅಧ್ಯಕ್ಷರು ಶ್ರೀ. ಯಾಕೂಬ್ ಹಸನರ ನಿಧನಕ್ಕಾಗಿ ಸಂತಾಪ ಸೂಚಕ ಠರಾವು ತಂದರು ಎಲ್ಲರೂ ಎದ್ದು ನಿಂತು ಅದನ್ನು ಮಾನ್ಯಮಾಡಿದರು.

ನಗರ ಸಭೆಯವರು ನಗರದ ತೆರಿಗೆದಾರರ ಮೇಲೆ ಹಾಕಬೇಕೆಂದಿದ್ದ ವಿದ್ಯುತ್ತೆರಿಗೆಗೆ ಸರಕಾರದ ಒಪ್ಪಿಗೆ ದೊರಕಿದೆಯಾಗಿ ಅಧ್ಯಕ್ಷರು ತಿಳಿಸಿದರು.

ವರ್ಗಾವರ್ಗಿ —ಮಂಗಳೂರಿನ ಕಾಯಂ ಜಡ್ಜರಾದ ಶ್ರೀ ರಾಜಗೋಪಾಲಾಚಾರ್ಯರು ೧೫-೪-೪೦ಕ್ಕೆ ಚಾರ್ಜು ವಹಿಸುವರಾದ ಕಾರಣ ಆಕ್ಟಿಂಗ್ ಜಡ್ಜರಾದ ಶ್ರೀ ಆರ್ ಎಸ್ ಸುಬ್ರಹ್ಮಣ್ಯ ಅಯ್ಯರ್ ಅವರು ನರಸಾಪುರದ ಸಬ್ ಜಡ್ಜರಾಗಿ ನೇಮಕಪಟ್ಟಿರುತ್ತಾರೆ

ರಾಷ್ಟ್ರೀಯ ಸಪ್ತಾಹ: – ಮಂಗಳೂರು ನಗರದಲ್ಲಿ ರಾಷ್ಟ್ರೀಯ ಸಪ್ತಾಹವು ತಾ ೬ರಲ್ಲಿ ವಿಜೃಂಭಣೆಯಿಂದ ಬೇರೆ ಬೇರೆ ಕಡೆಗಳಲ್ಲಿ ಜರಗಿತು ತಾ ೬ರಂದು ಸಂಜೆ ೬-೩೦ಕ್ಕೆ ಶ್ರೀ ಬಿ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಸರ್ವಜನಿಕ ಸಭೆ ಜರುಗಿತು ದಿವಂಗತ ದೀನಬಂಧು ಆಂಡ್ರೂಸ್‌ರವರ ಕುರಿತಾಗಿ ಶ್ರೀ ಕೆ ಕೃಷ್ಣ ರಾಯರು ಭಾಷಣವಿತ್ತ ಬಳಿಕ ದೀನಬಂಧುಗಳ ನಿಧನದ ಬಗೆ ಸಂತಾಪ ಸೂಚಕ ಠರಾವನ್ನು ಪಾಸು ಮಾಡಲಾಯಿತು.

ಸಹಕಾರಿ ಪರಿಷತ್ತು: ಜಿಲ್ಲೆಯ ವಿವಿಧ ಸಹಕಾರಿ ಸಂಘಗಳ ಪ್ರತಿನಿಧಿಗಳ ಪರಿಷತ್ತೊಂದು ಕಳೆದ ಆದಿತ್ಯವಾರ ಮುಂಜಾನೆ ಶ್ರೀ ಯಂ ಶಿವರಾಯರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಬ್ಯಾಂಕಿನಲ್ಲಿ ಜರಗಿತು.

ಹೊಸ ಕಲೆಕ್ಟರರು.—ನಮ್ಮ ಜಿಲ್ಲಾ ಕಲೆಕ್ಟರರಾದ ಮಿ ಎಂ ಎ. ಸುಬ್ರಮಣ್ಯನ್ ಐ. ಸಿ ಎಸ್.ರವರು, ಒಂದು ತಿಂಗಳ ರಜೆಯನ್ನು ಪಡೆಕೊಂಡಿರುವದರಿಂದ, ಅವರ ಬದಲು ರಾವ್ ಬಹದೂರ್ ವಿ ಪೊನ್ನುಸ್ವಾಮಿ ಪಿಳ್ಳೆಯವರು ತಾ ೩ರಲ್ಲು ಚಾರ್ಜು ವಹಿಸಿಕೊಂಡಿರುವರು

ಕಾರ್ಕಳ

ಆರೋಗ್ಯ ಪ್ರಚಾರ ಸಭೆ: — ತಾ ೩೧-೩-೪೦ರ ದಿನ ಇಲ್ಲಿಯ ಪಟೇಲ ಶ್ರೀ ಕೆ ಗೋಪಾಲ ಹೆಗ್ಗಡೆರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಕೇಶವ ಮೇನನವರು, ಮದ್ರಾಸು ಹೆಲ್ತ್ ಎಕ್ಸಿಬಿಶನ ಪ್ರಕರಣಗಳನ್ನು ಉಪಯೋಗಿಸುತ್ತ ಕಾರ್ಕಳ ನಿವಾಸಿಗಳ ಕರ್ತವ್ಯಗಳ ಕುರಿತು ಭಾಷಣವನ್ನಿತ್ತರು.

ರೆಡ್‌ಕ್ರಾಸ್ ಜನಸೇವಾ ಸಂಘ:- ಇಲ್ಲಿಯ ಬಾಸ್ಕೆಟ್‌ಬಾಲ್ ಕ್ಲಬ್ಬಿನಲ್ಲಿ ತಾ ೩೧-೩-೧೯೪೦ರ ದಿನ ಕೂಡಿದ ಸಭೆಯಲ್ಲಿ ಸ್ಥಳೀಯ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಬಿ ಯಮ್ ಹೊಳ್ಳರವರು ರೆಡ್‌ಕ್ರಾಸ್ ಜನಸೇವಾ ಸಂಘದ ಕುರಿತು ಭಾಷಣವನ್ನಿತ್ತರು ಶ್ರೀ ಎಚ್, ಸಕುರರವರು ಅಧ್ಯಕ್ಷರಾಗಿದ್ದರು.

ರಾಷ್ಟ್ರೀಯ ವಾರ.— ಇದು ೬-೪-೪೦ರಿಂದ ಆರಂಭಿಸಿದ ಏಳು ದಿನಗಳ ತನಕ ಪ್ರಭಾತ ಫೇರಿ, ಸಭೆ, ಭಾಷಣ, ಖದ್ದರ್ ಪ್ರಚಾರ, ಹರಿಜನ ಸೇವೆ ನೂಲುವ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮದ ಮೂಲಕ ವಿಧಿವತ್ತಾಗಿ ಇಲ್ಲಿ ಆಚರಿಸಲ್ಪಟ್ಟಿದೆ

ಉಡುಪಿ

ಸಹಸಂತಾಪ ಸೂಚನೆ:—ಮೌಲಾನಾ ಯಾಕೂಬ್ ಹಸನರ ಆಕಸ್ಮಿಕ ಮರಣದ ಕುರಿತು ಸಹ ಸಂತಾಪ ಸೂಚಕ ನಿರ್ಣಯವು ಉಡುಪಿ ಮುನಿಸಿಪಲ್ ಕೌನ್ಸಿಲಿನ ತಾ ೩ರಲ್ಲಿ ಸೇರಿದ ವಿಶೇಷ ಸಭೆಯಲ್ಲಿ ಪಾಸಾಯಿತು ಇದೇ ಸಭೆಯಲ್ಲಿ ವಿದ್ಯಾಯ ಶಿಕ್ಷಣ ಯೋಜನೆಯನ್ನು ಪ್ರಕೃತ ಮುಂದರಿಸಲಾಯಿತು

ಹಿಂದುಸ್ಥಾನ್ ಸ್ಕೌಟ್ ದಳ:—ಕಳೆದ ವಾರ ಬೋರ್ಡ್ ಹೈಸ್ಕೂಲಿನಲ್ಲಿ ಕೂಡಿದ ಮಹಾಜನ ಸಭೆಯಲ್ಲಿ ಉಡುಪಿ ತಾಲೂಕಿಗೊಂದು ಹಿಂದುಸ್ಥಾನ್ ಸ್ಕೌಟ್‌ದಳದ ಶಾಖೆಯನ್ನು ಸ್ಥಾಪಿಸಬೇಕೆಂದು ಗೊತ್ತುವಳಿಯಾಯಿತು

ಪುತ್ತೂರು

ಪುತ್ತೂರು ತಾಲೂಕಿನ ಬೋರ್ಡು ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳ ಪಂದ್ಯಾಟ ಸ್ಪರ್ಧೆ:—ಕಳೆದ ಮಾರ್ಚ ತಾ ೨೯ ಮತ್ತು ೩೦ರಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ವಿದ್ಯಾರ್ಥಿಗಳ ಪಂದ್ಯಾಟವು ಪುತ್ತೂರು ಬೋ. ಹಾ ಎ ಶಾಲೆಯ ವಠಾರದಲ್ಲಿ ಜರಗಿತು. ಊರಿನ ಮಹನೀಯರೂ ಮತ್ತು ಸಹಕಾರ ಸಂಘದವರೂ ಧನ ಸಹಾಯವಿತ್ತುದಲ್ಲದ ಡಿಸ್ಟ್ರಿಕ್ಟ್ ಬೋರ್ಡಿನಿಂದ ರೂ. ೫೦ ಇನಾಮು ಪಂಚಾಯಿತಿಕೆಗೆ ಕೊಟ್ಟಿದ್ದರು. ತಾ ೩೦ನೇ ಸಾಯಂಕಾಲ ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫರಾದ ಶ್ರೀ ಎ ಲಕ್ಷ್ಮೀನಾರಾಯಣ ರೈ ಬಿ ಎ ಬಿ ಎಲ್. ರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳಿಗೆ ತಕ್ಕ ಪಾರಿತೋಷಕಗಳು ಹಂಚಲಾದವು. ಪುತ್ತೂರು ಬೋರ್ಡ್ ಹಾ ಎ ಶಾಲೆಗೆ ಸೀನಿಯರ್ ಕಪ್ಪು ಬಿಟ್ಟಿ ಹಾ ಎ ಶಾಲೆಗೆ ಜೂನಿಯರ್ ಕಪ್ಪು ದೊರೆತವು

ಕರ್ನಾಟಕ

ಶಿವಮೊಗ್ಗ

ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನ:—೧೯೪೦ನೇ ಇಸವಿ ಎಪ್ರಿಲ್ ೧೦, ೧೧, ಮತ್ತು ೧೨ನೇ ತಾರೀಕುಗಳಲ್ಲಿ ಶಿವಮೊಗ್ಗ ಹಳೆ ರೈಲ್ವೆ ಸ್ಟೇಶನಿಗೆ ಒಂದು ಮೈಲು ದೂರದಲ್ಲಿ ತುಂಗಾತೀರದಲ್ಲಿ ನೂತನವಾಗಿ ರಚಿಸಿರುವ ಆಜಾದ್ ನಗರದಲ್ಲಿ ಮೈಸೂರು ಕಾಂಗ್ರೆಸಿನ ತೃತೀಯ ಅಧಿವೇಶನವು ನಡೆಯಿತು. ತತ್‌ಸಂಬಂಧವಾಗಿಯೇ ಎಪ್ರಿಲ್ ೫ನೇ ತಾರೀಖು ೩ ಘಂಟೆಗೆ ಖಾದಿ, ಸ್ವದೇಶಿ ಮತ್ತು ಗ್ರಾಮಕೈಗಾರಿಕೆಗಳ ಪ್ರದರ್ಶನ ತೆರೆಯಲ್ಪಟ್ಟಿತು.

ಬೆಳಗಾವಿ

ಶ್ರೀ ನರಿಮಾನರ ಆಗಮನ:—ಮುಂಬಯಿಯ ಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾದ ವೀರ ನರಿಮಾನರು ಇಲ್ಲಿ ನಡೆಯಲಿರುವ ಮೋಟಾರ ಕಂಟ್ರಾಕ್ಟರ್ಸ್ ಕಾನ್ಫರೆನ್ಸಿನ ಅಧ್ಯಕ್ಷತೆಯನ್ನು ವಹಿಸಲು ಬರುವರು.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು!
ಉಪಾಧ್ಯಾಯರ ಹಾಗೂ ವಿದ್ಯಾರ್ಥಿಗಳ ಬಹುಕಾಲದ ಸಮಸ್ಯೆಯೊಂದು ಈಗ ಪರಿಹಾರವಾಯಿತು!
ಹೊಸ ಪಾಠಪಟ್ಟಿಗೆ ಅನುಗುಣವಾಗಿ
ವಿದ್ವಾನ್ ಶ್ರೀ ಕೆ ಕೆ ರೈ ಇವರಿಂದ ವಿರಚಿತವಾದ

ವ್ಯಾಕರಣ ಮತ್ತು ಪ್ರಬಂಧ

(ಸಚಿತ್ರ)

8ನೆಯ ತರಗತಿಗೆ	ಬಡವಿದ್ಯಾರ್ಥಿಗಳಿಗೆ ಕೊಂಡುಕೊಳ್ಳಲು ಅನುಕೂಲವಾಗುವಂತೆ ಬೆಲೆಯು ಬಹಳ ಸುಲಭವಾಗಿ ಇಟ್ಟಿದೆ
7 ,, ,,	
6 ,, ,,	
4 ಮತ್ತು 5 ,, (ಅಚ್ಚಿನಲ್ಲಿದೆ)	

ಹೈಸ್ಕೂಲು ಮತ್ತು ಟ್ರೈನಿಂಗ್ ಶಾಲೆಗಳ ವಿದ್ಯಾರ್ಥಿಗಳ ಉಪಯೋಗದ ಸಲುವಾಗಿ ಬರೆಯಲ್ಪಟ್ಟ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ

ಇಷ್ಟು ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಸಾಹಸವು ನಮ್ಮ ಜಿಲ್ಲೆಯ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ!

ಪದಜ್ಞಾನ, ವಾಕ್ಯ ವಿಚಾರ, ವಾಕ್ಯ ವಿಭಜನೆ, ವಾಕ್ಯ ಪರಿವರ್ತನೆ, ವಿಭಕ್ತಿ, ಲಿಂಗ, ವಚನಗಳೇ ಮೊದಲಾಗಿ ಸರ್ವಾಂಗ ವ್ಯಾಕರಣವು ವಿದ್ಯಾರ್ಥಿಗಳ ಮನೋರಂಜಕವಾಗುವಂತೆ ಸೋದಾಹರಣವಾಗಿ ಬರೆಯಲ್ಪಟ್ಟಿದೆ! ಪ್ರಬಂಧ ಭಾಗದಲ್ಲಿ ಪ್ರಬಂಧ, ಲೇಖನ, ಕಥಾಲೇಖನ ಸಂಭಾಷಣಾರೂಪ, ಅನುವಾದ ಹಾಗೂ ಸಾರಾಂಶಲೇಖನ, ಟಿಪ್ಪಣಿ ಬರೆಯುವುದು ಮೊದಲಾದ ಸಂಪೂರ್ಣ ವಿಷಯಗಳು ಅಡಕವಾಗಿವೆ! ಪ್ರತಿಯೊಂದು ಪಾಠವೂ ಅಭ್ಯಾಸಗಳಿಂದ ಆವೃತ್ತಿಗೊಂಡಿದೆ! ಮಾತ್ರವಲ್ಲದೆ, ಛಂದಸ್ಸು ಅಲಂಕಾರ, ಧ್ವನಿಲಹರಿ ಈ ವಿಷಯಗಳೂ ಸುಲಭ ಶೈಲಿಯಲ್ಲಿ ವಿವರಿಸಲಾಗಿದೆ.

ಶಿಕ್ಷಣಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!
ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯವು!!

ಇದೇ ತರದಲ್ಲಿ ಎಲಿಮೆಂಟರಿ ಶಾಲೆಗಳ ಎಲ್ಲಾ ತರಗತಿಗಳಿಗೂ ಬೇಕಾದ ಸಿವಿಕ್ಸ್, ಭೂಗೋಳ, ಪ್ರಕೃತಿಶಾಸ್ತ್ರ, ಗೃಹವಿಜ್ಞಾನ, ಚರಿತ್ರೆ, ಲಘುವಿಜ್ಞಾನ ಪುಸ್ತಕಗಳೂ ಸಿದ್ಧವಾಗಿವೆ

ಪುಸ್ತಕಗಳು ದೊರಕುವ ಸ್ಥಳ:
ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

6, 7, 8ನೆಯ ತರಗತಿಗಳ ವ್ಯಾಕರಣ ಮತ್ತು ಪ್ರಬಂಧದ ಪ್ರತಿಗಳನ್ನು ಇಚ್ಛಿಸುವವರು 9 ಆಣೆ ಸ್ಟಾಂಪುಗಳನ್ನು ಕಳುಹಿಸಿ ಕೊಡುವುದು.

ನಾರ್ವೆ ಡೆನ್ಮಾರ್ಕುಗಳಲ್ಲಿ ತೀವ್ರ ಸಂಗ್ರಾಮ!

★ ಲೋಕವಾರ್ತೆ ★

ಬ್ರಿಟಿಷ್ ಫ್ರಾನ್ಸುಗಳು ತೋಟೆ ಹಾಕಿದವು!

ಜರ್ಮನಿಯು ಪ್ರಚಂಡ ಧಾಳಿಯಿಟ್ಟಿತು!

ತಟಸ್ಥ ರಾಷ್ಟ್ರಗಳು ಸಂಕಷ್ಟಕ್ಕೆ ಗುರಿಯಾಗಿವೆ!

ನಾರ್ವೆ ಸಮುದ್ರ ಗಡಿಯಲ್ಲಿ ಬ್ರಿಟಿಷ್ ಫ್ರಾನ್ಸು ಮಿತ್ರರಾಷ್ಟ್ರಗಳು ತೋಟೆಗಳನ್ನು ಬಿಕ್ಕಿ, ಜರ್ಮನ್ ಹಡಗುಗಳ ಸಂಚಾರಕ್ಕೆ ನಿರ್ಬಂಧ ಮಾಡಿದವು.

ಇದು ಅಂತರ್ ರಾಷ್ಟ್ರೀಯ ಒಪ್ಪಂದಕ್ಕೆ ವಿರೋಧವಾದ ವಿಷಯವೆಂದು ಜರ್ಮನಿಯು ನಿಷೇಧ ಸೂಚಿಸಿದ್ದು ಮಾತ್ರವಲ್ಲದೆ, ನಾರ್ವೆ ಡೆನ್ಮಾರ್ಕುಗಳಿಗೆ ಧಾಳಿಹೂಡಿದೆ. ನೂರಾರು ಯುದ್ಧ ಹಡಗುಗಳು ಸಮರವನ್ನು ಹೂಡಲು ಬಂದಿವೆ!

ಜರ್ಮನಿಯು ಆರಂಭದಿಂದಲೇ ಅಂತರ್ ರಾಷ್ಟ್ರೀಯ ಒಪ್ಪಂದವನ್ನು ಮುರಿಯುತ್ತಿರುವುದರಿಂದ, ಮಿತ್ರರಾಷ್ಟ್ರಗಳ ಈ ಧೋರಣೆಯು ಅನ್ಯಾಯವಾದುದಲ್ಲವೆಂದೂ, ಜರ್ಮನಿಯ ಧ್ಯೋರಣವನ್ನು ತಡಗಟ್ಟುವುದು ಮತ್ತು ಸಣ್ಣ ರಾಷ್ಟ್ರಗಳನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದೂ ಮಿತ್ರರಾಷ್ಟ್ರಗಳು ಸಾರಿವೆ. ನಾರ್ವೆ ಡೆನ್ಮಾರ್ಕುಗಳು ಇಂದು ಹೊಸ ಸಂಗ್ರಾಮ ಕ್ಷೇತ್ರಗಳಾಗಿವೆ!

ಜರ್ಮನರು ಈಗಾಗಲೇ ಕೆಲವು ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿರುವರು.

ಜರ್ಮನಿಯು ಧಾಳಿಯಿಟ್ಟ ಕಾರಣ ನಾರ್ವೆಯು ಜರ್ಮನಿಯ ವಿರುದ್ಧ ಯುದ್ಧ ಪ್ರಕಟಣೆ ಮಾಡಿದೆ.

ಇಡೀ ಡೆನ್ಮಾರ್ಕ್ ಇಂದು ಜರ್ಮನಿಯ ಅಧೀನತೆಗೆ ಬಂದಿದೆಯೆಂದೂ ವಾರ್ತೆ.

ಜರ್ಮನಿಯು ಸ್ವೀಡನು ತಟಸ್ಥ ರಾಷ್ಟ್ರಗಳಿಗೆ ಸಹಾಯಕ್ಕೆ ಬರಬಾರದೆಂದು ಸ್ವೀಡನಿನ ಸಮುದ್ರದಲ್ಲಿ ತೋಟೆಗಳನ್ನು ಬಿಕ್ಕಿರುವುದಂತೆ.

ಬ್ರಿಟಿಷ್ ಮತ್ತು ಫ್ರಾನ್ಸುಗಳು ನಾರ್ವೆಗೆ ಬೆಂಬಲಕೊಡುವ ಭರವಸೆ ಕೊಟ್ಟಿವೆಯೆಂದೂ ಈಗಾಗಲೇ ಸಹಾಯದ ಯುದ್ಧ ಸಾಮಗ್ರಿಗಳು ಅಲ್ಲಿಗೆ ಕಳುಹಿಸಲ್ಪಟ್ಟಿವೆಯೆಂದೂ ತಿಳಿದು ಬಂದಿದೆ.

ಇಟಲಿ ಸಿದ್ಧವಾಗುತ್ತಿದೆಯೇ?

ಇಟಲಿಯು ಇದೀಗ ಕಳೆದ ಕೆಲವು ವಾರಗಳಿಂದ ಸೈನ್ಯ ಶಸ್ತ್ರಾಸ್ತ್ರ ಸಿದ್ಧತೆಗಳನ್ನು ನಡೆಸುತ್ತಿದೆ. ಈಗ ಆಹಾರವನ್ನು ಶೇಖರಿಸಲು ಆರಂಭಿಸಿದೆ. ಅಂತೂ ಬೇಗನೇ ಯುದ್ಧದಲ್ಲಿ ಧುಮುಕಲೂ ಬಹುದು.

ಜರ್ಮನಿಯಲ್ಲಿ ಕಷ್ಟಕಾಲ

ಕಷ್ಟಕಾಲದ ಕೊರತೆ[?], ಜರ್ಮನಿಯಲ್ಲಿ ಪ್ರಬಲವಾಗಿ ಸಾಗುತ್ತಿದೆ. ಪ್ರತಿದಿನ ಪತ್ರಿಕೆಗಳು ಈ ಕುರಿತಾಗಿ ಪ್ರಚಾರ ನಡೆಸುತ್ತಿವೆ. ಮಂದಿ ತಮ್ಮಲ್ಲಿನ ಕಬ್ಬಿಣದ ಸಾಮಗ್ರಿಗಳನ್ನೆಲ್ಲ ಸರಕಾರಕ್ಕೆ ಕೊಡುತ್ತಿದ್ದಾರೆ.

ಜರ್ಮನಿಯಲ್ಲಿ ಮಿತವ್ಯಯ

ಜರ್ಮನಿಯಲ್ಲಿ ಕಾಲಂಶದ ಮುಂದಿ, ಯುದ್ಧಕ್ಕೆ ಅಗತ್ಯವಿರುವ ಪೆಟ್ರೋಲ್ ಉಳಿಸುವುದಕ್ಕಾಗಿ, ಸೈಕಲ್ ಸವಾರಿ ಮಾಡುತ್ತಿದ್ದಾರೆ. ಕಾರುಗಳನ್ನು ಮೂಲೆಯಲ್ಲಿಟ್ಟು, ಗಂಡಸರು, ಹೆಂಗಸರು, ಮಕ್ಕಳೂ ಸೈಕಲ್ ಸವಾರಿಗೆ ತೊಡಗಿದ್ದಾರೆ.

ಜರ್ಮನಿಗೆ ಜಯವಂತೆ!

ಗೋರಿಂಗ್, ಜರ್ಮನಿಯ ಮಕ್ಕಳಿಗಾಗಿ ಭಾಷಣ ಕೊಡುತ್ತಾ, ಈ ವರ್ಷ ಅಂತ್ಯದೊಳಗೆ ಜರ್ಮನಿಗೆ ಜಯ ಖಂಡಿತವೆಂದಿದ್ದಾನೆ. ಜರ್ಮನಿಯಲ್ಲಿ ಎಲ್ಲೆಲ್ಲೂ ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟಿವೆ.

ಕಲಹಪ್ರಿಯ ಹಿಟ್ಲರ್

ಫ್ರಾನ್ಸಿನಲ್ಲಿ ಮರಣ ದಂಡನೆ

ಕಮ್ಯುನಿಸ್ಟ್ ಪ್ರಚಾರ ಕಾರ್ಯಕ್ಕೆ ಬೆಂಬಲ ಕೊಡುವ ಸಾಹಿತ್ಯ ಉಪಕರಣಗಳನ್ನು ಶೇಖರಿಸುವ ವ್ಯಕ್ತಿಗಳಿಗೆ ದಂಡನೆ ಮರಣವೆಂದು ಫ್ರಾನ್ಸ್ ಸರಕಾರ ಶಾಸನ ಮೂಲಕ ವಿಧಿಸಲಿದೆ.

ಫಿನ್‌ಲ್ಯಾಂಡಿಗೆ ಲಾರ್ಡ್ ನ್ಯೂಫೀಲ್ಡರ ಸಹಾಯ

ಬ್ರಿಟನಿನಿಂದ ಫಿನ್‌ಲ್ಯಾಂಡಿಗಾಗಿ ವಾಲಂಟಿಯರುಗಳನ್ನು ಸಂಗ್ರಹಿಸಿ ಕಳುಹಿಸುವಲ್ಲಿ, ಲಾರ್ಡ್ ನ್ಯೂಫೀಲ್ಡರು ಬಹಳ ಹಣ ಕೊಟ್ಟು ಸಹಾಯ ಮಾಡಿದ್ದಾರೆಂದು ಈಗ ಪ್ರಕಟವಾಗಿದೆ.

ಚೀನದ ಸೈನ್ಯಬಲ

ಚೀನದಲ್ಲಿ ಈಗ ೪,೦೦೦,೦೦೦ ಸೈನ್ಯ ತಯಾರಿದೆ; ಸದ್ಯದಲ್ಲೇ ಮತ್ತೂ ೬,೦೦೦,೦೦೦ ಮಂದಿಗಳ ಸೈನ್ಯ ಸಿದ್ಧವಾಗಿ ಚೀನವು ಹೀಗೆ ೧೨,೦೦೦,೦೦೦ ಮಂದಿಯೊಂದಿಗೆ ಕಾದಾಡಲು ಅನುವಾಗುತ್ತಿದೆ ಎಂದು ವಾರ್ತೆ.

ಬ್ರಿಟನಿನ ಹಿಂದೀ ವಿದ್ಯಾರ್ಥಿಗಳು

ಬ್ರಿಟನಿನ ಯಾವತ್ತು ವಿಶ್ವವಿದ್ಯಾನಿಲಯಗಳ ಹಿಂದೀ ವಿದ್ಯಾರ್ಥಿಗಳ ಒಂದು ಮಹಾಸಭೆ, ಕ್ಯಾಕ್ಸ್‌ಟನ್ ಭವನದಲ್ಲಿ ಜರುಗಿತು. ಇದು ಹಿಂದೀ ವಿದ್ಯಾರ್ಥಿ ಸಂಸ್ಥೆಗಳ ಫೆಡರೇಶನಿನ ಚತುರ್ಥ ಅಧಿವೇಶನ. ಡಾ. ಹೆರಾಲ್ಡ್ ಮ್ಯಾನ್ ಎಂಬ ಕೃಷಿ ಶಾಸ್ತ್ರಜ್ಞರು ಈ ಅಧಿವೇಶನದ ಅಧ್ಯಕ್ಷರಾಗಿದ್ದರು.

ರಶ್ಯದ ಸೇನೆ

ಫಿನ್‌ಲ್ಯಾಂಡಿನಲ್ಲಿ ಕಾದಾಡುತ್ತಿದ್ದ ರಶ್ಯದ ಸೇನೆಗಳು, ಮಸ್ಕೋವಿಯದ ಕಡೆಗೆ ಕಳುಹಲ್ಪಡುತ್ತಿವೆ. ಈ ರಾಷ್ಟ್ರದೊಡನೆ ಐಕ್ಯ ಮಾಡಿಕೊಂಡ ಸಂಧಿಯ ಪ್ರಕಾರ, ಅದಕ್ಕೆ ಸೇನೆ ಸಲ್ಲಿಸುವ ಅಧಿಕಾರ ಬಂದಿತ್ತು.

ಬ್ರಿಟನ್–ಫಿನ್‌ಲ್ಯಾಂಡ್ ಸಂಬಂಧ

ಕಾಮನ್ಸ್ ಮಂದಿರದಲ್ಲಿ, ಮಿ. ಆರ್ಥರ್ ಹೆಂಡರ್ಸನ್‌ರವರ ಪ್ರಶ್ನೆಗೆ ಉತ್ತರವಾಗಿ, ಬ್ರಿಟನ್–ಫಿನ್‌ಲ್ಯಾಂಡಿಗೆ ಸಹಾಯ ಮಾಡುವ ಅಗತ್ಯವಿದ್ದುದು, ಬರೇ ಜನಾಂಗ ಸಂಘದ ಸದಸ್ಯತೆಯ ಸಂಬಂಧದಿಂದ ಎಂದು ತಿಳಿದುಬಂತು.

ರಾಷ್ಟ್ರೀಯ ವಾರಕ್ಕೆ ತಡೆ!

ಬಂಗಾಳದಲ್ಲಿ ಸುಭಾಸ ಬೋಸರು ಮತ್ತು ಸ್ವಾಮಿ ಸಹಜಾನಂದರು ಸೇರಿರುವ ಯಾವುದೇ ಪಕ್ಷದ ಮೂಲಕ ನಡೆಯುವ ರಾಷ್ಟ್ರೀಯ ಸಪ್ತಾಹದ ಕಾರ್ಯವು ನಡೆಯಕೂಡದೆಂದು ಬಂಗಾಳ ಸರಕಾರವು ನಿರ್ಬಂಧದ ಪ್ರಕಟಣೆಯನ್ನು ಕೊಟ್ಟಿದೆ.

ಎಲ್ಲೆಲ್ಲಿಯೂ ರಾಷ್ಟ್ರೀಯ ವಾರ

ಅಖಿಲ ಭಾರತದ ಪ್ರಾಮುಖ್ಯ ನಗರ ಗ್ರಾಮಗಳಲ್ಲಿ ರಾಷ್ಟ್ರೀಯ ವಾರವು ಪ್ರಚಂಡ ಜಯಘೋಷದಿಂದ ಆಚರಿಸಲ್ಪಟ್ಟಿತು.

ಇಡೀ ಕುಟುಂಬವೇ ವಿಷ ತಿಂದು ಸತ್ತು ಹೋಯಿತು!

ಕೊಯಂಬುತ್ತೂರಿನಲ್ಲಿ ಟಿ. ವರಾಹಲು, ಬಿ. ಎ; ಎಮ್. ಎಸ್ ಸಿ, ಎಂಬ ವೈಜ್ಞಾನಿಕ ಸಂಶೋಧಕರು ತಾವು ಕೊರಂದು ವಿಷ ತಿಂದು ಅವರ ಪತ್ನಿ ಒಂಬತ್ತು ವರ್ಷದ ಒಂದು ಮಗುವಿನೊಡನೆ ಮರಣಹೊಂದಿರುವರು. ಮಿಕ್ಕುಳಿದ ಐದು ಹುಡುಗರೂ ವಿಷತಿಂದಿದ್ದರು. ಅವರಲ್ಲಿ ಒಬ್ಬನು ಬದುಕುವುದು ಕಷ್ಟವಂತೆ. ಮಿಕ್ಕ ನಾಲ್ಕು ಮಂದಿ ಮಕ್ಕಳು ಅನಾಥರಾಗಿ ಬದುಕಿರುವರು.

ಲಂಡನಿನ ಭಾರತೀಯರಿಗೆ ರಾಷ್ಟ್ರಪತಿಗಳ ಸಂದೇಶ

ರಾಷ್ಟ್ರೀಯ ವಾರದ ಆಚರಣೆಯ ಸಂಬಂಧ ರಾಷ್ಟ್ರಪತಿ ಮೌಲಾನಾ ಆಜಾದರು, ಲಂಡನಿನ ಇಂಡಿಯನ್ ಲೀಗಿಗೆ ಒಂದು ಸಂದೇಶವನ್ನು ಕಳುಹಿಸುತ್ತಾ, ಕಾಂಗ್ರೆಸು ಸ್ವಾತಂತ್ರ್ಯವನ್ನು ಪಡೆಯಲು ಮುಂದುವರಿಯುತ್ತಿರುವಲ್ಲಿ ಅದನ್ನು ಬಾರದೆ ತಡೆಯಲಾರರೆಂದೂ, ಬ್ರಿಟನಿನ ಸಾಮ್ರಾಜ್ಯಶಾಹೀ ನೀತಿಯಿಂದ ಅದನ್ನು ಬೇರ್ಪಡಿಸಿ, ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವಗಳಿಗಾಗಿ ಹೋರಾಡುವ ಜನರಿಗೆ ಬ್ರಿಟನಿನವರು ಉದಾರ ಸಹಾಯ ಮಾಡಬೇಕೆಂದೂ ಸೂಚಿಸಿರುವರು.

ಬಾಪಟ ಮತ್ತು ಕಾಮತರ ನಿರ್ಬಂಧ

ರಾಷ್ಟ್ರೀಯ ವಾರದ ನಿಮಿತ್ತ ಸೇನಾಪತಿ ಬಾಪಟ ಮತ್ತು ಎಚ್. ವಿ. ಕಾಮತರನ್ನು ಬೊಂಬಾಯಿಯಲ್ಲಿ ನಿರ್ಬಂಧಿಸಲಾಗಿದೆ.

ಗಾಂಧಿ ವೈಸರಾಯ್ ಭೇಟಿಯೋ?

ಗಾಂಧಿಜಿ ಮತ್ತು ವೈಸರಾಯರೊಳಗೆ ಭೇಟಿ ಮಾಡಿಸಿ, ಮುಂಬರಲಿರುವ ರಾಷ್ಟ್ರದ ಆಂದೋಲನವನ್ನು ತಪ್ಪಿಸಬೇಕೆಂದು ಸರ್ ರಾಧಕೃಷ್ಣರವರು ಯತ್ನಿಸುತ್ತಿರುವರೆಂದೂ, ಆ ವಿಷಯ ಜಿ. ಡಿ. ಬಿರ್ಲರು ವೈಸರಾಯರನ್ನು ಭೇಟಿಮಾಡಿರುವರೆಂದೂ ವಾರ್ತೆ.

ಖಾದೀ ಯಾತ್ರೆ

ಪಾದರ್ ಖಾದೀ ಯಾತ್ರೆ ಸಮಾರಂಭದಲ್ಲಿ ಮಹಾತ್ಮರೊಂದು ಭಾಷಣ ಮಾಡಿದ್ದಾರೆ. ಅದರಲ್ಲಿ ಖಾದಿಯೊಂದೇ ನನ್ನ ಹೋರಾಟಕ್ಕಿರುವ ಅಸ್ತ್ರ. ಹೋರಾಟಕ್ಕೆ ನಾನು ಸಿದ್ಧನಿರುವುದು ನಿಜ. ಆದರೆ ಹೋರಾಟ ಆರಂಭಿಸಲು ಖಾದಿಯಲ್ಲಿ ವಿಶ್ವಾಸವಿರುವವರು ಮಾತ್ರ ನನ್ನ ಸೈನ್ಯಕ್ಕೆ ಸೇರಲಿ. ಕುರುಡರಂತೆ ನನ್ನನ್ನು ಹಿಂಬಾಲಿಸುವವರು ನನಗೆ ಬೇಡ— ಅಂದಿದ್ದಾರೆ.

ಪತ್ರಿಕೋದ್ಯಮ ಶಿಕ್ಷಣ

ಮದರಾಸು ವಿಶ್ವವಿದ್ಯಾನಿಲಯ ಸೆನೇಟಿನಲ್ಲಿ ತರುಣ ಪದವೀಧರರಿಗೆ ವೃತ್ತಪತ್ರಿಕೋದ್ಯೋಗ ಶಿಕ್ಷಣವನ್ನು ವೃತ್ತಿವಿದ್ಯೆಯಾಗಿ ಕಲಿಸಬೇಕೆಂದು ತೀರ್ಮಾನವಾಯಿತು. ಈ ಶಿಕ್ಷಣದ ಶಕ್ತಿಗಳ ಕಲಿಯುವ ವಿದ್ಯಾರ್ಥಿಗಳಿಗೆ ಮದ್ರಾಸಿನ ಪ್ರಮುಖ ಪತ್ರಿಕಾ ಕಛೇರಿಗಳು ಬೆಂಬಲ ಕೊಡುವವು.

ಖಜಾನೆಯ ಕಳವು

ನೆಲ್ಲೂರು ಖಜಾನೆಯಲ್ಲಿ ೧ ಲಕ್ಷ ರೂಪಾಯಿ ಇದ್ದಕ್ಕಿದ್ದ ಹಾಗೇ ಮಾಯವಾಗಿದೆ. ಮಾಹೆ ಆಖೈರು ಎಣಿಕೆ ಮಾ॥ ೩೦ರಲ್ಲಿ ಆಯಿತು. ನಗದೀ ಪಟ್ಟಿ ಮತ್ತು ಹಣ ಸರಿಯಾಗಿತ್ತು. ೧ನೇ ತಾರೀಕು ಖಜಾನೆ ಶಿಲ್ಕು ಸರಿಯಾಗಿತ್ತು. ೩ನೇ ತಾರೀಖಿನ ದಿನಕ್ಕೆ ೧೦೦ ರೂ. ನೋಟುಗಳ ನೂರು ನೂರರ ಹತ್ತು ಕಟ್ಟುಗಳು ಕಣ್ಮರೆಯಾಗಿದ್ದುವು.

ಸತ್ಯಾಗ್ರಹ ಪ್ರತಿಜ್ಞೆಗೆ ಸೋಶಾಲಿಸ್ಟರ ಬೆಂಬಲ

ಮಹಾರಾಷ್ಟ್ರ ಕಾಂಗ್ರೆಸ್ ಸೋಶಾಲಿಸ್ಟ ಪಕ್ಷದವರು ತಾ. ೩ರಂದು ಎಸ್. ಎಂ. ಜೋಶಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸತ್ಯಾಗ್ರಹ ಪ್ರತಿಜ್ಞೆಯ ಸಂಬಂಧದಲ್ಲಿ ಆತಾಸ ಚರ್ಚೆ ಮಾಡಿದರು. ಅಚ್ಯುತ ಪಟವರ್ಧನರೂ ಸಭೆಗೆ ಬಂದಿದ್ದರು. ಚರ್ಚೆಯ ಕೊನೆಯಲ್ಲಿ ಪ್ರತಿಜ್ಞೆ ಕೈಗೆದುಕೊಂಡು ಪ್ರಾಮಾಣಿಕ ರೀತಿಯಿಂದ ಅದರಂತೆ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿತು.

ಜಿನ್ನರಿಗೆ ಮುಸ್ಲಿಮ ಬೆಂಬಲವಿಲ್ಲ

ಕೋಯಂಬತ್ತೂರು ಮುನಿಸಿಪಾಲಿಟಿಯ [illegible] ಅಬ್ದುಲ್ ರಹೀಮರ ಅಧ್ಯಕ್ಷತೆಯಲ್ಲಿ ದಕ್ಷಿಣ ಹಿಂದುಸ್ಥಾನ ರಾಷ್ಟ್ರೀಯ ಮುಸಲ್ಮಾನ ಸಂಘದ ಸಭೆ ಸೇರಿ ಮುಸ್ಲಿಂ ಲೀಗ್ ಮತ್ತು ಬ್ಯಾ. ಜಿನ್ನಾ ಇವರು ಕೈಕೊಂಡ ಹಿಂದುಸ್ಥಾನ ವಿಭಜನೆಯ ಧೋರಣೆಯು ನಿಷೇಧಿಸಲ್ಪಟ್ಟಿತು. ಅಲ್ಲದೆ ಮುಸಲ್ಮಾನರು ಕಾಂಗ್ರೆಸ್ಸನ್ನು ಸೇರಲು ಬಿನ್ನವಿಸಲಾಯಿತು.

ಸರ್, ರಾಧಾಕೃಷ್ಣನ್

ಸರ್. ಎಸ್. ರಾಧಾಕೃಷ್ಣನ್ ಇವರು ಕಲಕತ್ತಾ ವಿಶ್ವವಿದ್ಯಾಲಯದ ವೇದಾಂತನೀತಿಶಾಸ್ತ್ರದ ಅಧ್ಯಾಪಕರಾಗಿ ಮತ್ತೆ ೫ ವರ್ಷಗಳ ವರೆಗೆ ನೇಮಿಸಲ್ಪಟ್ಟಿದ್ದಾರೆ.

ಸಿಂಧದ ಮಂತ್ರಿಮಂಡಳ

ಸಿಂಧ ಮಂತ್ರಿಮಂಡಲವು ಲೀಗಿನ ಮಂತ್ರಿಮಂಡಳ[...] ಟ್ಟು ಮತ್ತು [...] ಧವನ್ನು ಸುಧಾ[...] ಶವೆಂದು ಮು[...] ಕ್ಕ ಪಲಾಸಾಯ[...] ಮಂತ್ರಿಮಂಡಳ[...] ಕೃತಿಯಿಂದಲೇ [...] ಮುಂತಾಗಿ [...] ಉತ್ತರ ಕಳಿಸಿದ[...]

ದಿವಂಗತ [...]

ಅನ[...]

ಇವರ ಹೆಸರಲ್ಲಿ[...] ವಾರ ಪ್ರಕಟಿಸಿದ[...] ಕ್ರಮಕ್ಕೆ ಪಾರ್ಶೀ[...] ಮಾತ್ರವಲ್ಲದೆ[...] ಹೋಮ್, ಫೆಲ್ಲ[...] ಆಸ್ಪತ್ರೆಗೆ ಧನಸ[...] ಮಾಡಿಸುವರೆ, [...] ರುವರು.

ಎ. ಐ. ಸಿ. [...]

ಎ. ಐ. ಸಿ. [...] ಒಂದು ಕಾರ್ಯ[...] ಮಹಿಳಾ ವಿಭಾ[...] ಕೆಂದು ರಾಷ್ಟ್ರ[...] ಸಿದ್ದಾರೆ.

ಗಡಿನಾ[...]

ವೈನವಾಲಿ[...] ಹಳ್ಳಿಯ ಹಕ್ಕಿ[...] ಗಾರರಲ್ಲಿ ಒಂ[...] ಕಾಳಗ ನಡೆಯ[...] ರಾಡಿದವು.



ಸ್ವಾತಂತ್ರ್ಯಪಥದಲ್ಲಿ ಮುಂದೆ ಸಾಗುವೆವು

ಲಂಡನಿಗೆ ರಾಷ್ಟ್ರಪತಿಗಳ ಸಂದೇಶ!

ಎಲ್ಲೆಲ್ಲಿಯೂ ರಾಷ್ಟ್ರೀಯ ವಾರ!

ಡಿಫೆನ್ಸ್ ಓಪ್ ಇಂಡಿಯಾ ಆಕ್ಟಿಗೆ ಬಲಿ!

ಬಂಗಾಳದಲ್ಲಿ ನಿರ್ಬಂಧ ಕಾನೂನು!

ಮಂತ್ರಿಮಂಡಳವಲ್ಲ ರಾಷ್ಟ್ರೀಯ ಒಕ್ಕಟ್ಟು ಮತ್ತು ಹಿಂದು ಮುಸಲ್ಮಾನ ಸಂಬಂಧವನ್ನು ಸುಧಾರಿಸುವುದೇ ತಮ್ಮ ಉದ್ದೇಶವೆಂದು ಮುಖ್ಯ ಮಂತ್ರಿಗಳು ಆಚಾರ್ಯ ಕೃಪಲಾನಿಯವರಿಗೆ ತಿಳಿಸಿದ್ದಾರೆ ಹೊಸ ಮಂತ್ರಿಮಂಡಳದ ಯೋಗ್ಯತೆಯು ಅವರ ಕೃತಿಯಿಂದಲೇ ಗೊತ್ತಾಗುವದೆಂದ ಮಂತಾಗಿ ಆಚಾರ್ಯರು ತಿರುಗಿ ಉತ್ತರ ಕಳಿಸಿದ್ದಾರೆ

ದಿವಂಗತ ಮಿಜಾರ್ ಅಣ್ಣಪ್ಪ ಅನಂತ ಪೈಗಳು

ಇವರ ಹೆಸರಲ್ಲಿ ಇವರ ಮಕ್ಕಳು, ಕಳೆದ ವಾರ ಪ್ರಕಟಿಸಿದಂತೆ, ಶ್ರೀ ರಾಮಕೃಷ್ಣ ವೈದ್ಯಾಶ್ರಮಕ್ಕೆ ವಾರ್ಷಿಕ ರೂ ೧೨೦ನ್ನು ಕೊಟ್ಟದ್ದು ಮಾತ್ರವಲ್ಲದೆ ರಾಮಕೃಷ್ಣಾ ಮಟರ್ನಿಟಿ ಹೋಮ್, ಫಟ್ಲಂಡ್ ಪೇಟ್, ಇವರ ಹೆರಿಗೆ ಆಸ್ಪತ್ರೆಗೆ ಧರ್ಮಾರ್ಥವಾಗಿ ಬಡವರಿಗೆ ಹೆರಿಗೆ ಮಾಡಿಸುವರೆ, ರೂ. ೩೦೦ನ್ನು ದಾನ ಮಾಡಿರುವರು

ಎ ಐ ಸಿ. ಸಿ. ಯ ವಿಭಾಗಗಳು

ಎ ಐ. ಸಿ ಸಿ. ಯಲ್ಲಿ ಇನ್ಸಪೆಕ್ಟರರ ಒಂದು ಕಾಯಂ ಸಿಬ್ಬಂದಿಯನ್ನು ಮತ್ತು ಮಹಿಳಾ ವಿಭಾಗವನ್ನು ಏರ್ಪಡಿಸಬೇಕೆಂದು ರಾಷ್ಟ್ರಪತಿ ಅಝಾದರು ನಿರ್ಣಯಿಸಿದ್ದಾರೆ

ಗಡಿನಾಡಿನ ಸುದ್ದಿಗಳು

ಪೈನವಾಲಿ ಜಿಲ್ಲೆಯ ಅಮ್ಮಾಗಖೇಲ ಹಳ್ಳಿಯ ಹತ್ತಿರ ಪೋಲಿಸ ಮತ್ತು ಕೊಳ್ಳೆಗಾರರಲ್ಲಿ ಒಂದುದಿನ ಇಡೀ ರಾತ್ರಿಯೆಲ್ಲ ಕಾಳಗ ನಡಿಯಿತು. ಗುಂಡುಗಳು ಹಾರಾಡಿದವು.

ಬನ್ನೂ ನಗರದ ಹೊರಗೆ ಒಂದು ಆಶ್ರಮದಲ್ಲಿ ಸಿಡಿಮದ್ದು ಹಾರಿ ಒಬ್ಬ ಚಿಕ್ಕ ಹುಡುಗಿಯು ಸತ್ತಳು ಆರುಜನ ಚಿಕ್ಕ ಮಕ್ಕಳಿಗೂ ಇಬ್ಬರು ಹೆಂಗಸರಿಗೂ ಗಾಯಗಳಾದವು. ಸಿಗರೇಟ ಡಬ್ಬಿಯಲ್ಲಿ ಸ್ಫೋಟಕ ದ್ರವ್ಯವನ್ನು ಇಡಲಾಗಿತಂತೆ

ಈ ಗಡಿನಾಡು ಪ್ರಾಂತದಲ್ಲಿ ಸತ್ಯಾಗ್ರಹಿಗಳನ್ನು ಕೂಡ ಹಾಕುವ ಕಾರ್ಯ ನಡೆದಿದೆ.

ಸತ್ಯಾಗ್ರಹ ಸಮಿತಿ

ಸಂಯುಕ್ತ ಪ್ರಾಂತ ಕಾಂಗ್ರೆಸ್ ಸಮಿತಿಯು ಸತ್ಯಾಗ್ರಹ ಸಮಿತಿಯಾಗಿ ಮಾರ್ಪಟ್ಟಿದ್ದು ಸತ್ಯಾಗ್ರಹಕ್ಕೆ ಸಿದ್ಧರಿಲ್ಲದವರು ಹೆಸರನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ.

ಮುಂಬಾಯಿಯ ಮೇಯರು

ಕಾಂಗ್ರೆಸ ಪಕ್ಷದ ಧುರೀಣರಾಗಿದ್ದ ಶ್ರೀ ಪ ಧ ...ಲ್ಲಾ ತ್ರಿಕಮಜಿಯವರು ಮುಂಬಯಿ ಕಾರ್ಪೋರೇಶನಿನ ಮೇಯರರಾಗಿ ಆರಿಸಲ್ಪಟ್ಟಿರುವರು

ಜಸ್ಟಿಸ್ ಡಿಕ್ರಿ

ಜಸ್ಟಿಸ್ ಪಕ್ಷದ ಸಭಾಸದರಿಂದ ರಾಜಾ ಸರ್ ವೇದಾಚಲ ಮುಡ್ಲಿಯಾರರು ಪಕ್ಷದ ಹಿಂದಿನ ಮುಖಂಡರಾದ ಬೊಬ್ಬಿಲಿರಾಜರ ಮೇಲೆ ಪೊ ಮಿಸರಿ ನೋಟಿನ ಬಗ್ಗೆ ದಾವೆ ಮಾಡಿ ಅವರಿಗೆ ರೂ ...ಗಳ ... ಪಡೆದರು. ... ಪಕ್ಷದ ಅಧ್ಯಕ್ಷನೆಂದ ತಾವು ನೋಟು ಬರೆದ ಕೊಟ್ಟದ್ದೆನೆಂದ ಸ್ವಯ ಕ್ತಿಕವಾಗಿ ಅದಕ್ಕೆ ಹೊಣೆಗಾರನಲ್ಲೆಂದೂ ರಾಜರು ಪ್ರತಿವಾದಿಸಿದರು

ಶ್ರೀಮತಿ ಮುನಿಶಿ

ಶ್ರೀಮತಿ ಲೀಲಾವತಿ ಮುನಿಶಿಯವರು ಮುಂಬಯಿ ಕಾರ್ಪೋರೇಶನ್ ಸ್ಟ್ಯಾಂಡಿಂಗ ಕಮಿಟಿಯ ಚೆಯರ್‌ಮೇನರಾಗಿ ಅವಿರೋಧವಾಗಿ ಆರಿಸಲ್ಪಟ್ಟಿರುವರು ಆಯು ಎಸ್ ಪಾಟೀಲ ಇವರು ಸ್ಕೂಲ್ಸ ಕಮೀಟಿ ಚೆಯರ್‌ಮೇನರಾಗಿ ಆರಿಸಲ್ಪಟ್ಟರು

ಸತ್ಯಾಗ್ರಹ ಸಮಿತಿ

ಮುಂಬಯಿ ಪ್ರಾಂತದ ಕಾಂಗ್ರೆಸ ಕಮಿಟಿಯನ್ನು ಸತ್ಯಾಗ್ರಹ ಕಮಿಟಿಯನ್ನಾಗಿ ಮಾರ್ಪಡಿಸಿದರು. ಎಲ್ಲ ಸದಸ್ಯರು ಸತ್ಯಾಗ್ರಹ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ ಇವರಲ್ಲದೆ ೧೭೫ ಜನ ಪ್ರಾಥಮಿಕ ಸದಸ್ಯರೂ ಸತ್ಯಾಗ್ರಹ ಪ್ರತಿಜ್ಞೆ ತೆಗೆದುಕೊಂಡಿರುವರು.

ದೇಶದ್ರೋಹದ ಯೋಜನೆ!

ಮಾಲವೀಯರ ಖಂಡನೆ!

ಜನಗಣನಾ ವಿಭಜನೆಯು ಮುತು'

ದೇಶದ್ರೋಹಕರವೆಂದೂ, ಅದಕ್ಕೆ ಸಮಸ್ತ ಭಾರತೀಯರೂ ವಿರೋಧಿಸ ಬೇಕೆಂದೂ, ಅವರ ಯೋಜನೆಯಿಂದ ರಾಷ್ಟ್ರವು ಹಾಳಾಗುವುದೆಂದೂ ಮಾಲವೀಯರು ಹೇಳಿರುವರು

ಎ ಐ. ಸಿ ಸಿ. ಆಫೀಸಿನಲ್ಲಿ ವಿದೇಶೀಯ ವಿಭಾಗ ನೆಹರುಗಳ ವಶದಲ್ಲಿ

ನೆಹರುಗಳು ಅಖಿಲಭಾರತ ಕಾಂಗ್ರೆಸು ಕಮಿಟಿಯಲ್ಲಿ ತೆರೆಯಲ್ಪಡುವ ವಿದೇಶೀಯ ವಿಭಾಗದಲ್ಲಿ ಕೆಲಸಮಾಡಲು ಒಪ್ಪಿಕೊಂಡಿರುವಂತೆ ತಿಳಿದಿದೆ

ಜಯಪ್ರಕಾಶರ ಬಂಧನ ಗಾಂಧಿಜಿಯವರ ಸಂತಾಪ

ಜಯಪ್ರಕಾಶರಂತಹ ಕಾಂಗ್ರೆಸ್ ಕೆಲಸಗಾರರನ್ನು ಬಂಧಿಸಿದ ವಿಚಾರದಲ್ಲಿ ನಾನು ನಿಜವಾಗಿ ಸಂತಾಪಗೊಂಡಿದ್ದೇನೆ ಆದರೆ ತಾಳ್ಮೆಗೆಡಲಾರೆ ನೀವೆಲ್ಲರೂ ರಚನಾತ್ಮಕ ಕಾರ್ಯಕ್ಕೆ ಇಳಿಯಬೇಕು ನನ್ನ ಕೇಳಿಕೆಗಳನ್ನು ಪೂರ್ಣ ಮಾಡಬೇಕು. ನಾನು ಅಶಾಂತಿಯನ್ನು ಹಬ್ಬಿಸಲು ಆಂದೋಲನ ಹೂಡಲಾರೆ ಎಂದು ಗಾಂಧೀಜಿಯವರು ಹೇಳುತ್ತಾರೆ

ಡಿಫೆನ್ಸ್ ಓಫ್ ಇಂಡಿಯಾ ಕಾನೂನಿಗೆ ಬಲಿಯಾದವರು!

ಪೋಲೀಸ ಕಮಿಶನರರ ಆಜ್ಞೆ ಮೀರಿದ ಆರೋಪದ ಮೇಲೆ ಮುಂಬಯಿ ಗಿರಣಿ ಕೆಲಸಗಾರರ ಯೂನಿಯನ್ ಅಧ್ಯಕ್ಷರಾದ ಜಿ ಬಿ ಭಿಸೆಯವರು ಬಂಧಿಸಲ್ಪಟ್ಟು ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾರೆ

ತ್ರಿಚೂರಿನ ಸಮಾಜವಾದಿ ಕಾರ್ಯಕರ್ತರಾದ ರಾಧಾಕೃಷ್ಣ ಅಯ್ಯರ ಇವರಿಗೆ ಆಕ್ಷೇಪಾರ್ಹ ಭಾಷಣದ ಬಗ್ಗೆ ಒಂದು ವರ್ಷ ಶಿಕ್ಷೆಅನುಭೋಗಿಸಿ ಬಂದ ನಂತರ ೨ ವರ್ಷ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸ ಬಾರದೆಂದು ವಿಧಿಸಲಾಗಿದೆ

ಕಿಸಾನ ಸಭೆಯ ಉಪಾಧ್ಯಕ್ಷರೂ ಕೇಂದ್ರ ಅಸೆಂಬ್ಲಿಯ ಸದಸ್ಯರೂ ಆದ ಪ್ರೊ. ಎನ್. ಜಿ. ರಂಗಾ ಇವರಿಗೆ ಮ್ಯಾಜಿಸ್ಟ್ರೇಟರ ಹುಕುಮು ಮುರಿದ ಆರೋಪಕ್ಕಾಗಿ ೧ ವರ್ಷ ಸಶ್ರಮ ಶಿಕ್ಷೆ ೫೦೦ ರೂಪಾಯಿ ದಂಡ ವಿಧಿಸಲಾಯಿತು.

ಕೂಲಿಕಾರ ಮುಂದಾಳುಗಳಾದ ಧರ್ಮರಾಮ ಬೆರಿಯುವರು ಕಲ್ಕತ್ತೆಯನ್ನು ಬಿಟ್ಟು ಹೋಗಬೇಕೆಂಬ ಹುಕುಮು ಮಾಡಿದರೆಂದು ಸೆರೆಹಿಡಿಯಲಾಗಿದೆ



ಅಜಾದರು

ಟಿಟಾಗರ ಕೂಲಿಕಾರರ ಮುಂದಾಳಾದ ಮಣೀಂದ್ರನಾಥ ಮುಕರ್ಜಿ ಇವರಿಗೆ ೬ ತಿಂಗಳ ಸಕ್ತ ಶಿಕ್ಷೆ ವಿಧಿಸಲಾಗಿದೆ

ಛತ್ರೀಸ ನಾಗಪೂರದಲಿ ಕಾಲಿಡಕೂಡದೆಂದು ಮೊನ್ನಡೆ ಪಕ್ಷದ ಸಿಹಿಲೇಂದು ದತ್ತರಿಗೆ ನೋಟೀಸ ಜಾರಿ ಮಾಡಲಾಗಿದೆ

ಮಾಧವ ಶೇರಜಂಗ ಇವರಿಗೆ ದಿಲ್ಲಿಯನ್ನು ಬಿಟ್ಟು ಹೋಗಬೇಕೆಂದು ಹುಕುಮು ಮಾಡಲಾಗಿದೆ

ಲಖನೌದಿಂದ ಹೊರಡುವ ... ದೇಶಭಿಮಾನ ಪತ್ರಿಕೆಗಳಿಗೆ ಸರಕಾರದವರು ೫೦೦ ರೂಪಾಯಿಗಳ ಜಾಮೀನು ಕೇಳಿದ್ದಾರೆ

ಹರಿಶ್ಚಂದ್ರ ವಾಜಪೇಯಿ ಇವರು ಸೆರೆ ಹಿಡಿಯಲ್ಪಟ್ಟಿರುವರು.

ಕಾಶಿ ಕೂಲಿಕಾರ ಸಂಘದ ಕಾರ್ಯದರ್ಶಿಗಳಾದ ಪ್ರಮೋದ ಲಾಹಿರಿಯವರನ್ನು ಸೆರೆಹಿಡಿಯಲಾಗಿದೆ

ಡಿಪನ್ಸ್ ಆಫ್ ಇಂಡಿಯಾ (ಭಾರತ ರಕ್ಷಣೆ) ಶಾಸನಕ್ಕೆ ಒಂದು ತಿದ್ದುಪಡಿ ಕೇಂದ್ರ ಶಾಸನಸಭೆಯಲ್ಲಿ ಸೂಚಿತವಾಗಿ ಅಂಗೀಕೃತವಾಯಿತು ಇದರಂತೆ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರ ಮೊದಲಾದ ಚಳುವಳಿ ನಡೆಸುವುದು ಭಾರತ ರಕ್ಷಣೆಗೆ ಆತಂಕಮಾಡುವುದೆಂದು ಶಿಕ್ಷಿಸಲ್ಪಡಬೇಕಾಗುತ್ತದೆ 'ಇದಕ್ಕೆ ಪ್ರತಿಭಟನೆ ಬಹಳವಾಗಿತ್ತಾಗ ... ಗಳು ಬಂದವು.

ದಕ್ಷಿಣ ಕನ್ನಡ ಜಿಲ್ಲಾ
ಸರ್ಕಲ್ ಕಾಂಗ್ರೆಸ್ ಕಮಿಟಿ ಚುನಾವಣೆ
ಚುನಾವಣಾ ನಿಯಮಗಳು

...ಜಿಲ್ಲೆಯ ಹದಿನಾಲ್ಕು ಸರ್ಕಲುಗಳಿಗೆ ಕೆಳಗೆ ಕಂಡ ಪ್ರಾತಿನಿಧ್ಯ ಸ್ಥಾನಗಳಿರುವವು. ಕುಂದಾಪುರ—೫; ಬಾರಕೂರು—೫; ಉಡುಪಿ—೫; ಕಟಪಾಡಿ—೫; ಕಾರ್ಕಳ—೮; ಬಂಟ್ವಾಳ—೫; ಮೂಲ್ಕಿ—೫; ಪಾಣೆಮಂಗಳೂರು—೫, ಮಂಗಳೂರು—೧೧, ಪುತ್ತೂರು—೫, ಉಪ್ಪಿನಂಗಡಿ—೬; ಮಂಜೇಶ್ವರ—೫; ಕಾಸರಗೋಡು—೬; ಹೊಸದುರ್ಗ—೬. ಹುರಿಯಾಳುಗಳೂ, ಸೂಚಕ ಮತ್ತು ಅನುಮೋದಕರೂ ಆಯಾಯ ಸರ್ಕಲುಗಳಲ್ಲಿಯೇ ಪ್ರಾಥಮಿಕ ಸದಸ್ಯರಾದವರಾಗಿರತಕ್ಕದ್ದು.

ತಾ. ೩೦—೯—೧೯೩೯ರ ಒಳಗಾಗಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿದ್ದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರ ಪಟ್ಟಿಯ ಮತದಾರ ಯಾದಿಯಾಗಿರುವುದು. ಚುನಾವಣೆಗೆ ನಿಲ್ಲಬಯಸುವ ಹುರಿಯಾಳುಗಳಾಗಲೀ, ಯಾ ಯಾವ ಕಾಂಗ್ರೆಸ್ ಸದಸ್ಯನೇ ಆಗಲೀ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಾಗಲೀ ಯಾ ಆಯಾ ರಿಟರ್ನಿಂಗ್ ಆಫೀಸರರೊಡನಾಗಲೀ ಅಲ್ಲಿರುವ ಮತದಾರ ಯಾದಿಯನ್ನು ನೋಡಿ ನಕಲುಮಾಡಿಕೊಳ್ಳಬಹುದು.

ನಾಮಪತ್ರಗಳು ಜಿಲ್ಲಾ ಕಮಿಟಿಯಿಂದ ಅಥವಾ ರಿಟರ್ನಿಂಗ್ ಆಫೀಸರರುಗಳಿಂದ ಒಂದು ಆಣೆಗೆ ಒಂದು ಸೆಟ್ಟಿನಂತೆ ದೊರೆಯುವವು. ಹುರಿಯಾಳುಗಳು ಈ ಫಾರ್ಮಿನ ಎರಡು ಪ್ರತಿಗಳನ್ನು ತುಂಬಿ ಒಂದು ಆಯಾ ಸರ್ಕಲಿನ ರಿಟರ್ನಿಂಗ್ ಆಫೀಸರರುಗಳಿಗೆ ಒಂದು ರೂಪಾಯಿ ಡಿಪೋಜಿಟಿನೊಂದಿಗೂ, ಇನ್ನೊಂದು ಪ್ರತಿಯನ್ನು ಜಿಲ್ಲಾ ಕಮಿಟಿಗೆ ರಿಟರ್ನಿಂಗ್ ಆಫೀಸರರುಗಳ ರಶೀದಿಯೊಂದಿಗೂ, ನಾಮಪತ್ರಗಳೊಂದಿಗೆ ಕೊಡುವ ಲಕ್ಕೋಟೆಯಲ್ಲಿ ಸೀಲುಮಾಡಿ ತಾ. ೧೬—೪—೪೦ರ ಸಂಜೆ ಘಂಟೆ ೬ರೊಳಗೆ ಎರಡೂ ಕಡೆಗಳಲ್ಲೂ ತಲಪುವಂತೆ ಕಳಿಸಬೇಕು. ಉಮೇದ್ವಾರರು ಎಷ್ಟು ನಾಮಪತ್ರಗಳನ್ನು ಸೀಲುಮಾಡಿದ ಪಾಕೆಟಿನ ಯಾ ಮನಿಆರ್ಡರ್ ಕೂಪನಿನಲ್ಲಿ ಹುರಿಯಾಳು ತನ್ನ ಮತದಾರ ಸಂಘದ ಹೆಸರನ್ನು ಬರೆಯಕೂಡದು. ನಾಮಪತ್ರದೊಂದಿಗೆ ಕೊಟ್ಟ ಹಣವು ಎಂದೂ ಹಿಂದೆ ಕೊಡಲ್ಪಡಲಾರದು. ಸೀಲುಮಾಡಿದ ಲಕೋಟೆಗಳನ್ನು ನಾಮಪತ್ರ ಪರಿಶೀಲನೆ ಮಾಡುವುದಕ್ಕೆ ನಿರ್ದಿಷ್ಟವಾದ ವೇಳೆಯ ಮೊದಲು ಒಡೆಯಕೂಡದು.

ತಾ. ೧೮—೪—೪೦ನೇ ದಿನ ಬೆಳಗ್ಗೆ ೯ರಿಂದ ೧೧ರ ಒಳಗಾಗಿ ರಿಟರ್ನಿಂಗ್ ಆಫೀಸರರು ನಾಮಪತ್ರಗಳನ್ನು ಪರಿಶೀಲಿಸಿ, ನಿಯಮಕ್ಕೆ ಸರಿಯಾಗಿ ತುಂಬಿದ ನಾಮಪತ್ರಗಳ ಹುರಿಯಾಳುಗಳ ಹೆಸರುಗಳನ್ನು ಪ್ರಕಟಿಸುವರು

ತಾ. ೧೯—೪—೪೦ರ ಸಂಜೆ ಘಂಟೆ ೬ರ ಒಳಗಾಗಿ ಹುರಿಯಾಳುಗಳು ಲಿಖಿತ ಮೂಲಕ ಅರ್ಜಿ ಕೊಟ್ಟು ತನ್ನ ಹುರಿಯಾಳುತ್ವವನ್ನು ಹಿಂತೆಗೆದು ಕೊಳ್ಳಬಹುದು

ಚುನಾವಣೆಗೆ ಸಂಬಂಧಿಸಿದ ಪ್ರಕಟಣೆಗಳು ಪ್ರಕಟಿಸಲು ಸಾಧ್ಯವಿದ್ದಲ್ಲಿ ಪ್ರಕಟಿಸಲ್ಪಟ್ಟು, ಹುರಿಯಾಳುಗಳಿಗೆ ಎಲ್ಲಾ ಸಂದರ್ಭಗಳಲ್ಲೂ ತಿಳಿಸಲ್ಪಡುವುದು.

ರಿಟರ್ನಿಂಗ್ ಆಫೀಸರ ಅಥವಾ ಅವರಿಂದ ನೇಮಕವಾದ ಅಧಿಕಾರಿಗಳ ನೇತೃತ್ವದಲ್ಲಿ ತಾ. ೨೧—೪—೪೦ನೇ ದಿನ ಮುಂಜಾನೆ ೮ರಿಂದ ೧೨ಮತ್ತು ಮಧ್ಯಾಹ್ನ ೨ರಿಂದ ೬ರ ವರೆಗೆ ಚುನಾವಣೆಗಳು ನಡೆಯುವವು. ಮತಗಳು ಗುಪ್ತ ಮತದಾನ ಪದ್ಧತಿಯಿಂದ ತೆಗೆದುಕೊಳ್ಳಲ್ಪಡುವುವಾದರೂ ಮತದಾರನು ಇಚ್ಛಿಸಿದಲ್ಲಿ ಬೇರೆ ರೀತಿಯಿಂದ ಮತ ಕೊಡಬಹುದು. ರಿಟರ್ನಿಂಗ್ ಆಫೀಸರರು ಸಕಾಲದಲ್ಲಿ ಅನುಕ್ರಮ ನಂಬರು ಇರುವ ಮತಪತ್ರಗಳನ್ನೂ ಮತದಾನ ಪೆಟ್ಟಿಗೆಗಳನ್ನೂ ಪೋಲಿಂಗ್ ಆಫೀಸರರಿಗೆ ಮುಟ್ಟಿಸುವ ಏರ್ಪಾಡು ಮಾಡಬೇಕು. ಮತದಾನ ಮುಗಿದ ಕೂಡಲೇ ಪೋಲಿಂಗ್ ಆಫೀಸರರು ಹುರಿಯಾಳುಗಳ ಅಥವಾ ಅವರ ಏಜಂಟರ ಎದುರಿನಲ್ಲಿ ಮತದಾನ ಪೆಟ್ಟಿಗೆಗಳನ್ನು ಸೀಲು ಮಾಡಿ [illegible] ಮುಖಾಂತರ [illegible] ರಿಟರ್ನಿಂಗ್ ಆಫೀಸರರಿಗೆ ತಾ. ೨೨—೪—೪೦ನೇ ದಿನ ಬೆಳಗ್ಗೆ ಘಂಟೆ ೮ರ ಒಳಗಾಗಿ ತಲಪುವಂತೆ ಕಳಿಸಿಕೊಡಬೇಕು

೨೨—೪—೪೦ನೇ ದಿವಸ ಮಧ್ಯಾಹ್ನ ೧೧ರಿಂದ ರಿಟರ್ನಿಂಗ್ ಆಫೀಸರರು ಹುರಿಯಾಳುಗಳ ಅಥವಾ ಅವರ ಏಜಂಟರ ಸಮ್ಮುಖದಲ್ಲಿ ಮತಪತ್ರಗಳ ಎಣಿಕೆ ಪ್ರಾರಂಭಿಸುವರು. ಎಣಿಕೆ ಮುಗಿದ ಕೂಡಲೇ ಫಲಿತಾಂಶವನ್ನು ಜಿಲ್ಲಾ ರಿಟರ್ನಿಂಗ್ ಆಫೀಸರರಿಗೆ ಕಳಿಸಿಕೊಟ್ಟು ಚುನಾವಣೆಗೆ ಸಂಬಂಧಿಸಿದ ಎಲ್ಲಾ ರಿಕಾರ್ಡುಗಳನ್ನು ತನ್ನ ವರದಿಯೊಂದಿಗೆ ಜಿಲ್ಲಾ ರಿಟರ್ನಿಂಗ್ ಆಫೀಸರರುಗಳಿಗೆ ಕಳಿಸಿಕೊಡಬೇಕು

ಜಿಲ್ಲಾ ರಿಟರ್ನಿಂಗ್ ಆಫೀಸರರು ತಾ. ೨೫—೪—೪೦ರಂದು ಚುನಾಯಿತರಾದವರ ಹೆಸರುಗಳನ್ನು ಪ್ರಕಟಿಸುವರು.

ಚುನಾವಣೆಯ ವಿಚಾರವಿದ್ದ ತಕರಾರುಗಳನ್ನು ತಾ. ೨೫—೪—೪೦ರ ಒಳಗಾಗಿ ಜಿಲ್ಲಾ ಕಮಿಟಿಯ ಕಾರ್ಯದರ್ಶಿಯವರಿಗೆ ತಲಪುವಂತೆ ಕಳಿಸಿಕೊಡಬೇಕು. ಜಿಲ್ಲಾ ಪಂಚ ಮಂಡಲದವರು ಇದನ್ನು ಇತ್ಯರ್ಥಿಸುವರು.

ಮತದಾರ ಸಂಘಗಳ ವಿವರ:—

೧ ಕುಂದಾಪುರ ಸರ್ಕಲ್ —(೧) ಕುಂದಾಪುರ ೨ ಸೀಟು (೨) ಬಸ್ರೂರು ೧ ಸೀಟು, (೩) ಬೈಂದೂರು ೨ ಸೀಟು ೨ ಬಾರಕೂರು ಸರ್ಕಲ್ —(೧) ಬಾರಕೂರು ೨ ಸೀಟು, (೨) ಬ್ರಹ್ಮಾವರ ೧ ಸೀಟು, (೩) ಹಾವಂಜೆ ೧ ಸೀಟು, (೪) ಕೋಟ, ೧ ಸೀಟು ೩ ಉಡುಪಿ ಸರ್ಕಲ್ (೧) ಉಡುಪಿ ೩ ಸೀಟು, (೨) ಕಲ್ಯಾಣಪುರ, ೧ ಸೀಟು (೩) ಕುಂಜಾಲ ೨ ಸೀಟು ೪ ಕಟಪಾಡಿ ಸರ್ಕಲ್ (೧) ಕಟಪಾಡಿ, ೧ ಸೀಟು (೨) ಕಾಪು, ೧ ಸೀಟು (೩) ಬೈಲೂರು ೨ ಸೀಟು (೪) ಶಿವ ೧ ಸೀಟು ೫ ಕಾರ್ಕಳ ಸರ್ಕಲ್ —(೧) ಕಾರ್ಕಳ, ೩ ಸೀಟು (೨) ಮುದ್ರಾಡಿ ೨ ಸೀಟು (೩) ಅಜೆಕಾರು ೧ ಸೀಟು, (೪) ದುರ್ಗ ೧ ಸೀಟು (೫) ಮೂಡಬಿದ್ರೆ ೧ ಸೀಟು ೬ ಮೂಲ್ಕಿ ಸರ್ಕಲ್ (೧) ಮೂಲ್ಕಿ ೧ ಸೀಟು, (೨) ಮುಂಡ್ಕೂರು ೧ ಸೀಟು, (೩) ಪಣಂಬೂರು ೧ ಸೀಟು, (೪) ದೇರೆಬೈಲು ೨ ಸೀಟು ೭ ಬಂಟ್ವಾಳ ಸರ್ಕಲ್ (೧) ಕಾವೂರು, ೪ ಸೀಟು (೨) ಬಂಟ್ವಾಳ, ೧ ಸೀಟು, ೮ ಪಾಣೆಮಂಗಳೂರು ಸರ್ಕಲ್ —(೧) ಪಾಣೆಮಂಗಳೂರು ೩ ಸೀಟು, (೨) ಕಲ್ಲಡ್ಕ, ೧ ಸೀಟು, (೩) ಉಳ್ಳಾಲ, ೧ ಸೀಟು. ೯ ಮಂಗಳೂರು ಸರ್ಕಲ್ —(೧) ಕೊಡಿಯಾಲಬೈಲು, ೩ ಸೀಟು, (೨) ಸೆಂಟ್ರಲ್, ೨ ಸೀಟು, (೩) ಬಂದರ್, ೧ ಸೀಟು, (೪) ಮಾರ್ಕೆಟ್, ೧ ಸೀಟು (೫) ಕೆಂಟೋನ್ಮೆಂಟ್ ೨ ಸೀಟು, (೬) ತ್ರಿಶೂಲೇಶ್ವರ, ೧ ಸೀಟು. ೧೦, ಪುತ್ತೂರು ಸರ್ಕಲ್ —(೧) ವಿಟ್ಲ, ೧ ಸೀಟು, (೨) ಪುತ್ತೂರು, ೨ ಸೀಟು, (೩) ಬೆಳ್ಳಾರೆ, ೧ ಸೀಟು, (೪) ಬಾಳಿಲ ೧ ಸೀಟು ೧೧ ಉಪ್ಪಿನಂಗಡಿ ಸರ್ಕಲ್ —(೧) ಉಪ್ಪಿನಂಗಡಿ, ೨ ಸೀಟು, ಬೆಳ್ತಂಗಡಿ, ೧ ಸೀಟು, (೩) ಕಡಬ, ೧ ಸೀಟು, (೪) ಸುಬ್ರಹ್ಮಣ್ಯ, ೧ (೫) ನಿಡ್ಲೆ, ೧ ಸೀಟು, (೬) ಹತ್ಯಾಡ್ಕ ೧ ಸೀಟು, ೧೨ ಮಂಜೇಶ್ವರ ಸರ್ಕಲ್ —(೧) ಮಂಜೇಶ್ವರ, ೩ ಸೀಟು, (೨) ಕುಂಬಳೆ, ೧ ಸೀಟು, (೩) ಮಂಗಲ್ಪಾಡಿ, ೧ ಸೀಟು, ೧೩ ಕಾಸರಗೋಡು ಸರ್ಕಲ್ —(೧) ಕಾಸರಗೋಡು, ೪ ಸೀಟು (೨) ಪೆರ್ಡಾಲ ೧ ಸೀಟು (೩) ಕುಂಬಳೆ, ೧ ಸೀಟು (೧೪) ಹೊಸದುರ್ಗ ಸರ್ಕಲ್ —(೧) ಹೊಸದುರ್ಗ ೩ ಸೀಟು (೨) ಬಳ್ಳ, ೨ ಸೀಟು (೩) ಅಜಾನೂರು ೧ ಸೀಟು

(ಈ ನಿಯಮಾವಳಿಗಳೂ ಮತದಾರ ಸಂಘಗಳೂ ತಾ. ೫—೪—೪೦ರಂದು ಕೂಡಿದ ಜಿಲ್ಲಾ ಕಮಿಟಿಯ ಕಾರ್ಯಕಾರಿ ಮಂಡಲಿಯ ಸಭೆಯಲ್ಲಿ ಮಂಜೂರು ಮಾಡಲ್ಪಟ್ಟವುಗಳು)

ಎನ್ ಶೇಷಗಿರಿ ರಾವ್
ಚುನಾವಣಾ ಅಧಿಕಾರಿ

ಸರ್ಕಲ್ ಕಾಂಗ್ರೆಸ್ ಕಮಿಟಿ ಚುನಾವಣೆಗಳು
ರಿಟರ್ನಿಂಗ್ ಆಫೀಸರರುಗಳ ಹೆಸರುಗಳು

ಜಿಲ್ಲೆಯ ಹದಿನಾಲ್ಕು ಸರ್ಕಲುಗಳ ಚುನಾವಣೆಗಳನ್ನು ನಡಿಸಲು ಈ ಕೆಳಗೆ ಹದಿನಾಲ್ಕು ಜನರನ್ನು ಆಯಾ ಸರ್ಕಲುಗಳ ಬಗ್ಗೆನೇ ನೇಮಿಸಲಾಗಿದೆ. ೧ ಕುಂದಾಪುರ ಸರ್ಕಲ್—ಶ್ರೀ ಕೆ ಸಂಜೀವ ಹೆಗ್ಡೆ ಏಜಂಟ್ ವಿಜಯ ಬೇಂಕ್ ಕುಂದಾಪುರ ೨ ಬಾರಕೂರು ಸರ್ಕಲ್—ಶ್ರೀ ಜೋನ್ ಪಿ ಸಿಕೇರ, ಬಾರಕೂರು ೩. ಉಡುಪಿ ಸರ್ಕಲ್—ಶ್ರೀ ಯಲ್ ಯಸ್ ನಾಯಕ್ ಮೆನೇಜಿಂಗ್ ಡೈರೆಕ್ಟರ್ ಉಡುಪಿ ಬೇಂಕ್ ೪ ಕಟಪಾಡಿ ಸರ್ಕಲ್—ಶ್ರೀ. ಕೆ. ಗಣಪಯ್ಯ ಶೆಟ್ಟಿ ಕಟಪಾಡಿ ೫ ಕಾರ್ಕಳ ಸರ್ಕಲ್—ಶ್ರೀ ಕೆ ಪಾಂಡುರಂಗ ಪೈ ಮರ್ಚಂಟ್ ಕಾರ್ಕಳ ೬ ಮೂಲ್ಕಿ ಸರ್ಕಲ್ ಶ್ರೀ ಟಿ ನರಹರಿ ಶೆಣೈ, ಮೂಲ್ಕಿ ೭ ಬಂಟ್ವಾಳ ಸರ್ಕಲ್ ಶ್ರೀ ಬಿ ನಾಗೇಂದ್ರ ನಾಯ್ಕ ಬಾಳಿಗ, ಬಂಟ್ವಾಳ ೮ ಪಾಣೆಮಂಗಳೂರು ಸರ್ಕಲ್ ಶ್ರೀ ಯನ್ ಉಪೇಂದ್ರ ನಾಯಕ ಪಾಣೆಮಂಗಳೂರು ೯ ಮಂಗಳೂರು ಸರ್ಕಲ್ ಶ್ರೀ ಯಂ ವಾಸುದೇವ ಬಾಳಿಗ ಕಂಟ್ರಾಕ್ಟರ್, ಮಂಗಳೂರ ೧೦ ಪುತ್ತೂರು ಸರ್ಕಲ್ ಶ್ರೀ ಯಸ್ ಚೆನ್ನಪ್ಪಗೌಡ ವಕೀಲ್ ಪುತ್ತೂರು ೧೧ ಉಪ್ಪಿನಂಗಡಿ ಸರ್ಕಲ್—ಶ್ರೀ ಬಿ ಗೋಪಾಲ ಶೆಣೈ ಉಪ್ಪಿನಂಗಡಿ ೧೨ ಮಂಜೇಶ್ವರ ಸರ್ಕಲ್ ಶ್ರೀ ಜಿ ದೇವಪ್ಪ ಆಳ್ವ, ಕುಂಬಳೆ ೧೩ ಕಾಸರಗೋಡು ಸರ್ಕಲ್ ಶ್ರೀ ಯಂ ರಾಮ ಹೆಗ್ಡೆ, ಕಾಸರಗೋಡು ೧೪ ಹೊಸದುರ್ಗ ಸರ್ಕಲ್ ಶ್ರೀ ಕೆ ಅಚ್ಯುತ ಶೆಣೈ ಹೊಸದುರ್ಗ

(ಸಹಿ) ಕೆ ವಾಸುದೇವ ಶೆಣೈ
ಕಾರ್ಯದರ್ಶಿ
ದ ಕ ಜಿ ಕಾ ಕಮಿಟಿ

THE PIE-MONEY BANK LTD,
Market Road MANGALORE
Undertakes all kinds of Banking Business Current account at 1½% per annum Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction Chit Fund ranging from Rs 100/ to Rs 5000/ run regularly on systematic lines Unique Banking facilities to Businessmen and interested Public
Apply for particulars—
K R. GURU, *Managing Director*



7ಓ ಕ್ಲೋಕ್ ಬ್ಲೇಡುಗಳು ನಡುವಿನಲ್ಲಿ ಸಿಗಿಯಲ್ಪಟ್ಟವೆ ಮತ್ತು ಹಳೆ ಮಾದರಿಗಿಂತಲೂ ವಿಶೇಷ ತರದಲ್ಲಿ ಸುದಾಣಿಸಲ್ಪಟ್ಟಿದೆ, ಇದರ ಬೆಲೆಯು ಕೇವಲ ಕಡಿಮೆ ಮಾತ್ರವಲ್ಲದೆ ಇದರ ಎರಡೂ ಬದಿಗಳು ಅತ್ಯಂತ ಹರಿತವಾಗಿ ಮಸೆಯಲ್ಪಟ್ಟವೆ, ನಯವಾದ ಕ್ಷೌರವನ್ನುಂಟುಮಾಡುವುದು, ಒಂದು ಬ್ಲೇಡು ಬಹು ಸಮಯದ ವರೆಗೆ ಬರುವುದು
7ಓ ಕ್ಲೋಕ್ ಬ್ಲೇಡುಗಳು ಹಳೆ ಮತ್ತು ಹೊಸ ಮಾದರಿಯ ರೇಜರುಗಳಿಗೆ ಉಪಯುಕ್ತವಾಗಿರುತ್ತವೆ.

ದೀನಬಂಧುಗಳ ವಿಯೋಗಕ್ಕಾಗಿ ಭಾರತೀಯ ಬಾಷ್ಪಾಂಜಲಿ

ರೆವರೆಂಡ್ ಅಂಡ್ರೂಸರು ಅಗಲಿಹೋದರು

ದೀನಬಂಧು ಸಿ. ಎಫ್. ಅಂಡ್ರೂಸ್‌ರವರು ತಾ. ೫ರಂದು ಕಲ್ಕತ್ತೆಯಲ್ಲಿ, ರಾತ್ರಿ ೧-೪೦ ಘಂಟೆಗೆ ಪರಂಧಾಮವನ್ನೈದಿದರು.

ಕಳೆದ ತಿಂಗಳು ಮಾರ್ಚಿ ೨೧ನೇ ತಾರೀಖಿನ ದಿನ ಡಾ॥ ನಿಯೋಗಿ ದಾಸ್‌ರವರ ಚಿಕಿತ್ಸಾ ಭವನದಲ್ಲಿ ರೆವರೆಂಡ್ ಅಂಡ್ರೂಸ್‌ರವರಿಗೆ ಎರಡನೆಯ ಬಾರಿ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿತ್ತು.

ಕಲ್ಕತ್ತಾ ನಗರದ ಕ್ರೈಸ್ತ ಮುಖ್ಯ ಗುರುಗಳು ರೆವರೆಂಡ್ ಸಿ. ಎಫ್. ಅಂಡ್ರೂಸ್‌ರವರ ಶವ ಸಂಸ್ಕಾರ ವಿಧಿಗಳನ್ನು ಸಾಂಗವಾಗಿ ನೆರವೇರಿಸಿದರು. ನಾಲ್ಕು ಮಂದಿ ಭಾರತೀಯರೂ ಮತ್ತು ನಾಲ್ಕು ಮಂದಿ ಐರೋಪ್ಯ ಪಾದ್ರಿಗಳೂ ಶವದ ಪೆಟ್ಟಿಗೆಯನ್ನು ಹೊತ್ತು ಹೊರಟರು. ಹದಿನೈದು ಕಾರುಗಳೂ ಮತ್ತು ೧೦೦ ಮಂದಿ ಜನರೂ ಮೆಲ್ಲನೆ ಒಂದು ಮೈಲಿ ದೂರ ಮೆರವಣಿಗೆಯಲ್ಲಿ ಹೊರಟು ಸಮಾಧಿಸ್ಥಾನವನ್ನು ಸೇರಿದರು. ಅಲ್ಲಿ ಮುಖ್ಯ ಗುರುಗಳು ಅಂತ್ಯ ಸಂಸ್ಕಾರವನ್ನು ನೆರವೇರಿಸಿದರು. ಶವದ ಪೆಟ್ಟಿಗೆಯನ್ನು ಸಮಾಧಿ ಮಾಡಲಾಯಿತು. ಕ್ರೈಸ್ತ ದೇವಾಲಯದಲ್ಲಿ ಶ್ರೀ ಸುಭಾಸ್ ಚಂದ್ರಬೋಸ್, ಕಲ್ಕತ್ತಾ ಮೇಯರರಾದ ಶ್ರೀ ಎನ್. ಸಿ. ಸೇನ್, ಶ್ರೀ ಎಸ್. ಸಿ. ಮಿತ್ರ, ಸರ್ ಡಾರ್ಸಿ ಲಿಂಡ್‌ಸೇ, ಮಿ॥ ಆರ್ಥರ್ ಮೂರ್ ಮುಂತಾದ ಪ್ರಮುಖರು ಹಾಜರಿದ್ದರು.

ಮಹಾತ್ಮಾ ಗಾಂಧಿಯವರಿಂದಲೂ, ಶ್ರೀ ಸುಭಾಸ್ ಚಂದ್ರಬೋಸರವರಿಂದಲೂ, ಕಲ್ಕತ್ತಾ ಕಾರ್ಪೊರೇಷನ್ನಿನಿಂದಲೂ ಮತ್ತು ಹಿಂದಿನ ಬಂಗಾಳ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಿಂದಲೂ ಬಂದಿದ್ದ ಪುಷ್ಪಹಾರಗಳನ್ನು ಶವದ ಪೆಟ್ಟಿಗೆಯ ಮೇಲಿಟ್ಟು ಅಂತ್ಯ ಗೌರವವನ್ನು ಸಲ್ಲಿಸಲಾಯಿತು.

ಜೀವನ ಚರಿತ್ರೆ

ಚಾರ್ಲ್ಸ್ ಫ್ರಿಯರ್ ಅಂಡ್ರೂಸ್‌ರವರು ೧೮೭೧ನೇ ಫೆಬ್ರವರಿ ೧೨ರಲ್ಲಿ ಜನಿಸಿದರು. ಬರ್ಮಿಂಗ್ ಹ್ಯಾಮಿನ ಕಿಂಗ್ ಎಡ್ವರ್ಡ್ಸ್ ಸ್ಕೂಲಿನಲ್ಲಿಯೂ ಮತ್ತು ಕೇಂಬ್ರಿಡ್ಜಿನ ಪೆಂಬ್ರೋಕ್ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸ ಪಡೆದರು. ೧೮೯೯ರಲ್ಲಿ ಕೇಂಬ್ರಿಡ್ಜಿನ ಪೆಂಬ್ರೋಕ್ ಕಾಲೇಜಿನ ಫೆಲೋ ಮತ್ತು ಉಪನ್ಯಾಸಕರಾದರು. ಡಿಲ್ಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನ ಪ್ರೊಫೆಸರ್ ಆದರು. ಕೇಂಬ್ರಿಡ್ಜ್ ಯೂನಿವರ್ಸಿಟಿ ಬ್ರದರ್ ಹುಡ್ಡಿನ ಸದಸ್ಯರಾದರು. ೧೯೦೪ರಿಂದ ೧೯೧೩ರ ವರೆಗೆ ಪಂಜಾಬ್ ವಿಶ್ವವಿದ್ಯಾಲಯದ ಸಿಂಡಿಕೇಟಿನ ಸದಸ್ಯರಾಗಿಯೂ ಮತ್ತು ಫೆಲೋ ಆಗಿದ್ದರು. ಸುಮಾರು ೧೯೧೪ರಿಂದ ಬಂಗಾಳಾದಲ್ಲಿನ ಕವಿ ರವೀಂದ್ರನಾಥ ಠಾಕೂರರ ಶಾಂತಿನಿಕೇತನದಲ್ಲಿರುವ ಅಂತರ್‌ರಾಷ್ಟ್ರ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರರಾಗಿದ್ದರು.

ಲೇಖನ ವ್ಯವಸಾಯ

ರೆವರೆಂಡ್ ಸಿ. ಎಫ್. ಅಂಡ್ರೂಸ್‌ರವರು ಅನೇಕ ಉದಾತ್ತ ಗ್ರಂಥಗಳನ್ನು ರಚಿಸಿದ್ದಾರೆ; ಅವರ ರಾಜಕೀಯ, ಧಾರ್ಮಿಕ, ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಗ್ರಂಥರಾಶಿಗಳು ಉಜ್ವಲ ಭಾವನೆಗಳಿಂದ ಕೂಡಿವೆ.

ಪ್ರಸಿದ್ಧ ಪತ್ರಿಕೋದ್ಯಮಿಗಳು

ಸಿ. ಎಫ್. ಅಂಡ್ರೂಸ್‌ರವರು ಸುಪ್ರಸಿದ್ಧ ಪತ್ರಿಕೋದ್ಯಮಿಗಳಾಗಿಯೂ ಇದ್ದರು. ಭಾರತದ ಮತ್ತು ವಿದೇಶದ ಪ್ರಮುಖ ದೈನಂದಿನ, ಸಾಪ್ತಾಹಿಕ ಮತ್ತು ಮಾಸ ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗುತ್ತಿದ್ದವು. 'ಮಾಡರ್ನ್ ರಿವ್ಯೂ'ನಲ್ಲಿ ಅವರ ಲೇಖನಗಳನ್ನು ಅನೇಕರು ಓದಿರಬಹುದು. ಅವರು 'ಮ್ಯಾಂಚೆಸ್ಟರ್ ಗಾರ್ಡಿಯನ್', 'ಕೇಪ್ ಆರ್ಗಸ್', 'ನೇಟಾಲ್ ಅಡ್ವರ್ಟೈಸರ್', ಮತ್ತು 'ಹಿಂದೂ' ಪತ್ರಿಕೆಗಳಿಗೆ ಆಗಾಗ್ಗೆ ರಾಷ್ಟ್ರೀಯ (ಭಾರತ) ಮತ್ತು ಅಂತರ್‌ರಾಷ್ಟ್ರೀಯ ವಿಚಾರಗಳನ್ನು ಕುರಿತು ಸಮಾಚಾರಗಳನ್ನು ಬರೆಯುತ್ತಿದ್ದರು.

ಮಹಾತ್ಮರ ಮಿತ್ರರು

ಚಾರ್ಲ್ಸ್ ಫ್ರಿಯರ್ ಅಂಡ್ರೂಸ್‌ರವರು ಮಹಾತ್ಮಾ ಗಾಂಧಿಯವರ ಆಪ್ತಮಿತ್ರರು. ಮೊನ್ನೆ ತಾನೇ ಗಾಂಧೀಜಿಯವರು ಕಲ್ಕತ್ತಾ ಮೂಲಕ ಮಾಲಿಕಾಂಡಕ್ಕೆ ಹೋದಾಗ, ಮಾರ್ಗಮಧ್ಯದಲ್ಲಿ ಇಳಿದು, ಹಾಸಿಗೆ ಹಿಡಿದಿದ್ದ ಅಂಡ್ರೂಸ್‌ರವರನ್ನು ಕಂಡು, ಮಾತನಾಡಿದರು.

ಅಂಡ್ರೂಸ್‌ರವರು ದಕ್ಷಿಣ ಆಫ್ರಿಕಕ್ಕೆ ಹೋಗಿ, ಸ್ಮಟ್ಸ್–ಗಾಂಧಿ ಒಪ್ಪಂದಕ್ಕಾಗಿ ಶ್ರಮಿಸಿದ್ದರು. ಗಾಂಧಿಜಿಯವರ ಚಳುವಳಿಯಲ್ಲಿ ಭಾಗಗಳಾಗಿದ್ದರು. ಸಾಗರಗಳಾಚೆ ನೆಲೆಸಿರುವ ಭಾರತೀಯರ ಕುಂದುಕೊರತೆಗಳನ್ನು ನಿವಾರಿಸಲು ಇಡೀ ಪ್ರಪಂಚದಲ್ಲೆಲ್ಲಾ ಪ್ರವಾಸ ಮಾಡಿದರು.

ದೀನ ಬಂಧು

ಅಂಡ್ರೂಸ್‌ರವರು ಶಾಂತಿಪ್ರಿಯರು. ಭಾರತದ ಉದ್ಧಾರಕ್ಕಾಗಿ ಶ್ರಮಿಸಿದರು, ದೀನ ಜನರ ಸೇವೆಗಾಗಿ ಬಳಲಿದರು. ದೀನ ಬಂಧುಗಳಾದರು. ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಅಂಡ್ರೂಸ್‌ರವರ ನಿಧನದ ಬಗ್ಗೆ ಸಂತಾಪ

ಮಹಾತ್ಮಾ ಗಾಂಧಿ—

'ದೀನಬಂಧು ರೆವರೆಂಡ್ ಸಿ. ಎಫ್. ಅಂಡ್ರೂಸರ ನಿಧನದಿಂದ ಭಾರತಕ್ಕೆ ಮಾತ್ರವಲ್ಲ, ಮಾನವ ಕುಟುಂಬಕ್ಕೇ ದೊಡ್ಡ ನಷ್ಟವುಂಟಾಗಿರುತ್ತದೆ. ದೀನ ಸೇವೆಯಲ್ಲಿ ಅವರು ಅಗ್ರಗಣ್ಯರಾಗಿದ್ದರು. ಅವರು ಇಹಲೋಕ ಸಂಕಟದಿಂದ ಬಿಡುಗಡೆ ಹೊಂದಿದರು; ಸ್ಥಿರ ಕೀರ್ತಿಯ ಲೋಕವನ್ನು ಸೇರಿದರು. ನನ್ನ ಅಭಿಪ್ರಾಯದಲ್ಲಿ ಶ್ರೀ ಚಾರ್ಲಿ ಅಂಡ್ರೂಸರು ಆಂಗ್ಲೇಯರಲ್ಲಿ ಬಹು ಪ್ರಸಿದ್ಧರೂ ಶ್ರೀಮಂತರೂ ಆದವರಾಗಿದ್ದಾರೆ. ಇವರು ಇಂಗ್ಲೆಂಡಿನ ಪ್ರಸಿದ್ಧ ಸುಪುತ್ರರಾದುದರಿಂದಲೇ ಭಾರತದ ಸತ್ಪುತ್ರರಾದರು. ಅವರು ತಮ್ಮ ಕಾರ್ಯಗಳೆಲ್ಲವನ್ನೂ ಮಾನವನ ಸೇವಾದೃಷ್ಟಿಯಿಂದ ಮಾಡಿದರು. ಕ್ರೈಸ್ತ ಮಹಾನುಭಾವನ ಉಪದೇಶದಂತೆ ನಡೆದರು. ಇವರಂಥ ಕ್ರೈಸ್ತ ಧರ್ಮಾಭಿಮಾನಿಗಳು ಬೇರೊಬ್ಬರಿಲ್ಲ. ಭಾರತವು, ಅವರ ಸೇವೆಯನ್ನು ಮೆಚ್ಚಿ, ದೀನಬಂಧು ಎಂಬ ಬಿರುದನ್ನು ಕೊಟ್ಟಿತು. ಎಂದು ತಮ್ಮ ಸಂತಾಪಸೂಚನೆಯಲ್ಲಿ ಮಹಾತ್ಮರು ಅಂದಿರುವರು.

ರಾಷ್ಟ್ರಪತಿ ಮೌಲಾನಾ ಆಜಾದ್

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಆಜಾದರು, ತಮ್ಮ ಸಂತಾಪದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ನಡೆದ ನಮ್ಮ ರಾಷ್ಟ್ರೀಯ ಚಳವಳಿಯಲ್ಲಿ ದೀನಬಂಧು ಸಿ. ಎಫ್. ಅಂಡ್ರೂಸರನ್ನು ನಾನು ಸರ್ವದಾ ಜ್ಞಾಪಿಸಿಕೊಳ್ಳುತ್ತೇನೆ. ಕ್ರೈಸ್ತ ಮತದ ಉದಾತ್ತವಾದ ತತ್ವಗಳೆನ್ನೆಲ್ಲಾ ಅವರು ಪೂರ್ಣವಾಗಿ ಆಚರಿಸುತ್ತಿದ್ದರು. ಅವರು ಭಾರತಕ್ಕೂ ಮಾನವ ಜನಾಂಗಕ್ಕೂ ಬಹುಸೇವೆ ಮಾಡಿದ್ದಾರೆ. ಅವರ ನಿಧನದಿಂದ ಅಪಾರವಾದ ಅಂತರ್‌ರಾಷ್ಟ್ರ ನಷ್ಟವುಂಟಾಗಿದೆ" ಎಂದಿರುವರು.

'ನನಗೀಗ ಅಸಹ್ಯಕರವಾದ ಹುಣ್ಣುಗಳಾಗಲಿ ಛಿದ್ರಗಳಾಗಲಿ ಇರುವ ಚರ್ಮವಿರುವುದಿಲ್ಲ'



'ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ. ಇದು ನನ್ನ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು. ಪರಿಮಳತವ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಶಮನಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು. ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ನಿಮ್ಮ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡಹುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡು ಕೊಳ್ಳಿರಿ!

ಕುಟಿಕೂರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು–ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ಹೊಸದಲ್ಲಿಯೂ (ಮಿತವ್ಯಯಕ್ಕೆ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

ಜಿಲ್ಲೆಯಲ್ಲಿರುವ ಹದಿನಾಲ್ಕು ಸರ್ಕಲುಗಳಿಗೆ ಈ ಕೆಳಗಣಂತೆ ಪ್ರಾತಿನಿಧ್ಯ ಸ್ಥಾನಗಳಿರುವುವು.

ಕುಂದಾಪುರ—೫; ಬಾರಕೂರು—೫; ಉಡುಪಿ—೫, ಕಟಪಾಡಿ—೪; ಕಾರ್ಕಳ—೮; ಬಂಟ್ವಾಳ—೫; ಮೂಲ್ಕಿ—೫, ಪಾಣೆಮಂಗಳೂರು—೫, ಮಂಗಳೂರು—೧೧, ಪುತ್ತೂರು—೫; ಉಪ್ಪಿನಂಗಡಿ—೭; ಮಂಜೇಶ್ವರ—೫; ಕಾಸರಗೋಡು—೬; ಹೊಸದುರ್ಗ—೬ ಹುರಿಯಾಳುಗಳೂ ಸೂಚಕ ಮತ್ತು ಅನುಮೋದಕರೂ ಆಯಾಯ ಸರ್ಕಲುಗಳಲ್ಲಿಯೇ ಪ್ರಾಥಮಿಕ ಸದಸ್ಯರಾದವರಾಗಿರತಕ್ಕದ್ದು.

ತಾ. ೩೦—೯—೧೯೩೯ರ ಒಳಗಾಗಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿದ್ದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರ ಪಟ್ಟಿಯ ಮತದಾರ ಯಾದಿಯಾಗಿರುವುದು ಚುನಾವಣೆಗೆ ನಿಲ್ಲಬಯಸುವ ಹುರಿಯಾಳುಗಳಾಗಲೀ, ಯಾವುದೇ ಕಾಂಗ್ರೆಸ್ ಸದಸ್ಯನೇ ಆಗಲೀ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಾಗಲೀ ಯಾ ಆಯಾ ರಿಟರ್ನಿಂಗ್ ಆಫೀಸರರೊಡನಾಗಲೀ ಅಲ್ಲಿರುವ ಮತದಾರ ಯಾದಿಯನ್ನು ನೋಡಿ ನಕಲುಮಾಡಿಕೊಳ್ಳಬಹುದು.

ನಾಮಪತ್ರಗಳು ಜಿಲ್ಲಾ ಕಮಿಟಿಯಿಂದ ಅಥವಾ ರಿಟರ್ನಿಂಗ್ ಆಫೀಸರರುಗಳಿಂದ ಒಳ್ಳಿದು ಆಣೆಗೆ ಒಂದು ಸಿಕ್ಕಿನಂತೆ ದೊರೆಯುವವು. ಹುರಿಯಾಳುಗಳು ಈ ಫಾರ್ಮಿನ ಎರಡು ಪ್ರತಿಗಳನ್ನು ತುಂಬಿ ಒಂದು ಆಯಾ ಸರ್ಕಲಿನ ರಿಟರ್ನಿಂಗ್ ಆಫೀಸರರುಗಳಿಗೆ ಒಂದು ರೂಪಾಯಿ ಡಿಪೋಸಿಟನೊಂದಿಗೂ, ಇನ್ನೊಂದು ಪ್ರತಿಯನ್ನು ಜಿಲ್ಲಾ ಕಮಿಟಿಗೆ ರಿಟರ್ನಿಂಗ್ ಆಫೀಸರರುಗಳ ರಶೀದಿಯೊಂದಿಗೂ, ನಾಮಪತ್ರಗಳೊಂದಿಗೆ ಕೊಡುವ ಲಕ್ಕೋಟೆಯಲ್ಲಿ ಸೀಲುಮಾಡಿ ತಾ. ೧೭—೪—೪೦ರ ಸಂಜೆ ಘಂಟೆ ೬ರೊಳಗೆ ಎರಡೂ ಕಡೆಗಳಲ್ಲೂ ತಲಪುವಂತೆ ಕಳಿಸಬೇಕು. ಉಮೇದ್ವಾರರು ಎಷ್ಟೂ ನಾಮಪತ್ರಗಳನ್ನು ಸೀಲುಮಾಡಿದ ಪಾಕೆಟಿನ ಯಾ ಮನಿಆರ್ಡರ್ ಕೂಪನಿನಲ್ಲಿ ಹುರಿಯಾಳು ತನ್ನ ಮತದಾರ ಸಂಘದ ಹೆಸರನ್ನು ಬರಿಯಕೂಡದು. ನಾಮಪತ್ರದೊಂದಿಗೆ ಕೊಟ್ಟ ಹಣವು ಎಂದೂ ಹಿಂದೆ ಕೊಡಲ್ಪಡಲಾರದು. ಸೀಲುಮಾಡಿದ ಲಕೋಟೆಗಳನ್ನು ನಾಮಪತ್ರ ಪರಿಶೀಲನೆ ಮಾಡುವುದಕ್ಕೆ ನಿರ್ದಿಷ್ಟವಾದ ವೇಳೆಯ ಮೊದಲು ಒಡೆಯಕೂಡದು.

ತಾ. ೧೮—೪—೪೦ನೇ ದಿನ ಬೆಳಗ್ಗೆ ೯ರಿಂದ ೧೧ರ ಒಳಗಾಗಿ ರಿಟರ್ನಿಂಗ್ ಆಫೀಸರರು ನಾಮಪತ್ರಗಳನ್ನು ಪರಿಶೀಲಿಸಿ, ನಿಯಮಕ್ಕೆ ಸರಿಯಾಗಿ ತುಂಬಿದ ನಾಮಪತ್ರಗಳ ಹುರಿಯಾಳುಗಳ ಹೆಸರುಗಳನ್ನು ಪ್ರಕಟಿಸುವರು.

ತಾ. ೧೯—೪—೪೦ರ ಸಂಜೆ ಘಂಟೆ ೬ರ ಒಳಗಾಗಿ ಹುರಿಯಾಳುಗಳು ಲಿಖಿತ ಮೂಲಕ ಅರ್ಜಿ ಕೊಟ್ಟು ತನ್ನ ಹುರಿಯಾಳುತ್ವವನ್ನು ಹಿಂತೆಗೆದು ಕೊಳ್ಳಬಹುದು.

ಚುನಾವಣೆಗೆ ಸಂಬಂಧಿಸಿದ ಪ್ರಕಟಣೆಗಳು ಪ್ರಕಟಿಸಲು ಸಾಧ್ಯವಿದ್ದಲ್ಲಿ ಪ್ರಕಟಿಸಲ್ಪಟ್ಟು, ಹುರಿಯಾಳುಗಳಿಗೆ ಎಲ್ಲಾ ಸಂದರ್ಭಗಳಲ್ಲೂ ತಿಳಿಸಲ್ಪಡುವುವು.

ರಿಟರ್ನಿಂಗ್ ಆಫೀಸರ ಅಥವಾ ಅವರಿಂದ ನೇಮಕವಾದ ಅಧಿಕಾರಿಗಳ ನೇತೃತ್ವದಲ್ಲಿ ತಾ. ೨೧—೪—೪೦ನೇ ದಿನ ಮುಂಜಾನೆ ೮ರಿಂದ ೧೨ ಮತ್ತು ಮಧ್ಯಾಹ್ನ ೨ರಿಂದ ೬ರ ವರೆಗೆ ಚುನಾವಣೆಗಳು ನಡೆಯುವವು. ಮತಗಳು ಗುಪ್ತ ಮತದಾನ ಪದ್ಧತಿಯಿಂದ ತೆಗೆದುಕೊಳ್ಳಲ್ಪಡುವುವಾದರೂ ಮತದಾರನು ಇಚ್ಛಿಸಿದಲ್ಲಿ ಬೇರೆ ರೀತಿಯಿಂದ ಮತ ಕೊಡಬಹುದು. ರಿಟರ್ನಿಂಗ್ ಆಫೀಸರರು ಸ್ಥಳದಲ್ಲಿ ಅನುಕ್ರಮ ನಂಬ್ರು ಇರುವ ಮತಪತ್ರಗಳನ್ನೂ ಮತದಾನ ಪೆಟ್ಟಿಗೆಗಳನ್ನೂ ಪೋಲಿಂಗ್ ಆಫೀಸರರಿಗೆ ಮುಟ್ಟಿಸುವ ಏರ್ಪಾಡು ಮಾಡಬೇಕು. ಮತದಾನ ಮುಗಿದ ಕೂಡಲೇ ಪೋಲಿಂಗ್ ಆಫೀಸರರು ಹುರಿಯಾಳುಗಳ ಅಥವಾ ಅವರ ಏಜಂಟರ ಎದುರಿನಲ್ಲಿ ಮತದಾನ ಪೆಟ್ಟಿಗೆಗಳನ್ನು ಸೀಲುಮಾಡಿ ಒಬ್ಬ ಜವಾಬುದಾರಿ ಮನುಷ್ಯನೊಂದಿಗೆ ರಿಟರ್ನಿಂಗ್ ಆಫೀಸರರಿಗೆ ತಾ. ೨೨—೪—೪೦

ದಕ್ಷಿಣ ಕನ್ನಡ ಜಿಲ್ಲಾ

ಸರ್ಕಲ್ ಕಾಂಗ್ರೆಸ್ ಕಮಿಟಿ ಚುನಾವಣೆ

ಚುನಾವಣಾ ನಿಯಮಗಳು

ನೇ ದಿನ ಬೆಳಗ್ಗೆ ಘಂಟೆ ೮ರ ಒಳಗಾಗಿ ತಲಪುವಂತೆ ಕಳಿಸಿಕೊಡಬೇಕು.

೨೨—೪—೪೦ನೇ ದಿವಸ ಮಧ್ಯಾಹ್ನ ೧೧ರಿಂದ ರಿಟರ್ನಿಂಗ್ ಆಫೀಸರರು ಹುರಿಯಾಳುಗಳ ಅಥವಾ ಅವರ ಏಜಂಟರ ಸಮ್ಮುಖದಲ್ಲಿ ಮತಪತ್ರಗಳ ಎಣಿಕೆ ಪ್ರಾರಂಭಿಸುವರು. ಎಣಿಕೆ ಮುಗಿದ ಕೂಡಲೇ ಫಲಿತಾಂಶವನ್ನು ಜಿಲ್ಲಾ ರಿಟರ್ನಿಂಗ್ ಆಫೀಸರರಿಗೆ ಕಳಿಸಿಕೊಟ್ಟು ಚುನಾವಣೆಗೆ ಸಂಬಂಧಿಸಿದ ಎಲ್ಲಾ ರಿಕಾರ್ಡುಗಳನ್ನು ತನ್ನ ವರದಿಯೊಂದಿಗೆ ಜಿಲ್ಲಾ ರಿಟರ್ನಿಂಗ್ ಆಫೀಸರರುಗಳಿಗೆ ಕಳಿಸಿಕೊಡಬೇಕು.

ಜಿಲ್ಲಾ ರಿಟರ್ನಿಂಗ್ ಆಫೀಸರರು ತಾ. ೨೫—೪—೪೦ರಂದು ಚುನಾಯಿತರಾದವರ ಹೆಸರುಗಳನ್ನು ಪ್ರಕಟಿಸುವರು.

ಚುನಾವಣೆಯ ವಿಚಾರವಿದ್ದ ತಕರಾರುಗಳನ್ನು ತಾ. ೨೮—೪—೪೦ರ ಒಳಗಾಗಿ ಜಿಲ್ಲಾ ಕಮಿಟಿಯ ಕಾರ್ಯದರ್ಶಿಯವರಿಗೆ ತಲಪುವಂತೆ ಕಳಿಸಿಕೊಡಬೇಕು. ಜಿಲ್ಲಾ ಪಂಚಮಂಡಲದವರು ಇದನ್ನು ಇತ್ಯರ್ಥಿಸುವರು.

ಮತದಾರ ಸಂಘಗಳ ವಿವರಃ—

೧ ಕುಂದಾಪುರ ಸರ್ಕಲ್ (೧) ಕುಂದಾಪುರ ೨ ಸೀಟು (೨) ಬಸ್ರೂರು ೧ ಸೀಟು, (೩) ಬೈಂದೂರು ೨ ಸೀಟು ೨ ಬಾರಕೂರು ಸರ್ಕಲ್—(೧) ಬಾರಕೂರು ೨ ಸೀಟು (೨) ಬ್ರಹ್ಮಾವರ ೧ ಸೀಟು, (೩ ಹಾಲಾಡಿ ೧ ಸೀಟು (೪) ಕೋಟೆ ೧ ಸೀಟು ೩ ಉಡುಪಿ ಸರ್ಕಲ್ (೧) ಉಡುಪಿ ೩ ಸೀಟು (೨) ಕಲ್ಯಾಣಪುರ, ೧ ಸೀಟು (೩) ಕುಂಜಾಲು ೨ ಸೀಟು ೪ ಕಟಪಾಡಿ ಸರ್ಕಲ್ (೧) ಕಟಪಾಡಿ, ೧ ಸೀಟು (೨) ಕಾಪು, ೧ ಸೀಟು (೩) ಬೈಲೂರು ೨ ಸೀಟು (೪) ಶಿವ ಸೀಟು ೫ ಕಾರ್ಕಳ ಸರ್ಕಲ್—(೧) ಕಾರ್ಕಳ, ೩ ಸೀಟು (೨) ಮುದ್ರಾಡಿ ೨ ಸೀಟು (೩) ಅಜೆಕಾರು ೧ ಸೀಟು (೪) ದುರ್ಗ ೧ ಸೀಟು, (೫) ಮೂಡಬಿದ್ರೆ, ೧ ಸೀಟು ೬ ಮೂಲ್ಕಿ ಸರ್ಕಲ್ (೧) ಮೂಲ್ಕಿ ೧ ಸೀಟು, (೨) ಮುಂಡ್ಕೂರು ೧ ಸೀಟು (೩) ಪಣಂಬೂರು ೧ ಸೀಟು, (೪ ಬೇರಿಬೈಲು ೨ ಸೀಟು ೭ ಬಂಟ್ವಾಳ ಸರ್ಕಲ್—(೧) ಕಾವೂರು, ೪ ಸೀಟು (೨) ಬಂಟ್ವಾಳ, ೧ ಸೀಟು ೮ ಪಾಣೆಮಂಗಳೂರು ಸರ್ಕಲ್—(೧) ಪಾಣೆಮಂಗಳೂರು ೩ ಸೀಟು (೨) ಕಲ್ಲಡ್ಕ, ೧ ಸೀಟು, (೩) ಉಳ್ಳಾಲ, ೧ ಸೀಟು. ೯ ಮಂಗಳೂರು ಸರ್ಕಲ್—(೧) ಕೊಡಿಯಾಲಬೈಲು, ೩ ಸೀಟು, (೨) ಸೆಂಟ್ರಲ್, ೨ ಸೀಟು, (೩) ಬಂದರ್, ೧ ಸೀಟು, (೪) ಮಾರ್ಕೆಟ್, ೧ ಸೀಟು (೫) ಕಂಟೋನ್ಮೆಂಟ್ ೨ ಸೀಟು, (೬) ತ್ರಿಶೂಲೇಶ್ವರ, ೧ ಸೀಟು ೧೦ ಪುತ್ತೂರು ಸರ್ಕಲ್—(೧) ವಿಟ್ಲ ೧ ಸೀಟು, (೨) ಪುತ್ತೂರು, ೨ ಸೀಟು, (೩) ಬೆಳ್ಳಾರೆ, ೧ ಸೀಟು, (೪) ಬಾಳಿಲ ೧ ಸೀಟು ೧೧ ಉಪ್ಪಿನಂಗಡಿ ಸರ್ಕಲ್—(೧) ಉಪ್ಪಿನಂಗಡಿ, ೨ ಸೀಟು, ಬೆಳ್ತಂಗಡಿ, ೧ ಸೀಟು, (೩) ಕಡಬ, ೧ ಸೀಟು, (೪) ಸುಬ್ರಹ್ಮಣ್ಯ, ೧ (೫) ನಿಡ್ಲೆ, ೧ ಸೀಟು, (೬) ಹತ್ಯಡ್ಕ ೧ ಸೀಟು, ೧೨ ಮಂಜೇಶ್ವರ ಸರ್ಕಲ್—(೧) ಮಂಜೇಶ್ವರ, ೩ ಸೀಟು (೨) ಕುಂಬಳೆ, ೧ ಸೀಟು, (೩) ಮುಗಲ್ಪಾಡಿ, ೧ ಸೀಟು ೧೩ ಕಾಸರಗೋಡು ಸರ್ಕಲ್—(೧) ಕಾಸರಗೋಡು ೪ ಸೀಟು (೨) ಪೆಡಾರ್ಲ, ೧ ಸೀಟು, (೩) ಕುಂಬಳೆ ೧ ಸೀಟು (೧೪ ಹೊಸದುರ್ಗ ಸರ್ಕಲ್—(೧) ಹೊಸದುರ್ಗ ೩ ಸೀಟು (೨) ಬಳ್ಳಿ ೧ ಸೀಟು ೩ ... ೧ ಸೀಟು

(ಈ ನಿಯಮಾವಳಿಗಳೂ ಮತದಾರ ಸಂಘಗಳೂ ತಾ. ೫—೪—೪೦ರಂದು ಕೂಡಿದ ಜಿಲ್ಲಾ ಕಮಿಟಿಯ ಕಾರ್ಯನಿರ್ವಾಹಕ ಸಭೆಯಲ್ಲಿ ಮಂಜೂರು ಮಾಡಲ್ಪಟ್ಟವುಗಳು)

ಎನ್ ಶೇಷಗಿರಿ ರಾವ್
ಚುನಾವಣಾ ಅಧಿಕಾರಿ

ಸರ್ಕಲ್ ಕಾಂಗ್ರೆಸ್ ಕಮಿಟಿ ಚುನಾವಣೆಗಳು

ರಿಟರ್ನಿಂಗ್ ಆಫೀಸರರುಗಳ ಹೆಸರುಗಳು

ಜಿಲ್ಲೆಯ ಹದಿನಾಲ್ಕು ಸರ್ಕಲುಗಳ ಚುನಾವಣೆಗಳನ್ನು ನಡಿಸಲು ಈ ಕೆಳಗೆ ಹದಿನಾಲ್ಕು ಜನರನ್ನು ಆಯಾ ಸರ್ಕಲುಗಳ ಬಗ್ಗೆನೇ ನೇಮಿಸಲಾಗಿದೆ. ೧ ಕುಂದಾಪುರ ಸರ್ಕಲ್—ಶ್ರೀ ಕೆ ಸಂಜೀವ ಹೆಗ್ಡೆ ಏಜಂಟ್ ವಿಜಯ ಬೇಂಕ್ ಕುಂದಾಪುರ ೨ ಬಾರಕೂರು ಸರ್ಕಲ್—ಶ್ರೀ ಜೋನ್ ಪಿ ಸಿಕ್ವೇರ, ಬಾರಕೂರು, ೩ ಉಡುಪಿ ಸರ್ಕಲ್—ಶ್ರೀ ಯಲ್ ಯಸ್ ನಾಯಕ್ ಮೆನೇಜಿಂಗ್ ಡೈರೆಕ್ಟರ್ ಉಡುಪಿ ಬೇಂಕ್ ೪ ಕಟಪಾಡಿ ಸರ್ಕಲ್ ಶ್ರೀ ಕೆ ಗಣಪಯ್ಯ ಶೆಟ್ಟಿ ಕಟಪಾಡಿ ೫ ಕಾರ್ಕಳ ಸರ್ಕಲ್—ಶ್ರೀ ಕೆ ಪಾಂಡುರಂಗ ಪೈ ಮರ್ಚಂಟ್ ಕಾರ್ಕಳ ೬ ಮೂಲ್ಕಿ ಸರ್ಕಲ್ ಶ್ರೀ ಟಿ ನರಹರಿ ಶೆಣೈ, ಮೂಲ್ಕಿ ೭ ಬಂಟ್ವಾಳ ಸರ್ಕಲ್ ಶ್ರೀ ಬಿ ನಾಗೇಂದ್ರನಾಥ ಬಾಳಿಗ ಬಂಟ್ವಾಳ ೮ ಪಾಣೆಮಂಗಳೂರು ಸರ್ಕಲ್ ಶ್ರೀ ಯಸ್ ಉಪೇಂದ್ರ ನಾಯಕ ಪಾಣೆಮಂಗಳೂರು ೯ ಮಂಗಳೂರು ಸರ್ಕಲ್ ಶ್ರೀ ಯಂ ವಾಸುದೇವ ಪಿಗ ಕಂಟ್ರಾಕ್ಟರ್, ಮಂಗಳೂರು ೧೦ ಪುತ್ತೂರು ಸರ್ಕಲ್ ಶ್ರೀ ಯಸ್ ಚೆನ್ನಪ್ಪಗೌಡ ವಕೀಲ್ ಪುತ್ತೂರು ೧೧ ಉಪ್ಪಿನಂಗಡಿ ಸರ್ಕಲ್—ಶ್ರೀ ಬಿ ಗೋಪಾಲ ಶೆಣೈ, ಉಪ್ಪಿನಂಗಡಿ ೧೨ ಮಂಜೇಶ್ವರ ಸರ್ಕಲ್ ಶ್ರೀ ಬಿ ದೇವಪ್ಪ ಆಳ್ವ, ಕುಂಬಳೆ ೧೩ ಕಾಸರಗೋಡು ಸರ್ಕಲ್ ಶ್ರೀ ಯಂ ರಾಮಹೆಗ್ಡೆ ಕಾಸರಗೋಡು ೧೪ ಹೊಸದುರ್ಗ ಸರ್ಕಲ್ ಶ್ರೀ ಕೆ ಅಚ್ಯುತ ಶೆಣೈ ಹೊಸದುರ್ಗ

(ಸಹಿ) ಕೆ ವಾಸುದೇವ ಶೆಣೈ
ಕಾರ್ಯದರ್ಶಿ
ದ ಕ ಜಿ ಕಾ ಕಮಿಟಿ

THE PIE-MONEY BANK LTD,
Maidan Road, MANGALORE
Undertakes all kinds of Banking Business Current account at 1½% per annum Savings Bank Deposits at 4½% per annum
FIXED DEPOSITS
For 3 Years 5% 1 Year 4½% For 6 months 4% 3 months 3½%
Auction chit fund ranging from Rs 100/ to Rs 5000/ run regularly on systematic lines Unique Banking facilities to Business men and interested Public
Apply for particulars—
K. R. GURU, *Managing Director*

7 ಒ ಕ್ಲೋಕ್ ಬ್ಲೇಡುಗಳು ನಡುವಿನಲ್ಲಿ ಸಿಗಿಯಲ್ಪಟ್ಟವೆ ಮತ್ತು ಹಳೆ ಮಾದರಿಗಿಂತಲೂ ವಿಶೇಷ ತರದಲ್ಲಿ ಸುದಾಂಸಲ್ಪಟ್ಟಿವೆ. ಇದರ ಬೆಲೆಯು ಕೇವಲ ಕಡಿಮೆ ಮಾತ್ರವಲ್ಲದೆ ಇದರ ಎರಡೂ ಬದಿಗಳು ಅತ್ಯಂತ ಹರಿತವಾಗಿ ಮಸೆಯಲ್ಪಟ್ಟವೆ. ನಯವಾದ ಕ್ಷೌರವನ್ನುಂಟುಮಾಡುವುದು, ಒಂದು ಬ್ಲೇಡು ಬಹು ಸಮಯದ ವರೆಗೆ ಬರುವುದು.
7 ಒ ಕ್ಲೋಕ್ ಬ್ಲೇಡುಗಳು ಹಳೆ ಮತ್ತು ಹೊಸ ಮಾದರಿಯ ರೇಜರುಗಳಿಗೆ ಒಪ್ಪುವಂತಾಗಿರುತ್ತವೆ.

ದೀನಬಂಧುಗಳ ವಿಯೋಗಕ್ಕಾಗಿ ಭಾರತಿಯ ಬಾಷ್ಪಾಂಜಲಿ

ರೆವರೆಂಡ್ ಅಂಡ್ರ್ಯೂಸರು ಅಗಲಿಹೋದರು

ದೀನಬಂಧು ಸಿ ಎಫ್, ಅಂಡ್ರೂಸ್ ರವರು ತಾ ೫ರಂದು ಕಲ್ಕತ್ತೆಯಲ್ಲಿ, ರಾತ್ರಿ ೧-೪೦ ಘಂಟೆಗೆ ಪರಂಧಾಮವನ್ನೈದಿದರು

ಕಳೆದ ತಿಂಗಳು ಮಾರ್ಚಿ ೨೧ನೇ ತಾರೀಖಿನ ದಿನ ಡಾ॥ ರಿಯೋರ್ ದಾಸ್ಸ್ ರವರ ಚಿಕಿತ್ಸಾ ಭವನದಲ್ಲಿ ರೆವರೆಂಡ್ ಅಂಡ್ರ್ಯೂಸ್‌ರವರಿಗೆ ಎರಡನೆಯ ಬಾರಿ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿತ್ತು

ಕಲ್ಕತ್ತಾ ನಗರದ ಕ್ರೈಸ್ತ ಮುಖ್ಯ ಗುರುಗಳು ರೆವರೆಂಡ್ ಸಿ ಎಫ್ ಅಂಡ್ರ್ಯೂಸ್‌ರವರ ಶವ ಸಂಸ್ಕಾರ ವಿಧಿಗಳನ್ನು ಸಾಂಗವಾಗಿ ನೆರವೇರಿಸಿದರು ನಾಲ್ಕು ಮಂದಿ ಭಾರತೀಯರೂ ಮತ್ತು ನಾಲ್ಕು ಮಂದಿ ಐರೋಪ್ಯ ಪಾದ್ರಿಗಳೂ ಶವದ ಪೆಟ್ಟಿಗೆಯನ್ನು ಹೊತ್ತು ಹೊರಟರು ಹದಿನೈದು ಕಾರುಗಳೂ ಮತ್ತು ೧೦೦ ಮಂದಿ ಜನರೂ ಮೆಲ್ಲನೆ ಒಂದು ಮೈಲಿ ದೂರ ಮೆರವಣಿಗೆಯಲ್ಲಿ ಹೊರಟು ಸಮಾಧಿಸ್ಥಾನವನ್ನು ಸೇರಿದರು. ಅಲ್ಲಿ, ಮುಖ್ಯ ಗುರುಗಳು ಅಂತ್ಯ ಸಂಸ್ಕಾರವನ್ನು ನೆರವೇರಿಸಿದರು ಶವದ ಪೆಟ್ಟಿಗೆಯನ್ನು ಸಮಾಧಿ ಮಾಡಲಾಯಿತು ಕ್ರೈಸ್ತ ದೇವಾಲಯದಲ್ಲಿ ಶ್ರೀ ಸುಭಾಸ್ ಚಂದ್ರಬೋಸ್, ಕಲ್ಕತ್ತಾ ಮೇಯರರಾದ ಶ್ರೀ ಎನ್ ಸಿ. ಸೇನ್, ಶ್ರೀ ಎಸ್. ಸಿ. ಮಿತ್ರ, ಸರ್ ಡಾರ್ಸಿ ಲಿಂಡ್‌ಸೇ, ಮಿ॥ ಆರ್ಥರ್ ಮೂರ್ ಮುಂತಾದ ಪ್ರಮುಖರು ಹಾಜರಿದ್ದರು

ಮಹಾತ್ಮಾ ಗಾಂಧಿಯವರಿಂದಲೂ, ಶ್ರೀ ಸುಭಾಸ್ ಚಂದ್ರಬೋಸರವರಿಂದಲೂ, ಕಲ್ಕತ್ತಾ ಕಾರ್ಪೋರೇಷನ್ನಿನಿಂದಲೂ ಮತ್ತು ಹಿಂದಿನ ಬಂಗಾಳ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಿಂದಲೂ ಬಂದಿದ್ದ ಪುಷ್ಪಹಾರಗಳನ್ನು ಶವದ ಪೆಟ್ಟಿಗೆಯ ಮೇಲಿಟ್ಟು ಅಂತ್ಯ ಗೌರವವನ್ನು ಸಲ್ಲಿಸಲಾಯಿತು.

ಜೀವನ ಚರಿತ್ರೆ

ಚಾರ್ಲ್ಸ್ ಫ್ರಿಯರ್ ಅಂಡ್ರ್ಯೂಸ್‌ರವರು ೧೮೭೧ನೇ ಫೆಬ್ರವರಿ ೧೨ರಲ್ಲಿ ಜನಿಸಿದರು ಬರ್ಮಿಂಗ್ ಹ್ಯಾಮಿನ ಕಿಂಗ್ ಎಡ್ವರ್ಡ್ಸ್ ಸ್ಕೂಲಿನಲ್ಲಿಯೂ ಮತ್ತು ಕೇಂಬ್ರಿಡ್ಜಿನ ಪೆಂಬ್ರೋಕ್ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸ ಪಡೆದರು ೧೮೯೯ರಲ್ಲಿ ಕೇಂಬ್ರಿಡ್ಜಿನ ಪೆಂಬ್ರೋಕ್ ಕಾಲೇಜಿನ ಫೆಲೋ ಮತ್ತು ಉಪನ್ಯಾಸಕರಾದರು ಡಿಲ್ಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನ ಪ್ರೊಫೆಸರ್ ಆದರು ಕೇಂಬ್ರಿಡ್ ಯೂನಿವರ್ಸಿಟಿ ಬ್ರದರ್ ಹುಡ್ಡಿನ ಸದಸ್ಯರಾದರು ೧೯೦೪ರಿಂದ ೧೯೧೩ರವರೆಗೆ ಪಂಜಾಬ್ ವಿಶ್ವವಿದ್ಯಾಲಯದ ಸಿಂಡಿಕೇಟಿನ ಸದಸ್ಯರಾಗಿಯೂ ಮತ್ತು ಫೆಲೋ ಆಗಿದರು ಸುಮಾರು ೧೯೧೪ರಿಂದ ಬಂಗಾಳಾದಲ್ಲಿನ ಕವಿ ರವೀಂದ್ರನಾಥ ಠಾಕೂರರ ಶಾಂತಿನಿಕೇತನದಲ್ಲಿರುವ ಅಂತರ್ ರಾಷ್ಟ್ರ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರರಾಗಿದ್ದರು

ಲೇಖನ ವ್ಯವಸಾಯ

ರೆವರೆಂಡ್ ಸಿ ಎಫ್ ಅಂಡ್ರ್ಯೂಸ್‌ರವರು ಅನೇಕ ಉದಾತ್ತ ಗ್ರಂಥಗಳನ್ನು ರಚಿಸಿದ್ದಾರೆ ಅವರ ರಾಜಕೀಯ, ಧಾರ್ಮಿಕ ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಗ್ರಂಥರಾಶಿಗಳು ಉಜ್ವಲ ಭಾವನೆಗಳಿಂದ ಕೂಡಿವೆ

ಪ್ರಸಿದ್ಧ ಪತ್ರಿಕೋದ್ಯಮಿಗಳು

ಸಿ ಎಫ್ ಅಂಡ್ರೂಸ್ ರವರು ಸುಪ್ರಸಿದ್ಧ ಪತ್ರಿಕೋದ್ಯಮಿಗಳಾಗಿಯೂ ಇದ್ದರು ಭಾರತದ ಮತ್ತು ವಿದೇಶದ ಪ್ರಮುಖ ದೈನಂದಿನ, ಸಾಪ್ತಾಹಿಕ ಮತ್ತು ಮಾಸ ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗುತ್ತಿದ್ದವು 'ಮಾಡರ್ನ್ ರಿವ್ಯೂ'ನಲ್ಲಿ ಅವರ ಲೇಖನಗಳನ್ನು ಅನೇಕರು ಓದಿರಬಹುದು ಅವರು 'ಮ್ಯಾಂಚೆಸ್ಟರ್ ಗಾರ್ಡಿಯನ್', 'ಸ್ಟೇಟ್ ಟೈಮ್ಸ್', 'ನೇಟಾಲ್ ಅಡ್ವರ್ಟೈಸರ್', ಮತ್ತು 'ಹಿಂದೂ' ಪತ್ರಿಕೆಗಳಿಗೆ ಆಗಾಗ್ಗೆ ರಾಷ್ಟ್ರೀಯ (ಭಾರತ) ಮತ್ತು ಅಂತರ್‌ರಾಷ್ಟ್ರೀಯ ವಿಚಾರಗಳನ್ನು ಕುರಿತು ಸಮಾಚಾರಗಳನ್ನು ಬರೆಯುತ್ತಿದ್ದರು

ಮಹಾತ್ಮರ ಮಿತ್ರರು

ಚಾರಲ್ಸ್ ಫ್ರಿಯರ್ ಅಂಡ್ರ್ಯೂಸ್‌ರವರು ಮಹಾತ್ಮಾ ಗಾಂಧಿಯವರ ಆಪ್ತಮಿತ್ರರು. ಮೊನ್ನೆ ತಾನೇ ಗಾಂಧೀಜಿಯವರು ಕಲ್ಕತ್ತಾ ಮೂಲಕ ಮಾಲಿಕಾಂಡಕ್ಕೆ ಹೋದಾಗ, ಮಾರ್ಗಮಧ್ಯದಲ್ಲಿ ಇಳಿದು, ಹಾಸಿಗೆ ಹಿಡಿದಿದ್ದ ಅಂಡ್ರ್ಯೂಸ್‌ರವರನ್ನು ಕಂಡು, ಮಾತನಾಡಿದರು.

ಅಂಡ್ರ್ಯೂಸ್‌ರವರು ದಕ್ಷಿಣ ಆಫ್ರಿಕಕ್ಕೆ ಹೋಗಿ, ಸ್ಮಟ್ಸ್-ಗಾಂಧಿ ಒಪ್ಪಂದಕ್ಕಾಗಿ ಶ್ರಮಿಸಿದ್ದರು. ಗಾಂಧೀಜಿಯವರ ಚಳುವಳಿಯಲ್ಲಿ ಭಾಗಿಗಳಾಗಿದ್ದರು. ಸಾಗರಗಳಾಚೆ ನೆಲೆಸಿರುವ ಭಾರತೀಯರ ಕಷ್ಟ ಕೊರತೆಗಳನ್ನು ನಿವಾರಿಸಲು ಇಡೀ ಪ್ರಪಂಚದಲ್ಲೆಲ್ಲಾ ಪ್ರವಾಸ ಮಾಡಿದರು

ದೀನ ಬಂಧು

ಅಂಡ್ರೂಸ್‌ರವರು ಶಾಂತಿಪ್ರಿಯರು. ಭಾರತದ ಉದ್ಧಾರಕ್ಕಾಗಿ ಶ್ರಮಿಸಿದರು, ದೀನ ಜನರ ಸೇವೆಗಾಗಿ ಬಳಲಿದರು ದೀನ ಬಂಧುಗಳಾದರು ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ

ಅಂಡ್ರ್ಯೂಸ್‌ರವರ ನಿಧನದ ಬಗ್ಗೆ ಸಂತಾಪ

ಮಹಾತ್ಮಾ ಗಾಂಧಿ—

'ದೀನಬಂಧು ರೆವರೆಂಡ್ ಸಿ ಎಫ್. ಅಂಡ್ರ್ಯೂಸರ ನಿಧನದಿಂದ ಭಾರತಕ್ಕೆ ಮಾತ್ರವಲ್ಲ, ಮಾನವ ಕುಟುಂಬಕ್ಕೇ ದೊಡ್ಡ ನಷ್ಟವುಂಟಾಗಿರುತ್ತದೆ ದೀನ ಸೇವೆಯಲ್ಲಿ ಅವರು ಅಗ್ರಗಣ್ಯರಾಗಿದ್ದರು. ಅವರು ಇಹಲೋಕ ಸಂಕಟದಿಂದ ಬಿಡುಗಡೆ ಹೊಂದಿದರು, ಸ್ಥಿರ ಕೀರ್ತಿಯ ಲೋಕವನ್ನು ಸೇರಿದರು. ನನ್ನ ಅಭಿಪ್ರಾಯದಲ್ಲಿ ಶ್ರೀ ಚಾರ್ಲಿ ಅಂಡ್ರ್ಯೂಸರು ಆಂಗ್ಲೇಯರಲ್ಲಿ ಬಹು ಪ್ರಸಿದ್ಧರೂ ಕೀರ್ತಿವಂತರೂ ಆದವರಾಗಿದ್ದಾರೆ. ಇವರು ಇಂಗ್ಲೆಂಡಿನ ಪ್ರಸಿದ್ಧ ಸುಪುತ್ರರಾದುದರಿಂದಲೇ ಭಾರತದ ಸತ್ಪುತ್ರರಾದರು ಅವರ ತಮ್ಮ ಕಾರ್ಯಗಳೆಲ್ಲವನ್ನೂ ಮಾನವ ಸೇವಾದೃಷ್ಟಿಯಿಂದ ಮಾಡಿದರು ಕ್ರೈಸ್ತ ಮಹಾನುಭಾವನ ಉಪದೇಶದಂತೆ ನಡೆದರು ಇವರಂಥ ಕ್ರೈಸ್ತ ಧರ್ಮಾಭಿಮಾನಿಗಳು ಬೇರೊಬ್ಬರಿಲ್ಲ ಭಾರತವು, ಅವರ ಸೇವೆಯನ್ನು ಮೆಚ್ಚಿ, ದೀನಬಂಧು ಎಂಬ ಬಿರುದನ್ನು ಕೊಟ್ಟಿತು ಎಂದು ತಮ್ಮ ಸಂತಾಪಸೂಚನೆಯಲ್ಲಿ ಮಹಾತ್ಮರು ಅಂದಿರುವರು.

ರಾಷ್ಟ್ರಪತಿ ಮೌಲಾನಾ ಆಜಾದ್

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಾಂ ಆಜಾದರು, ತಮ್ಮ ಸಂತಾಪದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ನಡೆದ ನಮ್ಮ ರಾಷ್ಟ್ರೀಯ ಚಳವಳಿಯಲ್ಲಿ ದೀನ ಬಂಧು ಸಿ ಎಫ್ ಅಂಡ್ರ್ಯೂಸರನ್ನು ನಾನು ಸರ್ವದಾ ಜ್ಞಾಪಿಸಿಕೊಳ್ಳುತ್ತೇನೆ. ಕ್ರೈಸ್ತ ಮತದ ಉದಾತ್ತವಾದ ತತ್ವಗಳನ್ನೆಲ್ಲಾ ಅವರು ಪೂರ್ಣಮಾತ್ರಾಗ ಆಚರಿಸುತ್ತಿದ್ದರು. ಅವರು ಭಾರತಕ್ಕೂ ಮಾನವ ಜನಾಂಗಕ್ಕೂ ಬಹುಸೇವೆ ಮಾಡಿದ್ದಾರೆ. ಅವರ ನಿಧನದಿಂದ ಅಪಾರವಾದ ಅಂತರ್‌ರಾಷ್ಟ್ರ 'ನಷ್ಟವುಂಟಾಗಿದೆ' ಎಂದಿರುವರು.

'ನನಗೀಗ ಅಸಹ್ಯಕರವಾದ ಹುಣ್ಣುಗಳಾಗಲಿ ಛಿದ್ರಗಳಾಗಲಿ ಇರುವ ಚರ್ಮವಿರವುದಿಲ್ಲ'

'ದುಬಾರಿ ಗುಣವುಳ್ಳ ಕುಟಿಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ ಇದು ಮೈಯ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು ಪರಿಮಳತನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಶಮನಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ಮೈಯ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡಹುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡು ಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು–ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಮೊಯಲಿಕ್ಸ್) ಮತ್ತು ಸಣ್ಣ ಬಿಲ್ಲೆಯ (ಹಿಂದಿನ ಸೈಜು) ಆಕಾರದಲ್ಲಿಯೂ ದೊರಕುವುದು

ಶಿಕ್ಷಣ ವಿಚಾರ:

ನಮ್ಮ ಮುಂದಿನ ಮಕ್ಕಳು

— ಮೋಂಟಿಸೋರಿಯವರ ರೇಡಿಯೋ ಭಾಷಣ —

ಶಿಶು ಶಿಕ್ಷಣದಲ್ಲಿ ತಮ್ಮದೊಂದು ಅಪೂರ್ವ ಪ್ರಯೋಗವನ್ನು ಜಗತ್ತಿಗೆ ಸಾರಿ ಜಯಶೀಲೆಯೆನಿಸಿದ ಮೇಡಂ ಮೋಂಟಿಸೋರಿಯವರು ಮದ್ರಾಸಿಗೆ ಬಂದಿದ್ದರು. ಅವರು ತಮ್ಮ ಶಿಕ್ಷಣಪದ್ಧತಿಯ ವಿಷಯವಾಗಿ, ಅಂದರೆ ಮುಂದಿನ ಜನಾಂಗವಾದ ಇಂದಿನ ಮಕ್ಕಳು ಯಾವ ರೀತಿಯ ಶಿಕ್ಷಣವನ್ನು ಪಡೆಯತಕ್ಕದ್ದು ಎಂಬ ವಿಷಯವಾಗಿ ಒಂದು ಉದಾತ್ತ ಭಾಷಣವಿತ್ತರು. ಅದರ ಸಾರಾಂಶವಿದು.

ಮಕ್ಕಳು ಮತ್ತು ಹಿರಿಯರೆಂದು ಸಮಾಜದಲ್ಲಿ ಉಭಯ ವರ್ಗಗಳಿವೆ. ಅವರು ಮಾಡುತ್ತಿರುವ ಕಾರ್ಯಸಾಧನೆಗಳಿಗೆ ಬಹಳ ವ್ಯತ್ಯಾಸಗಳಿದ್ದರೂ ಸಮಾಜ ಸೌಕರ್ಯಕ್ಕೆ ತಮ್ಮ ತಮ್ಮ ಯೋಗ್ಯತೆಗನುಸರಿಸಿ ಆ ಇಬ್ಬರೂ ಪಾಲುಗಾರರೇ ಆಗಿದ್ದಾರೆ. ಇದುವರೆಗೆ ನಾವು ಪ್ರೌಢರ ವಿಚಾರವನ್ನು ಮಾತ್ರ ಗಮನಿಸಿದ್ದೇವೆ. ಜನಾಂಗದ ಶಾರೀರಿಕ ಮತ್ತು ಮಾನಸಿಕವಾದ ಎಲ್ಲಾ ಶೀಲ ಸ್ವಭಾವ, ಬೇನೆ, ಬವಣೆಗಳಿಗೆ ಶಿಶುಪ್ರಾಯದ ಎಚ್ಚರವೇ ಕಾರಣವೆಂದು ಎಲ್ಲರೂ ಈಗ ಅರಿತಿದ್ದಾರೆ. ಹುಟ್ಟಿನಿಂದ ಸಾಯುವ ತನಕ ನೆಲೆನಿಲ್ಲುವ ಹಲವು ಭಾವನೆಗಳು ಸಂಸ್ಕಾರಗಳು ಬೆಳೆದು ಬಲಿತು ನಿಲ್ಲುವುದು ಬಾಲ್ಯದಿಂದಲೇ. ರಾಷ್ಟ್ರ ಸುಧಾರಣೆ, ಸಮಾಜ ಸುಧಾರಣೆಗಳಾಗಬೇಕಾದರೆ ಶಿಶುಲೋಕವು ಸುಧಾರಣೆ ಹೊಂದಬೇಕು. ಸುಧಾರಣೆಗಾಗಿ ಹೋರಾಡುವ ಭಾರತದಲ್ಲಿ ಅದರ ಅವಶ್ಯಕತೆಯು ಅತ್ಯಂತವಿದೆ. ಬೇರೆ ಬೇರೆ ಜಾತಿ ಮತ ಪಂಗಡಗಳಲ್ಲಿ ನಿರ್ಮಲ ಸೌಹಾರ್ದವು ನೆಲೆನಿಲ್ಲಬೇಕಾದರೆ ಶಿಶುಶಿಕ್ಷಣವು ಒಂದು ರೂಪುಗೊಳ್ಳಬೇಕು. ಭಾರತದ ಕಲಾ ವೈಭವ, ಆಧ್ಯಾತ್ಮ ವೈಭವಗಳು ಚಿರಸ್ಮರಣೀಯವಾಗಬೇಕಾದರೆ ಮಕ್ಕಳ ಶಿಕ್ಷಣವು ಊರ್ಜಿತವಾಗಬೇಕು. ಶಿಶುತ್ವದ ನಿಜವಾದ ಅಮೂಲ್ಯತೆಯನ್ನು ಮನಗಂಡವರಿಗೆ ಶಿಶುವು ಸಮಾಜದಲ್ಲಿ ಎಷ್ಟು ಪ್ರಾಮುಖ್ಯ ಪಾತ್ರವೆಂದು ತಿಳಿಯದಿರದು.

ನನ್ನ ಶಿಕ್ಷಣ ಪದ್ಧತಿ

ಮಾನವ ರಚನೆಯೊಂದಲ್ಲದೆ, ಸಾಮಾಜಿಕ ರಚನೆಯಲ್ಲಿಯೂ ಶಿಶುತ್ವದ ಪ್ರಾಮುಖ್ಯತೆಯನ್ನು ಸಾರುವ ನನ್ನ ಶಿಕ್ಷಣದ ಪದ್ಧತಿಗೆ ಇಂದು ವಿದ್ಯಾಕ್ಷೇತ್ರದಲ್ಲಿ ಆದರ ದೊರೆತಿದೆ. ಶೈಶವದಿಂದ ಆರಂಭಿಸಿ ಪಡೆದ ಬೇರೆ ಬೇರೆ ಅನುಭವಗಳ ಬೆಳವಣಿಗೆಯಿಂದ ಮಾನವ ಜೀವನವು ರೂಪುಗೊಳ್ಳುವುದು. ಜ್ಞಾನದಿಂದ ಪ್ರಬೋಧಿತವಾದ ವಿದ್ಯಾಭ್ಯಾಸವನ್ನು ಯುವಕರಂತೆ ಶಿಶುಗಳಿಗೂ ಕಲಿಸಿ ಕೊಡಬೇಕಾಗಿದೆ. ಮಾನವನ ಎಳೆತನದಲ್ಲಿ ಉತ್ತಮ ಶಿಕ್ಷಣದ ಬೀಜಸ್ಥಾಪನಕ್ಕೆ ಸುಲಭವಾಗಿದೆ. ಸಮಾಜದಲ್ಲಿ ಸ್ತ್ರೀಯರು ಪುರುಷರು ಹೇಗೆ ಸಮಾನಪ್ರಧಾನರೋ ಶಿಶುಪ್ರೌಢರೂ ಅಂತೆಯೇ ಪ್ರಾಮುಖ್ಯರೆಂದು ನಾವು ತಿಳಿಯಬೇಕು.

ಮಾನವನು ತಾತ್ವಿಕ ಜೀವಿ

ಉಂಡುಟ್ಟು ಸುಖಪಡುವುದರಿಂದ ಮಾತ್ರ ಮನುಷ್ಯನು ಜೀವಿಸಲಾರನು. ಆತನು ಹೆಚ್ಚಾಗಿ ತಾತ್ವಿಕಜೀವಿ. ಅಧ್ಯಾತ್ಮಪೂರ್ಣವಾದ ತಾತ್ವಿಕವಿಚಾರವೇ ಅವನ ಜೀವನಧರ್ಮ. ಮಾನವನು ಮಾತುಗಾರಿಕೆ ಮೊದಲಾದ ಕ್ರಿಯೆಯಲ್ಲಿಯೂ, ಸ್ನೇಹಬಂಧನ ರೂಪವಾದ ಅಧ್ಯಾತ್ಮದಲ್ಲಿಯೂ ಹೀಗೆ ಜೀವಿಸುತ್ತಾನೆ. ವಿದ್ಯಾಭ್ಯಾಸವು ಮನುಷ್ಯನ ಜೀವನವನ್ನು ಊರ್ಜಿತಗೊಳಿಸಬೇಕಾದರೆ ಕ್ರಿಯೆ ಮತ್ತು ಸ್ನೇಹಗಳು ಒಟ್ಟು ಸೇರಿರಬೇಕು.

ಸುಖ ಸಾಧನಗಳಾದ ಭೋಗ್ಯ ವಸ್ತುಗಳು ಮಾತ್ರವಲ್ಲ; ಪ್ರೀತಿ ಬುದ್ಧಿ ಸಂಚಯಗಳೂ ಅವಶ್ಯಕವಾಗಿದೆ. ಆಧುನಿಕ ವಿದ್ಯಾಭ್ಯಾಸವು ಬಲವಂತವಾದ ಕೂಲಿ ಕೆಲಸದಂತಿದೆ. ಶಾರೀರಿಕ ಪೋಷಣೆಗೆ ಆಹಾರವು ಹೇಗೋ ಮನುಷ್ಯನ ಅಧ್ಯಾತ್ಮ ಪೋಷಣೆಗೆ ವಿದ್ಯಾಭ್ಯಾಸವು ಸಹಕಾರಿಯಾಗಬೇಕು.

ಇಂದು ನಮ್ಮ ಶಿಕ್ಷಣದಲ್ಲಿ ಸಂಸ್ಕೃತಿಯಾಗಲಿ ನೀತಿಯಾಗಲಿ ಶಿಶುಗಳಿಗೆ ಕೊಡಲಾಗುವುದಿಲ್ಲ. ಬಲತ್ಕಾರದಿಂದ ಮನುಷ್ಯನ ಪ್ರಕೃತಿಯು ದಾಸ್ಯ ವೃತ್ತಿಗೆ ತರಬೇತಿ ಹೊಂದುತ್ತದೆ.

ಜೀವನ ಸಮಸ್ಯೆ

ಸಮಾಜದಲ್ಲಿ ಎರಡು ಬಗೆಯ ಜೀವಿಗಳಿದ್ದಾರೆ. ಶ್ರೀಮಂತರು ದರಿದ್ರರೆಂದು. ದರಿದ್ರರು ಕೈಗಾರಿಕೆಯಿಂದಲೂ, ಶ್ರೀಮಂತರು ಬುದ್ಧಿಪ್ರಯೋಗದಿಂದಲೂ ಜೀವಿಸುತ್ತಾರೆ, ಆದರೆ ಸಮಾಜ ದೃಷ್ಟಿಯಲ್ಲಿ ಇಬ್ಬರೂ ಅಪೂರ್ಣರೇ. ತಲೆಯಿದ್ದವನಿಗೆ ಕೈಯಿಲ್ಲ; ಕೈಯಿದ್ದವನಿಗೆ ತಲೆಯಿಲ್ಲ; ಹೀಗಾಗಿದೆ ಜೀವನವು. ಆದುದರಿಂದ ಈ ಎರಡು ವರ್ಗದವರೂ ಅಂಗಹೀನರು. ಎರಡು ಪಂಗಡದವರೂ ಸ್ವಾರ್ಥ ಸಾಧಕರು. ಒಬ್ಬರ ಕೆಲಸದಿಂದ ಇನ್ನೊಬ್ಬರು ಲಾಭಪಡೆಯಲಾಶಿಸುತ್ತಾರೆ. ಇಂದಿನ ವಿದ್ಯಾಭ್ಯಾಸದಿಂದ ಮಾನವನ ಜೀವನವನ್ನು ಒಡೆದು, ಅದನ್ನು ಬರಿಯ ಹೋರಾಟಕ್ಕೆ ಸಿದ್ಧತೆಗೊಳಿಸುತ್ತೇವೆ.

ವಿದ್ಯಾಭ್ಯಾಸವು ಮನುಷ್ಯ ಸಹಜವಾಗಲಿ

ಹಾಗಾದರೆ ನೀನೇನು ಮಾಡುವಿಯೆಂದು ನನ್ನನ್ನು ಜನರು ಕೇಳುವರು. ಬುದ್ಧಿವಂತರು ಮತ್ತು ದುಡಿವವರು ಇಬ್ಬರೂ ಇರಬೇಕು. ಆದರೆ ಅವರು ಅನ್ಯೋನ್ಯ ಅಂಗಹೀನರೆನಿಸಬಾರದು. ಪೂರ್ಣತೆ ಪಡೆಯಬೇಕು. ದರಿದ್ರರಾಗಲಿ ಶ್ರೀಮಂತರಾಗಲಿ ಪೂರ್ಣತೆ ಹೊಂದಿರಬೇಕು. ಸಮಾಜದಲ್ಲಿ ಪ್ರತಿಯೊಬ್ಬನ ಬದುಕಿಗೆ ಬೇಕಾದ ಆಧಾರವಿರಬೇಕು. ಇದನ್ನು ತಿಳಿಯದೆ, ಸ್ಪರ್ಧೆ ಹೋರಾಟಗಳಿಂದ ಜನರು ಹಾಳಾಗುವುದು ಯೋಗ್ಯ ಶಿಕ್ಷಣವಿಲ್ಲದಿರುವುದರಿಂದಲೇ.

ವಿದ್ಯಾಭ್ಯಾಸವು ಮಾನವ ಪ್ರಕೃತಿಗೆ ಅನುಗುಣವಾಗಿರಬೇಕು. ಜನಾಂಗ ರಾಷ್ಟ್ರಗಳಿಗೆ ಸೇರಿದ್ದಾಗಿರಬೇಕು. ರಾಜಕೀಯ ಮತದಂತೆ ಯಾವುದಾದರೊಂದು ವ್ಯಕ್ತಿಯ ಅಭಿರುಚಿಗೆ ಮೆಚ್ಚಿದ ಕಲೆ, ವೃತ್ತಿಗಳನ್ನೇ ಕಲಿಸಬಾರದು. ಅದಕ್ಕಿಂತ ಹೆಚ್ಚಿನದನ್ನು ಹೊಂದಲು ಶಿಶುಗಳು ಯೋಗ್ಯರು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

Arbitration Case No. 9/1935
R.E.P. 064/1939

ದಿ ಶ್ಯಾಮರಾವ್ ವಿಠ್ಠಲ್ ಕೋಆಪರೇಟಿವ್ ಬೇಂಕ್ ಲಿಮಿಟೆಡ್—ವಾದಿ
ಇದರ ಮಂಗಳೂರು ಬ್ರೇಂಚಿನ ಸೆಕ್ರೆಟರಿ ಪಿ. ವಿ. ಕಗ್ಗರ್ಸಿ—ಅರ್ಜಿದಾರ
ಮತ್ತು
ಕೆ. ರಾಮರಾವ್ ಕಡೆ – ಪ್ರತಿವಾದಿರು
ರೆಸ್ಪೊಂಡೆಂಟರು

ಸದ್ರಿ ಅಮಲ್ ಜ್ಯಾರಿಯ 4ನೇ ರೆಸ್ಪಾಂಡೆಂಟ್ ಬೈಲಂಗಡಿ ಸುಂದರರಾವ್, ಬಿ. ಶಿವರಾಯರ ಮಗ. ಪಾಲ್ Santa Cruz Bombay ಎಂಬಲ್ಲಿರುವವ ಇವರಿಗೆ—

ಮೇಲ್ಕಂಡ ಅಮಲ್ ಜ್ಯಾರಿಯಲ್ಲಿ ಡಿಕ್ರಿಹೊಂದಿದವನಾದ ಅರ್ಜಿದಾರನು ನಿಮ್ಮ ಬಾಬ್ತು ಸ್ಥಿರಾಸ್ತಿ ಏಲಂ ಬಗ್ಗೆ, ಏಲಂ ಸಮಯ ಪಾರು ಕರೆಯುವರೆ ಅನುಮತಿ ಬಗ್ಗೆ ದಾಖಲುಮಾಡಿದ್ದ ಮೇಲ್ಕಂಡ ಅಮಲ್ ಜ್ಯಾರಿಯು ಏಲಂ ಇಸ್ತಿಹಾರ ಶರ್ತಗಳನ್ನು ನಿರ್ಣಯಿಸುವರೆ ತಾರೀಕು 18-4-1940ಕ್ಕೆ ಇಟ್ಟಿರುತ್ತದೆ. ಆದಕಾರಣ ಈ ವಿಷಯದಲ್ಲಿ ನಿಮಗೇನಾದರೂ ಆಕ್ಷೇಪವಿದ್ರೆ ಸದ್ರಿ ತಾರೀಕಿನ ದಿನ ಹಗಲು ಘಂಟೆ 11ಕ್ಕೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಉದಾಹರಿಸಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ.

ಕಾಸರಗೋಡು 28-3-'40 — C. M. Kamath, ಅರ್ಜಿದಾರನ ಕಡೆ ವಕೀಲ್

ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ

ಲೋಧ್ರ

ತಯಾರಿಸುವವರು:
ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟೋಕಿಸ್ಟರು:
ಪಾಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

DIAMONDS! DIAMONDS!
BEST BRILLIANCY!

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಇಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು [illegible] ಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೆಟ್, ಜುವೆಲ್ಲರ್,

Acknowledgement from Sri. L. S. Dabholkar

I express my hearty thanks through the valuable columns of this paper to all the Institutions and persons that have so kindly afforded me a very pleasant stay in their midst for the last 10 days, giving me very many opportunities for studying the economic, the social and the religious aspects of this District and its people, their customs, manners etc. from close quarters, thus occasioning me to learn much about South Kanara and the South Kanarites. I regret at the same time my inability to thank them individually.

From what I have heard, from what I have seen, and from what I have been able to gather, I would observe that South Kanara is a pleasant part of the Country and to its people I pay the compliment of being industrious and enterprising on the whole. To give an instance, the financial concerns like the Canara Bank Ltd., The Canara Banking Corporation Ltd., The Canara Industrial & Banking Syndicate, Ltd., The Canara Mutual Assurance Co. Ltd., and similar other Institutions have been largely responsible in making South Kanara what it is to-day. The work that these Institutions have turned out in the economic sphere is really praiseworthy. I wish them every success.

Even in the social sphere I am pleased to note, and very much impressed with the laudable service done by the Iswaranand Mahilashram Bhagini Samaj and such other Institutions. These Institutions are of utmost importance for the welfare of the Society and the welfare of the Country and it is the duty of every thinking member of the Society to do what little he can, towards the successful functioning of these Institutions and see that they serve the ends for which they are designed. Therefore I take this opportunity to urge on the people of South Kanara to encourage and to build up such Institutions more and more in as much as in such constructive work every man can and ought to play his part.

I am also much pleased with the useful work that is being turned out by the educational Institutions of South Kanara, such as The Canara High School, the Ganapathy High School, the Buntwal High School, and the St. Aloyeius college of Mangalore, and heartily wish them every success in the days to come.

I also take this opportunity to thank all the trustees of the temples who were very kind in showing me round the various religious Institutions and explaining me their working.

Travel in South Kanara has been made very convenient and comfortable by the C. P. C. Co. Ltd., and other bus companies.

In conclusion I would have a word to all these Institutions. 'Having gone through all these years so creditably, keep up to your progress'. To the people too, I earnestly appeal to unite as members of the same family, forgetting and rising above all petty differences of caste, creed or community and work with the spirit of 'all for one, and one for all' and be an example to the Sister Districts. This is all I have to say.

I had a very pleasant and enjoyable stay in South Kanara. I bid it farewell and in doing so I carry with me very happy memories, and wish that South Kanarites may have a soft corner for me in their hearts.

ADIEU

Manipal 4/4/1940 } **Sd. L. S. Dabholkar.**

ಟರ್ಕಿಯಲ್ಲಿ ಮಲೇರಿಯ

ಒಂದು ಕಾಲದಲ್ಲಿ 'ರೋಗಿ' ಎಂದು ಕರೆಯಲ್ಪಡುತ್ತಿದ್ದ ಟರ್ಕಿಯು ಕೆಮಾಲ್ ಅಟಟರ್ಕರ ಕಾರಭಾರದಲ್ಲಿ ಆಧುನಿಕ ಸಂಪತ್ಸಮೃದ್ಧ ರಾಷ್ಟ್ರವಾಗಿ ಪರಿಣಮಿಸಿತು. ಕೆಮಾಲರು ರೂಢಿಗೆ ತಂದ ಲ್ಯಾಟಿನ್ ಲಿಪಿಯಿಂದಾಗಿ ನಿರಕ್ಷರರ ಸಂಖ್ಯೆಯು ಬಹಳ ಕಡಿಮೆಯಾಯಿತು. ಸ್ತ್ರೀಯರು ಪರದೆಯನ್ನು ತ್ಯಜಿಸಿದ್ದಾರೆ. ಇಜಾರುಗಳನ್ನು ಧರಿಸುವುದಿಲ್ಲ. ಮತಾಧಿಕಾರ ಸ್ಥಾಪನೆಯಾಗಿದೆ. ಮುಖ್ಯ ನಗರವಾದ ಅಂಕರವು, ಆಧುನಿಕ ಕಲಾ ವೈಭವ ಪೂರ್ಣ ನಗರಗಳಿಗೆ ಆದರ್ಶವಾಗಿದೆ.

ಆಧುನಿಕ ಟರ್ಕಿಯಲ್ಲಿ ಆರೋಗ್ಯ ಪಾಲನೆಗೆ ಹೆಚ್ಚಿನ ಜಾಗ್ರತೆ ವಹಿಸಿದ್ದಾರೆ. ಸಾರ್ವಜನಿಕ ಆರೋಗ್ಯ ಸಚಿವರ ಪ್ರಯತ್ನಕ್ಕೆ ಒಂದೊಂದೂ ದೊರೆಯದ ವಿಶೇಷ ಸಫಲತೆಯೊದಗಿದೆ. ಮಲೇರಿಯಾ ಹೋರಾಟದ ವಿಷಯದಲ್ಲಿ ಇದು ಎದ್ದು ಕಾಣುತ್ತಿದೆ. ೧೯೩೦ ರಲ್ಲಿ ಮಲೇರಿಯದಿಂದ ಬಾಧಿತವಾಗುವ ಪ್ರದೇಶಗಳು ಅನೇಕವಿದ್ದುವು. ಆರೋಗ್ಯ ಮಂತ್ರಿಗಳು ಇದರ ಸುಧಾರಣೆಗೆ ಮುಖ್ಯ ಕಾರ್ಯಗಳನ್ನು ಕೈಕೊಂಡಿದ್ದಾರೆ. ಕ್ವಿನೀನ ವಿತರಣೆಯು ವಿಪುಲವಾಗಿ ನಡೆಯುತ್ತಿದೆ. ಸೊಳ್ಳೆಗಳ ನಿರ್ಮೂಲನಕ್ಕಾಗಿ ಬಹಳ ಪ್ರಯತ್ನಗಳು ನಡೆಯುತ್ತಿವೆ. ಇಷ್ಟರಲ್ಲೇ ಒದಗಿದ ಸತ್ಫಲವನ್ನು ನೋಡಿದರೆ ನಿಜವಾಗಿ ಅಂಕರದಲ್ಲಿ ಮಲೇರಿಯದ ಹೆದರಿಕೆಯೇನೂ ಇಲ್ಲವೆನ್ನಬಹುದು.

ಕ್ವಿನೀನು ಮಲೇರಿಯಕ್ಕೆ ಹೇಳಿದ ಮದ್ದು; ನಿವಾರಣೆಗೆ ಅತ್ಯುತ್ತಮವು ಎಂಬ



ಟರ್ಕಿಯ ಒಂದು ದೃಶ್ಯ

ವಿಷಯವು ಲೀಗ್ ಒಫ್ ನೇಶನ್ಸ ಮಲೇರಿಯ ಕಮಿಶನಿನವರು ಪ್ರಕಟಿಸಿದ ವರದಿಯಿಂದ ತಿಳಿಯುತ್ತದೆ. ನಿವಾರಣೆಗಾದರೆ ಮಲೇರಿಯ ಋತುವಿನ ದಿನಕ್ಕೆ ೬ ಗ್ರೈನುಗಳಂತೆಯೂ, ಜ್ವರೋಪಶಮನಕ್ಕಾದರೆ ೫-೭ ದಿನಗಳ ವರೆಗೆ ದಿನಂಪ್ರತಿ ೧೫-೩೦ ಗ್ರೈನುಗಳಂತೆಯೂ ಕ್ವಿನೀನನ್ನು ಸೇವಿಸಬೇಕೆಂದು ಕಮಿಶನಿನವರು ಶಿಫಾರಸುಮಾಡಿದ್ದಾರೆ. ಈ ಸಂಭವದಲ್ಲಿ ಹೆಚ್ಚಿನ ಚಿಕಿತ್ಸೆ ಅವಶ್ಯವಿಲ್ಲ. ಜ್ವರವು ಮರುಕೊಳಿಸಿದರೆ ಅದೇ ಚಿಕಿತ್ಸೆಯನ್ನೆ ಅದೇ ಪ್ರಮಾಣದಲ್ಲಿ ಪುನಃ ಮಾಡಿದರೆ ತೀರಿತು.

ಕಮಿಶನಿನ ೧೯೩೭ ನೆ ವರದಿಯ ೧೩೪ನೆ ಪಾನಿನಲ್ಲಿ — ಕ್ವಿನೀನಿನ ನಿರಪಾಯತೆಯ ಗುಣದಿಂದಾಗಿ ಇತರ ಔಷಧಿಗಳಿಗೆ ಬೇಕಾಗುವಂತೆ ವೈದ್ಯರ ಸದಾ ಸುಪರ್ ಯಿಲ್ಲದೆನೇ ಮನೆಯವರುಗಳ ಸಹಾಯಮಾತ್ರದಿಂದಲೇ ಚಿಕಿತ್ಸೆ ನಡೆಸಲು ಸಾಧ್ಯವಿದೆ—ಎಂದು ಒತ್ತಿ ಬರೆಯಲಾಗಿದೆ.

Mal. Engelsch 152.

Canara Bank Limited

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ

ಮೂಲಧನ	ರೂ. ಆ. ಪೈ.		ರೂ. ಆ. ಪೈ.
ತೆತ್ತಲ್ಪಟ್ಟ	6,00,000-0-0	ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ	95,489-4-3
ಪೈಡ್ ಅಪ್	3,91,342-0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ರಿಸರ್ವ್ ಫಂಡು	4,50,000-0-0	ಬೆಲೆಬಾಳುವ ಸೆಕ್ಯುರಿಟಿ	40,97,741-5-6
ಡಿಪೊಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	ಹುಂಡೀ ಪತ್ರ ಮೊದಲಾದುವುಗಳು	10,30,649-2-10
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಠೇವಣಾತಿ	20,64,586-2-0
ವಿವಿಧ	10,51,799-1-7	ವಿವಿಧ	9,82,093-10-4
ಈ ವರ್ಷದ ಲಾಭ	55,003-0-6	ನಗದು	17,99,207-1-3
ಒಟ್ಟು	1,00,69,766-10-2	ಒಟ್ಟು	1,00,69,766-10-2



ನಿಮ್ಮ ಅದೃಷ್ಟ!

ಪೋಸ್ಟು ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿರಿ. ಕೂಡಲೇ ನಮ್ಮ ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ವಹಿವಾಟುಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ, ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ. 1-9-0ಕ್ಕೆ ವಿ. ಪಿ. ಮೂಲಕ ತಿಳಿಸುವೆವು. ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.

ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು. ಇದು ಸುಳ್ಳೆಂದು ರುಜುವಾತುಪಡಿಸಿದವರಿಗೆ ರೂ. 100 ಇನಾಮು ಕೊಡಲಾಗುವುದು.

ANAND JOTISH ASHRAM,
Post Box No. 27 (S.A.M.) Amritsar.

ನೋಟಗಳು

'ಸತ್ಯಾಗ್ರಹವು ನೀತಿಯ ಯುದ್ಧವಲ್ಲ, ಅನ್ಯಾಯದ ಯುದ್ಧ; ಆದುದರಿಂದ ಕಾಂಗ್ರೆಸಿನ ಸತ್ಯಾಗ್ರಹಿಗಳು ಇಂದು ಕಲಹಕಂಟಕರಿಗೆ ಬೆಂಬಲ ನಿಂತವರು' ಹೀಗೆಂದರು ಜಸ್ಟಿಸ್ ಪಾರ್ಟಿಯ ನಾಯಕರಾದ ಕುಮಾರರಾಜ ಮುತ್ತಯ್ಯಚೆಟ್ಟಿಯಾರರು ತಮ್ಮದೊಂದು ಭಾಷಣದಲ್ಲಿ!

◈

'ಬ್ರಿಟಿಷ್ ಸರಕಾರವನ್ನು ಬಿಟ್ಟು ಭಾರತವು ಬೇರಾಗಲಾರದು; ಕಾಂಗ್ರೆಸಿನ ಸಂಪೂರ್ಣ ಸ್ವಾತಂತ್ರ್ಯ ಕೇಳಿಕೆಯು ಅವಿಚಾರ ಪೂರ್ಣವಾದುದು ಎಂದರು ಕುಮಾರರಾಜರು!

◈

'ರಾಷ್ಟ್ರಘಟನಾ ಸಮಿತಿಯು ರಾಷ್ಟ್ರದ ಪ್ರತಿನಿಧಿ ಸಮಿತಿಯಾಗಲಾರದು; ಆದುದರಿಂದ ಕಾಂಗ್ರೆಸಿನ ಆ ಕೇಳಿಕೆಯು ಸರ್ವಥಾ ವಿರೋಧಿಸಬೇಕೆಂದರು ಮಾತ್ರ ಅದೇ ಮುತ್ತಯ್ಯನವರು!

◈

ಹಿಂದಿಯನ್ನು ಕಡ್ಡಾಯ ಶಿಕ್ಷಣ ಕ್ರಮ ತೆಗೆದು ಹಾಕಿದ್ದಕ್ಕಾಗಿ ಗವರ್ನರರನ್ನು ಎಂದರೆ ಸರಕಾರವನ್ನು ಹೊಗಳಿದರು ಚೆಟ್ಟಿಯಾರರು.

◈

ಮದ್ರಾಸಿನ ಹೊಸ ಗವರ್ನರರನ್ನು ಅವರ ಧರ್ಮ ಪತ್ನಿಯವರನ್ನೂ ಅಭಿನಂದಿಸಿದರು ಜಸ್ಟೀಸ್ ಪಾರ್ಟಿಯ ಧುರೀಣರು!

◈

ಕೊನೆಗೆ, ಎಲ್ಲಾ ಪಕ್ಷ, ಎಲ್ಲಾ ಜಾತಿಯವರೂ ಭಾರತದ ಹೊಸ ಘಟನೆಯನ್ನು ನಿರ್ಮಿಸುವ ಸಲುವಾಗಿ ಒಂದು ಯೋಗ್ಯ ಒಪ್ಪಂದಕ್ಕೆ ಬರುವುದು ಅವಶ್ಯವಿದೆಯೆಂದರು ಆ ಮಹಾನುಭಾವರು.

◈

ಭಾರತಕ್ಕೆ ಹೊಸ ಘಟನೆಯೊಂದು ಬೇಕಾಗಿದೆಯೆಂಬೀ ವಿಚಾರವಾದರೂ ಅವರ ಆ ಬುದ್ಧಿಗೆ ಹೊಳೆದದ್ದು ನಿಜವಾಗಿ ಆಶ್ಚರ್ಯವೆನ್ನಬೇಕು.

◈

ಕಾಂಗ್ರೆಸು ಸೂಚಿಸುವ ಘಟನೆಯನ್ನು ವಿರೋಧಿಸಬೇಕೆನ್ನುವ ಮುತ್ತಯ್ಯನವರು ಮತ್ತಾವ ಹೊಸ ವಿಧಾನವನ್ನು ಸೂಚಿಸುತ್ತಿರುವರೋ ತಿಳಿದಿಲ್ಲ!

◈

ಭಾರತವು ಪೂರ್ಣ ಸ್ವಾತಂತ್ರ್ಯವನ್ನು ಪಡೆಯಬೇಕೆನ್ನುವ ಕಾಂಗ್ರೆಸಿನ ಹೇಳಿಕೆಯು ಪ್ರಮಾದಕರವೆಂದು ಅವರ ನಿಶ್ಚಿತ ಅಭಿಪ್ರಾಯವೇ ಆಗಿದೆ. ಏಕೆಂದರೆ ಬ್ರಿಟಿಷರ ಸಂಬಂಧ ಕಡಿದು ಹೋಗುವುದು ಜಸ್ಟಿಸ್ ಪಾರ್ಟಿ ಧುರೀಣರಿಗೆ ಬಹಳ ದುಃಖವನ್ನುಂಟು ಮಾಡುತ್ತದೆ!

◈

ಬ್ರಿಟಿಷ್ ಸರಕಾರದ ಸಂಬಂಧದಿಂದ ಹಿಂದೆ ಪ್ರಾಂತಿಕ ಮಂತ್ರಿ ಮಂಡಳವನ್ನು ಅವರು ನಡೆಸಿದ್ದಾರೆ. ಜಸ್ಟಿಸ್ ಪಾರ್ಟಿ ಮುಖಂಡರು ಬ್ರಿಟಿಷ್ ಸರಕಾರದ ಸಂಬಂಧದಿಂದ, ಇಂಗ್ಲೆಂಡಿನಲ್ಲಿ ಹೊಸಹೊಸ ಉದ್ಯೋಗಗಳನ್ನು ಗಳಿಸಿಕೊಂಡಿದ್ದಾರೆ.

◈

ಚುನಾವಣೆಯಿಂದಲಾಗಿ ತಮ್ಮ ಪ್ರಾಂತಿಕ ಮಂತ್ರಿಮಂಡಳಕ್ಕೆ ಹೇಗೂ ಧಕ್ಕೆ ತಗಲಿತು! ಚುನಾವಣೆಯಿಲ್ಲದ ನೌಕರಿಗಳನ್ನಾದರೂ ಹೊಂದಬೇಕಾದರೆ ಬ್ರಿಟಿಷ್ ಸರಕಾರದ ಸಂಬಂಧವು ಅವಶ್ಯವಾಗಿ ಬೇಕಾಗಿದೆ!

◈

ಹಾಗಾಗಿ ಬ್ರಿಟಿಷ್ ಸರಕಾರದ ಸಂಬಂಧವು ಕಡಿದು ಹೋಗುವುದರೊಡನೆ ತಮ್ಮ ನೆಲೆಯೇ ತಪ್ಪಿ ಹೋಗಬಹುದೆಂದು ಕುಮಾರ ರಾಜರು ಹೆದರಿಕೊಂಡಂತಿದೆ!

◈

ತಮ್ಮ ಇದುವರೆಗಿನ ಧೋರಣೆಗಾಗಿ ಜನತೆಯು ಮುಂದಿನ ಪ್ರಜಾಪ್ರಭುತ್ವದ ರಾಜ್ಯದಲ್ಲಿ ಯಾವ ಪ್ರತೀಕಾರವನ್ನು ಮಾಡಬಹುದೆಂದು ಇಂದು ಅವರು ಅಂಜುತ್ತಿರುವರೆ?

◈

ಅದಕ್ಕಾಗಿಯೇ ಪ್ರಜಾಪ್ರಭುತ್ವ ರಾಜ್ಯನೀತಿಯು ಭಾರತಕ್ಕೆ ಸಲ್ಲದೆಂಬ ಜಿನ್ನರನ್ನು, ಜಸ್ಟಿಸ್ ಪಾರ್ಟಿಯ ಮುಖಂಡರಾದ ರಾಮಸ್ವಾಮಿ ನಾಯಕರು ಮೊನ್ನೆ ಕಂಡು ವಿಚಾರ ವಿನಿಮಯವಾಡಿಕೊಂಡಿರಬಹುದೇ?

◈

ಭಾರತವು ಹಿಂದುಸ್ಥಾನ, ಪಾಕಿಸ್ಥಾನವೆಂದು ಎರಡಾಗಿ ಪಾಲಾಗಬೇಕೆಂದು ಜಿನ್ನರು ವಾದಿಸುವರು!

◈

ಭಾರತದಲ್ಲಿ ಹಿಂದುಗಳಂತೆ ಮುಸ್ಲಿಮರಿಗೂ ಸಮಪಾಲು ಇದೆ ಎಂಬುದು ಅವರ ವಾದ!

◈

ಭಾರತದಲ್ಲಿ ಹಿಂದುಗಳಂತೆ ಮುಸ್ಲಿಮರಿಗೂ ಸಮಪಾಲು ಇರುವುದೆಂದು ಅವರ ವಾದವಾದರೂ, ಭಾರತವು ಹಿಂದುಗಳದ್ದು ಅಲ್ಲ, ಮುಸ್ಲಿಮರದ್ದೂ ಅಲ್ಲ, ಬ್ರಿಟಿಷರದ್ದು ಎಂದು ಅವರ ದೃಢ ನಿಶ್ಚಯವಂತೆ!

◈

ಆದುದರಿಂದಲೇ ಇಂದು ಬ್ರಿಟಿಷರ ಸಂಬಂಧವು ಕಡಿದು ಹೋಗಬಾರದೆಂದು ಜಸ್ಟಿಸ ಪಾರ್ಟಿಯ ಮುಖಂಡರೂ ಮುಸ್ಲಿಂ ಲೀಗಿನ ಧುರೀಣರೂ ಏಕ ಕಂಠದಿಂದ ಬೊಬ್ಬಿಡುತ್ತಿದ್ದಾರೆ!

◈

ಈ ಸಂದರ್ಭವು ವ್ಯರ್ಥ ಹಾಳುಮಾಡತಕ್ಕದಲ್ಲ. ಭಾರತದಲ್ಲಿ ಬ್ರಿಟಿಷರು ಬಹುಕಾಲ ನಿಲ್ಲಲು ಸಾಧ್ಯವಿಲ್ಲ. ಕಾಂಗ್ರೆಸಾಗಲಿ, ಫಾರ್ವರ್ಡ್ ಬ್ಲಾಕಿನವರಾಗಲಿ, ಯಾರೇ ಆಗಲಿ ಈಗ ತೀವ್ರ ಆಂದೋಲನವನ್ನು ಆರಂಭಿಸಿ, ಭಾರತಕ್ಕೆ ಆಗಬೇಕಾದುದನ್ನು ಗಳಿಸಿಕೊಳ್ಳತಕ್ಕದು ಎಂದು ಕಲ್ಕತ್ತೆಯ ಪ್ರಚಂಡ ಸಭೆಯೊಂದರಲ್ಲಿ ಬೋಸರು ಹೇಳಿದರು!

◈

ಬ್ರಿಟಿಷರ ಸಂಬಂಧವನ್ನು ಕಡಿಯುವುದು ಭಾರತದ ಹಿತವಾಗಲಾರದೆಂದು ಬೋಸರ ತೀರ್ಮಾನ!

◈

HALFTONE & LINE BLOCK MAKING UNDERTAKEN

Sharada Press.
MANGALORE

The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು   ಬ್ರೆಂಚ್ ಹಂಪನಕಟ್ಟೆ
ರಿಜಿಸ್ಟರ್ಡ್ ಮೂಲಧನ ರೂ. 1,00,000.   ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಠೇವಣಿಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ.
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½%   ನಿರಖು ಠೇವಣಾತಿ 12 ತಿಂಗಳಿಗೆ 4½
,, 6 ತಿಂಗಳಿಗೆ 4%   ,, 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡ್ಯಾರೆಕ್ಟರ್.

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of
RS. 50/-, 100/-, 500/-, 1,000/- & 5,000/-
are now issued at all our Branches.

For particulars call at or write to
Any of our nearest Branches

ಪಂಚಕ್ಕದಾಯಿ
(ಕೊಂಕಣಿ ಭಾಷೆನ)

ಲೇಖಕು: ಕೊಂಕಣಿ ಭಾಷಾಪ್ರೇಮಿ.   ಪ್ರಕಾಶಕು: ಕೊಂಕಣಿ ಭಾಷಾ ಸಾಹಿತ್ಯ ಮಂದಿರ ಬಂಟ್ವಾಳ ದ. ಕ.

ನವರಸ ಭರಿತ ಶೃಂಗಾರಯುಕ್ತ ಜಾವ್ನು ಆಸ್ತಿಲೆಲೆ
ಪಾಂಚ ಕಾಣ್ಯಾಂಚೆ ಪುಸ್ತಕ
ತುಮ್ಕಾಂ ಶುರುಥೋನ್ ಅಖೇರಿತಾಂಯ್ ಆನಂದಸಾಗರಾಂತು
ಲೋಳ್ಯತಾ. ವಾಚ್ಚೆಲಿ ತಿಕ್ಲಿ ಪಾವ್ಲಾ
ಹೀ ಪಂಚ್ಕದಾಯಿ ಸರ್ವಾನಿ: ಪಾವ್ನು ಮಾತೃಭಾಷಾ ಸೇವಕ ಪಾತ್ರ ಜಾವ್ನು
ಮ್ಹಣು ಭಾಷಾಭಿಮಾನಿಲ್ಯಾಕ ಅಮ್ಗೆಲಿ ವಿನಂತಿ.
ಕೊಂಕಣಿ ಭಾಷೇನ ನವೀನ ಅತ್ಯಾಧುನಿಕ ರೀತಿನ ಬರ್ಯಿಲೆಲಿ
ಸಾಮಾಜಿಕ ವ ನೈತಿಕ ಕಾಣ್ಯೊ ಮೋಲ 0—1—0
ಹ್ಯಾ ಸಂಗಾ ಕೆ. ಎಂ. ಪ್ರಭು ವಿರಚಿತ ಭಜನಾವಳಿ ಆನಿ ಗ್ನಾನ ಝುಳಕ ಕಾವ್ಯ, ವ ಪಕವಾಟಿ ಪುಸ್ತಕ ಅಮ್ಗೆಲೆಯ ವಿಕ್ರಿಕಾಕ ಮೆಳ್ತಾತಿ.
ದಿ ಕೊಂಕಣಿ ಭಾಷಾ ಸಾಹಿತ್ಯ ಮಂದಿರ, ಬಂಟ್ವಾಳ, ದ. ಕ.

ವಿಜ್ಞಾನಯುಗ

ಸಸ್ಯಾಹಾರಿಗಳಿಗೆ ಮಧುರ ಸ್ವರ

ಮಾಂಸವನ್ನು ಆಹಾರವಾಗಿ ಉಪಯೋಗಿಸುವುದರಿಂದ ಕಂಠದ ಮೇಲೆ ದುಷ್ಪರಿಣಾಮವಾಗುತ್ತದೆಂದು, ಆದುದರಿಂದ ಅವರಿಗೆ ಮಧುರವಾಗಿ ಹಾಡಲಾಗುವುದಿಲ್ಲವೆಂದೂ ಒಬ್ಬ ಬ್ರಿಟಿಷ ವೈಜ್ಞಾನಿಕರ ಅಭಿಪ್ರಾಯವಿರುತ್ತದೆ. ಯೂರೋಪಿನ ಇತರ ಎಲ್ಲಾ ರಾಷ್ಟ್ರಗಳ ಜನರಿಗಿಂತ ಬ್ರಿಟಿಷರು ಮಾಂಸ ತಿನ್ನುವುದು ಹೆಚ್ಚು. ಆದುದರಿಂದ ಬ್ರಿಟನಿನಲ್ಲಿ ಲೋಕಪ್ರಸಿದ್ಧ ಹಾಡುಗಾರರು ಕಡಿಮೆ ಇದ್ದಾರೆ. ಇಟಲಿಯಾನರು ಮಾಂಸ ತಿನ್ನುವುದು ಕಡಿಮೆ. ತರಕಾರಿಗಳು ಮತ್ತು ಧಾನ್ಯಗಳು ಅವರ ಮುಖ್ಯ ಆಹಾರವಾಗಿದೆ. ಆದುದರಿಂದ ಇಟಲಿಯಲ್ಲಿ ಹಾಡುಗಾರಿಕೆಯಲ್ಲಿ ಪ್ರಸಿದ್ಧರಾದ ಬಹಳ ಮಂದಿ ಇರುತ್ತಾರೆ.

ಮಾಂಸಾಹಾರದಿಂದ ಕಂಠ ಸ್ವರದ ಮೇಲೆ ದುಷ್ಪರಿಣಾಮವಾಗುತ್ತದೆಂಬುದನ್ನು ಪ್ರಾಣಿಗಳ ಜೀವನದಿಂದಲೂ ಸ್ಪಷ್ಟ ಮಾಡಬಹುದು. ಹಾಡುವ ಹಕ್ಕಿಗಳೆಲ್ಲ ಶಾಕಾಹಾರಿಗಳಾಗಿ ಇರುತ್ತವೆ. ಮಾಂಸ ತಿನ್ನುವ ಹದ್ದು, ಗೂಗೆ, ಗಿಡುಗ ಮೊದಲಾದವುಗಳ ಕೂಗು ಬಹಳ ಕರ್ಕಶವಾಗಿರುವುದು.

ಜಲಚರಗಳ ಚಲನೆಯ ವೇಗ

ಮೃಗಪಕ್ಷಿಗಳು ಯಾವ ಗತಿಯಿಂದ ಓಡುತ್ತವೆ ಎಂಬುದು ಈಗ ವೈಜ್ಞಾನಿಕರಿಗೆ ತಿಳಿದಿದೆ. ಆದರೆ ಜಲಚರಗಳ ಚಲನೆಯ ವೇಗವು ಅವರಿಗೆ ಈ ತನಕ ತಿಳಿದಿರಲಿಲ್ಲ. ಯಾಕೆಂದರೆ ಅವುಗಳ ಚಲನೆಯ ವೇಗವನ್ನು ಕಂಡುಹಿಡಿಯಲಿಕ್ಕೆ ಅವರ ಬಳಿ ಯಾವ ಉಪಕರಣವೂ ಇದ್ದಿರಲಿಲ್ಲ.

ನೋವಾಸ್ಕೋಶಿಯದ ಒಬ್ಬ ವೈಜ್ಞಾನಿಕರಾದ ಅರ್ಲ್ ಥೋಮ್ಸನ್ ಎಂಬವರು ಜಲಚರಗಳ ಚಲನೆಯ ವೇಗವನ್ನು ಕಂಡುಹಿಡಿಯಲಿಕ್ಕೆ ಒಂದು ಉಪಕರಣವನ್ನು ರಚಿಸಿದ್ದಾರೆ. ಈ ಉಪಕರಣವು ಜಲಚರಗಳ ಚಲನೆಯ ವೇಗವು ತಾಸಿಗೆ ಎಷ್ಟು ಇರುತ್ತದೆ ಎಂಬುದನ್ನು ತನ್ನ ಅಚ್ಚಿನ ಮೇಲೆ-ಮುಳ್ಳಿನಿಂದ ಗುರುತಿಸುತ್ತದೆ. ಈ ಉಪಕರಣದ ಮೂಲಕ ಸಣ್ಣ ಸಣ್ಣ ಮೀನುಗಳಿಂದಾರಂಭಿಸಿ ತಿಮಿಂಗಿಲ, ಶಾರ್ಕ್ ಮೊದಲಾದ ದೊಡ್ಡ ದೊಡ್ಡ ಜಲಜೀವಿಗಳ ತನಕ ಅವುಗಳ ಚಲನೆಯ ವೇಗವನ್ನು ಕಂಡುಹಿಡಿಯುವುದು ಸಾಧ್ಯ. ಆದುದರಿಂದ ದೊಡ್ಡ ದೊಡ್ಡ ಸಾಗರಗಳಲ್ಲಿ ವಾಸವಾಗಿರುವ ಅನೇಕ ಜೀವಿಗಳ ಅದ್ಭುತ ಜೀವನದ ವೈಚಿತ್ರ್ಯವು ಇನ್ನು ಸ್ವಲ್ಪ ಸಮಯದಲ್ಲಿ ಪ್ರಪಂಚಕ್ಕೆ ತಿಳಿದುಬರಬಹುದು.

ಪೆಟ್ರೋಲಿನ ಬದಲಿಗೆ ಸಕ್ಕರೆಯ ಮದ್ದು

ದೊಡ್ಡ ದೊಡ್ಡ ಯುದ್ಧಗಳು ನಡೆಯುತ್ತಿರುವಾಗ ವಾಹನಾದಿಗಳ ಚಲನೆಗೆ ಅಗತ್ಯವುಳ್ಳಷ್ಟು ಎಣ್ಣೆ ಪೆಟ್ರೋಲುಗಳು ದೊರೆಯುವುದು ಕಷ್ಟವಾಗುತ್ತದೆ. ಪೆಟ್ರೋಲಿನ ಬರಗಾಲವಾದಾಗ ಏನು ಮಾಡಬೇಕೆಂಬ ಪ್ರಶ್ನೆಯು ಬಹುಕಾಲದಿಂದ ವೈಜ್ಞಾನಿಕರ ತಲೆಗಳನ್ನು ಕೆಡಿಸಿದೆ. ಈಗ ಐಯರ್ಲೇಂಡಿನ ವೈಜ್ಞಾನಿಕರು ಸಕ್ಕರೆಯನ್ನು ತಯಾರಿಸಿದ ಮೇಲೆ ಹಿಂದಕ್ಕೆ ಉಳಿಯುವ ಟ್ರೀಕಲ್ ಅಥವಾ ಮೊಲಾಸಿಸ್ ಎಂಬ ಮದ್ದಿನಿಂದ ಪೆಟ್ರೋಲಿನಂಥ ಪದಾರ್ಥವನ್ನು ತಯಾರಿಸಿ, ವಾಹನಾದಿಗಳಿಗೆ ಉಪಯೋಗಿಸುವ ಹೊಸ ವಿಧಾನವನ್ನು ಕಂಡುಕೊಂಡಿದ್ದಾರೆ. ಬಟಾಟೆಯಿಂದ ತಯಾರಿಸಿದ ಪೆಟ್ರೋಲು ಉಪಯುಕ್ತವಾಗಿರುವಂತೆ ಸಕ್ಕರೆಯ ಮದ್ದಿನಿಂದ ತಯಾರಿಸಿದ ಪೆಟ್ರೋಲು ಕಲ್ಲೆಣ್ಣೆಯಿಂದಾದ ಪೆಟ್ರೋಲಿನಂತೆಯೇ ಉಪಯುಕ್ತವಾಗಿರುವುದೆಂದು ಅವರು ಹೇಳುವರು. ಆದುದರಿಂದ ದೊಡ್ಡ ಪರಿಮಾಣದಲ್ಲಿ ಸಕ್ಕರೆಯಾಗುವ ವೆಸ್ಟ್ ಇಂಡೀಸ್ ದ್ವೀಪಗಳಿಂದ ಈ ಸಕ್ಕರೆಯ ಮದ್ದನ್ನು ಐರ್ಲೇಂಡಿಗೆ ಆಮದು ಮಾಡತೊಡಗಿದ್ದಾರೆ. ಸ್ಲಿಗೋ ಎಂಬ ಬಂದರದಲ್ಲಿ ಮದ್ದನ್ನು ದಾಸ್ತಾನಾಗಿ ಇಡಲಿಕ್ಕೆ ಒಂದು ಬಹು ದೊಡ್ಡ ಆಕೆಯನ್ನು ರಚಿಸಿದ್ದಾರೆ. ಪೆಟ್ರೋಲನ್ನು ತಯಾರಿಸುವ ಕರ್ಮಶಾಲೆಯವರು ಬೇಸಗೆಯಲ್ಲಿ ಹೆಚ್ಚು ಬಟಾಟೆಯ ಬೆಳೆಯಾಗುವಾಗ ಬಟಾಟೆಯಿಂದಲೂ, ಉಳಿದ ಸಮಯಗಳಲ್ಲಿ ದಾಸ್ತಾನಾಗಿಟ್ಟ ಸಕ್ಕರೆಯ ಮದ್ದಿನಿಂದಲೂ ಪೆಟ್ರೋಲನ್ನು ತಯಾರಿಸುವರು.

ಮಾಟದ ನಳ್ಳಿ

ಪೇಟೆ ಪಟ್ಟಣಗಳಲ್ಲಿ ನಳ್ಳಿ ನೀರಿನ ಏರ್ಪಾಡಾಗಿದೆಯಷ್ಟೇ. ಬಾಯಾರಿದವನು ಅಥವಾ ನೀರು ಬೇಕಾದವನು ಅದನ್ನು ಪಡೆಯಲಿಕ್ಕೆ ನಳ್ಳಿಯ ತಿರುಗಣೆಯನ್ನು ತಿರುಗಿಸಬೇಕು. ಆಗ ಮಾತ್ರ ನೀರು ಹೊರಗೆ ಹರಿಯುತ್ತದೆ. ಆದರೆ ಯುರೋಪ ಅಮೇರಿಕಗಳ ಅನೇಕ ಶಹರುಗಳಲ್ಲಿ ಹೊಸ ಬಗೆಯ ನಳ್ಳಿಗಳನ್ನು ಉಪಯೋಗಕ್ಕೆ ತಂದಿದ್ದಾರೆ. ಅವು ವಿಚಿತ್ರ ಪ್ರಕಾರದಿಂದ ನೀರನ್ನು ಕೊಡುತ್ತವೆ. ಯಾವನಾದರೂ ಒಬ್ಬ ವ್ಯಕ್ತಿಯು ಬಂದು ನಳ್ಳಿಯ ಬಾಯನ್ನು ನೋಡುತ್ತಿದ್ದರೆ ನೀರು ಅದರೊಳಗಿಂದ ತನ್ನಷ್ಟಕ್ಕೆ ಉಕ್ಕಿ ಹರಿಯುವದು. ಅವನು ನಳಿಗೆಯ ಬಾಯಿಯಿಂದ ಕಣ್ಣು ತಪ್ಪಿಸಿದಾಗ ನೀರು ಬರುವದು ನಿಂತು ಹೋಗುತ್ತದೆ. ಅಂತೂ ನೀರಿಗಾಗಿ ಮನುಷ್ಯನು ನಳ್ಳಿಯ ತಿರುಗಣೆಯನ್ನು ತಿರುಗಿಸಬೇಕಾಗಿಲ್ಲ, ನೋಡಿದರೆ ಸಾಕು, ನೀರು ಬರುತ್ತದೆ. ವ್ಯಕ್ತಿಯು ನಳ್ಳಿಯ ಬಾಯಿಯನ್ನು ನೋಡುವಾಗ ಅವನ ಕಣ್ಣಿನ ಪ್ರಕಾಶ ಕಿರಣವು ಒಳಗೆ ಎಲ್ಲಿಯೋ ಇರುವ ಒಂದು ವಿಚಿತ್ರ ಯಂತ್ರದ ಮೇಲೆ ಬೀಳುವದರಿಂದ ಆ ಯಂತ್ರವು ಕೆಲಸ ಮಾಡತೊಡಗುತ್ತದೆ, ಮತ್ತು ಅದರ ದೆಸೆಯಿಂದ ನೀರು ಹೊರ ಸೂಸುತ್ತದೆ. ಕಣ್ಣಿನ ಪ್ರಕಾಶ ಕಿರಣವು ಯಂತ್ರದ ಮೇಲೆ ಬೀಳದೆ ಇದ್ದಾಗ ಯಂತ್ರವು ನಿಂತು ನೀರು ಬರುವದು ಮುಗಿಯುತ್ತದೆ. ಹೇಗಿವೆ ನೋಡಿರಿ ಮನುಷ್ಯನ ಆರಾಮಕ್ಕಾಗಿ ವಿಜ್ಞಾನವು ಶೋಧಿಸಿ ತೆಗೆಯುವ ಯಂತ್ರ ಸಾಧನಗಳು!

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ
ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ
ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಬಸ್ತಿ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹನಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: -ಮೆಸರ್ಸ್ ಇಲೆಕ್ಟ್ರೊ ಹೊಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್, ಮತ್ತು ಡ್ರಗ್ಗಿಸ್ಟ್ಸ್,
ಹಂಪನಕಟ್ಟಾ, ಮಂಗಳೂರು.

Moodabidri.
13-3-1940.

To,
The Joint Managers,
The Combined Booking Agency,
Mangalore.

Gentlemen,

It is particularly gratifying to note what special conveniences you had catered for the unusual rush of all India Digamber Jain pilgrims in this part of the District for their sight seeing in Venoor, Moodabidri, Karkala, Varanga at the time of the Sravana Belgola Mahamasthakabhishekam in February 1940.

As the premier Booking Agency in Motor Travel in this District you have done a signal service and earned well merited gratitude from all classes of Digamber Jains coming from the various Indian States of India; By your earnest efforts, South Kanara has been brought into lime light from the estimation of all India Jains.

The real credit of this goes to your Joint Manager Sri C. V. Kamath who was camping in Moodabidri for the last two weeks attending to all the comforts of the pilgrims day and night, without least annoying to anybody.

Sri Subbannacharya, clerk to your C. B. A.; I. Kogganna Pai, B. C., Moodabidri also deserve our thanks for attending to all duties at even odd hours.

Really you have won laurels for your excellent and speedy arrangements in motor travel and the gratitude of all the Digamber Jains coming from distant Ajmere, Rajputana, Cutch, Delhi, Calcutta, Dehra Dun, Mussorie, will ever remain in their hearts. Wishing you once again a service of usefulness and fame for your Combined Booking Agency in the whole of India.

Yours ever in service,
The Members of the Jain Vidya Vardhaka Sangha (Regd) and Moodabidri Jain pilgrim Helping Committee.

SD. Sri Charukirthi Pandithacharya Swami,
,, B. Dharmapal Jaini,
,, M. Nagaraja Shastry,
,, M. Jagathpal,
,, Dharmapal Jaini Anadak,
,, S. Ananthayya Shetty,
,, B. Chandappa Indra,

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇರವಾದಂತೆ ಸಾಗುತ್ತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು— ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಡಿಯವರು, ಬರೆದ— ಈ ಚೂರ್ಣದಿಂದ ಯಾವ ತರದ ಅಪಾಯವೂ ಆದ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦

ವಿ. ಪಿ. ...

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ: ಮಿರಜ, S. M. C.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ. ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

HOUNSA

ಹಂಸಾ ಸ್ನೋ ಮತ್ತು ಬ್ರಿಲಿಂಟೈನ್ ಉಪಯೋಗಿಸಿರಿ

ಕೆ. ವೆಂಕಟೇಶ ಪ್ರಾಭು,
ಗೋಲ್ದಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೆಪಿ,
P. O. Peridepi (ನೆಲ್ಲೂರು ಡಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—18—0	1—14—
,, ದುಯಂ ,, ,,		
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	4—8—0	4—9—0
,, ದುಯಂ ,, ,,	4—5—0	4—6—0
,, ಅವ್ವಲ್ ಸುಗ್ಗಿ ,,	4—5—0	4—5—
,, ದುಯಂ ,, ,,	4—8—0	4—3—0
ತೆಂಗಿನಕಾಯಿ ಸುಲಿದದ್ದು 1000ಕ್ಕೆ	32—8—0	37—8—0
,, ಸಿಪ್ಪೆ ಇದ್ದದು ,,	35—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	62—8—0	62—8—
,, ದಲ್‌ಪಸಂದಿ ,,	66—0—0	—
ತೆಂಗಿನ ಎಣ್ಣೆ ಮಣಕ್ಕೆ	4—8—0	4—8—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—12—0	3—4—0
ಗೇರುಬೀಜ ಮುಡಿಗೆ	[?]—12—0	4—1—0
ಅಚ್ಚಿನ ಬೆಲ್ಲ ಖಂಡಿಗೆ	[?]5—0—0	42—8—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	14—8—0	15—4—0

Date 12-4-1940 ವಾರ್ಷಿಕ ಚಂದಾ ರೂ. 3-0-6 ಅಂಚೆವೆಚ್ಚ ಸೇರಿ ರೂ. 3-13-0 Regd. No. M34[illegible]

ಸ್ವದೇಶಾಭಿಮಾನಿ

ಸಂಪುಟ 31] ತಾರೀಕು 12-4-1940 [ಸಂಚಿಕೆ 15

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, [illegible], ಹಲ್ಲು ವೇದನೆಗಳಿಗೂ ಎದೆನೋವು, ಶ್ವಾಸ, ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ESTD. 1906.

ಸ್ವದೇಶಾಭಿಮಾನಿ

SWADESHABHIMANI

೮೦ನೇ ಜನ್ಮದಿನೋತ್ಸವದ ಸಂದೇಶ-



"ಪಶುಶಕ್ತಿ ಪ್ರಾಬಲ್ಯಂತುಜಗವಗೆಲಲಳವಲ್ಲ;
ಸತ್ಯಧರ್ಮಗಳಿಂಗೆ ಜಯವುಂಟು! ತಡವಿಲ್ಲ"

ಟಾಗೂರ್

KANNADA ILLUSTRATED WEEKLY

Date 12-4-1940 [illegible] ರೂ. 2-0-0 [illegible] ರೂ. 2-13-0 Regd. No. M3406

ಸ್ವದೇಶಾಭಿಮಾನಿ

ಸಂಪುಟ 31] ತಾರೀಖು 12-4-1940 [ಸಂಚಿಕೆ 15

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?

If you die-to your family and dependants?

REMEMBER THAT

If you live Life Insurance takes the place of your professional income during your old age

If you die, it provides your family with enough income for their maintenance and the education of your children

'BOMBAY LIFE' offers all that is best in LIFE ASSURANCE

1938 RECORD

Completed Business	Rs	1 44 91 000
Life Assurance Fund	Rs	1 17 69 748
Total Assets	Rs	1 31,28 998

To insure or to re-insure it pays you to consult

KOCHIKAR BROTHERS LTD.,

MADRAS BRANCH SECRETARIES

Bombay Life Building,

Sri Lalubhai Samaldas Road

Gandhi Nagar, UDIPI

OR ANY OF THEIR FOLLOWING OFFICES

Puthiyara Calicut. — Car Street Mangalore — Visweswarapuram Circle Bangalore City — [illegible] Mount Road Madras

Gautam Nivas, Charni Road Girgaum, Bombay No 4 — Central Station Road Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಜ್ಜಿ, ಪಿತ್ತ ಉಪದ್ರವ, ಕಲಿಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುತ್ತದೆ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ESTD. 1906

ಸ್ವದೇಶಾಭಿಮಾನಿ

SWADESHABHIMANI

೮೦ನೇ ಜನ್ಮದಿನೋತ್ಸವದ ಸಂದೇಶ-



"ಪಶುಶಕ್ತಿ ಮಾರಾಂತುಜಗವಗೆಲಲಳವಲ್ಲ;
ಸತ್ಯಧರ್ಮಗಳಿಂಗೆ ಜಯವುಂಟು! ತಡವಿಲ್ಲ."

- ಠಾಗೋರ್

KANNADA ILLUSTRATED WEEKLY

Date 12-4-1940 [illegible] ರೂ. 2-0-0 [illegible] ರೂ. 1-13-0 Regd. No. M 3400

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 12-4-1940 [ಸಂಚಿಕೆ 15

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live–today–a few years more–when you are old?
If you die–to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children.

'BOMBAY LIFE" offers all that is best in LIFE ASSURANCE

1938 RECORD

Completed Business	Rs 1,44,91 000
Life Assurance Fund	Rs 1,17 69,748
Total Assets	Rs 1,31,28 998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES

Bombay Life Building,

Sri Calubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut

Car Street, Mangalore

Visweswarapuram Circle, Bangalore City

Post Box No. 36, Mount Road, Madras

Gautam Nivas, Charni Road, Girgaum, Bombay No 4

Central Station Road, Trivandrum

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಛ ಜ, ಹಲ್ಲುವೇದನೆಗಳಿಗೂ ಎದೆ ನೋವು ಘಾ... ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಜೇನೆ, ಪಕ್ಷವಾತ ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುತ್ತದೆ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI

೮೦ನೇ ಜನ್ಮದಿನೋತ್ಸವದ ಸಂದೇಶ-



"ಪಶುಶಕ್ತಿ ಮಾರಾಂತು ಜಗವಗೆಲಲಳವಲ್ಲ;
ಸತ್ಯಧರ್ಮಗಳಿಂಗೆ ಜಯವುಂಟು ತಡವಿಲ್ಲ."
- ಟಾಗೂರ್.

KANNADA ILLUSTRATED WEEKLY

ಸತ್ಯಾಗ್ರಹ ಪ್ರತಿಜ್ಞೆ!
ಕಾಂಗ್ರೆಸ್ ಸತ್ಯಾಗ್ರಹ ... ಬಗ್ಗೆ

ಸತ್ಯಾಗ್ರಹಿಯು ಸಹಿಹಾಕಬೇಕಾದ ಪ್ರತಿಜ್ಞಾಪತ್ರಿಗಳು ಶೀಘ್ರದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಸರ್ವರಿಗೆ ಕಳುಹಿಸಿ ... ಸತ್ಯಾಗ್ರಹಿಗಳನ್ನು ಆರಿಸಬೇಕಾದ ನಿಯಮಗಳನ್ನೊಳಗೊಂಡ ಆ ಪ್ರತಿಜ್ಞಾ ಪತ್ರದಲ್ಲಿ ನಮೂದಿಸಲಾಗಿದೆ. ಸಹಿಮಾಡಬೇಕೆನ್ನುವವರು ಕಾಂಗ್ರೆಸ್ಸು ಆಫೀಸಿಗೆ ಬಂದು, ಪ್ರತಿಯನ್ನು ಪಡೆದು ಸಹಿಮಾಡಬಹುದು.

(ಕಾಂಗ್ರೆಸಿನ ನಾಲ್ಕಾಣೆ ಸದಸ್ಯರು ಮಾತ್ರ ಈ ಪ್ರತಿಜ್ಞಾ ಪತ್ರಕ್ಕೆ ಸಹಿಮಾಡಬಹುದು.)

ಪ್ರತಿಜ್ಞಾಪತ್ರವು ಈ ಕೆಳಗಿನಂತಿರುತ್ತದೆ:

ಶ್ರೀ. ಕಾರ್ಯದರ್ಶಿ ... ಸತ್ಯಾಗ್ರಹ ಸಮಿತಿ ... ಜಿಲ್ಲಾ ಕರ್ನಾಟಕ ಪ್ರಾಂತ. ನಾನು ಸಕ್ರಿಯಾ ಸತ್ಯಾಗ್ರಹಿಯಾಗಲು ಇಚ್ಛಿಸುತ್ತೇನೆ. ನಾನು ಪೂರ್ತಿ ಸತ್ಯದಿಂದ ಕೆಳಗಿನಂತೆ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತೇನೆ. ೧ ನಾನು ಸಕ್ರಿಯ (Active) ಸತ್ಯಾಗ್ರಹಿ ಇರುವ ವರೆಗೆ ಮಾತಿನಲ್ಲಿಯೂ, ಕೃತಿಯಲ್ಲಿಯೂ ಅಹಿಂಸೆಯಿಂದ ಇರುವೆನು. ಮತ್ತು ಮನಸ್ಸಿನಿಂದಾದರೂ ಅಹಿಂಸೆಯಿಂದ ಇರಲು ಪ್ರಾಮಾಣಿಕ ಪ್ರಯತ್ನಿಸುತ್ತೇನೆ. ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಸ್ವರಾಜ್ಯವನ್ನು ದೊರಕಿಸಲು ಹಾಗೂ ಹಿಂದು, ಮುಸಲ್ಮಾನ, ಸಿಖ, ಪಾರ್ಸಿ, ಕ್ರಿಶ್ಚಿಯನ್ ಅಥವಾ ಯಹೂದಿ ಮುಂತಾದ ಎಲ್ಲ ಜಾತಿ ಜನಾಂಗಗಳ ಒಕ್ಕಟ್ಟು ಬೆಳಸಲು ಅಹಿಂಸೆಯೊಂದೇ ಮಾರ್ಗವೆಂದು ನಂಬುತ್ತೇನೆ. ೨ ಇಂಥಹ ಒಕ್ಕಟ್ಟನ್ನು ಬೆಳಸಲು ಯಾವಾಗಲೂ ನಾನು ಯತ್ನಿಸುತ್ತೇನೆ. ಅದರಲ್ಲಿ ನನಗೆ ತುಂಬಾ ನಂಬಿಗೆ ಇದೆ. ೩ ಅಸ್ಪೃಶ್ಯತೆಯ ಕಲಂಕವನ್ನು ತೊಡೆದು ಹಾಕುವದು ನ್ಯಾಯ ಹಾಗೂ ಆವಶ್ಯವೆಂದು ನಾನು ನಂಬುತ್ತೇನೆ. ಹಾಗು ಸಾಧ್ಯವಿದ್ದ ಸಂದರ್ಭಗಳಲ್ಲೆಲ್ಲ ಹಿಂದುಳಿದ ವರ್ಗದವರ ಸಂಗಡ ನನ್ನ ಸಂಪರ್ಕ ಬೆಳಸಲು ಹಾಗೂ ಅವರ ಸೇವೆಮಾಡಲು ಪ್ರಯತ್ನಿಸುತ್ತೇನೆ. ೪ ಹಿಂದುಸ್ಥಾನದ ಆರ್ಥಿಕ, ರಾಜಕೀಯ ಹಾಗೂ ನೈತಿಕ ಉದ್ಧಾರಕ್ಕೆ ಸ್ವದೇಶಿಯು ಅಗತ್ಯವೆಂದು ನಾನು ನಂಬುತ್ತೇನೆ. ಮತ್ತು ಉಳಿದ ಎಲ್ಲ ಅರಿವೆಗಳನ್ನು ಬಿಟ್ಟು ಕೈನೂಲಿನ, ಕೈಮಗ್ಗದ ಖಾದಿಯನ್ನೇ ಉಪಯೋಗಿಸುತ್ತೇನೆ, ಹಾಗೂ ಶಕ್ಯವಿದ್ದ ಮಟ್ಟಿಗೆ ಗ್ರಾಮೋದ್ಯೋಗದ ಮತ್ತು ಕೈಯುದ್ಯೋಗದ ತಯಾರಿಸಿದ ವಸ್ತುಗಳನ್ನು ಉಪಯೋಗಿಸುತ್ತೇನೆ. ೫ ನಾನು ನಿಯಮದಿಂದ ನೂಲುತ್ತೇನೆ. ೬ ನನ್ನ ಮೇಲಿನ ಅಧಿಕಾರಿಗಳ ಆಜ್ಞೆಯನ್ನು ಹಾಗೂ ಮೇಲಿನ ಕಾಂಗ್ರೆಸ ಸಮಿತಿ, ವರ್ಕಿಂಗ ಕಮಿಟಿ ಅಥವಾ ಕಾಂಗ್ರೆಸಿನಿಂದ ಸ್ಥಾಪಿತವಾದ ಯಾವುದೇ ಸಮಿತಿಗಳು ಈ ಪ್ರತಿಜ್ಞೆಯ ಧೋರಣೆಗೆ ವಿಸಂಗತವಾಗದಂತೆ ಹಾಕಿಕೊಡುವ ಎಲ್ಲ ನಿಯಮಗಳನ್ನು ಪಾಲಿಸುತ್ತೇನೆ. ೭ ... ಹಾಗೂ ದೇಶಕ್ಕಾಗಿ ... ಉದ್ದೇಶವಿಲ್ಲದೆ ... ದಿಂದ ಸೆರೆಯಾಗಲು, ಬಡಿತ ತಿನ್ನಲು ಅಥವಾ ಪ್ರಾಣವನ್ನಾದರೂ ಕೊಡಲು ಸಿದ್ಧನಿರುತ್ತೇನೆ. ೮ ನನಗೆ ಸೆರೆಯಾದಾಗ ನನ್ನ ಮತ್ತು ನನ್ನ ಮನೆತನದ ಸಲುವಾಗಿ ಅಥವಾ ನನ್ನ ಮೇಲೆ ಅವಲಂಬಿಸಿದವರ ಸಲುವಾಗಿ ಕಾಂಗ್ರೆಸಿನಿಂದ ಯಾವ ಸಹಾಯವನ್ನೂ ಅಪೇಕ್ಷಿಸುವದಿಲ್ಲ.

ತಾರೀಖು ... ಸಹಿ ...

ಪೂರ್ಣ ಹೆಸರು ಮತ್ತು ವಿಳಾಸ ...

ವಯಸ್ಸು ... ಪ್ರಾಥಮಿಕ ಸದಸ್ಯನಾದ ಸ್ಥಳ ...

ಈ ಮೇಲಿನ ನಿಯಮಗಳಲ್ಲಿ ಯಾವುದಾದರೂ ಒಂದು ನಿಯಮವನ್ನು ಕೂಡ ಒಪ್ಪಲಾರದವರು ಸಹಿಮಾಡಬಾರದೆಂದು ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಕ್ಕುದಾದ ಪೋಷಣೆಯು

ಬೆಳೆಯುವ ಮಕ್ಕಳಿಗೆ ಅಗತ್ಯವಾದದ್ದು

ಬೆಳೆಯುವ ಮಕ್ಕಳು ತಮ್ಮ ಬಲ ಮತ್ತು ಚುರುಕುತನವನ್ನು ಕೂಡಲೇ ಉಪಯೋಗಿಸುತ್ತಾರೆ. ಹೊಸ ಜೀವನಶಕ್ತಿಯು ತಕ್ಕುದಾದ ಪೋಷಣೆಯನ್ನು ಹೊಂದಿಕೊಂಡಿರುತ್ತದೆ.

ನಿಮ್ಮ ಮಕ್ಕಳಿಗೆ ತಕ್ಕುದಾದ ಪೋಷಣೆಯು ದೊರಕುವುದೆಂದು ಖಂಡಿತವಾಗಬೇಕಾದರೆ ಯಾವಾಗಲೂ ರುಚಿಕರವಾದ ಶ್ರೇಷ್ಠಶಕ್ತಿವರ್ಧಕ ಆಹಾರದಂತಿರುವ 'ಓವಲ್ಟಿನ್' ಪಾನೀಯವನ್ನು ಕೊಡಿರಿ. ಇದು ಅವರಿಗೆ ಶಕ್ತಿಯನ್ನೂ ಚುರುಕುತನವನ್ನೂ ಹೆಚ್ಚಿಸಿ ಅವರು ಸುಖಿಯಾಗಿರುವಂತೆ ಮಾಡುತ್ತದೆ.

ಇದು ಪ್ರಕೃತಿಯ ಉತ್ತಮ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟಿದೆ. ಮಾಗಿ ನೆನೆಹಾಕಿದ ಬಾರ್ಲಿ, ದನದ ಹಸಿಹಾಲು, ಮತ್ತು ಅಮೂಲ್ಯವಾದ ವಿಟಮಿನು ಮತ್ತು ಫೊಸ್ಫೈಟ್ಸುಗಳು — 'ಓವಲ್ಟಿನು' ಮಕ್ಕಳಿಗೂ ಪ್ರಾಯಸ್ಥರಿಗೂ ಆರೋಗ್ಯವನ್ನೂ ಆನಂದವನ್ನೂ ಉಂಟುಮಾಡುವ ಆಹಾರಪಾನೀಯ. ಇತರ ನಕಲಿ ಪಾನೀಯಗಳನ್ನು ತೊರೆಯಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್ಟಿನ್'

ವಿತರಣಾಕಾರರು:—
ಜೇಮ್ಸ್ ರೈಟ್ ಲಿಮಿಟೆಡ್,
147 ಬ್ರೊಡ್ವೇ ಮದ್ರಾಸು
ಮತ್ತು ಕಲ್ಕತ್ತಾ ಬೊಂಬಾಯಿ ಮತ್ತು ಕರಾಚಿ.

"ಓವಲ್ಟಿನ್" ರುಚಿಕರ, ಜೀರ್ಣಕರ, ಹಾಗೂ ಪೋಷಣಯುಕ್ತವಾದುವು. ಎಲ್ಲಾ ಕಾಲಕ್ಕೂ ಉತ್ತಮವಾದುದು, ಇದರಲ್ಲಿ ಮಹತ್ವದ ಬೆಲೆಯು 'ಓವಲ್ಟಿನ್' ಸೇರಿರುವುದು.
4 ಔನ್ಸು 8 ಔನ್ಸುಗಳ ಪೇಕೇಟುಗಳಲ್ಲಿಯೂ ಒಂದು ರಾತ್ಲಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/38/39

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

19–4–1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೯—೪—೧೯೪೦

ಕಾಂಗ್ರೆಸ್ ಮಂತ್ರಿಗಳನ್ನು ಜೆಟ್ಲೆಂಡರು ಹೊಗಳಿದರು!

ಒಡ್ವಾಯರರ ಕೊಲೆಯ ಕಾಲದಲ್ಲಿ

ಜೆಟ್ಲೆಂಡರು

ಲಂಡನಿನ ಕೇಸ್ಟನ್ ಹಾಲಿನಲ್ಲಿ ಒಡ್ವಾಯರರನ್ನು ಕೊಂದ ಘಟನೆಯ ವಿಷಯದ ಕಥೆಗಳು ಈಗ ಒಂದೊಂದಾಗಿ ಹೊರಬೀಳುತ್ತವೆ. ಆ ದಿನದ ಸಭೆಯಲ್ಲಿ ಲಂಡನಿನ ಕೆಲವು ಮುಖಂಡರು ಭಾರತದ ರಾಜಕೀಯದ ಕುರಿತು ಮಾತನಾಡಿದರಂತೆ. ಲಾರ್ಡ್ ಜೆಟ್ಲೆಂಡರು ಗಡಿನಾಡಿನಲ್ಲಿ ಕಾಂಗ್ರೆಸ್ ಪಕ್ಷದಿಂದ ಅಧಿಕಾರ ವಹಿಸಿ ಪ್ರಧಾನ ಮಂತ್ರಿ ಪದವಿಯಲ್ಲಿದ್ದ ಡಾಕ್ಟರ್ ಖಾನ್ ಸಾಹೇಬರ ನಿಪುಣ ಆಡಳಿತವನ್ನು ಬಹಳ ಪ್ರಶಂಸಿಸಿದರಂತೆ!

ಆ ದಿನದ ಸಭೆಯಲ್ಲಿ ಮಾತನಾಡಿದ ವಿಷಯವು ಅಫಗಾನಿಸ್ಥಾನ ಮತ್ತು ಅದರ ಇಂದಿನ ಪರಿಸ್ಥಿತಿಯೆಂದಾಗಿತ್ತಾದರೂ, ಅದರಲ್ಲಿ ಡಾಕ್ಟರ್ ಖಾನ್ ಸಾಹೇಬ್ ಮತ್ತು ಅವರ ಸಹೋದರ ಖಾನ್ ಅಬ್ದುಲ್‌ಗಫರ್ ಖಾನ್ ಇವರ ಗಡಿನಾಡಿನ ಚಟುವಟಿಕೆಗಳ ಮೇಲೆ ಅನೇಕ ಟೀಕೆ ಟಿಪ್ಪಣಿಗಳು ಬಂದಿದ್ದುವಂತೆ!

ಅಂದಿನ ಚರ್ಚೆಯಲ್ಲಿ ಸರ್ ಒಡ್ವಾಯರು ಮತ್ತು ಸರ್ ಲುಯಿಸ ಡೇನರು ಹೆಚ್ಚು ಪ್ರಧಾನ ಭಾಗವಹಿಸಿದ್ದರಂತೆ!

ಆ ದಿನದ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜೆಟ್ಲೆಂಡರು ಗಡಿನಾಡಿನ

ರಾಷ್ಟ್ರಪತಿಗಳ ಸಂಬಂಧಿಕನೆ?

ಪ್ರಧಾನ ಮಂತ್ರಿ ಪದವಿಯಲ್ಲಿದ್ದ ಡಾ। ಖಾನ್ ಸಾಹೇಬರ ಆಡಳಿತದ ಸಾಮರ್ಥ್ಯವನ್ನು ಪ[illegible]ದಿಂದ ಹೊಗಳಿದರಂತೆ!

ಸಂಕಷ್ಟ ಪಟ್ಟರೆ?

ಸರ್ ಪರ್ಸಿ ಸ್ಕ್ಯಾನರರ ಮಾತನಾಡುತ್ತಾ ಗಡಿನಾಡಿನ [illegible] ಚಳವಳದ ವಿಷಯವನ್ನು ವಿವರಿಸಿ, ಅದರ ಮುಖ್ಯ ಮುಖಂಡ ಖಾನ್ ಸಹೋದರರನ್ನು ಟೀಕಿಸಿ ಅವರು ಕಾಂಗ್ರೆಸನ್ನು ಸೇರಿದ ಮೇಲೆ ಬ್ರಿಟಿಷ್ ಸರಕಾರದ ವಿರೋಧಿಗಳಾದರೆಂದೂ ಆದರೆ ಕಾಂಗ್ರೆಸಿನ ಪರವಾಗಿ ಪ್ರಧಾನ ಮಂತ್ರಿಯಾದ ಡಾ। ಖಾನ್ ಸಾಹೇಬರ ಕಾಲದಲ್ಲಿ ಯಾವ [illegible] ಶತ್ರುಗಳೊಂದಿಗೆ ಹೋರಾಡುವುದಕ್ಕೆ ಬ್ರಿಟಿಷ್ ಅಧಿಕಾರಿಗಳ ಕೂಡಿ ನಡೆಯುವ ಸಂದರ್ಭ ಬಂದುದಕ್ಕಾಗಿ ಅಂತಹ ಅಧಿಕಾರಿಗಳ ಸಂಕಷ್ಟದ ಸಂಭವಕ್ಕಾಗಿ ಬಹಳ ಸಹಾನುಭೂತಿ ಪಡತಕ್ಕದು ಎಂದರಂತೆ!

ಚಲೋ ಮನುಷ್ಯ!

ಅಂದಿನ ಚರ್ಚೆಯ ಕಾಲದಲ್ಲಿ ಜೆಟ್ಲೆಂಡರು ಹೀಗೆಂದರಂತೆ!

"ನಾನು ಡಾ। ಖಾನ್ ಸಾಹೇಬರ ಪರವಾಗಿ ಒಂದು ಮಾತು ಹೇಳತಕ್ಕದ್ದಿದೆ ಇತ್ತೀಚೆಗೆ ನಾನು ಅವರ ಪರಿಚಯ ಮಾಡಿಕೊಂಡಿದ್ದೇನೆ ಅವರು ಹಿಂದೊಮ್ಮೆ ಸೈನ್ಯದಲ್ಲಿ ವೈದ್ಯಕೀಯ ಉದ್ಯೋಗಿಗಳಾಗಿದ್ದರು. ಆ ಮೇಲೆ ಇತ್ತೀಚೆಗೆ ಗಡಿನಾಡಿನ ಪ್ರಧಾನ ಮಂತ್ರಿಗಳಾಗಿದ್ದರು. ತಾನು ಪ್ರಧಾನ ಮಂತ್ರಿಯಾಗಿದ್ದಾಗ ತನ್ನ ಕಾರ್ಯಭಾಗಗಳನ್ನು ಒಬ್ಬ ಚಲೋ ಮನುಷ್ಯನಂತೆ ಅವರು ಅಚ್ಚುಕಟ್ಟಾಗಿ ನೆರವೇರಿಸಿದರು. ವಿಶ್ವದ ಮಾನವ ಸಂತತಿಯ ಪರಿಚಯವಿರುವ ಒಬ್ಬ ಪ್ರಭಾವಶಾಲಿಯು ಅವರಾಗಿದ್ದಾರೆ" ಹೀಗೆಂದಂತೆ ಜೆಟ್ಲೆಂಡರು!

ಒಟ್ಟು ಎಲ್ಲರೂ ಕೂಡಿ ತಮತಮಗೆ ಇಷ್ಟ ಬಂದಂತೆ, ಭಾರತದ ರಾಜಕೀಯ

ಭಾರತವು ಸ್ವತಂತ್ರವಾಗಿದೆ!

ವನ್ನು ಕುರಿತು ಅಲ್ಲಿ ಚರ್ಚಿಸಿ ಟೀಕಿಸಿ ಮಾತನಾಡುತ್ತಿದ್ದರು ಎಂಬುದು ಸತ್ಯವು

ಭಾರತವು ಸ್ವತಂತ್ರವಾಗಿದೆ
ಸಿಲೋನಿನ ಮುಖಂಡರ ಹೇಳಿಕೆ

ರಾಮಗಢ ಕಾಂಗ್ರೆಸಿಗೆ ಬಂದಿದ್ದ ಸಿಲೋನಿನ ಮುಖಂಡರಾದ ಎಂ. ಜೆ. ಆರ್. ಜಯವರ್ಧನೆಯವರು ತಮ್ಮ ಈ ಬಗೆಗೆ ಕುರಿತು ಬರೆಯುತ್ತಾ ಭಾರತವು ಈಗಲೇ ಸ್ವಾತಂತ್ರ್ಯದ ನೋಟದ ಭಾರವನ್ನು ಕಿತ್ತುಗೆದು ಸ್ವತಂತ್ರವಾಗಿದೆಯೆಂದು ಹೇಳಿರುವರು.

ಅವರು ಹೇಳಿದ ವಿಷಯಗಳು ಹೀಗಿವೆ — ಮೊದಲನೆಯದಾಗಿ ಭಾರ

ಮೌಲಾನರ ಸಂಬಂಧಿಕರೇ?

ಒಡ್ವಾಯರನ್ನು ಗುಂಡಿಕ್ಕಿ ಕೊಂದವರು ತಮ್ಮ ಹೆಸರನ್ನು ಮಹಮ್ಮದ್ ಸಿಂಗ್ ಆಜಾದ್ ಎಂದು ಹೇಳಿಕೊಂಡಿರುವುದರಿಂದ ಅವರು ಭಾರತದ ಇಂದಿನ ರಾಷ್ಟ್ರಪತಿಗಳಾದ ಮೌಲಾನಾ ಅಬುಲ್ ಕಲಮ್ ಆಜಾದರಿಗೆ ಸಂಬಂಧಿಕರಾಗಿರುವರೇ ಎಂಬ ವಿಷಯವಾಗಿ ಅಮೇರಿಕದವರಿಗೆ ಒಂದು ಕುತೂಹಲ ಹುಟ್ಟಿರುವುದು.

ಈ ಕುರಿತು ಅವರು ತಮ್ಮ ಸಂಶಯ ನಿವೃತ್ತಿಗಾಗಿ ಲಂಡನಿನಲ್ಲಿರುವ 'ಇಂಡಿಯನ್ ಲೀಗ್' ಸಂಸ್ಥೆಗೆ ಬರೆದು ಕೊಂಡರು! ಆ ಸಂಸ್ಥೆಯವರು ಆ ಮನುಷ್ಯರಿಗೂ ರಾಷ್ಟ್ರಪತಿ ಆಜಾದರಿಗೂ ಏನೇನೂ ಸಂಬಂಧವಿಲ್ಲವೆಂದು ತಿಳಿಸಿದರೂ, ಅಮೇರಿಕನರ ಸಂಶಯವು ಇನ್ನೂ ನಿವೃತ್ತಿ ಹೊಂದಲಿಲ್ಲವೆಂದು 'ನ್ಯೂಕ್ ನಲ್ ಹೆರಾಲ್ಡ್' ಪತ್ರಿಕೆಯ ಲಂಡನ್ ಪ್ರತಿನಿಧಿಗಳು ಬರೆದಿರುತ್ತಾರೆ

ತವು ಇಂದು ಐಕ್ಯವಾಗಿದೆ ಅವರಿಗೆ ಬ್ರಿಟಿಷರ ಸಂಬಂಧದಿಂದ ವಿಮುಕ್ತಿ ಹೊಂದುವ ಸಂಪೂರ್ಣ ಸ್ವರಾಜ್ಯವೇ ಬೇಕಾಗಿದೆ ಎರಡನೆಯದಾಗಿ ಮಹಾತ್ಮ ಗಾಂಧಿಜಿಯವರೇ ಇಂದು ಭಾರತದ ಏಕೈಕ ಲೋಕನಾಯಕರಾಗಿದ್ದಾರೆ.

ಹಲವು ಪಕ್ಷಗಳು ಅಲ್ಲಿ ಇದ್ದರೂ ಎಲ್ಲವೂ ಸ್ವಾತಂತ್ರ್ಯಕ್ಕಾಗಿಯೇ ಹೋರಾಡುವವುಗಳು ಸುಭಾಸ ಬೋಸರು ಗಾಂಧಿಜಿಯವರ ವಿರೋಧಿ

ಡಾ। ಖಾನ್ ಸಾಹೇಬ್

ಗಳಲ್ಲ ಭಾರತದ ಪಾರತಂತ್ರ್ಯವನ್ನು ಕೊನಗಾಣಿಸಲು ಅವನ್ನು ಬೇಗನೇ ಗಾಂಧಿಜಿಯವರ ಆಂದೋಲನವನ್ನು ಆರಂಭಿಸಬೇಕೆಂದು ವಾದಿಸುವವರು ಮಾತ್ರ ಅವರು ಹೆಚ್ಚಾಗಿ ಕೃಷಿಕರ ಮುಖಂಡರಾಗಿದ್ದಾರೆ.

ಭಾರತವು ತನ್ನ ಆಂದೋಲನವನ್ನು ಶೀಘ್ರವೇ ಆರಂಭಿಸುವುದೆಂಬ ವಿಷಯದಲ್ಲಿ ಯಾತರ ಸಂದೇಹವೂ ಇರುವುದಿಲ್ಲ ಆ ಹೋರಾಟದೊಡನೆ ಭಾರತವೂ ಸ್ವತಂತ್ರವಾಗಿಯೇ ತೀರುವುದು ಇದರಲ್ಲಿ ಯಾರೂ ಸಂಶಯಗೊಳ್ಳುವುದು ಬೇಡ ಅವರು ತಾವು ಮಾಡಿದ ನೂಲಿನಿಂದಲೇ ಬಟ್ಟೆಗಳನ್ನು ತಯಾರಿಸಿ ಉಡಲು ತಿಳಿದಿದ್ದಾರೆ. ತಮ್ಮ ದೇಶದ ವಸ್ತುಗಳನ್ನೇ ಉಪಯೋಗಿಸುತ್ತಿದ್ದಾರೆ. ರಾಜಕೀಯ ವಿಚಾರಗಳಲ್ಲಿ ಹೆಂಗುಸರೂ ಗಂಡುಸರೂ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಭಾರತವು ತನ್ನ ಧೀರ ಪೂರ್ಣಗತಿಯಿಂದ ನಿಶ್ಚಿತ ಮಾರ್ಗದಲ್ಲಿ ಮುಂದುವರಿಯುವುದರಲ್ಲಿ ಯಾವ ಸಂದೇಹವೂ ಇಲ್ಲ' ಹೀಗೆಂದು ಅವರ ಅಭಿಪ್ರಾಯವಾಗಿದೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಸ್ವದೇಶಾಭಿಮಾನಿ

ತಾರೀಕು 19—4—1940

ದುರ್ಬಲ ತಟಸ್ಥ ರಾಷ್ಟ್ರಗಳು

ಅಮೇರಿಕದ ಅಧ್ಯಕ್ಷರಾದ ರೂಸ್ ವೆಲ್ಟರು ಕಳೆದವರ್ಷ ಎಪ್ರಿಲ್ ತಿಂಗಳಲ್ಲಿ ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ತಟಸ್ಥರಾಷ್ಟ್ರಗಳ ಮೇಲೆ ಜರ್ಮನಿಯು ದಾಳಿಮಾಡಬಾರದಾಗಿ ಕೇಳಿಕೊಂಡಿದ್ದರು. ಅದಕ್ಕೆ ಹಿಟ್ಲರನು ತನ್ನ ಸಮ್ಮತಿಯನ್ನೂ ಸೂಚಿಸಿದ್ದನು. ಅಂತಹ ರಾಷ್ಟ್ರಗಳಲ್ಲಿ ಇಂದು ಜರ್ಮನಿಯ ಗದಾ ಪ್ರಹಾರಕ್ಕೆ ಗುರಿಯಾದ ನಾರ್ವೆ ಸ್ವೀಡನುಗಳೂ ಇದ್ದವು. ಜರ್ಮನಿಯು ಆಗ ಆ ರಾಷ್ಟ್ರಗಳೊಳಗೆ ಪರಸ್ಪರ ಸಹಾಯಕ ಒಪ್ಪಂದವನ್ನು ಮಾಡಿಕೊಳ್ಳಲೂ ಬಯಸಿತ್ತು. ಆದರೆ ನಾರ್ವೆ ಸ್ವೀಡನುಗಳು ಅಂತಹ ಒಪ್ಪಂದವು ಅವಶ್ಯವಿಲ್ಲವೆಂದು ನಿರಾಕರಿಸಿದರೂ, ಡೆನ್ಮಾರ್ಕು ಒಪ್ಪಂದಕ್ಕೆ ಸಹಿಹಾಕಿಕೊಂಡಿತು.

ಆದರೆ ಒಂದೇ ವರ್ಷದೊಳಗೆ ಡೆನ್ಮಾರ್ಕಿನ ಮೇಲೆ ಜರ್ಮನಿಯು ಆಕ್ರಮಿಸಿ ಬಂತು! ಸ್ವಾತಂತ್ರ್ಯಕ್ಕಾಗಿ ಹೋರಾಡಲೂ ಡೆನ್ಮಾರ್ಕಿಗೆ ಸಮಯ ಸಿಗದೆ, ರಕ್ತಪಾತವಿಲ್ಲದೆನೇ ಜರ್ಮನಿಯು ಡೆನ್ಮಾರ್ಕಿನ ಸ್ವಾತಂತ್ರ್ಯವನ್ನು ಮುರಿದು ಹಾಕಿತು. ಅತಂತ್ರವಾದ ಡೆನ್ಮಾರ್ಕು ಜರ್ಮನಿಯು ಹೇಳಿದಂತೆ ಈಗ ಕೇಳಬೇಕಾಗಿಬಂದಿದೆ.

ಆದರೆ, ನಾರ್ವೆಯು ಇಂದು ಎದುರಿಸುತ್ತಿದೆ. ಸ್ವಾತಂತ್ರ್ಯವನ್ನುಳಿಸಲು ಕಾದಾಡುತ್ತಿದೆ. ಮಿತ್ರರಾಷ್ಟ್ರಗಳು ಇಂದು ತಮ್ಮ ಸಂಪೂರ್ಣ ಬೆಂಬಲವನ್ನು ತಕ್ಕ ಕಾಲದಲ್ಲಿ ಕೊಟ್ಟು ಕಳುಹಿಸಿದ್ದಾರೆ. ಆದುದರಿಂದ ಯುದ್ಧವು ಇಂದು ಭೀಕರತೆಗೆ ಸಾಗಿದೆ.

ಹೇಗಿದ್ದರೂ, ಇಂದು ಈ ಅವಸ್ಥೆಯಲ್ಲಿ ದುರ್ಬಲ ರಾಷ್ಟ್ರಗಳು ಸಬಲ ರಾಷ್ಟ್ರಗಳ ತುತ್ತಾಗುತ್ತಿರುವುದು ಶೋಚನಿಯ ವಿಷಯವಾಗಿದೆ. ಸಣ್ಣ ಸಣ್ಣ ರಾಷ್ಟ್ರಗಳಾದರೂ ತಮ್ಮ ತಮ್ಮೊಳಗೆ ಐಕ್ಯವನ್ನು ಸಾಧಿಸಿಕೊಂಡು ಎದುರಾಡಲು ಮೊದಲೇ ಸಿದ್ಧತೆಯನ್ನು ಮಾಡಿಕೊಂಡಿದ್ದರೆ, ಇಂದು ಈ ರೀತಿಯಿಂದ ಕರುಣಾಜನಕವಾಗಿ ಅವುಗಳ ಸ್ವಾತಂತ್ರ್ಯಾಪಹರಣ ಕಾರ್ಯವು ನಡೆಯುತ್ತಿರಲಿಲ್ಲ.

ಇಂದು ಹಾಲೆಂಡ್ ಬೆಲ್ಜಿಯಮುಗಳು ಬೆದರಿಕೆಯಿಂದ ನಡುಗುತ್ತಿವೆ. ಬ್ರಿಟನು ಇವುಗಳ ಮೂಲಕ ದಾಳಿ ನಡೆಸುವುದೆಂದು ಕೆಲವರು ಸುದ್ದಿ ಹರಡಿಸಿರುವರು. ಜರ್ಮನಿಯು ಹಾಗೆಂದು ಆ ಕಡೆ ಕೆರಳಿ ನಿಂತಿದೆಯಂತೆ! ಆ ರಾಷ್ಟ್ರಗಳಾದರೂ ತಮ್ಮ ಸಿದ್ಧತೆಯನ್ನು ಸಂಪೂರ್ಣ ಸಾಧಿಸಿಕೊಳ್ಳದಿದ್ದರೆ, ಸ್ವಾತಂತ್ರ್ಯಾಪಹರಣವು ಅನಿರೀಕ್ಷಿತವಾಗಲಾರದು!

ಈ ತಟಸ್ಥ ರಾಷ್ಟ್ರಗಳು ದುರ್ಬಲವಾಗಿರುವುದರಿಂದ ಮಾತ್ರ ಇಂದು ಪ್ರಬಲರಾಷ್ಟ್ರಗಳು ಅವುಗಳನ್ನು ನೀರ್ಕುಡಿಸಲು ನೋಡುತ್ತವೆ!

ಪ್ರಬಲ ತಟಸ್ಥ ರಾಷ್ಟ್ರಗಳು

ಇಂದಿನ ಲೋಕ ಯುದ್ಧವು ಯಾರನ್ನೂ ಸುಮ್ಮಗಿರಲು ಬಿಡುವುದಿಲ್ಲ. ದುರ್ಬಲ ತಟಸ್ಥ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದು ಕೊಳ್ಳುತ್ತಿವೆ. ಅವುಗಳು ತಮ್ಮ ರಕ್ಷಣೆಯ ಕಾರ್ಯಕ್ಕಾಗಿಯೇ ಕಷ್ಟಪಟ್ಟು ಹೋರಾಡಬೇಕಾಗಿದೆ. ಆದರೆ ಪ್ರಬಲ ತಟಸ್ಥರಾಷ್ಟ್ರಗಳಾದ ಅಮೇರಿಕ, ಇಟಲಿ, ಜಪಾನುಗಳ ಪರಿಸ್ಥಿತಿಯು ಬೇರೆ ವಿಧವಾಗಿದೆ. ಅವುಗಳು ಇಂದಿನ ಸಮರವನ್ನು ತೀರಾ ಮಾರ್ಪಾಟು ಮಾಡುವಷ್ಟು ಸಮರ್ಥವಾಗಿವೆ. ಆದಕಾರಣ, ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುವ ಇಂದಿನ ಲೋಕಯುದ್ಧದಲ್ಲಿ ಈ ಪ್ರಬಲ ತಟಸ್ಥ ರಾಷ್ಟ್ರಗಳೂ ರಣರಂಗದಲ್ಲಿ ಭಾಗವಹಿಸುವ ಕಾರ್ಯದ ಕುರಿತು ಹೆಚ್ಚು ಹೆಚ್ಚಿನ ಸ್ಪಷ್ಟ ಅಭಿಪ್ರಾಯವು ಈಗ ಹರಡುತ್ತಿದೆ.

ಅಮೇರಿಕವು, ಯೂರೋಪಿನ ಯುದ್ಧದಲ್ಲಿ ತಾನು ಸೇರದೆ, ತನ್ನ ತಾಟಸ್ಥ್ಯಕ್ಕೆ ಯಾವ ಕುಂದೂ ಬಾರದೆ ಇರಬೇಕೆಂದೇ ಹಿಂದಿನಂತೆ ಇಂದೂ ಸಾಧ್ಯವಾದಷ್ಟು ಯತ್ನಿಸುತ್ತಿದೆ. ಮಾತ್ರವಲ್ಲದೆ, ಇಂದಿನ ಯುದ್ಧಕಾರಣವಾದ ಸರ್ವಾಧಿಕಾರಿಗಳ ಧೋರಣೆಯನ್ನು ಅಮೇರಿಕವು ಅಂಧಿನಿಂದ ಇಂದಿನ ವರೆಗೆ ನಿಷೇಧಿಸುತ್ತಾ ಬಂದಿದೆ. ಈ ಸಂದರ್ಭದಲ್ಲಿ ಅಮೇರಿಕ ಅಧ್ಯಕ್ಷರಾದ ರೂಸ್ ವೆಲ್ಟರು ಈಗ ಕೊಟ್ಟಿರುವ ಭಾಷಣವೊಂದು ಅಮೇರಿಕದ ನೀತಿಯನ್ನು ಸ್ಪಷ್ಟಪಡಿಸಿದೆ. ತನ್ನ ವ್ಯಾಪಾರ ಕ್ಷೇತ್ರದಲ್ಲಿ ಹಾಗೂ ತನ್ನ ಕಾರ್ಯಕ್ಷೇತ್ರದಲ್ಲಿ ಅನ್ಯರು ಆಕ್ರಮಿಸಿ ಬರುವುದನ್ನು ಅಮೇರಿಕವು ಸಹಿಸದು. ಮತ್ತು ಅಂತಹ ಸಮಯದಲ್ಲಿ ತಾಟಸ್ಥ್ಯವನ್ನು ಕೊನೆಗಾಣಿಸುವುದೆಂದು ತಿಳಿಯಬಹುದಾಗಿದೆ.

ಇಟಲಿಯು ಈಗ ಜಗತ್ತಿನ ದೃಷ್ಟಿಪಥಕ್ಕೆ ಬಿದ್ದಿದೆ. ಇಂದು ಬರುವ ವಾರ್ತೆಯನ್ನು ವಿಚಾರಿಸಿದರೆ ಇಟಲಿಯು ಜರ್ಮನಿಗೆ ಅನುಕೂಲ ಧೋರಣೆಯಿಂದ ಮುಂದುವರಿವ ಮನಸ್ಸು ಮಾಡಿದಂತೆ ಕಂಡು ಬರುತ್ತದೆ. ಸೀನಿಯರ್ ಗಯಾಡನು ಫ್ರೆಂಚರ ವಿರುದ್ಧವಾಗಿ ಮಾತನಾಡಿರುವನು. ಇಟಲಿಯ ಯುದ್ಧಹಡಗುಗಳು ಭೂಮಧ್ಯ ಸಮುದ್ರಕ್ಕಿಳಿದಿವೆ. ಇಷ್ಟರಿಂದಲೇ ಇಟಲಿಯ ಚಲನವಲನಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಇಟಲಿಯ ವಿಷಯದಲ್ಲಿ ಯುದ್ಧಕಾರ್ಯಕ್ರಮವನ್ನು ಕೈಕೊಳ್ಳಬೇಕೆಂಬ ವಿಷಯವಾಗಿ ಮಿತ್ರರಾಷ್ಟ್ರಗಳು ವಿಚಾರಮಗ್ನವಾಗುವ ಕಾಲ ಬಂದಿದೆ.

ಸತ್ಯಾಗ್ರಹ ಸಿದ್ಧತೆ

ಕಾಂಗ್ರೆಸು ಮುಂಬರಲಿರುವ ಹೋರಾಟಕ್ಕೆ, ಸತ್ಯಾಗ್ರಹಕ್ಕೆ, ಸಿದ್ಧತೆ ಮಾಡುತ್ತಿರುವುದೆಂಬ ವಿಷಯವು ಇತ್ತೀಚೆಗೆ ಹೊರಡಿಸಿದ ಧುರೀಣರ ಪ್ರಕಟಣೆಗಳಿಂದ ವ್ಯಕ್ತವಾಗುತ್ತಿದೆ. ಮೊನ್ನೆ ವರ್ಧಾದಲ್ಲಿ ಸೇರಿದ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಭಾರತದ ರಾಜಕೀಯ ವಿಚಾರಗಳನ್ನು ಸುದೀರ್ಘವಾಗಿ ವಿಚಾರಿಸಲಾಯಿತು. ಧುರೀಣರು, ಇಂದು ರಾಷ್ಟ್ರವು ಆಂದೋಲನವನ್ನು ಹೂಡಲು ಸಂಪೂರ್ಣಸಿದ್ಧವಾಗಿದೆಯೆಂಬ ಅಭಿಪ್ರಾಯಕ್ಕೆ ಬಂದಿರುವರಾದರೂ, ಗಾಂಧಿಜಿಯವರು ಹಾಕಿಕೊಟ್ಟ ಸೂಚನೆಗಳಂತೆ ಇನ್ನು ಕೆಲಕಾಲಗಳವರೆಗೆ ಸತ್ಯಾಗ್ರಹ ಸಿದ್ಧತೆಗಳನ್ನು ಪಾಲಿಡರುವರೆಂದು ಕಂಡುಬರುತ್ತದೆ. ಈ ಸಲದ ಹೋರಾಟವು ಕೊನೆಯ ಹೋರಾಟವಾಗಬೇಕು; ಭಾರತೀಯರ ಬಹುಕಾಲದ ದಿವ್ಯ ಸ್ವಪ್ನವಾದ ಸ್ವರಾಜ್ಯವು ದೊರೆಕಬೇಕೆಂಬ ದೃಢಸಿಶ್ಚಯದಿಂದ ಇಂದು ಕಾಂಗ್ರೆಸಿನ ಧುರೀಣರು ರಾಷ್ಟ್ರವನ್ನು ಮುಂದಿನ ಅಗ್ನಿ ಪರೀಕ್ಷೆಯಲ್ಲಿ ಜಯಶಾಲಿಯಾಗುವಂತೆ ತರಬೇತಿ ಮಾಡುತ್ತಿದ್ದಾರೆ.

ಸ್ಥಳೀಕ ಸಂಸ್ಥೆಗಳಲ್ಲಿರುವ ಕಾಂಗ್ರೆಸಿನ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟು, ಹೊರಬರಬೇಕೆಂದೂ, ಇಂದಿನ ಈ ಸಂದಿಗ್ಧಕಾಲದಲ್ಲಿ ಪ್ರತಿಯೊಬ್ಬ ಕಾಂಗ್ರೆಸು ಕಾರ್ಯಕರ್ತನೂ ಮುಂದಿನ ಹೋರಾಟದ ವಿಷಯವಾಗಿ ಆಲೋಚಿಸುವುದೇ ಅತಿ ಅವಶ್ಯವೆಂದೂ, ಹಾಗೆ ಮಾಡದೆ ಸ್ಥಳೀಕ ಸಂಸ್ಥೆಗಳ ಆಡಳಿತೆಯಲ್ಲಿ ಸಮಯ ಕಳೆಯುವ ಸಮಯವಿದಲ್ಲವೆಂದೂ ರಾಷ್ಟ್ರಪತಿಗಳು ಆ ಸದಸ್ಯರು ರಾಜಿನಾಮೆ ಕೊಡಬೇಕಾಗಿ ಬರಬಹುದೆಂದುಸೂಚಿಸಿ ಒಂದುಪ್ರಕಟಣೆ ಹೊರಡಿಸಿದ್ದರು. ಇದು ವರ್ಕಿಂಗ್ ಕಮಿಟಿಯ ಸಭೆಯಲ್ಲಿ ನಿರ್ಣಯವಾಗಲಿದೆ. ಹೇಗಿದ್ದರೂ ಇಂದಿನ ಈ ಕಾಲದಲ್ಲಿ ಸ್ಥಳೀಕ ಸಂಸ್ಥೆಗಳಲ್ಲಿರುವ ಪ್ರತಿಯೊಬ್ಬ ಸದಸ್ಯನೂ ಮುಂದಿನ ಹೋರಾಟದ ವಿಷಯ ತೀವ್ರ ಯೋಚನೆ ಮಾಡದೆ ಇರಲು ಸಾಧ್ಯವೇ ಇಲ್ಲ.

ಕಾಂಗ್ರೆಸಿನ ಇಂದಿನ ಧೋರಣೆ, ರಾಮಗರದ ನಿರ್ಣಯ, ಬ್ರಿಟಿಷ್ ಸಾಮ್ರಾಜ್ಯನೀತಿ ಇವುಗಳನ್ನು ದೇಶದ ಹಳ್ಳಿಹಳ್ಳಿಗಳಿಗೂ ಹೋಗಿ ಸಾರಿ ತಿಳಿಸಬೇಕೆಂದು ಕಾಂಗ್ರೆಸು ಪ್ರಕಟಿಸಿದೆ. ಹೋರಾಟಕ್ಕಿಳಿವ ಮೊದಲು ಜನತೆಗೆ ಕಾಂಗ್ರೆಸಿನ ಸಂದೇಶಗಳನ್ನು ಪುನ: ಹೀಗೆ ಸಾರೋದ್ಧಾರವಾಗಿ ನಿವೇದಿಸುವ ಕಾರ್ಯವು ಭರದಿಂದ ಆಗಬೇಕಾಗಿದೆ.

ಕನ್ನಡನಾಡ ಬಾಂಧವರೆಲ್ಲರಲ್ಲಿ
ಸಮ್ಮೇಳನಾಧ್ಯಕ್ಷರ
ಹೊಸ ವರ್ಷದ ಹೊಸ ಹರಿಕೆ

ಹೊಸಗಾಲ ಬಂದುದಿದ್ದೊ! ಹಸನಾಗಿ ದುಡಿದೆಮ್ಮ
ಹೊಸನಾಡ ಕಟ್ಟಲಿಕೆ ಹುರುಪು ಕೊಡಲು!!
ಹೊಸ ಉಸಿರು, ಹೊಸ ಒಗರು, ಹೊಸ ರೀತಿ ನೀತಿಗಳ
ಬಿಸರಗಳನಳವಡಿಸಿ ಮುನ್ನಡೆಯಲು.
"ವಿಕ್ರಮ"ದ ಪಟು ಸನಂದರಬಂದಿತು, ನಮ್ಮ
ವಿಕ್ರಮವನೋಡೆ ಬಂದಿಹುದೆಂಬೆನ್ನೊ!
"ವಿಕ್ರಮ ಚಲುಕ್ಯ"ನ ಪರಾಕ್ರಮವ ನೆನೆದು ತ್ರಿ
ವಿಕ್ರಮನೊಲೇಳುವರೆ ಕನ್ನಡಿಗರು?
ನುಡಿ ನೊದಲು ಸಾಹಿತ್ಯ, ನಡೆಮೊದಲು ಚಾರಿತ್ರ್ಯ
ದೊಡನೆಸ್ಸ ಕನ್ನಡಿಗರೊಗ್ಗೂಟವು!!
ಎಡೆತಡೆಗಳನು ಮೆಟ್ಟಿ, ಉಡುಗಣದ ನೆಲೆಮುಟ್ಟಿ
ಒಡಗೂಡಲೆಂದೆನ್ನ ಬರಹರಿಕೆಯು.

ಮುಳಿಯ ತಿಮ್ಮಪ್ಪಯ್ಯ [illegible]

ಜಪಾನು ರಶ್ಯಾ ಜರ್ಮನ್ ಗಳೊಂದಿಗೆ ಜಗತ್ತನ್ನು ಹಂಚಿಕೊಳ್ಳುವ ಯೋಜನೆಯನ್ನು ಮಾಡಿಕೊಂಡಿದ್ದರೂ ಅದರ ಯತ್ನಗಳು ಯಶಸ್ವಿಯಾಗಿಲ್ಲ. ಹಾಗಾಗಿ ರಶ್ಯಾ ಜರ್ಮನ್ ಸಂಬಂಧವನ್ನು ಬೆಳೆಸಿಕೊಳ್ಳುವ ಮಹತ್ವಾಕಾಂಕ್ಷೆಯು ಜಪಾನಿಗೆ ಅತಿಶಯವಾಗಿರಬಹುದೆಂದು ನಂಬಲಾಗವುದಿಲ್ಲ. ಅದು ಯೂರೋಪಿನ ಯುದ್ಧದ ಮಟ್ಟಿಗೆ ಇನ್ನೂ ಕೂಡ ತಾಟಸ್ಥ್ಯವನ್ನೇ ಇಟ್ಟುಕೊಳ್ಳಲು ಪ್ರಯತ್ನ ಮಾಡಬಹುದು. ಜಪಾನು ಪತ್ರಿಕೆಗಳು ಸರ್ವಾಧಿಕಾರಿಗಳ ಇಂದಿನ ಧೋರಣೆಯನ್ನು ಖಂಡಿಸುವುದನ್ನು ನೋಡಿದರೆ ಜಪಾನು ಬ್ರಿಟನಿನೊಡನೆ ಮೈತ್ರಿಯನ್ನು ಮಾಡುವ ಸೂಚನೆಯೂ ತೋರಿಬರುವುದು. ಏನಿದ್ದರೂ, ಇಂದು ಘಟನೆಗಳು ಆಗುತ್ತಿರುವಂತೆ ಮುಂದುವರಿಯುತ್ತಿದ್ದರೆ ಈ ಪ್ರಬಲ ತಾಟಸ್ಥ್ಯಗಳು ಎಲ್ಲವೂ ಸಮರರಂಗಕ್ಕೆ ಯಾವುದಾದರೊಂದು ಕಾರಣದಿಂದ ಇಳಿಯಲೇ ಬೇಕಾಗಬಹುದು.

ಏಲಂ ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 496/1937
R. E. P. No. 456/39

ಯು. ನಾರಾಯಣ ರಾವ್. ಇವರ ಪವರ್ ಓಫ್ ಎಟರ್ನಿ ಹೋಲ್ಡರ್ ದಿವಾನ್ ಬಹದ್ದೂರ್ ಯು. ರಾಮರಾವ್, ಮಂಗಳೂರು ಟೌನ್ — ವಾದಿ. ಅರ್ಜಿದಾರ

ಮತ್ತು

(1) ಕೆ. ಉಕ್ಕಾರ ನಂಬಿಯಾರ (2) ಕುಂಞಕೋಮ ನಂಬಿಯಾರ, ಕೋಸೋತ್ತ ಪತ್ತಾಯ ಪೊರೆಯಿಲ್ ಚಾತು ನಂಬಿಯಾರ ಅಳಿಯಂದಿರು, ನೀಲೇಶ್ವರ ಗ್ರಾಮ ಪಳ್ಳಿಕೆರೆ ಎಂಬಲ್ಲಿರುವವರು—

ಪ್ರತಿವಾದಿರು. ರಿಸ್ಪೋಂಡೆಂಟರು

ಇವರೊಳಗೆ

ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಕಾಸರಗೋಡು ತಾಲೂಕು ಕೂಡ್ಲು ಗ್ರಾಮದಲ್ಲಿರುವ ಪ್ರತಿವಾದಿರ ಮೂಲಿ ಹಕ್ಕಿನ ಬಾಬ್ತು ಸ್ಥಿರ ಆಸ್ತಿಗಳನ್ನು ಅರ್ಜಿದಾರಗೆ ಬರತಕ್ಕ ಅವನ ಅಸಲು ರೂಪಾ 16,000 ಮತ್ತು ತಾ. 6—8—1936ರ ಲಾಗಾಯ್ತಿನ ಮುಂದಿನ ಬಡ್ಡಿ ಇವಜಿಗೆ ಒಳಪಡಿಸಿ ಅರ್ಜಿದಾರನು ರಿಸ್ಪೋಂಡೆಂಟರ ಮೇಲೆ ಪಡೆದ ಸದ್ರಿ ಡಿಕ್ರಿ ಸಾಲಕ್ಕೆ ತಾ. 22-7-1940ಕ್ಕೆ ಸದ್ರಿ ಕೋರ್ಟಿನಲ್ಲಿ ಏಲಂಗೆ ಇಟ್ಟಿರುವುದರಿಂದ ಸದ್ರಿ ಆಸ್ತಿಗಳು ಏಲಂಗೆ ನಿಲ್ಲುವದೆ ಅಪೇಕ್ಷೆ ಉಳ್ಳವರು ಆ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಏಲಂ ಕರಿಯತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ. ಅಗತ್ಯವಿರುವ ರಿಕಾರ್ಡುಗಳೂ ಏಲಂ ಇಸ್ತಿಹಾರು ನೋಡುವರೆ ಅಪೇಕ್ಷಿಸುವವರು ಕಾಸರಗೋಡು ಕಸಬೆಯಲ್ಲಿರುವ ಅರ್ಜಿದಾರ ಕಡೆ ಏಡೊ[illegible]ಕೇಟರ ಆಫೀಸಿನಲ್ಲಿ ಬಂದು ಕೇಳಿಪಲ್ಲಿ ತೋರಿಸಲಾದೀತು.

ಕಾಸರಗೋಡು, 15-4-40 — K. Vittal Nayak, Advocate for Pltf.

ವಿಭಜನಾಯೋಜನೆಯನ್ನು ಸರ್ವಶಕ್ತಿಯಿಂದ ವಿರೋಧಿಸುವೆನು!

ಗಾಂಧಿಜಿಯವರ ಹೇಳಿಕೆ

ಮುಸ್ಲಿಮರೇ ಒಪ್ಪಲಾರರು!

ಮುಸ್ಲಿಮರು ಭಾರತವನ್ನು ವಿಭಜನೆ ಮಾಡಲು ಹಠಹಿಡಿದರಾದರೆ ಅಹಿಂಸೆಯಲ್ಲಿ ವಿಶ್ವಾಸವುಳ್ಳವನಾಗಿ ನಾನು ಅದನ್ನು ಸಂಪೂರ್ಣ ಶಕ್ತಿಯಿಂದ ವಿರೋಧಿಸದಿರಲಾರೆನೆಂದೂ, ವಿಭಜನೆಗೆ ತಾನು ಎಂದೆಂದೂ ಸಹಕರಿಸೆನೆಂದೂ, ತನ್ನ ಸಂಪೂರ್ಣ ಅಹಿಂಸಾಪೂರ್ಣ ಯತ್ನಗಳನ್ನು ಅಂತಹ ವಿಭಜನೆಯ ಸೂಚನೆಯನ್ನು ಮುರಿಯಲು ಉಪಯೋಗಿಸುವೆನೆಂದೂ ಮಹಾತ್ಮಾ ಗಾಂಧಿಯವರು ಕಳೆದವಾರದ ಹರಿಜನದಲ್ಲಿ ಒಂದು ದೀರ್ಘವಾದ ಪ್ರಕಟಣೆಯನ್ನು ಕೊಟ್ಟಿರುವರು. ಅದರ ಸಾರಾಂಶವು ಹೀಗಿದೆ.

"ವಿಭಜನೆ ಮಾಡುವುದೆಂದರೆ, ಶತಮಾನಗಳಿಂದ ಹಲವು ಹಿಂದುಗಳು ಮತ್ತು ಮುಸ್ಲಿಮರು ಒಂದುಗೂಡಿ ಒಟ್ಟಿಗೆ ಜೀವಿಸಬೇಕೆಂದು ಮಾಡಿದ ಯತ್ನಗಳನ್ನೆಲ್ಲಾ ಮುರಿದು ಹಾಕುವುದಾಗಿದೆ. ಹಿಂದೂ ಮುಸ್ಲಿಮರು ಪಾಲುಮಾಡಿಕೊಳ್ಳಬೇಕೆಂಬುದು ನನಗೆ ಬಹಳ ದೊಡ್ಡ ಅಸತ್ಯವೆಂದು ಕಾಣುತ್ತದೆ. ಹಿಂದೂ ತತ್ವ ಮತ್ತು ಮುಸ್ಲಿಮ ತತ್ವಗಳು ಪ್ರತ್ಯೇಕ ಸಂಸ್ಕೃತಿಯ ಸೂಚನೆಗಳೆಂದು ಹೇಳುವುದನ್ನು ಕೇಳುವಾಗ ನನ್ನ ಸಂಪೂರ್ಣ ಆತ್ಮವೇ ಅದಕ್ಕೆ ವಿರುದ್ಧ ನಿಲ್ಲುತ್ತದೆ. ಹಾಗಿರುವ ತತ್ವಗಳಿಗೆ ಒಪ್ಪಿಕೊಳ್ಳುವುದೆಂದರೆ, ದೇವರಲ್ಲಿ ವಿಶ್ವಾಸವನ್ನು ಬಿಟ್ಟುಬಿಟ್ಟಂತೆಯೇ ಸರಿ. ನನ್ನ ದೃಢ ನಿಶ್ಚಯವೆಂದರೆ, ನಾವೆಲ್ಲರೂ ಕುರಾನಿನಲ್ಲಿ ಹೇಳಿದ ಮತ್ತು ಗೀತೆಯಲ್ಲಿ ಹೇಳಿದ ಆ

ಜೀವನವು ತೆರೆದಿಟ್ಟ ಪುಸ್ತಕ!

ಒಬ್ಬ ದೇವರ ಮಕ್ಕಳೇ ಆಗಿದ್ದೇವೆ. ನಿನ್ನೆ ತಾನೇ ಹಿಂದುಗಳಾಗಿದ್ದ ಮಿಲಿಯಾಂತರ ಹಿಂದುಗಳು ಇಂದು ಬೇರೆ ಮತವನ್ನು ಅಂಗೀಕರಿಸಿರಲು, ಈಗ ಅವರು ಬೇರೆ ಜನಾಂಗಕ್ಕೆ ಸೇರಿದವರೆಂದು ವಾದಿಸುವ ವಿಷಯವನ್ನು ಕೇಳುವಾಗ ನಾನು ಸಹಿಸಲಾರದವನಾಗಿರುವೆನು. ಹಾಗೆ ವಿಚಾರ ಮಾಡುವ ಮುಸ್ಲಿಮರನ್ನು ನಾನು ನಂಬಲಾರೆ.

ಮುಸ್ಲಿಮರೇ ಒಪ್ಪಲಾರರು

ಎಂಟು ಕೋಟಿ ಮುಸ್ಲಿಮರು ತಮ್ಮ ಸಹೋದರ ಹಿಂದುಗಳೊಡನೆ ತಮಗೆ ಯಾವ ಸಂಬಂಧವೂ ಇಲ್ಲವೆಂದೂ ಬೇರಾಗಲು ಒಪ್ಪುವರೆಂದೂ ನಾನು ಖಂಡಿತ ತಿಳಿಯುವುದಿಲ್ಲ. ಈಗ ವಿಚಾರದಲ್ಲಿರುವ ರಾಷ್ಟ್ರಘಟನಾ ಸಮಿತಿಯು ಮಾತ್ರ ಈ ಸಮಸ್ಯೆಯನ್ನು ವಿಚಾರಪೂರ್ವಕ ಪರಿಹರಿಸಬಲ್ಲುದು. ಇಂತಹ ವಿಷಯದಲ್ಲಿ ಮಧ್ಯಸ್ಥಿಕೆಗೆ ಬರುವುದು ಸರಿಯಲ್ಲ. ಇದು ಶುದ್ಧವಾಗಿಯೂ ಸಹಜವಾಗಿಯೂ ಇರುವ ಆತ್ಮನಿರ್ಧಾರದ ವಿಷಯವಾಗಿದೆ. ಈ ವಿಷಯದಲ್ಲಿ ಸ್ಪಷ್ಟತೆಯಾಗಬೇಕಾದರೆ, ಇದಕ್ಕಾಗಿ ಪ್ರಜಾಮತದ ಗಣನೆಯಾದಲ್ಲಿ ತಿಳಿಯುವುದು. ಭಾರತದ ಮುಸ್ಲಿಮರು ಬೇರೆಯಾಗಲು ಇಚ್ಛಿಸುವರೆಂದು ನಾನು ಖಂಡಿತ ಒಪ್ಪಲಾರೆ.

ಶಾಸನ ಭಂಗ ಆಂದೋಲನ

"ಹಿಂದೂ ಮುಸ್ಲಿಂ ಐಕ್ಯವಾಗದೆ ನಿಜವಾದ ಸ್ವಾತಂತ್ರ್ಯ ವಿಲ್ಲವೆಂದು ನಾನಿಂದು ತಿಳಿಯುತ್ತೇನೆ. ಯಾಕೆಂದರೆ ಎಂಟು ಕೋಟಿ ಮುಸ್ಲಿಮರಾದರೂ ಶಾಂತ ಸ್ವಾತಂತ್ರ್ಯ ವಾತಾವರಣವನ್ನು ಹಾಳುಮಾಡಬಹುದಾಗಿದೆ. ಆದರೂ ನಾನಿಂದು ಶಾಸನ ಭಂಗ ಚಳವಳದ ವಿಷಯವಾಗಿ ಮಾತನಾಡುತ್ತೇನೆ. ಏಕೆಂದರೆ, ಭಾರತದ ಇತರ ನಿವಾಸಿಗಳಂತೆ ಮುಸ್ಲಿಮರೂ ದೇಶದ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಾರೆಂದು ನಾನು ವಿಶ್ವಾಸಗೊಂಡಿದ್ದೇನೆ. ಆ ದೃಢತೆಯಿಂದಲೇ, ಅಂತಹ ಸ್ವಾತಂತ್ರ್ಯ ಪ್ರೇಮಿಗಳಿಗೆ ಅವರು ಯಾವುದೇ ಜಾತಿಮತದವರಾಗಿರಲಿ, ಒಳ್ಳೆಯ ಶಿಕ್ಷಣ ಕೊಡಲು ಶಾಸನ ಭಂಗ ಚಳವಳವೇ ಯೋಗ್ಯ ಸಾಧನವೆಂದು ನಾನು ತಿಳಿಯುತ್ತೇನೆ. ಆದರೆ ಅಹಿಂಸೆಯನ್ನು ಜನತೆಯು ಸಂಪೂರ್ಣ ಮನಸ್ಸಿನಿಂದ ಅನುಸರಿಸುವುದೆಂದು ವಿಶ್ವಾಸಗೊಳ್ಳುವವರೆಗೆ ನಾನು ಶಾಸನ ಭಂಗವನ್ನು ಆರಂಭಿಸಲಾರೆ.

"ಭಾರತವು ಸ್ವಾತಂತ್ರ್ಯವನ್ನು ಪಡೆದಾಗ, ಮುಸ್ಲಿಮರು, ರಾಷ್ಟ್ರದ ಭವಿಷ್ಯ ರಾಜ್ಯ ಘಟನೆಯನ್ನು ಸಿದ್ಧಗೊಳಿಸುವ ವಿಷಯದಲ್ಲಿ ಖಂಡಿತವಾಗಿಯೂ ಹೆಚ್ಚಿನ ಭಾಗವನ್ನು ವಹಿಸಲೇ ಬೇಕಾಗುವುದು. ಆದು ಬಹುಮತದಿಂದ ನಿಶ್ಚಯಿಸತಕ್ಕದ್ದಲ್ಲ.

ನನ್ನ ಜೀವನವು ತೆರೆದಿಟ್ಟ ಪುಸ್ತಕ

"ನನ್ನ ಜೀವನವು ಒಂದು ತೆರೆದಿಟ್ಟ ಪುಸ್ತಕವಾಗಿದೆ. ನಾನು ಎಲ್ಲಾ ಸಂಸ್ಕೃತಿಗಳನ್ನೂ ಸೇರಿಸಿಕೊಂಡಿರಲು ಸಾಧಿಸುತ್ತೇನೆ. ನನ್ನ ಧರ್ಮವು ಯಾವುದೇ ಆಗಿರಲಿ, ಅದರ ಹೆಸರು ಏನೇ ಇರಲಿ ನಾನೆಲ್ಲಿ ಹೋದರೂ ಎಲ್ಲರ ಜನರ ಆಪ್ತನೇ ಆಗಿರುತ್ತೇನೆ. ಏಕೆಂದರೆ ಎಲ್ಲರ ಧರ್ಮವನ್ನೂ ನನ್ನ ಧರ್ಮದಂತೆಯೇ ನಾನು ಗೌರವಿಸುತ್ತೇನೆ."

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೇಕಡಾ ನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ಸುಖವಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳೆಕೊಳ್ಳುತ್ತದೆ ಮತ್ತು ಚರ್ಮವನ್ನು ಸುಖವಾಗಿಯೂ ಪರಿಮಳಯುಕ್ತವಾಗಿಯೂ ಇರಿಸುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದುದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿದೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚಿ 1ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು:	ಸೋಲ್ ಏಜೆಂಟ್ಸ್:
ಯು. ಪಾಂಡುರಂಗ ನಾಯಕ್,	ಪ್ರೇಮ ಮೆಡಿಕಲ್ ಹಾಲ್,
ರಥಬೀದಿ ಮಂಗಳೂರು.	ಗುತ್ತಿಗಾರ್ ದ. ಕ.

ಕಳೆದುಹೋದ ಪುರುಷತ್ವವನ್ನೂ ಚೈತನ್ಯವನ್ನೂ

ಜೀವಾಮೃತಂ

ಸೇವನೆಯಿಂದ ಪುನಃ ಪಡೆಯಿರಿ.

ಎಲ್ಲಾ ಕೆಮಿಸ್ಟುಗಳಲ್ಲಿಯೂ ದೊರೆಯುವವು. ತ ಪೆ 281. ಮದ್ರಾಸ್

ಭಾರತದ ಸ್ವಾತಂತ್ರ್ಯದಿಂದ ಬ್ರಿಟನಿಗೆ ಲಾಭವಿದೆ!

ಸಾಮ್ರಾಜ್ಯಶಾಹೀ ನೀತಿಯನ್ನು ಬಿಟ್ಟುಬಿಡಬೇಕು

ಹೋರಾಟಕ್ಕಾಗಿ ಕಾಂಗ್ರೆಸಿನ ಸಿದ್ಧತೆಗಳು!

(ಲೇಖಕ: ಭಾರತೀಯ)

ಯುದ್ಧಾರಂಭದಲ್ಲಿ ಹಿಂದೂಸ್ಥಾನವು ಸಂಪೂರ್ಣ ಸ್ವತಂತ್ರವಾಗುತದೆ ಎಂದು ಬ್ರಿಟಿಷ್ ಸರಕಾರವು ಹೇಳಿಕೆ ಹೊರಡಿಸಬೇಕೆಂದು ಕಾಂಗ್ರೆಸ್ಸು ಪ್ರಕಟಿಸಿದ ಕೇಳಿಕೆಗೆ ಸರಕಾರದ ಪ್ರತಿನಿಧಿಗಳು, ಅಲ್ಪಸಂಖ್ಯಾಕ ಸಮಸ್ಯೆಯ ಸಂಬಂಧವಿಲ್ಲದ ವಿಷಯವನ್ನು ಮುಂದೂಡಿ ನ್ಯಾಯವನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಬ್ರಿಟಿಷ್ ಜನಾಂಗವು ಜೀವನ ಮರಣದ ಹೋರಾಟದಲ್ಲಿ ತೊಡಗಿರುವಾಗ, ಕಾಂಗ್ರೆಸ್ಸು ಸ್ವಾತಂತ್ರ್ಯ ಪ್ರಶ್ನೆಯನ್ನೆತ್ತಿ ಬ್ರಿಟನನ್ನು ಕಷ್ಟಕ್ಕೆ ಗುರಿಮಾಡುವುದು ಶತ್ರುವಾದ ಜರ್ಮನಿಗೆ ಸಹಾಯಮಾಡಿದಂತೆ ಆಗುತ್ತದೆ ಎಂದು ಬ್ರಿಟಿಷರು ಅಪಪ್ರಚಾರ ಮಾಡಲಿಕ್ಕೂ ಆರಂಭಿಸಿದ್ದಾರೆ. ಕಾಂಗ್ರೆಸ್ಸು ಬ್ರಿಟನಿನ ಈ ಕಷ್ಟಕಾಲದಲ್ಲಿ ಯಾವ ಶರತವೂ ಇಲ್ಲದೆ ಅದಕ್ಕೆ ಸಹಾಯವನ್ನು ಕೊಡದಿರುವದು ಜರ್ಮನಿಗೆ ಸಹಾಯ ಮಾಡಿದಂತೆ ಎಂದು ಬ್ರಿಟಿಷರ ಪತ್ರಿಕೆಯೊಂದು ರಾಗಾಲಾಪನೆ ಮಾಡಿದೆ. ಹಿಂದುಸ್ಥಾನದ ಸ್ವಾತಂತ್ರ್ಯದ ಕುರಿತು ಭರವಸೆ ದೊರೆತ ವಿನಾ ಬ್ರಿಟನಿಗೆ ಯುದ್ಧಕಾರ್ಯದಲ್ಲಿ ತನ್ನ ಬೆಂಬಲವಿಲ್ಲವೆಂದು ಹೇಳಿದಂತೆ, ಜರ್ಮನಿಯ ನಾಝಿಗಳ ಅತ್ಯಾಚಾರ, ಅನಾಚಾರಗಳನ್ನೂ ಕಾಂಗ್ರೆಸ್ಸು ಕಟೂಕ್ತಿಗಳಿಂದ ನಿಷೇಧಿಸಿದೆ.

ಹಿಂದುಸ್ಥಾನವು ಬ್ರಿಟನಿನ ದ್ವೇಷಿಯಲ್ಲ.

ಯುದ್ಧಕಾರ್ಯದಲ್ಲಿ ಯಾವ ಪಕ್ಷಕ್ಕೂ ಸಹಾಯವನ್ನು ಕೊಡದ ತಟಸ್ಥ ರಾಷ್ಟ್ರಗಳನ್ನು ಮಿತ್ರರಾಷ್ಟ್ರಗಳು ತಮ್ಮ ದ್ವೇಷಿಗಳೆಂದು ತಿಳಿಯುವ ಭಾವನೆಯಿಂದ ಯುದ್ಧ ನಡೆಯುತ್ತಿರುವ ಈ ಕಾಲದಲ್ಲಿ ಬ್ರಿಟನು ಹಿಂದುಸ್ಥಾನದೊಡನೆ ಅಥವಾ ಕಾಂಗ್ರೆಸ್ಸಿನೊಡನೆಯೂ ವ್ಯವಹರಿಸುತ್ತಾ ಇದೆ. ಆದರೆ ತಟಸ್ಥ ರಾಷ್ಟ್ರಗಳಂತೆ ಹಿಂದುಸ್ಥಾನವು ಸ್ವತಂತ್ರವಾದಾಗ ಮಾತ್ರ ಅಲ್ಲವೆ, ಬ್ರಿಟನು ಹಿಂದುಸ್ಥಾನದೊಡನೆ ತಾಟಸ್ಥ್ಯದ ವ್ಯವಹಾರವನ್ನು ಇಟ್ಟುಕೊಳ್ಳಬೇಕು! ಹಿಂದುಸ್ಥಾನದಂತಹ ಪರಾಧೀನ ರಾಷ್ಟ್ರದೊಡನೆ ಬ್ರಿಟನು ತಾಟಸ್ಥ್ಯದ ವ್ಯವಹಾರವನ್ನಿಟ್ಟುಕೊಳ್ಳುವದು ಏನೇನೂ ನ್ಯಾಯವಾಗಿರುವದಿಲ್ಲ.

ಇಷ್ಟು ಮಾತ್ರವಲ್ಲದೆ ಹಿಂದುಸ್ಥಾನವು ಹೃದಯಪೂರ್ವಕ ಬ್ರಿಟನಿನ ಹಿತವನ್ನೇ ಇಚ್ಛಿಸುತ್ತದೆ. ಆದರೆ ಹಿಂದುಸ್ಥಾನವು ತನ್ನ ಅಸ್ತಿತ್ವವನ್ನೇ ಕಳಕೊಂಡು ಮನೆಯನ್ನು ಮಾರಿ ಪರೋಪಕಾರ ಮಾಡಲಿಕ್ಕೆ ಸಿದ್ಧವಾಗಿಲ್ಲ! ಸ್ವಾರ್ಥದಿಂದ ತುಂಬಿದ ಜಗತ್ತಿನಲ್ಲಿ ಹೇಗೆ ವ್ಯವಹರಿಸಬೇಕೆಂಬುದು ಹಿಂದುಸ್ಥಾನಕ್ಕೂ ತಿಳಿದಿದೆ.

ಸ್ವತಂತ್ರ ಹಿಂದುಸ್ಥಾನ

ಹಿಂದುಸ್ಥಾನವು ಸ್ವತಂತ್ರವಾಗುವುದರಿಂದ ಬ್ರಿಟನಿಗೆ ಬಹಳ ಲಾಭವಾಗುವುದು. ಹಿಂದೂಸ್ಥಾನವು ಕೇವಲ ತನ್ನ ಸ್ವಾರ್ಥಸಿದ್ಧಿಗಾಗಿ ಯಾವ ಕೆಲಸವನ್ನೂ ಮಾಡುತ್ತಿರುವುದಿಲ್ಲ. ಅದರ ಆತ್ಮವು ಯುರೋಪಿನ ರಾಷ್ಟ್ರಗಳಂತೆ ಸ್ವಾರ್ಥಪೂರಿತವಲ್ಲ. ಇತರ ಜನಾಂಗಗಳಂತೆ ತಾನೂ ಸ್ವತಂತ್ರವೆಂದು ತಿಳಿದಾಕ್ಷಣದಿಂದ ಅದು ತನುಮನ ಧನದಿಂದ ತ್ರಿಕರಣಪೂರ್ವಕ ಬ್ರಿಟನಿನ ಅಥವಾ ಬೇರೆ ಯಾವದೇ ರಾಷ್ಟ್ರದ ಕಷ್ಟನಿವಾರಣೆಗೆ ಕೈಲಾದ ಬೆಂಬಲವನ್ನು ಕೊಡುವುದು.

ಹಿಂದುಸ್ಥಾನದ ನೈತಿಕ ಬೆಂಬಲ ಪಡೆಯದೆಯೇ ತಾನು ಯುದ್ಧವನ್ನು ಗೆಲ್ಲಬಹುದು, ಆದ್ದರಿಂದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದ ಭರವಸೆನ್ನಾದರೂ ಯಾಕೆ ಕೊಡಬೇಕು? ಎಂದು ಬ್ರಿಟನು ಯೋಚಿಸಿರಬಹುದು. ಈಗ ಯುರೋಪಿನಲ್ಲಿ ನಡೆಯುತ್ತಿರುವದು ಸ್ವಾರ್ಥಪರ ಯುದ್ಧವಾದುದರಿಂದ ಬ್ರಿಟನು ಹೀಗೆ ಯೋಚಿಸಲಿಕ್ಕೆ ಆಸ್ಪದವೂ ಇದೆ. ಹಾಗಿದ್ದರೆ ಕಷ್ಟಕಾಲದಲ್ಲಿ ಹಿಂದುಸ್ಥಾನವು ತನಗೆ ಪ್ರತ್ಯಕ್ಷ ಸಹಾಯ ಮಾಡದೆ ಜರ್ಮನಿಗೆ ಅಪ್ರತ್ಯಕ್ಷವಾಗಿ ಸಹಾಯ ಮಾಡುತ್ತದೆಂದು ದೂರುವುದಾದರೂ ಯಾಕೆ? ಬೇಡವಾದ ನೈತಿಕ ಬೆಂಬಲವನ್ನು ಕೊಡುತ್ತಿಲ್ಲವೆಂದು ಹೇಳುವುದಾದರೂ ಯಾಕೆ? ಹಿಂದುಸ್ಥಾನದ ಸ್ವಾತಂತ್ರ್ಯ ಆಂದೋಲನಕ್ಕೂ ಬ್ರಿಟನಿನ ಯುದ್ಧೋದ್ದೇಶಕ್ಕೂ ಯಾವ ಸಂಬಂಧವೂ ಇಲ್ಲವಾದರೆ ಹಿಂದುಸ್ಥಾನವೂ ಬ್ರಿಟನಿನ ಸ್ಥಿತಿಯನ್ನೋ ದುಸ್ಥಿತಿಯನ್ನೋ ಪರ್ಯಾಲೋಚನೆಗೆ ತಾರದೆ ತನಗೆ ಯುಕ್ತಕಂಡ ರೀತಿಯಲ್ಲಿ ಅಹಿಂಸಾತ್ಮಕ ರೀತಿಯಿಂದ ಆಂದೋಲನವನ್ನು ಮುಂದೊತ್ತುವದು. ಹಿಂದುಸ್ಥಾನವು ಕೇವಲ ತನ್ನ ಶಕ್ತಿ ಸಾಮರ್ಥ್ಯಗಳನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಂಡು ಮುಂದಿನ ಕಾರ್ಯಕ್ರಮಗಳನ್ನು ರಚಿಸಿಕೊಳ್ಳುವುದು.

ಗಾಂಧಿಯವರ ಬೋಧನೆ

ಮಹಾತ್ಮಾ ಗಾಂಧಿಯವರು ಈ ಸಂಗತಿಗಳನ್ನು ಪರ್ಯಾಲೋಚಿಸಿ ತೆಗೆದುಕೊಂಡು, ಅವಸರಿಸಬೇಡಿ, ತಾಳ್ಮೆಯನ್ನು ತೋರಿಸಿ ಎಂದು ಭಾರತೀಯರಿಗೆ ಬೋಧಿಸುತ್ತ ಬಂದಿದ್ದಾರೆ. ಯುದ್ಧ ನಡೆಯಲಿ, ನಡೆಯದೇ ಇರಲಿ, ಹಿಂದುಸ್ಥಾನವಂತೂ ಸ್ವತಂತ್ರವಾಗಲೇ ಬೇಕು, ಮತ್ತು ಅದಕ್ಕೆ ಜನರು ಸಿದ್ಧತೆಯನ್ನು ಮಾಡಿಕೊಳ್ಳಲಿಕ್ಕೇ ಬೇಕು. ನ್ಯಾಯ, ನೀತಿ, ಸತ್ಯ ಮತ್ತು ಅಹಿಂಸೆಯಿಂದ ಹಿಂದುಸ್ಥಾನವು ಸ್ವತಂತ್ರವಾಗಬೇಕು.

ಈ ಮಹೋದ್ದೇಶವನ್ನಿಟ್ಟುಕೊಂಡು ಹಿಂದುಸ್ಥಾನವು ಸ್ವಾತಂತ್ರ್ಯ ಆಂದೋಲನದ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿದೆ. ಜನರು ಸಂಪೂರ್ಣ ಸಿದ್ಧರಾಗಿದ್ದಾರೆಂದು ತಿಳಿದಾಕ್ಷಣ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಆಂದೋಲನವನ್ನು ಆರಂಭಿಸುವರು. ಬಹಿರಂಗ ಅಂತರಂಗ ಶತ್ರುಗಳ ಪ್ರಬಲ ವಿರೋಧವಿದ್ದರೂ ಕಾಂಗ್ರೆಸ್ಸು ಸ್ವಾತಂತ್ರ್ಯ ಸಂಪಾದನೆ ಮಾಡುವ ಪವಿತ್ರ ಉದ್ಯಮದಲ್ಲಿ ಕೃತಕೃತ್ಯವಾಗುವುದೆಂದು ಗೊತ್ತಾದಾಗ ಮಹಾತ್ಮರು ಅಹಿಂಸಾತ್ಮಕ ಸಮರಾಜ್ಞೆಯನ್ನು ಕೊಡಲಿಕ್ಕೆ ಹಿಂದೆ ಸರಿಯುವದಿಲ್ಲವೆಂಬುವನ್ನು ಸ್ಪಷ್ಟಮಾಡಿದ್ದಾರೆ. ಹಿಂದುಸ್ಥಾನದ ಸ್ವಾತಂತ್ರ್ಯ ಸಂಪಾದನೆಗೆ ಯುರೋಪಿನಲ್ಲಿ ನಡೆಯುತ್ತಿರುವ ಯುದ್ಧವು ಯಾವ ರೀತಿಯಿಂದಲೂ ಸಹಾಯಕವಾಗುವುದಿಲ್ಲ. ಹಿಂದುಸ್ಥಾನವು ಸಿದ್ಧವಾದಾಗ ಅದು ತಾನಾಗಿ ಸ್ವತಂತ್ರ್ಯವಾಗುತ್ತದೆ. ಸ್ವಾತಂತ್ರ್ಯ ಸೇನೆಯ ಸೇನಾಧಿಪತಿ ಮಹಾತ್ಮರು ತೋರಿಸಿಕೊಟ್ಟ ಮಾರ್ಗದಲ್ಲಿ ನಡೆದು ಸ್ವಾತಂತ್ರ್ಯ ಸಂಪಾದನೆಗೆ ಸಿದ್ಧರಾಗುವುದು ಭಾರತೀಯರ ಕರ್ತವ್ಯವಾಗಿದೆ.

ಸ್ತ್ರೀಯರ ಆರೋಗ್ಯಸೌಭಾಗ್ಯಗಳಿಗೆ

ಲೋಧ್ರ

ತಯಾರಿಸುವವರು:
ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ಥಳೀಯ ಸ್ಟೋಕಿಸ್ಟರು:
[illegible] ಸ್ಟೋರ್ಸ್, ರಥಬೀದಿ ಮಂಗಳೂರು.

DIAMONDS! DIAMONDS!
BEST BRILLIANCY!

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಇಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

HALFTONE & LINE
BLOCK MAKING
UNDERTAKEN
Sharada Press,
MANGALORE

ಅವಳ ಆ ಪುಣ್ಯಮಯ ಶರೀರ, ಕಳಂಕ ರಹಿತವಾದ ರೂಪ ಆ ಅನುಪಮ ಗುಣ—ಅವು ನನ್ನ ಸ್ಮೃತಿಗೆ ಬಂದಹಾಗೆ ಬಿಡಿಯುತ್ತಿರೊಂದು ಹೊರಟು ತಪ್ತ ವಾತಾವರಣದೊಳಗೆ ವಿಲೀನ ವಾಗುತ್ತದೆ ಅವಳು ಒಬ್ಬ ಅಬಲೆ, ಒಬ್ಬ ಬಡವೆಯಾಗಿದ್ದರೂ ಸುಶೀಲೆಯಾಗಿದ್ದಳು ಸ್ವರ್ಗ ಲೋಕದ ದೇವಿಯಂತಿದ್ದಳು ಸಮಾಜವು ಮಾತ್ರ ಅವಳಿಗೆ ಆಸರೆ ಕೊಡಲಿಲ್ಲ ಸಮಾಜದ ಮುಂದೆ ಅವಳು ಅಪರಾಧಿನಿಯಾಗಿದ್ದಳು ಅವಳ ಸೌಂದರ್ಯ, ಅವಳ ರೂಪ ಲಾವಣ್ಯ ಅವಳ ಯೌವನ, ಮತ್ತೆ ಅವಳ ಸಚ್ಚಾರಿತ್ರ್ಯ—ಇವೇ ಅವಳ ಅಪರಾಧದ ಕಾರಣಗಳಾಗಿದ್ದುವು ಅವಳು ಹರಿಜನ ಬಾಲಿಕೆ ಅವಳಿಗೆ ದುಃಖ ಪೂರ್ಣ ಸಂಸಾರದ ಅನುಭವವು ಆಗ ಆಗಿರಲಿಲ್ಲ ಸಂಸಾರವು ನಿಸ್ಸಾರ, ಅದು ಸುಳ್ಳು, ಬರಿಯ ಭ್ರಮೆ-ಎಂಬುದು ಅವಳ ಮನಸ್ಸಿಗೆ ಬಂದಿರಲಿಲ್ಲ ಆದುದರಿಂದಲೇ ಅವಳು ಅಪರಾಧಿನಿಯಾದಳು, ಸಂಸಾರದ ವಕ್ರ ದೃಷ್ಟಿ ಅವಳ ಮೇಲೆ ಬಿತ್ತು.

ಅವಳ ಕೊನೆಗಾಲದ ಆ ಹೃದಯ ವಿದ್ರಾವಕ ದೃಶ್ಯ—ಅದೂ ಇನ್ನೂ ನನ್ನ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ಇದೆ ಅವಳು ಬಾಲವಿಧವೆಯೂ ಆಗಿದ್ದಳು ವಿವಾಹದ ಕೆಲವೇ ದಿನಗಳ ಅನಂತರ ಅವಳ ಪತಿಯು ಸ್ವರ್ಗಲೋಕಕ್ಕೆ ಪ್ರಯಾಣ ಮಾಡಿದನು

ಆ ದುಃಖಮಯವಾದ ದಿನವು ಬೆಳಗಾಗಬೇಕಾದರೆ, ಅವಳು ನೇತ್ರಾವತಿಯ ಮಡಿಲಲ್ಲಿ ಅಚೇತನಗಳಾಗಿ ಬಿದ್ದುಕೊಂಡಿದ್ದಳು ಸಂಸಾರದ ವ್ಯಾಪಾರಗಳ ಕಡೆಗೆ ಅವಳು ತನ್ನ ಕಣ್ಣುಗಳನ್ನು ಮುಚ್ಚಿಕೊಂಡಿದ್ದಳು. ನೇತ್ರಾವತಿಯು ಆ ಶಾಂತಿದಾಯಕ ಮಡಿಲಿಂದ ನಾನವಳನ್ನು ಆಚೆಗೆ ಎಳೆದು ತಂದು ಪೂರ್ವಗಳೆಯ ಶರಣ ಪ್ರದೇಶದಲ್ಲಿ ಮಲಗಿಸಿದಾಗ ಅವಳ ಅರ್ಧ ಕಣ್ತೆರೆದು ಇಷ್ಟೇ ಹೇಳಿದಳು —

'ಅಣ್ಣಾ' ನಾನು ಅಚೆನ ಕೇರಿಯ ಯುವಕನೊಡನೆ ಪ್ರೇಮಪಾಶ್ನಿಬದ್ಧ ಅವನೇ ಅವನ ಮೇಲಿನ ಆ ನನ್ನ ಪ್ರೇಮವು ವಾಸನಾಹೀನವಾಗಿತ್ತು ಪಾಪದಿಂದ ದೂರವಿತ್ತು ಅದು ಬಂಧು ಭಗಿನಿಯೊಳಗಿನ ದಿವ್ಯ ಪ್ರೇಮವಾಗಿತ್ತು ಅವನೂ ನನ್ನನ್ನು ಪ್ರೇಮಿಸುತಿದ್ದ ನನಗಾಗಿ ಪ್ರಾಣಗಳನ್ನು ಕೊಡಲಿಕ್ಕೆ ಸಿದ್ಧನಾಗಿದ್ದ ನಾನು ಅವನನ್ನು 'ಅಣ್ಣ ಎಂದು ಕರೆಯುತಿದ್ದೆ ಅವನು ನನ್ನನ್ನು ತಂಗಿ' ಎಂದು ಸಂಬೋಧಿಸುತಿದ್ದ ನಮ್ಮೊಳಗಿನ ಪ್ರೇಮವು ಪರಿಶುದ್ಧವಾಗಿತ್ತು ನಿರ್ಮಲವಾಗಿತ್ತು ಕಲಂಕರಹಿತವಾಗಿತ್ತು ನಾನು ವಿಧವೆ—ಹರಿಜನ ಬಾಲೆ ಅವನು ಅಪವಿತ್ರ—ಬ್ರಾಹ್ಮಣ ಹುಡುಗ ಆದುದರಿಂದ

ಈ ವಾರದ ಕತೆ:

ನಿಷ್ಠುರ ಸಮಾಜ

ನಮ್ಮೊಳಗಿನ ಪ್ರೇಮವನ್ನು ಸಮಾಜವು ನೋಡದಾಯಿತು ನನ್ನದು ದೂಷಿತ, ವಾಸನಾಪೂರ್ಣ ಅಪವಿತ್ರ ಪ್ರೇಮವೆಂದು ಅದು ತಿಳಿಯಿತು ನಾವಿಬ್ಬರು ಸಮಾಜದ ಲಾಂಛನಕ್ಕೆ ಪಾತ್ರರಾದೆವು

'ಅಣ್ಣಾ' ಜನರು ಕೂಡಿದರು, ವಿಚಾರಣೆ ನಡೆಯಿತು ನಾವಿಬ್ಬರೂ ಅಪರಾಧಿಗಳು ಹೌದೆಂದಾಯಿತು ಕೇಳಬೇಕೆ? ನನಗೆ ಜಾತಿಯಿಂದ ಬಹಿಷ್ಕಾರ, ಅಣ್ಣನಿಗೆ ಜಾಗ್ರತೆಯ ಎಚ್ಚರಿಕೆ ಆದರೂ ನಾವು ಬೇರೆಯಾಗುವುದು, ಪ್ರೇಮಿಸದಿರುವುದು ಶಕ್ಯವಿರಲಿಲ್ಲ ನನ್ನ ತಂದೆಯನ್ನು

ಅಲ್ಲಿಯೂ ನನಗೆ ಪ್ರವೇಶ ಸಿಗಲಿಲ್ಲ ಅನಾಥಾಶ್ರಮದಲ್ಲಿ ಹರಿಜನರಿಗೆ ಪ್ರವೇಶವಿಲ್ಲ!—ಹೀಗೆಂದು ಅವರು ಹೇಳಿದರು ನಾನು ಅತ್ತು ಬೇಕಾದಷ್ಟು ಬೇಡಿದೆ! ಇದೇ ನೇತ್ರಾವತೀ ನದಿಯಲ್ಲಿ ಹರಿಯುತ್ತಿರುವಂತೆ ನೀರು ನನ್ನ ಕಣ್ಣೊಳಗಿಂದ ಹರಿದು ಹೋಯಿತು ಕೊನೆಗೆ ನಾನು ಬಹಳ ಬೇಡಿಕೊಂಡ ಮೇಲೆ, ಅವರ ಪಾದ ಹಿಡಿದು ಬೇಡಿಕೊಂಡ ಮೇಲೆ, ಅವರು 'ಆಗಬಹುದು ಎಂದರು

'ಅವರು ಬ್ರಾಹ್ಮಣ ದೇವತೆ—ಅವರ ಔದಾರ್ಯದಿಂದ ನನಗೆ ಆಶ್ರಮದೊಳಗೆ ಪ್ರವೇಶ



ರೂಪರಾಣಿ ನಾಸೀಮ್

ಹೆದರಿಸಿದರು, ಬೆದರಿಸಿದರು, ಹೊಂದುಹಾಕಬೇಕೆಂದು ಗದರಿಸಿದರು ನನ್ನನ್ನು ಕುಲಟೆ, ಜಾರಿಣಿ ದುಷ್ಟೆ ವ್ಯಭಿಚಾರಿಣಿ ಎನ್ನುತ್ತ ಬಯ್ದರು ತಂದೆಯು ನನ್ನನ್ನು ಮನೆಯಿಂದ ಹೊರಡಿಸಿದನು ನನಗೆ ಸಂಸಾರವು ನಿಸ್ಸಾರವಾಯಿತು ಎಲ್ಲಿಯೂ ಕಾಲಿಡಲಿಕ್ಕೆ ಸ್ಥಳ ದೊರೆಯಲಿಲ್ಲ ಎಲ್ಲರೂ ಹೊರಗೆ ದೂರ ದೂರ ಎಂದರು

ನಾನು ಬೇರೆ ಗತಿ ಕಾಣದೆ ಅನಾಥೆಯಾಗಿ ಅನಾಥಾಶ್ರಮಕ್ಕೆ ಹೋದೆ ಆದರೆ ಹಾಯ

ದೊರಕಿತು ನಾನು ಅನಾಥಿನಿಯಾಗಿ ಅನಾಥಾಶ್ರಮದಲ್ಲಿ ಇರತೊಡಗಿದೆ

ಆದರೆ ಅಣ್ಣಾ ಎಷ್ಟೆ ದಿನ ಮಾತ್ರ, ಅದೇ ಬ್ರಾಹ್ಮಣ ದೇವತೆ, ಸಮಾಜದ ಧುರೀಣ ಧರ್ಮಾಚಾರ್ಯರು ರಾತ್ರಿ ಹೊತೆಯುವ ಸಮಯಕ್ಕೆ ನನ್ನ ಬಳಿಗೆ ಬಂದ ಕಾಲುಗಳಿಗೆ ಬಿದ್ದು ಪ್ರೇಮ ಭಿಕ್ಷೆಯನ್ನು ಬೇಡಿದ ನಾನು ಒಲ್ಲೆ ಎಂದೆ, ಪಾಪ ಚರಣೆ ಮಾಡಲಾರೆ ಹೀಗೆಂದು ಹೇಳಿದೆ ಅವನು ಕೇಳಲಿಲ್ಲ ಅವನು ಪಶು ನನ್ನ ಮೇಲೆ

ಬಲಾತ್ಕಾರ ಮಾಡಲಿಕ್ಕೆ ನೋಡಿದ ನಾನು ತಪ್ಪಿಸಿಕೊಂಡು ಓಡಿಬಂದೆ ಓಡಿ ಎಲ್ಲಿಗೆ ಹೋಗಲಿ? ನೇತ್ರಾವತಿಯೇ ಶರಣು ಎಂದೆ, ಆ ಮೇಲೆ . . "

ಅವಳು ಮೌನಳಾದಳು ಅರ್ಥ ತೆರೆದಿದ್ದ ಅವಳ ಕಣ್ಣುಗಳಿದ್ದು ಅಷ್ಟು ಸಮಯಕ್ಕೆ ಪೂರ್ಣ ಮುಚ್ಚಿದ್ದುವು ತನ್ನ ದುಃಖ ಪೂರ್ಣ ಪಾರ್ಥಿವ ಶರೀರವನ್ನು ಅಲ್ಲೇ ಬಿಟ್ಟು ಅವಳು ಅದೃಶ್ಯಳಾದಳು, ಕಣ್ಣಿಗೆ ಕಾಣದೆ ಸ್ವರ್ಗಲೋಕದ ಹಾದಿ ಹಿಡಿದು ಹೋಗಿದ್ದಳು!

ನಾನೇ ಅವಳ ಅಣ್ಣ ಎಂಬುದು ಅವಳಿಗೆ ಗೊತ್ತಾಗಿರಲಿಲ್ಲ. ಯಾರೋ ಬೇರೆ ಆಗಿರಬಹುದೆಂದು ಅವಳು ತನ್ನ ದುಃಖ ಪೂರ್ಣ ಜೀವನದ ಕತೆ ಹೇಳಿದಳು ಕತೆ ಕೇಳುತ್ತ ಕೇಳುತ್ತ ನನ್ನ ತಲೆ ತಿರುಗಿತು 'ಅಯ್ಯೋ ಪಾಪಿ ನಿಷ್ಠುರ ಸಮಾಜವೇ'

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

Sc 78/1940

ಪಿ. ನಾರಾಯಣ ಪೈಜಪ್ಪ ಭಂಡಾರಿ & ಸನ್ಸ್ ಮಂಗಳೂರು ಇದರ ಯಜಮಾನ ಪಿ ನಾರಾಯಣ ಪೈಜಪ್ಪ ಭಂಡಾರಿ ಇವರ ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ್ ಪಿ ಉಮಾನಾಥ ಭಂಡಾರಿ — ವಾದಿ

ಮತ್ತು

ಪಳ್ಳಿ ಮಹಮ್ಮದ್ ಪಳ್ಳಿ ಹುಸೇನಬ್ಬ ಬ್ಯಾರಿಗಳವರ ಮಗ ಮಂಗಳೂರು ಶಹರ, ಗೋಳಿಕಟ್ಟೆ ಬಜಾರಲ್ಲಿ ಇರುವವ — ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ —

ನೀವು ತಾ ೨—೬—೧೯೩೯ರಲ್ಲಿ ವಾದಿಗೆ ಬರಕೊಟ್ಟ ಡಿಮಾಂಡ ಪ್ರೋನೋಟಿನ ಬಾಪ್ತು ಅಸಲು ಬಡ್ಡಿ ಹಣಗಳ ಪೈಕಿ ನೀವು ಅಗಾಗ್ಗೆ ಕೊಟ್ಟಿದ್ದು ವಜಾ ಮಾಡಿ ಉಳ್ದ ಬರತಕ್ಕ ಅಸಲು ಬಡ್ಡಿಗಳಿಗೆ ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ ೧೯—೬—೧೯೪೦ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಿವಸ ನೀವು ಖುದ್ದಿನಿಂದಾಗಲೀ ವಕೀಲರ ಮುಖಾಂತರವಾಗಲೀ ಕೋರ್ಟು ಮುಂದೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

Mangalore 12 4 40 | M Janardan Malya, Vakil for Plaintiff

PHYSICAL FITNESS
is the first essential in games and in every social activity

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist. U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ,— ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಮೃತ್ಯುಮುಖದಲ್ಲಿರುವ ಜರ್ಮನಿ

ಇತಿಹಾಸಕಾರರ ಭವಿಷ್ಯ



ಹಿಟ್ಲರ್

ಡಾಕ್ಟರ ಇವಾನ ಲಾಜೋಸ ಎಂಬ ರಾಜನೀತಿಜ್ಞರಾದ ಗ್ರಂಥಕರ್ತರೊಬ್ಬರು ಯುದ್ಧಾರಂಭವಾದೊಡನೆಯೇ ಒಂದು ಗ್ರಂಥವನ್ನು ಬರೆದು ಲೋಕಯುದ್ಧದಲ್ಲಿ ಜರ್ಮನಿಯು ಗೆಲ್ಲುವದು ಅಸಂಭವವೆಂಬ ಹಾಗೆ ಒಂದು ಭವಿಷ್ಯವನ್ನು ನುಡಿದಿದ್ದರು. ಇವರು ಹಂಗೇರಿಯ ನಿವಾಸಿಗಳು. ಗ್ರಂಥವು ನಾಝಿ ಜರ್ಮನಿಯ ಹಿತಕ್ಕೆ ವಿರೋಧವಾಗಿದ್ದುದರಿಂದ ಅದನ್ನು ಬಹಿಷ್ಕರಿಸಬೇಕೆಂದು ಜರ್ಮನ ಸರಕಾರವು ಹಂಗೇರಿ ಸರಕಾರವನ್ನು ಕೇಳಿಕೊಂಡಿತು. ಆದರೆ ಬಹಿಷ್ಕಾರ ಆಜ್ಞೆಯು ಹೊರಡಬೇಕಾದರೆ ಒಂದು ವಾರದಲ್ಲಿ ಆ ಗ್ರಂಥದ ೩೦೦೦೦ ಪ್ರತಿಗಳು ಬುಡಾಪೆಸ್ಟ ಒಂದೇ ನಗರದಲ್ಲಿ ಮಾರಿಹೋಗಿದ್ದುವು. ಇಂಗ್ಲಾಂಡಿನಲ್ಲಿ ಒಂದು ತಿಂಗಳ ಅವಧಿಯೊಳಗೆ ಈ ಗ್ರಂಥದ ನಾಲ್ಕು ಮುದ್ರಣಗಳು ಆಗಿದ್ದುವು. ಡಾಕ್ಟರ ಲಾಜೋಸರು ಬರೆದ ಈ ಗ್ರಂಥದಲ್ಲಿ ಅವರು ಜರ್ಮನಿಯ ಯುದ್ಧ ಮಾಡುವ ಯೋಗ್ಯತೆಯನ್ನು ಸರಿಯಾಗಿ ಅಳೆದು ಆಡಿದ ಆ ಭವಿಷ್ಯ ನುಡಿಯು ಸತ್ಯವಾಗಬಹುದೋ ಎಂದು ಈಗ ಸಂದೇಹವಾಗಿದೆ. ಅವರು ಅದರಲ್ಲಿ ಕೆಳಗಿನ ವಿಷಯಗಳನ್ನು ಹೇಳಿರುವರು.

"ಜೆಕೊಸ್ಲೋವೇಕಿಯ ಅಥವಾ ಪೋಲಾಂಡಿನ ಒಂದಂಶವನ್ನು ಗೆದ್ದುಕೊಂಡಂತೆ ಮಿಂಚು ಯುದ್ಧ ಮಾಡಿ ಮಿತ್ರರಾಷ್ಟ್ರಗಳನ್ನು ಗೆಲ್ಲುವದು ಜರ್ಮನಿಗೆ ಸಂಪೂರ್ಣ ಅಸಾಧ್ಯ. ಈ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಯುದ್ಧ ಕಾರ್ಯವನ್ನು ಮುಂದೊತ್ತಲಿಕ್ಕೆ ಸಂಪೂರ್ಣ ಸಿದ್ಧವಾಗಿವೆ. ಫ್ರಾನ್ಸಿನ ಮೆಜಿನೋಟ್ ಕೋಟೆಯು ಸಾಲು ಅಬೇಧ್ಯವಾಗಿದೆ. ಈಗಿನ ಯುದ್ಧದಲ್ಲಿ ಶರೀರ ಬಲವಷ್ಟೆ ಗಣನೆಗೆ ಬರುವುದಿಲ್ಲ. ಶರೀರ ಬಲಕ್ಕಿಂತ ಹೆಚ್ಚಿಗೆ ಬುದ್ಧಿ ಬಲವೂ ಶಾಸ್ತ್ರೋಪಕರಣಗಳೂ ಬೇಕು.

"ಜರ್ಮನಿಯಲ್ಲಿ ದೊರೆಯುವ ಸೈನಿಕ ಶಿಕ್ಷಣವು ಫ್ರೆಂಚರಿಗೆ ದೊರೆಯುವಷ್ಟು ಉತ್ಕೃಷ್ಟವೂ ಪರಿಪೂರ್ಣವೂ ಆಗಿರುವುದಿಲ್ಲ. ಜರ್ಮನರ ಧೈರ್ಯ ಸಾಹಸಗಳು ಅನುಪಮವೆಂದು ಇಟ್ಟುಕೊಳ್ಳುವದಾದರೂ ಶಿಕ್ಷಣದ ಅಭಾವದಿಂದ ಅವರ ಧೈರ್ಯ ಸಾಹಸಗಳು ಅವರ ಪತನಕ್ಕೇ ಕಾರಣವಾಗುತ್ತದೆ.

ಸಂಚಾರದ ಅನುಕೂಲತೆ

"ಸೈನ್ಯವನ್ನು ಸೈನ್ಯ ಸಾಧನಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಒಯ್ಯುವ ಅನುಕೂಲತೆಗಳು ಜರ್ಮನಿಯಲ್ಲಿ ಬಹಳ ಕಡಿಮೆಯಾಗಿವೆ. ಅಗತ್ಯವನ್ನು ಪೂರೈಸಲಿಕ್ಕೆ ಇನ್ನೂ ೪೦೦೦ ಎಂಜಿನುಗಳೂ ಒಂದು ಲಕ್ಷ ಗಾಡಿಗಳೂ ಜರ್ಮನಿಗೆ ಬೇಕಾಗಿವೆ. ಆದರೆ ಇವುಗಳನ್ನು ತಯಾರಿಸಲಿಕ್ಕೆ ಬೇಕಾದ ಕಚ್ಚಾ ಮಾಲುಗಳಾಗಲೀ, ಕಾರ್ಖಾನೆಗಳಾಗಲೀ ಜರ್ಮನಿಯಲ್ಲಿಲ್ಲ. ಇದ್ದ ಕಾರ್ಖಾನೆಗಳೆಲ್ಲ ಯುದ್ಧೋಪಕರಣಗಳನ್ನು ತಯಾರಿಸಲಿಕ್ಕೆ ಸಾಲದಾಗಿವೆ.

ಆಹಾರ ಸಾಮಗ್ರಿಗಳ ಕೊರತೆ

ಜರ್ಮನಿಯಲ್ಲಿ ಆಹಾರ ಸಾಮಗ್ರಿಗಳ ಕೊರತೆ ತುಂಬಾ ಇದೆ. ಜನಸಂಖ್ಯೆ ಏರಿದ ಪ್ರಮಾಣದಲ್ಲಿ ಕೃಷಿಕ್ಷೇತ್ರದಲ್ಲಿ ಬೆಳೆದಿರುವ ಸಾಗುವಳಿಯು ಕೃಷಿಉತ್ಪತ್ತಿಯು ಹೆಚ್ಚಿರುವುದಿಲ್ಲ. ಧಾನ್ಯಾದಿಗಳನ್ನು ಬೆಳೆಸುವ ಆಸ್ಟ್ರಿಯಾ ಜೆಕೊಸ್ಲೋವೇಕಿಯಗಳನ್ನು ಜರ್ಮನಿಗೆ ಸೇರಿಸಿಕೊಂಡುದರಿಂದ ಈ ಆಹಾರ ಸಾಮಗ್ರಿಗಳ ಸಮಸ್ಯೆಯು ಅಲ್ಲಿ ಮೊದಲಿಗಿಂತಲೂ ಈಗ ಜಟಿಲವಾಗಿದೆ. ಉತ್ಪತ್ತಿಗಿಂತ ಕೃಷಿಯ ಖರ್ಚು ವಿಪರೀತವಾಗಿದೆ. ಕೃಷಿಕ್ಷೇತ್ರದ ವಿಸ್ತಾರವು ಕಳೆದ ವರ್ಷಗಳಲ್ಲಿ ಕಡಿಮೆಯಾಗುತ್ತ ಬಂದಿದೆ.

ಕೈಗಾರಿಕೆಯ ಅಭಿವೃದ್ಧಿ

"ಯುದ್ಧ ಕಾಲದಲ್ಲಿ ಯುದ್ಧಕಾರ್ಯವನ್ನು ಮುಂದೊತ್ತುವ ಕಡೆಗೆ ಎಲ್ಲ ಶಕ್ತಿಯು ವ್ಯಯವಾಗುವದರಿಂದ ಜರ್ಮನಿಯಲ್ಲಿ ಕೈಗಾರಿಕೆ ಅಭಿವೃದ್ಧಿಯಾಗುವಂತೆ ಇಲ್ಲ. ಒಂದು ಕಾಲದಲ್ಲಿ ಕೈಗಾರಿಕೆಯಲ್ಲಿ ಯೂರೋಪಿನ ಇತರ ಎಲ್ಲಾ ರಾಷ್ಟ್ರಗಳಿಗಿಂತ ಮುಂದಿದ್ದ ಜರ್ಮನಿಯು ಈಗ ಇಷ್ಟೋ ದೇಶಗಳಿಗಿಂತ ಹಿಂದೆ ಬಿದ್ದಿದೆ.

ಎಣ್ಣೆಯ ಅಭಾವ

ಯಂತ್ರೋಪಕರಣಗಳಿಗೆ ಬೇಕಾದ ಎಣ್ಣೆಯನ್ನು ತಯ್ಯಾರಿಸಲಿಕ್ಕೆ ಸ್ವಾಭಾವಿಕ ಮತ್ತು ಕೃತ್ರಿಮ ಅನೇಕ ಉಪಾಯಗಳನ್ನು ಕೈಕೊಂಡಿದ್ದರೂ ಜರ್ಮನಿಯ ಹತ್ತಿರ ಅದಕ್ಕೆ ಬೇಕಾದ ಎಣ್ಣೆಯ ಸಂಗ್ರಹ ಇರುವದಿಲ್ಲ. ಯುದ್ಧಕಾಲದಲ್ಲಿ ಅದಕ್ಕೆ ವರ್ಷಕ್ಕೆ ೩೦ರಿಂದ ೪೦ ಮಿಲಿಯ ಟನ್ ಎಣ್ಣೆ ಬೇಕಾಗುವದು. ಎಣ್ಣೆಯನ್ನು ಹೊರದೇಶಗಳಿಂದ ತರಿಸುವ ಸಂಭವವಿಲ್ಲ. ರಷ್ಯದ ಎಣ್ಣೆ ರಷ್ಯಕ್ಕೆ ಬೇಕು. ರುಮೇನಿಯಾದ ಸಹಾನುಭೂತಿ ಮಿತ್ರರಾಷ್ಟ್ರಗಳ ಕಡೆಗಿದೆ. ಜರ್ಮನಿಯು ರುಮೇನಿಯದ ಎಣ್ಣೆ ಬಾವಿಗಳನ್ನು ಬಲಾತ್ಕಾರದಿಂದ ತನ್ನ ವಶಮಾಡಿಕೊಂಡರೂ ಜರ್ಮನಿಯು ಎಣ್ಣೆಗಾಗಿ ಹೊರದೇಶಗಳ ಕಡೆಗೆ ಕತ್ತು ನೀಡಲೇ ಬೇಕಾಗುವದು.

ಜರ್ಮನಿಯ ಪ್ರಚಾರಮಂತ್ರಿ ಗೊಬೆಲ್ಸನು

ಆರ್ಥಿಕ ದುಸ್ಥಿತಿ

ಜರ್ಮನಿಯ ಆರ್ಥಿಕ ಸ್ಥಿತಿ ಇವೆಲ್ಲವುಗಳಿಗಿಂತ ಶೋಚನೀಯವಾಗಿರುವದು. ಕಳೆದ ಯುದ್ಧದ ಕೊನೆಯ ಕಾಲದಲ್ಲಿ ಕೂಡ ೨೨೦೦ ಮಿಲಿಯ ಮಾರ್ಕುಗಳ ಚಿನ್ನದ ಸಂಗ್ರಹವು ಜರ್ಮನಿಯಲ್ಲಿತ್ತು. ಆದರೆ ಈ ಜರ್ಮನಿಯ ಬೊಕ್ಕಸವು ಬರಿದಾಗಿದೆ. ಜರ್ಮನಿಯಲ್ಲಿ ಕರಕಂದಾಯ ಸುಂಕ ತೆರಿಗೆಗಳು ವಿಪರೀತ ಹೆಚ್ಚಿವೆ. ಜನರಲ್ಲಿ ಕಳವಳವಿದೆ. ಜರ್ಮನಿ ಏನು ಮಾಡಿದರೂ ಅದು ಈ ಯುದ್ಧದಲ್ಲಿ ವಿಜಯಿ ಆಗಲಾರದಾಗಿದೆ" ಹೀಗೆಂದು ಅವರು ಬರೆದಿರುವರು.

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858.]

ಉಜ್ವಲ ಕಾಂತಿಯ

ವಜ್ರ ಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

THE

BANK OF MANGALORE LTD.,

MANGALORE.

ESTD. 1931.

Branches:-

Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted



ಜಿಲ್ಲಾ ಸಮಾಚಾರ



ಮಂಗಳೂರು

ನಗರ ಸಭೆ:— ಮಂಗಳೂರು ನಗರ ಸಭೆಯ ಮೀಟಿಂಗು ಕಳೆದ ಸೋಮವಾರ ದಿವಸ ಸಂಜೆಗೆ ಮುನ್ಸಿಪಲ್ ಆಫೀಸಿನಲ್ಲಿ ಚೆಯರ್ಮೇನರಾದ ಶ್ರೀ ವೆಂಕಟಪ್ಪಯ್ಯ ಬಾಳಿಗರ ಅಧ್ಯಕ್ಷತೆಯಿಂದ ನೆರವೇರಿತು. ದೀನಬಂಧು ಆಂಡ್ರ್ಯೂಸರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವು ಮಂಜೂರಾಯಿತು. ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ 1940-41ರಲ್ಲಿ ತಿಂಗಳೊಂದರ ರೂ. 25 ಸಹಾಯ ತೆರಲು ನಿಶ್ಚಯವಾಯಿತು.

ಅನೇಕ ಬಿ. ಓಗಳು ಓದಿ ರಿಕಾರ್ಡು ಮಾಡಲ್ಪಟ್ಟವು.

ಬೋರ್ಡು ಉಪಾಧ್ಯಾಯರ ಸಂಬಳ:— ದ. ಕ. ಜಿಲ್ಲಾ ಬೋರ್ಡಿನ ಆಡಳಿತದಲ್ಲಿರುವ ಎಲಿಮೆಂಟರಿ ಶಾಲೆಯ ಅಧ್ಯಾಪಕರುಗಳಿಗೆ ಇನ್ನು ಮುಂದೆ ಪ್ರತಿ ತಿಂಗಳಲ್ಲಿ ಒಂದು ನಿರ್ದಿಷ್ಟ ತಾರೀಕಿನಲ್ಲಿ ಸಂಬಳ ದೊರೆವ ಏರ್ಪಾಡಾಗಿದೆಯೆಂದು ತಿಳಿದು ಬರುತ್ತದೆ.

ಎಕ್ಸ್ಟೆಂಷನ್:— ಮದ್ರಾಸ್ ವಿಶ್ವವಿದ್ಯಾನಿಲಯದ ಓರಿಯಂಟಲ್ ಟೈಟ್ಲ್ ಪರೀಕ್ಷೆಗಳಿಗೆ "ಎಕ್ಸ್ಟೆಂಷನ್" ಅರ್ಜಿ ಹಾಕುವರೆ ಇದ್ದ ಅವಧಿಯನ್ನು ಸಪ್ಟೆಂಬರ ೩೦ರಿಂದ ಇದೀಗ ಜುಲೈ ತಿಂಗಳ ೩೧ ಕ್ಕೆ ಬದಲಾಯಿಸಿದೆ.

ದ. ಕ. ಪಂಡಿತ ಸಂಘ:— ಇದರ ಕಾರ್ಯಕಾರೀ ಸಭೆಯು ತಾ. ೧೧ ರಂದು ಸಂಘದ ಅಧ್ಯಕ್ಷರಾದ ಶ್ರೀ ಸಾಬಾಜಿ ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ದೇಶ ಭಾಷೆಯನ್ನು ಕಲಿಸಲು ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರನ್ನೇ ನಿಯಮಿಸದಿರುವ ವಿಷಯದಲ್ಲಿಯೂ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಸಮಯದಲ್ಲಿ ಪರೀಕ್ಷೆಯ ಉಮೇದುವಾರರ ಮೇಲು ವಿಚಾರವನ್ನು ಮಾಡುವುದಕ್ಕೆ ಇತರ ಅಧ್ಯಾಪಕರಂತೆ ಪಂಡಿತರನ್ನೂ ನಿಯಮಿಸದಿರುವ ವಿಷಯದಲ್ಲಿಯೂ ಹಿಂದಿ ತೆಗೆದುಕೊಂಡು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತವರಿಗೆ ಬರುವ ಪ್ರಶ್ನಪತ್ರಗಳು ಹಿಂದಿಯಲ್ಲಿರದೆ ಇಂಗ್ಲಿಷಿನಲ್ಲಿ ಬರುವ ವಿಷಯದಲ್ಲಿಯೂ ಇವಲ್ಲದೆ ಇನ್ನೂ ಹಲವು ಉಪಯುಕ್ತ ವಿಷಯಗಳಲ್ಲಿಯೂ ಸರಕಾರವನ್ನು ಪ್ರಾರ್ಥಿಸಿಕೊಳ್ಳುವ ಠರಾವುಗಳು ಸರ್ವ ಸಮ್ಮತಿಯಿಂದ ಮಂಜೂರಾದುವು.

ಕಾರ್ಕಳ

ವರ್ಧಂತಿ:— ದ ಯುನೈಟೆಡ್ ಸ್ಕೂಲ್ ಆಫ್ ಕಾಮರ್ಸಿನ ವರ್ಧಂತಿಯು ತಾರೀಕು ೧೩—೪—೪೦ರ ದಿನ ಶ್ರೀ ಬಿ. ವಿ. ರಮಣ ಬಿ. ಎ. ಯಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಕೀಲ ಬಿ. ಬಾಲಕೃಷ್ಣ ಶೆಟ್ಟರು ವಾಣಿಜ್ಯ ಶಿಕ್ಷಣದ ಆವಶ್ಯಕತೆಯ ಕುರಿತು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಮೆನೆಜರುಗಳ ಪ್ರಯತ್ನಗಳನ್ನು ಶ್ಲಾಘಿಸಿ ಈ ಸಂಸ್ಥೆಯು ಶ್ರೇಯಸ್ಸನ್ನು ಕೋರಿದರು.

ವಾರ್ಷಿಕ ದಿನಾಚರಣೆ:— ಸ್ಥಳೀಯ ಕಾಸ್ಮೊಪೊಲಿಟನ ಕ್ಲಬ್ ಮತ್ತು ವಾಚನಾಲಯದ ವಾರ್ಷಿಕ ದಿನಾಚರಣೆಯು ತಾ. ೭—೪—೪೦ರ ದಿನ ಶ್ರೀ ಎ. ಲಕ್ಷ್ಮೀನಾರಾಯಣ ರಾವ್, ಬಿ. ಎ. ಬಿ. ಯಲ್‌ರವರ ಅಧ್ಯಕ್ಷತೆಯಲ್ಲಿ ಆಯಿತು.

ಹಳೆ ವಿದ್ಯಾರ್ಥಿ ಸಂಘ:— ಕಾರ್ಕಳ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿಗಳ ಒಂದು ಸಂಘವು ಶ್ರೀಯಂ. ಸರ್ವೋತ್ತಮ ಕಾಮತ್, ಬಿ. ಎ. ಯಲ್. ಟಿ.ಯವರು ಅಧ್ಯಕ್ಷರಾಗಿಯೂ ಶ್ರೀಗಳಾದ ಕೆ. ಗಿರೀಶ ಭಟ್ಟ, ಮತ್ತು ಕೆ. ನರಸಿಂಹ ಕಾಮತರು ಜತೆ ಕಾರ್ಯದರ್ಶಿಗಳಾಗಿಯೂ ಸ್ಥಾಪಿಸಲ್ಪಟ್ಟಿದೆ.

ಉಡುಪಿ

ತಾಲೂಕು ಎಡ್ವೈಜರಿ ಕಮಿಟಿ:— ಉಡುಪಿ ತಾಲೂಕು ಎಡ್ಯುಕೇಶನಲ್ ಎಡ್ವೈಜರಿ ಕಮಿಟಿಯ ಮಾಸಿಕ ಸಭೆಯು ಕಳೆದ ತಾ. ೩೧ ರಲ್ಲಿ ಶ್ರೀ ಕೆ. ಪೈ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಈ ತಾಲೂಕಿನ ೮೦ ಶಾಲೆಗಳಿಗೆ ನಿಯಮಿತ ಗ್ರಾಂಟಿನಲ್ಲಿ ಸೇಕಡಾ ೮೩ ರಂತೆ ಕಡಿತವಾದುದರಿಂದ ಸದರಿ ಶಾಲಾ ಮೆನೇಜರರ ದುರವಸ್ಥೆಯನ್ನು ಕಂಡು ಈ ಸಮಿತಿಯು ಶೋಕಗೊಂಡಿರುವುದಾಗಿಯೂ ಈ ಪರಿಸ್ಥಿತಿಯನ್ನು ಹೋಗಲಾಡಿಸುವರೆ ಹೆಚ್ಚು ಹಣ ವಿನಿಯೋಗಿಸಿಸುವಂತೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು. ತಾಲೂಕು ಕಮಿಟಿಗಳ ಅಧಿಕಾರ ಮತ್ತು ಕರ್ತವ್ಯಗಳ ಕುರಿತು ಡ್ಯಾರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸ್ ಇವರಿಂದ ಬಂದ ಆಜ್ಞೆಯನ್ನು ಓದಿ ವಿಮರ್ಶಿಸಲಾಯಿತು.

ಶಿರ್ವ. ಒಂದು ವಿನಂತಿ:— ಶಿರ್ವ ಲೋಕಲ್ ಫಂಡ್ ಧರ್ಮಾಸ್ಪತ್ರೆಯು ಒಂದು ಮಾದರೀ ಆಸ್ಪತ್ರೆಯೊಂದಾಗಿರುವುದಾದರೂ, ಹಲವು ವಿಷಯಗಳಲ್ಲಿ ಇನ್ನೂ ಅಸಂಪೂರ್ಣವಾಗಿರುವುದು. ಆಸುಪಾಸಿನ ಜನರಿಗೆ ಬಹಳ ದೊಡ್ಡ ಕೊರತೆಯಾಗಿದೆ. ಈಗೀಗ ರೋಗಿಗಳ ದೈನಿಕ ಹಾಜರಿ ಸಂಖ್ಯೆಯು ಸುಮಾರು ೨೫೦ ಕ್ಕೂ ಮಿಕ್ಕಿರುತ್ತದೆ. ಒಳ ರೋಗಿಗಳನ್ನು ಇರಗೊಡಿಸುವ ಏರ್ಪಾಡಿನ ಅಭಾವವಿದೆ. ಹೆಚ್ಚು ದೂರದಿಂದ ಬಂದ ರೋಗಿಗಳೂ, ಪ್ರಾಣಾಪಾಯಕರ ಕಾಯಿಲೆ ಇರುವವರೂ, ಯಾ, ಇತರ ಆಕಸ್ಮಿಕ ತರದ ಸಂಕಷ್ಟಗಳಿಗೀಡಾದವರೂ, ತಮ್ಮದೇ ನೆಚ್ಚದಿಂದಲಾದರೂ ಕೆಲದಿನಗಳ ಪರ್ಯಂತರ ಇರಲು ಅನುಕೂಲತೆಯಾದುವ ಒಂದು ಕಟ್ಟಡವಿರದೆ ಇಷ್ಟರಲ್ಲೇ ಎಷ್ಟೋ ಅನರ್ಥದ ಪ್ರಸಂಗಗಳು ಒದಗಿರುವುದಲ್ಲದೆ ಆಸ್ಪತ್ರೆಯ ಮುನ್ನಡೆಗೆ ಇದು ಒಂದು ಘನವಾದ ಕೊರತೆಯಾಗಿದೆ.

ಈಯೊಂದು ದುರವಸ್ಥೆಯನ್ನು ಹೋಗಲಾಡಿಸುವ ಸದಿಚ್ಛೆಯಿಂದ ಇದೇ ಕೆಲಸಮಯದ ಹಿಂದೆ ಇಲ್ಲೊಂದು ಎಮರ್ಜೆನ್ಸಿ ವಾರ್ಡನ್ನು ಕಟ್ಟಿಸುವುದೆಂದು ನಿಶ್ಚಯಿಸಿದಂತೆ, ಸದ್ರಿ ಕಟ್ಟಡದ ಕೆಸರು ಕಲ್ಲನ್ನು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ವಿಠಲ ಶೆಟ್ಟರವರು ತಮ್ಮ ಹಸ್ತಗಳಿಂದ ನೆರವೇರಿಸಿರುವರಲ್ಲದೆ, ಕಟ್ಟಡದ ಪಂಚಾಂಗ ರಚನೆಯ ಕೆಲಸವನ್ನೂ ಪ್ರಾರಂಭಿಸಿರುತ್ತದೆ. ಸಾರ್ವಜನಿಕ ಆರೋಗ್ಯದ ಈ ಕಾರ್ಯವನ್ನು ಸಾರ್ವಜನಿಕರ ಬೆಂಬಲದಿಂದಲೇ ಸಾಧಿಸುವುದು ಉತ್ತಮವೆಂದು ತಿಳಿದು ಇಷ್ಟರಲ್ಲೇ ಸ್ವಲ್ಪ ಧನ ಸಂಗ್ರಹವನ್ನು ಊರು ಪರಊರುಗಳಲ್ಲಿರುವ ಉದಾರ ಮಹಾಜನರಿಂದ ಮಾಡಿರುವುದಾದರೂ ಧನ ಬೆಂಬಲವು ಇನ್ನೂ ಅಗತ್ಯವಿದೆ. ಹನಿಗೂಡಿ ಹಳ್ಳವಾಗುವ ರೀತಿಯಲ್ಲಿ ಹಲವು ಜನರ ನೀಡುವಿಕೆಯ ಬಲದಿಂದ ಈ ಕಟ್ಟಡವು ಯಶಸ್ವಿಯಾಗಬೇಕಾಗಿದೆ.

ಅಧುನಿಕ ಭಾರತದ ಅಸಂಖ್ಯಾತ ಹಳ್ಳಿಗಳಲ್ಲಿ ಭಯಂಕರ ದಾರಿದ್ರ್ಯವು ತುಂಬಿರುವಾಗ ಬಡವರುದ್ಧಾರದ ದೃಷ್ಟಿಯಿಂದ ಹೊಟ್ಟೆಯು ಬಹಳ ಬೆಲೆ ಬಾಳುವುದು ಮಾತ್ರವಲ್ಲದೆ ಕೊಟ್ಟವನ ಕೊಡುಗೈಯು ನಿರ್ಗತಿಕ ಬಾಂಧವರ ಉದ್ಧಾರಕ್ಕೆಯಾಗುವುದು. ಆದುದರಿಂದ ಆರ್ತರ ಗೋಳನ್ನು ಪರಿಹರಿಸುವ ಈ ಪವಿತ್ರ ಕಾರ್ಯಕ್ಕೆ ಮಹಾನುಭಾವರೆಲ್ಲ ಕೈಲಾದಷ್ಟು ಸಹಾಯವನ್ನೊದಗಿಸಿ ಸಹಕರಿಸಬೇಕೆಂದೂ, ಅಲ್ಲದೆ ಏಕಕಾಲದಲ್ಲಿ ರೂಪಾಯಿ ೧೦೦ಕ್ಕೂ ಮಿಕ್ಕ ಧನಸಹಾಯವನ್ನು ಮಾಡಬಲ್ಲ ವ್ಯಕ್ತಿಗಳಾಗಲೀ, ಸಂಘ ಸಂಸ್ಥೆಗಳಾಗಲೀ ಇದ್ದರೆ ಅಂಥವರನ್ನು ಸದ್ರಿ ವಾರ್ಡಿನ ಆಶ್ರಯದಾತರನ್ನಾಗಿ ಎಣಿಸುವುದಲ್ಲದೆ, ಅವರ ಹೆಸರುಗಳನ್ನು ವಾರ್ಡಿನಲ್ಲಿ ಸ್ಥಾಪಿಸಬೇಕೆಂದಿರುವ ಶ್ವೇತ ಶಿಲೆಯ ಮೇಲೆ ಸುವರ್ಣಾಕ್ಷರಗಳಿಂದ ಕೆತ್ತಿಸುವ ಏರ್ಪಾಡನ್ನೂ ಮಾಡಿರುತ್ತೇವೆಯೆಂದೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಮಿ. ಪೆನ್ನೋಡಿಸರು ವಿನಂತಿಸಿ ಕೊಳ್ಳುತ್ತಾರೆ.

ಪುತ್ತೂರು

ಮರಣದಂಡನೆ:— ಪುತ್ತೂರು ತಾಲೂಕಿನ ಕೆದಂಬಾಡಿ ಗ್ರಾಮದ ಅಬ್ದುಲ್ ಖಾದರ್ ಬ್ಯಾರಿ ಎಂಬಾತನು ೧೯—೯—೩೯ ರಲ್ಲಿ ತನ್ನ ಮನೆಯ ಬಳಿ ಇದ್ದ ರಾಮಣ್ಣ ಹೆಬ್ಬಾರೆ ಎಂಬವರನ್ನು ಪ್ರಾಣಾಪಾಯಕರ ಗುಂಡಿಕ್ಕಿ ಕೊಂದ ಅಪಾದನೆಯು ಜಿಲ್ಲಾ ಸೆಶನ್ಸ್ ಕೋರ್ಟ ಮುಂದೆ ಬಂದಿದ್ದು ತಾ. ೧೦—೪—೧೯೪೦ ರಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಆರ್. ಎಸ್. ಸುಬ್ರಹ್ಮಣ್ಯ ಅಯ್ಯರವರು ಅಪಾದಿತನಿಗೆ ಮರಣ ದಂಡನೆ ವಿಧಿಸಿದರು. ಮರಣ ಪಟ್ಟ ರಾಮಣ್ಣ ಹೆಬ್ಬಾರರು ಒಬ್ಬೊಂಟಿಗರಾಗಿ, ಶಾನೇ ಅಡಿಗೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಅವರ ಬಳಿ ತುಂಬಾ ಹಣವೂ, ನಗನಗಳೂ ಇದ್ದುವೆಂದು ಊರಿಗೇ ಗೊತ್ತು. ೧ನೇ ಅಪಾದಿತನ ಆಳೆಯು ೩ನೇ ಆಪಾದಿತನು ಹೆಬ್ಬಾರರು ಹೇಳಿದ ಕೆಲಸ ಮಾಡುವ ಜನನಾಗಿದ್ದನು. ರಾಮಣ್ಣ ಹೆಬ್ಬಾರರು, ಒಬ್ಬೊಂಟಿಗನಾಗಿರುವುದನ್ನು ಕಂಡು, ಅವರ ಹಣವನ್ನು ದೋಚಿಕೊಳ್ಳುವ ಅಭಿಲಾಷೆಯಿಂದ ೧ ಮತ್ತು ೩ನೇ ಅಪಾದಿತರು ಬಳಸಿಂಚು ನಡೆಸಿ, ೧ನೇ ಅಪಾದಿತನು, ಮನೆಯ ಕಿಟಕಿಯ ಮೂಲಕ, ಹೆಬ್ಬಾರರ ಮೇಲೆ ಗುಂಡು ಹಾರಿಸಿ, ಅವರನ್ನು ಕೊಂದ. ಈ ಕೃತ್ಯ ೧೯—೯—೩೯ನೇ ರಾತ್ರಿ ೮ ಘಂಟೆಗೆ ನಡೆದರೂ ವಿಚಾರ ಮಾತ್ರ ೨೧ನೇ ತಾರೀಕಿನ ದಿನ, ಹೆಬ್ಬಾರರ ಕೊಠಡಿಯಿಂದ ದುರ್ವಾಸನೆ ಬಂದು ಶವವನ್ನು ನೋಡಿದಾಗಲೇ ಪ್ರಕಟವಾಯಿತು. ಕೃತ್ಯವನ್ನು ನೋಡಿದ ಸಾಕ್ಷಿಗಾರರಿಲ್ಲ; ಆದರೆ ಅಪಾದಿತರೇ ತಮ್ಮ ತಪ್ಪುಗಳನ್ನು ಒಪ್ಪಿಕೊಂಡಿದ್ದರಂತೆ.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು!
ಉಪಾಧ್ಯಾಯರ ಹಾಗೂ ವಿದ್ಯಾರ್ಥಿಗಳ ಬಹುಕಾಲದ ಸಮಸ್ಯೆಯೊಂದು ಈಗ ಪರಿಹಾರವಾಯಿತು!

ಹೊಸ ಪಾಠಪಟ್ಟಿಗೆ ಅನುಗುಣವಾಗಿ
ವಿದ್ವಾನ್ ಶ್ರೀ. ಕೆ. ಕೆ. ರೈ ಇವರಿಂದ ವಿರಚಿತವಾದ

ವ್ಯಾಕರಣ ಮತ್ತು ಪ್ರಬಂಧ

(ಸಚಿತ್ರ)

8ನೆಯ ತರಗತಿಗೆ
7 ,, ,,
6 ,, ,,
4 ಮತ್ತು 5 ,, (ಅಚ್ಚಿನಲ್ಲಿದೆ)

ಬಡವಿದ್ಯಾರ್ಥಿಗಳಿಗೆ ಕೊಂಡುಕೊಳ್ಳಲು ಅನುಕೂಲವಾಗುವಂತೆ ಬೆಲೆಯು ಬಹಳ ಸುಲಭವಾಗಿಡಲ್ಪಟ್ಟಿದೆ.

ಹೈಸ್ಕೂಲು ಮತ್ತು ಟ್ರೈನಿಂಗ್ ಶಾಲೆಗಳ ವಿದ್ಯಾರ್ಥಿಗಳ ಉಪಯೋಗದ ಸಲುವಾಗಿ ಬರೆಯಲ್ಪಟ್ಟ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ.

ಇಷ್ಟು ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಸಾಹಸವು ನಮ್ಮ ಜಿಲ್ಲೆಯ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ!

ಪದಜ್ಞಾನ, ವಾಕ್ಯ ವಿಚಾರ, ವಾಕ್ಯ ವಿಭಜನೆ, ವಾಕ್ಯ ಪರಿವರ್ತನೆ, ವಿಭಕ್ತಿ, ಲಿಂಗ, ವಚನಗಳೇ ಮೊದಲಾಗಿ ಸರ್ವಾಂಗ ವ್ಯಾಕರಣವು ವಿದ್ಯಾರ್ಥಿಗಳ ಮನೋರಂಜಕವಾಗುವಂತೆ ಸೋದಾಹರಣವಾಗಿ ಬರೆಯಲ್ಪಟ್ಟಿದೆ! ಪ್ರಬಂಧ ಭಾಗದಲ್ಲಿ ಪ್ರಬಂಧ, ಲೇಖನ, ಕಥಾಲೇಖನ, ಸಂಭಾಷಣಾರೂಪ, ಅನುವಾದ ಹಾಗೂ ಸಾರಾಂಶಲೇಖನ, ಟಿಪ್ಪಣಿ ಬರೆಯುವುದು ಮೊದಲಾದ ಸಂಪೂರ್ಣ ವಿಷಯಗಳು ಅಡಕವಾಗಿವೆ! ಪ್ರತಿಯೊಂದು ಪಾಠವೂ ಅಭ್ಯಾಸಗಳಿಂದ ಅವ್ಯಕ್ತಿಗೊಂಡಿದೆ! ಮಾತ್ರವಲ್ಲದೆ, ಛಂದಸ್ಸು, ಅಲಂಕಾರ, ಧ್ವನಿಲಿಪಿ ಈ ವಿಷಯಗಳೂ ಸುಲಭ ಶೈಲಿಯಲ್ಲಿ ವಿವರಿಸಲಾಗಿವೆ.

ಶಿಕ್ಷಣಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!
ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!!

ಇದೇ ತರದಲ್ಲಿ ಎಲಿಮೆಂಟರಿ ಶಾಲೆಗಳ ಎಲ್ಲಾ ತರಗತಿಗಳಿಗೂ ಬೇಕಾದ ಸಿವಿಕ್ಸ್, ಭೂಗೋಳ, ಪ್ರಕೃತಿಶಾಸ್ತ್ರ, ಗೃಹವಿಜ್ಞಾನ, ಚರಿತ್ರೆ, ಲಘುವಿಜ್ಞಾನ ಪುಸ್ತಕಗಳೂ ಸಿದ್ಧವಾಗಿವೆ.

ಪುಸ್ತಕಗಳು ದೊರಕುವ ಸ್ಥಳ:

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

6, 7, 8ನೆಯ ತರಗತಿಗಳ ವ್ಯಾಕರಣ ಮತ್ತು ಪ್ರಬಂಧದ ಪ್ರತಿಗಳನ್ನು ಇಚ್ಛಿಸುವವರು 9 ಆಣೆ ಸ್ಟಾಂಪುಗಳನ್ನು ಕಳುಹಿಸಿ ಕೊಡುವುದು.

ನಾರ್ವೆ ಯುದ್ಧಕ್ಕೆ ಮಿತ್ರರಾಷ್ಟ್ರಗಳ ಬೆಂಬಲ



ಜರ್ಮನರನ್ನು ಹಿಂದಟ್ಟಿದರು!

ಇಟಲಿಯ ಯುದ್ಧಹಡಗುಗಳು! ರೂಸ್‌ವೆಲ್ಟರ ವೀರಾಟೋಪ!

ಇಟಲಿಯ ಯುದ್ಧದ ಹಡಗು ಕಡಲಿಗಿಳಿದಿದೆ

ಇಟಲಿಯ ಯುದ್ಧದ ಹಡಗು ಭೂಮಧ್ಯ ಸಮುದ್ರಕ್ಕಿಳಿದಿವೆ.

ಸೀನಿಯರ್ ಗಯಾಡರು ಒಂದು ಲೇಖನ ಬರೆಯುತ್ತಾ ಫ್ರಾನ್ಸಿನ ಇಟಲಿ ವಿರುದ್ಧ ಧೋರಣೆಯನ್ನು ಖಂಡಿಸಿದ್ದಾರೆ.

ಜರ್ಮನಿಯು ಹೊಸ ರಾಯಭಾರಿಯೊಬ್ಬನನ್ನು ಇಟಲಿಗೆ ಕಳುಹಿಸಿದೆ.

ಇಟಲಿಯು ಜರ್ಮನಿಯ ಪಕ್ಷ ಸೇರುವುದೇ ಎಂಬ ಊಹಾಪೋಹೆಯು ಬಲವತ್ತರವಾಗಿದೆ.

ನಾರ್ವೆಯನರ ಕಾದಾಟ

ದಾಳಿಯಿಟ್ಟವರನ್ನು ತಡೆಯಲು ನಾರ್ವೆಯನರು ಬಹಳ ಸ್ವಾರ್ಥತ್ಯಾಗ ಮಾಡಿ ಕಾದಾಡುತ್ತಿದ್ದಾರೆ. ೧೫ ವರ್ಷದ ಎಳೆಯ ತರುಣರೂ ರಣರಂಗಕ್ಕಿಳಿದು ಹೋರಾಡುತ್ತಿರುವರು.

ಶಕ್ತಿಯನ್ನು ಶಕ್ತಿಯಿಂದಲೇ ತಡೆಯಬೇಕು

ರೂಸವೆಲ್ಟರ ಭಾಷಣ

"ನಾವು ಇದುವರೆಗೆ ರಾಷ್ಟ್ರಗಳನ್ನು ನಮ್ಮೊಡನೆ ಶಾಂತತೆಯಿಂದ ಮುನ್ನಡೆಯಲು ಆಹ್ವಾನಿಸಿದೆವು. ಆದರೆ ಅಂತಹ ಶಾಂತಿಯ ನೀತಿಯ ರಾಷ್ಟ್ರಗಳಿಗೆ ಸರಿತೋರದಿದ್ದರೆ, ಶಕ್ತಿಯನ್ನು ಶಕ್ತಿಯಿಂದಲೇ ನಾವು ತಡೆಯಬೇಕಾಗುವುದು" ಹೀಗೆಂದು ಪ್ರೆಸಿಡೆಂಟ್ ರೂಸವೆಲ್ಟರು ಅಭಿಪ್ರಾಯಪಟ್ಟಿರುವರು.

ಸ್ವೀಡನ್ ತಯಾರಾಗಿದೆ

ವಿಮಾನ ದಾಳಿಯ ವಿರುದ್ಧ ಸ್ವೀಡನು ತನ್ನ ರಕ್ಷಣೆಗೆ ಇಂದು ಸಂಪೂರ್ಣ ತಯಾರಾಗಿದೆಯೆಂದು ಅಲ್ಲಿ ಪ್ರಕಟಣೆಯೊಂದು ತಿಳಿಸುತ್ತದೆ.

ಬ್ರಿಟನಿಗೆ ನಾಜಿಯ ಬೆದರಿಕೆ

ಬೆರ್ಗನಿಗೆ ವಿಮಾನ ದಾಳಿ ಮಾಡಿದ ವಿಷಯದಲ್ಲಿ ಜರ್ಮನಿಯು ಸಿಟ್ಟುಗೊಂಡು ಬ್ರಿಟಿಷ್ ನಗರಗಳಿಗೆ ಬೇಗನೆ ವಿಮಾನದಾಳಿ ಮಾಡಿ ಭಗ್ನಮಾಡುವೆವೆಂದು ಸಾರುತ್ತಿದೆ.

ನಾರ್ವೆಯಲ್ಲಿ ಬ್ರಿಟಿಷ್ ಹಡಗುಪಡೆ

ಬ್ರಿಟಿಷ್ ಹಡಗುಪಡೆಯು ನಾರ್ವೆಯ ವಿವಿಧ ಗಡಿಗಳಲ್ಲಿ ಬಂದು ತಳವೂರಿದೆ. ಜರ್ಮನಿಯ ಗಡಿಯನ್ನು ಎಲ್ಲಾ ರೀತಿಯಿಂದಲೂ ನಿರ್ಬಂಧಿಸಲು ಯತ್ನಮಾಡುತ್ತಿದೆ.

ಜರ್ಮನಿಯು ಬ್ರಿಟಿಷರಿಗೆ ಜಯವಾಗಿದೆಯೆಂದು ಹರಡಿದ ವಾರ್ತೆಯು ಸುಳ್ಳೆಂದು ಸಾರಿದೆ.

ಜರ್ಮನರು ನಾರ್ವಿಕಿನಿಂದ ಓಡಿಹೋದರು

ನಾರ್ವಿಕಿನಲ್ಲಿ ಕೆಲ ಸಮಯಗಳ ತೀವ್ರ ಕಾದಾಟವಾಗಿ, ದಾಳಿಯಿಡಲು ಬಂದ ಜರ್ಮನರು ಹಿಂದಿರುಗಿ ಓಡಿಹೋಗಿರುವರೆಂದು ತಿಳಿದಿದೆ.

ನಾರ್ವೆಯಲ್ಲಿ ಬ್ರಿಟಿಷ್ ಸೈನ್ಯ

ನಾರ್ವೆಗೆ ಸಹಾಯ ಕೊಡಲು ಬ್ರಿಟಿಷ್ ಸೈನ್ಯಸಂಗ್ರಹವು ಬಂದಿದೆ. ಅನೇಕ ಕಡೆಗಳಲ್ಲಿ ಅವರು ಯುದ್ಧ ಮಾಡುತ್ತಿದ್ದಾರೆ.

ಟರ್ಕಿಯು ತಿರಿಗೆ ಕಂಪಿಸಿತು!

ಟರ್ಕಿಯಲ್ಲಿ ತಿರಿಗಿ ಭೂಕಂಪವುಂಟಾಗಿದೆ. ಎಂಬತ್ತು ಮನೆಗಳು ಮುರಿದು ಬಿದ್ದಿವೆ. ಅನೇಕ ಜನ ಧನ ನಷ್ಟಗಳು ಒದಗಿವೆ!

ಬಾಲ್ಟಿಕಿನಲ್ಲಿ ಬ್ರಿಟಿಷರ ತೋಟೆಗಳು

ಬಾಲ್ಟಿಕಿನಲ್ಲಿಯೂ ಅದರ ಆಸುಪಾಸಿನಲ್ಲಿಯೂ ಬ್ರಿಟಿಷರು ತೋಟೆಗಳನ್ನು ಹಾಕಿರುವುದಾಗಿ ಪ್ರಕಟವಾಗಿದೆ. ಜರ್ಮನಿ ಸ್ವೀಡನನ್ನು ಆಕ್ರಮಿಸಿದಲ್ಲಿ ಮಿತ್ರರಾಷ್ಟ್ರಗಳು ಭಂಗಿಸುವೆವೆಂದು ಹೇಳಿದ್ದಾರೆ. ಇತ್ತ ಸ್ವೀಡನ್ ಯಾವ ರಾಷ್ಟ್ರದ ಸೈನ್ಯಗಳನ್ನೂ ತನ್ನ ದೇಶದ ಮೂಲಕ ಸಾಗಲು ಬಿಡೆನೆಂದು ಸಾರಿದೆ.

ತೀವ್ರ ಕಾದಾಟ

ನಾರ್ವೆಯವರು ಜರ್ಮನರೊಡನೆ ನೆಲದ ಮೇಲೆ ವೀರಾವೇಶದಿಂದ ಕಾದಾಡುತ್ತಿದ್ದಾರೆ. ಇದರಿಂದ ಜರ್ಮನ್ ಸೈನ್ಯದ ಕಷ್ಟಗಳು ಹೆಚ್ಚಿವೆ. ಇತ್ತ ನಾಝಿಗಳ ಕ್ರಿಶ್ಚಿಯನ್ ಸ್ಯಾಂಡಿನಿಂದ ಮುಂದೊತ್ತುತ್ತ ಕೆಲವು ನಾರ್ವೆ ಹಡಗುಗಳನ್ನು ಹಿಡಿದಿರುವರೆಂದು ವಾರ್ತೆ.

ಡೆನ್ಮಾರ್ಕ್ ಶರಣಾಯಿತು

೯ನೇ ದಿನ ಜರ್ಮನ್ ಸೈನಿಕರು ಡೆನ್ಮಾರ್ಕಿನ ಗಡಿಯನ್ನು ಅತಿಕ್ರಮಿಸಿದರು. ಜರ್ಮನಿಯ ಆಕ್ರಮಣವನ್ನು ತಡೆಯುವದು ನಿಷ್ಫಲವೆಂದೆನಿಸಿ ಡೆನ್ಮಾರ್ಕ ಜರ್ಮನಿಗೆ ಶರಣಾಯಿತು. ಹೀಗೆ ಇಡೀ ಡೆನ್ಮಾರ್ಕ ಇಂದು ಜರ್ಮನಿಯ ಸಂರಕ್ಷಣೆಯಲ್ಲಿದೆ.

ನಾರ್ವೆ ಹೋರಾಡುತ್ತಿದೆ

ಜರ್ಮನಿಯ ಆಕ್ರಮಣವನ್ನು ತಡೆಯಲು ನಾರ್ವೆ ಸರಕಾರವು ನಿರ್ಧರಿಸಿದೆ. ಆಸ್ಲೋದಲ್ಲಿಯ ಸರಕಾರವು ಹ್ಯಾಮರ ಎಂಬಲ್ಲಿಗೆ ಸ್ಥಳಾಂತರಿಸಲ್ಪಟ್ಟಿದೆ. ನಾರ್ವೆ ಅರಸರು ಮಿತ್ರರಾಷ್ಟ್ರಗಳೊಂದಿಗೆ ಕೂಡಿಕೊಂಡು ಜರ್ಮನಿಯನ್ನೆದುರಿಸಿ ಹೋರಾಡುತ್ತಿರುವರು.

ಜರ್ಮನ್ ವೈಮಾನಿಕರು ನ್ಯಾಯಬರ್ಗಸಂಡದಲ್ಲಿ ನಾರ್ವೆ ರಾಜಕುಟುಂಬವಿರುವದೆಂಬ ಸಂಶಯದಿಂದ ಅದರ ಮೇಲೆ ಬಾಂಬಿನ ದಾಳಿಮಾಡಿ ಅದನ್ನು ಸಂಪೂರ್ಣ ಧ್ವಂಸ ಮಾಡಿದರು.

ಬ್ರಿಟಿಷ್ ಯುದ್ಧದ ಹಡಗುಗಳು

ಬ್ರಿಟಿಶರ ಯುದ್ಧದ ಹಡಗುಗಳು ಆಸ್ಲೋ ಫೋರ್ಡದಲ್ಲಿ ಹೊಕ್ಕಿದ್ದು ಆಸ್ಲೋಕ್ಕೆ ಶರಣು ಬರಬೇಕೆಂದು ಸೂಚನೆ ಕೊಟ್ಟಿವೆ. ನಿರ್ದಿಷ್ಟ ಸಮಯದಲ್ಲಿ ಶರಣು ಬರಲಿಲ್ಲವಾದರೆ ಆಸ್ಲೋವಿನ ಮೇಲೆ ಬಾಂಬುಗಳ ಮಳೆಗರೆಯಲಾಗುವದೆಂದೂ ತಿಳಿಸಿರುವರು. ಪರಿಸ್ಥಿತಿಯು ಭೀಕರವಾಗಿದ್ದನ್ನು ಕಂಡು ನಾಗರಿಕರು ಅಲ್ಲಿಂದ ಹೊರಬಿದ್ದು ಹೋಗತೊಡಗಿರುವರು. ನಾರ್ವಿಕದಲ್ಲಿಯೂ ಬ್ರಿಟಿಶ್ ಹಡಗುಪಡೆ ಬಂದಿದೆ.

ಜರ್ಮನರಿಗೆ ಬಗ್ಗುವುದಿಲ್ಲ

ನಾರ್ವೆಯ ಅರಸರಾದ ಹಾಕೊನರು ಒಂದು ಪ್ರಕಟಣೆ ಹೊರಡಿಸಿ ಕ್ವಿಸಲಿಂಗ ಸರಕಾರವನ್ನು ಮಾನ್ಯ ಮಾಡಬೇಕೆಂಬ ಜರ್ಮನ್ ಬೇಡಿಕೆಯನ್ನು ನಿರಾಕರಿಸಿದ್ದಾರೆ. ಕ್ವಿಸಲಿಂಗ ಸರಕಾರವು ಜರ್ಮನಿಯ ಹಸ್ತಕರಿಂದ ನಿರ್ಮಿತವಾದ ಸರಕಾರವೆಂದಿರುವರು.

ಜರ್ಮನಿಯ ಬೇಡಿಕೆಯನ್ನು ಮಾನ್ಯ ಮಾಡಬೇಕೋ ಹೇಗೆಂಬ ಬಗ್ಗೆ ವಿಚಾರ ಮಾಡಲು ನಿಯಮಿಸಲ್ಪಟ್ಟ ಮೂವರ ಮಂಡಳಿಯು ಜರ್ಮನ್ ಬೇಡಿಕೆಯು ಘಟನೆಗೆ ವಿರುದ್ಧವಾದದ್ದರಿಂದ ಅವರೊಡನೆ ಒಪ್ಪಂದ ಮಾಡಿಕೊಳ್ಳಲು ಸಬಲವಾದ ಯಾವದೇ ಕಾರಣವಿರುವದಿಲ್ಲ. ಎಂದು ಅಭಿಪ್ರಾಯ ವ್ಯಕ್ತಮಾಡಿ ಅರಸರ ಅಭಿಪ್ರಾಯವನ್ನೆ ಎತ್ತಿಹಿಡಿದಿದೆ.

ಸ್ಕಾಗರ್‌ರ್ಯಾಕ ಕಾಳಗದಲ್ಲಿ ಬ್ರಿಟಿಶ ಹಡಗಪಡೆಯವರು ನಾಲ್ಕು ಜರ್ಮನ್ ಕ್ರೂಝರಗಳನ್ನೂ ಎರಡು ಅಥವಾ ಮೂರು ಸೈನಿಕರ ದೊಡ್ಡ ಹಡಗಗಳನ್ನೂ ಮುಳುಗಿಸಿರುವರೆಂದು ಖಾಸಗಿ ಸುದ್ದಿಯಿಂದ ಗೊತ್ತಾಗುತ್ತದೆ.

ಎಮಡೆನ್ ಹಡಗವು ಮುಳುಗಿತು.

ಎಮಡೆನ್ ಎಂಬ ಜರ್ಮನ್ ಹಡಗವು ಹಾರ್ಟೆನ ಹತ್ತರ (ಆಸ್ಲೊ ಬಂದರ) ನಾರ್ವೇಜಿಯನ್ ಕ್ರೂಝರದಿಂದ ಮುಳುಗಿಸಲ್ಪಟ್ಟಿತೆಂದು ತಿಳಿಯುತ್ತದೆ.

ನೌಕಾಯುದ್ಧ

ನಾರ್ವೆಯ ಉತ್ತರಕ್ಕೆ ಟ್ರಾಂಧಿಮದ ಹತ್ತಿರ ಬ್ರಿಟಿಷ ಮತ್ತು ಜರ್ಮನ್ ಹಡಗುಗಳ ನಡುವೆ ಭೀಕರ ಯುದ್ಧವು ನಡೆಯಿತು.

ನಾರ್ವೆ ತೀರದಲ್ಲಿ ನಡೆದ ಯುದ್ಧದಲ್ಲಿ 'ಗ್ಲೊವರ್ಮ' ಎಂಬ ಬ್ರಿಟಿಷ್ ಹಡಗವು ಮುಳುಗಿತು. 'ರೋಝ' 'ಗುರ್ಕಾ' ಎಂಬ ಬ್ರಿಟಿಷ್ ಹಡಗುಗಳು ಶತ್ರುಗಳ ಬಾಂಬಿನ ಹೊಡೆತಕ್ಕೆ ಗುರಿಯಾಗಿದವು. 'ಗುರ್ಖಾ' ಮುಳುಗಿತು.

ಆರ್ಕನಿ ದ್ವೀಪಗಳ ಹತ್ತರ ಒಂದು ಜರ್ಮನ್ 'ಯು' ಬೋಟು ಮುಳುಗಿಸಲ್ಪಟ್ಟಿತು.

ನಾರ್ವೆ ಅರಸರು ಬ್ರಿಟಿಷ ರಾಜಮನೆತನದ ಅಳಿಯಂದಿರು

ನಾರ್ವೆಯ ಅರಸರಾದ ಹಾಕನರಿಗೂ ಬ್ರಿಟಿಷ ರಾಜಮನೆತನಕ್ಕೂ ಸಂಬಂಧವಿದೆ. ಅವರ ಹೆಂಡತಿಯಾದ ರಾಣಿ ಮಾಡೆಯು ಐದನೇ ಜಾರ್ಜರ ಸಹೋದರಿಯು. ಮಾಡೆಯು ೧೯೩೮ ರಲ್ಲಿ ಸತ್ತಳು.

ಹಾಕನ ಅರಸರ ಮಗದಾದ ರಾಜಕುಮಾರ ಆಲಾವನು ಆಕ್ಸಫರ್ಡ ವಿಶ್ವವಿದ್ಯಾಲಯದಲ್ಲಿ ಕಲಿತಿರುವನು.

ಡೆನ್ಮಾರ್ಕಿನ ಅರಸರಾದ ಕ್ರಿಶ್ಚಿಯನ್ ಮತ್ತು ನಾರ್ವೆಯ ಅರಸರಾದ ಹಾಕನರು ಅಣ್ಣತಮ್ಮಂದಿರು

ಸ್ಕಾಗರ್‌ರ್ಯಾಕ ಮತ್ತು ಕಾಟೆಗ್ಯಾಟದಲ್ಲಿ ತೋಟೆಗಳು ಇಡಲ್ಪಟ್ಟಿವು

ಸ್ಕಾಗರ್‌ರ್ಯಾಕ ಹಾಗು ಕಾಟೆಗಾಟದಲ್ಲಿ ಬ್ರಿಟಿಷರು ಈಗ ತೋಟೆಗಳನ್ನು ಇಟ್ಟಿದ್ದಾರೆ. ನಾರ್ವೆಯ ಪಶ್ಚಿಮ ಹಾಗು ಪೂರ್ವ ಭಾಗದಲ್ಲಿ ಬಂದು ತಳವೂರಿರುವ ಜರ್ಮನಿಯ ಹಡಗುಪಡೆಗೆ ಜರ್ಮನಿಯಿಂದ ಹೆಚ್ಚಿನ ಸಾಮಗ್ರಿಗಳು ಬರದಂತೆ ನೋಡಿಕೊಳ್ಳುವದೇ ಇದರ ಉದ್ದೇಶವಾಗಿರುವುದು. ತಮ್ಮ ಹಡಗುಪಡೆಗೆ ಜರ್ಮನರು ಸಾಮಗ್ರಿಗಳನ್ನು ಒದಗಿಸಬೇಕಾಗಿದ್ದರೆ ಇನ್ನು ಮೇಲೆ ವಿಮಾನದಿಂದಾಗಲಿ ಇಲ್ಲವೆ ತೋಟೆಗಳು ಇಡಲ್ಪಟ್ಟಲ್ಲಿ ತಮ್ಮ ಹಡಗುಗಳನ್ನು ಆಲೆಬಿಟ್ಟಾಗಲಿ ಒದಗಿಸಬೇಕಾಗುವದು

ಮೇಜರ ಕ್ವೀಸಲಿಂಗರು.

ನಾರ್ವೆಯ ರಾಜಸೂತ್ರ ವಹಿಸಿದರು

ಆಸ್ಲೋದಲ್ಲಿ ಜರ್ಮನ್ ಗೊಂಬೆ ಸರಕಾರದ ಮುಖ್ಯ ಮಂತ್ರಿಗಳಾದ ಮೇಜರ ಕ್ವಿಸಲಿಂಗರು ಜರ್ಮನ್ ನಿಯಂತ್ರಣದಲ್ಲಿಯ ಆಕಾಶವಾಣಿಯ ಮೂಲಕ ನಾರ್ವೆಜಿಯನ್ ಘಟನೆಯ ಉಗನೇ ಕಲಮಿನನ್ವಯ ತಾವು ನಾರ್ವೆಯ ರಾಜ್ಯಸೂತ್ರ ವಹಿಸಿರುವದಾಗಿ ಒಂದು ಪ್ರಕಟಣೆ ಮಾಡಿದರು. ಇದೇ ಜಾಹೀರನಾಮೆಯಲ್ಲಿ ಅವರು ನಾಗರಿಕರಿಗೆ ಶಾಂತತೆಯಿಂದ ಇರಲು ಕೇಳಿಕೊಂಡಿದ್ದಲ್ಲದೆ ದೇಶತ್ಯಾಗ ಮಾಡಿದವರು ಕೂಡಲೇ ತಿರುಗಿ ಬರಬೇಕೆಂದೂ ತಿಳಿಸಿದರು.

ವರ್ಕಿಂಗ್ ಕಮಿಟಿ ಸಭೆ

ಕಾಂಗ್ರೆಸು ವರ್ಕಿಂಗ್ ಕಮಿಟಿ ಮೀಟಿಂಗು ತಾ. ೧೫ರಲಿ ವಾರ್ಧಾದಲ್ಲಿ ಸೇರಿತು. ಮಹಾತ್ಮ ಗಾಂಧಿಗಳೂ ಬಂದಿದ್ದರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಟಿ. ಪ್ರಕಾಶಂ, ಡಾ। ಪಟ್ಟಾಭಿ, ಹರಿಕೃಷ್ಣ ಮೆಹತಾಬ್ ಮೊದಲಾದವರೂ ಆಮಂತ್ರಿತರಾಗಿ ಬಂದಿದ್ದರು.

ರಾಮಗಢದ ಮೇಲೆ ನಡೆದ ರಾಜಕೀಯ ಗತಿ, ಮುಸ್ಲಿಂ ಲೀಗಿನ ಧೋರಣೆ ಮತ್ತು ಬ್ರಿಟಿಷ್ ಸರಕಾರದ ವರ್ತನೆಗಳ [illegible] ನಡೆಯಿತು.

ಸತ್ಯಾಗ್ರಹವನ್ನು ಆರಂಭ ಮಾಡಬೇಕಾದರೆ ಹಲವು ವಿಷಯಗಳನ್ನು ಇನ್ನೂ ವಿಚಾರಿಸತಕ್ಕದಿದ್ದರೂ, ಇಂದು ಕಾಂಗ್ರೆಸಿನವರಿಗೆ ದೇಶವು ಸಿದ್ಧವಾಗಿದೆಯೆಂದು ಮುಖಂಡರು ಅಭಿಪ್ರಾಯಪಡುತ್ತಾರೆ. ಈ ಬಗ್ಗೆ ವರ್ಕಿಂಗ್ ಕಮಿಟಿಯು ಎಲ್ಲಾ ಸತ್ಯಾಗ್ರಹ ಕಮಿಟಿಗಳಿಗೂ ಸೂಚನೆಗಳನ್ನು ಕಳುಹಿಸುವವು.

ಸ್ತ್ರೀ ವಿಭಾಗ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಸ್ತ್ರೀವಿಭಾಗವೊಂದನ್ನು ಮಾಡಬೇಕೆಂಬ ವಿಚಾರವು ತರ್ಕಿಸಲಾಯಿತು. ಎಲ್ಲರೂ ಅದಕ್ಕೆ ಪ್ರೋತ್ಸಾಹಕರಾಗಿದ್ದಾರೆ ಏಕೆಂದರೆ ಅದರಿಂದ ರಾಷ್ಟ್ರೀಯ ಆಂದೋಲನವು ಮತ್ತಷ್ಟು ಜಾಗ್ರತವಾಗುವುದೆಂದು ಎಲ್ಲರ ಭರವಸೆಯಾಗಿದೆ.

ಸ್ಥಳೀಕ ಸಂಸ್ಥೆಗಳಿಗೆ ರಾಜೀನಾಮೆ

ಸ್ಥಳೀಕ ಸಂಸ್ಥೆಗಳ ಸದಸ್ಯತ್ವಕ್ಕೆ ಮತ್ತು ಅಲ್ಪ ಸಂಖ್ಯೆಯಿಂದಿರುವ ಪ್ರಾಂತಗಳ ನ್ಯಾಯವಿಧಾಯಕ ಸಭೆಗಳ ಸದಸ್ಯತ್ವಕ್ಕೆ ಕಾಂಗ್ರೆಸಿನವರು ರಾಜೀನಾಮೆ ಕೊಡಬೇಕೆಂಬ ವಿಷಯಕ್ಕೆ ಹೆಚ್ಚಿನ ಬೆಂಬಲ ಸಿಗಲಿಲ್ಲ. ಸ್ಥಳೀಕ ಸಂಸ್ಥೆಗಳಲ್ಲಿ ಇದ್ದುದರಿಂದ ಲಂಚ ಕಪಟಗಳು ಕಡಿಮೆಯಾಗಿ, ಹೆಚ್ಚು ಜನತಾಸಂಪರ್ಕವು ಉಂಟಾಗಿದೆಯೆಂದು [illegible] ಮುಖಂಡರ ಅಭಿಪ್ರಾಯವಾಗಿದೆ.

ಸಂತಾಪ [illegible] ಠರಾವು

ಮೌಲಾನಾ ಯಾಕೂಬ್ ಹಸನ್ ಮತ್ತು ದೀನಬಂಧು ಆಂಡ್ರೂಸರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವು ಮಾಡಲಾಯಿತು.

ನಮ್ಮ ಮುಖ್ಯ ಕೆಲಸ

"ವರ್ಕಿಂಗ್ ಕಮಿಟಿಯ ಮುಂದಿರುವ ಮುಖ್ಯ ಕೆಲಸವೆಂದರೆ, ದೇಶದಲ್ಲಿ ಎಲ್ಲಾ ಕಡೆಗಳಲ್ಲಿಯೂ [illegible] ಅನೇಕ ಕಾಂಗ್ರೆಸ್ ಕಮಿಟಿಗಳನ್ನು ಸತ್ಯಾಗ್ರಹ ಕಮಿಟಿಗಳಾಗಿ ಪರಿವರ್ತಿಸುವುದಾಗಿದೆ" ಎಂದು ರಾಷ್ಟ್ರಪತಿ [illegible]ದರು ಪತ್ರಿಕಾ ಪ್ರತಿನಿಧಿಗೆ ಹೇಳಿದರು.

ಡಿಫೆನ್ಸ್ ಆಫ್ ಇಂಡಿಯಾ [illegible]

ಪೋಲೀಸ್ [illegible] ಅಪ್ಪಣೆ



ಕಾಂಗ್ರೆಸ್ ವರ್ಕಿಂಗ್ ಕಮಿಟಿ ಅಧಿವೇಶನ!

ಸ್ಥಳೀಕ ಸಂಸ್ಥೆಗಳ ಸದಸ್ಯರು ರಾಜಿಕೊಡಬೇಕೆ?

ಎಲ್ಲೆಲ್ಲೂ ಸತ್ಯಾಗ್ರಹದ ಸಿದ್ಧತೆಗಳು!

ಬೊಂಬಯಿ ಮುಷ್ಕರ ನಿಂತಿತು!

ಮುರಿದದ್ದಕ್ಕಾಗಿ ಮುಂಬಾಯಿಯಲ್ಲಿ ಬುಧವಾರ ೧೧ ಜನರು ಸೆರೆಹಿಡಿಯಲ್ಪಟ್ಟರು.

ಅಲ್ಲಿಯ ಇಂಡಿಯಾ ಅಡ್ವೋಕೇಟ ಪ್ರೆಸ್ಸಿನ ಕೀಪರರಿಗೆ ೩೦೦೦ ರೂಪಾಯಿ ಮತ್ತು ಸ್ಟೂಡಂಟ್ಸ್ ಕಾಲ್ ಎಂಬ ಪತ್ರಿಕೆಯ ಪ್ರಕಾಶಕರಿಗೆ ೧೦೦೦ ರೂಪಾಯಿ ಜಾಮೀನನ್ನು ಮುಂಬಯಿ ಸರಕಾರದವರು ಕೇಳಿದ್ದಾರೆ.

ಗೋದಾವರಿಯ ಗೋಖಲೆಯವರು ಮುಂಬಯಿಯಲ್ಲಿ ಸೆರೆಹಿಡಿಯಲ್ಪಟ್ಟು ಪುಣೆಯಲ್ಲಿ ಕಡೆಯಲ್ಪಟ್ಟರುವರು ಹಿಂದುಸ್ಥಾನ ಸಂರಕ್ಷಕ ಕಾಯದೆಯನ್ವಯ ಅವರನ್ನು ಸೆರೆಹಿಡಿದಿದೆ ಶ್ರೀಮತಿಯವರು ಭಾರತ ಸೇವಕ ಸಮಾಜದ ಸದಸ್ಯೆಯರೂ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರಮುಖ ಕಾರ್ಯಕರ್ತರೂ ಇರುವರು

ಎ ಕಾವೆಟ್ಟೇಶ್ವರರಾವ್, ಜಿ ರಾಮಲಿಂಗಯ್ಯ, ಕೆ. ಎಲ್ ನರಸಿಂಹರಾವ್, ವಿ ಶಿವಲಿಂಗ ಪ್ರಸಾದ ಮತ್ತು ವಿ ಪಿ ಶಿವಯ್ಯ ಎಂಬ ಗುಂಟೂರಿನ ಕಾಂಗ್ರೆಸ್ ಸೋಶಿಯಲಿಸ್ಟರು ತಮ್ಮ ತಮ್ಮ ಹಳ್ಳಿಗಳಲ್ಲಿಯೇ ಇರಬೇಕೆಂದು ವಿಧಿಸಲಾಗಿದೆ.

ಹಿಂದುಸ್ಥಾನ ಸಂರಕ್ಷಕ ಕಾಯಿದೆಯಲ್ಲಿ ಬರುವ ಮತ್ತು ಹಿಂದುಸ್ಥಾನ ರಕ್ಷಣೆ, ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟುಮಾಡುವಂತಹ ಎಲ್ಲ ಸಾರ್ವಜನಿಕ ಮೆರವಣಿಗೆ ಸಭೆ ಸಮ್ಮೇಲನಗಳಿಗೆಲ್ಲ ಇಡೀ ಬಂಗಾಲ ಪ್ರಾಂತ್ಯದಲ್ಲಿ ಪ್ರತಿಬಂಧಗಳನ್ನು ಹಾಕಿದೆ ಎಂದು ಬಂಗಾಲ ಸರಕಾರದವರು ಪ್ರಕಟಣೆ ಹೊರಡಿಸಿದ್ದಾರೆ.

ಸತ್ಯ ಚಕ್ರವರ್ತಿ, ಅಬ್ದುಲ್ ರಹಿಮಾನಖಾನ್, ಶಿಶಿರರಾಯ ಹರನಾಮ ಸಿಂಗಮಲ್ಲಿಯವರಿಗೆ ಬಿಹಾರ ಪ್ರಾಂತ್ಯವನ್ನು ಬಿಟ್ಟುಹೋಗಬೇಕೆಂದು ಸರಕಾರದವರು ವಿಧಿಸಿದ್ದಾರೆಂದು ತಿಳಿಯುತ್ತದೆ.

ಗುಂಟೂರಿನ ಸೋಶಿಯಾಲಿಸ್ಟರಾದ ಶ್ರೀ! ದರ್ಬಾ ವೆಂಕಟಕೃಷ್ಣ ಮೂರ್ತಿ ಬಲಯಮುರಿ ಗ್ರಾಮದಲ್ಲೇ ಇರಬೇಕೆಂದು ಡಿಫೆನ್ಸ್ ಆಕ್ಟ್ ಮೇರೆಗೆ ಸರಕಾರದ ಆಪ್ಪಣೆಯಾಗಿದೆ. ಅವರಿಗಿನ್ನು ರೂ. ೧೦ ಮಾಸಾಶನ ಸಲ್ಲಲಿದೆ.

ಮುಂದಿನ ಕಾಂಗ್ರೆಸ್ಸು

ಗಡಿನಾಡಿನ ಪ್ರಾಂತ್ಯದಲ್ಲಿ ಮುಂದಿನ ವರ್ಷ ಕಾಂಗ್ರೆಸ್ಸನ್ನು ಕೂಡಿಸಬೇಕೆಂದು ಅಲ್ಲಿಯ ಕಾಂಗ್ರೆಸ್ ಕಮಿಟಿಯವರು ನಿರ್ಧರಿಸಿ ಆ ಬಗ್ಗೆ ಎ. ಐ. ಸಿ. ಸಿ.ಯ ಕೂಡ ಪತ್ರವ್ಯವಹಾರ ಮಾಡಲು ಖಾನ್ ಅಬ್ದುಲ್ ಗಫಾರಖಾನರಿಗೆ ಅಧಿಕಾರ ಕೊಟ್ಟಿದ್ದಾರೆ.

ಆಣೆಯವರ ಯತ್ನ

ಲೋಕನಾಯಕ ಆಣೆಯವರು ವೈಸರಾಯರಿಗೆ ಭೆಟ್ಟಿಯಾಗಿ ೪೦ ನಿಮಿಷಗಳವರೆಗೆ ಅವರೊಡನೆ ಮಾತಾಡಿ ಪ್ರಕಟಣೆ ಹೊರಡಿಸಿದ್ದು, ಅದರಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿಗಳ ಸಭೆಯೊಂದನ್ನು ಕರೆದು ಸದ್ಯದ ಪರಿಸ್ಥಿತಿಯ ವಿಚಾರಮಾಡಬೇಕೆಂದು ಸೂಚಿಸಿರುವರು

ಸರಕುಗಳ ನಿರ್ಬಂಧ

ಬಾಲ್ಟಿಕ್ ಮತ್ತು ಸ್ಕ್ಯಾಂಡಿನೇವಿಯಾದ ಕಡೆ ಹೋಗುವ ಸರಕುಗಳಿಗೆ ನಿರ್ಬಂಧ ಹಾಕಲಾಗಿದೆಂದು ಹಿಂದುಸ್ಥಾನ ಸರಕಾರದವರು ಹುಕುಮು ಹೊರಡಿಸಿದ್ದಾರೆ

ಹಿಂದೀ ಬಂದರಗಳಲ್ಲಿರುವ ನಾರ್ವೆ ಮತ್ತು ಡೆನ್ಮಾರ್ಕ ದೇಶಗಳ ಹಡಗಗಳನ್ನು ಸದ್ಯಕ್ಕೆ ಬಂಧಿಸಬೇಕೆಂದು ಹಿಂದುಸ್ಥಾನ ಸರಕಾರದವರು ವಿಧಿಸಿದ್ದಾರೆ

ಸ್ಥಳೀಕ ಸಂಸ್ಥೆಗಳಲ್ಲಿರುವ ಕಾಂಗ್ರೆಸ್ ಪ್ರತಿನಿಧಿಗಳು ರಾಜಿ ಕೊಡಬೇಕೇ?

ಸ್ಥಳೀಕ ಸಂಸ್ಥೆಗಳಿಗೆ ಕಾಂಗ್ರೆಸು ಕಡೆಯಿಂದ ಸದಸ್ಯರಾಗಿ ಹೋದವರು ಈ ಕಾಲದಲ್ಲಿ ರಾಜಿನಾಮೆ ಕೊಡಬೇಕೆಂದೂ ಇಂದಿನ ಈ ಅವಧಿಯಲ್ಲಿ ಎಲ್ಲರೂ ಮುಂದಿನ ಹೋರಾಟದ ವಿಷಯವನ್ನು ಮಾತ್ರ ವಿಚಾರಿಸತಕ್ಕದ್ದಿರುವುದರಿಂದ, ಕಾಂಗ್ರೆಸು ಕೆಲಸಗಾರರು ಸ್ಥಳೀಕ ಸಂಸ್ಥೆಗಳಕಡೆಗೆ ತಮ್ಮ ಆಲೋಚನೆಯನ್ನು ಹರಿಸುವುದು ಯೋಗ್ಯವಲ್ಲವೆಂದೂ, ರಾಷ್ಟ್ರಪತಿ ಮೌಲಾನಾ ಆಜಾದರು ಒಂದು ಪ್ರಕಟಣೆ ಕೊಟ್ಟಿರುವರು ಈ ಕುರಿತು ಈಗ ಜರಗುತ್ತಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ನಿರ್ಣಯವಾಗಲಿದೆ. ಆದರೆ ಕಾಂಗ್ರೆಸಿನ ಹಲವು ಮುಖಂಡರು ಅಂತಹ ರಾಜಿನಾಮೆಯು ಅವಶ್ಯವಿಲ್ಲವೆಂದುಅಭಿಪ್ರಾಯ ಪಡುತ್ತಿರುವರಂತೆ!

ಮುಂದಿನ ಹೆಜ್ಜೆ ಸರಕಾರದ ಕೈಯ್ಯಲ್ಲಿದೆ!

ಇಂದಿನ ಪರಿಸ್ಥಿತಿಯಲ್ಲಿ ರಾಷ್ಟ್ರದ ಶಾಂತಿ ಕದಡದಂತೆ ಮುಖಂಡರೊಡನೆ ಯೋಗ್ಯ ಒಪ್ಪಂದಕ್ಕೆ ಬರುವ ಮುಂದಿನ ಹೆಜ್ಜೆಯು ಸರಕಾರದ ಕೈಯ್ಯಲಿದೆ. ಆ ಬಗ್ಗೆ ನಾನು ಸಾಧ್ಯವಾದಷ್ಟು ಯತ್ನಗಳನ್ನು ಸಾಧಿಸುವೆನು. ಎಂದಿರುವರು. ಶ್ರೀ! ಆಣೆಯವರುಇಂತಹ ಕಾಲದಲ್ಲಿ ಸತ್ಯಾಗ್ರಹವು ಆರಂಭವಾಗುವುದೊ ಉಚಿತವಲ್ಲವೆಂಬುದು ಅವರ ಅಭಿಪ್ರಾಯವಾಗಿದೆ. ಆ ಕುರಿತುಪಂಡಿತ ಮಾಲವೀಯರನ್ನು ಕಂಡು ಮಾತನಾಡಲು ಅವರು ತೆರಳಿರುವರು

ಅಂಡರ್ ಸೆಕ್ರೆಟರಿಗಳ ನಿಧನ

ಮದ್ರಾಸ್ ಸರಕಾರದ ಹೋಂ ಡಿಪಾರ್ಟ್‌ಮೆಂಟಿನ ಅಂಡರ್ ಸೆಕ್ರೆಟರಿಗಳಾದ ಮಿ. ಎಫ್. ಜಿ ಚಪ್ಲೆ ಐ ಸಿ ಎಸ್ ರವರು ಡೆಂಗ್ಯೂ ರೋಗಕ್ಕೆ ತುತ್ತಾಗಿ ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ವಿಧಿವಶರಾದರು.

ದಿವಂಗತ ಮಿ ಎಫ್. ಜಿ ಚಪ್ಲೆರವರ ಬದಲಿಗೆ ಮದ್ರಾಸ್ ಸರಕಾರದ ಹೋಂ ಡಿಪಾರ್ಟ್‌ಮೆಂಟಿನ ಅಂಡರ್ ಸ್ಟೇಟ್ ಸೆಕ್ರೆಟರಿಗಳಾಗಿ ಶ್ರೀ ಪಿ ಎಮ್ ಜಯರಾಜನ್ ಐ ಸಿ ಎಸ್. ಇವರು ನೇಮಿಸಲ್ಪಟ್ಟಿದ್ದಾರೆ

ಅಧಿಕ ಆದಾಯದ ತೆರಿಗೆ ಬಿಲ್ಲು ಇದೇ ಕಳೆದ ಎಪ್ರಿಲ್ ತಾ ೧೩ರಿಂದ ಜಾರಿಗೆ ಬಂದಿದೆ

ಗ್ರಾಮ ಗ್ರಾಮಗಳಿಗೆ ಕಾಂಗ್ರೆಸಿನ ಸಂದೇಶ

ಕಾಂಗ್ರೆಸು ಪ್ರಕಟಣೆ

'ಒಟ್ಟು ಭಾರತದಲ್ಲಿ ೭೫೦೦೦೦ ಹಳ್ಳಿಗಳಿವೆ. ಈಗಾಗಲೇ ಯುದ್ಧದ ಕುರಿತು ಕಾಂಗ್ರೆಸು ತೆಗೆದುಕೊಂಡ ಹೆಜ್ಜೆಯ ವಿಷಯ ಅನೇಕ ಕಡೆ ಪ್ರಚಾರವಾಗಿದೆ ಆದರೆ ಮುಂದಕ್ಕೆ ತೀವ್ರ ಪ್ರಚಾರವಾಗಿ ಇಡೀ ಭಾರತದಲ್ಲಿ ಯಾವನೊಬ್ಬನಿಗಾದರೂ ಆ ವಿಷಯ ತಿಳಿದಿರಬಾರದ.

'ಅದಕ್ಕಾಗಿ ಪ್ರತಿಯೊಂದು ಜಿಲ್ಲಾ ಕಾಂಗ್ರೆಸು ಕಮಿಟಿಯೂ ಹಲವು ಜನ ನುರಿತ, ಭಾಷಣಕಾರರನ್ನು ಆಯ್ದು ಪ್ರತಿ ಹಳ್ಳಿಗಳಿಗೆ ಹೋಗಿ ಅಲ್ಲಿ ಕಾಂಗ್ರೆಸಿನ ಪ್ರಕಟಣೆ, ಸತ್ಯಾಗ್ರಹ ಪ್ರತಿಜ್ಞೆ ಈ ವಿಷಯಗಳನ್ನು ವಿವರಿಸಿ ಎಲ್ಲರಿಗೂ ಅವುಗಳು ತಿಳಿವಂತೆ ಮಾಡಬೇಕು. ಹೀಗೆಂದು ಕಾಂಗ್ರೆಸು ಸೆಕ್ರೆಟರಿಗಳಾದ ಆಚಾರ್ಯ ಕೃಪಾಲಾನಿಯವರು ಒಂದು ಪ್ರಕಟಣೆ ಹೊರಡಿಸಿರುವರು

ಠಾಗೋರರ ೮೦ನೇ ಜನ್ಮದಿನ

ಠಾಗೋರರ ೮೦ನೇ ಜನ್ಮದಿನೋತ್ಸವವು ಶಾಂತಿನಿಕೇತನದಲ್ಲಿ ತಾ. ೧೪ರಂದು ಆಚರಿಸಲ್ಪಟ್ಟಿತು. ಹೊಸ ವರ್ಷದ ಸಂದೇಶವಾಗಿ 'ಕವಿಗಳು 'ಇಂದು ಪಶುಶಕ್ತಿಯು ವಿಜಯಿಯಾಗುತ್ತಿರುವುದೆಂದು ಕಂಡುಬಂದರೂ ಅದು ಶಾಶ್ವತವಲ್ಲ. ಸತ್ಯ-ಧರ್ಮಗಳಿಗೆ ವಿಜಯವಾಗುವ ಕಾಲವು ಸನ್ನಿಹಿತವಾಗಿದೆ ಎಂದರು.

ಬೊಂಬಾಯಿ ಮುಷ್ಕರ ನಿಂತಿತು

ಗಿರಣಿ ಕಾಮಗಾರ್ ಯೂನಿಯನ್ನಿನ ಮ್ಯಾನೇಜಿಂಗ್ ಕಮಿಟಿಯವರ ತಿಪಾರಸಿನಂತೆ ಬೊಂಬಾಯಿ ಗಿರಣಿ ಕೆಲಸಗಾರರು ತಾ. ೧೩ರಿಂದ ತಾವು ನಡೆಸುತ್ತಲಿದ್ದ ಸಾರ್ವತ್ರಿಕ ಮುಷ್ಕರವನ್ನು ನಿಲ್ಲಿಸುವುದಾಗಿ, ಗೊತ್ತುಮಾಡಿದರು. ಮುಷ್ಕರದಾರರ ಮೇಲಿ ಪೋಲೀಸರ ವರ್ತನೆಯು ಸರಿಯಲ್ಲವೆಂದೂ ಕಾಂಗ್ರೆಸ್ಸು ಮುಖಂಡರು ಮುಷ್ಕರಿಗಾರರಿಗೆ ಸಹಾಯಮಾಡಲಿಲ್ಲವೆಂದೂ ಹೇಳಲಾಗಿದೆ ಮುಷ್ಕರದಾರರು ಉಪವಾಸ ಬೀಳುವುದನ್ನು ತಪ್ಪಿಸುವುದಕ್ಕೆ ಸರಿಯಾದ ಸಹಾಯ ಸಲಕರಣೆಗಳು ಒದಗಿರುವುದಿಲ್ಲ ಆದ್ದರಿಂದ ಗಿರಣಿ ಕಾಮಗಾರ್ ಸಂಘ ಸಂಸ್ಥೆಯವರು ಮುಷ್ಕರವನ್ನು ನಿಲ್ಲಿಸಲು ನಿರ್ಧರಿಸಿದರು, ಇದರಿಂದ ಸಂಸ್ಥೆಯ ಬಲವು ಕಮ್ಮಿಯಾಗುವುದಿಲ್ಲವೆಂದು ತಿಳಿದು ಹೀಗೆ ಮಾಡಿದರು. ಮುಷ್ಕರವನ್ನು ಇದುವರೆಗೆ ವಿಜಯಿಯಾಗಿ ನಡೆಸಿದುದಕ್ಕೆ ಕೆಲಸಗಾರರನ್ನು ಅಭಿನಂದಿಸಲಾಗಿದೆ

"ಪಾನನಿರೋಧವು ಅಬಕಾರಿ ಕಾನೂನಿಗೆ ವಿರುದ್ಧ

ಬೊಂಬಾಯಿ ಚೀಫ್ ಜಸ್ಟಿಸರ ತೀರ್ಪು

ಬೊಂಬಾಯಿ ಸರಕಾರದ ಮದ್ಯಪಾನನಿರೋಧ ಕಾನೂನನ್ನು ಕುರಿತು ಅದು ಅಬಕಾರಿ ಕಾಯಿದೆಗೆ ವಿರುದ್ಧವಾದುದ್ದೆಂದು ಅಪೀಲು ಮೊಕದ್ದಮೆಗಳಲ್ಲಿ ಬೊಂಬಾಯಿ ಹೈಕೋರ್ಟ ಚೀಫ್ ಜಸ್ಟಿಸ್‌ರಾದ ಮಿ॥ ಬೊಮಾಂಡರು ತೀರ್ಪು ಇತ್ತರು. ಐದು ಮಂದಿ ನ್ಯಾಯಾಧೀಶರ ಮುಂದೆ ವಿಚಾರಣೆ ನಡೆಯಿತು. ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಹೇಳಿರುವುದೇನೆಂದರೆ:—

'ಮದ್ಯಪಾನನಿರೋಧ ನೀತಿಯು ಕಾಯಿದೆ ಬದ್ಧವಾಗಿ ಕ್ರಮವಾಗಿರುವುದೇ ಎಂಬ ಪ್ರಶ್ನೆಯು ಈ ಅಪೀಲುಗಳಲ್ಲಿ ಉತ್ಪನ್ನವಾಗಿದೆ. ಅಬಕಾರಿ ಆಕ್ಟಿನ ಸೆಕ್ಷನ್ ೧೪ ಡಿ. ಪ್ರಕಾರ ಪಾನನಿರೋಧ ನೀತಿಯ ಪ್ರಸಿದ್ಧ ಪತ್ರಿಕೆಯನ್ನು ಬೊಂಬಾಯಿ ಸರ್ಕಾರದವರು ಹೊರಡಿಸಿದರು. ಅಬಕಾರಿ ಆಕ್ಟಿನ ಮೇರೆಗೆ ಸರ್ಕಾರದ ಹುಟ್ಟುವಳಿ ವಿಚಾರವೇ ಮುಖ್ಯವಾದುದು ಈ ಕಾಯಿದೆಯ ಕೆಲವು ಸೆಕ್ಷನ್‌ಗಳಂತೆ ಮದ್ಯ ಮತ್ತು ಮಾದಕ ವಸ್ತುಗಳ ಹತೋಟಿಯು ನಿರೂಪಿಸಲ್ಪಟ್ಟಿದೆ, ಸಂಪೂರ್ಣ ಪಾನನಿರೋಧವನ್ನು ಆಚರಣೆಯಲ್ಲಿ ತರುವಂತೆ ಅಬಕಾರಿ ಆಕ್ಟಿನಲ್ಲಿ ಎಲ್ಲಿಯೂ ಹೇಳಿಲ್ಲ. ಅಬಕಾರಿ ಆಕ್ಟಿಗೆ ಪೂರ್ಣ ಪಾನನಿರೋಧ ನೀತಿಯು ಹೊಂದಿಕೆಯಾಗುವುದಿಲ್ಲ. ಆದ್ದರಿಂದ ಬೊಂಬಾಯಿ ನಗರದಲ್ಲಿ ಮತ್ತು ಅಹಮದಾಬಾದ್‌ನಲ್ಲಿ ಸರ್ಕಾರದವರು ಏರ್ಪಡಿಸಿದ ಸಂಪೂರ್ಣ ಪಾನನಿರೋಧ ಪ್ರಕಟಣೆಯು ಅಬಕಾರಿ ಆಕ್ಟಿಗೆ ವಿರುದ್ಧವಾಗುತ್ತದೆ. ಅಬಕಾರಿ ಆಕ್ಟನ್ನು ಇದು ನಾಶಗೊಳಿಸುತ್ತದೆ.

ಓವಲ್ಟಿನ್ ಬಿಸ್ಕಿಟುಗಳು ರುಚಿಕರ ಜೀರ್ಣಕರ ಮತ್ತು ಆರೋಗ್ಯಕರವಾದುವು

ಓವಲ್ಟಿನ್ ಬಿಸ್ಕಿಟುಗಳನ್ನು ಹಲವು ಮಂದಿ ವೈದ್ಯರ ಅಪೇಕ್ಷೆಯ ಮೇರೆಗೆ ತಯಾರಿಸಿರುವುದಾಗಿದೆ. ಇತರ ಎಲ್ಲಾ ತರದ ಬಿಸ್ಕಿಟುಗಳಿಗಿಂತಲೂ ಇದರಲ್ಲಿ ಹೆಚ್ಚು ಆರೋಗ್ಯಕರವಾದ ಶಕ್ತಿಯಿರುವುದರಿಂದ ವೈದ್ಯರು ರೋಗಿಗಳಿಗೆ ಕೊಡಲು ಇಂತಹ ಆಹಾರವೊಂದನ್ನು ಅಪೇಕ್ಷಿಸಿದರು. ಅವರು ಹಾಲು ಹಲ್ಲು ಹುಟ್ಟುವ ಎಳೆಯ ಮಗುವಿಗೆ ಅತ್ಯಾನಂದಕರವಾದ ಆಹಾರವಾಗಿಯೂ, ದೊಡ್ಡವರಿಗೆ ದಿನ ನಿತ್ಯದ ಆಹಾರವಾಗಿಯೂ ಬ್ರೆಡ್, ತೋಸ್ಟುಬಿಸ್ಕಿಟುಗಳ ಬದಲು ಉಪಯೋಗ ಆಗುವಂತಹ ಒಂದು ಆಹಾರ ವಸ್ತುವು ಬೇಕೆಂದು ಅಪೇಕ್ಷಿಸಿದ್ದು ಅದರ ತಯಾರಿಗಾಗಿ ಕೇಳಿಕೊಂಡರು.

"ಓವಲ್ಟಿನ್" ಬಿಸ್ಕಿಟುಗಳು ಎಲ್ಲಾ ತರದ ಗುಣಗಳನ್ನು ಹೊಂದಿಕೊಂಡಿದ್ದು ಸಂಪೂರ್ಣ ತೃಪ್ತಿಕರವಾದ ಆಹಾರವಾಗಿದೆ. ಅವುಗಳು ಉತ್ತಮ ಓವಲ್ಟಿನ್ ಆಹಾರ ಸತ್ವವು ಸೇರಿದ ಒಳ್ಳೆಯ ಗೋದಿ ಹಿಟ್ಟಿನಿಂದ ಮಾಡಲ್ಪಟ್ಟವೆ. ಅದರಲ್ಲಿ ಒಳ್ಳೆಯ ಬಾರ್ಲಿ ಸತ್ವ, ಹಾಲು, ಮತ್ತು ವಿಟಮಿನ್ ಮತ್ತು ಶರೀರ ವರ್ಧಕವಾದ ಇತರ ವಸ್ತುಗಳೂ ಬಹಳವಾಗಿ ಸೇರಿಕೊಂಡಿವೆ. 'ಓವಲ್ಟಿನ್' ಬಿಸ್ಕಿಟುಗಳು ಬಹಳ ಆನಂದಕರವಾದ ರುಚಿಯುಳ್ಳವುಗಳಾಗಿದ್ದು ಬಹಳ ಸುಲಭದಲ್ಲಿ ಕರಗುವಂತಹವುಗಳೂ ಆಗಿವೆ.

ಶಿಶುಗಳಿಗೆ:— ಹಾಲು ಹಲ್ಲುಗಳು ಹುಟ್ಟುವ ಸಮಯದಲ್ಲಿ ಶಿಶುಗಳಿಗೆ ತಿನ್ನಲು ಸುಲಭವಾಗುವಂತಹ ಆಹಾರಗಳನ್ನೇ ಕೊಡಬೇಕಾದುದು ಆವಶ್ಯವಾಗಿದೆ. ಏಕೆಂದರೆ ಗಟ್ಟಿಯ ವಸ್ತುಗಳನ್ನು ಮಕ್ಕಳು ತಿನ್ನಲಾರರು.

ಇಂತಹ ಕಾಲದಲ್ಲಿ ಓವಲ್ಟಿನ್ ಬಿಸ್ಕಿಟುಗಳು ಬಹಳ ಪ್ರಯೋಜನಕಾರಿಗಳಾಗಿವೆ. ಮಗುವು ೯ ತಿಂಗಳ ಪ್ರಾಯಕ್ಕೆ ಬಂದಾಗಲೇ ಇದನ್ನು ಕೊಡಬಹುದು. ಅವು ಹಲ್ಲು ಬೆಳೆಯಲು ಹೆಚ್ಚಿನ ಸಹಾಯ ಕೊಡುತ್ತವೆ.

ಬೆಳೆವ ಮಕ್ಕಳಿಗೆ:— ಬಲಕೊಡಿ ಬರುವ ಮಕ್ಕಳಿಗೆ ಓವಲ್ಟಿನ್ ಬಿಸ್ಕಿಟುಗಳು ಬಹಳ ಪ್ರಯೋಜನ ಕೊಡುತ್ತವೆ. ಎಲುಬು, ಮಾಂಸ ಶಕ್ತಿಗಳನ್ನು ಹೆಚ್ಚಿಸುವ ಸಾಧನಗಳು ಅವುಗಳಲ್ಲಿ ಇವೆ.

ಆಹಾರ ಬದಲಾವಣೆ:— ಆಗಾಗ ಆಹಾರ ಬದಲಾವಣೆಯು ಅವಶ್ಯ ಬೀಳುತ್ತದೆ. ಅಂತಹ ಸಮಯದಲ್ಲಿ ಓವಲ್ಟಿನ್ ಬಿಸ್ಕಿಟುಗಳು ಹೆಚ್ಚು ಉಪಯುಕ್ತವಾಗಿವೆ.

ಇಂತಹ ಉಪಯೋಗಗಳು:— ಓವಲ್ಟಿನ್ ಬಿಸ್ಕಿಟುಗಳನ್ನು ಆಹಾರವಾಗಿಯೂ ಸೇವಿಸಬಹುದು. ಹಾಲು, ಕಾಫಿ, ಚಾ, ವೈನ್, ಹಣ್ಣುಗಳೊಡನೆಯೂ ರುಚಿಕರವಾಗಿ ತೆಗೆದುಕೊಳ್ಳಬಹುದು.

ಮುಖ್ಯ ವಿಚಾರ: ಓವಲ್ಟಿನ್ ಪಾನೀಯದ ಬದಲಾಗಿ ಈಗ ಓವಲ್ಟಿನ್ ಬಿಸ್ಕಿಟುಗಳನ್ನು ಉಪಯೋಗಕ್ಕೆ ತಂದಿರುವುದೆಂದು ಯಾರೂ ತಿಳಿಯಬಾರದು. ಈ ಬಿಸ್ಕಿಟುಗಳು ಇತರ ಬಿಸ್ಕಿಟುಗಳ ಬದಲಾ ಬಹಳ ಗುಣಕರವಾದುದು ಆಗಿದೆ. ಒಂದು ಕಪ್ಪು ಓವಲ್ಟಿನ್ ಪಾನೀಯದೊಡನೆ ಕೆಲವು ಓವಲ್ಟಿನ್ ಬಿಸ್ಕಿಟುಗಳನ್ನು ಸೇವಿಸುವುದು ಅತ್ಯಂತ ಹಿತವಾದ ಆಹಾರವಾಗಿದೆ.

ತಯಾರಿಸಿದವರು: ಎ. ವಾಂಡರ್ ಲಿಮಿಟೆಡ್ ಲಂಡನ್.

ಸಾದರ—ಸ್ವೀಕಾರ

೧. ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ:— ಲೇಖಕರು ಶ್ರೀ ಎಸ್. ಎಸ್. ಮಾಳವಾಡ ಎಂ. ಎ. ಮಾಳಮಡ್ಡಿ, ಧಾರವಾಡ, ಪುಸ್ತಕ ಮಾರಾಟದ ಸರ್ವಾಧಿಕಾರಿಗಳು, ಸಾಹಿತ್ಯ ಭಂಡಾರ, ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು ಹುಬ್ಬಳ್ಳಿ. ಬೆಲೆ. ಸಾದಾ ಪ್ರತಿ ೧—೮—೦

೨. ವೇದಾಂತದ ಒಳದಾರಿ: ಶ್ರೀ ಸ. ಪ. ಕುಲಕರಣಿ ನಾರಾಯಣರಾಯರು ಎಂ. ಎ. ಎಲ್. ಎಲ್. ಬಿ. ವಿಖಂಡಾಶ್ರಮ ಬಾಘುಮಠ ಕಾರವಾರ. ಮಾರಾಟದ ಸರ್ವಾಧಿಕಾರಿಗಳು ಮೋಲಿನವರೇ. ಬೆಲೆ ೦—೬—೦.

೩. ದೂರ ಹೋದಳು: (ಒಂದು ನೀಳ್ಗತೆ) 'ಭಾರತೀ ಸುತ' ಮಾರಾಟದ ಸರ್ವಾಧಿಕಾರಿಗಳು. ಮನೋಹರಗ್ರಂಥ ಭಾಂಡಾರ, ಧಾರವಾಡ. ಬೆಲೆ ಆರಾಣೆ

ಮುಳ್ಳು ಬೇಲಿ (ಕಾದಂಬರಿ) ಬರೆದವರು 'ಚಾಲುಕ್ಯ'— ಮನೋಹರ ಗ್ರಂಥ ಭಂಡಾರದ ಪ್ರಕಟಣೆ ಪಿ... ಯಥಾ ಪಕಾಶ.

ಮಂಗಳೂರು.

ಬಾಲಮಾರುತಿ ವ್ಯಾಯಾಮ ಮಂಡಳ

ಇದರ ಶಿಕ್ಷಣ ಶಿಬಿರದ ಉದ್ಘಾಟನೆಯು ಕಳೆದ ಆದಿತ್ಯವಾರ ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಿಂದ ನೆರವೇರಿತು. ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಶಿಕ್ಷಣ ಪಡೆಯಲು ಅನೇಕರು ಬಂದಿದ್ದರು. ಅಧ್ಯಕ್ಷರು ಶರೀರ ವ್ಯಾಯಾಮದ ಆವಶ್ಯಕತೆಯ ಬಗ್ಗೆ ವಿಸ್ತಾರ ಪೂರ್ಣ ಭಾಷಣವಿತ್ತರು.

ಹರಿಕಥೆ

ಇದೇ ತಿಂಗಳ ತಾರೀಕು ೧೫ನೇ ಸೋಮವಾರ ರಾತ್ರೆ ಘಂಟೆ ೯-೩೦ಕ್ಕೆ ಸಮಯ ಶ್ರೀ ಪುರುಷೋತ್ತಮ ರಾವ್ ಪುತ್ತೂರುಕರ್ ರವರ ಸುಸ್ರಾವ್ಯ ಗಾಯನದಿಂದೊಡಗಿದ ಭಕ್ತಿರಸ ಪ್ರಧಾನವಾದ "ಮೀರಾಬಾಯಿ" ಎಂಬ ಹರಿಕಥೆಯು ಭಾರತ ಸಂಗೀತ ಸಭೆಯ ಆಶ್ರಯದಲ್ಲಿ ಸುಖಾಮ್ಯವಾಗಿ ನೆರವೇರಿತು. ಸದ್ಯದಲ್ಲಿಯೇ ಸಂಜೀವರಾವ್ ಬಾಳಗೋಪಾಲ ಎಂಬವರ ಹರಿಕಥೆಯು ನಡೆಯಲಿಕ್ಕಿದೆ.

ಮೂಲ್ಕಿ ಹರಿಜನ ಪರಿಷತ್ತು

ಆಯ—ವ್ಯಯ ಪಟ್ಟಿ

ಮೂಲ್ಕಿಯಲ್ಲಾದ ಹರಿಜನರ ಪರಿಷತ್ತಿನ ಬಾಬ್ತು ಜುಮ್ಲಾ ವಂತಿಗೆ ಬಂದ ರೂಪಾಯಿ ೨೪೭—೧೫—೫ ಟಿಪ್ಪಲು ಖರ್ಚು ೧೫—೯—೬; ಚಾಪಾ ೧೬—೧೨—೦; ವಾಲಂಟಿಯರ್ಸ್ ೧೬—೧೦—೪; ಶೃಂಗಾರ ೧೬—೭—೨; ವಿನೋದಾವಳಿ ೮—೧೦—೦; ದೀಪ ೯—೧೫—೦; ಕೂಲಿ ಮಗಾಡಿ ೧೨—೮—೦; ಪ್ರಚಾರ ೫—೧—೭; ಹೂ ಕಾಗದ ವಗೈರೆ ೭—೦—೬; ಪ್ರಯಾಣ ಬತ್ತೆ ೪೮—೮—೦; ಊಟ ೮೫—೪—೧೦; ಪಾನಕ ೯—೪—೨; ಜುಮ್ಲಾ ಖರ್ಚು ೨೪೮—೧೦—೨; ಎಂದು ಸಮಿತಿಯ ಅಧ್ಯಕ್ಷರಾದ ಶ್ರೀ ಎಂ. ಆರ್. ಪೂಂಜರು ತಿಳಿಸುತ್ತಾರೆ.

ತಿದ್ದುಪಡಿ

ತಾ. ೫—೪—'೪೦ ನೆಯ ಪತ್ರಿಕೆಯಲ್ಲಿ O. S. 528/1939 ನೇ ನಂಬ್ರದ ಕೋರ್ಟು ನೋಟೀಸಿನಲ್ಲಿ ಪ್ರತಿವಾದಿರು ಎಡ್ರೆಸಿನಲ್ಲಿ 'ಇಬ್ಬರು ಶಹರದಲ್ಲಿರುವರು' ಎಂಬುದನ್ನು, 'ಇಬ್ಬರು ಮಂಗ್ಳೂರು ಶಹರದಲ್ಲಿರುವವರು' ಎಂದೂ, ಮತ್ತು ಪ್ರತಿವಾದಿರು 'ಬಿಪ್ಪಾಗಿಯೂ ವಕೀಲರ ಮುಖಾಂತ್ರ' ಎಂಬುದನ್ನು ಬಿಡ್ಡಾಗಿ ಯಾ ವಕೀಲರ ಮುಖಾಂತರ ಎಂದು ತಿದ್ದಿ ಕೊಳ್ಳುವುದು.

ನೋಟೀಸು

ಮಂಗಳೂರು ತಾಲೂಕು ಮುಂಡನಾಡಿ ಗ್ರಾಮದ ನೆಕ್ಕರೆಯಲ್ಲಿರುವ ಹೊಸಹಿತ್ಲು ಕೇಶವ ಭಟ್ರ ಮಗ ಕೃಷ್ಣ ಭಟ್ಟನು ಯಾವತ್ತೂ ಜನರಿಗೆ ತಿಳಿಯಪಡಿಸುವುದೇನಂದ್ರೆ

ಸದ್ರಿ ಮುಂಡನಾಡಿ ಬೋರ್ಡು ಶಾಲಾ ಉಪಾಧ್ಯಾಯರು ಸೋಮೇಶ್ವರ ಅನಂತಯ್ಯ ನಾವಡ ಎಂಬವರು ಆ ಶಾಲೆಗೆ ಬಂದ ಬಾಗ್ಯಾತು ಮಧ್ಯಾಹ್ನದ ಊಟಕ್ಕೆ ನನ್ನ ಮನೆಯಲ್ಲೇ ಇರುತ್ತಿದ್ದು ಕಳೆದ ಫೇಬ್ರುವರಿ ತಾ. ೨೧ರಲ್ಲಿ ನನ್ನಿಂದ ಸುಳ್ಳು ನಂಬಿಸಿ ಮೋಸದಿಂದ ಎರಡು ಕಾಗದಗಳಿಗೆ ನನ್ನ ದಸ್ಕತು ಆ ಪೈಕಿ ಎಡ ಹೆಬ್ಬೆಟ್ಟಿನ ಮುದ್ರೆ ಸಹಾ ಪಡಕೊಂಡದ್ದನ್ನು ಅವರು ಅವರ ಹೆಂಡ್ತಿ ಹೆಸರಲ್ಲಿ ನನ್ನಿಂದ ರೂಪಾಯಿ 580ಕ್ಕೆ ಒಂದು ಪ್ರಾಮಿಸರಿ ನೋಟು ಫೋರ್ಜರಿ ಮಾಡಿದ್ದಾರೆಂತ ನನಗೆ ತಿಳಿದುಬಂದ ನಂತ್ರ ಅವರು ಮಾಡಿದ ಮೋಸ ಕೃತ್ಯಗಳ ಸಂಗ್ತಿ ಸಾಣ್ಣಿ ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೆ ಅರ್ಜಿ ಕೊಟ್ಟದ್ದು ಈಗ ತನಿಖೆಯಲ್ಲಿ ಬಾಕಿಇರುತ್ತದೆ. ಹೀಗಾಗಿ ಇಂಥಾ ಸೃಷ್ಟಿಕೆಯ ನೋಟನ್ನು ನಂಬಿ ಯಾರೂ ಮೋಸದಲ್ಲಿ ಬಿದ್ದು ಆ ನೋಟಿಂಬ ದಾಕ್ಲೆಯ ವಿಚಾರೆ ಹೊಂದಕೂಡದೆಂಬ ಸಂಗ್ತಿ ಈ ಮೂಲಕ ಪ್ರಕಟಿಸಿರುತ್ತೇನೆ.

ತಾರೀಕು 12ನೇ ಎಪ್ರಿಲ್ 1940.

ಕೃಷ್ಣ ಭಟ್ಟನ ರುಜು.,

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES
bearing Interest at 4% p. a.
in denominations of
Rs.50/-,100/-,500/-,1,000/-&5,000/-
are now issued at all our Branches.
For particulars call at or write to
Any of our nearest Branches

ಪಂಚ್ಕದಾಯಿ
(ಕೊಂಕಣಿ ಭಾಷೆನ)
ಲೇಖಕು: ಕೊಂಕಣಿ ಬಾಷಾಪ್ರೇಮಿ
ಪ್ರಕಾಶಕು: ಕೊಂಕಣಿ ಬಾಷಾ ಸಾಹಿತ್ಯ ಮಂದಿರ ಬಂಟ್ವಾಳ ದ. ಕ.
ನವರಸ ಭರಿತ ಶೃಂಗಾರಯುಕ್ತ ಜಾವ್ನು ಆಶ್ಶಿಲೊ
ಪಾಂಚ ಕಾಣ್ಯೆಂಚೆ ಪುಸ್ತಕ
ತುಮ್ಕಾಂ ಶುರುಥೋನ್ರು ಆಖೇರಿತಾಹಿಂ ಆನಂದಸಾಗರಾಂತು
ಲೊಳ್ಯತಾ. ವಾಚ್ಚಿಲಿ ತಿಕ್ಲೆ ಪಾವ್ಕಾ.
ಹೀ ಪಂಚ್ಕದಾಯಿ ಸರ್ವಾನಿಂ ಖಾವ್ನು ಮಾತೃಭಾಷಾ ಸೇವಕ ಪಾತ್ರ ಜಾವ್ಕಾ
ಮ್ಹಣು ಬಾಷಾಭಿಮಾನಿಂಲ್ಯಾಗಿ ಆಮ್ಗೆಲಿ ವಿನಂತಿ.
ಕೊಂಕಣಿ ಬಾಷೇನ ನವೀನ ಅತ್ಯಾಧುನಿಕ-ರೀತಿನ ಬರ್ಯಿಲೆಲೆ
ಸಾಮಾಜಿಕ ವ ನೈತೀಕ ಕಾಣ್ಯೊ ಮೋಲ 0—1—0
ಹ್ಯಾ ಸಂಗಾ ಶ್ರೀ ಎಂ. ಪ್ರಭು ವಿರಚಿತ ಭಜನಾವಳಿ ಆನಿ ಗ್ನಾನಾ ಝುಳಕಿ ಕಾಣ್ಯೊ ವ ಪದಾಂಚಿ ಪುಸ್ತಕಾಂ ಆಸ್ಸಾತಿಯಿ ವಿಕ್ರಿಕ ಮೆಳ್ತಾತಿ.
ದಿ ಕೊಂಕಣಿ ಭಾಷಾ ಸಾಹಿತ್ಯ ಮಂದಿರ, ಬಂಟ್ವಾಳ, ದ. ಕ.

ಹೊಸ ದಿನಗಳು ಹೊಸ ಪದ್ಧತಿಗಳನ್ನು ತರುವವು...

ಪದಾರ್ಥಗಳನ್ನು ಹುರಿಯುವುದಕ್ಕೂ, ಅನ್ನವನ್ನು ರುಚಿಕರವಾಗಿ ಮಾಡುವುದಕ್ಕೂ, ಚಪಾತಿಗಳಿಗೆ ಹಾಕಿಕೊಳ್ಳುವುದಕ್ಕೂ, ಪೂರಿ ಮತ್ತು ಮಿಠಾಯಿ ಮುಂತಾದುವುಗಳನ್ನು ತಯಾರಿಸುವುದಕ್ಕೂ ಎಚ್ ವಿ ಎಂ ಡಾಲ್ಡ ವನಸ್ಪತಿಯು ಬಹಳ ಉಪಯುಕ್ತವಾಗಿದೆ. ಉಪಯೋಗಿಸುವುದಕ್ಕೂ ಸುಲಭ, ಸಾಮಾನ್ಯ ಕ್ರಮದಂತೆಯೇ ಉಪಯೋಗಿಸಬೇಕು ಇದುಮಾತ್ರವಲ್ಲದೆ, ಡಾಲ್ಡವನಸ್ಪತಿಯಲ್ಲಿ ಶಕ್ತಿವರ್ಧಕವಾದ ವಿಟಮಿನ್ ಇರುವುದರಿಂದ ಅದು ನಿಮ್ಮ ಬಳಗದವರನ್ನು ಬಲಶಾಲಿಗಳನ್ನಾಗಿಯೂ ಆರೋಗ್ಯವಂತರನ್ನಾಗಿಯೂ ಮಾಡುತ್ತದೆ.

ಡಾಲ್ಡ ವನಸ್ಪತಿಯು 2, 5, 10 ಪೌಂಡುಗಳ ಸೀಲು ಮಾಡಿದ ಟಿನ್ನುಗಳಲ್ಲಿ ಮಾತ್ರ ಮಾರಲ್ಪಡುವುದು.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುವುದು,

ಈದಿನವೇ ಅದರ ಹೆಸರನ್ನು ಹೇಳಿ ಪಡೆಯಿರಿ.

ರೂ. 1000 ಬಹುಮಾನ.

ಡಾಲ್ಡ ವನಸ್ಪತಿಯು ಸೀಲುಮಾಡಿದ ಟಿನ್ನುಗಳಲ್ಲಿ ಮಾತ್ರ ಮಾರಲ್ಪಡುವುದು. ಸರಕಾರಿ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟು ಬಹಳ ಶುದ್ಧವಾಗಿದೆಯೆಂದು ಗ್ಯಾರಂಟಿ ಯುಳ್ಳದ್ದಾಗಿದೆ. ಇದರಲ್ಲಿ ಹಾನಿಕರ ಪದಾರ್ಥಗಳೇನಾದರೂ ಸೇರಿರುವುದೆಂದು ತೋರಿಸಿಕೊಟ್ಟವರಿಗೆ ರೂ. 1000 ಬಹುಮಾನವು ಕೊಡಲಾಗುವುದು.

HVM 4M 93—KN THE HINDUSTAN VANASPATI MFG. CO. LTD., BOMBAY

ಸಿನೆಮಾ ಪುಟ

ಯುರೋಪಿನ ಪ್ರವಾಸದಿಂದ ಮರಳಿದ ರಾಮಗೋಪಾಲರು

"ನಿಶಾಂತಶಾಂತ ಗಂಭೀರ ರಾತ್ರಿಯಲ್ಲಿ-ಎಂದೆಂದೂ ಇರುವಂತಹ ಜನನಿಬಿಡ ವಾತಾವರಣವು ಒಮ್ಮೆಗೇ ಮೌನ ಮಾಟಕ್ಕಿಳಿದಾಗ ನಾನು ನಿಜವಾಗಿಯೂ ಆವೇಶಗೊಂಡೆ. ನಾನು ನರ್ತನಮಾಡುತ್ತಿದ್ದೆ. ಹಠಾತ್ತಾಗಿ ಒಮ್ಮೆಗೇ ಕತ್ತಲು ಕವಿದ ಸಮಯದಲ್ಲಿ ನನ್ನ ಹೃದಯವು ಏನೋ ಅಪೂರ್ವ ಅನುಭವವನ್ನು ಪಡೆಯಿತು!" ಹೀಗೆಂದು ಯುರೋಪಿನ ಪ್ರಯಾಣ ಮಾಡಿ ಹಿಂತಿರುಗಿದ ಗೋಪಾಲರು ಮದ್ರಾಸಿನಲ್ಲಿ ತಮ್ಮ ಅಲ್ಲಿನ ಅನುಭವಗಳ ಕುರಿತು ಬರೆಯುತ್ತಾರೆ.

★

ಯುದ್ಧವು ಆರಂಭವಾಗುವ ಸಮಯದಲ್ಲಿ ಅವರು ಪ್ಯಾರಿಸಿನ ಒಂದು ಭವ್ಯ ನರ್ತನ ಭವನದಲ್ಲಿ ಕಲಾವಂತರು ನಟ್ಟಿನೋಟದಿಂದ ನೋಡುತ್ತಿರಲು ಭಾರತೀಯ ನರ್ತನವಿದಗ್ಧತೆಯನ್ನು ತೋರಿಸಲು ಅಭಿನಯಿಸುತ್ತಿದ್ದರು. ಪೋಲೆಂಡಿನ ಜನರು ತನ್ನನ್ನು ಅವರ ಊರಿನಲ್ಲಿ ಯಾವ ರೀತಿಯ ಮನ್ನಣೆ ಕೊಟ್ಟು ನಡೆಸಿದರು. ಅವರು ಭಾರತೀಯ ನರ್ತನದಲ್ಲಿ ಎಷ್ಟೊಂದು ಆದರ ಅಭಿಮಾನವುಳ್ಳವರು ಎಂಬ ವಿಷಯವಾಗಿ ರಾಮಗೋಪಾಲರು ಹೃದಯಸ್ಪರ್ಶಿಯಾದ ತನ್ನ ಅನುಭವಗಳನ್ನು ಬರೆದಿರುತ್ತಾರೆ. ಗರುಡ ನರ್ತನವು ಲೇಡಿ ಲಿನ್‌ಲಿತ್‌ಗೋ ಮತ್ತು ಪೆರೋಜ ಖಾನ್‌ನೂನ್ ಇವರಿಂದ ಬಹುವಾಗಿ ಪ್ರಶಸ್ತಿ ಪಡೆದಿತ್ತು.

★

"ಯುದ್ಧದ ತೀವ್ರ ಸಂಕಷ್ಟಕಾಲದಲ್ಲಾದರೂ ಲಂಡನಿನ ಜನರು ನರ್ತನ ಭವನದಲ್ಲಿ ಅಸಂಖ್ಯರಾಗಿ ಬಂದು ನೆರೆದಿದ್ದರು. ಕಲಾವಂತರಾದ ಜನರು ಬಂದು ತನ್ನ ನರ್ತನವನ್ನು ನೋಡಿ, ನರ್ತನ ಕಲೆಯ ಕುರಿತು ಅನೇಕ ಪ್ರಶ್ನೆಗಳನ್ನು ಕೇಳಿದರು. ಅದು ಮಾತ್ರವಲ್ಲದೆ, ಇಂದಿನ ಭಾರತೀಯ ರಾಜಕೀಯದ ಕುರಿತೂ ವಿವಿಧ ಪ್ರಶ್ನೆಗಳು ಅವರಿಂದ ನನಗೆ ಹಾಕಲ್ಪಟ್ಟವು. ಇಂದಿನ ಯೂರೋಪಿನ ಯುದ್ಧದ ವಿಷಯ ಭಾರತೀಯರು ವಹಿಸಿದ ಧೋರಣೆಯ ಕುರಿತು ಅದನು ಅಲ್ಲಿನ ಹಲವು ಮಂದಿ ಹೇಗೆ ಮೆಚ್ಚುತ್ತಿರುವರೆಂಬ ವಿಷಯವನ್ನೂ ಅವರು ತಮ್ಮ ಲೇಖನದಲ್ಲಿ ತಿಳಿಸುತ್ತಾರೆ.

ಯುದ್ಧದ ನಿಮಿತ್ತವಾಗಿ ತಾನು ತನ್ನ ಪ್ರವಾಸವನ್ನು ನಿಲ್ಲಿಸಬೇಕಾಯಿತೆಂದೂ, ಯೂರೋಪಿನ ಕಲಂಕಿತ ವಾತಾವರಣದಿಂದ ಎಷ್ಟೊಂದು ಪ್ರಯಾಸಪೂರ್ವಕ ತಾನು ಈ ಕಡೆಗೆ ಬರಬೇಕಾಯಿತೆಂದೂ ಅವರು ಬರೆದಿರುತ್ತಾರೆ.

★

ಪ್ರಸಿದ್ಧ ನರ್ತಕಿ ಅರ್ಝೂರಿ

ಅವರ ಮುಂದಿನ ಕಾರ್ಯಕ್ರಮಗಳ ಕುರಿತು ಪ್ರಶ್ನಿಸಿದಾಗ, ರಾಮಗೋಪಾಲರು ತಾನು ಬೇಗನೇ ಕೆಲ ಜನರನ್ನು ನರ್ತನದಲ್ಲಿ ಉತ್ತಮ ಶಿಕ್ಷಿತರನ್ನಾಗಿ ಮಾಡಿ ಮುಂದೆ ಪ್ರವಾಸ ಬೆಳೆಸಬೇಕೆಂದಿರುವನೆಂದೂ, ಆ ಬಗ್ಗೆ ಬೆಂಗಳೂರಲ್ಲಿ ಒಂದು ಕೇಂದ್ರವನ್ನು ತೆರೆಯಲಿರುವೆನೆಂದೂ ಹೇಳಿದರು. ಯೂರೋಪಿನ ಪ್ರವಾಸದಲ್ಲಿ ಜೊತೆಗಾರರಾದ ಮಾಯಾರಾಣಿ ಮತ್ತು ರತ್ನಮೋಹಿನಿಯರೊಡನೆ ಅವರು ಅನೇಕ ನರ್ತನಗಳನ್ನು ಅಭ್ಯಾಸ ಮಾಡಲಿರುವರು. ಹೀಗೆ ಸಂಪೂರ್ಣ ಸಿದ್ಧತೆಯಾದ ಮೇಲೆ ಈ ವರ್ಷದ ಕೊನೆಯಲ್ಲಿಯೇ ಯೂರೋಪಿನ ಮಹಾಪ್ರಯಾಣವೊಂದನ್ನು ಬೆಳೆಸಲಿರುವರಂತೆ.

ಭಾರತೀಯ ನಾಟ್ಯದ ಕುರಿತು ಅನುಭವಮಾಡಲಿರುವರಿಗಾಗಿ ಅವರು ಒಂದು ಪುಸ್ತಕವನ್ನೂ ಬರೆಯಲಿರುವರೆಂದು ತಿಳಿದು ಬರುತ್ತದೆ.

ನರ್ತನ ಚಿತ್ರ

ಭವಾನಿ ಚಿತ್ರ ಕಂಪನಿಯವರು ಒಂದು ನರ್ತನದ ಚಿತ್ರವನ್ನು ತಯಾರಿಸು

ಶ್ರಿದ್ಧಾರೆ.

ಪ್ರೇಮ ಸ್ವಪ್ನ.

ಪ್ರೇಮ ಸ್ವಪ್ನದ ವಿಷಯವಾಗಿ ಒಂದು ಕಥೆಯನ್ನು ಕಟ್ಟಬಹುದೆ?

ಅಂತಹ ಚಿತ್ರವೊಂದು ಈಗ ತಯಾರಾಗುತ್ತಿದೆ. ಅದರಲ್ಲಿ ಪಹಾರಿ ಮತ್ತು ಕಾನನ್ ಬಾಲಾ ಇವರು ಮುಖ್ಯ ಪಾತ್ರಗಳನ್ನು ವಹಿಸುವರು. ನವಾಬನ್ ಮೊದಲಾದವರು ಸಹಾಯಕ ನಟರಾಗಿರುವರು.

ಮಾನವ ಭಾವನೆಗಳು ಪ್ರೇಮದ ಸಂಕಲನದಿಂದ ಹೇಗೆ ಉತ್ತೇಜಕವಾಗುತ್ತವೆಯೆಂಬುದೇ ಇದೀಕಥೆಯ ಸ್ವಾರಸ್ಯವಾಗಿದೆ.

ಪ್ರತಾಪ ಚಿತ್ರ

ಪ್ರತಾಪ ಚಿತ್ರ ಕಂಪೆನಿಯವರ ಮನಮಾಲಿಕೆ ಎಂಬ ಚಿತ್ರವು ಬೊಂಬಾಯಿಯಲ್ಲಿ ತಯಾರಾಗುತ್ತಿದೆ. ದಿ. ವಿ. ಸ್ವಾಮಿಯವರು ನಿರ್ದೇಶಕರು. ಶ್ರೀನಿವಾಸರಾವ್ ಎಂ. ಎ. ರಾಜಮಣಿ, ಎಸ್. ಆರ್. ಸೇಂಡೋ, ಸುಂದರಮಣಿ, ಭಾಗವತರ್ ಮೊದಲಾದವರು ಅಭಿನಯಿಸುವರು.

ರಿಚಾರ್ಡ್ ಟಿಕ್ಸ್

ಹಾಲಿವುಡ್ಡಿನ ಸುಂದರಿಯರ ಮಧ್ಯದಲ್ಲಿ ರಿಚಾರ್ಡ್ ಟಿಕ್ಸನು ಬಹಳ ಪ್ರಿಯತಮನಾಗಿರುವನು. ಗ್ಲೇಲ್ ಪಾಟ್ರಿಕಳು ಅವನೊಡನೆ ಇತ್ತೀಚೆಗೆ ಹಲವು ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾಳೆ.

ಮೂವತ್ತರ ಕೆಳಗಿರಬಾರದು

ಜರ್ಮನಿಯಲ್ಲಿ ಫಿಲ್ಮ್ ಟೀಕಾಕಾರನು ಮೂವತ್ತು ವರ್ಷಕ್ಕಿಂತ ಕೆಳಗಿನವನಾಗಬಾರದು. ವಿಮರ್ಶೆಯು ಲೇಖಕನ ಪೂರ್ಣ ಹೆಸರಿನಿಂದ ಪ್ರಕಟವಾಗಬೇಕು. ಅಂತವರು ಎರಡು ವರ್ಷ ಶಿಕ್ಷಣ ಪಡೆದು ಆ ಮೇಲೆ ತರಬೇತಿ ಹೊಂದಿರಬೇಕು. ಯಾವ ಜರ್ಮನ್ ಚಿತ್ರದ ವಿಷಯವಾಗಿಯೂ ಅವರು ಟೀಕೆ ಬರೆಯಬಾರದು.—ಹೀಗಿದೆ ಅಲ್ಲಿನ ನಿರ್ಬಂಧಗಳು!

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director.*

The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.
ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು ಬ್ರಾಂಚ್ ಸೆಂಟ್‌ಲೆಂಡ್ ಪೇಟೆ
ರಿಜಿಸ್ಟರ್ಡ್ ಮೂಲಧನ ರೂ. 1,00,000; ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ.
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½
" 6 ತಿಂಗಳಿಗೆ 4% 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.
ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

ಮೈಸೂರು ಕಾಂಗ್ರೆಸು ಅಧಿವೇಶನ

ಪ್ರಜೆಗಳ ಪ್ರೀತಿಯೇ ರಾಜರ ಮಹಾಬಲವಾಗಿದೆ

ಅಧ್ಯಕ್ಷ ಶ್ರೀ। ಭಾಷ್ಯಂರವರ ಗಂಭೀರ ಭಾಷಣ!

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಮೈಸೂರು ಕಾಂಗ್ರೆಸಿನ ತೃತೀಯ ಅಧಿವೇಶನವು ಕಳೆದ ವಾರ ಶಿವಮೊಗ್ಗೆಯಲ್ಲಿ ತುಂಗಾ ನದಿಯ ದಡದಲ್ಲಿ ನಿರ್ಮಿತವಾದ ಅಜಾದ ನಗರದಲ್ಲಿ ಮೈಸೂರು ಕಾಂಗ್ರೆಸ್ ಧುರೀಣರಾದ ಶ್ರೀ ಕೆ. ಟಿ ಭಾಷ್ಯಂರವರ ಅಧ್ಯಕ್ಷತೆಯಿಂದ ಬಹಳ ವಿಜೃಂಭಣೆಯಲ್ಲಿ ನೆರವೇರಿತು ಮೈಸೂರಿನ ಎಲ್ಲಾ ಭಾಗಗಳಿಂದ ಪ್ರತಿನಿಧಿ ಪ್ರೇಕ್ಷಕರು ಬಹು ಮಂದಿ ಬಂದಿದ್ದರು ಕರ್ನಾಟಕ ಪ್ರಾಂತದ ಕಾಂಗ್ರೆಸು ಧುರೀಣರಾದ ಡಾ। ಎನ್ ಎಸ್ ಹರ್ಡೀಕರರು ಸ್ವದೇಶಿ ವಸ್ತು ಪ್ರದರ್ಶನದ ಆರಂಭೋತ್ಸವನ್ನು ನೆರವೇರಿಸಿದರು ಸ್ವಾಗತ ಸಮಿತಿಯ ಪರವಾಗಿ ಶ್ರೀ ಕೃಷ್ಣಮೂರ್ತಿಯವರು ನೆರೆದವರನ್ನು ಸ್ವಾಗತಿಸಿದರು

ಅಧ್ಯಕ್ಷರ ಭಾಷಣ

ಸಮ್ಮೇಳನಾಧ್ಯಕ್ಷರಾದ ಶ್ರೀ ಕೆ ಟಿ ಭಾಷಮಯ್ಯಂಗಾರ್ಯರು ಬಹಳ ವಿಚಾರ ಪೂರ್ಣವಾದ ಭಾಷಣವನ್ನಿತ್ತರು ಆರಂಭದಲ್ಲಿ ಯುವರಾಜರ ನಿಧನ ಬಗ್ಗೆಯೂ ಹೊಸ ಕೊಪ್ಪ ಕೃಷ್ಣರಾಯರ ನಿಧನದ ಬಗ್ಗೆಯೂ ಸಂತಾಪ ಸೂಚಿಸಿದರು ಆ ವೇಳೆ ಮೈಸೂರ ಸರಕಾರದ ಇಂದಿನ ರಾಜಕೀಯ ಧೋರಣೆಯನ್ನು ಉಜ್ವಲವಾಗಿ ಖಂಡಿಸಿದರು

ಕರ್ನಾಟಕ ಪ್ರಾಂತ ರಚನೆ

ಅವರ ಭಾಷಣದ ಸಾರಾಂಶವು ಹೀಗಿತ್ತು 'ಹೊಣೆಗಾರಿಕೆಯ ಸರಕಾರವು ಮೈಸೂರ ಮಹಾರಾಜರ ಅಧಿಕಾರವನ್ನು ಕಗ್ಗಿಸುವುದಕ್ಕಿಂತ ಇನ್ನಷ್ಟು ಪ್ರಭಾವಶಾಲಿಯಾಗಿ ಮಾಡುವುದು ಬೇರೆಬೇರೆ ಆಡಳಿತಗಳಿಗೊಳಪಟ್ಟ ಕನ್ನಡ ನಾಡು ಒಂದಾಗ ಬೇಕಾಗಿದೆ ಸಂಸ್ಥಾನಗಳೂ, ಅಧಿಪತ್ಯಗಳೂ, ಒಟ್ಟಾಗಿ ಸಂಯುಕ್ತರಾಜ್ಯ ಪದ್ಧತಿಯು ಭಾರತದಲ್ಲಿ ನೆಲೆಯೂರಿದಾಗ ಕನ್ನಡ ಮಾತನಾಡುವವರಿಗೆ ಪ್ರತ್ಯೇಕ ಪ್ರಾಂತ್ಯವಾಗಲೇ ಬೇಕು ಇದರಿಂದ ಮೈಸೂರು ಬೆಳೆಯುವುದು. ಇದನ್ನು ಸಾಧಿಸುವ ಕಾಂಗ್ರೆಸು ಕೆಲಸಗಾರರು ಕೆಲವು ಮಾತಿನ ರಾಜಭಕ್ತರಿಗಿಂತ ಹೆಚ್ಚಿನ ರಾಜ ಭಕ್ತರೇ ಆಗಿದ್ದಾರೆ. ನಮ್ಮ ಆಶಯವು ಈಡೇರಿದರೆ ಮೈಸೂರ ಮಹಾರಾಜರು ಅಖಿಲ ಕರ್ನಾಟಕದ ಒಡೆಯರಾಗುವರು, ಎಲ್ಲದಕ್ಕೂ ಜವಾಬ್ದಾರಿ ಸರಕಾರವು ಮೈಸೂರಲ್ಲಿ ಮೊದಲಾಗಿ ಸ್ಥಾಪಿತವಾಗಬೇಕು.

ಅಲ್ಪ ಸಂಖ್ಯಾಕ ಸಮಸ್ಯೆ

"ಭಾರತದ ಸ್ವರಾಜ್ಯಕ್ಕೆ ಸಂಸ್ಥಾನಗಳು ಮತ್ತು ಅಲ್ಪ ಸಂಖ್ಯಾಕರು ಬಹಳ ದೊಡ್ಡ ಆತಂಕಗಳೆಂದು ತಿಳಿಯಲಾಗಿದೆ. ಆದರೆ ಈ ಪ್ರಶ್ನೆಗಳು ಕಠಿಣಗಳಲ್ಲ. ತಮ್ಮ ಸಂಸ್ಕೃತಿ ಭಾಷೆಗಳನ್ನು ಕಾಯಬೇಕೆಂದು ಅಲ್ಪಸಂಖ್ಯಾಕರು ಕೇಳುವುದು ನ್ಯಾಯವಾಗಿದೆ ಅವರಿಗೆ ಶಾಸನ ಸಭೆಗಳಲ್ಲಿ ಸ್ಥಾನಗಳು ಕಾದಿಡಬೇಕಾಗಿದೆ ಆದರೆ ಮುಸ್ಲಿಂ ಲೀಗಿನ ಧುರೀಣರು ಮುಸ್ಲಿಮರಿಗೆ ಪ್ರತ್ಯೇಕ ನಾಂತ್ಯವಾಗಬೇಕೆಂದು ಹೇಳಿದ ವಿಷಯವು ತೀರಾ ಶೋಚನೀಯವಾಗಿದೆ ರಾಜಕೀಯ ದೃಷ್ಟಿಯಲ್ಲಿ ಜಾತಿಭೇದವಿಲ್ಲ. ರಾಷ್ಟ್ರ ಘಟನಾ ಸಮಿತಿಯು ಇವೆಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು

ಆಶ್ರಿತ ರಾಜ್ಯಗಳ ವಿಚಾರ

ದೇಶೀಯ ರಾಜರು ಬಹುಕಾಲದಿಂದ ಒಡೆತನವನ್ನು ನಡೆಸಿಕೊಂಡು ಬಂದ ಗೌರವ ಪದವಿಯವರು ಆದರೆ ಅವರ ಶಕ್ತಿಯು ಪ್ರಜೆಗಳಲ್ಲಿಯೇ ಅಡಕವಾಗಿದೆಯೆಂಬದನ್ನು ಅವರು ಮರೆಯಬಾರದು. ಪ್ರಜೆಗಳ ಹಕ್ಕನ್ನು ಅವರು ಕೊಡಲು ಸಂಕೋಚಿಸಬಾರದು ತೃಪ್ತಿಗೊಂಡ ಪ್ರಜೆಗಳೇ ರಾಜರ ಮಹಾ ಸೈನ್ಯವಾಗಿದೆ ಆದ ದರಿಂದ ಸರ್ವದಾ ಪ್ರಜೆಗಳನ್ನು ಮಹಾರಾಜರು ತೃಪ್ತಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಶಕ್ತಿಯುತವಾದ ಸಂಸ್ಥಾನಗಳು ಪ್ರಾಂತಗಳೊಡನೆ ಸಮ್ಮಿಳಿತ ಆಡಳಿತವನ್ನು ಹೊಂದುವುದೇ ನ್ಯಾಯವೂ ಸೌಖ್ಯದಾಯಕವೂ ಆಗಿದೆ

ಪ್ರಪಂಚದ ಪರಿಸ್ಥಿತಿ

ನಿರ್ಬಲ ರಾಷ್ಟ್ರಗಳನ್ನು ಸಬಲ ರಾಷ್ಟ್ರಗಳು ಹದಗೆಡಿಸುವುದು ಅನ್ಯಾಯ ಮಾನವ ಕುಲವು ಹಿಂಸೆ ದ್ವೇಷಗಳಿಂದ ಮುಂದೊತ್ತಿ ಆತ್ಮನಾಶಕ್ಕೆ ಇಳಿಯುತ್ತಿದೆ ಅಬಿಸೀನಿಯವು ಪರಾಧೀನವಾದ ಮೇಲೆ ಅಂತರ್ ರಾಷ್ಟ್ರೀಯ ಪರಿಸ್ಥಿತಿಯು ಕಲ್ಪಂಕಿತವಾಯಿತು ಸ್ಪೇಯಿನ, ಜೆಕೊಸ್ಲೊವೇಕಿಯಾ, ಪೋಲೆಂಡು ಆಸ್ಟ್ರೀಯಾ, ಅಲ್ಬೇನಿಯಾ ಫಿನ್ಲೆಂಡುಗಳು ಅನ್ಯಾಯಕ್ಕೆ ಬಲಿಯಾದವು ನ್ಯಾಯ ಧರ್ಮಗಳ ಮೂಲೆ ಪಾಲಾಗಿವೆ ನಾಗರಿಕತೆಯು ಧ್ವಂಸವಾಗಿದೆ. ವಿಜ್ಞಾನವು ವಿನಾಶಕ್ಕೆ ಉಪಯೋಗಿಸಲ್ಪಟ್ಟಿದೆ. ಜಗದ ಶಾಂತಿಗೆ ಕ್ಷಮೆಯೂ ಪ್ರೇಮ ಹೃದಯವೂ ಬೇಕಾಗಿದೆ. ಇದರಿಂದಲೇ ಮಾನವ ಕುಲವು ಉದ್ಧಾರವಾಗಬೇಕಾಗಿದೆ.

ಭಾರತದ ವಿಚಾರ

"ಭಾರತದ ಉದ್ಧಾರದಲ್ಲಿ ಮಾನವ ಕುಲದ ಉದ್ಧಾರವಿದೆ ಶಾಂತಿ ಹಿಂಸೆಗಳಿಂದ ಸ್ವತಂತ್ರ ರಾಷ್ಟ್ರಗಳು ಹುಟ್ಟಬೇಕೆಂದು ನಾವು ಪ್ರಾರ್ಥಿಸುವ. ಈ ಪ್ರಸಂಗದಲ್ಲಿ ನನಗೆ ಧೀನಬಂಧು ಆಂಡ್ರೂಸರ ನೆನಪು ಬರುತ್ತದೆ, ಲೋಕವಿಖ್ಯಾತರಾದ ಇವರು ನಮ್ಮ ರಾಷ್ಟ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಜಗದ ಧೀನರ ಹಿತಕ್ಕಾಗಿ ದೇಹ ಸವೆಸಿದ್ದಾರೆ ಅವರ ಆತ್ಮಕ್ಕೆ ದೇವರು ಶಾಂತಿಯನ್ನೀಯಲಿ

ಅಹಿಂಸೆಯನ್ನು ಮುಂದಿಟ್ಟುಕೊಂಡು ನಾವು ಈಗ ಕೆಲಸ ಮಾಡುವುದು ನಮ್ಮ ಕರ್ತವ್ಯವಾಗಿದೆ. ನಾವೀಗ ಜಿಲ್ಲಾ ಬೋರ್ಡು ಚುನಾವಣೆಗಳಿಗೆ ನಿಂತಿದ್ದೇವೆ. ನೆರೆಮನೆ ಮೊದಲಾದ ನಿರ್ಬಂಧಗಳಿದ್ದರೂ ಜನರು ಕಾಗ್ರೆಸ್ಸನ್ನು ಮರೆಯಲಾರರೆಂದು ನಂಬಿದ್ದೇವೆ.

ರಚನಾತ್ಮಕ ಕಾರ್ಯಗಳಿಗೆ ನಾವು ಗಮನಕೊಡಬೇಕು ಅಹಿಂಸಾ ಪಾಲನೆ ನಮ್ಮ ಪೂರ್ಣ ಧ್ಯೇಯವಿರಬೇಕು.

"ನಮ್ಮದು ಮಹತ್ವಾಕಾಂಕ್ಷೆಯು ಅದು ಧರ್ಮದ್ದಾಗಿದೆ. ನಾವು ಮುಂದುವರಿಯೋಣ. ಇಂದು ವಿಶ್ರಾಂತಿಯಿಲ್ಲ. ಸುಖವಿಲ್ಲ. ನಾವು ಹಿಂದೆ ಎದೆಗುಂದಲಿಲ್ಲ. ಒಗ್ಗಟ್ಟು ನಿರ್ಮಲ ಹೃದಯ ಇವುಗಳಿಂದ ಮುಂದುವರಿದರೆ ನಾವು ಖಂಡಿತ ಗುರಿಯನ್ನು ಮುಟ್ಟಿಯೇ ಮುಟ್ಟುವೆವು"

WEST END ECONOMY WATCHES

ವಾಸ್ತವವಾಗಿಯೂ ಗಟ್ಟಿ
ಬಹಳ ಸಮಯ ಬಾಳುವ ಉತ್ತಮವಾದ ಯಾಚುಗಳು
ನಿಮ್ಮ ಹಣಕ್ಕೆ ಉತ್ತಮ ಮೌಲ್ಯದ ವಾಚುಗಳು



ಸೆಕೆಂಡಸ್ ರೌಂಡ್ 101 ಸೈಜು
ನಿಕ್ಕಲ್ ಬೆಳ್ಳಿ ರೂ 22 ರೋಲ್ಡ್ ಗೋಲ್ಡ್ ರೂ 28
9 ಕೆರೆಟ್ ಗಟ್ಟಿ ಚಿನ್ನ ರೂ 45





ಸೆಕೆಂಡಸ್ ಆಯತಾಕಾರ
ನಿಕ್ಕಲ್ ಬೆಳ್ಳಿ ರೂ 24
ನಿದಾ ಹೊಳೆಸಿನ ಬೆಳ್ಳಿ ರೂ 30
ರೋಲ್ಡ್ ಗೋಲ್ಡ್ ರೂ 36
ಕೆಟಲಾಗು ಕೇಳಿದ್ದಲ್ಲಿ ದವಾರ್ಥ ಕೊಡಲಾಗುವದು

WEST END WATCH Co
BOMBAY CALCUTTA



ನಿಮ್ಮ ಅದೃಷ್ಟ!

ಪೋಸ್ಟ್ ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿ ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ವಹಿವಾಟುಗಳ ಲಾಭ ನಷ್ಟ ಜನನ, ಉದ್ಯೋಗ ದಾಂಪತ್ಯಸುಖ ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ 1-9-0ಕ್ಕೆ ವಿ ಪಿ ಮೂಲಕ ತಿಳಿಸುವೆವು ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.
ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ 100 ಇನಾಮು ಕೊಡಲಾಗುವುದು

ANAND JOTISH ASHRAM,
Post Box No 27 (S A.M.) Amraotti.

ಜೀವನಜ್ಯೋತಿಗಳು

ಗಾಂಧಿ ಸೇವಾನಿರತೆ

ಮೀರಾಬೆನ್

"ನನ್ನ ಜೀವಮಾನದಲ್ಲಿ ವಿವಿಧ ರೀತಿಯ ಜನರನ್ನು ಸಂದರ್ಶಿಸುವ ಸಂದರ್ಭವು ನನಗೆ ಹಲವು ಬದಗಿದೆ. ಅವರಲ್ಲಿ ಅನೇಕ ವಿಭೂತಿ ಪುರುಷರು, ಮಹಾ ಪಂಡಿತರು, ಲೋಕ ಮಾನ್ಯರಾದ ಸ್ತ್ರೀ ಪುರುಷರು ಮಾತ್ರವಲ್ಲದೆ ಕೀಳಾ ಕೆಳತರಗತಿಯ ದಲಿತ ದೀನ ಜನರೂ ಇದ್ದಾರೆ. ಅವರಲ್ಲಿ ಹಲವರ ವಿಷಯಗಳೂ ಚರಿತ್ರಾರ್ಹವಾದುದು. ಅಂತಹ ಮಹಾ ಚರಿತ್ರ ವಿಭೂತಿಗಳಲ್ಲಿ ಓರ್ವ ತಪಸ್ವಿನಿಯ ವಿಷಯವನ್ನು ನಾನಿಲ್ಲಿ ವಿವರಿಸಲಿರುವೆನು ಆಕೆಯೇ ಗಾಂಧಿ ಪರಿಚಾರಿಕೆಯಾದ ಮೀರಾಬೆನ್ ಉಚ್ಚ ಕುಲದ ಯುರೋಪಿಯನ್ ಮಹಿಳೆಯು ಲೋಕದ ಜನರ ಸೇವೆಗಾಗಿ ದುಡಿಯುವ ವಿಭೂತಿ ಪುರುಷನನ್ನು ಆಶ್ರಯಿಸಿ ಆತನ ಸೇವೆಯಲ್ಲಿಯೇ ದಿನಗಳೆಯುತ್ತಿದ್ದಾಳೆ. ಆ ಮಹಿಳೆಯ ಪುಣ್ಯ ಕೀರ್ತಿಯು ಕೇವಲ ಭಾರತದಲ್ಲಿ ಮಾತ್ರವಲ್ಲ, ಅಖಿಲ ಜಗತ್ತಿನಲ್ಲಿಯೇ ಅರಿತಿದೆ. ತ್ಯಾಗಮೂರ್ತಿ ಸ್ವರೂಪಳಾದ ಅವಳ ವಿಷಯ ನಾನು ಬಹುಕಾಲ ಹಿಂದೆ ಕೇಳಿದ್ದೆನು. ಆಕೆಯೊಡನೆ ಸಂಭಾಷಿಸುವ ಯೋಗವು ನನಗೆ ಮೊನ್ನೆ ತಾನೆ ದೊರಕಿತು' ಹೀಗೆಂದು ಅಖಿಲ ಭಾರತ ಹರಿಜನ ಸೇವಾಸಂಘದ ಉಪಾಧ್ಯಕ್ಷೆ ಶ್ರೀಮತಿ ರಮೇಶ್ವರಿ ನೆಹರು ಅವರು ಮೀರಾಬೆನ್ನರ ಪರಿಚಯದ ವಿಷಯ ಬರೆದ ಲೇಖನದಲ್ಲಿ ಹೇಳುತ್ತಾರೆ.

'ಹರಿಜನ ಸೇವಾಸಂಘದ ವಾರ್ಷಿಕ ಸಭೆಗಾಗಿ ನಾನು ದಿಲ್ಲಿಗೆ ತೆರಳಿದ್ದೆ ಅಲ್ಲಿ ನಾನು ಶೇಠ್ ಘನಶ್ಯಾಮದಾಸ ಬಿರ್ಲರ ಅತಿಥಿಯಾಗಿ ಉಳುಕೊಂಡಿದ್ದೆ ಅಲ್ಲಿಗೆ ಮೀರಾಬೆನ್ನಳೂ ಬಂದಿದ್ದಳು ಆಕೆಯ ಆರೋಗ್ಯ ನೆಟ್ಟಗಿರಲಿಲ್ಲ ಆರೋಗ್ಯಕ್ಕಾಗಿ ಆಕೆ ಅಲ್ಲಿಗೆ ಬಂದಿದ್ದಳು ಅದಕ್ಕಾಗಿ ಸೇವಾಗ್ರಾಮದಿಂದ ಹೊರಟು ಪಂಜಾಬಿನ ಚರಕಾ ಕೇಂದ್ರವಾದ ಆದಮಪುರಕ್ಕೆ ಹೋಗಲು ಆಕೆ ಬಂದಿದ್ದಳು ಆರೋಗ್ಯಕ್ಕಾಗಿ ಹಾಗೂ ವಿಶ್ರಾಂತಿಗಾಗಿ ಪಾಶ್ಚಾತ್ಯ ಶಿಕ್ಷಣ ಪಡೆದ ನಮ್ಮ ಮಂದಿಯು ವಿದೇಶಗಳಿಗೆ ಹೋಗುತ್ತಾರೆ ಆದರೆ ಆ ತಪಸ್ವಿನಿಯು ಪಾಶ್ಚಾತ್ಯ ದೇಶದಲ್ಲಿಯೇ ಬೆಳೆದು ದೊಡ್ಡವಳಾಗಿದ್ದರೂ ನಗರ ಪಟ್ಟಣಗಳನ್ನು ಬಿಟ್ಟು ಬಡವರಿರುವ ಒಂದು ಹಳ್ಳಿಗೆ ಹೋಗಲು ನಿಶ್ಚಯಿಸಿ ಬಂದಿದ್ದಳು

ಮೀರಾಬೆನ್ ದೀರ್ಘಕಾಯಳಾಗಿದ್ದಾಳೆ. ಶರೀರವು ಗಟ್ಟಿಮುಟ್ಟಾಗಿದೆ. ಈಗ ಪ್ರಾಯ ೪೮ ವರ್ಷ. ಕುಲೀನ ಆಂಗ್ಲ ಮನೆತನವೊಂದರಲ್ಲಿ ಜನ್ಮವೆತ್ತಿದಳು. ತಂದೆಯು ಭಾರತೀಯ ಸೈನ್ಯದಲ್ಲಿ ಉಚ್ಚ ಅಧಿಕಾರಿಯಾಗಿದ್ದನು. ಎಳೆತನದಿಂದಲೇ ಸೌಭಾಗ್ಯದಲ್ಲಿ ತನ್ನ ಜೀವನವನ್ನು ಕಳೆದಳು. ಪ್ರೌಢ ವಿದ್ಯಾಭ್ಯಾಸವನ್ನು ಹೊಂದಿದಳು. ಅಂತಹ ಸೌಭಾಗ್ಯ ಜೀವನದಲ್ಲಿ ತನ್ನ ಮನಸ್ಸಿಗೆ ಸಂತೃಪ್ತಿ ದೊರಕಲಿಲ್ಲವಾಗಿ ಆಕೆ ಹೇಳುತ್ತಾಳೆ,

'ಗಾಂಧಿಜಿಯವರಲ್ಲಿಗೆ ಬರುವುದಕ್ಕಿಂತ ಮೊದಲು ತಮಗೆ ಭಾರತೀಯರ ಪರಿಚಯವಿತ್ತೇ?' ನಾನು ಕೇಳಿದೆ

'ಇಲ್ಲ, ನನಗೆ ಯಾವ ಭಾರತೀಯರನ್ನೂ ಸಂದರ್ಶಿಸುವ ಯೋಗವು ದೊರಕಿರಲಿಲ್ಲ' ಎಂದಳು ಆಕೆ ಕೇವಲ ರಾಜ ಮಹಾರಾಜರು ಮಹಾರಾಣಿಯವರು ಮತ್ತು ಶ್ರೇಷ್ಠ ಅಧಿಕಾರಿಗಳು ಮಾತ್ರ ಆಗಾಗ ಭೇಟಿಯಾಗುತ್ತಿದ್ದರಂತೆ!

'ಮುಂದೆ ಎಂದಾದರೊಂದು ದಿನ ಭಾರತೀಯರ ಅದರಲ್ಲೂ ಹಳ್ಳಿಯ ಜನರ ಸಮೀಪ ಸಂಪರ್ಕವು ಒದಗಬಹುದೆಂದು ನಿಮಗೆ ಅನಿಸಿತ್ತೆ?' ನಾನು ಪ್ರಶ್ನಿಸಿದೆ ಆಕೆಯ ಮುಖವು ಹರ್ಷದಿಂದ ವಿಕಸಿತವಾಯಿತು ಉಲ್ಲಾಸದಿಂದ ಹೇಳಿದಳು

'ಒಂದು ದಿನ ಇಂತಹ ಆನಂದ ಸಿಗಬಹುದೆಂದು ನನಗೆ ಆಗ ಹೇಗೆ ತಿಳಿಯಬೇಕು?'

'ಭಾರತೀಯ ರ ಸಹವಾಸ ವರ್ಷದಲ್ಲಿದ್ದು ಅವರ ಸಾಮಾಜಿಕ ನ್ಯೂನತೆಗಳನ್ನು ಕಂಡು ನಿಮಗೆ ಬೇಸರವಾಗಲಾರದಷ್ಟೆ?'

"ಇಲ್ಲ ಒಳ್ಳೆದೂ ಕೆಟ್ಟದೂ ನನಗೆ ಎರಡೂ ರುಚಿಸುತ್ತದೆ ನನಗೆ ಎಂದೂ ಬೇಸರ ಬಂದಿಲ್ಲ"

"ನಿಮಗೆ ನಿಮ್ಮ ತಾಯ್ನಾಡಿನ, ಕುಟುಂಬದ, ನಿಮ್ಮ ಹಿಂದಿನ ಜೀವನಕ್ರಮದ ನೆನಪು ಆಗಾಗ ಬರುವುದಿಲ್ಲವೆ?"

ಮೀರಬೆನ್ ಕೂಡಲೇ ಹೇಳಿದಳು

"ಎರಡೂ ಇಲ್ಲ ಇದು ನನ್ನ ಪುನರ್ಜನ್ಮ ಹಿಂದಿನ ವಿಚಾರಗಳು ಮನಸ್ಸಿಗೆ ಬರುವುದೇ ಇಲ್ಲ ಈ ಜೀವನದಲ್ಲಿ ನನಗೆ ಬಹಳ ಆನಂದವಿದೆ"

ಆಹಾ! ಮಹಾತ್ಮಾ ಗಾಂಧಿಜಿಯವರ ಪಟ್ಟಶಿಷ್ಯೆಯಾಗಿ ದೀನ ಜನರ ಸೇವೆ ಮಾಡುವಲ್ಲಿ ಎಂತಹ ಆನಂದವನ್ನು ಆಕೆ ಅನುಭವಿಸುತ್ತಿದ್ದಾಳೆ! ಮಹಾತ್ಮಾಜಿಯವರ ಜೀವನ, ಲೇಖನಗಳ ಪ್ರಭಾವದಿಂದ ತನ್ನ ನಿತ್ಯಯ ಮಾತೃಭೂಮಿಯನ್ನೂ ಹೆತ್ತ ತಂದೆ ತಾಯಿಗಳನ್ನೂ ಕುಟುಂಬವನ್ನೂ ಗೆಳೆಯರನ್ನೂ ಅಗಲಿ ಬಂದ ಇದಿಗೆ ಹದಿನಾಲ್ಕು ವರ್ಷಗಳಾದವು! ಅಂದಿನಿಂದ ಇಂದಿನ ವರೆಗೆ ಆಕೆ ಮಹಾ ತ್ಯಾಗಗಳನ್ನು ಮಾಡಿ ತನ್ನ ಗುರುವಿನ ಪಾದತಲದಲ್ಲಿ ಮಹಾ ತಪಸ್ವಿನಿಯಾಗಿ ಜೀವನವಮಾಡುತ್ತಾಳೆ. ತಾನೇ ತೆಗೆದ ನೂಲಿನಿಂದ ಮಾಡಿದ ಬಿಳೀ ಬಟ್ಟೆ! ಕಿರಿಯ ಕುಪ್ಪಸ, ಇವಿಷ್ಟು ಆಕೆಯ ಉಡಿಗೆ! ರೊಟ್ಟಿ ಹಾಲು, ಹಸಿ ತರಕಾರಿ ಇವಿಷ್ಟು ಆಕೆಗೆ ಮೃಷ್ಟಾನ್ನ ಭೋಜನ! ಬರಿಗಾಲಿನಿಂದ ಗ್ರಾಮಗ್ರಾಮಗಳನ್ನು ಅಲೆದಾಡುತ್ತಾಳೆ! ಜಗತ್ತಿನ, ಪ್ರೇಮದ, ಸಂಸಾರದ ಇವೆಲ್ಲದರ ಬಂಧನವನ್ನು ಕಡಿದು ಗಾಂಧಿ ಸೇವೆಯಲ್ಲಿಯೇ ತನ್ಮಯಳಾಗಿದ್ದಾಳೆ ಗುರುದೇವನ ಸೇವೆಯಲ್ಲಿ ಹಾಗೂ ಭಕ್ತಿಯಲ್ಲಿಯೇ ಅತುಲ ಆನಂದ ಪಡುತ್ತಾಳೆ ಭಾರತದ ದರಿದ್ರರು ಆಕೆಯ ಹೃದಯವನ್ನು ಸೂರೆಗೊಂಡಿದ್ದಾರೆ!

ಆಕೆ ನೂಲುವ ಕಲೆಯಲ್ಲಿ ನಿಷ್ಣಾತಳಾಗಿದ್ದಾಳೆ, ಅದನ್ನು ಕಲಿಸಲು ಆಕೆ ಅಲ್ಲಲ್ಲಿಗೆ ಆಗಾಗ ಹೋಗುತ್ತಾಳೆ! ತಾನೇ ಹತ್ತಿ ಹಿಂಡಿ, ನೂಲು ಉಂಡೆ ಮಾಡಿ, ಮುರಿದ ಚರಕವನ್ನು ಸರಿಮಾಡಿ ಕೊಡುತ್ತಾಳೆ ಕಳೆದ ಆರು ತಿಂಗಳ ಕಾಲ ಗಡಿನಾಡಿನಲ್ಲಿದ್ದು ಅಲ್ಲಿ ಅದೇ ಕಾರ್ಯವನ್ನು ನಿರಂತರ ಮಾಡಿ ತೋರಿಸಿದಳು ಬಿಹಾರಿನಲ್ಲಿಯೂ ಅದೇ ಕೆಲಸ ನಡೆಯಿತು ಸೇವಾಗ್ರಾಮದ ಬಾಲಕ ಬಾಲಕೆಯರಿಗೆ ಆಕೆ ನೂಲುವ ಶಿಕ್ಷಕಿಯಾಗಿದ್ದಾಳೆ! ಚರಕಾ ಸಂಘದ ಕಾರ್ಯಕ್ಕಾಗಿ ಆಕೆ ಅನೇಕ ಸಮಯ ಭಾರತವನ್ನು ಸಂಚಾರ ಮಾಡುವ ಸಂದರ್ಭ ಬಂದಿತು.

ರೈಲು ಗಾಡಿಯಲ್ಲಿ ಮೂರನೇ ತರಗತಿಯಲ್ಲಿಯೇ ಪ್ರಯಾಣಮಾಡುತ್ತಿದ್ದಾಳೆ ಒಂದನೇ ತರಗತಿಯಲ್ಲಿಯೇ ಎಂದೂ ಸಂಚರಿಸುತ್ತಿದ್ದ ಆ ಮಹಿಳೆಯು ಈಗ ಜನಸಂದಣಿಯ ಸಮ್ಮರ್ದದಲ್ಲಿ ಹೋಗುವುದರಲ್ಲಿಯೇ ಹೆಚ್ಚು ಸುಖಪಡುತ್ತಿದ್ದಾಳೆ ರೊಟ್ಟಿ ಬೇಯಿಸಿಕೊಳ್ಳಲು, ನೀರು ಕುಡಿಯಲು ಚಿಕ್ಕ ಮಣ್ಣಿನ ಪಾತ್ರೆಗಳು ಹಾಗೆ ಇಷ್ಟು ಆಕೆಯ ಸೊತ್ತು!

ಮೂರು ವರುಷಗಳ ಹಿಂದೆ ಭಾರತದ ವಿಷಯ ಪ್ರಚಾರ ಮಾಡಲು ಆಕೆ ಯುರೋಪಿಗೆ ತೆರಳಿದ್ದಳು. ಅಮೇರಿಕದಲ್ಲಿ ಆಕೆಗೆ ಪ್ರಚಂಡ ಸ್ವಾಗತ ಸಿಕ್ಕಿತು ಅಲ್ಲಿನ ಜನರಿಗೆ ಭಾರತದ ನಿಜಸ್ಥಿತಿಯನ್ನು ಅಸ್ಖಲಿತವಾಣಿಯಲ್ಲಿ ವಿವರಿಸಿ ಹೇಳಿದಳು! ಹಡಗಿನ ಅಧಿಕಾರಿಗಳು ಆಕೆಯನ್ನು ಟಿಕೇಟಿಲ್ಲದೆ ಆಕೆಗ ಬೇಕು ಬೇಕಾದಲ್ಲಿಗೆ ಒಯ್ದರು. ಆದರೆ ಕೇವಲ ಎರಡು ವಾರಗಳಲ್ಲಿಯೇ ಆಕೆ ಭಾರತಕ್ಕೆ ಮರಳಿ ಬಂದು ಬಿಟ್ಟಳು. ಭಾರತವನ್ನು ಗಾಂಧಿಜಿಯವರ ಸನ್ನಿಧಿಯನ್ನು ಬಿಟ್ಟಿರುವುದು ಅವಳಿಂದ ಸಾಧ್ಯವಿಲ್ಲ!

ಯುರೋಪಿನ ಈ ಮಾನ್ಯ ಮಹಿಳೆಯ ಜೀವನವನ್ನು ಓದಿ ನಮ್ಮ ದೇಶದ ನಾರಿಯರು ನಾಚಿಕೆಯಿಂದ ತಲೆತಗ್ಗಿಸಬೇಕಲ್ಲವೇ?

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ ಆದರೆ ಈ ಬಾರಿ ಕೆಲವು ಸುಧಾರಣೆಯಿಂದೊಡಗೂಡಿದೆ ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟಿವೆ" ಇದನ್ನು ಒಂದು ಬಾರಿ ನೀವೆ ಪರೀಕ್ಷಿಸಿರಿ ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ

★ ★ ★

ಧರ್ಮಾರ್ಥ ಇಸ್ತ್ರೀಟು ಪೆಟ್ಟಿಗೆಯನ್ನು ಪಡೆಯಿರಿ.

ಈ ಧರ್ಮಾರ್ಥದ ಇಸ್ತ್ರಿಟು ಪೆಟ್ಟಿಗೆಯನ್ನು ಪಡೆಯಲು 'NACET BLADES' ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಇದಿರಿಸಿ ಇದೇ ಸೆಟ್ಟನ್ನು ಮುಲ್ಲರ್ ಎಂಡ್ ಪಿಪ್ಸ್ (ಇಂಡಿಯಾ) ಲಿಮಿಟೆಡ್,

1೯, ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.



ನೋಟಿಗಳು!

ತಟಸ್ಥ ರಾಷ್ಟ್ರಗಳನ್ನು ಕಾಪಾಡಲು ಬ್ರಿಟನು ನಾರ್ವೆ ಗಡಿಯಲ್ಲಿ ತೋಟಿಗಳನ್ನುಹಾಕಿತಂತೆ! ಅಷ್ಟರಲ್ಲಿಯೇ ಜರ್ಮನಿಯು ನಾರ್ವೆ ಮತ್ತು ಡೆನ್ಮಾರ್ಕುಗಳನ್ನು ಇತರರು ಉಪದ್ರವಿಸದಂತೆ ತನ್ನ ರಕ್ಷಣೆಯೊಳಗೆ ಮಾಡಿಕೊಂಡುಬಿಟ್ಟಿತಂತೆ!

ಇಂತಹ ತನ್ನ ಹಿತಚಿಂತಕರಿಂದಲೇ ತಟಸ್ಥ ರಾಷ್ಟ್ರಗಳು ಬದುಕುವ ಆಶೆಗಳನ್ನೆಲ್ಲಾ ಬಿಟ್ಟುಬಿಡಬೇಕಾಗಿ ಬಂದಿದೆ!

◈

ತೋಟಿಗಳನ್ನು ಹಾಕಲು ಬ್ರಿಟನು ಬಹಳ ಕುಶಲತೆಯಿಂದ ಕಾರ್ಯಗಳನ್ನು ಕೈಗೂಡಿಸಿತ್ತು ಎಂದು ತಿಳಿದಿದೆ

ಅಂತೆಯೇ ಜರ್ಮನಿಯು ನಾರ್ವೆ ಡೆನ್ಮಾರ್ಕುಗಳನ್ನು ಹಿಡಿಯಲು ಕಳೆದ ಮೂರು ವರ್ಷಗಳಿಂದಲೂ ಸಿದ್ಧತೆಗಳನ್ನು ಮಾಡುತಿತ್ತೆಂದೂ ವಾರ್ತೆ!

◈

ಜರ್ಮನಿಯು ಹೇಳುವುದೇನೆಂದರೆ ತಾನು ಅತಿಕ್ರಮಣ ಮಾಡದಿದ್ದರೆ ಬ್ರಿಟನೇ ಅದನ್ನು ನುಂಗಿಬಿಡುತ್ತಿತ್ತು ಎಂದು!

ಹೇಗಿದ್ದರೂ ನಾರ್ವೆಯು ತನ್ನ ಹಿತಚಿಂತಕರ ರಕ್ಷಣೆಗೆ ಒಳಗಾಗಲು ಒಪ್ಪುವಂತಿಲ್ಲ

ನಾರ್ವೆ ನಗರವು ಆತ್ಮರಕ್ಷಣೆ ಮಾಡಲು ಭಯಂಕರ ಹೋರಾಡುತ್ತಿದೆ!

◈

ರಶ್ಯದ ಸಹಾಯವು ಯಾವ ಕಡೆಗೆ ಎಂಬುದು ಈಗಿನ ಪ್ರಶ್ನೆಯಾಗಿದೆ

ಹಿಟ್ಲರನಿಗೆ ರಶ್ಯವು ಬೆಂಬಲ ಕೊಡು ವುದು ಸಹಜವೆ?

ಹಾಗೆಂದರೆ ರಶ್ಯವು ಮಿತ್ರರಾಷ್ಟ್ರಗಳೊಡನೆ ಶತ್ರುತ್ವವನ್ನು ಕಟ್ಟಿಕೊಂಡಂತೆಯೇ ಆಯಿತಲ್ಲವೇ?

◈

ಆದರೆ ಲಾರ್ಡ್ ಹೆಲಿಫಾಕ್ಸರು ಹಾಗೆಂದು ಅಭಿಪ್ರಾಯಪಡುವುದಿಲ್ಲ ಪೋಲೆಂಡು ಫಿನ್ಲೆಂಡುಗಳಲ್ಲಿ ರಶ್ಯವು ಅನುಸರಿಸಿದ ನೀತಿಯು ಏನೇ ಇರಲಿ, ಇಂದಿನ ಯುದ್ಧದಲ್ಲಿ ಸರ್ವಾಧಿಕಾರಿಗೆ ರಶ್ಯವು ಬೆಂಬಲ ಕೊಡಲಾರದೆಂದೇ ಅವರ ನಿಶ್ಚಯ.

◈

ಹೇಗಿದ್ದರೂ ರಶ್ಯವು ಈ ಯುದ್ಧದಲ್ಲಿ ರಣರಂಗಕ್ಕೆ ಇಳಿಯುವ ಸಂಭವವು ಬರುವುದು ಖಂಡಿತವೆಂದು ರಾಜನೀತಿಜ್ಞರ ಅಭಿಪ್ರಾಯವಾಗಿದೆ.

◈

ಆ ಸಂದರ್ಭದಲ್ಲಿ ರಣರಂಗವು ಹಿನ್ದೂಸ್ಥಾನ ಭೂಮಿಯಲ್ಲಿ ಆರಂಭವಾಗಬಹುದೇ ಎಂಬುದು ಒಂದು ತರ್ಕ.

◈

ಈ ಯುದ್ಧಕ್ಕೆ ಭಾರತವು ಕೊಡುವ ಬೆಂಬಲದ ವಿಷಯವು ಇಂದು ಹಿಂದಿಗಿಂತ ಹೆಚ್ಚಾಗಿ ಇಂದು ಕಾಂಗ್ರೆಸಿನವರಿಂದಲೂ, ಸರಕಾರದಿಂದಲೂ ಚರ್ಚಿಸಲ್ಪಡುತ್ತಿದೆ!

ಜರ್ಮನಿಯ ಮೊನ್ನೆಯ ದಾಳಿಯು ಅಖಿಲ ಭಾರತವನ್ನೇ ದಿಗಿಲುಗೊಳಿಸಿದೆ ಜವಾಹಿರಲಾಲರು ಅದನ್ನು ಬಲವಂತವಾಗಿ ಖಂಡಿಸಿದ್ದಾರೆ

ಆದರೆ, ಅದರೊಡನೆ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನೂ ಇನ್ನಷ್ಟು ಬಲವಂತವಾಗಿ ಖಂಡಿಸಲು ಅವರು ಮರೆಯಲಿಲ್ಲ

"ಬ್ರಿಟನು ಸ್ವಾತಂತ್ರ್ಯಕ್ಕಾಗಿ ಕಾದಾಡುವುದಾಗಿದ್ದರೂ, ಕೂಡಲೇ ಅದು ತನ್ನ ಸಾಮ್ರಾಜ್ಯ ಶಾಹೀ ನೀತಿಯನ್ನು ಬಿಟ್ಟುಕೊಟ್ಟು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕು ಅಲ್ಲದೆ ಎರಡು ನಾಲಿಗೆಯ ಈ ನೀತಿಸಲ್ಲದು" ಎಂದರು ನೆಹರುಗಳು.

◈

ಕೆಲದಿನಗಳಿಂದ ಭಾರತದ ರಾಜಕೀಯ ಪರಿಸ್ಥಿತಿಯ ತೀಕ್ಷ್ಣವಾಗುತ್ತಾ ಬರುತ್ತಿದೆ!

ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿಗೆ ಅನೇಕ ಧುರೀಣರು ಬಲಿಯಾಗುತ್ತಿದ್ದಾರೆ!

ಕಾಂಗ್ರೆಸ ಕಮಿಟಿಗಳು ಎಲ್ಲಾ ಕಡೆಗಳಲ್ಲಿಯೂ ಸತ್ಯಾಗ್ರಹ ಸಮಿತಿಗಳಾಗಿ ಮಾರ್ಪಟ್ಟಿವೆ!

ಜನರು ಅಸಂಖ್ಯಾತರಾಗಿ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ ಹಾಕಿ ಸತ್ಯಾಗ್ರಹ ಸೈನ್ಯವನ್ನು ಸೇರುತ್ತಿದ್ದಾರೆ!

ಹೀಗಾಗಿ ಇನ್ನೊಂದು ಶಾಸನಭಂಗಕ್ಕೆ ಭಾರತದ ರಂಗಸ್ಥಳವು ಸಿದ್ಧವಾಗಿ, ...ತಿದೆಯೆನ್ನಬಹುದೇ?

◈

ಜಿನ್ನರ ವಿಭಜನಾ ಯೋಜನೆಯನ್ನು ಹಿಂದುಗಳೆನ್ನದೆ ಮುಸ್ಲಿಮರೆನ್ನದೆ ದೇಶಕ್ಕೆ ದೇಶವೇ, ಖಂಡಿಸುತ್ತಿದೆ

ಜಿನ್ನರು ರಾಷ್ಟ್ರದ್ರೋಹದ ಯೋಚನೆ ಮಾಡಿರುವರೆಂದು ಅವರ ಮೇಲೆ ಎಲ್ಲರೂ ಇಂದು ಹೊರಿಸುವ ದೂರಾಗಿದೆ

◈

ಗಡಿನಾಡಿನ ಎಂ. ಎಲ್. ಎ. ಗಳಾದ ಮಿ| ಅಬ್ದುಲ್ ಕೈಯ್ಯಾಮರು ಜಿನ್ನರ ಆ ಸೂಚನೆಯು ಕಾರ್ಯರೂಪಕ್ಕೆ ತರತಕ್ಕದಲ್ಲವೆಂದೂ ಹುಚ್ಚುತನದ್ದೆಂದೂ ಸ್ಪಷ್ಟವಾಗಿ ಹೇಳಿರುವರು.

◈

ಅಹ್ರಾರ ಯುವಕ ಸಮ್ಮೇಳನದಲಿ ಜಿನ್ನರ ಸೂಚನೆಯು ರಾಷ್ಟ್ರೀಯತೆಯನ್ನು ಧ್ವಂಸಮಾಡುವುದಾಗಿದೆಯೆಂಬ ನಿರ್ಣಯವೊಂದು ಮುಂದಾಗಿ ಮಾಡಲಾಯಿತು.

◈

ರೂ. 550 ಬಹುಮಾನ

ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಒಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು ಬೆಲೆ ತಾಮ್ರದ ಆವರಣದ್ದು ರೂ. 1-15-0 ಮೂರಕ್ಕೆ ರೂ 5, ಬೆಳ್ಳಿಯ ಆವರಣದ್ದು ರೂ 2-12-0 ಮತ್ತು ಚಿನ್ನದ ಆವರಣದ್ದು ರೂ. 6-8-0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ ವ್ಯಾಪಾರ, ಪರೀಕ್ಷೆ ವಹಿವಾಟು, ನೌಕರಿ ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು ಬೆಲೆ ತಾಮ್ರದ ಆವರಣ ರೂ 1-15-0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ 2-12-0, ಚಿನ್ನದ ಆವರಣ ರೂ 6-8-0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶ್ಯಲ್ ಪವರ್‌ಫುಲ್ ನಂ 4ಕ್ಕೆ ಕೇಳಿರಿ. ಬೆಲೆ 5-4-0, 5 ಕಾರ್ಯಗಳು ನೆರವೇರಬೇಕಾದರೆ ಸ್ಪೆಶ್ಯಲ್ ಸುಪರ್ ಪವರ್‌ಫುಲ್ ನಂ 5ಕ್ಕೆ ಕೇಳಿರಿ ಬೆಲೆ 7-8-0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ

ಸೂಚನೆ: ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮು, ಸರಿ ಕಾರ್ಯವಾಗದಿದ್ದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು ಈ ಯಂತ್ರಗಳ ... ಧರಿಸಬೇಕಾದರೆ ಸೀವೇನಾದರು ಕಷ್ಟಪಡಬೇಕೆಂದಿಲ್ಲ

ANAND SWAMI

Anand Bhawan, Post Box No 27 (S.A.M.) Amritsar

Canara Bank Limited

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದುದು

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ

	ರೂ ಆ ಪೈ		ರೂ ಆ ಪೈ
ಮೂಲಧನ		ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ	95 489 4-3
ತೆತ್ತಲ್ಪಟ್ಟ	6 00 000-0 0	**ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟಿದ್ದು**	
ಪೈಡ್ ಅಫ್	91 342-0-0	ಬಿಲ್ಲುಗಳ ಡಿಸ್ಕೌಂಟ	40,97,741-5-6
ರಿಸರ್ವ್ ಫಂಡು	4 50 000 0-0	ಹುಂಡೀ ಪತ್ರ ಮೊದಲಾದುವುಗಳು	10,30,649-2 10
ಡಿಪೊಸಿಟ್		ಠೇವಣಾತಿ	20,64,586-2 0
ಫಿಕ್ಸೆಡ್ ಕರೆಂಟ್ ಇತ್ಯಾದಿ	[illegible] 21 622-[illegible] 1	ವಿವಿಧ	9 82,093-10-4
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ನಗದಿ	17 99,207-1-3
ವಿವಿಧ	10 51 7[illegible]9-1 7		
ಈ ವರ್ಷದ ಲಾಭ	55 003 0 6		
ಜುಮ್ಲಾ	1,00,69,766 10 2	ಜುಮ್ಲಾ	1,00,69,766-10-2

ಕನ್ನನೂರಿನ ರಾಷ್ಟ್ರೀಯ ಮುಸ್ಲಿಮರು ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಜಿನ್ನಾರ ಧೋರಣೆಯು ಎಲ್ಲಾ ರಾಷ್ಟ್ರೀಯ ಯೋಚನೆಗಳಿಗೆ ಹಾನಿಕರವೆಂದೂ, ಆದುದರಿಂದ ಖಂಡನೀಯವೆಂದೂ, ಒಂದು ನಿರ್ಣಯವು ಇಡಲಾಯಿತು!

◈

ಇಂತಹ ರಾಷ್ಟ್ರ ಘಾತುಕ ಸೂಚನೆಯನ್ನು ನಾನು ನನ್ನ ಅಹಿಂಸೆಯ ಸರ್ವಶಕ್ತಿಯಿಂದಲೂ, ತಡೆಯದಿರಲಾರೆನೆಂದು ಗಾಂಧೀಜಿಯವರು ಹೇಳಿದರು.

◈

ದೇಶಕ್ಕೆ ದೇಶವೇ ಹೀಗೆ ಜಿನ್ನರನ್ನು ದೂರುತ್ತಿರುವಾಗ ಅವರ ಸೂಚನೆಗೆ ಮನ್ನಣೆ ಕೊಡುವವರು ಯಾರೋ ನಮಗೆ ತಿಳಿಯುವುದಿಲ್ಲ.

ಬ್ರಿಟಿಷ್ ಸರಕಾರವು ಜಿನ್ನರ ಸೂಚನೆಯನ್ನು ಬಹಳ ಮಹತ್ವದ್ದೆಂದು ಎತ್ತಿ ಹಿಡಿದಿದೆ!

◈

ಯುರೋಪಿನಲ್ಲಿ ದುರ್ಬಲರ ಪರವಾಗಿ ಕಾದಾಡುವೆನೆನ್ನುವ ಬ್ರಿಟಿಷ್ ಸರಕಾರವು ಭಾರತದಲ್ಲಾದರೂ ದುರ್ಬಲರ ಪರವಾಗಿಯೇ ಕಾದಾಡಬೇಕಲ್ಲವೇ?

ಈಗ ಯೂರೋಪಿನಲ್ಲಿ ನಡೆದಿರುವಂಥ ಭಯಂಕರ ಯುದ್ಧ, ಅಥವಾ ನೆರೆ, ಭೂಕಂಪ ಇತ್ಯಾದಿಗಳಿಂದಾಗಿ ಮನುಷ್ಯವರ್ಗದ ಸಂಪೂರ್ಣ ನಾಶವಾಗದೆ ಇದ್ದ ಸಂದರ್ಭದಲ್ಲಿ ಕೆಲವು ಸಾವಿರ ವರ್ಷಗಳು ಕಳೆದ ಅನಂತರ ಮನುಷ್ಯನ ಸ್ಥಿತಿ ಹೇಗಿರಬಹುದು? ಅವನ ರೂಪ, ಆಕಾರ, ಪರಿಮಾಣಗಳು—ಗುಣಶೀಲಸ್ವಭಾವಗಳು ಈಗಿದ್ದಂತೆ ಇರಬಹುದೆ, ಅಥವಾ ಅವುಗಳಲ್ಲಿ ಪರಿವರ್ತನೆಗಳಾಗಬಹುದೆ? ಆ ಕಾಲದ ಮನುಷ್ಯನು ಹೇಗಾಗಿರಬಹುದು? ಈ ಪ್ರಶ್ನೆಗಳಿಗೆ ಉತ್ತರವನ್ನು ವಿಜ್ಞಾನಿಗಳು ಒಂದು ವಿಧದಿಂದ ಕೊಟ್ಟಿರುತ್ತಾರೆ.

ಮನುಷ್ಯನು ಹಿಂದಿನ ಕಾಲದಲ್ಲಿ ಈಗಿದ್ದಂತೆ ಇರಲಿಲ್ಲ. ಮಿಲಿಯಾಂತರ ವರ್ಷಗಳ ಮೊದಲು ಅವನು ಕೋತಿಗಳ ವಂಶಜನಾಗಿದ್ದನಂತೆ. ಅದಕ್ಕಿಂತ ಪೂರ್ವದಲ್ಲಿ ಅವನು ಇನ್ನೂ ಏನೇನೋ ಆಗಿದ್ದನೆಂದು ವಿಜ್ಞಾನಿಗಳು ಹೇಳುತ್ತಾರೆ. ಅವರು ಹೀಗೆ ತರ್ಕಿಸಿಕೊಂಡು ಹೋಗುವ ಕ್ರಮಕ್ಕೆ ಉತ್ಕ್ರಾಂತಿವಾದವೆನ್ನುತ್ತಾರೆ. ಉತ್ಕ್ರಾಂತಿ ವಾದವು ಪೊಳ್ಳು ಹರಟೆಯಲ್ಲ. ಉತ್ಕ್ರಾಂತವಾದ ಸಿದ್ಧಾಂತಗಳನ್ನು ವಿಜ್ಞಾನಿಗಳು ಪ್ರಾಚೀನ ಕಾಲದ ಅವಶೇಷಗಳ ಆಧಾರ ಕೊಟ್ಟು ಸಿದ್ಧ ಮಾಡಿ ತೋರಿಸುತ್ತಾರೆ. ಮನುಷ್ಯನಲ್ಲಿ ಆದಿಯಿಂದ ಪರಿವರ್ತನೆಗಳಾಗುತ್ತ ಬಂದು, ಅವನು ಈಗಿನ ಸ್ಥಿತಿಗೆ ಬಂದು ಮುಟ್ಟಿದ್ದಾನೆಂಬುದು ಈ ಉತ್ಕ್ರಾಂತಿವಾದಿಗಳ ಮತವಾಗಿದೆ. ಅದು ನಿಜವೆಂದಾದರೆ ಮುಂದಕ್ಕೂ ಅವನ ಸ್ಥಿ

ವಿಜ್ಞಾನ ಪುಟ

ಸಾವಿರ ವರ್ಷಗಳ ಮೇಲ್ಪಟ್ಟ ಮನುಷ್ಯನ ಸ್ಥಿತಿ!

ತ್ಯಂತರ ಹೊಂದುತ್ತಲೇ ಇರಬೇಕು ಇಲ್ಲವೆಂದು ಹೇಳಲಾಗುವದಿಲ್ಲ.

ಕೆಲವು ಸಾವಿರ ವರ್ಷಗಳು ಕಳೆದ ಅನಂತರ ಮನುಷ್ಯನು ಕೇವಲ 'ಮೆದುಳು—ಮನುಷ್ಯ' ನಾಗಿ ಇರಬಹುದೆಂದು ಡಾಕ್ಟರ ಫ್ರೇಜ್ ವೀಡನ್‌ರೀಜ್ ಎಂಬವರು ಹೇಳುತ್ತಾರೆ. ಅಂದರೆ ಆ ಕಾಲದ ಮನುಷ್ಯನ ಶರೀರವು ಈ ಕಾಲದವನಂತೆ ಇರಲಿಕ್ಕೇ ಇಲ್ಲ. ಆ ಕಾಲದಲ್ಲಿ ಅವನ ಶರೀರವೆಲ್ಲ ಪ್ರಾಯಶಃ ಒಂದು ಮೆದುಳಿನ ಮುದ್ದೆಯಾಗಿ ಇರಬಹುದು. ಹೊಟ್ಟೆ, ಕೈ, ಕಾಲುಗಳು ಇರುವದಾಗಿದ್ದರೂ, ಅವು ಮೆದುಳಿನ ಪರಿಮಾಣಕ್ಕೆ ಬಹು ಸಣ್ಣದಾಗಿ ಇರಬಹುದು. ಈಗ ನಮ್ಮ ಕಣ್ಣು ಕಿವಿ ಮೂಗು ಮೊದಲಾದ ಇಂದ್ರಿಯಗಳ ಶಕ್ತಿಯು ಪ್ರಾಚೀನಕಾಲದವನಂತೆ ಅಷ್ಟು ಸೂಕ್ಷ್ಮವಾಗಿ ಇರುವದಿಲ್ಲ. ಮುಂದಿನ ಕಾಲದಲ್ಲಿ ಮನುಷ್ಯನ ಇಂದ್ರಿಯ ಶಕ್ತಿಯೂ ಈಗಿನದಕ್ಕಿಂತ ಬಹಳ ಕುಂದಬಹುದು, ಅಥವಾ ಅದು ನಾಮಾವಶೇಷವಾಗಲೂ ಬಹುದು. ಆಗ ನೋಡುವ ಕೇಳುವ ಇತ್ಯಾದಿ ಕೆಲಸಗಳನ್ನು ಮೆದುಳೇ ಮಾಡುತ್ತಿರಬಹುದು. ಆ ಕಾಲಕ್ಕೆ ನಮ್ಮ ಬೇರೆ ಅಂಗೋಪಾಂಗಗಳ ಶಕ್ತಿಯು ತಗ್ಗಬಹುದಾದರೂ, ಮೆದುಳು ಶಕ್ತಿಯು ಅದಕ್ಕಿಂತ ಸಾವಿರ ಪಾಲು ಹೆಚ್ಚಿನದ್ದಕ್ಕಿಂತ ಲಾಭವೇ ಬಹಳವಾಗುವದು.

ಮಾತ್ರೆಗಳ ಆಹಾರ

ನಾವೀಗ ಒಂದು ದಿನದಲ್ಲಿ ಎಷ್ಟು ಆಹಾರವನ್ನು ತಿನ್ನುತ್ತೇವೆ. ಅದರಲ್ಲಿ ಎಷ್ಟೋ ಅಂಶವು ದೇಹಕ್ಕೆ ನಿಷ್ಪ್ರಯೋಜಕವಾಗಿ ಮಲರೂಪದಲ್ಲಿ ಹೊರಬೀಳುತ್ತದೆ. ಹಾಗಿರುವ ಸಂದರ್ಭದಲ್ಲಿ ಆಹಾರದ ಯಾವ ಅಂಶವೂ ನಿಷ್ಪ್ರಯೋಜಕವಾಗದಂತೆ, ಮನುಷ್ಯನಿಗೆ ಬೇಕಾದಷ್ಟನ್ನೇ ಅವನಿಗೆ ಮಾತ್ರೆಗಳ ರೂಪದಲ್ಲಿ ಕೊಡಲು ಸಾಧ್ಯವೇ ಎಂಬುದನ್ನು ಪರೀಕ್ಷಿಸುತ್ತಿದ್ದ ವಿಜ್ಞಾನಿಗಳು ಈಗ ಆ ವಿಷಯದಲ್ಲಿ ಆಶಾದಾಯಕ ಉತ್ತರವನ್ನು ಕೊಡಬಲ್ಲವರಾಗಿದ್ದಾರೆ. ಅವರನ್ನುವ ಪ್ರಕಾರ ಇನ್ನು ಸ್ವಲ್ಪವೇ ಸಮಯದೊಳಗಾಗಿ ಇಂಥ ಗುಳಿಗೆ ಆಹಾರವನ್ನು ತಯಾರಿಸುವದು ಸಾಧ್ಯವಾಗಬಹುದು. ಆ ಸಂದರ್ಭದಲ್ಲಿ ಮತ್ತೆ ಅಡಿಗೆ ಮನೆಯ ಅಗತ್ಯವಿರುವದಿಲ್ಲ. ಔಷಧಿ ಅಥವಾ ಧಾತುಪುಷ್ಟಿ ಚೂರ್ಣ, ಮಾತ್ರೆಗಳನ್ನು ಬಾಟಲಿಯಿಂದ ತೆಗೆದು ತಿನ್ನುವಂತೆ ಹಸಿವೆಯಾದಾಗ ಒಂದೆರಡು ಮಾತ್ರೆಗಳನ್ನು ತೆಗೆದು ತಿಂದರೆ ಸಾಕು. ದೇಹಕ್ಕೆ ಬೇಕಾದಷ್ಟು ಆಹಾರವು ದೊರೆತು ಪೂರ್ಣ ಆರೋಗ್ಯವನ್ನು ಸಂಪಾದಿಸಬಹುದಾಗಿದೆ.

ಕಣ್ಣಿನ ಪರೀಕ್ಷೆಗೆ ವಿಚಿತ್ರದೀಪ

ಕಣ್ಣಿನ ರೋಗಗಳನ್ನು ಪರೀಕ್ಷಿಸಿ ತಿಳಿಯಬೇಕಾದರೆ, ಕಣ್ಣಿನ ಒಳಭಾಗಗಳನ್ನು ಪರೀಕ್ಷಿಸುವದು ಅಗತ್ಯವಾಗಿದೆ. ದೇಹ ಪರೀಕ್ಷೆಗೆ ಈಗ 'ಯಕ್ಸ್‌ರೇ' ಫೋಟೋ ತೆಗೆಯುವ ಸಾಧನವಿದೆ. ಆದರಂತೆ ಕಣ್ಣಿನ ಒಳಭಾಗದ ಫೋಟೋ ತೆಗೆಯಲಿಕ್ಕೆ ಯಾವ ಸಾಧನವೂ ಇಷ್ಟರ ತನಕ ಇದ್ದಿರಲಿಲ್ಲ. ಈಗ ಅಂಥ ಒಂದು ಸಾಧನವನ್ನು ಕಂಡುಹಿಡಿದಿದ್ದಾರೆ. ಈ ಸಾಧನವು ಪಾದರಸದಿಂದ ಉರಿಯುವ ಒಂದು ವಿಚಿತ್ರ ದೀಪವಾಗಿದೆ. ಈ ದೀಪದ ಜ್ಯೋತಿಯು ಹಸುರು ಬಣ್ಣದ ಪ್ರಕಾಶವನ್ನು ಕೊಡುತ್ತದೆ. ಕಣ್ಣಿನ ಒಳಭಾಗಗಳನ್ನೇ ಹಸುರು ಬಣ್ಣದ ಪ್ರಕಾಶದ ಮೂಲಕ ಅಲ್ಲದೆ ಬೇರೆ ರೀತಿಯಿಂದ ಕಾಣುವುದು ಸಾಧ್ಯವಲ್ಲ. ಪಾದರಸದ ಈ ವಿಚಿತ್ರ ದೀಪವು ಹಸುರು ಪ್ರಕಾಶವನ್ನು ಕೊಡುವುದರಿಂದ, ಅದರ ಮೂಲಕ ಕಣ್ಣಿನ ಒಳಭಾಗಗಳನ್ನು ಛಾಯಾ ಚಿತ್ರದಂತೆ ಸ್ಪಷ್ಟವಾಗಿ ಕಾಣಬಹುದು. ಆದ್ದರಿಂದ ಕಣ್ಣಿನ ಚಿಕಿತ್ಸೆಯನ್ನು ಮಾಡುವುದು ಸರ್ವ ಸುಲಭವಾಗಿದೆ.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

GONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sale Manufacturer: **Dr. D. N JASANI,** Vithalbhai Patel Road, BOMABY

ಸ್ಟಾಕಿಸ್ಟರು ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್ಪೆನ್ಸರಿ, ಕೆಮಿಸ್ಟ, ಮತ್ತು ಡ್ರಗ್ಗಿಸ್ಟ್ಸ,

ಹಂಪನಕಟ್ಟಾ, ಮಂಗಳೂರು

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾರೀಕು 13-5-1940ರಿಂದಾ ಶ್ರೀ ತಾರೀಕು 22-5-1940ರ ವರೆಗೆ

ತಿರುಪತಿ ಗೋವಿಂದರಾಜ ಸ್ವಾಮಿ ದೇವಾಲಯದಲ್ಲಿ

ನಡಿಯುವ ಬ್ರಹ್ಮೋತ್ಸವ ಸಮಾರಂಭ

ಗರುಡಸೇವೆ ತಾ. 18–5–1940 ಮತ್ತು ರಥೋತ್ಸವ ತಾ. 21–5–1940 ರಲ್ಲು

ಮಂಗಳೂರಿನಿಂದ 5-15 a. m.ಗೆ ಹೊರಡುವ ಮೋಡರ್ನ್ ಮೋಟರ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಮಧ್ಯಾಹ್ನ 3-15 p. m.ನ ಒಳಗೆ ಮೈಸೂರಿಗೆ ತಲಪಿ, ಮೈಸೂರಿನಿಂದ 4 p. m.ಗೆ ಬಿಡುವ ರೈಲಿನಲ್ಲಿ ಕೂತು ಸಂಜೆ 7 p. m.ನ ಒಳಗೆ ಬೆಂಗಳೂರಿಗೆ ತಲಪಿ ಬೆಂಗಳೂರಿನಿಂದ 9 p. m. ನ ಬಿಡುವ ರೈಲಿನಲ್ಲಿ ಕೂತು ಕಟ್ಪಾಡಿಗಾಗಿ ತಿರುಪತಿಗೆ – ಮರುದಿನ 10 a. m. ನ ಒಳಗೆ ತಲಪಬಹುದು. –

ಬಸ್ಸು ಮತ್ತು ರೈಲು ಚಾರ್ಜು ರೂಪಾಯಿ 9-8-0 ಮಾತ್ರ

ತಿರುಪತಿಯಲ್ಲಿ ಯಾತ್ರಾರ್ಥಿಗಳಿಗೆ ಉಳಕೊಳ್ಳಲು ಭವ್ಯವಾದ ಛತ್ರಗಳ ಏರ್ಪಾಡನ್ನು ದೇವಸ್ಥಾನದವರು ಮಾಡಿರುವರು.

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

<u>ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)</u>

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದ್ದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಅದನಂತರ ಏನು ಮಾಡಿದರೂ ಸಾಧ್ಯವಾಗುವುದಿಲ್ಲ. ವೇರೆ ಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬೈ ಸರ್ಟಿಫಿಕೆಟ್ಟು ಡಾ. ವೈದ್ಯ ಎಲ್. ಸಿ. ಪಿ. ಎಸ್. ತಿಳಿಸಿದವರಿರುವರು, ಅಲ್ಲದೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ದ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪–೦–೦

ವಿ. ಪಿ. [illegible]

ವಿಳಾಸ, ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲಿಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸದನ, ಪೆರಡಾಲ,
P. O. Peridepi (ಕಾಸರಗೋಡು.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—13—0	1—14—
,, ದುಯಂ ,, ,,		
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	4—8—0	4—10—0
,, ದುಯಂ ,, ,,	4—6—0	4—8—0
,, ಅವ್ವಲ್ ಸುಗ್ಗಿ ,,	4—5—0	4—6—
,, ದುಯಂ ,, ,,	4—3—0	4—4—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	32—8—0	37—8—0
,, ಸಿಪ್ಪೆ ಇದ್ದದು ,,	35—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	56—0—0	55—0—
,, ದಿಲ್‌ಪಸಂದ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	3—15—0	4—0—0
ಸಿಪ್ಪೆಯುದ್ದ ಅಡಕೆ 1000ಕ್ಕೆ	3—12—0	8—4—0
ಗೇರುಬೀಜ ಮುಡಿಗೆ	4—8—0	4—10—0
ಕಬ್ಬಿನ ಬೆಲ್ಲ ಖಂಡಿಗೆ	35—0—0	48—12—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	13—12—0	14—8—0

Date 19-4-1940 ವಾರ್ಷಿಕ ಚಂದಾ ರೂ. 3-0-0 ಅಂಚೆ ವೆಚ್ಚ ಸಹ ರೂ. 2-13-0 Regd. No. M3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 19-4-1940 [ಸಂಚಿಕೆ 16

The Bombay Life Assurance Company, Ltd.,
(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent, it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut. Car Street, Mangalore. Visweswarapuram Circle, Bangalore City. Post Box No. 337 Mount Road, Madras.

Gautam Nivas, Charni Road, Girgaum, Bombay No. 4. Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ವಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಸೊಂಟ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI



ಕಣ್ಮರೆಯಾದ
ಶ್ರೀ ಎಂ. ಎನ್. ಕಾಮತರು

KANNADA ILLUSTRATED WEEKLY

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಸತ್ಯಾಗ್ರಹ ಶಿಬಿರ ಹಾಗೂ ಪ್ರತಿಜ್ಞೆ

[illegible] ಯುಕ್ತವನ್ನು ಹೂಡಬೇಕಾಗುವ ಪ್ರಸಂಗವು ಒದಗುವಂತಾಗಿದೆ ಎಂದು ತೋರುತ್ತಿರುವದರಿಂದ ಎಲ್ಲ ಕಾಂಗ್ರೆಸ್ಸಿಗರು ಈ ವಿಷಯದಲ್ಲಿ ತಮ್ಮ ಲಕ್ಷ್ಯವನ್ನಿಟ್ಟವರಾಗಿ ಇರಬೇಕಾಗಿದೆ. ಮತ್ತು ಈ ಸಂಬಂಧವಾಗಿ ದಕ್ಷತೆಯಿಂದ ಈಗಿನಿಂದಲೇ ಎಲ್ಲರೂ ಈ ಕಾರ್ಯದಲ್ಲಿ ನಿರತರಾಗಿರುವದು ಅವಶ್ಯವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು ತೆಗೆದುಕೊಳ್ಳಬೇಕಾದ ಸತ್ಯಾಗ್ರಹ ಪ್ರತಿಜ್ಞೆ ಹಾಗು ಪ್ರಾರಂಭಿಸಬೇಕಾದ ಸತ್ಯಾಗ್ರಹ ಶಿಬಿರಗಳ ವಿಷಯವಾಗಿ ಈ ಕೆಳಗೆ ಕೆಲ ಮಾಹಿತಿ ಕೊಡಲಾಗಿದೆ. ಇದನ್ನು ಎಲ್ಲ ಕಾಂಗ್ರೆಸ ಸಮಿತಿಗಳು ಕಾರ್ಯರೂಪದಲ್ಲಿ ತರುವದಕ್ಕಾಗಿ ಮುನ್ನೂರ್ವಕ ಪ್ರಯತ್ನಿಸಬೇಕಾಗಿ ಬಿನ್ನಹ.

ಸತ್ಯಾಗ್ರಹಿಯ ಪ್ರತಿಜ್ಞೆ:— ಈಗ ಸತ್ಯಾಗ್ರಹಿಯ ಪ್ರತಿಜ್ಞಾಪತ್ರದ ಪ್ರತಿಗಳನ್ನು ಮುದ್ರಿಸಿ ಎಲ್ಲ ಜಿಲ್ಲಾ ಕಾಂಗ್ರೆಸ ಸಮಿತಿಗಳ ಕಡೆಗೆ ಕಳಿಸಿ ಕೊಡಲಾಗಿದೆ. ಎಲ್ಲ ಕಾಂಗ್ರೆಸ ಸಮಿತಿಗಳು ಸತ್ಯಾಗ್ರಹ ಸಮಿತಿಗಳಾಗಬೇಕಾದ್ದರಿಂದ ಆಯಾ ಸಮಿತಿಗಳ ಅಧಿಕಾರಿಗಳು—ಹಾಗು ಸದಸ್ಯರ ಸತ್ಯಾಗ್ರಹಿಗಳಾಗಿ ಪ್ರತಿಜ್ಞಾಪತ್ರಕ್ಕೆ ಸಹಿ ಮಾಡಬೇಕಾಗುವುದು. ಪ್ರತಿಜ್ಞೆಯಲ್ಲಿ ನಂಬಿಗೆ ಇದ್ದು ಸತ್ಯಾಗ್ರಹಿಗಳಾಗಲು ಇಷ್ಟ-ಉಳ್ಳವರು ಈ ಪ್ರತಿಜ್ಞಾಪತ್ರದ ಮೇಲೆ ಸಹಿ ಹಾಕಬೇಕು. ಮತ್ತು ಸತ್ಯಾಗ್ರಹಿಗಳಾದವರು ಆ ಪ್ರತಿಜ್ಞೆಯ ಪ್ರಕಾರ ತಾವು ನಿತ್ಯ ಮಾಡುವ ರಾಷ್ಟ್ರದ ಕೆಲಸದ ಬಗ್ಗೆ ಧ್ಯಾಂ ಇಡಬೇಕು. ಕಾಂಗ್ರೆಸ್ಸಿನ ನಾಲ್ಕಾಣೆ ಸದಸ್ಯರು ಈ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಹುದು. ಕಾಂಗ್ರೆಸ ಸದಸ್ಯರಿಲ್ಲದವರು ಸತ್ಯಾಗ್ರಹಿಗಳಾಗ ಬಯಸಿದರೆ ಕಾಂಗ್ರೆಸ ಸದಸ್ಯರಾಗಿಯೇ ಪ್ರತಿಜ್ಞೆ ತೆಗೆದುಕೊಳ್ಳಬೇಕು ಕಾರಣ ಎಲ್ಲ ಕಾಂಗ್ರೆಸ ಸಮಿತಿಗಳು ಹೆಚ್ಚು ಸತ್ಯಾಗ್ರಹಿಗಳನ್ನು ಕೂಡಿಸುವ ಕಾರ್ಯವನ್ನು ಮಾಡಬೇಕು.

ಸತ್ಯಾಗ್ರಹ ಶಿಬಿರ:— ಪ್ರತಿಯೊಂದು ತಾಲೂಕಿನಲ್ಲಿ ಶಕ್ಯವಾದ ಮಟ್ಟಿಗೆ ಎಷ್ಟೇ ಆಗಲಿ ಸತ್ಯಾಗ್ರಹ ಶಿಬಿರಗಳನ್ನು ಪ್ರಾರಂಭಿಸಬೇಕು. ಈ ಶಿಬಿರಗಳನ್ನು ಶಕ್ಯವಿದ್ದ ಮಟ್ಟಿಗಾದರೂ ಸರಿಯಾಗಿ ನಡೆಯುವಂತೆ ವಿಚಾರದು ಮಾಡಬೇಕು. ಇಂಥ ಶಿಬಿರಗಳಲ್ಲಿ ನೂಲುವ ಕಾರ್ಯವನ್ನು ನಡೆಯಿಸುತ್ತ ಅಲ್ಲಿಯ ಸತ್ಯಾಗ್ರಹಿಗಳಿಗೆ ಕವಾಯತು ವ್ಯಾಖ್ಯಾನ ಇತ್ಯಾದಿಗಳ ಮೂಲಕ ರಾಷ್ಟ್ರೀಯ ಶಿಕ್ಷಣ ಕೊಡುವಂತೆ ಮಾಡಬೇಕು. ಶಿಬಿರದಲ್ಲಿಯ ಜೀವನವು ತೀರ ಸಾದಾ ತರದ್ದಾಗಿ ಇರತಕ್ಕದ್ದು. ರಾಷ್ಟ್ರದ ಸಲುವಾಗಿ ಬೇಕಾದ ಕಷ್ಟನಷ್ಟಗಳನ್ನು ಉದ್ರೇಕಗೊಳ್ಳದೆ ಸಹಿಸಬೇಕಾಗುವದೆಂಬ ಬಗ್ಗೆ ವಿಚಾರ ವಿನಿಯಮ ನಡೆಯಬೇಕು. ಸತ್ಯಾಗ್ರಹಿಗಳು ಮನನ ಮಾಡಬೇಕಾಗುವಂಥ ಮಹಾತ್ಮರ ಉಪದೇಶ ಇತ್ಯಾದಿಗಳನ್ನೊಳಗೊಂಡ ಬುಲೆಟಿನ್ನುಗಳನ್ನು ಎಲ್ಲ ಶಿಬಿರ ಸಮಿತಿಗಳಾದರೂ ಕಾಲಕಾಲಕ್ಕೆ ಪ್ರಾಂತೀಯ ಸಮಿತಿಯಿಂದ ಪೂರೈಸುವಂತೆ ಮಾಡುವುದು. ಈ ಶಿಬಿರಗಳ ರಚನೆಯ ವಿಷಯದಲ್ಲಿ ಜಿಲ್ಲಾ ಸಮಿತಿಯವರು ಯೋಗ್ಯ ಮೇಲ್ವಿಚಾರಣೆ ಮಾಡುತ್ತಿರಬೇಕು.

ಕಾರ್ಯದ ವರದಿ:— ಪ್ರತಿಯೊಂದು ತಾಲೂಕು ಕಾಂಗ್ರೆಸ ಸಮಿತಿಯವರು ಸಹಿಯಾದ ಸತ್ಯಾಗ್ರಹಿಯ ಪ್ರತಿಜ್ಞಾಪತ್ರಗಳನ್ನೂ ಅದರೊಂದಿಗೆ ಅಂದಿನ ವರೆಗೆ ಆದ ಕಾರ್ಯದ ವರದಿಯನ್ನೂ ಪ್ರತಿ ತಿಂಗಳ ೧೫ನೇ ತಾರೀಖಿನೊಳಗೊಮ್ಮೆ ೩೦ನೇ ತಾರೀಕಿನೊಳಗಾಗಿ ಒಮ್ಮೆ ಜಿಲ್ಲಾ ಕಾಂಗ್ರೆಸ ಸಮಿತಿಗಳಿಗೆ ಮುಟ್ಟುವಂತೆ ಕಳಿಸಬೇಕು. ಮುಂದೆ ಜಿಲ್ಲಾ ಸಮಿತಿಯವರು ವಿಳಾಸಸಹಿತ ಸತ್ಯಾಗ್ರಹಿಗಳ ಯಾದಿಯನ್ನು ಸಿದ್ಧಮಾಡಿ ಪ್ರಾಂತೀಯ ಕಚೇರಿಗೆ ಪ್ರತಿ ತಿಂಗಳ ೧೫ನೇ ತಾರೀಖಿಗೆ ಒಮ್ಮೆ ಹಾಗೂ ೩೦ನೇ ತಾರೀಖಿನೊಳಗಾಗಿ ಒಮ್ಮೆ ತಲುಪುವಂತೆ ತಪ್ಪದೆ ಕಳಿಸಿಕೊಡಬೇಕು. ಅದರೊಂದಿಗೆ ಕಾರ್ಯದ ಪೂರ್ಣ ವರದಿಯನ್ನೂ [illegible]. ಎಲ್ಲ ಅಧೀನ ಸಮಿತಿಗಳು [illegible] ವರದಿಯನ್ನು [illegible] ತಮ್ಮ [illegible] ಅದರ [illegible] ದಯನ್ನು [illegible] ಸಮಯದಲ್ಲಿ ಸ್ವಲ್ಪವೂ ಅಲಕ್ಷ ಮಾಡದವರು [illegible] ನಮ್ಮ ಕಚೇರಿಯಿಂದ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಕಚೇರಿಗೆ ಪಾಕ್ಷಿಕ ವರದಿಯನ್ನು ಕಳಿಸಬೇಕಾಗಿದೆ. ಅಧೀನ ಸಮಿತಿಗಳ ಸಹಾಯವಿಲ್ಲದೇ ಈ ಕೆಲಸ ಮಾಡಲಾಗದು. ಅವಶ್ಯವಾಗುವದೆಂಬುದನ್ನು ತಿಳಿದುಕೊಂಡು ಕಾರ್ಯ ಮಾಡಬೇಕಾಗಿ ಬಿನ್ನಹ.

ಈ ಕಾಲವು ರಾಷ್ಟ್ರದ ಸಲುವಾಗಿ ದುಡಿಯುವ ಹಾಗು ಕಷ್ಟ ಪಡುವ ಸುಸಂಧಿಯೆಂದು ಯೋಚಿಸಿ ಪ್ರತಿಯೊಬ್ಬ ಭಾರತೀಯನು ಈ ಮಹತ್ವದ ಕೊಡುಗುವ ಮನಸ್ಸು ಮಾಡುವದು ಮಹತ್ವದ್ದಾಗಿರುವದು ಎಂದು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಚನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಸತ್ಯಾಗ್ರಹ ಸಮಿತಿಗಳನ್ನು ಮಾಡಿರಿ

ತಾ. ೧೪-೧೧-೪೦ನೇ ದಿವಸ ಸೇರಿದ ಕರ್ನಾಟಕ ಪ್ರಾಂತೀಯ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯು ಸೇರಿ ಪ್ರಾಂತೀಯ ಕಾರ್ಯಕಾರೀ ಮಂಡಲವನ್ನು ಸತ್ಯಾಗ್ರಹ ಸಮಿತಿಯನ್ನಾಗಿ ನೇಮಿಸಲಾಗಿದೆ ಇದೇ ಮೇರೆಗೆ ಪ್ರಾಂತದೊಳಗಿನ ಎಲ್ಲ ಅಧೀನ ಸಮಿತಿಗಳನ್ನು ಕೂಡಲೇ ಸತ್ಯಾಗ್ರಹ ಸಮಿತಿಗಳನ್ನಾಗಿ ಮಾಡಬೇಕಾಗಿ ಈ ಕೆಳಗಿನ ಗೊತ್ತುವಳಿಯು ಕಾರ್ಯಕಾರೀ ಮಂಡಲದಲ್ಲಿ ಸ್ವೀಕರಿಸಲ್ಪಟ್ಟಿದೆ.

"ಅಧೀನ ಸತ್ಯಾಗ್ರಹ ಸಮಿತಿಗಳು ಅಖಿಲ ಭಾರತ ಕಾಂಗ್ರೆಸ ಸಮಿತಿಯ ಪರಿಪತ್ರ ಹಾಗು ಮಹಾತ್ಮಾ ಗಾಂಧಿಯವರ ಸೂಚನೆಗಳಿಗನುಸರಿಸಿ ಪ್ರಾಂತದಲ್ಲಿಯ ಎಲ್ಲ ಜಿಲ್ಲಾ ತಾಲೂಕ ಗ್ರೂಪ್ ಹಾಗು ಗ್ರಾಮ ಕಾಂಗ್ರೆಸ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ತಾ. ೨೫-೧೧-೪೦ರ ಒಳಗಾಗಿ ಪರಿವರ್ತಿಸಿ ಕೂಡಲೇ ತಮ್ಮ ವರದಿಯನ್ನು ಪ್ರಾಂತೀಯ ಸಮಿತಿಗೆ ಕಳಿಸಬೇಕಾಗಿ ಈ ಸಭೆಯು ತೀರ್ಮಾನಿಸುತ್ತದೆ.

ಈ ಗೊತ್ತುವಳಿಯ ಮೇರೆಗೆ ಎಲ್ಲ ಕಾಂಗ್ರೆಸ ಸಮಿತಿಗಳು ತಮ್ಮ ತಮ್ಮ ಸಭೆಗಳನ್ನು ಕರೆದು ಆ ಸಮಿತಿಯ ಸದಸ್ಯರು ಸತ್ಯಾಗ್ರಹಿಗಳನ್ನೂ ಸತ್ಯಾಗ್ರಹ ಪ್ರತಿಜ್ಞಾ ಪತ್ರಿಕೆಯ ಮೇಲೆ ತೆಗೆದುಕೊಂಡು ಆಯಾ ಸಮಿತಿಗಳು ಸತ್ಯಾಗ್ರಹ ಸಮಿತಿಗಳಾದವೆಂಬ ಗೊತ್ತುವಳಿಯನ್ನು ಮಾಡಿ ಕೂಡಲೇ ಅದರ ವರದಿಯನ್ನು ನಮ್ಮ ಕಡೆಗೆ ಕಳಿಸಿಕೊಡಬೇಕು. ಸಮಿತಿಯ ಅವಸರದ ಸಭೆ ಕರೆಯಬೇಕು. ಒಂದು ವೇಳೆ ಸಭೆಗಳು ೨೫ ಅಥವಾ ೩೦ನೇ ತಾರೀಖಿಗೆ ಆದಲ್ಲಿ ಸತ್ಯಾಗ್ರಹಿ ಸಮಿತಿಯಾದ ವಿಷಯವನ್ನು ತಂತಿಯಿಂದ ತಮ್ಮ ಕಚೇರಿಗೆ ತಿಳಿಸಬೇಕು.

ಪ್ರತಿಜ್ಞಾಪತ್ರವನ್ನು ಸಹಿ ಮಾಡಲು ಯಾವ ಸದಸ್ಯರಿಗೂ ಜುಲುಮೆ-ಒತ್ತಾಯ ಮಾಡತಕ್ಕದ್ದಲ್ಲ. ಆಯಾ ಕಾಂಗ್ರೆಸ ಸಮಿತಿಗಳ ಸದಸ್ಯರಲ್ಲಿ ಬಹುಮತದವರು ಸಹಿ ಮಾಡಿದರೇಕೆ ಆ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ಪರಿವರ್ತಿಸಬೇಕು. ಬಹುಮತ ವಿರೋಧವಿದ್ದಲ್ಲಿ ಬೇರೊಂದು ಸತ್ಯಾಗ್ರಹ ಸಮಿತಿಯನ್ನು ಸ್ಥಾಪಿಸಬೇಕು. ಮತ್ತು ಆ ಸತ್ಯಾಗ್ರಹ ಸಮಿತಿಗೆ ಕಾಂಗ್ರೆಸ್ ಸಮಿತಿಯು ಸಂಪೂರ್ಣ ಸಹಾಯ ಮಾಡಬೇಕು.

ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲೆಯೊಳಗಿನ ಎಲ್ಲಾ ಅಧೀನ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ನಿರ್ಮಿಸಿ—ಸ್ಥಾಪಿತವಾದ ಸತ್ಯಾಗ್ರಹ ಸಮಿತಿಗಳ ಪೂರ್ಣ ವಿಳಾಸವನ್ನು ಕೂಡಲೇ ನಮ್ಮ ಕಡೆಗೆ ಕಳುಹಿಸಬೇಕು. ಅಂದರೆ—ಶೀಘ್ರವಾಗಿ ಕಳುಹಿಸಬೇಕಾದ ಪರಿಪತ್ರಗಳನ್ನು ನೇರವಾಗಿ ಕಳುಹಿಸಲು ಅನುಕೂಲವಾಗುವದು ಎಂದು ಕಾರ್ಯದರ್ಶಿಗಳಾದ ಶ್ರೀ ಚನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ.

"ಓ ವ ಲ್ ಟಿ ನ್"
ನಿಮ್ಮ ತ್ರಾಣವನ್ನೂ
ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್'ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ಮಾಗಿ ಸೆನೆ ಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೊಸ್ಫೈಟ್ಸ್. ಇತರ ಬದಲು ಪಾನೀಯಗಳನ್ನು ದೂರಮಾಡಿರಿ.

'ಓವಲ್‌ಟಿನ್'

OVALTINE [illegible]

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು:
ಜೇಮ್ಸ್ ರೈಟ್ ಲಿಮಿಟೆಡ್,
149 ಬ್ರೋಡವೇ ಮದ್ರಾಸು, ಕಲ್ಕತ್ತಾ, ಬೊಂಬ್ಯಾ, ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು:
ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ದೊರಕುತ್ತದೆ.

OV[illegible]

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—4—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೬—೪—೧೯೪೦

ರಾಜಾಜಿಯವರ ಮಾತಿನಿಂದ ಜಿನ್ನರು ಕೆರಳಿದರು!

ಆಚಾರ್ಯರು ಮುಸ್ಲಿಮ ದ್ವೇಷಿಗಳಲ್ಲ!

ಜಿನ್ನರ ದೃಷ್ಟಿಗೆ ಎಲ್ಲರೂ ಕೆಟ್ಟವರೇ!

ನಾಸ್ತಿಕರಿಗೊಂದು ಪಾಲುಬೇಕು!

ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳಾದ ಮಹಮ್ಮದಾಲಿ ಜಿನ್ನರವರು ಯಾವ ತರ್ಕಕ್ಕೂ ನ್ಯಾಯಕ್ಕೂ ಒಪ್ಪದ ಛಲವಾದಿಗಳಾಗಿದ್ದಾರೆ ಲೋಕದವರೇ ಮಾತ್ರವಲ್ಲ, ಅವರ ಸ್ವಜಾತಿಯವರು ಕೂಡ, ಬೇಡವೆಂದು ಬಹಳ ನಿಷೇಧಿಸಿದರೂ ಮಿ ಜಿನ್ನರು ಕಾಂಗ್ರೆಸ ಮಂತ್ರಿಮಂಡಳಗಳ ವಿರುದ್ಧ ಬಂಧ ವಿಮೋಚನಾ ದಿನವನ್ನು ಆಚರಿಸಿಯೇ ಕೃತಾರ್ಥರಾದರು! ಅವರದೂಷಿತ ದೃಷ್ಟಿಗೆ ಕಾವುಛಿಟ್ಟು ಲೋಕದ ಜನರೆಲ್ಲಾ ದ್ರೋಹಿಗಳಾಗಿಯೇ ತೋರುತ್ತಿದ್ದಾರೆ

ಮೊನ್ನೆ ಶ್ರೀ ರಾಜಗೋಪಾಲಾಚಾರ್ಯರು ಸೇಲಮಿನಲ್ಲಿ ಕೂಡಿದ ಒಂದು ಸಾರ್ವಜನಿಕ ಸಭೆಯಲ್ಲಿ ಒಂದು ಭಾಷಣವನ್ನು ಕೊಟ್ಟು—ಸಮಾನ ಹಕ್ಕುದಾರರಾದ ಇಬ್ಬರು ಅಣ್ಣ ತಮ್ಮಂದಿರು ತಮ್ಮ ಧನವನ್ನು ಪಾಲುಮಾಡಿ ಕೊಳ್ಳಲಿಕ್ಕೆ ಅದನ್ನು ಕಡಿದ ಎಂಡ ತುಂಡ ಮಾಡಿದ ಹಾಗೆ ಮಿ ಜಿನ್ನರ ದೇಶವಿಭಜನೆಯ ನೀತಿ ಇರವುದೆಂದು ಸಹಜ ಮಾತುಗಳಿಂದ ಮಿ ಜಿನ್ನರರನ್ನು ಟೀಕಿಸಿದ್ದರು ಆಚಾರ್ಯರ ಮಾತುಗಳನ್ನು ಕೇಳಿ ಮಿ ಜಿನ್ನರು ಸುಮ್ಮಗೆ ಕೆರಳಿಹೋಗಿದ್ದಾರೆ ಪಶುವಧೆಯ ಮಾತನ್ನು ತಂದು ಆಚಾರ್ಯರು ಮುಸಲ್ಮಾನರ ವಿರುದ್ಧ ಹಿಂದುಗಳನ್ನು ಎತ್ತಿಕಟ್ಟುವಧೂರ್ತತನವನ್ನು ತೋರಿಸಿರುವರೆಂದು ಅವರು ಕಟೂಕ್ತಿಗಳಿಂದ ಆಚಾರ್ಯರನ್ನು ಟೀಕಿಸಿದ್ದಾರೆ

ಆಚಾರ್ಯರು ಮುಸಲ್ಮಾನ ದ್ವೇಷಿಗಳೆ?

ಹಿಂದುಗಳನ್ನು ದ್ವೇಷಿಸಿಯೇ ಹಿಂದುಸ್ತಾನವನ್ನು ಹಿಂದುಗಳ ಹಿಂದುಸ್ತಾನ ಮುಸಲ್ಮಾನರ ಹಿಂದುಸ್ತಾನವೆಂದು ಪಾಲು ಮಾಡಬೇಕಾಗಿ ಹೇಳುತ್ತಿರುವ ಮಿ ಜಿನ್ನರಂತೆ ಮಾನ್ಯ ಆಚಾರ್ಯರು, ಮುಸಲ್ಮಾನ ದ್ವೇಷಿಗಳಾಗಿರುವದಿಲ್ಲ. ಹಿಂದುಗಳನ್ನು ಮುಸಲ್ಮಾನರ ವಿರುದ್ಧ ಎತ್ತಿ ಕಟ್ಟಲಿಕ್ಕೆ ಮಾನ್ಯ ಆಚಾರ್ಯರು ತಮ್ಮ ಭಾಷಣದಲ್ಲಿ ಗೋವಧೆಯ ಮಾತು ತರಲಿಲ್ಲ. ಅವರು ಕೇವಲ ಹಿಂದುಗಳು ಮಾತ್ರ ಇದ್ದ ಹಿಂದೂ ಸಭೆಯಲ್ಲಿ ಕೇವಲ ಹಿಂದುಗಳನ್ನು ಮಾತ್ರ ಉದ್ದೇಶಿಸಿ ಮಾತನಾಡಿದ್ದರೆ ಆಗ ಜಿನ್ನರ ಮಾತುಗಳನ್ನು ಮನ್ನಿಸಬಹುದಾಗಿತ್ತು ಜನರ ಕೂಡ ಸೇರಿದ್ದರು ಅಂದಿನ ಸಭೆಯಲ್ಲಿ ಹಿಂದುಗಳ ಮಾತ... ಜಿನ್ನರ ಸದೋಷ ದೃಷ್ಟಿ ವಲ್ಲ, ಮುಸಲ್ಮಾನರ, ಕ್ರೈಸ್ತರು ... ಜಿನ್ನರ ಅರಸಿನ ಬಣ್ಣಗಿಯಾದ ಮತ್ತು ಇತರ ಎಲ್ಲ ಜಾತಿಧರ್ಮಗಳ ... ಪ್ರಪಂಚವನ್ನು ನೋಡುತ್ತಿದ್ದಾರೆ

ಕಂಬನಿ

ದಿವಂಗತ ಎಂ. ಎನ್ ಕಾಮತರು

ಕರ್ನಾಟಕದ ಹೆಸರಾಂತ ಸಾಹಿತಿಗಳಾದ ಶ್ರೀ ಎಂ ಎನ್ ಕಾಮತರು ತಾ ೨೪ರಂದು ಸಂಜೆ ಗಂಟೆ ೭ಕ್ಕೆ ಮಂಗಳೂರಿನ ತಮ್ಮ ಮನೆಯಲ್ಲಿ ವಿಧಿವಶರಾದರೆಂಬ ವಿಷಾದಕರ ವಾರ್ತೆಯು ನಮ್ಮನ್ನು ಅತ್ಯಂತ ದುಃಖಿತರನ್ನಾಗಿ ಮಾಡಿದೆ

ಕೆಲದಿನಗಳಿಂದ ಉದರರೋಗಕ್ಕೆ ತುತ್ತಾಗಿ ಅವರು ಹಾಸಿಗೆ ಹಿಡಿದಿದ್ದರು. ನಿತ್ಯ ಉತ್ಸಾಹ, ಚಟುವಟಿಕೆಗಳಿಂದ ಕೂಡಿದ್ದ ಅವರನ್ನು ಇಷ್ಟು ಬೇಗನೇ ನಮ್ಮಿಂದ ಕಣ್ಮರೆ ಮಾಡಿ ಅವರ ಮಿತ್ರವೃಂದಕ್ಕೂ, ಶಿಷ್ಯಮಂಡಳಿಗೂ ಕನ್ನಡನಾಡಿಗೂ ಎಲ್ಲದಕ್ಕಿಂತಲೂ ಮಿಗಿಲಾಗಿ ಬಂಧುವರ್ಗಕ್ಕೆ ಇಂತಹ ಸಹನಾತೀತ ದುಃಖವನ್ನು ಒದಗಿಸಿದ ವಿಧಿಯು ನಿಷ್ಕರುಣೆಯು! ಅವರ ವಿಯೋಗದಿಂದ ಕನ್ನಡ ಮಾತೆಯು ತನ್ನ ಪುತ್ರರತ್ನವೊಂದನ್ನು ಕಳೆದುಕೊಂಡ ಭಾಗ್ಯಹೀನೆಯಾದಳು!

ದಿವಂಗತ ಕಾಮತರಿಗೆ ಕೇವಲ ೫೭ ವರ್ಷ ಪ್ರಾಯವಾಗಿತ್ತು

ಕಾಮತರು ಕಳೆದ ಹಲವು ವರ್ಷಗಳಿಂದ ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು ವಿದ್ಯಾವಿಚಾರದಲ್ಲಿ ವಿಚಕ್ಷಣರಾದವರು ಸಣ್ಣಕತೆ, ನಾಟಕ, ಕವನ, ಪ್ರಬಂಧ ಮೊದಲಾದ ಸರ್ವಾಂಗಸಾಹಿತ್ಯದಲ್ಲಿ ದುಡಿದು ಇವರು ಸಾಹಿತ್ಯಕ್ಷೇತ್ರದಲ್ಲಿ ಹಿರಿಯ ಸ್ಥಾನವನ್ನು ಪಡೆದಿದ್ದರು!

ನಮ್ಮ ಪತ್ರಿಕೆಯ ಏಳಿಗೆಯಲ್ಲಿ ದಿವಂಗತ ಎಂ. ಎನ್. ಕಾಮತರ ನೆರವು ನಮಗೆ ಬಹಳವಾಗಿತ್ತು. ಪತ್ರಿಕೆಯ ಶ್ರೇಯಸ್ಸಿನಲ್ಲಿ ಹಿಗ್ಗುತ್ತಿದ್ದ ಮಹಾನುಭಾವರು ಅವರು. ಕನ್ನಡ ಪತ್ರಿಕಾ ವ್ಯವಸಾಯದಲ್ಲಿಯೂ ಅವರು ಬಹುಕಾಲದಿಂದ ದುಡಿಯುತ್ತಿದ್ದದು ಅಖಿಲ ಕರ್ನಾಟಕಕ್ಕೆ ಪರಿಚಿತವಾಗಿದೆ!

ಅವರ ಗೆಳೆಯರ, ಶಿಷ್ಯಕೋಟಿಯ, ಹೆಚ್ಚಾಗಿ ಅವರ ಪತ್ನೀ ಪುತ್ರರ ಅಪಾರವಾದ ದುಃಖದಲ್ಲಿ ನಾವು ನಮ್ಮ ಹಾರ್ದಿಕ ಸಹಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ!

—ಸಂಪಾದಕ

ಆದುದರಿಂದ ಅವರಿಗೆ ಎಲ್ಲಾ ಪ್ರಪಂಚವೇ ಅರಸಿನವಾಗಿ ತೋರುತ್ತದೆ. ಆದರೆ ಇಬ್ಬರು ಸಹೋದರರು ತಮ್ಮ ಸಮಾನ ಹಕ್ಕಿನ ಧನವನ್ನು ಪಾಲುಮಾಡಿ ಕೊಳ್ಳಲಿಕ್ಕೆ ಅದನ್ನು ಕಡಿದು ಹಾಕಿದ ಹಾಗೆ ಮಿ. ಜಿನ್ನರ ಪ್ರಯತ್ನವಿದೆಎಂದು ಅವರು ಹೇಳಿದರು ಆಚಾರ್ಯರು ಹಿಂದೂ ಮುಸಲ್ಮಾನರ ಪ್ರಜ್ವಲಿಸ ಮಿಲಿಟಾಗ್ನಿಗೆ ತುಪ್ಪ ಸುರಿದ ಅದನ್ನು ಸತ್ತವ್ವ ಧಗಧಗಿಸ ವಂತೆ ಮಾಡಲಿಲ್ಲ ಆದರೆ ಇಬ್ಬರ ಕಲಹದಿಂದ ಅವರಿಗೆ ನಷ್ಟ ಮೂರನೆಯವರಿಗೆ ಲಾಭವಾಗುತ್ತದೆ ಹಿಂದೂ ಮುಸಲ್ಮಾನರು ಹಿಂದುಸ್ತಾನವನ್ನಾಗಿ ಕಡ್ಡಾಯವಾಗಿ ಅದನ್ನು ವಿಭಾಗಿಸಿಕೊಳ್ಳದೆ ಒಂದಾಗಿ ಅದನ್ನು ಅನುಭವಿಸಿ ಬರಬೇಕೆಂದು, ಆಚಾರ್ಯರು ಹಿಂದೂ ಮುಸಲ್ಮಾನರಿಗೆ ... ಹೇಳಿದರು ಆದುದರಿಂದ ಆಚಾರ್ಯರನ್ನು ದೂರ ಹೋಗಿ ಜಿನ್ನರು ತಮ್ಮ ದುಷ್ಟತನವನ್ನೇ ಜಗತ್ತಿನ ಮುಂದೆ ಪ್ರದರ್ಶಿಸಿದವರು ಮಿ. ಜಿನ್ನರ ಹೃದಯ ಮನಸ್ಸುಗಳನ್ನೆಲ್ಲಾ ಜಾತೀಯ ಭೂತವು ಸುಳಿದಾಡುತ್ತದೆ ಆದುದರಿಂದ ಅವರಿಗೆ ಇತರ ಎಲ್ಲಾ ಜನರ ಹೃದಯ ಮನಸ್ಸುಗಳಲ್ಲಿ ಜಾತೀಯ ಭೂತವೇ ತೋರುತ್ತದೆ

ನಾಸ್ತಿಕರಿಗೆ ಪ್ರತ್ಯೇಕ ಭಾಗಬೇಕು ಜಿನ್ನರಿಗೊಂದು ಪತ್ರ

ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳೆಂದು ಭಾರತವನ್ನು ವಿಭಾಗಮಾಡಬೇಕೆನ್ನುವ ಜಿನ್ನಾರಿಗೆ ಗೋರಖಪುರದ ಸಮತಾವಾದಿಗಳಲ್ಲಿಬ್ಬರಾದ ಜಗದೀಶ ಪ್ರಸಾದರು ಒಂದು ಪತ್ರ ಬರೆಯುತ್ತಾ ಅದರಲ್ಲಿ ಧರ್ಮಗಳಲ್ಲಿ ವಿಶ್ವಾಸವಿಲ್ಲದ ನಾಸ್ತಿಕರಿಗೆ ಪ್ರತ್ಯೇಕವಾದೊಂದು ವಿಭಾಗವಾಗಬೇಕಾಗಿದೆಯೆಂದು ಸೂಚಿಸಿರುವರು

ಜಿನ್ನರು ಸೂಚಿಸುವ ಎರಡು ವಿಭಾಗಗಳು ಕೇವಲ ಧಾರ್ಮಿಕ ದೃಷ್ಟಿಯದ್ದಾಗಿರಲು ಅಧಾರ್ಮಿಕರು ಭಾರತದಲ್ಲಿ ಬಹಳ ದುರವಸ್ಥೆಯಲ್ಲಿರುವ ಅಲ್ಪಸಂಖ್ಯಾಕರಾದುದರಿಂದ, ಅವರಿಗೆ ಪ್ರತ್ಯೇಕ ಭಾಗವೊಂದು ಸಿಕ್ಕಬೇಕೆಂದು, ಅಂತಹವರ ಪರವಾಗಿ ತಾನು ಜಿನ್ನರೊಡನೆ ಈ ಸೂಚನೆ ಕೊಟ್ಟಿರುವುದಾಗಿ ಅವರು ತಿಳಿಸುತ್ತಾರೆ.

ಸ್ವದೇಶಾಭಿಮಾನಿ

ತಾರೀಕು 26—4—1940

ಭಾರತ ಸಚಿವರ ಪಾರ್ಲಿಮೆಂಟು ಭಾಷಣ

ಕಳೆದವಾರ, ಪಾರ್ಲಿಮೆಂಟಿನಲ್ಲಿ ಲಾರ್ಡ್ಸ್ ಸಭೆ ಮತ್ತು ಕಾಮನ್ಸ್ ಸಭೆಗಳೆರಡರಲ್ಲಿಯೂ, ಭಾರತದ ಸಚಿವರಾದ ಜೆಟ್ಲೆಂಡರು ಮತ್ತು ಉಪಸಚಿವರಾದ ಸರ್ ಓನೀಲರು ಭಾರತದ ಕುರಿತು ಭಾಷಣವಿತ್ತರು! ಬ್ರಿಟಿಷ್ ಸರಕಾರದ ಯುದ್ಧ ಧ್ಯೇಯದ ಸ್ಪಷ್ಟೀಕರಣದ ಕುರಿತು ಕಾಂಗ್ರೆಸು ಪ್ರಶ್ನಿಸಿದಾಗ, ಯೋಗ್ಯ ಸಮಾಧಾನವು ಸಿಗದ ಕಾರಣ ಏಳು ಪ್ರಾಂತಗಳ ಅಧಿಕಾರಗಳಿಗೆ ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆ ಕೊಟ್ಟವು. ಇಂಡಿಯಾ ಆಕ್ಟಿನಂತೆ ಆಯಾಯ ಪ್ರಾಂತಗಳ ಗವರ್ನರರೇ ಅಧಿಕಾರವನ್ನು ವಹಿಸಿದರು. ಆದರೆ ಅವರು ಕೇವಲ ಆರು ತಿಂಗಳವರೆಗೆ ಮಾತ್ರ ತಮ್ಮ ಅಧಿಕಾರವನ್ನು ನಡೆಸಬಹುದು. ಮುಂದೆ ಆ ಅಧಿಕಾರ ನಡೆಸಬೇಕಾದರೆ ಪಾರ್ಲಿಮೆಂಟಿನ ಒಪ್ಪಿಗೆಯಾಗಬೇಕು. ಆ ಬಗ್ಗೆ ನಿರ್ಣಯವೊಂದನ್ನು ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿ ಭಾರತದ ಸಚಿವರೂ ಉಪಸಚಿವರೂ ತಂದು ಭಾರತದ ರಾಜಕೀಯದ ವಿಷಯವಾಗಿ ಭಾಷಣಗಳಿತ್ತರು.

ಲೋಕದ ಸದಭಿಪ್ರಾಯಕ್ಕಾಗಿ

ಒಟ್ಟು ಆ ಭಾಷಣಗಳು ಅಂತರ್‌ರಾಷ್ಟ್ರೀಯ ಅಭಿಪ್ರಾಯವನ್ನು ಬ್ರಿಟನಿಗೆ ಅನುಗುಣವಾಗಿ ಮಾಡಲು ಸಿದ್ಧಮಾಡಿದಂತೆ ಇದ್ದಾವು. ಯುದ್ಧದ ಧ್ಯೇಯವೇನು ಸ್ವಾತಂತ್ರ್ಯವು ಧ್ಯೇಯವಾಗಿದ್ದರೆ ಭಾರತಕ್ಕೆ ಹೇಗೆ ಅನ್ವಯಿಸುತ್ತದೆಯೆಂದು ಕಾಂಗ್ರೆಸ್ಸು ಕೇಳಿದಾಗ ಅದನ್ನು ನ್ಯಾಯವಾದ ಉತ್ತರದಿಂದ ಸಮಾಧಾನ ಪಡಿಸಲು ಅಸಾಧ್ಯವಾದ ಬ್ರಿಟಿಷ ರಾಜನೀತಿಜ್ಞರು ತಮ್ಮ ಅಸಮರ್ಥತೆಯನ್ನು ಮರೆಮಾಡಿ ಲೋಕದ ಮುಂದೆ, ಯೂರೋಪಿನ ಪ್ರಬಲರಾಷ್ಟ್ರಗಳ ಮುಂದೆ ತಮ್ಮ ನೀತಿಯು ಯೋಗ್ಯವೆಂದು ಸಾಧಿಸಲು ಈಗ ಯತ್ನಿಸುತ್ತಾರೆ. ಇಂದು ಲೋಕದ ಅಭಿಪ್ರಾಯವು ಬ್ರಿಟನಿನ ನೈತಿಕತೆಯ ಕುರಿತು ವಿಮುಖವಾಗಿ ಬರುತ್ತಿರುವುದರಿಂದ ಅದನ್ನು ಸರಿಪಡಿಸಲು ಯತ್ನಿಸುವುದು ಬ್ರಿಟಿಷ್ ರಾಜನೀತಿಜ್ಞರ ಕರ್ತವ್ಯವಾಗಿದೆ.

ಸಾಮಂತ ಸ್ವರಾಜ್ಯದ ಮಾತು

ಸಾಮಂತ ಸ್ವರಾಜ್ಯವನ್ನು ಕೊಡಲು ವೈಸರಾಯರು ಭರವಸೆಯಿತ್ತುದನ್ನು ಕಾಂಗ್ರೆಸು ತಿರಸ್ಕರಿಸಿತು ಎಂದು ಜೆಟ್ಲೆಂಡರು ಹೇಳಿದ ಮಾತಿನಲ್ಲಿ ಅರ್ಧಸತ್ಯವಿದೆ. ಕಾಂಗ್ರೆಸು ಸಾಮಂತ ಸ್ವರಾಜ್ಯವನ್ನು ಅಪೇಕ್ಷಿಸುವುದಿಲ್ಲ; ಅದರ ಧ್ಯೇಯವು ಸಂಪೂರ್ಣ ರಾಜ್ಯವೆಂದು ಈಗಾಗಲೇ ಸ್ಪಷ್ಟಮಾಡಲಾಗಿದೆ. ಆದರೆ ಗಾಂಧೀಜಿಯವರು ಹೇಳುವಂತೆ ರಾಷ್ಟ್ರಘಟನಾ ಸಮಿತಿಯು ನಿರ್ಣಯ ಮಾಡುವಂತಹ ಸಾಮಂತ ಸ್ವರಾಜ್ಯವಾದರೂ ಆಗಬಹುದೆಂದು ಕಾಂಗ್ರೆಸು ಒಪ್ಪುವುದಿದ್ದರೆ, ಆ ಕುರಿತು, ಅದು ಯಾವಾಗ ಕೊಡಲ್ಪಡುವುದು ಎಂಬ ವಿಷಯ ಸ್ಪಷ್ಟವಾದ ಹೇಳಿಕೆಯನ್ನು ಇದುವರೆಗೆ ಸರಕಾರವು ಮಾಡಿಲ್ಲ. ಅನಿಶ್ಚಿತವಾಗಿ ಯಾವುದಾದರೊಂದು ಕಾಲದಲ್ಲಿ ಬ್ರಿಟಿಷರಿಗೆ ಹಿತವಾದ ರೀತಿಯ ರಾಜ್ಯಘಟನೆಯನ್ನು ಭಾರತಕ್ಕೆ ಕೊಡಲಾಗುವುದು ಎಂಬ ಹೇಳಿಕೆಯಿಂದ ಇಂದಿನ ಯುದ್ಧದಲ್ಲಿ ಸರ್ವಸ್ವವನ್ನರ್ಪಿಸಿ ಕಾದಾಡಿ, ಬ್ರಿಟಿಷರಿಗೆ ನೆರವಾಗಲು ಕಾಂಗ್ರೆಸು ಸಿದ್ಧವಾಗಿಲ್ಲವೆಂದು ಹೇಳಿದರೆ, ಇದರಲ್ಲಿ ತಪ್ಪೇನೋ ತಿಳಿಯುವುದಿಲ್ಲ. ಅಸ್ಪಷ್ಟವಾದ ಮಾತುಗಳಿಂದ ಭಾರತವನ್ನು ಸುಲಭವಂಚನೆ ಮಾಡುವುದು ಇಂದು ಅಸಾಧ್ಯವಾಗಿದೆಯೆಂಬುದನ್ನು ಬ್ರಿಟಿಷ್ ರಾಜನೀತಿಜ್ಞರು ಚೆನ್ನಾಗಿ ತಿಳಕೊಳ್ಳಬೇಕಾಗಿದೆ.

ಜಾತಿ ವೈಷಮ್ಯವುಂಟೆ?

ಭಾರತದಲ್ಲಿ ಹಿಂದೂ ಮುಸ್ಲಿಂ ವೈಷಮ್ಯತೆಯುಂಟೆಂದೂ, ಅಲ್ಪಸಂಖ್ಯಾಕರ ರಕ್ಷಣೆಯು ತಮ್ಮ ಕರ್ತವ್ಯವೆಂದೂ ಹೇಳುವುದು ಆತಂಕದ ನೆವನವಾಗಿದೆ. ಗಾಂಧಿಜಿಯವರಾಗಲಿ, ಜಿನ್ನರಾಗಲಿ ಜಾತೀಯ ದಂಗೆಗಾರರಲ್ಲ; ಜಾತೀಯ ವಿಷಯಗಳನ್ನು ಇತ್ಯರ್ಥಿಸುವುದು ಹಿಂದೂ—ಮುಸ್ಲಿಮರೊಳಗಿನ ವಿಷಯ. ಒಂದು ಮನೆಯ ಜಗಳವನ್ನು ಅಣ್ಣತಮ್ಮಂದಿರು ತಮ್ಮೊಳಗೆ ತಾವೇ ತೀರ್ಮಾನಿಸಿಕೊಂಡಂತೆ ಅಲ್ಲದೆ ಮೂರನೆಯವನು ಅದಕ್ಕೆ ಒಂದು ಪ್ರವೇಶಿಸಿ ಅಣ್ಣತಮ್ಮಂದಿರ ಜಗಳವನ್ನು ಕೆರಳಿಸಬಾರದು. ಭಾರತದಲ್ಲಿ ಜಾತಿ ವೈಷಮ್ಯಗಳುಂಟೆಂದು ಹೇಳುವ ಬ್ರಿಟಿಷ ರಾಜನೀತಿಜ್ಞರು ಆ ವೈಷಮ್ಯವನ್ನು ಕೊನೆಗಾಣಿಸಲು ಯಾವ ದಾರಿಯನ್ನು ತೋರಿಸಿದ್ದಾರೆ? ಕಾಂಗ್ರೆಸು ಜಾತೀಯ ತೀರ್ಮಾನಕ್ಕೆ ರಾಷ್ಟ್ರಘಟನಾ ಸಮಿತಿಯು ಏಕಉಪಾಯವೆಂದು ಹೇಳುತ್ತಿರಲು ಅದನ್ನು ಕೂಡಿಸಲು ಯಾಕೆ ಸಮ್ಮತಿಸುವುದಿಲ್ಲ. ಹೀಗಿರಲು ಜೆಟ್ಲೆಂಡರ ಈ ವಾದದಲ್ಲಿ ಏನಾದರೂ ಹುರುಳುಂಟೇ ಎಂಬ ಕುರಿತು ರಾಷ್ಟ್ರೀಯ ವಿಚಾರದವರು ಸಂದೇಹಗೊಳ್ಳತಕ್ಕ ವಿಷಯವಾಗಿದೆ.

ಸತ್ಯಾಗ್ರಹವನ್ನು ತಡೆಯುವರೆ?

ಸತ್ಯಾಗ್ರಹವು ಆರಂಭಿಸಲ್ಪಟ್ಟರೆ, ಅದನ್ನು ಉಗ್ರೋಪಾಯಗಳಿಂದ ತಡೆಯುವೆವೆಂದು ಭಾರತದ ಉಪಸಚಿವರಾದ ಸರ್ ಓನಿಲರು ತಮ್ಮ ಭಾಷಣದಲ್ಲಿ ಕಾಂಗ್ರೆಸು ಧುರೀಣರಿಗೆ ಎಚ್ಚರವಿತ್ತಿದ್ದಾರೆ. ಬಹುಶಃ ಭಾರತದ ಉಪಸಚಿವರಿಗೆ ಮಹಾತ್ಮರ ಮುಂದಾಳುತನದಿಂದ ಕಾಂಗ್ರೆಸು ಮಾಡಿರುವ ಸಿದ್ಧತೆಗಳು—ಅಖಿಲ ಭಾರತವು ಶಕ್ತಿಯುತವಾಗಿ ನಿಂತಿರುವ ವಿಷಯವು ಏನೇನೂ ತಿಳಿದಿಲ್ಲವೆಂದು ತೋರುತ್ತದೆ. ಹಿಂಸೆಯಿಂದ, ಪಶುಶಕ್ತಿಯಿಂದ, ಸತ್ಯಾಗ್ರಹವನ್ನು ಹದಕ್ಕೆ ತರಬಲ್ಲೆವೆಂದು ಬ್ರಿಟಿಷ್ ರಾಜನೀತಿಜ್ಞರು ಹೆಮ್ಮೆಪಡುತ್ತಿರಬಹುದು, ಆದರೆ ಅಖಿಲ ಪ್ರಪಂಚವನ್ನೇ ನಡುಗಿಸಬಲ್ಲ ಆತ್ಮಶಕ್ತಿಯಿಂದ ಸತ್ಯವ್ರತದಿಂದ ಸ್ವಾತಂತ್ರ್ಯದ ಸಲುವಾಗಿ, ಅಹಿಂಸಾವ್ರತ ಬದ್ಧರಾಗಿ ಹೊರಟ ಭಾರತದ ಸತ್ಯಾಗ್ರಹಿಗಳನ್ನು ತಡೆಯಲು, ಹಿಡಿದ ಮಾರ್ಗದಿಂದ ಹಿಂದಡಿಯಿಡುವಂತೆ ಮಾಡಲು ಯೂರೋಪಿನ ಹಾಗೂ ಅಖಿಲ ಜಗತ್ತಿನ ಏಕೀಕೃತ ಪಶುಶಕ್ತಿಗೂ ಸಾಧ್ಯವಿಲ್ಲದ ಮಾತು! ಲಾಭದಾಸೆ, ದ್ವೇಷ, ಮಾತ್ಸರ್ಯ, ಸಾಮ್ರಾಜ್ಯಲಾಲಸೆಗಳಿಗಾಗಿ – ಸ್ವಾರ್ಥಸಾಧನೆಗಳಿಗಾಗಿ ಯೂರೋಪಿನ ರಾಷ್ಟ್ರಗಳು ಕೋವಿ ಹಿಡಿದು ನಿಂತು ಸಾಯಲು ಹೋರಾಡುತ್ತಿವೆ. ಆದರೆ, ಸತ್ಯಕ್ಕೆ ಜಯವಿದ್ದರೆ, ಧರ್ಮಕ್ಕೆ ಗೆಲವಿದ್ದರೆ, ಭಾರತೀಯರ ಅಹಿಂಸಾ ಸಮರವು ಯಶಸ್ವಿಯಾಗಲೇ ಬೇಕು. ಅದನ್ನು ಉಗ್ರೋಪಾಯಗಳಿಂದ ಅಡಗಿಸುವೆವೆಂಬ ಬೆದರಿಕೆಯನ್ನು ಮಾಡುವ ಸರ್ ಓನೀಲರು ಭಾರತದ ವೀರ ಸತ್ಯಾಗ್ರಹಿಗಳ ಮನೋಧರ್ಮವನ್ನು ಏನೇನೂ ಪರಿಚಯ ಮಾಡಿಕೊಳ್ಳಲಿಲ್ಲವೆಂಬುದು ತೀರಾ ವಿಷಾದಪಡುವಂತಹ ವಿಷಯವಾಗಿದೆ. ದರ್ಪದಿಂದ, ಬೆದರಿಕೆಯಿಂದ, ಪಶುಬಲದಿಂದ ನ್ಯಾಯವನ್ನು ಮರೆಮಾಡಿ ಆಳುವ ಕಾಲವು ಕಳೆದು ಹೋಯಿತೆಂಬುದನ್ನು ಬ್ರಿಟಿಷ್ ಧುರೀಣರು ತಿಳಿದುಕೊಳ್ಳುವುದು ವಿಹಿತವಾಗಿದೆ.

ಅಧಿಕಾರವನ್ನು ಬಿಡುವ ಮನಸಿಲ್ಲ!

ಒಟ್ಟಿನಿಂದ ಹೇಳುವುದಿದ್ದರೆ, ರಾಷ್ಟ್ರಪತ್ರಿಗಳು ಪ್ರಕಟಿಸಿದಂತೆ, ಬ್ರಿಟಿಷ್ ಸರಕಾರಕ್ಕೆ ಹಿಂದೂ ದೇಶದ ಮೇಲಿರುವ ಅಧಿಕಾರವನ್ನು ಬಿಟ್ಟುಕೊಡಲು ಮನಸಿಲ್ಲವೆಂಬುದೇ ಈ ಭಾಷಣಗಳ ಅರ್ಥವಾಗಿದೆ. ಭಾರತದ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ರಚನಾತ್ಮಕ ಸೂಚನೆಗಳು ಯಾವವೂ ಇಲ್ಲದೆ ಕೇವಲ ಪ್ರತಿಬಂಧಕ ಸಮಸ್ಯೆಗಳನ್ನೇ ಎತ್ತಿ ಹಿಡಿದು ಭಾರತವನ್ನು ಆಳಲು ಬ್ರಿಟಿಷ್ ಮಂತ್ರಿಗಳ ಮನಸ್ಸು ಮಾಡಿದಂತಿದೆ! ಪ್ರಪಂಚದ ಇತಿಹಾಸದಲ್ಲಿ, ಭಾರತವು ಸ್ವತಂತ್ರ ರಾಷ್ಟ್ರವೆಂದು ಸುವರ್ಣಾಕ್ಷರಗಳಿಂದ ಉಲ್ಲಿಖಿತವಾಗುವ ಕಾಲವು ಬಹ ದೂರವಿರಲಾರದು.

ಸ್ವೀಕಾರ-ವಿಮರ್ಶೆ

ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ

ಗ್ರಂಥಕರ್ತರು—ಎನ್. ಎಸ್. ಮಾಳವಾಡ ಎಮ್. ಎ., ಬಿ. ಟಿ. ಎಸ್. ಗ್ರಂಥವು ರೋಯಲ್ ಆಕಾರದ ೧೭೦ ಪುಟಗಳಷ್ಟು ಇದೆ. ಬೆಲೆ ೧—೮—೦ ಪ್ರತಿಗಳು ದೊರಕುವ ಸ್ಥಳ: ಸಾಹಿತ್ಯ ಭಾಂಡಾರ ಹುಬ್ಬಳ್ಳಿ.

ಗ್ರಂಥಕರ್ತರು ಹೇಳುವಂತೆ ಇದು ಕೆಲವು ಲೇಖನಗಳ ಸಂಗ್ರಹ. ಆದರೆ ಈ ಸಂಗ್ರಹದಲ್ಲಿ ಯಾವ ಉದಾತ್ತಧ್ಯೇಯವನ್ನೂ ಇಟ್ಟುಕೊಂಡಂತೆ ತೋರುವುದಿಲ್ಲ. ವೀರಶೈವ ಕವಿಗಳಿಗೂ ಅವರ ಕಾವ್ಯಗಳಿಗೂ ಈ ಸಂಗ್ರಹದಲ್ಲಿ ಹೆಚ್ಚು ಪ್ರಾಶಸ್ತ್ಯ ಕೊಟ್ಟಂತೆ ಮಾತ್ರ ತೋರುತ್ತದೆ.

ಪುಸ್ತಕದ ಭಾಷಾ ಶೈಲಿಯು ಸರಳವಾಗಿದೆ. ಬೇಜಾರು ಇತ್ಯಾದಿ ಪದಗಳನ್ನು ಬಿಟ್ಟಿದ್ದರೆ ಚೆನ್ನಾಗಿತ್ತು. ಕಬ್ಬು ದಂಗನೆಯನ್ನು ವೈಯ್ಯಾಕರಣರು ನೋಡಿದರೆ ಏನನ್ನುವರೋ ತಿಳಿಯದು. ಕನ್ನಡಕ್ಕೆ ಅಗತ್ಯವಿಲ್ಲದ 'ಕರ್ಮಣಿ ಪ್ರಯೋಗ'ವು ಅನೇಕ ಕಡೆಗಳಲ್ಲಿ ಬಂದು ಭಾಷೆಯ ಚಲುವನ್ನು ಕೆಡಿಸಿದೆ—



ಗ್ರಂಥವು ಅನೇಕ ವಿಮರ್ಶಾತ್ಮಕ ವಿಚಾರಗಳನ್ನು ಒಳಗೊಂಡು ಕರ್ನಾಟಕ ಸಾಹಿತ್ಯ ಪ್ರವೇಶಕರಿಗೆ ಬಹ ಪ್ರಯೋಜನಕಾರಿಯಾದೀತೆಂದು ನನ್ನ ಭರವಸೆ. ಇವರ ಅನೇಕ ಕವಿಕಾವ್ಯ ವಿಮರ್ಶೆಗಳನ್ನು ಮಾಡುವಾಗ ಸುಲಭ ಗ್ರಾಹ್ಯ ವಿಚಾರವನ್ನೇ ಕೊಟ್ಟು ವಿಷಯವನ್ನು ಮಂದಟ್ಟುಮಾಡಲು ಪ್ರಯತ್ನಿಸಿರುವರು. ವಿಮರ್ಶಾ ಪ್ರಪಂಚದಲ್ಲಿ ಬಹಳ ಮುಂದರಿದ ವಿದ್ವಜ್ಜನರಿಗೆ ಈ ಗ್ರಂಥದ ಹೆಚ್ಚಿನ ವಿಷಯಗಳು ಅನವಶ್ಯವೆಂದು ತೋರಬಹುದು. ಆದರೆ ಕನ್ನಡ ಸಾಹಿತ್ಯವನ್ನು ಅಭ್ಯಾಸಮಾಡಲು ಆರಂಭಮಾಡುವವರಿಗೆ ಇದು ಉಪಕಾರಿಯಾದೀತೆಂದು ನಂಬುತ್ತೇನೆ. ಕರ್ನಾಟಕ ಭಾಷಾಪ್ರೇಮಿಗಳೆಲ್ಲಾ ಸಂಗ್ರಹಿಸಬೇಕಾದ ಗ್ರಂಥವಿದು.

ತೋ. ಶೀ. ಹೆಗ್ಡೆ, ಬಿ. ಓ. ಎಲ್.

ವೇದಾಂತದ ಒಳದಾರಿ (ಆರು ಪ್ರವಚನಗಳು) ಲೇಖಕರು. ಷ. ಪ. ಕುಲಕರಣಿ ನಾರಾಯಣರಾಯರು, ಎಂ. ಎ., ಎಲ್. ಎಲ್. ಬಿ. ೧/೮ ಆಕಾರದ ೬೨ ಪುಟಗಳು. ಬೆಲೆ ಆರು ಆಣೆ. ಪುಸ್ತಕಗಳು ದೊರೆಯುವ ಸ್ಥಳ. ಸಾಹಿತ್ಯ ಭಂಡಾರ ಹುಬ್ಬಳ್ಳಿ

ವೇದಾಂತವು ಭಾರತೀಯರ ಅಮೂಲ್ಯ ಜ್ಞಾನನಿಧಿಯಾಗಿದೆ. ಪ್ರಕೃತ ಗ್ರಂಥಕರ್ತರು ಉಪನಿಷತ್ತು, ಪುರಾಣ ವೇದಾಂಗಗಳ ಆಧಾರದಿಂದ ವೇದಾಂತದ ಕುರಿತು ಅರಿಯಲು ಅಭೀಪ್ಸುವುಳ್ಳವರಿಗೆ ಸರಲವಾದ ಭಾಷೆಯಲ್ಲಿ ಉಪಯುಕ್ತವಾದ ವಿಷಯಗಳನ್ನು ವಿವರಿಸಿಕೊಟ್ಟಿರುವರು. ವೇದಾಂತದ ಅಭ್ಯಾಸಮಾಡುವವರು ಸಂಗ್ರಹಿಸಬೇಕಾದ ಪುಸ್ತಕವಿದು.

ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲಾಗುವುದಿಲ್ಲ!

ಸತ್ಯಾಗ್ರಹವನ್ನು ನಿರ್ಬಂಧಿಸುವೆವು ಸಂಬಂಧವನ್ನು ಕಡಿಯಲಾರೆವು

ಜೆಟ್ಲೆಂಡ್—ಓನಿಲರ ಭಾಷಣಗಳು! ಪಾರ್ಲಿಮೆಂಟಿನಲ್ಲಿ ನಿರ್ಣಯ!

ಹಿಂದೂಸ್ಥಾನದಲ್ಲಿ ಏಳು ಪ್ರಾಂತಗಳ ರಾಜ್ಯಭಾರವನ್ನು ಕಳೆದ ಅಕ್ಟೋಬರ ತಿಂಗಳಲ್ಲಿ ಕಾಂಗ್ರೆಸ ಮಂತ್ರಿ ಮಂಡಲಗಳು ರಾಜಿನಾಮೆ ಕೊಟ್ಟಮೇಲೆ ನಡೆಸುವ ಹೊಣೆಯನ್ನು ಗವರ್ನರರು ವಹಿಸಿಕೊಂಡರು ಆದರೆ ಕೇವಲ ಆರು ತಿಂಗಳ ವರೆಗೆ ಮಾತ್ರ ಹೀಗೆ ಮಾಡಲು ಅವರಿಗೆ ಅಧಿಕಾರವಿರುತ್ತದೆ ಈ ಅವಧಿಯನ್ನು ಬೆಳಿಸಬೇಕಾದರೆ ಪಾರ್ಲಿಮೆಂಟಿನ ಅಪ್ಪಣೆಪಡೆಯಲು ಭಾರತ ಮಂತ್ರಿ ಲಾರ್ಡ ಝೆಟ್ಲೆಂಡರು ಲಾರ್ಡ್ಸ ಸಭೆಯಲ್ಲಿ ಒಂದು ಸೂಚನೆಯನ್ನು ಮಂಡಿಸಿದರು

ಅವರ ಭಾಷಣಸಾರಾಂಶವು ಹೀಗಿತ್ತು

'ಈಗ ಆರು ತಿಂಗಳ ಹಿಂದೆ ಕೆಲವು ಮಂತ್ರಿಮಂಡಲಗಳ ಕಾಂಗ್ರೆಸ ವರ್ಕಿಂಗ ಕಮಿಟಿಯ ಸೂಚನ ಪ್ರಕಾರ ರಾಜೀನಾಮೆ ಕೊಟ್ಟವು ಅದ್ದರಿಂದ ಆಯಾ ಪ್ರಾಂತಗಳ ಗವರ್ನರರು ಪ್ರಾಂತಿಕ ರಾಜ್ಯಭಾರ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳ ಬೇಕಾಯಿತು ಬೇರೆ ಬೇರೆ ಪ್ರಾಂತಗಳಲ್ಲಿ ಗವರ್ನರರು ಹೊರಡಿಸಿರುವ ಘೋಷಣೆಗಳ ಅವಧಿಯನ್ನು ಒಂದು ವರ್ಷದ ವರೆಗೆ ಹೆಚ್ಚಿಸುವದಕ್ಕಾಗಿ ನಾನು ಇಲ್ಲಿ ಒಂದು ಸೂಚನೆಯನ್ನು ತಂದಿದ್ದೇನೆ

ಗಾಂಧಿ—ವೈಸರಾಯರ ಭೇಟಿ

ಅನಂತರ ಲಾರ್ಡ ಝೆಟ್ಲೆಂಡರು ಹಿಂದುಸ್ಥಾನದಲ್ಲಿ ನಡೆದ ಘಟನೆಗಳನ್ನೆಲ್ಲ ಸಂಕ್ಷೇಪವಾಗಿ ವಿವರಿಸಿದರು ಮತ್ತು ಫೆಬ್ರವರಿ ೫ನೇ ತಾರೀಕಿನ ದಿನ ನಡೆದ ಗಾಂಧಿ ವೈಸರಾಯರ ಭೇಟಿಯನ್ನು ಉಲ್ಲೇಖಿಸಿ ಹೀಗೆ ಹೇಳಿದರು 'ವೈಸರಾಯರು ಮುಂಬಯಿಯಲ್ಲಿ ಭಾಷಣ ಮಾಡಿದ ನಂತರ ದೇಶದಲ್ಲಿ ಉಂಟಾದ ವಾತಾವರಣವನ್ನು ನೋಡಿ ಗಾಂಧಿ ವೈಸರಾಯರ ಭೇಟಿಯು ಫಲಪ್ರದವಾಗುವದೆಂದು ನಂಬಿದ್ದೆವು. ಆದರೆ ನಮ್ಮ ಆಶೆಯು ನಿರಾಶೆಯಾಯಿತು.'

ನಮ್ಮ ಹೊಣೆಗಾರಿಕೆ

ಈ ಮಾತಿನ ಉದಾಹರಣೆಯೆಂದು ಲಾರ್ಡ ಝೆಟ್ಲೆಂಡರು ಬ್ರಿಟಿಶ ಸರಕಾರದವರು ಸಂಸ್ಥಾನಿಕರೊಡನೆ ಮಾಡಿಕೊಂಡ ಒಪ್ಪಂದಗಳನ್ನು ಉಲ್ಲೇಖಿಸಿದರು

ಸಂಸ್ಥಾನಿಕರೊಡನೆ ನಾವು ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ ಅವನ್ನು ನಾವು ಮಾನ್ಯ ಮಾಡಲೇ ಬೇಕು ಇದಲ್ಲದೆ ಹಿಂದುಸ್ಥಾನದಲ್ಲಿರುವ ಅನೇಕ ನಮ್ಮ ಹಿತಸಂಬಂಧಗಳನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ ಇದರ ಜೊತೆಗೆ ಹಿಂದುಸ್ಥಾನದ ಸಂರಕ್ಷಣೆಯ ಪ್ರಶ್ನೆಯನ್ನು ನಾವು ವಿಚಾರ ಮಾಡಬೇಕು ಮುಸಲ್ಮಾನರೇ ಮೊದಲಾದ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಬೇಕ

ಝೆಟ್ಲೆಂಡರ ಹಾಗೆಯೇ ತಮ್ಮ ಭಾಷಣವನ್ನು ಮುಂದೆ ಸಾಗಿಸುತ್ತಾ 'ಕಾಂಗ್ರೆಸ ಪಕ್ಷವು ಈಗಿನ ಧೋರಣವನ್ನೇ ಮುಂದೆಯೂ ತೋರಿಸಿದರೆ ಸನ್ಮಾನ್ಯ ಒಪ್ಪಂದವಾಗ ಬಹುದು ಅತಿ ಕಷ್ಟವಾಗಬಹುದು ಈಗಿರುವ ಅಸ್ತಿತ್ವ ಆತಂಕಗಳು ಮತ್ತಷ್ಟು ಹೆಚ್ಚಾಗಬಹುದು ಎಂದು ಹೇಳಿದರು

ಸಂಬಂಧವನ್ನು ಕಡಿದುಕೊಳ್ಳಲು ನಾವು ಸಿದ್ಧರಿಲ್ಲ

ಹಿಂದುಸ್ಥಾನದ ಪರಿಸ್ಥಿತಿಗನುಗುಣವಾದ ರಾಜ್ಯಘಟನೆಯನ್ನು ರಚಿಸುವ ಕಾರ್ಯದಲ್ಲಿ ಹಿಂದೀಯರೇ ಹೆಚ್ಚು ಭಾಗತೆಗೆದುಕೊಳ್ಳಬೇಕೆಂಬ ಮಾತನ್ನು ನಾವು ಒಪ್ಪಿಗೆಯಿದೆ.

ಆದರೆ ನಮ್ಮ ಹೊಣೆಗಾರಿಕೆಯನ್ನೇ ಬಿಟ್ಟುಕೊಟ್ಟು ಹಿಂದುಸ್ಥಾನದ ಭಾವಿ ರಾಜ್ಯಘಟನೆಯನ್ನು ರಚಿಸುವ ಕೆಲಸವು ನಮಗೆ ಸ್ವಲ್ಪವೂ ಸಂಬಂಧಿಸಿಲ್ಲವೆಂದು ಹೇಳಲು ನಾವು ಸಿದ್ಧರಿಲ್ಲ.

ಒತ್ತಾಯ ಮಾಡುವದಿಲ್ಲ

"ಈ ಎಲ್ಲ ಕಾರಣಗಳಿಂದ ನಾವು ಕಾಂಗ್ರೆಸ್ಸಿನ ಮುಖ್ಯ ಬೇಡಿಕೆಗಳನ್ನು ನಿರಾಕರಿಸಬೇಕಾಯಿತು ಹಿಂದುಸ್ಥಾನದ ಭಾವೀ ರಾಜ್ಯಘಟನೆಯನ್ನು ರಚಿಸುವ ಕಾರ್ಯದಲ್ಲಿ ನಮ್ಮ ಸಂಬಂಧವನ್ನು ಸಂಪೂರ್ಣವಾಗಿ ಕಡಿದು ಕೊಳ್ಳಲು ಸಾಧ್ಯವಿಲ್ಲೆಂದು ಹೇಳಬೇಕಾಯಿತು. ಆದರೆ ನಾವು ಹೀಗೆ ಹೇಳಿದ ಮಾತ್ರಕ್ಕೆ ಬ್ರಿಟಿಶ ಸರಕಾರ ಮತ್ತು ಬ್ರಿಟಿಶ ಪಾರ್ಲಿಮೆಂಟುಗಳು ರಚಿಸಿದಂತಹ ರಾಜ್ಯಘಟನೆಯನ್ನೆ ಹಿಂದೀಯರು ಸ್ವೀಕರಿಸಬೇಕೆಂದು ಹೇಳಿದಂತಾಗಲಿಲ್ಲ. ಹಿಂದೀಯರ ಮನಸ್ಸಿನ ವಿರುದ್ಧವಾಗಿ ಬ್ರಿಟಿಷರು ಹಿಂದುಸ್ಥಾನದ ರಾಜ್ಯಘಟನೆಯನ್ನು ರಚಿಸುವರೆಂದು ಹೇಳಿದಂತಾಗಲಿಲ್ಲ. ಘಟನಾತ್ಮಕ ಕ್ಷೇತ್ರದಲ್ಲಿ ಅವಶ್ಯಕಂಡ ಸುಧಾರಣೆಗಳನ್ನು ಮಾಡಲು ಹಿಂದುಸ್ಥಾನದ ಎಲ್ಲ ಪಕ್ಷಗಳ ಅಭಿಪ್ರಾಯ ತಿಳಿದುಕೊಳ್ಳುವದಾಗಿ ಸಾರ್ವಭೌಮ ಸರಕಾರದವರು ಈಗಾಗಲೇ ಭರವಸೆ ಕೊಟ್ಟಿದ್ದಾರೆ ಇದರಿಂದ ಬ್ರಿಟಿಶ ಸರಕಾರದವರು ಎಂದಿಗೂ ಒತ್ತಾಯ ಮಾಡುವದಿಲ್ಲ ಎಂಬ ಮಾತು ಸ್ಪಷ್ಟವಾಗುವದು

ಈ ರೀತಿ ಝೆಟ್ಲೆಂಡರ ಭಾಷಣವಾದ ಮೇಲೆ ಅವರ ಸೂಚನೆ ಪಾಸಾಯಿತು.

ಸರ್ ಓನೀಲರ ಭಾಷಣ

ಭಾರತ ಮಂತ್ರಿಗಳು ಲಾರ್ಡ್ಸ ಸಭೆಯಲ್ಲಿ ಮಂಡಿಸಿದ ಸೂಚನೆಯನ್ನೇ ಉಪಭಾರತ ಮಂತ್ರಿಗಳಾದ ಸರ್ ಹ್ಯೂ ಓನೀಲರು ಕಾಮನ್ಸ ಸಭೆಯಲ್ಲಿ ಮಂಡಿಸುತ್ತ 'ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ಕಾಂಗ್ರೆಸು ಕೇಳುತ್ತಿರುವದನ್ನು ಬ್ರಿಟಿಷ ಸಾರ್ವಭೌಮ ಸರಕಾರವು ಖಂಡಿತ ಒಪ್ಪಲಾರದು ಸತ್ಯಾಗ್ರಹ ಚಳವಳಿಯು ಹೂಡಲ್ಪಟ್ಟರೆ ಅದನ್ನು ಅಡಗಿಸಲಾಗುವದು" ಎಂದು ಹೇಳಿದರು

ಸತ್ಯಾಗ್ರಹಕ್ಕೆ ವಿರೋಧ

'ಸತ್ಯಾಗ್ರಹ ಚಳವಳಿಯು ಹೂಡಲ್ಪಟ್ಟರೆ ಅದನ್ನು ಅಡಗಿಸುವದಕ್ಕಾಗಿ ಸರಕಾರದವರು ಸಂಪೂರ್ಣ ಉಗ್ರೋಪಾಯಗಳನ್ನು ಕೈಕೊಳ್ಳಲೇ ಬೇಕಾಗುವುದು ಕಾಯದೆಬದ್ಧ ಸರಕಾರವನ್ನು ನಡೆಸಲೇ ಬೇಕು. ಆದರಲ್ಲಿಯೂ ಈ ಯುದ್ಧಕಾಲದಲ್ಲಿಯಂತೂ ಈ ಮಾತು ಮತ್ತಷ್ಟು ನಿಜವಿರಬಹುದು ಕಾಂಗ್ರೆಸ ಮುಖಂಡರಿಂದರೂ ಈ ಮಾತನ್ನು ತಮ್ಮ ಲಕ್ಷ್ಯದಲ್ಲಿ ತಂದು, ಯೋಗ್ಯ ವಿಚಾರ ಮಾಡುವರೆಂದು ನಾನು ಆಶಿಸುತ್ತೇನೆ.'

ಅವರ ಭಾಷಣ ಕೆಳಗೆ ಕಂಡಂತಿದೆ.—

'ಸಂಪೂರ್ಣ ಸ್ವಾತಂತ್ರ್ಯವಿಲ್ಲ.'

'ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ಕಾಂಗ್ರೆಸ್ಸ ಬೇಡಿಕೆಯನ್ನು ಸಾರ್ವಭೌಮ ಸರಕಾರದವರು ಒಪ್ಪಲಾರರೆಂಬುದು ಸ್ಪಷ್ಟವೇ ಇದೆ ಆದರೆ ಆದಷ್ಟು ಬೇಗನೆ ಸಾಮಂತ ಸ್ವರಾಜ್ಯವನ್ನು ಕೊಡುವದಾಗಿ ಸಾರ್ವಭೌಮ ಸರಕಾರದವರು ಆಶ್ವಾಸನ ಕೊಟ್ಟಿದ್ದಾರೆ. ಇದನ್ನು ಕಾಂಗ್ರೆಸ್ಸಿನವರು ನಿರಾಕರಿಸಿದ್ದಾರೆ ಇದು ತುಂಬಾ ವಿಷಾದದ ಸಂಗತಿಯು.

'ಕಾಂಗ್ರೆಸಿನ ಬೇಡಿಕೆಗೆ ಒಪ್ಪಿದರೆ ಬ್ರಿಟಿಷ ಸಾಮ್ರಾಜ್ಯವು ಹಿಂದುಸ್ಥಾನದೊಡನಿರುವ ತನ್ನ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಂಡಂತಾಗುವದು, ಹಿಂದುಸ್ಥಾನದ ರಾಜ್ಯಘಟನೆಯಲ್ಲಿ ಸಾರ್ವಭೌಮರಿಗೆ ಸ್ಥಾನವೇ ಇಲ್ಲದಂತಾಗುವದು, ಮುಸಲ್ಮಾನರೇ ಮೊದಲಾದ ಅಲ್ಪಸಂಖ್ಯಾಕರಿಗೂ ಸಂಸ್ಥಾನಿಕರಿಗೂ ಕೊಟ್ಟಿರುವ ವಚನಗಳನ್ನು ಧಿಕ್ಕರಿಸಿದಂತಾಗುವದು.'

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 12/1940

ವಡೇರಬೆಟ್ಟು ನರಸಿಂಹ ಕಮ್ತಿ—ವಾದಿ

ಮತ್ತು

ವೆಂಕಟ್ರಮಣ ಕಾಮತಿ ಭಾಗ ಕೂಡ—ಪ್ರತಿವಾದಿರು ಇವರೊಳಗೆ

2 ನೇ ಪ್ರತಿವಾದಿ ಗೋಪಾಲ ಕಾಮತಿ ಭಾಗ 3 ನೇ ಪ್ರತಿವಾದಿ ರಘುವೇಂದ್ರ ಕಾಮತಿ ಭಾಗ 4 ನೇ ಪ್ರತಿವಾದಿ ಶ್ರೀನಿವಾಸ ಕಾಮತಿ ಭಾಗ ಹೆಜಮಾಡಿ ಸುಬ್ರಾಯ ಕಾಮತಿ ಭಾಗರ ಮಕ್ಕಳು. ಬೊಂಬಾಯಿ ಶಹರದಲ್ಲಿ Tea Shop Pannalal Terrace Grant Road Bombay ಎಂಬಲ್ಲಿರುವವರು

5 ವಿಶ್ವನಾಥ 6 ಸುಬ್ರಾಯ 7 ಗಣೇಶ	ಹೆಜಮಾಡಿ ದಯಾನಂದ ಕಾಮತಿ ಭಾಗರ ಮಕ್ಕಳು	ಇವರ ಗಾರ್ಡಿಯಾನಳು ಇವರ ತಾಯಿ ರಮಾ ಬಾಯಿ ಸದ್ರಿ ದಯಾನಂದ ಕಾಮತಿ ಭಾಗರ ವಿಧವೆ—

ಮಂಗಳೂರು ಶಹಾರ ತೇರಬೀದಿ ಸಾಫ ವಿಠೋಬ ರಂಗ ಭಂಡಾರಿಗಳ ಮನೆಯಲ್ಲಿರುವವಳು

8 ಪಿಟ್ಟಲ 9 ಕೇಶವ	ಹೆಜಮಾಡಿ ಹರಿದಾಸ ಕಾಮತಿ ಭಾಗರ ಮಕ್ಕಳು	ಇವರ ಗಾರ್ಡಿಯಾನಳು ಇವರ ತಾಯಿ ನಾರಾಯಣಿ ಯಾನೆ ಶಾಂತಾಬಾಯಿ ಸದ್ರಿ ಹರಿದಾಸ ಕಾಮತಿ ಭಾಗರ ವಿಧವೆ—

ಮಂಗಳೂರು ಶಹಾರ ತೇರಬೀದಿ ನರಸಿಂಹ ಭಂಡಾರಿಗಳ ಮನೆಯಲ್ಲಿರುವವಳು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ವಾದಿಯು ನಿಮ್ಮ ಮೇಲೆ ದಿವಾಣಿ ನೋಟಿನ ಅಸಲು ಬಡ್ಡಿ ಖರ್ಚು ರೂಪಾಯಿ 3000 ಬರಮಾಡುವರೆ ದಾಖಲ್ಲ ಮಾಡಿದ ಮೋಕದ್ದಮೆ ದಾವೆಯು ತನಿಖೆಗೆ ಇದೇ ಬರುವ ತಾ. 10-6-40 ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಕಡೆಯಿಂದ ಉಜ್ರು ಹೇಳುವದಿದ್ದರೆ ಸದ್ರಿ ದಿವಸ ಹಗಲು 10 ಗಂಟೆಗೆ ಸ್ವತಃ ಯಾ ವಕೀಲರ ಮುಖಾಂತರ ಮೋಕದ್ದಮೆ ಕೋರ್ಟಿನಲ್ಲಿ ಹಾಜರಾಗಿ ವ್ಯಾಜ್ಯ ನಡೆಸತಕ್ಕದ್ದು ತಪ್ಪಿದ್ದರೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸುತ್ತದೆ

Karkala 19-4-40 } K. Vasudeva Kamath, Advocate for Plaintiff

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು

ಹೆಡ್ ಆಫೀಸು, ಕೆನರಾ ಹೈಸ್ಕೂಲ್ ರೋಡು   ಬ್ರೇಂಚ್ ಸೆಂಟ್ರಲ್ ಮಾರ್ಕೆಟ

ರಿಜಿಸ್ಟರ್ಡ್ ಮೂಲಧನ ರೂ. 1,00,000.   ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಸಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿಗದಿ ಠೇವಣಾತಿ 3 ತಿಂಗಳಿಗೆ 3½%   ನಿಗದಿ ಠೇವಣಾತಿ 12 ತಿಂಗಳಿಗೆ 4½

„ 6 ತಿಂಗಳಿಗೆ 4%   „ 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

ಬ್ರಿಟಿಷರು ಹೊರಟುಹೋದಂದು ಅಂತಃಕಲಹವಳಿಯುವುದು

ಅಹಿಂಸೆಯಲ್ಲಿ ಮಹಾತ್ಮರ ದೃಢವಿಶ್ವಾಸ

ಚೈನೀಯ ಮಿತ್ರರೊಡನೆ ಗಾಂಧಿಜಿಯವರ ಸಂವಾದ!

ಗಾಂಧಿಜಿಯವರು ತಮ್ಮ ಜೀವಮಾನದಲ್ಲಿಯೇ ಭಾರತವನ್ನು ಸ್ವತಂತ್ರವಾದುದಾಗಿ ನೋಡುವುದು ಸಾಧ್ಯವೆಂದು ತಿಳಿದಿರುವರೆ? ಎಂಬೀ ಪ್ರಶ್ನೆಯನ್ನೇ ಸೇವಾಗ್ರಾಮದಲ್ಲಿ ಗಾಂಧಿಜಿಯೊಡನೆ ಒಬ್ಬ ಚೈನದ ಮಿತ್ರರು ಕೇಳಿದರು. ಅದಕ್ಕೆ ಗಾಂಧಿಜಿಯವರು, ತಾನು ಖಂಡಿತವಾಗಿಯೂ ತನ್ನ ಜೀವಮಾನದಲ್ಲಿಯೇ ಭಾರತವನ್ನು ಸ್ವತಂತ್ರವಾದುದನ್ನಾಗಿ ನೋಡಲು ಹಾತೊರೆಯುವೆನೆಂದೂ ಆದರೆ ದೇವರು, ನನ್ನ ಜೀವನದ ಕನಸನ್ನು ಕಾಣಲು ನನಗೆ ಯೋಗ್ಯತೆ ಕೊಡದಿದ್ದರೆ, ನಾನು ಆ ಕುರಿತು, ದೇವರೊಡನಲ್ಲ, ನನ್ನೊಡನೆಯೇ ಜಗಳಹೂಡುವೆನೆಂದೂ ಹೇಳಿದರು.

ಇದು ಒಂದು ಅದ್ಭುತ!

"ಒಂದು ಸೈನ್ಯವಿಲ್ಲದೆ ನೀವು ಹೇಗೆ ಜಯಿಸುವಿರಿ?" ಚೈನೀಯ ಮಿತ್ರರು ಗಾಂಧಿಜಿಯವರೊಡನೆ ಕೇಳಿದರು.

"ನಾವಿಂದು ನಮ್ಮ ಗುರಿಯನ್ನು ಸಮೀಪಿಸುತ್ತಿದ್ದೇವೆ. ಒಂದು ಸಿಡಿಗುಂಡು ಸಹಹಾರದೆ ನಮ್ಮ ಕಾರ್ಯವು ಆಗುತ್ತದೆ. ಆದಾದರೆ ಜಗತ್ತಿಗೇ ನಮ್ಮದೊಂದು ಅದ್ಭುತವಾಗುವುದು. ಅಹಿಂಸಾ ಶಸ್ತ್ರವು ಸಾಲದೆಂಬ ವಿಷಯವಾಗಿ ನಾನು ಸಂಶಯಗೊಂಡಿಲ್ಲ." ಎಂದರು ಗಾಂಧಿಜಿಯವರು.

"ಬ್ರಿಟಿಷರು ಸ್ವಾತಂತ್ರ್ಯವನ್ನು ಕೊಡುವರೆಂದು ನೀವು ಭಾವಿಸಿರುವಿರೇ?"

"ಅದೆಲ್ಲಾ ಸಂದರ್ಭವನ್ನು ಹೊಂದಿಕೊಂಡಿದೆ. ನಮ್ಮ ಶಕ್ತಿಯನ್ನು ಅವರು ನಿಜವಾಗಿ ತಿಳಿದುಕೊಂಡರೆ, ಖಂಡಿತವಾಗಿ ಅವರು ಜಗಳ ಹೂಡುವರೆಂದು ನಾನು ತಿಳಿಯಲಾರೆ. ಆದರೆ ಇಂದು ನಮ್ಮ ಶಕ್ತಿಯ ವಿಷಯವು ಅವರ ತಿಳುವಳಿಕೆಗೆ ಬಂದಿಲ್ಲ."

"ಶಾಸನಭಂಗವಲ್ಲದೆ ನಿಮ್ಮ ಅಪೇಕ್ಷೆಯನ್ನು ಸಾಧಿಸಲು ಬೇರೆ ಉಪಾಯಗಳಿವೆಯೆ? "ಹೌದು, ನಮ್ಮೊಳಗೆ ಐಕ್ಯವಿರುತ್ತಿದ್ದರೆ ನಮ್ಮನ್ನು ಬ್ರಿಟಿಷರು ಎದುರಿಸಲು ಅಸಾಧ್ಯವಿತ್ತು."

"ನಾವು ಚೈನದಲ್ಲಿ ಐಕ್ಯಕ್ಕಾಗಿ ಬಹಳ ಕಷ್ಟಪಡಬೇಕಾಯಿತು. ಕಳೆದ ೨೫ವರ್ಷಗಳಿಂದಲೂ ನಮ್ಮೊಳಗೆ ಕಲಹಗಳಿದ್ದುವು ಬ್ರಿಟಿಷರು ಇಲ್ಲಿಂದ ಹೋದರೆ ಇಲ್ಲಿಯೂ ಹಾಗೆಯೇ ಆಗಬಹುದೇ?"

"ಮುಂದೆ ಏನಾಗುವುದೆಂದು ಇಂದು ಹೇಳುವುದು ಅಸಾಧ್ಯ. ಅದಕ್ಕೂ ನಮ್ಮೊಳಗೆ ಕಲಹಗಳುಂಟಾಗುವವೆಂದು ಭಾವಿಸುವುದು ಸರಿಯಲ್ಲ. ಚೈನದ ಪರಿಸ್ಥಿತಿಯು ಬೇರೆ ವಿಧವಾಗಿತ್ತೆಂದು ನಾನು ತಿಳಿಯುತ್ತೇನೆ. ಅಲ್ಲಿನ ಜನತೆಯೆಲ್ಲಾ ಕ್ರಾಂತಿಯಿಂದ ಆವೇಶಗೊಂಡಿದ್ದರು. ಆದರೆ ನಾವು ಇಲ್ಲಿ ಎಪ್ಪತ್ತು ಸಾವಿರ ಹಳ್ಳಿಗಳಲ್ಲಿ ವಾಸಮಾಡುವವರೆಲ್ಲರೂ ಅನ್ಯೋನ್ಯ ಒಬ್ಬರನ್ನು ಇನ್ನೊಬ್ಬರು ಹಿಡಿದು ನುಂಗಲು ಆಶಿಸುವುದಿಲ್ಲ. ನಮ್ಮೊಳಗೆ ಹೆಚ್ಚಿನ ಭೇದವಿಲ್ಲ. ದೊಡ್ಡ ಜನತೆಗೆ ಅಹಿಂಸೆಯನ್ನು ಬೋಧಿಸಿದ್ದು ಜಗತ್ತಿನ ಇತಿಹಾಸದಲ್ಲಿಯೇ ಇದು ಹೊಸತು. ನಾನು ಅಹಿಂಸೆಯು ಪ್ರಭಾವಶಾಲಿಯಾದದ್ದೆಂದು ವಿಶ್ವಾಸ ಗೊಂಡಿದ್ದೇನೆ. ಹಲವರಿಗೆ ಅದರಲ್ಲಿ ವಿಶ್ವಾಸವಿಲ್ಲದಿರಬಹುದು. ಆದಕಾರಣ ನಾವು ಸ್ವಾತಂತ್ರ್ಯವನ್ನು ಪಡೆದ ಮೇಲೆ ನಮ್ಮ ನಮ್ಮೊಳಗೆ ಕಾದಾಡುವ ಸಂದರ್ಭವು ಬಂದರೂ ಬರಬಹುದು. ಆದರೆ ನಾವು ಅಹಿಂಸೆಯಿಂದ ಸ್ವಾತಂತ್ರ್ಯವನ್ನು ಗಳಿಸಿಕೊಂಡರೆ ನಮ್ಮ ನಮ್ಮೊಳಗೆ ಜಗಳವೆಂಬುದು ಇರಲಾರದು" ಹೀಗೆಂದರು ಗಾಂಧಿಜಿಯವರು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

Canara Bank Limited

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯುವ್ಯಯದ ಸಾರಾಂಶ ಪಟ್ಟಿ

ಮೂಲಧನ	ರೂ. ಆ. ಪೈ.		ರೂ. ಆ. ಪೈ.
ತೆತ್ತಲ್ಪಟ್ಟ	6,00,000-0-0	ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ	95,489-4-3
ಪೈಡ್ ಅಪ್	3,91,342-0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ರಿಸರ್ವ್ ಫಂಡು	4,50,000-0-0	ಬೆಲೆಬಾಳುವ ಸೆಕ್ಯೂರಿಟಿ	40,97,741-5-6
ಡಿಪೊಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	ಹುಂಡೀ ಪತ್ರ ಮೊದಲಾದುವುಗಳು	10,30,649-2-10
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಠೇವಣಾತಿ	20,64,586-2-0
ವಿವಿಧ	10,51,789-1-7	ವಿವಿಧ	9,82,093-10-4
ಈ ವರ್ಷದ ಲಾಭ	55,003-0-6	ನಗದು	17,99,207-1-8
ಜುಮ್ಲಾ	1,00,69,766-10-2	ಜುಮ್ಲಾ	1,00,69,766-10-2

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

THE

BANK OF MANGALORE LTD.,

MANGALORE.

ESTD. 1931.

Branches:-

Mudabidri & Padubidri.

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly.

Savings Bank deposit 3½% on daily balances.

A kinds of banking business transacted

ಈ ವಾರದ ಕಥೆ:

ಸಾಲ ಸಂದಾಯ

'ತಾಯಿ, ನಾನು ಪರೀಕ್ಷೆಯಲ್ಲಿ ಪಾಸಾದೆ!' ಮಗನ ಮಾತು ಕೇಳಿ ಅವಳು ಹೊರಗೆ ಬಂದು—'ಏನಂದಿ ಮಗು?' ಎಂದಳು

'ಅಮ್ಮಾ, ನಾನು ಪರೀಕ್ಷೆಯಲ್ಲಿ ಪಾಸು!'

ಆ ಮಾತು ಅವಳ ಕಿವಿಯಲ್ಲಿ ಬಿದ್ದುದೇ ತಡ, ಅವಳ ಅಂಗಾಂಗಗಳು ಆನಂದದಿಂದ ಪುಳಕಿತವಾದುವು. 'ನೀನು ದೀರ್ಘಾಯುವಾಗಿ ಮನೆಯ ದೀಪವನ್ನು ಚೆನ್ನಾಗಿ ಬೆಳಗಿಸಪ್ಪ' ಎಂದವಳು ಅವನನ್ನು ಹರಸಿದಳು.

ಬಾಲಕೃಷ್ಣನ ಮನೆ ಮಂಗಳೂರಿನಿಂದ ಎರಡು ಮೈಲು ದೂರ ಒಂದು ಹಳ್ಳಿಯಲ್ಲಿದ್ದಿತು. ಅವನು ತಾಯಿಗೆ ಒಬ್ಬನೇ ಮಗ. ತಂದೆ ಕಚೇರಿಯಲ್ಲಿ ಬರಿಯ ಇಪ್ಪತ್ತು ರೂಪಾಯಿಗಳ ಒಬ್ಬ ಗುಮಾಸ್ತನಾಗಿದ್ದ. ಹತ್ತು ವರ್ಷ ತುಂಬ ಬೇಕಾದರೆ ಅವನು ಬಾಲಕೃಷ್ಣನನ್ನು ತಾಯಿಯ ಆರೈಕೆಗೆ ಬಿಟ್ಟು ತಾನು ಸ್ವರ್ಗವಾಸಿಯಾಗಿದ್ದ.

ತಾಯಿ—ಪಾರ್ವತಿ—ಬಹಳ ಕಷ್ಟದಿಂದ ಮಗು ಬಾಲಕೃಷ್ಣನನ್ನು ಬೆಳೆಸಿ ಬಂದಿದ್ದಳು. ಹುಣ್ಣಿಮೆಯ ಚಂದ್ರನಂಥ ಅವನ ಸುಂದರ ಮುಖಬಿಂಬವನ್ನು ನೋಡಿ ಅವಳು ವೈಧವ್ಯದ ದುಃಖವನ್ನು ಮರೆಯುವ ಪ್ರಯತ್ನ ಮಾಡಿದ್ದಳು. ಬಾಲಕೃಷ್ಣ ಹಳ್ಳಿಯ ಓದನ್ನು ಮುಗಿಸಿ ಮಂಗಳೂರಿನ ಒಂದು ಹಾಯ್‌ಸ್ಕೂಲನ್ನು ಸೇರಿದ. ಓದಿನ ಖರ್ಚನ್ನು ತಾಳಿಕೊಳ್ಳುವುದು ಅವಳ ಪ್ರಾಣಕ್ಕೆ ಬಂದಿತ್ತು, ಆದರೆ ಮಗ ಮೆಟ್ರಿಕನ್ನು ಪ್ರವೇಶಿಸಿದಾಗ ಸರಕಾರವು ಅವನಿಗೊಂದು ವೇತನವನ್ನು ಕೊಟ್ಟುದರಿಂದ ಅವಳ ಹೊರಲಾರದ ಭಾರ ಕಡಿಮೆಯಾಗಿತ್ತು.

ಓದಿನಲ್ಲಿ ಬಾಲಕೃಷ್ಣನನ್ನು ಮೀರಿಸುವ ಮಕ್ಕಳು ಮಂಗಳೂರಿನಲ್ಲಿ ಇದ್ದಿರಲಿಲ್ಲ. ತನ್ನ ಗುಣ ಸ್ವಭಾವಗಳಿಂದ ಅವನು ಮಾಸ್ತರು ಮತ್ತು ಮಕ್ಕಳ ಅಚ್ಚುಮೆಚ್ಚಿನವನಾಗಿದ್ದ. ಅವನ ಉಪಾಧ್ಯಾಯರಾದ ಸುಬ್ಬರಾಯರ ಬಹಳ ಮುದ್ದಿನವನಾಗಿದ್ದ. ಸಿಲೆಕ್ಷನ್ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮೇಲೆ ಮೂರು ದಿನಗಳ ಒಳಗೆ ಪರೀಕ್ಷೆಯ ಹಣವನ್ನು ಕಟ್ಟಬೇಕಾಗಿದ್ದಿತು. ಅದಕ್ಕೇನು ಮಾಡಲಿ? ಎಂದು ಕೇಳುವ ನೆವನದಿಂದ ಅವನು ತಾಯಿಯ ಹತ್ತಿರ ತಾನು ಪಾಸಾದ ಪ್ರಸ್ತಾಪವನ್ನು ಎತ್ತಿದ್ದ. ಅದು ಪಾರ್ವತಿಗೆ ತಿಳಿದಿರಲಿಲ್ಲ. ಮಗನ ವ್ಯಾಕುಲತೆಯೂ ಅವಳಿಗೆ ಗೊತ್ತಾಗಲು, ಅವಳ ಎದೆ ಬಿರಿದುಹೋಯಿತು. ಹನ್ನೆರಡು ರೂಪಾಯಿ ಬೇಕು—ಯಾರು ಕೊಟ್ಟಾರು, ಎಲ್ಲಿಂದ ಬಂದಾವು?

ಪತಿದೇವರು ಸ್ವರ್ಗವಾಸಿಗಳಾಗುವ ಮೊದಲು ಹಿರಿಯರ ಒಂದು ಮನೆ ಅದಿ, ಬೇಂಕಿನವರ ಸ್ವಾಧೀನವಾಗಿದ್ದಿತು. ಇದ್ದ ಚಿನ್ನಾಭರಣಗಳು ಅನಂತರ ಒಂದೊಂದಾಗಿ ಮಾರಿಹೋದುವು. ಪಾರ್ವತಿಯೊಡನೆ ಒಂದು ಕವಡೆ ಕಾಸು ಕೂಡ ಇದ್ದಿರಲಿಲ್ಲ. ಹಣಸಂಪಾದನೆಯ ಉಪಾಯ ಆಲೋಚಿಸಿಯೇ ಮೂರು ದಿನಗಳು ಕಳೆದು ಹೋದುವು. ನಿಶ್ಚಿತ ಸಮಯದೊಳಗೆ ಹಣ ಕಟ್ಟದಿದ್ದಲ್ಲವಾದರೆ, ಆ ವರ್ಷಕ್ಕೆ ಅವನಿಗೆ ಪರೀಕ್ಷೆ ಇಲ್ಲ. ಒಂದು ವರ್ಷದ ಕಠಿನ ಪರಿಶ್ರಮವೆಲ್ಲ, ನೀರಿನಲ್ಲಿ ಹೋಮ ಮಾಡಿದಂತೆ ವ್ಯರ್ಥವಾಗುವುದು. ಅದಕ್ಕೋಸುಗ ಬೇರೆ ಯಾವ ಉಪಾಯವೂ ಹೊಳೆಯದೆ ಇದ್ದಾಗ, ಬಾಲಕೃಷ್ಣ ಮೂರನೆ ದಿನ ಬೆಳಗ್ಗೆ ಸುಬ್ಬರಾಯರ ಮನೆಗೆ ಹೋದ. ಆಗ ಒಂಭತ್ತು ಗಂಟೆಯ ಸಮಯವಾಗಿದ್ದಿತು. ಸುಬ್ಬರಾಯರು ಶಾಲೆಗೆ ಹೊರಡುವ ಸನ್ನಾಹದಲ್ಲಿದ್ದರು. ಚಿಂತಿಸಿ ಬಂದಿರುವ ಬಾಲಕೃಷ್ಣನನ್ನು ನೋಡಿ ಅವರು—'ಏನು ಬಂದಿ ಬಾಳೂ?' ಎಂದು ಪ್ರೇಮದಿಂದ ಕೇಳಿದರು.

'ಸರ್ ಇವತ್ತು ಪರೀಕ್ಷೆಗೆ ಹಣ ಕಟ್ಟುವ ದಿನ. ನನ್ನ ಕೈಯಲ್ಲಿ ಒಂದು ಕಾಸು ಕೂಡ ಇಲ್ಲ. ಇನ್ನು ಎರಡು ದಿನಗಳಲ್ಲಿ ಅದನ್ನು ಕಟ್ಟಿದರಾಗದೆ?' ಎಂದ.

'ಬಾಳೂ ಅದು ಹೇಗಾಗುತ್ತದಪ್ಪ? ಇವತ್ತು ಹಣ ಕಟ್ಟದಿದ್ದರೆ ನೀನು ಬರುವ ವರ್ಷಕ್ಕೆ ಪರೀಕ್ಷೆ ಕೊಡಬೇಕಾಗುವುದು.'

ಸುಬ್ಬರಾಯರ ಆ ಮಾತು ಕೇಳಿ ಬಾಲಕೃಷ್ಣ ಬಿಕ್ಕಿ ಬಿಕ್ಕಿ ಅಳತೊಡಗಿದ. ಜೀವನದ ಅಮೂಲ್ಯವಾದ ಒಂದು ವರ್ಷವು ಹಾಗೆ ವ್ಯರ್ಥವಾಗುವುದು ಅವನಿಗೆ ಪ್ರಾಣಹೋಗುವುದಕ್ಕಿಂತಲೂ ಹೆಚ್ಚಿನದಾಗಿತ್ತು. ಅವನು ಅಳುವ ಸ್ವರ ಕೇಳಿ ಸುಬ್ಬರಾಯರ ಹೆಂಡತಿ ವಿಮಲಮ್ಮನವರು ಒಳಗಿನಿಂದ ಹೊರಗೆ ಬಂದರು. ಎಲ್ಲಾ ಸಮಾಚಾರ ತಿಳಕೊಂಡರು. ಬಾಲಕೃಷ್ಣನ ಅಸಹಾಯತೆಯನ್ನು ನೋಡಿ ಅವರಿಗೆ ಬಹಳ ವ್ಯಸನವಾಯಿತು. ಅವರು ಒಳಗೆ ಹೋಗಿ ಎಲ್ಲಿಂದಲೋ ಹನ್ನೆರಡು ರೂಪಾಯಿಗಳನ್ನು ಬಾಲಕೃಷ್ಣನ ಕೈಯಲ್ಲಿ ತಂದಿಟ್ಟು—'ಬಾಳೂ, ಊಟವಾಗಿದೆಯೇ?' ಎಂದರು.

'ಇಲ್ಲ, ಅಮ್ಮ' ನಿನ್ನೆ ಮಧ್ಯಾಹ್ನದಿಂದ

ವಿಮಲಮ್ಮನ ಕರುಳು ಕತ್ತರಿಸಿದಂತಾಯಿತು. ಅವರು ಬಾಲಕೃಷ್ಣನಿಗೆ ಗಂಜಿಹಾಕಿ ಶಾಲೆಗೆ ಕಳುಹಿಸಿದರು. ಸುಬ್ಬರಾಯರು ಒಳಗೆ ಬಂದು 'ಇವತ್ತು ತಿಂಗಳ ಕೊನೆಯ ದಿನ. ರೂಪಾಯಿ ಎಲ್ಲಿಂದ ಬಂದಿತು?' ಎಂದರು. ವಿಮಲಮ್ಮನವರು—'ನೀವು ಮನೆ ಖರ್ಚಿಗೆ ಕೊಟ್ಟುದರಲ್ಲಿ ಸ್ವಲ್ಪ ಸ್ವಲ್ಪ ಉಳಿಸಿ ಅಷ್ಟು ರೂಪಾಯಿಗಳಾಗಿದ್ದುವು. ಅವನ್ನೇ ಬಾಲಕೃಷ್ಣನಿಗೆ ಕೊಟ್ಟೆ. ನಮ್ಮ ಅಗತ್ಯಕ್ಕಿಂತಲೂ ಅವನ ಅಗತ್ಯ ಹೆಚ್ಚಿನದೆಂದು ತೋರಿತು' ಎಂದು ಹೇಳಿ ಸುಬ್ಬರಾಯರ ಮುಖ ನೋಡಿದರು. ಅವರು ನಸುನಕ್ಕು ಶಾಲೆಗೆ ಹೊರಟುಹೋದರು.

ಆ ವರ್ಷ ಬಾಲಕೃಷ್ಣ, ಪರೀಕ್ಷೆಯಲ್ಲಿ ಸರ್ವಪ್ರಥಮನಾಗಿ ತೇರ್ಗಡೆಯಾದ. ಸರಕಾರವು ಅದನ್ನು ನೋಡಿ, ಅವನಿಗೆ ಇಪ್ಪತ್ತೈದು ರೂಪಾಯಿಗಳ ಛಾತ್ರವೃತ್ತಿಯನ್ನು ಕೊಟ್ಟು ಮದ್ರಾಸಿನ ಪ್ರಸಿಡೆನ್ಸಿ ಕಾಲೇಜಿನಲ್ಲಿ ದಾಖಲು ಮಾಡಿಸಿತು. ತನ್ನ ಒಬ್ಬ ಮಿತ್ರನ ಒಟ್ಟಿಗೆ ಬಾಲಕೃಷ್ಣನ ವ್ಯಾಸಂಗವು ಮುಂದೆ ಅಲ್ಲಿ ನಡೆಯಿತು.

ಎಂಟು ವರ್ಷಗಳು ಕಳೆದುವು. ಸುಬ್ಬರಾಯರು ಆಗಲೂ ಮಂಗಳೂರಲ್ಲಿ ಉಪಾಧ್ಯಾಯರಾಗಿದ್ದರು. ಸಂಬಳ ಸಾರಿಗೆಯಲ್ಲಿ ಏನೂ ಹೆಚ್ಚು ಆಗಿರಲಿಲ್ಲ. ಖರ್ಚು ಮಿತಿಮೀರಿ ಬೆಳೆದಿತ್ತು. ಒಂದು ಎಂದುವರೆ ಸಾವಿರದ ಸಾಲವಾಗಿತ್ತು. ಮಗಳು ರಾಧೆ, ಮದುವೆ ಪ್ರಾಯಕ್ಕೆ ಬೆಳೆದಿದ್ದಳು. ಆದರೆ ವರದಕ್ಷಿಣೆ ಕೊಡಲಾಗದೆ ಮದುವೆ ಪ್ರಸ್ತಾಪ ನಿಂತುಹೋಗಿತ್ತು.

ಆ ದಿನ ಬೆಳಗೆ ಕೋರ್ಟಿನ ಅಮೀನರು ಸುಬ್ಬರಾಯರ ಚಂಬುಚರಿಗೆ ಜಪ್ತಿಮಾಡಲಿಕ್ಕೆ ಬಂದಿದ್ದರು. ಎಲ್ಲಾ ಸಾಮಾನುಗಳನ್ನು ಗಾಡಿಗೆ ಹಾಕುತ್ತಿದ್ದರು. ಮನೆ ಅಂಗಳದಲ್ಲಿ ಬಹಳ ಮಂದಿ ನೆರೆದಿದ್ದರು. ಸುಬ್ಬರಾಯರು ತಮ್ಮ ಎರಡು ಕೈಗಳನ್ನು ಜಗಲಿ ಮಂಡಿಗೆ ಊರಿಕೊಂಡು ಆಕಾಶವನ್ನು ನೋಡುತ್ತ ಇದ್ದರು. ವಿಮಲಮ್ಮ ಮತ್ತು ರಾಧೆ ಚಾವಡಿಯ ಒಂದು ಮೂಲೆಯಲ್ಲಿ ಕೂತು ಸೆರಗಿನಿಂದ ಕಣ್ಣುಗಳನ್ನು ಒರಸಿಕೊಳ್ಳುತ್ತಿದ್ದರು.

ಅಷ್ಟರಲ್ಲಿ ಒಂದು ಮೋಟರುಗಾಡಿ ವಾಯುಗತಿಯಿಂದ ಬಂದು ಅವರ ಮನೆ ಮುಂದೆ ನಿಂತಿತು. ಯಾರಿಗೂ ಆ ಯುವಕನ ಪರಿಚಯವಾಗಲಿಲ್ಲ. ಅವನು ತೇಜಸ್ವಿಯಾದ ನವಯುವಕ, ಯಾವದೋ ದೊಡ್ಡ ಸರಕಾರಿ ಹುದ್ದೆಯಲ್ಲಿ ಇದ್ದವನಂತೆ ತೋರುತ್ತಿದ್ದ. 'ಸಾಲದ ಹಣ ಎಷ್ಟು?' ಎಂದು ಅವನು ಕೋರ್ಟಿನ ಅಮೀನರನ್ನು ಕೇಳಿದ. 'ಸ್ವಾಮೀ, ಒಂದು ಸಾವಿರದ ಎಂಟುನೂರು ರೂಪಾಯಿ!' ಅದನ್ನು ಕೇಳಿ ಅವನು ಅಮೀನರಿಗೆ ಎಲ್ಲಾ ಹಣ ಕೊಟ್ಟನು. ಅಮೀನರು ಜಪ್ತಿ ಮಾಡಿದ ಸಾಮಾನುಗಳನ್ನು ಅಲ್ಲೇ ಬಿಟ್ಟು ತಮ್ಮ ದಾರಿಹಿಡಿದರು.

ಸುಬ್ಬರಾಯರು ಯುವಕನನ್ನು—'ಯಾರಿಂದ ಬಹುದು?' ಎಂದು ಮನಸ್ಸಿನೊಳಗೆಯೇ ಪ್ರಶ್ನಿಸುತ್ತ ಅವನನ್ನು ನಿಟ್ಟದೃಷ್ಟಿಯಿಂದ ನೋಡುತ್ತ ಇದ್ದರು. ಯುವಕನು ಮುಂದೆ ಬಂದು, ನಮಸ್ಕಾರ ಮಾಡಿ—'ಸರ್! ಪರಿಚಯವಾಗಲಿಲ್ಲವೆ? ನಾನು ನಿಮ್ಮ ಬಾಳೂ!' ಎಂದ. ವಿಮಲಮ್ಮನವರಿಗೆ ಮೇರೆ ಮೀರಿದ ಸಂತೋಷವಾಯಿತು. ಸುಬ್ಬರಾಯರು ಭಾವೋದ್ರೇಕದಿಂದ ಬಾಲಕೃಷ್ಣನನ್ನು ಅಪ್ಪಿಕೊಂಡು ತಲೆಯನ್ನು ಮುದ್ದಿಟ್ಟರು. ಇಬ್ಬರ ಕಣ್ಣುಗಳಿಂದಲೂ ಆನಂದಭಾಷ್ಪವು ಗಂಗಾಪ್ರವಾಹವಾಗಿ ಹರಿಯಿತು. ವಿಮಲಮ್ಮನವರು ಕೇಳಿದರು—"ಬಾಳೂ' ಮನೆಯಲ್ಲಿ ಎಲ್ಲರೂ ಕ್ಷೇಮವೆ? ತಾಯಿ ಹೇಗಿದ್ದಾಳೆ?"

'ಅಮ್ಮಾ' ಹಾಂ, ಎಲ್ಲರೂ ಕ್ಷೇಮ ಸುಖವಾಗಿದ್ದಾರೆ. ತಾಯಿ ಆಗಾಗ ನಿಮ್ಮ ಉಪಕಾರವನ್ನು ಸ್ಮರಿಸುತ್ತಿದ್ದಾಳೆ. ಮೊನ್ನೆ ಒಬ್ಬ ಮಿತ್ರನ ಭೇಟಿಯಾಯಿತು. ನಿಮ್ಮ ದುರ್ದೆಸೆಯ ಸಂಗತಿಯನ್ನೂ ಕೇಳಿ ನನಗೆ ಬಹಳ ದುಃಖ ಬಂತು. ನಾನು ತಾಯಿಗೆ ತಿಳಿಸಿ ಕೂಡಲೇ ಇಲ್ಲಿಗೆ ಹೊರಟುಬಂದೆ. ಅಮ್ಮಾ, ನಾನೀಗ ಅನಂತಪುರದಲ್ಲಿ ಕಲೆಕ್ಟರು. ನನ್ನ ಈ ಉನ್ನತಸ್ಥಿತಿಗೆ ನೀವು ಕಾರಣರು. ಆ ದಿನ ಪರೀಕ್ಷೆಯ ಹಣವನ್ನು ಕೊಟ್ಟು ಮುಳುಗುತ್ತಿದ್ದ ನನ್ನ ಜೀವನನೌಕೆಯನ್ನು ನೀವು ಎತ್ತಿ ಹಿಡಿಯದಿದ್ದಲ್ಲವಾದರೆ ಇವತ್ತು ನಾನು ಏನಾಗುತ್ತಿದ್ದೆನೋ, ತಾಯಿಯ ಸ್ಥಿತಿ ಏನಾಗುತ್ತಿದ್ದಿತ್ತೋ? ತಾಯಿ! ನನ್ನ ಒಂದು ಮಾತಿದೆ. ನೀವು ಅದಕ್ಕೆ ಒಪ್ಪಬೇಕು. ಇನ್ನು ನಿಮಗೆ ಉಪಾಧ್ಯಾಯ ವೃತ್ತಿ ಬೇಡ. ನನ್ನ ಮನೆಯ ಮನೇಜರಾಗಿ ಇದ್ದುಬಿಡಿ. ತಿಂಗಳಿಗೆ ಇನ್ನೂರು ರೂಪಾಯಿ ಸಂಭಾವನೆ ಕೊಡುತ್ತೇನೆ. ನೀವೆಲ್ಲ ಅನಂತಪುರಕ್ಕೆ ನಡೆಯಿರಿ.

ಮರುದಿನ ಸುಬ್ಬರಾಯರು ವಿಮಲಮ್ಮ ರಾಧೆ ಎಲ್ಲ ಜನರು ಅನಂತಪುರಕ್ಕೆ ಹೊರಟುಹೋದರು. ಕೆಲವು ದಿನಗಳಲ್ಲಿ ಅನಂತಪುರ ಜಿಲ್ಲಾ ಕಲೆಕ್ಟರ ಶ್ರೀ ಬಾಲಕೃಷ್ಣ ರಾವ್ ಐ. ಸಿ. ಯಸ್ ಇವರೊಂದಿಗೆ ಶ್ರೀ ಸುಬ್ಬರಾಯರ ಸುಪುತ್ರಿ ಶ್ರೀಮತಿ ರಾಧಾ ಕುಮಾರಿಯ ವಿವಾಹವಾಯಿತೆಂದೂ ಪತ್ರಿಕೆಗಳಲ್ಲಿ ಓದಿದೆವು.

(ಹಿಂದಿಯಿಂದ)

PHYSICAL FITNESS

is the first essential in games and in every social activity.

You need not worry hereafter for your impaired vitality, premature old age and nervous break-down if you try—

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ,—ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು:— (ಬ್ರಾಂಚ್: ಕುಮಟ, ಉತ್ತರ ಕನ್ನಡ.)
ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು.

ಯುದ್ಧಭಯದಿಂದ ನಡುಗುವ ರಾಷ್ಟ್ರಗಳು!

ಸ್ಕೇಂಡಿನೇವಿಯದಲ್ಲಿ ಗೊಂದಲ

ಬಾಲ್ಕನ್ ರಾಷ್ಟ್ರಗಳಲ್ಲಿ ಕಳವಳ!

ಹಿಟ್ಲರ ವಿರೋಧಿಯಾಗಿ ಈಗ ಫ್ರಾನ್ಸಿನಲ್ಲಿ ಕಾಲ ಕಳೆಯುತ್ತಿರುವ ಥಿಸ್ಸೆನ್ ನೆಂಬ ಒಬ್ಬ ರಾಜಕಾರಣ ಧುರೀಣ ಯುರೋಪಿನಲ್ಲಿ ಈಗೀಗ ನಡೆಯುತ್ತಿರುವ ಘಟನೆಗಳನ್ನು ಪರಾಮರ್ಶಿಸುತ್ತ, ಸ್ಕಾಂಡಿನೇವಿಯ ರಾಷ್ಟ್ರಗಳನ್ನು ಮುತ್ತುವ ಆಲೋಚನೆಯನ್ನು ಹಿಟ್ಲರನು ಬಹುಕಾಲದ ಮೊದಲೇ ಮಾಡಿದ್ದನೆಂದೂ ಯುರೋಪಿನ ಮಹಾ ಯುದ್ಧದಲ್ಲಿ ನಾರ್ವೆಯ ಸಮುದ್ರದಂಡೆ ಅತ್ಯಂತ ಅಗತ್ಯವಾಗಿತ್ತೆಂದೂ ಆದ್ದರಿಂದಲೇ ಪೋಲೆಂಡಿನ ಆಕ್ರಮಣವನ್ನು ಸ್ವಲ್ಪ ಸಮಯಕ್ಕೆ ಮುಂದರಿಸಿಟ್ಟು ಅವನೀಗ ನಾರ್ವೆಯನ್ನು ಮುತ್ತಿದನೆಂದೂ ಒಬ್ಬ ಪತ್ರಿಕಾ ಪ್ರತಿನಿಧಿಯೊಂದಿಗೆ ಹೇಳಿದ್ದಾನೆ.

ಸ್ವೀಡನನ್ನು ಯಾಕೆ ಮುತ್ತಲಿಲ್ಲ

ಡೆನ್ಮಾರ್ಕ ಮತ್ತು ನಾರ್ವೆಯನ್ನು ಮುತ್ತಿದ ಹಾಗೆ ನಾರ್ವೆಗೆ ಒತ್ತಿರುವ ಸ್ವೀಡನನ್ನು ಹಿಟ್ಲರ ಯಾಕೆ ಮುತ್ತಲಿಲ್ಲವೆಂಬುದಕ್ಕೆ ಥಿಸ್ಸೆನನು ಒಂದು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾನೆ. ನಾರ್ವೆಗಿಂತ ಸ್ವೀಡನಿನ ಸೇನೆಯು ಹೆಚ್ಚು ದೊಡ್ಡದೂ ಬಲಿಷ್ಠವೂ ಆಗಿರುವುದು. ಹಿಟ್ಲರನು ಅದರ ಮೇಲೆ ಈಗ ಕೈಹಾಕದಿರುವ ಮೊದಲನೆ ಕಾರಣವಾಗಿದೆ ಎಂದು ಊಹಿಸಲಾಗುತ್ತದೆ. ಮಾತ್ರವಲ್ಲ, ಉತ್ತರ ಸಮುದ್ರದಲ್ಲಿ ಮಿತ್ರರಾಷ್ಟ್ರಗಳು ಹಾಕಿದ್ದ ವ್ಯವಹಾರ ದಿಗ್ಬಂಧನವನ್ನು ಮುರಿಯಲಿಕ್ಕೆ ನಾರ್ವೆ ಮತ್ತು ಡೆನ್ಮಾರ್ಕುಗಳನ್ನು ಮುತ್ತಿ ಅವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವುದು ಅತ್ಯಂತ ಅವಶ್ಯವಾಗಿತ್ತು. ಈಗ ನಾರ್ವೆ ಹಿಟ್ಲರನ ಅಧೀನವಾಯಿತೆಂದರೆ ಮತ್ತೆ ಅವನು ಸ್ವೀಡನನ್ನು ಮುತ್ತದೆ ಸರ್ವಥಾ ಇರುವದಿಲ್ಲ. ಅವನೀಗ ರಸ್ಯದ ಬೆಂಬಲ ನಿರೀಕ್ಷೆಯಲ್ಲಿದ್ದಾನೆ. ಫಿನ್ಲಾಂಡನ್ನು ರಸ್ಯವು ಜೆಕೊಸ್ಲೊವೇಕಿಯವನ್ನು ಜರ್ಮನಿಯು ನುಂಗಿಕೊಂಡು ಪೋಲೆಂಡನ್ನು ಎರಡೂ ರಾಷ್ಟ್ರಗಳು ಹಂಚಿಕೊಂಡ ಹಾಗೆ ನಾರ್ವೆಯನ್ನು ಜರ್ಮನಿಗೆ ಕೊಟ್ಟು ಸ್ವೀಡನನ್ನು ಎರಡೂ ದೇಶಗಳು ಹಂಚಿಕೊಳ್ಳುವ ಹಾಗೆ ಜರ್ಮನಿ-ರಸ್ಯಗಳೊಳಗೆ ಗುಪ್ತ ಒಡಂಬಡಿಕೆಯಾಗಿರುವುದೆಂದು ತೋರುತ್ತದೆ. ರಸ್ಯವು ಜರ್ಮನಿಗೆ ಸಹಾಯ ಮಾಡಲಿಕ್ಕೆ ಸಿದ್ಧನಾದೊಡನೆಯೇ ಜರ್ಮನಿಯ ಸೇನೆಯು ಸ್ವೀಡನನ್ನು ನುಗ್ಗುವದು. ಆಗ್ಗೆ ಒಂದು ಕಡೆಯಿಂದ ನಾರ್ವೆಯಲ್ಲಿದ್ದ ಜರ್ಮನ ಸೇನೆಯು ಇನ್ನೊಂದು ಕಡೆಯಿಂದ ಫಿನ್ಲೆಂಡಿನಲ್ಲಿದ್ದ ರಶ್ಯದ ಸೇನೆಯೂ ಜರ್ಮನಿಗೆ ಸಹಾಯ ಮಾಡುವದು. ಆಗ ಮತ್ತೊಂದು ಸ್ವತಂತ್ರ ರಾಷ್ಟ್ರವು ಹಿಟ್ಲರ-ಸ್ಟಾಲೀನರ ದವಡೆಗಳೊಳಗೆ ಸಿಲುಕಿ ನುಚ್ಚುನೂರಾಗುವದು.

ಗುಪ್ತ ಒಡಂಬಡಿಕೆಯ ಫಲ.

ಜರ್ಮನಿಯು ನಾರ್ವೆ ಮುತ್ತಿಗೆಯನ್ನು ಇಟಲಿ ರಸ್ಯಗಳು ಸಹಾನುಭೂತಿಯಿಂದ ನೋಡಿರುವುದನ್ನು ತಿಳಿದರೆ, ಈ ರಾಷ್ಟ್ರಗಳೊಳಗೆ ಯೂರೋಪನ್ನು ತಮೊಳಗೆ ಹಂಚಿಕೊಳ್ಳುವ ಒಂದು ಗುಪ್ತ ಒಡಂಬಡಿಕೆಯಾಗಿರುವದು ನಿಜವೆಂಬ ಹಾಗೆ ಗೊತ್ತಾಗುವದೆಂದು ಮಡಾಮ್ ಟಾಬೊಯಿಯವರು ಬರೆದಿದ್ದಾರೆ. ಈ ಒಡಂಬಡಿಕೆಯ ಪ್ರಕಾರ ನಾರ್ವೆ ಜರ್ಮನಿಯ ಅಧಿಕಾರಕ್ಕೂ ಸ್ವೀಡನ್ ರಸ್ಯದ ಅಧಿಕಾರಕ್ಕೂ ಒಳಪಡುವದು. ಆದ್ದರಿಂದಲೇ ಜರ್ಮನಿ ನಾರ್ವೆಯನ್ನು ನುಗ್ಗಿದೆ. ಫಿನ್ಲಾಂಡಿನ ಯುದ್ಧದಲ್ಲಿ ಮಿತ್ರರಾಷ್ಟ್ರಗಳ ಸಹಾಯವು ಸ್ಕಾಂಡಿನೇವಿಯದ ಮೂಲಕ ಬಾರದ ಹಾಗೆ ಅದು ತಟಸ್ಥವಾಗಿರಬೇಕೆಂದು ಹಿಟ್ಲರ ಒತ್ತಾಯಮಾಡಿ ರಸ್ಯಕ್ಕೆ ಉಪಕಾರ ಮಾಡಿದ. ಅದೇ ರೀತಿ ನಾರ್ವೆಯ ಯುದ್ಧದಲ್ಲಿ ಸ್ವೀಡನು ತಟಸ್ಥವಾಗಿರಬೇಕೆಂದು ಸ್ಟಾಲೀನ ಒತ್ತಾಯಮಾಡಿ ಜರ್ಮನಿಗೆ ಉಪಕಾರವಮಾಡುವನು. ಹೇಗಿದ್ದರೂ ಸ್ವೀಡನಿಗೆ ಯುದ್ಧದ ಭಯವು ತಪ್ಪಿಲ್ಲ. ರಸ್ಯವು ಸ್ವೀಡನಿನ ಮೇಲೆ ಯುದ್ಧಕ್ಕೆ ಹೋಗುವದೊ ಹೋಗದಿರುವದೊ, ಸ್ವೀಡನು ನಾರ್ವೆಗೆ ಸಹಾಯ ಕೊಡುವ ಅಥವಾ ಕೊಡದಿರುವದರ ಮೇಲೆ ಹೊಂದಿದೆ.

ಯೂರೋಪನ್ನು ಹಂಚಿಕೊಳ್ಳುವ ಗುಪ್ತ ಹಂಚಿಕೆ.

ರಸ್ಯ ಜರ್ಮನಿಗಳು ಈಗ ಸಿಕ್ಕಿದಷ್ಟನ್ನು ಮುಕ್ಕಿಕೊಂಡು ತೃಪ್ತವಾಗಲಾರವು. ಯೂರೋಪಿನ ಸಣ್ಣ ದೊಡ್ಡ ಎಲ್ಲಾ ರಾಷ್ಟ್ರಗಳನ್ನು ಜರ್ಮನಿ ಇಟಲಿ ಮತ್ತು ರಸ್ಯ ಈ ಮೂರು ರಾಷ್ಟ್ರಗಳು ತಮ್ಮೊಳಗೆ ಹಂಚಿಕೊಳ್ಳುವ ಉದ್ದೇಶ ಮತ್ತು ಪ್ರಯತ್ನಗಳನ್ನು ಇಟ್ಟುಕೊಂಡಿರುವವೆಂದು ಫ್ರೆಂಚ ಮತ್ತು ತುರ್ಕಿ ಪತ್ರಿಕೆಗಳು ಎಚ್ಚರಿಕೆಯನ್ನು ಕೊಟ್ಟಿವೆ. ಆದ್ದರಿಂದ ಈಗ ಯೂರೋಪಿನ ಯುದ್ಧದಲ್ಲಿ ಯಾವ ರಾಷ್ಟ್ರವೂ ತಟಸ್ಥವಾಗಿರುವದರಿಂದ ಫಲವಿಲ್ಲ. ತತ್ಕಾಲಕ್ಕೆ ಅವು ಈ ಮೂರು ರಾಷ್ಟ್ರಗಳ ಆಕ್ರಮಣದಿಂದ ಬದುಕಿ ಉಳಿದರೂ, ಮೂರು ರಾಷ್ಟ್ರಗಳ ಸಂಘವೇ ಮೇಲಾಗುತ್ತಿದ್ದಾಗ, ಒಂದಲ್ಲಾ ಒಂದು ದಿನ ಆ ರಾಷ್ಟ್ರಗಳ ಸ್ವಾತಂತ್ರ್ಯ ಅಪಹರವಾಗುವದು ಖಂಡಿತ. ಆದ್ದರಿಂದ ಜರ್ಮನಿ ಇಟಲಿ ರಸ್ಯಗಳ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಮುರಿಯುವ ಮಿತ್ರ ರಾಷ್ಟ್ರಗಳಿಗೆ ತಟಸ್ಥ ರಾಷ್ಟ್ರಗಳು ಈಗಿನಿಂದಲೇ ಬೆಂಬಲವಾಗಿದ್ದು ಸಹಾಯಕೊಡಬೇಕೆಂದು ಆ ಪತ್ರಿಕೆಗಳು ಹೇಳಿವೆ. ಸದ್ಯದಲ್ಲಿಯೇ ಹೊಲೆಂಡ, ಬೆಲ್ಜಿಯಂ ಮತ್ತು ಸ್ವಿಜರ್ಲಾಂಡುಗಳು ಹಿಟ್ಲರನಿಗೂ, ಬಾಲ್ಕನ ರಾಷ್ಟ್ರಗಳು ಸ್ಟಾಲೀನ ಮುಸಲೋನಿಗೂ ಗ್ರಾಸವಾಗಲಿವೆ. ಆದ್ದರಿಂದ ಯೂರೋಪದಲ್ಲೆಲ್ಲಾ ಕಳವಳವೂ ತಳಮಳವೂ ಉಂಟಾಗಿದೆ.

DIAMONDS! DIAMONDS!
BEST BRILLIANCY!

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿಗಳು

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಇಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ ಶೆಟ್, ಜುವೆಲ್ಲರ್,

HALFTONE & LINE
BLOCK MAKING
UNDERTAKEN
Sharada Press,
MANGALORE

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/-&5,000/-
are now issued at all our Branches.

For particulars call at or write to
Any of our nearest Branches

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಬಳಜ್ವರ ಮತ್ತು ಕೆಮ್ಮು ಇಲ್ಲದಂತೆ ಹಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ



ಜಿಲ್ಲಾ ಸಮಾಚಾರ



ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾ ಜಟ್ಟಿಗಳ ಪಂದ್ಯಾಟ:—ದಕ್ಷಿಣ ಕನ್ನಡಾ ಜಿಲ್ಲಾ ಜಟ್ಟಿಗಳ ಪಂದ್ಯಾಟವನ್ನು ಬರುವ ಮೇ ತಿಂಗಳಲ್ಲಿ ಮಂಗಳೂರಿನಲ್ಲಿ ಜರಗಿಸುವ ನಿಮಿತ್ತ ಕಳೆದ ತಾ ೧೪ರಲ್ಲಿ ಕೆಲ ಮಹನೀಯರು, ಶ್ರೀ. ನೆಲ್ಲಿಕಾಯಿ ವೆಂಕಟ್ರಾಯರ "ಮನೋಹರ ವಿಲಾಸ"ದಲ್ಲಿ ಸೇರಿ ಶ್ರೀ. ನೆಲ್ಲಿಕಾಯಿ ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದರು.

'ಶ್ರೀ'ಯವರ ಪ್ರವಾಸ:—ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊಫೆಸರ್ ಬಿ. ಎಂ. ಶ್ರೀಕಂಠಯ್ಯನವರು ಮೇ ತಿಂಗಳಲ್ಲಿ ದ. ಕ. ಜಿಲ್ಲೆಯಲ್ಲಿ ಪ್ರವಾಸ ಮಾಡುವರು. ತಾ. ೧-೨ ಮೂಡಬಿದರೆ (ವಸಂತೋತ್ಸ); ೩-೭ ಮಂಗಳೂರು, ಕೊಡಗು ಪ್ರಾಂತಗಳಲ್ಲಿ ಸಂಚಾರ ೯ ಮೈಸೂರು.

ಸ್ವಾಸ್ಥ್ಯಸಂಘದ ಏಳನೆಯ ವ್ಯಾಯಾಮ ಶಿಕ್ಷಣ ಶಿಬಿರ:—ಈ ಮೊದಲು ಪ್ರಕಟಿಸಿದಂತೆ ಮೇಲಿನ ಸಂಸ್ಥೆಯ ವ್ಯಾಯಾಮ ಶಿಕ್ಷಣ ಶಿಬಿರಗಳು ಇದೇ ತಿಂಗಳ ೧೫ ಮತ್ತು ೨೦ಕ್ಕೆ ಪ್ರಾರಂಭವಾಗುವದು ಇದ್ದಿತ್ತಾದರೂ ಹಲವು ಅಧ್ಯಾಪಕರುಗಳ ಮೇರೆಗೂ ಮತ್ತು ಹಲವು ಶಾಲೆಗಳ ರಜೆಯು ಮೇಲೆ ಪ್ರಕಟಿಸಿದ ತಾರೀಕಿಗೆ ಸಿಕ್ಕದಿರುವುದರಿಂದಲೂ, ಮೇಲಿನ ಎರಡೂ ವ್ಯಾಯಾಮ ಶಿಬಿರಗಳನ್ನು ಇದೇ ಬರುವ ಮೇ ಒಂದನೇ ತಾರೀಕಿಗೆ ಪ್ರಾರಂಭಿಸಲು ನಿಶ್ಚಯಿಸಲಾಗಿತ್ತಾರೆ.

ಈ ಮೊದಲು ಪ್ರಕಟಿಸಿದಂತೆ ಸ್ತ್ರೀ ಅಧ್ಯಾಪಕಿಯರ ಶಿಬಿರವು ಮಹಿಳಾ ಸೇವಾಶ್ರಮದಲ್ಲಿಯೂ, ಅಧ್ಯಾಪಕರುಗಳ ಶಿಬಿರವು ಗಣಪತಿ ಹ್ಯಾಸ್ಕೂಲಿನಲ್ಲಿಯೂ ನಡೆಸಲ್ಪಡುವುದು.

ಪ್ರವೇಶ ಅರ್ಜಿಗಳನ್ನು ಆರ್ಗನೈಝರ್ "ಸ್ವಾಸ್ಥ್ಯಸಂಘ" ಮಂಗಳೂರು, ಇವರಿಗೆ ಕಳುಹಿಸತಕ್ಕದ್ದು.

ಭಜನಾ ಮಂಡಳಿ:—ಶ್ರೀ, ಸೀರೇಶ್ವಾಲ್ಯ ಅಯ್ಯರ್ ಭಜನಾ ಮಂಡಳಿಯ ಆದಿ, ದ್ವಿತೀಯ ವಾರ್ಷಿಕೋತ್ಸವವು ಕಳೆದ ತಾ. ೧೪ನೇ ಆದಿತ್ಯವಾರ ಸಾಯಂಕಾಲ ಸೀರೇಶ್ವಾಲ್ಯ ಮುನಿಸಿಪಲ್ ಹುಡುಗರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ರಾಮಕೃಷ್ಣ ಕಾರಂತ, ಬಿ. ಎ. ಬೆಲ್. ಎಲ್. ಬಿ. ಮತ್ತು ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಕೊಂಡಿತು. ಅಧ್ಯಕ್ಷರು ಭಜನಾಮಂಡಳಿಯ ಏಳಿಗೆಯ ಕುರಿತು ಪೂರ್ಣ ಸಹಕಾರವನ್ನು ಕೊಟ್ಟಿರುವರು. ಈ ಸಂದರ್ಭದಲ್ಲಿ ಶ್ರೀಯುತರುಗಳಾದ ಕೆ. ವೈ. ಪೂಜಾರಿ, ಬಿ. ಎ. ಬಿ. ಎಲ್, ರವರೂ, ದೇಶಭಕ್ತ. ಎಸ್. ಎಸ್. ಕಿಲ್ಲೆಯವರೂ, ಭಜನೆ ಮಾಡುವ ಪ್ರಯೋಜನ ಸಮಾಜ ಸೇವೆಯನ್ನು ಹೇಗೆ ಕೈಕೊಳ್ಳಬಹುದು ಎಂಬಿತ್ಯಾದಿ ಬೋಧಪ್ರದವಾದ ಭಾಷಣವನ್ನೂ ಇತರ ಸಭಿಕ ಮಹಾಶಯರು ಭಜನಾಮಂಡಳಿಯ ಶ್ರೇಯಸ್ಸನ್ನು ಬಯಸಿ ಸಂದರ್ಭೋಚಿತ ಭಾಷಣಗಳನ್ನು ಕೊಟ್ಟಿರುವರು. ಶ್ರೀ ಪದ್ಮಪ್ಪ ಶಾಲಿವಾನ ಇವರ ಶಿಷ್ಯವರ್ಗದವರು ಮತ್ತು ಬಿ. ಗೋವಿಂದನವರ ಮಧುರ ಗಾಯನವು ಸಭಿಕರನ್ನು ಆಹ್ಲಾದಗೊಳಿಸಿತ್ತು. ಕೊನೆಗೆ ಮಂಡಳಿಯ ಅಧ್ಯಕ್ಷರು, ಉಪಕಾರ ಸ್ಮರಣಾರ್ಥ ವಚನದೊಂದಿಗೆ ಸಭಾಂತ್ಯಗೊಳಿಸಿದರು. ಎಂದು ಭಜನಾಮಂಡಳಿಯ ಜತೆ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಪಾಣೆಮಂಗಳೂರು:—ಇಲ್ಲಿ, ಇದೇ ಬರುವ ಎಪ್ರಿಲ್ ತಾ. ೩೦ರೊಳಗೆ ಸ್ವಯಂಸೇವಕ ತರಬೇತಿ ಶಿಬಿರವು ಪ್ರಾರಂಭಿಸಲ್ಪಡುವುದು. ಸೇರಲಿಚ್ಛಿಸುವವರು ಈ ಕೆಳಗಿನ ವಿಲಾಸಕ್ಕೆ ಪತ್ರವ್ಯವಹಾರ ನಡಿಸಬಹುದು. ತರಬೇತಿ ಸಮಯ ಸ್ವಯಂಸೇವಕರಿಗೆ ಊಟ ಮತ್ತು ವಸತಿಯ ಏರ್ಪಾಡು ಶಿಬಿರದವರ ಕಡೆಯಿಂದ ಧಾರಾಳ ಆಗುವುದು. ಸೇರಲಿಚ್ಛಿಸುವವರು ಈ ಕೆಳಗಿನ ಶರ್ತಗಳ ಪ್ರಕಾರ ನಡಿಯಲು ಸಿದ್ಧರಿರತಕ್ಕದ್ದು. (೧) ಸತತ ಖಾದಿಧಾರಿಯಿರತಕ್ಕದ್ದು. (೨) ಓದು ಬರಹ ಬಲ್ಲವನಾಗಿರತಕ್ಕದ್ದು (೩) ಅಖಿಲ ಭಾರತ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಂದ ಪ್ರಕಟಿಸಲ್ಪಡುವ ಎಲ್ಲಾ ಅನುಜ್ಞೆಗಳನ್ನು ಅಕ್ಷರಶಃ ಪಾಲಿಸತಕ್ಕದ್ದು. ಸ್ವಯಂಸೇವಕರಾಗಿ ಬರುವವರು—ಆಯಾ ಸರ್ಕಲುಗಳಿಂದ ಜಿಲ್ಲಾ ಕೊಂಗ್ರೆಸ್ ಕಮಿಟಿಗೆ ಆರಿಸಲ್ಪಟ್ಟ ಮೆಂಬರರಿಂದ ಸರ್ಟಿಫಿಕೇಟು ಪಡೆಯತಕ್ಕದ್ದು. ಶಿಬಿರದ ಪ್ರಾರಂಭದ ತಾರೀಕನ್ನು ಹಿಂದಿನಿಂದ ತಿಳಿಸುತ್ತಾರೆ ಎಂದು ಕಾರ್ಯದರ್ಶಿ ಸ್ವಯಂಸೇವಕ ತರಬೇತಿ ಶಿಬಿರ ಪಾಣೆಮಂಗಳೂರು ಇವರು ತಿಳಿಸುತ್ತಾರೆ.

ಪುತ್ತೂರು

ಗ್ರಾಮ ಉದ್ಯೋಗಸ್ಥರ ಸಂಘ ಈ ಸಂಘದ ಒಂದು ಆಡಳಿತ ಸಭೆಯು ಇದೇ ತಿಂಗಳ ತಾರೀಕು ೨೮ನೇ ರವಿವಾರ ಅಪರಾಹ್ನ ಘ. ೨ಕ್ಕೆ ಸರಿಯಾಗಿ ಬೆಳ್ಳಾರೆಯಲ್ಲಿ ಜರಗಲಿದೆ. ಎಲ್ಲಾ ಮೆಂಬರರು ತಪ್ಪದೆ ಹಾಜರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ-ಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಧರ್ಮಸ್ಥಳ:—"ನಮ್ಮಗಳ ಧರ್ಮರಕ್ಷಣೆಗೆ ಅನುಕೂಲವಾದ ಇಂಗ್ಲಿಷ್ ಸರಕಾರ ಶ್ರೇಯಸ್ಸನ್ನು ಬಯಸಿ ದೇವಸ್ಥಾನಗಳಲ್ಲಿಯೂ ಬಸ್ತಿಗಳಲ್ಲಿಯೂ ಮತ್ತು ಇನ್ನಿತರ ದೇವಮಂದಿರಗಳಲ್ಲಿಯೂ ದೇವರ ಪೂಜೋತ್ಸವಗಳ ಮೂಲಕ ದೇವರನ್ನು ಭಕ್ತಿಯಿಂದ ಪ್ರಾರ್ಥಿಸುವುದು ಅಗತ್ಯವಾಗಿದೆ. ನಮ್ಮ ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿಯೂ ಶ್ರೀ ಚಂದ್ರನಾಥ ಸ್ವಾಮಿಯ ಸನ್ನಿಧಿಯಲ್ಲಿಯೂ ಅಭಿಷೇಕ ಪೂಜೋತ್ಸವಗಳನ್ನು ಇದೇ ಬರುವ ಮೇ ತಿಂಗಳ ತಾ. ೧ನೇ ಬುಧವಾರ ದಿವಸ ಮಾಡಿಸಿ ಮಿತ್ರ ಪಕ್ಷದವರ ಮುಖ್ಯವಾಗಿ ಬ್ರಿಟಿಶರ ಜಯಪ್ರಾಪ್ತಿಗೋಸ್ಕರ ದೇವರಲ್ಲಿ ಪ್ರಾರ್ಥನೆ ಮಾಡುವುದಾಗಿ ನಿರ್ಣಯಿಸಿಯದೆ. ಈ ಸಮಯ ಊರು ಪರಊರಿನವರು ಸಹಕರಿಸಬೇಕಾಗಿ ಅಪೇಕ್ಷೆ. ಹೀಗೇನೆ ಪ್ರತಿ ತಿಂಗಳ ೧ನೇ ತಾರೀಕಿನಲ್ಲಿ ಅಥವಾ ಆಗಾಗ್ಗೆ ಇಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆಯೂ ಪ್ರಾರ್ಥನೆಯೂ ಯುದ್ಧಾಂತ್ಯದ ವರೆಗೆ ನಡೆಸಲ್ಪಡುವುದು." ಎಂದು ಧರ್ಮಸ್ಥಳದ ಶ್ರೀ. ಡಿ. ಮಂಜಯ್ಯ ಹೆಗ್ಗಡೆಯವರು ಬರೆಯುತ್ತಾರೆ.

ಉಡುಪಿ

ಪಂಚ ಭಾಷಾ ಪ್ರಚಾರ ಸಮಿತಿ ಸ್ಥಾಪನೆ:—ಇದೇ ತಾ. ೧೨ರಲ್ಲಿ ಶ್ರೀ ಪೇಜಾವರ ಮಠದ ವಿಶ್ವಜ್ಞ ಭವನದಲ್ಲಿ ಕೂಡಿದ ಸಭೆಯಲ್ಲಿ ಇಂಗ್ಲಿಷ್, ಕನ್ನಡ, ಸಂಸ್ಕೃತ, ಹಿಂದಿ ಮತ್ತು ತುಳು ಭಾಷೆಗಳ ಪ್ರಚಾರಕ್ಕಾಗಿ ಪಂಚಭಾಷಾ ಪ್ರಚಾರ ಸಮಿತಿಯೊಂದು ಸ್ಥಾಪಿಸಲಾಯಿತು.

ಕಲ್ಯಾಣಪುರದಲ್ಲಿ ಮಂಗಳೂರು ಬಿಶೋಪರು ಎಕಡಮಿ ಹಾಲನ್ನು ತೆರೆದರು:—ರೈಟ್ ರೆವರೆಂಡ್ ಡಾ. ವಿ. ಆರ್. ಫೆರ್ನಾಂಡಿಸ್ ರವರು (ಮಂಗಳೂರು ಬಿಶೋಪರವರು) ಇದೇ ತಾ. ೧೪ರಲ್ಲಿ ಸಂಜೆ ಕಲ್ಯಾಣಪುರ ಮಿಲಾಗ್ರೀಸ್ ಹ್ಯಾಸ್ಕೂಲಿನ ಎಕಡಮಿ ಹಾಲನ್ನು ತೆರೆದರು. ಆ ಒಳಿಕ ಶಾಲಾ ವರ್ಧಂತಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದರು.

ಹೆಮ್ಮಕ್ಕಳ ಶಾಲಾ ವರ್ಧಂತಿ—ಡಾ। ಶೆಟ್ಟರ ಭಾಷಣ:—ಸ್ಥಳೀಯ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವವು ಇದೇ ತಾ. ೧೬ರಲ್ಲಿ ದ. ಕ. ಜಿ. ಬೋ. ಪ್ರೆಸಿಡೆಂಟರಾದ ಡಾ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ, ಮಿಸೆಸ್ ಮನೋರಮಾ ಬಾಯಿಯವರು ಶಾಲಾವರದಿಯನ್ನೋದಿದರು. ಅಧ್ಯಕ್ಷ ಮಹಾಶಯರು ಮುಖ್ಯೋಪಾಧ್ಯಾಯಿನಿಯ ಕಾರ್ಯಕಲಾಪಗಳನ್ನು ಕೊಂಡಾಡಿ ಪ್ರಾಥಮಿಕ ವಿದ್ಯಾಭ್ಯಾಸ ಕುರಿತು ಮಾತನಾಡುತ್ತಾ ನಮ್ಮ ಜಿಲ್ಲೆಯಲ್ಲಿ ಸಾಧಾರಣ ೫ ಲಕ್ಷರೂ. ವರ್ಷಂಪ್ರತಿ ಖರ್ಚು ಮಾಡಿದಾಗ್ಯೂ ನೇಕಡ ೧೦ರಷ್ಟು ಮಾತ್ರ ಅಕ್ಷರಜ್ಞರಿರುವರು. ರೂಪಾಯಿಗೆ ನಾಲ್ಕಾಣೆಯಷ್ಟು ಸಹ ಪ್ರತಿಫಲದೊರೆಯದುದಕ್ಕೆ ವಿಷಾದ ಸೂಚಿಸಿದರು. ಮದ್ರಾಸು ಸಂಸ್ಥಾನದಲ್ಲಿ ಕಡ್ಡಾಯ ಶಿಕ್ಷಣವನ್ನು ಜ್ಯಾರಿಗೆ ತರಬೇಕಾದರೆ ೧೦ ಕೋಟಿಯಷ್ಟು ಹಣ ಬೇಕಾಗುವುದೆಂದು ಭವಿಷ್ಯವನ್ನು ಹೇಳಿದರು. ಹಿಂದೂಸ್ಥಾನದಲ್ಲಿ ಸ್ವರಾಜ್ಯಮಂತ್ರದ ಕೂಗು ಎಲ್ಲೆಡೆಗಳಿಂದಲೂ ಕೇಳಬರುತ್ತದೆ. ಎಂದಿನ ತನಕ ಭರತ ಖಂಡದಲ್ಲಿ ನೇಕಡಾ ೫೦ರಷ್ಟಾದರೂ ಅಕ್ಷರಜ್ಞರು ತಯಾರಿರುವುದಿಲ್ಲವೋ ಅಂದಿನ ತನಕ ಸ್ವರಾಜ್ಯವೆಂಬುದು ಬರಿಯ ಚಂದ್ರಬಿಂಬದ ಪ್ರಕಾಶವೆಂದು ಹೇಳಿದರು.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು!
ಉಪಾಧ್ಯಾಯರ ಹಾಗೂ ವಿದ್ಯಾರ್ಥಿಗಳ ಬಹುಕಾಲದ ಸಮಸ್ಯೆಯೊಂದು ಈಗ ಪರಿಹಾರವಾಯಿತು!

ಹೊಸ ಪಾಠಪಟ್ಟಿಗೆ ಅನುಗುಣವಾಗಿ
ವಿದ್ವಾನ್ ಶ್ರೀ. ಕೆ. ಕೆ. ರೈ ಇವರಿಂದ ವಿರಚಿತವಾದ

ವ್ಯಾಕರಣ ಮತ್ತು ಪ್ರಬಂಧ

(ಸಚಿತ್ರ)

8ನೆಯ ತರಗತಿಗೆ
7 ,, ,,
6 ,, ,,
4 ಮತ್ತು 5 ,, (ಅಚ್ಚಿನಲ್ಲಿದೆ)

ಬಡವಿದ್ಯಾರ್ಥಿಗಳಿಗೆ ಕೊಂಡುಕೊಳ್ಳಲು ಅನುಕೂಲವಾಗುವಂತೆ ಬೆಲೆಯು ಬಹಳ ಸುಲಭವಾಗಿಡಲ್ಪಟ್ಟಿದೆ.

ಹೈಸ್ಕೂಲು ಮತ್ತು ಟ್ರೈನಿಂಗ್ ಶಾಲೆಗಳ ವಿದ್ಯಾರ್ಥಿಗಳ ಉಪಯೋಗದ ಸಲುವಾಗಿ ಬರೆಯಲ್ಪಟ್ಟ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ.

ಇಷ್ಟು ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಸಾಹಸವು ನಮ್ಮ ಜಿಲ್ಲೆಯ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ!

ಪದಜ್ಞಾನ, ವಾಕ್ಯ ವಿಚಾರ, ವಾಕ್ಯ ವಿಭಜನೆ, ವಾಕ್ಯ ಪರಿವರ್ತನೆ, ವಿಭಕ್ತಿ, ಲಿಂಗ, ವಚನಗಳೇ ಮೊದಲಾಗಿ ಸರ್ವಾಂಗ ವ್ಯಾಕರಣವು ವಿದ್ಯಾರ್ಥಿಗಳ ಮನೋರಂಜಕವಾಗುವಂತೆ ಸೋದಾಹರಣವಾಗಿ ಬರೆಯಲ್ಪಟ್ಟಿದೆ! ಪ್ರಬಂಧ ಭಾಗದಲ್ಲಿ ಪ್ರಬಂಧ, ಲೇಖನ, ಕಥಾಲೇಖನ, ಸಂಭಾಷಣಾರೂಪ, ಅನುವಾದ ಹಾಗೂ ಸಾರಾಂಶಲೇಖನ, ಟಿಪ್ಪಣಿ ಬರೆಯುವುದು ಮೊದಲಾದ ಸಂಪೂರ್ಣ ವಿಷಯಗಳು ಅಡಕವಾಗಿವೆ! ಪ್ರತಿಯೊಂದು ಪಾಠವೂ ಅಭ್ಯಾಸಗಳಿಂದ ಆವೃತ್ತಿಗೊಂಡಿದೆ! ಮಾತ್ರವಲ್ಲದೆ, ಛಂದಸ್ಸು, ಅಲಂಕಾರ, ಧ್ವನಿಲಹರಿ ಈ ವಿಷಯಗಳೂ ಸುಲಭ ಶೈಲಿಯಲ್ಲಿ ವಿವರಿಸಲಾಗಿವೆ.

ಶಿಕ್ಷಣಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!
ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!!

ಇದೇ ತರದಲ್ಲಿ ಎಲಿಮೆಂಟರಿ ಶಾಲೆಗಳ ಎಲ್ಲಾ ತರಗತಿಗಳಿಗೂ ಬೇಕಾದ ಸಿವಿಕ್ಸ್, ಭೂಗೋಳ, ಪ್ರಕೃತಿಶಾಸ್ತ್ರ, ಗೃಹವಿಜ್ಞಾನ, ಚರಿತ್ರೆ, ಲಘುವಿಜ್ಞಾನ ಪುಸ್ತಕಗಳೂ ಸಿದ್ಧವಾಗಿವೆ.

ಪುಸ್ತಕಗಳು ದೊರಕುವ ಸ್ಥಳ:
ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

6, 7, 8ನೆಯ ತರಗತಿಗಳ ವ್ಯಾಕರಣ ಮತ್ತು ಪ್ರಬಂಧದ ಪ್ರತಿಗಳನ್ನು ಇಚ್ಛಿಸುವವರು 9 ಆಣೆ ಸ್ಟಾಂಪುಗಳನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಅರುಣ
ಗರ್ಭಾಶಯ
ರೋಗಗಳನ್ನು ನಿವಾರಿಸಿ
ಆರೋಗ್ಯವನ್ನು
ಉಂಟುಮಾಡುವದು

ಜರ್ಮನಿಯ ಧಾಳಿಗೆ ಸ್ವೀಡನಿನ ನಿಷೇಧ!

ನಾರ್ವೇಯಲ್ಲಿ ಪ್ರಚಂಡ ಹೋರಾಟ

ಜರ್ಮನ್ ವಿಮಾನ ವಿಧ್ವಂಸ

ಇಟಲಿಯು ಯುದ್ಧರಂಗಕ್ಕಿಳಿಯುವುದೇ?

ತಟಸ್ಥ ರಾಷ್ಟ್ರಗಳ ನೌಕಾ ನಷ್ಟ!



ತಟಸ್ಥ ಹಡಗುಗಳ ನಷ್ಟ

ಉತ್ತರ ಸಮುದ್ರದಲ್ಲಿ ಡಚ್ ಹಡಗ ಎರಿನ್ ಓಫ್ ಇಮುದಿಯ ಎಂಬ ಹಡಗಕ್ಕೆ ಜರ್ಮನರು ಗುಂಡಿಟ್ಟರು. ಟರ್ನಿಸಿಸ್ ಎಂಬ ಇನ್ನೊಂದು ಡಚ್ ಹಡಗವೂ ಮುಳುಗಿಸಲಾಯಿತು. ನಾರ್ವೆಯ ಟ್ರಾವೋರೆ ಎಂಬ ಹಡಗವೂ ಮುಳುಗಿಸಲ್ಪಟ್ಟಿತು.

ಜರ್ಮನ್ ವಿಮಾನ ನಷ್ಟ

ನಾರ್ವೆಯ ಕಾದಾಟದಲ್ಲಿ ಅಸಂಖ್ಯ ಜರ್ಮನ್ ವಿಮಾನಗಳು ನಷ್ಟ ಹೊಂದಿರುವವೆಂದು ಸುದ್ದಿ.

ಜರ್ಮನಿಗೆ ಸ್ವೀಡನಿನ ನಿಷೇಧ

ಸ್ವೀಡನಿನ ಸರಹದ್ದುಗಳಲ್ಲಿ ಉಂಟಾದ ಅನೇಕ ಧಾಳಿಯ ನಿಮಿತ್ತ, ಜರ್ಮನಿಯ ಧೋರಣೆಯನ್ನು ಸ್ವೀಡನ್ ಸರಕಾರವು ನಿಷೇಧಿಸಿದೆ.

ನಾರ್ವೆಯ ಕದನ

ನಾರ್ವೆಯಲ್ಲಿ ಬ್ರಿಟಿಷರು ಮುಂದುವರಿಯುತ್ತಿರುವರೆಂದು ವಾರ್ತೆ.

ವ್ಯಾಪಾರ ಒಪ್ಪಂದ

ರುಮೇನಿಯಾ ಜರ್ಮನಿಗಳೊಳಗೆ ವ್ಯಾಪಾರ ಒಪ್ಪಂದವೊಂದು ಸಹಿಹಾಕಲ್ಪಟ್ಟಿತು.

ಅಮೇರಿಕದ ಸಹಾನುಭೂತಿ

ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು, ತಮ್ಮ ಸಹಾನುಭೂತಿಯು ನಾಜಿಗಳ ಆಕ್ರಮಣಕ್ಕೆ ತುತ್ತಾದ ರಾಷ್ಟ್ರಗಳ ಕಡೆಗಿದೆಯೆಂದು ಹೇಳಿದರು.

ಜರ್ಮನ್ ಪೆರಚ್ಯೂಟ್‌ಗಳು

ನಾರ್ವೆಯಲ್ಲಿ ಜರ್ಮನರು ಪೆರಚ್ಯೂಟ್‌ಗಳನ್ನಿಳಿಸಿ ಯುದ್ಧ ಮಾಡುತ್ತಿರುವರು. ಹಾಮಾರವನ್ನು ಬ್ರಿಟಿಷ್ ದಳದವರು ಸ್ವಾಧೀನ ಗೊಳಿಸಿದರೆಂಬ ವದಂತಿಯಿದೆ.

ಸನ್ನದ್ಧರಾಗಿರಿ

ಮುಸಲಿನಿಯ ಹೇಳಿಕೆ

ಇಟಲಿಯನರಿಗೆ ಸೀನರ್ ಮುಸಲಿನಿಯು ಉಪದೇಶಿಸುತ್ತಾ ಇಂದಿನ ಸಮಯದಲ್ಲಿ ಯುದ್ಧಕ್ಕೆ ಸಿದ್ಧರಾಗಿರಿ ಎಂಬುದೊಂದೇ ನನ್ನ ಹೇಳಿಕೆಯೆಂದು ಸಾರಿರುವನು.

ಬ್ರಿಟನಿಗೆ ಜರ್ಮನ್ ದಾಳಿ

ಬ್ರಿಟನಿಗೆ ದಾಳಿಮಾಡಲು ಜರ್ಮನ್ ವಿಮಾನಗಳು ಸಾಹಸ ಪಡುತ್ತಿವೆ. ಬ್ರಿಟನಿನ ಕರಾವಳಿಯಲ್ಲಿ ಹಾರಾಡಲು ಯತ್ನಿಸುತ್ತಿವೆಯೆಂದೂ ತಿಳಿದುಬರುತ್ತಿದೆ.

ಜರ್ಮನರು ನಾರ್ವೇಯಲ್ಲಿ

ನಾರ್ವೇಯ ಕೆಲವು ಬಂದರಗಳನ್ನು ಜರ್ಮನರು ಬಹಳ ತೀವ್ರದಿಂದ ಹಿಡಿದುಕೊಂಡಿರುವರಾದರೂ, ಈಗ ಸ್ವಾಧೀನ [illegible] ವುದು ಅವರಿಗೆ ಬಹಳ ಕಷ್ಟದ ಕಾರ್ಯವಾಗಿ ಪರಿಣಮಿಸಿದೆಯಂತೆ.

ಬ್ರಿಟಿಷರ ಜಯ

ನಾರ್ವಿಕ ಬಂದರದ ಮೇಲೆ ಬ್ರಿಟಿಶರು ಪ್ರಚಂಡ ಧಾಳಿ ನಡೆಸಿರುವರು. ಬ್ರಿಟಿಶ ತೋಪುಗಳೂ ವಿಮಾನಗಳೂ ಒಂದೇ ಸವನೆ ಜರ್ಮನ್ ಸೈನಿಕರ ಮೇಲೆ ಏರಿ ಹೋಗುತ್ತಿರುವವು. ಕೆಲವೆಡೆಗೆ ಜರ್ಮನ್ ಸೈನಿಕರು ಓಡಿಹೋದರಂತೆ. ನಾರ್ವಿಕ್ ನಗರವು ಇಷ್ಟರಲ್ಲಿ ಬ್ರಿಟಿಶರ ಕೈವಶವಾಗಿರಬಹುದೆಂದು ಸುದ್ದಿ. ಇನೂ ಅಧಿಕೃತವಾಗಿ ಏನೂ ತಿಳಿದಿಲ್ಲವಾದರೂ ಬ್ರಿಟಿಶ ತೋಪುಗಳನ್ನು ಎದುರಿಸುವದು ಜರ್ಮನ್ ವಿಮಾನಗಳಿಗೆ ಸಾಧ್ಯವಿಲ್ಲವಾದುದರಿಂದ ಬ್ರಿಟಿಶರಿಗೆ ಈ ಹೋರಾಟದಲ್ಲಿ ಜಯವಾಗುವದು ಖಂಡಿತ. ಜರ್ಮನಿಯು ವಿಮಾನಗಳ ಮೂಲಕ ಸೈನಿಕರನ್ನು ಕೆಂಡರಿಸಿದರೂ ಭಾರವಾದ ತೋಪುಗಳನ್ನು ತರುವದು ಸಾಧ್ಯವಿಲ್ಲ.

ಈಸ್ಟ್ ಇಂಡಿಸ್ ಮೇಲೆ ಜಪಾನಿನ ವಕ್ರದೃಷ್ಟಿ

ಹಾಲೆಂಡಿನ ಮೇಲೆಯೂ ಜರ್ಮನಿಯ ಆಕ್ರಮಣವಾಗಬಹುದೆಂದು ಊಹಿಸಿ ಜಪಾನಿಗಳು ಡಚ್ ಈಸ್ಟ್ ಇಂಡೀಜಿನತ್ತ ತಮ್ಮ ಕಣ್ಣು ಹೊರಳಿಸಿದ್ದಾರೆ. ಈ ಡಚ್ ವಸಾಹತುಗಳಲ್ಲಿ ಪರಕೀಯರಾರೂ ಕೈಹಾಕದಂತೆ ನೋಡಿಕೊಳ್ಳಲು ಜಪಾನು ಸಿದ್ಧವಿದೆಯೆಂದು ಜಪಾನಿನ ಪರರಾಷ್ಟ್ರ ಮಂತ್ರಿಗಳು ಸಾರುತ್ತಿರುವರು!

ಜಪಾನಿಗೆ ಎಚ್ಚರಿಕೆ

"ಹಾಲೆಂಡಿನ ಗತಿಯು ಏನೇ ಆದರೂ ಡಚ್ ಈಸ್ಟ್ ಇಂಡೀಜಿನಲ್ಲಿ ಯಾರೂ ಕೈಹಾಕಕೂಡದು. ಒಂದು ವೇಳೆ ಯಾರಾದರೂ ಕೈಹಾಕಿದರೆ ಅಥವಾ ಅದರ ಮೇಲೆ ಬಲತ್ಕಾರ ಮಾಡಿದರೆ ಇಡೀ ಪೆಸಿಫಿಕ ಮಹಾಸಾಗರದಲ್ಲಿ ಶಾಂತತಾಭಂಗವಾಗುವದೆಂದು ಅಮೇರಿಕೆಯು ಜಪಾನ ಮೊದಲಾದ ರಾಷ್ಟ್ರಗಳಿಗೆ ಎಚ್ಚರಿಕೆ ಕೊಟ್ಟಿದೆ.

ಜರ್ಮನಿಯ ನಿಷ್ಫಲ ಸಾಹಸ

ನಾರ್ವೇ ಅರಸನನ್ನು ಬಂಧಿಸಲು ಜರ್ಮನರು ನಡೆಸಿದ ಪ್ರಯತ್ನಗಳೆಲ್ಲ ಇದುವರೆಗೆ ಅಯಶಸ್ವಿಯಾಗಿವೆ. ನಾರ್ವೆಯಲ್ಲಿ ಈಗ ಸುಮಾರು ೨೦ ಸಾವಿರ ಜರ್ಮನ್ ಸೈನಿಕರು ಬಂದಿರುವರು. ನಾರ್ವೇದೇಶವನ್ನು ಬಿಟ್ಟುಕೊಡಬೇಕೆಂದು ಜರ್ಮನಿಯು ಆಲೋಚನೆಯಿರುವುದಾಗಿ ತಿಳಿಯುತ್ತದೆ. ನಾರ್ವೇಜಿಯನ್ ಸೈನಿಕರು ಜರ್ಮನ್ ಸೈನಿಕರಿಗೆ [illegible] ತ್ತಿರುವರೆಂದೂ ಕೇಳುತ್ತೇವೆ.

ಜರ್ಮನರ ಕಾರಸ್ಥಾನದಿಂದ ನಾರ್ವೇಯಲ್ಲಿ ರಚಿತವಾಗಿದ್ದ ಜರ್ಮನ್ ಕೈಗೊಂಬೆ ಸರಕಾರವು ರಾಜೀನಾಮೆ ಕೊಟ್ಟಿದ್ದು ಜರ್ಮನ್ ನಾರ್ವೇ ಪ್ರದೇಶಗಳ ಆಡಳಿತೆಯನ್ನು ಬೇರೊಂದು ಕಮಿಟಿಗೆ ಒಪ್ಪಿಸಲಾಗಿದೆಯಂತೆ.

ಹಾಲೆಂಡಿಗೆ ಗಂಡಾಂತರ

ನಾಜಿಗಳಿಗೆ ಹಾಲೆಂಡಿನ ಮೇಲೆ ಅಂದಿನಿಂದಲೂ ಕಣ್ಣಿದ್ದೇ ಇದೆ. ಹಾಲೆಂಡ್ ಯಾರ ತಳ್ಳಿಗೂ ಇಲ್ಲ, ತನ್ನ ಪಾಡಿಗೆ ತಾನು ತಟಸ್ಥವಾಗಿದ್ದೇನೆನ್ನುತ್ತದಾದರೂ, ತಾಟಸ್ಥ್ಯದ ಗತಿ ಏನಾದೀತೋ ಹೇಳಕೂಡದು. ಹೇಗೂ ಹಾಲೆಂಡಿನಲ್ಲೀಗ ಆಕ್ರಮಣದ ಪರಿಸ್ಥಿತಿಯುಂಟಾಗಿದೆ ಎಂದು ಅಲ್ಲಿನ ಪ್ರಧಾನರು ಸಾರಿದ್ದಾರೆ.

ಬೆಲ್ಜಿಯಮಿನಲ್ಲಿಯೂ ಬಿಸಿ

"ಈ ದೇಶದಲ್ಲಿ ನಾವು ಯುದ್ಧಕ್ಕೂ ಶಾಂತಿಗೂ ಎರಡಕ್ಕೂ ತಯಾರಿರಬೇಕು" ಎಂದು ಅಲ್ಲಿನ ಪ್ರಧಾನರು ಪ್ರಕಟಿಸಿದ್ದಾರೆ.

ಇಟಲಿ ತನ್ನ ಯುದ್ಧವನ್ನಾರಂಭಿಸಬಹುದು

ಇಟಲಿ ಸಣ್ಣ ರಾಷ್ಟ್ರಗಳನ್ನು ಸದೆಬಡಿಯುವ ಈ ಕಾರ್ಯದಲ್ಲಿ ನಾಜಿಗಳೊಡನೆ ಭಾಗಿಯಾಗುವಂತೆ ತನ್ನದೊಂದು ಪ್ರತ್ಯೇಕ ಯುದ್ಧ ಹೂಡಬಹುದು. ಇಟಲಿ ಪೂರ್ವ ಮೆಡಿಟರೇನಿಯನಿನಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಲು ಯುಗೋಸ್ಲಾವಿಯದ ಮೇಲೆ ದಂಡೆತ್ತಿ ಹೋಗಬಹುದು. ಈಗಾಗಲೇ ಇಟಲಿಗೆ ಯುಗೋಸ್ಲಾವಿಯದೊಡನೆ ವಿವಾದಗಳಿವೆ. ಅನ್ನುವಾಗ ಇಟಲಿಯ ಈ ಕಾರ್ಯಸಾಧನೆಗೆ ಅನುಕೂಲಿಸುವಂತೆ ಜರ್ಮನಿ ಬಾಲ್ಕನಿನ ಕಡೆಗೆ ನಡೆಯಬಹುದು. ಮಿತ್ರರಾಷ್ಟ್ರಗಳು ಯುಗೋಸ್ಲಾವಿಯವನ್ನು ರಕ್ಷಿಸಲು ಬದ್ಧರಲ್ಲ. ಅವರ ಆಶ್ವಾಸನ ಗ್ರೀಸ್, ರುಮೇನಿಯಾ ಮತ್ತು ಟರ್ಕಿಗಳಿಗೆ ಮಾತ್ರ. ಆದರೂ ಅವುಗಳು ಇಟಲಿಯ ಚಲನವಲನಗಳನ್ನು ಕಾದುಕೊಂಡಿವೆ.

ಬರ್ಲಿನ್–ರೋಮ್–ಮೋಸ್ಕೊಗಳ ಸಂಧಿಯೇ?

ಜರ್ಮನಿಯ ಸೋವಿಯೆಟ್ ರಾಯಭಾರಿ ಬರ್ಲಿನಿಗೆ ಮರಳಿದ ಬಳಿಕ, ಈ ಮೂರು ರಾಷ್ಟ್ರಗಳು ತಮ್ಮೊಳಗೊಂದು ಒಪ್ಪಂದಕ್ಕೆ ಬಂದಿರಬೇಕೆಂಬ ವದಂತಿ ಬಲವಾಗಿದೆ. ಇತ್ತ ಮಿತ್ರರ ಸೇನೆಗಳು ಸುರಕ್ಷಿತವಾಗಿ ನಾರ್ವೆಗೆ ಬಂದಿಳಿದು, ನಾರ್ವೆ ದಳಗಳೊಡನೆ ಸಂಪರ್ಕವನ್ನಿರಿಸಿಕೊಳ್ಳಲು ಮುಂದಾಗಿವೆ.

ನಾರ್ವೇಯಲ್ಲಿ ಬ್ರಿಟಿಷ್—ಫ್ರೆಂಚ್ ಸೈನ್ಯಗಳು

ನಾರ್ವೆಗೆ ಬಂದಿಳಿದಿರುವ ಮಿತ್ರರಾಷ್ಟ್ರಗಳ ಸೈನ್ಯಗಳ ಕಾರ್ಯಕ್ರಮ, ಯೋಜನೆಯಂತೆ ಸಾಗುತ್ತಿದೆ. ಆಗಲೇ ಉತ್ತರ ಭಾಗದಲ್ಲಿ ಜರ್ಮನಿಗೆ ಸೋಲು ಪ್ರಾಪ್ತವಾಗಿರುವ ವಾರ್ತೆ ಬಂದಿದೆ. ಬ್ರಿಟಿಷರ ಸೈನ್ಯಗಳು ಮುಂದಡಿ ಇಡುತ್ತಲೇ ಬಂದಿದ್ದಾವೆ. ಓಸ್ಲೋವಿನಲ್ಲಿ ನಾರ್ವೆಯವರಿಂದ ಹೇಳಕೂಡದಷ್ಟು ಉಪಟಳಗಳು ಜರ್ಮನರಿಗೆ ಉಂಟಾಗಿವೆ.

ಹಿಟ್ಲರನ ಜನ್ಮದಿನೋತ್ಸವ

ಈ ದಿನದಂದು ಡಾ. ಗೋಬೆಲ್ಸ್ ಜರ್ಮನ್ ಜನಾಂಗಕ್ಕೊಂದು ಬ್ರಾಡ್‌ಕಾಸ್ಟ್ ಭಾಷಣಕೊಡುತ್ತ, ಜರ್ಮನಿಯಲ್ಲಿ ಅಲ್ಲಲ್ಲಿ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಹಿಟ್ಲರನಲ್ಲಿ ಎಲ್ಲರಿಗೂ ತುಂಬ ವಿಶ್ವಾಸವೇ ಎಂದೂ, ಬ್ರಿಟನ್ ಜರ್ಮನಿಯ ವಿರುದ್ಧ ನಡೆಸಿದ ಪ್ರಚಾರಕಾರ್ಯ ನಿಷ್ಫಲವಾಗಿದೆ ಎಂದೂ ಜರ್ಮನಿಗೆ ಯಶಃಪ್ರದವಾದ ವಿಜಯವುಂಟಾಗಲೆಂದೂ ಮುಂತಾಗಿ ನುಡಿದರು.

ಗವರ್ನರರ ಆಡಳಿತೆಗೆ ಜೀವದಾನ!

ಏಳು ಪ್ರಾಂತಗಳ ಆಡಳಿತೆಗೆ ಕಾಂಗ್ರೆಸು ಮಂತ್ರಿಗಳು ರಾಜೀಕೊಟ್ಟ ಮೇಲೆ ಗವರ್ನರರು ಅಧಿಕಾರ ನಡೆಸುತ್ತಿದ್ದಾರಷ್ಟೆ? ಆರು ತಿಂಗಳು ಕಳೆದುದರಿಂದ ಅವರ ಅಧಿಕಾರಕ್ಕೆ ಜೀವದಾನ ಕೊಡಲು ಪಾರ್ಲಿಮೆಂಟಿನಲ್ಲಿ ಒಂದು ನಿರ್ಣಯ ಮಾಡಲಾಗಿದೆ.

ಈ ನಿರ್ಣಯವು ಪ್ರಜಾಸಮ್ಮತ ಪದ್ಧತಿಗೆ ವಿರೋಧಕರವಾದುದೆಂದು ಭಾರತ ಮುಖಂಡರು ಹಲವು ಕಡೆಗಳಲ್ಲಿ ತಮ್ಮ ನಿಷೇಧಗಳನ್ನು ವ್ಯಕ್ತಪಡಿಸಿದ್ದಾರೆ. ಪೂನಾ ಮುನ್ಸಿಪಾಲಿಟಿಯು ಈ ಕುರಿತು ನಿಷೇಧ ನಿರ್ಣಯವೊಂದನ್ನು ಮಾಡಿದೆ.

ಕಾಸ್ಕಾರ ಚಳವಳ

ಪಂಜಾಬಿನಲ್ಲಿ ಉಂಟಾದ ಕಾಸ್ಕಾರ ಚಳವಳದ ನಿಮಿತ್ತ ಈಗಾಗಲೇ ೬೯೫ ಮಂದಿಯು ಸೆರೆಹಿಡಿಯಲ್ಪಟ್ಟಿರುವರು. ಅದರಲ್ಲಿ ೩೪೯ ಮಂದಿ ಹೊರಗಿನ ಪ್ರಾಂತದವರು.

ಸತ್ಯಾಗ್ರಹ ಶಿಬಿರಗಳೂ ಸತ್ಯಾಗ್ರಹ ಪ್ರತಿಜ್ಞೆಗಳೂ

ಅಖಿಲ ಭಾರತದ ಸಾಧಾರಣ ಎಲ್ಲಾ ಕಾಂಗ್ರೆಸು ಕಮಿಟಿಗಳೂ ಸತ್ಯಾಗ್ರಹ ಸಮಿತಿಗಳಾಗಿ ರೂಪಾಂತರಪಟ್ಟವು. ದೇಶದುದ್ದಕ್ಕೂ ಮುಖಂಡರು ಮಾತ್ರವಲ್ಲದೆ ಸಾವಿರಾರು ಮಂದಿಯು ಸ್ವಾತಂತ್ರ್ಯ ಪ್ರತಿಜ್ಞೆಗೆ ಸಹಿಹಾಕುತ್ತಿದ್ದಾರೆ.

ಪಾಕಿಸ್ಥಾನ ಯೋಜನೆಗೆ ಮುಸ್ಲಿಮರ ನಿಷೇಧ

ಜಿನ್ನರು ಹಿಂದೂ ದೇಶವನ್ನು ಎರಡಾಗಿ ವಿಭಾಗಿಸಿ ಮುಸ್ಲಿಮರಿಗೆ ಪಾಕಿಸ್ಥಾನವನ್ನು ಮಾಡಿ ಅದನ್ನು ಬಿಟ್ಟುಕೊಡಬೇಕೆಂದು ಹೇಳುವರಷ್ಟೆ? ಈ ಅವರ ಅಭಿಪ್ರಾಯವು ಸಂಪೂರ್ಣ ರಾಷ್ಟ್ರದ್ರೋಹವೆಂದು ಭಾರತದ ಮುಖಂಡರು ಮುಸ್ಲಿಮರೇ ಸಾರುತ್ತಿದ್ದಾರೆ.

ಕಾಂಗ್ರೆಸಿಗೆ ಅಮೇರಿಕದ ಬೆಂಬಲ

ಕಾಂಗ್ರೆಸಿನ ಇಂದಿನ ಕಾರ್ಯಧೋರಣೆಯು ಸರಿಯೆಂಬುದು ಅಮೇರಿಕ ಪ್ರಸಿದ್ಧ ಪತ್ರಿಕೆಯಾದ 'ನೇಶನ್' ಎಂಬುದು ಬರೆಯುತ್ತಾ ಬ್ರಿಟಿಷರ ರಾಜನೀತಿಯು ಪ್ರಮಾದಕರವೆಂದು ಖಂಡಿಸುತ್ತದೆ.

ರಾಜಕೀಯವು ನನ್ನ ಸರ್ವಸ್ವ

ಗಡಿನಾಡಿನ ಗಾಂಧಿಗಳೆಂದು ಹೆಸರಾದ ಖಾನ್ ಅಬ್ದುಲ್ ಗಫರ್ ಖಾನರು ರಾಜಕೀಯದಿಂದ ನಿವೃತ್ತರಾಗುವರೆಂಬ ವಾರ್ತೆಯು ಕೆಲಪತ್ರಿಕೆಗಳಲ್ಲಿ ಪ್ರಕಟವಾದುದನ್ನು ಅಲ್ಲಗಳೆದು ಖಾನ್ ಅಬ್ದುಲ್ ಗಫರ್ ಖಾನರು, ರಾಜಕೀಯವು ಹಿಂದೂದೇಶದ ಸ್ವಾತಂತ್ರ್ಯ ಹೋರಾಟವು ನಮ್ಮ ಧರ್ಮ, ಜಾತಿ, ಜೀವ ಎಲ್ಲಾ ಆಗಿದೆ. ನಾನದನ್ನು ಬಿಟ್ಟು ಹೇಗಿರಬಲ್ಲೆನೆಂದು ಹೇಳಿದರು.

ಹೊಸ ನಾಲ್ಯಾಣೆ ಪಾವಲಿ

ಮೇ ೧ರಿಂದ ಹೊಸ ರೀತಿಯ ನಾಲ್ಕಾಣೆ ಪಾವಲಿಯು ಹಿಂದೂ ದೇಶದಲ್ಲಿ ಪ್ರಯೋಗಕ್ಕೆ ಬರಲಿದೆಯೆಂದು ತಿಳಿಯುತ್ತದೆ.

ಪ್ರತಿಕೋದ್ಯೋಗಿಗಳ ಅಕಾಲ ನಿಧನ

ಮಂಗಳೂರಿನ "ಹಿಂದೂ" ಪತ್ರಿಕೆಯ ಬಾತ್ಮೀದಾರರಾದ ಶ್ರೀ ರಘುನಾಥ ರಾಯರು ಕೆಲ ಕಾಲದಿಂದ ಕಾಹಿಲೆಯಲ್ಲಿದ್ದು, ಇಲ್ಲಿಯ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕಳೆದ ಆದಿತ್ಯವಾರ ದಿವಂಗತರಾದರು. ಇವರು ಆಂಧ್ರದೇಶದವರು. ಸುಮಾರು ೮-೧೦ ವರ್ಷಗಳಿಂದ ಇಲ್ಲಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯೋಗಿಗಳ ಸಂಘದ ಸ್ಥಾಪನೆಗೂ, ಅದರ ಚಟುವಟಿಕೆಗಳಿಗೂ ಮೂಲಪುರುಷರಾಗಿದ್ದರು. ಚಿಕ್ಕ ವಯಸ್ಸಿನವರಾದ ಉತ್ಸಾಹಿಗಳಾದ ತರುಣರು. ಇವರ ಅಕಾಲನಿಧನದಿಂದ ಇಲ್ಲಿನ ಪತ್ರಿಕಾ ಸಂಘಕ್ಕೂ ಪತ್ರಿಕೋದ್ಯೋಗಕ್ಕೂ ಅಪಾರ ನಷ್ಟವಾಗಿದೆ. ಇವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲಿ.



ಗವರ್ನರರ ಆಡಳಿತಕ್ಕೆ ಜೀವದಾನ!

ಜೆಟ್ಲೆಂಡರ ಭಾಷಣಕ್ಕೆ ಮುಖಂಡರ ಉತ್ತರ!

ಅಖಿಲ ಭಾರತದಲ್ಲಿ ಸತ್ಯಾಗ್ರಹ ಶಿಬಿರಗಳು.

ಪಂಜಾಬಿನಲ್ಲಿ ಕಾಸ್ಸಾರ ಚಳವಳ!

ಪಾಕಿಸ್ತಾನ ಯೋಜನೆಗೆ ಮುಸ್ಲಿಮರ ನಿಷೇಧ!

ಮಹಮ್ಮದ್ ಉಸ್ಮಾನರು ವೈಸ್ ಚಾನ್ಸಲರಾದರು

ಮದ್ರಾಸು ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾಗಿ ಮಿ। ಮಹಮ್ಮದ್ ಉಸಾನರು ನಿಯುಕ್ತರಾದರು.

ಎಂಡೋವೆಂಟ್ ಬೋರ್ಡು

ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಅಧ್ಯಕ್ಷರಾಗಿ ದಿವಾನ್ ಬಹದ್ದೂರ್. ಟಿ ಎಂ ನಾರಾಯಣ ಸ್ವಾಮಿ ಪಿಳ್ಳೆಯವರು ನೇಮಕ ಹೊಂದಿದ್ದಾರೆ. ರಾವ್ ಬಹದೂರ್ ಸಿ. ಎಂ. ರಾಮಚಂದ್ರ ಚೆಟ್ಟಿಯಾರ್ ಮತ್ತು ಶ್ರೀ ವಿ ಎಸ್ ಮನ್ನಾಡಿ ನಾಯರ್ ಇವರು ಮೆಂಬರರಾಗಿರುವರು ಶ್ರೀ। ಪಿ ಕಾಮೇಶ್ವರ ರಾಯರು ಮೊದಲೇ ಮೆಂಬರಾಗಿರುವರು.

ಕಾಂಗ್ರೆಸಿನ ಕಾರ್ಯಕ್ರಮವೇನು?

ರಾಷ್ಟ್ರಪತಿಗಳ ವಿವರಣೆ

ವಾರ್ಧಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮುಗಿದ ಮೇಲೆ ರಾಷ್ಟ್ರಪತಿಗಳು ಕಾಂಗ್ರೆಸಿನ ಇಂದಿನ ಚಟುವಟಿಕೆಗಳ ಕುರಿತು ಹೀಗೆಂದರು

"ಸತ್ಯಾಗ್ರಹ ಕಮಿಟಿಗಳು ದೇಶದ ನಾನಾ ಭಾಗಗಳಲ್ಲಿ ಸಂಪೂರ್ಣ ಶಕ್ತಿಯಿಂದ ಕೆಲಸಮಾಡುವುದರಲ್ಲಿ ನಮ್ಮ ಮುಂದಿನ ವಿಜಯವು ಅವಲಂಬಿಸಿದೆ ಅವುಗಳು ಅದೇ ರೀತಿಯಲ್ಲಿ ಕೆಲಸ ಮಾಡುವವೆಂದ ನಾನು ಭರವಸೆಗೊಂಡಿದ್ದೇನೆ"

ಮುಂದಿನ ತಿಂಗಳಲ್ಲಿಯೇ ವರ್ಕಿಂಗ್ ಕಮಿಟಿ

ವರ್ಕಿಂಗ್ ಕಮಿಟಿಯು ಬಹುಶ ಒಂದು ತಿಂಗಳಲ್ಲಿಯೇ ತಿರಿಗಿ ಸೇರಬಹುದಾಗಿ ಅಭಿಪ್ರಾಯವಿದೆ. ಬರುವ ಮೀಟಿಂಗಿನಲ್ಲಿ ಕೇಂದ್ರ ಅಸೆಂಬ್ಲಿಯ ಕಾಂಗ್ರೆಸ್ ಸದಸ್ಯರ ರಾಜಿನಾಮೆಯ ಕುರಿತು ಮಾತುಕತೆಯು ಬರಬಹುದು.

ಸ್ತ್ರೀವಿಭಾಗವು ಶ್ರೀಮತಿ ಕೃಪಾಲನಿಯವರ ಅಧೀನ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಏರ್ಪಡಿಸಿದ ಸ್ತ್ರೀವಿಭಾಗವು ಶ್ರೀಮತಿ ಕೃಪಾಲನಿಯವರ ಮೇಲ್ವಿಚಾರಣೆಯಲ್ಲಿರುವುದು.

ಹದಿನೈದನೆಯ ಸದಸ್ಯರು

ವರ್ಕಿಂಗ್ ಕಮಿಟಿಯ ಹದಿನೈದನೆಯ ಸದಸ್ಯರ ಹೆಸರನ್ನು ಈ ತಿಂಗಳ ಕೊನೆಯೊಳಗೆ ಪ್ರಕಟಿಸುವರಾಗಿ ತಿಳಿದಿದೆ.

ಸ್ವಾಮಿ ಸಹಜಾನಂದರ ಬಂಧನ

ಅಖಿಲಭಾರತ ಕಿಸಾನ್ ಸಭೆಯ ಜನರಲ್ ಸೆಕ್ರೆಟರಿಗಳಾದ ಸ್ವಾಮಿ ಸಹಜಾನಂದರನ್ನು ಡಿಫೆನ್ಸ್ ಓಫ್ ಇಂಡಿಯ ಆಕ್ಟಿನನ್ವಯ ಸೆರೆ ಹಿಡಿದಿರುವರು. ರಾಷ್ಟ್ರೀಯವಾರದ ಸಂಬಂಧ ಮಾಡಿದ ಭಾಷಣದ ಸಲುವಾಗಿ ಅವರ ಬಂಧನವೆಂದು ತಿಳಿದಿದೆ.

ರಮಾನಂದ ಮಿಶ್ರರ ಬಂಧನ

ಪಾಟ್ನಾದ ಕಿಸಾನ್ ಮುಖಂಡರಾದ ಪಂಡಿತ ರಮಾನಂದ ಮಿಶ್ರರನ್ನು ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿನನ್ವಯ ಸೆರೆ ಹಿಡಿಯಲಾಗಿದೆ.

ರಾಜೇಂದ್ರದತ್ತ ನಿಗಾಮರಿಗೆ ಶಿಕ್ಷೆ

ಸಂಯುಕ್ತಪ್ರಾಂತ ಕಾಂಗ್ರೆಸು ಕಮಿಟಿ ಸದಸ್ಯರಾದ ಶ್ರೀ ರಾಜೇಂದ್ರದತ್ತ ನಿಗಮರಿಗೆ ೧೮ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಜೆಟ್ಲೆಂಡರ ಹೇಳಿಕೆಯ ಕುರಿತು ಜವಾಹಿರಲಾಲರ ಅಭಿಪ್ರಾಯ

ಜೆಟ್ಲೆಂಡರ ಹೇಳಿಕೆಯ ಕುರಿತು ಏನೂ ಹೇಳತಕ್ಕದಿಲ್ಲ. ನನ್ನ ಕೆಲಸವು ನನ್ನ ದೇಶವನ್ನು ಸ್ವಾತಂತ್ರ್ಯಕೆ ಸಿದ್ಧತೆಗೊಳಿಸುವುದಾಗಿದೆಯೆಂದು ಪಂಡಿತ ಜವಾಹಿರಲಾಲರು ಹೇಳಿದರು.

ಸರ್ ರಾಧಾ ಕೃಷ್ಣನ್

ಜೆಟ್ಲೆಂಡ ಹೇಳಿಕೆಯು ಕಾಂಗ್ರೆಸಿನವರನ್ನು ತೃಪ್ತಿಪಡಿಸಲಾರದು, ಸಾಮ್ರಾಜ್ಯ ಸ್ವರಾಜ್ಯವನ್ನು ಯಾವಾಗಲಾದರೂ ಕೊಡುವೆವೆಂಬ ಮಾತು ಯೋಗ್ಯವಲ್ಲ. ಶಾಸನ ಭಂಗ ಆಂದೋಲನವು ಆರಂಭವಾದರೆ ಯಾರಿಗೂ ಹಿತವಲ್ಲವೆಂದು ಜೆಟ್ಲೆಂಡರ ಹೇಳಿಕೆಯ ಕುರಿತು ಸರ್ ರಾಧಾ ಕೃಷ್ಣನರವರು ಹೇಳಿದರು.

ಕಾಸ್ಸಾರ ಚಳವಳ ಹಲವು ಬಂಧನಗಳು

ಲಾಹೋರಿದಲ್ಲಿ ಕಾಸ್ಸಾರ ಚಳವಳವು ತೀವ್ರವಾಗುತ್ತಿದೆ. ಅನೇಕ ಬಂಧನಗಳೂ ನಡೆದಿವೆ.

ಸೋಶಿಯಲಿಸ್ಟರ ಬಂಧನ!

ಗಡಿನಾಡಿನ ಸೋಶಿಯಲಿಸ್ಟ್ ಮುಖಂಡರಾದ ಮೌಲಾನಾ ಅಬ್ದುಲ್ ರಹಿಮರನ್ನು ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿನನುಗುಣವಾಗಿ ಬಂಧಿಸಿರುವರು.

ಶ್ರೀಗಳಾದ ನಲಿನಿಕುಮಾರ ಗುಪ್ತ ಕಾಳಿಪ್ರಸನ್ನದಾಸ, ಭೂಪತಿ ಚಕ್ರವರ್ತಿಗಳೆಂಬ ಮುನ್ನಡೆಪಕ್ಷದ ಮುಖಂಡರನ್ನು ಸೈಲೆಟ್ಟಿನಲ್ಲಿ ಬಂಧಿಸಿರುವರು.

ಲಾಹೋರಿನ ಕಿಸಾನ್ ಮುಖಂಡರಾದ ಶ್ರೀ ತೇಲಾಸಿಂಗರನ್ನೂ ಬಂಧಿಸಲಾಗಿದೆ.

ಶಿಯಾಸುನ್ನಿ ಜಗಳ ೬ ಮಂದಿಯ ಮರಣ

ಲಕ್ನೋದಲ್ಲಿ ಶಿಯಾಸುನ್ನಿ ಜಗಳವು ಹೆಚ್ಚಾಗುತ್ತಾ ಇದೆ. ೪೫ ಜಗಳದಿಂದ ಆರು ಮಂದಿ ಮೃತ್ಯು ಹೊಂದಿರುವರೆಂದು ತಿಳಿದುಬಂದಿದೆ.

ಸ್ವದೇಶಿ ಪ್ರಚಾರ

ಬಿಪಿನೇಂದುಗಳ ಭಾಷಣ

ಕೊಚ್ಚಿನ್ ಸ್ಟೇಟ್ ಕೈಗಾರಿಕೆ ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ ಬಿಪಿನೇಂದುಗಳು ಅಖಿಲ ಭಾರತದಲ್ಲಿ ಸ್ವದೇಶಿ ಪ್ರಚಾರವು ತೀವ್ರವಾಗಿ ಹಳ್ಳಿನಗರಗಳಲ್ಲಿ ಆಗಬೇಕಾಗಿದೆಯೆಂದೂ, ಆ ಬಗ್ಗೆ ಎಲ್ಲಾ ಕಡೆಗಳಲ್ಲಿ ಸಂಘಟಿತವಾಗಿ ಕಾರ್ಯವು ಕೈಕೊಳ್ಳಬೇಕಾಗಿದೆಯೆಂದೂ ಹೇಳಿದರು.

ರಂಗೂನಿನಲ್ಲಿ ದಂಗೆ

ರಂಗೂನಿನಲ್ಲಿ ಜಾತೀಯ ದಂಗೆಯುಂಟಾಗಿ ೧೧ ಜನರ ಮರಣ, ೬೯ ಮಂದಿಯು ಜಖಂ ಆಗಿದೆ ಪೋಲೀಸರು ದಂಗೆ ನಿಲ್ಲಿಸಲು ಗುಂಡು ಹಾರಿಸಬೇಕಾಯಿತು.

ಜೆಟ್ಲೆಂಡರ ಭಾಷಣದ ಕುರಿತು

ಜೆಟ್ಲೆಂಡರ ಭಾಷಣವು ಅಸಮರ್ಪಕವಾಗಿರುವ ವಿಷಯವಾಗಿ ರಾಜಾಜಿಯವರು ಮತ್ತು ರಾಷ್ಟ್ರಪತಿಗಳು ಪ್ರಕಟಣೆ ಹೊರಡಿಸಿರುವರು

ಆಂದೋಲನವು ಖಂಡಿತ

ಅಲಹಾಬಾದಿನ ಸಭೆಯೊಂದರಲ್ಲಿ ಮಾತನಾಡುತ್ತಾ ಪಂಡಿತ ಜವಾಹಿರಲಾಲರು ಖಂಡಿತವಾಗಿಯೂ ಆಂದೋಲನವು ಬರಲಿದೆಯೆಂದು ಹೇಳಿದರು.

ಮುಖಚಿತ್ರದ ದಿವಂಗತ ಎಂ. ಎಸ್ ಕಾಮತರ ಪಡಿಯಚ್ಚು ಮೆಸರ್ಸ್ ಯು. ಆರ್. ಶೆಣೈ ಎಂಡ್ ಸನ್ಸ್ ಮತ್ತು ಶ್ರೀ ಕೋ ಶಿ. ಕಾರಂತರವರ ಕೃಪೆಯಿಂದ



ಮುಸ್ಲಿಂ ವಿದ್ಯಾರ್ಥಿಗಳಿಂದ ಜಿನ್ನಾ ವಿರೋಧ ಪ್ರಚಾರ

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನರು ಇತ್ತೀಚೆಗೆ ರಾಷ್ಟ್ರವನ್ನು ಹಿಂದೂ ಭಾರತ, ಮುಸ್ಲಿಂ ಭಾರತವೆಂದು ವಿಂಗಡಿಸಬೇಕೆಂದು ಮೊದಲಾಗಿ ಪ್ರಕಟಣೆ ಕೊಡುತ್ತಿರುವರಷ್ಟೆ? ಇದು ಅಸಂಬದ್ಧವೆಂದೂ, ರಾಷ್ಟ್ರದ್ರೋಹವೆಂದೂ ಸಂಯುಕ್ತ ಪ್ರಾಂತದ ರಾಷ್ಟ್ರೀಯ ಧ್ಯೇಯದ ಮುಸ್ಲಿಂ ವಿದ್ಯಾರ್ಥಿಗಳು ಆ ಪ್ರಾಂತದಲ್ಲಿ ಭರದಿಂದ ಪ್ರಚಾರಕಾರ್ಯಕ್ಕೆ ಆರಂಭಿಸಿರುವರೆಂಬಾಗಿ ತಿಳಿದು ಬರುತ್ತದೆ.

ಏಪ್ರಿಲ್ ಮೂರನೇ ವಾರದಲ್ಲಿ ಅವರು ಲಕ್ನೋದಿಂದ ಹೊರಟು ಕಾನಪುರ, ಆಗ್ರಾ, ಫಿರೋಜಾಬಾದ್, ಎಟ್ವಾ ಅಲಿಗರ ಮೊದಲಾದ ಕಡೆಗಳಿಗೆ ತೆರಳುವರು. ಹೀಗೆ ಪ್ರಚಾರ ಮಾಡಿ ಅಖಿಲ ಭಾರತ ರಾಷ್ಟ್ರೀಯ ಮುಸ್ಲಿಮರ ಪರಿಷತ್ತು ಡಿಲ್ಲಿಯಲ್ಲಿ ನಡೆವ ಹೊತ್ತಿಗೆ ಅಲ್ಲಿಗೆ ಹೋಗಲಿರುವರು.

ಅವರು ಲೌಡ್ ಸ್ಪೀಕರು ಇಟ್ಟಿರುವ ಒಂದು ಬಸ್ಸಿನಲ್ಲಿ ಪ್ರಚಾರ ಭಾಷಣ ಮಾಡುತ್ತಾ ಹೋಗುವರು. ಇಂದಿನ ರಾಜಕೀಯ ಪರಿಸ್ಥಿತಿಯನ್ನು ಅಲ್ಲಲ್ಲಿ ವಿವರಿಸುವರು. ಸಂಯುಕ್ತ ಪ್ರಾಂತದ ಅಖಿಲ ವಿದ್ಯಾರ್ಥಿ ಸಮ್ಮೇಳನಾಧ್ಯಕ್ಷರಾದ ಶ್ರೀ। ಅನ್ಸಾರ್ ಹಾರ್ವಾನಿಯವರು ಈ ಪ್ರಯಾಣ ಭಾಷಣಗಳನ್ನು ಅಲ್ಲಲ್ಲಿ ಏರ್ಪಡಿಸುವರು.

ಗಾಂಧಿಜಿಯವರು ಯುದ್ಧದ ಸಂಧಾನ ಮಾಡಬೇಕು

ಸ್ವಾಮಿಗಳ ಹೇಳಿಕೆ

ಇಂದಿನ ಈ ಯುದ್ಧವನ್ನು ನ್ಯಾಯ ರೀತಿಯಿಂದ ಕೊನೆಗಾಣಿಸಲು ಹಿಟ್ಲರ್ ಮತ್ತು ಮಿತ್ರರಾಷ್ಟ್ರಗಳು ಗಾಂಧಿಜಿಯವರ ಅಭಿಪ್ರಾಯಕ್ಕೆ ಒಪ್ಪಿ ಅವರನ್ನು ಸಂಧಾನ ದೂತರಾಗಿ ನೇಮಿಸಬೇಕು. ಎಂದು ಹರಿದ್ವಾರದ ಸ್ವಾಮಿ ಅನುರ ಆನಂದ ಸರಸ್ವತಿಯವರು ಒಂದು ಅಭಿಪ್ರಾಯವಿತ್ತಿರುವರು.

ಆ ಸ್ವಾಮಿಯವರು ಹೇಳುವುದೇನೆಂದರೆ, ತಾನು ಕಳೆದ ಕೆಲವು ತಿಂಗಳಿಂದ ಲೋಕಶಾಂತಿಯನ್ನುಂಟು ಮಾಡಲು ಪರಮಾತ್ಮನನ್ನು ಪ್ರಾರ್ಥಿಸುತ್ತಿರಲು ನನಗೆ ಕೊನೆಗೆ ದೇವರ ಕೃಪೆಯಿಂದ ಈ ಯೋಚನೆಯು ಹೊಳೆಯಿತೆಂದು.

ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ಅಮೇರಿಕವು ಜರ್ಮನಿ ಮತ್ತು ಮಿತ್ರರಾಷ್ಟ್ರಗಳು ಗಾಂಧಿಜಿಯವರ ಹೇಳಿಕೆಗೆ ಒಪ್ಪುವಂತೆ ಒತ್ತಾಯ ಪಡಿಸಬೇಕೆಂದು ಹೇಳಿರುವರು. ತಟಸ್ಥ ರಾಷ್ಟ್ರಗಳ ಹನ್ನೊಂದು ಜನಪ್ರತಿನಿಧಿಗಳಿಂದ ಕೂಡಿದ ಒಂದು ಮಂಡಳವು ಗಾಂಧಿಜಿಯವರಿಗೆ ಈ ವಿಷಯದಲ್ಲಿ ಸಲಹೆಯನ್ನು ಕೊಡಬಹುದೆಂದೂ, ಗಾಂಧಿಜಿಯವರು ಈ ಬಗ್ಗೆ ಯಾವುದಾದರೊಂದು ಯೂರೋಪಿನ ತಟಸ್ಥರಾಷ್ಟ್ರಕ್ಕೆ ಹೋಗಿರಬೇಕೆಂದೂ ಸ್ವಾಮಿಯವರು ಹೇಳುತ್ತಾರೆ.

ಮಂಗಳೂರು ಮೋಟಾರು ಕೆಲಸಗಾರರ ಅನ್ನಸತ್ಯಾಗ್ರಹ

ಮಂಗಳೂರು ಮೋಟಾರು ಕೆಲಸಗಾರರ ಸಂಘದ ಹಿಂದಿನ ಸದಸ್ಯರಿಗೆ ನ್ಯಾಯದೊರೆಯುವಂತೆ ಪಡದಲು ಪಂಚಾಯತಿಕೆದಾರರಾಗಿದ್ದ ಶ್ರೀ. ಬಿ. ವೆಂಕಟ್ರಾಯ ಬಾಳಿಗ ಮೊದಲಾದ ಮೂವರು, ಕೆಲಸಗಾರರ ಸಂಕಷ್ಟಗಳನ್ನು ವಿಚಾರಣೆಮಾಡಿ ನ್ಯಾಯದೊರೆಯುವಂತೆ ತೀರ್ಮಾನಿಸಬೇಕೆಂದು ಅವರ ಗಮನವನ್ನು ತಮ್ಮ ಕಷ್ಟಗಳ ಕಡೆಗೆ ಸೆಳೆವಸಲುವಾಗಿ, ಸಂಘದ ಹಿಂದಿನ ಸದಸ್ಯರಾದ ಶ್ರೀಗಳಾದ ಕೆ. ರಮೇಶರಾವ್ ಮತ್ತು ಎಂ. ವಾಸುದೇವರಾವ್ ಎಂಬಿಬ್ಬರು, ಬ್ಯಾರಿಸ್ಟರರಾದ ಶ್ರೀ। ವೆಂಕಟ್ರಾಯ ಬಾಳಿಗರ ಮನೆಯಮುಂದೆ ಅನ್ನಸತ್ಯಾಗ್ರಹವನ್ನು ತಾ ೨೦ನೇ ದಿನ ಮುಂಜಾನೆ ಆರಂಭಿಸಿದರು. ತಾ ೨೧ ರಂದು ಸಂಜೆ ಡಾ। ಯು. ಪಿ. ಮಲ್ಯರ ಮಧ್ಯಸ್ಥಿಕೆಯಲ್ಲಿ ಶ್ರೀ। ವೆಂಕಟ್ರಾಯ ಬಾಳಿಗರು ಅವರ ಸಂಕಷ್ಟಗಳನ್ನು ನೀಗಾಡಿಸಲು ತನ್ನ ಸಂಪೂರ್ಣ ಪ್ರಯತ್ನವನ್ನು ಮಾಡುವುದಾಗಿ ಭರವಸೆಯಿತ್ತ ಕಾರಣ ಸತ್ಯಾಗ್ರಹಿಗಳು ಅನ್ನಸತ್ಯಾಗ್ರಹವನ್ನು ಬಿಟ್ಟರು. ಸತ್ಯಾಗ್ರಹಿಗಳಲ್ಲಿ ಶ್ರೀ। ಕೆ. ರಮೇಶರಾವ್ ಇವರ ಪರಿಸ್ಥಿತಿಯು ಚಿಂತಾಜನಕವಾಗಿತ್ತು. ಡಾ। ಯು. ಪಿ. ಮಲ್ಯರು ಅವರಿಗೆ ಆರೈಕೆ ಮಾಡುತ್ತಿರುವರು. ವಿಷಮತೆಗೆ ಏರುತ್ತಿದ್ದ ಪರಿಸ್ಥಿತಿಯನ್ನು ಶಾಂತಗೊಳಿಸಿದ್ದ ಡಾ। ಯು. ಪಿ. ಮಲ್ಯರು ಅಭಿನಂದನೀಯರು.

ಉಡುಪಿ

ಖಾಸಗಿ ಶಾಲೆಗಳ ಗೋಳು:— ಸರಕಾರದವರು ಜಿಲ್ಲೆಯ ಖಾಸಗಿ ಶಾಲೆಗಳಿಗೆ ೧೯೩೯-೪೦ನೇ ವರ್ಷಕ್ಕೆ ಸಿಗುವ ಗ್ರೇಂಟನ್ನು ಪಂಚಿದ ಕ್ರಮದಿಂದಾಗಿ ಹಲವು ಶಾಲೆಗಳು ತಳೆ ಎತ್ತಲಾರದಂತಾಗಿವೆ.

ಆ ಬಗ್ಗೆ ತಾರೀಕು ೧೪-೪-೧೯೪೦ರಲ್ಲು ಉಡುಪಿ ಮೈನ್ ಮ್ಯುನಿಸಿಪಲ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ಮತ್ತು ಕಾರ್ಕಳ ತಾಲೂಕುಗಳ ಖಾಸಗಿ ಶಾಲೆಗಳ ಮೆನೇಜರರ ಒಂದು ವಿಶೇಷ ಮಹಾ ಸಭೆಯು ಸಂಘದ ಅಧ್ಯಕ್ಷರಾದ ಡಾಕ್ಟರ್ ಶ್ರೀ ಟಿ. ಮಾಧವ ಪೈಗಳವರ ಸನ್ನಿಸ್ತ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಉಡುಪಿ ತಾಲೂಕಿನ ೧೪೫ ಶಾಲೆಗಳಲ್ಲಿನ ೬೫ ಶಾಲೆಗಳಿಗೆ ಸಿಕ್ಕತಕ್ಕ ಗ್ರೇಂಟಿನ ಶೇಕಡಾ ೯೦ ರೂ. ಗಳವರೆಗೆ ಕಡಿತವಾದ ವಿಷಯ ಚರ್ಚಿಸಲ್ಪಟ್ಟಿತು. ಈ ಬಗ್ಗೆ ಜಿಲ್ಲೆಯ ಸಮಸ್ತ ಶಾಲೆಗಳ ಮನೇಜರರು ಒಂದುಗೂಡಬೇಕೆಂದೂ, ಅದಕ್ಕಾಗಿ ಆಯ ತಾಲೂಕುಗಳ ಮೆನೆಜರರ ಸಂಘದ ಪ್ರತಿನಿಧಿಗಳೂ ಸಂಘಗಳಿಲ್ಲದ ತಾಲೂಕಿನ ಮೆನೆಜರರೂ, ದೂರದವರು ಪತ್ರವ್ಯವಹಾರ ಮೂಲಕವೂ ಸಹಕರಿಸಿ ಈ ಸಂಘವನ್ನೇ ಜಿಲ್ಲಾ ಮೆನೆಜರರ ಸಂಘವನ್ನಾಗಿ ಸಂಘಟಿಸಿಕೊಳ್ಳಬೇಕಾಗಿಯೂ ನಿರ್ಣಯಿಸಲ್ಪಟ್ಟಿತು. ಈ ಸಭೆಯು ಈಗ ಬಂದೊದಗಿದ ಶೋಚನೀಯ ಪರಿಸ್ಥಿತಿಯನ್ನು ಇಂದಿನಿಂದ ಮೂರು ಆದಿತ್ಯವಾರಗಳಲ್ಲಿ ಮೂರು ಸಭೆಗಳನ್ನು ಉಡುಪಿ ಮ್ಯುನಿಸಿಪಲ್ ಸದ್ರಿ ಮೈನ್ ಶಾಲೆಯಲಿ ಜರಗಿಸಿ ಚರ್ಚಿಸಬೇಕಾಗಿಯೂ ನಿರ್ಣಯಿಸಲ್ಪಟ್ಟಿತು: ಸದ್ಯ ಪರಿಸ್ಥಿತಿಯನ್ನೂ, ಕ್ರಮವಾಗಿ ಪ್ರಚಾರ ಮಾಡಲಿಕ್ಕಾಗಿ ಶ್ರೀ ಕೆ. ಎನ್. ಕಾರಂತರವರ ನೇತೃತ್ವದಲ್ಲಿ ಒಂದು ಪ್ರಚಾರಕ ಮಂಡಳಿಯು ಏರ್ಪಟ್ಟು, ಅದರ ಮೂಲಕ ಜಿಲ್ಲೆಯ ಎಲ್ಲಾ ಪತ್ರಿಕಾ ಕರ್ತರುಗಳ ಸಹಕಾರವನ್ನು ಪಡೆದು ಕ್ರಮವಾದ ಪ್ರಚಾರಕಾರ್ಯ ನಡಿಸಬೇಕಾಗಿ ಕೂಡಾ ನಿರ್ಣಯಿಸಲ್ಪಟ್ಟಿತು.

ಖಾಸಗಿ ಶಾಲೆಗಳಿಗೆ ಕಡತವು ಅನಿಶ್ಚಿತವಾಗಿರುವುದರಿಂದ ಜಿಲ್ಲೆಯ ಎಲ್ಲಾ ಮೆನೆಜರರು ಒಂದುಗೂಡಿ ತಮ್ಮ ದಾರಿಯನ್ನು ಸರಿಪಡಿಸಿಕೊಳ್ಳುವ ಕಾಲವು ಸನ್ನಿಹಿತವಾಗಿದೆ. ಪತ್ರವ್ಯವಹಾರ ನಡೆಸುವವರು ಉಡುಪಿ ತಾಲೂಕು ಖಾಸಗಿ ಶಾಲೆಗಳ ಮೆನೆಜರರ ಸಂಘದ ಕಾರ್ಯದರ್ಶಿ ಶ್ರೀ ಕೆ. ಲಕ್ಷ್ಮಯ್ಯ ಇವರೊಡನೆ ಮಾಡಬಹುದು ಎಂದು ಪ್ರಚಾರಕರು ತಿಳಿಸುತ್ತಾರೆ.

"ಇಂದು ಜಗತ್ತು ಮಹಾ ಸ್ವಾರ್ಥಕ್ಕೆ ಒಳಗಾಗಿದೆ. ಅದನ್ನು ತಪ್ಪಿಸಲು ಜಗತ್ತಿನ ಮಹಾ ಶಾಂತಿಸಾಧಕರಾದ ಗಾಂಧಿಜಿಯವರು ಸಮಸ್ತರು ಸ್ವತಂತ್ರ ವಿಚಾರ ಆತ್ಮದಳರೆ, ಸತ್ಯವ್ರತಗಳ ಮಹಾ ಮುನಿಯಾದ ಗಾಂಧಿಜಿಯವರ ನಿರ್ಣಯವು ಜಂಡಿತವಾಗಿಯೂ ಲೋಕಹಿತವನ್ನು ಸಾಧಿಸ ಬಲ್ಲುದು!" ಎಂದು ಸ್ವಾಮಿಯವರು ಹೇಳುತ್ತಾರೆ.

ಪುತ್ತೂರು

೨೪೨೪ನೇ ಪುತ್ತೂರು ಸಹಕಾರಿ ಸ್ಟೋರ್ಸ್:— ಕಳೆದ ತಾ. ೧ನೇ ಶುಕ್ರವಾರ ಪೂರ್ವಾಹ್ನ ಘಂಟೆ ೧೧-೩೦ಕ್ಕೆ ಶ್ರೀ। ನೊಕಹಳ್ಳಿ ಶಿವರಾಯರವರಿಂದ ಮೇಲಿನ ಸಂಸ್ಥೆಯ ಪ್ರಾರಂಭೋತ್ಸವವು ನೆರವೇರಿತು.

ಬೇಸಿಗೆ ಕಾಲದಲ್ಲಿ

ಕಾಲುಬೇನೆ

ಪ್ರತೀ ರಾತ್ರೆ ಜ್ಯಾಂಬಕನ್ನು ಸವರಿಸಿರಿ.

ಬೇಸಿಗೆಕಾಲವನ್ನು ಕಾಲುಬೇನೆಯು ತಿಳಿಸುವುದು. ಬೇಸಿಗೆ ಕಾಲದಲ್ಲಿ ಅದು ಬಾತುಕೊಂಡು ಗಾಯಗಳುಂಟಾಗುವವು. ಆದುದರಿಂದ ನಿಮ್ಮ ಕಾಲುಗಳನ್ನು ಉತ್ತಮಸ್ಥಿತಿಯಲ್ಲಿರಿಸಲು ಪ್ರತೀ ರಾತ್ರೆಯೂ ಜ್ಯಾಂಬಕನ್ನು ತಿಕ್ಕಿರಿ. ಜ್ಯಾಂಬಕಿನಲ್ಲಿರುವ ಶುದ್ಧ ಮಾಡಲ್ಪಟ್ಟ ಗಿಡಮೂಲಿಕೆಗಳ ಬಣ್ಣವು ಚರ್ಮದೊಳಗೆ ಚೆನ್ನಾಗಿ ಹೀರಲ್ಪಟ್ಟು ನೋವನ್ನು ಕಡಿಮೆಮಾಡಿ ಗಾಯವನ್ನು ಬಾತುವಿಕೆಯನ್ನೂ ಗುಣಪಡಿಸುವುದು. ಭಯಂಕರವಾದ ಗಾಯಗಳೂ ಕಡಿತಗಳೂ ಕೂಡ ಕೂಡಲೇ ಗುಣಹೊಂದುವುದು ಮತ್ತು ನಿಮ್ಮ ಕಾಲು ಪುನಃ ಆರೋಗ್ಯಸ್ಥಿತಿಯಲ್ಲಿರುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ರೂ. 1 ಮತ್ತು 2-4-0ರಂತೆ ಮಾರಲ್ಪಡುತ್ತದೆ.

ಏಜಂಟ್:

ಮೆಸರ್ಸ್ ದಾಥ್ ಮತ್ತು ಕಂಪೆನಿ, ಜಾರ್ಜ್‌ಟೌನ್ ಮದ್ರಾಸು.

ಯಾವಾಗಲೂ ಜ್ಯಾಂಬಕ್ ಮುಲಾಮನ್ನೇ ಉಪಯೋಗಿಸಿ

ZAM-BUK

ಪ್ರಾಣಿಕೊಬ್ಬಿನಿಂದ ವಿರಹಿತವಾದದ್ದು.

ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ

ಲೋಧ್ರ

ತಯಾರಿಸುವವರು:

ಕೇಸರಿ ಕುಟೀರ :: ರಾಯಪೇಟೆ :: ಮದರಾಸು.

ಸ್ಥಳೀಯ ಸ್ಟೋಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

ಸಿನೆಮಾ ಪುಟ

ಚಲಚಿತ್ರಗಳ ನಿರ್ದೇಶಕರು

ಒಂದು ಸಿನೆಮಾವು ಒಳ್ಳೇಯದಾಗ ಬೇಕಾದರೆ ಹಲವು ವಿಷಯಗಳು ಅವಶ್ಯವಾಗಿವೆ ಉತ್ತಮ ನಟರು ಬೇಕು, ಒಳ್ಳೇಯ ಕಥೆಯಾಗಿರಬೇಕು, ಯೋಗ್ಯ ಸನ್ನಿವೇಶಗಳಿರಬೇಕು, ಫೋಟೋಗ್ರಾಫ್ ಚನ್ನಾಗಿರಬೇಕು, ಸಂಗೀತವು ಮಧುರವಿರಬೇಕು—ಹೀಗೆ ಅನೇಕ ಬೇಕು ಬೇಕುಗಳು ಅವಶ್ಯವಾಗಿದ್ದರೂ, ಇವೆಲ್ಲದಕ್ಕಿಂತಲೂ ಹೆಚ್ಚಾಗಿ, ಕಥೆ, ನಟರು, ಸನ್ನಿವೇಶ, ಅವುಗಳೆಲ್ಲವನ್ನೂ ಆಯ್ದುಕೊಂಡು ಇಡೀ ಚಲಚಿತ್ರವನ್ನು ನಿರ್ದೇಶಿಸುವ ನಿರ್ದೇಶಕರ ಪ್ರಭಾವವು, ಕೈಗುಣವು ಅತ್ಯಂತ ಹೆಚ್ಚಿನದಾಗಿರುತ್ತದೆ ಒಂದು ಚಲಚಿತ್ರದ ಯಶಸ್ವಿತೆಯಲ್ಲಿ ಅದರ ಬಹುಭಾಗದ ಕೀರ್ತಿಯು ನಿರ್ದೇಶಕರಿಗೆ ಸಲ್ಲತಕ್ಕದ್ದಾಗಿದೆ ಉತ್ತರ ಭಾರತದ ಹಾಗೂ ದಕ್ಷಿಣ ಭಾರತದ ಕೆಲವು ಪ್ರಸಿದ್ಧ ನಿರ್ದೇಶಕರ ಸೂಕ್ಷ್ಮ ಪರಿಚಯವನ್ನು ಇಲ್ಲಿ ಕೊಡಲಾಗಿದೆ

ಬಾಬುರಾವ್ ಪೆಂಡಾರ್ಕರ್

ಚಲಚ್ಚಿತ್ರದಲ್ಲಿ ಒಳ್ಳೆಯ ಹೆಸರು ಪಡೆದಿದ್ದಾರೆ ಇವರ ನಟರನ್ನು ಆಯಾಸವಾಗದಂತೆ, ಆನಂದ ಕೆಡದಂತೆ ತರಬೇತಿ ಮಾಡುವರು ನಟನಟಿಯರನ್ನು ಒಂದು ರೀತಿಯ ಮಾಟಗಾರಿಕೆಯಿಂದಲೋ ಎಂಬಂತೆ ಕುಣಿಸಿ, ಬಹಳ ಸೂಕ್ಷ್ಮನಟನೆಯಲ್ಲಿಯೇ ಹೆಚ್ಚಿನ ತನ್ಮಯತೆಯನ್ನು ತರಬಲ್ಲವರಾಗಿದ್ದಾರೆ

ವಿನಾಯಕ್

ಒಳ್ಳೆಯ ನಟರಾಗಿ, ಉತ್ತಮ ನಿದರ್ಶಕರಾಗಿ ಇವರು ಪ್ರಖ್ಯಾತರಾಗಿದ್ದಾರೆ ಕಲೆಗಾಗಿ ಕಲೆಯೆಂಬ ದೃಷ್ಟಿಯಲ್ಲಿ ದುಡಿಯುವ ಧ್ಯೇಯದವರು ನಿತ್ಯ ಹಸನ್ಮುಖಿಗಳು ರತ್ನಪ್ರಭಾ, ಲೀಲಾ ಚಿಟ್ನೀಸ್, ಇಂದ್ರಾ ವಾಡ್ಕರ್, ಚಂದ್ರಮೋಹನ ಮೊದಲಾದ ಪ್ರಸಿದ್ಧ ಕಲಾವಿದರೊಡನೆ ಅವರು ತಮ್ಮ ಉತ್ತಮ ಚಾಣಾಕ್ಷ್ಯವನ್ನು ತೋರಿಸುತ್ತಾರೆ. ಬಹಳ ಸರಲಸ್ವಭಾವದವರು ಕರುಣೆಯಲ್ಲಿ ಕಂಬನಿ ಸುರಿಸುತ್ತಾರೆ ಕೋಪದಲ್ಲಿ ಕಿಡಿ ಹಾರಿಸುತ್ತಾರೆ. ಸಾವಿರಾರು ಸುಂದರ ಸ್ವಪ್ನಗಳನ್ನು ಸೃಷ್ಟಿಸಬಲ್ಲವರಾಗಿದ್ದಾರೆ.

ಬಿ. ಜಿ ಪೆಂಡಾರ್ಕರ್

ಮಹಾರಾಷ್ಟ್ರದ ಪ್ರಸಿದ್ಧ ಲೇಖಕರು ಮರಾಠಿ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಅಪ್ರತಿಮ ವಿದ್ವಾಂಸರು, ಶ್ಯಾಮಸುಂದರ, ಆಕಾಶವಾಣಿ, ರಾಜಗೋಪಿಚಂದ, ನೇತಾಜಿಪಾಲ್ಕರ್ ಮೊದಲಾದ ಉಜ್ವಲ ಕಥೆಗಳನ್ನು ಬರೆದಿದ್ದಾರೆ. ಬಹಳ ಶಿಸ್ತು ನಿಯಮಪಾಲಕರು. ಅವರು ಎಲ್ಲಾ ಪಾತ್ರಗಳನ್ನು ಅಭಿನಯಿಸ ಬಲ್ಲವರು ಕೆಲಸಗಾರರ ಮೇಲೆ ಬಹಳ ಮಮತೆ ಅವರಿಗೆ ಯಾರಲ್ಲಿ ಎಷ್ಟು ಯೋಗ್ಯತೆಯಿದೆಯೆಂಬುದನ್ನು ಅರಿಯಬಲ್ಲವರು ಎಲ್ಲರನ್ನೂ ಸಮಾನತೆಯಿಂದ ಕಾಣುವರು ಅವರು ಸರ್ವರಿಗೂ ಹಿತರಾಗಿದ್ದಾರೆ. ಮರಾಠದಲ್ಲಿ ಅವರು ಸರ್ವತ್ರ ಪ್ರಸಿದ್ಧರು.

ಶಾಂತರಾಮ

ಶಾಂತರಾಮರು ಸಿನೆಮಾ ಜಗತ್ತಿನಲ್ಲಿ ತನ್ನದೇ ತನ್ನದಾದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡವರು ಶಾಂತಾ ಆಪ್ಟೆ ಹ ಬ್ಲೈಕರ್ ಮೊದಲಾದವರನ್ನು ಉತ್ತಮ ನಟಿಯರವ ಟ್ಟಕ್ಕೇರಿಸಿದ ಸಾಹಸಿ ಅವರ ಚಿತ್ರಗಳು ಪಂಡಿತ ಪಾಮರ ರಂಜಕಗಳು ಸಾಮಾನ್ಯ ಜೀವನದ ಘಟನೆಗಳಲ್ಲಿ ಅವರ ಮಹತ್ವ ತತ್ವಗಳನ್ನು ತುಂಬಿಸಬಲ್ಲವರು ದೀರ್ಘ ವಿಚಾರಿಗಳು ಮಾನಸ್ವಭಾವವನ್ನು ಚನ್ನಾಗಿ ಪರಿಶೀಲಿಸಿದವರು. ಆದುದರಿಂದಲೇ ಚಿತ್ರಗಳ ಮಾನವ ಹೃದಯವನ್ನು ಬಹಳ ಆಕರ್ಷಿಸುತ್ತಿವೆ

ಇವಿಷ್ಟು ಉತ್ತರ ಭಾರತದ ನಿರ್ದೇಶಕರ ವಿಚಾರವಾಯಿತು ಇನ್ನು ದಕ್ಷಿಣ ಭಾರತದಲ್ಲಿ ಯಾರು ಕೆಲವು ಪ್ರಸಿದ್ಧ ನಿರ್ದೇಶಕರಿದ್ದಾರೆ

ರಾಜಾ ಸ್ಯಾಂಡೋ

ಇವರು ಅಖಿಲ ಭಾರತ ಕೀರ್ತಿಯನ್ನು ಪಡೆದಿದ್ದಾರೆ ಖ್ಯಾತನಟರು ಮತ್ತು ಪ್ರಸಿದ್ಧ ನಿರ್ದೇಶಕರು ಹೊರಗಿನ ವ್ಯವಹಾರದಲ್ಲಿ ನಿಷ್ಠುರರಾದರೂ, ಒಳಗಡೆ ಬಹಳ ದಯಾರ್ದ್ರ ಹೃದಯ ಅವರದು ಜೀವನವನ್ನು ವಿವಿಧ ಪಾರ್ಶ್ವದಿಂದ ಅವರು ನಿರೀಕ್ಷಿಸಿದ್ದಾರೆ ಸಿನೆಮಾಲೋಕದಲ್ಲಿ ಅವರಿಗೆ ಗೊತ್ತಿಲ್ಲದ್ದು ಎಂಬುದಿಲ್ಲ ಯಾರನ್ನೂ ಅವರು ಅನುಕರಿಸುವುದಿಲ್ಲ ಒಂದು ದಿನ ಬಹು ಪ್ರಖ್ಯಾತರಾದ ಪ್ರಥಮ ತರಗತಿಯ ನಿರ್ದೇಶಕರಾಗುವ ಸಾಮರ್ಥ್ಯ ಅವರಿಗಿದೆ.

ಶೆರ್ಲಿ ಟೆಂಪಲಳ ಜೀವನ ಚಿತ್ರ

ಶರ್ಲಿ ಟೆಂಪಲಳ ಜೀವನ ಚಿತ್ರವನ್ನು ಒಂದು ಚಲಚಿತ್ರವಾಗಿ ತೆಗೆಯುತ್ತಾರೆ. ಅದರಲ್ಲಿ ಶರ್ಲಿಯೇ ಅಭಿನಯಿಸುವುದು ಜೇನ್ ಓಕಿ ಮತ್ತು ಚಾರ್ಲೊಟಿ ಗ್ರೀನ್ ವುಡ್ ಇವರು ಶ್ರೀಮಾನ್ ಮತ್ತು ಶ್ರೀಮತಿ ಜಾರ್ಜ್ ಟೆಂಪಲ್ ಶರ್ಲಿಯ ಹೆತ್ತವರು. ಇವರ ಪಾತ್ರಗಳನ್ನೂ ಅಭಿನಯಿಸುವರು.

ಶೋಭನಾ ಸಮರ್ಥಳ ಪತಿ

ಶೋಭನಾ ಸಮರ್ಥಳ ಗಂಡ ಶ್ರೀ ಸಮರ್ಥರು ಹಿಂದೂಸ್ಥಾನ ಸಿನೆಟೋನಿನ ಪ್ರೊಡಕ್ಷನ್ ಮೇನೇಜರರಾಗಿರುವರು.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು ಉಷ್ಣದಿಂದ ಬೆಂದುತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು ಎಲ್ಲಾ ಮಹಿಳೆಯರು ಇದರ ಸ ನ ಧ ರವಾದ ಪರಿಮಳವನ್ನು ಮೆಚ್ಚುತ್ತಿದ್ದಾರೆ

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು
CUTICURA TALCUM POWDER



ನಿಮ್ಮ ಅದೃಷ್ಟ!

ಸ್ಪ್ರೋನ್ಸ್ ಇತ್ತೀಚಿನ ಮೇಲೆ ಹುಟ್ಟುವುದು ಪರಿಪೂರ್ಣ ಹೂವಿನ ಹೆಸರು, ನಿಮ್ಮ ಹೆಸರ ಮತ್ತು ವಿಳಾಸವನ್ನು ಬರೆದು ಕಳುಹಿಸಿ ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ಪಹಿವಾಟಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ 1-9-0ಕೆ ವಿ ಪಿ ಮೂಲಕ ತಿಳಿಸುವೆವು ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.

ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು ಇದ ಸುಳ್ಳೆಂದ ರುಜುಪಡಿಸಿದವರಿಗೆ ರೂ 100 ಇನಾಮು ಕೊಡಲಾಗುವುದು

ANAND JOTISH ASHRAM,
Post Box No. 27 (S.A.M.) Amritsar.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ಈ ಶಿಬಿರದ ಸತ್ಯಾಗ್ರಹದ ಪ್ರಥಮ ಸೇನಾನಿ!

ಪ್ರಥಮ ಸತ್ಯಾಗ್ರಹಿ ಸಂಯಮಿಶ್ರೇಷ್ಠ ಸೇನಾನಿ

ಆಚಾರ್ಯ ವಿನೋಬಾ

"ವಿನೋಬಾ ಅಂದರೆ ಗಾಂಧಿಜಿ ಜೀವದ ಹೋಳುಗಳು: ಯುವರಿಗೆ ಬಹು ಅಕ್ಕರೆ. ವಿನೋಬಾ ಗಾಂಧಿವಾದಿಗಳಲ್ಲಿ ಆಣಿ ಮುತ್ತು ಇತ್ತೀಚಿಗೆ ರಾಜಕೀಯ ರಂಗವನ್ನು ಬಿಟ್ಟು ಆಧಾತ್ಮ ಲೋಕದಲ್ಲೇ ಓಡಾಡುತ್ತಾರೆ. ಗಾಂಧಿ ಶಿಷ್ಯರಲ್ಲಿ ತಮ್ಮದೇ ಆದ ಒಂದು ವರ್ಚಸ್ಸನ್ನು ಸಂಪಾದಿಸಿಕೊಂಡಿದ್ದಾರೆ." ಹೀಗೆಂದು ಶ್ರೀ ಸಿದ್ಧಪ್ಪನ ಹಳ್ಳಿ ಕೃಷ್ಣಶರ್ಮಾ ಇವರು ತಮ್ಮ ವರ್ಧಾಯಾತ್ರೆಯೆಂಬ ಪುಸ್ತಕದಲ್ಲಿ ಬರೆಯುತ್ತಾ ಸಂಯಮಿಶ್ರೇಷ್ಠ ವಿನೋಬಾ ಇವರ ಉಜ್ವಲ ಜೀವನದ ಚಿತ್ರವನ್ನು ರಮಣೀಯವಾಗಿ ತೋರಿಸಿದ್ದಾರೆ.

ಶ್ರೀ ಶರ್ಮರು ಹೀಗೆ ಮುಂದುವರಿಸುತ್ತಾರೆ.

"ಒಂದು ವರ್ಷದ ಕೆಳಗೆ ವಿನೋಬಾ ಬಹಳ ಬೇನೆ ಬಿದ್ದರು. ಆ ಹೊಡೆತದಿಂದ ಇನ್ನೂ ತಪ್ಪರಿಸಿರಲಿಲ್ಲ. ಆರೋಗ್ಯಕ್ಕಾಗಿ ವರ್ಧಾದಿಂದ ಪೌನಾರಿಗೆ ಅವರನ್ನು ಕಳುಹಿಸಲಾಗಿತ್ತು. ಅವರಿಗೆ ಮದುವೆಯಿಲ್ಲ. ಗಾಂಧಿಜಿಯವರ ಸಬರಮತಿ ಆಶ್ರಮವನ್ನು ಸೇರಿದಾಗಲೇ ಅವರು ಬ್ರಹ್ಮಚರ್ಯ ವ್ರತವನ್ನು ಹಿಡಿದರು. ಬ್ರಹ್ಮಚರ್ಯವು ಅವರಿಗೆ ಕೇವಲ ಮದುವೆಯಾಗದಿರುವ ಒಂದು ಅರ್ಥಿಕ ಉಪಾಯವಲ್ಲ. ಸಂಸಾರದ ಹೊರೆಯನ್ನು ತಪ್ಪಿಸಿಕೊಂಡು ಸುಖವಾಗಿರುವ ನಾಗರಿಕ ತಂತ್ರವೂ ಅಲ್ಲ. ಸಂತಾನ ನಿರೋಧವಲ್ಲ. ಸಂಯಮ ಶೀಲತೆ ಅವರ ಪಾಲಿಗೆ ಅದೊಂದು ಧ್ಯೇಯ. ... ನಾವು ಹೋದಾಗ ರಾತ್ರಿ ... ಸಂಸಾರ ... ದಲ್ಲಿ ಮುಳುಗಿತ್ತು. ಆ ನೀರವ ... ಕತ್ತಲಲ್ಲಿ ಒಕ್ಕಯಂತೆ ಬಂಗಲೆಯಲ್ಲಿ ದೀಪವೊಂದು ಉರಿಯುತ್ತಿತ್ತು. ದೃಢಕಂಠದಿಂದ ಸುಶ್ರಾವ್ಯವಾಗಿ ಭಗವದ್ಗೀತೆಯ ಶ್ಲೋಕಗಳು ಕೇಳಿ ಬರುತ್ತಿದ್ದುವು. ಆ ತಾಪು ಹೊತ್ತು! ತುಂಬಿದ್ದ ಶಾಂತಿ! ಎಲ್ಲ ಭೇದಗಳನ್ನು ಅಳಿಸುವ ಕತ್ತಲೆ. ನಿದ್ದೆ ಹೋಗುತ್ತಿದ್ದ ಜಗತ್ತು. ಬ್ರಾಹ್ಮೀಸ್ಥಿತಿಯನ್ನು ಚಿಂತನೆ ಮಾಡುತ್ತಿದ್ದ ಸಂಯಮ ಶ್ರೇಷ್ಠರು. ಧ್ಯೇಯ ಬ್ರಹ್ಮ ನಿರ್ವಾಣ! ಇಂಥ ಅನುಭವ ಪುಣ್ಯ ವಿಶೇಷವಿಲ್ಲದೆ ಒದಗುವುದಲ್ಲವೆಂದು ನಮ್ಮ ತಾಯಿ ಹೇಳುತ್ತಿದ್ದರು.

ಬಂಗಲೆಯ ನಡುಮನೆಯಲ್ಲಿ ಬಾಗಿಲಿಗೆ ಸ್ವಲ್ಪ ಓರೆಯಾಗಿ ವಿನೋಬಾ ಕುಳಿತಿದ್ದರು. ಪದ್ಮಾಸನ ಹಾಕಿ ಮಂಡಿಸಿದ್ದರು. ಮಗ್ಗುಲಲ್ಲಿ ಲಾಂದ್ರ ಇದರಲ್ಲಿ ವ್ಯಾಸಪೀಠ. ಅದರಲ್ಲಿ ಗೀತಾ. ಆಚಾರ್ಯರ ಮೇಲೆ ಅಂಥ ಬಹಳ ಇರಲಿಲ್ಲ. ಪುಸ್ತಕ ನೋಡಲು ಸಾಧನವೆಂದು ಕಣ್ಣಿಗೊಂದು ಕನ್ನಡಕ ಇಟ್ಟಿದ್ದರು.

ಹೋದವರಲ್ಲಿ ನನ್ನ ಗೆಳೆಯ ದಾಮು ಅವರಿಗೆ ಚೆನ್ನಾಗಿ ಪರಿಚಿತನು.

"ಏನು ಈ ಅವೇಳ ರಾತ್ರಿಯಲ್ಲಿ ಬಂದಿ? ಇವರು ಯಾರು?" ವಿನೋಬಾ ಕೇಳಿದರು. ... ಪರಿಚಯ ಮಾಡಿ ಕೊಟ್ಟಾಯಿತು.

... ಪೂರ್ಣವಾದ ಈ ಅವ್ಯಕ್ತ ಯೋಗದಲ್ಲಿ ಹೈದರಾಬಾದಿನ ಸೆರೆಮನೆ ಗೃಹದ ಮಾತು ಆಡಿ ಕಾಲ ಕಳೆಯುವುದು ರುಚಿಸಲಿಲ್ಲ. ಗೀತೆಯನ್ನು ನಾವು ಬರುವಾಗ ವಿನೋಬಾ ಮೆಲುಕು ಹಾಕುತ್ತಿದ್ದರು.

'ನಾವು ಬಂದಾಗ ಗೀತೆಯ ಪುರಾಣ ನಡೆದಿತ್ತು. ಅದಕ್ಕೆ ಅಡ್ಡಿಯಾಗಬಾರದೆಂದು ನನ್ನ ಆಶೆ. ಗೀತೆಯ ಮೇಲೆ ತಮ್ಮ ಅಭಿಮಾನ ಬಹಳ ಎಂದು ಕೇಳಿದ್ದೇನೆ'

'ನಿಜ, ಗೀತೆ ಎಂದರೆ ನನಗೆ ಬಹಳ ಆದರ. ಇಪ್ಪತ್ತು ವರ್ಷವಾಯಿತು ಗೀತೆಯನ್ನು ಪಾರಾಯಣ ಮಾಡದೆಯೊ ಚಿಂತನೆ ಮಾಡದೆಯೋ ಒಂದಾದರೂ ದಿನವನ್ನು ಕಳೆದೆನೆಂದು ನನಗನಿಸುವುದಿಲ್ಲ. ಗೀತಾಧೀನವಿನ ಬಳಿ ಕುಳಿತು ದಿನದಿನವೂ ನನ್ನ ಆತ್ಮದ ತೃಷೆಯನ್ನು ಹಿಂಗಿಸಿದ್ದೇನೆ'

ವಿನೋಬಾ ಮಹಾರಾಷ್ಟ್ರದವರು. ಅವರ ಪೂರ್ಣ ಹೆಸರು ವಿನೋಬಾ ಭಾವೆ.

ನಾನು ಕೇಳಿದೆ "ಪ್ರಸ್ಥಾನತ್ರಯದಲ್ಲಿ ವೇದೋಪನಿಷತ್ತುಗಳಿಗಿಂತ ... ಗೀತೆಗೇ ಯಾವ ... ಕೊಡುವ ಕಾರಣ ...?"

"ಅಹುದು, ವೇದೋಪನಿಷತ್ತುಗಳು ... ಸಾಗರಗಳಂತೆ ಆಳವಾಗಿ ಮುಳುಗಿ ರತ್ನಗಳನ್ನು ಹುಡುಕಬೇಕು ... ಗೊತ್ತಿರಬೇಕು ... ಗೊತ್ತಿಲ್ಲದ ಸಾಮಾನ್ಯ ಜನರಿಗೆ ಅವು ... ಗತಿ. ಗೀತೆ ಹಾಗಲ್ಲ. ಇಡೀ ಮಾನವ ಕೋಟಿಗೇ ಕಲ್ಯಾಣದಾಯಿ. ಸುಲಭವಾಗಿ ಸರಳವಾಗಿ ಬ್ರಹ್ಮ ಮಾರ್ಗವನ್ನು ಸೂಚಿಸುತ್ತದೆ. ಎಲ್ಲರ ಬಾಳಿನ ಒಗಟನ್ನು ಬಿಡಿಸುತ್ತದೆ. ಜೀವನದ ಅನೇಕ ಕ್ಲಿಷ್ಟ ಸಮಯಗಳಲ್ಲಿ, ಸಂದಿಗ್ಧ ಸಮಯಗಳಲ್ಲಿ ಗೀತೆಯೇ ನನಗೆ ಬೆಳಕು ತೋರಿತು ಎಂದು ಗಾಂಧಿಜಿ ಹೇಳುವುದು ಸುಳ್ಳಲ್ಲ"

ಕಣ್ಣಿಗಿದ್ದ ಕನ್ನಡಕ ಇಳಿಸಿದರು. ನಂದಾದೀಪದಂತೆ ಸ್ಥಿರವಾಗಿದ್ದ ಕಣ್ಣುಗಳು ಕಾಣ ಬಂದುವು. ತಪೋಜೀವನದ ನಿಷ್ಠುರ ಸಂಯಮಕ್ಕೊಳಗಾದ ಮೈ ಇದ್ದುದೂ ಕರಗಿಹೋಗಿದೆ. ಸ್ವಭಾವ ಬಹಳ ಸಂಕೋಚದ್ದು. ತೆಂಗಿನ ಕಾಯಂತೆ ಮೇಲಿನ ಚಿಪ್ಪನ್ನು ಒಡೆದರೆ ಒಳಗೆ ಪಾನಯೋಗ್ಯವಾದ ಎಳನೀರು ಸ್ವಲ್ಪ ಅಲುಗಾಡಿಸಬೇಕು.

ಬ್ರಹ್ಮಚರ್ಯದ ವ್ರತವು ಜೀವನದ ಆನಂದದಲ್ಲಿ ಅವರಿಗಿರುವ ಶ್ರದ್ಧೆ ಆಸಕ್ತಿಗಳನ್ನು ಕಡಿಮೆ ಮಾಡಿಲ್ಲ. ಅಂತರ್ಜ್ಯೋತಿಯನ್ನು ಅಖಂಡವಾಗಿ ದೇದೀಪ್ಯಮಾನವಾಗಿ ಬೆಳಗಿಸುವುದು. ದೇಹವು ಒಂದು ರಥ. ಇಂದ್ರಿಯಗಳು ಕುದುರೆಗಳು. ಅವನ್ನು ಪಳಗಿಸಿಕೊಳ್ಳಬೇಕು. ವಿವೇಕಕ್ಕೆ ವಿಧೇಯವಾಗಿರುವಂತೆ ಅವನ್ನು ತಿದ್ದಬೇಕು.

ವಿನೋಬಾ ಹಿರಿಯ ಪಂಡಿತರು. ಇಷ್ಟು ಬಹಳವಾಗಿ ಅಭ್ಯಾಸ ಮಾಡಿದವರು ವಿರಳ. ವೇದಪುರಾಣಾದಿಗಳು ಅವರಿಗೆ ಕನ್ನಡಿಯಿದ್ದಂತೆ. ಕೆಲವರಿಗಾದರೆ ಅಗಾಧ ಪಾಂಡಿತ್ಯ ಬಂದೀತು ... ಜೀವದ ಪಥದಲ್ಲಿ ... ಬಹಳ ಇಲ ... ಕೃತಿಯ ... ಇದ್ದ ... ಹೋಗುವುದಿಲ್ಲ.

ಗಾಂಧಿಜಿಯವರ ಜೀವನ ಸೌರಭಕ್ಕೆ ... ಓಡಿ ಹೋದದಂಗಳಲ್ಲಿ ಇವರೂ ಒಬ್ಬರು. ಕಾಲೇಜಿಗೆ ಶರಣಹೊಡೆದ ಸ್ವಾರ್ಥತ್ಯಾಗವನ್ನು ನೋಡಿದರು. ಇವರ ತಾಪಸಿಕ ಜೀವದ ಸುಮುಖ ಭಾವನೆಗಳು ಗಾಂಧಿಜಿಯವರನ್ನು ಮೆಚ್ಚಿಸಿದವು. ಕೆಲ್ಲ ದಿನಗಳಲ್ಲಿಯೇ ಸೇಟ್ ಜಮ್ನಾಲಾಲ್ ಬಜಾಜರು ಸಾಬರಮತಿಯ ಮಾದರಿಯಲ್ಲಿಯೇ ಆಶ್ರಮವೊಂದನ್ನು ವರ್ಧಾದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು. ವರ್ಧಾ ಆಶ್ರಮಕ್ಕೆ ವಿನೋಬಾರವರನ್ನು ಗಾಂಧಿಜಿಯವರು ಹಿರಿಯರನ್ನಾಗಿ ಕಳುಹಿಸಿ ಕೊಟ್ಟರು. ಅಂದಿನಿಂದ ಇಂದಿನವರೆಗೂ ವಿನೋಬಾ ಅಲ್ಲಿ ಇದ್ದಾರೆ.

'ವಿನೋಬಾ ಬರಿ ಆಧ್ಯಾತ್ಮಿಕ ಲೋಕದ ಮರುಳಲ್ಲ. ಅವರ ಆಶ್ರಮ ಜೀವನದಲ್ಲಿ ಹತ್ತಿ ಹಿಂಜುವದು, ನೂಲುವುದು, ನೇಯುವುದು, ಬೇಸಾಯ ಮುಖ್ಯವಾದ ಶಿಕ್ಷಣ. ಗಾಂಧಿಜಿಯ ವಿದ್ಯಾವಿಧಾನ ಪ್ರಯೋಗ ಇಲ್ಲಿ ದೀರ್ಘಕಾಲ ನಡೆಯಿತು. ಆಶ್ರಮವಾಸಿಗಳು ತಮ್ಮ ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದಾರೆ. ಆಹಾರ ಅತಿಸಾದಾ ಮತ್ತು ಸಾತ್ವಿಕ. ತಾವು ನೂತು ನೇದ ಬಟ್ಟೆಯಿಂದಲೇ ತಮ್ಮ ಉಡುಗೆ. ದಿನವೂ ತಾಸೆರಡು ತಾನು ಆಶ್ರಮವಾಸಿಗಳಿಗೆ ತಮ್ಮ ಅನುಭವ ಗ್ರಂಥಗಳ ಅನೇಕ ವಿಷಯಗಳ ಬಗ್ಗೆ ಉಪದೇಶ ಮಾಡುತ್ತಿದ್ದರು.

ನಾಗಪುರದಲ್ಲಿ ಧ್ವಜಸತ್ಯಾಗ್ರಹ ನಡೆದಾಗ ವರ್ಧಾ ಆಶ್ರಮವೇ ಆ ಚಳವಳಿಯ ಸ್ಫೂರ್ತಿ ಕೇಂದ್ರವಾಯಿತು. ಅದರ ಫಲವಾಗಿ ವಿನೋಬಾ ಸೆರೆಮನೆಯನ್ನು ನೋಡಿದರು."

ಗೀತೆಯ ಮಾತು ನಡೆದಿತ್ತು. ಗೀತೆಯ ಮುಖ್ಯೋಪದೇಶವು ಅನಾಸಕ್ತಿಯೆಂದು ತಿಳಿದ ... ನಿಷ್ಕಾಮ ಕರ್ಮದ ಅರ್ಥವಾಗುತ್ತದೆ ... ಗೀತೆಯಲ್ಲಿ ಅಹಿಂಸೆಯ ... ಕವಿದ ... ಅರ್ಥವಾಗುವುದಿಲ್ಲ ... ಇದೆ.

ಈ ಪ್ರಶ್ನೆ ... ಹೇಳಿದ ... ಉತ್ತರ ... ಉಪದೇಶವಾಗಿತ್ತು!

ಮರುದಿನ ಅಧ್ಯಾಯದಲ್ಲಿ ಆಚಾರ್ಯ ವಿನೋಬಾ ಗೀತೆಯ ಅಹಿಂಸಾರ್ಥದ ಕುರಿತ ಕೇಳಿ ಹೇಳಿದ ವ್ಯಾಖ್ಯಾನವನ್ನು ಶ್ರೀ ಕೃಷ್ಣಶರ್ಮರು ಹೃದಯಂಗಮವಾಗಿ ಕೊಟ್ಟಿರುತ್ತಾರೆ.

A well-rounded programme of

SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially, stand the Syndicate's time tested thrift schemes for guaranteed security

We have a few select plans which enable any man to fully enjoy the fruit of his labours. Study them, join any that suits you and see what great benefit you derive

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.

Head Office:–UDIPI, S. India.

ಕೇಂದ್ರ ಸರಕಾರದ ಕೈಗಾರಿಕೆ ಯೋಜನೆ?

ದೇಶೋನ್ನತಿಗೆ ಸಾಧಕವಾಗಿಲ್ಲ

[ಲೇಖಕರು: ಶ್ರೀ ಜೆ. ಸಿ. ಕುಮಾರಪ್ಪನವರು]

ಹಿಂದೂ ದೇಶದ ಕೈಗಾರಿಕೆಯ ಉನ್ನತಿಯು ಬಗ್ಗೆ ಕೇಂದ್ರ ಸರಕಾರವು ಒಂದು ಯೋಜನೆಯನ್ನು ತಯಾರಿಸುತ್ತಾ ಇದೆಯಾಗಿ ತಿಳಿದುಬರುತ್ತದೆ. ಅದಕ್ಕೋಸ್ಕರ ಕೇಂದ್ರ ಸರಕಾರವು ಕೈಗಾರಿಕೆ ವಿಷಯದಲ್ಲಿ ತಜ್ಞರಾದವರು ಒಂದು ಕೂಟವನ್ನು ಏರ್ಪಡಿಯದೆ. ಅದಕ್ಕೋಸ್ಕರ ಈ ವರ್ಷ ಐದು ಲಕ್ಷ ರೂಪಾಯಿಗಳ ತನಕ ಖರ್ಚು ಮಾಡಲಿಕ್ಕೆ ಹಣ ಕೊಟ್ಟು ಸರಕಾರವು ಈ ಸಂಶೋಧನಾ ಮಂಡಲವನ್ನು ಸ್ಥಾಪಿಸಿದೆ. ಆದರೆ ಈ ಸಂಶೋಧನೆಯು ಭಾರತದ ಭಾವೀ ಉನ್ನತಿಗಾಗಿ ಆಗುವದೆ? ಅಥವಾ ಯೂರೋಪದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಮಿತ್ರರಾಷ್ಟ್ರಗಳಿಗೆ ಸಹಾಯವಾಗಲಿಕ್ಕಾಗಿಯೆ? ಈ ಸಂಶೋಧನೆಯ ಪರಿಣಾಮವಾಗಿ ಆಗುವದು ಭಾರತದ ಆರ್ಥಿಕ ಉನ್ನತಿಯೆ? ಅಥವಾ ಅದರ ಸುಲಿಗೆಯೆ?

ಜೀನಸು ಧಾರಣೆಗಳ ಮೇಲ್ಕೈ

ಕೇಂದ್ರ ಸರಕಾರವು ಯುದ್ಧದ ಪರಿಣಾಮವಾಗಿ ಕೈಕೊಂಡ ಇನ್ನೊಂದು ಕೆಲಸವೆಂದರೆ— ಜೀನಸು ಧಾರಣೆಗಳ ಮೇಲೆ ಕೈ ಇಟ್ಟು ಅದನ್ನು ಹದದಲ್ಲಿ ಇರಿಸುವದಾಗಿದೆ. ಇಂಗ್ಲಾಂಡಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮುಗ್ರಿಗಳು ಸುಲಭ ದರದಲ್ಲಿ ಅದಕ್ಕೆ ಈ ದೇಶದಿಂದ ದೊರೆಯುವಂತೆ ಮಾಡುವದೇ ಜೀನಸು ಧಾರಣೆಗಳನ್ನು ನಿಂತಗೊಳಿಸುವ ಸರಕಾರದ ಧೋರಣೆಯಾಗಿದೆ ಎಂಬುದು ಸ್ಪಷ್ಟವಾಗುವದು. ಈ ಧಾರಣೆಗಳು ನಮ್ಮ ದೇಶದ ಒಕ್ಕಲಿಗರಿಗೆ ನಷ್ಟಕರವಾಗಿರುವುದಾದರೂ ಸರಕಾರವು ಅದನ್ನು ಲೆಕ್ಕಕ್ಕೆ ತರುವ ಹಾಗಿಲ್ಲ. ಆದುದರಿಂದ ಸರಕಾರವು ಕೈಕೊಂಡ ರೈಲ್ವೆ, ಹಡಗು ದರಗಳು, ಸುಂಕ ತೆರಿಗೆಗಳು ನಾಣ್ಯ ನೋಟುಗಳ ಚಲಾವಣೆ ಮತ್ತು ಉಗಿಮಯ ಮೊದಲಾದ ಹಲವಾರು ಉಪಾಯಗಳಿಂದ ಯುದ್ಧಕಾಲದಲ್ಲಿಯೂ ಜೀನಸುಗಳ ಧಾರಣೆಯು ಏರಬೇಕಾಗಿತ್ತಾದರೂ, ಇಂಗ್ಲಾಂಡು ಅಥವಾ ಯುದ್ಧಾಸಕ್ತ ಬೇರೆ ಮಿತ್ರ ರಾಷ್ಟ್ರಗಳಿಗೆ ರಫ್ತಾಗುವ ಹತ್ತಿ, ಗೋದಿ ಮತ್ತು ನೆಲಗಡಲೆಯ ದರವು ಶಾಂತಿ ಕಾಲದ್ದಕ್ಕಿಂತ ಈಗ ನೇಕಡಾ ೨೦ರಷ್ಟು, ಅಗಸೆ ಬೀಜದ ದರವು ನೇಕಡಾ ೩೦ರಷ್ಟು ಕಡಿಮೆಯಾಗಿದೆ. ಇದು ಇಂಗ್ಲಾಂಡಿನ ಜನತೆಯ ತಲೆ ಮೇಲೆ ಬೀಳುವ ಯುದ್ಧದ ಖರ್ಚಿನ ಭಾರದನ್ನು ಬಡಪಾಯಿಗಳಾದ ಹಿಂದುಸ್ಥಾನದ ಕೃಷಿಕರ ತಲೆಮೇಲೆ ಹೊರಿಸುವ ಧೂರ್ತತನವಲ್ಲದ್ದರೆ ಮತ್ತೇನಾಗಬಹುದು?

ಸರಕಾರದ ಕೈಗಾರಿಕೆಯ ನೀತಿ ಯುದ್ಧ ಕಾಲದಲ್ಲಿ ಸರಕಾರದ ಕೈಗಾರಿಕೆ ನೀತಿಯು ಹೀಗೆ ದೇಶಕ್ಕೆ ಅಪಕಾರಿಯಾಗಿ ಇರುವದೆನ್ನುವಾಗ, ಶಾಂತಿ ಕಾಲದಲ್ಲಿಯಾದರೂ ಅದು ಹೇಗಿತ್ತೆಂದು ನೋಡೋಣ. ೧೯೩೭–೩೮ರ ಪ್ರಕಟಿತವಾದ ಅಂಕೆಸಂಖ್ಯೆಗಳಿಂದ ಗೊತ್ತಾಗುವ ಪ್ರಕಾರ ಹಿಂದುಸ್ಥಾನದ ಮುಖ್ಯಪ್ರಾಂತಗಳ ಆಡಳಿತ, ಪೋಲೀಸು, ಮತ್ತು ಕೈಗಾರಿಕೆ ಇಲಾಖೆಗಳಿಗೆ ಸರಕಾರವು ಮಾಡಿದ ಖರ್ಚು ಕೆಳಗೆ ಬರೆದ ಧಾಮಾಶಯದಲ್ಲಿತ್ತು.

	ಆಡಳಿತ	ಪೋಲೀಸು	ಕೈಗಾರಿಕೆ
ಮದ್ರಾಸು	೧೯೩.೭	೬೩.೪	೩.೪೮
ಬೊಂಬಾಯಿ	೮೮.೬	೧೧೫.೩೯	೨.೫೪
ಬಂಗಾಳ	೫೭.೪	೮೨.೭೬	೩.೭೫
ಸಂಯುಕ್ತಪ್ರಾಂತ	೫೬.೪	೬೯.೩೯	೪.೪೯
ಪಂಜಾಬು	೯೧.೪	೯೮.೨೭	೯.೬೫
ಬಿಹಾರ ಒರಿಸ್ಸಾ	೪೮.೮	೪೬.೬೦	೩.೫೩
ಗಡಿನಾಡು	೧೮೯.೬	೨೭೯.೦೪	೧.೮೦

ಈ ಪಟ್ಟಿಯನ್ನು ನೋಡುವಾಗ ಗಡಿನಾಡಿನ ಪ್ರಾಂತವು ಪೋಲೀಸಿಗಾಗಿ ಮಾಡುವ ಖರ್ಚಿನಿಂದ ಅಗ್ರಸ್ಥಾನ ಪಡೆದಿರುವಾಗ, ಕೈಗಾರಿಕೆಗಾಗಿ ಮಾಡುವ ಖರ್ಚಿನಿಂದ ಕಡೆಸ್ಥಾನದಲ್ಲಿರುವದು ತಿಳಿಯುತ್ತದೆ. ದೇಶದ ಕೈಗಾರಿಕೆ ಅಭಿವೃದ್ಧಿಗೂ, ಪ್ರತಿ ಒಬ್ಬ ಪ್ರಜೆಯ ಸಂಪದಭಿವೃದ್ಧಿಗೂ ನಿಕಟ ಸಂಬಂಧವಿದೆ. ಆದರೂ ಸರಕಾರವು ಪ್ರಜೆಯ ಜೀವಾಳವಾದ ಕೈಗಾರಿಕೆ ಅಭಿವೃದ್ಧಿಯನ್ನು ಇಷ್ಟರ ತನಕ ಎಷ್ಟು ಅಲಕ್ಷಿಸಿ ಬಂದಿತ್ತೆಂಬುದು ಇದರಿಂದ ಗೊತ್ತಾಗುತ್ತದೆ. ಇಂಥ ಸರಕಾರವು ಈಗ ಕೈಗಾರಿಕೆಯ ಉನ್ನತಿಗಾಗಿ ಹೊಸ ಹೊಸ ಯೋಜನೆಗಳನ್ನು ತಯಾರಿಸುತ್ತಲಿರುವಾಗ, ಕೇವಲ ಯುದ್ಧಕ್ಕೆ ಸಹಾಯಕವಾದ ಸಾಮುಗ್ರಿಗಳನ್ನು ಸುಲಭದಲ್ಲಿ ಯುದ್ಧಾಸಕ್ತ ಮಿತ್ರರಾಷ್ಟ್ರಗಳಿಗೆ ಒದಗಿಸಿಕೊಡುವಂತೆ ಇಟ್ಟುಕೊಂಡ ಅದರ ನೀತಿಯು, ಭಾರತದ ಸಂಪದಭಿವೃದ್ಧಿಗೆ ಸಹಾಯಕವೆಂದು ಹೇಗೆ ಹೇಳಬಹುದು? ಸರಕಾರವು ಕೈಗಾರಿಕೆ ಇಲಾಖೆಗೆ ವಿಂಗಡಿಸಿಟ್ಟ ಹಣದಲ್ಲಿ ಕೂಡ ಒಂದು ದೊಡ್ಡ ಭಾಗವು ಕೈಗಾರಿಕೆಯ ಉನ್ನತಿಗಾಗಿಯೋ ಖರ್ಚಾಗದೆ ಆ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳ ಹೊಟ್ಟೆ ತುಂಬಿಸಲಿಕ್ಕೆ ಹೋಗುತ್ತದೆ.

ಹಾನಿಕರ ಯೋಜನೆಗಳು

ಆದ್ದರಿಂದ ಸರಕಾರದ ಈ ಯೋಜನೆಗಳು ಪೂರ್ಣ ವ್ಯರ್ಥವಲ್ಲದಿದ್ದರೂ, ಅವು ಹಿಂದುಸ್ಥಾನದ ಹಿತಕ್ಕೆ ಖಂಡಿತಕ್ಕೂ ಹಾನಿಕರವಂಥವುಗಳಾಗಿವೆ. ಹಿಂದುಸ್ಥಾನದ ಜನತೆಯ ಹಿತವಾಗಿ ದೇಶದ ಸಾಂಪತ್ತಿಕ ಉನ್ನತಿಯಾಗಬೇಕಾದರೆ, ಕೇಂದ್ರ ಸರಕಾರದ ಕೈಗಾರಿಕೆ ಧೋರಣೆಯಲ್ಲಿ ಸಂಪೂರ್ಣ ಬದಲಾವಣೆ ಮತ್ತು ಪರಿವರ್ತನೆ ಆಗುವದು ಅಗತ್ಯ. ಅಂಥ ಬದಲಾವಣೆ ಮತ್ತು ಪರಿವರ್ತನೆ ಆಗುವ ತನಕ ಈಗಿರುವಂಥ ಸರಕಾರದಿಂದ ದೇಶದ ಕೈಗಾರಿಕೆ ಅಭಿವೃದ್ಧಿಯಾಗಲೀ, ಆರ್ಥಿಕ ಉನ್ನತಿಯಾಗಲೀ ಆಗುವದೆಂದು ತಿಳಿಯುವದು ಮೂರ್ಖತನವಾಗಿದೆ.



ರೂ. 1,000 ಬಹುಮಾನ

ಡಾಲ್ಡ ವನಸ್ಪತಿಯು ಸರಕಾರಿ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟು ಅತಿಶುದ್ಧವಾಗಿರುವುದೆಂದು ಗ್ಯಾರಂಟಿಯುಳ್ಳದ್ದಾಗಿದೆ. ಅದರಲ್ಲಿ ಹಾನಿಕರವಾದ ಯಾವುದಾದರೂ ಪದಾರ್ಥವು ಮಿಶ್ರವಾಗಿರುವುದೆಂದು ತೋರಿಸಿಕೊಟ್ಟವರಿಗೆ ರೂ. 1000 ಬಹುಮಾನವು ಕೊಡಲಾಗುವುದು

HVM 7A-360—KN THE HINDUSTAN VANASPATI MANUFACTURING CO. LTD., BOMBAY

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ಅಂಚೆಖರ್ಚಿಲ್ಲದೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗಾಂಧಿನಗರ ಪ. ಕ.

ಅಂಡಮಾನ ದ್ವೀಪಗಳು

ಈ ದ್ವೀಪಗಳು ಪ್ರಾಚೀನ-ಕಾಲದಲ್ಲಿ ಬಹಳ ಪ್ರಸಿದ್ಧವಾಗಿದ್ದವು. "ಒಳ್ಳೆಯ ಭೂತ" ಎಂದು ಅರ್ಥಬರುವ ಗ್ರೀಕರ "ಆಗಥೋನ್ ಡಿಮಾನ್ಸ್" ಎಂಬ ಶಬ್ದದಿಂದ ದ್ವೀಪಕ್ಕೆ ಈ ಹೆಸರು ಬಂತು.

ಆ ದ್ವೀಪಗಳಲ್ಲಿ ೨೫೦ ಕಿಲ್ಲೋಮೀಟರ್ ಉದ್ದವೂ ೩೫ರಿಂದ ೫೦ ಕಿಲ್ಲೋಮೀಟರ್ ಅಗಲವೂ ಆದ ಶೀತಭೂಮಿಯೊಂದಿದೆ. ದಕ್ಷಿಣ ಭಾರತದ ಸಮುದ್ರ ತೀರಾವಳಿಗೆ ಎದುರಾಗಿ ಅವುಗಳು ಇವೆ. ಪರ್ವತಗಳ ಸಾನುಗಳಿಂದ-ಅವುಗಳಲ್ಲಿ ಒಂದು ಸಮುದ್ರ ಮಟ್ಟಕ್ಕಿಂತ ೬೦೦ ಮೀಟರ್ ಕೆಳಗಿದೆ. ಕಾಡುಗಳು ಹರಡಿವೆ. ಅದರಲ್ಲಿ ಮಾರ್ಗಗಳು ಸಿಗುವುದು ಸಾಧ್ಯವಿಲ್ಲ. ೫೦ ಮೀಟರ್ ಎತ್ತರದ ವರೆಗೆ ಮರಗಳು ತುಂಬಿದ್ದು ಮರಮಟ್ಟುಗಳ ಮಧ್ಯವಾಗಿ ಕೇವಲ ವನ್ಯಜಂತುಗಳು ಮಾತ್ರ ಉಳಿಕೊಳ್ಳಲು ಯೋಗ್ಯವಾಗಿದೆ.

ಆದರೆ ನಿವಾಸಿಗಳು ಅಂಡಮಾನ್ನಿಸರೆಂದು ಕರೆಯಲ್ಪಡುವರು. ಅವರು ಅನಾಗರಿಕ ಜನರಾಗಿದ್ದಾರೆ. ಅವರು ತಮ್ಮ ಕ್ರೂರಕೃತ್ಯಗಳಿಂದಾಗಿ, ಯಾರನ್ನೂ ಆ ದ್ವೀಪಕ್ಕೆ ಬರಗೊಡಲಿಲ್ಲ. ಅವರು ಹೆಣದ ಮುಖಕ್ಕೆ ಒಂದು ಗೌರವದ ಗುರುತೆಂದು ಗ್ರಹಿಸಿ ಬಣ್ಣ ಬಳಿದುಕೊಳ್ಳುವರು. ಹೆಣದ ಮಾಂಸವು ಕೊಳೆತು ಹೋದ ಮೇಲೆ ಎಲುಬನ್ನು ತೆಗೆದು ಸ್ಮರಣೆಯ ಗುರುತಾಗಿ ಇಟ್ಟುಕೊಳ್ಳುವರು. ಹೆಚ್ಚಾಗಿ ಹುಟ್ಟು ವಿಧವೆಯು ತನ್ನ ಗಂಡನ ತಲೆಬುರುಡೆಯನ್ನು ಕಂಠಾಭರಣವಾಗಿ ಹಾಕಿಕೊಳ್ಳುತ್ತಾಳೆ. ಇದು ಒಂದು ಉತ್ತಮ ಅಮೂಲ್ಯ ವಸ್ತುವೆಂದು ಗೌರವಿಸುತ್ತಾಳೆ. ಅವರು ಸುಲಭದಿಂದ ಕಣ್ಣೀರು ಸುರಿಸಬಲ್ಲವರಾಗಿದ್ದಾರೆ. ಎರಡು ಪಂಗಡದವರು ಒಟ್ಟು ಸೇರಿದಾಗ ಹೆಂಗುಸರು ಸಂತೋಷದಿಂದ ಕೂಗತೊಡಗುತ್ತಾರೆ. ಆಮೇಲೆ ಗಂಡುಸರೂ ಅವರೊಡನೆ ಸೇರಿಕೊಳ್ಳುವರು. ಕೂಗು ಮುಗಿದ ಮೇಲೆ ಹಾಡುವುದು ಕುಣಿಯುವುದು ಪ್ರಾರಂಭವಾಗುವುದು.

ಅವರ ಬಣ್ಣ ಕಪ್ಪು. ಆದರೆ ನಿಗ್ರೋಗಳ ಸಾದೃಶ್ಯ ಅವರಿಗಿಲ್ಲ. ಸಮುದ್ರದ ಹರಿತವಾದ ಮೀನಿನ ಚಿಪ್ಪನ್ನು ಉಪಯೋಗಿಸಿ ತಮ್ಮ ತಲೆಯ ಕೂದಲನ್ನು ಬೋಳಿಸುವರು. ಹೆಚ್ಚಾಗಿ ಅವರು ದಿಗಂಬರರಾಗಿರುತ್ತಾರೆ. ಸಂಜೆಗೆ ಅವರು ತಮ್ಮ ಮೈಯನ್ನು ತೊಗಟೆಗಳಿಂದ ಮುಚ್ಚಿಕೊಳ್ಳುವುದುಂಟು. ಅವರು ಒಂದು ಜಾತಿಯ ಎಣ್ಣೆಯಿಂದ ಬೆರಸಿದ ಮಣ್ಣನ್ನೂ ತಮ್ಮ ಮೈಗೆ ಲೇಪಿಸಿಕೊಳ್ಳುವರು. ಹೀಗೆ ಮಾಡಿ ನುಸಿಗಳ ಕಾಟವನ್ನು ತಪ್ಪಿಸಿಕೊಳ್ಳುತ್ತಾರೆ.

ಈ ರೀತಿಯ ಅನಾಗರಿಕ ಜೀವನವನ್ನು ನಡೆಸುವ ಈ ಜನರು ಆ ವಿಚಿತ್ರ ಮಿಶ್ರವಾಗಿ ಮಲೇರಿಯಾ ರೋಗದಿಂದ ಕಷ್ಟಪಡಬೇಕಾಗುವುದೆಂಬುದು ವಿಚಿತ್ರವಲ್ಲ. ಹೇಗಿದ್ದರೂ ಇಂದಿನ ದಿನಗಳಲ್ಲಿ ಮಲೇರಿಯಾವನ್ನು ತಡೆಯುವುದು ಸಾಧ್ಯವಾಗಿದೆ. ದಿ ಮಲೇರಿಯಾ ಕಮಿಶನ್ ಲೀಗ್ ಒಫ್ ನೇಶನ್ಸ್‌ನವರು, ಜ್ವರದ ಕಾಲದಲ್ಲಿ ೬ ಗ್ರೇನ್ ಮಲೇರಿಯಾ ತೆಗೆದುಕೊಳ್ಳುವುದೂ, ಜ್ವರಬರುವಾಗ ೧೫ರಿಂದ ೨೦ ಗ್ರೇನಿನ ವರೆಗೆ ೫ರಿಂದ ೭ ದಿನಗಳ ವರೆಗೆ ತೆಗೆದುಕೊಳ್ಳುವುದೂ ಯೋಗ್ಯವೆಂದು ಕಂಡುಹಿಡಿದಿರುವರು. ೧೯೩೪ನೇ ಇಸವಿಯಲ್ಲಿ ಪ್ರಕಟಿಸಿದ ಪ್ರಕಟಣೆಯ ೧೫೫ನೆಯ ಪುಟದಲ್ಲಿ ಈ ಮಲೇರಿಯಾ ಕಮಿಶನಿನವರು ಮಲೇರಿಯಾ ರೋಗವನ್ನು ಗುಣಪಡಿಸುವ ಇತರ ಎಲ್ಲಾ ಮದ್ದುಗಳಿಗಿಂತಲೂ ಕ್ವಿನಿನು ಅತ್ಯುತ್ತಮವೆಂದೂ ಸುಲಭೋಪಯೋಗಿಯೆಂದೂ ಸ್ಪಷ್ಟಪಡಿಸಿರುವರು.

M. Eng. No. 228

ನೋಟಗಳು!

"ನಾವು ಶಿಸ್ತು ನಿಯಮಗಳನ್ನು ಪಾಲಿಸಲು ಶಕ್ತರಾಗದ ವರೆಗೆ, ಉದಾತ್ತವಾದ ನಮ್ಮ ಧ್ಯೇಯವನ್ನು ಸಾಧಿಸಲಾರೆವು ನಮ್ಮ ರಾಷ್ಟ್ರೀಯ ಜೀವನದಲ್ಲಿ, ನಾವು ಧ್ಯೇಯದ ಕಡೆಗೆ ಸಾಗುತ್ತಿರಲು ನಮ್ಮನ್ನು ಹಿಂದಕ್ಕೆ ಜಗ್ಗುತ್ತಿರುವ ಕಡೆಯು, ಶಿಸ್ತಿನ ಅಭಾವವೆಂಬುದನ್ನು ಇಂದು ಚೆನ್ನಾಗಿ ತಿಳಿದಿದ್ದೇವೆ ಅದನ್ನು ಸರ್ವಥಾ ನಮ್ಮಲ್ಲಿಂದ ಹೊಡೆದೋಡಿಸಬೇಕಾಗಿದೆ"

"ನಮ್ಮ ಜನಾಂಗವು ಎಷ್ಟೇ ಮಹತ್ತದ್ದಿರಲಿ, ನಾವು ಶಿಸ್ತು ಇಲ್ಲದೆ ಇಂದು ಹೀಗೆ ಅಶಕ್ತರಾಗಿದ್ದೇವೆ"

"ಶಿಸ್ತಿನ ಅಭಾವವು ಹೆಚ್ಚಾಗಿ ನಮ್ಮಲ್ಲಿ ಬಂಗಾಳಿಗಳಲ್ಲಿ ಕಂಡುಬರುತ್ತದೆ ಏಕೆಂದರೆ ನಮಗೆ ಶಿಸ್ತುಪಾಲನೆಯ ಯೋಗ್ಯ ಶಿಕ್ಷಣವಿಲ್ಲ ವ್ಯಕ್ತಿಶಃ ಬಂಗಾಳಿಗಳು ಮಹಾಪ್ರಭಾವಶಾಲಿಗಳು. ಆದರೆ ಕೂಡಿ ನಡೆಯುವುದು ಅವರಿಗೆ ಅರಿತಿಲ್ಲ

ಶಿಸ್ತುಪಾಲನೆಯ ಕುರಿತ ಈ ಆವೇಶಪೂರ್ಣವಾದ ಮಾತುಗಳನ್ನು ಹೇಳಿದವರ ಶಿಸ್ತುಉಲ್ಲಂಘನೆಯ ದಂಗೆಗಾರರಲ್ಲಿ ಅಗ್ರಗಣ್ಯರಾದ ಶ್ರೀ ಬೋಸರು!

◈

ಆಡಿದಂತೆ ಮಾಡಲು ಪ್ರಯತ್ನಿಸುವುದು ಶಿಸ್ತುಪಾಲನೆಯಲ್ಲಿ ಮೊದಲನೆಯ ಕಾರ್ಯವೆಂದು ಬೋಸರು ಮನಗಂಡಿಲ್ಲವೇನೊ?

◈

ಶ್ರೀ ಜಿನ್ನರು ಮಹಾತ್ಮಾಜಿಯವರ ಪ್ರತಿಯೊಂದು ಮಾತು ಮತ್ತು ಕೃತಿಗಳನ್ನು ತನ್ನ ದೂಷಣೆಯಿಂದ, ಏಕೆ ಹಳಿದುಕೊಳ್ಳುವರೋ ತಿಳಿಯದು ಗಾಂಧಿಜಿಯವರ ಮಾತಿನಲ್ಲಿ ರಾಜಕೀಯ ರೀತ್ಯಾ ಏನಾದರೂ ತಪ್ಪಿದ್ದರೆ ಅದನ್ನು ಖಂಡಿಸುವುದು ನಿಜವಾದ ರಾಜನೀತಿಜ್ಞತೆಯಾಗಿದೆ!

"ಗಾಂಧಿಜಿಯವರ ಕೇಸವು ದಿನವಿಡೀ ಪ್ರಾರ್ಥನೆ ಮತ್ತು ಗೀತಾಪಾರಾಯಣ" ವೆಂದು ಜಿನ್ನರು ದೂರುತ್ತಾರೆ

—ಗಾಂಧಿಜಿಯವರ ಪ್ರಾರ್ಥನೆಯಿಂದ ತನ್ನ ಪಾಕಿಸ್ಥಾನದ ಪಂಚಾಂಗವು ಹರಿದು ಹೋಗುವುದೆಂದು ಬಹುಶಃ ಜಿನ್ನರು ಬೆದರಿಕೊಂಡಿರಬೇಕು

◈

ಸರ್ ಸಿಕಂದರರು ಪಾಕಿಸ್ಥಾನ ಯೋಜನೆಯ ಕುರಿತು ಒಂದು ಮಾತೂ ಹೇಳುವುದಿಲ್ಲವೆಂದು ಅವರ ಮಂತ್ರಿ ಮಂಡಳದ ಸಿಕ್ಖ್ ಮತ್ತು ಹಿಂದು ಸಹೋದ್ಯೋಗಿಗಳು ಹೆಗ್ಗಳಿಕೆ ಪಡುತ್ತಾರೆ! ಆದರೆ ಸಿಕಂದರರು ತಮ್ಮನ್ನು ಬಿಟ್ಟು ಹಾಕುವುದಿಲ್ಲವೆಂದು ಮುಸ್ಲಿಂ ಲೀಗಿನವರಿಗೆ ದೃಢವಾದ ವಿಶ್ವಾಸವಿದೆ!

—ಪಾಕಿಸ್ಥಾನ ಯೋಜನೆಯ ಹಂಚಿಕೆಯನ್ನು ಮುಸ್ಲಿಂ ಲೀಗಿನ ಮುಂದಿಟ್ಟವರೇ ಸಿಕಂದರರೆಂಬುದೊಂದು ಪ್ರಬಲವಾದ ವದಂತಿಯಿದೆ!

—ಹೊಸ ಹೊಸ ರಾಜಕೀಯ ಯೋಜನೆಗಳನ್ನು ಹೂಡುವುದರಲ್ಲಿ ಸಿಕಂದರರು ಬಹಳ ಬುದ್ಧಿವಂತರೆನಿಸಿದವರು!

ಶೀಘ್ರ ಪರಿಷತ್ತಿನಲ್ಲಿ ರಾಜಾಂಗ ಸರ್ ಅಲಿಖಾನರು, ಪಾಕಿಸ್ಥಾನ ಯೋಜನೆಯು ಉದ್ದೇಶಪೂರ್ವಕ ತಂದುದಲ್ಲವೆಂದರು

—ತಮಾಷೆಗಾಗಿಯಾದರೂ ಅಂತಹ ಯೋಜನೆಯನ್ನು ಮುಂದಿಡುವುದರಿಂದ ಲೀಗಿನ ಗೌರವವು ಹೆಚ್ಚುವಂತಿಲ್ಲ!

◈

ಭಾರತದ ರಾಜಕೀಯದ ಕುರಿತು ಮಾತನಾಡುತ್ತಾ ಮಿ ಎಫ್. ಇ ಜೇಮ್ಸರು, ಪಾಕಿಸ್ತಾನ ಯೋಜನೆಯ ವಿಷಯ ಬಹಳ ಸಂಗತಿಗಳು ವಿವರಿಸಲ್ಪಟ್ಟಿವೆಯೆಂದರು!

—ಪಾಕಿಸ್ತಾನ ಯೋಜನೆಯಿಂದ ಬ್ರಿಟಿಷರಿಗೆ ಏನೂ ತೊಂದರೆಯಿಲ್ಲದಿರುವುದೇ ಅದರ ಕಾರಣವಿರಬಹುದು!

◈

ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ನಾಜೀ ಸಾಮ್ರಾಜ್ಯ ಶಾಹಿಯೊಡನೆ ಹೋಲಿಸುವುದು ಸರಿಯಲ್ಲವೆಂದು ಮಿ। ಜೇಮ್ಸರು ಅಭಿಪ್ರಾಯಪಟ್ಟರು

—ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ನಾಜೀಸಾಮ್ರಾಜ್ಯ ಶಾಹಿಗೆ ಸರಿಯಲ್ಲವೆಂಬ ಜೇಮ್ಸರ ಅಭಿಮತಕ್ಕೆ ನಾಜಿಗಳೂ ಒಪ್ಪುವರು!

◈

ಲಾರ್ಡ ಜೆಟ್ಲೆಂಡರು ಹಿಂದೂದೇಶದ ರಾಜಕೀಯದ ವಿಷಯ ಮಾತನಾಡುತ್ತಾ, ಭಾರತದ ಎಲ್ಲಾ ಮುಖಂಡರೊಡನೆ ವಿಚಾರವಿನಿಮಯ ಮಾಡದೆ ಏನನ್ನೂ ನಿರ್ಧರಿಸಲಾಗುವುದಿಲ್ಲ ಎಂದರು. ಆದರೆ ಭಾರತವನ್ನು ಯೂರೋಪಿನ ಯುದ್ಧರಂಗದಲ್ಲಿಳಿಸುವ ವಿಷಯ ಯಾರ ಕಡೆ ಮುಖಂಡರೊಡನೆ ವಿಚಾರ ವಿನಿಮಯ ಮಾಡುವ ಆವಶ್ಯಕತೆಯು ಜೆಟ್ಲೆಂಡರಿಗೆ ಹೊಳೆಯಲಿಲ್ಲವೆಂಬುದೊಂದು ಸಂತೋಷದ ಸುದ್ದಿಯಾಗಿದೆ

◈

ಸತ್ಯಾಗ್ರಹವು ಪ್ರಾರಂಭಿಸಲ್ಪಟ್ಟರೆ, ಉಗ್ರೋಪಾಯಗಳಿಂದ ಅದನ್ನು ತಡೆಯುವೆವೆಂದ ಪಾರ್ಲಿಮೆಂಟಿನಲ್ಲಿ ಭಾರತದ ಉಪಮಂತ್ರಿಗಳಾದ ಸರ್ ಓಸೀಲರು ಗರ್ಜಿಸಿದರು!

—ಬ್ರಿಟಿಷರಿಗೆ ಅಹಿಂಸೆಯ ಶಕ್ತಿಯು ಇನ್ನೂ ತಿಳಿದಿಲ್ಲ. ತಿಳಿದಿದ್ದರೆ ಅವರು ನಮ್ಮನ್ನು ಜಗಳಕ್ಕೆ ಆಹ್ವಾನಿಸುತ್ತಿರಲಿಲ್ಲವೆಂದು ಗಾಂಧಿಜಿಯವರು ಒಬ್ಬ ಚೈನೀಯ ಮಿತ್ರರೊಡನೆ ಹೇಳಿದರು.

◈

ಜೇಮ್ಸರು ಕೊಯಂಬುತ್ತೂರಿನ ಯೂರೋಪಿಯನರ ಸಂಘದಲ್ಲಿ ಭಾಷಣ ಮಾಡುತ್ತಾ, "ಭಾರತದ ಸಮಸ್ಯೆಯು ಬ್ರಿಟಿಷರಿಂದಾಗಲಿ ಯೂರೋಪಿಯನರಿಂದಾಗಲಿ ಪರಿಹರಿಸತಕ್ಕದಲ್ಲ, ಅದು ಹಿಂದೂ-ಮುಸ್ಲಿಂ ಜಾತಿಗಳ ಒಪ್ಪಂದದಿಂದ ಆಗತಕ್ಕದ್ದು ಎಂದು ಹೇಳಿದರು!

—ಬ್ರಿಟಿಷರು ಹಿಂದೂದೇಶದಿಂದ ಹೊರಹೋದ ಮೇಲೆ ನಮ್ಮ ಜಾತಿಯ ಜಗಳಗಳು ಉಳಿಯಲಾರವು ಎಂದು ಗಾಂಧಿಜಿಯವರು ಸ್ಪಷ್ಟ ಹೇಳುತ್ತಾರೆ.



ರೂ. 550 ಬಹುಮಾನ

ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು. ಬೆಲೆ ತಾಮ್ರದ ಆವರಣದ್ದು ರೂ. 1–15–0 ಮೂರಕ್ಕೆ ರೂ 5, ಬೆಳ್ಳಿಯ ಆವರಣದ್ದು ರೂ 2-12-0 ಮತ್ತು ಚಿನ್ನದ ಆವರಣದ್ದು ರೂ 6–8–0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ. ವ್ಯಾಪಾರ, ಪರೀಕ್ಷೆ. ಲಾಟರಿ, ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು. ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು ಬೆಲೆ ತಾಮ್ರದ ಆವರಣ ರೂ. 1–15–0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ. 2–12–0, ಚಿನ್ನದ ಆವರಣ ರೂ 6–8–0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್‌ಫುಲ್ ನಂ. 4ಕ್ಕೆ ಕೇಳಿರಿ. ಬೆಲೆ 5–4–0, 6 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್-ಪವರ್‌ಫುಲ್ ನಂ. 5ಕ್ಕೆ ಕೇಳಿರಿ ಬೆಲೆ 7–8–0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ.

ಸೂಚನೆ: ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮೂ, ಸರಿ ಕಾರ್ಯಕಾರಿಯಾಗದಿದ್ದಲ್ಲಿ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ಸರಿಯಾಗಿ ಕಾರ್ಯಿಸಬೇಕಾದರೆ ಏನೇನಾದರು ಕಷ್ಟಪಡಬೇಕೆಂದಿಲ್ಲ.

ANAND SWAMI,
Anand Bhawan, Post Box No. 27 (S.A.M.) Amritsar.

ವಿಜ್ಞಾನಯುಗ

ಸೂರ್ಯರಶ್ಮಿಯ ಸಹಾಯದಿಂದ ಮೋಟರು ಗಾಡಿಗಳ ಚಲಾವಣೆ

ಎಲ್ಲಾ ಸಜೀವಿಗಳ ಮತ್ತು ಯಂತ್ರೋಪಕರಣ ಇತ್ಯಾದಿ ಸಾಧನಗಳ ಚಲನೆಗೆ ಬೇಕಾದ ಚೈತನ್ಯದ ಮೂಲವನ್ನು ನೋಡಿದರೆ ಅದು ಸೂರ್ಯನಿಂದ ಬರುತ್ತದೆಂದು ಗೊತ್ತಾಗುತ್ತದೆ. ಸೂರ್ಯ ರಶ್ಮಿಗಳೊಳಗಿರುವ ಚೈತನ್ಯವು ಚಲನೆಗೆ ಕಾರಣವಾಗಿದೆ. ಹೀಗಿದ್ದರೂ ಸೂರ್ಯನೊಳಗಿನ ವಿಷ್ಟೋ ಚೈತನ್ಯವು ಇನ್ನೂ ಉಪಯೋಗಕ್ಕೆ ಬಾರದಿದೆ. ಈ ಚೈತನ್ಯವು ಮಿಲಿಯಾಂತರದಲ್ಲಿ ಒಂದು ಕಾಲನ್ನು ತೆಗೆದುಕೊಂಡರೂ, ಎಣ್ಣೆ, ಉಗಿ ಮೊದಲಾದವುಗಳ ಬಲದಿಂದ ನಡೆಯುವ ಯಂತ್ರಾದಿಗಳನ್ನು ಸೂರ್ಯನಿಂದ ಬರುವ ಚೈತನ್ಯದಿಂದ ನಡೆಸಬಹುದಾಗಿದೆ. ಅಂಥ ಸಂದರ್ಭದಲ್ಲಿ ಎಣ್ಣೆ ಮೊದಲಾದವನ್ನು ಇನ್ನಿತರ ಹಲವು ಕಾರ್ಯಗಳಿಗೆ ಉಪಯೋಗಿಸಿಕೊಳ್ಳಬಹುದು. ಆದರೆ ಸೂರ್ಯರಶ್ಮಿಯೊಳಗಿರುವ ಚೈತನ್ಯವನ್ನು ವಾಹನಾದಿಗಳ ಚಲನೆಗೆ ಅನುಕೂಲಿಸುವಂತೆ ಮಾರ್ಪಡಿಸುವದು ಹೇಗೆ? ಇದನ್ನೇ ಶೋಧನೆಯ ವಿಷಯವನ್ನಾಗಿಟ್ಟುಕೊಂಡು ಮಿ ವಿಲಿಯಂ ಎ ಗ್ಲಾಸಿಂಗ ಎಂಬ ವಿಜ್ಞಾನಿಗಳು ಬಹು ಮಟ್ಟಿಗೆ ತಮ್ಮ ಪ್ರಯತ್ನಗಳಲ್ಲಿ ಸಫಲರಾಗಿದ್ದಾರೆ

ಅವರು ಕೇವಲ ¼ ಕುದುರೆ ಬಲದಿಂದ ಓಡುವ ಬಹು ಸಣ್ಣ ಮೋಟಾರ ಗಾಡಿಯೊಂದನ್ನು ತಯಾರಿಸಿ ಅದನ್ನು ಸೂರ್ಯರಶ್ಮಿಯ ಸಹಾಯದಿಂದ ಬಿಡಿಸಿದ್ದಾರೆ. ಅದು ಚಲಿಸಲಿಕ್ಕೆ ಅವರು ಎಣ್ಣೆ ಇತ್ಯಾದಿ ಯಾವುದನ್ನೂ ಉಪಯೋಗಿಸಿಲ್ಲ ಆದರೆ ಇಷ್ಟು ಸಣ್ಣ ಮೋಟರಿನ ಚಲನೆಗೆ ಬೇಕಾದಷ್ಟು ಚೈತನ್ಯವನ್ನು ಸೂರ್ಯರಶ್ಮಿಯಿಂದ ಪಡೆದು ಅದನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸಿ ಮೋಟಾರಿಗೆ ಕೊಡಬೇಕಾದರೆ ಕೂಡ, ಇದಕ್ಕೆ ಕೆಲವು ಎಕರೆಗಳಷ್ಟು ವಿಸ್ತಾರದಲ್ಲಿ ಯಂತ್ರ ಸಾಮಗ್ರಿಗಳನ್ನಿಡಲಿಕ್ಕೆ ಸ್ಥಳವು ಬೇಕು ಆದುದರಿಂದ ಇಷ್ಟು ವಿಸ್ತಾರವಾದ ಸ್ಥಳವನ್ನು ಮೋಟರಿನಲ್ಲಿ ಪಡೆಯಲಿಕ್ಕೆ ಅವಕಾಶವಿಲ್ಲ. ಅದಕ್ಕೀಗ ಒಂದು ಉಪಾಯವನ್ನು ಯೋಚಿಸಿರುವರು. ಅಂತರಿಕ್ಷದಲ್ಲೇ ಉದಕ್ಕೂ ಚಪ್ಪರ ಹಾಕಿ, ಯಂತ್ರ ಸಾಧನಗಳನ್ನಿಟ್ಟು ಸೂರ್ಯರಶ್ಮಿಯ ಚೈತನ್ಯವನ್ನು ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿ ಮಾರ್ಗದ ಬದಿಗಳಲ್ಲಿರುವ ಸಂಗ್ರಹಾಲಯಗಳಲ್ಲಿ ಸಂಗ್ರಹಿಸಿಡಬೇಕು. ಮತ್ತು ಅವಶ್ಯಕವಾದಾಗೆಲ್ಲ ಆ ಮಾರ್ಗದಿಂದ ಓಡಾಡುತ್ತಿರುವ ಮೋಟರ ಮೊದಲಾದ ವಾಹನಗಳು ಪೆಟ್ರೋಲು ಕಂಬಗಳಿಂದ ಪೆಟ್ರೋಲು ಪಡೆಯುವ ಹಾಗೆ, ಈ ಉಗ್ರಾಣಗಳಿಂದ ವಿದ್ಯುಚ್ಛಕ್ತಿಯನ್ನು ಪಡೆದು ಮೋಟರಗಳನ್ನು ನಡೆಸಬೇಕು ಇದು ಸಾಧ್ಯವೆಂದಾದರೆ ಮತ್ತೆ ಎಣ್ಣೆ ಕಲ್ಲಿದ್ದಲಿಗೋಸ್ಕರ ಯುದ್ಧ ಸಂಘರ್ಷಗಳಾಗುವದು ನಿಂತೀತು

ಕಲ್ಲಿದ್ದಲು—ಉಪ್ಪಿನಿಂದ ರಬ್ಬರಿನ ಸಾಮಗ್ರಿಗಳು

ರಬ್ಬರಿನಿಂದ ತಯಾರಿಸುತ್ತಿರುವ ಬೆಲ್ಟು ಮೊದಲಾದ ಕೆಲವು ಸಾಮಗ್ರಿಗಳನ್ನು ಕಲ್ಲಿದ್ದಲು ಮತ್ತು ಉಪ್ಪಿನ ಸಂಯುಕ್ತದಿಂದಾದ ಒಂದು ವಿಜಾತೀಯ ವಸ್ತುವಿನಿಂದ ತಯಾರಿಸುವ ಉಪಾಯವನ್ನು ವೈಜ್ಞಾನಿಕರು ಕಂಡುಹಿಡಿದಿದ್ದಾರೆ ಈ ವಸ್ತುಗಳು ರಬ್ಬರಿನ ಒಡವೆಗಳಂತೆಯೇ ಸ್ಥಿತಿಸ್ಥಾಪಕ ಗುಣ ಉಳ್ಳವುಗಳೂ ತಾಳಿಕೆ ಮತ್ತು ಬಾಳಿಕೆ ಇರುವಂಥವೂ ಆಗಿವೆ ಎಂಥ ಪ್ರತಿಕೂಲ ಹವಾಗುಣದಲ್ಲಿ ಎಷ್ಟು ಕಾಲ ಇಟ್ಟರೂ ಈ ವಸ್ತುಗಳು ಕೆಡುವದಿಲ್ಲ ಈ ಒಡವೆಗಳನ್ನು ಬೇರೆ ಬೇರೆ ಬಣ್ಣಗಳಲ್ಲಿಯೂ ತಯಾರಿಸಬಹುದು ರಬ್ಬರಿನ ಒಡವೆಗಳಿಗಿಂತ ಕಲ್ಲಿದ್ದಲು ಉಪ್ಪಿನಿಂದಾದ ಈ ಒಡವೆಗಳು ಹೆಚ್ಚು ಅಗ್ಗವಾಗಿಯೂ ಇರುತ್ತವೆ

೩೦ ಮೈಲುಗಳ ಎತ್ತರದಲ್ಲಿ

ಭೂಪೃಷ್ಠದಿಂದ ೩೦ ಮೈಲುಗಳ ಎತ್ತರದಲ್ಲಿ ಸೂರ್ಯ ರಶ್ಮಿಯ ಶಾಖವು ಭೂಪೃಷ್ಠದಲ್ಲಿರುವದಕ್ಕಿಂತಲೂ ಅತಿಶಯವಾಗಿರುತ್ತದೆಂದು ಒಬ್ಬ ವೈಜ್ಞಾನಿಕರು ಕಂಡು ಹಿಡಿದಿದ್ದಾರೆ - ಅಲ್ಲಿ ಉಷ್ಣಮಾನವು ೧೦೦ ಡಿಗ್ರಿ ಸೆಂಟಿಗ್ರೇಡಿನಷ್ಟು ಇರುತ್ತದೆ ಅಂದರೆ ಅಲ್ಲಿಗೆ ಕಣ್ಣೀರನ್ನು ಕೊಂಡು ಹೋದಾದ್ದರೆ ಅದು ಬರೇ ಹವೆಯಲ್ಲಿ ಕುದಿಯ ತೊಡಗುವದು!

ಹಾವುಗಳು ಹಾಲು ಕರೆಯುವವೆ?

ಕೆಲವು ಜಾತಿಯ ಹಾವುಗಳು ದನ ಎಮ್ಮೆ ಮೊದಲಾದ ಪ್ರಾಣಿಗಳ ಹಾಲು ಕರೆದು ಅವನ್ನು ಸದಾಕಾಲಕ್ಕೆ ಹಾಲು ಕೊಡದಂತೆ ಬತ್ತಿಸಿ ಹಾಕುವವೆಂಬ ಒಂದು ನಂಬಿಕೆಯು ಜನರಲ್ಲಿ ವಿಶೇಷವಾಗಿದೆ ಕೆಲವು ಜಾತಿಯ ಹಾವುಗಳು ಮನುಷ್ಯರನ್ನು ಬೆನ್ನಟ್ಟಿ ಓಡುವವೆಂದೂ ತಮ್ಮ ಮರಿಗಳನ್ನೇ ತಾವು ತಿಂದು ಹಾಕುವವೆಂದೂ ಜನರು ನಂಬಿರುವರು. ಆದರೆ ಅವುಗಳ ಜೀವನ ಕ್ರಮದ ಅಧ್ಯಯನವನ್ನು ತಿಳಿದ ಕೆಲಿಫೋರ್ನಿಯಾದ ವಿ ಸಿ ಜಿ ಫರ್ಕಿನ್ಸ್ ಎಂಬವರು ಈ ಎಲ್ಲಾ ನಂಬಿಕೆಗಳಿಗೆ ಯಾವ ಆಧಾರವೂ ಇಲ್ಲವೆಂದು ತಮ್ಮ ವರ್ಷಗಳ ಅನುಭವದಿಂದ ಹೇಳಿದ್ದಾರೆ ಇವರು ಸ್ಯಾನ್ ಡೀಗೋ ಪಾರ್ಕಿನ ಹಾವಿನ ವಿಭಾಗದ ಮ್ಯಾನೇಜರು. ಆರು ಇಂಚಿನ ಚಿಕ್ಕ ಹಾವಿನಿಂದ ಮೊದಲ್ಗೊಂಡು ನೂರಾರು ಗಜ ಉದ್ದದ ಹೆಬ್ಬಾವುಗಳ ತನಕ ಎಲ್ಲಾ ಹಾವುಗಳ ಎಲ್ಲಾ ಸಂಗತಿಗಳನ್ನು ತಿಳಿದ ವಿದ್ವಾಂಸರು ಹಾವುಗಳ ಜೀವನ ಕ್ರಮದ ಸೂಕ್ಷ್ಮ ಪರೀಕ್ಷೆಯಿಂದಲೇ ಇವರು ತಮ್ಮ ಈ ನಿರ್ಧಾರಕ್ಕೆ ಬಂದಿದ್ದಾರೆ ಹಾವುಗಳು ಹಸಿದಿದ್ದಾಗ ಹಸಿವನ್ನು ಕಳೆಯಲಿಕ್ಕೆ ಬೇರೆ ಹಾವುಗಳ ಚಿಕ್ಕ ಮರಿಗಳನ್ನು ತಿನ್ನಬಹುದು ಆದರೆ ಮರಿಗಳನ್ನು ಶತ್ರುಗಳಿಂದ ಕಾಪಾಡಲಿಕ್ಕೆಂದು ಎಷ್ಟು ಮಾತ್ರಕ್ಕೂ ತಮ್ಮ ಮರಿಗಳನ್ನು ತಿನ್ನುವದಿಲ್ಲ ಹಾವುಗಳು ದನದ ಕೆಚ್ಚಲು ಕಚ್ಚಿ ಅವನ್ನು ಬತ್ತಿಸುವವೆಂಬುದು ಸುಳ್ಳು ಸಿಂತಿರುವ ದನಗಳ ಕೆಚ್ಚಲಿನ ಜೋತಾಡಿ ಹೀರುವದು ಹಾವುಗಳಿಗೆ ಸಾಧ್ಯವೇ ಇಲ್ಲ ಹಾಲಿನಂಥ ದ್ರವ ಪದಾರ್ಥವನ್ನು ಹೊಟ್ಟೆಯ ಒಳ ಇಟ್ಟುಕೊಂಡ ಹಾವುಗಳು ಓಡುದು ಕಡೆಯಿಂದ ಒಂದು ಕಡೆಗೆ ಹೋಗುತ್ತಿರುವದೂ ಸಾಧ್ಯವಲ್ಲ ಆದ್ದರಿಂದ ಇವೆಲ್ಲಾ ಜನರು ನಂಬಿರುವ ಅಜ್ಞ ಕತೆಗಳಾಗಿವೆಯೇ ಹೊರತು ಅವುಗಳಲ್ಲಿ ಸತ್ಯಾಂಶವು ಸ್ವಲ್ಪವಾದರೂ ಇರುವದಿಲ್ಲ ಎಂದು ಅವರು ಹೇಳಿದ್ದಾರೆ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ ಪಿ. ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N JASANI,** Vithalbhai Patel Road, BOMABY.

ಸ್ಟಾಕಿಸ್ಟರು: **ಮೆಸರ್ಸ್ ಇಲೆಕ್ಟ್ರೋ ಹೋಮಿಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್**

ಹಂಪನಕಟ್ಟಾ, ಮಂಗಳೂರು.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾರೀಕು 13-5-1940ರಿಂದಾ ಶ್ರೀ ತಾರೀಕು 22-5-1940ರ ವರೆಗೆ

ತಿರುಪತಿ ಗೋವಿಂದರಾಜ ಸ್ವಾಮಿ ದೇವಾಲಯದಲ್ಲಿ

ನಡಿಯುವ ಬ್ರಹ್ಮೋತ್ಸವ ಸಮಾರಂಭ

ಗರುಡಸೇವೆ ತಾ. 18-5-1940 ಮತ್ತು ರಥೋತ್ಸವ ತಾ. 21-5-1940 ರಲ್ಲು

ಮಂಗಳೂರಿನಿಂದ 5-15 a. m.ಗೆ ಹೊರಡುವ ಮೋಡರ್ನ್ ಮೋಟರ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಮಧ್ಯಾಹ್ನ 3-15 p. m.ನ ಒಳಗೆ ಮೈಸೂರಿಗೆ ತಲಪಿ, ಮೈಸೂರಿನಿಂದ 4 p. m.ಗೆ ಬಿಡುವ ರೈಲಿನಲ್ಲಿ ಕೂತು ಸಂಜೆ 7 p. m.ನ ಒಳಗೆ ಬೆಂಗಳೂರಿಗೆ ತಲಪಿ ಬೆಂಗಳೂರಿನಿಂದ 9 p. m. ನ ಬಿಡುವ ರೈಲಿನಲ್ಲಿ ಕೂತು ಕಟ್ಪಾಡಿಗಾಗಿ ತಿರುಪತಿಗೆ ಮರುದಿನ 10 a. m. ನ ಒಳಗೆ ತಲಪಬಹುದು.

ಬಸ್ಸು ಮತು ರೈಲು ಚಾರ್ಜು ರೂಪಾಯಿ 9-8-0 ಮಾತ್ರ

ತಿರುಪತಿಯಲ್ಲಿ ಯಾತ್ರಾರ್ಥಿಗಳಿಗೆ ಉಳಕೊಳ್ಳಲು ಭವ್ಯವಾದ ಛತ್ರಗಳ ಏರ್ಪಾಡನ್ನು ದೇವಸ್ಥಾನದವರು ಮಾಡಿರುವರು.

JOINT MANAGERS.

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಬೇಡದೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ನಮ್ಮ ಸರ್ಟಿಫಿಕೇಟು_ಡಾ. ವೈದ್ಯ ಎಲ್. ಸಿ. ಬಿ ಎಸ್. ತಿಳಿಸಿರುವುದೇನಂದರೆ, ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದೆ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯವೂ. ೪-೦-೦

ವಿ. ಪಿ. ೯ ೦

ವಿಳಾಸ. ಸಂಜೀವಿನೀ ಔಷಧಾಲಯ ಮು. ಪೋ. ಮಿರಜಿ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಕಾಮತ್,
[illegible] ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿ ಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 1 ಡಬ್ಬಿಗೆ [illegible] ಸಾಕು. 20 [illegible] ಡಬ್ಬಿ [illegible] 1-4-0 ([illegible])

[illegible]

P. O. Paridepi [illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು				ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—	ಅವ್ವಲ್ ತರದ	ಗುಡ್ಡು	ಮುಡಿಗೆ	1—13—0	1—14—
,,	ದುಯಂ	,,	,,		
,,	ಅವ್ವಲ್	ಸುಗ್ಗಿ	,,	1—12—0	—
,,	ದುಯಂ	,,	,,		—
ಅಕ್ಕಿ	ಅವ್ವಲ್	ಗುಡ್ಡು	,,	4—8—0	4—10—0
,,	ದುಯಂ	,,	,,	4—6—0	4—8—0
,,	ಅವ್ವಲ್	ಸುಗ್ಗಿ	,,	4—5—0	4—6—
,,	ದುಯಂ	,,	,,	4—3—0	4—4—0
ತೆಂಗಿನ ಕಾಯಿ	ಸುಲಿದದ್ದು	1000ಕ್ಕೆ		82—8—0	87—8—0
,,	[illegible]	,,		35—0—0	40—0—0
[illegible]				55—0—0	55—0—
,,	[illegible]	,,		57—8—0	—
[illegible]				3—15—0	4—0—0
[illegible]	1000ಕ್ಕೆ			3—12—0	3—4—0
[illegible]				4—8—0	4—10—0
[illegible]				[illegible]—0—0	48—12—0
[illegible]				13—12—0	14—8—0

Date: 26-4-1940 | ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸಹ ರೂ. 2-13-0 | Regd. No. M3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 26-4-1940 [ಸಂಚಿಕೆ 17

The Bombay Life Assurance Company, Ltd.
(Estd. 1908)

COMPARE

Your Life Assurance with any other property you possess
What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,
MADRAS BRANCH SECRETARIES,
Bombay Life Building,
Sir Lalubhai Samaldas Road,
Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut. — Car Street, Mangalore. — Visweswarapuram Circle, Bangalore City. — Post Box No. 337 Mount Road, Madras.
Gautam Nivas, Charni Road, Girgaum, Bombay No. 4. — Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ,-ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, -ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಕಮಲೇಶ ಕುಮಾರಿ

KANNADA ILLUSTRATED WEEKLY

[illegible]

[illegible] ಎಂದು ತಿಳಿಯುತ್ತದೆ. [illegible] ನಿವಾಸಿಗಳು ತಮ್ಮಿಂದು ಕಡಿಮೆ [illegible] ಹರಿಯುತ್ತಿರುವ ಪ್ರವಾಹದ ದಡದಲ್ಲಿ ವಾಸಿಸುತ್ತಿರುವರು. ಈ ಕಣಿವೆಯು ಬುಡದಲ್ಲಿ ಹಣ್ಣುಗಳ ತೋಟಗಳಿದ್ದರೂ ಜನವಸತಿಯು ಬಹಳ ಕಡಿಮೆ. ಈ ನಿವಾಸಿಗಳು ಬೇರೆ ಜನಾಂಗಕ್ಕೆ ಸೇರಿರುವ "ಬರ್ಬರರು" ಇವರು ಅರಬೀ ಭಾಷೆಯನ್ನಾಡುತ್ತಿರುವರು. ಪ್ರತಿ ವಂಶಜರೂ ಬೇಸಿಗೆ ಕಾಲದ ಅಂತ್ಯದಿಂದ ಚಳಿಗಾಲದ ತನಕ ಕಣಿವೆಯ ಬುಡದ, ಹಣ್ಣುಗಳ ತೋಟದ ಬಳಿಯಲ್ಲಿಯೂ ಉಳಿದ ಕಾಲವನ್ನು ಮೇಲಿನ ಸಮತಟ್ಟಾದ ಜಾಗದಲ್ಲಿಯೂ ಕಳೆಯುತ್ತಿರುವರು.

ಇಲ್ಲಿಯ ಜನರು ಯಾವಾಗಲೂ ಮಲೇರಿಯದಿಂದ ನರಳುತ್ತಿರುವದಕ್ಕೆ ಅವರ ಬಡತನ ಮತ್ತು ನೀರಿನ ಸಾಮೀಪ್ಯವೇ ಕಾರಣವಾಗಿರುತ್ತದೆ. ಜೂನಿನಿಂದ ನವಂಬರದ ತನಕ ಈ ಸ್ಥಳದಲ್ಲಿ ನೀರಿನ ಪ್ರವಾಹವು ನಿಧಾನವಾಗಿರುವುದರಿಂದ ಮಲೇರಿಯಾ ಸೊಳ್ಳೆಗಳು ಇಲ್ಲಿ ಬಹಳ ಆನಂದದಿಂದ ವಾಸಿಸುತ್ತವೆ. ನಂತರ ಪ್ರವಾಹದ ವೇಗವು ಹೆಚ್ಚಾದಾಗ ಎಲ್ಲಾ ಸೊಳ್ಳೆಗಳೂ ಪ್ರವಾಹದಲ್ಲಿ ಹರಿದು ಹೋಗುವುವು. ಈ ಪ್ರವಾಹವು ಯಾವಾಗಲೂ ಇದ್ದುದಾದರೆ ಅಲ್ಲಿಯ ಮಲೇರಿಯದ ಬಾಧೆಯೇ ಮಾಯವಾಗಬಹುದು. ಇದರಿಂದ "ರೋಘ" ಜಿಲ್ಲೆಯ ನಿವಾಸಿಗಳು ಪ್ರಕೃತಿಯ ಕೃಪಾಕಟಾಕ್ಷವನ್ನೇ ಬೇಡುತ್ತಿರಬೇಕಾಗಿರುವುದು. ಇಲ್ಲೇ ಕೆಲವು ವರ್ಷ ಮಲೇರಿಯವು ತಲೆದೋರಿದರೆ ಕೆಲವು ಕಾಲ ಮಲೇರಿಯದ ಬಾಧೆಯೇ ಕಡಿಮೆಯಾಗುವುದು.

ಲೀಗ್ ಆಫ್ ನೇಶನ್ಸಿನವರ ಧನ ಮತ್ತು ಸಾಮಗ್ರಿಯ ಸಹಾಯದಿಂದಲೂ ಆಲ್ಜೀರಿಯನ್ ಸರಕಾರದ ಸಹಾಯದಿಂದಲೂ "ಟ್ರಿರಿ", ಇನ್ಟಾಟೀನ್ ರಚೆಲ್ ಮೊದಲಾದ ಹಳ್ಳಿಗಳಲ್ಲೆಲ್ಲಾ ಇತ್ತೀಚೆಗೆ "ಕ್ವಿನಿನ್" ಚಿಕಿತ್ಸೆಯನ್ನು ನಡೆಯಿಸಲಾಯಿತು. ಇದರಿಂದಾಗಿ ಕ್ವಿನಿನ್ ಚಿಕಿತ್ಸೆಯನ್ನು ಪ್ರತಿ ಒಬ್ಬರೂ ಪ್ರಶಂಸಿದಲ್ಲದೆ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಕೂಡಾ ಜನರ ಮೇಲೆ ಇದರ ಪ್ರಭಾವವು ಮೂಡಿತು.

ಲೀಗ್ ಆಫ್ ನೇಶನ್ಸಿನವರ ಮಲೇರಿಯಾ ಕಮಿಶನಿನ ಶಿಫಾರಸು ಮೇರೆಗೆ ಜ್ವರದ ಕಾಲದಲ್ಲಿ ದಿವಸಕ್ಕೆ [illegible] ಕ್ವಿನಿನನ್ನು ಸೇವಿಸಬೇಕು. ಮಲೇರಿಯದಿಂದ ನರಳುವವರು ದಿವಸಕ್ಕೆ [illegible] ಗ್ರೈನುಗಳನ್ನು [illegible] ದಿವಸಗಳವರೆಗೆ ಸೇವಿಸಬೇಕೆಂದು [illegible] ವಾಗಿರುವುದು. ಇದೇ ಕಮಿಷನಿನವರು ತಮ್ಮ ರಿಪೋರ್ಟಿನ (ಇಂಗ್ಲಿಷ್ ಪ್ರತಿ) ಒಂದನೇ ಪುಟದಲ್ಲಿ ಕ್ವಿನಿನನ್ನು ವೈದ್ಯರ [illegible] ಸೇವಿಸಬಹುದೆಂದೂ, ಇದರಿಂದ ಯಾವ ಬಾಧೆಯೂ [illegible] ವಿಲ್ಲವೆಂದು ಬರೆದಿರುವರು. ಆದರೆ ಕ್ವಿನಿನ ಸ್ಸಂಯೋಗದಿಂದುಂಟಾದ ಔಷಧಿಗಳನ್ನು ಸೇವಿಸುವಾಗ ಡಾಕ್ಟರರೊಡನೆ ವಿಚಾರಿಸುವುದು ಅಗತ್ಯ.

"ರೋಘ" ಜಿಲ್ಲೆಯ ಜನರ ಜೀವನವು ಆ ಕಣಿವೆಯಿಂದ ಮಲೇರಿಯವು ಮಾಯವಾದೊಡನೆ ಉತ್ತಮವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಮಲೇರಿಯಾ ಸೊಳ್ಳೆಗಳನ್ನು ನಾಶಗೊಳಿಸುವ ಕ್ವಿನಿನಿಗೆ ನಮ್ಮೆಲ್ಲರ ಪ್ರಶಂಸೆ.

ದಾಂಪತ್ಯ ಸುಖದ ಕಳಹದಿಯೇ ಗಂಡ ಹೆಂಡಿರು ಉತ್ತಮ ಆರೋಗ್ಯದಿಂದಿರುವುದು. ಆರೋಗ್ಯವಾದ ಗಂಡನಿಗೆ ಆರೋಗ್ಯಳಾದ ಹೆಂಡತಿಯೇ ಯೋಗ್ಯ ಒಡನಾಡಿ. ಅಂಥಾ ಗಂಡ ಹೆಂಡಿರು ದಷ್ಟಪುಷ್ಟ ಆರೋಗ್ಯಕರವಾದ ಮಕ್ಕಳನ್ನು ಹೊಂದುವರು.

ಒಳ್ಳೇ ಆರೋಗ್ಯಕ್ಕೆ ಪ್ರಕೃತಿಯ ಸೂತ್ರಗಳು ಬಹಳ ಕಡಿಮೆ ಮತ್ತು ಸುಲಭವಾದವು. ಬಹಳ ಮುಖ್ಯವಾದ ಸೂತ್ರವು ದೇಹದ ಒಳಭಾಗವನ್ನು ಸ್ವಚ್ಛವಾಗಿರಿಸುವುದು. ಪ್ರತೀ ಸಿತ್ಯವೂ ಒಂದು ಗ್ಲಾಸು ಉಕ್ಕಿಬರುವ ಗುಣವುಳ್ಳ ಎಂಡ್ರೂಸ್ ಲವಣವನ್ನು ಸೇವಿಸಿದರೆ ಅದು ದೇಹದ ಒಳಭಾಗವನ್ನೆಲ್ಲಾ ಸಂಪೂರ್ಣವಾಗಿ ನಿರ್ಮಲಗೊಳಿಸುವುದು. ಇದು ನಾಲಿಗೆ ಮತ್ತು ಬಾಯಿಯನ್ನು ಸ್ವಚ್ಛವಾಗಿರಿಸಿ ಉದರ ವೇದನೆ, ಪ್ಲೀಹಬಾಧೆಯನ್ನು ನಿವಾರಿಸಿ ಎಲ್ಲದಕ್ಕಿಂತಲೂ ಮುಖ್ಯವಾಗಿ ಆರೋಗ್ಯಕ್ಕೆ ಹಾನಿಕರವಾದ ದೇಹದ ಒಳಭಾಗದಲ್ಲಿರುವ ಮಾಲಿನ ಪದಾರ್ಥಗಳನ್ನು ಹೊರನೂಕುವುದು.

ನಿರ್ಮಲವಾದ ಹೊಟ್ಟೆಯೇ ಆರೋಗ್ಯದ ಪ್ರಥಮ ಸೋಪಾನ ★ ಎಂಡ್ರೂಸ್ ಲವಣವು ದೇಹದ ಒಳಭಾಗವನ್ನು ನಿರ್ಮಲವಾಗಿರಿಸುವುದು ★ ರಕ್ತವನ್ನು ಶಾಂತವಾಗಿರಿಸಿ ಶುದ್ಧವಾಗಿರಿಸುವುದು ★ ಉದರ, ಪಿತ್ತ, ಮಲಬದ್ಧತೆ ಮೊದಲಾದ ಬಾಧೆಗಳನ್ನು ನಿವಾರಿಸುವುದು ★ ಇದರ ಅಭ್ಯಾಸವಾಗುವಂತಿಲ್ಲ, ಮಕ್ಕಳಿಂದ ಹಿಡಿದು ಇಡೀ ಕುಟುಂಬಕ್ಕೆ ತಕ್ಕುದಾಗಿದೆ.

ಒಬ್ಬ ಗಿರಾಕಿಯು ಈ ರೀತಿಯಾಗಿ ಬರೆಯುತ್ತಾನೆ:—'ಹಲವು ವರ್ಷ ಕಾಲ ನಾನು ಅಜೀರ್ಣದಿಂದ ನರಳುತಿದ್ದೆನು, ಅನೇ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಿದುದಾಯಿತು. ಮೂರು ವರುಷಗಳ ಹಿಂದೆ ನಾನು ಎಂಡ್ರೂಸ್ ಲಿವರ್ ಲವಣವನ್ನು ಉಪಯೋಗಿಸಿದೆ. ಅದು ನನ್ನನ್ನು ಗುಣಪಡಿಸಿತೆಂದು ಹೇಳಲು ನನಗೆ ಬಹಳ ಸಂತೋಷವಾಗುತ್ತದೆ. ಈಗ ನಾನು ಏನನ್ನಾದರೂ ತಿನ್ನುತ್ತೇನೆ ಸುಖವಾಗಿ ನಿದ್ರೆಯೂ ಕೆಲಸದಲ್ಲಿ ಆಸಕ್ತಿಯೂ ಇರುವುದು.

22

M. E. No. 319

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

3-5-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ. [೩—೫—೧೯೪೦

ಪಾಕಿಸ್ತಾನಯೋಜನೆಗೆ ಮುಸ್ಲಿಮರ ಬೆಂಬಲವಿಲ್ಲ!

ಅಖಿಲಭಾರತ ಸ್ವತಂತ್ರ ಮುಸ್ಲಿಂ ಪರಿಷತ್ತು

ಪಾಕಿಸ್ಥಾನದ ಖಂಡನೆ

ನವದಿಲ್ಲಿಯಲ್ಲಿ ಕಳೆದ ವಾರ ಅಖಿಲಭಾರತ ಸ್ವತಂತ್ರ ಮುಸ್ಲಿಮರ ಪರಿಷತ್ತು ಅಲ್ಲಾ ಭಕ್ಷರ ಅಧ್ಯಕ್ಷತೆಯಿಂದ ಜರಗಿತು ಅಖಿಲಭಾರತದಿಂದ ಸಾವಿರಾರು ಮಂದಿ ಪ್ರತಿನಿಧಿಗಳು ಆಗಮಿಸಿದ್ದರು ಪರಿಷತ್ತಿನಲ್ಲಿ ಪಾಕಿಸ್ಥಾನ ಯೋಜನೆಯು ಅಕ್ರಮವೆಂದೂ, ಅನ್ಯಾಯವೆಂದೂ ಖಂಡಿಸಲ್ಪಟ್ಟಿತು. ಭಾರತದ ಭವಿಷ್ಯವನ್ನು ನಿರ್ಮಿಸಲು—ಹಿಂದೂ—ಮುಸ್ಲಿಂ ಮೊದಲಾದ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರಘಟನಾ ಸಮಿತಿಯೊಂದೇ ಸಾಧ್ಯ ಉಪಾಯವೆಂದೂ ನಿರ್ಣಯ ಮಾಡಲಾಯಿತು.

ಮೌಲಾನಾ ಹಬಿಬೂರ್ ರಹಿಮಾನರು ಪಾಕಿಸ್ಥಾನ ಯೋಜನೆಯನ್ನು ಖಂಡಿಸಿ ಠರಾವನ್ನು ತಂದರು. ಬಂಗಾಲದ ಮೌಲ್ವಿ ಅಬ್ದುಲ್ ಬಜ್ಲಾಜಿಯವರು ಅದನ್ನು ಅನುಮೋದಿಸಿದರು.

ರಾಷ್ಟ್ರಘಟನಾ ಸಮಿತಿಯ ನಿರ್ಣಯವನ್ನು ಮೌಲಾನಾ ಹಫಿಜ್ ಉಲ್ ರಹಿಮಾನರು ತಂದರು.

ಭಾರತವು ಅವಿಭಾಜ್ಯವಾದ ಸ್ವತಂತ್ರ ರಾಷ್ಟ್ರವೆಂದೂ ಇಲ್ಲಿ ಸರ್ವ ಜಾತಿ ಮತದವರಿಗೆ ಆಶ್ರಯವಿದೆಯೆಂದೂ ಪ್ರತಿಯೊಬ್ಬ ಮುಸ್ಲಿಮನೂ ಭಾರತೀಯನೆಂದೂ ಭಾರತದ ಸ್ವಾತಂತ್ರ್ಯಸಾಧನೆಯೇ ಮುಸ್ಲಿಮರ ಕರ್ತವ್ಯವೆಂದೂ ಸಂಪೂರ್ಣ ಸ್ವರಾಜ್ಯವು ಆದಷ್ಟು ಬೇಗನೆ ಸಿಗಬೇಕೆಂದೂ ಸೂಚಿಸುವ ನಿರ್ಣಯವೂ ಆಯಿತು.

ಮುಸ್ಲಿಂ ಪರಿಷತ್ತಿನ ನಿರ್ಣಯ

ಅಬ್ದುಲ್‌ಗಫರ್‌ಖಾನರ ಹೊಸ ನಿರ್ಧಾರ!

ಕಾಂಗ್ರೆಸನ್ನು ನಾವು ಬಿಡಲಾರೆವು!

ಖಾನ್ ಅಬ್ದುಲ್ ಗಫರ್ ಖಾನರ ಹೊಸ ನಿರ್ಧಾರ

ಗಡಿನಾಡಿನ ಗಾಂಧಿಯೆಂದು ಪ್ರಸಿದ್ಧರಾದ ಖಾನ್ ಅಬ್ದುಲ್ ಗಫಾರ್ ಖಾನರು ಪೇಷಾವರದಲ್ಲಿ ನಡೆದ ಸಭೆಯೊಂದರಲ್ಲಿ ಹೀಗೆಂದರು —

"ಕಾಂಗ್ರೆಸ್ ಕೆಲಸಗಾರರ, ವಿಶೇಷ ರಾಷ್ಟ್ರ ಕೆಲಸಗಾರರ ತಯಾರಿಕೆಗಾಗಿ ನಾನು ಇನ್ನು ಮುಂದೆ ಒಂದು ಕೇಂದ್ರವನ್ನು ಸ್ಥಾಪಿಸಿ ಕೆಲಸ ನಡೆಸುತ್ತೇನೆ. ನಾನೀಗ ಹೊಸ ಕಾರ್ಯದಲ್ಲಿ ನಿರತನಾಗುತ್ತೇನೆ. ಕಾಂಗ್ರೆಸ್ಸಿನಲ್ಲಿಯೂ, ಗಡಿನಾಡ ಕಾಂಗ್ರೆಸ್ ಕಮಿಟಿಯಲ್ಲಿಯೂ ಪಂಗಡಗಳುಂಟಾಗಿವೆ ಭಿನ್ನತೆಯು ತಲೆದೋರಿದೆ ಈ ತರಹದ ಗೊಂದಲದಿಂದ ನಾನು ಹೊರಗಿರಬೇಕೆಂದು ನಿರ್ಧರಿಸಿದ್ದೇನೆ. ಪಠಾಣರಲ್ಲಿರುವ ಭಿನ್ನಭಾವಗಳನ್ನು ಕೊಡೆದು ಹಾಕುವುದಕ್ಕೆ ಮತ್ತು ರಾಜಕೀಯ ಚಳವಳಿಯಲ್ಲಿ ತಲೆದೋರಿರುವ ಪಂಗಡ ಭಾವವನ್ನು ನಿರ್ಮೂಲ ಮಾಡುವುದಕ್ಕೆ ನಾನು ಹೊಸದಾಗಿ ಈ ಕೆಲಸ ಕೈಗೊಂಡಿರುತ್ತೇನೆ. ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿ ಐಕ್ಯಭಾವನೆಯ ಕೆಲಸಗಾರರನ್ನು ತಯಾರು ಮಾಡಬೇಕಾಗಿದೆ. ಕಾಂಗ್ರೆಸ್ ಜಿಗರ್ಗಾದವರೂ ಕೆಂಪು ಷರ್ಟಿನ ಪಂಗಡದವರೂ ನಾನು ಸ್ಥಾಪಿಸುವ ಸಂಸ್ಥೆಗೆ ಸೇರಬಹುದು. ಈ ವರ್ಷ ನನ್ನನ್ನು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಗೆ ಚುನಾಯಿಸಬಾರದು. ಗಡಿನಾಡು ಪ್ರಾಂತ ಕಾಂಗ್ರೆಸ್ ಕಮಿಟಿಯಿಂದ ನಾನು ರಾಜೀನಾಮೆ ಕೊಡಬೇಕೆಂದಿದ್ದೇನೆ. ಆದರೆ ಪ್ರಾಂತ ಕಾಂಗ್ರೆಸ್ ಕಮಿಟಿಯವರು ನನ್ನ ರಾಜೀನಾಮೆಯನ್ನು ಒಪ್ಪಿಕೊಳ್ಳಲು ತಯಾರಾಗಿಲ್ಲ, ನನ್ನ ರಾಜೀನಾಮೆಯನ್ನು ಒಪ್ಪಿಕೊಂಡ ಕೂಡಲೇ ನಾನು ಕಾಂಗ್ರೆಸ್ ಕಮಿಟಿಗೂ ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ ರಾಜೀನಾಮೆ ಕೊಟ್ಟಂತೆಯೇ ಭಾವಿಸಬೇಕು."

ಪಠಾಣರಲ್ಲಿ ಐಕ್ಯಮತವಿದೆ

ಖುದೇ ಖಿದ್ಮತ್‌ಗಾರರು ಕಾಂಗ್ರೆಸನ್ನು ಬಿಡುವುದಿಲ್ಲ

ಖಾನ್ ಅಬ್ದುಲ್ ಗಫಾರಖಾನರ ಅಭಯ ವಚನ

ಪೇಷಾವರಿನಲ್ಲಿ ತ್ಯಾಗವೀರರ ದಿನಾಚರಣೆಯು ಶಾಂತವಾಗಿ ನಡೆಯಿತು. ತ್ಯಾಗವೀರರ ದಿನಾಚರಣೆ ಬಗ್ಗೆ ಸೇರಿದ ಸಭೆಯಲ್ಲಿ ಖಾನ್ ಅಬ್ದುಲ್ ಗಫಾರ್ ಖಾನರು ದೀರ್ಘ ಭಾಷಣವನ್ನು ಮಾಡುತ್ತಾ ಹೇಳಿದ್ದೇನೆಂದರೆ ಖುದೇ ಖಿದ್ಮತ್‌ಗಾರರಿಗೂ, ಕಾಂಗ್ರೆಸಿಗೂ ನಿಕಟ ವ್ಯತ್ಯಾಸವಿದೆ ಖುದೇ ಖಿದ್ಮತ್‌ಗಾರರ ಸಂಸ್ಥೆ ಸಾಮಾಜಿಕ ಸೇವಾ ಸಂಸ್ಥೆ ನಮ್ಮದು ಮೊದಲಿನಿಂದಲೂ ಶಾಂತಿಯುತವಾದ ಸಂಸ್ಥೆ ನಮ್ಮ ಶತ್ರುಗಳಲ್ಲಿ ನಮ್ಮ ಬಗ್ಗೆ ವಿಚಿತ್ರಾಭಿಪ್ರಾಯವಿರುತ್ತದೆ. ಪಠಾಣರಲ್ಲಿರುವ ಐಕಮತ್ಯವನ್ನು ಕಂಡರೆ ಅವರಿಗಾಗುವುದಿಲ್ಲ. ನಮ್ಮ ಶತ್ರುಗಳ ಧೋರಣೆಯಿಂದ ನಾವು ನಮ್ಮ ಸಂಸ್ಥೆಯನ್ನು ರಾಜಕೀಯವಾಗಿ ಮಾರ್ಪಡಿಸಿಕೊಂಡೆವು. ನಮ್ಮಲ್ಲಿ ಕೆಲವು ಮುಖಂಡರನ್ನು ಸರಕಾರವು ದಸ್ತಗಿರಿ ಮಾಡಿದ್ದರಿಂದ, ನಾವು ಭಾರತದ ಇತರ ಭಾಗಗಳಲ್ಲಿರುವ ನಮ್ಮ ಮಿತ್ರರ ಸಹಾನುಭೂತಿಯನ್ನು ಕೋರಬೇಕಾಯಿತು. ಕಾಂಗ್ರೆಸು ನಮಗೆ ಸಹಾಯಮಾಡಿ ಬೆಂಬಲ ಕೊಟ್ಟಿತು. ಕಾಂಗ್ರೆಸು ನಮಗೆ ರಕ್ಷಣೆಯನ್ನು ಕೊಟ್ಟಿತು. ನಮಗೆ ಸಹಾಯಮಾಡಿದವರನ್ನು ನಾವು ಮರೆಯುವವರಲ್ಲ. ನಾವು ಕಾಂಗ್ರೆಸ್ಸನ್ನು ಎಂದಿಗೂ ಬಿಡುವುದಿಲ್ಲ. ಕಾಂಗ್ರೆಸ್ಸಿನೊಡನೆ ರಾಜಕೀಯ ಸಂಬಂಧವನ್ನು ಇಟ್ಟುಕೊಂಡಿರುವೆವು ರಾಜಕೀಯವು ನನ್ನ ಜೀವನದ ಉಸಿರು. ನಾನು ಮೊದಲಿನಂತೆಯೇ ಖುದೇ ಖಿದ್ಮತ್‌ಗಾರನಾಗಿದ್ದೇನೆ ನಮ್ಮ ಚಳವಳಿಯನ್ನು ನಾವು ಸರಿಪಡಿಸಿಕೊಂಡು ಬಲವನ್ನು ಹೊಂದಬೇಕು. ಖುದೇ ಖಿದ್ಮತ್‌ಗಾರ್ ಸಂಘದಲ್ಲಿ ಅನೇಕವಾಗಿ ಹೊಸಬರು ಸೇರಿಕೊಂಡು ಸಂಘವನ್ನು ಮಲಿನಮಾಡಿದ್ದಾರೆ ಇದರಿಂದ ನಮ್ಮ ಉದ್ದೇಶವು ಸಾಧನೆಯಾಗುವುದಿಲ್ಲ, ಆದ್ದರಿಂದ ಈಗ ನಾನು ತ್ಯಾಗವೀರ ಕೆಲಸಗಾರರನ್ನು ತಯಾರಿಸಲು ವ್ಯವಸ್ಥೆ ಮಾಡಿದ್ದೇನೆ ಇವರಿಂದ ನಮ್ಮ ಕಾರ್ಯಸಾಧನೆಯಾಗುವುದೆಂದು ನಂಬಿದೆ."

ಲಂಡನಿನಲ್ಲಿ ಹಿಂದುಸ್ಥಾನ ಭವನ

ಮಹಾತ್ಮಾ ಗಾಂಧಿಜಿಯವರ ಶುಭ ಸಂದೇಶ

ಲಂಡನಿನಲ್ಲಿ ಒಡೆಯರಾದ ಭಾರತೀಯ ನಿವಾಸಿಗಳ ಸೌಕರ್ಯಕ್ಕಾಗಿ "ಹಿಂದೂಸ್ಥಾನ್ ಕಮ್ಯುನಿಟಿ ಹೌಸ್" ಎಂಬ ಭವನವನ್ನು ಏರ್ಪಡಿಸಲಾಗಿದೆ ಲಾರ್ಡ್ ಸ್ನೆಲ್‌ರವರು ಈ ಭವನದ ಆರಂಭೋತ್ಸವವನ್ನು ನಡೆಸಿದರು. ಇದನ್ನು ಲಂಡನಿನ ಈಸ್ಟ್ ಎಂಡ್ ಎಂಬಲ್ಲಿ ಏರ್ಪಡಿಸಿದೆ ಈಚೆಗೆ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಪದವೀಧರರಾದ ಮಿ. ಥಾಂಪ್ಸನ್‌ನ ಟುಪ್ಮನ್ ಎಂಬವರು ಈ ಭವನದ ನಿರ್ಮಾಣಕ್ಕೆ ಹತ್ತು ಸಾವಿರ ಪವನು ಕೊಟ್ಟಿರುತ್ತಾರೆ. ಈ ಭವನದ ಆರಂಭೋತ್ಸವ ಸಮಾರಂಭಕ್ಕೆ ಮಹಾತ್ಮಾಗಾಂಧಿಯವರು ಶುಭಸಂದೇಶವನ್ನು ಕಳುಹಿಸಿದ್ದರು.

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿ

ತಾರೀಕು 3—5—1940

ಸ್ವತಂತ್ರ ಮುಸ್ಲಿಮರ ಪರಿಷತ್ತು

ಕಳೆದ ತಿಂಗಳ ಕೊನೆಯಲ್ಲಿ ಅಖಿಲ ಭಾರತ ಸ್ವತಂತ್ರ ಮುಸ್ಲಿಮರ ಪರಿಷತ್ತು ನವಡೆಲ್ಲಿಯಲ್ಲಿ ಮಿ॥ ಅಲ್ಲಾ ಭಕ್ಷರ ಅಧ್ಯಕ್ಷತೆಯಿಂದ ಸೇರಿತು. ಬೇರೆ ಬೇರೆ ಪ್ರಾಂತಗಳಿಂದ ಬಹು ಮಂದಿ ಪ್ರತಿನಿಧಿಗಳು ಪ್ರೇಕ್ಷಕರು ಬಂದಿದ್ದರು. ಇಂದಿನ ಅಖಿಲ ಭಾರತದ ಮುಸ್ಲಿಮರ ಅಪೇಕ್ಷೆ ಆಕಾಂಕ್ಷೆಗಳೇನೆಂಬುದನ್ನು ಪರಿಷತ್ತಿನಲ್ಲಾದ ಠರಾವುಗಳೂ, ಪರಿಷದಧ್ಯಕ್ಷರ ಭಾಷಣವೂ ಸ್ಪಷ್ಟಪಡಿಸಿದವು.

ಪರಿಷತ್ತಿನಲ್ಲಿ ಮುಸ್ಲಿಂ ಲೀಗಿನ ರಾಷ್ಟ್ರವಿಭಜನೆಯ ಯೋಜನೆಯನ್ನು ಏಕಮತದಿಂದ ಖಂಡಿಸಲಾಯಿತು. ಅದು ಪ್ರಯೋಗಸಾಧ್ಯವಲ್ಲವೆಂಬುದನ್ನು ವಿಶದಗೊಳಿಸಲಾಯಿತು. ಅದರಿಂದ ರಾಷ್ಟ್ರಕ್ಕೆ ಹಲವಾರು ವಿಘ್ನಗಳು ದ್ರೋಹಗಳು ಇವೆಯೆಂದು ಸ್ಪಷ್ಟಗೊಳಿಸಲಾಯಿತು. ಕಡೆಗೆ ಮುಸ್ಲಿಮರಿಗೆ ಜನತೆಯ ಪ್ರತಿನಿಧಿಗಳಿಂದ ರಚಿಸಲ್ಪಟ್ಟ ಪ್ರತಿನಿಧಿ ಮಂಡಲವು ನಿರ್ಣಯಿಸುವ ಸ್ವರಾಜ್ಯಪಟನೆಯಲ್ಲಿ ಒಪ್ಪಿಗೆಯುಂಟೆಂದು ತಿಳಿಸಲಾಯಿತು. ಮಾತ್ರವಲ್ಲದೆ ಮುಸ್ಲಿಮರು ಭಾರತೀಯರೆಂದೂ ಭಾರತವು ಮುಸ್ಲಿಮರಿಗೆ ಮಾತೃಭೂಮಿಯೆಂದೂ ಭಾರತದ ಸ್ವಾತಂತ್ರ್ಯವು ಮುಸ್ಲಿಮರ ಧ್ಯೇಯವೆಂದೂ ಆದಕಾರಣ ಆದಷ್ಟು ಬೇಗನೇ ರಾಷ್ಟ್ರವು ಬಂಧಮುಕ್ತವಾಗುವಂತೆ ಮಾಡಲು ಮುಸ್ಲಿಮರು ಯತ್ನಿಸಬೇಕೆಂದೂ ನಿರ್ಣಯಗಳಾದವು.

ಅಖಿಲಭಾರತದ ಮುಸ್ಲಿಮರ ಏಕಮಾತ್ರ ಪ್ರತಿನಿಧಿಯೆಂದು ಮಿ॥ ಜಿನ್ನರು ಕೂಗೆಬ್ಬಿಸುತ್ತಿರಲು, ಅವರಿಗೆ ಸ್ವತಂತ್ರ ಧ್ಯೇಯದ ಮುಸ್ಲಿಮರು ಸಕಾಲದಲ್ಲಿಯೇ ಹೀಗೆ ಉತ್ತರವಿತ್ತರೆನ್ನಬಹುದು. ಜಿನ್ನರ ಯೋಜನೆಯು ರಾಷ್ಟ್ರಘಾತುಕವೆಂದು ಸಾರೋದ್ಧಾರ ಮಾಡಿರುವುದರೊಡನೆ ಜಿನ್ನರ ಮುಂದಾಳುತನಕ್ಕೆ ತಿಲಾಂಜಲಿಯಿಟ್ಟಂತೆಯೇ ಸರಿ. ಜಿನ್ನರು, ಇನ್ನಾದರೂ ಬುದ್ಧಿಗಲಿತು, ಮುಸ್ಲಿಮರ ಪರವಾಗಿ, ಅಸಂಬದ್ಧ ಮಾತನಾಡಿ, ಅವಹೇಳನೆಗೆ ಗುರಿಯಾಗದಿರಲೆಂದು ಹಾರೈಸಬಹುದೆ?

ಚಳವಳವು ನಿಶ್ಚಯವಿಲ್ಲ.

ಕಳೆದ ವಾರದ ಹರಿಜನದಲ್ಲಿ ಗಾಂಧಿಜಿಯವರು ಸತ್ಯಾಗ್ರಹ ಆಂದೋಲನದ ವಿಷಯವಾಗಿ ಒಂದು ಲೇಖನವನ್ನು ಬರೆಯುತ್ತಾ, ಅದರಲ್ಲಿ ಜನತಾ ಸತ್ಯಾಗ್ರಹವು ಆರಂಭವಾಗುವುದು ನಿಶ್ಚಯವಿಲ್ಲವೆಂಬುದನ್ನು ತಿಳಿಸಿದ್ದಾರೆ.

ಈ ಸಲದ ವರ್ಕಿಂಗ್ ಕಮಿಟಿಯು ಹೊಸ ನಿರ್ಣಯವನ್ನೇನೂ ಮಾಡಲಿಲ್ಲ. ಸತ್ಯಾಗ್ರಹ ಆಂದೋಲನವು ಆರಂಭವಾಗಬೇಕಿದ್ದರೆ ಅದು ಗಾಂಧಿಜಿಯವರಿಂದಲೇ ಆರಂಭಿಸಲ್ಪಡಬೇಕೆಂದೂ, ಈ ಬಗ್ಗೆ ಗಾಂಧಿಜಿಯವರೇ ಆಜ್ಞೆ ಕೊಡಬೇಕೆಂದೂ ವರ್ಕಿಂಗ್ ಕಮಿಟಿಯು ನಿರ್ಧಾರ ಮಾಡಿದ್ದೆ. ಆದರೆ ಗಾಂಧಿಜಿಯು ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಸತ್ಯಾಗ್ರಹವನ್ನು ಆರಂಭಮಾಡುವ ವಿಷಯ ತಾನು ಹೇಳಿದ ಮಾತುಗಳೇನೆಂಬುದನ್ನು ಈಗ ಸಾರಾಂಶವಾಗಿ ಹೀಗೆ ತಿಳಿಸಿದ್ದಾರೆ.

ಶಾಸನಭಂಗ ಚಳವಳವು ನಿಜವಾಗಿಯೂ ಅದು ಶಾಸನಭಂಗವೆನಿಸಬೇಕಾದರೆ ನಮ್ಮ ಪ್ರತಿಕಕ್ಷಿಗೂ ಅಂತೆಯೇ ಅನಿಸಬೇಕು. ಶಾಸನಭಂಗ ಮಾಡುವುದರಿಂದ ಅವನಿಗೆ ಹಾನಿಯಾಗಲಾರದೆಂದು ಆತನಿಗೆ ತಿಳಿಯಬೇಕು. ಈಗ ಹೆಚ್ಚು ಬ್ರಿಟಿಷರು ತಿಳಕೊಂಡಿರುವುದೆಂದರೆ ಅಹಿಂಸೆಯು ಒಂದು ರೀತಿಯ ವೇಷವೆಂದು ಮುಸ್ಲಿಮರು ಭಾವಿಸಿರುವುದು ಶಾಸನಭಂಗವು ತಮ್ಮ ವಿರುದ್ಧವೆಂದು ಕಾಂಗ್ರೆಸ್ಸು ಶಾಸನಭಂಗವನ್ನು ಆರಂಭಿಸುವುದು ಇದುವರೆಗೆ ಭಾರತದ ಸರ್ವಸೊತ್ತನ್ನೂ ತನ್ನ ಅಧಿಕಾರದಿಂದ ಬ್ರಿಟನು ಸುಲಿಗೆಮಾಡಿಕೊಂಡಿದ್ದರೂ ಇನ್ನು ಮುಂದಕ್ಕೆ ಕಾಂಗ್ರೆಸ್ಸು ಅದಕ್ಕೆ ಸಮ್ಮತಿಸುವುದಿಲ್ಲವೆಂಬುದನ್ನು ತಿಳಿಸುವುದರ ಸಲುವಾಗಿಯಾಗಿದೆ. ಈ ವಿಷಯಗಳಲ್ಲಿ ಹೊರಗಿನ ಮತ್ತು ಕಾಂಗ್ರೆಸ್ಸಿನೊಳಗಿನವರಿಂದ ಸಂದೇಹ ಸಂಶಯಗಳ ಮಧ್ಯದಲ್ಲಿ ಬಿದ್ದುಕೊಂಡಿದವನಾಗಿ ಶಾಸನಭಂಗವನ್ನು ಆರಂಭಿಸಬೇಕಾದರೆ ಹಲವು ಸಲ ನಾನು ಯೋಚನೆ ಮಾಡಬೇಕಾಗುತ್ತದೆ

ನಾನು ಇದುವರೆಗಿನ ಪರಿಸ್ಥಿತಿಯನ್ನು ಗಮನಿಸಿದಂತೆ ಹೇಳುವುದಿದ್ದರೆ ಜನತಾ ಆಂದೋಲನವು ಬಹುಶ ಆಗಲಾರದು ವ್ಯಕ್ತಿಗಳ ಕೆಲರು ಶಾಸನಭಂಗ ಮಾಡಬೇಕಾಗುವುದು. ಪ್ರತಿಯೊಬ್ಬರೂ ಬಹಳ ನಿಯಮಕ್ಕೊಳಗಾಗಿರಬೇಕು ಮತ್ತು ಕಾಂಗ್ರೆಸ್ ಕಮಿಟಿಗಳ ಸಮ್ಮತಿ ಪಡೆಯಬೇಕು.

ಆದಕಾರಣ ಮಿಲಿಯಾಂತರ ಮಂದಿ ದೇಶ ಸೇವಕರು ಸತ್ಯಾಗ್ರಹ ಆಂದೋಲನಕ್ಕೆ ಮೌನದಿಂದಲೇ ಬೆಂಬಲಕೊಡಬಲ್ಲರಾದರೆ ನೂಲುವುದುಮತ್ತು ಖಾದಿಧಾರಣೆಯಿಂದತಮ್ಮ ಧ್ಯೇಯಸಾಧನೆಗಾಗಿ ಒಂದು ಜಾತಿಯ ವಸ್ತ್ರವನ್ನು ತಯಾರಿಸಲು ಯತ್ನಿಸುವರಾದರೆ ಅದು ದೊಡ್ಡ ಸತ್ಯಾಗ್ರಹವೇ ಆಗಿದೆ. ಖಾದಿಧಾರಣೆಯಿಂದ ಅಸ್ಪೃಶ್ಯತೆಯು,ಜಾತಿಮತಗಳ ಭೇಧವು ಹೋಗಿ, ಭ್ರಾತೃಭಾವವುಂಟಾಗುವದು. ಇಷ್ಟನ್ನು ಮಾಡುವವರು ಶಾಸನ ಭಂಗ ಚಳವಳ ಮಾಡುವ ಸತ್ಯಾಗ್ರಹಿಗಳಷ್ಟೇ ಹೆಚ್ಚಿನ ಸತ್ಯಾಗ್ರಹಿಗಳಾಗಿದ್ದಾರೆ. ಹೀಗೆಂದು ಗಾಂಧಿಜಿಯವರು ಸ್ಪಷ್ಟವಾಗಿ ಹೇಳುತ್ತಾರೆ.

ಗಡಿನಾಡಿನ ವಿಧೇಯತೆ!

ಕಾಂಗ್ರೆಸಿಗೆ ವಿಧೇಯವಾಗಿರುವ ಮುಸ್ಲಿಂ ಪ್ರಾಂತವೆಂದರೆ ಗಡಿನಾಡು. ಖಾನ್ ಸಹೋದರರ ತಕ್ಕ ವ್ಯಕ್ತಿತ್ವಗಳ ಪ್ರಭಾವವೇ ಈ ವಿಧೇಯತೆ ಬೆಂಬಲಗಳಿಗೆ ಮೂಲ ಕಾರಣವಾಗಿದೆ. ಕಾಂಗ್ರೆಸಿನೊಡನೆ ತಮಗೆ ಇರುವ ಸಂಬಂಧ ಅದರ ವಿಶ್ವಾಸಗಳನ್ನು ಮೊನ್ನೆಯ ಸಭೆಯೊಂದರಲ್ಲಿ ಗೆಸರ್ ಖಾನರು ಸ್ಪಷ್ಟಪಡಿಸಿದರು. "ಅದೊಂದು ಕಾಲದಲ್ಲಿ ನಾವು ಕಷ್ಟಕ್ಕೆ ಗುರಿಯಾಗಿದ್ದೆವು. ನಮ್ಮಲ್ಲಿ ಹಲವರು ಸೆರೆಮನೆಯ ಸಂಕಟಕ್ಕೆ ತುತ್ತಾಗಿದ್ದರು ಆಗ ನಾವು ಭಾರತದ ಬೇರೆ ಬೇರೆ ರಾಜಕೀಯ ಪಕ್ಷಗಳ ಬೆಂಬಲಗಳನ್ನು ಹಾರೈಸಿಕೇಳಿಕೊಂಡೆವು. ಯಾವವೂ ನಮಗೆ ಸಹಾಯ ಹಸ್ತವನ್ನು ಕೊಡಲಿಲ್ಲ. ಹಾಗೆ ಬೆಂಬಲವೀಯಲು ಹಿಂಜರಿದವುಗಳಲ್ಲಿ ಮುಸ್ಲಿಂ ಲೀಗೂ ಒಂದಾಗಿದೆ. ಕಾಂಗ್ರೆಸು, ನಮ್ಮ ಆ ಕಷ್ಟಕಾಲದಲ್ಲಿ ಬಂದು ಸಹಾಯ ಮಾಡಿತು ಕಾಂಗ್ರೆಸಿನೊಡನೆ ನಾವು ಸ್ನೇಹವನ್ನು ಬೆಳೆಸಿದೆವು ಕಾಂಗ್ರೆಸು ಮಾಡಿದ ಉಪಕಾರವನ್ನು ನಾವು ಮರೆಯಲಾರೆವು" ಹೀಗೆಂದು ಗಡಿನಾಡಿನ ವೀರ ಸತ್ಯಾಗ್ರಹಿಗಳ ಮುಖಂಡರು ತಮ್ಮ ವಿಧೇಯತೆಯನ್ನು ಕಾಂಗ್ರೆಸಿಗೆ ತಿಳಿಸಿದ್ದಾರೆ ತಮ್ಮ ಈ ಹೃದಯ ಪೂರ್ವಕವಾದ ಮಾತಿನ ಯಥಾರ್ಥತೆಯನ್ನು ಹಿಂದಿನ ಶಾಸನಭಂಗ ಆಂದೋಲನದ ಕಾಲದಲ್ಲಿಯೂ, ಆ ಮೇಲೆ ಚುನಾವಣೆಯ ಕಾಲದಲ್ಲಿಯೂ ಗಡಿನಾಡಿನವರು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿದ್ದಾರೆ. ಮುಂದಿನ ಪ್ರಯೋಗ ಕಾಲದಲ್ಲಾದರೂ ಗಡಿನಾಡು ಉಜ್ವಲ ಕಾರ್ಯಭಾಗವನ್ನು ಮಾಡಲಿರುವುದೆಂಬುದು ನಿಸ್ಸಂಶಯವಾದ ವಿಷಯವಾಗಿದೆ! ಕಾಂಗ್ರೆಸಿಗೆ, ಗಡಿನಾಡಿನ ಬೆಂಬಲವು ವಜ್ರಬಲವಾಗಿದೆ! ಖಾನ್ ಸಹೋದರರ ಸೇವೆಯು ಅನುಪಮವಾಗಿದೆ!

ಇಟೆಲಿಯ ಧೋರಣೆ

ಭೂಮಧ್ಯವಲಯದಲ್ಲಿ ಇತ್ತೀಚೆಗೆ ಕೆಲದಿನಗಳಿಂದ ಘಟನೆಗೆ ಬಹಳ ಪರಿವರ್ತನೆ ಹೊಂದುತ್ತಿವೆ ಆದರೆ ಇದರಿಂದ ಇಟಲಿಯು ಯುದ್ಧ ರಂಗಕ್ಕೆ ಇಳಿಯಬಹುದಾಗಿ ಊಹಿಸಲು ಕಾರಣಗಳಿದ್ದರೂ ಅಂತಹ ಸಂಭವಗಳೇನೂ ತೋರಿಬರುವುದಿಲ್ಲ.

ಕಳೆದ ಸಪ್ಟಂಬರದಲ್ಲಿ ಇಟಲಿಯು ತಟಸ್ಥ ಧೋರಣೆಯನ್ನು ವಹಿಸಲು ಯಾವುದು ಕಾರಣವಾಯಿತೋ ಇಂದಿಗೂ ಆ ಕಾರಣಗಳು ಶಿಥಿಲವಾಗಿಲ್ಲ. ಶಸ್ತ್ರ ಸಿದ್ಧತೆಯಲ್ಲಿ ಇಟಲಿಯು ಇತರ ಯುದ್ಧ ಪ್ರವೃತ್ತ ರಾಷ್ಟ್ರಗಳಿಂದ ಬಹಳ ಹಿಂದಿದೆ. ಇನ್ನು ಸ್ಥಾನಮಹತ್ವದಿಂದಲೂ ಇಟಲಿಯು ಬ್ರಿಟಿಷ್ ಫ್ರಾನ್ಸುಗಳ ಪ್ರಭಾವದಿಂದ ಪಡೆಯಲಾಗದ ಸ್ವಾತಂತ್ರ್ಯದಲ್ಲಿ ಇರುವುದಿಲ್ಲ.

ಇಟಲಿಯು ಜರ್ಮನಿಗೆ ಬೆಂಬಲ ಪಡೆಯೆಂಬುದು ... ಸರ್ವಾಧಿಕಾರಿಗಳ ಧೋರಣೆಯಿಂದ ಜಗಜ್ಜನಿತವಾಗಿದ್ದರೂ ಜನತೆಯು ಅದರ ವಿರುದ್ಧವಾಗಿ ಇಂದಿನ ಲೋಕಯುದ್ಧವನ್ನೂ ಜರ್ಮನರನ್ನೂ ದ್ವೇಷಿಸುತ್ತಿದೆಯೆಂದು ಕೇಳಿಬರುತ್ತದೆ. ಕಿಂಗ್ ವಿಕ್ಟರ್ ಇಮಾನ್ಯುವೆಲನು ಜರ್ಮನ್ ದ್ವೇಷಿಯಾಗಿದ್ದಾನೆ! ಧಾರ್ಮಿಕ ಗುರುವಾದ ಪೋಪರಂತೂ ಯುದ್ಧ ದ್ವೇಷಿಗಳಾಗಿದ್ದಾರೆ! ಈ ಮುಖ್ಯ ಕಾರಣಗಳೇ ಕಳೆದ ಸಪ್ಟಂಬರದಲ್ಲಿ ಹಿಟ್ಲರ್ ಪ್ರಿಯನಾದ ಮುಸಲನಿಯನ್ನು ತಟಸ್ಥನಾಗಿರಿಸಲು ಮೂಲಕಾರಣವಾಗಿರಬೇಕು.

ಬಾಲ್ಕನಿನ ಹೊಸ ವಿದ್ಯಮಾನಗಳು ಇಟಲಿಗಾಗಲಿ ಜರ್ಮನಿಗಾಗಲಿ ಹಿತವಾಗಿಲ್ಲ ಟರ್ಕಿಯ ಮುಂದಾಳುತನದಿಂದ ಬಾಲ್ಕನ್‌ಗಳು ಸಂಘಟಿತವಾಗುವುದು ಇಟಲಿ ಜರ್ಮನ್‌ಗಳಿಗೆ ಬೇಡವಾಗಿದೆ ಟರ್ಕಿಯು ಬಾಲ್ಕನ್ ರಾಷ್ಟ್ರಗಳನ್ನು ಒತ್ತಾಯಪಡಿಸುತ್ತಿದೆ. ಸತ್ಫಲವು ಬೇಗನೇ ತೋರುವ ಚಿಹ್ನೆಯೂ ಇದೆ ಇದರಿಂದ ತಮ್ಮ ಸ್ವಾಧೀನ ಪ್ರಾಂತಗಳ ಮೇಲೆ ಅಧಿಕಾರವನ್ನು ಕಳಕೊಳ್ಳಬೇಕಾಗಬಹುದೆಂದು ಇಟಲಿ ಜರ್ಮನಿಗಳು ಎದೆ ಬಡಿದುಕೊಳ್ಳುತ್ತಿವೆ. ಆದರಿಂದಲೇ ಇಟಲಿಯು ಯುಗೋಸ್ಲಾವಿಯದ ಮೇಲೆ ಬೀಳುವ ಬೆದರಿಕೆ ಹುಟ್ಟಿಸಿದೆ

ಮಿತ್ರರಾಷ್ಟ್ರಗಳ ಇಟಲಿಯ ಈ ಯೋಚನೆ ಮಾರ್ಗಗಳನ್ನು ತೆರೆದ ಕಣ್ಣಿನಿಂದ ಕಾಯುತ್ತಿವೆ!

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಇಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ರಾಟಿ - ಸತ್ಯ - ಅಹಿಂಸೆ

ಗಾಂಧಿಜಿಯವರ ಎಲ್ಲಾ ತತ್ವಗಳೂ ರಾಟಿ-ಸತ್ಯ-ಅಹಿಂಸೆ ಎಂಬೀ ಮೂರು ಮಂತ್ರಗಳಲ್ಲಿ ಅಡಕವಾಗಿವೆ. ಭಾರತದ ಉದ್ಧಾರವು ಇದರಿಂದಲೇ ಆಗಬೇಕಾಗಿದೆಯೆಂಬುದನ್ನು ಸಾರುತ್ತಿರುವ ಮಹಾತ್ಮರು ಅದನ್ನು ಇನ್ನಷ್ಟು ಸ್ಪಷ್ಟಪಡಿಸಲು ಕಳೆದ ತಿಂಗಳ ಹರಿಜನದಲ್ಲಿ ಕೆಳಗೆ ಕೊಟ್ಟಿರುವ ಲೇಖನವನ್ನು ಬರೆದಿರುವರು

"ನನಗೊಂದು ಪತ್ರ ಬಂದಿದೆ ಎಲ್ಲೆಲ್ಲಿಯೂ ಕಾಯಿದೆಭಂಗ ಚಳವಳಿವು ಪ್ರಾರಂಭವಾಗುವದೆಂದು ಮಾತಾಡುತ್ತಿರುವರು ಆದುದರಿಂದ ಪುನರಾವೃತ್ತಿಯಾದರೂ ಅಡ್ಡಿಯಿಲ್ಲ ರಾಟಿಗೂ ಸ್ವರಾಜ್ಯಕ್ಕೂ ಅಹಿಂಸೆಗೂ ನಿಕಟವಾದ ಸಂಬಂಧವೇನಿರುವದೆಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಬೇಕೆಂದು ಆತನು ಕೇಳಿಕೊಂಡಿರುವನು ಆದುದರಿಂದ ಅದರ ಪ್ರಯತ್ನವನ್ನು ನಾನು ಸಾನಂದದಿಂದ ಮಾಡುವೆ" ಎಂದು ಮ ಗಾಂಧಿಜಿಯವರು ಹರಿಜನ ಪತ್ರಿಕೆಯಲ್ಲಿ ಬರೆದಿರುತ್ತಾರೆ

'ನಮ್ಮ ದೇಶದ ವಿಶಾಲವಾದ ಜನಸ್ತೋಮದ ಆಶಾಕಿರಣವು ರಾಟಿಯಲ್ಲಿಯೇ ಅಡಕವಾಗಿರುವುದು ನಮ್ಮಲ್ಲಿಯ ರಾಟಿಗಳು ಮೂಲೆಗುಂಪಾದವು ಅದರೊಡನೆಯೇ ನಮ್ಮವರ ಸ್ವಾತಂತ್ರ್ಯವು ಅದು ಹೇಗೆಯೇ ಇದ್ದುದ್ದಾಗಲಿ—ನಷ್ಟವಾಯಿತು. ಹಳ್ಳಿಗಳಲ್ಲಿಯ ಆರಂಭಕಾರರಿಗೆ ರಾಟಿಯಿಂದಲೇ ಉಪ್ಪು ಮೆಣಸಿನಕಾಯಿಗೆ ನಾಲ್ಕು ದುಡ್ಡು ಸಿಗುತ್ತಿತ್ತು ಅದರಿಂದ ಅವರ ಗೌರವವು ಹೆಚ್ಚಿಸಿತ್ತು ರಾಟಿಯೆಂದರೆ ವಿಧವೆಯರ ಗೆಳತಿಯು. ರಾಟಿಯ ಮೂಲಕ ಹಳ್ಳಿಗಳು ಆಲಸ್ಯಮಯವಾಗಿದ್ದಿಲ್ಲ ರಾಟಿಯೆಂದರೆ ಅರೆಯುವದು, ಹಂಜೀಹಾಕುವದ, ಹಾಸು ಹೊಯ್ಯುವದು, ಉಂಕಿ ಮಾಡುವದು, ಬಣ್ಣಹಾಕುವದು, ನೇಯುವದು ಇವೇ ಮುಂತಾದ ಎಲ್ಲ ಉದ್ಯೋಗಗಳು ಅದರಲ್ಲಿ ಸೇರಿರುತ್ತವೆ ಈ ಕಾರ್ಯಗಳ ಮೂಲಕ ಹಳ್ಳಿಯ ಬಡಿಗನಿಗೂ ಕುಂಬಾರನಿಗೂ ಯಾವಾಗಲೂ ತುಂಬಾ ಕೆಲಸ ದೊರೆಯುತ್ತಿತ್ತು ನಮ್ಮಲ್ಲಿಯ ಏಳು ಲಕ್ಷ ಹಳ್ಳಿಗಳೆಲ್ಲವೂ ಈ ರಾಟಿಯಿಂದಲೇ ಸ್ವಾವಲಂಬಿಗಳಾಗಿದ್ದವು ಈಸ್ಟ ಇಂಡಿಯಾ ಕಂಪನಿ ಬಂದೊಡನೆಯೇ ಹಳ್ಳಿಯ ಮುಖ್ಯ ವ್ಯವಸಾಯಗಳೆಲ್ಲವೂ ಕೈಕಾಲು ಬಿಟ್ಟವು ಉದಾ—ಗಾಣದ ವ್ಯವಸಾಯ ಈ ಸಾಯುವ ವ್ಯವಸಾಯಗಳ ಸ್ಥಳದಲ್ಲಿ ವಿಜ್ಞಾನ ಧಂದೆಗಳ, ಚಿಗುರು ಬರಲಿಲ್ಲ ಆದ ದರಿಂದ ನಮ್ಮ ದೇಶದೊಳಗಿನ ಹಳ್ಳಿಗರೆಲ್ಲರೂ ತಮ್ಮ ತಮ್ಮ ಉದ್ಯೋಗಗಳನ್ನು ಕಳಕೊಂಡು ಹಿಡಿ ಹಿಪ್ಪಿಯಾದರು ಅವರ ಸಂಶೋಧಕ ಬುದ್ಧಿಯು ನಷ್ಟವಾಯಿತು ಸಂಪತ್ತಿಗೂ ಅವರ ಎರವಾದರು

ಬೇರೆ ದೇಶಗಳ ಸ್ಥಿತಿಯು ನಮ್ಮ ಹಳ್ಳಿಗಳಿಗೆ ಹತ್ತುವದಿಲ್ಲ ಯಾಕಂದರೆ ಅಲ್ಲಿಯ ಹಳ್ಳಿಗಳ ಉದ್ಯಮಗಳು ಹಾಳಾದರೂ ಅವುಗಳಿಗೆ ಪ್ರತಿಫಲವೇನಾದರೂ ಸಿಕ್ಕಿದೆ ಆದರೆ ನಮ್ಮವರಿಗೆ ಅಂತಹ ಪ್ರತಿಫಲವೇನೂ ಸಿಕ್ಕಿರುವುದಿಲ್ಲ ಉದ್ಯಮ ಪ್ರಧಾನವಾದ ಸಾಮ್ರಾಜ್ಯ ರಾಷ್ಟ್ರಗಳು ಬೇರೆ ದೇಶಗಳನ್ನು ಹಿಡಿ ಹಿಪ್ಪಿ ಮಾಡುತ್ತಿರುವವು ಆದರೆ ನಮ್ಮ ದೇಶವು ಮಾತ್ರ ತಾನೇ ಹಿಡಿ ಹಿಪ್ಪಿ ಆಗತ್ತಾ ಬಂದಿದೆ ಆದುದರಿಂದ ನಮ್ಮ ಹಳ್ಳಿಗಳ ತಮ್ಮ ಹಿಂದಿನ ಸ್ಥಿತಿಯನ್ನು ಹೊಂದಬೇಕಾಗಿದ್ದರೆ ರಾಟಿಯ ಪುನರುಜ್ಜೀವನವೇ ಎಲ್ಲಕ್ಕೂ ಸ್ವಾಭಾವಿಕವೂ ಸುಖಕರವೂ ಆದ ಮಾರ್ಗವೆಂದು ನನಗೆ ಅನಿಸುತ್ತದೆ

ನಾನಿಲ್ಲಿ ಪ್ರತಿಪಾದಿಸಿರುವದೇ, ಎಲ್ಲಕ್ಕೂ ಸರಿಯಾದ ಮಾರ್ಗವೆಂದು, ಕಳೆದ ೨೦ ವರ್ಷಗಳ ನನ್ನ ಅನುಭವದಿಂದ ನಾನು ಎದೆ ತಟ್ಟಿ ಹೇಳಬಲ್ಲೆನು ಕಂಗಾಲರಾದ ಹಿಂದುಗಳಿಗೂ, ಮುಸಲ್ಮಾನರಿಗೂ ರಾಟಿಯಿಂದ ಸಮ ಸಮಾನವಾಗಿ ಉಪಯೋಗವಾಗಿದೆ ಲಕ್ಷಾಂತರ ಹಳ್ಳಿಗಳಲ್ಲಿರುವ ಈ ಜನರಿಗೆ ಈಗ ಐದು ಕೋಟಿಯಷ್ಟು ಹಣವು ಯಾರ ಕಿವಿಯೂ ಕೇಳದಂತೆ ಸಲಿಸಲಾಗುತ್ತದೆ.

ಆದುದರಿಂದ ಜನ ಸಾಮಾನ್ಯರಿಗೆ ತಕ್ಕುದಾದ ಸ್ವರಾಜ್ಯವು ನಮಗೆ ರಾಟಿಯ ಸಂಘಟನೆ ದಲೇ ದೊರೆಯುವದೆಂದು ನಾನು ಅನುಮಾನವಿಲ್ಲದೆ ಹೇಳುತ್ತೇನೆ ಹಳ್ಳಿಗರು ತಮ್ಮ ಯಥೋಚಿತವಾದ ಸ್ಥಾನವನ್ನು ಈ ರಾಟಿಯ ಸಾಧನದಿಂದಲೇ ಪಡೆಯಬಲ್ಲರು ಕೀಳು, ಮೇಲು, ಎಂಬ ಭಾವನೆ, ಯಾರಲ್ಲಿಯೂ ಹುಟ್ಟಲು ಅವಕಾಶವಿಲ್ಲ.

'ಆದರೆ ಕೇವಲ ರಾಟಿಯಿಂದಲೇ ಮಾತ್ರ ಸ್ವರಾಜ್ಯ ದೊರೆಯದು ಯಾಕಂದರೆ ಅದು ಅತ್ಯಂತ ಸಂದಾಡಲಿರುವುದ ರಾಷ್ಟ್ರವು ಅಹಿಂಸಾ ತತ್ವದಲ್ಲಿ ಸಂಪೂರ್ಣ ಶ್ರದ್ಧೆಯುಳ್ಳದ್ದಾದ ಹೊರತು ನಮಗೆ ಸ್ವರಾಜ್ಯವು ಎಂದೂ ಸಿಗಲಾರದು ರಾಟಿಯು, ನಿನ್ನನ್ನು ಹರಿದುಂಟು ಸಲಿರಿಯದ ಸ್ವಾತಂತ್ರ್ಯಾಭಿಲಾಷಿಗಳಾದ ದೈಶಾಭಿಮಾನಿಗಳು ರಾಟಿಗೆ ಅಪೇಕ್ಷಿಂದ ಮನಸೋಲುವದಿಲ್ಲ ಅದನ್ನು ಕಡೆಗಣ್ಣಿನಿಂದ ನೋಡುತ್ತಾರೆ ಇತಿಹಾಸದಲ್ಲಿ ಇದು ಅಪರಿಚಿತವಾದದು ಕಾದಾಡಬೇಕೆಂಬ ಹುರುಪುಳ್ಳ ಸ್ವಾತಂತ್ರ್ಯಪ್ರಿಯರು, ಪರದೇಶಿಯರನ್ನು ಹೊರದೂಡಿಸಲಿಚ್ಛಿಸುವವರು. ಎಲ್ಲ <u>ಲೋಪ ದೋಷಗಳಿಗೆ ಅವರೇ ಹೊಣೆ</u>ಗಾರರೆಂದು ಅವರನ್ನು ದೂಷಿಸುತ್ತಿರುವರು. ತಮ್ಮ ಸ್ವಂತದ ದೋಷಗಳನ್ನು ತಾವು ಅರಿಯರು. ಅಪಾರವಾದ ರಕ್ತ ಸಿಂಚನೆಯಿಂದ ಬೇರೆ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಹೊಂದಿದ ಉದಾಹರಣೆಗಳನ್ನು ಇವರು ಕೊಡುವರು ಹಿಂಸಾವಿರಹಿತವಾದ ರಾಟಿಯು ಬಸವನಹುಳು ಇದ್ದಂತೆ ಹಿಂದ ಸ್ವಾತಂತ್ರ್ಯ ಸ್ವರಾಜ್ಯ ಸಂಪಾದನೆಗೆ ಅಹಿಂಸೆಯು ಒಂದೇ ಒಂದಾದ ಮಾರ್ಗವು ಹೌದಾದರೆ ಇನ್ನು ಮುಂದಾದರೂ ಈ ಮಾತು ಜನತೆಯ ಮುಂದೆ ಇಡಲಾಗಿದೆ ರಾಟಿಯು ಇದರ ಪ್ರತೀಕವು ಕಾಂಗ್ರೆಸ್ಸಿನ ಇತ್ತೀಚಿನ ರಾಷ್ಟ್ರೀಯ ನಿಶಾನೆಯ ಮೇಲೆ ಇದು ತನ್ನ ಗೌರವ ಯುಕ್ತವಾದ ಸ್ಥಾನವನ್ನು ಪಡೆಯಿತು. ಆದರೆ ಅಹಿಂಸಾತತ್ವವು ಹಿಂದೀಯರ ಅಂತಃಕರಣದಲ್ಲಿ ಸಂಪೂರ್ಣವಾಗಿ ಬೇರೂರಲಿಲ್ಲ ಆದುದರಿಂದ ರಾಟಿಗೆ ಬರಬೇಕಾದಷ್ಟು ಮಹತ್ವವು ಅದಕ್ಕೆ ಪ್ರಾಪ್ತವಾಗಲಿಲ್ಲ ಕಾಂಗ್ರೆಸ್ಸಿಗರೆಲ್ಲರೂ ಅಹಿಂಸೆಯಲ್ಲಿ ಅಚಲವಾದ ಶ್ರದ್ಧೆಯುಳ್ಳವರಾದ ಹೊರತು, ಅದಕ್ಕೆ ಯೋಗ್ಯವಾದ ಸ್ಥಾನವು ದೊರೆಯದು.

ಹಿಂಸೆಯಲ್ಲಿ ಅತಿಶ್ರದ್ಧೆ ಹುಟ್ಟಿದಲ್ಲಿ ರಾಟಿಯ ಹೊರತು ಬೇರೆ ಇನ್ನಾವದೂ ಅಹಿಂಸೆಯ ಪ್ರತೀಕವಿರಲಾರದು. ದೊಡ್ಡ ಅವರ ಮನವರಿಕೆಯಾಗುವದು ರಾಟಿಯ ಪ್ರಸಾರವು ಸಾರ್ವತ್ರಿಕವಾದ ಹೊರತು, ಅಹಿಂಸೆಯು ಜನರಲ್ಲಿ ನೆಲೆಗೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಕಾಣುವ ಇನ್ನಾವ ಕುರುಹವು ಇರುವದಿಲ್ಲ ಅಹಿಂಸೆಯ ಹೊರತು ಸವಿನಯ ಕಾಯಿದೇ ಭಂಗ ಮಾಡಲಾಗದೆಂಬ ಮಾತು ಎಲ್ಲರಿಗೂ ಸಾಮಾನ್ಯವಾದುದು ನನ್ನ ಮಾರ್ಗವು ತಪ್ಪಿರಬಹುದು. ಆದರೆ ನನಗೆ ಮನದಟ್ಟಾಗಿರುವದರ ಮೇಲಿಂದ ನಾನು ಒತ್ತಿ ಹೇಳುವದೇನೆಂದರೆ ನಾನು, ವಿವರಿಸಿದ ಶರತಗಳು, ಪರಿಪೂರ್ಣವಾದ ಹೊರತು ಸವಿನಯ ಕಾಯಿದೇ ಭಂಗವನ್ನು ನಾನೇನೂ ಸಾರುತಕ್ಕವನಲ್ಲ"

(ಕ ವಿ)

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri.

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted



ನಿಮ್ಮ ಅದೃಷ್ಟ!

ಪೋಸ್ಟು ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿರಿ. ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ವಹಿವಾಟುಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ, ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯುಗಳನ್ನು ಸವಿಸ್ತಾರವಾಗಿ ರೂ. 1-8-0ರ ವಿ. ಪಿ. ಮೂಲಕ ತಿಳಿಸುವೆವು. ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.

ಹಣವನ್ನು ಹಿಂದಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು. ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 100 ಇನಾಮು ಕೊಡಲಾಗುವುದು.

ANAND JOTISH ASHRAM,
PostBox No. 27 (S.A.M.) Amritsar

ಹಳ್ಳಿಗಳಲ್ಲಿ ಅನೇಕರ ಮನೆಗಳಲ್ಲಿ ತಾಳೆಯೋಲೆಯ ಗ್ರಂಥಗಳನ್ನು ನಾವೆಲ್ಲರೂ ನೋಡಿರುವೆವು. ಭರತ ಖಂಡದ ಇತಿಹಾಸ, ಸಾಹಿತ್ಯ, ಧರ್ಮ, ವೇದಾಂತ ಮುಂತಾದ ಎಲ್ಲಾ ವಿಚಾರಗಳೂ ಈ ತಾಳೆಯೋಲೆಯ ಗ್ರಂಥಗಳಲ್ಲಿ ಅಡಕವಾಗಿದ್ದವು. ಇದಕ್ಕೆ ಮುಂಚೆ ಶಿಲಾಶಾಸನಗಳು ತಾಮ್ರಶಾಸನಗಳು ಪ್ರಾಚೀನ ಗತ ವೈಭವವನ್ನು ನಮಗೆ ತಿಳಿಸುತ್ತಿದ್ದವು. ಅಂದಮೇಲೆ ಭರತಖಂಡದಲ್ಲಿ ಬಹಳ ಕಾಲದ ವರೆಗೂ ಕಾಗದವನ್ನು ತಯಾರಿಸುವ ಕಲೆಯು ರೂಢಿಯಲ್ಲಿಲ್ಲವೆಂದೂ, ಕ್ರಮೇಣ ಹೊರ ದೇಶದಿಂದ ನಮ್ಮ ದೇಶಕ್ಕೆ ಹರಡಿತೆಂದೂ ವ್ಯಕ್ತವಾಗುತ್ತದೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಅಂದರೆ ಕ್ರಿಸ್ತಶಕದ ಆರಂಭಕ್ಕೆ ಮುಂಚೆ, ಚೀನಾದೇಶದಲ್ಲಿ ಈ ಕಲೆಯು ಉದ್ಭವವಾಗಿ ಅಂದಿನಿಂದ ಪ್ರಪಂಚದ ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಯಿತೆಂದು ಹೇಳಲ್ಪಟ್ಟಿದೆ. ಹೀಗೆ ಕಾಗದ ತಯಾರಿಕೆಯ ಕಲಾನಿರ್ಮಾಣದ ಕೀರ್ತಿಯು ಚೀನಾದೇಶಕ್ಕೆ ಸಲ್ಲತಕ್ಕದ್ದಾಗಿದೆ. ಈ ಕೈಗಾರಿಕೆಯು ಎಲ್ಲ ಕಡೆಯಲ್ಲಿಯೂ ಪ್ರಚಾರಕ್ಕೆ ಬರುವುದಕ್ಕೆ ಮುಂಚೆ ಭೂರ್ಜಪತ್ರ ಗಿಡದ ತೊಗಟೆಗಳ ಮೇಲೂ ತಾಳೆಯೋಲೆಗಳ ಮೇಲೂ, ಇಲ್ಲವೇ ಚೆನ್ನಾಗಿ ಗಟ್ಟಿ ನಯಮಾಡಿದ ಬಟ್ಟೆಯ ಮೇಲೂ ಬರೆಯುವ ವಾಡಿಕೆ ಇದ್ದಿತು.

ಕಾಗದದ ತಯಾರಿಕೆ

ಗ್ರಾಮೋದ್ಯೋಗ

[ಲೇಖಕ: ಶ್ರೀ. ಎಸ್. ಸಿ. ಆನಂದ]

ಕಾಗದವೆಂಬ ಹೆಸರು ಚೀನಾದೇಶದಲ್ಲಿದ್ದು. ಈ ಕಲೆಯಲ್ಲಿ ನೈಪುಣ್ಯವನ್ನು ಪಡೆದಿದ್ದ 'ಕಾಗಜಿ' ಎಂಬ ಪಂಗಡದವರು ನಮ್ಮ ದೇಶದಲ್ಲಿ ಈ ಕಲೆಯನ್ನು ಪ್ರಚಾರಕ್ಕೆ ತಂದುದರಿಂದ, ಅವರು ತಯಾರಿಸಿದ ವಸ್ತುವಿಗೂ ಅವರ ಹೆಸರೇ ಅನ್ವರ್ಥವಾಯಿತು. ಹೀಗೆ 'ಕಾಗದ', 'ಕಾಗಜ' ವೆಂಬ ಹೆಸರುಗಳು ರೂಢಿಯಲ್ಲಿ ಬಂದವು.

ಅದರ ವ್ಯಾಪ್ತಿ

ಬಹಳ ಕಾಲದ ವರೆಗೂ ಈ ಕಲೆಯು ಚೀನಾ ದೇಶದಲ್ಲಿ ಬೇರೂರಿತ್ತು. ಪೂರ್ವ ತುರ್ಕಿಸ್ಥಾನದವರು ಚೀನಕ್ಕೆ ಮುತ್ತಿಗೆ ಹಾಕಿದಾಗ, ಮಹಮ್ಮದೀಯರು ಈ ಚೀನೀ ಖೈದಿಗಳಿಂದ ಈ ಕಲೆಯನ್ನು ಕಲಿತರು. ಅದನ್ನು ಅರಬರು ಐರೋಪ್ಯ ದೇಶಗಳಿಗೂ ಮೊಗಲರು ಹಿಂದೂಸ್ಥಾನಕ್ಕೂ ಹಬ್ಬಿಸಿದರು. ಹೇಗೆ ಮಹಮ್ಮದೀಯರು ಎಲ್ಲೆಲ್ಲಿ ಬಂದು ನೆಲಸಿದರೋ ಅಲ್ಲಿಗೆಲ್ಲಾ ತಮ್ಮೊಡನೆ ಈ ಕಾಗದದ ಕೈಗಾರಿಕೆಯನ್ನು ತಂದು ಸ್ಥಾಪಿಸಿದರು.

ಮೊದಲು ಮೊದಲು ಚೀನಾದೇಶದಿಂದ ನೇಪಾಳಕ್ಕೆ ಪ್ರಯಾಣ ಸೌಕರ್ಯವಿದ್ದುದರಿಂದ ಅಲ್ಲಿ ಕಾಗದದ ತಯಾರಿಕೆಯು ವಿಸ್ತರಿಸಿತು. ನೇಪಾಳ-ಭೂತಾನದವರು ಎಳೆಯ ಬೊಂಬಿನಿಂದಲೂ ಮತ್ತು ಕೆಲವು ಗಿಡಗಳ ತೊಗಟೆಗಳಿಂದಲೂ ಕಾಗದಮಾಡಲಾರಂಭಿಸಿದರು. ಈ ಕಾಗದವು ಗಟ್ಟಿಯಾಗಿ, ಒರಟಾಗಿ, ಬಹುಕಾಲ ಬಾಳಿಕೆ ಬರುವುದಾಗಿತ್ತು. ಇದನ್ನು ಹುಳ ಗೆದ್ದಲು, ಇಲಿಗಳಾವುವೂ ಮುಟ್ಟುತ್ತಿರಲಿಲ್ಲ.

ಹಿಂದೂಗಳು ಈ ಕಲೆಯಲ್ಲಿ ಅಷ್ಟು ಶ್ರದ್ಧೆ ಮತ್ತು ಆಸಕ್ತಿಯುಳ್ಳವರಾಗಿರಲಿಲ್ಲ. ಇದಕ್ಕೆ ಕಾರಣವು ಮ್ಲೇಚ್ಛರಿಂದ ಈ ಕಲೆಯು ಬಂದುದರಿಂದ ಪ್ರಾರಂಭದಲ್ಲಿ ಹಿಂದುತ್ವಭಾವನೆಯು ಅದರಲ್ಲಿ ವಿಶ್ವಾಸವನ್ನಿಡಲಿಲ್ಲವೆಂಬುದು ಊಹಿಸಬಹುದಾಗಿದೆ. ಆದರೆ ಕ್ರಮೇಣ ಈ ಕಲೆಯು ಹಿಂದೂ ಜನರಿಗೆ ಪ್ರಿಯವಾದುದಾಗಿ ಅವರ ಉದ್ಯೋಗವಾಗಿ ಪರಿಣಮಿಸಿತು.

ಹನ್ನೆರಡನೆಯ ಶತಮಾನದಲ್ಲಿ ಅರಬರು ಐರೋಪ್ಯ ದೇಶಗಳಲ್ಲಿ ಕಾಗದವನ್ನು ಪ್ರಚಾರಕ್ಕೆ ತರುವುದಕ್ಕೆ ಮುಂಚೆ ಅಂದರೆ ಹತ್ತನೆಯ ಶತಮಾನದಲ್ಲಿಯೇ ಮಹಮ್ಮದ್ ಘಜನಿಯ ಹಿಂದೂದೇಶಕ್ಕೆ ಇದನ್ನು ತಂದೊಪ್ಪಿದನು. ಕಾಗದ ತಯಾರಿಕೆಗೆ ಸಾಕಷ್ಟು ಶುಭ್ರವಾದ ನೀರು ಇರಬೇಕಾದುದರಿಂದ ಇದನ್ನು ಮೊದಲು ಕಾಶ್ಮೀರದಲ್ಲಿಯೂ ಪಂಜಾಬಿನಲ್ಲಿಯೂ ಸ್ಥಾಪಿಸಿದರು. ಅಲ್ಲಿನ ಶುಭ್ರ ಜಲಪ್ರವಾಹದಿಂದ ಉತ್ತಮ ಕಾಗದವು ತಯಾರಿಸಲ್ಪಟ್ಟು ಜನರ ಮೆಚ್ಚಿಕೆಗೆ ಪಾತ್ರವಾಯಿತು. ಮೊಗಲರ ಕಾಲದಲ್ಲಿ ಹಿಂದೂದೇಶದ ಆದ್ಯಂತವೂ ಬಳಕೆಗೆ ಬಂದಿತು. ಚಕ್ರವರ್ತಿಗಳಿಂದ ಇದಕ್ಕೆ ವಿಶೇಷ ಪ್ರೋತ್ಸಾಹವಿತ್ತರು. ಹೀಗೆ ಬಂದಾದೊಂದ ಕಾಲದಲ್ಲಿ ಈ ಕೈಗಾರಿಕೆಯು ಹಿಂದೂಸ್ಥಾನದಲ್ಲೆಲ್ಲಾ ಬಹಳ ಅಭಿವೃದ್ಧಿ ದೆಶೆಯಲ್ಲಿದ್ದು ಸಾವಿರಾರು ಜನಗಳಿಗೆ ಜೀವನೋಪಾಯವನ್ನು ಕಲ್ಪಿಸಿತು. ಪ್ರತಿಯೊಂದು ಕೈಗಾರಿಕೆಯ ಕೇಂದ್ರವು ಒಂದಾನೊಂದು ಸುವ್ಯವಸ್ಥಿತ ಸಂಸ್ಥೆಯಾಗಿ, ಅಲ್ಲಿ ನಡೆಯುವ ಕಾರ್ಯಕ್ರಮವೆಲ್ಲವೂ ಒಂದೇ ವಿಧವಾಗಿದ್ದಿತು. ಕೈಗಾರಿಕೆಯ ಪ್ರತಿಯೊಂದು ವಿಭಾಗವೂ ಕೆಲಸಗಾರರಲ್ಲಿ ಸಕ್ರಮವಾಗಿ ಹಂಚಿಕೆಯಾಗಿ, ಪ್ರತಿ ಕೆಲಸಗಾರನೂ ತನ್ನ ಕಾರ್ಯ ವಿಭಾಗದಲ್ಲಿ ನಿಪುಣನಾಗಿ, ಕಲೆಗೆ ಅಂದವನ್ನೂ ನೈಪುಣ್ಯವನ್ನೂ ಒದಗಿಸಿದ್ದಿತು.

ಯಂತ್ರಯುಗದ ಕಾಗದ

ಸುಮಾರು ೧೯ನೆಯ ಶತಮಾನದ ವರೆಗೂ ನಮ್ಮ ದೇಶಕ್ಕೆ ಬೇಕಾದ ಕಾಗದವನ್ನು ಅಂದರೆ ನಮ್ಮ ದೇಶದಲ್ಲಿ ತಯಾರಿಸಿದುದಕ್ಕಿಂತ ಹೆಚ್ಚಾಗಿ ಬೇಕಾದುದನ್ನು ಚೀಣಾದೇಶವು ಒದಗಿಸುತ್ತಿದ್ದಿತು. ಆಂಗ್ಲ ಪ್ರಭುತ್ವವು ಸ್ಥಾಪನೆಯಾದ ಮೇಲೆ ನಮ್ಮ ದೇಶಕ್ಕೆ ಬೇಕಾದ ಕಾಗದವನ್ನು ಅಂದರೆ ಸರಕಾರಕ್ಕೆ ಬೇಕಾದುದನ್ನು ಗ್ರೇಟ್ ಬ್ರಿಟನ್ನೇ ಒದಗಿಸುವಂತೆ ಅಪ್ಪಣೆಯಾಯಿತು. ಅದೇ ಕಾಲದಲ್ಲಿ ಈ ಕೈಗಾರಿಕೆಯು ಯಂತ್ರ ವಿಜ್ಞಾನಗಳಿಂದ ಬಹಳ ಮುಂದುವರಿಯಿತು. ಪರದೇಶದಿಂದ ಸರಕಾರಕ್ಕೆ ಬೇಕಾದ ಕಾಗದವೊದಗಿಸುವ ಕಟ್ಟಳೆಯ ಆಧಾರದ ಮೇಲೆ ಯಂತ್ರದಲ್ಲಿ ತಯಾರಿಸಿದ ಕಾಗದದ ಬೆಲೆಯು ಅಗ್ಗವಾದುದ್ದಾಗಿ ಅದು ನಮ್ಮಲ್ಲಿಗೆ ರಫ್ತಾಗುವುದರಿಂದ ಹಿಂದೂ ದೇಶದ ಹಳ್ಳಿಗಳಲ್ಲಿ ಬೇರೂರಿದ್ದ ಈ ಗ್ರಾಮೋದ್ಯೋಗಕ್ಕೆ ದಕ್ಕೆ ತಗಲಿತು. ಈಗ ನಾವು ಪುರಾತನ ಕಾಗದ ತಯಾರಿಕಾ ಕೇಂದ್ರಗಳನ್ನು ಹೋಗಿ ನೋಡಿದ್ದೇ ಆದರೆ ಅವು ಹಾಳುಬಿದ್ದಿದ್ದರೂ ಒಂದಾನೊಂದು ಕಾಲದಲ್ಲಿ ಎಷ್ಟು ಉನ್ನತ ಸ್ಥಿತಿಯಲ್ಲಿಯೂ ಅಭಿವೃದ್ಧಿಯಲ್ಲಿಯೂ ಇದ್ದು ವ್ಯಾಪಾರ ಕೌಶಲ್ಯಗಳ ವ್ಯಕ್ತಿಕೇಂದ್ರಗಳಾಗಿದ್ದುವೆಂದು ಯಾರ ಮನಸ್ಸಿಗೂ ಅನ್ನಿಸದಿರದು.

ನಮ್ಮ ಭಾಗ್ಯ ವ್ಯಾಪಾರಸ್ಥರು

ಈ ಕಾಗದ ಕೈಗಾರಿಕೆಯು ಆಂಗ್ಲ ಪ್ರಭುತ್ವವು ಬಂದ ಇಷ್ಟು ದಿನಗಳೊಳಗೆ ನಶಿಸಿ ನಿರ್ನಾಮವಾಗಬೇಕಾಗಿದ್ದಿತು. ಆದರೆ ನಮ್ಮ ವ್ಯಾಪಾರಸ್ಥರು ತಮ್ಮ ಲೆಕ್ಕದ ಪುಸ್ತಕಗಳಿಗೆ ಉಪಯೋಗಿಸುತ್ತಿದ್ದ ಈ ಕೈಯಿಂದ ತಯಾರಿಸಿದ ಕಾಗದವು ಇನ್ನೂ ಅವರ ಬಳಕೆಯಲ್ಲಿಯೇ ಇರುವುದರಿಂದ ಅದು ನಮ್ಮ ಭಾಗ್ಯವೆಂದೇ ನೆನೆಯಬೇಕಾಗಿದೆ. ನಮ್ಮ ಭಾರತೀಯ ವರ್ತಕರು ಈ ಗ್ರಾಮೋದ್ಯೋಗವನ್ನು ಇನ್ನೂ ಜೀವಂತವಾಗಿ ಇಟ್ಟಿರುವುದಕ್ಕೆ ನಾವು ಅವರನ್ನು ಎಷ್ಟು ಅಭಿನಂದಿಸಿದರೂ ತೀರದು. ಹಿಂದಿನ ಶತಮಾನದ ಕೊನೆಯ ಭಾಗದಲ್ಲಿ ಕೆಲವು ಪ್ರಾಂತ್ಯದ ಜೈಲುಗಳಲ್ಲಿ ಈ ಕೈಗಾರಿಕೆಯು ಆಚರಣೆಗೆ ಬಂದಿದ್ದಿತಾದರೂ ಕಡೆಗೆ ಅದನ್ನು ಬಿಟ್ಟುಬಿಟ್ಟರು.

— (ವಿ ಕ)

ಸ್ತ್ರೀಯರ ಆರೋಗ್ಯಸೌಭಾಗ್ಯಗಳಿಗೆ

ಲೋಧ್ರ

ತಯಾರಿಸುವವರು:
ಕೇಸರಿ ಕುಟೀರ :: ರಾಯಪೇಟೆ :: ಮದರಾಸು.
ಸ್ಥಳೀಯ ಏಜೆಂಟರು:
ಪಾಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.
ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು ಬ್ರೆಂಚ್: ಸೆಂಟ್ರಲ್ ಮಾರ್ಕೆಟ್
ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವ್ಯವಹಾರಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವ್ಯವಹಾರಗಳು ನಡೆಯುವವು. ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½
6 ತಿಂಗಳಿಗೆ 4% 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

ಒಂದು ಹಳೆಯ ಕದಂಬ ಮರದ ಎಲೆಗಳ ಮರೆಯಲ್ಲಿ, ಮುದಿಯ ಒಂದು ಗಿಳಿ ಮತ್ತು ಸಣ್ಣ ಪ್ರಾಯದ ಒಂದು ಮೈನಾ, ದೂರದ ಏನನ್ನೋ ನೋಡುತ್ತ ಸುಮ್ಮಗೆ ಕೂತುಕೊಂಡಿದ್ದುವು. ಯಾವದೋ ಕಾರಣದಿಂದ ಬಹಳ ಕ್ಲೇಶ ಪಟ್ಟಿರುವಂತೆ ಅವು ಬಹು ಉದಾಸವಾಗಿದ್ದುವು. ನಾಲ್ಕೂ ಸುತ್ತ ಎಲ್ಲಾ ಕಡೆಗಳಲ್ಲಿ ಮೌನ ರಾಜ್ಯಭಾರವು ನಡೆದಿತ್ತು. ಕೊನೆಗೆ ಚಿಕ್ಕ ವಯಸ್ಸಿನ ಮೈನಾ ಪಕ್ಷಿಯೇ ತನ್ನ ಮೌನವನ್ನು ಮುರಿದು ಹೇಳಿತು—

ಈ ವಾರದ ಕಥೆ: ಸ್ವಾತಂತ್ರ್ಯ ಸಂದೇಶ

(ದೀಪಕದಿಂದ)

'ಅಜ್ಜಾ! ಅವು ಈಹೊತ್ತು ಬರಲಾರವೆ?'

'ಇಲ್ಲ ಮುದ್ದೂ, ಅವು ಮರಳುವ ಯಾವ ಆಶೆಯೂ ಇಲ್ಲ?

'ಯಾಕೆ ಅಜ್ಜಯ್ಯಾ?'

'ಯಾಕೆಂದು ತಿಳಿಯದೆ, ಮುದ್ದೂ? ಪ್ರತಿ ದಿನ ನಮ್ಮವರು ಒಂದೆರಡರಂತೆ, ಏಳೆಂಟರಂತೆ ಕಡಿಮೆಯಾಗುತ್ತಾ ಬರುತ್ತವೆ'

'ಎಲ್ಲಿಗೆ ಹೋಗುತ್ತವೆ, ಅಜ್ಜಯ್ಯಾ?'

'ಹೋಗುವದೆಲ್ಲಿಗೆ ? ಸಿಟ್ಟು ಸಿರು ಬಿಟ್ಟು ಗಿಳಿ ಹೇಳಿತು—'ಈ ಜಗತ್ತಿನಲ್ಲಿ ಮನುಷ್ಯ ಎಂಬ ಒಂದು ಜೀವ ಇದ್ದಾನೆ ಅವನು ತನ್ನನ್ನು ಸರ್ವಶ್ರೇಷ್ಠ ಮತ್ತು ಸಭ್ಯ ಎಂದು ತಿಳಿಯುತ್ತಾನೆ ನಮಗೆ ಸಭ್ಯತೆಯನ್ನು ಕಲಿಸಲಿಕ್ಕೆ ಅಲ್ಲ, ಪರಂತು ತನ್ನ ಮನೋರಂಜನೆಗೆ ಅವನು ನಮ್ಮನ್ನು ಹಿಡಿದು ಹೋಗುತ್ತಾನೆ, ಮತ್ತೆ ನಮಗೆ ಮರಳಲಿಕ್ಕೆ ಬಿಡುವದೇ ಇಲ್ಲ!'

'ಆದರೆ ನಮ್ಮವರು ಅವನ ಬಳಿ ಇರುವದಾದರೂ ಯಾಕೆ?

'ಇರುವ ಮಾತು ಬಿಟ್ಟು ಬಿಡು ಮೈನಾ, ನಮ್ಮವರು ಬೇಕುಬೇಕೆಂದು ಅವನ ಬಳಿ ಇರುವದಿಲ್ಲ ಮನುಷ್ಯನು ಅವುಗಳನ್ನು ಉಕ್ಕಿನ ಗೂಡಿನಲ್ಲಿ ಬಂಧಿಸಿ ಬಿಡುತ್ತಾನೆ'

'ಉಕ್ಕಿನ ಗೂಡಿನಲ್ಲಿ . . ?' ಮೈನ ಮೈ ತೆಗೆದು ಕೇಳಿತು. ಆಗ ಅದರ ಶರೀರವೆಲ್ಲ ಭಯದಿಂದ ನಡುಗುತಿತ್ತು ಅದು ತನ್ನನ್ನು ತಾನು, ಸ್ವಲ್ಪ ಸ್ಥೈರ್ಯಗೊಂಡು ಹೇಳಿತು—'ಮನುಷ್ಯನು ಅವುಗಳನ್ನು ಎಂದೆಂದೂ ಬಿಡುವದಿಲ್ಲವೆ?'

'ಇಲ್ಲ ಮೈನಾ ಎಂದೆಂದೂ ಬಿಡುವದಿಲ್ಲ'

'ಯಾವ ಕಾಲಕ್ಕೂ ಬಿಡುವದಿಲ್ಲವೆ? ಅಜ್ಜಯ್ಯಾ' ಮಾಮರಗಳು ಹೂ ಬಿಡುವಾಗಲೂ ಅವನು ನಮ್ಮನ್ನು ಬಿಡುವದಿಲ್ಲವೆ? ಬಾಗರಿಗಳು ಹಣ್ಣಾಗುವಾಗಲೂ ಬಿಡುವದಿಲ್ಲವೆ? ಜೋಳದ ತೆನೆಗಳು ಬೆಳೆದಾಗಲೂ ಬಿಡುವದಿಲ್ಲವೆ? ಅಜ್ಜಯ್ಯಾ' ಅವನು ಆ ಸಮಯಗಳಲ್ಲಿಯೂ ಬಿಡುವದಿಲ್ಲವೆ? ಮನುಷ್ಯನು ಅಷ್ಟು ನಿಷ್ಠುರನೆ, ಅಜ್ಜಯ್ಯಾ?

'ಹೌದ, ಮುದ್ದೂ! ಅವನ ಎದೆ ಕಲ್ಲಿನದು ಅವನು ಯಾವ ಸಮಯಕ್ಕೂ ನಮ್ಮನ್ನು ಬಿಡುವದಿಲ್ಲ ನಾವು ಸಾಯುವತನಕ ಅವನ ಉಕ್ಕಿನ ಗೂಡಿನಲ್ಲಿ ಬಂಧಿತರಾಗಿ ಇರಬೇಕು'

ಮುದಿಗಿಳಿಯ ಮಾತು ಕೇಳಿ ಮೈನದ ಕಳವಳ ಬೆಳೆಯಿತು ತನ್ನವರ ಬಾಳನ್ನು ಚಿಂತಿಸಿ ಚಿಂತಿಸಿ ಅದು ಬಹಳ ತಳಮಳಗೊಂಡಿತು. ದುಃಖದಿಂದ ವ್ಯಗ್ರವಾಗಿ ಹೇಳಿತು—'ಅಜ್ಜಯ್ಯಾ' ವನವನಾಂತರಗಳಲ್ಲಿ ನಾವು ಹಾಡುವ ಸ್ವಾತಂತ್ರ್ಯದ ಹಾಡಿದೆಯಲ್ಲ, ನಮ್ಮವರ ಅಲ್ಲಿ ಹೋಗಿ ಅದನ್ನೂ ಮರೆಯುವವೇ? ವಸಂತ ಬಾಲೆಯ ಮುಂದೆ ಹಾಡುವ ಮಧುರ ಸಂಗೀತವನ್ನು ಅವು ಮರೆಯುವವೆ?'

'ಇಲ್ಲ ಮೈನಾ, ಆ ಹಾಡುಗಳು ಆಗಾಗ ಅವುಗಳ ನೆನಪಿಗೆ ಬರುತ್ತವೆ ಆದರೆ '

'ಆದರೆ ಏನ ಅಜ್ಜಯ್ಯಾ! ಯಾಕೆ ಮೌನವಾದಿರಿ, ಹೇಳಿ, ಏನು?'

'ಮೈನಾ, ಆ ಹಾಡುಗಳು ಬಂಧನದಲ್ಲಿರುವ ಅವುಗಳಿಗೆ ಕೆಲವೇ ದಿನ ನೆನಪು ಉಳಿಯುತ್ತದೆ ಆ ವೇಳೆ ಮನುಷ್ಯ ಅವುಗಳಿಗೆ ತನ್ನ ಭಾಷೆಯು ಬೇರೆಯೇ ಆದುದನ್ನು ಕಲಿಸುತ್ತಾನೆ.'

'ಏನು? ಮನುಷ್ಯನ ಭಾಷೆಯಲ್ಲಿ ಬೇರೆಯೇ ಆದುದನ್ನು? ನಮ್ಮವರು ಅದನ್ನು ಕಲಿಯುವದಾದರೂ ಯಾಕೆ?'

'ಕಲಿಯದೆ ಏನು ಮಾಡಿಯಾವು ಮಗು? ತಮ್ಮ ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ, ಮತ್ತು ಮನುಷ್ಯನ ಮನೋರಂಜನೆ ಮಾಡಲಿಕ್ಕೆ ಅವನು ಕಲಿಸಿದ್ದನು ಬಂಧನದಲ್ಲಿರುವ ನಾವು ಕಲಿಯಲೇ ಬೇಕಾಗುವದು, ಬೇರೆ ಉಪಾಯ ಇರುವದಿಲ್ಲ ಮಗು?'

ಮುದಿಗಿಳಿಯ ಮಾತು ಕೇಳಿ ಸಣ್ಣ ಪ್ರಾಯದ ಮೈನಾ ಪುನಃ ಮೌನ ತಾಳಿತು ಕರ್ಮ ಧರ್ಮದಿಂದ ತಾವೆಲ್ಲಿಯಾದರೂ ಬಂಧಿತರಾದರೆ ಎಷ್ಟು ಮಾತ್ರಕ್ಕೂ ಆ ಮನುಷ್ಯನ ಸಭ್ಯತೆ, ಸಂಸ್ಕೃತಿ ಭಾಷೆ ಮಾತ ಯಾವದನ್ನೂ ಕಲಿಯುವದಿಲ್ಲ ಎಂದು ಅದು ಆಲೋಚಿಸಿತು ಅದರ ಮನಸಿನ ಆಲೋಚನೆ ಗಿಳಿಗೆ ತಿಳಿದ ಹಾಗಾಯಿತು ಅದು ಹೇಳಿತು—

'ಮಗೂ! ಮನುಷ್ಯ ಮಹಾ ಕುತಂತ್ರಿ ಎಂಬುದು ನಿನಗೆ ತಿಳಿದಿಲ್ಲ ಮೊದಮೊದಲು ಸಿಹಿಸಿಹಿ ಮಾತುಗಳನ್ನಾಡಿ ಏನೂ ಅರಿಯದ ನಮ್ಮನ್ನು ಪುಸಲಾಯಿಸುವನು ಮತ್ತೆ ನಮ್ಮನ್ನು ಮೋಹದ ಜಾಲದಲ್ಲಿ ಕೆಡವಿಹಾಕಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುತ್ತಾನೆ'

ಹೇಗೆ?'

'ಮೊದಲು ಅವನು ಭಾಷೆ ಕಲಿಸುವನೆವನ ಮಾಡಿ—ಎ ಕೇಟ್=ಒಂದು ಬೆಕ್ಕು, ಎ ರೇಟ್=ಒಂದು ಇಲಿ ಎನ್ನುತ್ತಾನೆ. ಅನಂತರ ಯು ಆರ್ ಮೈ ಸ್ಲೇವ್, ಐ ಎಮ್ ಯುವರ್ ಮಾಸ್ಟರ್—ಅಂದರೆ ನೀನು ನನ್ನ ಗುಲಾಮ, ನಾನು ನಿನ್ನ ಯಜಮಾನ ಎನ್ನುತ್ತಾನೆ ಬಂಧಿತರಾದ ನಾವು ಅದನ್ನೇ ಪುನಃ ಪುನಃ ಹೇಳಿ ಕಲಿತು ನಾವು ಸ್ವತಂತ್ರರು ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು ಎಂಬುದನ್ನು ಮರೆಯುತ್ತೇವೆ; ಮನುಷ್ಯ ನಮ್ಮ ಯಜಮಾನ; ನಾವು ಅವನ ಗುಲಾಮರು ಎಂದೇ ಕಲಿಯುತ್ತೇವೆ, ಆಗ ನಮಗೆ ನಮ್ಮ ಪೂರ್ವ ಇತಿಹಾಸದ ಒಂದೇ ಒಂದು ಮಾತು ನೆನಪಿಗೆ ಬರುವದಿಲ್ಲ.'

'ಅಜ್ಜಾ! ಹಾಗಾಗಲಿಕ್ಕೆ ಕೊಡದು ನೋಡು' ಹಳ್ಳಿಹಳ್ಳಿ, ಊರುಊರು, ಪೇಟೆ ಪಟ್ಟಣ, ಗುಡ್ಡ ಕಾಡುಗಳನ್ನು ಸೇರಿ, ಪರದಾಸ್ಯದಲ್ಲಿರುವ ನಮ್ಮವರಿಗೆ ಸ್ವಾತಂತ್ರ್ಯದ ಸಂದೇಶವನ್ನು ಕೊಡುವ ಒಂದು ಹಾಡನ್ನು ನನಗೆ ಕಲಿಸಿಕೊಡು ಅಜ್ಜಯ್ಯಾ! ನಾನು ಅದನ್ನೇ ಹಾಡಿ ಹಾಡಿಸಿ ಬಂಧಿತರಾದ ನಮ್ಮವರಿಗೆ ಸ್ವಾತಂತ್ರ್ಯದ ಸಂದೇಶವನ್ನು ಕೊಡುವೆನು'

'ಆದರೆ ಹಾಡು ಹಾಡುವದರಿಂದ ಏನು ಪ್ರಯೋಜನ ಮಗೂ? ಮನುಷ್ಯನೆಂದೂ ನಮ್ಮನ್ನು ಬಿಡುವ ಹಾಗಿಲ್ಲ'

'ಅವನು ಬಿಡುವದಿಲ್ಲವಾದರೆ ಬೇಡ ನಾವು ಬಿಡಿಸಿಕೊಳ್ಳುವೆವು ಹಾಡು ಕೇಳಿ ಕೇಳಿ ಸ್ವಾತಂತ್ರ್ಯದ ಭಾವವು ನಮ್ಮವರಲ್ಲಿ ಜಾಗ್ರತವಾದಾಗ ನಮ್ಮವರೆಂದೂ ಬಂಧನದಲ್ಲಿರಲಾರರು ಅವು ಒಂದೇ ಗೂಡಿನ ಲೋಹದ ಸಲಿಕೆಗಳನ್ನು ಮುರಿದು ಮುರಿದು ಚೂರು ಚೂರು ಮಾಡಿ ಹೊರಗೆ ಬರುವವು ಅಥವಾ ಆ ಪ್ರಯತ್ನದಲ್ಲಿ ಸಾಯುವವು, ವೀರಸ್ವರ್ಗವನ್ನು ಪಡೆಯುವವು ಮತ್ತೆ ಮನುಷ್ಯನಿಗೆ ಬೇಸರ ಬಂದು ನಮ್ಮನ್ನು ಹಿಡಿಯಲಿಕ್ಕೆ ಬರಲಾರ'

ಇದನ್ನು ಆಲೋಚಿಸಿ ಎರಡೂ ಪಕ್ಷಿಗಳು ಅಲ್ಲಿಂದ ಹಾರಿದುವು, ಸ್ವಾತಂತ್ರ್ಯದ ಸಂದೇಶವನ್ನು ಕೊಡುತ್ತ ಗುಡ್ಡ ಬೆಟ್ಟ ಕಾಡು, ಊರು ಎಲ್ಲಾ ಕಡೆಗಳನ್ನು ಸಂಚರಿಸ ತೊಡಗಿದುವು



ನಡುವಿನಲ್ಲಿ ಸೀಳಿಯಲ್ಪಟ್ಟ ಈಗಿನ 7 ಓ ಕ್ಲಾಕ್ ಬ್ಲೇಡುಗಳು ಹಳೇ ಮಾದರಿಯ ಮೂರು ತೂತುಗಳ ಬ್ಲೇಡುಗಳಿಗಿಂತ ಸುಧಾರಣೆ ಹೊಂದಿವೆ. ಇದರ ಕ್ರಯವು ಅಗ್ಗ ಮಾತ್ರವಲ್ಲದೆ ಚೆನ್ನಾಗಿ ಹರಿತವಾಗಿದ್ದು ಉತ್ತಮವೂ ನುಣುಪೂ ಆದ ಕ್ಷೌರವನ್ನು ಉಂಟುಮಾಡುವುದಲ್ಲದೆ ಅನೇಕ ಕಾಲದ ವರೆಗೆ ಬಾಳುವುದು.
7 ಓ ಕ್ಲಾಕ್ ಬ್ಲೇಡುಗಳು ಹಳೇ ಮತ್ತು ಹೊಸ ಮಾದರಿಯ ಬ್ಲೇಡುಗಳಿಗೆ ಅಳವಡುತ್ತವೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ನಾಝಿಗಳಿಗೆ ಬೊಲ್ಶೆವಿಕರ ವಿರೋಧ!

ರಷ್ಯ ಜರ್ಮನಿ ಒಡಂಬಡಿಕೆ ಎಂಬುದು ಹಿಟ್ಲರ್ ಸ್ಟಾಲೀನರ ಕಾರ್ಯಸಾಧನೆಗೆ ಒಂದು ಉಪಾಯ!

ಹಿಟ್ಲರ್

ಯೂರೋಪದ ಯುದ್ಧದಲ್ಲಿ ರಷ್ಯದ ಬೊಲ್ಶೆವಿಕ ಸರಕಾರವು ಜರ್ಮನಿಯ ನಾಝಿ ಸರಕಾರದೊಡನೆ ಸ್ನೇಹಸಂಬಂಧವನ್ನಿಟ್ಟುಕೊಂಡು, ಕೈಗೆ ಕೈಕೊಟ್ಟು ನಡೆಯುತ್ತಿದೆಯಾದರೂ ಬೊಲ್ಶೆವಿಕರು ಈಗಲೂ ನಾಝಿಗಳ ಪರಮದ್ವೇಷಿಗಳಾಗಿ ಇರುತ್ತಾರೆ. ಹಿಟ್ಲರ ಸ್ಟಾಲೀನರೊಳಗಾದ ಒಡಂಬಡಿಕೆಯ ದೆಸೆಯಿಂದ ನಾಝಿ ಬೊಲ್ಶೆವಿಕರೊಳಗಿನ ಪರಸ್ಪರ ದ್ವೇಷದ ಪೂರ್ವ ಸಂಬಂಧದಲ್ಲಿ ಯಾವ ವ್ಯತ್ಯಾಸವೂ ಉಂಟಾದುದಿಲ್ಲ.

ಲಂಡನಿನ ಪೀಪಲ್ ಎಂಬ ಪತ್ರಿಕೆಯು ಈ ವಿಚಾರವಾಗಿ ಬರೆಯುತ್ತಾ ಬೊಲ್ಶೆವಿಕ ಸಂಸ್ಥೆಯು ಮೊಸ್ಕೊವಿನಿಂದ ನಾಝಿಗಳ ಪ್ರತಿಕೂಲವಾದ ಒಂದು ದೊಡ್ಡ ಆಂದೋಲನವನ್ನು ಎಬ್ಬಿಸಿರುವರು. ಈ ಆಂದೋಲನದ ಪರಿಣಾಮವು ಜರ್ಮನಿಯು ಕಳೆದ ವರ್ಷ ಗೆದ್ದುಕೊಂಡ ಆಸ್ಟ್ರೀಯ ಜೆಕೊಸ್ಲೊವೇಕಿಯಗಳಲ್ಲಿ ಚೆನ್ನಾಗಿ ಕಂಡುಬಂದಿದೆ. ಬೊಲ್ಶೆವಿಕ ಸಂಸ್ಥೆಯ ಗೂಢಚಾರರು, ಕೆಲಸಗಾರರು ಮೊದಲಾದವರು ಆಸ್ಟ್ರೀಯ ಜೆಕೊಸ್ಲೊವೇಕಿಯಗಳಿಗೆ ಅಕ್ರಮ ಪ್ರವೇಶ ಮಾಡಿ ಅಲ್ಲಿ, ಜರ್ಮನಿಯ ವಿರುದ್ಧ ಉಗ್ರಾಂಕಿತ ಕರಪತ್ರಗಳನ್ನು ಹಂಚಿರುವರು. ಈ ಕರಪತ್ರಗಳಲ್ಲಿ ನಾಝಿಗಳು ಆಸ್ಟ್ರೀಯ ಜೆಕೊಸ್ಲೊವೇಕಿಯಗಳ ಅಮೂಲ್ಯ ಆಹಾರ ಸಾಮಗ್ರಿ, ಖನಿಜಗಳು, ಕೈಗಾರಿಕೆ ಸಾಮಾನುಗಳು, ಜನಜಾನುವಾರುಗಳ ಸಂಪತ್ತಿಯನ್ನು ಹೇಗೆ ಸೂರೆಸುಲಿಗೆ ಮಾಡುತ್ತಿದ್ದಾರೆಂಬುದನ್ನು ತೋರಿಸಿ, ಆ ರಾಷ್ಟ್ರಗಳ ಜನರು ನಾಝಿಗಳ ವಿರುದ್ಧ ಬಂಡಾಯವೇಳುವಂತೆ ಅವರನ್ನು ಬೊಲ್ಶೆವಿಕರು ಪ್ರೇರೇಪಿಸುತ್ತಿದ್ದಾರೆ.

ಹಿಟ್ಲರ ರಷ್ಯ ಸಂಬಂಧ

ನಾಝಿಗಳ ಪ್ರತಿಕೂಲವಾದ ಬೊಲ್ಶೆವಿಕರ ಈ ಪ್ರಚಾರ ಕಾರ್ಯವು ಹಿಟ್ಲರ ಮತ್ತು ಅವನ ಸಹಕಾರಿಗಳ ಲಕ್ಷ್ಯಕ್ಕೆ ಬಾರದೆ ಇದ್ದಿರುವದಿಲ್ಲ. ಬೊಲ್ಶೆವಿಕರು ನಾಝಿಗಳ ಪರಮ ಶತ್ರುಗಳಾಗಿರುವಂತೆ ನಾಝಿಗಳೂ ಅವರ ಶತ್ರುಗಳಾಗಿದ್ದರೆ ನಾಝಿ ಬೊಲ್ಶೆವಿಕರೊಳಗಿನ ಶತ್ರು ಸಂಬಂಧಕ್ಕೆ ಯಾವ ಚ್ಯುತಿಯೂ ಬಂದುದಿಲ್ಲ. ಹಿಟ್ಲರನು ಮೊದಲಿನಂತೆ ಈಗಲೂ ಸ್ಟಾಲೀನನ್ನು ಬಹಳ ದ್ವೇಷಿಸುತ್ತಿದ್ದಾನೆ. ಬೊಲ್ಶೆವಿಜಮನ್ನು ನಾಮಾವಶೇಷವಮಾಡಿ ಸರ್ವತ್ರ ನಾಜೀಜಮ್ಮಿನ ಧ್ವಜವೇ ಹಾರಾಡುತ್ತಿರಬೇಕೆಂಬ ಹಿಟ್ಲರನ ಮಹತ್ವಾಕಾಂಕ್ಷೆಗೆ ಯಾವ ಲೋಪವೂ ಉಂಟಾಗಿಲ್ಲ.

ಒಡಂಬಡಿಕೆಯ ಉದ್ದೇಶ

ಯೂರೋಪದ ಯುದ್ಧದಲ್ಲಿ ತನಗೆ ಪ್ರತಿಕೂಲವಾಗಿ ರಷ್ಯವು ಶತ್ರು ಪಕ್ಷವನ್ನು ಸೇರಬಾರದೆಂಬ ದೂರಾಲೋಚನೆಯಿಂದಷ್ಟೇ ಹಿಟ್ಲರನು ಸ್ಟಾಲೀನನೊಡನೆ ಸ್ನೇಹಚಾರದ ಒಡಂಬಡಿಕೆ ಮಾಡಿಕೊಂಡನು. ಸ್ಟಾಲೀನನಾದರೂ ಏನಾದರೂ ಗುಪ್ತ ಲಾಭವನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಈ ಒಡಂಬಡಿಕೆಗೆ ಒಪ್ಪಲಿಲ್ಲ. ಈ ಒಡಂಬಡಿಕೆಯಾದುದರಿಂದಲೇ ಪೋಲೆಂಡು ಫಿನ್ಲಾಂಡುಗಳು ರಷ್ಯಕ್ಕೆ ಸೇರುವದು ಸಾಧ್ಯವಾಯಿತು. ಹೀಗೆ ಪರಸ್ಪರ ಶತ್ರುಗಳಾಗಿದ್ದ ಹಿಟ್ಲರ ಸ್ಟಾಲೀನರು ತಮ್ಮ ತಮ್ಮ ಸ್ವಾರ್ಥಗಳನ್ನು ಸಾಧಿಸಿಕೊಳ್ಳುವದಕ್ಕಾಗಿಯೇ ಒಂದು ತಾತ್ಕಾಲಿಕ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತಾರೆ. ಯಾವಾಗ ಈ ಒಡಂಬಡಿಕೆಯು ಅವರ ಸ್ವಾರ್ಥಕ್ಕೆ ಭಂಗತರುವದೋ ಆಗ ಅದನ್ನು ಕಸದ ಬುಟ್ಟಿಗೆ ಒಗೆಯಲಿಕ್ಕೆ ಅವರು ಸಿದ್ಧರೆ!

ಮಿತ್ರರಾಷ್ಟ್ರಗಳ ಕಾರ್ಯ ಜಾಣ್ಮೆ

ಈ ರಹಸ್ಯವನ್ನು ಮಿತ್ರರಾಷ್ಟ್ರಗಳು ಚೆನ್ನಾಗಿ ತಿಳಿದಿರುವದರಿಂದಲೇ ಅವುಗಳು ಕಡಿದುಹೋದ ರಷ್ಯದ ಸ್ನೇಹ ಸಂಬಂಧವನ್ನು ಪುನಃ ಜೋಡಿಸಲಿಕ್ಕೆ ಸಂದರ್ಭ ಅವಸರಗಳನ್ನು ಹುಡುಕಿ ಅವುಗಳ ಉಪಯೋಗ ತೆಗೆದುಕೊಳ್ಳುತ್ತಿವೆ. ಅವು ರಷ್ಯದೊಡನೆ ತಮ್ಮ ಸ್ನೇಹಸಂಬಂಧವನ್ನು ಜೋಡಿಸಲಿಕ್ಕೆ ಯಾವಾಗಲೂ ಆತುರಪಾಗಿವೆ. ಹಲವು ಬಾರಿ ಪ್ರಯತ್ನಪಟ್ಟು ವಿಫಲವಾದರೂ ನಿರಾಶವಾಗಿಲ್ಲ; ಇನ್ನೂ ಇನ್ನೂ ಪ್ರಯತ್ನಿಸುತ್ತ ಇವೆ. ಬ್ರಿಟನ ರಷ್ಯಗಳ ವ್ಯಾಪಾರ ಸಂದರ್ಭದ ಒಡಂಬಡಿಕೆಯ ಮಾತುಗಳು ಈಗ ಆರಂಭವಾಗಿವೆ. ಹಿಟ್ಲರನೊಡನೆ ಸ್ನೇಹದಲ್ಲಿರುವದಕ್ಕಿಂತ ಬ್ರಿಟನಿನೊಡನೆ ಸ್ನೇಹವು ಹೆಚ್ಚು ಲಾಭಕಾರಿ ಎಂದು ಸ್ಪಷ್ಟವಾದೊಡನೆ ರಷ್ಯವು ಜರ್ಮನಿಗೆ ವಿಮುಖವಾಗಿರುವದು ಸುಲಭ. ಮಿತ್ರರಾಷ್ಟ್ರಗಳಿಗೆ ಬೇಕಾದ್ದೂ ಅಷ್ಟೇ. ಅದನ್ನೆ ಅವು ಸಾಧಿಸುತ್ತಲಿವೆ.

ಪಶ್ಚಿಮ ರಂಗದಲ್ಲಿ ಯುದ್ಧವಾದರೆ

ಪಶ್ಚಿಮ ರಂಗದಲ್ಲಿ ಯುದ್ಧವಾದರೆ ಅದರ ಪರಿಣಾಮವು ಜರ್ಮನಿಗೆ ಬಹು ಭಯಂಕರವಾಗುವದು; ಶೀಘ್ರದಲ್ಲಿ

ಸ್ಟಾಲೀನ್

ಜರ್ಮನಿಯು ಪತನವಾಗುವುದು ಎಂದು ಬರ್ಲಿನಿನ ಒಂದು ದೊಡ್ಡ ಆಸ್ಪತ್ರೆಯ ಚಿಕಿತ್ಸಕರಾಗಿದ್ದ ಡಾಕ್ಟರ ಮಾರ್ಟಿನ ಗುಂಪರ್ಟ ಎಂಬವರು ಅಮೇರಿಕದ ಒಂದು ಪ್ರಸಿದ್ಧ ಪತ್ರಿಕೆಯಲ್ಲಿ ಬರೆದಿದ್ದಾರೆ: ಜರ್ಮನರು ಈಗ ಏಳೆಂಟು ವರ್ಷಗಳಿಂದ ಅರೆ ಹೊಟ್ಟೆ ತುಂಬಿಸಿಕೊಂಡು ಇದ್ದಾರೆ. ಅವರ ಶರೀರದಂತೆ ಮನಸ್ಸೂ ವಿಕಾಸಕ್ಕೆ ಎಡೆಇಲ್ಲದೆ ದುರ್ಬಲವಾಗಿದೆ. ಕಳೆದ ಮಹಾ ಯುದ್ಧದಿಂದ ಈಚೆಗೆ ಯಾವ ಸಮಯದಲ್ಲಿಯೂ ಜರ್ಮನ ಜನಾಂಗಕ್ಕೆ ಇಂಥ ಪತನವಾದುದಿಲ್ಲ. ಜರ್ಮನಿಯಲ್ಲಿ ಕಡಿಮೆ ಆಹಾರ, ಹೆಚ್ಚು ಶ್ರಮ ಮತ್ತು ನಾಝಿ ಅತ್ಯಾಚಾರದಿಂದ ಮೃತ್ಯು ಸಂಖ್ಯೆ ಹೆಚ್ಚಾಗಿದೆ. ಶಿಶು ಮರಣಗಳ ಗತಿ ದ್ವಿಗುಣಿತವಾಗಿದೆ. ಜಗತ್ತಿನಲ್ಲಿ ಬೇರೆ ಎಲ್ಲಿಯೂ ಇರದ ಪರಿಮಾಣದಲ್ಲಿ ಜರ್ಮನಿಯಲ್ಲಿ ಆತ್ಮಘಾತಗಳಾಗುತ್ತವೆ ಎಂದು ಗುಂಪರ್ಟರು ಸಪ್ರಮಾಣ ಬರೆದಿದ್ದಾರೆ. ಪಶ್ಚಿಮ ರಂಗದಲ್ಲಿ ಹೊಯ್ಕೈ ಆದರೆ ಜರ್ಮನರ ಪತನವಾಗುವದು ಬೇಗ ಎಂಬುದರಿಂದಲೇ ಹಿಟ್ಲರನು ಯುದ್ಧಕ್ಷೇತ್ರವನ್ನು ನೊರ್ವೆ ಸ್ವೀಡನುಗಳ ಕಡೆಗೆ ಪಗಾರಯಿಸಿರಬಹುದು.

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
RS. 50/-, 100/-, 500/-, 1,000/- & 5,000/-
are now issued at all our Branches.
For particulars call at or write to
Any of our nearest Branches

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಬಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ



ಜಿಲ್ಲಾ ಸಮಾಚಾರ

★



ಮಂಗಳೂರು

'ಶ್ರೀ'ಯವರ ಭಾಷಣ'— ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಬಿ. ಎಮ್ ಶ್ರೀಕಂಠಯ್ಯ ಇವರು ನಾಳೆ ಸಂಜೆ ೬ ಗಂಟೆಗೆ ಮಂಗಳೂರು ಥಿಯೊಸೊಫಿಕಲ್ ಲೋಜಿನಲ್ಲಿ ಭಾಷಣ ಕೊಡಲಿರುವರು ಎಲ್ಲರಿಗೂ ಸ್ವಾಗತವಿದೆ

ದ ಕ ಹರಿಜನ ಲೇಬರ್ ಲೀಗ್ ಈ ಲೀಗಿನ ಒಂದು ಸಭೆಯು ಇದೇ ತಿಂಗಳ ತಾ ೨ನೇ ಆದಿತ್ಯವಾರ ಮಧ್ಯಾಹ್ನ ಘಂಟೆಗೆ ಸಂಘದ ಆಫೀಸಿನಲ್ಲಿ ಶ್ರೀ ಕೆ ಈಶ್ವರ ಎಂ ಎಲ್ ಎ ಯವರ ಅಧ್ಯಕ್ಷತೆಯಲ್ಲಿ ಜರಗಿತು ಹೆಚ್ಚಿನ ಮೆಂಬರರು ಹಾಜರಿದ್ದರು ೧ ನಮ್ಮ ಜಿಲ್ಲೆಯ ಲೇಬರ್ ಇಲಾಖೆಯು ಮುಖ್ಯ ಅಧಿಕಾರಿಗಳ ಸಂಘಕ್ಕೆ ಮತ್ತು ಹರಿಜನರಿಗೆ ಮಾಡುವ ಅಸಾಯ್ಯವನ್ನು ಕೂಡಲೇ ಮದ್ರಾಸ್ ಸರಕಾರಕ್ಕೆ ಬೇಕೆಂದು ನಿರ್ಣಯ ಮಾಡಲಾಯಿತು ೨ ಸಂಘದ ಕಾರ್ಯದರ್ಶಿಯು ... ಕಾಂಗ್ರೆಸ್ ಮತ್ತು ಸತ್ಯಾಗ್ರಹ ಕಮಿಟಿ ಮೆಂಬರನಾದ್ದರಿಂದ ತಾನು ಈ ಕಾರ್ಯದರ್ಶಿ ಸ್ಥಾನಕ್ಕೆ ರಾಜಿನಾಮೆ ಇತ್ತಿರುವರು. ಈ ಅರ್ಜಿಯನ್ನು ಓದಲಾಯಿತು ಇದರ ವಿಷಯದಲ್ಲಿ ಬಹಳ ಆಲೋಚನೆ ನಡೆದು ಈ ಅರ್ಜಿಯನ್ನು ಮುಂದಿನ ಸಭೆಗೆ ಮುಂದರಿಸಲಾಯಿತು ೩ ಸಂಘಕ್ಕೆ ಹಣದ ಅಡಚಣೆ ತೋರುತ್ತಿರುವುದರಿಂದ ಮೆಂಬರರು ಬಾಕಿ ಮಾಡಿಕೊಂಡು ಬಂದ ಹಣವನ್ನು ಕೂಡ್ಲೆ ವಸೂಲು ಕೊಡಬೇಕೆಂದು ಠರಾವು ಮಾಡಲಾಯಿತು ಎಂದು ಕೆ ಈಶ್ವರ ಎಮ್ ಎಲ್ ಎ ಗೌರವ ಕಾರ್ಯದರ್ಶಿಯವರು ತಿಳಿಸುತ್ತಾರೆ

ಮಿತ್ರ ಮಂಡಳಿ—ಇಲ್ಲಿಯ ಮಿತ್ರ ಮಂಡಳಿಯ ಮಹಾಸಭೆಯೊಂದು ಇದೇ ತಾ ೨೮ ೪ ೪೦ರ ಸಾಯಂಕಾಲ ಘಂಟೆ ೫ ಕ್ಕೆ ಕೆನರಾ ಹಾಯ್ ಸ್ಕೂಲಿನ ಸುಬ್ರಾಯ ಪೈ ಸ್ಮಾರಕ ಸದನದಲ್ಲಿ ಶ್ರೀ ಕೆ ಗೋಪಾಲ್ ರಾವ್ ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಠರಾವನ್ನು ಮಂಜೂರು ಮಾಡಿತು —

' ಕರ್ನಾಟಕ ಸಾಹಿತ್ಯಾಭ್ಯುದಯಕ್ಕಾಗಿ ಕನ್ನಡ ಸಾಹಿತ್ಯಾಭಿವೃದ್ಧಿಗಾಗಿ ಸರ್ವತೋಮುಖವಾಗಿ, ನಿಃಸ್ವಾರ್ಥಬುದ್ಧಿಯಿಂದ, ಅವಿಶ್ರಾಂತರಾಗಿ ದುಡಿದು ಕೀರ್ತಿಶೇಷರಾದ ಶ್ರೀಮಾನ್ ಎಮ್ ಎನ್ ಕಾಮತ್ ಅಧ್ಯಕ್ಷ, ಮಿತ್ರ ಮಂಡಳಿ, ಇವರ ಅಕಾಲ ನಿಧನದಿಂದ ಅವರ ಬಂಧುಬಾಂಧವರಿಗೆ ಉಂಟಾದ ಅಪಾರ ಶೋಕದಲ್ಲಿ ಮಿತ್ರಮಂಡಳಿಯ ಸದಸ್ಯರು ಸಹಭಾಗಿಗಳಾಗಿ, ಪರಮಾತ್ಮನು ದಿವಂಗತರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬದವರ ಮನಸ್ಸಿಗೆ ಸಮಾಧಾನವನ್ನೂ ಕರುಣಿಸಲೆಂದು ಈ ಸಭೆಯಲ್ಲಿ ಪ್ರಾರ್ಥಿಸುತ್ತಾರೆ."

ಈ ಸಭೆಯಲ್ಲಿ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರೂ ಶ್ರೀ ಮುರಾರಿ ಭೀಮ ರಾಯರೂ, ಅಧ್ಯಕ್ಷರೂ ಕೀರ್ತಿಶೇಷರ ಅಸಾಮಾನ್ಯ ಲೇಖನ ಶಕ್ತಿ, ನಿಸ್ವಾರ್ಥ ಕಾರ್ಯಾಸಕ್ತಿ, ಕನ್ನಡ ಪತ್ರಿಕಾ ವ್ಯವಸಾಯ, ಲೇಖಕರಲ್ಲಿ ಅವರಿಂದುಂಟಾದ ಜಾಗೃತಿ, ಕನ್ನಡಕ್ಕೆ ಅವರಿಂದಾದ ಮಹದುಪಕೃತಿ ಮುಂತಾದುವುಗಳನ್ನು ಕುರಿತು ಮಾತಾಡಿದರು ಶ್ರೀ ಭೀಮರಾಯರು ಅವರಿಂದ ಎಲ್ಲಾ ತರದಿಂದಲೂ ಉಪಕಾರ ಹೊಂದಿದ ಕನ್ನಡಿಗರು ದಿವಂಗತರ ಸ್ಮಾರಕವೊಂದನ್ನು ಬೇಗನೇ ನಿರ್ಮಿಸುವುದರ ಆವಶ್ಯಕತೆಯನ್ನು ಒತ್ತಿ ಹೇಳಿದರು.

ರಾಮಸೇವಾ ಸಮಿತಿ ಮಂಗಳೂರು

ಈ ಸಮಿತಿಯ ವಾರ್ಷಿಕೋತ್ಸವವು ಶ್ರೀ ಶಾರದ ಬಿಲ್ಡಿಂಗಿನಲ್ಲಿ ಇದೇ ತಾ ೧೬ ೪ ೧೯೪೦ ರಲ್ಲು ಶ್ರೀ ಎಲ್ ಬಿ ಗುಜರಾನ್ ರವರ ಅಧ್ಯಕ್ಷತೆಯಲ್ಲಿ ಜರಗಿತು ದೇವತಾ ಪ್ರಾರ್ಥನೆಯಾದ ಬಳಿಕ ಸಮಿತಿಯ ಮೆಂಬರರಲ್ಲಿ ನಿಧನವನ್ನು ಹೊಂದಿದವರ ಬಗ್ಗೆ ವ್ಯಸನವನ್ನು ವ್ಯಕ್ತಪಡಿಸಿ ಮೃತರ ಆತ್ಮಗಳಿಗೆ ಚಿರಶಾಂತಿಯನ್ನು ಬಯಸುವ ಠರಾವನ್ನು ಮಂಜೂರು ಮಾಡಲಾಯಿತು ವರದಿವಾಚನ ಸಭಿಕರ ಭಾಷಣಗಳು ಜರಗಿದವು

ಪ್ರಾಲ್ತಿ ವರುಷದ ಬಗ್ಗೆ ೧೧ ಜನ ಕಮಿಟಿ ಮೆಂಬರರನ್ನು ಚುನಾಯಿಸಿ ಅವರ್ಕಿ ಶ್ರೀಗಳಾದ ಮಂಜುನಾಥ ಮತ್ತು ಕದ್ರಿ ಸೇಸಪ್ಪನವರನ್ನು ಜೊತೆ ಅಧ್ಯಕ್ಷರನ್ನಾಗಿಯೂ ಎ ಎಚ್ ಬಂಗೇರ ಮತ್ತು ಚ ಸ್ಯೆಗಲ್ಲಿ ಸುಬ್ಬಣ್ಣನವರನ್ನು ಜೊತೆ ಕೋಶಾಧಿಕಾರಿಯನ್ನಾಗಿಯೂ ಕೆ ಲಕ್ಷ್ಮಣ ಬಂಗೇರ ಮತ್ತು ಯಂ ಶಾಂತಪ್ಪನವರನ್ನು ಜೊತೆಕಾರ್ಯದರ್ಶಿಯರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು

"ಕೆನರಾ ಮ್ಯೂಚುವಲ್"— ದಿ ಕೆನರಾ ಮ್ಯೂಚುವಲ್ ಅಶ್ಯೂರನ್ಸ್ ಕಂಪೆನಿ, ಲಿಮಿಟೆಡ್ ಉಡ್ಪಿ ಎಂಬೀ ನಮ್ಮ ಜಿಲ್ಲೆಯ ವಿಮಾ ಸಂಸ್ಥೆಯು ಪ್ರತಿನಿಧಿಗಳಿಗೆ, ಸ್ಥಳೀಯ ಡೈರೆಕ್ಟರರಾದ ಶ್ರೀ ಬಿ ವೈಕುಂಠ ಬಾಳಿಗರು, ಕಾರ ಬೀದಿಯ ಪೈ ಬಿಲ್ಡಿಂಗ್ ನಲ್ಲಿ, ಕಳೆದ ಆದಿತ್ಯವಾರ ಒಂದು ಉಪಹಾರವನ್ನಿತ್ತು ಮನ್ನಿಸಿದರು

ಶ್ರೀ ವಿವೇಕಾನಂದ ಸಭೆ:— ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಗಂಟೆ ೮-೩೦ರಿಂದ ೧೦ರ ವರೆಗೆ ಕೀರ್ತನೆ ಮತ್ತು ಈ ಕೆಳಗೆ ಸೂಚಿಸಿದಂತೆ ಪ್ರವಚನಗಳು ನಡೆಯುವವು ಸರ್ವರಿಗೂ ಸುಸ್ವಾಗತವಿದೆ

೫ ೫-೪೦ ಶ್ರೀ ಬಿ ಪುಂಡರೀಕ ಬಾಳಿಗರು ಗೀತಾ ಅಧ್ಯಾಯ ೩ ಮುಂದರಿಸಿದ್ದು ೧೨ ೫ ೪೦— ಶ್ರೀ ಎಸ್ ಮಾಧವ ಕಮ್ತಿಯವರು—ಗೀತಾ ಅಧ್ಯಾಯ ೪ ಶ್ಲೋಕ ೭ ಮತ್ತು ೮. ೧೯ ೫ ೪೦ ಶ್ರೀ ಎಂ ವಿ ಶಾಸ್ತ್ರಿಗಳು ಗೀತಾ ಅಧ್ಯಾಯ ೩ ಶ್ಲೋಕ ೪೮ ೨೬-೫-೪೦ ಶ್ರೀ ಮುರಲ್ಯ ಸುಬ್ರಾಯರು ಗೀತಾ ಅಧ್ಯಾಯ ೬ ಶ್ಲೋಕ ೩೧ ೩೨

> **ಶಾಲಾ ಪುಸ್ತಕಗಳು! ಶಾಲಾ ಪುಸ್ತಕಗಳು!!**
>
> 1939ನೇ ಮೇ ತಿಂಗಳಲ್ಲಿ ಮದರಾಸು ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆಯಲಾದ ಪುಸ್ತಕಗಳು.
>
> **ಸಾಮಾನ್ಯ ವಿಜ್ಞಾನ:-** 6 7 ಮತ್ತು 8ನೇ ದರ್ಜೆಗಳಿಗೆ
> (ಎಸ್ ರಾಮಕೃಷ್ಣಾಚಾರ್ B A L T)
>
> **ಭೂವಿವರ:-** 4ನೇ ದರ್ಜೆ 0-2-6, 5ನೇ ದರ್ಜೆ 0-4-6,
> 6ನೇ ದರ್ಜೆ 0-5-0
> (7ನೇ ದರ್ಜೆ 8ನೇ ದರ್ಜೆ ಈ ಪುಸ್ತಕಗಳ ಬೆಲೆ ಅತಿ ಕಡಿಮೆಯಿದೆ.)
>
> **ಸಿವಿಕ್ಸ್ ಅಥವಾ ಪ್ರಜಾಧರ್ಮ:-** 3ನೇ ದರ್ಜೆ 0-1-6 4ನೇ ದರ್ಜೆ 0-2-0
> 5ನೇ ದರ್ಜೆ 0 2 6 6ನೇ ದರ್ಜೆ 0 3 0
> 7ನೇ ದರ್ಜೆ 0 3 0 8ನೇ ದರ್ಜೆ 0 3-0
> (ಕೆ ಕೆ. ರೈ ಮತ್ತು ಇತರರ್ ವಿರಚಿತ)
>
> **ಚರಿತ್ರೆ ಮತ್ತು ಕಥೆ:-** 3ನೇ ದರ್ಜೆ 0 2-6 4ನೇ ದರ್ಜೆ 0-3-0
> 5ನೇ ದರ್ಜೆ 0 3-6
>
> **ವ್ಯಾಕರಣ ಮತ್ತು ಪ್ರಬಂಧ:-**
> 4ನೇ ಮತ್ತು 5ನೇ ದರ್ಜೆಗೆ 0-1-6 6ನೇ ದರ್ಜೆಗೆ 0 2-0
> 7ನೇ ದರ್ಜೆಗೆ 0-2-6 8ನೇ ದರ್ಜೆಗೆ 0 3-0
> (ವಿದ್ವಾನ್ ಕೆ ಕೆ ರೈ ವಿರಚಿತ)
>
> ಹೈಸ್ಕೂಲು ಮತ್ತು ಟ್ರೈನಿಂಗ್ ಶಾಲೆಗಳ ವಿದ್ಯಾರ್ಥಿಗಳ ಉಪಯೋಗದ ಸಲುವಾಗಿ ಬರೆಯಲ್ಪಟ್ಟ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ
>
> 6 7 8ನೆಯ ತರಗತಿಗಳ ವ್ಯಾಕರಣ ಮತ್ತು ಪ್ರಬಂಧದ ಮೊದಲನೆಯ ಮುದ್ರಣದ ಪ್ರತಿಗಳು ಮುಗಿಯುತ್ತಾ ಬಂದಿವೆ ಬೇಕಾದವರು ೪ ಆಣೆ ಸ್ಟಾಂಪು ಕಳುಹಿಸಿದರೆ 6 7 8ನೇ ದರ್ಜೆಗಳ ವ್ಯಾಕರಣ ಮತ್ತು ಪ್ರಬಂಧ ಪುಸ್ತಕಗಳು ಕಳುಹಿಸಲಾಗುವುದು
>
> **ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ:-**
> ಮೂರನೇ 0-1-6 ನಾಲ್ಕನೇ 0-2-0 ಐದನೇ 0-2-6
> (ಎಮ್ ಗಣಪತಿ ರಾವ್ ಐಗಳ್)
>
> ಬಡ ವಿದ್ಯಾರ್ಥಿಗಳೂ ಕೂಡ ಪುಸ್ತಕಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುವಂತೆ ಸಿವಿಕ್ಸ್ ಮತ್ತು ಪ್ರಕೃತಿಶಾಸ್ತ್ರ ಇವುಗಳ ಬೆಲೆಯನ್ನು ಇನ್ನೂ ಕೂಡ ಇಳಿಸುವ ಏರ್ಪಾಡು ಮಾಡುವ ಯೋಚನೆಯಲ್ಲಿದೆ!
>
> ಮೇಲಿನ ಎಲ್ಲಾ ಪುಸ್ತಕಗಳ ಬೆಲೆಯನ್ನು ಬಡಶಾಲಾಮಕ್ಕಳ ಉಪಯೋಗಾರ್ಥವಾಗಿ ಅತಿ ಕಡಿಮೆ ಮಾಡಿರುವೆವು.
>
> **ಶಿಕ್ಷಣಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!**
> **ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!!**
>
> ಇಷ್ಟು ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಸಾಹಸವು ನಮ್ಮ ಜಿಲ್ಲೆಯ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ!
>
> ಪುಸ್ತಕಗಳು ದೊರಕುವ ಸ್ಥಳ
> **ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.**

ಫರಂಗಿಪೇಟೆ ಫರಂಗಿಪೇಟೆ ಶ್ರೀರಾಮ ಹಾಯರ್ ಎಲಿಮೆಂಟರಿ ಶಾಲೆಯ ೩೩ನೇಯ ವರ್ಧಂತ್ಯುತ್ಸವವು ತಾ ೧೬ ೪ ೪೦ನೇ ಮಂಗಳವಾರ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಯು ಕಣ್ಣಪ್ಪ ಎಮ್ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು ಶ್ರೀ ಸುಜೀರ್ ಸದಾನಂದ ನಾಯಕ್ ರವರಿಂದ ಬಾಲಭಿನಂದನ, ಹೆಡ್ ಮಾಸ್ತರರಿಂದ ವರದಿವಾಚನಗಳು ನಡೆದ ಬಳಿಕ ಅಧ್ಯಕ್ಷರಿಂದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲಾದವು ಅಧ್ಯಕ್ಷ ಮಹಾಶಯರು ತಮ್ಮ ಭಾಷಣದಲ್ಲಿ ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿದರು

ಡಾ ಎಫ್ ಎಚ್ ಮಡೇಯರೂ, ಶ್ರೀ ದಾಮೋದರ ನಾಯರೂ ಭಾಷಣ ಕೊಟ್ಟರು ಬಳಿಕ ಹೆಮ್ಮಕ್ಕಳ ವಿವಿಧ ನೃತ್ಯಗಳೂ, ಲೇಜಿಮ್ ಕಂಬೆಲ್ ಇತ್ಯಾದಿ ಆಟಗಳೂ ನಡೆದು ಸ್ಥಳೀಕ ಅಧ್ಯಾಪಕವರ್ಗ ಸಂಗೀತ ನಾಟಕವೂ, 'ಅದೃಷ್ಟ' ವೆಂಬ ಪ್ರಹಸನವೂ ಅಭಿನಯಿಸಲ್ಪಟ್ಟವು ಹುಡುಗಿಯರಿಂದಲೇ ಅಭಿನಯಿಸಲ್ಪಟ್ಟ ಯಕ್ಷಗಾನ ನಾಟಕದ ಒಂದು ದೃಶ್ಯವು ಚಿತ್ತಾಕರ್ಷಕವಾಗಿತ್ತು ಮುಂಚಿನ ದಿನ ಶಾಲಾವಿದ್ಯಾರ್ಥಿಗಳಿಂದ ನೆರವೇರಿಸಲ್ಪಟ್ಟ ವಿವಿಧ ಕೈಗಾರಿಕೆವಸ್ತು ಪ್ರದರ್ಶನವು ಶ್ರೀ ಕೆ ಪಾಂಡುರಂಗ ಪೈಗಳವರಿಂದ ತೆರೆಯಲ್ಪಟ್ಟಿತ್ತು

ಎಡಿಶನಲ್ ಸಬ್ ಕೋರ್ಟು:— ಮಂಗಳೂರು ಎಡಿಶನಲ್ ಸಬ್ ಕೋರ್ಟನ್ನು ಇದೇ ೨೦ ೪ ೪೦ರಿಂದ ಒಂದು ವರ್ಷದ ವರೆಗೆ ಮುಂದರಿಸುವಂತೆ ಸರಕಾರದಿಂದ ಹುಕುಂ ಬಂದಿರುತ್ತದೆ

ಜಿಲ್ಲಾ ಕೋರ್ಟಿನಲ್ಲಿ ಹೊಸ ನೇಮಕಗಳು: ಇದೇ ಒರುವ ೧೬ ೪೦ರಿಂದ ನಿವೃತ್ತರಾಗುವ ಜಿಲ್ಲಾ ಕೋರ್ಟು ಶಿರಸ್ತೆದಾರ ಶ್ರೀ ಓ ಓ ಅನಂತ ಅಯ್ಯರರ ಸ್ಥಾನಕ್ಕೆ ಶ್ರೀ ಕೊಳ್ಳಪ್ಪುರ ರಾಮಚಂದ್ರರಾಯರು ಜಿಲ್ಲಾ ಕೋರ್ಟು ಶಿರಸ್ತೆದಾರರಾಗಿಯೂ ಶ್ರೀ ನಂದಿಕೂರು ಸೀತಾರಾಮ ಉಪಾಧ್ಯಾಯ ಬಿ ಎ ಇವರು ಜಿಲ್ಲಾ ಕೋರ್ಟು ಹೆಡ್ ಕ್ಲಾರ್ಕರಾಗಿಯೂ, ಮಿ ಬಿ ಎಮ್ ಡಿ ಸೋಜಾ ಇವರು ಜಿಲ್ಲಾ ಕೋರ್ಟು ಟ್ರಾನ್ಸಲೇಟರಾಗಿಯೂ ಕುಂದಾಪುರ ಡಿ. ಮು ಕೋರ್ಟಿನ ಕ್ಲಾರ್ಕ ಮಿ ಅಬ್ದುಲ್ ಕಲೀಮ್ ಸಾಹೇಬ್ ಇವರು ಜಿಲ್ಲಾ ಕೋರ್ಟಿನ ಕೊಪಿಸ್ಟ್ ಸುಪರಿಂಟೆಂಡೆಂಟರಾಗಿಯೂ ನೇಮಕ ಹೊಂದಿದ್ದಾರೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಭೂಮಧ್ಯ ಸಮುದ್ರದಲ್ಲಿ ಗಂಡಾಂತರವೇ?

★ ಲೋಕವಾರ್ತೆ



ಇಟಲಿಯ ಧೋರಣೆಯೇನು?

ನಾರ್ವೆಯಲ್ಲಿ ಜರ್ಮನರು ಮುಂದೊತ್ತಿದರು!

ಯುಗೋಸ್ಲೋವಿಯಕ್ಕೆ ಜರ್ಮನರ ಎಚ್ಚರಿಕೆ!

ಬಾಲ್ಕಾನ್ ರಾಷ್ಟ್ರಗಳು ಐಕ್ಯಗೊಳ್ಳುತ್ತಿವೆ!

ಸ್ವೀಡನೂ ಗಂಡಾಂತರದಲ್ಲಿದೆ

ಜರ್ಮನಿಯ ಬಾಲ್ಟಿಕ್ ಕರಾವಳಿಯಲ್ಲಿ ಸೈನಿಕ ಸಿದ್ಧತೆಗಳು ವಿಶೇಷ ಜೋರಿನಿಂದ ಸಾಗಿವೆಯೆಂದು ತಿಳಿದುಬರುತ್ತದೆ. ಸೈನಿಕರು ಮದ್ದು ಗುಂಡುಗಳು ಇನ್ನುಳಿದ ಸಾಮಗ್ರಿಗಳು ಷೆಮುಲ್ ಹಾಗು ಪೂರ್ವಪ್ರಶಿಯಾದಿಂದ ಒಂದೇ ಸಮನೇ ಬರುತ್ತಿರುವವು. ಇದರಿಂದ ಜರ್ಮನರು ಸ್ವೀಡನ್ನಿನಮೇಲೆ ಒಮ್ಮೆಲೆ ಏರಿಹೋಗುವ ಅಥವಾ ವಿಮಾನದಿಂದ ಸ್ವೀಡನ್ನಿನಲ್ಲಿ ಇಳಿಯುವ ಸಂಭವವು ವಿಶೇಷವಾಗ ಹತ್ತಿದೆಯೆಂದು ಊಹೆ.

ಮಿತ್ರರಾಷ್ಟ್ರಗಳಸಹಾಯದಿಂದ ಹುರುಪುಗೊಂಡ ನೊರ್ವೆಜಿಯನ್ನ ಸೈನಿಕರು ಒಳಗಿನಿಂದ ಜರ್ಮನ್ ಸೈನಿಕರನ್ನೆದುರಿಸುತ್ತಿರುವರು. ಬ್ರಿಟಿಷ-ನಾರ್ವೇಜಿಯನ್ನ ಸೈನಿಕರು ಹಮಾರತ್ತ ಸಾಗಿಹೋಗುತ್ತಿರುವರು. ಆದರೂ ಸ್ಟೆಂಜರ ಪ್ರದೇಶದಲ್ಲಿ ಜರ್ಮನರು ತಳವೂರಿಕೊಂಡು ಕುಳಿತು ಯುದ್ಧವನ್ನು ಒಳ್ಳೇ ಭರದಿಂದ ಸಾಗಿಸುತ್ತಿರುವರು.

ನಾರ್ವಿಕಿನ ಮೇಲೆ ಪುನಃ ಬಾಂಬುಗಳು

ನಾರ್ವಿಕ್ ಉತ್ತರಕ್ಕೆ ಜರ್ಮನ್ ಹಾಗು ಬ್ರಿಟಿಶ ಸೈನಿಕರ ನಡುವೆ ತುಮುಲ ಯುದ್ಧ ನಡೆದಿದೆ. ನಾರ್ವಿಕ್ ನಗರವು ಪುನಃ ಬ್ರಿಟಿಶ ಗುಂಡುಗಳಿಗೆ ಬಲಿಯಾಯಿತು.

ಟ್ರಾಂಧೀಮಿನ ದಕ್ಷಿಣಕ್ಕೆ ಸ್ಟೇರಿನ್ ಎಂಬ ಮಹತ್ವದ ರೇಲ್ವೆಜಂಕ್ಷನ್ ಮಿತ್ರಬಲದ ಸ್ವಾಧೀನವಾಗಿದೆ. ಓಸ್ಲೋದ ಉತ್ತರಕ್ಕೆ ಸಾಗಿರುವ ಜರ್ಮನ್ ಸೈನಿಕರು ಎಲ್ವರ ದಿನದ ೫೦ ಮೈಲಿನ ಮೇಲಿರುವ ಕೀವಾಂಗ ಸಮೀಪಕ್ಕೆ ಹೋಗಿರುವರೆಂದು ತಿಳಿಯುತ್ತದೆ.

ಡಚ್ಚರಿಗಾದ ನಷ್ಟ

ಕಳೆದ ಸಪ್ಟೆಂಬರದಿಂದ ಮಾರ್ಚ ೩೧ರ ತನಕ, ನಷ್ಟವಾದ ಡಚ್ಚರ ಹಡಗುಗಳು ೨೩. ಇವುಗಳ ಒಟ್ಟು 'ಹೊರುವ ಭಾರ' ೮೮೧೦೯ ಟನ್ನುಗಳು. ಅಲ್ಲದೆ ೨೩೭ ಮಂದಿಯೂ ಮಡಿದಿದ್ದಾರೆಂದೂ ವಾರ್ತೆ.

ಜರ್ಮನ್ ಬಲ

ಜರ್ಮನಿಯಲ್ಲಿ ಇದೀಗ ಇರುವ ಸಶಸ್ತ್ರರಾದ ಸುಶಿಕ್ಷಿತ ಸೈನಿಕರ ಸಂಖ್ಯೆ ಏಳು ಮಿಲಿಯನೆಂದು ತಿಳಿದುಬಂದಿದೆ.

ನಾರ್ವೆಯ ಅರಸು ಹಾಕನ್

ಹಾಕನ್‌ರವರು, ಜರ್ಮನರ ಸಂಪೂರ್ಣ ಸೇನೆಯೂ ಹಿಂದಕ್ಕೆ ಕರೆಯಿಸಿಕೊಳ್ಳಲ್ಪಡದೆ, ಯಾವುದೇ ತೆರನ ಸಂಧಾನವೂ ಸಾಗದು ಎಂದು ಸಾರಿದ್ದಾರೆ.

ಬೆಲ್ಜಿಯಮ್

ಇಲ್ಲಿ ಪರರಾಷ್ಟ್ರವೊಂದರ ಸೇನೆ ಇದ್ದು ಇದು ಅನಿರೀಕ್ಷಿತ ದಾಳಿ ನಡೆಸಬಹುದೆಂದು ಗೊತ್ತಾಗಿದೆ ಇವರೆಲ್ಲ ಸೈನಿಕರಾಗಿ ಫಕ್ಕನೆ ಮಾರ್ಪಡಬಹುದಾಗಿಯೂ ನಾಗರಿಕ ಜೀವನ ಸಾಗಿಸುತ್ತಿರುವರಾಗಿಯೂ, ಇದಲ್ಲದೆ ಯುಕ್ತ ಆಫೀಸರರೂ ಈ ಘಂಗಡದಲ್ಲಿರುವುದಾಗಿಯೂ ತಿಳಿದು ಬಂದಿದೆ.

ಸ್ವೀಡನಿನ ಕುರಿತು ರಶ್ಯದ ಬೇಡಿಕೆ

ಸ್ವೀಡನಿನ - ತಾಟಸ್ಥ್ಯವನ್ನೊಪ್ಪಬೇಕೆಂದು ರಶ್ಯವು ಬರ್ಲಿನನಿಗೆ ಒತ್ತಾಯದ ಹೇಳಿಕೆ ಕಳುಹಿರುವದೆಂದು ತಿಳಿದುಬರುತ್ತದೆ. ಅದೇ ರೀತಿಯ ಬೇಡಿಕೆ ಮಿತ್ರರಾಷ್ಟ್ರಗಳಿಗೂ ಕಳುಹಲ್ಪಟ್ಟಿರುವದಂತೆ. ಲಂಡನಿನಲ್ಲಿ ಆ ವಾರ್ತೆಯಿಲ್ಲ.

ಫಿನ್ಲೆಂಡು ಸಮುದ್ರಕ್ಕೂ ತೋಟೆ ಬಿತ್ತು

ಎಸ್ಟೋನಿಯಾ ಬದಿಯ ಸಮುದ್ರದ ಎರಡು ಕ್ಷೇತ್ರಗಳಲ್ಲಿ ತೋಟೆ ಹಾಕಿರುವದರಿಂದ ಆ ಕಡೆ ತಮ್ಮ ಹಡಗುಗಳು ಹೋಗಕೂಡದೆಂದು ಜರ್ಮನ್ ಸರಕಾರವು ಎಚ್ಚರಿಕೆಕೊಟ್ಟಿದೆ. ಈ ಅಪಾಯಕಾರೀ ಕ್ಷೇತ್ರಗಳ ಪೈಕಿ ಒಂದು ರಸ್ಯಾವು ಎಸ್ಟೋನಿಯದಿಂದ ಪಡೆದುಕೊಂಡ ಬಾಲ್ಟಿಸ್ಕಿ ಬಂದರದ ಹೊರಗಿದ್ದು ಪೂರ್ವದಿಂದ ಪಶ್ಚಿಮಕ್ಕೆ ಇಪ್ಪತ್ತು ಮೈಲು ವಿಸ್ತೀರ್ಣವುಳ್ಳದಾಗಿದೆ. ಎರಡನೇ ಕ್ಷೇತ್ರವು ಹೆಲ್ಸಂಕಿ ಇದಿರುಗಡೆಯಲ್ಲಿ ಕೋಲ್ಕೋವಿನ ಪೂರ್ವ ಕಡೆಯಲ್ಲಿ ಸರಾಸರಿ ಉತ್ತರದಿಂದ ದಕ್ಷಿಣಕ್ಕೆ ಹನ್ನೆರಡು ಮೈಲು, ಪೂರ್ವದಿಂದ ಪಶ್ಚಿಮಕ್ಕೆ ಆರು ಮೈಲು ವಿಸ್ತಾರವುಳ್ಳದ್ದಾಗಿದೆ.

ನಾರ್ವಿಕಿನಲ್ಲಿ ಜರ್ಮನರ ಕುಯುಕ್ತಿ

ನಾರ್ವಿಕಿನಲ್ಲಿ ನಡೆದ ಯುದ್ಧದಲ್ಲಿ ಜರ್ಮನರು ಹೆಂಗಸರು ಮಕ್ಕಳಿರುವ ನಾಗರಿಕರನ್ನು ಮುಂಭಾಗಕ್ಕೆ ಕಳುಹಿಸಿದರೆಂದೂ ಅದರಿಂದಾಗಿ ಕೆಲವು ಸೈನಿಕರು ಹಿಂಜರಿದು ಅವರ ಸ್ವಾಧೀನವಾಗಬೇಕಾಯಿತೆಂದೂ; ಕೊನೆಗೆ ತಮ್ಮ ಸೈನ್ಯವು ಧೈರ್ಯಗೊಂಡು ಮುಂಭೊತ್ತಿತೆಂದೂ ನಾರ್ವೇ ಸರಕಾರವು ಪ್ರಕಟಿಸಿದೆ. ವೆಸ್ಟ ಫ್ಯೋರ್ಡನ್ ಮತ್ತು ಅದಕ್ಕೆ ಬಂದು ಹೋಗುವ ಕಡೆಗಳಲ್ಲಿ ಮಿತ್ರರಾಷ್ಟ್ರಗಳು ಮೈನ್ ಹಾಕಿರುವರು. ಸ್ಥಳೀಕ ನಾವಿಕ ಅಧಿಕಾರಿಗಳ ಸೂಚನೆ ವಿನಹಾ ಯಾವ ಹಡಗೂ ಆ ಕಡೆಗೆ ಹೋಗಬಾರದೆಂದು ಎಚ್ಚರಿಕೆ.

ಸ್ವೀಡನಿಗೆ ಬ್ರಿಟನಿನ ನಿಷೇಧ ಸೂಚನೆ

ಸ್ವೀಡನಿನಲ್ಲಿ ಬ್ರಿಟಿಷ್ ಲಿಗೇಶನಿನವರು ಪ್ರಕಟಿಸುತ್ತಿದ್ದ 'ಗ್ರೇಟ್ ಬ್ರಿಟನಿನ ವಾರ್ತೆ' ಎಂಬ ಪ್ರಕಟಣೆಯನ್ನು ಜಪ್ತಿ ಮಾಡಿಡಬೇಕೆಂದು ಸ್ವೀಡನಿನ ಮಂತ್ರಿಮಂಡಲದ ಸಭೆಯಲ್ಲಿ ನಿರ್ಧಾರವಾಗಿದೆ. ಇದರಿಂದ ವಿದೇಶೀ ರಾಜ್ಯವೊಂದರ ಮೇಲೆ ತಪ್ಪಭಿಪ್ರಾಯ ಹರಡಿದಂತಾಗುವದೆಂಬುದೇ ಈ ನಿರ್ಧಾರಕ್ಕೆ ಕಾರಣ. ಬ್ರಿಟಿಷರು ಇದಕ್ಕಾಗಿ ನಿಷೇಧ ಸೂಚಿಸಲಿರುವರು. ಅಲ್ಲಿ ಜರ್ಮನ ಲಿಗೇಶನಿನವರು ಇದೇ ಮಾದರಿಯ ಪ್ರಕಟಣೆ ಮತ್ತು ಇತರ ವಿಧಗಳಿಂದ ಈಗಲೂ ನಾಜೀ ಪ್ರಚಾರಮಾಡುತಿದ್ದಾರೆ.

ಪ್ಯಾರಿಸಿನ ಅಭಿಪ್ರಾಯ

ನೋರ್ವೆ ಯುದ್ಧದ ಫಲಿತಾಂಶವೇನೆಂಬುದು ಗೊತ್ತಾಗದೆ ಹಿಟ್ಲರ್ ಸ್ವೀಡನನ್ನು ಆಕ್ರಮಿಸವಂತಿಲ್ಲವೆಂಬ ಪ್ಯಾರಿಸಿನ ಅಭಿಪ್ರಾಯ.

ಸ್ವೀಡನ್‌ನ ಗತಿಯೇನು?

ಸ್ವೀಡನ್ ಕೂಡಾ ಬೇಗನೇ ಜರ್ಮನರಿಗೆ ಆಹುತಿಯಾಗಬಹುದೋ ಎಂಬ ಸಂಶಯ ತಲೆದೋರಿದೆ. ಜರ್ಮನ್ ವಿಮಾನಗಳು, ಸ್ವೀಡನ್ನಿನ ಮೇಲೆ ಹಾರಾಡಿದ ವಿಚಾರವನ್ನು ಸ್ವೀಡನ್ ವಿರೋಧಿಸಿದುದಕ್ಕೆ, ಜರ್ಮನಿ ಸಮರ್ಪಕ ಉತ್ತರವನ್ನೇನೂ ಕೊಟ್ಟಿಲ್ಲ. ಅಲ್ಲದೆ ಹತ್ತು ನಿಮಿಷಗಳ ವಿಮಾನ ಪ್ರಯಾಣದ ಅಂತರದಲ್ಲಿರುವ ಡೆನ್ಮಾರ್ಕಿನ ದ್ವೀಪದಲ್ಲಿ, ಜರ್ಮನರ ಸೇನೆ ತುಂಬಿಕೊಂಡಿದೆ. ಸ್ವೀಡನಿನ ಸುತ್ತಲೂ ಜರ್ಮನ್ ಸೇನೆಗಳು ಅಲ್ಲಲ್ಲಿ ಇವೆ.

ಸ್ವೀಡನಿನ ವಿಷಯದಲ್ಲಿ ಭಯಪ್ರದರ್ಶನ

ಇಲ್ಲಿ ಜರ್ಮನಿಯ ದಾಳಿ ನಡೆಯಬಹುದಾದ ಲಕ್ಷಣಗಳು ಕಂಡುಬರುತ್ತಿವೆ. ಜರ್ಮನರ ದೊಡ್ಡ ಸೇನೆಗಳು ಬಾಲ್ಟಿಕ್ ತೀರದಲ್ಲಿ ಬಂದು ತುಂಬಿವೆ. ಮೆಮೆಲ್, ಡಾನ್ಜಿಗ್ ಮುಂತಾದ ಕಡೆ ಜರ್ಮನ್ ಸೈನ್ಯಗಳು ಸಮುದ್ರಕ್ಕೆ ಇಳಿದಿವೆ. ಜರ್ಮನರು, ಸ್ವೀಡನಿನ ಮೂಲಕ ನಾರ್ವೆಗೆ ತಮ್ಮ ಜನರನ್ನು ಕಳುಹಿಸಲು ಸ್ವೀಡನನ್ನು ಕೇಳಿದ್ದಾರೆ. ಇಲ್ಲಿನ ಪರಿಸ್ಥಿತಿ ಬಹಳ ಸಂದಿಗ್ಧವಾಗಿದೆ.

ಜರ್ಮನ್—ರುಮೇನಿಯಾ

ವ್ಯಾಪಾರದ ಒಪ್ಪಂದ ನಡೆಯಿತು. ಇದರಿಂದ ಜರ್ಮನಿಗೆ ಅಷ್ಟೊಂದು ಪ್ರಯೋಜನವಾಗದೆಂದು ಬ್ರಿಟನ್ ಸಾರಿದೆ. ಆದರೆ, ಜರ್ಮನಿಯ ಶಕ್ತಿ ಈ ಒಪ್ಪಂದದಿಂದ ಕೊಂಚ ಹೆಚ್ಚಿದಂತೆ ತೋರಿಬರುತ್ತಿದೆ.

ಮೆಡಿಟರೇನಿಯನಿನ ಭದ್ರತೆಗಾಗಿ

ಈ ವಿಷಯದಲ್ಲಿ ಇಟಲಿ ದೃಢಸಂಕಲ್ಪದಿಂದ ಮುಂದೊತ್ತುವಂತಿದೆ. ಅಲ್ಲಿನ ಪತ್ರಿಕೆಗಳೂ ಈ ಶ್ರೇಷ್ಠಾಧಿಕಾರದ ವಿಚಾರದಲ್ಲಿ ಅಬ್ಬರಿಸುತ್ತ, ಇಟಲಿಯ ಪರವಾಗಿ ಧಾರಾಳ ಪ್ರಚಾರ ಕಾರ್ಯನಡೆಸುತ್ತಿವೆ. ಸಿನ್ಯೋರಾ ಗ್ಯಂಟಾರವರು, ಈಚಿಗಿನ ತಮ್ಮದೊಂದು ಭಾಷಣದಲ್ಲಿ ಫ್ರಾನ್ಸನ್ನು ದೂಷಿಸುತ್ತ, "ಇಟಲಿ ಮೆಡಿಟರೇನಿಯನಿನ ಪ್ರಶ್ನೆಯನ್ನು ಈಗಲೇ ಪರಿಹರಿಸಬೇಕು. ಇಟಲಿಯವರು ಮುಸ್ಸೋಲಿನಿಯವರಿಗೆ ವಿಧೇಯರಾಗಿ, ಕಾದಾಡಬೇಕು" ಎಂದಿದ್ದಾರೆ. ಆದರೆ ಈ ಭಾಷಣವನ್ನು ಮುಸಲೋನಿ ಅಷ್ಟಾಗಿ ಅನುಮೋದಿಸಲಿಲ್ಲವೆಂದು ವಾರ್ತೆ.

ಬೆಲ್ಜಿಯಂ ಮಂತ್ರಿಮಂಡಲದ ರಾಜೀನಾಮೆ

ಬೆಲ್ಜಿಯಂ ಸರಕಾರದ ವಿದ್ಯಾಸಿತಿಯ ವಿಷಯದಲ್ಲಿ ಅಭಿಪ್ರಾಯ ಭೇದ ವುಂಟಾಗಿ ಆ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದ್ದು ಅನಂತರ ಅಲ್ಲಿನ ಅರಸರ ವಿನಂತಿಯಂತೆ ಆ ರಾಜಿನಾಮೆಯನ್ನು ಹಿಂದೆಳೆದಿದೆ.

ನಾರ್ವಿಕಿನಲ್ಲಿ

ಇಲ್ಲಿ ಬ್ರಿಟಿಷ್ ಸೈನ್ಯಗಳು ಪರಾಕ್ರಮದಿಂದ ಹೋರಾಡುತ್ತ ಜರ್ಮನಿಯ ಹಲವು ದಿಸ್ಟ್ರಾಯರುಗಳನ್ನು ಮುಳುಗಿಸಿದುವು. ಆದರೆ ಟ್ರಾಂಡಾ ಹಜೆಮ್ಮಿನಲ್ಲಿ ಜರ್ಮನರು ಮುಂದೊತ್ತುತ್ತಿದ್ದಾರೆ. ಪುನಃ ನಾರ್ವಿಕ್‌ನಲ್ಲಿ ಘೋರ ಕಾದಾಟ ಪ್ರಾರಂಭವಾಗಿದೆ. ಸ್ಟೆಂಕ್‌ಜರ್‌ನಲ್ಲಿಯೂ ಭಾರಿ ಯುದ್ಧನಡೆಯುತ್ತಿದೆ. ಮುಖ್ಯ ಪ್ರದೇಶಗಳಲ್ಲೊಂದಾದ ರೋಯಿರೋಸ್ ಶತ್ರುಗಳ ವಶವಾಗಿದೆ.

ತಾಟಸ್ಥ್ಯರ ವಸಾಹತುಗಳು

ತಾಟಸ್ಥ್ಯ ರಾಷ್ಟ್ರಗಳಾದ ಹೋಲೆಂಡ್ ಮತ್ತು ಬೆಲ್ಜಿಯಮ್‌ಗಳು ಯುದ್ಧಭೂಮಿಗಳಾಗಿ ವೈರಿಗಳ ವಶವಾದರೆ, ಅವರ ವಸಾಹತುಗಳಾದ ಡಚ್ ಈಸ್ಟ್ ಇಂಡೀಸ್ ಮೊದಲಾದುವುಗಳನ್ನು ವೈರಿಗಳು ಹಿಡಿಯದಂತೆ ನಾವು ಯತ್ನಿಸದಿರೆವು" ಎಂದು ಮಿ। ಚೇಂಬರ್ಲೇನರು ಭರವಸೆ ಇತ್ತಿದ್ದಾರೆ.

ವಾನ್ ರಿಬನ್ ಟ್ರಾಪರ ಭಾಷಣ

ಬರ್ಲಿನ್ ಛಾನ್ಸಲರಿಯಲ್ಲಿ ರಿಬನ್ ಟ್ರಾಪರು ಭಾಷಣಮಾಡುತ್ತ ಯುದ್ಧದ ಜ್ವಾಲೆ ಹರಡಲು ಬ್ರಿಟಿಷರೇ ಕಾರಣರೆಂದು ದೂರಿದರು. ಅದರಲ್ಲಿ ಬ್ರಿಟನರು ಮೈನ್ ಹಾಕಿದ ವಿಚಾರ, ಫಿನ್‌ಲ್ಯಾಂಡಿಗೆ ಬ್ರಿಟನ್ ಕೊಟ್ಟ ಸಹಾಯದ ವಿಚಾರ, ಇವನ್ನೆಲ್ಲ ಟೀಕಿಸಿ ದೂರಿದರು.

ಇಟಲಿಯ ಧೋರಣೆ

ಇತ್ತೀಚೆಗೆ ಭೂಮಧ್ಯ ಸಮುದ್ರವಲಯದಲ್ಲಿ ಇಟಲಿಯ ಚಲನವಲನಗಳನ್ನು ಕಂಡರೆ ಯಾವುದೋ ಸಿದ್ಧತೆಯ ವಿಷಯವು ತಿಳಿದು ಬರುತ್ತದೆ. ಆದಾಗಿ, ಮಿತ್ರರಾಷ್ಟ್ರಗಳು ಈ ಬಗ್ಗೆ ಬಹಳ ಎಚ್ಚರಿಕೆಯಿಂದಿವೆ.

ನಾರ್ವೆಯ ಯುದ್ಧ:—ನಾರ್ವೆಯಲ್ಲಿ ಈಗ ಕೆಲದಿನಗಳಿಂದ ಮಿತ್ರರಾಷ್ಟ್ರಗಳ ಸೈನಿಕರು ಹಿಂದಾಗಿ, ಜರ್ಮನರು ಮುಂದೊತ್ತುವುದಾಗಿ ವಾರ್ತೆಯಿದೆ. ಓಸ್ಲೊ ಮತ್ತು ಟ್ರೊಡ್‌ಜೆಂಗಳ ಮಧ್ಯ ಭೂಮಿಯನ್ನು ಜರ್ಮನರು ಸ್ವಾಧೀನಪಡಿಸಿ ಸೇರಿಸಿಕೊಂಡಿರುವುದಾಗಿ ಸುದ್ದಿ.

ಬಾಲ್ಕನ್ ರಾಷ್ಟ್ರಗಳು:—ಬಾಲ್ಕನ್ ರಾಷ್ಟ್ರಗಳು ಈಗ ಟರ್ಕಿಯ ಮುಂದಾಳುತನದಿಂದ ಐಕ್ಯವಾಗುವ ಯೋಚನೆಮಾಡುತ್ತಿವೆ. ಶಸ್ತ್ರಸೈನಿಕರ ಸಹಾಯವು ಅನ್ಯೋನ್ಯ ಸಿಗುವಂತೆ ಒಪ್ಪಂದವಾಗಬೇಕೆಂಬ ಮಾತುಕತೆಯಿದೆ.

ಯುಗೋಸ್ಲೇವಿಯದ ಮೇಲೆ:—ಜರ್ಮನಿಯು ಈಗ ಯುಗಸ್ಲೋವಿಯದ ಮೇಲೆ ನಿರ್ನಿಮಿತ್ತ ಕಲಹವನ್ನು ಹುಟ್ಟಿಸುವ ಕಾರಣವನ್ನು ಹುಡುಕುತ್ತಿದೆಯೆಂದೂ ರಾಜನೀತಿಜ್ಞರು ನುಡಿಯುತ್ತಾರೆ.

ಯುಗೋಸ್ಲೇವಿಯದ ಆಕ್ರಮಣವೇ:—ಇಟೇಲಿಯು ಜುಗೋಸ್ಲೇವಿಯದ ಮೇಲೆ ಆಕ್ರಮಣ ಯುದ್ಧ ನಡೆಸುವ ಸಿದ್ಧತೆಯಲ್ಲಿದೆಯೆಂದೂ ರೋಮಿನಲ್ಲಿ ಯುದ್ಧ ಸಿದ್ಧತೆಗಳು ಭರದಿಂದ ಆಗುತ್ತಿವೆಯೆಂದೂ, ಗಡಿಭೂಮಿಯಲ್ಲಿ ಇಟಲಿ ಸೈನ್ಯಗಳು ಒಟ್ಟಾಗುತ್ತಿದೆಯೆಂದೂ ಸುದ್ದಿ.

ಜೋಧಪುರ

ಜೋಧ್ಪುರದಲ್ಲಿ "ಲೋಕಪರಿಷತ್ತಿನ" ಕಡೆಯಿಂದ ಚಳವಳವು ಆರಂಭವಾಗಿದ್ದು ರಾಜಾಜ್ಞೆಯನ್ನು ಮೀರಿದರೆಂದು ೩—೪ ಮಂದಿ ಸರ್ವಾಧಿಗಳ ಸೆರೆಯಾಗಲೇ ನಡೆದಿದೆ.



ದೇಶವನ್ನು ಪಾಲುಮಾಡಬೇಕೆಂದು ಮುಸ್ಲಿಮರು ಅಪೇಕ್ಷಿಸುವುದಿಲ್ಲ

ಜಿನ್ನರ ಯೋಜನೆಗೆ ಮುಸ್ಲಿಮರ ನಿಷೇಧ!

ಡಿಲ್ಲಿಯ ಅಜಾದ್ ಮುಸ್ಲಿಮ್ ಸಮ್ಮೇಳನ

ಜನತಾ ಸತ್ಯಾಗ್ರಹವು ಆಗುವುದಿಲ್ಲ - ದೇಶದ ಧುರೀಣರ ಮೇಲೆ ಡಿಫೆನ್ಸ್ ಆಕ್ಟು

ಡಿಲ್ಲಿ ಮುಸ್ಲಿಂ ಪರಿಷತ್ತು

ಡಿಲ್ಲಿಯಲ್ಲಿ ಅಜಾದ್ ಮುಸ್ಲಿಂ ಪರಿಷತ್ತು ಬಹಳ ವಿಜೃಂಭಣೆಯಿಂದ ಜರಗಿ, ಅಖಿಲಭಾರತದ ರಾಷ್ಟ್ರೀಯ ವಾದೀ ಮುಸ್ಲಿಮರ ಅಭಿಮತವೇನೆಂಬುದನ್ನು ಸ್ಪಷ್ಟವಾಣಿಯಲ್ಲಿ ತಿಳಿಸಿದ್ದು ಈ ವಾರದ ಭಾರತದ ರಾಜಕೀಯ ವಾರ್ತೆಯಲ್ಲಿ ಅತ್ಯಂತ ಮಹತ್ವದ ವಿಷಯವಾಗಿದೆ. ತಾ ೩೦ಕ್ಕೆ ಪರಿಷತ್ತು ಕೊನೆಗೊಂಡಿತು ಜಿನ್ನರು ಹೇಳುವ ದೇಶವಿಭಜನೇಯು ಅನ್ಯಾಯವುದ್ದೆಂದೂ, ರಾಷ್ಟ್ರದ್ರೋಹದ್ದೆಂದೂ ಆ ಪರಿಷತ್ತಿನಲ್ಲಿ ನಿರ್ಣಯ ಮಾಡಲಾಯಿತು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಸಿಗಬೇಕೆಂದು ಹೇಳಿಕೆಯಾಯಿತು ರಾಷ್ಟ್ರಘಟನಾ ಸಮಿತಿಯು ಏರ್ಪಡಬೇಕೆಂದು ಸಾರಲಾಯಿತು ಈ ಪರಿಷತ್ತಿನಲ್ಲಿ ೨೭ ಸದಸ್ಯರಿಂದ ಸೇರಿದ ಒಂದು ಕೂಟವು ಸ್ಥಾಪಿತವಾಗಿ ಅವರು ಮುಂದಿನ ಪರಿಷತ್ತಿಗೆ ಹಿಂದೂ ಮುಸ್ಲಿಂ ಐಕ್ಯಸೂತ್ರವನ್ನು ವಿರಚಿಸಿ ಮುಂದಿಡಬೇಕೆಂಬ ನಿರ್ಣಯವಾಯಿತು ಮುಸ್ಲಿಮರು ಸ್ವಾತಂತ್ರ್ಯಕ್ಕಾಗಿ ಕಾದಾಡಲು ಸಿದ್ಧರಿರುವುದಾಗಿ ತಿಳಿದುಬಂತು

ಭಾರತದ ಅನೇಕ ರಾಜಕೀಯ ಮುಸ್ಲಿಂ ಮುಖಂಡರು ಪರಿಷತ್ತಿನಲ್ಲಿ ಭಾಗವಹಿಸಿದ್ದರು

ಡಾ। ಬಾರ್ಗವರು

ಪಂಜಾಬ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಮುಂದಾಳುವಾದ ಡಾ। ಬಾರ್ಗವರು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಕಾಂಗ್ರೆಸಿನ ಅನುಜ್ಞೆಯಂತೆ ರಚನಾತ್ಮಕ ಕಾರ್ಯವನ್ನು ಮಾಡಲು ತೊಡಗಿದ್ದಾರೆ ಎಸೆಂಬ್ಲಿ ಸದಸ್ಯರು ಅವರಿಗೆ ಪಾರ್ಟಿಯಿತ್ತು ಸತ್ಕರಿಸಿ ಅವರ ರಾಜನೀತಿಜ್ಞತೆಯನ್ನು ಕೊಂಡಾಡಿದರು. "ನನಗೆ ನನ್ನ ದಳಪತಿಯ ಆಜ್ಞೆಯಾಗಿದೆ. ಆದರೆ, ನಾನು ನ್ಯಾಯವಿದಾಯಕ ಸಭೆಯ ಹೊರಗಿದ್ದರೂ ಪ್ರಾಂತದ ಆಡಳಿತದಲ್ಲಿ ಸಹಕರಿಸುವೆನು" ಎಂದು ಡಾ। ಬಾರ್ಗವರು ಪಾರ್ಟಿಯಲ್ಲಿ ಉತ್ತರವೀಯುತಾ ಹೇಳಿದರು.

ಹಿಂದೂಸ್ಥಾನ್ ಸ್ಟಾಂಡರ್ಡ್ ಮೇಲಿನ ಪ್ರತಿಬಂಧ ಕಾಜ್ಞೆ

ಹಿಂದೂಸ್ಥಾನ್ ಸ್ಟಾಂಡರ್ಡ್ ಪತ್ರಿಕೆಯು ಅಗ್ರ ಲೇಖನವನ್ನು ಬರೆಯುವ ವಿಚಾರದ ಬಗ್ಗೆ ಮಾಡಿದ ಪ್ರತಿಬಂಧಕಾಜ್ಞೆಯನ್ನು ಬಂಗಾಲಾ ಸರ್ಕಾರವು ತೆಗೆದು ಹಾಕಬೇಕೆಂದು ನಿರ್ಧರಿಸಿದೆ.

ಜನತೆಗೆ ನಿರ್ಧರಣಾಧಿಕಾರವಿದೆ

ಗಾಂಧಿಜಿಯವರ ಹೇಳಿಕೆ

ಕಳೆದವಾರ ನ್ಯೂಯಾರ್ಕ್ ಟೈಮ್ಸಿನ ಪ್ರತಿನಿಧಿಗೆ ಗಾಂಧಿಜಿಯವರು ಸಂದರ್ಶನವಿತ್ತಾಗ ಆತನು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಇಂದಿನ ಪ್ರಶ್ನೆಯೆಂದರೆ ಭಾರತೀಯರಿಗೆ ಆತ್ಮ ನಿರ್ಧಾರದ ಅಧಿಕಾರವಿದೆಯೆಂದು ಬ್ರಿಟಿಷರು ತಿಳಿದುಕೊಳ್ಳುವುದಾಗಿದೆ ಒಬ್ಬ ನಿಷ್ಪಕ್ಷಪಾತಿಯಾದ ಇಂಗ್ಲೀಯನೂ ಅಂತೆಯೇ ಒಬ್ಬ ಭಾರತೀಯನೂ ಕಲಿತ ಚರ್ಚಿಸಿದರೆ ಕೊನೆಗೆ ರಾಷ್ಟ್ರಘಟನಾ ಸಮಿತಿಯನ್ನು ಮಾಡುವ ಯೋಜನೆಯನ್ನೇ ಮಾಡತಕ್ಕದೆಂದು ಅವರಿಬ್ಬರೂ ನಿರ್ಧಾರಕ್ಕೆ ಬರುವರು ಹೀಗೆಂದು ಹೇಳಿದರು

ಪ್ರಶ್ನೆ: ನಿಮ್ಮ ಜೀವನಕಾಲದಲ್ಲಿಯೇ ಭಾರತವು ಸ್ವತಂತ್ರವಾದರೆ ನೀವು ಮುಕ್ತ ವರ್ಷಗಳಲ್ಲಿ ಏನು ಮಾಡುವಿರಿ.

ಉತ್ತರ–ನನ್ನ ಜೀವನ ಕಾಲದಲ್ಲಿಯೇ ಭಾರತವು ಸ್ವತಂತ್ರವಾಗಿ, ಮತ್ತೂ ನನ್ನಲ್ಲಿ ಕಾರ್ಯಮಾಡಲು ಶಕ್ತಿಯುಳಿದಿದ್ದರೆ, ನಾನು ಖಂಡಿತವಾಗಿ ನಾನು ಮಾಡತಕ್ಕ ಕೆಲಸಗಳನ್ನು ಮಾಡುವೆನು. ಅಧಿಕಾರಗಳಿಂದ ಹೊರಗಿದ್ದು, ಅಹಿಂಸೆಯು ಮತ್ತು ಪ್ರಭಾವದಿಂದ ನೆಲಸುವಂತೆ ಮಾಡಲು ಯತ್ನಿಸುವೆನು.

ಸ್ವಾಮಿ ಸಹಜಾನಂದರಿಗೆ ಕಠಿಣ ಶಿಕ್ಷೆ

ಅಖಿಲಭಾರತ ಕಿಸಾನ್ ಸಭೆಯ ಮುಖ್ಯ ಕಾರ್ಯದರ್ಶಿ ಸ್ವಾಮಿ ಸಹಜಾನಂದರ ವಿಚಾರಣೆಯಾಗಿ ಒಂದು ವರುಷ ಕಠಿಣ ಸಜೆ ವಿಧಿಸಲ್ಪಟ್ಟಿದೆ ಅವರ ಮೇಲೆ ಮೂರು 'ಚಾರ್ಜ'ಗಳಿದ್ದು ಪ್ರತಿಯೊಂದಕ್ಕೂ ಒಂದೊಂದು ವರುಷದ ಕಠಿಣ ಸಜೆಯನ್ನು ಬಿಹಾರಿನ ಸಬ್ ಡಿವಿಜನಲ್ ಆಫೀಸರರು ವಿಧಿಸಿದರು ಶಿಕ್ಷೆಗಳನ್ನು ಒಟ್ಟಿಗೆ ಅನುಭವಿಸಬಹುದಾಗಿದೆ. ಸ್ವಾಮೀ ಸಹಜಾನಂದರು ನಗುಮುಖದಿಂದ ತೀರ್ಪನ್ನು ಕೇಳಿದರು. ಅವರನ್ನು ಹಜಾರಿಬಾಗ್ ಜೈಲಿಗೆ ಕಳುಹಿಸಲಾಗಿದೆ.

ಶ್ರೀ ಎಚ್. ವಿ. ಕಾಮತರ ಬಿಡುಗಡೆ

ಎಪ್ರಿಲ್ ತಾ. ೭ರಲ್ಲಿ ಬೊಂಬಾಯಿಯ ಫೋರ್ವರ್ಡ್ ಬ್ಲೋಕಿನವರು ನಡೆಸಿದ್ದ ಸಭೆಯೊಂದರಲ್ಲಿ ದಸ್ತಗಿರಿ ಮಾಡಲ್ಪಟ್ಟು ಜಮಾನಿನಲ್ಲಿ ಬಿಡಲ್ಪಟ್ಟಿದ್ದ ಶ್ರೀ. ಎಚ್. ವಿ. ಕಾಮತರ ವಿಚಾರಣೆ ಎಪ್ರಿಲ್ ತಾ. ೨೯ರಲ್ಲಿ ನಡೆದು ಅವರು ಬಿಡುಗಡೆಹೊಂದಿರುವರು. ಶ್ರೀ ಕಾಮತರ ವಿರುದ್ಧ ಸಾಕ್ಷಿಗಳು ತಮ್ಮಲ್ಲಿಲ್ಲವೆಂದು ಪೋಲೀಸರು ಹೇಳಿದುದರಿಂದ ಮೆಜಿಸ್ಟ್ರೇಟರು ಬಿಟ್ಟರು.

ಖಾಕ್ಸಾರರ ಠೇವಣಾತಿ

ಒಂದು ಲಕ್ಷರೂಪಾಯಿ ಸರ್ಕಾರಕ್ಕೆ ಸೇರಿತು

ಪಂಜಾಬ್ ಸರ್ಕಾರದ ಪ್ರತಿಕ್ರಿಯೆ

ಖಾಕ್ಸಾರ್ ಚಳುವಳಿಗೆ ಸಂಬಂಧಪಟ್ಟ ಸಂಘಗಳು ಪಂಜಾಬಿನಲ್ಲಿಯೂ ಡಿಲ್ಲಿ ಪ್ರಾಂತದಲ್ಲಿಯೂ ಬ್ಯಾಂಕುಗಳಲ್ಲಿ ಒಂದು ಲಕ್ಷರೂಪಾಯಿಗಿಂತಲೂ ಹೆಚ್ಚಾಗಿ ಠೇವಣಿಗಳನ್ನು ಇಟ್ಟಿದ್ದವು ಈ ಮೊಬಲಗೆಲ್ಲವನ್ನೂ ತಮ್ಮ ಅಧೀನಕ್ಕೆ ತೆಗೆದುಕೊಳ್ಳಲಾಗಿದೆಯೆಂದು ಪಂಜಾಬ್ ಮತ್ತು ಡೆಲ್ಲಿ ಸರ್ಕಾರಗಳು ತಿಳಿಸಿರುತ್ತವೆ ಖಾಕ್ಸಾರರ ಮುಖಂಡರಾದ ಅಲ್ಲಾಮ ಮಶ್ರಿಕಿಯವರ ಹೆಸರಿನಲ್ಲಿ ಈ ಮೊಬಲಗೆಲ್ಲವನ್ನೂ ಠೇವಣಿ ಇಡಲಾಗಿತ್ತು

ಶ್ರೀ. ಪಂಚಾನನ ಚಕ್ರವರ್ತಿ

ಡಿಫೆನ್ಸ್ ಆಫ್ ಇಂಡಿಯಾ ಕಾಯಿದೇಮೇರೆಗೆ ದಸ್ತಗಿರಿ

ಮಿದ್ನಾಪುರದ ಸಬ್ ಡಿವಿಜನ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಫಾರ್ವರ್ಡ್ ಬ್ಲಾಕಿನ ಪ್ರಮುಖ ಸದಸ್ಯರೂ ಆದ ನಾಜ, ಡೆಟಿನ್ಯೂ ಶ್ರೀ ಪಂಚಾನನ ಚಕ್ರವರ್ತಿಯವರನ್ನು ಡಿಫೆನ್ಸ್ ಆಫ್ ಇಂಡಿಯಾ ಕಾಯಿದೆ ಮೇರೆಗೆ ದಸ್ತಗಿರಿ ಮಾಡಲಾಯಿತು

ಮುಷ್ಕರ

ಬೊಂಬಾಯಿನಗರದಲ್ಲಿ ಮೋಟಾರ್ ಲಾರಿಗಳ ಮಾಲಕರು ಲಾರಿಗಳ ಸಂಬಂಧವಾದ ಕೆಲವೊಂದು ತೆರಿಗೆಗಳ ಕುರಿತು ಪ್ರತಿಭಟಿಸಿ, ಮುಷ್ಕರ ಹೂಡಿರುತ್ತಾರೆ

ರಾಷ್ಟ್ರೀಯ ಮುಸ್ಲಿಂ ಪರಿಷತ್ತು

ಹೊಸ ಡಿಲ್ಲಿಯಲ್ಲಿ ಅಜದ್ ಮುಸ್ಲಿಮರದೊಂದು ಪ್ರಚಂಡ ಕಾನ್ಫರೆನ್ಸ್ ಮಹಾ ವೈಭವದಿಂದ ನೆರವೇರಿದಾಗ ಅಧ್ಯಕ್ಷರಾದ ಖಾನ್ ಬಹದೂರ್ ಅಲ್ಲಾ ಭಕ್ಷರು,' ಇಂಡಿಯದವರಿಗೆ ತಮ್ಮ ರಾಜ್ಯಘಟನೆಯ ನಿರ್ಮಾಣದ ಕುರಿತಾಗಿರುವ ಸ್ವಾತಂತ್ರ್ಯದ ಕುರಿತು ವಿವರಿಸಿ, ಮುಸ್ಲಿಂ ಲೀಗಿನ ಪಾಕಿಸ್ಥಾನದ ಯೋಜನೆಯನ್ನು ಖಂಡಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಖಾನ್ ಬಹದೂರ್ ಶೇಕ್ ಮಹಮ್ಮದ್ ಜಾನರು ಸ್ವಾಗತ ಭಾಷಣ ಮಾಡಿದರು ಸಮಗ ಭಾರತ ನ್ಯಾಶನಲಿಸ್ಟ್ ಮುಸ್ಲಿಮರ ಮುಂದಿನ ಕಾನ್ಫರೆನ್ಸ್ ಬೊಂಬಾಯಿಯಲ್ಲೆಂದು ತಿಳಿದುಬಂದಿದೆ

ಪತ್ರಿಕೆಗಳ ಮೇಲೆ ಗದೆ!

ಪಾಟ್ನಾದ ಹಿಂದೀ ವಾರಪತ್ರಿಕೆಯಾದ "ಜನತಾ"ದ ಸಂಪಾದಕ ಮತ್ತು ಮುದ್ರಕರಿಂದ ತಲಾ ೨—೨ ಸಾವಿರದ ಸೆಕ್ಯುರಿಟಿಯನ್ನು ಬಿಹಾರ್ ಸರಕಾರವು ಕೇಳಿದೆ

ಆಗ್ರಾದಲ್ಲಿ "ಸೈನಿಕ" ಪತ್ರಿಕೆಯ ಸಂಪಾದಕರಾದ ಶ್ರೀ ಜೀವಾರಾಂ ಪಾಲಿವಾಲರನ್ನೂ, 'ತಾಜಾತರ್" ಪತ್ರಿಕೆಯ ಸಂಪಾದಕ ಶ್ರೀ ಗಣಪತ್ ಚಂದ್ರ ಕಾಲೇ ಹಾಗೂ ಅದರ ಉಪಸಂಪಾದಕ ಶ್ರೀ ನಾಮಿಚಂದರನ್ನೂ ಡಿಫೆನ್ಸ್ ಆಕ್ಟಿನ ಮೇರೆಗೆ ಕೈದುಮಾಡಲಾಗಿದೆ

ರಂಗೂನಿನ ದಂಗೆ

ರಂಗೂನಿನಲ್ಲಿ ಇತ್ತೀಚೆಗಿನ ದಂಗೆ, ಗಲಭೆಗಳ ಪರಿಣಾಮವಾಗಿ ಇದುವರೆಗೆ ೧೬೫ ಮಂದಿ ಗಾಯ ಪಡೆದಿದ್ದಾರೆ, ೫೩ ಮಂದಿ ಆಸ್ಪತ್ರೆಯಲ್ಲಿದ್ದಾರೆ. ಸತ್ತವರು ೨೦ ಮಂದಿ, ಕೈದಿಗೊಳಗಾದರವರು ೭೮೫ ಮಂದಿ ಎಂದ ಪ್ರಕಟವಾಗಿದೆ .

ಪಂಚ್ಕದಾಯಿ

(ಕೊಂಕಣಿ ಭಾಷೆನ್)

ಲೇಖಕು ಪ್ರಕಾಶಕು

ಕೊಂಕಣಿ ಬಾಷಾಪ್ರೇಮಿ ಕೊಂಕಣಿ ಬಾಷಾ ಸಾಹಿತ್ಯ ಮಂದಿರ್ ಬಂಟ್ವಾಳ ದ. ಕ

ನವರಸ ಭರಿತ ಶೃಂಗಾರ್ದಯುಕ್ತ ಜಾವ್ನು ಆಶ್ಶಿಲೊ

ಪಾಂಚ ಕಾಣ್ಯೆಂಚೆ ಪುಸ್ತಕ

ತುಮ್ಕಾಂ ಶುರುಥೋನ್ಸುಗ್ ಅಖೇರಿತಾಂಯಿ ಆನಂದಸಾಗರಾಂತು ಲೋಳ್ಯಿತಾ. ವಾಚ್ಶೆಲಿ ತಿಕ್ಲೆ ಪ್ರಾಣ್ಯಾ

ಹೀ ಪಂಚ್ಕದಾಯಿ ಸರ್ವಾನಿಂ ಘಾವ್ನು ಮಾತೃಬಾಷಾ ಸೇವೆಕ ಪಾತ್ರ ಜಾವ್ಯಾ ಮ್ಹಣು ಭಾಷಾಭಿಮಾನಿಂಲ್ಯಾಗಿ ಆಮ್ಚಿ ವಿನಂತಿ.

ಕೊಂಕಣಿ ಬಾಷೇನ ನವೀನ ಅತ್ಯಾಧುನಿಕ ರೀತಿನ ಬರ್ಯಿಲೆಲಿ ಸಾಮಾಜಿಕ್ ವ ನೈತೀಕ ಕಾಣ್ಯೊ ಮೋಲ 0—1—0

ಹ್ಯಾ ನಂತರ ಕೆ. ಎಂ. ಪ್ರಭು ವಿರಚಿತ ಭಜನಾವಳಿ ಆನಿ ಗ್ನಾನ್ ಝುಳಕಿ ಕಾಣ್ಯೆ, ವ ಪದಾಂಚಿ ಪುಸ್ತಕಾಂ ಆಮ್ಗೇಲೆಯು ವಿಕ್ರಿಕಾಕ ಮೆಳ್ತಾತಿ.

ದಿ ಕೊಂಕಣಿ ಭಾಷಾ ಸಾಹಿತ್ಯ ಮಂದಿರ, ಬಂಟ್ವಾಳ್, ದ. ಕ.

[೧ನೇ ಪುಟದಿಂದ ಮುಂದುವರಿದುದು]

ಮುಹಮ್ಮದ್ ಪೈಗಂಬರರ ದಿನಾಚರಣೆ:—ಮುಹಮ್ಮದ್ ಪೈಗಂಬರರ ದಿನಾಚರಣೆಯು ಇದೇ ತಿಂಗಳ ತಾ ೨೧ನೇ ಆದಿತ್ಯವಾರ ದಿವಸ ಬಹಳ ವಿಜೃಂಭಣೆಯಿಂದ ಜರಗಿತು. ಗಂಟೆ ೨-೩೦ಕ್ಕೆ ಮೌಲೂದ್ ಓದಲಾಗಿ, ಗಂಟೆ ೪-೩೦ಕ್ಕೆ ಒಂದು ಮೆರವಣಿಗೆಯು ಜುಮ್ಮಾ ಮಸೀದಿಯಿಂದ ಹೊರಟು ಪಟ್ಟಣದ ಮುಖ್ಯ ಬೀದಿಗಳಲ್ಲಿ ಸಂಚರಿಸಿತು. ಸಾರ್ವಜನಿಕ ಸಭೆಯು ಜುಮ್ಮಾ ಮಸೀದಿಯ ವಠಾರದಲ್ಲಿ ಜನಾಬ್ ಸಯದ್ ಯೂಸುಫ್ ಕೋಯಾ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ

ವರ್ಧಂತಿ ಉತ್ಸವ:—ಡಾಕ್ಟರ ಕೆ. ವಿ. ಕೆ. ಉಪಾಧ್ಯಾಯರ ಶ್ರೀ ಕೃಷ್ಣ ಆಯುರ್ವೇದ ಫಾರ್ಮಸಿಯ ವರ್ಧಂತಿ ಉತ್ಸವವು ತಾ ೬-೪-೪೦ರ ದಿನ ಡಾಕ್ಟರ ಪಿ. ಭವಾನಿ ರಾವ್, ಯಂ. ಬಿ. ಸಿ. ಯಂ. ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಲಘು ಉಪಹಾರದಿಂದ ಆಮಂತ್ರಿತ ಸದ್ಗೃಹಸ್ಥರ ಸತ್ಕಾರ ಉಪಚಾರಗಳಾದ ಬಳಿಕ ಡಾಕ್ಟರ ಆರ್ ವಿ ಪ್ರಭು ಕಟೀಲ ಗಣಪತಿ ಶರ್ಮ ಮೊದಲಾದವರು ವಿವಿಧ ಚಿಕಿತ್ಸಾ ಕ್ರಮಗಳ ಸಮನ್ವಯವೂ ನ ಆಯುರ್ವೇದ ಪ್ರಶಸ್ತಿಯ ಕುರಿತು ಸಂದರ್ಭೋಚಿತವಾಗಿ ಮಾತನಾಡಿದರು ಅನಂತರ ಅಧ್ಯಕ್ಷರು ಆಯುರ್ವೇದ ಎಲೊಪೇಥಿ ಕ್ರಮಗಳಲ್ಲಿರುವ ಕೆಲವು ಕೊರತೆಗಳನ್ನು ತೋರಿ ಕೊಟ್ಟು ಎಲೊಪಥಿಯಂತೆ ಆಯುರ್ವೇದವು ಒಂದು ವಿಜ್ಞಾನವಾಗಿರುವದೆಂದೂ ಆದರೆ ಅದರಲ್ಲಿ ಶೋಧನೆಯ ಅಗತ್ಯವಿದೆ ಎಂದೂ ಈ ಎರಡು ಶಾಸ್ತ್ರಗಳಲ್ಲಿರುವ ಕುಂದುಕೊರತೆಗಳನ್ನು ದೂರಮಾಡಿ ಎರಡರ ಸಮನ್ವಯದಿಂದ ರೋಗಿಗಳ ಚಿಕಿತ್ಸೆಗೆ ತೊಡಗುವದರಿಂದ ಪ್ರಪಂಚಕ್ಕೆ ಮಹದುಪಕಾರವಾಗುವದೆಂದೂ ಭಾಷಣಮಾಡಿ ಡಾಕ್ಟರ ಕೆ ವಿ ಕೆ. ಉಪಾಧ್ಯಾಯರ ಫಾರ್ಮಸಿಗೆ ಸಂಪೂರ್ಣ ಯಶಸ್ಸನ್ನು ಕೋರಿದರು. ಸಂಗೀತ ಮತ್ತು ಧನ್ಯವಾದ ಸಮರ್ಪಣೆಯೊಂದಿಗೆ ಉತ್ಸವವು ಮುಗಿಯಿತು.

ಗ್ರ್ಯಾಂಟ ಕಡಿತದ ನಿಷೇಧ:—ಕಾರ್ಕಳ ತಾಲೂಕು ಎಜ್ಯುಕೇಶನ್ ಕಮಿಟಿಯ ಈ ತಿಂಗಳ ಸಭೆಯು ತಾ ೨೦-೪-೪೦ರ ದಿನ ಜನಾಬ್ ಯಚ್ ಯಸ್ ಹುಸೇನರ ಅಧ್ಯಕ್ಷತೆಯಲ್ಲಿ ನಡೆದು ಬಾಲಿಕಾ ಪಾಠಶಾಲೆಗಳ ಗ್ರ್ಯಾಂಟಿನಲ್ಲಾದ ಅಪಾರ ಕಡಿತವನ್ನು ನಿಷೇಧಿಸಿ ಈ ಶಾಲೆಗಳಿಗೆ ಕಡಿತದಿಂದಾದ ನಷ್ಟವನ್ನು ಸರಕಾರವು ತುಂಬಿಸಿ ಕೊಡಬೇಕೆಂದು, ಎಜ್ಯುಕೇಶನ್ ಕಮಿಟಿಯ ಮೆಂಬರುಗಳಿಗೆ ಸಿಟ್ಟಿಂಗ್ ಎಲೋವೆನ್ಸನ್ನು ಕೊಡಬೇಕೆಂದು ಸರ್ವಾನುಮತಿಯ ನಿರ್ಣಯಗಳಾದುವು

ಪ್ರಾಣಿಬಲಿಗೆ ವಿರೋಧ:—ಮುಂಬರುವ ಸ್ಥಳೀಯ ಮಾರಿ ಪೂಜೆಯ ಕಾಲದಲ್ಲಾಗುವ ಪ್ರಾಣಿಬಲಿಯನ್ನು ನಿಷೇಧಿಸಿ ವಿರೋಧಿಸುವದಕ್ಕೋಸ್ಕರ ಪ್ರಚಾರ ಕಾರ್ಯವನ್ನು ಮಾಡಲು ಬಿಲ್ಲವ ಸಮಾಜದ ಕೆಲವು ತರುಣ ಸುಧಾರಕರ ಒಂದು ಸಭೆಯು ಬೋರ್ಡ್ ಮ್ಯಾನ ಎಲಿಮೆಂಟರಿ ಶಾಲೆಯಲ್ಲಿ ಕೂಡಿ ಸಂದರ್ಭೋಚಿತ ಕಾರ್ಯಕ್ರಮವನ್ನು ರಚಿಸಿಕೊಳ್ಳಲಾಯಿತು.

ಪೈಗಂಬರ ದಿನಾಚರಣೆ:—ಈ ವರ್ಷ ಇದೇ ಮೊದಲನೇ ಬಾರಿಗೆ ಇಲ್ಲಿಯ ಮುಸಲ್ಮಾನರು ಮುಹಮ್ಮದ ಪೈಗಂಬರ ದಿನವನ್ನು ಸಭೆ ಭಾಷಣ, ಮೆರವಣಿಗೆ ಮೊದಲಾದವುಗಳ ಮೂಲಕ ಸಾರ್ವಜನಿಕ ರೀತಿಯಿಂದ ಆಚರಿಸಿದರು. ಮುಸ್ಲಿಂ ಲೀಗಿನ ಒಂದು ಶಾಖೆಯು ಇಲ್ಲಿ ತೆರೆಯಲ್ಪಟ್ಟಿರುವುದಾಗಿಯೂ ಅದಕ್ಕೆ ಸುಮಾರು ೨೦೦ ಮಂದಿ ಇಲ್ಲಿಂದ ಸದಸ್ಯರಾಗಿರುವರೆಂದು ತಿಳಿದುಬರುತ್ತದೆ.

ಕೋಅಪರೇಟಿವ್ ಸ್ಟೋರು:—ಇದರ ಕಾರ್ಯನಿರ್ವಾಹಕ ಮಂಡಳಿಯ ಒಂದು ಸಭೆಯು ಶ್ರೀ. ವಿ. ಶೆಣೈಯವರ ಅಧ್ಯಕ್ಷತೆಯಲ್ಲಿ ಕೂಡಿ, ಮೇ ತಿಂಗಳ ಮೊದಲನೇ ವಾರದಿಂದ ಸ್ಟೋರು ವ್ಯಾಪಾರ ವಹಿವಾಟನ್ನು ಆರಂಭಿಸಬೇಕೆಂದು ನಿರ್ಣಯ ಮಾಡಿ, ಬಾಡಿಗೆ ಕಟ್ಟಡವನ್ನು ತೆಗೆದುಕೊಳ್ಳುವ ಮತ್ತು ನೌಕರ ಚಾಕರರನ್ನು ನೇಮಿಸಿಕೊಳ್ಳುವ ಕುರಿತು ಕೆಲವು ಗೊತ್ತುವಳಿಗಳನ್ನು ಪಾಸು ಮಾಡಿತು.

ಪುತ್ತೂರು ಮುನ್ಸೀಫರ ವರ್ಗಾವರ್ಗಿ:—ಶ್ರೀ ಬಿ. ಲಕ್ಷ್ಮೀ ನಾರಾಯಣ ರೈಗಳವರಿಗೆ ಪುತ್ತೂರಿನಿಂದ ತಿನ್ನವೆಲ್ಲಿಗೂ ಅವರ ಸ್ಥಾನದಲ್ಲಿ ಶ್ರೀ. ಆರ್. ವೆಂಕಟೇಶ ಅಯ್ಯರಿಗೆ ಪೆನುಕೊಂಡದಿಂದ ಪುತ್ತೂರಿಗೂ ವರ್ಗವಾಗಿರುತ್ತದೆ.

ಉಡುಪಿ

ಸಹಕಾರ ಪ್ರಚಾರ ಸಭೆ:—ದ ಕ ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಆಶ್ರಯದಲ್ಲಿ ಮೊಂಡರ್ನ್ ಹಾ ಎ ಶಾಲೆಯಲ್ಲಿ ಸಹಕಾರ ಪ್ರಚಾರ ಸಭೆಯೊಂದು ಶ್ರೀ ಬಿ ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪಟ್ಟಣಿಗರ ಜೀವಾಳವೇ ಗ್ರಾಮಾಭಿವೃದ್ಧಿಯ ಮೇಲೆ ಅವಲಂಬಿಸಿರುವುದೆಂದೂ ಹಳ್ಳಿಗಳ ಆರ್ಥಿಕ ಸ್ಥಿತಿಯು ಸುಧಾರಿಸಿದ ವಿನಾ ಪೇಟೆಯವರ ಸಾಂಪತ್ತಿಕ ಸ್ಥಿತಿಯು ಅಭಿವೃದ್ಧಿ ಹೊಂದಲಾರದೆಂದೂ ಶ್ರೀ ಹಿ ರಾಮರಾಯ ಮಲ್ಯರು ಸೂಚಿಸಿ ಪಟ್ಟಣಿಗರು ಹೆಚ್ಚು ಹೆಚ್ಚಾಗಿ ಸಹಕಾರ ಚಳವಳದಲ್ಲಿ ಭಾಗವಹಿಸಬೇಕೆಂದರು ಶ್ರೀ|| ಬೀ ಅನಂತ ರಾಯರೂ ಶ್ರೀ ಯು ಗೋವಿಂದ ರಾಯರುರೂ ಮನೆ ಕೈಗಾರಿಕೆಗಳ ವಿಷಯ ಮಾತಾಡಿದ ಮೇಲೆ ಅಧ್ಯಕ್ಷರು ಗ್ರಾಮ ಗ್ರಾಮಗಳಲ್ಲಿ ಸಹಕಾರ ಚಳವಳವು ಹೆಚ್ಚು ಪ್ರಾಬಲ್ಯ ಬಾರದಿರಲು ಹಳ್ಳಿಗರಿಗೆ ಸಹಕಾರದ ಮೂಲಭೂತ ತತ್ವಜ್ಞಾನವಿಲ್ಲದಿರುವುದೊಂದೇ ಬಲವಾದ ಕಾರಣವೆಂದರು ಶ್ರೀ ಯು ಶಂಕರ ರಾಮರಾಯರು ಧನ್ಯವಾದಗಳನ್ನರ್ಪಿಸಿದರು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಸಂಸ್ಥಾನ ಹಾಗು ಸತ್ಯಾಗ್ರಹ

ಈಗ ಸತ್ಯಾಗ್ರಹ ಚಳವಳಿಯು ಅಥವ ಸವಿನಯ ಕಾಯಿದೆ ಭಂಗವು ಪ್ರಾರಂಭವಾದಲ್ಲಿ ಸಂಸ್ಥಾನ ಪ್ರಜಾಮಂಡಲ ಅಥವಾ ಸಂಸ್ಥಾನ ಕಾಂಗ್ರೆಸದ ಸ್ಥಾನವೇನಿರುವದೆಂಬ ಬಗ್ಗೆ ನಮ್ಮ ಕಡೆಗೆ ಅನೇಕ ಪತ್ರಗಳು ಬಂದಿವೆ ಮಹಾತ್ಮಾಗಾಂಧಿಯವರು ತಾ ೧೩ ೪ ೪೦ರ ಹರಿಜನದಲ್ಲಿ ಈ ವಿಷಯವಾಗಿ ಸ್ಪಷ್ಟಮಾಡಿರುವರು ಅದನ್ನೇ ಇಲ್ಲಿ ಕೊಡಲಾಗಿದೆ

ಸವಿನಯ ಕಾಯಿದೆ ಭಂಗವನ್ನು ಕಾಂಗ್ರೆಸು ಪ್ರಾರಂಭಿಸಿದಲ್ಲಿ ಅದು ಬ್ರಿಟಿಶ್ ಸರಕಾರದ ವಿರುದ್ಧ ಆಗುವದು. ಸಂಸ್ಥಾನದ ಜನರು ತಮ್ಮ ಸಂಸ್ಥಾನಗಳಲ್ಲಿ ಕಾಯಿದೆ ಭಂಗ ಮಾಡಲಾರರು ಮತ್ತು ಮಾಡತಕ್ಕದ್ದಲ್ಲ ಆದ್ದರಿಂದ ಸಂಸ್ಥಾನದ ಪ್ರಜಾಮಂಡಲಕ್ಕೂ ಕಾಯಿದೆ ಭಂಗ ಚಳವಳಿಗೂ ಯಾವ ಸಂಬಂಧವೇ ಇಲ್ಲ ಆದರೆ ಸಂಸ್ಥಾನಗಳಲ್ಲಿಯ ವ್ಯಕ್ತಿಗಳು ತಮ್ಮ ಇಷ್ಟವಿದ್ದಲ್ಲಿ ಬ್ರಿಟಿಶ್ ವಿಭಾಗದಲ್ಲಿ ಒಂದು ಕಾಯಿದೇ ಭಂಗ ಆಂದೋಲನಕ್ಕೆ ಸೇರಬಹುದು ಆದ್ದರಿಂದ ಇಂಥವರು ತಮಗೆ ಬ್ರಿಟಿಶ್ ಹದ್ದಿನಲ್ಲಿ ಸಮೀಪವಿದ್ದ ಕಾಂಗ್ರೆಸ ಸಮಿತಿಗಳಿಗೆ ತಮ್ಮ ಹೆಸರುಗಳನ್ನು ಕಳುಹಿಸಿ ಕೊಡಬೇಕು

ಇದರ ಮೇಲಿಂದ ಸಂಸ್ಥಾನದಲ್ಲಿಯ ಜನರು ಇಷ್ಟವಿದ್ದಲ್ಲಿ ಸಕ್ರಿಯ (Active) ಸತ್ಯಾಗ್ರಹಿ ಫಾರ್ಮುಗಳಿಗೆ ಸಹಿ ಮಾಡಿ ಕೊಡಬಹುದು. ಹಾಗು ಬ್ರಿಟಿಶ್ ವಿಭಾಗದಲ್ಲಿ ಬರುವ ಸತ್ಯಾಗ್ರಹ ಆಂದೋಲನಕ್ಕೆ ಸೇರಲೂ ಬಹುದೆಂಬುದು ಸ್ಪಷ್ಟವಾಗುವದು. ಆದರೆ ಸಂಸ್ಥಾನಗಳಲ್ಲಿ ಮಾತ್ರ ಸತ್ಯಾಗ್ರಹವನ್ನು ಹೂಡತಕ್ಕದ್ದಲ್ಲ

ಇನ್ನು ನಮ್ಮ ಕರ್ನಾಟಕದಲ್ಲಿಯ ಸಂಸ್ಥಾನದ ಜನರು ಇದಕ್ಕೂ ಕಾರ್ಯತಃ ಹೇಗೆ ತರಬೇಕು ಹಾಗು ಯಾವ ಕಾಂಗ್ರೆಸ ಸಮಿತಿಗೆ ತಮ್ಮ ಪ್ರತಿಜ್ಞಾಪತ್ರಗಳನ್ನು ಕಳುಹಿಸಬೇಕು ಇತ್ಯಾದಿಗಳನ್ನು ನಾಳೆ ತಾ. ೨೮-೪-೪೦ರ ಪ್ರಾಂತೀಯ ಸತ್ಯಾಗ್ರಹ ಸಮಿತಿಯ ಕಾರ್ಯಕಾರೀ ಮಂಡಲ ಸಭೆ ಮುಗಿದ ನಂತರ ಪ್ರಸಿದ್ಧ ಮಾಡಲಾಗುವದು ಎಂದು ಪ್ರಧಾನ ಕಾರ್ಯದರ್ಶಿಗಳಾದ ಚನ್ನಬಸಪ್ಪ ಅಂಬಲಿ ಇವರು ತಿಳಿಸುತ್ತಾರೆ

ಕ. ಪ್ರಾಂ. ಕಾಂ ಸಮಿತಿ

ಮೈಸೂರು ಸಂಸ್ಥಾನದಲ್ಲಿಯ ಕಾಂಗ್ರೆಸ್ ಸಮಿತಿಗಳು

ಹೋದ ವರುಷ ಮೈಸೂರು ಸಂಸ್ಥಾನದಲ್ಲಿ ಸತ್ಯಾಗ್ರಹ ಚಳವಳಿಯು ಇದ್ದುದರಿಂದ ಸಾಕಷ್ಟು ಕಾಂಗ್ರೆಸ ಸದಸ್ಯರಾಗಿರುವದಿಲ್ಲ ಕೆಲವು ಜಿಲ್ಲೆಗಳಲ್ಲಿಯಂತೂ ಏನೂ ಸದಸ್ಯತ್ವವಾಗಿರುವದಿಲ್ಲ ಇಂಥ ಸಂದರ್ಭದಲ್ಲಿ ಅಲ್ಲಿಯ ಕಾಂಗ್ರೆಸ ಸಮಿತಿಗಳು ಹೇಗೆ ಕಾರ್ಯನಡೆಸಬೇಕು ಎಂಬ ಬಗ್ಗೆ ನಮ್ಮ ಕಡೆಗೆ ಅನೇಕ ಪತ್ರಗಳು ಬಂದಿದ್ದವು ಈ ವಿಷಯವನ್ನು ಕೂಲಂಕಷವಾಗಿ ವಿಚಾರ ಮಾಡಿ ತಾ ೧೪ ೪-೪೦ನೇ ದಿವಸ ಸೇರಿದ ಕಾರ್ಯಕಾರೀ ಮಂಡಲವು—'ಹೊಸ ಸಮಿತಿಗಳು ಸ್ಥಾಪಿತವಾಗುವ ವರೆಗೆ ಹಳೇ ಸಮಿತಿಗಳೇ ಕಾರ್ಯ ನಡೆಯಿಸುತ್ತಿರಬೇಕು'ಎಂಬ ಆಶಯದ ಗೊತ್ತುವಳಿಯನ್ನು ಪಾಸುಮಾಡಿದೆ ಈ ವರುಷ ಹೊಸ ಸಮಿತಿಗಳನ್ನು ಸ್ಥಾಪಿಸಬೇಕಾದರೆ ಕಾಂಗ್ರೆಸ ಸದಸ್ಯರನ್ನು ಮಾಡಬೇಕಾಗುವದು ಕಾರಣ ಹೋದ ಸಲ ಅಧಿಕಾರೀ ವರ್ಗದಲ್ಲಿದ್ದವರೇ ಈ ಕೆಲಸವನ್ನು ಪ್ರಾರಂಭಿಸಬೇಕು ಕಾಂಗ್ರೆಸ ಸದಸ್ಯತ್ವ ಪುಸ್ತಕಗಳು ನಮ್ಮಲ್ಲಿ ಸಿದ್ಧವಾಗಿವೆ ಬೇಕಾದ ಜಿಲ್ಲಾ ಸಮಿತಿಗಳು ಅವುಗಳನ್ನು ತರಿಸಿಕೊಳ್ಳಬೇಕು ಒಂದು ಪುಸ್ತಕದ ಬೆಲೆ ೦-೨-೦ ಎರಡಾಣೆ ಆಗಿದೆ ಒಂದು ಪುಸ್ತಕದಲ್ಲಿ ೫೦ ಸದಸ್ಯರನ್ನು ಮಾಡಬಹುದು ಎಂದು ಪ್ರಧಾನ ಕಾರ್ಯದರ್ಶಿಗಳಾದ ಚನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ

ಶೋಲಾಪುರ

ಪ್ರತ್ಯೇಕ ಕರ್ನಾಟಕ ಪ್ರಾಂತ ಏಕೀಕರಣ ಪರಿಷತ್ತಿನ ಕೇಳಿಕೆ

ಶೋಲಾಪುರದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ೫ನೇ ಅಧಿವೇಶನವು ತಾ ೨೩ರಲ್ಲಿ ಆರಂಭವಾಯಿತು ಡಾ ನಾಗನ ಗೌಡರು ಅಧ್ಯಕ್ಷರಾಗಿದ್ದರು

ಸ್ವಾಗತಾಧ್ಯಕ್ಷರಾದ ಶ್ರೀ ಜಿನರಾಜ ಹೆಗ್ಗಡೆಯವರು ಅತಿಥಿಗಳಿಗೆ ಸ್ವಾಗತ ಸಮರ್ಪಿಸುತ್ತ ಕನ್ನಡಿಗರೆಲ್ಲ ಒಂದುಗೂಡಿ ಪ್ರತ್ಯೇಕ ಪ್ರಾಂತವನ್ನು ರಚಿಸಬೇಕು, ಭಾಷಾನುಗುಣವಾಗಿ ಪ್ರಾಂತಗಳನ್ನು ನಿರ್ಮಿಸಬೇಕು ಸ್ಥಳೀಯ ಭಾಷೆಗಳಿಗೆ ಪ್ರೋತ್ಸಾಹ ಕೊಟ್ಟರೆ ಸ್ವಾತಂತ್ರ ಸರಕಾರವು ಕೈಗೂಡಬಹುದು ಎಂದು ಮುಂಕಾಗಿ ಭಾಷಣಮಾಡಿದರು.

ಅಧ್ಯಕ್ಷರು ಕನ್ನಡಿಗರಲ್ಲಿ ಉಂಟಾದ ಜಾಗೃತಿಗಾಗಿ ಸಂತೃಪ್ತಿ ಸೂಚಿಸಿ ಪ್ರಾಂತರಚನೆಗೆ ಬೆಂಬಲವನ್ನಿತ್ತರು. ರಾಷ್ಟ್ರ ಸಭೆಯವರು ಕನ್ನಡಿಗರ ಕೋರಿಕೆಯನ್ನು ಮನ್ನಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆಂದು ಹೇಳಿದರು.

ಬೇಸಿಗೆಕಾಲದಲ್ಲಿ ನಿಮ್ಮ ಗಂಟಲಿನ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ!

ಗಂಟಲ, ಎದೆ, ಶ್ವಾಸಕೋಶಗಳ ಬಾಧೆಗಳಿಗೆ ಪೆಪ್ಸ ಯೋಗ್ಯ ಗುಣಕಾರಿ



ಎಲ್ಲಾ ಕಡೆಗಳಲ್ಲಿಯೂ ಬಾಟ್ಲಿಗೆ ರೂ 1ರಂತೆ ಮಾರಲ್ಪಡುತ್ತದೆ

ಪೆಪ್ಸ ಸೇವಿಸಿರಿ

PEPS

ಶ್ವಾಸನೀಯ ಬಿಲ್ಲೆಗಳು

Notice

In the Court of the District Munsif of Karkala

O S. No 261 of 1937

I. E P No 1346 of 1939

Sushila alias Saraswathi Arna Widow of Kundadka Ramu Kudva residing in Bantval Kasba

Petitioner

Versus

Ramaraya Shanbhogue Son of Jakrabettu Laxman alias Annappa Shanbhogue residing in Brahmins lane, Mangalore Town

Respondent

Whereas the abovenamed petitioner has made application to this Court for sale of your immoveable property and also for permission to bid and setoff at the time of sale, you are hereby warned to appear in this Court in person or by a pleader duly instructed on 25th June 1940 at 10 A M before this Court failing which the said application will be heard in your absence

By order of the Court

Karkala, 26-4-40 K L Kudva
Pleader for the petitioner

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*

ಜಿನ್ನರ ದೇಶಘಾತುಕ ಧೋರಣೆಗೆ ವಿದೇಶಿ ಮುಸಲ್ಮಾನರಿಂದಲೂ ದೂಷಣೆ!



ಮಹಮ್ಮದಾಲಿ ಜಿನ್ನ

ದೇಶವನ್ನು ಹಿಂದುಗಳ ಹಿಂದುಸ್ಥಾನ ಮತ್ತು ಮುಸ್ಲಿಮರ ಹಿಂದುಸ್ಥಾನವೆಂದು ಎರಡಾಗಿ ವಿಭಾಗಿಸುವ ಮಿ. ಮಹಮ್ಮದಾಲಿ ಜಿನ್ನರ ದೇಶ ವಿಘಾತುಕ ಧೋರಣೆಯು ಟರ್ಕಿ, ಅಫಘಾನಿಸ್ಥಾನ, ಪರ್ಶಿಯಾ, ಇರಾಕ್ ಮೊದಲಾದ ಸ್ವತಂತ್ರ ಮುಸ್ಲಿಂ ರಾಷ್ಟ್ರಗಳ ನಿಂದೆಗೆ ಪಾತ್ರವಾಗಿರುವದೆಂದು ಆ ದೇಶಗಳನ್ನು ಸಂಚರಿಸುತ್ತಿರುವ ಒಬ್ಬ ಮುಸ್ಲಿಂ ಸದ್ಗೃಹಸ್ಥರು ಇಲ್ಲಿಯ ತಮ್ಮ ಒಬ್ಬ ಮಿತ್ರರಿಗೆ ಪತ್ರ ಬರೆದಿರುವರು. ಅಂಕಾರದಿಂದ ಬರೆಯುತ್ತ ಈ ಸಂಚಾರಿಗಳು ಪತ್ರದಲ್ಲಿ ಹೀಗೆಂದಿರುವರು: 'ಲಾಹೋರಿನ ಮುಸ್ಲಿಂ ಲೀಗ ಪರಿಷತ್ತಿನಲ್ಲಿ ದೇಶವಿಭಜನೆಯ ಠರಾವು ಮಂಜೂರಾಯಿತೆಂದು ತಿಳಿದೊಡನೆ ಇಲ್ಲಿಯ ಜನರು ಈ ನಿರ್ಣಯಕ್ಕಾಗಿ ಬಹಳ ಖೇದವನ್ನು ಪ್ರದರ್ಶಿಸಿದರು. ಆದರೆ ಮುಸ್ಲಿಂ ಲೀಗಿಗೆ ಎಲ್ಲಾ ಭಾರತೀಯ ಮುಸಲ್ಮಾನರ ಬೆಂಬಲವಿರುವದಿಲ್ಲ. ಮುಸ್ಲಿಂ ಜನ ಸಮುದಾಯದ ದೊಡ್ಡ ಅಂಶವು ದೇಶ ವಿಭಜನೆಗೆ ವಿರೋಧವಾಗಿದೆ ಎಂದು ಈ ವಿದೇಶೀ ಮುಸ್ಲಿಂ ಬಾಂಧವರಿಗೆ ತಿಳಿಸಿದೊಡನೆ ಅವರಿಗೆ ಪರಮ ಸಂತೋಷವಾಯಿತು. ಮಿ. ಜಿನ್ನರ ಪ್ರಯತ್ನವು ಮೂಢತನದ್ದಾಗಿದೆ ಎಂದು ಹೇಳಿದರು.

ವಿದೇಶಿ ಮುಸ್ಲಿಮರು ಲಜ್ಜಿತರಾಗಿದ್ದಾರೆ

ಜಾತಿಯ ಹಿತ ಅಥವಾ ದೇಶದ ಹಿತ ಯಾವದನ್ನೂ ಲಕ್ಷ್ಯಕ್ಕೆ ತಂದುಕೊಳ್ಳದೆ ಕೇವಲ ತಮ್ಮ ಒಂದು ಸ್ವಾರ್ಥವನ್ನು ಸಾಧಿಸುವದಕ್ಕೋಸ್ಕರ ಕೆಲವು ಜನ ಮುಸಲ್ಮಾನ ಮುಖಂಡರೆನ್ನಿಸಿಕೊಳ್ಳುವವರು, ಮಿ. ಜಿನ್ನರ ಛತ್ರಛಾಯೆಯಲ್ಲಿ ಸೇರಿಕೊಂಡು ಹಿಂದುಸ್ಥಾನದ ವಿಭಜನೆಯಾಗಬೇಕೆನ್ನುವದು ಮತ್ತು ಜಾತಿ ದೇಶ ಹಿತಗಳನ್ನು ಬಲಿಕೊಡುವದು ವಿದೇಶದ ಮುಸ್ಲಿಮರನ್ನು ಲಜ್ಜೆಯಿಂದ ತಲೆತಗ್ಗಿಸುವಂತೆ ಮಾಡಿದೆ. ಪಾಕಿಸ್ಥಾನ ಯೋಜನೆ ಹಾಗೂ ಮಿ. ಜಿನ್ನರ ಕಾರ್ಯಕ್ರಮಕ್ಕೂ ತಮಗೂ ಯಾವ ಸಂಬಂಧವೂ ಇರುವದಿಲ್ಲ. ಮಿ. ಜಿನ್ನರ ಧೋರಣೆಯು ಮುಸ್ಲಿಂ ಜಾತಿಗೆ ಹಾನಿಕರವಾಗಿದೆ ಎಂದು ಈ ರಾಷ್ಟ್ರಗಳ ಮುಸ್ಲಿಂ ಮುಖಂಡರು ಒಟ್ಟಾಗಿ ಒಂದು ಹೇಳಿಕೆಯನ್ನು ಹೊರಡಿಸುವ ಸಿದ್ಧತೆಯಲ್ಲಿ ಇದ್ದಾರೆ.

ರಾಷ್ಟ್ರಪತಿಗಳ ಭಾಷಣದ ಪರಿಣಾಮ

ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕಲಂ ಅಜಾದರು ಮುಸ್ಲಿಂರಾಗಿದ್ದರೂ ಅವರು ಜಿನ್ನರಂತೆ ವಸ್ತುಸ್ಥಿತಿಯ ಕಡೆಗೆ ಅಂಧರಾಗಿ ದೇಶಹಿತವನ್ನು ಬಲಿಕೊಡಲಿಕ್ಕೆ ಪ್ರಯತ್ನಿಸದಿದ್ದದು ವಿದೇಶೀ ಮುಸಲ್ಮಾನ ರಾಷ್ಟ್ರಗಳಿಗೆ ಪರಮ ಸಂತೋಷವನ್ನು ಕೊಟ್ಟಿದೆ. ಅವರ ಭಾಷಣವು ಈ ರಾಷ್ಟ್ರಗಳಲ್ಲಿ ಒಳ್ಳೇ ಪರಿಣಾಮವನ್ನು ಉಂಟು ಮಾಡಿರುವದು. ಈ ರಾಷ್ಟ್ರಗಳ ಮುಸಲ್ಮಾನ ಮುಖಂಡರು ಮೌ. ಅಜಾದರ ಕಾಂಗ್ರೆಸಿನ ಅಧ್ಯಕ್ಷರಾಗಿ ಚುನಾಯಿತರಾದುದಕ್ಕಾಗಿ ತಮ್ಮ ತೃಪ್ತಿಯನ್ನು ವ್ಯಕ್ತಮಾಡಿ, ಹಿಂದು ಮುಸಲ್ಮಾನ ಐಕ್ಯ ಮತ್ತು ಸ್ವಾತಂತ್ರ್ಯ ಸಾಧನೆಯ ಅವರ ಪ್ರಯತ್ನಗಳಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿರುವರು. ಮಿ. ಜಿನ್ನರ ಹಟ್ಟಕ್ಕೆ ಅವರು ಯಾವ ಪ್ರಾಮುಖ್ಯತೆಯನ್ನು ಕೊಟ್ಟಿರುವದಿಲ್ಲ.

ಗಫರ್ ಖಾನರು ನಿವೃತ್ತರಾಗುವದಿಲ್ಲ

ಗಡಿನಾಡಿನ ಗಾಂಧಿಗಳೆಂದು ಪ್ರಖ್ಯಾತರಾದ ಖಾನ್ ಅಬ್ದುಲ್ ಗಫರ್ ಖಾನರು ಕಾಂಗ್ರೆಸ ರಾಜಕೀಯಗಳಿಂದ ನಿವೃತ್ತರಾಗುವರೆಂದು ಎಲ್ಲಿಂದಲೋ ಹೊರಟ ಒಂದು ಗಾಳಿ ವರ್ತಮಾನವನ್ನು ಸಂಪೂರ್ಣ ಅಲ್ಲಗಳೆದ ಈ ಸುಳ್ಳು ವಾರ್ತೆಯನ್ನು ಹುಟ್ಟಿಸಿದ ಸ್ವಾರ್ಥಿಗಳನ್ನು ಅವರು ನಿಷೇಧಿಸಿದ್ದಾರೆ. ರಾಜಕೀಯವು ತನ್ನ ಪ್ರಾಣಾಧಾರವೆಂದೂ ಜೀವಿಸಿರುವ ತನಕ ರಾಜಕೀಯವನ್ನು ಬಿಟ್ಟಿರುವದು ತನಗೆ ಅಸಾಧ್ಯವೆಂದೂ ಅವರು ಹೇಳಿರುವದಲ್ಲದೆ, ಕರೆಯು ಹರಿದಾಗ ದೇಶದ ಸ್ವಾತಂತ್ರ್ಯಕ್ಕಾಗಿ ಹೂಡಲ್ಪಡುವ ಅಹಿಂಸಾತ್ಮಕ ಆಂದೋಲನದ ಮುಖಂಡತನವನ್ನು ತೆಗೆದುಕೊಂಡು ಅದರ ಎಲ್ಲಾ ಪರಿಣಾಮಗಳನ್ನು ಅನುಭವಿಸಲಿಕ್ಕೆ ನಾನು ಯಾವಾಗಲೂ ಸಿದ್ಧನಾಗಿರುವೆನೆಂದು ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿರುವರು. ಗಡಿನಾಡಿನಲ್ಲಿ ಮುಂಬರುವ ಆಂದೋಲನದ ಸಿದ್ಧತೆಯು ಬಹು ಚೆನ್ನಾಗಿ ನಡೆದಿರುತ್ತದೆ.

ಇಮ್ಮಡಿ ಉದ್ದೇಶವಿರುವ
ಈ ಸಾಬೂನನ್ನುಪಯೋಗಿಸಿರಿ!
ಛಿದ್ರವಾದ ನನ್ನನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ತೈಲ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ.

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ. ಕುಟಿಕೂರಾ ಮುಲಾಮು (Cuticura Ointment) ಎಂಬ ಮದ್ದು ಛಿದ್ರ ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರಕ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ತೃಪ್ತಿಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಆಕೃತಿಯಲ್ಲಿಯೂ ಸ್ನಾನಕ್ಕೆ ಸಣ್ಣ ಸೈಜಿನಲ್ಲಿಯೂ ಪ್ರಚಾರಕ್ಕೆ ದೊರೆಯುತ್ತದೆ.

ಜೀವವಿಮೆಯೋ ಸುಲಭವಾದ ಕಂತುಗಳಲ್ಲಿ ಹಣ ಶೇಖರಿಸಿ ಮಾಡಿ, ಸ್ವದೇಶವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಉಚಿತಮಾಡಿಕೊಳ್ಳಲು ಹಣ ಶೇಖರಿಸಲು ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನ ಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯದ ಹಕ್ಕುಗಳನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್' ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗ॥ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 1874 ಮುಖ್ಯ ಕಛೇರಿ: ಮುಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್
ಸೌತ್ ಪರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

ಸಂಘಟನೆಯಿಲ್ಲದಿರುವುದೇ ಕಾರಣ

ಭಾರತೀಯ ಚಲಚ್ಚಿತ್ರ ಉದ್ಯೋಗವು ಅಭಿವೃದ್ಧಿ ಹೊಂದದಿರುವ ಕಾರಣಗಳನ್ನು ಎಲ್ಲಾ ಒಂದು ಮಾಡಿ ಹೇಳುವುದಕ್ಕೆ, ಸಂಘಟನೆಯಿಲ್ಲದಿರುವುದು ಎಂಬಷ್ಟೇ ಶಬ್ದಗಳಿಂದ ಅದನ್ನು ಹೇಳಿ ಮುಗಿಸಬಹುದಾಗಿದೆ ಎಂದು ಅಮೇರಿಕನ್ ಸಿನೆಮಾಟೋಗ್ರಾಫರ್ ಪತ್ರಿಕೆಯಲ್ಲಿ ಮಿ. ಎಫ್. ಬೆರ್ಲೋ ಇವರು ಬರೆಯುತ್ತಾರೆ.

ಭಾರತದ ಪ್ರತಿಯೊಂದು ಸಿನೆಮಾ ತಯಾರಿಯಲ್ಲಿಯೂ ಈ ಸಂಘಟನೆಯಿಲ್ಲದ್ದ ಕೊರತೆಯು ಕಾಣುತ್ತದೆ. ಜಗತ್ತಿನಲ್ಲಿ ಹೋಲಿವುಡ್ಡು ಬಹಳ ಪ್ರಖ್ಯಾತ ಸಿನೆಮಾ ತಯಾರಿಯ ಕೇಂದ್ರವಾಗಿದ್ದರೆ ಅದು ಅಲ್ಲಿನ ಸಂಘಟನೆಯ ಶಕ್ತಿಯ ಮೇಲಿನಿಂದಲೇ ಆಗಿದೆ. ಆದುದರಿಂದ ಬಹು ಮುಖ್ಯವಾಗಿ ಅಭಿವೃದ್ಧಿಗೊಳ್ಳತಕ್ಕ ಭಾರತೀಯ ಚಲಚ್ಚಿತ್ರ ಕೈಗಾರಿಕೆಗೆ ಇದು ಬಹಳ ದೊಡ್ಡದೊಂದು ಕೊರತೆಯಾಗಿದೆ. ಸಿನೆಮಾ ತಯಾರಿಗೆ ಬೇಕಾದ ಸಾಧನ ಸಾಮುಗ್ರಿಗಳನ್ನು ಮೊದಲಾಗಿಯೇ ಒದಗಿಸಿ ಇಟ್ಟು ಕೊಳ್ಳುವುದಿಲ್ಲ. ಎಲ್ಲವನ್ನೂ ಅವಸರವಸರದಲ್ಲಿ ತಯಾರಿಸುವುದರಿಂದ ಹಲವು ಕೊರತೆಗಳು ಬರುತ್ತವೆ.

ಪೂರ್ವಾಭಿನಯ ಕಡಿಮೆ

ಭಾರತೀಯ ಚಲಚಿತ್ರ ಕಂಪನಿಯಲ್ಲಿ ಹೆಚ್ಚಾಗಿ ನಿರ್ದೇಶಕರು ಸಂಪೂರ್ಣ ಅಧಿಕಾರವುಳ್ಳವರಾಗಿರುತ್ತಾರೆ, ಹಾಗಾಗಿ ಸರ್ವಾಧಿಕಾರಿಗಳೆಂದು ಅವರನ್ನು ದೂಷಿಸುವುದಾದರೂ, ಅವರಿಗೆ ತಮ್ಮ ಬುದ್ಧಿಕುಶಲತೆಯನ್ನು ಹೆಚ್ಚಾಗಿ ನಿರ್ದೇಶಕತ್ವದಲ್ಲಿ ಮಾತ್ರ ಉಪಯೋಗಿಸಲು ಸಮಯ ಸಿಗುವದಿಲ್ಲ. ಪೂರ್ವಾಭಿನಯವು ಸಾಕಷ್ಟು ಆಗುವುದಿಲ್ಲ.

ಸುಬ್ರಹ್ಮಣ್ಯಂ

ಬಹಳವಾಗಿ ಮಾನವ ಸ್ವಭಾವನ್ನು ಪರಿಚಯಮಾಡಿಕೊಂಡವರು. ಹೆಚ್ಚು ಅನುಭವಶಾಲಿ. ಅವರ ಚಿತ್ರಗಳನ್ನು ಬಹಳವಾಗಿ ಮೆಚ್ಚುವ ಪ್ರೇಕ್ಷಕರ ಒಂದು ಪಂಗಡವೇ ಇದೆ. ಸ್ವತಃ ಲೇಖಕರೂ ಆಗಿದ್ದಾರೆ. ಬಹಳ ಸರಲವಾದ ಜನತೆಗೆ ಮೆಚ್ಚುವ ಕಥಾವಸ್ತು ಅವರದು. ರಿಹರ್ಸಿನಲ್ಲಿ ಅವರು ತೆಗೆದು ಕೊಳ್ಳುವ ಅತ್ಯಧಿಕ ಜಾಗರೂಕತೆಯೇ ಅವರ ಯಶಸ್ವಿತೆಗೆ ಹೆಚ್ಚಿನ ಕಾರಣ.

ಸಿನೆಮಾ ಪುಟ

ಅರ್ಧಾಂಗಿ

ಛಾಯಾ ಚಿತ್ರದ ಪ್ರಸಿದ್ಧ ನಟರು ಲೀಲಾ ಚಿಟ್ನಿಸ್ ಮತ್ತು ಬಾಬುರಾವ್ ಪೆಂಡೇರ್ಕರರು ಅರ್ಧಾಂಗಿ ಚಿತ್ರದಲ್ಲಿ ಭಾಗವಹಿಸುವರು.

ನಾರಾಯಣಿ

ದೇವಿಕಾರಾಣಿಯ ಹೊಸ ಚಿತ್ರವು ನಾರಾಯಣಿ ಎಂಬುದು.

ಹಿಂದೂಸ್ಥಾನ್ ಹಮಾರಾ

ಕಲ್ಕತ್ತಾ ಫಿಲ್ಮ್ ಕಾರ್ಪರೇಶನಿನವರ ಹಿಂದೂಸ್ಥಾನ ಹಮಾರಾ ಚಿತ್ರವು ಪೂರ್ಣವಾಗುತ್ತಾ ಬಂತು. ಪದ್ಮಾದೇವಿ ಮತ್ತು ಜಮುನಾ ಇವರು ಮುಖ್ಯ ಪಾತ್ರ ವಹಿಸುವರು.

ಪ್ರಭಾತ ನಗರ

“ಧ್ಯಾನೇಶ್ವರ”

ಮೆಸರ್ಸ್ ದಾಮ್ಲೆ ಮತ್ತು ಪತ್ತೇಲಾಲರ ನಿರ್ದೇಶಕತ್ವದಲ್ಲಿ ತಯಾರಾದ ಪ್ರಭಾತದ “ಧ್ಯಾನೇಶ್ವರ” ಚಿತ್ರವು ಪ್ರದರ್ಶನಕ್ಕೆ ತಯಾರಾಗಿದೆ. ಇದರಲ್ಲಿ ಯಶವಂತ್, ಆಧ್ಯೆಯಲ್ಲಿ ಅಭಿನಯಿಸಿದ ಮೋಡಕ್ ಮತ್ತು ಮಂಜುಲಳೂ ಸುಮತಿ ಗುಪ್ತ ಮೊದಲಾದವರು ಅಭಿನಯಿಸಿರುವರು. ಸಂಗೀತ ನಿರ್ದೇಶಕತ್ವವನ್ನು ಶ್ರೀ ಭೋಲೆಯವರು ವಹಿಸಿರುವರು.

“ಪಡೋಸಿ”

ಶ್ರೀ. ಶಾಂತರಾಮರ ಮುಂದಿನ ಹೊಸ ಸಾಮಾಜಿಕ “ಪಡೋಸಿ” (ಮರಾಠೀ “ಶೇಜಾರಿ”) ಚಿತ್ರದ ಅಭಿನಯಗಾರರ ಹೆಸರು ಈ ವಾರದೊಳಗೆ ಪ್ರಕಟವಾಗಲಿರುವುದು. ಮಾಸ್ಟರ್ ಕೃಷ್ಣರವರು ಸಂಗೀತ ನಿರ್ದೇಶಕತ್ವವನ್ನು ವಹಿಸಿ ತನ್ನ ಕಾರ್ಯವನ್ನು ಪ್ರಾರಂಭಿಸಿರುವರು.

ನವಯುಗ ಚಿತ್ರ

ಹನ್ಸ್ ಕಂಪೆನಿಯವರು ಮೆನೇಜಿಂಗ್ ಏಜಂಟರಾಗಿ ಸ್ಥಾಪಿತವಾದ ಈ ಕಂಪೆನಿಯು ತನ್ನ ಕೆಲಸದಲ್ಲಿ ನಿಯುಕ್ತವಾಗಿರುವುದು. ಶ್ರೀ ಬಾಬು ರಾವ್ ಪೆಂಡಾರ್ಕರರ ಮೇಲ್ವಿಚಾರದಲ್ಲಿ “ಲಪಂಡವ” ಎಂಬ ಮೊದಲಿನ ಚಿತ್ರವು ಕೊಲ್ಹಾಪುರದಲ್ಲಿ ಪ್ರಾರಂಭವಾಗಿರುವುದು. ಇದರಲ್ಲಿ ಮಾಸ್ಟರ್ ವಿನಾಯಕ್, ಬಾಬುರಾವ್ ಪೆಂಡಾರ್ಕರ್, ಮಿನಾಕ್ಷಿ, ಮಾಲ್ವಂಕರ್, ಸಾಳ್ವಿ ಮೊದಲಾದವರು ಅಭಿನಯಿಸಿರುವರು. ಜೂನ್ ಮೊದಲಿನ ವಾರದೊಳಗೆ ಇದು ಪ್ರದರ್ಶನಕ್ಕೆ ಸಿಗುತಯಾರಾಗುವುದು.

ಸಾಗರ ಮೂವಿಟೋನಿನ “ಕುಮ್ ಕುಮ್” ಚಿತ್ರದಲ್ಲಿ ಅಭಿನಯಿಸಿದ ಸಧನಾ ಬೋಸ್ ಮತ್ತು ಆಕೆಯ ಪತಿ ಮಧು ಬೋಸ್ ಇವರಿಬ್ಬರೂ ಈಗ ವಾಡಿಯಾ ಮೂವಿಟೋನಿಗೆ ಸೇರಿರುವರು. ಮಧು ಬೋಸರು ಡೈರೆಕ್ಟರರಾಗಿಯೂ, ಸಾಧನಾ ಬೋಸರು ಪಾತ್ರಧಾರಿಯಾಗಿಯೂ ಎರಡು ಚಿತ್ರಗಳನ್ನು ತಯಾರಿಸುವರು. ಮೊದಲನೇ ಚಿತ್ರವು “ರಾಜನರ್ತಕಿ”. ಇದು ಹಿಂದಿ ಮತ್ತು ಮರಾಠಿ ಭಾಷೆಯಲ್ಲಿ ತಯಾರಾಗಲಿದೆ.

ಸಿರ್ಕೊ ಪ್ರೊಡಕ್ಷನಿನಲ್ಲಿ ಶ್ರೀ. ಖೋಸ್ಲಾರವರ ನಿರ್ದೇಶಕತ್ವದಲ್ಲಿ “ದೀಪಕ್” ಎಂಬ ಚಿತ್ರವು ತಯಾರಾಗಲಿದೆ. ಇದರಲ್ಲಿ ಪೃಥ್ವಿರಾಜ, ಮಜ್ಹರಖಾನ್, ಆಶಾಲತಾ ವತ್ಸಲಾ ಕುಮ್ಠೇಕರ್ ಮೊದಲಾದವರು ಅಭಿನಯಿಸುವರು.

ಸಾಹುಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ,—ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ್ಟ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

(ಕಳೆದ ಜುಲೈ ತಿಂಗಳಲ್ಲಿ ಶ್ರೀ ಡಿ. ಕೆ. ಭಾರದ್ವಾಜರು ಬೆಂಗಳೂರಿನ ಕನ್ನಡ ನುಡಿಯಲ್ಲಿ ದಿವಂಗತ ಕಾಮತರ ಕುರಿತು ಒಂದು ಲೇಖನ ಬರೆದಿದ್ದರು. ಕಾಮತರ ಬಗ್ಗೆ ಅಖಿಲ ಕರ್ಣಾಟಕಕ್ಕೆ ಯಾವ ಅಭಿಮಾನ ಆದರಗಳಿದ್ದುವೆಂದು ಆ ಲೇಖನವು ತಿಳಿಯಪಡಿಸುವುದು ಅವರು ನಮ್ಮ ನುಡಿಗಾಗಿ ಮಾಡಿದ ಸೇವೆಯ ದೃಷ್ಟಿಯಿಂದ ಅವರಿಗೆ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪೀಠವು ಆ ಗೌರವ ಲೇಖಕರಂದಂತೆ, ಶೀಘ್ರದಲ್ಲಿಯೇ ಸಲ್ಲಬೇಕಾಗಿತ್ತು. ಆದರೆ ಅಂತಹ ಸುದಿನವನ್ನು ಕಂಡು ಹಿಗ್ಗಲು ಕನ್ನಡ ತಾಯಿಯು ಭಾಗ್ಯಹೀನಳಾದಳು!)

ಬಾನಿನಾಚೆಗೆ ನೋಟ, ಯುಗದ ಕೊನೆಗೂ ಓಟ,
ತಾನೆಂಬುದೆಲ್ಲದೆಂಬಾ ನಂಬುಗೆಯ ಶಾಂತಿ
ಉಸಿರಾಗೆ, ಚಿತ್ತವೇ ಸೊತ್ತಾಗೆ, ಸೈಪೆಯೇ
ಹೆಸರಾಗೆ, ವರನಾಗಿ ಪುಟ್ಟುದುದೆ ಸಿರಿಯಾಗೆ
ಸೈಗೊಮಳೆ ಸುರಿಯುವಧಿಕಾರವೇ ಅರಸಾಗೆ,
ಅವರೂರಿಗೈದುವಂತೊಂದು ದಿನ ಪೋಪಂತೆ,
ಅಳಿದರೂ ಉಳಿದವರ ನಾಡಿಯಲಿ ನಲಿವಂತೆ,
ಕಡಿದಂತೆ ಚಿಗುರುವಶ್ವತ್ಥಗಳ ಜೀವನವ
ಬೇಡುವೆವು ಇದೆ ನಮ್ಮ ಬೇಡಿಕೆಯೊ
ಬಯಕೆಯೋ?

ಹೀಗೆಂದು ಹಿಂದೆ ಹಾಡಿದ ಕವಿ, ಇಂದಿನ ಸ್ವಾತಂತ್ರ್ಯ ಯುಗದಲ್ಲಿ ಮದ್ರಾಸಿನ ಮಂತ್ರಿಮಂಡಲದಲ್ಲೊಬ್ಬನಾಗಿರಬೇಕಾಗಿತ್ತೆಂದು ಯಾರಾದರೂ ಹೇಳಬಹುದು. ಆದರೆ ಆ ಕವಿ ಎಂದೊಬ್ಬ ಬಡ ಉಪಾಧ್ಯಾಯರಾಗಿರುವರೆಂದರೆ, ಅವರು ಕ್ರಾಂತಿಕಾರಕ ಯುವಕರನ್ನು ಸಿದ್ಧಗೊಳಿಸುವದಕ್ಕಾಗಿಯೇ ತಮ್ಮ ಜೀವಭಾವದ ಹುಮ್ಮಸನ್ನು ಒತ್ತಿಟ್ಟು ನಾಡಿನೇಳಿಗೆಯ ದೃಷ್ಟಿಯಿಂದಲೆ ಅವರ ಉಪಾಧ್ಯಾಯರಾಗಿದ್ದಾರೆಂದು ಊಹಿಸಬಹುದು ಈ ಕವಿವಾಕ್ಯಗಳನ್ನೋದುವಾಗ ಕವಿ ಬಹು ಉಗ್ರ ಸ್ವಭಾವದ

ಕಣ್ಮರೆಯಾದ

ಶ್ರೀ. ಎಂ. ಎನ್. ಕಾಮತರು

(ಲೇಖಕ: ಶ್ರೀ ಡಿ ಕೆ ಭಾರದ್ವಾಜರು)

ಕ್ರಾಂತಿಕಾರನೆಂದಾರೂ ತಿಳಿಯಬಾರದು ಇದನ್ನು ಹಾಡಿದವರು ನನ್ನ ಮಿತ್ರರಾದ ಶ್ರೀಮಾನ್ ಎಮ್. ಎನ್. ಕಾಮತ್ ಅವರ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಅವರು ಉಪಾಧ್ಯಾಯರಾಗಿರುವರು ಇದಕ್ಕೆ ಮೊದಲು ಇವರು ಬಂಟ್ವಾಳದಲ್ಲಿ ಉಪಾಧ್ಯಾಯರಾಗಿದ್ದರು. ಈಗ್ಗೆ ೨೫ ವರುಷಗಳ ಹಿಂದೆ 'ಕರ್ಣಾಟಕ ಸಾಹಿತ್ಯ ಪರಿಷತ್ತು' ಸ್ಥಾಪಿಸಿಕವಾದಾಗ, ಪರಊರಿನಿಂದ ಬಂದಿದ್ದ ಅತಿಥಿಗಳಿಗಾಗಿ ಏರ್ಪಡಿಸಿದ್ದ ಸೆಂಟ್ರಲ್ ಕಾಲೇಜಿನ ಹಾಸ್ಟೆಲಿನಲ್ಲಿ ಎಮ್ ಎನ್ ಕಾಮತ್‌ರು 'ಸ್ವದೇಶಾಭಿಮಾನಿ'ಯ ಸಂಪಾದಕರಾಗಿದ್ದ ದಿವಂಗತ ಶ್ರೀ ವಿ ಶ್ರೀನಿವಾಸ ಕಾಮತ್, ಈಗ ಕಂಠೀರವದ ಉಪಸಂಪಾದಕರಾಗಿರುವ ಶ್ರೀ ಹುರಳಿ ಭೀಮರಾವ್, 'ಶ್ರೀಕೃಷ್ಣಸೂಕ್ತಿ'ಯ ಸಂಪಾದಕರು ಶ್ರೀ ಎನ್ ರಾಜಗೋಪಾಲ ಕೃಷ್ಣರಾವ್ ಇವರೆಲ್ಲರ ಇಳಿದುಕೊಂಡಿದ್ದರು. ಎಲಿ ಕಾಡಿನ (ರಂಚಿ)ಯ ನ ಮುಕ್ಕಾಲು ಸಮಯ ವೆಲ್ಲಗೆ ಮನಸ್ಸು ಸಂತೋಷ ಎಮ್ ಎನ್ ಕಾಮತರು ಮಿತ್ರರನ್ನು ವಿನೋದ ಗೊಳಿಸುತ್ತಿದ್ದರು ಅಂದ ಅವರ ಕನ್ನಡ ನಾಡಿನ ಅಭ್ಯುದಯದ ಕಿರಣಗಳನ್ನು ಕಾಣುತ್ತ ನಲಿಯುತ್ತಿದ್ದರು ಆ ಸಮಯಕ್ಕೆ ಸಂತಯೇ ಕಾಮತ್ ಅವರು

ದಕ್ಷಿಣ ಕನ್ನಡಜಿಲ್ಲೆಯಲ್ಲಿ ಕೆಲವು ಗ್ರಂಥಗಳನ್ನು ರಚಿಸಿ, ಸಾಹಿತಿಗಳೆಂದು ಹೆಸರಾಗಿದ್ದರು ಶ್ರೀಯುತರು ಇಂಟರ್ ಮೀಡಿಯೇಟ್ (ಎಫ್ ಎ) ಶಿಕ್ಷಣವನ್ನು ಮುಗಿಸಿ, ಬಡತನದಿಂದಲೂ, ಸಂಸಾರ ತಾಪತ್ರಯದಿಂದಲೂ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೆ, ಬಡಉಪಾಧ್ಯಾಯ ವೃತ್ತಿಯನ್ನು ಕೈಕೊಂಡರು ಅಂದಿನಿಂದ ಇಂದಿನವರೆಗೆ ಅವರು ಆ ವೃತ್ತಿಯಲ್ಲಿಯೇ ಇದ್ದು ಕನ್ನಡ ನುಡಿಯ ಸೇವೆಯನ್ನು ಎಡೆಬಿಡದೆ ಸತತವಾಗಿ ಮಾಡುತ್ತಿರುವರು. ಇವರದು ತುಂಬುಸಂಸಾರ ಮನೆ ತುಂಬ ಮಕ್ಕಳು ಬಡತನ ಇದರ ಮಧ್ಯದಲ್ಲಿ ಸಾಹಿತ್ಯಸೇವೆಯ ಹಿರಿಯಾಸೆ, ಇದರೊಂದಿಗೆ ಜನರಲ್ಲಿ ವಿದ್ಯಾ ಪ್ರಚಾರ ಮಾಡಬೇಕೆಂತಲೂ ಪ್ರಯತ್ನ ಇವೆಲ್ಲ ಸಂಸಾರ ಕಷ್ಟಗಳ ಮಧ್ಯೆ ಬಡತನದಲ್ಲಿದ್ದು, ಅವರಷ್ಟು ಸಾಹಿತ್ಯಸೇವೆ ಗೈದಿರುವರು ಕನ್ನಡ ನಾಡಿನಲಿ ಸಿಕ್ಕುವುದು ವಿರಳ ಕೆಲವರು ಕೇವಲ ಸಾಹಿತಿಗಳು, ಉಪಾಧ್ಯಾಯರು, ಮಾತ್ರವಲ್ಲ ಕವಿಗಳೂ ಮನಶ್ಶಾಸ್ತ್ರಜ್ಞರೂ ಆಗಿದ್ದಾರೆ ಅಂತೆಯೇ ಅವರು ಇಂದಿನ ಶ್ರಮಜೀವಿಗಳ ಜೀವನವನರಿತು, ನಮ್ಮ ಬೇಡಿಕೆ ಎಂಬ ಕವನದಲ್ಲಿ ಮೇಲೆ ಕೊಟ್ಟಿರುವ ವಾಕ್ಯಗಳನ್ನು ಬರೆದಿರುವರು ಇಂದಿಗೂ ಅವರು ಬಡವ್ಯಕ್ತಿಯೆಂದಲೆ ಕೃಷಿಕರ, ಸಂಸಾರ ರಹಿತ ಶ್ರಮಜೀವಿಗಳ

ಜೀವಿಗಳ ತೃಪ್ತಿಭಾವವನ್ನು ಬಂಡಿ ಎತ್ತು ಎಂಬ ಕವನದಲ್ಲಿ ಹೀಗೆ ಸೂಚಿಸಿರುವರು:—

"ಮೂಗುದಾಣದ ಗೊತ್ತು, ಬಾರುಕೋಲಿನ
ಏಟು,
ರಾಗದಿಂದೋಯೆಂಬ ಧನಿಯ ಕೊರಲದನಿ,
ತೂಗಿಡುವ ಚಾಲ್ಪೆಜ್ಜೆ ಕೊರಲಗೆಜ್ಜೆಗಳ ಜತೆ-
ಸಾಗೆ, ಸಾಗುವ ದಾರಿ ಎಷ್ಟಿದ್ದರೇನು?
ಮಳೆ ಬಿಸಿಲು-ಚಳಿ-ಗಾಳಿ-ಮುಗಿಲು
ಸಿಡಿಲೆಂದಿಲ್ಲ
ಹೊಳೆ ಸಂಕ-ದಿನ್ನೆ-ಬಯಲೆಂಬುದಿಲ್ಲ,
ಬೆಳಗು-ನಡುಹಗಲು-ಬೈಗುಗಳಿಲ್ಲ, ಇರುಳಿಲ್ಲ,
ಬೆಳದಿಂಗಳೆಂದಿಲ್ಲ-ಬೇರೆ ಮಾತಿಲ್ಲ
ಬತ್ತವೋ, ಬೆಲ್ಲವೋ, ಹತ್ತಿಯೋ, ಕತ್ತಿಯೊ,
ಸತ್ತಮತ್ತೊಂದೆತ್ತೊ, ಕಳ್ಳೊ-ಹುಲ್ಲೋ?
ಹತ್ತಿದಾ ಧನಿ ಮೂಗುದಾಣ ಹಿಡಿದಾಯೆನಲು-
ಹೊತ್ತು ಸಾಗಲು-ನಮ್ಮ ಹೊತ್ತು ಸಾಗುವುದು,
ಏಳೆ, ಈಗೇಕೆ, ಮುಂದೆಲ್ಲಿಗೆಂಬುದನರಿಯೆ,
ಜೋಕೆ ನೋಡುವ ಧನಿಯ ಬಯಕೆಯದೆ
ಸಾಕು,
ಅಕ್ಕಿಯ ಚಾಟಿಯನು ಕಣ್ಣೊನೆಯು ನೋಡುತಿರೆ
ಆ ಕೊರಳವನಿಗೆ ಕಿವಿಗೊಡ್ಡಿದರೆ ಸಾಕು
ಯಾರ ಸರಕನು ಯಾರು ಕೊಡುವರೊ,
ಕೊಳ್ಳುವರು
ದಾರೊ? ಬೇರಾಗಿದ ಉಪಯೋಗವೋ?
ಊರ ಜನರ ಸುಹಿತಹಿತ ವಿತರಣೆಯ ಊಳಿಗದಿ
ಬಾಳ ಸವೆಸಂತೆ ಜೀವನದ ಸವೆಯುವೆವು
ಸೊಗವ ಕಾಣಿಸಿ ಧನಿಯು ಕೈಬಿಟ್ಟು ಸ್ವೇಚ್ಛೆಯಲಿ
ಒಗೆವಂತೆ ಕಿರುಗಿ ತಿರುಗೂಳಿಯಾಗಿ,
ಹಗುರವಾದೊಂದು ಹುಲ್ಲಿಗೆ ಹಗುರ ತಾನಾಗಿ
ನಡೆಗೀಡು ಮೊಡ್ಡಿಯಲಿ ಸಾಯಬಹುದು.
ಧನ್ಯನೀ ಧರ್ಗಾಗಿ ದುಡಿವ ಬಡತನ ಭಾಗ್ಯ!
ಕನ್ಯಾಕಿ ನಿಲ್ಲಿಸ ದುಡಿದ ಧನಿ ಧನ್ಯಂ,
ಧನ್ಯ ಕಲ್ಯಾಣ ಪ್ರಚಾರದೀ ಹೋರಾಟ,

ಇದರಲ್ಲಿ ಶ್ರೀ ಕಾಮತರು ಸ್ವಾಮಿಭಕ್ತನಂದ ಶ್ರಮಜೀವಿಯ ತೃಪ್ತಿಭಾವವನ್ನು ತೋರಿರುವರು. ಇಂದು ಅವರೂ

16ನೇ ಪುಟಕ್ಕೆ ಮುಂದುವರಿಯುವುದು.)

ಅರುಣ
(ಗರ್ಭಾಶಯ ಟಾನಿಕ್)

ಅರುಣ ಹೆಂಗುಸರಿಗೆ ಒಂದು ಅಮೂಲ್ಯ ಉಪಯುಕ್ತ ಔಷಧಿಯಾಗಿರುವುದಲ್ಲದೆ ಸ್ತ್ರೀಜಾತಿಯ ಎಲ್ಲಾ ಬಾಧೆಗಳಿಗೂ ಗುಣಕಾರಿಯಾಗಿರುವುದು. ಇದರ ತತ್ಕ್ಷಣಿಕ ಗುಣದ ಪ್ರಭಾವದಿಂದ ನರಳುವ ಹೆಂಗಸರನ್ನು ಗುಣಪಡಿಸುವುದು. ಬಹಿಷ್ಠೆಯಾಗುವಾಗ ಇರುವ ಬೇನೆಯನ್ನು ನಿವಾರಿಸಿ ಸರಿಯಾಗಿ ಬಹಿಷ್ಠೆಯಾಗುವಂತೆ ಮಾಡುವುದಲ್ಲದೆ ಅದರ ಸಂಬಂಧದ ಎಲ್ಲಾ ಬಾಧೆಯನ್ನು ನಿವಾರಿಸುವುದು. ಎಲ್ಲಾ ಪ್ರಾಯದ ಹೆಂಗಸರಿಗೂ ಉತ್ತಮವಾದ ಟೋನಿಕ್ಕು ಮಾತ್ರವಲ್ಲ ಆರೋಗ್ಯವನ್ನೂ, ಬಲವನ್ನೂ ಹೆಚ್ಚಿಸುವುದು

ಅರುಣ

ಪಂಡಿತ ಡಿ. ಗೋಪಾಲಚಾರ್ಲುರವರ ವಿಶೇಷ ಔಷಧಿ.
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.
ಆಯುರ್ವೇದಾಶ್ರಮಂ ಪೋಸ್ಟ್‌ಬಾಕ್ಸ್ ನಂ.287 ಮದ್ರಾಸು.

ಗ್ಯಾರಂಟಿ ಬಹುಮಾನ | 38,250 | ನಂಬ್ರ 14

ರೂಪಾಯಿಗಳ ಬಹುಮಾನ!

ಸರಿಯಾದ ಉತ್ತರ ಕಳುಹಿಸಿದ 17 ಮಂದಿಯೊಳಗೆ ಹಂಚಲಾಗುವುದು
ಉತ್ತರದ ಮೊದಲಿನ ಸಾಲಿನ ಎರಡು ಸಂಖ್ಯೆಗಳು ನಮ್ಮ ಉತ್ತರದ ಸಂಖ್ಯೆಗಳಿಗೆ ಸರಿಹೋದರೆ 5 ರೂಪಾಯಿ ಬಹುಮಾನ ಕೊಡಲಾಗುವುದು

20 ರೂಪಾಯಿಗಳ ಕೊನ್ಸೊಲೇಷನ್ ಬಹುಮಾನಗಳನ್ನು ನಮ್ಮ ಸರಿಯಾದ ಉತ್ತರದ ಒಂದು ಸಾಲಿಗೆ ಸರಿಯಾಗಿ ಹೋಲುವ ಸಾಲಿನ ಉತ್ತರಗಳನ್ನು ಕಳಿಸಿದವರಿಗೆ ಕೊಡಲಾಗುವುದು. ನಮ್ಮ ಉತ್ತರದ ಎರಡು ನೀಟ ಉತ್ತರಗಳಿಗೆ ಹೋಲುವ ಸರಿಯಾದ ಉತ್ತರ ಕಳಿಸಿದವರಿಗೆ ರೂ. 300ರ ಬಹುಮಾನವು ಗ್ಯಾರಂಟಿಯಾಗಿ ಕೊಡಲಾಗುವುದು. ಹೆಚ್ಚಾಗಿ ಉತ್ತರ ಕಳಿಸಿದವರಿಗೆ ರೂ. 150 ರಿಸರ್ವ್ ಇಡಲಾಗಿದೆ

ಯಾವುದಾದರೂ ಒಂದು ಸಾಲನ್ನು ನೀಟವಾಗಿಯೂ, ಅಡ್ಡವಾಗಿಯೂ, ಮೂಲೆಯಿಂದ ಮೂಲೆಗೆ ಕೂಡಿಸಿದರೂ, 34 ಬರುವಂತೆ 1ರಿಂದ 16ರ ವರೆಗಿನ ಅಂಕೆಯನ್ನು ಬರೆಯಿರಿ. ಒಂದು ಬಾರಿ ಉಪಯೋಗಿಸಿದ ಅಂಕೆಗಳನ್ನು ಪುನಃ ಉಪಯೋಗಿಸಬಾರದು. ಉತ್ತರಗಳನ್ನು ಕಳುಹಿಸುವ ಕಡೇ ತಾರೀಕು 11-5-'40. ಫಲಿತಾಂಶ 20-5-'40.

ಪ್ರವೇಶ ಹಾಸಲು ಒಂದು ಉತ್ತರಕ್ಕೆ ರೂ. 1, 2 ರೂಪಾಯಿಗಳಿಗೆ 3 ಉತ್ತರ, 5 ಉತ್ತರಗಳಿಗೆ ರೂಪಾಯಿ 3.

ರೂಲ್ಸು ಮಾಡಿದ ಕಾಗದದಲ್ಲಿ ಮೇಲೆ ಕಾಣಿಸಿದ ಪ್ರವೇಶ ಹಾಸಲಿನೊಂದಿಗೆ ಎಷ್ಟು ಉತ್ತರಗಳನ್ನು ಬೇಕಾದರೂ ಕಳುಹಿಸಬಹುದು. ಪ್ರವೇಶ ಹಾಸಲನ್ನು ಮನಿಆರ್ಡರು ಯಾ ಪೋಸ್ಟಲ್ ಆರ್ಡರಿನ ಮುಖಾಂತರ ಕಳುಹಿಸಬಹುದು. ವಸೂಲಾದ ಹಣದಮೇರೆಗೆ ಬಹುಮಾನ ವಿತರಣವಾಗುವುದು. ಆದರೆ ಪ್ರಮುಖ ಬೇಂಕೊಂದರಲ್ಲಿ ಠೇವಣಿ ಇಟ್ಟ ಉತ್ತರಕ್ಕೆ ಸರಿ ಹೋಲುವ ಉತ್ತರವನ್ನು ಕಳುಹಿಸಿದವರಿಗೆ ರೂ. 2250 ಗ್ಯಾರಂಟಿಯಾಗಿ ಕೊಡಲಾಗುವುದು. ನಿಮ್ಮ ಎಡ್ರೆಸು ಬರೆದ ಅಂಚೆಕವರನ್ನು ಉತ್ತರಗಳಿಗೆ ಸೇರಿಸಿರಿ. ಎಲ್ಲಾ ವಿಷಯಗಳಲ್ಲಿಯೂ ಮೆನೇಜರರ ನಿರ್ಣಯವೇ ಅಂತ್ಯವೂ, ಕಾನೂನುಬದ್ಧವೂ ಆಗಿರುತ್ತದೆ.

ಕಳೆದ ಬಾರಿಯ 33ರ ಉತ್ತರ:
1ನೇ ಸಾಲು-11, 9, 2, 16.
2ನೇ ,, 14, 7, 4, 13.
3ನೇ ,, 5, 10, 17, 6.
4ನೇ ,, 8, 12, 15, 3.

ಹಣ ಮತ್ತು ಉತ್ತರ ಕಳುಹಿಸುವ ವಿಳಾಸ:
THE MANAGER
PRESIDENCY COMMERCIAL SYNDICATE
BOMBAY.

ದಿವಂಗತರಾದ
ಶ್ರೀ ಎಮ್. ಎನ್. ಕಾಮತರು

(15ನೇ ಪುಟದಿಂದ ಮುಂದುವರಿದುದು)

ಆದೇ ಸ್ವಪ್ರಭಾವದಿಂದ ಸಮಗೊಳಿಸಿದ, ಒದಗುತ್ತಿರುವ ಕಷ್ಟಪರಂಪರೆಗಳನ್ನು ತೃಣಕ್ಕಿಂತಲೂ ಅಲ್ಪವಾಗಿ ಭಾವಿಸಿ, ಮಕ್ಕಳ ಶಿಕ್ಷಣದ, ಸಾಹಿತ್ಯ ಸೇವೆಯ ಕಾರ್ಯವನ್ನು ಮುಂದರಿಸುತ್ತಿರುವರೆಂದು ಹೇಳಬಹುದು. ಕಾಮತರು ಎಷ್ಟು ಪುಸ್ತಕಗಳನ್ನು ಬರೆದಿದ್ದಾರೆಂದು ಕೇಳಿದರೆ ಹೇಳುವುದು ಕಷ್ಟ. ಏಕೆಂದರೆ ಅವರ ಪ್ರಕಟವಾಗಿರುವ ಪುಸ್ತಕಗಳಿಗಿಂತಲೂ ಹೆಚ್ಚಾದ ಸಂಖ್ಯೆಯ ನಾಟಕಗಳು, ಕಥೆಗಳು, ಕವನಗಳು, ಪ್ರಬಂಧವಾದಿ ಹಸ್ತಪತ್ರಿಗಳು ಅವರ ಬಳಿ ಬೇಕಾದಷ್ಟು ಇರುವುವು. ಉಪಾಧ್ಯಾಯ ವೃತ್ತಿಗೆ ಬೇಕಾಗುವ ಸಾಹಿತ್ಯ ಕೃತಿಗಳು ಅವರಲ್ಲಿ ಹೇರಳವಾಗಿವೆ ಮತ್ತೆ ಶಾಲಾ ವಾರ್ಷಿಕೋತ್ಸವಗಳಲ್ಲಿ ಶಾಲಾ ಮಕ್ಕಳಿಂದ ಆಡಿಸುವ ನಾಟಕಗಳನ್ನು ಅವರೆಷ್ಟೋ ಬರೆದಿದ್ದಾರೆ ಅವರ ಪ್ರಕಟಿತ ಪುಸ್ತಕಗಳಲ್ಲಿ—ಬಾಲಕರ ಮಹಾಭಾರತ, ಆರ್ಯಮತೋಪಾಖ್ಯಾನ, ಕರ್ಣನ ಕಥೆ, ನಾಗಾನಂದ ನಾಟಕ ಕಥೆ, ಗದಾಯುದ್ಧ ಕಥೆಗಳು ಶಾಲೆಯ ಮಕ್ಕಳ ಪ್ರಪಂಚದಲ್ಲಿ ವಿಶೇಷ ಪ್ರಚಾರದಲ್ಲಿರುವುವು. ಕಾಮತರು ಬಂಗಾಳಿ ಭಾಷೆಯನ್ನೂ ಬಲ್ಲರು ಬಂಗಾಳಿ ಸಾಹಿತ್ಯದಿಂದ ಅನೇಕ ಕಥೆಗಳನ್ನೂ ರವೀಂದ್ರನಾಥರ ಪದ್ಯಗಳನ್ನೂ ಭಾಷಾಂತರಿಸಿರುವರು. ಇಂಗ್ಲಿಷಿನಿಂದಲೂ ಕೆಲವು ಕಥೆಗಳನ್ನೂ ಭಾಷಾಂತರಿಸಿರುವರು. ಇವುಗಳಲ್ಲಿ "ಮಾರ್ಜೆ", "ದಿವಂಗತ", "ಯೋಗಕ್ಷೇಮ" ಎಂಬಿವೆ ಮೊದಲಾದವು ಕಂಠೀರವ ಮತ್ತು ಸ್ವದೇಶಾಭಿಮಾನಿ ಪತ್ರಿಕೆಗಳ ದಸರಾ ಸಂಚಿಕೆಗಳಲ್ಲಿ ಪ್ರಕಟವಾಗಿವೆ

ಶ್ರೀಯುತ ಕಾಮತರು ಪತ್ರ ಸಂಪಾದನ ಕಲೆಯಲ್ಲಿ ತಮ್ಮ ವೈಶಿಷ್ಟ್ಯವನ್ನು ತೋರಿರುವರು. ಮಂಗಳೂರಲ್ಲಿ ಕಂಠೀರವ ಪತ್ರಿಕೆಯು ಹೊರಟಾಗ ಅವರು ಅದರಲ್ಲಿ ಯಾವ ಭಾಗವಹಿಸಿದ್ದರೆಂಬುದನ್ನು ಹಿಂದೆ ಶ್ರೀ ರಾಜಗೋಪಾಲಕೃಷ್ಣರಾಯರ ಪರಿಚಯದಲ್ಲಿ ತಿಳಿಸಿರುವೆನು. ಅದಕ್ಕೆ ಮುಂಚೆ ಅವರು ಮಾಷ್ಟ ಸಂಪಾದಕರಾಗಿ ಶೈಕ್ಷಣಿಕ ವಿಷಯದ "ಬೋಧಿನಿ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು. ಆ ಪತ್ರಿಕೆಯಂತಹ ಆದರ್ಶ ಶೈಕ್ಷಣಿಕ ಪತ್ರಿಕೆಯು ಕನ್ನಡ ನಾಡಿನಲ್ಲಿ ಪ್ರಕೃತಿನಲ್ಲಿ ಹುಟ್ಟಿಲ್ಲವೆಂದು ಹೇಳಬಹುದು. ಆ ಬಗೆಯಿಂದ ಅವರು ಪತ್ರಿಕಲಾ ಸಂಪಾದನೆಯಲ್ಲಿಯೂ ತಮ್ಮ ಅಭಿರುಚಿಯನ್ನು ಕನ್ನಡ ನಾಡಿಗೆ ತೋರಿರುವರು. ಕಾಮತರ ಜೀವನವು ವಿಶಿಷ್ಟದ ಪ್ರಿಯವಾದುದರಿಂದಲೆ, ಜೀವನದಲ್ಲಿ ಒದಗಿದ ಎಡರು ತೊಡರುಗಳನ್ನು ಅವರು ಲಕ್ಷಿಸದೆ, ಮಕ್ಕಳ [illegible] ನಾಗರಾಗಿ ತಮ್ಮ ವಿನೋದ [illegible] ಪ್ರಿಯ ಜೀವನವನ್ನು ತಮ್ಮ ನಾಟಕ, ಕಥೆಗಳಲ್ಲಿ ವ್ಯಕ್ತಪಡಿಸಿರುವರು. ಕಾಮತರಿಗೆ ಸಂಗೀತದಲ್ಲಿಯೂ ಅಭಿರುಚಿಯಿರುವುದು. ಅದರಂತೆ ಅವರಿಗೆ 'ಫೋಟೋಗ್ರಫಿ'ಯಲ್ಲಿಯೂ ಆಸಕ್ತಿಯುಂಟು. ಮತ್ತೆ ಅವರು ವಾಗ್ಮಿಗಳೂ ಆಗಿರುವರು. ಲೇಖನ ಕಲೆಯೆಂಬುದು ಕಾಮತರಿಗೆ ನೀರು ಕುಡಿದಂತೆ, ತಾಂಬೂಲದ ತಟ್ಟೆಯನ್ನು ಮುಂದಿಟ್ಟು, ನಾಳೆಗೆ ಮಕ್ಕಳಿಗಾಗಿ ಒಂದು ನಾಟಕ ಬೇಕಾಗಿದೆ ಎಂದು ಹೇಳಿಬಿಟ್ಟರೆ, ಕೂತಲ್ಲಿಂದ ಏಳುವುದರೊಳಗಾಗಿ ಅವರು ನಾಟಕವನ್ನು ಬರೆದುಕೊಟ್ಟು ಹೋಗುವಷ್ಟು ಫಲವತ್ತಾದ ಮಿದುಳು ಕಾಮತರದು. ಅವರ ಉಪನ್ಯಾಸವೆಂದರೆ ವಿನೋದ ರಸಭರಿತ ಸಾಹಿತ್ಯದ ಸವಿಯೂಟದಂತೆ ಅವರು ನಮ್ಮ ನುಡಿಗಾಗಿ ಮಾಡಿರುವ ಸೇವೆಯ ದೃಷ್ಟಿಯಿಂದ, ಈಗಾಗಲೆ ಅವರಿಗೆ ಸಾಹಿತ್ಯ ಸಮ್ಮೇಲನಾಧ್ಯಕ್ಷ ಪದವು ಅವರಿಗೆ ದೊರೆಕಿರಬೇಕಾಗಿತ್ತು ಹಾಗೆ ದೊರೆಯದಿರುವುದಕ್ಕೆ ಈ ಪ್ರಜಾಪ್ರಭುತ್ವದ ಕೂಗಿನ ಯುಗದಲ್ಲಿ, ಅವರ ನಿರ್ಧನಿಕತೆಯು ಕಾರಣವೆಂದು ಹೇಳಲಾಗುವುದಿಲ್ಲ ಶೀಘ್ರದಲ್ಲಿಯೆ ಅವರಿಗೆ ಸಲ್ಲಬೇಕಾದ ಗೌರವವನ್ನು ಎಚ್ಚೆತ್ತ ಕರ್ಣಾಟಕವು ಸಲ್ಲಿಸಲಿರುವುದೆಂದು ನಂಬಬಹುದಾಗಿದೆ ಈಗ ಅವರ ಮಕ್ಕಳಲ್ಲಿ ಕೆಲವರು ಬೆಳೆದು ವಿದ್ಯಾವಂತರಾಗಿರುವುದರಿಂದ ಶ್ರೀಯುತರಿಗೆ ಅತ್ಯವಶ್ಯವಾಗಿರುವ ವಿಶ್ರಾಂತಿಯೂ, ಆರೋಗ್ಯ ಭಾಗ್ಯವೂ ದೊರೆತು ಅವರ ನುಡಿಸೇವೆಯಿಂದ, ನಮ್ಮ ನುಡಿ ಗೌರವವು ಮತ್ತಷ್ಟು ಏರಿಯೆತ್ತಿ ನಿಲ್ಲುವಂತಾಗಲೆಂದು ನನ್ನ ಹಾರೈಕೆ

ಕನ್ನಡ ನುಡಿಯಿಂದ
ಜುಲೈ ೩೧

ದಿವಂಗತ ಶ್ರೀ ಕಾಮತರ—
ಶೋಕ ಪ್ರದರ್ಶನ ಸಭೆ

ದಿವಂಗತ ಶ್ರೀ ಎಂ ಎನ್. ಕಾಮತರವರ ಅಕಾಲ ನಿಧನದ ಕುರಿತು ಸಂತಾಪ ಸೂಚಿಸಲು ಸ್ಥಳೀಯ ಮಿತ್ರಮಂಡಲಿಯ ಮಹಾ ಸಭೆಯೊಂದು ಕಳೆದ ಆದಿತ್ಯವಾರ ಸಂಜೆ ಕೆನರಾ ಹೈಸ್ಕೂಲಿನಲ್ಲಿ ಸ್ಥಳೀಯ ಗಾ॥ ಟ್ರೈನಿಂಗ್ ಶಾಲಾ ನಿವೃತ್ತ ಹೆಡ್ ಮಾಸ್ಟರಾ ಶ್ರೀ. ಕೆ. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕಡೆಂಗೋಡ್ಲು ಶಂಕರ ಭಟ್ಟ ಮತ್ತು ಹುರುಳಿ ಭೀಮರಾಯರು ಕಾಮತರ ಬಹುಮುಖವಾದ ಸಾಹಿತ್ಯ ಸೇವೆಯನ್ನು ವಿವರಿಸಿ, ಅವರ ಗುಣಕಥನ ಮಾಡಿದರು. ಸಂತಾಪ ಸೂಚನಾ ಠರಾವು ಮಾನ್ಯವಾದ ಬಳಿಕ, ಅಧ್ಯಕ್ಷರು ತಮ್ಮ ಹೃದಯದಿಂದ ಹೊರಹೊಮ್ಮಿದ ಕೆಲವು ಮಾತುಗಳಿಂದ ಕಾಮತರನ್ನು ನೆನೆದರು.

ವಿಷಪ್ರಾಯವಾದ ಕಡಿತಗಳ
ವಿಷಯ ಜಾಗರೂಕರಾಗಿರಿ
ಜಾಂಬಕನ್ನು ಸವರಿ
ತೊಡಕನ್ನು ನಿವಾರಿಸಿರಿ

ಕ್ರಿಮಿಕೀಟಗಳಿಂದ ಕಡಿಯಲ್ಪಟ್ಟ ಗಾಯಗಳು, ಕಡಿತಗಳು ಭಯಂಕರವಾಗಿ ಬಾತು ವಿಷಪ್ರಾಯವಾಗಿ ಹಾನಿಯಾಗಬಹುದು. ಆದುದರಿಂದ ಆ ತೊಡಕುಗಳನ್ನು ನಿವಾರಿಸುವ ವಿಷಹಾರಿ ಜಾಂಬಕನ್ನು ಸವರಿಸಿರಿ. ಜಾಂಬಕಿನಲ್ಲಿರುವ ಅಮೂಲ್ಯ ಔಷಧೀಯ ಗಿಡಮೂಲಿಕೆಗಳ ಎಣ್ಣೆಯು ನಿಮ್ಮ ನರನಾಡಿಗಳನ್ನು ಪ್ರವೇಶಿಸಿ ನೋವನ್ನು ನಿವಾರಿಸುತ್ತದೆ. ಬಾತುವಿಕೆಯನ್ನು ಗುಣಮಾಡುತ್ತದೆ. ಜಾಂಬಕು ಒಂದೂ ಕಲೆಯನ್ನುಂಟುಮಾಡದೇ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಜಾಂಬಕನ್ನು ರೂ 1 ಮತ್ತು ರೂ. 2-4-0ರಂತೆ ಮಾರುತ್ತಾರೆ

ಏಜಂಟ್ಸ್—

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್ ಟೌನ್ ಮದ್ರಾಸು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿ ಕೊಬ್ಬುಗಳಿಂದ ವಿರಹಿತವಾದದ್ದು

WHAT MAKES A MAN RICH?

Luck?	—	Very rarely
Inheritance?	—	Not often
Speculation?	—	Once in a blue moon
Gambling?	—	Never
Hard Work?	—	Very Often
Hard work and THRIFT		Always

RESOURCES OF A CRORE

Estd 1906
CANARA BANK LIMITED.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು
ಯು. ಪಾಂಡುರಂಗ ನಾಯಕ್,
ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್
ಪ್ರೇಮ ಮೆಡಿಕಲ್ ಹಾಲ್,
ಗುತ್ತಿಗಾರ್ ದ. ಕ.

ನೋಟಗಳು!

ಬೇರೆ ಬೇರೆ ಕೇಂದ್ರಗಳಲ್ಲಿ ಅಖಿಲ ಭಾರತದಲ್ಲೆಲ್ಲಾ ಪಾಕಿಸ್ಥಾನ ದಿನ ಮತ್ತು ಹಿಂದೂಸ್ಥಾನ ದಿನಗಳು ಆಚರಿಸಲ್ಪಟ್ಟವು. ಜಿನ್ನರು ಈ ಸಂದರ್ಭದಲ್ಲಿ ತಮ್ಮ ಭವಿಷ್ಯವನ್ನು ಕಣ್ಣಿಟ್ಟು ನೋಡಲು ಮರೆತಿರಲಾರರು!

◈

ಅದರಲ್ಲೂ ಕಾಂಗ್ರೆಸಿಗೆ ಸೇರದೇ ಇರುವ ಮುಸ್ಲಿಂ ಪ್ರಾಂತಗಳಿಂದಲೂ ಅವರ ಯೋಜನೆಗೆ ದೊರೆತ ನಿಷೇಧವನ್ನು ಕಂಡು ಜಿನ್ನರ ತಲೆಗೆ ಸಿಡಿಲು ಬಿದ್ದಂತಾಗಿರಬೇಕು!

◈

"ಪಾಕಿಸ್ಥಾನ ಯೋಜನೆಯ ಬೆನ್ನುಮೂಳೆಯನ್ನು ನಾವು ಮುರಿಯುವೆವು" ಎಂದು ಘೋಷಿಸಿದರು ಗಡಿನಾಡಿನ ಪಠಾಣರ ಮುಂದಾಳುವಾದ ಗಫರ್ ಖಾನರು.

◈

ಗಡಿನಾಡಿನ ಪಠಾಣರೆಂದರೆ ಯಾವಾಗಲೂ ಸ್ವಲ್ಪ ಕಠಿಣವಾಗಿ ಮಾತನಾಡುವ ಸ್ವಭಾವದವರು! ಯಾರು, ಏನಾದರೂ ಅಲ್ಪತನ ಮಾಡುವುದನ್ನು ಕಂಡರೆ ಸರಿ! ಅವರು ಸಿಟ್ಟಿನಿಂದ ಕೆಂಡವಾಗಿ ಬಿಡುತ್ತಾರೆ.

◈

ಹಿಟ್ಲರನ ಬಾಧೆ ಎಲ್ಲೆಲ್ಲಿಯೂ ಇದೆ. ಹಿಟ್ಲರನ ಮೀಸೆಯ ನೆವನದಿಂದ ಕೃಷ್ಣನಗರದ ಒಬ್ಬ ಬಡ ಶಾಲಾ ಉಪಾಧ್ಯಾಯರು ಪ್ರಾಣವನ್ನು ಕಳೆದುಕೊಂಡಿರುವರೆಂದು ತಿಳಿದಿದೆ.

◈

ಅದರ ಕಥೆ ಹೀಗಿದೆ:— ಆ ಉಪಾಧ್ಯಾಯರ ಮೀಸೆ ಬಹಳ ಉದ್ದವಾಗಿತ್ತಂತೆ. ತುಂಟ ಕೋರರಾದ ಹುಡುಗರು ಅವರನ್ನು ನೋಡಿದ ಕೂಡಲೇ "ಸ್ಟಾಲಿನ್ ಬಂದ" ಎನ್ನುತ್ತಿದ್ದರಂತೆ! ಉಪಾಧ್ಯಾಯರಿಗೆ ಬೇಸರ ಹುಟ್ಟಿತು! ಒಂದು ದಿನ ಉದ್ದವಾಗಿದ್ದ ಮೀಸೆಯನ್ನು ಕತ್ತರಿಸಿಬಿಟ್ಟರು.

◈

ಮರುದಿನ ಹೋಗುತ್ತಾರೆ! ಮತ್ತೊಂದು ಬೊಬ್ಬೆ! "ಹಿಟ್ಲರನ ಸವಾರಿ ಬಂತು"ಯೆಂದು ಒಬ್ಬ ಹುಡುಗ ಕೂಗೆಬ್ಬಿಸಿದನಂತೆ. ಈ ಹಿಟ್ಲರ್ ಸ್ಟಾಲೀನರಿಂದ ಆ ಬಡ ಉಪಾಧ್ಯಾಯರಿಗೆ ಜೀವವೇ ಬೇಡವಾಯಿತು. ಮರುದಿನ ಮುಂಜಾನೆ ಮಾಳಿಗೆಯಿಂದ ಬಿದ್ದು ಜೀವ ಕಳಕೊಂಡರಂತೆ.

◈

ಬೋಸರು ಭಾರತದ ರಾಜಕೀಯದಲ್ಲಿ ಫ್ಯಾಸಿಸ್ಟರ ರೀತಿಯನ್ನು ಅನುಸರಿಸುತ್ತಾರೆಂದು ಬಂಗಾಳದ ಪತ್ರಿಕೆಯೊಂದು ಸ್ವಲ್ಪ ಸಮಯದ ಹಿಂದೆ ಹೇಳಿತ್ತು. ಕಲ್ಕತ್ತಾ ಕೋರ್ಪರೇಶನಿನ ವಿಚಾರದಲ್ಲಿ ಅದೇ ತತ್ವವನ್ನು ಬೋಸರು ಅನುಸರಿಸಿದಂತೆ ಈಗ ಕಂಡು ಬರುತ್ತದೆ.

◈

ಅವರು ಮೊದಲು ಹಿಂದೂ ಮಹಾಸಭೆಯೊಡನೆ ಸಂಧಿಮಾಡಿಕೊಂಡರು. ಅದನ್ನು ಮುರಿದು ಕೂಡಲೇ ಮುಸ್ಲಿಂ ಲೀಗಿನೊಡನೆ ಒಪ್ಪಂದ ಮಾಡಿದರು!

◈

ಬೊಂಬಾಯಿಯಲ್ಲಿ ಜಿನ್ನಾ ಬೋಸರಿಗಾದ ಭೇಟಿಯು ಮೊನ್ನೆಯ ಪ್ರೆಸಿಡೆಂಟರ ನಲಪ್ಪದ ಹಿಟ್ಲರ್ ಮುಸಲನಿಗಳ ಭೇಟಿಯನ್ನೇ ಹೋಲುತ್ತದೆ!

◈

ಬೋಸರ ಹೃದಯದಲ್ಲಿ ಅಂತಹ ಕೆಟ್ಟ ವಿಚಾರ ಉಂಟೋ ಇಲ್ಲವೋ ತಿಳಿಯದು. ಇಂದು ಅವರ ಕಾರ್ಯಗಳಿಂದ ಅವರು ಶತ್ರುಗಳ ಕೈಗೊಂಬೆಯಾಗಿ ಕುಣಿಯುತ್ತಿದ್ದಾರೆನ್ನಲು ಯಾವ ಅಡ್ಡಿಯೂ ಇಲ್ಲ.

◈

ಹಿಂದೂ–ಮುಸ್ಲಿಂ ವಾಗ್ವಾದಗಳ ಈ ಕಾಲದಲ್ಲಿ ಮುಸ್ಲಿಮರು ಆರೋಪವೆತ್ತಿರುವ ವಿಷಯವೆಂದರೆ ಸೀರೆಯೊಂದೇ! ಅಖಿಲ ಜಗತ್ತಿನಲ್ಲಿ ಸೀರೆಯುಡುವ ಜಾತಿ ಹಿಂದುಗಳು ಮಾತ್ರ! ಮುಸ್ಲಿಮರು ಹಿಂದೂದೇಶಕ್ಕೆ ಬರುವುದಕ್ಕಿಂತ ಮೊದಲೇ ಹಿಂದೂ ಸ್ತ್ರೀಯರು ಸೀರೆಯುಡುತ್ತಿದ್ದರು! ಆದ ಕಾರಣ ಮುಸ್ಲಿಂ ಸ್ತ್ರೀಯರು ಸೀರೆಯುಡುವುದನ್ನು ಹಿಂದೂ ಮಹಿಳೆಯರಿಂದಲೇ ಕಲಿತಿರಬೇಕು!

◈

ಹಿಂದೂ ಸ್ತ್ರೀಯರು ಮುಸ್ಲಿಂ ಹೆಂಗಸರಿಗೆ ಸೀರೆಯುಡಲು ಕಲಿಸಿದ್ದರೆ ಖಂಡಿತವಾಗಿ ಮುಸ್ಲಿಮರು ಅದನ್ನು ನಿಷೇಧಿಸಲೇ ಬೇಕಾಗುವುದು. ಏಕೆಂದರೆ ಸೀರೆಯುಡುವುದು ಹಿಂದೂ ಕ್ರಮವಷ್ಟೆ?

◈

ಮುಸ್ಲಿಂ ಹೆಂಗುಸರು, ಹಿಂದೂ ಹೆಂಗಸರಿಂದ ಸೀರೆಯುಡಲು ಕಲಿಯುವುದಕ್ಕಿಂತ ಮೊದಲು ಬಹುಶಃ ತಲೆಯಿಂದ ಕಾಲವರೆಗೆ ಉದ್ದ ಘೋಷೆಯೊಂದನ್ನೇ ಇಳಿಸಿ ಬಿಡುತ್ತಿರೋ ಏನೊ?—ಒಳಗಿನ ಗುಟ್ಟುಗಳು ತಿಳಿದು ಬಂದಿಲ್ಲ!

ಒಳಗಡೆ ಪೈಜಾಮ್ ತೊಡುತ್ತಿದ್ದರೆಂದು ಇತಿಹಾಸಗಳ ವರ್ಣನೆಗಳಿಂದ, ಲೂ ಚಿತ್ರಗಳಿಂದಲೂ ತಿಳಿದುಬರುತ್ತದೆ!

—ಹೀಗೆಂದು ನೇಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಬರೆದ ಒಂದು ವ್ಯಂಗ ಲೇಖನವು ಒಬ್ಬ ಮುಸ್ಲಿಮ್ ಬಂಧುಗಳನ್ನು ಬಹಳವಾಗಿ ಕೆರಳಿಸಿ ಬಿಟ್ಟಿತಂತೆ!

◈

ಅಖಿಲ ಮುಸ್ಲಿಂ ಸ್ತ್ರೀಯರ ಪರವಾಗಿ ಮಾನನಷ್ಟದ ದಾವೆಯನ್ನು ಅವರು ಈಗಾಗಲೇ ಆ ಪತ್ರಿಕೆಯ ಮೇಲೆ ಹೂಡಿರಬೇಕು.

◈

ಅಲ್ಲಾಹಾಬಾದಿನ ರಾಷ್ಟ್ರೀಯ ಮಹಿಳಾ ಸಂಘದವರು "ಗೃಹ ಸ್ವಿಮಾರ್ಲ್ಯ"ದ ಪ್ರಚಾರದ ಕಾರ್ಯವನ್ನು ಆರಂಭಿಸಿರುವರಂತೆ.

◈

ಹಳ್ಳಿ ಹಳ್ಳಿಗಳಲ್ಲಿ ಒಕ್ಕಲು ಮನೆಗಳು ಅಲ್ಲಿ ಶಾಲಾಗೆ ಕಟ್ಟುತ್ತಾರೆ! ತಿಂಗಳ ಮೂರು ನಾಲ್ಕು ರೂಪಾಯಿ ಬಾಡಿಗೆಗೆ ಮನೆ ಮಾಡಿಗೈಯ್ಯುವ ಜನರು ಅವುಗಳಲ್ಲಿ ಇರುತ್ತಾರೆ! ಅಂತಹ ನೂರಾರು ಮನೆಗಳು ಅಲ್ಲಿ ಇರುತ್ತವೆ. ಮಹಿಳಾ ಸಂಘದ ಸದಸ್ಯೆಯರು ಅಲ್ಲಿಗೆ ಸರ್ತಿಗೊಬ್ಬಳಂತೆ ಹೋಗಿ ಅವರಿಗೆ ಆರೋಗ್ಯ ಜೀವನ, ಶಿಶು ರಕ್ಷಣೆ, ಮೊದಲಾದ ವಿಷಯಗಳನ್ನು ಹೇಳಿಕೊಡುವರು. ಇದರಿಂದ ಈಗಾಗಲೇ ಅಲ್ಲಿನ ಮಹಿಳೆಯರು ಬಹಳ ಪ್ರಯೋಜನ ಪಡೆಯುವರಂತೆ. ಮಹಿಳಾ ಸಂಘದ ಕಾರ್ಯವೂ ಪ್ರಶಂಸೆಗೊಳಗಾಗಿರುವುದೆಂದು ತಿಳಿದು ಬಂದಿದೆ.

◈

ರಾಷ್ಟ್ರಸೇವೆಯನ್ನು ಮಾಡಬೇಕೆಂದು ಬಯಸುವ ಮಹಿಳಾಸಂಘಗಳಿಗೆ ಇದೊಂದು ಉತ್ತಮ ಆದರ್ಶ ಕಾರ್ಯವಾಗಿದೆ.

◈

ಖಾಕ್ಸಾರರ ನಿಧಿಯಲ್ಲಿ ಲಕ್ಷಾಂತರ ದ್ರವ್ಯವನ್ನು ಸರಕಾರವು ವಶಮಾಡಿಕೊಂಡಿರುವುದಾಗಿ ತಿಳಿದಿದೆ.

◈

ಖಾಕ್ಸಾರರ ಮುಖಂಡರಾದ ಅಲಾಮೆರವರು ಬಹಳ ದ್ರವ್ಯವನ್ನು ಒಟ್ಟುಗೂಡಿಸಿದ್ದರಂತೆ!

◈

ಐವತ್ತು ಗುಡಿಗಳಿಗೆ ಐವತ್ತು ಯುವಕರು, ಐವತ್ತು ಕುದುರೆಗಳೊಡನೆ ಬರಬೇಕು. ಅವುಗಳನ್ನು ಸಾಕಲು ಅವರೇ ಅನುಕೂಲತೆಗಳನ್ನಿಟ್ಟಿರಬೇಕು. ಖಾಕ್ಸಾರರ ನಿಧಿಗೆ ಕೊಟ್ಟ ದ್ರವ್ಯವು ಒಂದು ಪೈಯನ್ನು ಈಗ ವೆಚ್ಚಮಾಡಲಾಗುತ್ತಿಲ್ಲ. ಒಂದು ಸಮಯವುಂಟು; ಪ್ರತಿಯೊಂದು ಖಾಕ್ಸಾರನ ಜೀವವೂ ಎಲ್ಲಾ ದ್ರವ್ಯವೂ ನಮ್ಮ ಚಳವಳಿಕ್ಕೆ ಬೇಕಾದೀತು. "ಹೀಗೆಂದು ಅವರು ಮುಂದಾಳುವು ಸಾರುತ್ತಿದ್ದರು.

◈

ಪಂಜಾಬಿನ ಸರಕಾರವು ಖಾಕ್ಸಾರ ಚಳವಳವನ್ನು ದೇಶದ್ರೋಹಿಯೆಂದು ಸರ್ವ ಯತ್ನಗಳಿಂದ ಅಡಗಿಸುತ್ತದೆ!

◈

ಖಾಕ್ಸಾರದ ಚಳವಳಿವು ಹಿಂಸಾಮಯವಾಗಿ ಸಾಗುವುದರಿಂದ ಅದನ್ನು ತಡೆಯದೆ ಸರಕಾರಕ್ಕೆ ನಿರ್ವಾಹವಿಲ್ಲದಾಗಿದೆ!

◈

ಜಾತೀಯತೆಯ ಆವೇಶದಿಂದ ಹೊರಟ ಹೊಸ ಪಂಗಡವಿದು! ಇದರ ಧ್ಯೇಯ ತತ್ವಗಳ ವಿಷಯ ಹಲವು ಸುದ್ದಿಗಳಿವೆ!

ರೂ. 550 ಬಹುಮಾನ

ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು. ಬೆಲೆ ತಾಮ್ರದ ಆವರಣದ್ದು ರೂ. 1-15-0 ಮೂರಕ್ಕೆ ರೂ. 5, ಬೆಳ್ಳಿಯ ಆವರಣದ್ದು ರೂ. 2-12-0 ಮತ್ತು ಚಿನ್ನದ ಆವರಣದ್ದು ರೂ. 6-8-0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ. ವ್ಯಾಪಾರ, ಪರೀಕ್ಷೆ, ಪಗಡೆಯಾಟ, ನೌಕರಿ, ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು. ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು. ಬೆಲೆ: ತಾಮ್ರದ ಆವರಣ ರೂ. 1-15-0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ. 2-12-0, ಚಿನ್ನದ ಆವರಣ ರೂ. 6-8-0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್‌ಫುಲ್ ನಂ. 4ಕ್ಕೆ ಕೇಳಿರಿ. ಬೆಲೆ 5-4-0, 6 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್-ಪವರ್‌ಫುಲ್ ನಂ. 5ಕ್ಕೆ ಕೇಳಿರಿ ಬೆಲೆ 7-8-0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ.

ಸೂಚನೆ: ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮೂ, ಸರಿ ಕಾರ್ಯಗಾರ್ಯಸದಿಲ್ಲವಾದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ಸರಿಯಾಗಿ ಕಾರ್ಯಸಬೇಕಾದರೆ ನೀವೇನಾದರು ಕಷ್ಟಪಡಬೇಕೆಂದಿಲ್ಲ.

ANAND SWAMI

Anand Bhawan, Post Box No. 27 (S.-M.) Amritsar

Tender Notice.

Depressed Classes Mission Mangalore—Well for the Girls' Boarding House.

Sealed tenders for the above work will be received by the Depressed Classes Mission Mangalore up to 9th May 1940 and will be opened by the Hon. Joint Secretary or his representative at his office on the 10th May 1940.

Instructions to the parties tendering can be had from the office of Mission on all days of the week from 10 A. M. to 4-30 P. M.

(By order of the Hon. Jt. Secretary)

B. V. Nayak.

ವಿಜ್ಞಾನಯುಗ

ಕಾಲಿನ ವ್ರಣಕ್ಕೆ ಹೊಟ್ಟೆ ಚರ್ಮದ ಕಸಿ

ಲಂಡನಿನ ವೆಸ್ಟ್‌ಮಿನಿಸ್ಟರ ಆಸ್ಪತ್ರೆಯ ಸರ್ಜನರು ಒಂದು ಅದ್ಭುತವಾದ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಜಗತ್ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅವರು ೨೧ ತಿಂಗಳ ಅವಧಿಯಲ್ಲಿ ಹದಿನೈದು ಶಸ್ತ್ರ ಪ್ರಯೋಗಗಳನ್ನು ಮಾಡಿ ಒಂದು ಚಿಕ್ಕ ಮಗುವಿನ ಪ್ರಾಣವನ್ನು ಉಳಿಸಿರುವರು.

ಈ ಮಗುವಿನ ಹೆಸರು ರಾಯ್ಮಂಡ್ ಸ್ಟಾರ್ಟ ಎಂದು ಮಗುವು ಹುಟ್ಟಿದಾಗಲೇ ಅದರ ಕಾಲಿಗೊಂದು ಗಾಯವಾಗಿತ್ತು. ದಿನಹೋಗುತ್ತ ಗಾಯವು ಒಣಗುವದರ ಬದಲಿಗೆ ವ್ರಣವಾಗಿ ಬೆಳೆಯಿತು. ಸಾಧಾರಣ ಸ್ಥಿತಿಯಲ್ಲಾದರೆ ಕಾಲನ್ನು ಕಡಿದು ತೆಗೆದು ಮಗುವಿನ ಪ್ರಾಣವನ್ನು ಉಳಿಸುವ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಕಾಲು ಕಡಿದು ಮಗುವಿಗೆ ಪ್ರಾಣಾಂತಿಕ ವೇದನೆಯನ್ನು ಕೊಡುವದು ಡಾಕ್ಟರರ ಮನಸ್ಸಿಗೆ ಬರಲಿಲ್ಲ.

ಆದುದರಿಂದ ಅವರು ಬೇರೊಂದು ಉಪಾಯವನ್ನು ಆಲೋಚಿಸಿದರು. ಅವರು ಮಗುವಿನ ಹೊಟ್ಟೆಯ ಚರ್ಮವನ್ನು ಕಡಿದು ತೆಗೆದು ಕಾಲಿನ ವ್ರಣಕ್ಕೆ ಕಸಿಕಟ್ಟುತ್ತ ಬಂದರು. ಈಗ ಮಗುವು ಹುಟ್ಟಿದಾರಂಭದಿಂದ ೨೧ ತಿಂಗಳ ತನಕ ವ್ರಣದ ಚಿಕಿತ್ಸೆಗೆ ಡಾಕ್ಟರರು ಪಟ್ಟ ಪರಿಶ್ರಮವು ಸಫಲವಾಯಿತೆನ್ನಬಹುದಾಗಿದೆ. ಈ ೨೧ ತಿಂಗಳ ಅವಧಿಯಲ್ಲಿ ೧೫ ಬಾರಿ ಹೊಟ್ಟೆಯ ಚರ್ಮವನ್ನು ಸಣ್ಣ ಸಣ್ಣ ತುಂಡುಗಳಾಗಿ ಕಡಿದು ಕಾಲಿನ ವ್ರಣಕ್ಕೆ ಕಸಿಕಟ್ಟುತ್ತ ಬಂದುದರಿಂದ ವ್ರಣವು ಒಣಗಿದೆ. ಮಗುವು ಬದುಕಿದೆ. ಈಗ ಮಗುವು ಕಷ್ಟವಿಲ್ಲದೆ ನಡೆಯುತ್ತದೆ. ಅದು ಆಸ್ಪತ್ರೆಯನ್ನು ಬಿಟ್ಟು ತನ್ನ ತಾಯಿ ತಂದೆಗಳನ್ನು ಸೇರಿದೆ.

ರಾಯ್ಮಂಡನು ದೊಡ್ಡವನಾದ ಮೇಲೂ ಡಾಕ್ಟರರು ಅವನ ನಿರೀಕ್ಷಣೆಯನ್ನು ಬಿಟ್ಟುಬಿಡಲಾರರು. ಯಾಕೆಂದರೆ ಈ ರೀತಿ ಕಸಿಕಟ್ಟಿರುವದು ಇದು ಮೊದಲನೆ ಬಾರಿಯಾಗಿದೆ. ಆದುದರಿಂದ ಅದರ ಪರಿಣಾಮವು ಯಾವಾಗ ಹೇಗಾದೀತೆಂಬುದನ್ನು ತಿಳಿದು ಭವಿಷ್ಯ ಜನಾಂಗದ ಪ್ರಯೋಜನಕ್ಕೆ ಬರೆದಿಡುವದು ಅಗತ್ಯವಾಗಿದೆ.

ವಿಷಾಣುಗಳನ್ನು ಕೊಲ್ಲುವ ವಿಚಿತ್ರ ದೀಪ

ಯುದ್ಧಕ್ಷೇತ್ರಕ್ಕೆ ತೆರಳಿರುವ ಸೈನಿಕರೊಳಗೆ ಹರಡಬಹುದಾದ ರೋಗಾಣುಗಳನ್ನು ಕೊಲ್ಲಲಿಕ್ಕೆ ಇಂಗ್ಲಾಂಡಿನ ವಿಜ್ಞಾನಿಕರು ಒಂದು ವಿಚಿತ್ರ ದೀಪವನ್ನು ಕಂಡುಹಿಡಿದಿದ್ದಾರೆ. ಈ ದೀಪದ ಪ್ರಕಾಶ ಕಿರಣಗಳು ಎಂಥ ಭಯಂಕರ ರೋಗದ [illegible]ವಿಷಾಣುಗಳನ್ನಾದರೂ ಕ್ಷಣಾರ್ಧದಲ್ಲಿ ನಾಶಮಾಡಲಿಕ್ಕೆ ಸಮರ್ಥವಾಗಿರುವವು. ಈಗ ಈ ದೀಪಗಳನ್ನು ಪರೀಕ್ಷಿಸಿ ಅವು ಯತಾರ್ದಕ್ಕೂ ಎಲ್ಲಾ ಸಮಯಗಳಲ್ಲಿ ಸುಲಭದಲ್ಲಿ ಉಪಯೋಗಕ್ಕೆ ಬರುವವೆಂದು ಗೊತ್ತಾದರೆ, ಅವುಗಳನ್ನು ಎಲ್ಲಾ ಸೈನಿಕ ದಳಗಳಿಗೆ ಒದಗಿಸಿಕೊಡಬೇಕೆಂದು ಅಧಿಕಾರಿಗಳ ಅಭಿಪ್ರಾಯವಾಗಿದೆ.

ಇಂಥ ವಿಚಿತ್ರ ದೀಪಗಳ ರಚನೆಯನ್ನು ಮೊದಲು ಅಮೇರಿಕದ ವಿಜ್ಞಾನಿಗಳು ಕಂಡುಹಿಡಿದಿದ್ದರು. ಅವು ಇನ್‌ಫ್ಲುಯೆಂಜಾ ಮೊದಲಾದ ರೋಗಗಳ ಅಣುಗಳನ್ನು ನಾಶಮಾಡಬಲ್ಲವೆಂದು ಆಗ ಗೊತ್ತಾಗಿದ್ದಿತು. ಅಮೇರಿಕದ ವಿಜ್ಞಾನಿಗಳ ರಚನೆಯ ಆಧಾರದಿಂದ ಬ್ರಿಟಿಷ ವಿಜ್ಞಾನಿಗಳು ಈ ದೀಪದಲ್ಲಿ ಸುಧಾರಣೆಗಳನ್ನು ಮಾಡಲಿಕ್ಕೆ ತೊಡಗಿದ್ದಾರೆ.

ಬೇಕಾದಾಗ ಬೆಳಕು; ಬೇಡವಾದಾಗ ಇಲ್ಲ

ಹನ್ಸ್‌ರಾಜ್ ವಾಯರ್‌ಲೆಸ ಎಂಬವರು ಕ್ರಾಂತಿಕಾರಿಗಳ ಗುಂಪಿಗೆ ಸೇರಿದ ಒಬ್ಬ ರಾಜಕಾರಣಿಗಳಾಗಿರುವರು. ಇವರನ್ನು ಸರಕಾರವು ಸ್ಥಾನಬದ್ಧ ಕೈದಿಗಳಾಗಿ ಸಿಂಧದಲ್ಲಿ ಒಂದಿಟ್ಟಿದೆ. ಹಂಸರಾಜರು ರಾಜಕಾರಣಿಗಳಾಗಿರುವಂತೆ ವೈಜ್ಞಾನಿಕ ಶೋಧಕರಾಗಿಯೂ ಇರುವರು. ಇವರು ಈಚೆಗೆ ಕೆಲವು ಅದ್ಭುತ ಶೋಧೆಗಳನ್ನು ಮಾಡಿರುವರು. ಅವರು ತಾವು ಮಾಡಿದ ಕೆಲವು ಉಪಯುಕ್ತ ಶೋಧೆಗಳನ್ನು ಸಿಂಧದ ಮುಖ್ಯ ಮಂತ್ರಿಗಳಿಗೆ ತೋರಿಸಿ ಅವರ ಮೆಚ್ಚುಗೆಯನ್ನು ಪಡೆದಿರುವರಲ್ಲದೆ, ಅವರ ಸಾಧನಗಳನ್ನು ಪ್ರಚಾರಕ್ಕೆ ತರಲು ಸರಕಾರವು ಸಾಧ್ಯವಿರುವ ದ್ರವ್ಯಸಹಾಯವನ್ನು ಕೊಡುವದಾಗಿಯೂ ಭರವಸೆಯನ್ನಿತ್ತಿರುವರು.

ಶ್ರೀ ಹಂಸರಾಜರು ಕಂಡುಹಿಡಿದಿರುವ ಒಂದು ಪ್ರಾಮುಖ್ಯ ಶೋಧನೆ ಎಂದರೆ, ಗಾಳಿಯಿಂದ ತಿರುಗುವ ಯಂತ್ರವನ್ನು ಹೋಲುವ ವಿದ್ಯುತ್ಪಾದಕ ಯಂತ್ರವಾಗಿದೆ. ಈ ಯಂತ್ರವು ಗಾಳಿಯಲ್ಲಿ ತಿರುಗುತ್ತಿದ್ದಂತೆ ಯಂತ್ರದಲ್ಲಿ ವಿದ್ಯುತ್ ಹುಟ್ಟಿ ಅದರಿಂದ ವಿದ್ಯುದ್ದೀಪಗಳ ಬೆಳಗುವವು. ಆಶ್ಚರ್ಯವೆಂದರೆ ಇಂಥ ಯಂತ್ರಗಳನ್ನು ಹಳ್ಳಿಹಳ್ಳಿಗಳಲ್ಲಿಯೂ ಜೋಡಿಸಲಿಕ್ಕಾಗುವಷ್ಟು ಇವು ಸುಲಭವಾಗಿರುವವು. ಇವುಗಳ ಚಲನೆಯ ಖರ್ಚು ಕಡಿಮೆಯಾಗಿರುವದು.

ಸೂಜಿಗಳ ಅಗತ್ಯವಿಲ್ಲದೆ, ಕೇವಲ ವಿದ್ಯುಚ್ಛಕ್ತಿಯ ಬಲದಿಂದ ರಾಗಾಲಾಪನ ಮಾಡಬಲ್ಲ ಅದ್ಭುತ ಗ್ರಾಮೊಫೋನು ಇವರ ಇನ್ನೊಂದು ಶೋಧನೆಯಾಗಿದೆ. ಈ ಗ್ರಾಮೊಫೋನಿಗೆ ಪ್ಲೇಟುಗಳು ಬೇಕಾಗಿಲ್ಲ. ಬೇರೆಬೇರೆ ಹಾಡು ಅಥವಾ ಮಾತುಗಳ ಚಿತ್ರವನ್ನು ಈ ಗ್ರಾಮೊಫೋನಿನಲ್ಲಿ ಇಟ್ಟು ಅದರ ಮೇಲೆ ಬೆಳಕನ್ನು ಚೆಲ್ಲುವರು. ಆಗ ಗ್ರಾಮೊಫೋನು ಹಾಡು ಅಥವಾ ಮಾತನ್ನು ಪ್ರತಿಧ್ವನಿಸುತ್ತದೆ.

ಹಾಗೆಯೇ ಶ್ರೀ ಹಂಸರಾಜರು ಇನ್ನು ಅನೇಕ ವಿದ್ಯುದ್ಯಂತ್ರಗಳನ್ನು ಕಂಡುಹಿಡಿದಿದ್ದಾರೆ. ಇವುಗಳೆಲ್ಲ ನಿತ್ಯ ಜೀವನದಲ್ಲಿ ಉಪಯೋಗಕ್ಕೆ ಬರುವಂತವುಗಳಾಗಿ ಇರುತ್ತವೆ. ಈ ಶೋಧನೆಗಳನ್ನು ಒಂದು ಕಂಪನಿಯವರು ೧೦೦೦೦ ರೂಪಾಯಿಗಳಿಗೆ ಕ್ರಯಕ್ಕೆ ಕೊಂಡುಕೊಳ್ಳಲಿಕ್ಕೆ ಸಿದ್ಧರಿದ್ದರಾದರೂ, ಶ್ರೀ ಹಂಸರಾಜರು ಅವನ್ನು ಕಂಪನಿಗೆ ಮಾರಿರುವದಿಲ್ಲ. ಅವರು ಆ ಶೋಧನೆಗಳನ್ನು ಸರಕಾರದಲ್ಲಿ ಪೇಟೆಂಟ ಮಾಡಿಸಿ, ತಾವೇ ಕಂಪನಿಯಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಲಿಕ್ಕಿದ್ದಾರೆ.

ಸೂರ್ಯ ಕಾಂತಿಮಯ ಜ್ಯೋತಿ

ಕೆಲಿಫೋರ್ನಿಯದ ಮೌಂಟ ವಿಲ್ಸನ್ ಪರೀಕ್ಷಣಾಲಯದ ಡಾಕ್ಟರ ವಾಲ್ಟ ವಿಲ್ಸನ್ ಎಂಬ ಖಗೋಲ ಶಾಸ್ತ್ರಜ್ಞರು ಸೂರ್ಯನಿಗಿಂತ ೨೫೦ ಪಾಲು ಹೆಚ್ಚು ಪ್ರಕಾಶಮಾನವಾದ ಒಂದು ಜ್ಯೋತಿಯನ್ನು ಆಕಾಶದಲ್ಲಿ ಕಂಡುಹಿಡಿದಿದ್ದಾರೆ. ಇಂತ ಜ್ಯೋತಿಯು ಒಳ್ಳೆ ಅಪರೂಪವಾಗಿರುವದು. ಆಕಾಶದೊಳಗೆ ಈ ವರೆಗೆ ಕಂಡುಹಿಡಿದ ಪಾಲುಮಾರು ಮಿಲಿಯ ನಕ್ಷತ್ರಗಳೊಳಗೆ ಸೂರ್ಯನಗಿಂತ ಹೆಚ್ಚು ಪ್ರಕಾಶಮಾನವಾದ ನಕ್ಷತ್ರಗಳ ಕೇವಲ ಇಪ್ಪತ್ತು ಮಾತ್ರ ಇರುವವು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

CONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ [illegible] ಮೇಲೆ

[illegible] ಮೂತ್ರಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಕೂಡಲೇ ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3—0—0 (ವಿ. ಪಿ ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು ,ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್ಪೆನ್ಸರಿ, ಕೆಮಿಸ್ಟ್ಸ, ಮತ್ತು ಡ್ರಗ್ಗಿಸ್ಟ್ಸ,

ಹಂಪನಕಟ್ಟಾ, ಮಂಗಳೂರು.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾರೀಕು 13-5-1940ರಿಂದಾ ಶ್ರೀ ತಾರೀಕು 22-5-1940ರ ವರೆಗೆ

ತಿರುಪತಿ ಗೋವಿಂದರಾಜ ಸ್ವಾಮಿ ದೇವಾಲಯದಲ್ಲಿ

ನಡಿಯುವ ಬ್ರಹ್ಮೋತ್ಸವ ಸಮಾರಂಭ

ಗರುಡಸೇವೆ ತಾ. 18-5-1940 ಮತ್ತು ರಥೋತ್ಸವ ತಾ. 21-5-1940 ರಲ್ಲು

ಮಂಗಳೂರಿನಿಂದ 5-15 a. m.ಗೆ ಹೊರಡುವ ಮೋಡರ್ನ್ ಮೋಟರ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಮಧ್ಯಾಹ್ನ 3-15 p. m.ನ ಒಳಗೆ ಮೈಸೂರಿಗೆ ತಲಪಿ, ಮೈಸೂರಿನಿಂದ 4 p. m.ಗೆ ಬಿಡುವ ರೈಲಿನಲ್ಲಿ ಕೂತು ಸಂಜೆ 7 p. m.ನ ಒಳಗೆ ಬೆಂಗಳೂರಿಗೆ ತಲಪಿ ಬೆಂಗಳೂರಿನಿಂದ 9 p. m.ನ ಬಿಡುವ ರೈಲಿನಲ್ಲಿ ಕೂತು ಕಟ್ಪಾಡಿಗಾಗಿ ತಿರುಪತಿಗೆ ಮರುದಿನ 10 a. m. ನ ಒಳಗೆ ತಲಪಬಹುದು.

ಬಸ್ಸು ಮತು ರೈಲು ಚಾರ್ಜು ರೂಪಾಯಿ 9-8-0 ಮಾತ್ರ

ತಿರುಪತಿಯಲ್ಲಿ ಯಾತ್ರಾರ್ಥಿಗಳಿಗೆ ಉಳಕೊಳ್ಳಲು ಭವ್ಯವಾದ ಛತ್ರಗಳ ಏರ್ಪಾಡನ್ನು ದೇವಸ್ಥಾನದವರು ಮಾಡಿರುವರು

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಡಿ, ಅವರು: ಈ ಚೂರ್ಣದಿಂದ ಯಾವ ತರದ ಅಪಾಯವೂ ಆದ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ್, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

HOUNSA

ಹಂಸಾ ಸ್ನೋ ಮತ್ತು ಬ್ರಿಲಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಶಾಣೈ,
ಮಾರ್ಕೆಟ್ ರೋಡ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು [illegible] 20 [illegible] ರೂ. 1-4-0 [illegible]

[illegible]

P. O. Peridepi [illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—13—0	1—14—
,, ದುಯಂ ,, ,,		
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	4—8—0	4—10—0
,, ದುಯಂ ,, ,,	4—6—0	4—8—0
,, ಅವ್ವಲ್ ಸುಗ್ಗಿ ,,	4—5—0	4—6—
,, ದುಯಂ ,, ,,	4—3—0	4—4—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	32—8—0	37—8—0
,, ಸಿಪ್ಪೆ ಇದ್ದದು ,,	35—0—0	40—0—0
[illegible]	55—0—0	55—0—
,, [illegible] ,,	57—8—0	—
[illegible]	3—15—0	4—0—0
[illegible] 1000ಕ್ಕೆ	3—12—0	3—4—0
[illegible]	4—8—0	4—10—0
[illegible]	35—0—0	43—12—0
[illegible]	13—12—0	14—8—0

Date 3-5-1940 ವಾರ್ಷಿಕ ಚಂದಾ ರೂ. 2-0-0 ಅಂಚೆ ಸಹಿತ ರೂ. 3-12-0 Regd. No. M3400

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 3—5—1940 [ಸಂಚಿಕೆ 18

The Bombay Life Assurance Company, Ltd.,
(Estd. 1908)

COMPARE

Your Life Assurance with any other property you possess

What is its Guaranteed Value

If you live–today–a few years more–when you are old?

If you die–to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children.

BOMBAY LIFE' offers all that is best in LIFE ASSURANCE

1938 RECORD

Completed Business	Rs	1 44 91 000
Life Assurance Fund	Rs	1 17 69 748
Total Assets	Rs	1,31,28 998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut — Car Street, Mangalore — Visweswarapuram Circle, Bangalore City — Post Box No 337, Mount Road, Madras

Gautam Nivas, Charni Road, Girgaum, Bombay No 4 — Central Station Road, Trivandrum

(Regd)

ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

Date 3-5-1940 ವಾರ್ಷಿಕ ಚಂದಾ ರೂ. 2-0-0 ಅಂಚೆವೆಚ್ಚ ಸಹಿತ ರೂ. 2-13-0 Regd. No. M3400

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 3-5-1940 [ಸಂಚಿಕೆ 18

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live–today–a few years more–when you are old?

If you die–to your family and dependants?

REMEMBER THAT,

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or, to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Viswoswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

[illegible]

ಪ್ರೇಮ, ಅತ್ಯಯ! ಯುದ್ಧ! ಶಾಂತಿ!

ಈ ವಿನೇದನೆಯುಳ್ಳ ಕಾದಂಬರಿಯು ಕನ್ನಡ ಕಾದಂಬರೀ ಪ್ರಪಂಚಕ್ಕೆ ಹೊಸತನ್ನು ಒದಗಿಸುವದೆಂಬ ಇಚ್ಛೆಯಿಂದ—ವಾಚಕರಿಗೆ ಇದು ಮೆಚ್ಚಿಗೆಯಾಗುವದೆಂಬ ಭಾವನೆಯಿಂದ ಶ್ರೀನಿವಾಸ 'ಕಾಲುಕ್ಕ'ರು ಈ ಕಾದಂಬರಿಯನ್ನು ಅನುವಾದಿಸಿರುವುದಾಗಿ ಹೇಳಿದ್ದಾರೆ. ಅನುವಾದಕರ ಈ ಬಯಕೆಯು ಯಥಾರ್ಥವಾಗಿ ಈಡೇರಿದೆ.

ಇಂಗ್ಲಿಷರಿಗೂ ಜರ್ಮನರಿಗೂ ಯುದ್ಧ ನಡೆದಿತ್ತು; ತಮ್ಮ ಅರಸನಿಗಾಗಿ, ತಮ್ಮ ಜನ್ಮಭೂಮಿಗಾಗಿ ಎರಡು ಪಕ್ಷದ ಸೈನಿಕರೂ ಹೋರಾಡಿಕೊಳ್ಳುತ್ತಿದ್ದರು. ಇಂಗ್ಲಿಷರು ಸೆರೆಸಿಕ್ಕ ಜರ್ಮನ್ ಸೈನಿಕರನ್ನು ಒಂದು ಶಿಬಿರದಲ್ಲಿ ಕಾದಿರಿಸಿದ್ದರು. ಅನೊಂದು ಒಕ್ಕಲು ಮನೆಗಳುಳ್ಳ ಊರು. ಅಲ್ಲಿನ ಒಕ್ಕಲಿತಿ ಹರೆಯದ ಹೆಣ್ಣಾಳೆ ಮೋನ ಎಂಬುವಳೂ, ಒಬ್ಬ ಹರೆಯದ ಜರ್ಮನ್ ಕೈದಿಯೂ ಪ್ರೇಮಿಸುತ್ತಾರೆ. ಪ್ರೇಮವು ಬಳೆದು ಅದು ಅಗಲಲಾರದ ಬಂಧನವಾಗುವುದು. ಕೊನೆಗೆ ಯುದ್ಧವು ಶಾಂತಿಗೊಂಡಿತು! ಆದರೂ ಆಂಗ್ಲ ಸ್ತ್ರೀಯು ಜರ್ಮನನೊಬ್ಬನನ್ನು ಮದುವೆಯಾಗಿ ಆಂಗ್ಲ ಭೂಮಿಯಲ್ಲಿ ನಿಲ್ಲಲು ಎಡೆದೊರೆಯಲಿಲ್ಲ! ತನ್ನ ಏಕ ಪುತ್ರ ಪುತ್ರನಾದರೂ ಆಂಗ್ಲ ಯುವತಿಯನ್ನು ಮದುವೆ ಮಾಡಿಕೊಂಡುದರಿಂದ ಅತನು ತಿರಿಗಿ ಜರ್ಮನಿಗೆ ಬರುವುದಕ್ಕಿಂತ ಹೋದಲ್ಲಿಯೇ ಸಾಯುವುದು ಒಳ್ಳಿಯದೆಂದು ಆ ಜರ್ಮನ್ ಯುವಕನ ತಾಯಿಯೂ ಮಗನನ್ನು ನಿರಾಕರಿಸಿದಳು. ಹೀಗೆ ಪ್ರೇಮಿಗಳಿಗೆ ಪ್ರಪಂಚದಲ್ಲಿ ನೆಲೆಯಿಲ್ಲದಾಯಿತು. ಕರುಣೆಯ ಕಥೆಯು ಹೀಗೆ ಮುಂದುವರಿಯುತ್ತಾ, ಕೊನೆಗೆ ಆ ಪ್ರೇಮಿಗಳಿಬ್ಬರೂ ಅಗಲಲಾರದ ಗಾಢ ಪ್ರೇಮದಿಂದ ಎತ್ತರ ಬಂಡೆಯೊಂದರ ಮೇಲೇರಿ ಅಗಾಧ ಸಮುದ್ರ ತಲಕ್ಕೆ ಬಿದ್ದು ಪ್ರಾಣತ್ಯಾಗ ಮಾಡುವಲ್ಲಿ ಕಥೆಯು ಕೊನೆಗೊಳ್ಳುತ್ತದೆ! ಪ್ರೇಮ ಜೀವನದ ವಿಷಾದಾಂತವಾದ ಘಟನೆಯನ್ನು ನಿರೂಪಿಸುವ ಈ ಕಥೆಯು ಹೀಗೆ ರೋಮಾಂಚನಕಾರಿಯಾಗಿ ಅಂತ್ಯವಾಗಿದೆ!

ಅಂದಿನ ಆ ಮಹಾ ಯುದ್ಧದ ಮುಂದಿನ ಅಂಕವೇ ಇಂದು ಪಶ್ಚಿಮದಲ್ಲಿ ಪ್ರದರ್ಶಿತವಾಗುತ್ತಿರುವಾಗ, ಎರಡು ಜನಾಂಗದವರೂ ಸಾಕಷ್ಟು ನಿಂದಾ ಪ್ರಚಾರಗಳನ್ನೂ ದ್ವೇಷ ಮತ್ಸರ್ಯಗಳ ವಿಷವನ್ನೂ ಇಂದೂ ಕಾರುತ್ತಿರುವಾಗ ಕಳೆದ ಯುದ್ಧಕಾಲದಲ್ಲಿಯೂ ಅದೇ ಅದೇ ತರದ ಘಟನೆ, ಮನೋಭಾವ, ಚಲನವಲನ ಇವುಗಳ ಚಿತ್ರಣವುಳ್ಳ ಈ ಕಥೆಯು ಇಂದಿಗೆ ಹೃದ್ಯವಾಗಿ ವಾಚನೀಯವೆನಿಸುತ್ತದೆ. ಜನಾಂಗಗಳ ಸ್ವಾರ್ಥ, ದ್ವೇಷ, ಮನಃಸಂಕೋಚ ಮೊದಲಾದ ಅಲ್ಪತೆಗಳನ್ನು ಮೀರಿ, ಪ್ರೇಮ ಸಾಮ್ರಾಜ್ಯವು ಅತ್ಯಯಜ್ಞಕ್ಕೂ ಹಿಂಜರಿಯದೆ ನಿಂತ ಈ ಕಥೆಯು ಅಖಿಲ ಮಾನವ ಕೋಟಿಯ ಹೃದಯ ಸಾಕ್ಷಿಯನ್ನು ಮುಟ್ಟುವಂತಿದೆ!

ಪಾತ್ರನಿರೂಪಣವೂ ಚೆಲುವಾಗಿದೆ. ಆಂಗ್ಲ ದ್ವೇಷಿ ಮುದುಕ ಒಕ್ಕಲಿಗ ರಾಬರ್ಟ್ ಕೆನ್, ದೇಶಕ್ಕಾಗಿ ಅಸುತೊರೆದ ಆಂಗ್ಲ ಜನ್ಮಾಗ್ರಜಾದಿ, ತೀವ್ರ ಜರ್ಮನ್ ದ್ವೇಷಿಣಿಯಾಗಿದ್ದರೂ, ಜರ್ಮನ್ ಯುವಕನೊಬ್ಬನ ಪ್ರೇಮಪಾಶದಲ್ಲಿ ಬಂಧಿತಳಾಗಿ ಅತ್ಯಯಜ್ಞಕ್ಕನುವಾದ ಮೋನಳು, ತನ್ನ ಜನಾಂಗವನ್ನೇ ದ್ವೇಷಿಸುತ್ತಿದ್ದ ಆ ಜಾಮಾನ್ಯ ಯುವತಿಯೋರ್ವಳನ್ನು ಒಲಿಸಿಕೊಂಡ [illegible], ಹೀನಹೃದಯದವ [illegible] ಈ ಎಲ್ಲಾ ಪಾತ್ರಗಳೂ ತಮ್ಮ ತಮ್ಮ ಭಾಗದ ಕಾರ್ಯಗಳನ್ನು ಪೂರ್ಣತೆಯಿಂದ ಪೂರೈಸಿ ಕಥೆಗೆ ವಿವಿಧ ಬಣ್ಣ ಕೊಟ್ಟಿರುವವು. ಎಲ್ಲದರ [illegible] ಮಿಗಿಲಾಗಿ ಎದ್ದು ಕಾಣುವುದು [illegible] ಯುವತಿಯಾದ ಮೋನಳೇ ನಿಜ! [illegible] ಕಾದಂಬರಿಯಲ್ಲಿ ಮೋನಳ ಪಾತ್ರವು ಕಲಾ[illegible]ವಾಗಿ [illegible] ಚಿತ್ರಿತವಾಗಿದೆ.

[illegible]

ಯಾವಾಗಲೂ ನೈಸರ್ಗಿಕವಾದ ಆಹಾರವೇ ಉತ್ತಮ. ತಾಯಿಂದಿರು ತಮ್ಮ ಮಕ್ಕಳಿಗೆ ಅಂಥಾ ನೈಸರ್ಗಿಕ ಆಹಾರವಾದ ಮೊಲೆಹಾಲನ್ನಿಟ್ಟು ಅವನ್ನು ಏನೊಂದು ಪ್ರಯಾಸ ಪಡದೆ ಸಂಗೋಪನೆ ಮಾಡುವ ಶಕ್ತಿಯು ಬರಬೇಕಾದರೆ ಬಾಣಂತಿತನದ ಮೊದಲೂ ನಂತರವೂ 'ಓವಲ್‌ಟಿನ್'ನ್ನು ಸೇವಿಸಬೇಕು. ಇದರಿಂದ ತಾಯಿಂದಿರಿಗೆ ಹಾಲು ಸಮೃದ್ಧವಾಗುವುದೆಂಬುದು ಖಾತ್ರಿ.

ಪ್ರಕೃತಿಯು ಸಂಪನ್ನವಾದ ಶಕ್ತಿವರ್ಧಕ ಆಹಾರ—ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು ಮತ್ತು ನೈಸರ್ಗ ಆಹಾರ ಸತ್ವ (Vitamins)ಗಳಿಂದ ತಯಾರಿಸಲ್ಪಟ್ಟ ಈ 'ಓವಲ್ಟಿನ್' ಪರಿಪೂರ್ಣವಾಗಿ ರುಚಿಕರವಾದ ಆಹಾರವಾಗಿದ್ದು ತಾಯಿಂದರಿಗೆ ಆರೋಗ್ಯ, ತ್ರಾಣ ಮತ್ತು ಚೇತನವನ್ನುಂಟುಮಾಡಿ ಪೋಷಿಸುತ್ತದೆ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು: ಜೇಮ್ಸ್ ರೈಟ್ ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

'ಓವಲ್‌ಟಿನ್'

'ಓವಲ್‌ಟಿನ್ ಬಿಸ್ಕಟುಗಳು' ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕಟುಗಳು. ಇವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. 4 ಔನ್ಸ ಮತ್ತು 8 ಔನ್ಸ ಪೆಕೆಟುಗಳಲ್ಲಿಯೂ ಒಂದು ರಾತ್ಲಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/18/39

[illegible]

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

10—5—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೦—೫—೧೯೪೦

ಬ್ರಿಟನಿಗೆ ಭಾರತದ ನೈತಿಕ ಸಹಾಯವಿಲ್ಲ!

ಗಾಂಧಿಜಿಯವರ ಸ್ಪಷ್ಟೀಕರಣ!

ಪಾಕಿಸ್ತಾನ ಯೋಜನೆಯು ಇಸ್ಲಾಮ್ ದ್ರೋಹ

ಕಾಂಗ್ರೆಸು ಬ್ರಿಟನಿಗೆ ಇಂದಿನ ಯುದ್ಧದಲ್ಲಿ ನೈತಿಕ ಸಹಾಯವನ್ನು ಕೊಡಲಾರದು. ನೈತಿಕ ಸಹಾಯವೆಂಬುದು ಯಾಂತ್ರಿಕವಾದುದಲ್ಲ. ಅದನ್ನು ಬೇಕಾದವನು ತೆಗೆದುಕೊಳ್ಳಬೇಕು. ಬಹುಶಃ ಬ್ರಿಟನಿಗೆ ಭಾರತದ ನೈತಿಕ ಬೆಂಬಲ ಅಗತ್ಯವಿಲ್ಲವೆಂದು ತೋರುತ್ತದೆ. ಅವರು ಜನಧನ ಸಹಾಯ ಸಿಕ್ಕಿದರೆ ಸಾಕೆಂದು ತಿಳಿದಿರಬಹುದು. ಅದು ಏನೇ ಇರಲಿ ಭಾರತದ ಸಂಬಂಧವನ್ನು ಸಂಪೂರ್ಣ ಮುಗಿಸದ ಹೊರತು ಬ್ರಿಟನಿಗೆ ಕಾಂಗ್ರೆಸು ನೈತಿಕ ಬೆಂಬಲ ಕೊಡಲಾರದು ಹೀಗೆಂದು ಗಾಂಧಿಜಿಯವರು ಮೊನ್ನೆಯ ಹರಿಜನದಲ್ಲಿ ಬ್ರಿಟನಿಗೆ ಭಾರತವು ಯಾಕೆ ಬೆಂಬಲ ಕೊಡುವುದಿಲ್ಲವೆಂಬ ಪ್ರಶ್ನೆಗೆ ಉತ್ತರ ಕೊಟ್ಟಿರುವರು

ಅವರು ಮುಂದುವರಿಸಿ ಹೀಗೆಂದಿರುವರು

ಇಂದಿನ ಯುದ್ಧದಲ್ಲಿ ಯಾರೂ ಉತ್ತಮಧ್ಯೇಯಕ್ಕಾಗಿ ಕಾದುವುದಿಲ್ಲ. ತಮ್ಮ ಹಿಂಸೆಯ ಬುದ್ಧಿಯನ್ನು ಬಿಟ್ಟುಕೊಡದ ಹೊರತು ಜರ್ಮನಿಯಾಗಲಿ, ಮಿತ್ರರಾಷ್ಟ್ರಗಳಾಗಲಿ ಯಾರೂ ಲೋಕಹಿತವನ್ನು ಸಾಧಿಸಲಾರರು. ಅಹಿಂಸೆಯ ಮೊದಲು ಹೆಜ್ಜೆಯೆಂದರೆ ಸರ್ವತ್ರ ನ್ಯಾಯದಾನವಾಗಿದೆ. ಭಾರತದ ಅಹಿಂಸೆಯು ಇನ್ನೂ ಸೂಕ್ಷ್ಮ ಗತಿಯಲ್ಲಿಯೇ ಇರುವುದರಿಂದ ಸಾಮ್ರಾಜ್ಯಕರ ಹಿಂಸೆಗೆ ವಿರೋಧಿಸುವಷ್ಟು ಕೆಲಸಮಾಡಿಲ್ಲ. ಕಾಂಗ್ರೆಸ್ಸು ಅಥವಾ ಅಂತಹ ಪ್ರಬಲ ಸಂಸ್ಥೆಯೊಂದು ಅಹಿಂಸೆಯು ಶಕ್ತಿವಂತರ ಅಸ್ತ್ರವೆಂದು ತೋರಿಸದಿದ್ದಲ್ಲಿ ಜಗತ್ತೇ ಹಾಳಾಗಿಹೋಗುವುದು!

‘ಭಾರತವು ಸ್ಪೈನ್ ಮತ್ತು ಚೈನಕ್ಕೆ ತನ್ನ ನೈತಿಕ ಬೆಂಬಲ ಕೊಟ್ಟಿದೆ. ಯತ್ಕಿಂಚಿತ್ತನ್ನು ವಸ್ತು ಬೆಂಬಲವೆಂಬುದು ನೈತಿಕ ಬೆಂಬಲದ ಸೂಚನೆಗಾಗಿ ಮಾತ್ರವಲ್ಲದೆ ವಿಶೇಷವಲ್ಲ. ಭಾರತವು ಸ್ವತಂತ್ರವಾಗದ ಹೊರತು ಯಾವುದೇ ವಸ್ತುರೂಪದಲ್ಲಿ ಬೆಂಬಲ ಕೊಡಲು ಸಾಧ್ಯವಿಲ್ಲ. ಚೈನ ಸ್ಪೈನುಗಳಂತೆ ನಾರ್ವೆ ಡೆನ್ಮಾರ್ಕುಗಳ ವಿಷಯವಾಗಿಯೂ ಭಾರತೀಯರು [illegible] ಆಗಿದ್ದಾರೆ. [illegible] ಭಾರತವು ಅಹಿಂಸೆಯ [illegible] ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಂಡ ಹೊರತು [illegible] ಭಾರತವು ಈ ಪರಿಸ್ಥಿತಿಯಲ್ಲಿ [illegible] ಸಹಾಯ ಮಾಡಲೂ ಸಾಧ್ಯವಿಲ್ಲ.

ಕಳೆದ ಯುದ್ಧದಲ್ಲಿ ಬ್ರಿಟನ ಸರ್ವ ಸಮ್ಮತಿಯ ಬೆಂಬಲ ಪಡೆದಿದ್ದ [illegible] ಆ ಕಹಿ [illegible] ಜನರ ಹೃದಯದಲ್ಲಿ [illegible] [illegible] ಕಾಂಗ್ರೆಸ್ಸಿನವರ [illegible] ಇದೆ

ಪಾಕಿಸ್ತಾನವು ಅಧಾರ್ಮಿಕ

“ಧರ್ಮವು ಮನುಷ್ಯನನ್ನು ದೇವರೊಡನೆಯೂ ಮನುಷ್ಯನೊಡನೆಯೂ ಸೇರಿಸಲು ಸಹಕಾರಿಯಾಗಿದೆ. ಇಸ್ಲಾಮ್ ಮುಸ್ಲಿಮನನ್ನು ಮಾತ್ರ ಪ್ರೀತಿಸಲು ಹಿಂದುವನ್ನು ದ್ವೇಷಿಸಲೂ ಹೇಳುತ್ತದೆಯೆ? ಮುಸ್ಲಿಮರೊಡನೆ ಮಾತ್ರ ಶಾಂತಿ ಹಿಂದುಗಳೊಡನೆ ಜಗಳ ಮಾಡಿರೆಂದು ಪೈಗಂಬರರು ಹೇಳಿದ್ದಾರೆಯೆ? ಈ ವಿಷಕರವಾದ ಅಭಿಪ್ರಾಯದಿಂದ ಎಂಟುಕೋಟಿ ಮುಸ್ಲಿಮರು ತುಂಬಿರಬೇಕೆ? ಈ ವಿಷಯವನ್ನು ಮುಸ್ಲಿಮರ ಹೃದಯಗಳಲ್ಲಿ ತುಂಬಿಸುವವರು ಇಸ್ಲಾಮ್ ಧರ್ಮಕ್ಕೇ ದ್ರೋಹ ಮಾಡುತ್ತಿದ್ದಾರೆ. ನಾನೂ ಇಸ್ಲಾಮ್ ಧರ್ಮವನ್ನು ಬಲ್ಲೆನು. ಇಸ್ಲಾಮಿಗಳೊಂದಿಗೆ ದೀರ್ಘಕಾಲ ಇದ್ದೆನು. ಯಾವನೇ ಒಬ್ಬ ಮುಸ್ಲಿಮನೂ ನನಗೆ ಹಿಂದೂ ವಿರುದ್ಧ ಧರ್ಮವು ಇಸ್ಲಾಮು ಎಂದು ತಿಳಿಸಲಿಲ್ಲ’ ಹೀಗೆ ದ [illegible] ಪಾಕಿಸ್ತಾನ ಯೋಜನೆಯ ಕುರಿತ [illegible] ಮಹಾತ್ಮಾ ಗಾಂಧಿಜಿಯವರ ಮೊನ್ನೆಯ ಹರಿಜನದಲ್ಲಿ ಬರೆಯುತ್ತಾರೆ

ಅವರು ಆ ಲೇಖನದಲ್ಲಿ ಪಾಕಿಸ್ತಾನ ಯೋಜನೆಯೆಂದರೆ ಹಿಂದೂ ದ್ವೇಷ ಯೋಜನೆಯೆಂದೂ ಇದು ಅನ್ಯರಿಂದ ಪ್ರೇರಿತವಾಗಿ [illegible] ಭಾರತವನ್ನು [illegible] ಹೂಡಿದ [illegible] ಹಿಂದುಗಳು ಮತ್ತು ಮುಸ್ಲಿಮರು ಅನ್ಯೋನ್ಯ ಒಟ್ಟಾದ ರೀತಿ ಇತಿಹಾಸದ ಆರಂಭಕಾಲದಿಂದಲೇ ಪರಸ್ಪರ ಸೌಹಾರ್ದದಿಂದಲೇ ನಡೆದಿರುವರೆಂದು ವಿವರಿಸಿ ಹೇಳಿರುವರು.

ಬ್ರಿಟನಿನ ಕರ್ತವ್ಯವೇನು?

ಪಾಕಿಸ್ತಾನ ಯೋಜನೆಯ ವಿಷಯದಲ್ಲಿ ಬ್ರಿಟನು ಮಧ್ಯವರ್ತಿಯಾಗಿ ಹಿಂದೂ ಮುಸ್ಲಿಮರೊಳಗೆ ಬಾಂಧವ್ಯವನ್ನುಂಟು ಮಾಡಬಹುದು ಎಂದು ಗಾಂಧಿಜಿಯವರೂ ಸೂಚಿಸುತ್ತಾರೆ. ಗಾಂಧಿಜಿಯವರ ಹೇಳುವುದೇನೆಂದರೆ ಬ್ರಿಟನರು ಭಾರತದಲ್ಲಿ ವಿಭಜಿಸಿ ಆಳುವ ತತ್ವದಿಂದಲೇ ತಮ್ಮ ಒಡೆತನವನ್ನು ಇಟ್ಟುಕೊಂಡರು [illegible] ಹಿಂದೂ ಮುಸ್ಲಿಂ ಐಕ್ಯವು [illegible] ಬ್ರಿಟನರ [illegible] ಅತ್ಯವಶ್ಯಕವಾಗಿದೆ [illegible] ಇದನ್ನು ನ್ಯಾಯವಾಗಿ ತೀರ್ಮಾನಿಸ [illegible] ಇಲ್ಲ. ಪಾಕಿಸ್ತಾನ ಯೋಜನೆಯೆಂದರೆ ವಿದೇಶೀ ಆಡಳಿತಕ್ಕಿಂತಲೂ ಕೆಟ್ಟದು. ಭಾರತವೆಂಬುದು ಒಂದೇ ರಾಜ್ಯ. ಹಲವು ಮತದವರು ಅನ್ಯೋನ್ಯ ಪ್ರೀತಿಸಿ ಒಟ್ಟಾಗಿರುವ ರಾಜ್ಯ. ಇದಕ್ಕನುಗುಣವಾಗಿ ನಾವು ಪ್ರೀತಿಯಿಂದ ಇರಬೇಕು ಎಂದು ಗಾಂಧಿಜಿಯವರು ಬಿನ್ನಹ ಮಾಡಿಕೊಂಡಿರುವರು.

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈ ಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಇಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು [illegible] ಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,

ಸ್ವದೇಶಾಭಿಮಾನಿ

ತಾರೀಖು 10—4—1940

ರಾಷ್ಟ್ರೀಯ ಔದ್ಯೋಗೀಕರಣ

ಭಾರತದ ಜನ ಹಿತಕ್ಕಾಗಿ ಯತ್ನ ಮಾಡುವ ಸರಕಾರವು ಯಾವಯಾವ ಕಾರ್ಯಗಳನ್ನು ಮಾಡಿ, ದೇಶದಲ್ಲಿರುವ ಜನರ ಪದಾರ್ಥಗಳ ಸದುಪಯೋಗ ಪಡಿಸಿ, ರಾಷ್ಟ್ರದ ಉದ್ಯೋಗವನ್ನು ಹೆಚ್ಚಿಸಿ, ಎಲ್ಲಾ ರೀತಿಯಿಂದಲೂ ದೇಶದ ಅಭಿವೃದ್ಧಿಯನ್ನು ಮಾಡಬಹುದಾಗಿದೆ ಯೆಂಬುದರ ಸೂಕ್ಷ್ಮ ಪರಿಚಯವು ಬೊಂಬಾಯಿಯಲ್ಲಿ ಕಳೆದವಾರ ಸೇರಿದ ರಾಷ್ಟ್ರೀಯ ಔದ್ಯೋಗೀಕರಣ ಸಮಿತಿಯ ಕಾರ್ಯ ಕಲಾಪಗಳ ಪರಿಶೀಲನೆಯಿಂದ ವ್ಯಕ್ತವಾಗಬಹುದು. ಪಂಡಿತ ನೆಹರುಗಳ ಸನ್ಮಾನ್ಯ ಅಧ್ಯಕ್ಷತೆಯಿಂದ ಈ ಸಮಿತಿಯವರು ಬೇರೆ ಬೇರೆ ಉಪ ಸಮಿತಿಗಳನ್ನು ಮಾಡಿ, ಆಯಾಯ ಉಪ ಸಮಿತಿಯವರು ಪ್ರತ್ಯೇಕ ಪ್ರತ್ಯೇಕ ಉದ್ಯೋಗಗಳ ಪರಿಶೀಲನೆಯನ್ನು ಕೂಲಂಕಷ ವಿಚಾರಿಸಿ ಪ್ರಧಾನ ಸಮಿತಿಯ ಮುಂದೆ ಒಪ್ಪಿಸಬೇಕಾಗಿಯೂ ಆ ಸೂಚನೆ ಕಾರ್ಯಕ್ರಮಗಳಿಗನುಸಾರವಾಗಿ ಮುಂದೆ ರಾಷ್ಟ್ರದ ಔದ್ಯೋಗೀಕರಣ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದೆಂಬುದಾಗಿಯೂ ಹಿಂದೆ ನಿಶ್ಚಯ ಮಾಡಿದ್ದಂತೆ, ಈಗ ಉಪಸಮಿತಿಗಳು ತಮಗೊಪ್ಪಿಸಿದ ಕಾರ್ಯಗಳನ್ನು ನಿರ್ವಹಿಸಿ ಪ್ರಧಾನ ಸಮಿತಿಯ ಮುಂದೆ ಒಪ್ಪಿಸಿರುತ್ತವೆ.

ಬೇರೆ ಬೇರೆ ಸಮಿತಿಗಳು ಮುಂದಿಟ್ಟ ಔದ್ಯೋಗೀಕರಣ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಹಲವು ಪ್ರಯತ್ನಗಳು ನಿರಂತರ ಪರಿಶ್ರಮಗಳು ಬೇಕಾಗಬಹುದಾದರೂ ಒಂದು ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯದ ಪ್ರಧಾನ ಉದ್ದೇಶ ಸಾಧನೆಗಾಗಿ ಅವುಗಳ ವಿಷಯದಲ್ಲಿ ಹೆಚ್ಚಿನ ವಿಚಾರ ಪರಿಶ್ರಮಗಳನ್ನು ತೆಗೆದುಕೊಳ್ಳದೆ ಉದಾಸೀನವಾಗಿರುವುದು ನ್ಯಾಯವಲ್ಲ. ಆರ್ಥಿಕ ಸ್ವಾತಂತ್ರ್ಯವೆಂಬುದು ರಾಜಕೀಯ ಸ್ವಾತಂತ್ರ್ಯದ ಭದ್ರ ತಳಹದಿಯಾಗಿದೆ. ಭಾರತವು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಆರ್ಥಿಕ ಸ್ವಾತಂತ್ರ್ಯದ ಕುರಿತು ಸಮರ್ಪಕ ಯೋಜನೆಗಳನ್ನು ಮುಂದಿಟ್ಟು ಕಾರ್ಯಕಲಾಪಗಳನ್ನು ಕೈಕೊಳ್ಳಲೇ ಬೇಕಾಗಿದೆ.

ಈ ಸಮಿತಿಯವರು, ರಾಷ್ಟ್ರದ ಏಳಿಗೆಗೆ ಸಣ್ಣ ಸಣ್ಣ ಉದ್ಯೋಗಗಳೂ, ಕೈಗಾರಿಕೆಯ ಕೆಲಸಗಳೂ ಅವಶ್ಯವೆಂದು ಅಭಿಪ್ರಾಯಪಡುವ ಔದ್ಯೋಗಿಕ ವಿಜ್ಞಾನದವರ ಅಭಿಪ್ರಾಯವನ್ನು ಅಲ್ಲಗಳೆಯುವದಿಲ್ಲ. ಆದರೆ ಎಲ್ಲಿ ದೊಡ್ಡ ಪ್ರಮಾಣದ ಉದ್ಯೋಗಗಳು ಅವಶ್ಯವೋ, ಅಲ್ಲಿ ಕಾರ್ಖಾನೆ ರೀತಿಯ ಉದ್ಯೋಗಗಳನ್ನೇ ಮಾಡುವದರಿಂದ ಆರ್ಥಿಕ ಸಮಸ್ಯೆಯು ಪರಿಹಾರವಾಗುವುದೆಂದು ಸಮಿತಿಯವರು ಅಭಿಪ್ರಾಯ ಪಡುತ್ತಾರೆ. ಒಟ್ಟಿನಿಂದ ಭಾರತದ ಉದ್ಯೋಗೀಕರಣವು ಕೇಂದ್ರ ಸರಕಾರದ ಪ್ರಬಲಪ್ರೋತ್ಸಾಹದಿಂದ ಬಹುತೀವ್ರವಾಗಿಯೇ ಆಗತಕ್ಕದ್ದದೆಯೆಂಬ ಕುರಿತು ಈ ಸಮಿತಿಯವರು ಖಂಡಿತ ನಿರ್ಧಾರವುಳ್ಳವರಾಗಿದ್ದಾರೆ

ಇದುವರೆಗೆ ಭಾರತದಲ್ಲಿ ವೈಜ್ಞಾನಿಕ ಪ್ರಯೋಗ ಸಿದ್ಧವಾಗಿ ಯಾವುದೇ ಉದ್ಯೋಗದ ಅಭಿವೃದ್ಧಿಯೂ ಸಾಕಷ್ಟು ಉರ್ಜಿತ ಗೊಂಡಿಲ್ಲ. ಆದ ಕಾರಣ ಅದರ ಕುರಿತು ಬೇಗನೇ ಸಮಿತಿಯವರು ಒಂದು ಸಂಖ್ಯಾಮಾನವನ್ನು ತೆಗೆದು ಆಯಾಯ ಕಾರ್ಯಕ್ಷೇತ್ರಗಳಲ್ಲಿರುವ ಕುಂದು ಕೊರತೆಗಳನ್ನೂ, ಪರಿಹಾರಗಳನ್ನೂ ಹಾಗೂ ಮುಂದಿನ ಉದ್ಯೋಗೀಕರಣದ ಕಾರ್ಯಯೋಜನೆಗಳನ್ನೂ ರಾಷ್ಟ್ರದ ಮುಂದಿಡುವರಾಗಿ ನಿರೀಕ್ಷಿಸಬಹುದಾಗಿದೆ.

ಉಪಾಧ್ಯಾಯರು ಮತ್ತು ಶಿಕ್ಷಣ

ಆಂಧ್ರ ಟೀಚರ್ಸ್ ಫೆಡರೇಶನಿನ ಅಧ್ಯಕ್ಷ ಭಾಷಣದಲ್ಲಿ, ಪ್ರೊ. ವೆಂಕಟರಂಗಯ್ಯರು ಉಪಾಧ್ಯಾಯರು ಮತ್ತು ಶಿಕ್ಷಣದ ಕುರಿತು ಪ್ರಸ್ತಾಪಿಸುತ್ತಾ ಹೇಳಿದ ಎಚ್ಚರಿಕೆಯ ಮಾತು ಬಹಳ ಮಹತ್ವದ್ದಿದೆ. ಉಪಾಧ್ಯಾಯರ ಯೋಗ್ಯತೆಯ ಮಟ್ಟವು ಹೆಚ್ಚಿನದಿರಬೇಕೆಂದೂ, ಮುಂದಿನ ಜನಾಂಗವಾದ ಮಕ್ಕಳನ್ನು ಯೋಗ್ಯ ಶಿಕ್ಷಣವಿತ್ತು ಮುಂದೆತರುವ ಉಪಾಧ್ಯಾಯರು ವಿಶಾಲ ಶಿಕ್ಷಣವನ್ನು ಹೊಂದಿದವರಾಗಿರಬೇಕೆಂದೂ, ಇಂದಿನ ಶಿಕ್ಷಣ ಕ್ರಮವೂ ಶಿಕ್ಷಣ ತರಬೇತಿಯೂ ದೋಷರಹಿತವಾಗಿಲ್ಲವೆಂದೂ ಅವರು ತಮ್ಮ ಭಾಷಣದಲ್ಲಿ ತೋರಿಸಿಕೊಟ್ಟರು.

ಉಪಾಧ್ಯಾಯರ ಯೋಗ್ಯತೆಯ ಕುರಿತು ವಿಮರ್ಶಿಸುವ ಸಂದರ್ಭದಲ್ಲಿ ಗೌರವವೃತ್ತಿಯೆಂದೆನಿಸಿದ ಉಪಾಧ್ಯಾಯ ವೃತ್ತಿಗೆ ಈಗ ದೊರಕಿರುವ ಸ್ಥಾನ ಹಾಗೂ ಬಡ ಉಪಾಧ್ಯಾಯರಿಗೆ ದೊರಕುವ ಪ್ರೋತ್ಸಾಹ, ಅವರ ಇಂದಿನ ಪರಿಸ್ಥಿತಿ ಇವುಗಳನ್ನೆಲ್ಲಾ ವಿಚಾರಿಸದಿರಲು ಆಗುವುದಿಲ್ಲ. ಉಪಾಧ್ಯಾಯರಿಗೆ ಯೋಗ್ಯ ನ್ಯಾಯವು ದೊರಕಬೇಕಾಗಿದೆಯೆಂಬುದು ನಿರ್ವಿವಾದವಾದ ವಿಷಯವಾಗಿದೆ; ಅವರಿಗೆ ಮನ್ನಣೆಯ ಸ್ಥಾನಮಾನಗಳು ಸಲ್ಲಬೇಕಾಗಿವೆಯೆಂಬುದು ಅತ್ಯಂತ ಸತ್ಯವಾದ ಮಾತು. ಆದರೆ ಅದರೊಡನೆ ಉಪಾಧ್ಯಾಯರು ಅಂತಹ ಮನ್ನಣೆಯ ಸ್ಥಾನದಲ್ಲಿ ನಿಲ್ಲುವಾಗ, ರಾಷ್ಟ್ರದ ಏಳಿಗೆಯಲ್ಲಿ ಬಹು ಭಾಗದ ಕಾರ್ಯವನ್ನು ಮಾಡುವ ಜವಾಬ್ದಾರಿಯನ್ನು ಹೊತ್ತಿರುವಾಗ, ಅವರು ಉತ್ತಮ ಶಿಕ್ಷಣ ಪಡೆದವರೂ, ವಿಶಾಲ ಜ್ಞಾನಿಗಳೂ ಆಗಿರಬೇಕೆಂದು ಅಪೇಕ್ಷಿಸುವುದೂ ಸಹಜವಾಗಿದೆ. ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದದವನು ಎಲಿಮೆಂಟರಿ ಶಾಲೆಗಳಲ್ಲಿ ಕಲಿಸಲು ಯೋಗ್ಯನಲ್ಲವೆಂದೂ ಗ್ರ್ಯಾಜ್ಯುವೇಟ್ ಆಗದವನು ಸೆಕೆಂಡರಿ ಶಾಲೆಗಳಲ್ಲಿ ಕಲಿಸಲು ಅರ್ಹನಲ್ಲವೆಂದೂ ಮಾಡಬೇಕಾದದು ಅತ್ಯಂತ ಅವಶ್ಯವಾಗಿದೆ. ಉಪಾಧ್ಯಾಯರು ತಮಗೊಪ್ಪಿಸಿದ ಕಾರ್ಯವನ್ನು ಹೊಣೆಗಾರಿಕೆಯರಿತು, ಉತ್ಸಾಹದಿಂದಲೂ ಸಾಮರ್ಥ್ಯದಿಂದಲೂ ನಿರ್ವಹಿಸಿ, ವಿದ್ಯಾಕ್ಷೇತ್ರವನ್ನು ಬೆಳಗಿಸಬೇಕಾದರೆ ಈ ಕನಿಷ್ಠ ಯೋಗ್ಯತೆಯುಳ್ಳವರಾಗಿರುವುದು ಅವಶ್ಯವಾಗಿದೆ

ಆದರೆ ಬರಿಯ ವಿದ್ಯಾಯೋಗ್ಯತೆ ಮಾತ್ರದಿಂದಲೇ ಒಳ್ಳೆಯ ಉಪಾಧ್ಯಾಯರಾಗುವರೆಂದು ಹೇಳಬರುವುದಿಲ್ಲ. ಅವರ ಶಿಕ್ಷಣವು, ಶಿಕ್ಷಣ ತರಬೇತಿಯು ಉತ್ತಮವಾಗಿರಬೇಕು. ಉಪಾಧ್ಯಾಯರಿಗೆ ಉತ್ತಮ ಶಿಕ್ಷಣ ತರಬೇತಿಸಿಗುವುದೂ, ಒಳ್ಳೆಯ ಸಂಸ್ಥೆಯ ವಾತಾವರಣವು ದೊರಕುವುದೂ ಅಗತ್ಯವಾಗಿದೆ. ಅದು ಶಿಕ್ಷಣ ಶಾಲೆಗಳನ್ನು ಹೆಚ್ಚಾಗಿ ಹೊಂದಿಕೊಂಡಿದೆ. ಶಿಕ್ಷಣ ಶಾಲೆಗಳನ್ನು ಅಂತಹ ಸಂಸ್ಕೃತಿ ಕೇಂದ್ರಗಳಾಗಿ ಮಾಡುವ ಕಾರ್ಯವು ಸರಕಾರದ ಹೊಣೆಗಾರಿಕೆಯಾಗಿದೆ. ಒಂದೋ ಎರಡೋ ವರ್ಷಗಳ ತನಕ ತರಬೇತಿಯನ್ನು ಹೊಂದಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ದೃಷ್ಟಿಯೊಂದೇ ಅವರದಾಗಿ ತರಬೇತಿಯ ಕಾಲದಲ್ಲಿ ಉಪಾಧ್ಯಾಯರ ಸಂಸ್ಕೃತಿ ಶಿಕ್ಷಣವು ವಿಶಾಲವಾಗುವಂತೆ ಮಾಡುವುದ ಬಹಳ ಪ್ರಾಮುಖ್ಯವಾಗಿದೆ. ಹೇಗಿದ್ದರೂ ಪಾಠಪಟ್ಟಿ ಮತ್ತು ದಿನನಿತ್ಯದ ಊಳಿಗದ ಅನುಸರಣೆಯು ಮಾತ್ರ ಇಂದು ಹೆಚ್ಚಾಗಿ ಶಾಲೆಗಳಲ್ಲಿ ಕಂಡು ಬರುವುದಕ್ಕೆ ಉಪಾಧ್ಯಾಯರು ವಿಶಾಲ ಶಿಕ್ಷಣ ಹೊಂದದೆ ಇರುವುದೂ ಒಂದು ಪ್ರಾಮುಖ್ಯ ಕಾರಣವಾಗಿದೆ. ಲೋಕ ಜ್ಞಾನವು ಒಬ್ಬ ಉಪಾಧ್ಯಾಯನಿಗೆ ಎಷ್ಟು ಹೆಚ್ಚಾಗಿರುವುದೋ ಅಷ್ಟು ಆತನ ಶಿಕ್ಷಣವು ಉತ್ತಮವಾಗುವುದು. ಆದಕಾರಣ ವಿದ್ಯಾಂಗದಲ್ಲಿ ಪರಿಶ್ರಮ ಪಡುವವರು ವಿದ್ಯಾಧಿಕಾರಿಗಳು, ಮತ್ತು ಸರಕಾರದವರು ಉಪಾಧ್ಯಾಯರ ಹಾಗೂ ಶಿಕ್ಷಣದ ಮಟ್ಟವು ಉನ್ನತ ಸ್ಥಿತಿಗೇರುವಂತೆ ಮಾಡುವುದು ರಾಷ್ಟ್ರದ ಏಳಿಗೆಯ ದೃಷ್ಟಿಯಿಂದ ಅವಶ್ಯವಾಗಿದೆ

ಯುದ್ಧವು ಹರಡದಂತೆ

ಯೂರೋಪಿನ ರಾಷ್ಟ್ರಗಳು ಈಗ ದಿನಹೋದಂತೆ ಒಂದೊಂದಾಗಿ ಯುದ್ಧಾಸಕ್ತವಾಗುತ್ತ ಬಂದಿವೆ. ಸಮಗ್ರ ಯೂರೋಪಿನಲ್ಲಿ ಯುದ್ಧ ಜ್ವಾಲೆಯು ಹರಡುವ ಭಯಂಕರ ಚಿಹ್ನೆಗಳು ತಲೆದೋರಿವೆ. ಇದರಿಂದ ಆಗುವ ಅನಾಹುತವನ್ನು ತಪ್ಪಿಸಲು, ಯುದ್ಧವು ಮುಂದೆ ಹರಡದಂತೆಯೂ ಶಾಂತಿಯು ಸ್ಥಾಪಿತವಾಗುವಂತೆಯೂ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಒಂದು ಸಂಧಾನ ಸೂಚನೆಯನ್ನು ತಯಾರಿಸುತ್ತಿರುವರಾಗಿ ಇಟಲಿಯ ವಾರ್ತೆ.

ಯುದ್ಧವು ಆರಂಭವಾದಂದಿನಿಂದ ಅಮೇರಿಕವು ಶಾಂತಿಗಾಗಿ ಯತ್ನಮಾಡುತ್ತಿದ್ದು ಇಂದೂ ಅದೇ ಸಾಧನೆಯಲ್ಲಿ ಅಮೇರಿಕವು ಮಗ್ನವಾಗಿರುವಿದ್ದೆಂದೂ, ಅಮೇರಿಕಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಶಾಂತಿಯ ಪ್ರಯತ್ನಗಳನ್ನು ಕೊಡುವುದೆಂದೂ ಇಟಲಿಯ ರಾಯಭಾರಿಯೊಡನೆ ಪ್ರೆಸಿಡೆಂಟ್ ರೂಸ್‌ವೆಲ್ಟರು ಹೇಳಿರುವರೆಂದು ತಿಳಿದಿದೆ

ಸಾಮ್ರಾಜ್ಯ ಲಾಲನೆಯಿಂದ ಮತ್ತವಾಗಿರುವ ಯೂರೋಪಿನ ರಾಷ್ಟ್ರಗಳಿಗೆ ಇಂದು ಲೋಕದ ಕಲ್ಯಾಣಕಾರಕ ಇಚ್ಛೆಯೇ ಇದ್ದಂತೆ ಕಂಡುಬರುವುದಿಲ್ಲ. ಆದರೂ ಅಮೇರಿಕದ ಶತಪ್ರಯತ್ನಗಳು ಹಿಂದಿನಂತೆ ಮುಂದಾದರೂ ನಿಷ್ಫಲವಾಗದಿರಲಿ ಎಂದು ಹಾರೈಸಬೇಕಾಗಿದೆ

ಸೌಂದರ್ಯದ ಮೂಲ

ಸ್ತ್ರೀಯರ ದೇಹಸೌಂದರ್ಯವು ಎಲ್ಲೆಲ್ಲಿಯೂ ಅತ್ಯಂತ ಆಕರ್ಷಕವಾಗಿದೆ. ಆದರೆ ಕ್ರಮಬದ್ಧತೆಯಿಲ್ಲದಿದ್ದರೆ ನಮ್ಮ ದೇಶದ ಹವಾಮಾನದ ದೆಸೆಯಿಂದ ಸೌಂದರ್ಯವನ್ನು ಹಾಗೆಯೇ ಕಾಪಾಡಿಕೊಳ್ಳುವುದು ಅತ್ಯಂತ ಪ್ರಯಾಸಕರವಾಗಿದೆ. ದಿನದ ಸ್ನಾನವಾಗಲೀ ಸೆಂಟುಕ್ರೀಮುಗಳ ಉಪಯೋಗವಾಗಲೀ ಶರೀರದ ಆಂತರಿಕ ನೈರ್ಮಲ್ಯವನ್ನು ಹುಟ್ಟಿಸಿ ದೇಹಸೌಂದರ್ಯವನ್ನು ಕೊಡಲಾರದು

ದೇಹಸೌಂದರ್ಯವು ಬರಿಯ ಚರ್ಮದ ಸ್ವಚ್ಛತೆಯಲ್ಲಿ ಇಲ್ಲ. ನಮ್ಮ ದೇಶದಂತಹ ಉಷ್ಣ ವಾತಾವರಣದಲ್ಲಿ ನಮ್ಮ ದೇಹಕ್ರಮವು ಬೇಗನೇ ಜಡಹೊಂದುವುದು ಸ್ವಾಭಾವಿಕವಾಗಿರುವಾಗಲಂತೂ ಆ ಕುರಿತು ವಿಚಾರಮಾಡಬೇಕಾಗಿದೆ. ಶರೀರದಲ್ಲಿ ಕೆಟ್ಟ ವಸ್ತುಗಳು ಉಳಿವವು. ಆರೋಗ್ಯವನ್ನು ಕೆಡಿಸುವವು ರಕ್ತವನ್ನು ಕಶ್ಮಲಗೊಳಿಸುವವು, ಚರ್ಮವನ್ನು ಕಾಂತಿಹೀನವಾಗಿ ಮಾಡುವವು. ಆದಕಾರಣವೇ ಬುದ್ಧಿವಂತರಾದ ಸ್ತ್ರೀಯರು ತಮ್ಮ ದಿನನಿತ್ಯದ ಸುಗಂಧ ದ್ರವ್ಯಗಳ ಉಪಯೋಗದೊಡನೆ ಶರೀರದೊಳಗಡೆಯ ನೈರ್ಮಲ್ಯಕ್ಕೂ ಹೆಚ್ಚು ಗಮನ ಕೊಡುವರು. ಆಂಡ್ರೂಸ್ ಲಿವರ್ ಸಾಲ್ಟ್ಸನ್ನು ದಿನನಿತ್ಯ ಒಂದು ಗ್ಲಾಸ್ ಸೇವಿಸುವುದರಿಂದ ಹೊಟ್ಟೆಯೊಳಗಿನ ಕಶ್ಮಲಗಳು ಹೋಗಿ, ನಿರ್ಮಲವಾಗುವುದು ಮಾತ್ರವಲ್ಲದೆ, ನಮ್ಮ ಊರಿನ ಹವಾಮಾನಕ್ಕೆ ಸರಿಯಾಗಿ ಶರೀರದ ಅಂತರಂಗ ಮತ್ತು ಬಹಿರಂಗ ನೈರ್ಮಲ್ಯಗಳನ್ನು ಕೊಡುವುವು.

ಜೋಧಪುರ ಸಂಸ್ಥಾನದಲ್ಲಿ ದಬ್ಬಾಳಿಕೆಗೆ ಆರಂಭ!

ಮಹಾರಾಜರ ಉಗ್ರ ಭಾಷಣ - ಮಹಾತ್ಮರ ಸೌಮ್ಯ ಉತ್ತರ
ಜವಾಹಿರರಲ್ಲಿ ದಿವಾನರ ಉದ್ಧಟತನ

ಜೋಧಪುರದಲ್ಲಿ ಪುನ ದಬ್ಬಾಳಿಕೆಗೆ ಆರಂಭವಾಗಿದೆ. ಸರಕಾರವು ಅಲ್ಲಿಯ ಲೋಕ ಪರಿಷತ್ತನ್ನು ಕಾಯಿದೆ ಬಾಹಿರವೆಂದು ಸಾರಿರುತ್ತದೆ. ಇಷ್ಟರ ವರೆಗೆ ಅಧಿಕಾರಿ ವರ್ಗದ ಕೃಪಾಪಾತ್ರವಾದ ಈ ಲೋಕ ಪರಿಷತ್ತು ಈಗ ಮಾತ್ರ ಅದರ ವಕ್ರ ದೃಷ್ಟಿಗೆ ಬಿದ್ದಿರುವ ಕಾರಣವೇನೆಂದು ಪರ್ಯಾಲೋಚಿಸುತ್ತ, ಮಹಾತ್ಮಾಜಿಯವರು ಇದು ಮುಂಬರುವ ಬಿರುಗಾಳಿಯ ಪೂರ್ವ ಸೂಚನೆ ಎಂದು ತಮ್ಮ ಹರಿಜನ ಪತ್ರಿಕೆಯಲ್ಲಿ ಬರೆದಿರುತ್ತಾರೆ.

ಮಹಾರಾಜರ ಭಾಷಣ

"ಸಾರ್ವಭೌಮ ಸರಕಾರದ ಅತ್ಯಂತ ಭಕ್ತನಾಗಿದ್ದು, ನನ್ನ ರಾಜ್ಯದಲ್ಲಿ ವಿನಾ ಕಾರಣವಾಗಿ ಒಂದು ರಾಜಕೀಯ ಆಂದೋಲನವು ಹುಟ್ಟಲಿಕ್ಕೂ ಅದು ಬೆಳೆಯಲಿಕ್ಕೂ, ನಾನು ಈ ಯುದ್ಧಕಾಲದಲ್ಲಿ ಆಸ್ಪದ ಮಾಡಿಕೊಡಲಾರೆ. ನನ್ನ ರಾಜ್ಯದ ತರುಣ ಪ್ರಜಾಜನರ ಮನಸ್ಸನ್ನು ಕೆಡಿಸಿ, ಒಕ್ಕಲಿಗರನ್ನು ಸರಕಾರಕ್ಕೆ ವಿರುದ್ಧ ಬಂಡಾಯವೇಳುವಂತೆ ಪ್ರೇರೇಪಿಸುವ ಈ ಆಂದೋಲನವು ನನ್ನ ರಾಜ್ಯದಲ್ಲಿ ಸರ್ವಥಾ ನಡೆಯಕೂಡದಾಗಿದೆ" ಎಂದು ಲೋಕಪರಿಷತ್ತನ್ನು ಬೆಕಾಯದೆಶೀರವೆಂದು ಸಾರುತ್ತಾ ಜೋಧಪುರದ ಮಹಾರಾಜರು ಒಂದು ಭಾಷಣದಲ್ಲಿ ಹೇಳಿದ್ದರು.

ಮಹಾತ್ಮಾಜಿಯವರ ಎಚ್ಚರಿಕೆ.

ಈ ವಿಷಯವಾಗಿ ಬರೆಯುತ್ತಾ ಮಹಾತ್ಮಾಜಿಯವರು—"ಭಾಷಣವನ್ನು ಕೊಟ್ಟವರು ಮಹಾರಾಜರಾದರೂ, ಅದನ್ನು ಬರೆದ ಕೈಯಾರದೋ ಬೇರೆಯವರದಾಗಿದೆ. ಈ ಭಾಷಣದಲ್ಲಿ ಎಷ್ಟೋ ಸಂಗತಿಗಳ ಅತಿಶಯೋಕ್ತಿ ಇದೆ. ಜೋಧಪುರ ರಾಜ್ಯದಲ್ಲಿ ಲೋಕ ಪರಿಷತ್ತಿನ ಶಾಖೆಗಳು ಕೆಲಸಮಾಡುತ್ತಿದ್ದು, ಎಷ್ಟೋ ಮಂದಿ ಪ್ರತಿಷ್ಠಿತ ಗೃಹಸ್ಥರು ಅದರ ಸಂಬಂಧವನ್ನಿಟ್ಟು ಕೊಂಡಿದ್ದಾರೆ. ಎಷ್ಟೋ ಮಂದಿ ಅನುಭವಿಕ ಜನರು ಪರಿಷತ್ತಿಗೆ ಸಹಕಾರ ಸಹಾಯಗಳನ್ನು ಕೊಟ್ಟಿರುತ್ತಾರೆ. ರಾಜ್ಯವನ್ನು ತಿರುಗು ಮುರುಗು ಮಾಡುವ ಉದ್ದೇಶವನ್ನು ಲೋಕ ಪರಿಷತ್ತು ಇಟ್ಟುಕೊಂಡಿರುವದಿಲ್ಲ. ಜವಾಬುದಾರಿ ಸರಕಾರವನ್ನು ಜೋಧಪುರದಲ್ಲಿ ಸ್ಥಾಪಿಸುವದೇ ಇದರ ಗುರಿಯಾಗಿದೆ. ಅದು ವಿಧಾಯಕ ಉಪಾಯಗಳಿಂದ ಉದ್ದೇಶ ಸಾಧನೆಯನ್ನು ಮಾಡುತ್ತಾ ಇದೆ. ಹೀಗಿರುತ್ತ ಸಭ್ಯಸ್ಥಿತಿಯ ವಿಷಯಾಸಗಳಿ ಮಹಾರಾಜರ ಸಲಹೆಗಾರರ ಅವರ ಬಾಯಿಯಿಂದ ಪೋಲಾಷ್ಟು ಮಾತುಗಳನ್ನು ಆಡಿಸುವದು ತುಂಬ ಖೇದಜನಕವಾಗಿದೆ' ಎಂದಿರ ವರ

ಬುದ್ಧಿವಾದದ ಮಾತು

'ಪರಿಷತ್ತಿನ ಕೆಲಸಗಾರರು ಸ್ವಾರ್ಥತ್ಯಾಗವುಳ್ಳವರಾದರೆ ಎಂಥ ದಬ್ಬಾಳಿಕೆ ಆದರೂ ಪರಿಷತ್ತು ತನ್ನ ಧ್ಯೇಯಸಾಧನೆಯಲ್ಲಿ ಸಫಲವಾಗುವದು ಖಂಡಿತ. ತ್ಯಾಗ ಮತ್ತು ಕಷ್ಟ ಸಹಿಷ್ಣುತೆಯಿಂದ ಕಾರ್ಯವು ಸಿದ್ಧವಾಗುವದು. ಈಗ ಜೈಲಿನಲ್ಲಿ ಯಾತನೆಗಳನ್ನು ಅನುಭವಿಸುವವರು ಜೋಧಪುರದ ದ್ರೋಹಿಗಳಲ್ಲ, ಸೇವಕರೇ ಆಗಿದ್ದಾರೆ. ಅವರು ದೇಶದ ನಿಜ ಸೇವಕರಾಗಿರುವರು. ದೇಶೀಯ ರಾಜರು ಸತ್ಯವನ್ನು ಮತ್ತು ಸಮಾಜ ಲೋಕಮತವನ್ನು ಅಲಕ್ಷಿಸಿ ಹೀಗೆ ಆಡುವದೂ ಮಾಡುವದೂ ನ್ಯಾಯ ಸಮ್ಮತವಾಗಿರುವದಿಲ್ಲ. ಇಂಥ ಅನ್ಯಾಯಕ್ಕೆ ಅವರ ಸಲಹೆಗಾರರು ಅವರನ್ನು ಪ್ರೇರೇಪಿಸಕೂಡದು. ಸರಕಾರವು ಆರೋಪಿಸಿದ ಎಲ್ಲ ಆರೋಪಗಳನ್ನು ಲೋಕ ಪರಿಷತ್ತು ಅಲ್ಲಗಳೆದಿದೆ. ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸಿ, ಇದರ ವಿಚಾರಣೆಮಾಡುವದು ಸರಕಾರದ ಕರ್ತವ್ಯವಾಗಿದೆ. ಸರಕಾರವು ಏನುಮಾಡಲಿ, ಲೋಕಪರಿಷತ್ತಿಗೆ ನ್ಯಾಯ ದೊರೆಯಲಿ, ದೊರೆಯದಿರಲಿ, ಅದು ಸಂಪೂರ್ಣ ಅಹಿಂಸಾ ಮಾರ್ಗದಲ್ಲಿ ನಡೆದು ಎಲ್ಲಾ ಕಷ್ಟಗಳನ್ನು ಅನುಭವಿಸಿ ಬರುವುದು ಅದರ ಯಶಸ್ಸಿಗೆ ಕಾರಣವಾಗುವುದು ಎಂದು ಮಹಾತ್ಮಾಜಿಯವರ ಆಡಿದ್ದಾರೆ.

ಹೋರಾಟಕ್ಕೆ ಸಿದ್ಧತೆ

"ಸರಕಾರದೊಡನೆ ಅಹಿಂಸಾ ಮಾರ್ಗದಲ್ಲಿ ಹೋರಾಡುವದಲ್ಲದೆ, ನಮಗೆ ಬೇರೆ ಉಪಾಯ ಇರುವುದಿಲ್ಲವೆಂದು ಜೋಧಪುರದ ಪರಿಸ್ಥಿತಿಯ ಕುರಿತು ಮಾತನಾಡುತ್ತ ಲೋಕ ಪರಿಷತ್ತಿನ ಅಧ್ಯಕ್ಷ ಸಮಿತಿಯು ಹೇಳಿದೆ. ಸರಕಾರದೊಡನೆ ಗೌರವಯುಕ್ತ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ನಾವು ಯಾವಾಗಲೂ ಸಿದ್ಧರು. ಪರಿಷತ್ತಿನ ಒಬ್ಬನೇ ಒಬ್ಬ ಧೀರ ಕೆಲಸಗಾರನು ಹೊರಗಿರುವ ತನಕ ನಾವು ಆಂದೋಲನವನ್ನು ಮುಂದರಿಸುವೆವು ಎಂದು ಅದು ಹೇಳಿದೆ.

ಜವಾಹರರ ಮಧ್ಯಸ್ಥಿಕೆ.

ಪರಿಸ್ಥಿತಿಯನ್ನು ಸುಧಾರಿಸುವದಕ್ಕೋಸ್ಕರ ಜವಾಹರಲಾಲರು ಜೋಧಪುರದ ದಿವಾನರಾದ ಸರ್ ಡೋನಾಲ್ಡ್ ಫೀಲ್ಡರೊಂದಿಗೆ ಭೇಟಿಮಾಡಲು ಸಂಸ್ಥಾನಗಳ ಪ್ರಜಾ ಪರಿಷತ್ತಿನ ಪ್ರತಿನಿಧಿಯಾಗಿ ಪಂಡಿತ ಕುಂಜ್ರು ಎಂಬವರನ್ನು ಕಳುಹಿಸಿಕೊಟ್ಟರು. ಆದರೆ ಪ್ರಜಾ ಪರಿಷತ್ತನ್ನು ತಾವು ಒಪ್ಪುವುದಿಲ್ಲವಾದ್ದರಿಂದ, ಅದರ ಪ್ರತಿನಿಧಿಯಾಗಿ ಪಂಡಿತ ಕುಂಜ್ರುರವರಿಗೆ ಭೇಟಿಕೊಡಲಾಗುವದಿಲ್ಲವೆಂದು ಸರ್ ಡೋನಾಲ್ಡರು ಪಂಡಿತ ಜವಾಹರಲಾಲರ ವಿನಂತಿಯನ್ನು ತಿರಸ್ಕರಿಸಿದ್ದಾರೆ.

ದಬ್ಬಾಳಿಕೆಗೆ ಆರಂಭ

ಆದಿನಪತ್ರಿಕೆಗಳ ಪ್ರಕಾರ ಜೋಧಪುರ ಸರಕಾರವು ಪ್ರಜಾ ಪರಿಷತ್ತಿನ ಕಾರ್ಯದರ್ಶಿ ಶ್ರೀ ಜಯನಾರಾಯಣ ವ್ಯಾಸರನ್ನು ಮತ್ತು ಇತರ ಹನ್ನೊಂದು ಪ್ರಮುಖರನ್ನು ಕೈದುಮಾಡಿದೆ. ಸ್ವಾಮಿ ಚೈನ್ ದಾಸ ಮತ್ತು ಧನರಾಜ ಭಟ್ಟ ಎಂಬವರನ್ನು ಪೋಲಿಸರು ಠಾಣೆಯಲ್ಲಿ ಕೆಡಹಿದ್ದಾರೆಂದು ತಿಳಿದು ಬರುತ್ತದೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ

A well-rounded programme of
SAVING
DO YOU WANT YOUR MONEY TO GROW?
If so, this should interest you.

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours. Study them, join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.
Head Office:—UDIPI, S. India.

ಯೂರೋಪಿನ ರಣರಂಗ

ನಾರ್ವೆ

ಅದರ ಸ್ಥಿತಿ ಮತ್ತು ಜನರು

ಪ್ರಕೃತಿಯೊಡನೆ ನಾರ್ವೇ ಜನರ ಹೋರಾಟ!

ನಾರ್ವೆಯು ಈಗ ಯೂರೋಪಿನ ಮಹಾಯುದ್ಧದ ರಣರಂಗವಾಗಿದೆ. ಅಲ್ಲಿ ಒಂದು ಕಡೆಯಿಂದ ಇಂಗ್ಲಿಷ್ ಮತ್ತು ಫ್ರೆಂಚ ಮಿತ್ರರಾಷ್ಟ್ರಗಳೂ, ಇನ್ನೊಂದು ಕಡೆಯಿಂದ ಹಿಟ್ಲರನ ನಾಝಿ ದಳವೂ ತಂತಮ್ಮ ಅಧಿಕಾರ ಸ್ಥಾಪನೆಗೆ ಬಲವಾದ ಯುದ್ಧವನ್ನು ಹೂಡಿವೆ. ಕಲ್ಲಪ್ಪ ಗುಂಡಪ್ಪ ಸೇರಿ ಮೆಣಸಪ್ಪ ಹುಡಿ ಎನ್ನುವ ಹಾಗೆ ನಾರ್ವೆಯ ಸರಕಾರವು ಈ ಎರಡು ಪಕ್ಷಗಳ ನಡುವೆ ಹುಡಿಯಾಗಿದೆ. ಅಲ್ಲಿಯ ಅರಸು ಕುಟುಂಬವು ಊರಿಂದೂರಿಗೆ ಅಲೆಯುತ್ತ ಈಗ ಯಾವದೋ ಒಂದು ಅಜ್ಞಾತ ಸ್ಥಳದಲ್ಲಿ ತಲೆ ಮರೆಸಿಕೊಂಡಿದೆ. ಆದರೆ ತಮ್ಮ ರಾಷ್ಟ್ರದಲ್ಲಿ ಪುನಃ ಸ್ವಾತಂತ್ರ್ಯ ಸ್ಥಾಪನೆಯಾಗುವ ತನಕ ತಾವು ಪ್ರಾಣಕೊಟ್ಟು ಹೋರಾಡುವೆವೆಂದು ಜನರು ದೃಢ ಪ್ರತಿಜ್ಞರಾಗಿದ್ದಾರೆ.

ವಾತಾವರಣ ಮತ್ತು ಭೂಸ್ಥಿತಿಯು ಒಂದು ದೇಶದ ಜನರ ಗುಣಸ್ವಭಾವ, ಶೀಲ ಭವಿಷ್ಯಗಳನ್ನೂ ರೂಪಿಸುತ್ತವೆ. ನಾರ್ವೆಯ ಜನರು ಯುದ್ಧಪ್ರಿಯ ಜನಾಂಗವಾಗಿದ್ದಾರೆ. ಈ ಜನರಿಗೆ ಹಾಸಿಗೆಯ ಮೇಲೆ ಮಲಗಿ ಶಾಂತಿಯಿಂದ ಸಾಯುವದೆಂದರೆ ಆಗದು. ಆದ್ದರಿಂದಲೇ ಮಧ್ಯಕಾಲದ ತನಕ ಯೂರೋಪಿನ ಜನಗಳು ನಾರ್ವೆಯ ಹೆಸರು ತೆಗೆದೊಡನೆ ಹೆದರಿ ಕಂಪಿಸುತ್ತಿದ್ದರು. ನಾರ್ವೆಯ ಜನರು ಸಣ್ಣ ಸಣ್ಣ ನಾವೆ ಹಡಗುಗಳಲ್ಲಿ ಸಮುದ್ರ ಪ್ರಯಾಣ ಮಾಡಿ, ಯೂರೋಪದ ಜನರ ಲೂಟಿ, ಅವರ ಸ್ವಾತಂತ್ರ್ಯಾಪಹಾರ ಮಾಡದ ದೇಶವಿರಲಿಲ್ಲ.

ಅವರ ಅಪ್ರತಿಮ ಸಾಹಸಗಳು

ನಾರ್ವೆಜಿಯನರು ಮೂರು ಮೂರು ಬಾರಿ ಪ್ಯಾರಿಸನ್ನು ಗೆದ್ದು ತಮ್ಮಧೀನದಲ್ಲಿಟ್ಟುಕೊಂಡಿದ್ದರು. ಕೊಲಂಬಸನು ಅಮೇರಿಕವನ್ನು ಕಂಡುಹಿಡಿಯುವ ಬಹಳ ಸಮಯದ ಪೂರ್ವದಲ್ಲಿ ಈ ಜನರು ಅಟ್ಲಾಂಟಿಕ ಮಹಾ ಸಾಗರವನ್ನು ದಾಟುವ ಅದ್ಭುತ ಸಾಹಸವನ್ನು ತೋರಿಸಿ ಐಸಲೆಂಡ ಗ್ರೀನಲೇಂಡ ಮತ್ತು ಅಮೆರಿಕಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದರು. ಇಂಗ್ಲಾಂಡಿನಲ್ಲಿ ರಾಜ್ಯ ಸ್ಥಾಪನೆ ಮಾಡಿದ ಕಾನ್ಯೂಟ್ ಮತ್ತು ವಿಲಿಯಂ ಅರಸರು ನಾರ್ವೆಜಿಯನರ ವಂಶದವರಾಗಿದ್ದರು. ಈಗ ಜರ್ಮನರು ಸಮುದ್ರದಲ್ಲಿ ಹಾಕಿರುವ ಮ್ಯಾನುಗಳನ್ನು ತೊರೆಯುವಂಥ ಸಾಹಸ ಕಾರ್ಯವನ್ನು ಮಾಡುವ ಬ್ರಿಟಿಷ ಸೈನಿಕರಲ್ಲಿ ಹಲವರು ಇದೇ ನಾರ್ವೆಜನರ ವಂಶಸ್ಥರಾಗಿದ್ದಾರೆ. ಇವರ ಅದ್ಭುತ ಸಾಹಸದ ಅನೇಕ ಕತೆಗಳು ಬಹಳ ಪ್ರಚಲಿತವಾಗಿರುವವು.

ಅವರ ಸಮುದ್ರವ್ಯಾಪಾರ

ನಾರ್ವೆಜನರು ಸಮುದ್ರ ವ್ಯಾಪಾರದಲ್ಲಿ ಬಹು ಪ್ರವೀಣರಾಗಿರುವರು. ಅವರ ಹಡಗು ಪಡೆಯು ಇತರ ದೇಶದವರಿಗಿಂತ ಸಂಖ್ಯೆಯಲ್ಲಿ ಹೆಚ್ಚಾಗಿಯೂ ಉತ್ಕೃಷ್ಟವಾಗಿಯೂ ಇರುತ್ತದೆ. ಹಡಗುಗಳ ಮೇಲೆ ತಲೆ ಎತ್ತಿ ಹಾರುತ್ತಿರುವ ನಾರ್ವೆಧ್ವಜಗಳನ್ನು ಎಲ್ಲ ಸಮುದ್ರಗಳಲ್ಲಿಯೂ ಕಾಣಬಹುದು. ಇವರು ವರ್ಷದ ಮೂರು ತಿಂಗಳುಗಳಲ್ಲಿ ಉತ್ತರ ಶೀತಸಮುದ್ರದಲ್ಲಿ ಕೋಡ ಎಂಬ ಮೀನುಗಳನ್ನು ಹಿಡಿಯುವ ವೃತ್ತಿಯು ಬಹು ರೋಮಾಂಚನಕಾರಿಯಾಗಿರುವದು. ಇವೇ ಮೀನುಗಳನ್ನು ಉಪ್ಪು ಹಾಕಿ ಒಣಗಿಸಿ ಪರದೇಶಗಳಿಗೆ ರಫ್ತು ಮಾಡಿ ಈ ಜನರು ಪ್ರತಿವರ್ಷ ಕೋಟ್ಯಂತರ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಮೀನು ಹಿಡಿಯುವದು ನಾರ್ವೆಜಿಯನರ ಮುಖ್ಯ ಜೀವನವೃತ್ತಿಯಾಗಿದೆ. ಯಾಕೆಂದರೆ ಅವರ ದೇಶದ ಒಂದು ದೊಡ್ಡ ಅಂಶವು ಗುಡ್ಡಗಾಡು ಪ್ರದೇಶವಾಗಿದೆ. ದೇಶದ ಒಟ್ಟು ವಿಸ್ತೀರ್ಣದ ಇಪ್ಪತ್ತರಲ್ಲಿ ಒಂದು ಪಾಲು ಮಾತ್ರ ಕೃಷಿಗೆ ಉಪಯುಕ್ತವಾಗಿದೆ. ಇಲ್ಲಿಯ ಜನರಿಗೆ ತೋಟಗಾರಿಕೆಯಲ್ಲಿ ಬಹಳ ಪ್ರೇಮ. ಹೂದೋಟಗಳಿಗಾಗಿ ಬಹಳ ಶ್ರಮ ಮತ್ತು ಹಣವನ್ನು ವ್ಯಯಮಾಡುವರು. ಇವರ ಹೂಪ್ರೇಮವು ಎಷ್ಟು ಅಪಾರವಾಗಿರುವದೆಂದರೆ, ಮನೆಗಳನ್ನು ಮಾಡನ್ನು ಹುಲ್ಲಿನಿಂದ ಹೊದಿಸಿ ಅದರ ಮೇಲೆ ಹೂಬೀಜಗಳನ್ನು ಬಿತ್ತಿ ಸಸಿ ಮಾಡುವದು. ಒಂದು ಕಾಲದಲ್ಲಿ ಆ ಸಸಿಗಳೆಲ್ಲ ಅಲ್ಲೇ ಮಾಡಿನ ಮೇಲೆ ಹೂ ಬಿಡುವವು. ನಾರ್ವೆಜಿಯನರು ಬಹಳ ಕಷ್ಟಪಟ್ಟು ಜೀವನ ಮಾಡಬೇಕಾಗುತ್ತದೆ. ಆದ್ದರಿಂದ ಜೀವನಕ್ಕೆ ಉಪಾಯಕಾಣದೆ ಈ ದೇಶದ ಅನೇಕ ತರುಣ ದಂಡಾಳುಗಳು ಅಮೆರಿಕಕ್ಕೆ ಹೋಗಿದ್ದಾರೆ. ಈ ಕಾರಣದಿಂದ ಈಗ ನಾರ್ವೆಯು ಮುದುಕರ ಮತ್ತು ಮಕ್ಕಳ ದೇಶವೆಂದು ಜನರು ಮಾತನಾಡುವಂತಾಗಿದೆ.

ದೇಶದ ರಾಜ್ಯಭಾರ

ನಾರ್ವೆಯ ಜನರು ಧೀರರೂ ವೀರರೂ ಆಗಿದ್ದಾದರೂ ನಾರ್ವೆಯ ಒಂದು ರಾಷ್ಟ್ರವೆಂದೆಣಿಸಿ ಸ್ವಾತಂತ್ರ್ಯ ಸುಖವನ್ನು ಅನುಭವಿಸಿದ್ದು ಇತ್ತೀಚೆಗೆ. ೧೩೯೭ರಿಂದ ೧೯೦೫ರ ತನಕ ಈ ದೇಶವು ಮೊದಲು ಡೆನ್ಮಾರ್ಕಿಗೂ ಅನಂತರ ಸ್ವೀಡನಿಗೂ ಅಧೀನವಾಗಿತ್ತು. ಈಗ ನಾರ್ವೆಯ ಅರಸರಾಗಿರುವ ಹಾಕೋನರು ಸ್ವಲ್ಪ ಸಮಯದ ಮೊದಲು ವಿಧುರರಾದರು. ಅವರು ದಿವಂಗತ ಸಪ್ತಮ ಎಡ್ವರ್ಡರ ಪುತ್ರಿ, ರಾಜಕುಮಾರಿ ಮೋಡರನು ವಿವಾಹವಾಗಿದ್ದರು. ಹಾಕೋನ ಅರಸರಿಗೆ ರಾಜಕೋಶದಿಂದ ವರ್ಷಕ್ಕೆ ೧೫೦೦೦ ಪವನುಗಳ ದ್ರವ್ಯವನ್ನು ಪಡೆಯುತ್ತಾರೆ. ಇದು ಅವರ ಪದವಿಗೆ ಬಹಳ ಕಡಿಮೆಯೇ ಸರಿ. ಆದರೂ ಅವರು ಬಹಳ ಸರಳ ಸ್ವಭಾವದವರು. ದುಂದುವ್ಯಯ ಮಾಡುವವರಲ್ಲ. ತಮಗೆ ಬೇಕಾದ ವಸ್ತು ಒಡವೆಗಳನ್ನು ಅವರು ಸ್ವತಹ ಪೇಟೆಗೆ ಹೋಗಿಕೊಂಡು ಕೊಳ್ಳುವರು. ಜನರು ಅವರನ್ನು ಗುರುತಿಸಿ ನಮಸ್ಕರಿಸಿದಾಗ ನಸುನಕ್ಕು ಪ್ರತಿನಮಸ್ಕಾರ ಮಾಡುವರು.

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು. ಬ್ರೆಂಚ್ ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಸಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½

„ 6 ತಿಂಗಳಿಗೆ 4% „ 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ, ಉತ್ತರ ಕನ್ನಡ.)

ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು.

ಈ ವಾರದ ಕತೆ:

ಒಂದಕ್ಕೆ ಹತ್ತು

ಜಗತ್ತಿನಲ್ಲಿ ಅವನವರೆಂದು ಒಬ್ಬರಾದರೂ ಇರಲಿಲ್ಲ. ತಾಯಿತಂದೆಗಳ ದೇಹಾಂತವಾಗಿತ್ತು. ಬಂಧುಬಾಂಧವರ ಪೀಡೆ ಅಸಹನೀಯವಾಗಿತ್ತು. ಅವನು ಊರು ಬಿಟ್ಟು ಕ್ಷೇತ್ರವಾಸಿಯಾಗಿದ್ದ. ಭಿಕ್ಷೆ ಬೇಡಿ ಬೇಡಿ ಈಗ ವೃದ್ಧನಾಗಿದ್ದ.

ಸಾಯಂಕಾಲ ತಿರುಗಾಡಲಿಕ್ಕೆ ಹೋದಾಗಲೆಲ್ಲ ನಾನವನನ್ನು ನೋಡುತ್ತಿದ್ದೆ. ಅವನೂ ಮಾರ್ಗದ ಬದಿ ಕೂತು ಭಿಕ್ಷೆಬೇಡುತ್ತಿದ್ದ—'ಅಪ್ಪಾ ಒಂದು ಕಾಸು! ಅಮ್ಮಾ ಒಂದು ಕಾಸು!' ಒಂದು ದಿನ ನಾನವನನ್ನು ಕೇಳಿದೆ—'ನೀನೇಕೆ ಭಿಕ್ಷೆ ಬೇಡುತ್ತೀ?'

ಅವನು ನಡುಗುವ ಸ್ವರದಿಂದ ಉತ್ತರ ಕೊಟ್ಟ—'ಹೊಟ್ಟೆತುಂಬಿಸಲಿಕ್ಕೆ.'

ನಾನು ಹೇಳಿದೆ—'ಹೊಟ್ಟೆತುಂಬಿಸಲಿಕ್ಕಾದರೆ ಇನ್ನೂ ಅನೇಕ ಯುಕ್ತಿಗಳಿವೆ. ನನ್ನನ್ನು ನೋಡು. ನಾನೇನೂ ಭಿಕ್ಷೆ ಬೇಡುವದಿಲ್ಲ. ಆದರೂ ನನ್ನ ಹೊಟ್ಟೆ ತುಂಬುತ್ತದೆ.'

ಅವನು ಆಶ್ಚರ್ಯಜನಕ ದೃಷ್ಟಿಯಿಂದ ನನ್ನ ಕಡೆಗೆ ನೋಡಿ ಸಮೀಪಕ್ಕೆ ಬಂದ. ಮತ್ತೆ ಬಿಕ್ಕಳಿಸುತ್ತ ಹೇಳಿದ—'ಹಾಗಾದರೆ ಸ್ವಾಮೀ, ನನಗೂ ಒಂದು ಉಪಾಯ ಹೇಳಿಕೊಡಿ. ಭಿಕ್ಷೆ ಬೇಡದೆ ಹೊಟ್ಟೆ ತುಂಬಿಸಿಕೊಳ್ಳುವ ಏನಾದರೂ ಉದ್ಯೋಗ ತೋರಿಸಿ ಕೊಡಿ. ಭಿಕ್ಷೆ ಬೇಡಿ ನನಗೆ ಬೇಸರ ಬಂದಿತು. ಭಿಕ್ಷೆ ಬೇಡುವಾಗಲೂ ಹಲವಾರು ದಿನ ಉಪವಾಸವಿದ್ದೇನೆ. ಹೊಟ್ಟೆಗೆ ಅನ್ನದ ಒಂದು ಕಾಳು ಕೂಡ ಹೋಗದೆ ಎರಡು ಮೂರು ದಿನಗಳು ಕಳೆಯುತ್ತವೆ. ಭಿಕ್ಷೆ ಬೇಡುವ ಜೀವನ ನನಗೆ ಬೇಡವೇ ಬೇಡ. ಬೇಡುವಾಗ ಜನರು ಬಯ್ಯುತ್ತಾರೆ. ತೆಗಳುತ್ತಾರೆ. ನನಗೆ ಭಿಕ್ಷುಕನಾಗುವದು ಬೇಡವೇ ಬೇಡ. ಈ ಜೀವನದಿಂದ ಎಷ್ಟು ಬೇಸರವಾಗಿದೆ ಎಂಬುದನ್ನು ಪರಮಾತ್ಮನೇ ಬಲ್ಲ!'

ಜೇಬಿನಿಂದ ಒಂದು ರೂಪಾಯಿ ತೆಗೆದು ನಾನವನ ಕೈಯಲ್ಲಿಟ್ಟೆ. ಮತ್ತೆ ಹೇಳಿದೆ—'ನೋಡು; ನಾಳೆ ಬೆಳಗ್ಗೆ ಎದ್ದವನೇ ಪೇಟೆಯಿಂದ ಸ್ವಲ್ಪ ತರಕಾರಿ ಕೊಂಡು ಬಾ. ಮತ್ತೆ ಅವನ್ನು ಇದೇ ಸ್ಥಳದಲ್ಲಿಟ್ಟು ವ್ಯಾಪಾರ ಮಾಡು. ನೋಡು; ನಾಳೆ ಸಾಯಂಕಾಲ ಬರುತ್ತೇನೆ. ಇಲ್ಲಿಯೇ ನೀನು ಕಾಣಿಸಬೇಕು. ನಾನು ಹೇಳಿದ ಹಾಗೆ ಮಾಡಿದಿಯಾದರೆ ಈ ರೂಪಾಯಿಯು ಒಂದಕ್ಕೆ ಎರಡಾಗುವದನ್ನು ನೋಡುವಿಯಂತೆ.'

ರೂಪಾಯಿ ತೆಗೆದುಕೊಂಡು ಅವನು ನನಗೆ ಬಹಳ ಧನ್ಯವಾದ ಕೊಟ್ಟ.

ಮರುದಿನ ಸಾಯಂಕಾಲ ಆ ಮಾರ್ಗವಾಗಿ ಹೋಗುವಾಗ ಭಿಕ್ಷುಕ ಅಗಲೂ ಎಂದಿನ ಹಾಗೆ ಭಿಕ್ಷೆ ಬೇಡುತ್ತಿದ್ದ. ಅವನು—'ಅಪ್ಪಾ! ಒಂದು ಕಾಸು; ಅಮ್ಮಾ ಒಂದು ಕಾಸು' ಎನ್ನುವದು ಆಗಲೂ ಕಡಿಮೆ ಆಗಿರಲಿಲ್ಲ. ಅದನ್ನು ನೋಡಿ ನನಗೆ ಬಹಳ ಸಿಟ್ಟು ಬಂದಿತು. ನಾನವನಿಗೆ ಹೇಳಿದೆ—'ಅರೇ ನನ್ನ ರೂಪಾಯಿಯಿಂದ ನೀನೇನು ಮಾಡಿದೆ? ತರಕಾರಿ ಕೊಳ್ಳಲಿಲ್ಲವೆ? ಸಂಪಾದನೆಗೆ ಮಾರ್ಗ ತೋರಿಸಿದರೂ ಆ ಮಾರ್ಗದಲ್ಲಿ ನಡೆಯಲಿಲ್ಲವೆ? ಭಿಕ್ಷೆ ಬೇಡಿ ನಿನಗೆ ಲಜ್ಜೆಯಾಗುವದಿಲ್ಲವೆ?'

ದುಃಖದಿಂದ ತುಂಬಿದ ಒಂದು ನಿಟ್ಟುಸಿರು ಬಿಟ್ಟು ಅವನು ಹೇಳಿದ—'ಮಹಾಸ್ವಾಮಿ, ತಮ್ಮ ರೂಪಾಯಿಯಿಂದ ಒಂದಕ್ಕೆ ಎರಡಾಗುವದೆಂದು ತಾವು ಹೇಳಿದ್ದೀರಿ. ಆದರೆ ಸ್ವಾಮಿ! ಈ ದಿನ ಬೆಳಗಾಗಬೇಕಾದರೆ ಒಬ್ಬ ಭಿಕ್ಷುಕ ಎದುರಾದ. ಅವನು ನನಗಿಂತಲೂ ಬಡವ, ನನಗಿಂತಲೂ ಕಂಗಾಲು ಆಗಿದ್ದ. ತಮ್ಮ ರೂಪಾಯಿಯನ್ನು ಒಂದಕ್ಕೆ ಹತ್ತು ಮಾಡಿ ಅವನಿಗೆ ಕೊಟ್ಟುಬಿಟ್ಟೆ.'

ನನಗೆ ಅವನ ಮಾತಿನ ಅರ್ಥವಾಗಲಿಲ್ಲ. ನಾನು ಅವನ ಮಾತನ್ನು ನಂಬಲಿಲ್ಲ. ಸಿಟ್ಟಿನಿಂದ ಹೇಳಿದೆ—'ಫಟಿಂಗ! ನೀನು ಸುಳ್ಳು ಹೇಳುತ್ತೀ! ನನ್ನ ರೂಪಾಯಿ ನನಗೆ ಮರಳಿ ಕೊಡು. ನೀನು ಸಜ್ಜನ ಎಂದು ತಿಳಿದು ವ್ಯಾಪಾರಕ್ಕೆ ನಿನಗೆ ರೂಪಾಯಿ ಕೊಟ್ಟಿದ್ದೆ. ಈಗ ನೋಡು ನೀನು ದೊಡ್ಡ ಮೋಸಗಾರನಂತೆ ತೋರುತ್ತೀ.'

ಅವನು ಹೇಳಿದ—'ಸ್ವಾಮೀ! ನನ್ನ ಮಾತು ಒಂದೂ ಸುಳ್ಳಲ್ಲ. ನೋಡಿ ಸ್ವಾಮೀ, ನನಗಿಂತ ಕಂಗಾಲಾದ ಆ ಭಿಕ್ಷುಕ ಅಲ್ಲೇ ಕೂತಿದ್ದಾನೆ. ಬಡತನದಿಂದ ಹೇಗೆ ನರಳುತ್ತಿದ್ದಾನೆ, ನೋಡಿ. ನಾನು ಬೆಳಗ್ಗೆ ತರಕಾರಿ ಕೊಳ್ಳಲಿಕ್ಕೆ ಹೋದಾಗ—'ಅಪ್ಪಾ, ಅಮ್ಮಾ,' ಎಂದ. ಅವನ ಗೋಳನ್ನು ನನ್ನಿಂದ ನೋಡಲಾಗಲಿಲ್ಲ. ನಿಮ್ಮ ರೂಪಾಯಿ ಅವನಿಗೆ ಕೊಟ್ಟುಬಿಟ್ಟೆ. ಅವನು ರೂಪಾಯಿ ಕೊಳ್ಳುತ್ತ ಹೇಳಿದ—'ಸ್ವಾಮಿ ಈ ರೂಪಾಯಿಯಿಂದ ನಿಮಗೆ ಒಂದಕ್ಕೆ ಹತ್ತಾಗುವದು.' ಸ್ವಾಮಿ ಆ ಭಿಕ್ಷುಕನಿಗೆ ಕೊಟ್ಟ ರೂಪಾಯಿ ನಿಮ್ಮದಾಗಿತ್ತು. ಅದು ಒಂದಕ್ಕೆ ಹತ್ತಾಗಿತ್ತು. ಆದರೆ ನೀವದನ್ನು ಹಿಂದಕ್ಕೆ ಕೇಳಿ ಇದ್ದುದನ್ನು ಕಳಕೊಂಡಿರಿ.'

ಮಾತನಾಡುತ್ತ ಹಾಗೆ ಅವನ ಕಣ್ಣುಗಳಿಂದ ನೀರು ಹರಿಯಿತು. ನನಗೆ ಅವನ ಮಾತಿನ ವಿಶ್ವಾಸವಾಗಿ, ನನ್ನ ಕಣ್ಣುಗಳಿಂದಲೂ ನೀರು ಹರಿಯತೊಡಗಿತು. ಅವನ ಕೈಯಲ್ಲಿ ಇನ್ನೊಂದು ರೂಪಾಯಿಯಿಟ್ಟು ಕಣ್ಣೊರಸುತ್ತ ನಾನು ಮನೆ ದಾರಿಹಿಡಿದೆ.

—'ಯುಗಾಂತರ'

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ, ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುಕೆಯನ್ನೂ ಗುಣಮಾಡುತ್ತದೆ.

ಕುಟಿಕೂರಾ ಮುಲಾಮು (cuticura ointment) ನೆರೆದು ಯಾವ ಕ್ರಿಮಿಗಳು ತಡೆಯವು. ಆದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ತುರಿ, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.



ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮ್
Cuticura Ointment

ನಿಮ್ಮ ಅದೃಷ್ಟ!



ಪೋಸ್ಟು ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿರಿ. ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ವಹಿವಾಟುಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ, ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ. 1-9-0ಕ್ಕೆ ವಿ. ಪಿ. ಮೂಲಕ ತಿಳಿಸುವೆವು. ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.

ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು. ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 100 ಇನಾಮು ಕೊಡಲಾಗುವುದು.

ANAND JOTISH ASHRAM,
PostBox No. 27 (S.A.M.) Amritsar

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಶಿಶುದಂತ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ನವೆಂಬರ್ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜಂಟ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ.

ಜರ್ಮನಿಯು ಹಾಲೆಂಡಿಗೆ ದಾಳಿಯಿಟ್ಟರೆ?

ಅದು ಸಾಧ್ಯವೆ? — — — — ಸಂಭವವೆ?

ಯೂರೋಪಿನ ಮುಂದಿನ ಗಂಡಾಂತರ

ನಾರ್ವೆ ಡೆನ್ಮಾರ್ಕುಗಳನ್ನು ಜರ್ಮನಿಯು ಇಂದು ಆಕ್ರಮಿಸಿದುದನ್ನು ಕಂಡರೆ, ಮುಂದಿನ ಅದರ ಕೊಳ್ಳೆಯು ಹಾಲೆಂಡು ಆಗಬಹುದೇ ಎಂಬ ಸಂದೇಹವು ಹುಟ್ಟುವುದು ಸಹಜವಾಗಿದೆ. ಹಾಲೆಂಡಿನ ತಾಟಸ್ಥ್ಯಕ್ಕೆ ಭಂಗತರಲಾರೆನೆಂದು ಹಿಟ್ಲರನು ಹಲವು ಸಲ ಹೇಳಿರುವನಾದರೂ ಅದನ್ನು ಆಧರಿಸಿರಲು ಸಾಧ್ಯವಿಲ್ಲ. ಅದೇ ರೀತಿ ನಾರ್ವೆ ಡೆನ್ಮಾರ್ಕುಗಳಿಗೂ ಭರವಸೆಯಿತ್ತಾದರೂ ಅದನ್ನು ಇಷ್ಟೆಂದೂ ಸಂಕೋಚವಿಲ್ಲದೆ ಮುಂದು ಆ ರಾಷ್ಟ್ರಗಳ ಎದೆಮೇಲೆ ಸವಾರಿಮಾಡುತ್ತಿದ್ದಾನೆ. ಅದಕಾರಣ ಹಿಟ್ಲರನ ಭರವಸೆ ಪ್ರತಿಜ್ಞೆಗಳನ್ನು ನಂಬಿ ಯಾವ ರಾಷ್ಟ್ರವೂ ಸ್ವಸ್ಥವಾಗಿರಲು ಸಾಧ್ಯವಿಲ್ಲ.

ಇದುವರೆಗೆ ಯಾಕೆ ಮುತ್ತಲಿಲ್ಲ?

ಹಿಟ್ಲರನು ಹಾಲೆಂಡನ್ನು ಆಕ್ರಮಿಸಬಲ್ಲನಾದರೆ ಬ್ರಿಟನಿಗೆ ದಾಳಿಯಿಡಲು ಸುಲಭವಾಗಬಹುದು. ಬೆಲ್ಜಿಯಂ ಮತ್ತು ಉತ್ತರ ಫ್ರಾನ್ಸುಗಳನ್ನು ಆತನು ಕೊಳ್ಳೆ ಹೊಡೆಯಬಹುದು. ಅದಕಾರಣ ದಿಂದಲೇ ಹಿಟ್ಲರನಿಗೆ ಗೊತ್ತು ಬ್ರಿಟನಾಗಲಿ ಫ್ರಾನ್ಸಾಗಲಿ ಹಾಲೆಂಡಿಗೆ ತನ್ನ ಆಕ್ರಮಣವಾಗುವುದನ್ನು ನೋಡಿ ಸುಮ್ಮಗಿರಲಾರರೆಂದು. ಒಮ್ಮೆ ಮಿತ್ರರಾಷ್ಟ್ರಗಳು ಹಾಲೆಂಡಿಗೆ ಕಾಲಿಟ್ಟರೆಂದರೆ ಹಿಟ್ಲರನ ಕುತ್ತಿಗೆ ಹಿಡಿದಂತೆಯೇ. ಅದಕಾರಣವೇ ಹಿಟ್ಲರನು ಹಾಲೆಂಡಿನ ಕಡೆ ಇದುವರೆಗೆ ತನ್ನ ದೃಷ್ಟಿ ಬೀರಿರಲಿಲ್ಲ!

ಹಾಲೆಂಡು ಜರ್ಮನಿಯ ಆಕ್ರಮಣವನ್ನು ಸರ್ವ ಶಕ್ತಿಯಿಂದಲೂ ತಡೆಯುವುದಾಗಿ ಈಗಾಗಲೇ ಸ್ಪಷ್ಟಮಾಡಿದೆ. ಡಚ್ಚರು ಶಾಂತಿಪ್ರಿಯರು. ತಮ್ಮ ರಾಷ್ಟ್ರವನ್ನು ಯುದ್ಧದ ಹೊಗೆಯಿಂದ ದೂರಿಯು ಬಿಡಲು ಅವರು ಇಚ್ಛಿಸುವುದಿಲ್ಲ. ಕಳೆದ ಯುದ್ಧದಲ್ಲಿ ಯುದ್ಧದಿಂದ ಅವರು ತಪ್ಪಿಸಿದ ವಿಷಯವನ್ನು ನೋಡಿದರೆ ಎಷ್ಟು ಶಾಂತಿಪ್ರಿಯ ಜನರು ಅವರೆಂದು ತಿಳಿದು ಬರುವುದು.

ಆದರೆ ಯುದ್ಧಮಾಡಬೇಕಾಗುವುದೆಂದು ಡಚ್ಚರು ವಿದೇಶೀಯರ ಆಕ್ರಮಣ ಆಡಳಿತಗಳನ್ನು ಸಹಿಸಲಾರರು. ಪೋಲೆಂಡು, ನಾರ್ವೆ ಡೆನ್ಮಾರ್ಕುಗಳ ಪರಿಸ್ಥಿತಿಗಳಿಂದ ಹಾಲೆಂಡು ಬಹಳವಾಗಿ ಎಚ್ಚತ್ತಿದೆ. ಡಚ್ಚರು ತಮ್ಮ ರಕ್ಷಣೆಯ ಸಿದ್ಧತೆಯನ್ನು ಅಷ್ಟು ಭದ್ರವಾಗಿ ಮಾಡಿದ್ದಾರೆ.

ಡಚ್ಚರ ಸಿದ್ಧತೆಗಳು

ಡಚ್ಚರು ದೇಶವಿಶಾಲವಾಗಿ ಭದ್ರವಾದ ಕೋಟೆಗಳನ್ನು ಕಟ್ಟಿದ್ದಾರೆ. ಸೈನಿಕರು, ತೋಪಿನವರು ಆಜ್ಞೆಯಾದ ನಿಮಿತ್ತದಲ್ಲಿ ಗುಂಡು ಹಾರಿಸಲು ಸಿದ್ಧರಿದ್ದಾರೆ. ಅವರ ವಿಶೇಷತೆಯೆಂದರೆ, ಆಕ್ರಮಿಸುವ ಸೈನ್ಯವನ್ನು ಅವರು ಭಯಂಕರ ಸೆರೆಯಿಂದ ಕೊಚ್ಚಿ ಹೋಗುವಂತೆ ಮಾಡಬಲ್ಲ ಅಣೆಕಟ್ಟುಗಳನ್ನು ಕಟ್ಟಿಸಿಟ್ಟಿದ್ದಾರೆ. ನೀರಿನ ಮಟ್ಟಕ್ಕೆ ಕೆಳಗಿನ ಭೂಮಿಗಳನ್ನು ಅವರು ಇಂದು ಅಣೆಕಟ್ಟು ಕಟ್ಟಿ ಒಣಗಲಾಗಿಟ್ಟಿದ್ದಾರೆ. ಶತ್ರು ಸೈನ್ಯವು ಬಂದ ಕೂಡಲೇ ಅಣೆಕಟ್ಟಿನ ಬಾಗಿಲು ತೆಗೆಯಲು ಶತ್ರುಸೈನಿಕರು ನೀರಪಾಲಾಗುವರು.

ಜರ್ಮನರ ಯುದ್ಧ ನಿಪುಣತೆಯು ವಿದ್ಯುತ್ ಯುದ್ಧದಲ್ಲಿ ಎಂದು ಡಚ್ಚರಿಗೆ ಗೊತ್ತಿದೆ. ಅಣೆಕಟ್ಟನ್ನು ತೆರೆವ ಸಮುಚಿತವಾಗಿಯೇ ಶತ್ರುಗಳು ಬರದಂತೆ ಅವರು ಸುತ್ತಲೂ ಕಾವಲಿರಿಸಿದ್ದಾರೆ. ಸುತ್ತಲಿಯ ಜಲಮಾರ್ಗಗಳಲ್ಲಿಯೂ ತೋಟೆಗಳನ್ನು ಇಟ್ಟಿರುವುದರಿಂದ ನೀರಿನೊಳಗಡೆಯಿಂದ ಬಂದು ಮುತ್ತುವುದೂ ಅಸಾಧ್ಯವಾಗಿದೆ. ಹೀಗೆ ಶತ್ರುಗಳಿಗೆ ಡಚ್ಚರು ಬೀಸಿದ ಬಲೆಯು ಬಹಳ ಭದ್ರವಾಗಿದೆ.

ಸೈನ್ಯಶಕ್ತಿ

ಹೋಲೆಂಡಿನ ಗಡಿಗಳನ್ನು ಕಾಯಲು ಎರಡು ಮಿಲಿಯ ಡಚ್ಚರು ಶಸ್ತ್ರಸಜ್ಜಿತರಾಗಿದ್ದಾರೆ. ತೋಟೆ, ಟಾರ್ಪೆಡೋಗಳಿಂದ ತುಂಬಿದ ನೌಕಾಪಡೆಗಳೂ ಇವೆ.

ಆದರೆ, ಒಂದೇ ಒಂದು ದೌರ್ಬಲ್ಯವೆಂದರೆ ವಿಮಾನ ಬಲವಿಲ್ಲದಿರುವುದು. ೧,೦೦೦ ವಿಮಾನಗಳು ಮಾತ್ರ ಇವೆಯೆಂದು ತಿಳಿದಿದೆ. ಆದರೆ ಇದು ಜರ್ಮನರ ವಿಮಾನಗಳಿಗೆ ಸರಿಸಾಟಿಯಲ್ಲ. ಅದಕಾರಣ ಡಚ್ಚರು ಹೆಚ್ಚಾಗಿ ಹೆದರಿರುವುದು ವೈಮಾನಿಕಧಾಳಿಗೆ. ಒಂದು ದಿನ ಜರ್ಮನಿಯ ವಿಮಾನಧಾಳಿಯು ಹಾಲೆಂಡಿಗೆ ಆಗಬಹುದೆಂದು ಡಚ್ಚರಿಗೆ ಗೊತ್ತಿದೆ. ಆ ಸಮಯದಲ್ಲಿ ಬ್ರಿಟನು ಫ್ರಾನ್ಸುಗಳ ವಿಮಾನ ಬಲವು ಸಹಾಯಕ್ಕೆ ಖಂಡಿತ ಬರುವುದೆಂಬ ಭರವಸೆಯು ಅವರಿಗಿದೆ. ಆದರೆ ಡಚ್ಚರು ಇದರ ಸಹಾಯವನ್ನೇ ಆಧರಿಸಿರುವುದಿಲ್ಲ. ದೇಶದ ಸ್ವಾತಂತ್ರ್ಯಕ್ಕಿಂತ ಅವರಿಗೆ ಹೆಚ್ಚು ಪ್ರಿಯವಾದುದು ಬೇರಿಲ್ಲ.

ಜರ್ಮನಿಯು ಆರ್ಥಿಕಮುಗ್ಗಟ್ಟಿನಿಂದ ಎಂದಾದರೊಮ್ಮೆ ಮಿತ್ರರಾಷ್ಟ್ರಗಳೊಡನೆ ಜಾಡಾಜೋಡಿಗೆ ಬರಲೇ ಬೇಕಾಗುವುದು. ಆಗ ಹಾಲೆಂಡು ಪ್ರತ್ಯಕ್ಷ ರಣಕ್ಷೇತ್ರವಾಗಬಹುದು. ಜರ್ಮನಿಯ ಆಕ್ರಮಣವನ್ನು ಮಿತ್ರರಾಷ್ಟ್ರಗಳು ಮತ್ತು ಡಚ್ಚರು ಮುಂದಾಗಿ ತಡೆಯಲು ಈಗ ಸರ್ವಸಿದ್ಧತೆ ಮಾಡಿರುತ್ತಾರೆ.

HALFTONE & LINE
BLOCK MAKING
UNDERTAKEN
Sharada Press,
MANGALORE

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
Rs.50/-,100/-,500/-,1,000/-&5,000/-
are now issued at all our Branches.
For particulars call at or write to
Any of our nearest Branches

ಸ್ತ್ರೀಯರ ಆರೋಗ್ಯಸೌಭಾಗ್ಯಗಳಿಗೆ

ಲೋಧ್ರ
ತಯಾರಿಸುವವರು:
ಕೇಸರಿ ಕುಟೀರ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟೋಕಿಸ್ಟರು:
ಪಾಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.



ಜಿಲ್ಲಾ ಸಮಾಚಾರ

ಮಂಗಳೂರು

ವರ್ಗಾವರ್ಗಿ:—ಮಂಗಳೂರು ಟೌನ್ ಪೋಲಿಸ್ ಸ್ಟೇಶನಿನ ಸ್ಟೇಶನ್ ಹೌಸ್ ಆಫೀಸರರಾದ ಶ್ರೀ. ಎನ್. ಲಕ್ಷ್ಮಣರಾವ್ ಇವರ ಸ್ಥಾನದಲ್ಲಿ ಮಂಜೇಶ್ವರ ಸ್ಟೇಶನಿನ ಸಬ್ ಇನ್ಸ್‌ಪೆಕ್ಟರ್ ಶ್ರೀ ಬಿ ಅಣ್ಣಪ್ಪನವರು ನೇಮಕ ಹೊಂದಿರುವರು. ಟೌನ್ ಸರ್ಕಲ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ. ಯು ಕೃಷ್ಣರಾಯರು ನಾಲ್ಕು ತಿಂಗಳ ರಜೆ ಪಡೆಯುವರು

ಮೇ ದಿನಾಚರಣೆ:—ಕಳೆದ ತಾ ೧ರಲ್ಲಿ ಮಂಗಳೂರಿನ ಮಜೂರ ಸಂಘಗಳವರು ಮೇ ದಿನಾಚರಣೆಯನ್ನು ಯಶಸ್ವಿಯಾಗಿ ಜರಗಿಸಿದರು ಮಜೂರರು ಒಂದು ದೊಡ್ಡ ಮೆರವಣಿಗೆಯನ್ನು ಹೊರಡಿಸಿದರು ಮೈದಾನದಲ್ಲಿ ಶ್ರೀ ಯಸ್ ಎನ್ ಹೊಳ್ಳರ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಸೇರಿತು ಹಲವು ಮಂದಿ ಮಜೂರ ಮುಖಂಡರು ಭಾಷಣ ಮಾಡಿ ಮಜೂರರ ಹಕ್ಕು ಬಾಧ್ಯತೆಗಳನ್ನು ಹೇಗೆ ಸಂಪಾದಿಸಬೇಕೆಂಬ ವಿಷಯವನ್ನು ತಿಳಿಸಿದರು ಅಧ್ಯಕ್ಷರು ಮಜೂರರಲ್ಲಿ ಐಕ್ಯತೆಯು ಎಷ್ಟು ಅವಶ್ಯವೆಂಬುದನ್ನೂ ರಾಷ್ಟ್ರಸಭೆಗೆ ಮಜೂರರು ಬೆಂಬಲ ಕೊಡುವುದು ಎಷ್ಟು ಅಗತ್ಯವೆಂಬುದನ್ನೂ ಹೇಳಿದರು

ದ. ಕ ಪಂಡಿತ ಸಂಘದ:—ಕಾರ್ಯಕಾರಿ ಮಂಡಲಿಯ ಸಭೆಯು ತಾ ೪ನೇ ಸಾಯಂಕಾಲ ಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಯಂ. ಎನ್ ಕಾಮತರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಿಸಿ ಠರಾವು ಮಾಡಿತು

ಕನ್ನಡ ಸಾಹಿತ್ಯ:—ಶ್ರೀ ಬಿ ಯಂ ಶ್ರೀಕಂಠಯ್ಯನವರು, ಕಳೆದ ಶನಿವಾರ ಸಂಜೆ, ಸ್ಥಳೀಯ ಥಿಯಾಸಫಿಕಲ್ ಲಾಜಿನಲ್ಲಿ "ಕನ್ನಡ ಸಾಹಿತ್ಯ"ದ ಕುರಿತಾಗಿ ಭಾಷಣವಿತ್ತರು ಸಕಲರೂ ಪರಿಷತ್ತಿನ ರಜತೋತ್ಸವಕ್ಕೆ ಆಗಮಿಸಬೇಕಾಗಿ ಬೇಡಿಕೊಂಡರು ಶ್ರೀ ಕೆ ಬಿ. ಜಿನರಾಜ ಹೆಗ್ಡೆಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಯಸ್ ಮುಕುಂದರಾಯರು ವಂದನಾರ್ಪಣೆ ಮಾಡಿದರು

ಉಡುಪಿ

ನಗರ ಸಭೆ:—ಉಡುಪಿಯ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಕಳೆದ ತಾ. ೪ರಲ್ಲಿ ಜರಗಿತು. ದೀನಬಂಧು ಸಿ. ಎಫ್. ಆಂಡ್ರೂಸರ ಅಕಾಲ ನಿಧನದ ಕುರಿತು ದುಃಖಸೂಚಕ ನಿರ್ಣಯವಾಯಿತು. ಈ ಮೊದಲು ಮಿ॥ ಆರ್ ಎ. ಸ್ವಾಮಿನ್ನರು ರಾಜಭಕ್ತಿ ಪ್ರತಿಜ್ಞೆಯನ್ನೋದಿದರು. ಮದ್ರಾಸ್ ಪಬ್ಲಿಕ್ ಹೆಲ್ತ್ ಆಕ್ಟಿನ ೧೧೬ (೧)ನೇ ಸೆಕ್ಷನಿನಂತೆ ಉಡುಪಿಯ ಮುನಿಸಿಪಾಲಿಟಿಯನ್ನು ಯಾತ್ರಾಕೇಂದ್ರವಾಗಿ ಮಾಡಿದ ಸರಕಾರೀ ಹುಕುಮನ್ನು ಓದಲಾಯಿತು ಈ ಸಂಬಂಧ ವರ್ಷಂಪ್ರತಿಯೂ ಶ್ರೀ ಕೃಷ್ಣ ಮಠದ ಜಾತ್ರೆಯ ನಿಮಿತ್ತ ದಶಂಬರ ತಿಂಗಳಾದಿಯಿಂದ ಫೆಬ್ರುವರಿ ತಿಂಗಳಾಂತ್ಯದವರೆಗೆ ಹೊರಗಿನಿಂದ ಬರುವ ಪ್ರತಿಯೊಂದು ವಾಹನ, ಗಾಡಿ, ನಿರ್ದಿಷ್ಟ 'ಪ್ರಾಣಿಗಳ' ಮೇಲೆ ಸುಂಕ ಹೊರಿಸುವದನ್ನು ಪರಿಶೀಲಿಸಿ—ಕಮಿಷನರ ಸೂಚನೆಗಳನ್ನು ಅಂಗೀಕರಿಸಲಾಯಿತು.

೨೦ ಮಂದಿ ಕೊರಗರ ಪ್ರತಿಜ್ಞೆ:—ಕಳೆದ ತಾ. ೨ರಲ್ಲಿ ಪ್ರಸ್ತೂರಿನ ಈಶ್ವರಾನಂದ ವಿದ್ಯಾಲಯದಲ್ಲಿ ಉಡುಪಿ ತಾಲೂಕಿನ ಕೊರಗರ ಮಹಾಸಭೆಯು ಶ್ರೀ ಕೆ. ಗುರುವನವರ ಅಧ್ಯಕ್ಷತೆಯಲ್ಲಿ ಜರಗಿತು, ತಾಲೂಕು ಹರಿಜನ ಸೇವಾ ಸಂಘದ ಕಾರ್ಯದರ್ಶಿ, ಶ್ರೀ ಬಿ ಅಂತಯ್ಯ ಶೆಟ್ಟರು ಮದ್ಯಪಾನ, ಎಂಜಲನ್ನ, ಗೋಮಾಂಸ ಭಕ್ಷಣಾದಿಗಳು ಸಂಪೂರ್ಣ ಬಿಡತಕ್ಕವುಗಳೆಂದು ಸೂಚಿಸಿದರು ಇಪ್ಪತ್ತು ಮಂದಿ ದೃಢ ಪ್ರತಿಜ್ಞೆಯನ್ನು ಮಾಡಿ ಮದ್ಯಪಾನ, ಎಂಜಲನ್ನ, ಗೋಮಾಂಸ ಭಕ್ಷಣ ಮಾಡುವುದಿಲ್ಲವೆಂದರು

ಕಾರ್ಕಳ

ಸಾಹಿತ್ಯ ಭಾಷಣ:—ಶ್ರೀ ಬಿ ಯಂ ಶ್ರೀಕಂಠಯ್ಯನವರೂ, ಪ್ರೊಫೆಸರ್ ರಂಗಸ್ವಾಮಿಯವರೂ ತಾ ೩-೫-೪೦ರ ದಿನ ಸಾಯಂಕಾಲ ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ ವಕೀಲ ಕೆ ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕನ್ನಡ ಸಂಸ್ಕೃತಿ ಎಂಬ ಕುರಿತು ರಸಭರಿತವಾದ ಭಾಷಣವನ್ನು ಕೊಟ್ಟರು ಶ್ರೀ ಶಿವರಾಮ ಕಾರಂತರು ಭಾಷಣ ಕರ್ತರ ಪರಿಚಯ ಮಾಡಿಕೊಡುತ್ತ ಕರ್ನಾಟಕ ಸಾಹಿತ್ಯ ಪರಿಷತ್ತಿನ ಮುಂಬರುವ ಬೆಳ್ಳಿ ಹಬ್ಬಕ್ಕೆ ಸಾರ್ವಜನಿಕರ ಸಹಾಯ ಪ್ರೋತ್ಸಾಹಗಳನ್ನು ಕೋರಿದರು

ಶೋಕ ಪ್ರದರ್ಶನ: ಮದ್ರಾಸ ಸರಕಾರದ ಹಿಂದಿನ ಕಾಂಗ್ರೆಸ ಮಂತ್ರಿಗಳಾಗಿದ್ದ ಮೌಲಾನಾ ಯಾಕೂಬ ಹಸನರವರು ದಿವಂಗತರಾದುದಕ್ಕಾಗಿ ತಾ ೩೦-೪-೪೦ರ ದಿನ ಜನಾಬ್ ಯಚ್ ಯಸ್ ಹುಸ್ಸೇನ ಸಾಹೇಬರ ಅಧ್ಯಕ್ಷತೆಯಲ್ಲಿ ಕೂಡಿದ ಕಾರ್ಕಳ ಪಂಚಾಯತ ಬೋರ್ಡ್ ಸಭೆಯಲ್ಲಿ ಶ್ರೀ ಯಚ್ ಎ ಸುಕೂರರವರು ಸೂಚಿಸಿದ ಶೋಕ ಪ್ರದರ್ಶನದ ಠರಾವು ಸರ್ವಾನುಮತಿಯಿಂದ ಮಂಜೂರಾಗಿದೆ

ಪಶುಬಲಿಯ ನಿಷೇಧ:—ತಾ ೨-೫-೪೦ರ ದಿನ ಬೋರ್ಡ್ ಮೈನ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ವಕೀಲ ಪಿ. ವಿ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಕೂಡಿದ ಬಿಲ್ಲವ ಸಮಾಜಿಕರ ಸಾರ್ವಜನಿಕ ಸಭೆಯಲ್ಲಿ ಇದೇ ಬರುವ ಸ್ಥಳೀಯ ಮಾರಿಪೂಜೆಯ ಕಾಲದಲ್ಲಾಗುವ ಪಶುಬಲಿಯನ್ನು ನಿಷೇಧಿಸಿ, ಅಂಥ ಹಿಂಸಾತ್ಮಕ ದೇವಿ ಪೂಜೆಯೊಂದಿಗೆ ಯಾರೂ ಸಹಕರಿಸಬಾರದಾಗಿ ಆರಿಸುವ ಒಂದು ಠರಾವು ಮಂಜೂರಾಗಿದೆ. ಪಶುಬಲಿ ನಿಷೇಧದ ಪ್ರಚಾರಕಾರ್ಯವು ಈ ಸಮಾಜದ ಸ್ಥಳೀಯ ತರುಣ ಸುಧಾರಕರಿಂದ ಬಹು ಚೆನ್ನಾಗಿ ನಡೆಯುತ್ತಾ ಇದೆ. ಈ ಸಂಬಂಧ ಪ್ರತಿ ಆದಿತ್ಯವಾರ ನಗರ ಸಂಕೀರ್ತನೆ ಮೊದಲಾದವು ನಡೆಯುತ್ತಲಿರುವವು

ಮೂಡಬಿದ್ರೆ—ವಸಂತ ಸಾಹಿತ್ಯೋತ್ಸವ

ಸುಪ್ರಸಿದ್ಧ ಸಾಹಿತಿಗಳ ಭಾಷಣ.—ಮೂಡಬಿದ್ರೆ ಬೋ। ಹಾ। ಎ। ಶಾಲೆಯಲ್ಲಿ ಎಪ್ರಿಲ್ ತಾ ೩೦ರಲ್ಲಿ ವಸಂತ ಸಾಹಿತ್ಯೋತ್ಸವವು ಅತ್ಯಂತ ಉತ್ಸಾಹದಿಂದ ನೈಸೂರು, ಬೆಂಗಳೂರುಗಳಿಂದ ಬಂದಿದ್ದ ಪ್ರಸಿದ್ಧ ಸಾಹಿತಿಗಳ ನೇರುವಿಕೆಯಿಂದ ಜರಗಿತು ಅತಿಥಿಗಳನ್ನು ಶ್ರೀಯುತ ಶಿವರಾಮ ಕಾರಂತರೂ, ಸ್ವಾಗತ ಸಮಿತಿಯ ಇತರ ಸದಸ್ಯರೂ ಸ್ವಾಗತೀಕರಿಸಿದರು. ಅನಂತರ ಶ್ರೀ ಜಿ ಪಿ. ರಾಜರತ್ನಂರವರು 'ಸಾಹಿತ್ಯದಲ್ಲಿ ವಿಡಂಬನೆ' ಎಂಬ ವಿಷಯವನ್ನೆತ್ತಿಕೊಂಡು ಸ್ವಾರಸ್ಯವಾದ ಭಾಷಣ ಮಾಡಿದರು ಶ್ರೀ ಬಿ. ಯಂ ಶ್ರೀಕಂಠಯ್ಯನವರು 'ಕನ್ನಡದ ಕೊಣೆಕೆ?' ಎಂಬ ವಿಷಯದಲ್ಲಿಯೂ ಶ್ರೀ ರಾಜರತ್ನಂರವರು 'ನಮ್ಮ ನಾಡಿಗೆ ಜೈನರು ಕೊಟ್ಟ ಬದುಕು' ಎಂಬ ವಿಷಯದ ಮೇಲೆಯೂ ಭಾಷಣಗಳನ್ನಿತ್ತರು

ತಾ ೧ನೇ ಬೆಳಿಗ್ಗೆ 'ನಮ್ಮ ಮುದ್ರಣ' ಎಂಬ ವಿಷಯವನ್ನೆತ್ತಿಕೊಂಡು ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು ಭಾಷಣಮಾಡಿದರು. ಸಾಯಂ. ಘಂಟೆ ೬ಕ್ಕೆ ಶ್ರೀ ಕೆ. ಬಿ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ 'ಕರ್ನಾಟಕದ ಏಕೀಕರಣ'ದ ವಿಷಯವಾಗಿ ವಿದ್ವಾನ್ ಕಡೆಂಗೋಡ್ಲು ಶಂಕರಭಟ್ಟರು ಭಾಷಣಮಾಡಿ ಕರ್ನಾಟಕದ ರಾಜಕೀಯ, ಸಾಹಿತ್ಯ ದೃಷ್ಟಿಯಿಂದ ಏಕೀಕರಣವು ಎಷ್ಟು ಅಗತ್ಯವೆಂಬುದನ್ನು ತೋರಿಸಿಕೊಟ್ಟರು, ಶ್ರೀಗಳಾದ ಬಿ. ಯಂ. ಶ್ರೀಕಂಠಯ್ಯನವರೂ ಜಿನರಾಜ ಹೆಗ್ಡೆಯವರೂ ಮಾತಾಡಿದರು. ಆಮೇಲೆ 'ನಾಟಕವೆಂಬ ನಾಟಕ'ದ ವಾಚನವು ಶ್ರೀ ಶಿವರಾಮ ಕಾರಂತರಿಂದ ನೆರವೇರಿಸಲ್ಪಟ್ಟಿತು. ತಾ ೨ನೇ ದಿನ ಬೆಳಿಗ್ಗೆ ಪ್ರೊ. ಯು. ರಾಘವೇಂದ್ರಾಚಾರ್ಯರು 'ಇಲೆಕ್ಟ್ರಿಸಿಟಿ' ಎಂಬ ವಿಷಯದಲ್ಲಿ ಅಮೋಘ ಭಾಷಣ ಮಾಡಿದರು 'ಪಾಶ್ಚಾತ್ಯ ಸಾಹಿತ್ಯದಿಂದ ನಮಗೇನು ಲಾಭವಾಯಿತು?' ಎಂಬ ವಿಷಯದ ಮೇಲೆ ಪ್ರೊ ಶ್ರೀಕಂಠಯ್ಯನವರು ಭಾಷಣ ಮಾಡಿ, ಕನ್ನಡ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯದಿಂದ ಪ್ರಯೋಜನ ಪಡೆದಿದೆ ಎಂಬುದನ್ನು ವಿವರಿಸಿದರು. ಆಮೇಲೆ 'ಹೊಸ ಜೀವನದ ದೃಷ್ಟಿ'ಯ ಮೇಲೆ ಶ್ರೀ ಶಿವರಾಮ ಕಾರಂತರ ಭಾಷಣವಾಯಿತು.

ಪುತ್ತೂರು

ಸುಬ್ರಹ್ಮಣ್ಯ:—ಶ್ರಿ ಮಠದಲ್ಲಿ ವರ್ಷಂಪ್ರತಿ ನಡೆಯುವ ನರಸಿಂಹ ಜಯಂತಿ ಮಹೋತ್ಸವವು ಇದೇ ವಿಕ್ರಮ ಸಂವತ್ಸರದ ವೈಶಾಖ ಶು। ೧೪ಯು ತಾ ೨೦-೫-೪೦ನೇ ಸೋಮವಾರ ಪ್ರಾರಂಭವಾಗಿ ಮುಂದಿನ ಮೂರು ದಿವಸಗಳಲ್ಲೂ ಶ್ರಿ ದೇವರ ಸನ್ನಿಧಿಯಲ್ಲಿ ನಡೆಯುವ ಪೂಜಾ, ಉತ್ಸವ ವಸಂತ, ಬ್ರಾಹ್ಮಣ ಸಂತರ್ಪಣಾದಿ ಸತ್ಕಾರ್ಯಗಳ ಬಗ್ಗೆ ಸರ್ವರಿಗೂ ಶ್ರೀ ಶ್ರೀಗಳವರ ಕಡೆಯಿಂದ ಸ್ವಾಗತವಿದೆ

ಪೆರಡಾಲ

ಮಹಾಜನರಲ್ಲಿ ವಿನಂತಿ

ಪೆರಡಾಲ ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಹೈಯ್ಯರ್ ಎಲಿಮೆಂಟರಿ ಶಾಲೆಯ ಮಟ್ಟಕ್ಕೇರಿಸಲು ಡಿಸ್ಟ್ರಿಕ್ಟ್ ಬೋರ್ಡಿನವರು ಅನುಮತಿ ಕೊಡುವಾಗ ಊರವರು ಬೋರ್ಡಿಗೆ ಉಚಿತವಾಗಿ ಕಟ್ಟೋಣವನ್ನು ಕಟ್ಟಿಸಿಕೊಡಲು ಒಪ್ಪಿದಂತೆ ಹೈಯ್ಯರ್ ಎಲಿಮೆಂಟರಿ ಶಾಲೆಯ ಕಟ್ಟೋಣವನ್ನು ಕಟ್ಟಲು ಆರಂಭವಾಗಿ ಕೆಲಸವು ಜರಗುತ್ತಾ ಬಂದಿದೆ ಇದೇ ಮೇ ತಿಂಗಳ ಅಂತ್ಯದೊಳಗೆ ಶಾಲೆಯ ಪ್ರವೇಶೋತ್ಸವ ಸಮಾರಂಭವನ್ನು ನೆರವೇರಿಸಬೇಕಾಗಿ ನಿಶ್ಚಯಿಸಿದ್ದೇವೆ. ಗ್ರಾಮಸ್ಥರು ಹಲವರು ಕೈಲಾಗುವಷ್ಟು ಸಹಾಯ ಮಾಡಿರುವರು ಆದರೂ ಕಟ್ಟಡವು ಸಂಪೂರ್ಣವಾಗಿಲ್ಲ ದ್ರವ್ಯದ ಅನಾನುಕೂಲತೆಯು ಕಂಡುಬಂದಿದೆ. ಇಷ್ಟರವರೆಗೆ ಹೊರಗಿನ ಗ್ರಾಮಸ್ಥರೊಡನೆ ಈ ಬಗ್ಗೆ ಸಹಾಯ ಕೇಳಿಲ್ಲ. ಆದರೆ ಹಣದ ಪರಿಸ್ಥಿತಿಯು ಬಿಕ್ಕಟ್ಟಾದುದರಿಂದ ನಾವು ಬೇರೆ ಬೇರೆ ಗ್ರಾಮಗಳಿಗೆ ಹೋಗಿ ಈ ವಿದ್ಯಾಸಂಸ್ಥೆಯ ಕಟ್ಟಡದ ಪರವಾಗಿ ಉದಾರಿಗಳನ್ನು ಕೇಳಿಕೊಳ್ಳುತ್ತೇವೆ. ಜಿಲ್ಲೆಯ ಮಹಾಜನರು ನಮ್ಮನ್ನು ಆದರಿಸಿ ವಿದ್ಯಾಸೇವೆಯಲ್ಲಿ ತಮ್ಮ ಪ್ರೋತ್ಸಾಹವನ್ನು ಸಹಾಯರೂಪದಿಂದ ಕೊಡಬೇಕಾಗಿ ವಿನಂತಿ ಎಂದು ಪೆರಡಾಲ ಹೈ. ಎ. ಶಾಲಾ ಕಟ್ಟಡ ಸಮಿತಿಯವರು ಬಿನ್ನವಿಸಿಕೊಳ್ಳುತ್ತಾರೆ.



ಪಾರ್ಲಿಮೆಂಟಿನಲ್ಲಿ ಯುದ್ಧದ ವಿಷಯ ಚರ್ಚೆ!



ಸ್ವೀಡನಿಗೆ ಹಿಟ್ಲರನ ಭರವಸೆ! ನಾರ್ವೆಗೆ ಅಪರಿಮಿತ ನಷ್ಟ!

ನಾರ್ವಿಕಿನಲ್ಲಿ ಬಾಂಬಿನ ಸುರಿಮಳೆ

ಪುನಃ ರೂಸ್‌ವೆಲ್ಟರ ಪ್ರಯತ್ನ!

ದಕ್ಷಿಣ ನಾರ್ವೆಯು ಜರ್ಮನರ ವಶವಾಯಿತು

ಟ್ರೊಂಡ್ಹೆಮಿನ ದಕ್ಷಿಣ ಭಾಗದ ಕಡೆಗೆ ಮುಂದುವರಿಯುತ್ತಿದ್ದ ಮಿತ್ರ ರಾಷ್ಟ್ರಗಳ ಸೈನ್ಯವು ಹಿಂದೆ ಬಿದ್ದಿದೆಯೆಂದು ಸುದ್ದಿ. ಅಂತೂ, ದಕ್ಷಿಣ ನಾರ್ವೆಯು ಇಂದು ಪೂರ್ಣ ಜರ್ಮನರ ವಶವಾಯಿತೆಂದು ತಿಳಿದಿದೆ

ನಾರ್ವಿಕಿನಲ್ಲಿ ಕಾಳಗ

ಬ್ರಿಟಿಷ್ ಸೈನಿಕರು ನಾರ್ವಿಕಿನಲ್ಲಿರುವ ಜರ್ಮನರನ್ನು ಅಲ್ಲಿಂದ ಹೊಡೆದೋಡಿಸಬೇಕೆಂದು ನಿರ್ಧರಿಸಿದ್ದಾರೆ ಇಕ್ಕಡೆಯವರಿಗೆ ದೊಡ್ಡ ಕಾಳಗ ನಡೆಯುತ್ತಿದೆ

ಭೂಮಧ್ಯ ಸಮುದ್ರ—ಭೂಮಧ್ಯ ಸಮುದ್ರದಲ್ಲಿ ಯಾರೂ ಮುಂದುವರಿಯಬಾರದಾಗಿ ಇಟಲಿಯು ಅರ್ಭಟಿಸುತ್ತಿದೆ ಈಗ ಬ್ರಿಟಿಷ ಹಡಗುಗಳು ಸುಯೇಜ್ ಕಾಲುವೆಯ ಮಾರ್ಗವನ್ನು ಬಿಟ್ಟು ಕೇಪ್ ಒಫ್ ಹುಡ್‌ಹೋಪಿನ ದಾರಿ ಹೋಗುತ್ತಿವೆ

ರಣಕ್ಷೇತ್ರ ಬದಲಾಯಿತು ನಾರ್ವೆಯಲ್ಲಿ ಬ್ರಿಟೀಷ ಜರ್ಮನರ ರಣಕ್ಷೇತ್ರವು ಬದಲಾಗುತ್ತಿದೆ. ಅನಿಶ್ಚಿತ ಸ್ಥಳಗಳಲ್ಲಿ ಆಗಾಗ ಆಕ್ರಮಣಗಳು ನಡೆಯುತ್ತಿವೆ ಸೈನಿಕರು ವೀರಾವೇಶದಿಂದ ಕಾದಾಡುತ್ತಾರೆ

ನಾರ್ವೆ ಡೆನ್‌ಮಾರ್ಕ್‌ಗಳಲ್ಲಿರುವ ವೈಮಾನಿಕ ನಿಲ್ದಾಣಗಳಲ್ಲಿ ಜರ್ಮನ್ ವಿಮಾನಗಳು ಅಗಾಧವಾಗಿ ಬಂದು ಸೇರಿದವೆಂದು ಗೊತ್ತಾಗಿ ಬ್ರಿಟಿಷ್ ವಿಮಾನಗಳು ಸ್ಟೆವೆಂಜರ್, ಪಾರ್ಬಿನು, ಆಲ್‌ಬರ್ಗ್ ಮುಂತಾದ ವೈಮಾನಿಕ ನಿಲ್ದಾಣಗಳ ಮೇಲೆ ಧಾಳಿ ನಡೆಸಿದವು. ಆದರೆ ಎಂಟಿ ಏರ್‌ಕ್ರಾಫ್ಟ್ ಗನ್‌ಗಳ ಹೊಡೆತ ಜಾಸ್ತಿಯಾದುದರಿಂದ ಬ್ರಿಟಿಷ್ ವಿಮಾನಗಳು ಹಿಂತಿರುಗಬೇಕಾಯಿತು.

ಒಂದು ಫ್ರೆಂಚ್ ಟ್ರಾಲರ್ ಹಡಗು ಮುಳುಗಿತು ಇನ್ನೊಂದು ಡಿಸ್ಟ್ರಾಯರಿಗೆ ಬಲವಾದ ನಷ್ಟವಾಗಿದೆ ಒಂದು ಜರ್ಮನ್ ಸಬ್‌ಮೆರೈನನ್ನು ಫ್ರೆಂಚ್ ಸಬ್‌ಮೆರೈನು ಟಾರ್ಪೆಡೊ ಮುಳುಗಿಸಿತು.

ಶಾಂತಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರೆಂದು ಕೆಲವು ಬ್ರಿಟಿಷರ ಮೇಲೆ ಲಂಡನಿನಲ್ಲಿಯೂ ಮತ್ತು ಬ್ರಿಟನಿನ ಇತರ ಪ್ರಾಂತಗಳಲ್ಲಿಯೂ 'ಡಿಫೆನ್ಸ್ ಆಫ್ ರೆಲ್ಮ್' ರೆಗ್ಯುಲೇಷನ್ ಪ್ರಕಾರ ಸಮನ್ಸ್ ಜಾರಿಮಾಡಲಾಗಿದೆ

ಫ್ರಾನ್ಸಿನಲ್ಲಿ ಕಮ್ಯುನಿಸ್ಟ್ ಪ್ರಚಾರದ ಆರೋಪಣೆಯ ಮೇಲೆ ೨೦೦೦ ಜನರ ದಸ್ತಗಿರಿಯಾಗಿದೆ.

ಜರ್ಮನರಿಗಾದ ನಷ್ಟ

ನಾರ್ವೆ ಯುದ್ಧದಲ್ಲಿ ಮೂರು ವಾರಗಳಲ್ಲಿ ಜರ್ಮನರ ೨ ದೊಡ್ಡ ಹಡಗುಗಳಿಗೆ ಬಹಳ ಗಾಸಿಯಾಯಿತು; ೪ ಕ್ರ್ಯುಯಿಜರುಗಳು, ೧೧ ಡಿಸ್ಟ್ರಾಯರುಗಳು, ೫ ಯು-ಬೋಟುಗಳು ಮುಳುಗಿಸಲ್ಪಟ್ಟವು ಎಂದು ತಿಳಿದುಬರುತ್ತಿದೆ

ಹೆಕಾನರ ರಾಜ್ಯತ್ಯಾಗವೆ?

ನಾರ್ವೆಯ ಅರಸ ಹೆಕಾನರೂ, ಯುವರಾಜರೂ, ನಾರ್ವೆ ಸರಕಾರದ ಮುಖಂಡರೂ ರಾಜ್ಯವನ್ನು ಬಿಟ್ಟು ಎಲ್ಲಿಗೊ ತೆರಳಿರುವರುವರೆಂದು ರೋಮಿನ ವಾರ್ತೆ

ಚೆಂಬರ್ಲೇನರ ಹೇಳಿಕೆ

ಬ್ರಿಟನ್ ಮುಖ್ಯಮಂತ್ರಿಯಾದ ಮಿ ನೆವಿಲ್ ಚೇಂಬರ್‌ಲಿನ್‌ರವರು ನಾರ್ವೆಯ ಯುದ್ಧಾಚರಣೆಯ ಸಂಬಂಧವಾಗಿ ಕಾಮನ್ಸ್‌ನಲ್ಲಿ ಹೇಳಿಕೆಯಿತ್ತರು

ಟ್ರಾಂಡ್‌ಜಂನ್ನು ಸ್ವಾಧೀನಪಡಿಸಿಕೊಳ್ಳಲು ಬ್ರಿಟಿಷರು ಪ್ರಯತ್ನಪಟ್ಟುದು ನಿಷ್ಫಲವಾಯಿತೆಂದು ಅವರು ಹೇಳಿದರು 'ಆದರೂ ನಾರ್ವೆಯ ಕದನದಲ್ಲಿ ಜರ್ಮನ್ ನೌಕೆಗಳಿಗೆ ಬಹಳ ನಷ್ಟವಾಗಿದೆ ಅನೇಕ ಹಾಳಾದುವು ಬ್ರಿಟಿಷರಿಗಿಂತ ಜರ್ಮನರಿಗೆ ಬಹಳ ನಷ್ಟವಾಗಿದೆ. ಬ್ರಿಟಿಷರು ನಾರ್ವೆಯಲ್ಲಿ ಜಯಪಡೆದಿಲ್ಲವೆಂದು ಹೇಳುವುದಾದರೆ ಜರ್ಮನರು ಕೂಡಾ ಜಯಪಡೆದಿಲ್ಲವೆಂದು ನಾನು ಹೇಳುತ್ತೇನೆ ಇನ್ನು ಜರ್ಮನಿಯು ಇತರ ಕಡೆಗಳಲ್ಲಿಯೂ ಧಾಳಿ ನಡೆಸಬಹುದು. ಅವಕ್ಕೆಲ್ಲ ಸಿದ್ಧವಾಗಬೇಕಾಗಿದೆ' ಎಂದು ಮಿ ಚೆಂಬರ್‌ಲಿನ್‌ರು ನುಡಿದರು

ಹೊಸ ರೈಲು ದಾರಿ.

ಟೆಹರಾನಿನಿಂದ ಕಾಜ್ವಿನ್‌ನ ವರೆಗಿನ ಒಂದು ಹೊಸ ಲೈನು ಈಗ ಆರಂಭವಾಗಿದೆ. ಈ ಮಾರ್ಗವನ್ನು ಪೂರೈಸಲು ೧೫ ತಿಂಗಳು ಬೇಕಾಯಿತು. ಈ ಮಾರ್ಗಕ್ಕೆ ೧೦ ಸಾವಿರ ಟನ್ ಸಿಮೆಂಟೂ ೫೬ ಸಾವಿರ ಕ್ಯುಬಿಕ್ ಮೀಟರಿನಷ್ಟು ಕಾಂಕ್ರಿಟೂ ಉಪಯೋಗವಾಗಿದೆ. ಈ ಲೈನಿಗೆ ಲಕ್ಷಾಂತರ ರುಪಾಯಿಗಳ ವೆಚ್ಚ ತಗಲಿದೆ

ಭಾರತದ ಉಪಮಂತ್ರಿಗಳ ಹೇಳಿಕೆ

ಕಾಮನ್ಸ್ ಸಭೆಯಲ್ಲಿ ಭಾರತದ ಉಪಮಂತ್ರಿಗಳಾದ ಸರ್ ಹ್ಯೂ ಓನೀಲ್‌ರವರು ಪ್ರಶ್ನೆಗಳಿಗೆ ಉತ್ತರ ಕೊಡುತ್ತ, ಭಾರತ ವಿದ್ಯಮಾನಗಳ ಕುರಿತು ಹೇಳಲು ಏನೂ ಇರುವುದಿಲ್ಲವೆಂದೂ, ಭಾರತ ಪಂಗಡಗಳು ಸೇರಿ ತಮ್ಮೊಳಗೆ ನಿರ್ಧರಿಸಿ ಕೊಳ್ಳಬೇಕೆಂದೂ, ಆ ಕಾರ್ಯಕ್ಕೆ ವೈಸರಾಯರು ಸಹಾಯಮಾಡುವರೆಂದೂ ತಿಳಿಸಿದರು

೩೫ ಲಕ್ಷ ರೂಪಾಯಿ ಬಹುಮಾನ

ಇದೇ ತಿಂಗಳೊಳಗಾಗಿ ಹಿಟ್ಲರನನ್ನು ಸಜೀವ ಹಿಡಿದು ರಾಷ್ಟ್ರ ಸಂಘಕ್ಕೊಪ್ಪಿಸಿದವರಿಗೆ ೩೫ ಲಕ್ಷ ರೂಪಾಯಿ ಕೊಡುವದಾಗಿ ಅಮೇರಿಕೆಯ ಕಾರ್ನೇಜಿ ಇನ್‌ಸ್ಟಿಟ್ಯೂಟಿನ ಸ್ಯಾಮುವೆಲ್ಲ ಚರ್ಚ ಇವರು ಜಾಹೀರ ಮಾಡಿರುವರು

ಇಟಲಿಯ ಧೋರಣೆ?

ಇಟಲಿಯು ಈಗಲೇ ಯುದ್ಧದಲ್ಲಿ ಸೇರುವುದಿಲ್ಲವೆಂಬ ಭಾವನೆಯು ಅಮೆರಿಕದ ಆವರಣದಲ್ಲಿ ಬಹಳವಾಗಿದೆ ವಾಷಿಂಗ್‌ಟನಿನಲ್ಲಿ ಇಟಲಿರಾಯಭಾರಿಯು ಮಿ ಫಿಲಿಪ್ಸ್‌ರು ಅಧ್ಯಕ್ಷ ರೂಸ್‌ವೆಲ್ಟರನ್ನು ಭೇಟಿಮಾಡಿ ಮಾತನಾಡಿದರು

ಯುಗೋಸ್ಲೇವಿಯಾ ರುಮೇನಿಯಾ ದಿಂದ ಸಹಾಯ ಕೇಳಲಿಲ್ಲವೆಂದೂ ಇತರರ ಸಹಾಯ ಕೇಳುವಂತಹ ಸ್ಥಿತಿ ಯುಗೋಸ್ಲೇವಿಯಾಕ್ಕೆ ಬಂದಿಲ್ಲವೆಂದೂ ಅಲ್ಲಿನ ಅಧಿಕಾರಿಯೊಬ್ಬರು ನುಡಿದರು

ಡ್ಯಾನ್ಯೂಬ್ ನದಿಗೆ ಜರ್ಮನ್ ಶಸ್ತ್ರಸಜ್ಜಿತ ಹಡಗುಗಳು ರೂಪಾಂತರಹೊಂದಿ ಪ್ರವೇಶಿಸುತ್ತಿರುವುದಾಗಿ ಗೊತ್ತಾಗಿದೆ

ಮೆಡಿಟರೇನಿಯನಿನ ಅನಿಶ್ಚಿತ ಸ್ಥಿತಿಯಿರುವುದರಿಂದ ಈಜಿಪ್ಟಿನಲಿ ರಕ್ಷಣಾ ವ್ಯವಸ್ಥೆಯಲ್ಲಿ ವಿಶೇಷ ಮುಂಜಾಗತೆ ಕ್ರಮಗಳನ್ನು ಕೈಕೊಳ್ಳಲಾಗಿದೆ

ಇಟಲಿಯಲ್ಲಿರುವ ಬ್ರಿಟೀಷ್ ರಾಯಭಾರಿಯು ಇಟಲಿ ವಿದೇಶಾಂಗ ಮಂತ್ರಿಯೊಡನೆ ಭೇಟಿನಡೆಸಿ ಮಾತನಾಡಿದರು ಮುಸಲೋನಿಯವರನ್ನು ಸಂಯುಕ್ತ ಸಂಸ್ಥಾನದ ರಾಯಭಾರಿಯು ಭೇಟಿ ಮಾತನಾಡಿದರು ಇದರ ಫಲವಾಗಿ ನೋಡಿದರೆ ಇಟಲಿಯು ಕೂಡಲೇ ಯುದ್ಧಕ್ಕೆ ಸೇರುವಹಾಗಿಲ್ಲವೆಂಬ ಅಭಿಪ್ರಾಯಬರುತ್ತದೆ.

ಮೆಡಿಟರೇನಿಯನಿನ ಮಾರ್ಗವನ್ನು ತ್ಯಜಿಸಿ ಹಡಗುಗಳು ಗುಡ್ ಹೋಪ್ ಭೂಶಿರದ ಮಾರ್ಗವಾಗಿ ಹೋಗುವದ್ದರಿಂದ ಅವುಗಳ ದರವನ್ನು ಸದ್ಯದಲ್ಲಿಯೇ ಏನೂ ಬದಲಾಯಿಸುವುದಿಲ್ಲ. ಆದರೆ ಹೆಚ್ಚುಕಾಲ ಇದೇ ವ್ಯವಸ್ಥೆಯು ಮುಂದುವರಿಯಬೇಕಾದಲ್ಲಿ ಆಗ್ಗೆ ದರಗಳನ್ನು ಜಾಸ್ತಿಮಾಡುವ ಪ್ರಶ್ನೆಯೇಳುವದೆಂದು ಹೇಳಲಾಗಿದೆ

ನಾರ್ವೆಯ ನಷ್ಟ

ಈ ಯುದ್ಧದಲ್ಲಿ ನಾರ್ವೆಗೆ ಅಪರಿಮಿತ ನಷ್ಟವಾಗಿದೆಯೆಂದು ನಾರ್ವೆಯ ವಿದೇಶೀಯ ಮಂತ್ರಿಗಳಾದ ಪ್ರೊ। ಕೋತರು ಹೇಳಿರುವರು

ಯುದ್ಧ ಹರಡುವ ಮೊದಲು ಶಾಂತಿ ಪ್ರಯತ್ನ

ಪ್ರೆಸಿಡೆಂಟ್ ರೂಜವೆಲ್ಟರ್ ವಾಷಿಂಗಟನ್ನಿನ ಒಂದು ಪತ್ರಿಕಾ ಉದ್ಯೋಗಿಗಳ ಕಾನ್ಫರೆನ್ಸಿನಲ್ಲಿ ಭಾಷಣ ಮಾಡುತ್ತ, ಯುನೈಟೆಡ್ ಸ್ಟೇಟ್ಸಿನ ಸರಕಾರವು ಯುರೋಪಿನ ಯುದ್ಧ ಮುಗಿಯುವಂತೆಯೂ ಅದು ಇತರ ಕ್ಷೇತ್ರಗಳಿಗೂ ಇತರ ಜನಾಂಗಗಳಿಗೂ ಹಬ್ಬದಂತೆಯೂ ಯಾವಾಗಲೂ ಯತ್ನಿಸುತ್ತಿದೆ ಎಂದರು ಇದರ ತರುವಾಯ ಇಲ್ಲಿನ ಒಂದು ಪತ್ರಿಕೆಯಲ್ಲಿ, ಪ್ರೆಸಿಡೆಂಟ್ ರೂಜವೆಲ್ಟರ್, ಶಾಂತಿಗಾಗಿ ವಿವಿಧ ಯತ್ನಗಳನ್ನು ನಡೆಸುತ್ತಿದ್ದಾರೆಂದು ಸೂಚಿಸಿ ಅವರ ಇಟೆಲಿ ಮೊದಲಾದ ತಟಸ್ಥ ರಾಷ್ಟ್ರಗಳೊಡನೆ ಈ ಕುರಿತ ಮಾತುಕಥೆಗಳನ್ನು ಆಗಲೇ ಆರಂಭಿಸಿರುವರೆಂದೂ ಉಲ್ಲೇಖಿಸಲಾಗಿದೆ

ಬ್ರಿಟಿಷರು ನಾಮ್‌ಸೊಸ್ ನಗರವನ್ನು ತ್ಯಜಿಸಿ ಹೋದರು. [illegible] ಜರ್ಮನರು ಸ್ವಾಧೀನಪಡಿಸಿ[illegible]ರು ಬ್ರಿಟಿಷರು ನಾಮ್‌ಸೋಸ್ ನಗರವನ್ನು ಬಿಟ್ಟು ಹಡಗಿನಲ್ಲಿ ಕುಳಿತು ಹೋಗುತಿದ್ದಾಗ ಜರ್ಮನ್ ವಿಮಾನಗಳು ಧಾಳಿ ನಡೆಸಿದವು. ಆದರೂ ಏನೂ ಆಗಲಿಲ್ಲ.

ನಾಮ್‌ಸೊಸ್ ಪ್ರದೇಶದಲ್ಲಿ ನಾರ್ವೆ ಸೈನ್ಯದ ಕಮ್ಯಾಂಡರ್ ಇನ್ ಚೀಫರಾಗಿರುವವರು ಒಂದು ಆಜ್ಞೆ ಹೊರಡಿಸಿ ನಾರ್ವೆ ಸೈನಿಕರೊಡನೆ ಕಾದಾಡುವುದನ್ನು ನಿಲ್ಲಿಸಬೇಕೆಂದೂ ಕಾದಾಟದಿಂದ ವ್ಯರ್ಥವಾಗಿ ಅನರ್ಥಕೊಳ್ಳಗಾದಂತಾಗುವುದೆಂದೂ ತಿಳಿಸಿದ್ದಾರೆ.

ಡ್ರಾರ್ವಿಕಿನಲ್ಲಿ ಬ್ರಿಟಿಷರು ಇನ್ನೂ ಬಲವಾಗಿಯೇ ಇದ್ದಾರೆ. ಆದರೂ ಅಲ್ಲಿನಿಂದ ಎರಡು ದಿನಗಳಿಂದ ಏನೊಂದು ಸಮಾಚಾರವೇ ಬರುತ್ತಿಲ್ಲ.

ಸ್ವಿಡ್ಜರ್ಲೆಂಡಿನಲ್ಲಿ ಸೈನ್ಯ ಜಮಾವಣೆ ಬಲವಾಗಿ ನಡೆಯುತ್ತಿದೆ

ರುಮೇ[illegible]ಯಾದಲ್ಲಿ [illegible]ಶಿಯರನ್ನು ತಡೆಗಟ್ಟುವ ಕ್ರಮವನ್ನು ಬಲಪಡಿಸಲಾಗಿದೆ

ನಾರ್ವೆಯ ರಾಜರೂ ಅವರ ಸಂಸಾರವೂ ಸರಕಾರದ ಸದಸ್ಯರೂ ನಾರ್ವೆ ಬಿಟ್ಟು ಹೋದರೆಂಬ ಸುದ್ದಿಗೆ ಆಧಾರವಿಲ್ಲವೆಂದೂ ಅವರೆಲ್ಲಾ ಅಲ್ಲೇ ಇದ್ದಾರೆಂದೂ ತಿಳಿಸಲಾಗಿದೆ

ಅಲೆಗ್ಸಾಂಡ್ರಿಯಾಕ್ಕೆ ಹೆಚ್ಚು ಬ್ರಿಟಿಷ್ ಮತ್ತು ಫ್ರೆಂಚ್ ನೌಕಾ ಸೈನ್ಯಗಳ ಒದಿವೆ

ಪಾರ್ಲಿಮೆಂಟಿನಲ್ಲಿ ಚರ್ಚೆ

ಪಾರ್ಲಿಮೆಂಟಿನಲ್ಲಿ ಯುದ್ಧದ ವಿಷಯದಲ್ಲಿ ಬಹಳ ದೊಡ್ಡ ಚರ್ಚೆಯು ಆರಂಭವಾಗಿದೆ. ಬ್ರಿಟಿಷ್ ಪತ್ರಿಕೆಗಳು ಬ್ರಿಟನು ದೀರ್ಘ ಸಾಹಸ ಮಾಡಬೇಕೆಂದೂ, ಅರೆಮನಸ್ಸಿನಿಂದ ಕಾದಾಡುವುದು ಸಾಲದೆಂದೂ ಬರೆದಿರುವವು!

ಲಾಯಿಡ್ ಜಾರ್ಜರು ಖಂಡಿಸಿದರು

ಬ್ರಿಟಿಷ್ ಮಂತ್ರಿಮಂಡಳವನ್ನು ನಾರ್ವೆಯಲ್ಲಿ ಆದ "ಅಪಜಯ"ಕ್ಕಾಗಿ ಲಾಯಿಡ್ ಜಾರ್ಜರು ಟೀಕಿಸಿ ಒಂದು ಲೇಖನವನ್ನು ಬರೆದಿರುವರು ಯುದ್ಧ ನಿದರ್ಶನೆಯು ತಪ್ಪು ರೀತಿಯದ್ದು ಮತ್ತು ಪ್ರಮಾದಕರವಾದುದು ಎಂದು ಅವರು ಅದರಲ್ಲಿ ಹೇಳಿರುವರು

ಸ್ವೀಡನಿಗೆ ಭರವಸೆ

ಸ್ವೀಡನಿನ ತಾಟಸ್ಥ್ಯಕ್ಕೆ ಭಂಗತರುವುದಿಲ್ಲವಾಗಿ ಹಿಟ್ಲರನು ಭರವಸೆಯಿತ್ತಿರುವನೆಂದು ಸುದ್ದಿ.



ಸರ್ ಓನಿಲರಿಗೆ ಗಾಂಧಿಜಿಯವರ ಉತ್ತರ

ಪಂಜಾಬಿನಲ್ಲಿ ಕಾಕ್ಸಾರ ಗಲಭೆ!

ಪಾಕಿಸ್ತಾನವು ರಾಷ್ಟ್ರವಿದ್ರೋಹ!

ರಂಗೂನಿಗೆ ಧುರೀಣರ ಸಂದೇಶ

ನಾರ್ವಿಕಿನಲ್ಲಿ ಬಾಂಬಿನ ಮಳೆ

ನಾರ್ವಿಕಿನಲ್ಲಿ ಮಿತ್ರರಾಷ್ಟ್ರಗಳಿಗೆ ಹಾಗೂ ಜರ್ಮನರಿಗೆ ಭಯಂಕರ ಕಾದಾಟವು ನಡೆಯುತ್ತದೆ ಬಾಂಬಿನ ಮಳೆಯೇ ಸುರಿಯುತ್ತಿದೆಯೆಂದು ಸುದ್ದಿ

ಸೋಲಿಗೇನು ಕಾರಣ?

ದಕ್ಷಿಣ ನೋರ್ವೆಯಲ್ಲಿ ಬ್ರಿಟಿಷರು ಹಿಂಜರಿಯಲು ಮುಖ್ಯ ಕಾರಣವೆಂದರೆ ಮಧ್ಯನೋರ್ವೆಯಲ್ಲಿ ಮಿತ್ರರಾಷ್ಟ್ರಗಳಿಗೊಂದು ವಿಮಾನನಿಲ್ದಾಣವಿಲ್ಲದುದೇ ಟ್ರೋಂಡ್ಹೈಮಿನ ಕಡೆಗೆ ಜರ್ಮನರ ಬರ ದಿಂದ ಮುನ್ನುಗ್ಗುವದನ್ನು ತಡೆಯುವ ಸಿದ್ಧತೆಗಳು ಮಿತ್ರರಾಷ್ಟ್ರಗಳ ಸೈನ್ಯಗಳೊಡನಿರಲಿಲ್ಲ ಆ ಭಾಗದಲ್ಲಿದ್ದ ನೋರ್ವೆ ಸೈನ್ಯಕ್ಕೆ ಬೆಂಬಲ ಕೊಡುವ ಸಂಬಂಧವಾಗಿ ಸೇನೆಗಳನ್ನಿಳಿದಗಿಸಲಾಯಿತು ಆದರೆ ಆ ಸೈನ್ಯಗಳಿಗಾಗಿ ಒದಗಿಸಲಾದ ಉಪಕರಣಗಳ ಹಡಗುಗಳ ಮೇಲೂ ಸೈನ್ಯಗಳ ಮೇಲೂ ಬಲವಾಗಿ ಬಾಂಬು ಸುರಿಸಿ ಬೇರ್ಪಡಿಸಲು ಜರ್ಮನರು ಶಕ್ತರಾದರು ಆ ವೇಳೆ ನಡೆಯುವ ಜರ್ಮನ್ ಧಾಳಿ ದಕ್ಕಿಸಿಕೊಳ್ಳಲು ಮಿತ್ರರಾಷ್ಟ್ರಗಳ ಸೇನೆ ಹಿಂದೆಗೆಯ ಬೇಕಾಯಿತು

ಹಂಗೇರಿ ಸ್ಲೋವೇಕಿಯಾ ವಿವಾದ

ಸ್ಲೋವಾಕ್ ಸರಕಾರವು ಅಸಹಜೀಯ ರೀತಿಯಲ್ಲಿ ಹಂಗೇರಿಯನ್ನು ಕೆಣಕುತ್ತಿರುವದೆಂದೂ ಈ ಕುರಿತು ಒಮ್ಮತದಿಂದ ವರ್ತಿಸುವರೆ ತಾವು ನಡೆಸಿದ ಪ್ರಯತ್ನಕ್ಕೆ ಬೆಲೆಕೊಡದೆ ಸ್ಲೋವೇಕಿಯವು ವೈರಿವಿನಾರಿ ವರ್ತಿಸುತ್ತಿರುವದೆಂದೂ ಹಂಗೇರಿ ಸರಕಾರವು ಸಾರಿದೆ

ಬ್ರಿಟಿಷ್ ಪತ್ರಿಕೆಗಳ ಟೀಕೆ

ಇಂಗ್ಲಾಂಡಿನ ಪತ್ರಿಕೆಗಳು ದಕ್ಷಿಣ ನಾರ್ವೆಯ ಪರಾಜಯವನ್ನೆತ್ತಿ ಯುದ್ಧ ನಡೆಸುವ ರೀತಿಯಲ್ಲಿ ಸುಧಾರಣೆಯಾಗಬೇಕೆಂದೂ ಇನ್ನಷ್ಟು ಕಠೋರವಾಗಿ ಯುದ್ಧ ಹೂಡಬೇಕೆಂದೂ ಎಚ್ಚರಿಸಿವೆ ನೋರ್ವೆಯಲ್ಲಿ ವಿರೋಧಿಬಲದ ಕುರಿತು ಮಿತ್ರರಾಷ್ಟ್ರಗಳು ತಪ್ಪು ತಿಳುವಳಿಕೆಯಲ್ಲಿದ್ದುವೆಂದು ಕೆಲವು ಪತ್ರಿಕೆಗಳ ಕಠಿಣ ಟೀಕೆಯಾಗಿದೆ ಇದು ಮಿತ್ರರಾಷ್ಟ್ರಗಳ ಘನತೆ ಮತ್ತು ಸಾಮರ್ಥ್ಯಕ್ಕೊಂದು ಪ್ರಬಲ ಕುಂದು. ಹೇಗೆಂದರೂ, ಪರಿಸ್ಥಿತಿಗನುಗುಣವಾಗಿ ಹಿಂದೆಗೆಯುವ ಅಗತ್ಯವಿತ್ತೆಂದೂ ಇನ್ನಷ್ಟು ಸುವ್ಯವಸ್ಥೆಯಿಂದ ಯುದ್ಧ ಹೂಡಬೇಕೆಂದೂ ಅಮೇರಿಕಾ ಪತ್ರಿಕೆಗಳ ಅಭಿಪ್ರಾಯ.

ಇಟಲಿಯ ಪರಿಹಾಸ್ಯ

ಇಟಲಿಯ ಪತ್ರಿಕೆಗಳು ಈ ಸೋಲಿಗಿ ಇಂಗ್ಲಾಂಡನ್ನು ಪರಿಹಾಸ್ಯ ಮಾಡುತ್ತಿವೆ ' ಹಿಟ್ಲರನಿಗೆ ನೋರ್ವೆಯಲ್ಲಿ ಇಷ್ಟರಲ್ಲೇ ಬಸ್ಸು ತಪ್ಪಿಹೋಗಿದೆ'' ಎಂದು ಮಿ ಚೇಂಬರ್ಲೇನರು ಹಿಂದೊಮ್ಮೆ ಹೇಳಿದ್ದುದಕ್ಕೆ ವ್ಯಂಗ್ಯವಾಗಿ ''ಬ್ರಿಟಿಷರಿಗೆ ಬಸ್ಸು ತಪ್ಪಿಹೋದುದಷ್ಟೇ ಅಲ್ಲ, ಅವರ ಬೇಗು, ಸಾಮಾನುಗಳ ಕೂಡ ಹಿಂದೆಯೇ ಉಳಿದವು' ಎಂದು ಅಪಹಾಸ್ಯಮಾಡಿವೆ ಇಟಲಿಯಲ್ಲಿ ಬ್ರಿಟಿಷರ ಕುರಿತು ತೀವ್ರ ವಿರುದ್ಧ ಪ್ರಚಾರ ನಡೆಯುತ್ತಿದೆ

ಮದ್ರಾಸು ಬೀಡಿ ಕೆಲಸಗಾರರ ಮುಷ್ಕರ

ಹೊಗೆಸೊಪ್ಪಿನ ತೆರಿಗೆ ಬಂದಂದಿನಿಂದ ಹಾಕಲ್ಪಟ್ಟ ತಮ್ಮ ಸಂಬಳ ಕಡಿತವನ್ನು ತೆಗೆದು ಹಾಕಬೇಕೆಂದು ಮದ್ರಾಸು ಬೀಡಿ ಕೆಲಸಗಾರರು ತಾ ೫ರಿಂದ ಮುಷ್ಕರವನ್ನಾರಂಭಿಸಿದರು ಪಟ್ಟಣದಲ್ಲಿರುವ ೪೦೦೦ ಬೀಡಿ ಕೆಲಸಗಾರರಲ್ಲಿ ಹೆಚ್ಚಿನವರು ಮುಷ್ಕರದಲ್ಲಿ ಸೇರಿರುವರು ಪಹರೆ ನಡೆಸುತ್ತಿದ್ದ ಸುಮಾರು ೪೦ ಮಂದಿಯ ದಸ್ತಗಿರಿ ನಡೆದು ೧೬ ಮಂದಿಗೆ ಐದೈದು ರೂಗಳ ಜುಲ್ಮಾನೆ ಅಥವಾ ಒಂದೊಂದು ವಾರದ ಶಿಕ್ಷೆ ವಿಧಿಸಲ್ಪಟ್ಟಿದೆ

ಓನಿಲರಿಗೆ ಮಹಾತ್ಮರ ಉತ್ತರ

ಸರ್ ಹ್ಯೂ ಓನೀಲರವರು ಇಂಡಿಯದ ಕಗ್ಗಂಟಿನ ವಿಚಾರದಲ್ಲಿ ಕಾಮನ್ಸ್ ಸಭೆಯಲ್ಲಿ ಆಡಿದ ಮಾತುಗಳ ಕುರಿತಾಗಿ ಮಹಾತ್ಮಾಜಿಯವರು ಉತ್ತರ ಹೇಳುತ್ತ ಚುನಾಯಿತರಾದ ಪ್ರತಿನಿಧಿಗಳ ಒಂದು ಪಾರ್ಲಿಮೆಂಟರಿ ಕಾನ್ಫರೆನ್ಸನ್ನು ಕರೆಯುವ ಅಧಿಕಾರವುಳ್ಳವರೆಂದರೆ ಬ್ರಿಟಿಷ್ ಸರಕಾರದವರೇ ಅವರು ಹಾಗೆ ಮಾಡಲಿ, ಮತ್ತು ಅವರ ತಮ್ಮ ಅಧಿಕಾರವನ್ನು ಕೈಬಿಡಲೂ, ಇಂಡಿಯಕ್ಕೆ ತನ್ನ ರಾಜ್ಯಘಟನೆಯನ್ನು ತಾನೇ ರಚಿಸಿಕೊಳ್ಳುವ ಹಕ್ಕೆಂಬುದು ಅವರು ಒಪ್ಪಲು ಮನಸ್ಸು ಮಾಡಿದಾಗ ಅದಕ್ಕೆ ಯೋಗ್ಯ ದಾರಿಯೇನೆಂದು ಅವರೇ ಆಲೋಚಿಸಲಿ ಎಂದಿರುವರು

ರಾಜಿ ಕೊಡಬೇಕು

ಈಗಿನ ಕಾಂಗ್ರೆಸಿನ ಧೋರಣೆಯ ನ್ನೊಪ್ಪಿ ಅದರಂತೆ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕಲಾರದ ಕಾಂಗ್ರೆಸ್ ಕಾರ್ಯಕಾರೀ ಸಂಸ್ಥೆಗಳ ಸದಸ್ಯರು ತಾವಾಗಿ ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡಬೇಕೆಂದು ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳವರಾದ ಆಚಾರ್ಯ ಕೃಪಲಾನಿಯವರು ಯಾವತ್ತು ಪ್ರಾಂತಿಕ ಕಾಂಗ್ರೆಸ್ ಸಮಿತಿಯವರಿಗೆ ಒಂದು ಪ್ರಕಟಣೆ ಕೊಟ್ಟಿದ್ದಾರೆ.

ಕರಾಚಿಯ ಸಿಟಿ ಜನರಲ್ ಪೋಸ್ಟಾಫೀಸಿನಿಂದ ಬೇರೆ ಕಡೆಗೆ ಕಳುಹಿಸಲಾದ ೧೧ ಸಾವಿರ ರೂಪಾಯಿಗಳ ಕರೆನ್ಸಿ ನೋಟುಗಳುಳ್ಳ ಒಂದು ಇನ್ಶೂರ್ ಪಾರ್ಸೆಲ್ ಆಶ್ಚರ್ಯಕರವಾದ ರೀತಿಯಲ್ಲಿ ಅದೃಶ್ಯವಾಗಿದೆ ವಿಳಾಸದಾರರು ಈ ಪಾರ್ಸೆಲ್ ಪಡೆದಾಗ ಅದರಲ್ಲಿ ನೋಟುಗಳಿರಲಿಲ್ಲ, ಚಿಂದಿಚೂರುಗಳಿದ್ದುವು ಪೋಲಿಸರ ತನಿಖೆ ನಡೆಯುತ್ತಿದೆ

ಡಿಫೆನ್ಸ್ ಓಫ್ ಇಂಡಿಯಾ

ಜಿಲ್ಲಾ ನ್ಯಾಯಾಧೀಶರ ಅಪ್ಪಣೆ ಪಡೆಯದೆ ಜೈಸ್ತಪುರದಲ್ಲಿ ಮೇ ದಿನಾಚರಣೆ ಮಾಡಿದರೆಂದು ಬಂಗಾಳ ಪ್ರಾಂತಿಕ ಕಾಂಗ್ರೆಸ ಮೆಂಬರ್ ಶ್ರೀ ಸ ಚೇಂದ್ರ ದಸ್ತಿದರರನ್ನು ಮತ್ತೆ ೧೧ ವಿದ್ಯಾರ್ಥಿ ಹಾಗೂ ರೈತರನ್ನೂ ಡಿಫೆನ್ಸ್ ಆಕ್ಟಿನ ಪ್ರಕಾರ ಕೈದುಮಾಡಿರುವರೆಂದು ಚಿತ್ತಗಾಂಗಿನ ವಾರ್ತೆ

ಕಾಕ್ಸಾರ ಚಳವಳ

ಲಾಹೋರಿನಲ್ಲಿ ಕಾಕ್ಸಾರರ ಚಳವಳದ ಪರಿಣಾಮವಾಗಿ ಅಲ್ಲಿನ ಪೋಲೀಸರ ಬಿಗಿಯಾದ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ ಮಸೀದಿಗಳಲ್ಲಿ ಅಡಗಿರುವ ಕಾಕ್ಸಾರರು ೩ ದಿನಗಳೊಳಗೆ ತಮಗೆ ಶರಣಾಗತರಾಗಬೇಕಿದ್ದರೆ, ಮಸೀದಿಗಳ ಬಳಿಯ ಮನೆ ಅಂಗಡಿಗಳನ್ನು ಪೋಲೀಸರ ದಳವಿರಿಸಲು ವಶಪಡಿಸಿಕೊಳ್ಳಲಾದೀತ, ಈ ಕಾಕ್ಸಾರರಿಗೆ ಆಹಾರ ಒದಗಿಸುವವರಿಗೆ ದಂಡನೆ ವಿಧಿಸಲಾದೀತೆಂದು ಅವರು ಸಾರಿದ್ದಾರೆ ಅಲ್ಲದೆ ಘೋಷಾ ಮಹಿಳೆಯರಿಗಾಗಿ ಹೆಂಗಸರ ಪೋಲೀಸ್ ದಳವೊಂದೂ ಏರ್ಪಟ್ಟಿದೆ ಅಲ್ಲಲ್ಲಿ ಪೋಲೀಸರ ಕಾವಲ ಹೆಚ್ಚಿದೆ ಈ ಮಧ್ಯೆ ಕೆಲವು ಮೊಹಲಾಗಳ ಪ್ರಜೆಗಳಿಂದ ಹೆಚ್ಚಿನ ಪೋಲೀಸ್ ಬಲದ ಖರ್ಚನ್ನು ವಸೂಲ್ಮಾಡುವ ಹಾಗೆ ಸರಕಾರವು ಆಲೋಚಿಸುತ್ತದೆ ಈಗ ಒಂದು ತಿಂಗಳಿಂದ ಈ ಕಾಕ್ಸಾರರ ಹಾವಳಿ ನಡೆದಿದ್ದು, ಆ ಸಂಬಂಧವಾದ ಪೋಲೀಸ್ ಪಡೆಯ ಖರ್ಚು ಹೆಚ್ಚಿರುವುದೇ ಸರಕಾರದ ಆ ಯೋಚನೆಗೆ ಕಾರಣ.

ರಂಗೂನಿಗೆ ಧುರೀಣರ ಸಂದೇಶ

''ರಂಗೂನಿನಲ್ಲಿ ಬೇಗನೇ ಕೋಮುಕಲಹಗಳು ಅಡಗಬೇಕು'' ಎಂಬ ಕುರಿತು ಆಶೋತ್ತರವನ್ನು ಸೂಚಿಸಿ, ಇಂಡಿಯದ ಮುಖಂಡರಾದ ಗಾಂಧಿಜಿ, ರಾಷ್ಟ್ರಪತಿ ಪಂಡಿತ ನೆಹರೂ ಮೊದಲಾದವರು ಬರ್ಮದಲ್ಲಿರುವ ಇಂಡಿಯಾ ಸರಕಾರದ ಏಜೆಂಟರಿಗೆ ತಂತಿ ಬಿಟ್ಟಿದ್ದಾರೆ. ಅಲ್ಲದೆ ಈ ಕಲಹ ನಿವಾರಣೆಗಾಗಿ ಅಲ್ಲಿ ಪ್ರಬಲವಾದ ಪ್ರಯತ್ನಗಳೂ ನಡೆಯುತ್ತಿವೆ

ರಾಜಕೋಟೆಯ ದಿವಾನರು

ರಾಜಕೋಟೆಯಲ್ಲಿ ಅಲ್ಲಿನ ದಿವಾನರೂ ಇಬ್ಬರು ಕೌನ್ಸಿಲರರೂ ಕೊಟ್ಟ ರಾಜೀನಾಮೆಯನ್ನು ಅಲ್ಲಿನ ಮಹಾರಾಜರು ಅಂಗೀಕರಿಸಿರುವುದಲ್ಲದೆ, ಶ್ರೀ. ಎನ್ ಎನ್ ಅಂಕ್ಲೇಸರ್ಯಾ, ಸಿ ಐ ಇ, ಬಾರ್-ಎಟ್-ಲಾ ಇವರನ್ನು ಆ ಸಂಸ್ಥಾನದ ಹೊಸ ದಿವಾನರನ್ನಾಗಿ ನೇಮಿಸಿರುವರೆಂದೂ ಪ್ರಕಟವಾಗಿದೆ.

ಹೊಸ ವಾರ್ತೆ

ಹೊಲೆಂಡಿಗೆ ಜರ್ಮನಿಯ ಆಕ್ರಮಣ ಭೀತಿ ಹೆಚ್ಚಿಗೆ ಹೋಲೆಂಡು ರಕ್ಷಣೆಯ ಮುಂಜಾಗ್ರತೆಗಳನ್ನು ಮಾಡುತ್ತಿದೆ

★

ಕಾಮನ್ಸ್ ಸಭೆಯಲ್ಲಿ ಬ್ರಿಟಿಷರ ಯುದ್ಧನೀತಿಯ ಕುರಿತು ಪ್ರಬಲ ಚರ್ಚೆ ನಡೆಯಿತು ಪ್ರಧಾನ ಮಂತ್ರಿ ಚೆಂಬರ್ಲೇನರು ನಾರ್ವೆಯ ರಕ್ಷಣೆಗೆ ಹೋದ ವಿಷಯದಲ್ಲಿ ಬ್ರಿಟಿಷ್ ಮಂತ್ರಿಮಂಡಳದ ನಿರ್ಧಾರವನ್ನು ಸಮರ್ಥಿಸಿ ಮಾತನಾಡಿದರು ಪಾರ್ಲಿಮೆಂಟಿನ ವಿರೋಧ ಪಕ್ಷದವರು ಬ್ರಿಟಿಷ್ ಮಂತ್ರಿಮಂಡಳದ ಧೋರಣೆಯನ್ನು ಕಟುವಾಗಿ ಖಂಡಿಸಿದರು ರಾಷ್ಟ್ರೀಯ ಮಂತ್ರಿಮಂಡಳವೊಂದನ್ನು ಮಾಡಬೇಕೆಂಬ ಸೂಚನೆಯು ಬಂತ

★

ಈ ತಿಂಗಳ ಕೊನೆಯಲ್ಲಿ ನೆಹರುಗಳು ಗಡಿನಾಡಿಗೆ ತೆರಳುವರೆಂದು ತಿಳಿದಿದೆ

★

ಕೇರಳ ಕಾಂಗ್ರೆಸು ಕಮಿಟಿಯಲ್ಲಿರುವ ಎರಡು ಪಕ್ಷಗಳ ಭಿನ್ನಭೇದವು ಹೋಗಿ ಐಕ್ಯವಾಯಿತೆಂದು ತಿಳಿದಿದೆ ಶ್ರೀ. ಟಿ ಪ್ರಕಾಶಂ ಮೊದಲಾದವರು ಮಧ್ಯಸ್ಥರಾಗಿದ್ದರು

★

ಬೆಲ್ಜಿಯಮ್ ಮಂತ್ರಿಮಂಡಳದ ಜರೂರು ಸಭೆಯೊಂದ ಸೇರಿ ಅಂತರ್ರಾಷ್ಟ್ರೀಯ ವಿಚಾರಗಳ ಕುರಿತು ಚರ್ಚೆ ನಡೆಸಿತು.

★

ಪ್ರೆಸಿಡೆಂಟ್ ರೂಸ್‌ವೆಲ್ಟರು ಶಾಂತಿ ಸಂಸ್ಥಾಪನೆಗಾಗಿ ಒಂದು ಕಾರ್ಯಕ್ರಮವನ್ನು ಮಾಡುತ್ತಿರುವರೆಂದು ಈಗ ಸಾಧಾರವಾಗಿ ತಿಳಿದುಬಂದಿದೆ.

★

ನಾರ್ವೆಯಲ್ಲಿ ಜರ್ಮನರು ಮುಂದುವರಿದಿರುವರೆಂದು ತಿಳಿದು ಬರುತ್ತದೆ.

★ ಲೋಕವಾರ್ತೆ



ಪಾರ್ಲಿಮೆಂಟಿನಲ್ಲಿ ಯುದ್ಧದ ವಿಷಯ ಚರ್ಚೆ!

ಸ್ವೀಡನಿಗೆ ಹಿಟ್ಲರನ ಭರವಸೆ! ನಾರ್ವೆಗೆ ಅಪರಿಮಿತ ನಷ್ಟ!

ನಾರ್ವಿಕಿನಲ್ಲಿ ಬಾಂಬಿನ ಸುರಿಮಳೆ

ಪುನಃ ರೂಸ್‌ವೆಲ್ಟರ ಪ್ರಯತ್ನ!

ದಕ್ಷಿಣ ನಾರ್ವೆಯು ಜರ್ಮನರ ವಶವಾಯಿತು

ಟ್ರೊಂಡ್ಹೈಮಿನ ದಕ್ಷಿಣ ಭಾಗದ ಕಡೆಗೆ, ಮುಂದುವರಿಯುತ್ತಿದ್ದ ಮಿತ್ರ ರಾಷ್ಟ್ರಗಳ ಸೈನ್ಯವು ಹಿಂದೆ ಬಿದ್ದಿದೆಯೆಂದು ಸುದ್ದಿ. ಅಂತೂ, ದಕ್ಷಿಣ ನಾರ್ವೆಯು ಇಂದು ಪೂರ್ಣ ಜರ್ಮನರ ವಶವಾಯಿತೆಂದು ತಿಳಿದಿದೆ.

ನಾರ್ವಿಕಿನಲ್ಲಿ ಕಾಳಗ

ಬ್ರಿಟಿಷ್ ಸೈನಿಕರು ನಾರ್ವಿಕಿನಲ್ಲಿರುವ ಜರ್ಮನರನ್ನು ಅಲ್ಲಿಂದ ಹೊಡೆದೋಡಿಸಬೇಕೆಂದು ನಿರ್ಧರಿಸಿದ್ದಾರೆ ಇಕ್ಕಡೆಯವರಿಗೆ ದೊಡ್ಡ ಕಾಳಗ ನಡೆಯುತ್ತಿದೆ

ಭೂಮಧ್ಯ ಸಮುದ್ರ—ಭೂಮಧ್ಯ ಸಮುದ್ರದಲ್ಲಿ ಯಾರೂ ಮುಂದುವರಿಯಬಾರದಾಗಿ ಇಟಲಿಯು ಅರ್ಭಟಿಸುತ್ತಿದೆ. ಈಗ ಬ್ರಿಟಿಷ ಹಡಗುಗಳು ಸುಯೇಜ್ ಕಾಲುವೆಯ ಮಾರ್ಗವನ್ನು ಬಿಟ್ಟು ಕೇಪ್ ಒಫ್ ಹುಡ್‌ಹೋಪಿನ ದಾರಿ ಹೋಗುತ್ತಿವೆ.

ರಣಕ್ಷೇತ್ರ ಬದಲಾಯಿತು ನಾರ್ವೆಯಲ್ಲಿ ಬ್ರಿಟೀಷ ಜರ್ಮನರ ರಣಕ್ಷೇತ್ರವು ಬದಲಾಗುತ್ತಿದೆ ಅನಿಶ್ಚಿತ ಸ್ಥಳಗಳಲ್ಲಿ ಆಗಾಗ ಆಕ್ರಮಣಗಳು ನಡೆಯುತ್ತಿವೆ ಸೈನಿಕರು ವೀರಾವೇಶದಿಂದ ಕಾದಾಡುತ್ತಾರೆ

ನಾರ್ವೆ ಡೆನ್‌ಮಾರ್ಕ್‌ಗಳಲ್ಲಿರುವ ವೈಮಾನಿಕ ನಿಲ್ದಾಣಗಳಲ್ಲಿ ಜರ್ಮನ್ ವಿಮಾನಗಳು ಅಗಾಧವಾಗಿ ಬಂದು ಸೇರಿದವೆಂದು ಗೊತ್ತಾಗಿ ಬ್ರಿಟಿಷ್ ವಿಮಾನಗಳು ಸ್ಟೆವೆಂಜರ್, ಪಾರ್ಬಿನ್ನು, ಆಲ್‌ಬರ್ಗ್ ಮುಂತಾದ ವೈಮಾನಿಕ ನಿಲ್ದಾಣಗಳ ಮೇಲೆ ಧಾಳಿ ನಡೆಸಿದವು. ಆದರೆ ಏಂಟಿ ಏರ್‌ಕ್ರಾಫ್ಟ್‌ಗನ್‌ಗಳ ಹೊಡೆತ ಜಾಸ್ತಿಯಾದುದರಿಂದ ಬ್ರಿಟಿಷ್ ವಿಮಾನಗಳು ಹಿಂತಿರುಗಬೇಕಾಯಿತು.

ಒಂದು ಫ್ರೆಂಚ್ ಟ್ರಾಲರ್ ಹಡಗು ಮುಳುಗಿತು ಇನ್ನೊಂದು ಡಿಸ್ಟ್ರಾಯರಿಗೆ ಬಲವಾದ ನಷ್ಟವಾಗಿದೆ. ಒಂದು ಜರ್ಮನ್ ಸಬ್‌ಮೆರೈನನ್ನು ಫ್ರೆಂಚ್ ಸಬ್‌ಮೆರೈನು ಟಾರ್ಪೆಡೊ ಮುಳುಗಿಸಿತು.

ಶಾಂತಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರೆಂದು ಕೆಲವು ಬ್ರಿಟಿಷರ ಮೇಲೆ ಲಂಡನಿನಲ್ಲಿಯೂ ಮತ್ತು ಬ್ರಿಟನಿನ ಇತರ ಪ್ರಾಂತಗಳಲ್ಲಿಯೂ 'ಡಿಫೆನ್ಸ್ ಆಫ್ ರೆಲ್ಮ್ ರೆಗ್ಯುಲೇಷನ್' ಪ್ರಕಾರ ಸಮನ್ಸ್ ಜಾರಿಮಾಡಲಾಗಿದೆ.

ಫ್ರಾನ್ಸಿನಲ್ಲಿ ಕಮ್ಯುನಿಸ್ಟ್ ಪ್ರಚಾರದ ಅಪಾದನೆಯ ಮೇಲೆ ೨೦೦ ಜನರ ದಸ್ತಗಿರಿಯಾಗಿದೆ.

ಜರ್ಮನರಿಗಾದ ನಷ್ಟ

ನಾರ್ವೆ ಯುದ್ಧದಲ್ಲಿ ಮೂರು ವಾರಗಳಲ್ಲಿ ಜರ್ಮನರ ೨ ದೊಡ್ಡ ಹಡಗುಗಳಿಗೆ ಬಹಳ ಗಾಸಿಯಾಯಿತು; ೪ ಕ್ರುಯಿಜರುಗಳು, ೧೧ ಡಿಸ್ಟ್ರಾಯರುಗಳು, ೫ ಯು-ಬೋಟುಗಳು ಮುಳುಗಿಸಲ್ಪಟ್ಟವು ಎಂದು ತಿಳಿಯಬರುತ್ತಿದೆ.

ಹೆಕಾನರ ರಾಜ್ಯತ್ಯಾಗವೆ?

ನಾರ್ವೆಯ ಅರಸ ಹೆಕಾನರೂ, ಯುವರಾಜರೂ, ನಾರ್ವೆ ಸರಕಾರದ ಮುಖಂಡರೂ ರಾಜ್ಯವನ್ನು ಬಿಟ್ಟು ಎಲ್ಲಿಗೊ ತೆರಳಿರುವರೆಂದು ರೋಮಿನ ವಾರ್ತೆ

ಚೆಂಬರ್ಲೀನರ ಹೇಳಿಕೆ

ಬ್ರಿಟನ್ ಮುಖ್ಯಮಂತ್ರಿಯಾದ ಮಿ ನೆವಿಲ್ ಚೇಂಬರ್‌ಲಿನ್‌ರವರು ನಾರ್ವೆಯ ಯುದ್ಧಾಚರಣೆಯ ಸಂಬಂಧವಾಗಿ ಕಾಮನ್ಸ್‌ನಲ್ಲಿ ಹೇಳಿಕೆಯಿತ್ತರು

ಟ್ರಾಂಡ್‌ಜಂನ್ನು ಸ್ವಾಧೀನಪಡಿಸಿಕೊಳ್ಳಲು ಬ್ರಿಟಿಷರು ಪ್ರಯತ್ನಪಟ್ಟುದು ನಿಷ್ಫಲವಾಯಿತೆಂದು ಅವರು ಹೇಳಿದರು 'ಆದರೂ ನಾರ್ವೆಯ ಕದನದಲ್ಲಿ ಜರ್ಮನ್ ನೌಕೆಗಳಿಗೆ ಬಹಳ ನಷ್ಟವಾಗಿದೆ ಅನೇಕ ಹಾಳಾದುವು ಬ್ರಿಟಿಷರಿಗಿಂತ ಜರ್ಮನರಿಗೆ ಬಹಳ ನಷ್ಟವಾಗಿದೆ. ಬ್ರಿಟಿಷರು ನಾರ್ವೆಯಲ್ಲಿ ಜಯಪಡೆದಿಲ್ಲವೆಂದು ಹೇಳುವುದಾದರೆ ಜರ್ಮನರು ಕೂಡಾ ಜಯಪಡೆದಿಲ್ಲವೆಂದು ನಾನು ಹೇಳುತ್ತೇನೆ ಇನ್ನು ಜರ್ಮನಿಯು ಇತರೆ ಕಡೆಗಳಲ್ಲಿಯೂ ಧಾಳಿ ನಡೆಸಬಹುದು, ಅವಕ್ಕೆಲ್ಲ ಸಿದ್ಧರಾಗಬೇಕಾಗಿದೆ' ಎಂದು ಮಿ ಚೆಂಬರ್‌ಲಿನ್‌ರು ನುಡಿದರು.

ಹೊಸ ರೈಲು ದಾರಿ.

ಟೆಹರಾನಿನಿಂದ ಕಾಸ್ಪಿಯನ್ನ ವರೆಗಿನ ಒಂದು ಹೊಸ ಲೈನು ಈಗ ಆರಂಭವಾಗಿದೆ. ಈ ಮಾರ್ಗವನ್ನು ಪೂರ್ತಿಸಲು ೧೫ ತಿಂಗಳು ಬೇಕಾಯಿತು. ಈ ಮಾರ್ಗಕ್ಕೆ ೧೦ ಸಾವಿರ ಟನ್ ಸಿಮೆಂಟೂ ೫೬ ಸಾವಿರ ಕ್ಯುಬಿಕ್ ಮೀಟರಿನಷ್ಟು ಕಾಂಕ್ರಿಟೂ ಉಪಯೋಗವಾಗಿದೆ. ಈ ಲೈನಿಗೆ ಲಕ್ಷಾಂತರ ರುಪಾಯಿಗಳ ವೆಚ್ಚ ತಗಲಿದೆ

ಭಾರತದ ಉಪಮಂತ್ರಿಗಳ ಹೇಳಿಕೆ

ಕಾಮನ್ಸ್ ಸಭೆಯಲ್ಲಿ ಭಾರತದ ಉಪಮಂತ್ರಿಗಳಾದ ಸರ್ ಹ್ಯೂ ಓನೀಲ್‌ರವರು ಪ್ರಶ್ನೆಗಳಿಗೆ ಉತ್ತರ ಕೊಡುತ್ತ, ಭಾರತ ವಿದ್ಯಮಾನಗಳ ಕುರಿತು ಹೇಳಲು ಏನೂ ಇರುವುದಿಲ್ಲವೆಂದೂ, ಭಾರತ ಪಂಗಡಗಳು ಸೇರಿ ತಮ್ಮೊಳಗೆ ನಿರ್ಧರಿಸಿ ಕೊಳ್ಳಬೇಕೆಂದೂ, ಆ ಕಾರ್ಯಕ್ಕೆ ವೈಸರಾಯರು ಸಹಾಯ ಮಾಡುವರೆಂದೂ ತಿಳಿಸಿದರು

೩೫ ಲಕ್ಷ ರೂಪಾಯಿ ಬಹುಮಾನ

ಇದೇ ತಿಂಗಳೊಳಗಾಗಿ ಹಿಟ್ಲರನನ್ನು ಸಜೀವ ಹಿಡಿದು ರಾಷ್ಟ್ರ ಸಂಘಕ್ಕೊಪ್ಪಿಸಿದವರಿಗೆ ೩೫ ಲಕ್ಷ ರೂಪಾಯಿ ಕೊಡುವದಾಗಿ ಅಮೇರಿಕೆಯ ಕಾರ್ನೇಜ ಇನ್‌ಸ್ಟಿಟ್ಯೂಟಿನ ಸ್ಯಾಮುವೆಲ್ ಚರ್ಚ್ ಇವರು ಜಾಹೀರ ಮಾಡಿರುವರು

ಇಟಲಿಯ ಧೋರಣೆ?

ಇಟಲಿಯು ಈಗಲೇ ಯುದ್ಧದಲ್ಲಿ ಸೇರುವುದಿಲವೆಂಬ ಬಾವನೆಯು ಅಮೆರಿಕದ ಆವರಣದಲ್ಲಿ ಬಳಳವಾಗಿದೆ ವಾಷಿಂಗ್‌ಟನನಲ್ಲಿ ಇಟಲಿಯ ರಾಯಭಾರಿಯು ಮಿ ಸಮ್ನರ್‌ವೆಲ್ಸರೂ ಅಧ್ಯಕ್ಷ ರೂಸ್‌ವೆಲ್ಟರನ್ನೂ ಭೇಟಿಮಾಡಿ ಮಾತನಾಡಿದರು

ಯುಗೋಸ್ಲೇವಿಯಾವು ರುಮೇನಿಯಾದಿಂದ ಸಹಾಯ ಕೇಳಲಿಲ್ಲವೆಂದೂ ಇತರರ ಸಹಾಯ ಕೇಳುವಂತಹ ಸ್ಥಿತಿ ಯುಗೋಸ್ಲೇವಿಯಾಕ್ಕೆ ಬಂದಿಲ್ಲವೆಂದೂ ಅಲ್ಲಿನ ಅಧಿಕಾರಿಯೊಬ್ಬರು ನುಡಿದರು

ಡ್ಯಾನ್ಯೂಬ್ ನದಿಗೆ ಜರ್ಮನ್ ಶಸ್ತ್ರಸಜ್ಜಿತ ಹಡಗುಗಳು ರೂಪಾಂತರಹೊಂದಿ ಪ್ರವೇಶಿಸುತ್ತಿರುವುದಾಗಿ ಗೊತ್ತಾಗಿದೆ

ಮೆಡಿಟರೇನಿಯನಿನ ಅನಿಶ್ಚಿತ ಸ್ಥಿತಿಯಿರುವುದರಿಂದ ಈಜಿಪ್ಟಿನಲ್ಲಿ ರಕ್ಷಣಾ ವ್ಯವಸ್ಥೆಯಲ್ಲಿ ವಿಶೇಷ ಮುಂಜಾಗ್ರತೆ ಕ್ರಮಗಳನ್ನು ಕೈಕೊಳ್ಳಲಾಗಿದೆ

ಇಟಲಿಯಲ್ಲಿರುವ ಬ್ರಿಟೀಷ್ ರಾಯಭಾರಿಯು ಇಟಲಿ ವಿದೇಶಾಂಗ ಮಂತ್ರಿಯೊಡನೆ ಭೇಟಿನಡೆಸಿ ಮಾತನಾಡಿದರು ಮುಸಲೋನಿಯವರನ್ನು ಸಂಯುಕ್ತ ಸಂಸ್ಥಾನದ ರಾಯಭಾರಿಯು ಭೇಟಿ ಮಾತನಾಡಿದರು ಇದರ ಫಲವಾಗಿ ನೋಡಿದರೆ ಇಟಲಿಯು ಕೂಡಲೇ ಯುದ್ಧಕ್ಕೆ ಸೇರುವಹಾಗಿಲ್ಲವೆಂಬ ಅಭಿಪ್ರಾಯಬರುತ್ತದೆ.

ಮೆಡಿಟರೇನಿಯನಿನ ಮಾರ್ಗವನ್ನು ತ್ಯಜಿಸಿ ಹಡಗುಗಳು ಗುಡ್ ಹೋಪ್ ಭೂಶಿರದ ಮಾರ್ಗವಾಗಿ ಹೋಗುವದಾದ್ದರಿಂದ ಅವುಗಳ ದರವನ್ನು ಸದ್ಯದಲ್ಲಿಯೇ ಏನೂ ಬದಲಾಯಿಸುವುದಿಲ್ಲ. ಆದರೆ ಹೆಚ್ಚುಕಾಲ ಇದೇ ವ್ಯವಸ್ಥೆಯು ಮುಂದುವರಿಯಬೇಕಾದಲ್ಲಿ ಅಗ್ಗೆ ದರಗಳನ್ನು ಜಾಸ್ತಿಮಾಡುವ ಪ್ರಶ್ನೆಯೇಳುವದೆಂದು ಹೇಳಲಾಗಿದೆ.

ನಾರ್ವೆಯ ನಷ್ಟ

ಈ ಯುದ್ಧದಲ್ಲಿ ನಾರ್ವೆಗೆ ಅಪರಿಮಿತ ನಷ್ಟವಾಗಿದೆಯೆಂದು ನಾರ್ವೆಯ ವಿದೇಶೀಯ ಮಂತ್ರಿಗಳಾದ ಪ್ರೊ। ಕೋತರು ಹೇಳಿರುವರು

ಯುದ್ಧ ಹರಡುವ ಮೊದಲು ಶಾಂತಿ ಪ್ರಯತ್ನ



ಪ್ರೆಸಿಡೆಂಟ್ ರೂಜ್‌ವೆಲ್ಟರ್ ವಾಷಿಂಗ್‌ಟನ್ನಿನ ಒಂದು ಪತ್ರಿಕಾ ಉದ್ಯೋಗಿಗಳ ಕಾನ್ಫರೆನ್ಸಿನಲ್ಲಿ ಭಾಷಣ ಮಾಡುತ್ತ, ಯುನೈಟೆಡ್ ಸ್ಟೇಟ್ಸಿನ ಸರಕಾರವು ಯುರೋಪಿನ ಯುದ್ಧವು ಇಯುವಂತೆಯೂ ಅದು ಇತರ ಕ್ಷೇತ್ರಗಳಿಗೂ ಇತರ ಜನಾಂಗಗಳಿಗೂ ಹಬ್ಬದಂತೆಯೂ ಯಾವಾಗಲೂ ಯತ್ನಿಸುತ್ತಿದೆ ಎಂದರು ಇದರಂತೆ ಅಲ್ಲಿನ ಒಂದು ಪತ್ರಿಕೆಯಲ್ಲಿ, ಪ್ರೆಸಿಡೆಂಟ್ ರೂಜ್‌ವೆಲ್ಟರ್, ಶಾಂತಿಗಾಗಿ ವಿವಿಧ ಯತ್ನಗಳನ್ನು ನಡೆಸುತ್ತಿದ್ದಾರೆಂದು ಸೂಚಿಸಿ, ಅವರು ಇಟಲಿ ಮೊದಲಾದ ತಟಸ್ಥ ರಾಷ್ಟ್ರಗಳೊಡನೆ ಈ ಕುರಿತ ಮಾತುಕಥೆಗಳನ್ನು ಆಗಲೇ ಆರಂಭಿಸಿರುವರೆಂದೂ ಉಲ್ಲೇಖಿಸಲಾಗಿದೆ

ಬ್ರಿಟಿಷರು ನಾಮ್‌ಸೋಸ್ ನಗರವನ್ನು ತ್ಯಜಿಸಿ ಹೋದರು. [illegible] ಜರ್ಮನರು ಸ್ವಾಧೀನಪಡಿಸಿ[illegible]ರು. ಬ್ರಿಟಿಷರು ನಾಮ್‌ಸೋಸ್ ನಗರವನ್ನು ಬಿಟ್ಟು ಹಡಗಿನಲ್ಲಿ ಕುಳಿತು ಹೋಗುತಿದ್ದಾಗ ಜರ್ಮನ್ ವಿಮಾನಗಳು ಧಾಳಿ ನಡೆಸಿದವು. ಆದರೂ ಏನೂ ಆಗಲಿಲ್ಲ.

ನಾಮ್‌ಸೋಸ್ ಪ್ರದೇಶದಲ್ಲಿ ನಾರ್ವೆ ಸೈನ್ಯದ ಕಮ್ಯಾಂಡರ್ ಇನ್ ಚೀಫರಾಗಿರುವವರು ಒಂದು ಆಜ್ಞೆ ಹೊರಡಿಸಿ ನಾರ್ವೆ ಸೈನಿಕರೊಡನೆ ಕಾದಾಡುವುದನ್ನು ನಿಲ್ಲಿಸಬೇಕೆಂದೂ ಕಾದಾಟದಿಂದ ವ್ಯರ್ಥವಾಗಿ ಅನರ್ಥಕೊಳ್ಳಗಾದಂತಾಗುವುದೆಂದೂ ತಿಳಿಸಿದ್ದಾರೆ.

ನಾರ್ವಿಕಿನಲ್ಲಿ ಬ್ರಿಟಿಷರು ಇನ್ನೂ ಬಲವಾಗಿಯೇ ಇದ್ದಾರೆ. ಆದರೂ ಅಲ್ಲಿಂದ ಎರಡು ದಿನಗಳಿಂದ ಏನೊಂದು ಸಮಾಚಾರವೇ ಬರುತ್ತಿಲ್ಲ.

ಸ್ವಿಟ್ಜರ್ಲೆಂಡಿನಲ್ಲಿ ಸೈನ್ಯ ಜಮಾವಣೆ ಬಲವಾಗಿ ನಡೆಯುತ್ತಿದೆ.

ರುಮೇನಿಯಾದಲ್ಲಿ [illegible]ಶಿಯರನ್ನು ತಡೆಗಟ್ಟುವ ಕ್ರಮವನ್ನು ಬಲಪಡಿಸಲಾಗಿದೆ

ನಾರ್ವೆಯ ರಾಜರೂ ಅವರ ಸಂಸಾರವೂ ಸರಕಾರದ ಸದಸ್ಯರೂ ನಾರ್ವೆ ಬಿಟ್ಟು ಹೋದರೆಂಬ ಸುದ್ದಿಗೆ ಆಧಾರವಿಲ್ಲವೆಂದೂ ಅವರೆಲ್ಲಾ ಅಲ್ಲೇ ಇದ್ದಾರೆಂದೂ ತಿಳಿಸಲಾಗಿದೆ

ಅಲೆಗ್ಝಾಂಡ್ರಿಯಾಕ್ಕೆ ಹೆಚ್ಚು ಬ್ರಿಟಿಷ್ ಮತ್ತು ಫ್ರೆಂಚ್ ನೌಕಾ ಸೈನ್ಯಗಳ ಒಂದಿಷ್ಟೆ

ಪಾರ್ಲಿಮೆಂಟಿನಲ್ಲಿ ಚರ್ಚೆ

ಪಾರ್ಲಿಮೆಂಟಿನಲ್ಲಿ ಯುದ್ಧದ ವಿಷಯದಲ್ಲಿ ಬಹಳ ದೊಡ್ಡ ಚರ್ಚೆಯು ಆರಂಭವಾಗಿದೆ, ಬ್ರಿಟಿಷ್ ಪತ್ರಿಕೆಗಳು ಬ್ರಿಟನು ದೀರ್ಘ ಸಾಹಸ ಮಾಡಬೇಕೆಂದೂ, ಅರೆಮನಸ್ಸಿನಿಂದ ಕಾದಾಡುವುದು ಸಾಲದೆಂದೂ ಬರೆದಿರುವವು!

ಲಾಯಿಡ್ ಜಾರ್ಜರು ಖಂಡಿಸಿದರು

ಬ್ರಿಟಿಷ್ ಮಂತ್ರಿಮಂಡಳವನ್ನು ನಾರ್ವೆಯಲ್ಲಿ ಆದ ಅಪಜಯಕ್ಕಾಗಿ ಲಾಯಿಡ್ ಜಾರ್ಜರು ಟೀಕಿಸಿ ಒಂದು ಲೇಖನವನ್ನು ಬರೆದಿರುವರು ಯುದ್ಧ ನಿದರ್ಶನೆಯು ತಪ್ಪು ರೀತಿಯುದ್ದು ಮತ್ತು ಪ್ರಮಾದಕರವಾದುದು ಎಂದು ಅವರು ಅದರಲ್ಲಿ ಹೇಳಿರುವರು.

ಸ್ವೀಡನಿಗೆ ಭರವಸೆ

ಸ್ವೀಡನಿನ ತಾಟಸ್ಥ್ಯಕ್ಕೆ ಭಂಗತರುವುದಿಲ್ಲವಾಗಿ ಹಿಟ್ಲರನು ಭರವಸೆಯುತ್ತಿರುವನೆಂದು ಸುದ್ದಿ.



ಸರ್ ಓನೀಲರಿಗೆ ಗಾಂಧೀಜಿಯವರ ಉತ್ತರ

ಪಂಜಾಬಿನಲ್ಲಿ ಕಾಕ್ಸಾರ ಗಲಭೆ!

ಪಾಕಿಸ್ತಾನವು ರಾಷ್ಟ್ರವಿದ್ರೋಹ!

ರಂಗೂನಿಗೆ ಧುರೀಣರ ಸಂದೇಶ

ನಾರ್ವಿಕಿನಲ್ಲಿ ಬಾಂಬಿನ ಮಳೆ

ನಾರ್ವೀಕಿನಲ್ಲಿ ಮಿತ್ರರಾಷ್ಟ್ರಗಳಿಗೆ ಹಾಗೂ ಜರ್ಮನರಿಗೆ ಭಯಂಕರ ಕಾದಾಟವು ನಡೆಯುತ್ತದೆ. ಬಾಂಬಿನ ಮಳೆಯೇ ಸುರಿಯುತ್ತಿದೆಯೆಂದು ಸುದ್ದಿ.

ಸೋಲಿಗೇನು ಕಾರಣ?

ದಕ್ಷಿಣ ನೋರ್ವೆಯಲ್ಲಿ ಬ್ರಿಟಿಷರು ಹಿಂಜರಿಯಲು ಮುಖ್ಯ ಕಾರಣವೆಂದರೆ ಮಧ್ಯನೋರ್ವೆಯಲ್ಲಿ ಮಿತ್ರರಾಷ್ಟ್ರಗಳಿಗೊಂದು ವಿಮಾನಸಿಲ್ದಾಣವಿಲ್ಲದುದೇ. ಟ್ರೋಂಡ್ಜೆಮಿನ ಕಡೆಗೆ ಜರ್ಮನರು ಬರದಿಂದ ಮುನ್ನುಗ್ಗುವದನ್ನು ತಡೆಯುವ ಸಿದ್ಧತೆಗಳು ಮಿತ್ರರಾಷ್ಟ್ರಗಳ ಸೈನ್ಯಗಳೊಡನಿರಲಿಲ್ಲ. ಆ ಭಾಗದಲ್ಲಿದ್ದ ನೋರ್ವೆ ಸೈನ್ಯಕ್ಕೆ ಬೆಂಬಲ ಕೊಡುವ ಸಲುವಾಗಿ ಸೇನೆಗಳನ್ನೊದಗಿಸಲಾಯಿತು. ಆದರೆ ಆ ಸೈನ್ಯಗಳಿಗಾಗಿ ಬರುವ ಯುದ್ಧೋಪಕರಣಗಳ ಹಡಗುಗಳ ಮೇಲೂ, ಸೈನ್ಯಗಳ ಮೇಲೂ ಬಲವಾಗಿ ಬಾಂಬು ಸುರಿಸಿ ಬೇರ್ಪಡಿಸಲು ಜರ್ಮನರು ಶಕ್ತರಾದರು. ಆ ಮೇಲೆ ನಡೆಯುವ ಜರ್ಮನ್ ಧಾಳಿಯಿಂದತಪ್ಪಿಸಿಕೊಳ್ಳಲು ಮಿತ್ರರಾಷ್ಟ್ರಗಳ ಸೇನೆ ಹಿಂದೆಗೆಯಬೇಕಾಯಿತು.

ಹಂಗೇರಿ-ಸ್ಲೋವೇಕಿಯಾ ವಿವಾದ

ಸ್ಲೋವಾಕ್ ಸರಕಾರವು ಅಸಹನೀಯ ರೀತಿಯಲ್ಲಿ ಹಂಗೇರಿಯನ್ನು ಕಿಣಕುತ್ತಿರುವವೆಂದೂ, ಈ ಕುರಿತು ಒಮ್ಮತದಿಂದ ವರ್ತಿಸುವರೆ ತಾವು ನಡೆಸಿದ ಪ್ರಯತ್ನಕ್ಕೆ ಬೆಲೆಕೊಡದೆ ಸ್ಲೋವೇಕಿಯವು ಮೇರೆವಿರಿ ವರ್ತಿಸುತ್ತಿರುವದೆಂದೂ ಹಂಗೇರಿ ಸರಕಾರವು ಸಾರಿದೆ.

ಬ್ರಿಟಿಷ್ ಪತ್ರಿಕೆಗಳ ಟೀಕೆ.

ಇಂಗ್ಲಾಂಡಿನ ಪತ್ರಿಕೆಗಳು ದಕ್ಷಿಣ ನಾರ್ವೆಯ ಪರಾಜಯವನ್ನೆತ್ತಿ ಯುದ್ಧ ನಡೆಸುವ ರೀತಿಯಲ್ಲಿ ಸುಧಾರಣೆಯಾಗಬೇಕೆಂದೂ ಇನ್ನಷ್ಟು ಕಠೋರವಾಗಿ ಯುದ್ಧ ಹೂಡಬೇಕೆಂದೂ ಎಚ್ಚರಿಸಿವೆ. ನೋರ್ವೆಯಲ್ಲಿ ವಿರೋಧಿಬಲದ ಕುರಿತು ಮಿತ್ರರಾಷ್ಟ್ರಗಳು ತಪ್ಪು ತಿಳುವಳಿಕೆಯಲ್ಲಿದ್ದುವೆಂದು ಕೆಲವು ಪತ್ರಿಕೆಗಳ ಕಠಿನ ಟೀಕೆಯಿದೆ. ಇದು ಮಿತ್ರರಾಷ್ಟ್ರಗಳ ಘನತೆ ಮತ್ತು ಸಾಮರ್ಥ್ಯಕ್ಕೊಂದು ಪ್ರಬಲ ಕುಂದು ತಂದರೂ, ಪರಿಸ್ಥಿತಿಗನುಗುಣವಾಗಿ ಹಿಂದೆಗೆಯುವ ಅಗತ್ಯವಿತ್ತೆಂದೂ ಇನ್ನಷ್ಟು ಸುವ್ಯವಸ್ಥೆಯಿಂದ ಯುದ್ಧ ಹೂಡಬೇಕೆಂದೂ \ ಅಮೇರಿಕಾ ಪತ್ರಿಕೆಗಳ ಅಭಿಪ್ರಾಯ.

ಇಟೆಲಿಯ ಪರಿಹಾಸ್ಯ

ಇಟೆಲಿಯ ಪತ್ರಿಕೆಗಳು ಈ ಸೋಲಿಗೆ ಇಂಗ್ಲಾಂಡನ್ನು ಪರಿಹಾಸ್ಯ ಮಾಡುತ್ತಿವೆ. "ಹಿಟ್ಲರನಿಗೆ ನೋರ್ವೆಯಲ್ಲಿ ಇಷ್ಟರಲ್ಲೇ ಬಸ್ಸು ತಪ್ಪಿಹೋಗಿದೆ" ಎಂದು ಮಿ. ಚೇಂಬರ್ಲಿನರು ಹಿಂದೊಮ್ಮೆ ಹೇಳಿದ್ದುದಕ್ಕೆ ವ್ಯಂಗ್ಯವಾಗಿ "ಬ್ರಿಟಿಷರಿಗೆ ಬಸ್ಸು ತಪ್ಪಿ ಹೋದುದಷ್ಟೇ ಅಲ್ಲ; ಅವರ ಬೇಗು, ಸಾಮಾನುಗಳು ಕೂಡ ಹಿಂದೆಯೇ ಉಳಿದವು" ಎಂದು ಅಪಹಾಸ್ಯಮಾಡಿವೆ. ಇಟೆಲಿಯಲ್ಲಿ ಬ್ರಿಟಿಷರ ಕುರಿತು ತೀವ್ರ ವಿರುದ್ಧ ಪ್ರಚಾರ ನಡೆಯುತ್ತಿದೆ.

ಮದ್ರಾಸು ಬೀಡಿ ಕೆಲಸಗಾರರ ಮುಷ್ಕರ

ಹೊಗೆಸೊಪ್ಪಿನ ತೆರಿಗೆ ಬಂದಂದಿನಿಂದ ಹಾಕಲ್ಪಟ್ಟ ತಮ್ಮ ಸಂಬಳ ಕಡಿತವನ್ನು ತೆಗೆದುಹಾಕಬೇಕೆಂದು ಮದ್ರಾಸು ಬೀಡಿ ಕೆಲಸಗಾರರು ತಾ. ೫ರಿಂದ ಮುಷ್ಕರವನ್ನಾರಂಭಿಸಿರುವರು. ಪಟ್ಟಣದಲ್ಲಿರುವ ೪೨೦೩ ಬೀಡಿ ಕೆಲಸಗಾರರಲ್ಲಿ ಹೆಚ್ಚಿನವರು ಮುಷ್ಕರದಲ್ಲಿ ಸೇರಿರುವರು. ಪಹರೆ ನಡೆಸುತ್ತಿದ್ದ ಸುಮಾರು ೪೦ ಮಂದಿಯು ದಸ್ತಗಿರಿ ನಡೆದು ೧೬ ಮಂದಿಗೆ ಐದೈದು ರೂ.ಗಳ ಜುಲ್ಮಾನೆ ಅಥವಾ ಒಂದೊಂದು ವಾರದ ಶಿಕ್ಷೆ ವಿಧಿಸಲ್ಪಟ್ಟಿದೆ.

ಓನಿಲರಿಗೆ ಮಹಾತ್ಮರ ಉತ್ತರ

ಸರ್ ಹ್ಯೂ ಓನಿಲರವರು ಇಂಡಿಯದ ಕಗ್ಗಂಟಿನ ವಿಷಯದಲ್ಲಿ ಕಾಮನ್ಸ್‌ಮಂದಿರದಲ್ಲಿ ಆಡಿದ ಮಾತುಗಳ ಕುರಿತಾಗಿ ಮಹಾತ್ಮಾಜಿಯವರು ಉತ್ತರ ಹೇಳುತ್ತ "ಚುನಾಯಿತರಾದ ಪ್ರತಿನಿಧಿಗಳ ಒಂದು ಪಾರ್ಲಿಮೆಂಟರಿ ಕಾನ್ಫರೆನ್ಸನ್ನು ಕರೆಯುವ ಅಧಿಕಾರವುಳ್ಳವರೆಂದರೆ ಬ್ರಿಟಿಷ್ ಸರಕಾರದವರೇ; ಅವರು ಹಾಗೆ ಮಾಡಲಿ; ಮತ್ತು ಅವರು ತಮ್ಮ ಅಧಿಕಾರವನ್ನು ಕೈಬಿಡಲೂ, ಇಂಡಿಯಕ್ಕೆ ತನ್ನ ರಾಜ್ಯಘಟನೆಯನ್ನು ತಾನೇ ರಚಿಸಿಕೊಳ್ಳುವ ಹಕ್ಕೆಂಬುದು ಅವರುಒಪ್ಪಲು ಮನಸ್ಸು ಮಾಡಿದಾಗ ಅದಕ್ಕೆ ಯೋಗ್ಯ ದಾರಿಯೇನೆಂದು ಅವರೇ ಆಲೋಚಿಸಲಿ ಎಂದಿರುವರು.

ರಾಜಿ ಕೊಡಬೇಕು.

ಈಗಿನ ಕಾಂಗ್ರೆಸಿನ ಧೋರಣೆಯನ್ನೊಪ್ಪಿ ಅದರಂತೆ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕಲಾರದ ಕಾಂಗ್ರೆಸ್ ಕಾರ್ಯಕಾರೀ ಸಂಸ್ಥೆಗಳ ಸದಸ್ಯರು ತಾವಾಗಿ ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡಬೇಕೆಂದು ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳವರಾದ ಆಚಾರ್ಯ ಕೃಪಲಾನಿಯವರು ಯಾವತ್ತು ಪ್ರಾಂತಿಕ ಕಾಂಗ್ರೆಸ್ ಸಮಿತಿಯವರಿಗೆ ಒಂದು ಪ್ರಕಟಣೆ ಕೊಟ್ಟಿದ್ದಾರೆ.

ಕರಾಚಿಯ ಸಿಟಿ ಜನರಲ್ ಪೋಸ್ಟಾಫೀಸಿನಿಂದ ಬೇರೆ ಕಡೆಗೆ ಕಳುಹಿಸಲ್ಪಡುವ ೧೦ಸಾವಿರ ರೂಪಾಯಿಗಳ ಕರೆನ್ಸಿ ನೋಟುಗಳುಳ್ಳ ಒಂದು ಇನ್ಸೂರ್ ಪಾರ್ಸೆಲ್ ಆಶ್ಚರ್ಯಕರವಾದ ರೀತಿಯಲ್ಲಿ ಅದೃಶ್ಯವಾಗಿದೆ. ವಿಳಾಸದಾರರು ಈ ಪಾರ್ಸೆಲ್ ಪಡೆದಾಗ ಅದರಲ್ಲಿ ನೋಟುಗಳಿರಲಿಲ್ಲ; ಚಿಂದಿಚೂರುಗಳಿದ್ದುವು. ಪೋಲಿಸರ ತನಿಖಿ ನಡೆಯುತ್ತಿದೆ.

ಡಿಫೆನ್ಸ್ ಓಫ್ ಇಂಡಿಯಾ

ಜಿಲ್ಲಾ ನ್ಯಾಯಾಧೀಶರ ಅಪ್ಪಣೆ ಪಡೆಯದೆ ಜೈಸ್ತಪುರದಲ್ಲಿ ಮೇ ದಿನಾಚರಣೆ ಮಾಡಿದರೆಂದು ಬಂಗಾಳ ಪ್ರಾಂ. ಕಾಂ. ಕ. ಮೆಂಬರ್ ಶ್ರೀ ಸುಖೇಂದ್ರ ದಸ್ತಿದರರನ್ನು ಮತ್ತೆ ೧೧ ವಿದ್ಯಾರ್ಥಿ ಹಾಗೂ ರೈತರನ್ನೂ ಡಿಫೆನ್ಸ್ ಆಕ್ಟಿನ ಪ್ರಕಾರ ಕೈದುಮಾಡಿರುವರೆಂದು ಚಿತ್ತಗಾಂಗಿನ ವಾರ್ತೆ.

ಕಾಕ್ಸಾರ ಚಳವಳ

ಲಾಹೋರಿನಲ್ಲಿ ಕಾಕ್ಸಾರರ ಚಳವಳದ ಪರಿಣಾಮವಾಗಿ ಅಲ್ಲಿನ ಪೋಲೀಸರು ಬಿಗಿಯಾದ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಮಸೀದಿಗಳಲ್ಲಿ ಅಡಗಿರುವ ಕಾಕ್ಸಾರರು ೩ ದಿನಗಳೊಳಗೆ ತಮಗೆ ಶರಣಾಗತರಾಗದಿದ್ದರೆ, ಆ ಮಸೀದಿಗಳ ಒಳಿಯ ಮನೆ ಅಂಗಡಿಗಳನ್ನು ಪೋಲೀಸರ ದಳವಿರಿಸಲು, ವಶಪಡಿಸಿಕೊಳ್ಳಲಾದೀತು; ಈ ಕಾಕ್ಸಾರರಿಗೆ ಆಹಾರ ಒದಗಿಸುವವರಿಗೆ ದಂಡನೆ ವಿಧಿಸಲಾದೀತೆಂದು ಅವರು ಸಾರಿದ್ದಾರೆ. ಅಲ್ಲದೆ ಘೋಷಾ ಮಹಿಳೆಯರಿಗಾಗಿ ಹೆಂಗಸರ ಪೋಲೀಸ್ ದಳವೊಂದೂ ಏರ್ಪಟ್ಟಿದೆ. ಅಲ್ಲಲ್ಲಿ ಪೋಲೀಸರ ಕಾವಲು ಹೆಚ್ಚಿದೆ. ಈ ಮಧ್ಯೆ ಕೆಲವು ಮೊಹಲ್ಲಾಗಳ ಪ್ರಜೆಗಳಿಂದ ಹೆಚ್ಚಿನ ಪೋಲೀಸ್ ಬಲದ ಖರ್ಚನ್ನು ವಸೂಲ್ಮಾಡುವ ಹಾಗೆ ಸರಕಾರವು ಆಲೋಚಿಸುತ್ತದೆ. ಈಗ ಒಂದು ತಿಂಗಳಿಂದ ಈ ಕಾಕ್ಸಾರರ ಹಾವಳಿ ನಡೆದಿದ್ದು, ಆ ಸಂಬಂಧವಾದ ಪೋಲೀಸ್ ಪಡೆಯ ಖರ್ಚು ಹೆಚ್ಚುವುದೇ ಸರಕಾರದ ಆ ಯೋಚನೆಗೆ ಕಾರಣ.

ರಂಗೂನಿಗೆ ಧುರೀಣರ ಸಂದೇಶ

"ರಂಗೂನಿನಲ್ಲಿ ಬೇಗನೇ ಮತಕಲಹಗಳು ಅಡಗಬೇಕು" ಎಂಬ ಕುರಿತು ಆಶೋತ್ತರವನ್ನು ಸೂಚಿಸಿ, ಇಂಡಿಯದ ಮುಖಂಡರಾದ ಗಾಂಧಿಜಿ, ರಾಷ್ಟ್ರಪತಿ ಪಂಡಿತ ನೆಹರೂ ಮೊದಲಾದವರು ಬರ್ಮಾದಲ್ಲಿರುವ ಇಂಡಿಯಾ ಸರಕಾರದ ಏಜೆಂಟರಿಗೆ ತಂತಿ ಬಿಟ್ಟಿದ್ದಾರೆ. ಅಲ್ಲದೆ ಈ ಕಲಹ ನಿವಾರಣೆಗಾಗಿ ಅಲ್ಲಿ ಪ್ರಬಲವಾದ ಪ್ರಯತ್ನಗಳೂ ನಡೆಯುತ್ತಿವೆ.

ರಾಜಕೋಟೆಯ ದಿವಾನರು

ರಾಜಕೋಟೆಯಲ್ಲಿ ಅಲ್ಲಿನ ದಿವಾನರೂ ಇಬ್ಬರು ಕೌನ್ಸಿಲರರೂ ಕೊಟ್ಟ ರಾಜೀನಾಮೆಯನ್ನು ಅಲ್ಲಿನ ಮಹಾರಾಜರು ಅಂಗೀಕರಿಸಿರುವುದಲ್ಲದೆ, ಶ್ರೀ. ಎನ್. ಎನ್. ಅಂಕ್ಲೇಸರ್ಯಾ, ಸಿ. ಐ. ಇ, ಬಾರ್-ಎಟ್-ಲಾ ಇವರನ್ನು ಆ ಸಂಸ್ಥಾನದ ಹೊಸ ದಿವಾನರನ್ನಾಗಿ ನೇಮಿಸಿರುವರೆಂದೂ ಪ್ರಕಟವಾಗಿದೆ.

ಹೊಸ ವಾರ್ತೆ

ಹೊಲ್ಲೆಂಡಿಗೆ ಜರ್ಮನಿಯ ಆಕ್ರಮಣ ಭೀತಿ ಹೆಚ್ಚಿಗೆ. ಹೋಲೆಂಡು ರಕ್ಷಣೆಯ ಮುಂಜಾಗ್ರತೆಗಳನ್ನು ಮಾಡುತ್ತಿದೆ.

★

ಕಾಮನ್ಸ್ ಸಭೆಯಲ್ಲಿ ಬ್ರಿಟಿಷರ ಯುದ್ಧನೀತಿಯ ಕುರಿತು ಪ್ರಬಲ ಚರ್ಚೆ ನಡೆಯಿತು. ಪ್ರಧಾನ ಮಂತ್ರಿ ಚೆಂಬರ್ಲೇನರು ನಾರ್ವೆಯ ರಕ್ಷಣೆಗೆ ಹೋದ ವಿಷಯದಲ್ಲಿ ಬ್ರಿಟಿಷ್ ಮಂತ್ರಿಮಂಡಳದ ನಿರ್ಧಾರವನ್ನು ಸಮರ್ಥಿಸಿ ಮಾತನಾಡಿದರು. ಪಾರ್ಲಿಮೆಂಟಿನ ವಿರೋಧಪಕ್ಷದವರು ಬ್ರಿಟಿಷ್ ಮಂತ್ರಿಮಂಡಳದ ಧೋರಣೆಯನ್ನು ಕಟುವಾಗಿ ಖಂಡಿಸಿದರು. ರಾಷ್ಟ್ರೀಯ ಮಂತ್ರಿಮಂಡಳವೊಂದನ್ನು ಮಾಡಬೇಕೆಂಬ ಸೂಚನೆಯು ಬಂತು.

★

ಈ ತಿಂಗಳ ಕೊನೆಯಲ್ಲಿ ನೆಹರೂಗಳು ಗಡಿನಾಡಿಗೆ ತೆರಳುವರೆಂದು ತಿಳಿದಿದೆ.

★

ಕೇರಳ ಕಾಂಗ್ರೆಸು ಕಮಿಟಿಯಲ್ಲಿರುವ ಎರಡು ಪಕ್ಷಗಳ ಭಿನ್ನಭೇದವು ಹೋಗಿ ಐಕ್ಯವಾಯಿತೆಂದು ತಿಳಿದಿದೆ. ಶ್ರೀ. ಟಿ. ಪ್ರಕಾಶಂ ಮೊದಲಾದವರು ಮಧ್ಯಸ್ಥರಾಗಿದ್ದರು.

★

ಬೆಲ್ಜಿಯನ್ ಮಂತ್ರಿಮಂಡಳದ ಜರೂರು ಸಭೆಯೊಂದು ಸೇರಿ ಅಂತರ್ರಾಷ್ಟ್ರೀಯ ವಿಚಾರಗಳ ಕುರಿತು ಚರ್ಚೆ ನಡೆಸಿತು.

★

ಪ್ರೆಸಿಡೆಂಟ್ ರೂಸ್‌ವೆಲ್ಟರು ಶಾಂತಿ ಸಂಧಾನಕ್ಕಾಗಿ ಒಂದು ಕಾರ್ಯಕ್ರಮವನ್ನು ಮಾಡುತ್ತಿರುವರೆಂದು ಈಗ ಸಾಧಾರವಾಗಿ ತಿಳಿದುಬಂದಿದೆ.

★

ನಾರ್ವೆಯಲ್ಲಿ ಜರ್ಮನರು ಮುಂದುವರಿದಿರುವರೆಂದು ತಿಳಿದು ಬರುತ್ತದೆ.

ಶಿಕ್ಷಣ ವಿಚಾರ:

ಹೊಸ ಪಾಠಪಟ್ಟಿಗೆ ಸರಿಯಾಗಿ

ಭೂಗೋಳ ಪಾಠವನ್ನು ಕಲಿಸುವುದೆಂತು?

ಭೂಗೋಳವು ಶಾಲಾ ಪಾಠಗಳಲ್ಲಿ ಒಂದತಿ ಪ್ರಾಮುಖ್ಯವಾದ ಪಾಠವೆಂದು ಜಗತ್ತಿನ ಎಲ್ಲಾ ಶಿಕ್ಷಣ ತಜ್ಞರು ಮುಕ್ತ ಕಂಠದಿಂದ ಒಪ್ಪಿರುವರು. ಜಗತ್ತಿನ ಬೇರೆ ಬೇರೆ ಕಡೆಗಳ ಸಮಾಚಾರ ಚಟುವಟಿಕೆಗಳನ್ನು ಓದುವಾಗ ಆ ಪ್ರದೇಶಗಳ ಪ್ರಾಕೃತಿಕ ಲಕ್ಷಣ ಇತ್ಯಾದಿ ಭೂಗೋಳ ವಿಚಾರವು ಗೊತ್ತಿಲ್ಲದಿದ್ದರೆ ವಿಷಯವು ನಮಗೆ ಅರ್ಥವಾಗಲಾರದು ಉದಾಹರಣೆಗಾಗಿ ಬಾಲ್ಟಿಕ್ ರಾಜ್ಯಗಳು ಅವುವು? ಭಾಲ್ಕನ್ ರಾಜ್ಯಗಳಾವುವು ಎಂಬ ವಿಚಾರ ತಿಳಿಯದೆ ಇದ್ದರೆ ಯೂರೋಪಿನ ಪ್ರಕೃತದ ಹೆಚ್ಚಿನ ವಿಚಾರವು ನಮಗೆ ಅರ್ಥವಾಗದೆ ಹೋಗುವುದು.

ಭೂಗೋಳ ಶಾಸ್ತ್ರವನ್ನು ಮೊದಲು ಬರಿಯ ಪರ್ವತಗಳ ಎತ್ತರ ಹೊಳೆಗಳ ಉದ್ದದ ಪಟ್ಟಿ ಎಂದು ಎಣಿಸಿದ್ದರು ಆದರೆ ಭೂಗೋಳ ಶಾಸ್ತ್ರವು ಒಂದು ವಿಜ್ಞಾನಶಾಸ್ತ್ರ. ಪ್ರಾಕೃತಿಕ ಲಕ್ಷಣಗಳ ಮೇಲೆ ಅನೇಕ ವಿಷಯಗಳು ಆಧರಿಸಿಕೊಂಡಿವೆ. ಇದು ಹೀಗಾಗಲು ಕಾರಣವೇನು? ವಿಜ್ಞಾನ ಶಾಸ್ತ್ರದ ನಿಯಮವೆಂತು ಎಂಬತ್ಯಾದಿ ವಿಚಾರಗಳನ್ನು ಕಲಿಯುವುದೇ ಭೂಗೋಲ. ಭೂಗೋಲ ಶಾಸ್ತ್ರದಲ್ಲಿ ಬಾಯಿಪಾಠದ ಅಂಶ ಈಗ ಇಲ್ಲ. ಎಲ್ಲವೂ ಸಕಾರಣದಿಂದ ನಿಶ್ಚಯಮಾಡಲು ಬರುವ ವಿಷಯಗಳೇ ಕಲಿಯಲಿರುವ ಮುಖ್ಯವಾದ ವಿಷಯ ಉದಾಹರಣೆಗಾಗಿ ಒಂದು ದೇಶವು ವ್ಯವಸಾಯದ ದೇಶವೆಂದು ಹೇಳಿದ ಕೂಡಲೇ ಅಲ್ಲಿನ ಮಳೆ, ಬೆಳೆ, ಆಮದು ರಫ್ತು ಇತ್ಯಾದಿ ವ್ಯಾಪಾರ ಜನಜೀವನ ಎಲ್ಲವನ್ನೂ ಕಾರಣ ಕೊಟ್ಟು ಸ್ಥೂಲವಾಗಿ ಹೇಳಿಬಿಡಬಹುದು ಮೊನ್ನೆ ಕಳೆದ ೧೯೩೯ನೇ ವರ್ಷದ ಮೇ ತಿಂಗಳಲ್ಲಿ ಮದ್ರಾಸು ಸರಕಾರವು ನಮ್ಮ ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಪಾಠಗಳ ಪಟ್ಟಿಯನ್ನು ಕೊಟ್ಟಿರುವುದು ಭೂಗೋಳದ ಪಾಠಪಟ್ಟಿಯು ಒಳ್ಳೆಯ ಶಿಕ್ಷಣ ತಜ್ಞರಿಂದ ರಚಿತವಾಗಿ ಅತಿ ಉತ್ತಮವಾಗಿದೆಯೆಂದು ಎಲ್ಲ ಅಧ್ಯಾಪಕರೂ ಒಪ್ಪುವರಾಗಿ ನನ್ನ ಭರವಸೆ. ಭೂಗೋಳ ಶಾಸ್ತ್ರವನ್ನು ಕಲಿಸುವಾಗ ಚಿಕ್ಕ ಮಕ್ಕಳಿಗೆ ಅನೇಕ ವಿಷಯಗಳನ್ನು ಹೇಳಿಕೊಟ್ಟು ಅವರ ಚಿಕ್ಕತಲೆಯನ್ನು ಅಂಕೆ ಸಂಖ್ಯೆಗಳಿಂದ ತುಂಬಿಸಬಾರದೆಂದು ನನ್ನ ಮತ. ಪಠ್ಯಪುಸ್ತಕವು ಅತಿ ಚಿಕ್ಕದಾಗಿದ್ದು ಭೂಗೋಲ ಕಲಿಯಲು ಬೇಕಾದ ಎಲ್ಲಾ ವಿಷಯಗಳನ್ನೂ ಒಳಗೊಂಡಿರಬೇಕು, ಈ ಎಲ್ಲಾ ವಿಷಯಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆ ಎಂಬ (ಸಾಮಾನ್ಯ ನಿಯಮ theory) ವನ್ನು ಹೇಳಿಕೊಡಬೇಕು. ಅನೇಕ ವಿಚಾರಗಳು ನಮ್ಮ ಗ್ರಾಮ, ನಮ್ಮ ದೇಶಕ್ಕೆ ಮಾತ್ರವಲ್ಲದೆ ಅಖಿಲ ಜಗತ್ತಿಗೆ ಸರಿಹೋಗುತ್ತದೆ ಎಂಬುದನ್ನು ಮಕ್ಕಳ ಮನಸ್ಸಿಗೆ ಖಚಿತಮಾಡಬೇಕು. ಮುಂದೆ ಒಂದು ದೇಶದ ಸಾಮಾನ್ಯ ಲಕ್ಷಣಗಳನ್ನು ಹೇಳಿ ಉಳಿದ ವಿಷಯಗಳನ್ನು ಮಕ್ಕಳಿಂದ ಕೇಳಿ ಉತ್ತರ ಹೊರಡಿಸಬೇಕು. ಅಲ್ಲೇನಾದರೂ ತಪ್ಪಿದರೆ ಅಧ್ಯಾಪಕನು ತಿದ್ದಬೇಕು. ಉದಾಹರಣೆಗಾಗಿ ಸಾಕಷ್ಟು ಉಷ್ಣವಿರುವ ಬಯಲು ಪ್ರದೇಶದಲ್ಲಿ ತುಂಬಾ ನೀರಿನ ಆಶ್ರಯವಿದ್ದರೆ ಬತ್ತ ಬೆಳೆಯುತ್ತದೆ ಎಂದು ಹೇಳಿದರೆ ಭೂಲೋಕದ ಯಾವ ಯಾವ ಭಾಗದಲ್ಲಿ ಈ ಬೆಳೆಯಾಗುತ್ತದೆ ಎಂದು ಮಕ್ಕಳೇ ಹೇಳಲು ಶಕ್ತರಾಗುವರು.

ಒಂದು ಊರು ದೊಡ್ಡದಾಗುವುದಕ್ಕೆ ಕಾರಣವೇನು ಎಂಬ ಸಾಮಾನ್ಯ ಪ್ರಶ್ನೆಗೆ ಉತ್ತರ ಹೇಳಿಕೊಡಬೇಕು. ಬೊಂಬಾಯಿಯು (ಪಟತೋರಿಸಿ) ಹೇಗ ದೊಡ್ಡ ನಗರವಾಯಿತೆಂದು ಮಕ್ಕಳಿಂದ ಪ್ರಶ್ನಿಸಿ ಕೇಳಿಯೇ, ಉತ್ತರ ಹೊರಡಿಸಿ ಈ ವಿಷಯವನ್ನು ಮುಂದಟ್ಟು ಮಾಡಬೇಕು. ಅಲ್ಲದೆ ಬೊಂಬಾಯಿಯಲ್ಲಿ ಹತ್ತು ಲಕ್ಷ ಜನರಿದ್ದಾರೆ ಅದು ಒಂಬತ್ತು ಮೈಲು ಉದ್ದ ಮೂರು ಮೈಲು ಅಗಲವಿದೆ ಎಂದು ಹೇಳಿ ಈ ಅಂಕೆ ಸಂಖ್ಯೆಗಳನ್ನು ಮುಖೋದ್ಗತ ಮಾಡುವುದರಲ್ಲಿ ಅರ್ಥವಿಲ್ಲವೆಂದು ನಾನು ಖಂಡಿತ ಹೇಳಬಲ್ಲೆನು.

ಸಾಮಾನ್ಯ ವಿಜ್ಞಾನದ ಪಾಠವಾದ ಭೂಗೋಳವನ್ನು ಖಾನೇಶುಮಾರಿ ಪಟ್ಟಿಯನ್ನಾಗಿ ಮಾಡದೆ ಉತ್ತಮ ಸಲಹೆ ಸೂಚನೆಗಳನ್ನು ಕೊಟ್ಟು ಮಕ್ಕಳು ಭೂಗೋಲಶಾಸ್ತ್ರವೆಂದರೆ ನಿಜವಾಗಿಯೂ ಮನಸ್ಸಿಗೆ ಸಂತೋಷವನ್ನೂ ವ್ಯಾಯಾಮವನ್ನೂ ಕೊಡುವ ಅತಿ ಉತ್ತಮ ಪಾಠವೆಂದು ತಿಳಿಯುವಂತೆ ಮಾಡುವುದು ನಮ್ಮ ಪ್ರತಿಯೊಬ್ಬ ಉಪಾಧ್ಯಾಯನ ಕರ್ತವ್ಯವು ಹೀಗೆ ಸಕಾರಣ ವಿವರಿಸಿದ ವಿಚಾರಗಳು ಮನದಟ್ಟಾಗಿ ನಾವು ಕಲ್ಪಿಸಿದ ಭೂಗೋಲ ಶಾಸ್ತ್ರವು ನಿಜವಾದ ಶಾಸ್ತ್ರವಾಗಿ ಮಕ್ಕಳ ಮುಂದಿನ ಜೀವನಕ್ಕೆ ನೆರವಾದೀತೆಂದು ನನ್ನ ನಂಬಿಕೆ.

K. R.

ಶಾಲೆಗಳ ಅಧ್ಯಾಪಕರ ಉಪಯೋಗಕ್ಕಾಗಿ
ಟೆಕ್ಸ್ಟ ಬುಕ್ ಕಮಿಟಿಯವರಿಂದ ಮಂಜೂರಾತಿ ಪಡೆದಿದೆ.
Ft St George Gazette Page 81
ಸಚಿತ್ರ
'ಭೂವಿವರ'
ಹೆಸರಾಂತ ಲೇಖಕರು! ಸುಂದರವಾದ ಮುದ್ರಣ!!
4ನೇ ದರ್ಜೆ 0-2-6 ೫ನೇ ದರ್ಜೆ 0 3 6
ಇಷ್ಟು ಕಡಿಮೆ ಬೆಲೆಯ ಭೂವಿವರ ಪುಸ್ತಕವು ಬೇರೊಂದಿಲ್ಲ
ಬಡ ವಿದ್ಯಾರ್ಥಿಗಳ ಸೇವೆಯೇ ನಮ್ಮಗುರಿ ಜಿಲ್ಲೆಯ ಪಠ್ಯಪುಸ್ತಕ ಪ್ರಕಾಶನ ಕಾರ್ಯದ ಇತಿಹಾಸದಲ್ಲಿಯೇ ಹೊಸ ಸಾಹಸ!
ವಿ ಸೂ:—ನಮ್ಮಲ್ಲಿ ನೂತನ ಪಾಠಪಟ್ಟಿಗೆ ಅನುಗುಣವಾಗಿ ಬರೆದ ಚರಿತೆ ಸಿವಿಕ್ಸ್, ಸಾಮಾನ್ಯ ವಿಜ್ಞಾನ, ಪ್ರಕೃತಿ ಶಾಸ್ತ್ರ, ತೋಟಗಾರಿಕ, ಗೃಹವಿಜ್ಞಾನ ವ್ಯಾಕರಣ ಮತ್ತು ಪ್ರಬಂಧ ಈ ಎಲ್ಲಾ ಪುಸ್ತಕಗಳೂ
ಅತ್ಯಂತ ಕಡಿಮೆ ಬೆಲೆಗೆ ದೊರೆಯುತ್ತವೆ.
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

NACET BLADES
3ಗೂಟಿಗಳ ರೇಜರುಗಳಿಗೆ

ನೆಸೆಟು ಬ್ಲೇಡುಗಳು ತಮ್ಮ ವಿಶಿಷ್ಟ ಗುಣಕ್ಕೂ ಕಡಿಮೆ ಕ್ರಯಕ್ಕೂ ಶಾಶ್ವತವಾದ ಖಾತ್ರಿಯನ್ನು ಪಡೆದಿವೆ. ಇವುಗಳ ಪೂರ್ಣವಾದ ಭರವಸೆಯಿಂದಾಗಿ ಇವು ಜನಪ್ರಿಯವಾಗಿವೆ—ಪ್ರತೀ ಬ್ಲೇಡುಗಳು ಉತ್ತಮವೂ ನುಣುಪೂ ಆದ ಕ್ಷೌರವನ್ನುಂಟುಮಾಡುವುದು.
INT

ಹಕ್ಕರ ಉದ್ಗಾರಗಳು

ಕಳೆದವಾರ ಮದ್ರಾಸು ಪ್ರಾಂತಕ್ಕೆ ಆಗಮಿಸಿದ ಮಿ। ಫಜುಲುಲ್ ಹಕ್ಕರು ಅನೇಕ ನಿಂದಾವಚನಗಳನ್ನಾಡಿ ತಮ್ಮ ಹೃದಯ ಸಂಕೋಚತೆಯ ಪ್ರತ್ಯಕ್ಷ ಪರಿಚಯವನ್ನು ನಮ್ಮ ಪ್ರಾಂತದವರಿಗೂ ಚನ್ನಾಗಿಮಾಡಿಸಿ ಕೊಟ್ಟರು. ಹಕ್ಕರ ರಾಜಕೀಯ ಧೋರಣೆಗಳನ್ನೂ, ಹಿಂದೆಯೆ ತಿಳಿದಿದ್ದ ನಮ್ಮ ಪ್ರಾಂತದವರಿಗೆ ಈ ಉದ್ಗಾರಗಳು ಬೇಸರ ಹುಟ್ಟಿಸಿದರೂ ಹೆಚ್ಚಿನ ಆಶ್ಚರ್ಯಕರವಾಗಲಾರದು.

ಮುಸಲ್ಮಾನೇತರರಿಗೆ ಹಲವು ತೆರದ ಬೆದರಿಕೆಗಳನ್ನೂ, ನಿರ್ಜೀವವಾದ ಹಲವು ಯುಕ್ತಿಗಳನ್ನೂ, ನಾಚಿಕೆಯಿಲ್ಲದ ಆರ್ಭಟಿಗಳನ್ನೂ ಎದುರಾಡಲಾರದ ಪಂಥ ಆಹ್ವಾನಗಳನ್ನೂ, ಜಣಶಾಂತಿ ಸಂಧಾನದ ಮಾತುಗಳನ್ನೂ ಹೇಳುವುದರಲ್ಲಿ ಹಕ್ಕರು ಚನ್ನಾಗಿ ಪ್ರಸಿದ್ಧಿ ಪಡೆದಿರುವರೆಂದು ಕಳೆದ ವಾರದ ಅವರ ಹೇಳಿಕೆಗಳಿಂದ ಮತ್ತೂ ಸ್ಪಷ್ಟವಾಯಿತು.

ಇಂತಹ ವ್ಯಕ್ತಿಯು ಪ್ರಧಾನ ಮಂತ್ರಿತ್ವದಲ್ಲಿರುವ ಬಂಗಾಳವು ಪಡುವ ಬನ್ನವನ್ನು ನೆನೆಸಿದರೆ ಯಾರಿಗಾದರೂ ಕನಿಕರ ಹುಟ್ಟದೇ?

ಸಾಮ್ರಾಜ್ಯಕೀಯ ಕೈದಿಗಳ ಉಪವಾಸ

ಮೊಂಟ್‌ಗೊಮರಿ ಸೆಂಟ್ರಲ್ ಜೈಲಿನಲ್ಲಿ ೫ ಮಂದಿ ರಾಜಕೀಯ ಬಂದಿಗಳು ಉಪವಾಸಕ್ಕೆ ಆರಂಭಿಸಿದ್ದು ಅವರಿಗೆ ಬಲಾತ್ಕಾರವಾಗಿ ಆಹಾರವನ್ನು ಉಣ್ಣಿಸಲಾಗುತ್ತಿದೆ ಎಂದು ಪ್ರಕಟವಾಗಿದೆ.

ಶ್ರೀ ರೆಡ್ಡಿಯವರ ಉಪವಾಸ

ಕೋಲಾರ ಜಿಲ್ಲಾ ಬೋರ್ಡ್ ಚುನಾವಣೆ ಸಂದರ್ಭದಲ್ಲಿ ಕೆಲವು ವಿದ್ಯಮಾನಗಳು ನಡೆದವು. ಅದೊಂದು ವಿಶೇಷ ಚುನಾವಣಾ ಕ್ಷೇತ್ರದಲ್ಲಿ ಕಾಂಗ್ರೆಸಿಗೆ ಸೋಲುಂಟಾಯಿತು. ಈ ಅಪಜಯಕ್ಕೆ ಕಾಂಗ್ರೆಸಿನವರೂ ಕೊಂಚ ಕಾರಣರು. ಇದರಿಂದ ದೇಶದ ಹಿತದಲ್ಲಿ ವಿಪರೀತ ಪರಿಣಾಮಗಳನ್ನುಂಟುಮಾಡತಕ್ಕ ದಾವೆ ಸಮಸ್ಯೆಗಳೂ ಹುಟ್ಟಿ ಬಂದಿವೆ. ಕೆಲ ಅಧಿಕಾರಿಗಳ ಕೈಹಾಕಿ ಓಟರುಗಳ ಸಹಜವಾದ ಅಭಿಪ್ರಾಯವನ್ನು ಹೊರಗೆಡಹಲು ಅವಕಾಶವಿಲ್ಲದಂತೆ ಮಾಡಿದ್ದಾರೆ ಎಂಬ ಮಾತೂ ಒಂದುಂಟು. ಇವೆಲ್ಲವೂ ನನ್ನ ಮನಸ್ಸನ್ನು ತೀವ್ರವಾಗಿ ಕದಡಿದೆ. ಮುಂದಿನ ಚುನಾವಣೆಯಲ್ಲಿ ಯಾರೊಬ್ಬರೂ ಯಾರೊಬ್ಬರನ್ನೂ ಬಲಾತ್ಕಾರಕ್ಕೆ ನೂಕಲು ಬಯಸುವುದಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸಲು, ಎಪ್ರಿಲ್ ೨೭ನೇ ತಾರೀಕಿನಿಂದ ಉಪವಾಸವ್ರತವನ್ನು ಕೈಕೊಂಡಿರುವೆನು, ಹೀಗೆಂದು ಮೈಸೂರು ಕಾಂಗ್ರೆಸಿನ ಮುಖಂಡರಾದ ಶ್ರೀ ಕೆ ಚಂಗಲರಾಯ ರೆಡ್ಡಿಯವರು ಒಂದು ಹೇಳಿಕೆ ಕೊಟ್ಟಿರುವರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಸಾಧಾರಣ ಸಭೆ (೨೮-೪-೪೦)

ಕೆಳಗಿನ ಗೊತ್ತುವಳಿಗಳು ಪಾಸಾದುವು.

ದುಃಖ ಪ್ರದರ್ಶನ:— ಕರ್ನಾಟಕ ಕುಲಭೂಷಣ ಶ್ರೀ ಶ್ರೀನಿವಾಸ ರಾವ ಕೌಜಲಗಿ, ದೀನಬಂಧು ಚಾರ್ಲ್ಸ್ ಫ್ರೀಯರ್ ಅಂಡ್ರೂಜ ಹಾಗೂ ಮೌಲಾನಾ ಯಾಕೂಬ ಹಸನ್ ಇವರ ನಿಧನದ ಬಗ್ಗೆ ಈ ಸಭೆಯು ತನ್ನ ಅತ್ಯಂತ ದುಃಖವನ್ನು ವ್ಯಕ್ತಪಡಿಸುತ್ತದೆ.

ಪ್ರಾಂತೀಯ ಸತ್ಯಾಗ್ರಹ ಸಮಿತಿ: ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರಿ ಮಂಡಲವನ್ನು ಪ್ರಾಂತೀಯ ಸತ್ಯಾಗ್ರಹ ಸಮಿತಿಯಾಗಿ ಪರಿವರ್ತಿಸಲು ಈ ಸಭೆಯು ನಿರ್ಧರಿಸುತ್ತದೆ. ಇಲ್ಲಿಯ ವರೆಗೂ ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರಿ ಮಂಡಲದಿಂದ ನಡೆಯಿಸಲ್ಪಡುತ್ತಿದ್ದ ಎಲ್ಲ ಕಾರ್ಯಗಳನ್ನು ನಡೆಸಲು ಈ ಸತ್ಯಾಗ್ರಹ ಸಮಿತಿಯು ಅಧಿಕೃತವಿರುವುದು.

ಸದ್ಯದ ಕಾರ್ಯಕ್ರಮ:— ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಧೋರಣೆ ಹಾಗೂ ಅದರಿಂದ ಆಗಾಗ್ಗೆ ಕೊಡಲ್ಪಟ್ಟ ಸೂಚನೆಗಳಂತೆ ಸತ್ಯಾಗ್ರಹ ನಡೆಸಲು ಪ್ರಾಂತ್ಯದಲ್ಲಿಯ ಎಲ್ಲ ಜಿಲ್ಲಾ ಕಾಂಗ್ರೆಸ್ ಕಮಿಟಿಗಳೂ ತಮ್ಮ ಅಧೀನದಲ್ಲಿರುವ ವಾರ್ಡ, ನಗರ, ಗ್ರಾಮ, ಗ್ರೂಪ, ತಾಲೂಕು ಮತ್ತು ಜಿಲ್ಲಾ—ಇವೇ ಎಲ್ಲ ಕಾಂಗ್ರೆಸ್ ಕಮಿಟಿಗಳ ಕಾರ್ಯಕಾರಿ ಮಂಡಲಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ಪರಿವರ್ತಿಸಬೇಕೆಂದು ಈ ಸಭೆಯು ಹೇಳುತ್ತದೆ. ಈ ರೀತಿ ಸತ್ಯಾಗ್ರಹ ಸಮಿತಿಗಳಾಗಿ ಬದಲಾಯಿಸಲ್ಪಟ್ಟ ಕಾರ್ಯಕಾರಿ ಮಂಡಲಗಳಲ್ಲಿಯ ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡದಿರುವ ಸದಸ್ಯರು ತಮ್ಮ ಆ ಕಾರ್ಯಕಾರಿ ಮಂಡಲದ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆಂದು ಸೂಚಿಸುತ್ತದೆ. ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ವಿಶೇಷ ಲಕ್ಷ್ಯಕೊಟ್ಟು ಖಾದಿ, ಜಾತೀಯ ಐಕ್ಯತೆ, ಹರಿಜನ ಹಾಗೂ ಕಾರ್ಯಕರ್ತರ ಶಿಕ್ಷಣ, ಮುಂತಾದ ಯೋಜನೆಗಳನ್ನು ಸಂಘಟಿಸಿ ಕಾರ್ಯ ಮಾಡಬೇಕು.

ಈ ಸಂಬಂಧ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಸಲಹೆ ಸೂಚನೆಗಳನ್ನು ಕೊಡಲು ಪ್ರಾಂತೀಯ ಅಧ್ಯಕ್ಷರು, ಉಪಾಧ್ಯಕ್ಷರಾದ ಶ್ರೀಮತಿ ಕೃಷ್ಣಾಬಾಯಿ ಪಂಜೀಕರ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚನ್ನಬಸಪ್ಪ ಅಂಬಲಿ—ಇವರನ್ನೊಳಗೊಂಡ ಉಪಸಮಿತಿಯು ಅಧಿಕೃತವಿರುವುದು.

ರಾಮದುರ್ಗ ಆರೋಪಿಗಳಿಗೆ ದಯೆ:— ರಾಮದುರ್ಗ ದುರಂತ ಪ್ರಕರಣದಲ್ಲಿ ವಿಧಿಸಿದ ದೇಹಾಂತ ಶಿಕ್ಷೆಯೇ ಮೊದಲಾದ ತೀವ್ರ ಶಾಸನಗಳನ್ನು ಕೇಳಿದ್ದಾಯಿತು. 'ಶ್ರೀಮಂತ' ರಾಜಾಸಾಹೇಬರು ತಮ್ಮ ಸ್ಥಾನದ ದುರಂತ ಪ್ರಕರಣದಲ್ಲಿ ಗಲ್ಲು ಹಾಗೂ ಜೀವಂತ ಸೆರೆಮನೆ ವಾಸದ ಕಠೋರ ಶಿಕ್ಷೆಗೆ ಗುರಿಯಾದ ಜನರನ್ನು ಕ್ಷಮಿಸಿ ತೋರಿಸಿ ಬಿಡುಗಡೆ ಮಾಡಬೇಕೆಂದು ಈ ಸಭೆಯು ಬಿನ್ನವಿಸಿಕೊಳ್ಳುತ್ತದೆ.

ಪ್ರಾಂತೀಯ ಸತ್ಯಾಗ್ರಹ-ಸಮಿತಿಯ ಕಾರ್ಯಕಲಾಪ

ಪಾಸಾದ ಗೊತ್ತುವಳಿಗಳು

ಇಂಪೀರಿಯಲ್ ಟುಬ್ಯಾಕೊ ಫ್ಯಾಕ್ಟರಿನ ಸಂಪು:— ಬೆಳಗಾ ಪುರದಲ್ಲಿಯ ಇಂಪೀರಿಯಲ್ ಟುಬ್ಯಾಕೋ ಫ್ಯಾಕ್ಟರಿಯಲ್ಲಿ ನಡೆಯಲಿರುವ ಸಂಪಿನ ಸಂಬಂಧ ಯುಕ್ತ ಪ್ರಾಂತ್ಯ ಕಾಂಗ್ರೆಸ್ ಸಮಿತಿಯವರು ಬರೆದ ಪತ್ರವನ್ನು ಓದಲಾಯಿತು. ಇಂಪೀರಿಯಲ್ ಟುಬ್ಯಾಕೊ ಕಂಪನಿಯ ಸರಕುಗಳನ್ನು ಸಾರ್ವಜನಿಕರು ಕೊಳ್ಳುವದಾಗಲೀ ಮಾಡುವದಾಗಲೀ ಉಪಯೋಗಿಸುವದಾಗಲೀ ಮಾಡಬಾರದೆಂದು ಒಂದು ಸಾರ್ವಜನಿಕ ಬಿನ್ನಹವನ್ನು ತೆಗೆಯಲು ಈ ಸಭೆಯು ನಿರ್ಧರಿಸುತ್ತದೆ. ಮತ್ತು ಪ್ರಾಂತದಲ್ಲಿಯ ಅಧೀನ ಕಾಂಗ್ರೆಸ್ ಸಮಿತಿಗಳು ಈ ಸಂಬಂಧದಲ್ಲಿ ವಿಚಾರಮಾಡಬೇಕೆಂದು ವಿನಂತಿಸುತ್ತದೆ.

ಸದಸ್ಯರ ರಾಜಿನಾಮೆ:— ಶ್ರೀಯುತ ಶ್ರಾವಣ ಹಳದೀಪುರಕರ, ರಾಬರ್ಟ ಕೊಯಿಲ್ಹೋ, ಹಾಗೂ ಶ್ರೀ ಎಂ. ಎ. ಪಾಟೀಲ ಇವರು ತಮ್ಮ ಕಾರ್ಯಕಾರಿ ಮಂಡಲದ ಸದಸ್ಯತ್ವಕ್ಕೆ ಕೊಟ್ಟ ರಾಜೀನಾಮೆಯನ್ನು ಸ್ವೀಕರಿಸುತ್ತದೆ.

ಹೊಸ ಸದಸ್ಯರು:— ಪ್ರಾಂತೀಯ ಸತ್ಯಾಗ್ರಹ ಸಮಿತಿಯಲ್ಲಿ ಖಾಲಿಬಿದ್ದ ಸ್ಥಾನಗಳಿಗೆ ಶ್ರೀ ದ. ಪ. ಕರಮಾರಕರ ಮತ್ತು ಇಬ್ರಾಹಿಮ ಸಾಹೇಬ ವೇಣಿ ಇವರನ್ನು ಸಭೆಯು ನೇಮಿಸುತ್ತದೆ.

ಉಪಾಧ್ಯಕ್ಷ ಹಾಗು ಕೋಶಾಧ್ಯಕ್ಷ:— ಪ್ರಾಂತೀಯ ಸತ್ಯಾಗ್ರಹ ಸಮಿತಿಯ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಯು. ಶ್ರೀನಿವಾಸ ಮಲ್ಯರನ್ನೂ ಕೋಶಾಧ್ಯಕ್ಷ ಸ್ಥಾನಕ್ಕೆ ಶ್ರೀ ದ. ಪ. ಕರಮಾರಕರ ಇವರನ್ನೂ ಈ ಸಭೆಯು ಚುನಾಯಿಸುತ್ತದೆ.

ಪ್ರಾಂತೀಯ ಚುನಾವಣಾ ಪಂಚಮಂಡಲ:— ಶ್ರೀ ಎ. ದಾಮೋದರ ಪೈ, ಜಿ. ಸಿದ್ಧಲಿಂಗಯ್ಯ ಹಾಗು ಶ್ರೀ ವೆಂಕಟರಾವ್ ಮುದವೀಡಕರ (ಕಾರ್ಯವಾಹಕ) ಇವರನ್ನು ಪ್ರಾಂತೀಯ ಚುನಾವಣಾ ಪಂಚಮಂಡಲವಾಗಿ ಈ ಸಭೆಯು ಒಮ್ಮತದಿಂದ ನೇಮಿಸುತ್ತದೆ.

ವಿಭಾಗಗಳ ರಚನೆ:— ಅ. ಭಾ. ಕಾಂ. ಸಮಿತಿಯ ಪರಿಪತ್ರಗಳ ಪ್ರಕಾರ ರಚನಾತ್ಮಕ ಕಾರ್ಯಕ್ರಮವನ್ನು ಭರದಿಂದ ಹಾಗು ಶಿಸ್ತಿನಿಂದ ಸಾಗಿಸಲು ಈ ಕೆಳಗೆ ಕಂಡಂತೆ ವಿಭಾಗಗಳನ್ನು ಏರ್ಪಡಿಸಿ ಅವುಗಳ ಜವಾಬ್ದಾರಿಯನ್ನು ವಹಿಸಿಕೊಂಡ ಸದಸ್ಯರಿಗೆ ಎಲ್ಲ ಜಿಲ್ಲಾ ಕಾಂಗ್ರೆಸ್ ಸಮಿತಿಗಳೂ ಕಾಂಗ್ರೆಸ್ ಕಾರ್ಯಕರ್ತರೂ ಪೂರ್ಣ ಸಹಕಾರ ನೀಡಬೇಕಾಗಿ ಈ ಸಭೆಯು ಬಿನ್ನವಿಸಿಕೊಳ್ಳುತ್ತದೆ.

(೧) ಚರಖಾ ವಿಭಾಗ - ಶ್ರೀ ಟಿ. ಎಸ್. ನಾಯಕ. (೨) ಹರಿಜನ ವಿಭಾಗ—ಶ್ರೀ ರಾಮ ಪೋತದಾರ್. (೩) ಪ್ರಚಾರ ವಿಭಾಗ - ಡಾ. ಆರ್. ನಾಗನಗೌಡ. (೪) ಮಹಿಳಾ ವಿಭಾಗ— ಶ್ರೀ ಕೃಷ್ಣಾಬಾಯಿ ಪಂಜೀಕರ್. (೫) ಮುಸ್ಲಿಂ ಸಂಬಂಧ ವಿಭಾಗ — ಕೆ. ವಾಸುದೇವ ಶೆಟ್ಟಿ. (೬) ಸ್ವಯಂಸೇವಕ ವಿಭಾಗ - ಡಾ। ನಾಗನಗೌಡ, ವೀರಪ್ಪ ಡೇರೆ, ಸಿ. ಎಂ. ಪ್ರಾಣಬಾಪ್ಪ ಹಾಗೂ ಕೃಷ್ಣಬಾಯಿ ಪಂಜೀಕರ್. (೭) ಪ್ರಕಟಣಾ ವಿಭಾಗ— ದ. ಪ. ಕರಮರಕರ.

ಸತ್ಯಾಗ್ರಹ ಶಿಬಿರಗಳು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಾಧಾರಣ ಸಭೆಯು ತಾ. ೨೮-೪-೪೦ನೇ ದಿನ ಧಾರವಾಡದಲ್ಲಿ ಸೇರಿ ಪ್ರಾಂತದಲ್ಲಿಯ ಸತ್ಯಾಗ್ರಹ ಶಿಬಿರಗಳನ್ನು ಪ್ರಾರಂಭಿಸಲು ಮತ್ತು ಇತರ ಕಾರ್ಯಗಳನ್ನು ಭರದಿಂದಲೂ ಶಿಸ್ತಿನಿಂದಲೂ ಸಾಗಿಸಲು ಈ ಕೆಳಗೆ ಕಾಣಿಸಿದ ಕಾರ್ಯ ಸಂಘಟನಾ ಸಮಿತಿಯು ನೇಮಿಸಲ್ಪಟ್ಟಿತು.

ಕಾರ್ಯ ಸಂಘಟನಾ ಸಮಿತಿ ಸದಸ್ಯರು:— ೧. ಡಾ। ಆರ್. ನಾಗನಗೌಡ ೨. ಶ್ರೀ ಕೃಷ್ಣಾಬಾಯಿ ಪಂಜೀಕರ. ಮತ್ತು ೩. ಶ್ರೀ ಚನ್ನಬಸಪ್ಪ ಅಂಬಲಿ.

ಈ ಉಪಸಮಿತಿಯವರು ತಾ. ೨೯-೪-೪೦ನೇ ದಿನ ಸೇರಿ ಪ್ರಾಂತದಲ್ಲಿಯ ಕೆಲಸಗಳ ಬಗ್ಗೆ ವಿಚಾರವಿನಿಮಯ ಮಾಡಿದರು. ಹಾಗು ಪ್ರಾಂತದಲ್ಲಿ ಪ್ರತಿಯೊಂದು ಜಿಲ್ಲೆಯವರು ಒಂದೊಂದು ಸತ್ಯಾಗ್ರಹ ಶಿಬಿರವನ್ನು ಪ್ರಾರಂಭಿಸಲು ಪ್ರೋತ್ಸಾಹಿಸಬೇಕೆಂದೂ ಅವು ಯೋಗ್ಯ ರೀತಿಯಿಂದ ನಡೆಯುವಂತೆ ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ಕೊಡಬೇಕೆಂದೂ ಗೊತ್ತಾಯಿತು. ಜಿಲ್ಲಾ ಸಮಿತಿಗಳು ಈ ಕೆಲಸವನ್ನು ಬೇಗನೆ ಕೈಕೊಳ್ಳುವರೆಂದು ಆಶಿಸಲಾಗಿದೆ.

ಪ್ರತಿಯೊಂದು ಜಿಲ್ಲೆಯಲ್ಲಿ ಸಧ್ಯಕ್ಕೆ ಒಂದೇ ಜಿಲ್ಲಾ ಶಿಬಿರವನ್ನು ತೆಗೆಯಲು ಯತ್ನಿಸಬೇಕು. ಆ ಶಿಬಿರದಲ್ಲಿ ಕನಿಷ್ಠ ೪೦ ಸತ್ಯಾಗ್ರಹಿಗಳಿದ್ದು ಅದು ೧೫ ದಿನಗಳ ವರೆಗಾದರೂ ನಡೆಯುವ ಏರ್ಪಾಡು ಮಾಡಬೇಕು, ಎಂದು ಪ್ರ. ಕಾರ್ಯದರ್ಶಿಯವರು ತಿಳಿಸುತ್ತಾರೆ.

ರೂ. 550 ಬಹುಮಾನ

ಸಿದ್ಧ ವಶೀಕರಣ ಕವಚ.

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು. ಬೆಲೆ ತಾಮ್ರದ ಆವರಣದ್ದು ರೂ. 1-15-0 ಮೂರಕ್ಕೆ ರೂ. 5, ಬೆಳ್ಳಿಯ ಆವರಣದ್ದು ರೂ 2-12-0 ಮತ್ತು ಚಿನ್ನದ ಆವರಣದ್ದು ರೂ. 6-8-0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ. ವ್ಯಾಪಾರ, ಪರೀಕ್ಷೆ, ವಹಿವಾಟು, ನೌಕರಿ ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು. ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು. ಬೆಲೆ: ತಾಮ್ರದ ಆವರಣ ರೂ. 1-15-0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ. 2-12-0, ಚಿನ್ನದ ಆವರಣ ರೂ. 6-8-0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್‌ಫುಲ್ ನಂ. 4ಕ್ಕೆ ಕೇಳಿರಿ. ಬೆಲೆ 5-4-0, 5 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್-ಪವರ್‌ಫುಲ್ ನಂ. 5ಕ್ಕೆ ಕೇಳಿರಿ ಬೆಲೆ 7-8-0 ಎಲ್ಲಾ ವಿಷಯುಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ.

ಸೂಚನೆ: ಇದು ಸುಳ್ಳೆಂದು ರುಜುವಡಿಸಿದವರಿಗೆ ರೂ. 550 ಇನಾಮೂ, ಸರಿಯಾಗಿ ಕಾರ್ಯಗೊಳಿಸದಿಲ್ಲವಾದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ಸರಿಯಾಗಿ ಕಾರ್ಯಸಬೇಕಾದರೆ ನೀವೇನಾದರೂ ಕಷ್ಟಪಡಬೇಕೆಂದಿಲ್ಲ.

ANAND SWAMI,
Anand Bhawan, Post Box No. 27 (S.A.M.) Amritsar

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never.
Hard Work?	—	Very Often.
Hard work and THRIFT	—	Always.

RESOURCES OF A CRORE.

Estd: 1906
CANARA BANK LIMITED.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ದೇಶಭಕ್ತರುಗಳು—

ಜಯರಾಮದಾಸ್ ದೌಲತ್‌ರಾಮ್ ★



★ ಶ್ರೀ ಜಯರಾಮದಾಸ್ ದೌಲತ್‌ರಾಮ್:— ಇವರು ಸಿಂಧಪ್ರಾಂತಕ್ಕೆ ಸೇರಿದವರು. ಅವರ ಪ್ರಾಂತದಲ್ಲಿ ಹಿಂದೂ ಜನ ಅತಿ ಕಡಿಮೆ ಪ್ರಮಾಣದಲ್ಲಿದ್ದಾರೆ, ಮುಹಮ್ಮದೀಯರು ಬಹಳ ಹೆಚ್ಚಿಗೆ ಇದ್ದಾರೆ. ಅವರ ಪ್ರಾಬಲ್ಯವೂ ಚೆನ್ನಾಗಿದೆ, ಪ್ರಬಲರಾದವರ ತುಳಿತಕ್ಕೆ ಸಿಕ್ಕಿ ದುರ್ಬಲರಾದವರ ಹಕ್ಕು—ಬಾಧ್ಯತೆಗಳಿಗಾಗಿ ಹೋರಾಡುವುದು ಎಂಥವರಿಗೂ ಸಹಜ ಅದರಲ್ಲೂ ಸ್ವಜಾತಿಯ ವಿಷಯ ಜಯರಾಮದಾಸರು ಜನತೆಯ ಸೇವೆಗೆ ಮೊದಲಿಟ್ಟಾಗ ಸ್ವಾಭಾವಿಕವಾಗಿಯೇ ಕೋಮಿನ ಕೂಟಪ್ರಶ್ನೆ ಪ್ರತ್ಯಕ್ಷವಾಯಿತು. ೧೯೧೬ರಲ್ಲಿ ಆನಿ ಬೆಸೆಂಟಮ್ಮನ ಹೋಂರೂಲು ಲೀಗಿನ ಚಳವಳಿಗೆ ಸೇರಿದಾಗಲೂ, ಮುಂದೆ ಮೂರು ವರ್ಷದ ಮೇಲೆ ಕಾಂಗ್ರೆಸ್ಸಿನ ಮಹಾಸಮುದ್ರದಲ್ಲಿ ಮುಳುಗು ಹಾಕಿದಾಗಲೂ ಜಯರಾಮದಾಸರ ಮನಸ್ಸಿನಲ್ಲಿ ಸಂದೇಹಸಮರ ನಡೆದೇ ಇತ್ತು. ೧೯೨೦ರಿಂದ ೧೯೨೪ರ ವರೆಗೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯತೆಯ ಉಗ್ರಜ್ವಾಲೆ ಉರಿಯಿತು. ಆ ಕಠೋರ ತಪಸ್ಸಿನ ಏಕಾಗ್ರತೆಯಲ್ಲಿ ಗುಪ್ತಗಾಮಿಯಾಗಿ ಹರಿಯುತ್ತಿದ್ದ ಈ ಸಂದೇಹದಲ್ಲಿ ಜಾತಿನಿಷ್ಠೆ ತನ್ನ ಪ್ರಭಾವವನ್ನು ಬೀರಿತು. ೧೯೨೫ರಲ್ಲಿ ಲಾಲಾ ಲಜಪತರಾಯರು ಹಿಂದೂ ಮಹಾಸಭೆಯ ಅಧ್ಯಕ್ಷರಾದರು ಸರಿ ಜಯರಾಮದಾಸರು ಹಿಂದೂ ಮಹಾಸಭೆಯ ಕಾರ್ಯದರ್ಶಿಯಾದರು. ಮೂರು ವರ್ಷ ಹಾಗೆಯೇ ಕಳೆಯಿತು. ಆ ಮೂರು ವರ್ಷಗಳ ಮಥನದಲ್ಲಿ ಜಯರಾಮದಾಸರ 'ಶಸ್ತ್ರದೆಂವಾಯು' ದ ಉತ್ತರ ದೊರೆಯಿತು ಜಾತಿ ತವರು, ರಾಷ್ಟ್ರ ಪತಿಯ ಮನೆ. ಜೀವನದ ವಿರಾಟ್ ಸ್ವರೂಪದಲ್ಲಿ ದೇಶವು ಪ್ರಕೃತಿಯಾದರೆ, ಜಾತಿ-ರಾಷ್ಟ್ರಗಳು ಪುರುಷ-ಪುರುಷೋತ್ತಮರಿದ್ದಂತೆ ಇದು ಅವರು ತಿಳಿದುಕೊಂಡ ಸತ್ಯ ಮೂರನೆಯ ವರ್ಷವೇ ಜಯರಾಮದಾಸರು ಪೂರ್ಣಮನಸ್ಸಿನಿಂದ ಕಾಂಗ್ರೆಸ್ಸಿನಲ್ಲಿ ಸಮರಸರಾದರು.

ಹತ್ತು ಹನ್ನೆರಡು ವರ್ಷ ಎಡೆಬಿಡದೆ ದುಡಿದು ನುರಿತಿದ್ದ ಬಂಟ ಆಳು ೧೯೩೦ರಲ್ಲಿ ಕಾಂಗ್ರೆಸ್ಸಿನಲ್ಲಿ ಪೂರ್ಣಶ್ರದ್ಧೆಯಿಂದ ತೊಡಗಿದೊಡನೆ ಕಡ, ಹೊಣೆಗಾರಿಕೆಯ ಕೆಲಸಗಳು ಅವರ ಪಾಲಿಗೇ ಕೂಡಲೇ ಬಂದುವು. ಕಲ್ಕತ್ತೆಯ ಕಾಂಗ್ರೆಸ್ಸಿನಲ್ಲಿ ಪರದೇಶೀ ವಸ್ತ್ರ ಬಹಿಷ್ಕಾರ ಸಮಿತಿಯೊಂದು ಸರ್ವಾನುಮತಿಯಿಂದ ನಿರ್ಮಿತವಾಯಿತು. ಗಾಂಧಿಜಿಯೇ ಅದಕ್ಕೆ ಅಧ್ಯಕ್ಷರು. ಜಯರಾಮದಾಸರು ಅದರ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಬೇರೆ ಬೇರೆ ಪ್ರಾಂತಗಳಲ್ಲಿ ತಿರುಗಾಡಿ ಸಮಿತಿಯ ಕೆಲಸವನ್ನು ಸಮರ್ಪಕವಾಗಿ ಮಾಡಿದರು. ಕೈಕೊಂಡ ಈ ಕೆಲಸಕ್ಕೆ ಯಾವ ವಿಧವಾದ ಅಡಚಣೆಯೂ ಬರಬಾರದೆಂದು ಮುಂಬಯಿಯ ಶಾಸನಸಭೆಯ ಸದಸ್ಯತ್ವವನ್ನೂ ಬಿಟ್ಟುಕೊಟ್ಟರು. ಎರಡು ವರ್ಷದ ಈ ಅವಿಶ್ರಾಂತ ಪರಿಶ್ರಮದ ಫಲವಾಗಿ ೧೯೩೧ರಲ್ಲಿ ಜಯರಾಮದಾಸರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆರಿಸಲ್ಪಟ್ಟರು. ಜಯರಾಮದಾಸರೆದು ಶಾಂತಸ್ವಭಾವ, ಮಾತು ಸ್ವಲ್ಪ ಕಡಿಮೆಯೇ.

ಈಚೆಗೆ ಕೊಂಚ ಹೆಚ್ಚಾಗಿಯೇ ಬೇನೆ ಬಿದ್ದಿದ್ದರೂ ಮೊದಲಿಂದಲೂ ದೃಢಕಾಯರು. ಧೈರ್ಯಸಾಹಸದಲ್ಲಿ ಅವರ ಸರಿಸಾಟಿಯ ಜನ ಸಿಗುವುದು ಅಪರೂಪ. ದೇಶನಾಯಕರ ಪ್ರಥಮ ಶ್ರೇಣಿಯಲ್ಲಿ ಅವರ ಹಾಗೆ ಸಿಡಿಗುಂಡನ್ನು ಎದುರಿಸಿದವರೂ ಹುಲಿಯ ಬಾಯಲ್ಲಿ ಕೊರಳನ್ನು ಕೊಟ್ಟವರೂ ಮತ್ತೊಬ್ಬರಿಲ್ಲ. ನಿಜವಾಗಿಯೂ ಸಿಡಿಗುಂಡನ್ನು ಎದುರಿಸಿದ್ದಾರೆ ಜಯರಾಮದಾಸರು. ೧೯೩೦ರ ಸತ್ಯಾಗ್ರಹದಲ್ಲಿ ಒಮ್ಮೆ 'ಕೆಲವರು ಸತ್ಯಾಗ್ರಹಿಗಳ ವಿಚಾರಣೆ ನಡೆದಾಗ' ನ್ಯಾಯಸ್ಥಾನದ ಮುಂದೆ ಜನರು ಗುಂಪಾಗಿ ಸೇರಿ ತಮ್ಮ ಭಕ್ತಿಪ್ರದರ್ಶನವನ್ನು ಮಾಡಿದರು ಅಪರಾಧಿಗಳಿಗೆ ತಮ್ಮ ಕಣ್ಣೆದುರೇ ಈ ಗೌರವವೆ? ಅಧಿಕಾರಿಗಳಿಗೆ ಇದು ಸಹನವಾಗಲಿಲ್ಲ. ಹೀಗಾದರೆ ರಾಜತಂತ್ರ ಹೇಗೆ ನಡೆಯಬೇಕು? ಜನರಿಗೆ ಅಲ್ಲಿಂದ ಹೊರಟುಹೋಗಲು ಕಟ್ಟಪ್ಪಣೆಯಾಯಿತು ಜನ ಚದರಲಿಲ್ಲ, ಕದಲಲೇ ಇಲ್ಲ. ಈ ಅವಿಧೇಯತೆಗೆ ಗುಂಡಿನೇಟೇ ಉಪಾಯವೆಂದು ರೋಷದಿಂದ ತೀರ್ಮಾನಿಸಿದರು. ಕೂಡಲೆ ನಿಶ್ಶಸ್ತ್ರರೂ ರಕ್ಷಣೋಪಾಯರಹಿತರೂ ಆದ ಜನರ ಮೇಲೆ ಗುಂಡಿನ ಸುರಿಮಳೆಯಾಯಿತು ಆ ಗುಂಪಿನಲ್ಲಿ ಜಯರಾಮದಾಸರೂ ಇದ್ದರು. ಅವರಿಗೂ ಗುಂಡಿನೇಟು ಬಂದು ತಗುಲಿತು, ಅಲ್ಲಿಯವರೆಗೂ ಅವರೇನು ಸ್ಥಳಬಿಡಲಿಲ್ಲ. ಏಟು ತಗಲಿ ಕೆಳಗೆ ಬಿದ್ದಮೇಲೆ ಹತ್ತಿರವಿದ್ದವರು ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಮತ್ತೊಮ್ಮೆ ಮುಂಬಾಯಿಯಲ್ಲಿ ತಿಲಕರ ಜನ್ಮದಿನೋತ್ಸವಕ್ಕಾಗಿ ನಡೆಯುತ್ತಿದ್ದ ಮೆರವಣಿಗೆಯೊಂದರ ಗುಂಪಿನ ಮೇಲೆ ಪೋಲೀಸರ ಲಾಠೀ ಪ್ರಯೋಗವಾಯಿತು ಸೈಮನ್ ಸಮಿತಿಯ ಬಹಿಷ್ಕಾರದ ಸಂದರ್ಭದಲ್ಲಿ ಲಾಹೋರಿನಲ್ಲಿ ಲಜಪತರಾಯರು ಶಾಂತಚಿತ್ತದಿಂದ ಲಾಠೀ ಪ್ರಯೋಗವನ್ನು ಎದುರಿಸಿದಂತೆ ಜಯರಾಮದಾಸರೂ ಸಾವಧಾನತೆಯಿಂದ ಅದನ್ನು ಎದುರುಗೊಂಡರು ಸತ್ಯಾಗ್ರಹ ಯುದ್ಧದ ಸಂಗ್ರಾಮಸಿಂಹರು ಅವರು

ಮೊನ್ನೆ ಮೊನ್ನೆಯ ರಾಷ್ಟ್ರೀಯ ರಂಗದಲ್ಲಿ ಹೆಸರುವಾಸಿಯಾಗಿದ್ದರೂ ಜಯರಾಮದಾಸರು ೧೯೧೯ರಲ್ಲೇ ೨೦ ವರ್ಷದ ಕೆಳಗೆ ಕಾಂಗ್ರೆಸು ಸೇರಿದರು ಆಗಲೇ ರೌಲೆಟ್ ಶಾಸನ ಸತ್ಯಾಗ್ರಹವನ್ನು ಗಾಂಧಿಜೀ ಮೊದಲು ಮಾಡಿದ್ದು ಜಯರಾಮದಾಸರು ವೃತ್ತಿಯಿಂದ ವಕೀಲರು. ೧೯೧೫ರಲ್ಲಿ ವಕೀಲಿ ಪ್ರಾರಂಭಿಸಿದ್ದರು ನಾಲ್ಕು ವರ್ಷ ಆ ವೃತ್ತಿ ನಡೆಯುಸುವುದರೊಳಗಾಗಿಯೇ ಗಾಂಧಿಜೀ ರಣದುಂದುಭಿ ಕೇಳಬಂತು. ಇನ್ನೂ ಹರೆಯವಾದರೂ ವಕೀಲಿಯನ್ನು ಸುಖಜೀವನವನ್ನೂ ಬಿಟ್ಟುಕೊಟ್ಟು ಸತ್ಯಾಗ್ರಹದಲ್ಲಿ ಧುಮುಕಿದರು, ಮುಖ್ಯಪಾತ್ರವೊಂದನ್ನು ವಹಿಸಿದ್ದರು.

ಅಲ್ಲಿಂದ ಮುಂದೆ ಪತ್ರಿಕಾನಿರ್ವಹಣಕ್ಕೆ ತೊಡಗಿದರು. ದೇಶಭಾಷೆಯಲ್ಲಿ 'ಭಾರತವಾಸಿ' 'ಹಿಂದು' 'ವಂದೇ ಮಾತರಂ' ಪತ್ರಿಕೆಗಳನ್ನು ನಡೆಸಿದರು ೧೯೨೧ರಲ್ಲಿ ಅಸಹಕಾರ ಚಳವಳಿ ಬಂದಾಗ, ಇವರಿಗೆ ಎರಡು ವರ್ಷ ಶಿಕ್ಷೆಯಾಯಿತು. ಅದರ ಪರಿಣಾಮವಾಗಿ ಇವರ ಪತ್ರಿಕಾನಿರ್ವಹಣದ ಕಾರ್ಯ ನಿಂತುಹೋಯಿತಾಗಲಿ ಮುಂದೆ ದೆಹಲಿಯ 'ಹಿಂದುಸ್ಥಾನ್ ಟೈಮ್ಸ್' ಪತ್ರದ ಸಂಪಾದಕರಾಗಿ ಕೆಲಕಾಲ ಕೆಲಸಮಾಡಿದರು. ಜನನಾಯಕರಲ್ಲಿ ವಕೀಲರೇ ಹೆಚ್ಚು, ವಕೀಲರೇ ನಾಯಕರಾಗಬಲ್ಲರು ಎಂಬ ಪ್ರಸಿದ್ಧಿ ಒಂದು ಕಾಲದಲ್ಲಿ ಇತ್ತು ನಮ್ಮ ದೇಶದಲ್ಲಿ ಗಾಂಧೀಯುಗದಲ್ಲಿ ವಕೀಲಿ ಎಂಬುದು ಸನಾತನಿಗಳಲ್ಲಿ ನಟವೃತ್ತಿಯಿದ್ದಂತೆ, ಕೊಂಚ ಗೌಣ ಆದರೆ ಈಗ ಇನ್ನೊಂದು ಸೂತ್ರ ಹುಟ್ಟಿದ ಹಾಗಿ ಇದೆ ಪತ್ರಿಕಾವ್ಯವಸಾಯವು ನಾಯಕರ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ ಮಹಾನಾಯಕರಾ ಚಾರ್ಯರೇ ಆ ಉದ್ಯೋಗದಲ್ಲಿ ಎತ್ತಿದ ಕೈಯಲ್ಲವೇ? ಜಯರಾಮದಾಸರಿಗೆ ಈ ಗುಣವೂ ಇದೆ

ಸೆರೆಮನೆಯ ಸ್ನೇಹವು ಸಾರಿ ಕಾಣಬೇಕಾಯಿತು. ಇವರ ೧೯೩೦ರಲ್ಲಿ ತಿಲಕಜನ್ಮದಿನದ ಸತ್ಯಾಗ್ರಹದಲ್ಲಿ ಜೈಲಿಗೆ ಹೋದವರು ೧೯೩೪ರಲಿ ಮತ್ತೆ ನಡೆದರು ಎರಡು ವರ್ಷಗಳ ಮೇಲೆ ಬಿಡುಗಡೆಯಾದಾಗ ಕಾಂಗ್ರೆಸ್ಸು ಶಾಸನಸಭೆಯ ಕಾರ್ಯಕ್ರಮಗಳನ್ನು ಸ್ವೀಕರಿಸಿತ್ತು ಕೂಡಲೇ ಆ ಕೆಲಸಕ್ಕೆ ಹೆಗಲುಕೊಟ್ಟು ನಿಂತರು ಅಷ್ಟುಹೊತ್ತಿಗೆ ಸಿಂಧಪ್ರಾಂತವು ಮುಂಬಯಿಯಿಂದ ಬೇರೆಯಾಗಿ ಸ್ವತಂತ್ರ ಆಡಳಿತವಾಗಿತ್ತು ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷದ ಮುಂದಾಳುತನ ಸಹಜವಾಗಿಯೇ ಅವರದಾಯಿತು

ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷ ಬಲವಾದುದಲ್ಲ, ಅದಕ್ಕೆ ಸೇರಿದವರ ಸಂಖ್ಯೆ ಬಹಳ ಕಡಮೆ 'ಸಂಖ್ಯಾಬಲಕ್ಕಿಂತ ಏಕಮತ್ಯ ಬಲವೇ ಹಿರಿದು, ಬಲ ಅದರಲ್ಲಿಲ್ಲ ಇವರಲ್ಲಿದೆ' ಎಂಬುದನ್ನು ಸಿಂಧ ಕಾಂಗ್ರೆಸ್ ಪಕ್ಷ ಇಂದು ಹಿಂದೂಸ್ಥಾನಕ್ಕೆ ತೋರುತ್ತಿದೆ ಸಿಂಧ ಮುಸ್ಲಿಮ್ ಪ್ರಾಂತ ಅಲ್ಲಿಯ ಮಂತ್ರಿಮಂಡಳದಲ್ಲಿ ಮುಸ್ಲಿಮರೇ ಮುಖ್ಯರು. ಮುಸ್ಲಿಂ ಲೀಗಿಗೆ ಪಂಜಾಬ-ಬಂಗಾಳಗಳಂತೆ ಆ ಪ್ರಾಂತವೂ ಆಧಾರವಾಗಬೇಕಾದುದು ಸಹಜವೇ ಆಗಿತ್ತು. ಭಾರತ ಮುಸ್ಲಿಮ್ ನಾಯಕರಾದ ಜಿನ್ನಾ ಆ ಬಗ್ಗೆ ಬಹಳ ಪ್ರಯತ್ನ ನಡೆಯಿಸಿದರು ಕರಾಚಿಯಲ್ಲಿ ಮುಖ್ಯವಾದ ಸಂಧಾನ ಸಭೆಗಳನ್ನು ನಡೆಯಿಸಿದರು ಸಿಂಧ ಪ್ರಾಂತದ ಪ್ರಧಾನ ಪೀರ್ ಇಲಾಹಿ ಅಲ್ಲಾಭಕ್ಷರು ಮುಸ್ಲಿಂ ಲೀಗಿನ ಸಂಧಾನ ಜಾಲದಲ್ಲಿ ಹದಿನಾಲ್ಕಾಣೆ ಭಾಗ ಸಿಕ್ಕಿ ಹೋಗಿದ್ದರು. ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷ ಜಾಗರೂಕವಾಗಿರದಿದ್ದರೆ ಗಾಂಭೀರ್ಯದಿಂದ ನಡೆಯದಿದ್ದರೆ ಜಿನ್ನಾರ ಪ್ರಯತ್ನ ಹಣ್ಣಾಗುವುದರಲ್ಲಿ ಸಂದೇಹವೇ ಇರಲಿಲ್ಲ. ತುತ್ತು ಕೈಗೆ ಬಂದಿತ್ತು. ಸಿಂಧ ಕಾಂಗ್ರೆಸಿನ ಪಕ್ಷಕ್ಕೂ ಅದೊಂದು ವಿಷಮ ಪರೀಕ್ಷೆ. ಅಲ್ಲಾಭಕ್ಷರನ್ನು ಕೈ ಬಿಟ್ಟರೆ ಮುಸ್ಲಿಂ ಲೀಗಿಗೆ ಪ್ರಾಮುಖ್ಯವನ್ನು ಆಹುತಿಕೊಟ್ಟಂತೆ, ಅವರ ಕೈ ಹಿಡಿದರೆ ಗವರ್ನರರ ನಿರಂಕುಶತೆಗೆ ಹಾದಿ ಮಾಡಿದಂತೆ ಮೊದಲನೆಯದು ಕನಸಿನಲ್ಲೂ ಸಾಧ್ಯವಿಲ್ಲ. ಎರಡನೆಯದಕ್ಕೆ ಇಷ್ಟವಿಲ್ಲ ಏಕೆಂದರೆ ಅಲ್ಲಾಭಕ್ಷರು ಗವರ್ನರರ ಮುಂದೆ ಇಲ್ಲಿ ಸಂದರ್ಭ ಅತ್ಯಂತ ವಿಷಮವಾದದು. ಸಂಧಾನ ಅತಿ ಸೂಕ್ಷ್ಮವಾದುದು.

ಪತ್ರಿಕೆಗಳಲ್ಲಿ ಕಾಂಗ್ರೆಸ್ಸು ನಾಯಕರಿಗೂ ಅಲ್ಲಾಭಕ್ಷರಿಗೂ ನಡುವೆ ನಡೆದ ಸಂಧಾನದ ಸುದ್ದಿ ಕೆಲದಿನ ಬರುತ್ತಿದ್ದವು ಒಂದೇ ಸಮನೆ ವರ್ಧಾದಲ್ಲಿ ಚರ್ಚೆ ವಿಚಾರಗಳಾದುವು ಕಾಂಗ್ರೆಸ್ಸು ಮಂತ್ರಿಮಂಡಲದ ಕೈ ಹಿಡಿಯಲಿಲ್ಲ ಆದರೆ ಮುಸ್ಲಿಂ ಲೀಗಿನ ಕೈ ಹಿಡಿಯುದಿರಲಿಲ್ಲ ಅಂತೂ ಇಂತೂ ಮಂತ್ರಿಮಂಡಲ ಉಳಿಯಿತು

ಜಯರಾಮದಾಸರ ಸಂಧಾನ ಕೌಶಲ್ಯವೂ ಸಿಂಧ ಕಾಂಗ್ರೆಸ್ ಪಕ್ಷದ ಐಕ್ಯಮತ್ಯಗಳೂ ಆ ಪವಾಡದ ಕಾರಣ ಸಿಂಧ ಮಂತ್ರಿಮಂಡಳ ಕಾಂಗ್ರೆಸ್ ಪಕ್ಷದ್ದಲ್ಲ ಆದರೂ ಕಾಂಗ್ರೆಸ್ಸಿನ ವರ್ಚಸ್ಸು ಅಲ್ಲಿ ಕಾಣುತ್ತದೆ. ಕಾಂಗ್ರೆಸ್ಸಿನ ಪೂರ್ಣ ಕಾರ್ಯಕ್ರಮವನ್ನು ಅವರು ಅನುಸರಿಸುವುದ ಸಾಧ್ಯವಿಲ್ಲದಿದ್ದರೂ ಕಾಂಗ್ರೆಸ್ಸಿನ ಬಗೆ ಸಹಾನುಭೂತಿ ಮಾತ್ರ ಸ್ಪಷ್ಟವಾಗಿಯೇ ಒಡೆದು ಕಾಣುತ್ತದೆ ಜಯರಾಮದಾಸರ ಪುಣ್ಯ ಫಲವಿದು!

ಪರದೇಶೀ ವಸ್ತ್ರದ ಬಹಿಷ್ಕಾರಸಮಿತಿಯ ಕಾರ್ಯದರ್ಶಿಯಾಗಿ ಕೆಲಸಮಾಡಿದಾಗಿನಿಂದ ಗಾಂಧೀಜಿಗೆ ಇವರ ಮೇಲೆ ವಿಶ್ವಾಸ ಹೆಚ್ಚು ೧೯೩೦ರಲ್ಲಿ ಮಹಾನಾಯಕರೆಲ್ಲ ಸೆರೆಮನೆಯಲ್ಲಿದ್ದಾಗ ತೇಜಬಹದ್ದೂರ್ ಸಪ್ರೂ ಮತ್ತು ಜಯಕರರು ಶಾಂತಿಸಂಧಾನ ನಡೆಯಿಸಿದರಷ್ಟೆ. ಯರವಾಡ ಸೆರೆಮನೆಯಲ್ಲಿ ಗಾಂಧಿಜಿಯೊಡನೆ ಅವರು ಆ ಮಾತುಕತೆ ನಡೆಸಿದಾಗ, ಮುಖ್ಯರಾದ ಕೆಲವರು ನಾಯಕರು ಗಾಂಧೀಜಿಯ ಆಲೋಚನಾ ಮಂಡಳಿಯಾಗಿದ್ದರು ಜಯರಾಮದಾಸರಿಗೂ ಅದರಲ್ಲಿ ಸ್ಥಳವಿತ್ತು ಈ ಮಾತುಕತೆಗಳ ಪರಿಣಾಮವೇ ಗಾಂಧೀ ಇರ್ವಿನ್ ಒಪ್ಪಂದ ೧೯೩೧ರಲ್ಲಿ ಮತ್ತೆ ಜಯರಾಮದಾಸರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದರು ಕರುವ್ವಾಯ ವರ್ಕಿಂಗ್ ಕಮಿಟಿಯ ಸದಸ್ಯರಾದರು. ಈಗಲೂ ಆಗಿದ್ದಾರೆ

ಜಯರಾಮದಾಸರ ಪ್ರಾಯ ಅಷ್ಟೇನೂ ಮೀರಿಲ್ಲ ಶಕ್ತಿಯೂ ಉಡುಗಿಲ್ಲ. ಭಾರತದ ರಾಜಕಾರಣದಲ್ಲಿ ಮುಂದೆ ಅವರು ಮಾಡಬಹುದಾದ ಮಾಡಬೇಕಾದ ಸೇವೆ ಇನ್ನೂ ಮಹತ್ತರವಾದುದಾಗಲಿ ಎಂದು ಹಾರೈಸಲು ಬೇಕಾದಷ್ಟು ಅವಕಾಶವಿದೆ. ('ಜಯಂತಿ'ಯಲ್ಲಿ ಪ್ರಕಟಿಸ ಲ್ಪಡಲಿರುವದರಿಂದ)

ನಮ್ಮನ್ನಗಲಿದ, ಕಾಮತರು

ನಾನು ಹೈಸ್ಕೂಲಿನ ತರಗತಿಗಳಲ್ಲಿ ಓದುತ್ತಿರುವಾಗಲೇ—ಅದು ಬಹುಹಿಂದಿನ ಮಾತು—ಶ್ರೀಯುತ ಎಂ. ಎನ್. ಕಾಮತರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಜೀವನದ ಕಾರಣ ಪುರುಷರೆಂದು ಹೆಸರುವಾಸಿಯಾಗಿದ್ದರು ಅವರ ವಿಷಯವಾಗಿ ನನ್ನಲ್ಲಿ ಇತರರ ಹೇಳಿಕೆಯಿಂದ ಉಂಟಾದ ಅಭಿಮಾನ ಅವರ ಪರಿಚಯದಿಂದ ಇನ್ನಷ್ಟು ಹೆಚ್ಚಾಯಿತು. ಅಂತಹ ವ್ಯಕ್ತಿತ್ವ ಅವರದು ಉತ್ಸಾಹದ ಉಸಿರಿನಂತೆಯೂ ಹಾಸ್ಯದ ಜೀವಾಳದಂತೆಯೂ ಇದ್ದ ಅವರು ಎಲ್ಲಿ ಇದ್ದರೂ ಎಲ್ಲಿ ಹೋದರೂ ಸ್ಫೂರ್ತಿದಾಯಕವೂ ಸಂತೋಷಕರವೂ ಆದ ವಾತಾವರಣವನ್ನೇ ಸೃಷ್ಟಿಸುತ್ತಿದ್ದರು ಇದರಿಂದ ಮಂಗಳೂರಿನ ಕನ್ನಡ ಉತ್ಸಾಹೀ ತರುಣರು ಅವರನ್ನು ಎಲ್ಲೆಲ್ಲಿಯೂ ಹಿಂಬಾಲಿಸಿ ಅವರ ಮುಂದಾಳುತನವನ್ನು ಸ್ವೀಕರಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ ಶ್ರೀ॥ ಕಾಮತರು ಮಾತ್ರ ತಾವು ಒಬ್ಬ ಮುಂದಾಳುಗಳೆಂದೆನಿಸದೆ ತರುಣರೊಡನೆ ತರುಣರಾಗಿ ಮಕ್ಕಳೊಡನೆ ಮಗುವಾಗಿ ಅವರಲ್ಲಿ ಉತ್ಸಾಹವನ್ನೂ ಸ್ಫೂರ್ತಿಯನ್ನೂ ತುಂಬುತ್ತಿದ್ದರು

ಶ್ರೀ॥ ಕಾಮತರ ಸಹವಾಸವೆಂದರೆ ಅದೊಂದು ಅಪೂರ್ವ ಅನುಭವವೇ ಆಗಿತ್ತು ಅವರೊಡನೆ ಇದ್ದಾಗ ಯಾರಿಗೂ ಕೃತ್ರಿಮತೆಯ ಗೌರವವನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಅವರ ಸಹವಾಸದಲ್ಲಿ ಎಂತಹ ಗಂಭೀರನೂ ಎರಡೇ ನಿಮಿಷಗಳೊಳಗೆ ತನ್ನ ವ್ಯಕ್ತಿತ್ವವನ್ನು ಮರೆತು ಹಾಸ್ಯರಸದಿಂದ ಕೂಡಿದ ಅವರ ವಾಕ್ಚಾತುರ್ಯಕ್ಕೆ ಮನಸೋತು ಎಳೆಯ ಮಗುವಿನಂತೆ ಗಹಗಹಿಸಿ ನಗುತ್ತಿದ್ದ ಇಂತಹ ಅಪಾರವಾದ ಶಕ್ತಿ ಶ್ರೀ॥ ಕಾಮತರಿಗೆ ಇತ್ತು ದೊಡ್ಡವರಾಗಲಿ, ಸಣ್ಣವರಾಗಲಿ, ಧನಾಢ್ಯರಾಗಲಿ, ಬಡವರಾಗಲಿ ಎಲ್ಲರ ಕೂಡೆಯೂ ಶ್ರೀ॥ ಕಾಮತರ ವರ್ತನ ಒಂದೇ ರೀತಿಯಾಗಿತ್ತು. ಇದರಿಂದ ಶ್ರೀ॥ ಕಾಮತರು ಎಲ್ಲರ ಪ್ರೇಮ ಗೌರವ ಆತ್ಮೀಯತೆಗಳನ್ನು ಸಂಪಾದಿಸಿದ್ದರು ಅವರಲ್ಲಿದ್ದ ಯಾವ ಗುಣ ನಮ್ಮ ಮನಸ್ಸಿನಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತಿತ್ತೆಂದು ಹೇಳುವುದು ಸುಲಭವಲ್ಲ. ಅವರಲ್ಲಿದ್ದ ಹಾಸ್ಯದ ಭಂಡಾರವೊ, ಕನ್ನಡವೆನ್ನಿಸಿಕೊಳ್ಳುವ ಪ್ರತಿಯೊಂದು ವಿಷಯದಲ್ಲಿ ಅವರು ತೋರಿಸುತ್ತಿದ್ದ ಸ್ಫೂರ್ತಿಯೊ ಅಥವಾ ಅವರಲ್ಲಿ ಸಹಜವಾಗಿ ನೆಲೆಗೊಂಡ ಆತ್ಮೀಯತೆಯೊ ಇವುಗಳಲ್ಲಿ ಯಾವುದೆಂದು ಹೇಳುವುದು ಕಷ್ಟ. ಅದು ಹೇಗೂ ಇರಲಿ ಶ್ರೀ॥ ಕಾಮತರ ಜೀವನ ಚರಿತ್ರೆಯೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ್ಗೆ ಮೂವತ್ತು ವರ್ಷಗಳಿಂದ ವೃದ್ಧಿಗೊಳ್ಳುತ್ತಿರುವ ಕನ್ನಡ ಸಾಹಿತ್ಯದ ಚರಿತ್ರೆಯೇ ಆಗಿದೆ. ಅವರ ನಿಕಟ ಸಂಬಂಧ ಇಟ್ಟುಕೊಳ್ಳದ್ದ ಯಾವ ವಾರಪತ್ರಿಕೆಯಾಗಲಿ ಮಾಸಪತ್ರಿಕೆಯಾಗಲಿ ನಮ್ಮ ಜಿಲ್ಲೆಯಲ್ಲಿ ಇಲ್ಲ ಅವರಲ್ಲಿ ಹುರುಪುಗೊಂಡಿರದ ಯಾವ ತರುಣ ಸಂಘವೂ ಇಲ್ಲ ಅವರೇ ಮಂಗಳೂರಿನ ಮಿತ್ರಮಂಡಳಿಯ ಸ್ಥಾಪಕರೆಂದು ನನ್ನ ನೆನಪು ಅದರ ಸಂಚಾಲಕರಾಗಿ ಅದನ್ನು ಒಂದು ವ್ಯವಸ್ಥಿತ ಸ್ಥಿತಿಗೆ ತಂದವರೂ ಅವರೇ ಆಗಿರುವರು ಅವರು ಬರೆದಿರುವ ವಾರಪುಸ್ತಕಗಳ ಲೆಕ್ಕವನ್ನು ಇಡುವ ಕೆಲಸ ಕೂಡಾ ಅಸಾಧ್ಯ! ಅವರು ಮಕ್ಕಳಿಗಾಗಿ ಬರೆದಿರುವ ಪದ್ಯಗಳು ದಿವಂಗತ ಪಂಜೆ ಮಂಗೇಶರಾಯರ ವಿಶೇಷ ಆದರಕ್ಕೆ ಪಾತ್ರವಾಗಿದ್ದವು ಅವುಗಳಲ್ಲಿ ಕೆಲವನ್ನು ಹಾಡಿ ಹೇಳುವುದರಲ್ಲಿ ಪಂಜೆ ಮಂಗೇಶರಾಯರಿಗೆ ಬೇಸರವೆಂಬುದೇ ಇರುತ್ತಿರಲಿಲ್ಲ ಇಷ್ಟು ಮಾತ್ರವಲ್ಲ ಶ್ರೀ॥ ಕಾಮತರ ಪ್ರತಿಭೆ ಅನೇಕ ಸಣ್ಣ ಕಥೆಗಳಲ್ಲಿಯೂ ಏಕಾಂಕ ನಾಟಕಗಳಲ್ಲಿಯೂ ಒಡೆದು ಕಾಣುತ್ತಿತ್ತು ತನ್ನ ಅಧ್ಯಾಪಕ ವೃತ್ತಿಯಲ್ಲಿಯೂ ಅವರು ಒಂದು ವಿಶೇಷವಾದ ಕೀರ್ತಿಯನ್ನು ಗಳಿಸಿದ್ದರು ಯಾವ ವಿಷಯವನ್ನಾದರೂ ಅತ್ಯಂತ ವಿನೋದಜನಕವಾಗಿ ಹೇಳುವ ಚಾತುರ್ಯ ಅವರಿಗಿದ್ದುದರಿಂದ ಅವರ ಕ್ಲಾಸುಗಳನ್ನು ತಪ್ಪಿಸಿಕೊಂಡು ಹೋಗುವ ವಿದ್ಯಾರ್ಥಿಗಳೇ ಇರುತ್ತಿರಲಿಲ್ಲ ತರಗತಿಗಳಲ್ಲಿ ಅವರು ತನ್ನ ರೀತಿಯ ವಿಷಯವನ್ನು ಬಿಟ್ಟು ಕೇವಲ ಭೂಗೋಳದಂತಹ ವಿಷಯವನ್ನು ಅವರು ಮಾತನಾಡಲು ಪ್ರಾರಂಭಿಸಿದರೆ ವಿದ್ಯಾರ್ಥಿಗಳ ವಾತಾವರಣ ಸಮ್ಮಂಧ ಹಳಬರ ... ರಬಿ ... ದ ಕೇಳ ವಂತಿತ್ತು

ಇಂದ ಅಂತಹ ಪ್ರತಿಭಾಶಾಲಿಯಾದ ಜೀವರತ್ನವನ್ನು ಕಳೆದುಕೊಂಡ ನಮ್ಮ ದಕ್ಷಿಣ ಕನ್ನಡಜಿಲ್ಲೆ ಬಹಳ ಬಡವಾಗಿದೆ ಅವರ ಯೋಗ್ಯತೆ ಸ್ಥಾನಮಾನಾದಿಗಳಿಂದ ಕೂಡಿರುವ ಇನ್ನೊಂದು ವ್ಯಕ್ತಿ ನಮಗೆ ಸಿಗುವುದು ದುರ್ಲಭ ಇಡಿಯ ಕನ್ನಡನಾಡು ಅಪಾರವಾದ ಯೋಗ್ಯತೆಯನ್ನು ಗಮನಿಸುವ ಮೊದಲೇ ಅವರು ಅದೃಶ್ಯವಾದುದು ಒಂದು ಅತಿ ದಾರುಣವಾದ ಸಂಗತಿಯಾಗಿದೆ.

ಪ ರಮಾನಂದ

"ಕನ್ನಡ ನುಡಿ"
ಮೇ ೪

ದುಃಖಸೂಚನೆಃ—ದ. ಕ ಜಿಲ್ಲಾ ಪತ್ರಿಕಾ ವ್ಯವಸಾಯಿಗಳ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಕಳೆದ ಆದಿತ್ಯವಾರ ಶ್ರೀ. ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರುಗ್ಯಿ ಸಂಘದ ಸ್ಥಾಪಕರೂ, ಕಾರ್ಯದರ್ಶಿಗಳೂ ಆಗಿದ್ದ "ಹಿಂದೂ" ಪತ್ರಿಕಾ ಪ್ರತಿನಿಧಿ ಶ್ರೀ. ಟಿ. ಆರ್. ರಘುನಾಥರಾಯರ ಅಕಾಲ ನಿಧನದ ಕುರಿತಾದ ಒಂದು ದುಃಖಸೂಚಕ ಠರಾವೂ, ಕನ್ನಡ ಸಾಹಿತ್ಯಾಚಾರ್ಯರೂ, ಕನ್ನಡ ಏಕಾಂಕ ನಾಟಕಗಳ ಮೂಲ ಪುರುಷರೂ ಆದ ದಿವಂಗತ ಎಂ. ಎನ್. ಕಾಮತರಿಂದಾಗಿ ಕನ್ನಡ ಸಾಹಿತ್ಯ ಹಾಗೂ ಕನ್ನಡ ಪತ್ರಿಕಾ ಪ್ರಪಂಚಕ್ಕಾದ ನಷ್ಟದ ಕುರಿತಾಗಿ ಮತ್ತೊಂದು ಸಂತಾಪ ಸೂಚಕ ಠರಾವೂ ಮಂಜೂರಾದುವು.

THE

BANK OF MANGALORE LTD.,

MANGALORE

ESTD 1931

Branches - Mudabidri & Padubidri.

Fixed Deposits will be received at following rates of interest.

For	3 months	$3\frac{1}{2}$%
„	6 „	4%
„	12 „	5%
„	24 „ & upwards	$5\frac{1}{2}$%

Interest Payable Quarterly

Savings Bank deposit $3\frac{1}{2}$% on daily balances.

kinds of banking business transacted



ನೋಟಗಳು

"ದುರಭಿಮಾನ, ನಿಯಮೋಲ್ಲಂಘನೆಗಳು ಇಂದು ಬಂಗಾಳದ ಹೆಸರನ್ನು ಕೆಡಿಸಿವೆ. ದೊಡ್ಡದೊಡ್ಡ ಮುಖಂಡರೆಂಬವರೇ, ಇಂದು ಪ್ರಾಂತ್ಯದ ಕೀರ್ತಿಗೆ ಕುಂದು ತರುತ್ತಾರೆ. ಅವರು ಸಮರ ಹೂಡಲು ಆಗ್ರಹಗೊಂಡವರೆಂದು ಹೇಳುತ್ತಾರೆ. ಆದರೆ ಸಮರ ಹೂಡಲು ಸಂಘಟನೆ ಬೇಕೆಂಬುದು ಅವರಿಗೆ ತಿಳಿದಿಲ್ಲ. ಅವರು ಹೊರಗಿನ ಶತ್ರುವಿನೊಡನೆ ಕಾದಾಡುದಿಲ್ಲ, ನಮ್ಮ ನಮ್ಮೊಳಗೇ ಜಗಳ ಹೂಡಿದ್ದಾರೆ ಇಂದಿನ ಈ ಘಾತುಕತೆನವನ್ನು ಬಿಟ್ಟು, ಬಂಗಾಳವು ರಾಷ್ಟ್ರಕ್ಕೆ ಹೆಚ್ಚಿನ ಕಾಣಿಕೆ ಸಲ್ಲಿಸಬೇಕಾಗಿದೆ" ಹೀಗೆಂದು ಮನಕರಗುವ ರೀತಿಯಲ್ಲಿ ಬಂಗಾಳದ ಇಂದಿನ ಧುರೀಣರ ವರ್ತನೆಯ ಕುರಿತು ಕಠೋರರಾಗಿ ಕವೀಂದ್ರ ರವೀಂದ್ರರು ತಮ್ಮ ಅಭಿಪ್ರಾಯ ಇತ್ತಿರುವರು!

—ಅವರು ಅಂತಹ ಪರಿಸ್ಥಿತಿಗೆ ಕಾರಣರು ಯಾರೆಂದು ಹೆಸರು ಹೇಳಿ ತಿಳಿಸಲಿಲ್ಲ. ಆದರ ಅದನ್ನು ಊಹಿಸಲು ನಮಗೆ ಏನೂ ಪ್ರಯಾಸವಿಲ್ಲ!

◆

ಅಮೇರಿಕದ ಜನಮತವು ಕಾಂಗ್ರೆಸಿಗೆ ಸಹಾಯವಾಗಿದೆ, ಹಾಗಾಗಿ ಪಾಶ್ಚಾತ್ಯ ದೇಶಗಳ ಅಭಿಮತವನ್ನು ಭಾರತದ ಕಡೆಗೆ ಒಲಿಸಲು ಕಾಂಗ್ರೆಸಿನವರು ಪಂಡಿತ ನೆಹರುಗಳನ್ನೂ, ರಾಜಾಜಿಯವರನ್ನೂ ಅಮೇರಿಕಕ್ಕೆ ಪ್ರಚಾರಕ್ಕಾಗಿ ಕಳುಹಿಸುವ ಯೋಚನೆಯಲ್ಲಿರುವರೆಂದು ಅಮೃತ ಬಜಾರ್ ಪತ್ರಿಕೆಯ ದಿಲ್ಲಿ ಸುದ್ದಿಗಾರನ ಒಂದು ವಾರ್ತೆ!

—ಭಾಷಣ ಪ್ರವಾಸದಲ್ಲಿ ಪಂಡಿತ ನೆಹರುಗಳು ಸಹಜವಾಗಿ ಇಷ್ಟವುಳ್ಳವರಾಗಿರಬಹುದು! ಆದರೆ ರಾಜಾಜಿಯವರು ಇಂತಹ ಪ್ರವಾಸಕ್ಕೆ ಸಮ್ಮತಿಸುವರಾಗಿ ಊಹಿಸಲಾಗುವುದಿಲ್ಲ. ಭಾರತದಲ್ಲಿ ನಿಜವಾದ ಶಕ್ತಿಯಿದ್ದರೆ, ನಮ್ಮದು ನ್ಯಾಯವಾಗಿದ್ದರೆ, ಹೊರಗೆ ಹೋಗಿ ಪ್ರಚಾರಮಾಡುವುದು ಅವಶ್ಯವಿಲ್ಲವೆಂದು ರಾಜಾಜಿಯವರು ಹಿಂದೊಮ್ಮೆ ಹೇಳಿದ್ದರು. ಭಾರತದ ಚಳವಳಿವು ಜಗತ್ತಿನ ಪ್ರಜಾ ಸ್ವಾತಂತ್ರ್ಯಕ್ಕೆಂದು ಸ್ಪಷ್ಟವಾಗಿರುವಾಗ, ಸ್ವತಃ ಅಮೇರಿಕವೇ ತನ್ನ ಪ್ರತಿನಿಧಿಗಳನ್ನು ಭಾರತಕ್ಕೆ ಕಳುಹಿಸಿ ಸಂಗತಿಗಳನ್ನು ತಿಳಿಕೊಳ್ಳಲು ಆತುರಪಡಬಹುದು.

—ಅನ್ಯರಲ್ಲಿ 'ನನ್ನ ನ್ಯಾಯವನ್ನು ಸಾರಿ ಭೋಧಿಸುವದಕ್ಕಿಂತ, ಅವರೇ ನನ್ನಲ್ಲಿಗೆ ಬಂದು ನ್ಯಾಯವೇನೆಂದು ತಿಳಿದುಕೊಳ್ಳುವಂತೆ ಮಾಡುವುದು ಗೌರವದ ಮಾರ್ಗವಾಗಿದೆ.

—ಹೇಗಿದ್ದರೂ, ಇಂದಿನ ಈ ಸಂದಿಗ್ಧ ಕಾಲದಲ್ಲಿ ನೆಹರು ಮತ್ತು ರಾಜಾಜಿಯಂತಹವರನ್ನು ಭಾರತವು ದೂರ ದೇಶಕ್ಕೆ ಕಳುಹಿಸಿಕೊಡುವುದು ಅಸಂಭವವಾಗಿ ತೋರುತ್ತದೆ

◆

ಅಲ್ಲಾಬಾದಿನ 'ಕಿತಾಬಿಸ್ತಾನ್' ಪುಸ್ತಕ ಪ್ರಕಾಶಕರಿಂದ ೧,೭೭೯ ಪ್ರತಿ ಪುಸ್ತಕಗಳನ್ನು ಪೋಲೀಸರು ಜಪ್ತಿಮಾಡಿ ತೆಗೆದುಕೊಂಡು ಹೋದರು! ಅವುಗಳು ಹೆಚ್ಚಾಗಿ ಸಮತಾವಾದದ ಕುರಿತು ದೇಶೀಯ ವಿದೇಶೀಯ ಪಂಡಿತರಿಂದ ಬರೆಯಲ್ಪಟ್ಟ ಪುಸ್ತಕಗಳಾಗಿದ್ದುವು ಅವು ನಿಷಿದ್ಧ ಪುಸ್ತಕಗಳಾಗಿರಲಿಲ್ಲ ಆದರೂ ಸಮತಾವಾದದ ಸಾಹಿತ್ಯವೇ ನಿಷಿದ್ಧ ಸಾಹಿತ್ಯವೆಂಬ ಆರೋಪಣೆಯಿಂದ ಪೋಲೀಸರು ಆ ಪುಸ್ತಕಗಳನ್ನು ವಶಮಾಡಿ ಕಿತಾಬಿಸ್ತಾನ್ ಪುಸ್ತಕ ಪ್ರಕಾಶಕರಿಗೆ ಬಹಳ ನಷ್ಟವನ್ನು ಉಂಟುಮಾಡಿದರ

ಈ ಕುರಿತು ಪಂಡಿತ ನೆಹರುಗಳು ಉಗ್ರರಾಗಿ ಒಂದು ಪತ್ರಿಕಾ ಹೇಳಿಕೆಯನ್ನು ಹೊರಡಿಸಿದ್ದಾರೆ ಅದರಲ್ಲಿ ತಾನು ಒಬ್ಬ ರಾಜನೀತಿಜ್ಞನಾಗಿ ಪ್ರಜಾತಂತ್ರವಾದಿಯಾಗಿ ಹಾಗೂ ಒಬ್ಬ ಗ್ರಂಥಕರ್ತನಾಗಿ ಸರಕಾರದ ಈ ವರ್ತನೆಯನ್ನು ಖಂಡಿಸ ಪುದಾಗಿ ಸಾರಿದ್ದಾರೆ

—ಸಮತಾವಾದದ ಸಾಹಿತ್ಯವು ನಿಷಿದ್ಧ ಸಾಹಿತ್ಯವಾಗಿದ್ದರೆ, ಸಮತಾವಾದಿಯಾಗಿ ನಾನೂ ಸರಕಾರಕ್ಕೆ ನಿಷಿದ್ಧನಾಗಿರುವೆನೆಂದ ಅವರು ಸ್ಪಷ್ಟಪಡಿಸಿದ್ದಾರೆ

◆

. ನಾನು ಈಗ ಸೆರೆಮನೆಯೊಳಗಿದ್ದೆ, ಸರಕಾರದ ಪ್ರತಿನಿಧಿಗಳು ನನ್ನ ಬಳಿ ಬಂದರು, ಕಾಂಗ್ರೆಸಿನೊಡನೆ ನಾನು ನನ್ನ ಸಂಬಂಧವನ್ನು ಕಡಿದು ಹಾಕಿದರೆ ನನ್ನ ಬಿಡುಗಡೆ ಮಾಡುವುದಾಗಿ ಅವರು ಭರವಸೆ ಕೊಟ್ಟರು, ಅವರು ನನಗೆ ಆಶೆ ಹುಟ್ಟಿಸಿದರು. ಆದರೆ, ಅವರ ಯಾವ ಬಿನ್ನಹಗಳೂ ನನ್ನಲ್ಲಿ ಫಲಿಸಲಿಲ್ಲ ಅವರು ಬಂದ ಹಾಗೆ ಹಿಂದೆ ಹೋದರು ನಾನು ಸೆರೆಮನೆಯ ಭದ್ರವಾದ ಗುಡಿಯಲ್ಲಿ ಕಾಂಗ್ರೆಸಿನ ಸಮಾರಾಧನೆ ಮಾಡಿದೆ' ಹೀಗೆಂದರು ಗಡಿನಾಡಿನ ಗಾಂಧಿ ಅಬ್ದುಲ್ ಗಫರ್ ಖಾನರು ಮೊನ್ನೆ ಪೇಶಾವರದಲಿ ಜರಗಿದ ಪುಸ್ತಾಕ್ತರ ದಿನಾಚರಣೆಯಂದ

ನಾವು ಕಾಂಗ್ರೆಸನ್ನು ಮರೆಯಬಹುದೆ? ಅದ ಕೊಟ್ಟ ಸಹಾಯವನ್ನು ಕೃತಘ್ನತೆಯಿಂದ ದೂರ ಬಹುದೆ? ನಾವು ಜಾತಿಯಿಂದ ಪಠಾಣರು ಕಾಂಗ್ರೆಸ್ಸಿಗೆ ನಮ್ಮದು ... ಇದ ಅಧೀರತೆ ...

ಆ ದಿನದ ಭಾಷಣವನ್ನು ಅವರ ಹೀಗೆಂದು ಕೊನೆಗೊಳಿಸಿದರು

'ಜವಾಬ್ದಾರಿಯುಳ್ಳ ... ರಾಜನೀತಿಜ್ಞರ ಮಾತಗಳಿಂದ ... ಷರು ಇನ್ನೂ ಸಾಮ್ರಾಜ್ಯಶಾಹೀ ಬುದ್ಧಿಯನ್ನು ಬಿಟ್ಟುಬಿಡಲಿಲ್ಲವೆಂದೂ ... ದ ಸ್ವಾತಂತ್ರ್ಯವನ್ನು ... ರೀತಿ ... ಅವರು ... ದಲಾಯಿಸಲಿಲ್ಲವೆಂದೂ ನಾನು ತಿಳಿಯುತ್ತೇನೆ

◆

ಕಾಶ್ಮೀರದ ಲಂಚವಿರುದ್ಧ ಸಂಘದವರು ಅಲ್ಲಿನ ಸರಕಾರಕ್ಕೆ ಕುತೂಹಲಜನಕವಾದ ಒಂದು ಸೂಚನೆಯನ್ನು ಕೊಟ್ಟಿದ್ದಾರೆ

ಪ್ರತಿಯೊಬ್ಬ ಸರಕಾರೀ ಆಫೀಸರನೂ ಕೆಲಸಕ್ಕೆ ಸೇರುವಾಗ, ಹಾಗೂ ಪ್ರತಿ ವರ್ಷದ ಆದಿಯಲ್ಲಿ ತಾನು ಲಂಚ ತಗೆದುಕೊಳ್ಳುವುದಿಲ್ಲವೆಂಬ ಪ್ರತಿಜ್ಞೆಯನ್ನು ಮಾಡಬೇಕ ಸರಕಾರವು ಈ ಸೂಚನೆಯನ್ನು ಮಂಜೂರು ಮಾಡಬೇಕ

ಹೀಗಿದೆ ಅವರ ಸೂಚನೆ. ಈ ಸೂಚನೆಯು ಮಂಜೂರಾದಸಭೆಗೆ ಕಾಶ್ಮೀರದ ಚೀಫ್ ಜಸ್ಟಿಸ್ ಖಾನ್ ಬಹದೂರ್ ಅಬ್ದುಲ್ ಕಯೂಮರೇ ಅಧ್ಯಕ್ಷರಾಗಿದ್ದರು

ಇಂತಹ ಪ್ರತಿಜ್ಞೆಗಳಿಂದ ಏನಾದರೂ ಪ್ರಯೋಜನವಾಗುವುದೆಂದು ತಿಳಿಯಲಾಗುವುದಿಲ್ಲ ಮರ್ಯಾದೆ ಇಲ್ಲದವನು ಪ್ರತಿಜ್ಞೆ ತೆಗೆದುಕೊಂಡರೂ ತಪ್ಪಿ ನಡೆಯುವನು. ಮರ್ಯಾದೆ ಇರುವವನು ಪ್ರತಿಜ್ಞೆತೆಗೆದುಕೊಳ್ಳುವ ಅವಶ್ಯಕತೆಯೇ ಇಲ್ಲ" ಹೀಗೆಂದು ಸರಕಾರವು ಆ ಕುರಿತು ತನ್ನ ಅಭಿಪ್ರಾಯವಿತ್ತಿರುವುದು!

ಸರಕಾರೀ ಆಫೀಸರರಲ್ಲಿ ಮರ್ಯಾದೆ ಇಲ್ಲದವರೂ, ಲಂಚಕೋರರೂ ಇರ ವರೆಂಬುದು ನಿಜವಾಗಿ ಆಕ್ಷೇಪಕರವಾದ ವಿಷಯವಲ್ಲವೆ?

ಆದರೆ, ಸರಕಾರವು ಮರ್ಯಾದೆ ಇದ್ದವರಿಗೆ ಮಾತ್ರ ಕೆಲಸಕೊಡುವಂತೆ ಏನಾದರೂ ಏರ್ಪಾಡು ಮಾಡಿದರೆ ಒಳ್ಳೆಯದು

ಸಾದರ ಸ್ವೀಕಾರ.

ಎಕ್ಸ್‌ರೇ—ಲೇಖಕರು ಯು. ಆರ್. ಆಚಾರ್ಯ, ಲೆಕ್ಚರರ್, ಲಾಯಲಾ ಕಾಲೇಜ್ ಮದ್ರಾಸು.

ದಶಾವತಾರ ಸ್ತೋತ್ರ—ಪ್ರಕಾಶಕರು ಪಿ. ವಿ. ಉಪಾಧ್ಯಾಯ ಉಡುಪಿ ಸ್ಟೋರ್ಸ್ ಎ. ಎಸ್. ಸ್ಟ್ರೀಟ್ ಬೆಂಗಳೂರು ಸಿಟಿ.

ಶೀತ ಮತ್ತು ಕೆಮ್ಮನ್ನು ಎಂದೂ ನಿರ್ಲಕ್ಷಿಸದಿರಿರಿ!

ಗಂಟಲು, ಎದೆ ಮತ್ತು ಶ್ವಾಸಕೋಶಗಳ ಬಾಧೆಗಳಿಗೆ ಪೆಪ್ಸ್ ಯೋಗ್ಯ ಔಷಧಿ ಎಲ್ಲಾ ಕಡೆಗಳಲ್ಲಿಯೂ ಬಾಟ್ಲಿಗೆ ರೂ 1—0—0 ರಂತೆ ಮಾರಲ್ಪಡುತ್ತದೆ

ಪೆಪ್ಸನ್ನುಪಯೋಗಿಸಿರಿ

PEPS

ಶ್ವಾಸನೀಯ ಮಾತ್ರೆಗಳು

ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಇದರಿಂದ ಚಳಿಜ್ವರ ಮತ್ತು ಕೆಮ್ಮು ಇಲ್ಲದಂ, ಹಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಸಿನೆಮಾ ಪುಟ

ರವೀಂದ್ರರ ಕಥೆಯನ್ನು ಹಾಲಿವುಡ್ಡಿನಲ್ಲಿ ಚಿತ್ರ ತೆಗೆಯುವರು

ಹೋಲಿವುಡ್ಡಿನಲ್ಲಿ ಇಂದು ಭಾರತೀಯ ಲೇಖಕರಿಂದ ಬರೆಯಲಾದ ಭಾರತೀಯ ಸಮಾಜ ಚಿತ್ರವನ್ನು ಬಣ್ಣಿಸುವ ಕಥೆಗಳ ಚಿತ್ರವನ್ನು ತೆಗೆವ ಏರ್ಪಾಡು ಆಗುತ್ತಿದೆ

ಡಾಕ್ಟರ್ ರವೀಂದ್ರನಾಥ ಠಾಗೂರರ ಸುಪ್ರಸಿದ್ಧ ಕಾದಂಬರಿಯಾದ "ಗೋರಾ"ವನ್ನು ಚಿತ್ರತೆಗೆವ ಏರ್ಪಾಡು ಆಗುತ್ತಿರುವುದಾಗಿ ತಿಳಿದಿದೆ. ಟ್ವೆಂಟಿಯತ್ ಸೆಂಚುರಿ ಫೋಕ್ಸ್ ಇದರ ಚಿತ್ರೀಕರಣದ ಹಕ್ಕನ್ನು ಪಡಕೊಂಡಿರುವುದೆಂದು ಸುದ್ದಿಯಿದೆ

ಶಾಂತಾರಾಮರ ಪಡೋಶಿ

ಪ್ರಭಾತ ನಿದರ್ಶಕ ಶಾಂತಾರಾಮರ ಮುಂದಿನ ಚಿತ್ರವಾದ ಪಡೋಶಿಯು ಕೆಮರಾದ ಮುಂದು ಹೋಗಿದೆ ಶಾಂತಾರಾಮರು ಕರಾಚಿಗೆ ಇತ್ತೀಚೆಗೆ ಹೋಗಿ ಬಂದರು ಆ ಕುರಿತು ಹಲವು ಸುದ್ದಿಗಳು ಹುಟ್ಟಿವೆ ಒಂದು ಹುಡುಗಿಯನ್ನು ಅವರು ಪಡೋಶಿಯಲ್ಲಿ ನಟಿಸಲು ಕರೆತರಲು ಅಲ್ಲಿಗೆ ಹೋಗಿರುವರೆಂದು ಮರ್ಾಠೆ ಗಜಾನನ ಜಾಗೀರ್ದಾರ ಮತ್ತು ಮಜಾರ್ ಖಾನ್ ಇವರಲ್ಲಿ ಇಬ್ಬರು ನೆರೆಕರೆಯವರ ಪಾತ್ರಗಳನ್ನು ಅಭಿನಯಿಸುವರು

ಸುಮಂಗಲಿ

ವಾಹಿನೀ ಚಿತ್ರಕಂಪೆನಿಯ ಶುಭ ಸುಮಂಗಲಿ ಎಂಬ ಚಿತ್ರವು ಸಿದ್ಧವಾಗಿದೆ ಹೃದಯ ದ್ರಾವಕವಾದ ಮತ್ತು ಹಾಸ್ಯಭರಿತವಾದ ಅನೇಕ ಘಟನೆಗಳಿಂದ ಸುಮಂಗಲಿಯು ಹಲವು ಮಂದಿಯನ್ನು ಆಕರ್ಷಿಸುವುದಾಗಿ ತಿಳಿದಿದೆ

ವಂದೇ ಮಾತರಂ

ನಿರ್ದೇಶಕ ಬಿ. ಯನ್ ರೆಡ್ಡಿಯವರ ವಂದೇ ಮಾತರಂ ಚಿತ್ರವು ಇಂದು ಬಹು ಜನಪ್ರಿಯವಾಗಿರುವುದು.

ಬಾಬುರಾವ್ ಪೈಂಟರ್

ಈ ಹೆಸರಾದ ನಿರ್ದೇಶಕರು ತಿರುಗಿ ನಿರ್ದೇಶಕತ್ವಕ್ಕೆ ಕೈಹಚ್ಚಿರುವರೆಂದು ತಿಳಿದಿದೆ. ಪ್ರಭಾತದ ಶಾಂತಾರಾಮರ ಗುರುವಾಗಿದ್ದ ಇವರು ಕೊಲ್ಹಾಪುರದಲ್ಲಿ ಅಭಿನವ ಪಿಕ್ಚರ್ಸ್ ಕಂಪೆನಿಯ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಮಧ್ಯೆ ಅಸ್ವಸ್ಥದಿಂದ ಮಲಗಿದ್ದರು. ಈಗ ತಿರಿಗಿ ಗುಣೋನ್ಮುಖರಾಗಿ ಬಂದಿರುವರೆಂದು ತಿಳಿಯುತ್ತದೆ. ಅಚ್ಛೇ ದೇವ್ ಎಂಬ ಚಿತ್ರವು ಈಗ ಅವರ ನಿರ್ದೇಶಕತ್ವದಿಂದ ಸಿದ್ಧವಾಗುತ್ತದೆ.

ಉದಯಶಂಕರ ನೃತ್ಯಕೇಂದ್ರ

ದಿ ಸೆಂಟರ್ ಸ್ಕೂಲ್ ಓಫ್ ಡಾನ್ಸಿಂಗ್ ಎಂಬ ನರ್ತನ ಕೇಂದ್ರವು ೧೯೪೦ನೇ ಮಾರ್ಚ ೩೦. ರಂದು ಪ್ರಾರಂಭವಾಯಿತು ಭರತ ನಾಟ್ಯ ಮತ್ತು ಕಥಕ್ಕಳಿಗಳ ಅಭ್ಯಾಸಕ್ಕಾಗಿ ಉದಯಶಂಕರರ ಹೊರತು ಶ್ರೀ ಗುರು ನಂಬೂದರಿ ಮತ್ತು ಗುರು ಕಂಡಪ್ಪ ಪಿಳ್ಳೆ ಇವರು ಅಧ್ಯಾಪಕ ವರ್ಗದಲ್ಲಿ ಸೇರಿರುವರು ಉಸ್ತಾದ್ ಅಲ್ಲಾಉದ್ದೀನ ಖಾನರು ಅಧ್ಯಾಪಕ ವರ್ಗದಲ್ಲಿ ಸೇರಿ ಮುಂದೆ ಸಂಗೀತ ಶಿಕ್ಷಣವೂ ಅಲ್ಲಿ ಕೊಡಲಾಗುವುದೆಂದು ತಿಳಿದಿದೆ

ಮೇ ೧೫ರಿಂದ ಜೂಲ್ಯ ೬ರ ತನಕ ಬೇಸಿಗೆಯ ಶಿಕ್ಷಣ ಶಿಬಿರಗಳನ್ನು ತೆರೆದಿರುವರು ಬಹು ಮಂದಿ ವಿದ್ಯಾರ್ಥಿಗಳು ಈಗಲೇ ಬಂದಿರುವರು

ಶ್ರೀಮಾನ್ ಉದಯ ಶಂಕರರು ಬೇಗನೇ ತನ್ನ ನರ್ತನ ಮಂಡಳಿದೊಡನೆ ಅಖಿಲಭಾರತ ಸಂಚಾರವನ್ನು ಕೈಕೊಳ್ಳಲಿರುವರೆಂದು ತಿಳಿದಿದೆ

ಭೂಕೈಲಾಸ

ಭೂಕೈಲಾಸ ಚಿತ್ರದ ತೆಲುಗು ಅನುವಾದವು ತಯಾರಾಗುತ್ತಿದೆ ಎಂ. ವಿ ಸುಬ್ಬಯ್ಯ ನಾಯುಡು ರಾವಣ ಪಾತ್ರವನ್ನು ನಾಗೇಂದ್ರರಾವ್ ನಾರದ ಪಾತ್ರವನ್ನು ವಹಿಸುವರು

ಸಬರಮತಿ ಹರಿಜನ ಆಶ್ರಮ

ಬೊಂಬಾಯಿ ಗವರ್ನರ್ ಆಡ್ವೈಜರ್‌ರ ಭೇಟಿ

ಬೊಂಬಾಯಿ ಗವರ್ನರರಿಗೆ ಆಡ್ವೈಜರಾಗಿರುವ ಮಿ. ಹೆಚ್ ಎಫ್ ನೈಟ್‌ರವರು ಮೇ ೩ರಲ್ಲಿ ಸಬರಮತಿ ಹರಿಜನ ಆಶ್ರಮಕ್ಕೆ ಭೇಟಿಯಿತ್ತರು, ಬೊಂಬಾಯಿ ಸರ್ಕಾರದ ಡೆವಲಪ್‌ಮೆಂಟ್ ಇಲಾಖೆಯವರು ಇಲ್ಲಿ ನಡೆಸುತ್ತಿರುವ ಹರಿಜನ ಶಿಕ್ಷಣ ತರಗತಿಗಳನ್ನು ಪರಾಂಬರಿಸಿದರು ಹರಿಜನ ಆಶ್ರಮದ ಎಲ್ಲಾ ಭಾಗಗಳಿಗೂ ಸಂದರ್ಶಿಸುವರು ವಿದ್ಯಾದಾನಮಾಡುವ ಸಂಸ್ಥೆಯನ್ನು ಭೇಟಿಯಿತ್ತರು ಅಖಿಲ ಭಾರತ ಹರಿಜನ ಸಂಘದವರು ನಡೆಸುತ್ತಿರುವ ಒಂದು ತಯಾರಿ ಕೈಗಾರಿಕೆ ಸಂಸ್ಥೆಯನ್ನು ಬೊಂಬಾಯಿ ಸರಕಾರದವರು ಈ ವರ್ಷದಲ್ಲಿ ಹತ್ತುಸಾವಿರ ರೂಪಾಯಿಗಳ ಸಹಾಯ ನಿಧಿಯನ್ನು ಕೊಟ್ಟಿರುತ್ತಾರೆ

ಸರ್ವಾಧಿಕಾರಿಗಳ ಶತ ಪ್ರಯತ್ನ

ಯುರೋಪಿನಲ್ಲಿ ತಮ್ಮ ಪ್ರತಿಷ್ಠೆಗೆ ಯಾವ ಲೋಪವೂ ಚ್ಯುತಿಯೂ ಬರಬಾರದೆಂಬುದ ಕ್ಕೋಸ್ಕರ ಹಿಟ್ಲರ ಮತ್ತು ಸ್ಟಾಲೀನ ಕೂಡಿ ಒಂದು ಹೊಸ ಯೋಜನೆಯನ್ನು ತಯಾರಿಸಿದ್ದಾರೆ. ಅವರು ಕಪ್ಪುಸಮುದ್ರವನ್ನು ಬಾಲ್ಟಿಕ ಸಮುದ್ರದೊಂದಿಗೆ ಒಂದು ಕಾಲುವೆಯ ಮೂಲಕ ಜೋಡಿಸಲಿಕ್ಕೆ ಆಲೋಚಿಸಿರುವರು. ಅವರ ಈ ಆಲೋಚನೆಯು ಕಾರ್ಯರೂಪಕ್ಕೆ ಬಂದರೆ ಯೂರೋಪದಲ್ಲಿ ಈ ಸರ್ವಾಧಿಕಾರಿಗಳ ಬಲವು ಹೆಚ್ಚುವದರಲ್ಲಿ ಸಂದೇಹವಿಲ್ಲ

ವಾರ್ಸೋ ನಗರದಿಂದ ೫೦ ಮೈಲು ನೈಋತ್ಯಕ್ಕಿರುವ ಉಬ್ಬಿನ ಎಂಬಲ್ಲಿಂದ ಈ ಕಾಲುವೆಯು ಆರಂಭವಾಗುತ್ತದೆ. ಉದ್ದದ ಈ ಕಾಲುವೆಯು ಒಂದು ಕೊನೆಯು ಉಸ್ತಲದ ಬಗ್ ಎಂಬ ಉಪನದಿಯನ್ನೂ ಇನ್ನೊಂದು ಕೊನೆಯು ಪೀಪರದ ಪ್ರಿಪೆಟಿ ಎಂಬ ಉಪನದಿಯನ್ನು ಕೂಡುತ್ತದೆ ವಿಸ್ತುಲಾನದಿಯು ಬಾಲ್ಟಿಕವನ್ನೂ ನೀಪರ ನದಿಯು ಕಪ್ಪುಸಮುದ್ರವನ್ನೂ ಸೇರಿಕೊಳ್ಳುತ್ತವೆ ಆದ್ದರಿಂದ ಈ ಒಂದು ಕಾಲುವೆ ಆಗಿಬಿಟ್ಟರೆ ಕಪ್ಪುಸಮುದ್ರದಿಂದ ಬಾಲ್ಟಿಕ ಸಮುದ್ರದ ತನಕ ವ್ಯಾಪಾರ ವಹಿವಾಟು ಮತ್ತು ಸೈನ್ಯ ಸರಂಜಾಮುಗಳನ್ನು ಸಾಗಿಸಲಿಕ್ಕೆ ಒಳ್ಳೇ ಅನುಕೂಲವಾಗುತ್ತದೆ

ರುಮೇನಿಯ ದೋರಣೆ

ಈ ಕಾಲುವೆಯನ್ನು ಕಡಿಯುವುದರಿಂದ ರುಮೇನಿಯಕ್ಕೆ ಅತ್ತಹೋದರೆ ದರಿ ಇತ್ತಹೋದರೆ ನದಿ ಎಂಬಂತೆ ಉಭಯ ಸಂಕಟಕ್ಕೆ ಕಾರಣವಾಗುವದು. ಅದು ಕಾಲುವೆಯ ಸರಿಯಲಿಕ್ಕೆ ವಿರೋಧಮಾಡಿ ಮಿತ್ರರಾಷ್ಟ್ರಗಳ ಮನೋನುಕೂಲವಾಗಿ ನಡೆದರೆ, ಜರ್ಮನಿರಶ್ಯಗಳನ್ನು ಕರೆದು ಯುದ್ಧಕ್ಕೆ ಕರೆದಂತಾಗುವುದು ಅದಕ್ಕೆ ರುಮೇನಿಯ ಸಿದ್ಧವಿಲ್ಲ ಹಾಗೆಂದು ಬ್ರಿಟಿಷರ ಸ್ನೇಹವನ್ನು ಬಿಡಲಿಕ್ಕೂ ಅದಕ್ಕೆ ಇಚ್ಛೆಯಿಲ್ಲ ಯಾಕೆಂದರೆ ಬ್ರಿಟಿಷರ ವಿರೋಧಮಾಡಿದರೆ ಅವರು ಕಪ್ಪುಸಮುದ್ರದ ಮೂಲಕ ಒಂದು ದೊಡ್ಡ ಸೇನೆಯನ್ನೇ ರುಮಾನಿಯದ ಮೇಲೆ ದಾಡಾಯಿಸ ಬಹುದು ಬ್ರಿಟಿಷರು ಅದಕ್ಕೇ ಸಿದ್ಧರಾಗಿಯೇ ಐದು ಲಕ್ಷದ ಸೇನೆಯನ್ನು ಪೂರ್ವ ಯುರೋಪಿನ ಶಸ್ತ್ರಾಗಾರಗಳಲ್ಲಿ ಸಂಗ್ರಹಿಸಿ ಇಟ್ಟಿದೆ

ಮಗಳನ್ನೇ ಮೋಹಿಸಿದ ದುರಾತ್ಮ!

ಸಮಾಜ ದ್ರೋಹಿಗೆ ಕಠಿಣ ಶಿಕ್ಷೆ

"ಜನ್ಮದಾತನಾದ ತಂದೆಯೇ ಮಗಳ ಮೇಲೆ ಅತ್ಯಾಚಾರ ನಡೆಸಿದ ಅಸಹ್ಯ ಕೃತ್ಯವಿದು ಅಪಾದಿತನ ದುಷ್ಟ ಮೃಗದಂತೆ ಮಗಳ ಮಾನಭಂಗ ಮಾಡಿದ್ದಾನೆ ಈ ಹೇಯವಾದ ಕೃತ್ಯ ಮಾಡಿಯೂ, ಅಪಾದಿತನ ತನ್ನ ಮಗಳನ್ನು ಮಗಳಲ್ಲವೆನ್ನುತ್ತಾನೆ. ಇಂತಹ ದುರ್ಜನನಿಗೆ ಕ್ರೂರವಾದ ಶಿಕ್ಷೆಯನ್ನು ವಿಧಿಸಬೇಕು" ಎಂಬುದಾಗಿ ಹೇಳಿ ಬರ್ಮಾ ದೇಶದ ಬಸ್ಸೀನಿನ ಮೆಜಿಸ್ಟ್ರೇಟರು ಮಾಂಗ್ ಶೀನ್ ... ವರ್ಷದ ಬರ್ಮೀಯನಿಗೆ ಏಳು ವರ್ಷಗಳ ಕಠಿಣ ಕಾರಾಗ್ರಹ ವಾಸವನ್ನು ಮತ್ತು ... ಛಡೀ ಪೆಟ್ಟುಗಳನ್ನೂ ವಿಧಿಸಿದರು.

ಈ ಮೊಕದ್ದಮೆಯ ವಿವರಗಳು ಈ ರೀತಿ ಇವೆ:— ಮಾಂಗ್ ಶೀನ್ ಎಂಬಾತನಿಗೆ ಎರಡು ವರ್ಷಗಳ ಹಿಂದೆ ಪತ್ನಿ ವಿಯೋಗವಾಯಿತು ಅಂದಿನಿಂದ ತಂದೆಯ ರಕ್ಷಣೆಯಲ್ಲಿಯೇ ಇದ್ದಳು. ಯುವತಿಯು ರೂಪಲಾವಣ್ಯಗಳಲ್ಲಿ ರತಿ ಸಮಾನಳಾಗಿದ್ದರಿಂದ ತಂದೆಗೆ ಮಗಳ ಮೇಲೆಯೇ ಚಪಲ ಹುಟ್ಟಿತು ಒಂದು ದಿನ ಬಲಾತ್ಕಾರವಾಗಿ ಆಕೆಯನ್ನು ಕೆಡಿಸಿದ ಈ ಅವಮಾನವನ್ನು ಸಹಿಸಲಾರದೆ ಮಗಳು ಅಫೀಮನ್ನು ತಿಂದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು, ತಂದೆಯ ಮಾನಭಂಗದ ... ಹೇಗೋ ಸಂಬಂಧೀಕರಿಗೆ ತಿಳಿದು ಅವರು ಈ ವೃತ್ತಾಂತವನ್ನು ಪೋಲೀಸಿನವರಿಗೆ ತಿಳಿಸಿಬಿಟ್ಟರು. ಮೇಜಿಸ್ಟ್ರೇಟರು ಆಪಾದಿತನನು ಕಠಿಣ ಶಿಕ್ಷೆಗೆ ಗುರಿಪಡಿಸಿ "ಮಗಳ ಮೇಲೆ ತಂದೆಯು ಈ ರೀತಿ ಮಾಡುವುದು ಅತ್ಯಂತಹೀನವಾದ ಕೃತ್ಯ. ಇಂತಹ ಮನುಷ್ಯನು ಸಮಾಜದಲ್ಲಿರಲು ಕೂಡ ಅನರ್ಹನು. ಅವನು ದುಷ್ಟ ಮೃಗಗಳೊಂದಿಗೆ ವಾಸಮಾಡಬೇಕು. ಮತ್ತು ಹುಲ್ಲನ್ನು ತಿನ್ನುವಂತೆ ಮಾಡಬೇಕು" ಎಂದು ಬರೆದಿರುವರು.



ವಿಜ್ಞಾನಯುಗ

ಸೈನಿಕರಿಗೆ ರಕ್ತಪ್ರಯೋಗ

ಯುದ್ಧದಲ್ಲಿ ಸಾವಿರಾರು ಮಂದಿ ಗಾಯಗೊಳ್ಳುತ್ತಾರೆ. ಕನ್ನೆತ್ತರು ಚೆಲ್ಲುತ್ತದೆ. ಚೈತನವು ಅಡಗುತ್ತದೆ. ಬಿದ್ದವರು ಮತ್ತೆ ಏಳುವ ಬದುಕುವ ಆಸೆಯಿಲ್ಲ. ಇಂತಹ ಸೈನಿಕರಿಗೆ ರಕ್ತವನ್ನು ಇಂಜಕ್ಷನ್ ಕೊಡುತ್ತಾರೆ.

ತುಂಬಿಸಿದ ರಕ್ತದ ಬಾಟ್ಲಿಗಳನ್ನು ಸಂಗ್ರಾಮ ಭೂಮಿಯಲ್ಲಿ ಇಟ್ಟಿರುತ್ತಾರೆ. ಸೈನಿಕರನ್ನು ಶುಶ್ರೂಷೆಮಾಡಲು ವೈದ್ಯರೂ ಡಾಕ್ಟರರೂ ದಾದಿಗಳು ಅಲ್ಲಿಗೆ ಹೋಗಿರುತ್ತಾರೆ. ಸೈನಿಕರು ರಕ್ತವು ಕಡಿಮೆಯಾಗಿ ನಿಶ್ಚೇತನವಾಗಿ ಬಿದ್ದಿರುವಾಗ ಆತುಂಬಿಸಿದ ರಕ್ತವನ್ನು ತೆಗೆದು ಅವರ ಶರೀರಕ್ಕೆ ಸೇರಿಸಲಾಗುತ್ತದೆ. ಸೈನಿಕರಿಗೆ ರಕ್ತವನ್ನೊದಗಿಸುವ ಈ ಕಾರ್ಯಕ್ಕಾಗಿ ಕಳೆದ ವರ್ಷ ಲಂಡನಿನಲ್ಲಿ ಬಹಳ ಸಿದ್ಧತೆಗಳನ್ನು ಮಾಡಿದ್ದರು. ನಾಲ್ಕು ಡಿಪೋಗಳನ್ನು ತೆರೆದರು. ಅದರಲ್ಲಿ ನೆತ್ತರು ಹಿಂಡುವ, ಕೂಡಿಸಿಡುವ ಎಲ್ಲಾ ಸಾಮಗ್ರಿಗಳನ್ನು ತಂದರಿಸಿದರು. ಕಾರ್ಯಗಳು ಭರದಿಂದ ಸಾಗಿದವು. ಯುದ್ಧ ಸುರುವಾದ ಹೊತ್ತಿಗೆ ೬೩,೦೮೦ ಜನರ ರಕ್ತ ಹಿಂಡಿದೆಯೆಂದು ತಿಳಿದಿದೆ. ಅವರ ಆರೋಗ್ಯವನ್ನು ಮೊದಲಿನಂತೆಯೇ ಇರಿಸಲು ಬೇಕಾದ ಎಲ್ಲಾ ಸಿದ್ಧತೆಗಳೂ ಮಾಡಲಾಗಿದೆ.

ಒಬ್ಬೊಬ್ಬರನ್ನಾಗಿ ಕರೆವರು. ಐದು ನಿಮಿಷದೊಳಗೆ ಅವರ ರಕ್ತ ಹೀರುವುದಾಗುತ್ತದೆ. ಬೆಚ್ಚಗಿನ ಸೋಫದಲ್ಲಿ ಮಲಗಿಸುತ್ತಾರೆ. ಮಲಗಿಸುವುದಕ್ಕಿಂತ ಮೊದಲು ಒಂದು ಲೋಟ ಬಿಸಿ ಪಾನೀಯ! ಅವರಿಗೆ ಯಾವುದು ಇಷ್ಟವೋ ಅಂತಹುದು!

ಹಲವರು ತಮ್ಮ ರಕ್ತವನ್ನು ಇನ್ನೊಮ್ಮೆ ಹಿಂಡ ಬೇಕೆಂದು ಕೇಳ ಕೊಂಡರಂತೆ! ರಕ್ತ ಹೋದಷ್ಟು ಅವರಿಗೆ ಸುಖವೆನಿಸಿತಂತೆ.

ಚಿಕಾಗೋಪಟ್ಟಣದಲ್ಲಿ ರಕ್ತದ ಭ್ಯಾಂಕೊಂದು ಸ್ಥಾಪಿತವಾಗಿರುವುದು. ಅದರಲ್ಲಿ ಯಾವನಿಗೆ ಯಾವ ತರದ ರಕ್ತ ಬೇಕೆಂದಾದರೆ ತಕ್ಷಣ ಒದಗಿಸಿ ಕೊಡುವ ಏರ್ಪಾಡಿದೆ. ಹಲವು ಡಾಕ್ಟರರು ಇದರಿಂದ ಬಹಳ ರೋಗಿಗಳನ್ನು ಗುಣಪಡಿಸಿದರೆಂದು ತಿಳಿದಿದೆ. ಚರ್ಮದ ವ್ಯಾಪಾರದಂತೆ ರಕ್ತದ ವ್ಯಾಪಾರವು ನಡೆಯುತ್ತದೆ.

ಗುರಿತಪ್ಪದ ಟೊರ್ಪೆಡೊ

ಯುದ್ಧಕಾಲದಲ್ಲಿ ಒಂದು ಪಕ್ಷದವರು ಇನ್ನೊಂದು ಪಕ್ಷದವರ ನಗರ ಪೇಟೆಗಳ ಮೇಲೆ ವಿಮಾನಗಳ ಮೂಲಕ ಟೋರ್ಪೆಡೊ ಎಂಬ ಗುಂಡುಗಳನ್ನು ತೆಗೆದುಕೊಂಡು ಬಿಸಾಡುವರು. ಅವು ನೆಲಕ್ಕೆ ಬೀಳುವಾಗ ಸಿಡಿದು ಕಟ್ಟಡ ಮೊದಲಾದುವುಗಳೂ ಜನಜೀವಿಗಳೂ ನಾಶವಾಗುವವು. ಈಗ ವಾಯು ವಿಮಾನಗಳಿಂದ ಟೋರ್ಪೆಡೊಗಳನ್ನು ನಿಶ್ಚಿತ ಸ್ಥಾನಗಳ ಮೇಲೆ ಸಿಡಿಯುವಂತೆ ಇಡಬೇಕಾದರೆ ಒಳ್ಳೇ ಗುರಿ ಇರಬೇಕಾಗುತ್ತದೆ. ಗುರಿತಪ್ಪದ ಟೊರ್ಪೆಡೊ ಎಲ್ಲಿಯಾದರೂ ಬಿದ್ದು ಸಿಡಿಯುವುದು ನಿಜವಾದರೂ, ಅದರಿಂದ ಶತ್ರುಪಕ್ಷದವರಿಗೆ ವಿಶೇಷಹಾನಿಯಾಗುವುದು. ಆದ್ದರಿಂದ ಬ್ರಿಟಿಷ ವೈಜ್ಞಾನಿಕರು ಗುರಿತಪ್ಪದ ಟೊರ್ಪೆಡೋಗಳನ್ನು ಕಂಡುಹಿಡಿದಿದ್ದಾರೆ. ಬ್ರಿಟಿಷ ವಿಮಾನದಳದವರು ಬರ್ಲಿನ್ ನಗರವನ್ನು ಗುರಿಯಿಟ್ಟು ಟೊರ್ಪೆಡೊ ಬಿಡಲು ಆಲೋಚಿಸಿದ್ದಾರೆ ಎನ್ನೋಣ. ಆಗ ಬರ್ಲೀನನಗರದಿಂದ ನೂರಾರು ಮೈಲುಗಳ ದೂರದಲ್ಲಿ ಬ್ರಿಟಿಷರ ಒಂದು ವಿಮಾನವು ಹೋಗಿ ನವೀನ ಜಾತಿಯ ಒಂದು ಟೊರ್ಪೆಡೋ ಬಿಡುವರು. ಅದು ಆಗಲೇ ಸಿಡಿಯುವದಿಲ್ಲ. ಬರ್ಲಿನನಗರವು ಸಮೀಪವಾಗುವತನಕ ಆಕಾಶದಲ್ಲಿ ತೇಲಾಡಿ ಹಾರುತ್ತಾ ಇರುವದು. ಬರ್ಲಿನನಗರದಮೇಲಕ್ಕೆ ಅದು ಬಂದಿತೆಂದರೆ ಆಗ ಅದರೊಳಗಿದ್ದ ಒಂದು ಉಪಕರಣದ ಮೇಲೆ ಪ್ರಕಾಶಕಿರಣಗಳ ವಿಚಿತ್ರ ಪರಿಣಾಮಉಂಟಾಗಿ, ಅದು ನಗರದಕಡೆಗೆ ಆಕರ್ಷಿತವಾಗುವುದು. ಸಿಡಿದು ಬರ್ಲಿನನಗರವನ್ನು ಧೂಳೀಪಟ ಮಾಡುವದು. ನಿರ್ದಿಷ್ಟಗುರಿಯ ಮೇಲಿದ್ದ ಪ್ರಕಾಶಕಿರಣಗಳು ಈಟೊರ್ಪೆಡೋಗಳ ಮೇಲೆ ಬಿದ್ದಹೊರತು ಅವು ಭೂಮಿಗೆ ಇಳಿದು ಸಿಡಿಯುವದೇ ಇಲ್ಲ. ಇಂಥ ಬಹುಭಯಾನಕ ಟೊರ್ಪೆಡೊಗಳನ್ನು ಬ್ರಿಟಿಷರು ತಯಾರಿಸಿದ್ದಾರೆ.

ಯುದ್ಧಕಾಲದಲ್ಲಿ ಉಪಯುಕ್ತವಾದ ವಿಚಿತ್ರ ಮೋಟರು.

ಯುದ್ಧಕಾಲದಲ್ಲಿ ವಿಶೇಷ ಉಪಯೋಗಕ್ಕೆ ಬರುವಂತೆ ಬ್ರಿಟಿಷರು ಒಂದು ವಿಚಿತ್ರ ಮೋಟರ ಗಾಡಿಯನ್ನು ಕಂಡು ಹಿಡಿದಿದ್ದಾರೆ. ಇಂದು ಬೆಂಕಿ ಬಿದ್ದಾಗ ಆ ಬೆಂಕಿಯನ್ನು ಪರಿಣಾಮಕಾರಿಯಾಗಿ ನೊಂದಿಸಬಲ್ಲುದು. ವಿಷದ ಗಾಳಿಯನ್ನು ದೂರಕ್ಕೆ ಓಡಿಸುವುದು ಮತ್ತು ನಗರ ಬೀದಿಗಳನ್ನು ಗುಡಿಸಿ, ನೀರು ಹಾಕಿ ಸ್ವಚ್ಛ ಮಾಡುವದು. ಈ ಮೂರು ಕಾರ್ಯಗಳಿಗೆ ಅಗತ್ಯವುಳ್ಳ ಉಪಕರಣಗಳು ಈ ಮೋಟರಿಗೆ ಜೋಡಿಸಲ್ಪಟ್ಟಿವೆ. ಬೀದಿಗಳನ್ನು ತೊಳೆಯಲಿಕ್ಕೆ ೩,೫೦೦ ಗೆಲನು ನೀರು ಹಿಡಿಯುವ ಟ್ಯಾಂಕುಗಳೂ, ಗ್ಯಾಸುಗಳನ್ನು ದೂರಹಾರಿಸಲಿಕ್ಕೆ ಕೊಳವೆಗಳೂ, ಬೆಂಕಿನೊಂದಿಸಲಿಕ್ಕೆ ಪಿಚಕಾರಿಗಳೂ ಅದರಲ್ಲಿ ಇರುತ್ತವೆ ಇದರ ಟ್ಯಾಂಕುಗಳಿಂದ ನೀರು ೭೦ ಅಡಿಗಳ ದೂರದ ತನಕ ೩೦ ಅಡಿ ಎತ್ತರಕ್ಕೆ ಸುತ್ತಲೂ ಹಾರುತ್ತಿರುವದು.

ಒಡೆಯದ ಮುರಿಯದ ಟ್ಯಾಂಕು.

ಯೂರೋಪಿನಲ್ಲಿ ಯುದ್ಧಪ್ರಾರಂಭವಾದುದರಿಂದ ಅಲ್ಲಿ ದಿನನಿತ್ಯ ಯುದ್ಧ ಕಾರ್ಯವನ್ನು ಮುಂದೊತ್ತಲಿಕ್ಕೆ ಸಹಾಯಕವಾದ ವಿಚಿತ್ರ ಶೋಧನೆಗಳು ಆಗುತ್ತಲಿರುವವು. ಈಗ ರೈಲು ಮೋಟರು ಮೊದಲಾದವುಗಳ ಮೇಲಿರುವ ಎಣ್ಣೆ, ನೀರಿನ ಟ್ಯಾಂಕುಗಳು ಗುಂಡಿನ ಪೆಟ್ಟಿಗೆ ಒಡೆಯುವವು, ಅಥವಾ ಭಾರಬಿದ್ದು ಮುದುಡಿಹೋಗುವವು. ವೈಜ್ಞಾನಿಕರು ಅನೇಕ ಪರೀಕ್ಷೆಗಳನ್ನು ನಡೆಸಿ, ಬೆಂಕಿಹಿಡಿಯದ, ಒಡೆಯದ ಮತ್ತು ಮುರುಟಿಹೋಗದ ಟ್ಯಾಂಕುಗಳ ರಚನಾ ವಿಧವನ್ನು ಕಂಡುಕೊಂಡಿದ್ದಾರೆ. ಈ ಟ್ಯಾಂಕುಗಳು ಗುಂಡಿನ ಏಟಿನಿಂದ ತೂತುಬಿದ್ದರೂ, ಆ ತೂತುಗಳು ಕ್ಷಣಾರ್ಧದೊಳಗೆ ತುಂಬಿಕೊಳ್ಳುವವು. ಇದು ಹೇಗಾಗುತ್ತದೆಂಬುದನ್ನು ಶೋಧಕರು ಬಹಳ ರಹಸ್ಯವಾಗಿಟ್ಟುಕೊಂಡಿದ್ದಾರೆ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ
ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

GONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ

ಎಲ್ಲಾ ತರ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithalbhai Patel Road, BOMABY.

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್, ಮತ್ತು ಡ್ರಗ್ಗಿಸ್ಟ್ಸ್,
ಹಂಪನಕಟ್ಟಾ, ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾರೀಕು 13-5-1940ರಿಂದಾ ಶ್ರೀ ತಾರೀಕು 22-5-1940ರ ವರೆಗೆ

ತಿರುಪತಿ ಗೋವಿಂದರಾಜ ಸ್ವಾಮಿ ದೇವಾಲಯದಲ್ಲಿ

ನಡಿಯುವ ಬ್ರಹ್ಮೋತ್ಸವ ಸಮಾರಂಭ

ಗರುಡಸೇವೆ ತಾ. 18-5-1940 ಮತ್ತು ರಥೋತ್ಸವ ತಾ. 21-5-1940 ರಲ್ಲು

ಮಂಗಳೂರಿನಿಂದ 5-15 a. m ಗೆ ಹೊರಡುವ ಮೋಡರ್ನ್ ಮೋಟರ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಮಧ್ಯಾಹ್ನ 3-15 p. m.ನ ಒಳಗೆ ಮೈಸೂರಿಗೆ ತಲಪಿ, ಮೈಸೂರಿನಿಂದ 4 p. m.ಗೆ ಬಿಡುವ ರೈಲಿನಲ್ಲಿ ಕೂತು ಸಂಜೆ 7 p. m.ನ ಒಳಗೆ ಬೆಂಗಳೂರಿಗೆ ತಲಪಿ ಬೆಂಗಳೂರಿನಿಂದ 9 p. m. ನ ಬಿಡುವ ರೈಲಿನಲ್ಲಿ ಕೂತು ಕಟ್ಪಾಡಿಗಾಗಿ ತಿರುಪತಿಗೆ — ಮರುದಿನ 10 a. m. ನ ಒಳಗೆ ತಲಪಬಹುದು. —

ಬಸ್ಸು ಮತು ರೈಲು ಚಾರ್ಜು ರೂಪಾಯಿ 9-8-0 ಮಾತ್ರ

ತಿರುಪತಿಯಲ್ಲಿ ಯಾತ್ರಾರ್ಥಿಗಳಿಗೆ ಉಳಕೊಳ್ಳಲು ಭವ್ಯವಾದ ಛತ್ರಗಳ ಏರ್ಪಾಡನ್ನು ದೇವಸ್ಥಾನದವರು ಮಾಡಿರುವರು

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇವುದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಪೂರ್ಣ ಪರಿಚಾರಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೆಟ್ಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಸಾಹೆಬ್, ಕಾಶೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ಪ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦ ವಿ. ಪಿ. ಆ ೬

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಯಂಟೈನ್ ಉಪಯೋಗಿಸಿರಿ

ಕೆ. [illegible]

[illegible] ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಶ್ಶಕ್ತಿ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಮ್ಮ [illegible] ಗುಣಪಡಿಸಿ, [illegible] 20 [illegible] ರೂ. 1-4-0 [illegible]

[illegible]

P. O. Peridepi [illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—18—0	1—14—
,, ದುಯಂ ,, ,,		
,, ಅವ್ವಲ್ ಸುಗ್ಗಿ ,,	1—12—0	—
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	4—8—0	4—10—0
,, ದುಯಂ ,, ,,	4—6—0	4—8—0
,, ಅವ್ವಲ್ ಸುಗ್ಗಿ ,,	4—5—0	4—6—
,, ದುಯಂ ,, ,,	4—3—0	4—4—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	32—8—0	37—8—0
,, ಸಿಪ್ಪೆ ಇದ್ದದು ,,	35—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	55—0—0	55—0—
,, [illegible] ,,	57—8—0	—
ತೆಂಗಿನ ಎಣ್ಣೆ ಮುಡಿಗೆ	3—15—0	4—0—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	2—12—0	3—4—0
ಗೇರುಬೀಜ ಮುಡಿಗೆ	4—8—0	4—10—0
[illegible] ಖಂಡಿಗೆ	35—0—0	43—12—0
[illegible]	13—12—0	14—8—0

Date 10-5-1940 ವಾರ್ಷಿಕ ಮೌಲ್ಯ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 10-5-1940 [ಸಂಚಿಕೆ 19

The Bombay Life Assurance Company, Ltd.,
(Estd. 1908)

COMPARE

Your Life Assurance with any other property you possess
What is its Guaranteed Value

If you live–today–a few years more–when you are old?
If you die–to your family and dependants?

REMEMBER THAT

If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,
MADRAS BRANCH SECRETARIES.
Bombay Life Building,
Sir Lalubhai Samaldas Road,
Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.
Car Street, Mangalore.
Visweswarapuram Circle, Bangalore City.
Post Box No. 337 Mount Road, Madras.
Gautam Nivas, Charni Road, Girgaum, Bombay No. 4.
Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಬೊಬ್ಬೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

[illegible] — [illegible]
[illegible] (ಸಣ್ಣ ಕತೆ) [illegible] ಶ್ರೀ [illegible] ಜನಪದ [illegible] ಮುಂದಿಲ್ಲ [illegible] (ದ್ವಿನಾಶ) [illegible] ಮನೋಹರ ಗ್ರಂಥ ಭಾಂಡಾರ ಧಾರವಾಡ, ಕ್ರೌನ್ ೧೬ ಪುಟಗಳು ಬೆಲೆ [illegible].

ಇದೊಂದು ಸಾಮಾಜಿಕ ಕತೆ. ಇದಕ್ಕೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಪ್ರಿದರದ ಮುನ್ನುಡಿಯನ್ನು ಬರೆದಿರುವರು. ಭಾರತೀಯ ಸಮಾಜದಲ್ಲಿ ಎದ್ದು ತೋರುವ ಹೊಸ ಸಮಸ್ಯೆಯೊಂದನ್ನೆತ್ತಿ ಲೇಖಕರು ಕತೆಕಟ್ಟಿರುವುದಾಗಿಯೂ ಆ ವಿಷಯದ ಕಡೆಗೆ ಎಷ್ಟರ ಮಟ್ಟಿಗೆ ಸಮಾಜ ವು ದೃಷ್ಟಿ ಹರಿಸಬೇಕೆಂಬ ವಿಷಯವಾಗಿಯೂ ಮುನ್ನುಡಿಕಾರರು ವಿವೇಚಿಸಿದ್ದಾರೆ.

ಬಾಲನೆಂಬ ವಿದ್ಯಾವಂತ ಬ್ರಾಹ್ಮಣ ಯುವಕನಿಗೂ ಲಿಲ್ಲಿ ಎಂಬ ಸದ್ಗುಣಿಯಾದ ಕ್ರಿಶ್ಚಿಯನ್ ಯುವತಿಗೂ ಅನುರಾಗವು ಬೆಳೆಯುವುದು. "ಇಬ್ಬರೂ ಮುಂದಿನ ಪ್ರೇಮ ಸಂಸಾರದ ಸುಂದರ ಸ್ವಪ್ನಗಳನ್ನು ಕಾಣುತ್ತಿರುವಾಗ ಬಾಲನ ತಾಯಿಯು ಮಗನು ವಿಜಾತೀಯಳನ್ನು ಮೋಹಿಸಿದ ವಿಷಯ ತಿಳಿದು ಅವರ ಪ್ರೇಮವಿವಾಹಕ್ಕೆ ಅಡ್ಡಿ ಬರುವಳು. ಬಾಲನ ತಾಯಿಯು ಗುಟ್ಟಾಗಿ ಬಂದು, ಲಿಲ್ಲಿಯೊಡನೆ ತನಗೆ ನನ್ನ ಮಗನನ್ನು ಕೊಡು ಎಂದು ಬೇಡುವಳು. ಲಿಲ್ಲಿಗೆ ಮಾತೃ ಹೃದಯದ ದುಃಖದ ಅನುಭವವಾಗುವುದು. ತನ್ನ ಪ್ರೇಮದಿಂದಾಗಿ ಹೆತ್ತ ಕರುಳಿಗೆ ನೋವನ್ನುಂಟು ಮಾಡಲಾರೆನೆಂದು ಅವಳು ಬಾಲನಿಂದ ದೂರ-ದೂರ ಹೋದಳು. ಹಾಗೆ ಪ್ರೇಮ ಹೃದಯಗಳು ನಿರಾಶೆಯಿಂದ ಭಗ್ನವಾಗುವವು. ಕತೆಯ ಕೊನೆಯ ಭಾಗವು ಕರುಣೆಯಿಂದ ಹೃದಯವನ್ನು ಕರಗಿಸುವಂತಿದೆ.

ಜಾತಿಮತಗಳ ಗೊಂದಲದಲ್ಲಿ ಸಿಲುಕಿ ಪ್ರೇಮಜೀವಿಗಳು ನರಳುವುದು ಕೇವಲ ಇಂದಿನ ಸಮಸ್ಯೆಯಲ್ಲ. ಕೇವಲ ಭಾರತೀಯರ ಸಮಸ್ಯೆಯಲ್ಲ. ಭಿನ್ನಮತಗಳು ಉಚ್ಚನೀಚ ಭೇದಗಳು ಇರುವ ಪ್ರಪಂಚದ ಎಲ್ಲೆಡೆಗಳಲ್ಲಿಯೂ ಅನಾದಿ ಕಾಲದಿಂದಲೂ ಈ ಸಮಸ್ಯೆ ಮಾನವಕೋಟಿಯ ಮುಂದು ಬಂದು ನಿಂತಿದೆ! ಇದನ್ನು ಧೈರ್ಯಪೂರ್ವಕ ಎದುರಾಡಿದವರಿದ್ದಾರೆ; ಇದರಿಂದ ಅಹಿತವಾಗಿ ಸಂಕಟಗೊಂಡವರಿದ್ದಾರೆ. ಪ್ರೇಮದ ಹಾದಿಯಲ್ಲಿ ಇವೆರಡೂ ಸಂಭವನೀಯಗಳು. ಒಟ್ಟು ಇಂತಹ ಸಮಸ್ಯೆಗಳು ತೀವ್ರ ವಿಚಾರಕ್ಕೆ ಅರ್ಹವಾಗಿವೆ. ಆದುದರಿಂದಲೇ ಕತೆಗಾರರು ವಿಚಾರಾರ್ಹವಾದೊಂದು ಸಮಸ್ಯೆಯನ್ನು ಈ ಕತೆಯ ಮೂಲಕ ಸಮಾಜದ ಮುಂದಿರಿಸಿದ್ದಾರೆ.

ಕತೆಗಾರರು ಈ ಸಮಸ್ಯೆಯನ್ನು ಇದ್ದ [illegible] ಕೊಟ್ಟಿದ್ದಾರೆಯೇ ಹೊರತು ಯಾವ [illegible] [illegible], ಆ ಸಮಸ್ಯೆಯನ್ನು ಸಮಾಜದ [illegible] [illegible] [illegible] [illegible] [illegible] [illegible] [illegible] ಒಂದು [illegible] [illegible] [illegible] [illegible] [illegible] ಕತೆಗಾರರು [illegible] ಉತ್ಸಾಹ ತೋರಿಸಿದಂತೆ ಕಾಣು ಬರುತ್ತದೆ. [illegible] [illegible] ಮುಖ್ಯವಾಗಿದೆ. ಶೃಂಗಾರವು ಮಾನವನ ಪ್ರಥಮಭಾವನೆಯಾಗಿದ್ದರೂ ಅದನ್ನು ಹೀಗೆ ವಿವರಿಸಿ ಹೇಳುವುದರಿಂದ ಕತೆಗಾರಿಕೆಯಲ್ಲಿರಬೇಕಾದ ಕಲಾರೂಪವು ಕೆಟ್ಟು ಹೋಗುವುದೆಂದು ನಮ್ಮ ಭಾವನೆ. ಕತೆಯಲ್ಲಿ ಮನ ಮುಟ್ಟುವ ಅಂಶವೊಂದು ಕೊನೆಯಲ್ಲಿ ಮಾತ್ರ ಬಂದಿದೆ. ಹೆತ್ತ ಕರುಳಿನ ಸಮಾಧಾನಕ್ಕಾಗಿ ಲಿಲ್ಲಿಯು ಸುಖತ್ಯಾಗ ಮಾಡುವ ವಿಷಯವು ನಿಜವಾಗಿಯೂ ಮಾರ್ಮಿಕವಾಗಿದೆ.

ಒಟ್ಟು ಕತೆಯು ವಾಚನೀಯವಿದೆ. ಮುಂದಕ್ಕೆ ಈ ಕತೆಗಾರರು ಉತ್ತಮ ತರದ ಕತೆಗಳನ್ನು ಒದಗಿಸಿ ಕೊಡಬಲ್ಲರೆಂದು ಕನ್ನಡಿಗರು ಹಾರೈಸಬಹುದು.

ಪೊನ್ನಮ್ಮ – (ಬಾಲಸಾಹಿತ್ಯ) ಬರೆದವರು: ದಿವಂಗತ—ಗೌರಮ್ಮ (ಮಿಸೆಸ್. ಬಿ. ಟಿ. ಜಿ. ಕೃಷ್ಣ) ಪ್ರಕಾಶಕರು–ದ. ಭಾ. ಕುಲಕರ್ಣಿ ಮನೋಹರ ಗ್ರಂಥಭಾಂಡಾರ ಧಾರವಾಡ. ಬೆಲೆ ಒಂದೂವರೆ ಆಣೆ.

ಕಣ್ಮರೆಯಾದ ಕನ್ನಡದ ಕತೆಗಾರ್ತಿ ಗೌರಮ್ಮನವರು ಬರೆದ ಒಂದು ಮಕ್ಕಳ ಕಥೆಯೂ, ಇನ್ನೊಂದು 'ಬೇಬಿ'ಯ ಕುರಿತು ಬರೆದ ಸರಸವಾದ ಪತ್ರವೂ ಇದರಲ್ಲಿದೆ. ಮಕ್ಕಳ ಕತೆಯೇನು ಅಷ್ಟು ಮೊದ್ದಾಗಿಲ್ಲ. ಪತ್ರವು ಮೋಹಕವಾಗಿದೆ.

ಬೇಬಿಯನ್ನು ಹಿಡಿದು ನಿಂತ ಗೌರಮ್ಮನವರ ಚಿತ್ರವೂ ಈ ಪುಸ್ತಕದಲ್ಲಿದೆ.

ಗೌರಮ್ಮನವರ ಕುರಿತು ಅಭಿಮಾನವುಳ್ಳವರು ಸಂಗ್ರಹಿಸತಕ್ಕ ಪುಸ್ತಕವಿದು. ಪುಸ್ತಕದ ಅಚ್ಚುಕಟ್ಟು ಚನ್ನಾಗಿದೆ. ಮನೋಹರಗ್ರಂಥಭಾಂಡಾರದವರು ಮಕ್ಕಳ ಸಾಹಿತ್ಯವನ್ನು ಒದಗಿಸಿ ಕೊಡಲು ಪ್ರಯತ್ನಿಸುತ್ತಿರುವುದು ಸ್ತುತ್ಯಕಾರ್ಯವಾಗಿದೆ.

—ಕಯ್ಯಾರ.

"Bhagavn Ramana of Tiruvannamalai! As I under stand him" By Sitaram D. Acharya Founder, Universal Brother Local Mission, Bassein Distric Thana. Price As. 2,

ಶ್ರೀ ಸೀತಾರಾಮ ಡಿ. ಆಚಾರ್ಯರು ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳ ಸಂದರ್ಶನಮಾಡಿ, ಅವರ ವೇದಾಂತ ತತ್ವಗಳನ್ನು ತಾನು ತಿಳಕೊಂಡಿರುವ ರೀತಿಯನ್ನು ಈ ಚಿಕ್ಕ ಪುಸ್ತಕದಲ್ಲಿ ವಿವರಿಸುವರು. ರಮಣ ಮಹರ್ಷಿಗಳ ವಿಷಯವನ್ನು ಹೇಳುವ ಸಂದರ್ಭದಲ್ಲಿ ಹಲವು ವೇದಾಂತವಿಚಾರಗಳನ್ನು ಪ್ರತಿಪಾದಿಸಿದ್ದಾರೆ. [illegible] ದೇವರು, ಧರ್ಮ, ತತ್ವಗಳನ್ನು ತಿಳಿಯಲು ಅಭಿಲಾಷೆಯುಳ್ಳವರಿಗೆ ಈ ಪುಸ್ತಕವು ವಾಚನೀಯವೆನಿಸುವುದು.

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸವಟ್ಟಾಗ, ಉದಾಸೀನವಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣಿವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ಯಾವ ಪಾನೀಯಗಳೂ ಮಾಡವು.

'ಓವಲ್ಟಿನ್' ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ಶೀಘ್ರದಲ್ಲಿಯೇ ಶಕ್ತಿಯನ್ನು ಉಂಟುಮಾಡುವುದು. ಪ್ರಕೃತಿಯ ಅತ್ಯುತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು— ನೆನೆಹಾಕಿ ಹುರಿದ ಮೊಳೆಗಿದ ಬಾರ್ಲಿ, ದನದ ಹಸಿ ಹಾಲು ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಸತ್ವ ಮತ್ತು ಫೊಸ್ಪಟೈಡ್ಸಿನಿಂದ ತಯಾರಿಸಿಟ್ಟ 'ಓವಲ್ಟಿನ್' ಸುದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟು ಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:

ಜೇಮ್ಸ್‌ರೆಟ್ಟ್ ಲಿಮಿಟೆಡ್

ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

'ಓವಲ್‌ಟಿನ್'

OVALTINE [illegible]

'ಓವಲ್ಟಿನ್' ಬಿಸ್ಕತ್ತುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕತ್ತುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆಲೆಯ 'ಓವಲ್ಟಿನ್' ಸೇರಿದೆ. 4 ಮತ್ತು 8 ಔನ್ಸುಗಳ ಪೆಟ್ಟಿಗೆಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತವೆ.

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

17—5—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೭—೫—೧೯೪೦

ಬೋಸರಿಗೆ ಬಂಗಾಳದಲ್ಲಿಯೇ ಬೆಂಬಲವಿಲ್ಲ!

ತುಷಾರ ಕಾಂತಿಘೋಷರ ಉಗ್ರ ಟೀಕೆ!

ತುಷಾರಕಾಂತಿ ಘೋಷರು

ಕಾಂಗ್ರೆಸಿನ ಅಧ್ಯಕ್ಷಪೀಠದಿಂದ ತನ್ನನ್ನು ತಳ್ಳಿಹಾಕಿದ ರೋಷವು ವಿಪರೀತವಾಗಿ ಬೋಸರು ರಾಷ್ಟ್ರಹಿತವನ್ನು ಲಕ್ಷಿಸದೆ ಅನೇಕ ಕಾರ್ಯಗಳನ್ನು ಮಾಡಿದರು.

ಹಿಂದೊಮ್ಮೆ ಅಖಿಲ ಬಂಗಾಳವೂ ಬೋಸರಿಗಾದ ಅನ್ಯಾಯಕ್ಕಾಗಿ ಒಂದೇ ಸ್ವರದಿಂದ ಕಾಂಗ್ರೆಸಿನ ಪ್ರಮುಖರ ಮೇಲೆ ಉಗ್ರವಾಗಿತ್ತು. ದೇಶದ ಬೇರೆ ಬೇರೆ ಭಾಗಗಳಲ್ಲಿ ಅವರಿಗಾಗಿ ಸಂತಾಪ ಪಡುವ ಬಹು ಮಂದಿಯಿದ್ದರು.

ಆದರೆ ಬೋಸರು, ಅನಂತರ ನಡೆಸಿದ ಹಲವು ವರ್ತನೆಗಳನ್ನು ಕಂಡು ರಾಷ್ಟ್ರಹಿತೈಷಿಗಳು ಮನಮರುಗುವಂತಾಯಿತು. ಮೊನ್ನೆಮೊನ್ನೆ ಕಲ್ಕತ್ತದ ಕಾರ್ಪೊರೇಶನಿನ ಚುನಾವಣೆಯಲ್ಲಿ ಬೋಸರು ಮುಸ್ಲಿಂ ಲೀಗಿನ ಮುಖಂಡರನ್ನು ಎತ್ತಿ ಹಿಡಿದ ವಿಷಯಗಳಲ್ಲಿ ಬಂಗಾಳದವರು ಉರಿದು ನಿಂತಿದ್ದಾರೆ. ಬಂಗಾಳದ ಪ್ರಖ್ಯಾತ ರಾಷ್ಟ್ರೀಯ ಪತ್ರಿಕೆಯು — ಒಂದು ಕಾಲದಲ್ಲಿ — ಸುಭಾಷರ ಪರವಾಗಿಯೇ ವಾದಿಸಿ ಅವರಿಗೆ ಗಾಂಧಿವಾದಿಗಳಿಂದ ಅನ್ಯಾಯವಾಗಿದೆಯೆಂಬುದನ್ನು ಘಂಟಾ ಘೋಷವಾಗಿ ಸಾರಿದ್ದ ಅಮೃತ ಬಜಾರ್ ಪತ್ರಿಕೆಯು ಬೋಸರನ್ನು ಕಠಿಣವಾದ ಮಾತುಗಳಿಂದ ಟೀಕಿಸಿ "ಹೋದ ಧುರೀಣ" ಎಂಬ ಅಗ್ರಲೇಖನವೊಂದನ್ನೇ ಬರೆಯಿತು.

ವಿಶ್ವಕವಿ ಡಾ। ರವೀಂದ್ರನಾಥ ಠಾಗೋರರೂ ಬೋಸರ ಹಿತಚಿಂತಕರಾಗಿದ್ದವರು. ಅವರ ಇಂದಿನ ಆ ರಾಷ್ಟ್ರೀಯ

ಬೋಸರ ಪ್ರೋಕರಿತನ!

ಪ ಸೋಗತಿಗಳನ್ನು ನೋಡಿ ಕಂಬನಿ ಸುರಿಸಿ ಬಿನ್ನಹಮಾಡಿಕೊಂಡರು.

ಹೀಗೆ ಸಭೆಯ ಬೋಸರ ವಿರುದ್ಧ ಬಂಗಾಳದ ಪ್ರಮುಖ ಪತ್ರಿಕೆಗಳು ಕಟು ಟೀಕೆಯನ್ನು ಮಾಡುವ ಆರಂಭ ಮಾಡಲು, ಬೋಸರು ಬಂಗಾಳದ ರಾಷ್ಟ್ರೀಯ ಪತ್ರಿಕೆಗಳನ್ನೇ ಸಾರ್ವಜನಿಕವಾಗಿ ನಿಂದಿಸತೊಡಗಿದರು.

ಇಂತಹ ಘಟನೆಯ ಒಂದು ಕಥೆಯು ಹೀಗಿದೆ.

ಮಾರ್ಚ ೨೯ ರಂದು ಸುಭಾಷರ ಭೌಮರ ಹೇಳಿಕೆಯ ಬಳಿಕ ಚರ್ಚಿಲ್ಲರು ಪ್ರಧಾನ ಮಂತ್ರಿಪದವಿಯನ್ನು ಸ್ವೀಕರಿಸಿದರ ... ಬ್ರಿಟಿಷರು ಯುದ್ಧವನ್ನು ಬಹು ತೀವ್ರವಾಗಿ ಸಾಗಿಸಬೇಕೆಂದೂ ಆ ಬಗೆ ಹೊಸ ಸ್ವರೂಪದಿಂದ ಬ್ರಿಟಿಷ್ ... ಮಂಡಲದಲ್ಲಿ ಸಕಲ ಪಕ್ಷದವರ ಪ್ರಾತಿನಿಧ್ಯವಿರಬೇಕೆಂದೂ ಈ ಬದಲಾವಣೆ ಮಾಡಲಾಗಿದೆ.

ಬ್ರಿಟಿಷ್ ಯುದ್ಧ ಮಂತ್ರಿಮಂಡಳವು ಈ ಕೆಳಗೆ ಕಂಡಂತೆ ರಚಿತವಾಯಿತು.

ಮಿ। ಚರ್ಚಿಲ್ಲ್ — ಪ್ರಧಾನ ಮಂತ್ರಿ ಮತ್ತು ರಕ್ಷಣಾ ಮಂತ್ರಿ.

ಮಿ। ಚೆಂಬರ್ಲಿನ್ — ಲಾರ್ಡ್ ಪ್ರೆಸಿಡೆಂಟ್ ಒಫ್ ದಿ ಕೌನ್ಸಿಲ್.

ಠಾಗೂರರ ಸಖೇದ ವಾಣಿ!

ಸಿದ ದೂರುಗಳನ್ನು ಸಿದ್ಧಪಡಿಸಬೇಕೆಂದೂ ತಿಳಿಸಿದರು. ಸಾರ್ವಜನಿಕರನ್ನೂ ಬೋಸರು ಆ ಸಭೆಗೆ ಆಮಂತ್ರಿಸಿದ್ದರು.

ಪತ್ರಿಕೆಯ ಉತ್ತರ

ಅದಕ್ಕೆ ಉತ್ತರವಾಗಿ ತುಷಾರಕಾಂತಿ ಘೋಷರು ಹೇಳಿದ್ದೇನೆಂದರೆ ಅಂತಹ ಟೀಕೆಗಳು ಪತ್ರಿಕೆಯ ಧರ್ಮವೆಂದೂ, ದೇಶದ ಹಿತವನ್ನು ಲಕ್ಷಿಸಿ, ವ್ಯಕ್ತಿಯು ಯಾರೇ ಇರಲಿ ಅವನನ್ನು ಟೀಕಿಸುವುದು ತನ್ನ ಹಕ್ಕೆಂದೂ, ಸಾರ್ವಜನಿಕರ ಮುಂದೆ ನಿಂತು ಅವರನ್ನು ಬಂಡಾಯ

ಸಪ್ಲೈ ಮಿನಿಸ್ಟರ್

ಮಿ। ಡಫ್ ಕೂಪರ್ — ಇಂಫಾರ್ಮೇಶನ್ ಮಿನಿಸ್ಟರ್

ಸರ್ ಆಂಡ್ರ್ಯೂ ಡಂಕಾನ್ — ಪ್ರೆಸಿಡೆಂಟ್ ಒಫ್ ದಿ ಬೋರ್ಡ್ ಒಫ್ ಟ್ರೇಡ್

ಚರ್ಚಿಲ್ಲರ ಕಾಬಿನೆಟ್ಟಿನಲ್ಲಿ ಮುಖ್ಯರಾಗುವರು

ಸುಭಾಷಚಂದ್ರಬೋಸರು

ಪ್ರದರ್ಶನ

ಆದರೆ, ನಿಶ್ಚಿತ ದಿನದಲ್ಲಿ ಬೋಸರು ಸಭೆ ಕರೆದರು. ಅವರ ಅನುಯಾಯಿಗಳು ಕೆಲವರು ಬಂದಿದ್ದರು. ತುಷಾರ ಕಾಂತಿ ಘೋಷರನ್ನು ಬೋಸರು ಕಟುವಾಗಿ ಟೀಕಿಸಿದರು. ಮಾತ್ರವಲ್ಲದೆ ಪ್ರಮುಖ ಬೀದಿಗಳಲ್ಲಿ ಅಮೃತ ಬಜಾರ್ ಪತ್ರಿಕೆಯನ್ನು ದೂರಿ ಪ್ರದರ್ಶನವಾಯಿತು. ಕೊನೆಗೆ ಆ ಪ್ರದರ್ಶಕರು ಪತ್ರಿಕೆಯ ಆಫೀಸಿನ ಮುಂಭಾಗಕ್ಕೆ ಬಂದು ಅಲ್ಲಿ ಬೋಸರ ಮೇಲೆ ಬರೆದ ಟೀಕೆಗೆ ಕ್ಷಮಾಪಣೆ ಕೇಳಬೇಕೆಂದು ಬೊಬ್ಬಿಟ್ಟರು.

ಈ ಕುರಿತು ಅಮೃತಬಜಾರ್ ಪತ್ರಿಕೆಯೇ ಹೇಳುವುದೇನೆಂದರೆ—ಆ ದಿನ ಕೆಲವು ಪೋಕರಿ ಜನರು ಆಫೀಸಿನ ಮುಂದುಗಡೆ ಬಂದು ಬೊಬ್ಬೆಹಾಕುತ್ತಿದ್ದರು. ಆಫೀಸಿನ ಕಟ್ಟೋಣದಲ್ಲಿ ಸಂಸಾರ ಮಂದಿಗರಾದ ಕುಟುಂಬದವರೂ ನೆಲಸಿದ್ದರು. ಅವರಲ್ಲಿ ಮುದುಕರು, ಅಸೌಖ್ಯದವರು, ಮಕ್ಕಳು, ಹೆಂಗಸರು ಎಲ್ಲರೂ ಇದ್ದರು. ಆ ಜನರಿಗೆ ಯಾವತರದ ತೊಂದರೆಯಾಗಬಹುದೆಂಬ ಕುರಿತು ಏನೂ ಗಮನಿಸದೆ ಸುಮಾರು ಮಧ್ಯರಾತ್ರಿಯ ತನಕ ಆ ಪೋಕರಿಗಳು ಬೊಬ್ಬೆ ಹಾಕಿದರು.

ಹೀಗಿದೆ ಬೋಸರ ವರ್ತನೆ. ಇಂದು ಅವರಿಗೆ ಬಂಗಾಳದ ಬೆಂಬಲವೆಷ್ಟಿದೆಯೆಂಬುದೂ ಇದರಿಂದ ತಿಳಿಯಬಹುದು.

...ಯಿತು!
...ಬಂಧವು ಸುಂದರವಾಯಿತು

ಕೆ. ಕೆ. ರೈ ವಿರಚಿತ

...ತ್ತು ಪ್ರಬಂಧ

...ಅನುಸಾರವಾಗಿ ಬರೆದುದು.)

ಬೆಲೆ 0—1—6
,, 0—2—0
,, 0—2—6
,, 0—3—0

...ಶಾಲೆಗಳ ಉಪಯೋಗದ ಸಲುವಾಗಿ ರಚಿತ ...ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ರಥಬೀದಿ ಮಂಗಳೂರು.

WHAT MAKES

Luck?
Inheritance?
Speculation?
Gambling?
Hard Work?
Hard work and THRIFT

RESOURCES OF A CRORE.

ಪುಸ್ತಕ—ಪರಿಚಯ

[illegible] (ಸಾಮಾಜಿಕ ಕಥೆ) [illegible]

[illegible] ಶ್ರೀ ಕೆ. ಚನಬಸಪ್ಪ ಗೌಡರು ಸಾಹಿತ್ಯಮಂದಿರ, ಕಲ್ಪತ್ತು (ವೈನಾಡು) ಮುಖ್ಯ ವಿತರಣಾಧಿಕಾರಿಗಳು:— ಮನೋಹರ ಗ್ರಂಥ ಭಾಂಡಾರ ಧಾರವಾಡ. ಕ್ರೌನ್. ೮. ೧೫೨ ಪುಟಗಳು ಬೆಲೆ ಆರಾಣೆ.

ಇದೊಂದು ಸಾಮಾಜಿಕ ಕಥೆ. ಇದಕ್ಕೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಆದರದ ಮುನ್ನುಡಿಯನ್ನು ಬರೆದಿರುವರು. ಭಾರತೀಯ ಸಮಾಜದಲ್ಲಿ ಎದ್ದು ತೋರುವ ಹೊಸ ಸಮಸ್ಯೆಯೊಂದನ್ನಿತ್ತು ಲೇಖಕರು ಕತೆಕಟ್ಟಿರುವುದಾಗಿಯೂ ಆ ವಿಷಯದ ಕಡೆಗೆ ಎಷ್ಟರ ಮಟ್ಟಿಗೆ ಸಮಾಜ ವು ದೃಷ್ಟಿ ಹರಿಸಬೇಕೆಂಬ ನಿಷಯ ವಾ ಗಯೂ ಮುನ್ನುಡಿಕಾರರು ವಿವೇಚಿಸಿ ದ್ದಾರೆ.

ಬಾಲನೆಂಬ ವಿದ್ಯಾವಂತ ಬ್ರಾಹ್ಮಣ ಯುವಕನಿಗೂ ಲಿಲ್ಲಿ ಎಂಬ ಸದ್ಗುಣಿ ಯಾದ ಕ್ರಿಶ್ಚಿಯನ್ ಯುವತಿಗೂ ಅನು ರಾಗವು ಬೀಳುವುದು. ಇಬ್ಬರೂ ಮುಂದಿನ ಪ್ರೇಮ ಸಂಸಾರದ ಸುಂದರ ಸ್ವಪ್ನಗಳನ್ನು ಕಾಣುತ್ತಿರುವಾಗ ಬಾಲನ ತಾಯಿಯು ಮಗನು ವಿಜಾತೀಯಳನ್ನು ಮೋಹಿಸಿದ ವಿಷಯ ತಿಳಿದು ಅವರ ಪ್ರೇ ಮವಿವಾಹಕ್ಕೆ ಅಡ್ಡಿ ಬರುವಳು. ಬಾಲನ ತಾಯಿಯು ಗುಟ್ಟಾಗಿ ಬಂದು, ಲಿಲ್ಲಿ ಯೊಡನೆ ತನಗೆ ನನ್ನ ಮಗನನ್ನು ಕೊಡು ಎಂದು ಬೇಡುವಳು. ಲಿಲ್ಲಿಗೆ ಮಾತ್ರ ಹೃದಯದ ದುಃಖದ ಅನುಭವವಾಗು ವುದು. ತನ್ನ ಪ್ರೇಮಾಧೀನನಾಗಿ ಹೆತ್ತ ಕರು ಳಿಗೆ ನೋವನ್ನುಂಟು ಮಾಡಲಾರೆನೆಂದು ಅವಳು ಬಾಲನಿಂದ ದೂರ—ದೂರ ಹೋದಳು. ಹಾಗೆ ಪ್ರೇಮ ಹೃದಯ ಗಳು ನಿರಾಶೆಯಿಂದ ಭಗ್ನವಾಗುವವು. ಕತೆಯ ಕೊನೆಯ ಭಾಗವು ಕರುಣೆ ಯಿಂದ ಹೃದಯವನ್ನು ಕರಗಿಸುವಂತಿದೆ.

ಜಾತಿಮತಗಳ ಗೊಂದಲದಲ್ಲಿ ಸಿಲುಕಿ ಪ್ರೇಮಜೀವಿಗಳು ನರಳುವುದು ಕೇವಲ ಇಂದಿನ ಸಮಸ್ಯೆಯಲ್ಲ. ಕೇವಲ ಭಾರ ತೀಯರ ಸಮಸ್ಯೆಯಲ್ಲ. ಭಿನ್ನಮತಗಳು ಉಚ್ಚನೀಚ ಭೇದಗಳು ಇರುವ ಪ್ರಪಂಚ ದ ಎಲ್ಲೆಡೆಗಳಲ್ಲಿಯೂ ಅನಾದಿ ಕಾಲ ದಿಂದಲೂ ಈ ಸಮಸ್ಯೆ ಮಾನವಕೋಟಿಯ ಮುಂದು ಬಂದು ನಿಂತಿದೆ! ಇದನ್ನು ಧೈರ್ಯಪೂರ್ವಕ ಎದುರಾಡಿದವರಿ ದ್ದಾರೆ; ಇದರಿಂದ ಅಹಿತರಾಗಿ ಸಂಕಟ ಗೊಂಡವರಿದ್ದಾರೆ. ಪ್ರೇಮದ ಹಾದಿ ಯಲ್ಲಿ ಇವೆರಡೂ ಸಂಭವನೀಯಗಳು. ಒಟ್ಟು ಇಂತಹ ಸಮಸ್ಯೆಗಳು ಶೀಘ್ರ ವಿಚಾರಣೀಯ ಕಠ್ಯಗಳೇ. ಆದುದರಿಂದಲೇ ಕತೆಗಾರರು ವಿಚಾರಾರ್ಹವಾದೊಂದು ಸಮಸ್ಯೆಯನ್ನು ಈ ಕತೆಯ ಮೂಲಕ ಸಮಾಜದ ಮುಂದಿರಿಸಿದ್ದಾರೆ.

ಕತೆಗಾರರು ಈ ಸಮಸ್ಯೆ ಮುನ್ನಿಟ್ಟು [illegible] [illegible]

[illegible] ಶೃಂಗಾರವು [illegible] ಕಥೆಯನ್ನು ಮನೋವಿಕಾಸದ ಕೌಶಲ್ಯ ಹೇಳಿರುವುದ ರಿಲ್ಲಿ ಕತೆಗಾರರು ಹೆಚ್ಚು ಉತ್ಸಾಹ ತೋರಿಸಿದಂತೆ ಕಂಡು ಬರುತ್ತದೆ. ಪ್ರೇಮ ಸನ್ನಿವೇಶಗಳ ವಿಸ್ತೃತ ವಿವರಣೆ ಯು ಇಲ್ಲಿ ಮಿತಿಮೀರಿದೆ. ಶೃಂಗಾರವು ಮಾನವನ ಪ್ರಥಮಭಾವನೆಯಾಗಿದ್ದರೂ ಅದನ್ನು ಹೀಗೆ ವಿವರಿಸಿ ಹೇಳುವುದರಿಂದ ಕತೆಗಾರಿಕೆಯಲ್ಲಿರಬೇಕಾದ ಕಲಾರೂ ಪವು ಕೆಟ್ಟು ಹೋಗುವುದೆಂದು ನಮ್ಮ ಭಾವನೆ. ಕತೆಯಲ್ಲಿ ಮನ ಮುಟ್ಟುವ ಅಂಶವೊಂದು ಕೊನೆಯಲ್ಲಿ ಮಾತ್ರ ಬಂದಿದೆ. ಹೆತ್ತ ಕರುಳಿನ ಸಮಾಧಾನ ಕ್ಕಾಗಿ ಲಿಲ್ಲಿಯು ಸಂತತ್ಯಾಗ ಮಾ ಡುವ ವಿಷಯವು ನಿಜವಾಗಿಯೂ ಮಾರ್ಮಿಕವಾಗಿದೆ.

ಒಟ್ಟು ಕತೆಯು ವಾಚನೀಯವಿದೆ. ಮುಂದಕ್ಕೆ ಈ ಕತೆಗಾರರು ಉತ್ತಮ ತರದ ಕತೆಗಳನ್ನು ಒದಗಿಸಿ ಕೊಡಬಲ್ಲ ರೆಂದು ಕನ್ನಡಿಗರು ಹಾರೈಸಬಹುದು.

ಪೊನ್ನಮ್ಮ—(ಬಾಲಸಾಹಿತ್ಯ) ಬರೆ ದವರು: ದಿವಂಗತ—ಗೌರಮ್ಮ (ಮಿಸೆಸ್. ಬಿ. ಟಿ. ಜಿ. ಕೃಷ್ಣ) ಪ್ರಕಾಶ ಕರು ದ. ಭಾ. ಕುಲಕರ್ಣಿ ಮನೋ ಹರ ಗ್ರಂಥಭಾಂಡಾರ ಧಾರವಾಡ. ಬೆಲೆ ಒಂದೂವರೆ ಆಣೆ.

ಕಣ್ಮರೆಯಾದ ಕನ್ನಡದ ಕತೆಗಾರ್ತಿ ಗೌರಮ್ಮನವರು ಬರೆದ ಒಂದು ಮಕ್ಕಳ ಕಥೆಯೂ, ಇನ್ನೊಂದು, 'ಬೇಬಿ'ಯ ಕುರಿತು ಬರೆದ ಸರಸವಾದ ಪತ್ರವೂ ಇದರಲ್ಲಿದೆ. ಮಕ್ಕಳ ಕತೆಯೇನು ಅಷ್ಟು ಸುಂದರವಾಗಿಲ್ಲ. ಪತ್ರವು ಮೋಹಕ ವಾಗಿದೆ.

ಬೇಬಿಯನ್ನು ಹಿಡಿದು ನಿಂತ ಗೌರಮ್ಮ ನವರ ಚಿತ್ರವೂ ಈ ಪುಸ್ತಕದಲ್ಲಿದೆ.

ಗೌರಮ್ಮನವರ ಕುರಿತು ಅಭಿಮಾನ ವುಳ್ಳವರು ಸಂಗ್ರಹಿಸ ತಕ್ಕ ಪುಸ್ತಕವಿದು. ಪುಸ್ತಕದ ಅಚ್ಚುಕಟ್ಟು ಚನ್ನಾಗಿದೆ. ಮನೋಹರ ಗ್ರಂಥಭಾಂಡಾರದವರು ಮಕ್ಕ ಳ ಸಾಹಿತ್ಯವನ್ನು ಒದಗಿಸಿ ಕೊಡಲು ಪ್ರಯತ್ನಿಸುತ್ತಿರುವುದು ಸ್ತುತ್ಯಕಾರ್ಯ ವಾಗಿದೆ.

—ಕಯ್ಯಾರ.

"Bhagavn Ramana of Tiruvannamalai! As I under stand him." By Sitaram D. Acharya Founder, Universal Brother Local Mission, Bessein Distric Thana, Price As. 2.

ಶ್ರೀ ಸೀತಾರಾಮ ಡಿ. ಆಚಾರ್ಯರು ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳ ಸಂದರ್ಶನಮಾಡಿ, ಅವರ ವೇದಾಂತ ತತ್ವಗಳನ್ನು ತಾನು ತಿಳ ಕೊಂಡಿರುವ ರೀತಿಯನ್ನು ಈ ಚಿಕ್ಕ ಪುಸ್ತಕದಲ್ಲಿ ವಿವರಿಸುವರು. ರಮಣ ಮಹರ್ಷಿಗಳ ವಿಷಯವನ್ನು ಹೇಳುವ ಸಂದರ್ಭದಲ್ಲಿ ಹಲವು [illegible] [illegible]

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

17—5—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೭—೫—೧೯೪೦

ಬೋಸರಿಗೆ ಬಂಗಾಳದಲ್ಲಿಯೇ ಬೆಂಬಲವಿಲ್ಲ!

ತುಷಾರ ಕಾಂತಿಘೋಷರ ಉಗ್ರ ಟೀಕೆ!

ತುಷಾರಕಾಂತಿ ಘೋಷರು

ಕಾಂಗ್ರೆಸಿನ ಅಧ್ಯಕ್ಷಪೀಠದಿಂದ ತನ್ನ ನ್ನಿಳಿಹಾಕಿದ ರೋಷವು ವಿಪರೀತವಾಗಿ ಬೋಸರು ರಾಷ್ಟ್ರಹಿತವನ್ನು ಲಕ್ಷಿಸದೆ ಅನೇಕ ಕಾರ್ಯಗಳನ್ನು ಮಾಡಿದರು.

ಹಿಂದೊಮ್ಮೆ ಅಖಿಲ ಬಂಗಾಳವೂ ಬೋಸರಿಗಾದ ಅನ್ಯಾಯಕ್ಕಾಗಿ ಒಂದೇ ಸ್ವರದಿಂದ ಕಾಂಗ್ರೆಸಿನ ಪ್ರಮುಖರ ಮೇಲೆ ಉಗ್ರವಾಗಿತ್ತು. ದೇಶದ ಬೇರೆ ಬೇರೆ ಭಾಗಗಳಲ್ಲಿ ಅವರಿಗಾಗಿ ಸಂತಾಪ ಪಡುವ ಬಹು ಮಂದಿಯಿದ್ದರು.

ಆದರೆ ಬೋಸರು, ಅನಂತರ ನಡೆಸಿದ ಹಲವು ವರ್ತನೆಗಳನ್ನು ಕಂಡು ರಾಷ್ಟ್ರಹಿತೈಷಿಗಳು ಮನಮರುಗುವಂತಾಯಿತು. ಮೊನ್ನೆಮೊನ್ನೆ ಕಲ್ಕತ್ತದ ಕಾರ್ಪೊರೇಶನಿನ ಚುನಾವಣೆಯಲ್ಲಿ ಬೋಸರು ಮುಸ್ಲಿಂ ಲೀಗಿನ ಮುಖಂಡರನ್ನು ಎತ್ತಿ ಹಿಡಿದ ವಿಷಯಗಳಲ್ಲಿ ಬಂಗಾಳದವರು ಉರಿದು ನಿಂತಿದ್ದಾರೆ. ಬಂಗಾಳದ ಪ್ರಖ್ಯಾತ ರಾಷ್ಟ್ರೀಯ ಪತ್ರಿಕೆಯು — ಒಂದು ಕಾಲದಲ್ಲಿ— ಸುಭಾಷರ ಪರವಾಗಿಯೇ ವಾದಿಸಿ ಅವರಿಗೆ ಗಾಂಧಿವಾದಿಗಳಿಂದ ಅನ್ಯಾಯವಾಗಿದೆಯೆಂಬುದನ್ನು ಘಂಟಾ ಘೋಷವಾಗಿ ಸಾರಿದ್ದ ಅಮೃತ ಬಜಾರ್ ಪತ್ರಿಕೆಯು ಬೋಸರನ್ನು ಕಠಿಣವಾದ ಮಾತುಗಳಿಂದ ಟೀಕಿಸಿ "ಹೋದ ಧುರೀಣ" ಎಂಬ ಅಗ್ರಲೇಖನವೊಂದನ್ನೇ ಬರೆಯಿತು.

ವಿಶ್ವಕವಿ ಡಾ। ರವೀಂದ್ರನಾಥ ಠಾಗೋರರೂ-ಬೋಸರ ಹಿತಚಿಂತಕರಾಗಿದ್ದವರು-ಅವರ ನೂತನ ರಾಷ್ಟ್ರೀಯ

ಬೋಸರ ಪೋಕರಿತನ!

ನಾಗರಿಕರನ್ನು ನೋಡಿ ಕಂಟಸಿ ಸುರಿಸಿ ಬಿನ್ನಹ ಮಾಡಿಕೊಂಡರು.

ಹೀಗೆ ಸುಭಾಷ ಬೋಸರ ವಿರುದ್ಧ ಬಂಗಾಳದ ಪ್ರಮುಖ ಪತ್ರಿಕೆಗಳು ಕಟು ಟೀಕೆಯನ್ನು ಮಾಡುವ ಆರಂಭ ಮಾಡಲು ಬೋಸರು ಬಂಗಾಳದ ರಾಷ್ಟ್ರೀಯ ಪತ್ರಿಕೆಗಳನ್ನೇ ಸಾರ್ವಜನಿಕವಾಗಿ ನಿಂದಿಸತೊಡಗಿದರು.

ಇಂತಹ ಘಟನೆಯ ಒಂದು ಕಥೆಯು ಹೀಗಿದೆ.

ಮಾರ್ಚ ೨೯ ರಂದು ಸುಭಾಷ

ಠಾಗೋರರ ಸಖೇದ ವಾಣಿ!

ಸಿದ ದೂರುಗಳನ್ನು ಸಿದ್ಧಪಡಿಸಬೇಕೆಂದೂ ತಿಳಿಸಿದರು. ಸಾರ್ವಜನಿಕರನ್ನೂ ಬೋಸರು ಆ ಸಭೆಗೆ ಆಮಂತ್ರಿಸಿದ್ದರು.

ಪತ್ರಿಕೆಯ ಉತ್ತರ

ಅದಕ್ಕೆ ಉತ್ತರವಾಗಿ ತುಷಾರಕಾಂತಿ ಘೋಷರು ಹೇಳಿದ್ದೇನೆಂದರೆ ಅಂತಹ ಟೀಕೆಗಳು ಪತ್ರಿಕೆಯ ಧರ್ಮವೆಂದೂ ದೇಶದ ಹಿತವನ್ನು ಲಕ್ಷಿಸಿ ವ್ಯಕ್ತಿಯ ಯಾರೇ ಇರಲಿ ಅವನ್ನು ಟೀಕಿಸುವುದು ತನ್ನ ಹಕ್ಕೆಂದೂ, ಸಾರ್ವಜನಿಕರ ಮುಂದೆ ನಿಂತು ಅವರನ್ನು ಒಂದಾಯ



ಸುಭಾಸಚಂದ್ರಬೋಸರು

ಪ್ರದರ್ಶನ

ಆದರೆ, ನಿಶ್ಚಿತ ದಿನದಲ್ಲಿ ಬೋಸರು ಸಭೆ ಕರೆದರು. ಅವರ ಅನುಯಾಯಿಗಳ ಕೆಲವರು ಬಂದಿದ್ದರು. ತುಷಾರಕಾಂತಿ ಘೋಷರನ್ನು ಬೋಸರು ಕಟುವಾಗಿ ಟೀಕಿಸಿದರು. ಮಾತ್ರವಲ್ಲದೆ ಪ್ರಮುಖ ಬೀದಿಗಳಲ್ಲಿ ಅಮೃತ ಬಜಾರ್ ಪತ್ರಿಕೆಯನ್ನು ದೂರಿ ಪ್ರದರ್ಶನವಾಯಿತು. ಕೊನೆಗೆ ಆ ಪ್ರದರ್ಶಕರು ಪತ್ರಿಕೆಯ ಆಫೀಸಿನ ಮುಂಭಾಗಕ್ಕೆ ಬಂದು ಅಲ್ಲಿ ಬೋಸರ ಮೇಲೆ ಬರೆದ ಟೀಕೆಗೆ ಕ್ಷಮಾಪಣೆ ಕೇಳಬೇಕೆಂದು ಬೊಬ್ಬಿಟ್ಟರು.

ಈ ಕುರಿತು ಅಮೃತಬಜಾರ್ ಪತ್ರಿಕೆಯೇ ಹೇಳುವುದೇನೆಂದರೆ—ಆ ದಿನ ಕೆಲವು ಪೋಕರಿ ಜನರು ಆಫೀಸಿನ ಮುಂದುಗಡೆ ಒಂದು ಬೊಬ್ಬೆಹಾಕುತ್ತಿದ್ದರು. ಆಫೀಸಿನ ಕಟ್ಟೋಣದಲ್ಲಿ ಸಂಸಾರವಂದಿಗರಾದ ಕುಟುಂಬದವರೂ ನೆಲಸಿದ್ದರು. ಅವರಲ್ಲಿ ಮುದುಕರು, ಅಸೌಖ್ಯದವರು, ಮಕ್ಕಳು, ಹೆಂಗುಸರು ಎಲ್ಲರೂ ಇದ್ದರು. ಆ ಜನರಿಗೆ ಯಾವತರದ ತೊಂದರೆಯಾಗಬಹುದೆಂಬ ಕುರಿತು ಏನೂ ಗಮನಿಸದೆ ಸುಮಾರು ಮಧ್ಯರಾತ್ರಿಯ ತನಕ ಆ ಪೋಕರಿಗಳು ಬೊಬ್ಬೆ ಹಾಕಿದರು.

ಹೀಗಿದೆ ಬೋಸರ ವರ್ತನೆ. ಇಂದು ಅವರಿಗೆ ಬಂಗಾಳದ ಬೆಂಬಲವಿಲ್ಲವೆಂಬುದೂ ಇದರಿಂದ ತಿಳಿಯಬಹುದು.

ಸ್ವದೇಶಾಭಿಮಾನಿ

ತಾರೀಖು 17—6—1940

ಭೀಕರ ಯುದ್ಧ

ಕಳೆದವಾರದ ಘಟನೆಗಳನ್ನು ಪರೀಕ್ಷಿಸಿದರೆ ಯೂರೋಪಿನಲ್ಲಿ ಯುದ್ಧವು ಇನ್ನಷ್ಟು ಭೀಕರ ಸ್ವರೂಪವನ್ನು ತಾಳಿದಂತೆ ಕಂಡು ಬರುತ್ತಿದೆ! ದುರ್ಬಲ ರಾಷ್ಟ್ರಗಳನ್ನು ಪದಾಕ್ರಾಂತಮಾಡಿ ಮುಂದೊತ್ತುತ್ತಿರುವ ಕಲಹಕಂಟಕನಾದ ಹಿಟ್ಲರನ ಯುದ್ಧವೇಗವು ಅತ್ಯುಗ್ರವಾಗುತ್ತಿದೆ. ಪೋಲೆಂಡನ್ನು ನೀರ್ಕುಡಿಸಿ ನಾರ್ವೆ ಡೆನ್ಮಾರ್ಕುಗಳನ್ನು ಸದೆಬಡಿದು, ಹಾಲೆಂಡು ಬೆಲ್ಜಿಯಂಗಳಿಗೂ ಏಕಕಾಲದಲ್ಲಿಯೇ ದಂಡೆತ್ತಿ ನಡೆದ ನಾಜೀಯುದ್ಧ ನೀತಿಯನ್ನು, ಹಿಂಸಾತುರಭಾವವನ್ನು, ಲೋಕವೇ ಖಂಡಿಸಿದೆ. ಹಾಲೆಂಡೂ ಇಂದು ಹಿಟ್ಲರನಿಗೆ ಶರಣಾಯಿತು ಎಂಬ ಸುದ್ದಿ ಬಂದಿದೆ. ಬೆಲ್ಜಿಯಮ್ಮಿನ ಅವಸ್ಥೆ ತಿಳಿದುಬಂದಿಲ್ಲ. ಮುಂದೊತ್ತಿ ಬರುತ್ತಿರುವ ನಾಜೀ ಸೈನ್ಯವನ್ನು ಮಿತ್ರರಾಷ್ಟ್ರದವರು ಪ್ರಚಂಡ ಶಕ್ತಿಯಿಂದ ಇದಿರಿಸಿ ಕಾದಾಡ ತೊಡಗಿದ್ದಾರೆ. ಮರೆಮರೆಯಾಗಿ, ಸೂಕ್ಷ್ಮ ಸೂಕ್ಷ್ಮವಾಗಿ, ನಡೆಯುತ್ತಿದ್ದ ಯುದ್ಧವು ಪ್ರತ್ಯಕ್ಷವಾಗಿ ನಡೆಯ ತೊಡಗಿದೆ. ವೈರಿಯನ್ನು ವೈರಿಯು ಎದುರಿಸಿ ಕಾದಾಟವಾರಂಭವಾಗಿದೆ. ಯೂರೋಪಿನ ರಾಷ್ಟ್ರಗಳಲ್ಲಿ ನಡೆದ ಪ್ರಚಂಡ ಯುದ್ಧ ಸನ್ನಾಹ—ಬಾಂಬು, ವಿಮಾನ, ವಿಷಗಾಳಿ ಮೊದಲಾದ ಅತ್ಯುಗ್ರ ಯುದ್ಧ ಸಾಧನಗಳಿವುಗಳನ್ನೆಲ್ಲಾ ಸ್ಮರಿಸಿದರೆ ಯುದ್ಧದ ವಿಷಮತೆಯೂ ನಾಗರಿಕತೆಗೆ ಇದರಿಂದ ಉಂಟಾಗುವ ಆಘಾತವೂ ಎಷ್ಟು ತೀವ್ರತರವಾದುದೆಂದು ತಿಳಿಯಬಹುದು. ಪಶ್ಚಿಮದಲ್ಲಿ ರಣಕಾಳಿಯು ನರ್ತಿಸ ತೊಡಗಿರುವಳು! ನಿರಪರಾಧಿಗಳೂ ದುರ್ಬಲರೂ ಈ ರುದ್ರನರ್ತನದಲ್ಲಿ ಸಿಕ್ಕು ನುಚ್ಚುನೂರಾಗುತ್ತಿರುವ ದೃಶ್ಯವು ಹೃದಯ ಭೇದಕವಾಗಿರುವುದು.

ರಣಮತ್ತರಾಗಿ ಮುಂದುವರಿವ ನಾಜಿಗಳನ್ನು ಹೀಗೆ ಬಿಟ್ಟುಕೊಡುವುದು ಯೋಗ್ಯವಲ್ಲ. ಅಖಿಲ ಪ್ರಪಂಚವನ್ನೇ ತನ್ನ ಯುದ್ಧ ತೃಷೆಯಿಂದ ನುಂಗಿ ನೀರ್ಕುಡಿಯಬೇಕೆಂದು ಹಿಟ್ಲರನು ರಾಕ್ಷಸೀ ಮನೋನಿರ್ಧಾರವನ್ನು ಮಾಡಿದಂತಿದೆ! ಹಿಟ್ಲರನನ್ನು ಹಿಡಿದು ನಿಲ್ಲಿಸದಿದ್ದರೆ ಪ್ರಪಂಚಕ್ಕೆ ಸುಖವಿಲ್ಲ. ಇಡೀ ಪ್ರಪಂಚವೇ ಯುದ್ಧದ ಜ್ವಾಲೆಯಿಂದ ಭಸ್ಮವಾಗುವ ಕಾಲವು ಬರಬಹುದು. ಆದಕಾರಣ ಪ್ರಜಾಪ್ರಭುತ್ವಕ್ಕಾಗಿ, ಲೋಕಶಾಂತಿಗಾಗಿ, ನ್ಯಾಯಕ್ಕಾಗಿ ಬಯಸುವ ಪ್ರಪಂಚದ ಎಲ್ಲಾ ರಾಷ್ಟ್ರದವರೂ, ಜನಾಂಗದವರೂ ನಾಜಿಗಳನ್ನು ಸರ್ವಶಕ್ತಿಯಿಂದ ಎದುರಿಸಿ ಅವರನ್ನು ಸದೆಬಡಿಯಲು ಯತ್ನಿಸಬೇಕಾದುದು ಮೊದಲ ಕರ್ತವ್ಯವಾಗಿದೆ. ಏಕತಂತ್ರ ಪ್ರಭುತ್ವದ ಜರ್ಮನಿಯು ಗೆಲ್ಲುವುದರಿಂದ ಪ್ರಜಾಪ್ರಭುತ್ವತತ್ವಕ್ಕೆ ಆಘಾತವಾದಂತಾಗಿದೆ. ಆದುದರಿಂದ ಜರ್ಮನಿಯ ನಾಶವೇ ಪ್ರಜಾಪ್ರಭುತ್ವದ ವಿಜಯ ಕಾರಣವೆಂಬುದಕ್ಕೆ ಏನೇನೂ ಸಂಶಯವಿಲ್ಲ. ಹಿಟ್ಲರನಿಗೆ ಇಂದು ಜಗದ ನೈತಿಕ ಸಹಾನುಭೂತಿಯಿಲ್ಲ. ಕರುಣೆಯಿಲ್ಲದ ದಾಳಿ, ನಿರಪರಾಧಿಗಳ ಕೊಲೆ, ಹೆಂಗಸು ಮಕ್ಕಳು ವೃದ್ಧರಾದಿಯಾಗಿ ನಾಗರಿಕರನ್ನು ಬಲಿಕೊಡುವುದು ಇದರಿಂದ ಜನರನ್ನು ಬೆದರಿಸುವುದೇ ಹಿಟ್ಲರನ ವೃತ್ತಿಯಾಗಿದೆ. ಇಂತಹ ಅಕೃತ್ಯವನ್ನು ಯಾರಾದರೂ ವಿರೋಧಿಸದಿರಲು ಸಾಧ್ಯವೇ ಇಲ್ಲ. ಭಾರತವಂತೂ ಜರ್ಮನಿಯ ಆಕ್ರಮಣ ನೀತಿಯನ್ನು ಮೊದಲಿಂದಲೇ ಖಂಡಿಸುತ್ತಿದೆ. ಮೊನ್ನೆ ಮೊನ್ನೆ ಹಾಲೆಂಡು ಬೆಲ್ಜಿಯಮುಗಳ ಆಕ್ರಮಣ ಕಾಲದಲ್ಲಿ ನೆಹರುಗಳು ಮತ್ತು ರಾಜೇಂದ್ರ ಪ್ರಸಾದರು ನಾಜಿಗಳಿಗೆ ಅಪಜಯವನ್ನು ಹಾರೈಸಿ ಹೇಳಿಕೆಗಳನ್ನಿತ್ತಿರುವರು.

ಮಿತ್ರ ರಾಷ್ಟ್ರದವರ ಇಂಗ್ಲಂಡ ಫ್ರಾನ್ಸುಗಳು ಇಂದು ಸರ್ವಶಕ್ತಿಯಿಂದ ಜರ್ಮನಿಯನ್ನು ಇದಿರಿಸುತ್ತಾರೆ. ಈ ಸಂದರ್ಭದಲ್ಲಿ ಪ್ರಜಾಪ್ರಭುತ್ವಕ್ಕಾಗಿಯೂ, ಲೋಕಶಾಂತಿಗಾಗಿಯೂ ಜರ್ಮನಿಯೊಡನೆ ಸಣಸುವ ಬ್ರಿಟಿಷರ ಯುದ್ಧೋದ್ದೇಶವನ್ನು ವಿಸ್ತರಿಸಿ, ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಆಸ್ಪದವನ್ನುಂಟುಮಾಡುವುದರ ಮೂಲಕ ಮಿತ್ರರಾಷ್ಟ್ರದವರು ತಮ್ಮ ಯುದ್ಧದಲ್ಲಿ ಅಖಿಲ ಜಗತ್ತಿನ ನೈತಿಕ ಬೆಂಬಲವನ್ನೂ, ಇತರ ಬೆಂಬಲವನ್ನೂ ಪಡೆಯಲು ಅವಕಾಶವಿದೆ. ಭಾರತವು ನ್ಯಾಯವಾಗಿ ಕೇಳುವ ಸ್ವಾತಂತ್ರ್ಯವನ್ನು ಕೊಡಲು ಬ್ರಿಟನ್ನು ಸಮ್ಮತಿಸಿದರೆ, ಇಂದಿನ ಈ ಭೀಕರ ಯುದ್ಧದಲ್ಲಿ, ಹಿಟ್ಲರನ ದಾಳಿಯನ್ನು ಇದಿರಿಸಿ ಹೋರಾಡಲು ಸಂಪೂರ್ಣ ಶಕ್ತಿಯಿಂದ ಭಾರತವು ಬೆಂಬಲ ಕೊಡುವುದು ಖಂಡಿತವಾಗಿದೆ. ಬ್ರಿಟಿಷ ರಾಜನೀತಿಜ್ಞರು ಇಂತಹ ಸಂದಿಗ್ಧ ಕಾಲದಲ್ಲಿ ತಮ್ಮ ವಿಚಕ್ಷಣತೆಯನ್ನು ಉಪಯೋಗಿಸಿ ಭಾರತದ ಸಮಸ್ಯೆಯನ್ನು ನ್ಯಾಯರೀತಿಯಿಂದ ಪರಿಹರಿಸುವ ಮೂಲಕ ಯುದ್ಧದಲ್ಲಿ ಹೆಚ್ಚಿನ ವಿಜಯಶಕ್ತಿಯನ್ನು ಪಡೆಯುವಂತೆ ಪ್ರಯತ್ನಿಸಲು ಹಿಂದಾಗಲಾರರೆಂದು ಹಾರೈಕೆ.

ಜಾರ್ಜ್ ಲ್ಯಾನ್ಸ್‌ಬರಿಯವರು ಮೃತರಾದರು.

ಮಿ॥ ಜಾರ್ಜ್ ಲ್ಯಾನ್ಸ್‌ಬರಿಯವರು ತಾ ೭ರಂದು ಮೃತರಾದರು. ಇವರಿಗೆ ಮೃತರಾದಾಗ ೮೧ ವರ್ಷ. ೧೯೧೦ರಿಂದ ೧೯೧೨ರ ವರೆಗೆ ಪಾರ್ಲಿಮೆಂಟಿನಲ್ಲಿ ವಿರುದ್ಧ ನಾಯಕರಾಗಿದ್ದರು. ಕೂಲಿಗಾರರ ಸಂಗಡವು ಅಧಿಕಾರದಲ್ಲಿದ್ದಾಗ 'ಕಮಿಷನರ್ ಆಫ್ ವರ್ಕ್ಸ್' ಎಂಬ ಪದವಿಯಲ್ಲಿದ್ದರು. ಇವರ ವಿದ್ಯಾಭ್ಯಾಸವು ಬಾಲ್ಯದಲ್ಲಿ ಒಂದು ಎಲಿಮೆಂಟರಿ ಸ್ಕೂಲಿನಲ್ಲಿ ನಡೆಯಿತು. ಆಮೇಲೆ ಮುದ್ರಣೋದ್ಯೋಗಕ್ಕೆ ಸೇರಿದರು. ೧೯೧೦ರಲ್ಲಿ ಲೇಬರ್ ಸಂಗಡದ ಸದಸ್ಯರಾಗಿ ಬೋ ಮತ್ತು ಬ್ರಾಮ್ಲಿ ಪ್ರದೇಶದಿಂದ ಕಾಮನ್ಸ್ ಸಭೆಗೆ ಸದಸ್ಯರಾಗಿ ಚುನಾಯಿತರಾದರು. ಪೂರ್ ಲಾ ವಿಷಯವನ್ನು ವಿಮರ್ಶಿಸಲು ನೇಮಿಸಲಾಗಿದ್ದ ರಾಯಲ್ ಕಮಿಷನಿನ ಸದಸ್ಯರಾಗಿದ್ದರು. ಅನೇಕ ವರ್ಷಗಳ ಕಾಲ ಲೇಬರ್ ಸಂಗಡದ ಸದಸ್ಯರಾಗಿ ಸೇವೆಮಾಡಿದರು. ಪತ್ರಿಕೋದ್ಯೋಗಿಗಳಾಗಿ "ಡೇಲೀ ಹೆರಾಲ್ಡ್" ಪತ್ರಿಕೆಗೆ ಸಂಪಾದಕರಾಗಿದ್ದರು. ೧೯೨೭ರಲ್ಲಿ ನಡೆದ ಲೇಬರ್ ಪಾರ್ಟಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಚರ್ಚಿಗೆ ಸಂಬಂಧಿಸಿದ ವಿಷಯಗಳಲ್ಲಿಯೂ, ಸಾಮಾಜಿಕ ವಿಷಯಗಳಲ್ಲಿಯೂ ಅತ್ಯಂತ ಆಸಕ್ತಿಯಿಂದ ಕೆಲಸಮಾಡುತ್ತಿದ್ದರು. ೧೯೨೯ರಲ್ಲಿ ಮಿ॥ ರ್‍ಯಾಂಸೆ ಮೆಕ್‌ಡೊನಾಲ್ಡರು ಮುಖ್ಯ ಮಂತ್ರಿಯಾಗಿದ್ದಾಗ್ಗೆ ಆ ಮಂತ್ರಿಮಂಡಲದಲ್ಲಿ ಒಂದು ಹುದ್ದೆಯನ್ನು ಅಲಂಕರಿಸಿದ್ದರು. ಲಂಡನಿನ ಪಾರ್ಕುಗಳ ಮತ್ತು ಉದ್ಯಾನಗಳ ಸುಧಾರಣೆಯಲ್ಲಿ ಬಹಳ ಶ್ರದ್ಧೆ ವಹಿಸಿದ್ದರು. ೧೯೩೧ನೇ ಮಹಾ ಚುನಾವಣೆಯಾದ ಮೇಲೆ ಪಾರ್ಲಿಮೆಂಟಿನಲ್ಲಿ ಎದುರು ಪಂಗಡದ ಮುಖಂಡರಾಗಿ ಸೇವೆ ಮಾಡಿದರು. ೧೯೩೧—೩೫ ವರ್ಷಗಳಲ್ಲಿ ಲೇಬರ್ ಪಾರ್ಟಿಯ ಮುಖಂಡರಾಗಿದ್ದರು. "ಅಕ್ಟೋಬರ್ ೧೯೩೫ರಲ್ಲಿ ಈ ಪದವಿಗೆ ರಾಜಿನಾಮೆಯಿತ್ತರು. ಜಾರ್ಜ್ ಲ್ಯಾನ್ಸ್‌ಬರಿಯವರು ಬಡವರ ಸೇವೆಯಲ್ಲಿ ಪ್ರಧಾನ ಪಾತ್ರವಹಿಸಿದ್ದರು. ಭಾರತಕ್ಕೆ ಸ್ವರಾಜ್ಯವು ಲಭಿಸಬೇಕೆಂದು ಕಾಮನ್ಸ್ ಸಭೆಯಲ್ಲಿ ವಾದಿಸುತ್ತಿದ್ದವರಲ್ಲಿ ಮಿ॥ ಲ್ಯಾನ್ಸ್‌ಬರಿಯವರು ಅಗ್ರಗಣ್ಯರು. ಭಾರತದ ಅನೇಕ ನಾಯಕರು ಇವರಿಗೆ ಪರಮ ಸ್ನೇಹಿತರಾಗಿದ್ದರು. ಪ್ರಪಂಚದಲ್ಲಿ ಯುದ್ಧವನ್ನು ನಿಲ್ಲಿಸಿ ಶಾಶ್ವತವಾದ ಶಾಂತಿಯನ್ನು ಸ್ಥಾಪಿಸಬೇಕೆಂದು ಅಹರ್ನಿಶಿಯೂ ಪ್ರಯತ್ನಿಸುತ್ತಿದ್ದವರಲ್ಲಿ ಮಿ॥ ಲ್ಯಾನ್ಸ್‌ಬರಿಯವರಿಗೆ ಸಮಾನರಿಲ್ಲ. ಇವರು ಹಿಟ್ಲರನ ಬಳಿಗೂ, ಮುಸೋಲಿನಿಯ ಬಳಿಗೂ ಅನೇಕ ಸಾರಿ ಪ್ರಯಾಣ ಮಾಡಿ, ಅವರನ್ನು ಶಾಶ್ವತವಾದ ಶಾಂತಿಯ ಕಡೆಗೆ ತಿರುಗಿಸಲು ಯತ್ನಿಸಿದರು. ಮಿ॥ ಲ್ಯಾನ್ಸ್‌ಬರಿಯವರು ಬಹಳ ಧೈರ್ಯಶಾಲಿಗಳು, ಸ್ವಾರ್ಥತ್ಯಾಗಿಗಳು. ತಮ್ಮ ತತ್ವಕ್ಕಾಗಿ ಎಷ್ಟೇ ಕಷ್ಟವನ್ನಾಗಲೀ ಅನುಭವಿಸಲು ಸಿದ್ಧರಾಗಿದ್ದವರು. ಇವರು ಸಾಮ್ರಾಜ್ಯ ತತ್ವಕ್ಕೆ ವಿರೋಧಿಗಳಾಗಿ, ಸೋಷಲಿಸಂ ತತ್ವವನ್ನು ಪುರಸ್ಕಾರ ಮಾಡುವವರ ಪಂಕ್ತಿಗೆ ಸೇರಿದ್ದರು. ಇವರ ಮರಣದಿಂದ ಇಂಗ್ಲೆಂಡಿಗೂ, ಅಖಿಲ ಪ್ರಪಂಚದ ಬಡವರ ಸಮೂಹಕ್ಕೂ, ಭಾರತಕ್ಕೂ ಬಹಳ ನಷ್ಟವುಂಟಾಗಿದೆಯೆಂದು ಹೇಳಬೇಕು.

ಬ್ರಿಟಿಷ್ ಮಂತ್ರಿಮಂಡಲದಲ್ಲಿ ಬದಲಾವಣೆ!

ಚೆಂಬರ್ಲಿನರ ಸ್ಥಾನಚ್ಯುತಿ!

ಚರ್ಚಿಲ್ಲರಿಗೆ ಪ್ರಧಾನ ಪದವಿ!

ಎಲ್ಲಾ ಪಕ್ಷಗಳನ್ನೂ ಒಂದುಗೂಡಿಸುವ ಯತ್ನ

ಯುರೋಪಿನಲ್ಲಿ ಬ್ರಿಟಿಷರು ನಡೆಸುವ ಯುದ್ಧ ನೀತಿಯ ಕುರಿತು ಹಲವುಸಮಯಗಳಿಂದ ಬ್ರಿಟಿಷರಲ್ಲಿ ಅಸಂತೋಷವು ಕಂಡುಬರುತ್ತಿತ್ತು. ಅದಕ್ಕಾಗಿ ಪ್ರಧಾನ ಮಂತ್ರಿ ಚೆಂಬರ್ಲಿನರನ್ನು ಕಟುವಾಗಿ ಆಗಾಗ ಟೀಕೆಮಾಡುತ್ತಿದ್ದರು.

ನಾರ್ವೇ ಯುದ್ಧದಲ್ಲಿ ಬ್ರಿಟಿಷರಿಗಾದ ಪರಾಜಯದ ಕುರಿತು ಪಾರ್ಲಿಮೆಂಟ್ ಸಭೆಯಲ್ಲಿ ಪ್ರಚಂಡವಾದ ವಿವಾದಗಳಾದುವು. ಬೇರೆ ಬೇರೆ ಪಕ್ಷದ ಮುಖಂಡರು ಚೆಂಬರ್ಲಿನ್ ಮಂತ್ರಿ ಮಂಡಳವನ್ನು ಅತ್ಯುಗ್ರವಾಗಿಟೀಕಿಸಿದರು. ಹೀಗೆ ಟೀಕಿಸಿದವರಲ್ಲಿ ಲಾಯಿಡ್ ಜಾರ್ಜ್, ಡಫಕೂಪರ್ ಪ್ರಭೃತಿಗಳು ಅಗ್ರಗಣ್ಯರು.

ಲಾಯಿಡ್ ಜಾರ್ಜರು ಚೆಂಬರ್ಲಿನ್ ಮಂತ್ರಿಮಂಡಳದ ಯುದ್ಧ ಧೋರಣೆಯು ಪ್ರಮಾದಕರವೆಂಬುದನ್ನು ತಿಳಿಸುತ್ತಾ, ಹೇಳಿದ್ದೇನೆಂದರೆ ಇಂದಿನ ಈ ಸಮಯದಲ್ಲಿ ಚೆಂಬರ್ಲಿನರು ಬ್ರಿಟನಿಗೆ ಏನಾದರೂ ಉಪಕಾರ ಮಾಡುವುದಿದ್ದರೆ, ಅದು ಮಂತ್ರಿಪದವಿಗೆ ಅವರು ಕೊಡುವ ರಾಜಿನಾಮೆಯಿಂದ ಎಂದರು.

ಅಂತೂ ಕಟ್ಟಕಡೆಗೆ ಪ್ರಧಾನ ಮಂತ್ರಿಗಳಾದ ಚೆಂಬರ್ಲಿನರು ತನ್ನ ಪ್ರಧಾನ ಮಂತ್ರಿಪದವಿಗೆ ರಾಜಿನಾಮೆ ಕೊಡಬೇಕಾಗಿ ಬಂತು.

ಅಖಿಲ ಪಕ್ಷಗಳ ಮಂತ್ರಿಮಂಡಳದ ರಚನೆಯಾಯಿತು. ಚರ್ಚಿಲರು ಮಂತ್ರಿಮಂಡಳದ ಪ್ರಧಾನರಾಗಿ ನಿಯುಕ್ತರಾದರು.

ಚೆಂಬರ್ಲಿನರ ಭಾಷಣ

ಚೆಂಬರ್ಲಿನರು ಬ್ರಿಟಿಷ್ ಜನಾಂಗಕ್ಕೆ ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತಾ ಜರ್ಮನಿಯು ಹೋಲೆಂಡು ಬೆಲ್ಜಿಯಂ ಲಕ್ಸಂಬರ್ಗ್‌ಗಳ ಮೇಲೆ ದಾಳಿಯಿಟ್ಟದನ್ನು ಬಲವಂತವಾಗಿ ಖಂಡಿಸಿ, ಈ ಸಂದಿಗ್ಧ ಕಾಲದಲ್ಲಿ ರಾಷ್ಟ್ರದ ಐಕ್ಯಮತ್ಯವು ಅವಶ್ಯವಾಗಿರುವದರಿಂದ ತಾನು ರಾಜಿನಾಮೆ ಕೊಟ್ಟುದಾಗಿ ತಿಳಿಸಿದರು. ಸಾರ್ವಭೌಮರು ಮುಂದಿನ ಸರಕಾರವು ರಾಷ್ಟ್ರೀಯತೆಯ ಮೂಲಾಧಾರದ ಮೇಲೆ ರಚಿತವಾಗಬೇಕೆಂದು ಅಪೇಕ್ಷಿಸಿರುವರೆಂದೂ, ತನ್ನ ಸ್ನೇಹಿತರೂ ಸಹೋದ್ಯೋಗಿಗಳೂ ಆದ ಚರ್ಚಿಲ್ಲರು ಜವಾಬ್ದಾರಿ ವಹಿಸುವುದು ತನಗೆ ಸಂತೋಷವೆಂದೂ ಹೇಳಿದರು. "ಮಿ। ಚರ್ಚಿಲ್ಲರು ತನ್ನ ಹೊಣೆಗಾರಿಕೆಯನ್ನು ಜಯಶೀಲವಾಗಿ ನಡೆಸುವರೆಂಬ ಕುರಿತು ತನಗೆ ಯಾವ ಸಂಶಯವೂ ಇಲ್ಲವೆಂದೂ, ತಾನು ಎಂದಿನಂತೆ ತನ್ನ ಕೈಲಾದ ಸಹಾಯವನ್ನು ಮಂತ್ರಿಮಂಡಳಕ್ಕೆ ಕೊಡುವೆನೆಂದೂ ಹೇಳಿದರು.

ಹೀಗೆ ಪ್ರಕಟಣೆ ಹೊರಡಿಸಿ ಚೆಂಬರ್ಲಿನರು ರಾಜಿನಾಮೆಯಿತ್ತ ಮೇಲೆ ಸಾರ್ವಭೌಮರ ಹೇಳಿಕೆಯಂತೆ ಚರ್ಚಿಲ್ಲರು ಪ್ರಧಾನ ಮಂತ್ರಿಪದವಿಯನ್ನಲಂಕರಿಸಿದರು. ಬ್ರಿಟಿಷರು ಯುದ್ಧವನ್ನು ಬಹು ತೀವ್ರವಾಗಿ ಸಾಗಿಸಬೇಕೆಂದೂ ಆ ಬಗ್ಗೆ ಹೊಸದಾಗಿ ರಚಿಸಿದ ಬ್ರಿಟಿಷ್ ಮಂತ್ರಿಮಂಡಲದಲ್ಲಿ ಸಕಲ ಪಕ್ಷದವರ ಪ್ರಾತಿನಿಧ್ಯವಿರಬೇಕೆಂದೂ ಈ ಬದಲಾವಣೆ ಮಾಡಲಾಗಿದೆ.

ಬ್ರಿಟಿಷ್ ಯುದ್ಧ ಮಂತ್ರಿಮಂಡಳವು ಈ ಕೆಳಗೆ ಕಂಡಂತೆ ರಚಿತವಾಯಿತು.

ಮಿ। ಚರ್ಚಿಲ್—ಪ್ರಧಾನ ಮಂತ್ರಿ ಮತ್ತು ರಕ್ಷಣಾ ಮಂತ್ರಿ.

ಮಿ। ಚೆಂಬರ್ಲಿನ್ – ಲಾರ್ಡ್ ಪ್ರೆಸಿಡೆಂಟ್ ಓಫ್ ದಿ ಕೌನ್ಸಿಲ್.

ಮಿ। ಸಿ. ಆರ್ ಅಟ್ಲಿ—ಲಾರ್ಡ್ ಪ್ರಿವಿಸೀಲ್.

ಲಾರ್ಡ್ ಹೆಲಿಫಾಕ್ಸ್ —ವಿದೇಶಾಂಗ ಮಂತ್ರಿ.

ಮಿ। ಗ್ರೀನ್‌ವುಡ್—ಖಾತೆಯಿಲ್ಲದ ಮಂತ್ರಿ.

ಈ ಕೆಳಗಿನವರೂ ಮಂತ್ರಿಮಂಡಳದಲ್ಲಿ ಸೇರಿಸಲ್ಪಟ್ಟರು.

ಮಿ। ಎ. ವಿ. ಅಲೆಗ್ಝಾಂಡರ್-ಫಸ್ಟ್ ಲಾರ್ಡ್ ಓಫ್ ಎಡ್ಮಿರಾಲಿಟಿ.

ಮಿ। ಅಂತೋನಿ ಏಡನ್—ಸೆಕ್ರೆಟರಿ ಫಾರ್ ಏರ್.

ಸರ್ ಆರ್ಚಿಬಾಲ್ಡ್ ಸಿಂಕ್ಲೇರ್—ಸೆಕ್ರೆಟರಿ ಫಾರ್ ವಾರ್.

ಸರ್ ಜಾನ್ ಸೈಮನ್—ಲಾರ್ಡ್ ಚಾನ್ಸೆಲರ್.

ಲಾರ್ಡ್ ಲಾಯ್ಡ್ - ವಸಾಹತ್ತುಗಳ ಸೆಕ್ರೆಟರಿ.

ಸರ್ ಕಿಂಗ್ಸ್ ವುಡ್ — ಚಾನ್ಸಲರ್ ಓಫ್ ದಿ ಎಕ್ಸ್‌ಚೆಕರ್.

ಸರ್ ಜಾನ್ ಅಂಡೆರ್ಸನ್ — ಹೋಮ್ ಸೆಕ್ರೆಟರಿ.

ಮಿ। ಹರ್ಬರ್ಟ್ ಮೊರಿಸನ್—ಸಪ್ಲೈ ಮಿನಿಸ್ಟರ್.

ಮಿ। ಡಫ್ ಕೂಪರ್ — ಇನ್‌ಫಾರ್ಮೆಶನ್ ಮಿನಿಸ್ಟರ್.

ಸರ್ ಆಂಡ್ರ್ಯೂ ಡಂಕಾನ್-ಪ್ರೆಸಿಡೆಂಟ್ ಓಫ್ ದಿ ಬೋರ್ಡ್ ಓಫ್ ಟ್ರೇಡ್.

ಚರ್ಚಿಲ್ಲರು ಕಾಮನ್ಸಿನಲ್ಲಿ ಮುಖಂಡರಾಗುವರು.

ಚರ್ಚಿಲ್ಲರ ಅಲ್ಪ ಪರಿಚಯ

ಇವರು ಡ್ಯೂಕ್ ಓಫ್ ಮಾರ್ಲ್‌ಬರೋ ಸಂತಾನಕ್ಕೆ ಸೇರಿದವರು. ಶ್ರೀ। ಲಾರ್ಡ್ ರಾಂಡೋಲ್ಫ್ ಚರ್ಚಿಲ್ಲರ ದ್ವಿತೀಯ ಪುತ್ರರು. ೧೮೭೪ ನವಂಬರ ೩೦ರಲ್ಲಿ ಹುಟ್ಟಿದರು. ೧೮೯೫ರಲ್ಲಿ ಸೈನ್ಯಕ್ಕೆ ಸೇರಿ ಕೆಲಸಮಾಡಿದರು. ೧೮೯೯–೧೯೦೦ರ ತನಕ ಪತ್ರಿಕಾಉದ್ಯೋಗಿಯಾಗಿದ್ದರು.

ದಕ್ಷಿಣ ಆಫ್ರಿಕದ ಯುದ್ಧ ಮುಗಿದ ಮೇಲೆ ಕನ್ಸರ್ವೇಟಿವ್ ಪಕ್ಷದಿಂದ ೧೯೦೦ರಿಂದ ೧೯೦೬ರ ತನಕ ಪಾರ್ಲಿಮೆಂಟಿನ ಸದಸ್ಯರಾದರು. ೧೯೦೬ರಿಂದ ೧೯೦೮ರ ತನಕ ಲಿಬರಲ್ ಪಕ್ಷದ ಪಾರ್ಲಿಮೆಂಟ್ ಸದಸ್ಯರಾದರು. ೧೯೦೬ರಿಂದ ೧೯೨೨ರ ವರೆಗೆ ವಸಾಹತುಗಳಿಗೆ ಉಪಸಚಿವರೂ ವ್ಯಾಪಾರ ಮಂಡಲದ ಅಧ್ಯಕ್ಷರೂ, ಹೋಮ್ ಸೆಕ್ರೆಟರಿಗಳೂ, ಫಸ್ಟ್‌ಲಾರ್ಡ್ ಓಫ್ ಎಡ್ಮಿರಾಲಿಟಿ ಲಂಕೋಸ್ಟರ್ ಡಚ್ಚಿಯ ಚಾನ್ಸೆಲರೂ, ಮೊದಲಾಗಿ ಹಲವು ಪ್ರಾಮುಖ್ಯ ಪದವಿಗಳಲ್ಲಿದ್ದರು.

ಚರ್ಚಿಲ್ಲರು ಹಲವು ಗ್ರಂಥಗಳನ್ನು ಬರೆದಿರುವರು. ಉತ್ತಮವಾಗಿ ಹಾಗೂ ಲೇಖಕರಾಗಿರುವರು. ಜರ್ಮನ್ ದ್ವೇಷಿಗಳಲ್ಲಿ ಇವರು ಬಹು ಪ್ರಖ್ಯಾತರಾಗಿ ಅಗ್ರಗಣ್ಯರಾದವರು. ಹಿಟ್ಲರನನ್ನು ನಿಂದಿಸುವುದರಲ್ಲಿ ಇವರನ್ನು ಮಿಕ್ಕಿದ ವಾಚಾಳರು ಇಲ್ಲ.

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ!

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never.
Hard Work?	—	Very Often.
Hard work and THRIFT	—	Always.

RESOURCES OF A CRORE.

Estd: 1906

CANARA BANK LIMITED.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು

ವಿದ್ವಾನ್ ಶ್ರೀ। ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು.)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0—1—6
6ನೆ ತರಗತಿಗೆ	,,	0—2—0
7ನೆ ,,	,,	0—2—6
8ನೆ ,,	,,	0—3—0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಮಲೇರಿಯಾ ಹಾವಳಿ!

ಸಂಯುಕ್ತ ಅಮೇರಿಕದಲ್ಲಿ ಇಂದು ಮಿಲಿಯ ಮಿಲಿಯಾಂತರ ಮಂದಿ ಮಲೇರಿಯಾ ರೋಗಕ್ಕೆ ಬಲಿಯಾಗಿ ವ್ಯಥೆ ಪಡುತ್ತಿರುವರೆಂಬ ವಿಷಯವು ಪ್ರಸಿದ್ಧವಾಗಿದೆ.

ರೋಕ್ ಫೆಲ್ಲರ್ ಫೌಂಡೇಶನಿನವರು ಈ ರೋಗಕ್ಕೆ ಬಲಿಯಾಗುವುದರ ಗಣನೆಯನ್ನು ತೆಗೆದಿರುವರು. ಅದುದರಿಂದ ತಿಳಿದು ಬರುವುದೇನೆಂದರೆ ವರ್ಷ ಒಂದರ ಮೂವತ್ತೊಂಬತ್ತು ಮಿಲಿಯ ಡೋಲರುಗಳು ಮಲೇರಿಯಕ್ಕಾಗಿ ವೆಚ್ಚವಾಗುತ್ತಿದೆ. ಆ ಕೂಡಲೇ ಟೆನೆಸ್ಸಿನ ಪ್ರೊಫೆಸರರೊಬ್ಬರು ಈ ಮೂಲಾಗ್ರವಾಗಿ ಪರಿಶೋಧಿಸಿ ಅರ್ಧ ಮಿಲಿಯ ಡೋಲರುಗಳು ವೆಚ್ಚವಾಗುವುದೆಂದು ಸಾರಿದರು. ಪ್ರತಿವರ್ಷವೂ ಅಮೇರಿಕದಲ್ಲಿ ಅರ್ಧ ಮಿಲಿಯ ಮಲೇರಿಯಾ ರೋಗ ಪೀಡಿತರಿರುವರೆಂದೂ ತಿಳಿಸಿದರು.

ಹೀಗೆ, ಅಂತಹ ರಾಷ್ಟ್ರದಲ್ಲಿಯೇ ಮಲೇರಿಯವು ಜನರ ಆರೋಗ್ಯದ ವಿಷಯದಲ್ಲಿ ಬಹಳ ಕೇಡಕವಾದ ಒಂದು ಸಂಗತಿಯಾಗಿದೆ. ಅಲ್ಲಿನ ಜನರು ಬಡವರಾಗಿರುವುದು ಇದಕ್ಕೆ ಕಾರಣವಲ್ಲ. ಅವರ ಅಜ್ಞಾನಕ್ಕೆ ಬೇರೆ ಯಾವ ಕಾರಣವೂ ಇಲ್ಲ.

ಅಮೇರಿಕದ ಸಾರ್ವಜನಿಕ ಆರೋಗ್ಯ ಖಾತೆಯವರು ಮಲೇರಿಯಾ ರೋಗದ ವಿಷಯ ಅದರಿಂದುಂಟಾಗುವ ಮರಣದ ವಿಷಯ ಪ್ರತಿ ವರ್ಷವೂ ಲೆಕ್ಕವನ್ನು ಪ್ರಸಿದ್ಧ ಪಡಿಸುತ್ತಾರಾದರೂ ಅದು ಯಾವಾಗಲೂ ಪರಿಪೂರ್ಣವಾಗಿರುವುದಿಲ್ಲ. ಕಳೆದ ವಸಂತ ಕಾಲದಲ್ಲಿ ಅಮೇರಿಕದ ಸಾರ್ವಜನಿಕ ಆರೋಗ್ಯ ಖಾತೆಯ ಡಾ| ಗಳಾದ ಎಲ್ ಎಲ್ ವಿಲಿಯಂಸರು ಮಲೇರಿಯಾ ಕಂಟ್ರೋಲ್ ಅಧಿಕಾರಿ ಎಂಬವರು ಹೊರಡಿಸಿದ ಒಂದು ಲೆಕ್ಕದ ಪ್ರಕಾರ ತಿಳಿದು ಬರುವುದೇನೆಂದರೆ ಒಟ್ಟು ಜನಸಂಖ್ಯೆಯಲ್ಲಿ ಆರನೇ ಒಂದಂಶದಷ್ಟು ಜನರು ಮಲೇರಿಯ ರೋಗ ಬಾಧಿತರಾಗಿರುವರೆಂದು.

ಅಮೇರಿಕದ ಸಾರ್ವಜನಿಕ ಖಾತೆಯವರು ಎರಡು ವರ್ಷಗಳ ಹಿಂದೆ ಅವರು ಲೀಗ್ ಓಫ್ ನೇಶನ್ಸ್ ಮಲೇರಿಯಾ ಕಮಿಶನಿನವರ ಕ್ವಿನಿನನ್ನು ಸೊಳ್ಳೆಯ ರೋಗ ನಿವಾರಕ ಮದ್ದೆಂದು ಪ್ರಕಟಪಡಿಸಿದ ತಿಳಿದು ಬಂದಿದೆ. ದಿನಕ್ಕೆ ೬ ಗ್ರೈನು ಕ್ವಿನಿನು ತೆಗೆದುಕೊಂಡರೆ ಮಲೇರಿಯದ ಪ್ರತಿಬಂಧಕವಾಗುವುದೆಂದೂ, ೧೫ ಗ್ರೈನಿನಿಂದ ೨೦ ಗ್ರೈನಿನವರೆಗೆ ೫ರಿಂದ ೭ ದಿನಗಳ ತನಕ ತೆಗೆದುಕೊಂಡರೆ ಮಲೇರಿಯಾ ಜ್ವರವು ನಿಲ್ಲುವುದೆಂದು ಅವರು ಪ್ರಕಟಿಸಿದರು. ಈ ಮಲೇರಿಯಾ ಕಮಿಶನಿನವರ ೧೯೩೭ನೇ ವರ್ಷದ ವರದಿಯು ೧೯೩೫ನೇ ಇಸವಿಯಲ್ಲಿ [illegible] ಮಲೇರಿಯ [illegible] ಕ್ವಿನಿನು [illegible]

ಮಂಗಳೂರು ನಾಟಕ

ಬೋಳೂರು ಕರ್ನಾಟಕ ನಾಟಕ ಸಭೆಯವರು ಕಳೆದ ಆದಿತ್ಯವಾರ 'ಜೀವನ ಯಾತ್ರೆ' ಎಂಬ ನಾಟಕವನ್ನು ಗಣಪತಿ ಹೈಸ್ಕೂಲಿನ ಸಭಾ ಭವನದಲ್ಲಿ ಯಶಸ್ವಿಯಾಗಿ ಅಭಿನಯಿಸಿದರು.

ಕರ್ನಾಟಕ ಸಾಮ್ರಾಜ್ಯ ದಿನಾಚರಣೆ

ತಾ ೧೪ರಂದು ಸ್ಥಳೀಯ ಕಲ್ಚರಲ್ ಎಸೋಸಿಯೇಶನಿನ ಆಶ್ರಯದಲ್ಲಿ ಕರ್ನಾಟಕ ಸಾಮ್ರಾಜ್ಯ ದಿನಾಚರಣೆಯು ಶ್ರೀ| ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ಟಿ ನಾರಾಯಣ ಭಟ್ಟ, ಎಸ್. ಮುಕುಂದ ರಾವ್ ಇವರು ಭಾಷಣಗಳನಿತ್ತರು.

ಮಂಜೇಶ್ವರ — ಶ್ರೀ ಮದನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಗೆ ಸಂಬಂಧಿಸಿದ ಒಂದು ವ್ಯಾಯಾಮ ಮಂದಿರವು ಕಳೆದ ಭಾನುವಾರ ಶ್ರೀ ಸ್ವಾಮಿ ಸುವಿಚಾರಾನಂದಜೀಯವರಿಂದ ಉದ್ಘಾಟನೆ ಮಾಡಲ್ಪಟ್ಟಿತು.

ನೀರಳಿಕಟ್ಟೆ — ಸ್ಥಳೀಕ ಬೋರ್ಡ್ ಶಾಲೆಯಲ್ಲಿ ೧೦-೫-೪೦ರಂದು 'ರುಕ್ಮಾಂಗದ ಚರಿತ್ರೆ' ಎಂಬ ಹರಿಕಥೆಯು ಶ್ರೀಯುತ ಜತ್ತಿ ಈಶ್ವರ ಭಟ್ಟರಿಂದ ಮಾಡಲ್ಪಟ್ಟಿತು.

೧೩-೫-೪೦ರಂದು "ಸಂತ ಕಬೀರದಾಸ ಚರಿತ್ರೆ' ಎಂಬ ಹರಿಕಥೆಯು ಶ್ರೀ ಉಜ್ರೆ ವಾಸುದೇವ ನ್ಯಾಕರಿಂದ ಮಾಡಲ್ಪಟ್ಟಿತು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C 66/1940

ದಾವಿದ್ ವೆಂಕಟೇಶ — ವಾದಿ

ಎದಿ

ಪೇದ್ರು ಫೆರ್ನಾಂಡಿಸ್ ಭಸ್ತ್ಯಾಂ ಫೆರ್ನಾಂಡಿಸರ ಮಗ ಮಂಗ್ಳೂರು ತಾಲೂಕು ಕಿಂಕೆಬೆಳ್ಳೂರು ಗ್ರಾಮದ ಇನ್ ಶ್ಯಾರಿಕೊಪ್ಪಲ ಎಂಬಲ್ಲಿರುವವ } ಪ್ರತಿವಾದಿ

ಪ್ರತಿವಾದಿರಿಗೆ—

ವಾದಿಗೆ ನೀವು ತಾ 15 9 1937ರಲ್ಲು ರೂಪ್ಯಾ 120ಕ್ಕೆ ಶೇ $12\frac{1}{2}$%ರ ದರದ ಬಡ್ಡಿ ಕೂಡಿಸಿ ವಾಪಾಸು ಕೊಡುವದಾಗಿ ಬರಕೊಟ್ಟ ದಿವನೋಟು ಪ್ರೋ ನೋಟಿನ ಅಸ್ಲು ಬಡ್ಡಿ ರೂಪ್ಯಾ 138-5-8 ವ ಮುಂದಿನ ಬಡ್ಡಿ ಕೋರ್ಟು ಖರ್ಚು ವಗೈರೆ ವಸೂಲು ಪಡಿಯುವರೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 10-6-1940ಕ್ಕೆ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಕ್ಸೀಗೆ ಯಿಟ್ಟಿರುವದರಿಂದ ಆ ದಿವಸ ನೀವು ಹಾಜರಾಗಿ ವ್ಯವಹರಿಸದಿದ್ದರೆ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲಾದೀತು.

ಮಂಗಳೂರು, ತಾ. 15-5-1940. } K. Rammohan Rao
ವಾದಿ ಕಡೆ ವಕೀಲ

[illegible]ಯೆಂದು ದೇಶದ ಎಲ್ಲಾ ಕಡೆಗಳಲ್ಲಿ ಉಪಯೋಗಿಸಿ ಕ್ವಿನಿನು ಮಲೇರಿಯಕ್ಕೆ ತೀವ್ರ ಗುಣಕಾರಿಯಾದ ಔಷಧವೆಂದು ಪ್ರಸಿದ್ಧ ಪಡೆದಿದೆ. M. E. No. 194.

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂ ವಿವರ

6ನೇ	7ನೇ	8ನೇ ತರಗತಿಗಳಿಗೆ
0-5-0	0-6-0	0-7-0

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟುದು.

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

RS 50/-,100/-,500/-,1,000 -&5,000/-

are now issued at all our Branches

For particulars call at or write to

Any of our nearest Branches

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈ ಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಪಂಡಿತ ತಾರಾನಾಥರ ಸುಲಭ ಚಿಕಿತ್ಸೆ!

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ನೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ.

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಪಿ. ಮಾರ್ಗ್ಯದ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು.

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ.

'ಅಣ್ಣಾ!
'ಕರು ಹೇಗಿದೆ?'
'ಅಪ್ಪಾ! ಏನು ಹೇಳಲಿ?'

ಎಂದು ಹೇಳುತ್ತಾ ನೌಕರನ ಕಣ್ಣುಗಳಿಂದ ನೀರು ಸುರಿಯಿತು. ಕರುವಿನ ಸ್ಥಿತಿ ನಿನ್ನೆ ಮೊನ್ನೆಗಿಂತ ಇವತ್ತು ಬಹಳ ಕೆಟ್ಟಿತ್ತು. ಅದು ಪ್ರಾಣೋತ್ಕ್ರಮಣಸ್ಥಿತಿಯಲ್ಲಿ ನರಳುತ್ತಿತ್ತು. ಪಾಪ! ಹೆತ್ತ ಕರು ಹೇಗೆ ಬದುಕುವದೋ ಅದನ್ನು ಹೇಗೆ ಉಳಿಸುವದೋ ಎಂಬ ಚಿಂತೆ ಕಿಶೋರನಿಗೆ. ಅವನು ಹೊರಗಿನಿಂದ ಬಂದವನು ಅಂಗಿ ಧೋತರಗಳನ್ನು ಗೂಟಕ್ಕೆ ತೂಗಿಸಿ ನೆಟ್ಟಗೆ ಕೊಟ್ಟಿಗೆಯ ಕಡೆಗೆ ಹೋದ. ಅಲ್ಲಿ ಹುಲ್ಲಿನ ಹಾಸಿಗೆಯ ಮೇಲೆ ನಂದಿನಿ ಮಲಗಿತ್ತು. ಅದರ ಕಣ್ಣುಗಳು ದುಃಖಾಶ್ರುಗಳಿಂದತೊಯಿದು ಹೋಗಿದ್ದುವು. ಅವನು ಅದರ ಸಮೀಪ ಕೂತು ಬಹಳ ಸಮಯದ ತನಕ ಮೈ ಮೇಲೆ ಕೈ ಆಡಿಸುತ್ತ, ಮುದ್ದಿಸುತ್ತ, ಚುಂಬಿಸುತ್ತ ಸೇವೆ ಮಾಡಿದ. ಸಮೀಪದಲ್ಲಿ ನಂದಿನಿಯ ಹದಿನೈದು ದಿನಗಳ ಚಿಕ್ಕ ಕರು, ನಾರಿನ ಚೀಲದ ಮೇಲೆ ಬಿದ್ದುಕೊಂಡಿತ್ತು. ಹೊತ್ತು ಹೊತ್ತಿಗೆ ಬೇಕಾದಷ್ಟು ಹಾಲು ದೊರೆಯದೆ ಅದೂ ಬಹಳ ಕಷ್ಟದಲ್ಲಿತ್ತು. ಕಿಶೋರ ಅಧನ್ನೆಲ್ಲ ನೋಡಿದ. ಅವನು ಹೆತ್ತ ತಾಯಿಯನು ಅಗಲಿದ ಹಾಗೆ ಬಿಕ್ಕಿಬಿಕ್ಕಿ ಅಳತೊಡಗಿದ.

ಐದು ವರ್ಷಗಳ ಮೊದಲು ಕಿಶೋರ ದನಕರುಗಳನ್ನು ಮೇಯಿಸುತ್ತ ಹುಲ್ಲು ನೀರು ಇಟ್ಟು ಅವುಗಳ ಸೇವೆ ಚಾಕರಿ ಮಾಡುತ್ತ ದಿನ ಕಳೆಯುತ್ತಿದ್ದ. ಅದರಿಂದ ಇವನಿಗೆ ಜೀವನದ ಅನುಪಮ ಸುಖದ ಅನುಭವವಾಗುತ್ತಿತ್ತು. ಶಾಲೆಗೆ ಹೋಗು ಎಂದು ತಾಯಿತಂದೆಗಳು ಎಷ್ಟು ಬಲವಂತ ಮಾಡಿದರೂ, ಕಿಶೋರ, ದನಕರುಗಳೊಂದಿಗೆ ಬೆಟ್ಟದ ಕಿಬ್ಬದಿಗೆ ಹೋಗಿ ಮುರಲಿಯನ್ನು ಬಾರಿಸುತ್ತ ಅವುಗಳೊಂದಿಗೆ ಕ್ರೀಡಿಸುತ್ತಿದ್ದ.

ಒಂದು ದಿನ ನಂದಿನಿಯ ತಾಯಿ, ಹುಲಿಯ ಬಾಯಿಗೆ ಬಿದ್ದು ಸತ್ತು ಹೋದಳು. ಆಗ ನಂದಿನಿ ಒಂದು ವರ್ಷದ ಕರು. ಕಿಶೋರ ನಂದಿನಿಯ ತಾಯಿಯನ್ನು ತನ್ನ ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ. ಅದು ಹುಲಿಯ ಬಾಯಿಗೆ ಬಿದ್ದುದರಿಂದ, ಅವನ ಜೀವನದ ಸುಖವೆಲ್ಲ ಗಾಳಿಗಿಟ್ಟ ಕರ್ಪೂರದಂತೆ ಎಲ್ಲಿಯೋ ಅಡಗಿಹೋಯಿತು. ದನಕರುಗಳ ಸೇವೆಯ ಕಡೆಗೆ ಅವನಿಗೆ ಒಂದು ಬಗೆಯ ವಿರಕ್ತಿ ಉಂಟಾಯಿತು. ಅದುದರಿಂದ ಅವನೀಗ ತಾಯಿತಂದೆಗಳ ಆಜ್ಞೆಯ ಕಡೆಗೆ ಹೆಚ್ಚು ಮನಸ್ಸು ಕೊಡಲಾರಂಭಿಸಿದ. ಈಗ ಅವನು ಶಾಲೆಗೆ ಹೋಗಲಾರಂಭಿಸಿದ. ಆದರೂ ಅವನಿಗೆ ನಂದಿನಿ ಮೇಲಿನ ಪ್ರೇಮವು ಕಡಿಮೆಯಾಗಲಿಲ್ಲ. ನಂದಿನಿ ಅದರ ತಾಯಿಯ ಒಳ್ಳೆ ಮಾತ್ರ ಸ್ಮೃತಿ ಚಿಹ್ನವಾಗಿದ್ದಳು. ಅವಳ ಪಾಲಿನ ಪೋಷಣ, ಸೇವೆ ಅರೈಕೆ ಮಾಡುವದರಿಂದ ಈಗ ಕಿಶೋರನಿಗೆ ಮುರಲೀ ವಾದನಕ್ಕಿಂತಲೂ ಹೆಚ್ಚು ಆನಂದವು ಪ್ರಾಪ್ತವಾಗುತ್ತಿತ್ತು.

ಈ ವಾರದ ಕಥೆ:

ನಂದಿನಿಯ ಕರು

ಅವನು ನಂದಿನಿಯ ಪಾಲನೆಗೆ, ತಂದೆಯಿಂದಹೇಳಿಸಿ ಉತ್ತಮವಾದ ಏರ್ಪಾಡು ಮಾಡಿದ. ಅದಕ್ಕೋಸ್ಕರ ಅವನು ಒಬ್ಬ ನೌಕರನನ್ನು ನೇಮಿಸಿದ. ಶಾಲೆಗೆ ಹೋಗುವ ಮೊದಲು, ಶಾಲೆಯಿಂದ ಬಂದ ತರುವಾಯ ಕಡಿಮೆ ಎಂದರೆ ದಿಗಕ್ಕೆ ಎರಡು ಹೊತ್ತು ಕೊಟ್ಟಿಗೆಗೆಹೋಗಿ ನಂದಿನಿಯನ್ನು ನೋಡಿ, ಅದನ್ನು ಮುದ್ದಿಸಿ, ಆಡಿಸಿ, ಅದರ ಮುಸುಡಿಗೊಂದು ಮುತ್ತು ಕೊಡದೆ, ಕಿಶೋರನಿಗೆ ಸಮಾಧಾನವಾಗುತ್ತಿರಲಿಲ್ಲ. ನಂದಿನಿ ಕೂಡ ಅವನ ಶರೀರಕ್ಕೆ ತನ್ನ ಶರೀರವನ್ನುಒತ್ತಿಟ್ಟು ಮುಸುಡನ್ನು ಅವನ ಹೆಗಲ ಮೇಲಿಟ್ಟು ಅವನ ಪ್ರೇಮಕ್ಕೆ ಪ್ರತಿ ಪ್ರೇಮವನ್ನು ತೋರಿಸುತಿತ್ತು. ಅವನ ಕೈಯನ್ನುನಾಲಗೆಯಿಂದ ನೆಕ್ಕಿ ತನ್ನ ಕೃತಜ್ಞತೆಯನ್ನುಸೂಚಿಸುತಿತ್ತು.

ಸಮಯ ಕಳೆಯಿತು. ನಂದಿನಿಗೆ ಗಬ್ಬ ಬಂತು. ಒಂದು ಕರುವನ್ನೂ ಹೆತ್ತಿತು. ಆದರೆ ಹೆರುವ ಸಮಯ ನಂದಿನಿಗೆ ಬಹಳ ಕಷ್ಟವಾಯಿತು. ವೈದ್ಯರು ಬಂದು ನಂದಿನಿಯ ಹೊಟ್ಟೆಯಿಂದ ಕರುವನ್ನು ಹೊರಗೆ ಎಳೆದುತೆಗೆದರು. ಕರುವು ಬದುಕಿತು. ಆದರೆ ನಂದಿನಿ ಮಾತ್ರ ಹೆರಿಗೆ ಕಷ್ಟದಿಂದ ನೆಲ ಹಿಡಿಯಿತು. ಎಡೆಬಿಡದೆ ಹದಿನೈದು ದಿನಗಳ ತನಕ ಸೇವೆ ಚಿಕಿತ್ಸೆ ಮಾಡಿದರೂ ಫಲವಾಗಲಿಲ್ಲ. ಅದರ ಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತ ಬಂದಿತು. ಅದನ್ನು ಬದುಕಿಸಲಿಕ್ಕೆ ಎಲ್ಲರೂ ಬಹಳ ಸಾಹಸಪಟ್ಟರು; ಭಗೀರಥ ಪ್ರಯತ್ನಮಾಡಿದರು. ಆದರೆ ಗುಣವು ಕಂಡುಬರಲಿಲ್ಲ. ಈಗ ನಂದಿನಿ ತನ್ನ ಪ್ರೀತಿಯ ಕಿಶೋರನನ್ನು ಕೂಡ ತನ್ನ ಹತ್ತಿರ ಬರಲಿಕ್ಕೆ ಬಿಡುತ್ತಿರಲಿಲ್ಲ. ಅದರ ಮೈ ಕೈ ಕಾಲುಗಳಿಗೆ ಅಷ್ಟು ನೋವು ಇತ್ತು. ಹತ್ತಿರ ಬರುವವರನ್ನು ಹಾದು ದೂರಮಾಡುತ್ತಿದ್ದಿತು. ಕಾಯಿಲೆಯಿಂದ ಅದು ಬಹು ಕ್ಷೀಣವಾಗಿದ್ದಿತು. ಒಂದೊಂದು ಸಮಯ ಹೆತ್ತ ಕರುವನ್ನು ಮಾತ್ರ ಹತ್ತಿರ ಬರಬಿಟ್ಟು ಅದನ್ನು ಬಹಳ ಕಷ್ಟದಿಂದ ನೆಕ್ಕುತ್ತಿತ್ತು. ಎದ್ದು ನಿಂತು ಅದಕ್ಕೆ ಸ್ವಲ್ಪ ಹಾಲು ಕೊಡುವ ಪ್ರಯತ್ನ ಮಾಡುತ್ತಿತ್ತು. ಆದರೆ ಶರೀರವು ಬಹಳ ದುರ್ಬಲವಾಗಿದ್ದುದರಿಂದ ನಿಲ್ಲಲಾರದೆ ಬಿದ್ದುಕೊಂಡು ಚಡಪಡಿಸುತಿತ್ತು. ಹಾಲಿಲ್ಲದೆ ಹಸಿವೆಯಿಂದ ಕಂಗಾಲಾದ ಕರುವನ್ನು ನೋಡಿ ಕಣ್ಣೀರು ಸುರಿಸುತಿತ್ತು. ಈ ಕರುಣಾಜನಕ ದೃಶ್ಯವನ್ನು ನೋಡಿ ಕಿಶೋರನ ಹೃದಯವು ಕರಗಿ ನೀರಾಗುತಿತ್ತು. ಪರದೇಶಕ್ಕೆ ಹೊರಟ ತಾಯಿತಂದೆಗಳನ್ನು ನೋಡಿ ಅಳುವ ಚಿಕ್ಕ ಮಗುವಿನಂತೆ ಅವನು ಅಳುತಿದ್ದ.

ಇವತ್ತು ಹದಿನೈದನೆ ದಿನ, ಯಾಕಾಗಿಯೋ, ಎಲ್ಲರಿಗೆ ಬಹಳ ಆಶ್ಚರ್ಯವಾಗಿದ್ದಿತು. ನಂದಿನಿ, ಈ ಹದಿನೈದು ದಿನಗಳ ಅವಧಿಯಲ್ಲಿ ಇದು ಮೊದಲನೆ ಬಾರಿಗೆ, ಕಿಶೋರನನ್ನು ತನ್ನ ಹತ್ತಿರ ಬರಲಿಕ್ಕೆ ಬಿಟ್ಟಿತು. ಅದರ ಮುಖದ ಮೇಲೆ ವಿಷಾದದ ರೇಖೆಗಳು ಎಳೆಯಲ್ಪಟ್ಟಿದ್ದುವು. ಕಿಶೋರನಿಗೆ ಬಹಳ ಭಯವಾಯಿತು. ನಂದಿನಿಯ ಕೊನೆಯ ಹೊತ್ತು ಬಂದಿತೇ ಎಂದು ಅವನಿಗೆ ಸಂದೇಹವಾಯಿತು. ಹೇಗೂ ಬೇಗ ಬೇಗ ಊಟ ಕುಡಿದು ಅವನು ನಂದಿನಿಯ ಸಮೀಪ ಬಂದು ಕೂತ. ನಂದಿನಿ ಅವನನ್ನು ನೋಡಿ ಕಣ್ಣೀರು ಮಿಡಿಯುತಿತ್ತು. ಮತ್ತೆ ತಾನು ಹೆತ್ತ ಆ ಕರುವಿನ ಕಡೆಗೆ ನೋಡುತಿತ್ತು. ಮರಣಶಯ್ಯೆಯಲ್ಲಿ ಬಿದ್ದುಕೊಂಡು ನರಳುತ್ತಿರುವ ಹೆಂಡತಿ, ತನ್ನ ಏಕಮಾತ್ರ ಮಗುವನ್ನು ಗಂಡನ ಕೈಗೆ ಒಪ್ಪಿಸಿ, ತಾನು ಅಳುತ್ತಾ ಪರಲೋಕ ಗಮನಕ್ಕೆ ಸಿದ್ಧಳಾದವಳಂತೆ ಇರುವ ನಂದಿನಿಯ ಸ್ಥಿತಿಯನ್ನು ನೋಡಿ ಕಿಶೋರನು ವ್ಯಾಕುಲನಾದನು. ಊಟ ಮಾಗಿಸಿ, ಸಮಯವನ್ನೆಲ್ಲ ಕೊಟ್ಟಿಗೆಯಲ್ಲಿ ನಂದಿನಿಯ ಚಾಕರಿಯಲ್ಲಿಯೇ ಕಳೆದ. ಒಬ್ಬ ಮಿತ್ರನು ಕಾಶಿಗೆ ಹೋಗುವ ಕೆಲವು ಕ್ಷಣಗಳ ಮೊದಲು ಇನ್ನೊಬ್ಬ ಪರದು ಮಿತ್ರನ ಸ್ಥಿತಿ ಹೇಗಾಗುವ್ವದೋ, ಹಾಗೆ, ಆಗ ಕಿಶೋರನ ಸ್ಥಿತಿ ಆಗಿತ್ತು. ರಾತ್ರಿ ಆಯಿತು. ಬಹಳ ಸಮಯ ಕಳೆಯಿತು. ಆದರೂ ಕಿಶೋರನಿಗೆ ನಿದ್ದೆ ಬರಲಿಲ್ಲ. ಅವನು ನಂದಿನಿಯ ಸಮೀಪ ಕೂತು ಅದರ ಮೈಮೇಲೆ ಕೈ ಆಡಿಸುತ್ತ ಇದ್ದ.

ಬೆಳಗಾಗುವ ಸಮಯವಾಗಿತ್ತು. ಹೇಗೋ, ಏನೋ, ಅದಕ್ಕೆ ಸ್ವಲ್ಪ ಸಮಯದ ಮೊದಲು ಕಿಶೋರನಿಗೆ ಬಲವಾದ ನಿದ್ದೆ ಬಂದಿತ್ತು. ಪ್ರಾತಃಕಾಲದ ಸೂರ್ಯ ಕಿರಣಗಳು ಅವನ ಮುಖದ ಮೇಲೆ ಬೀಳತೊಡಗಿದುವು. ಪಕ್ಷಿಗಳು, ಮರಗಳ ಮೇಲೆ ಕೂತು ಇಂಪಾದ ಹಾಡುಗಳಿಂದ ಅವನನ್ನು ಎಚ್ಚರಿಸತೊಡಗಿದುವು. ಶೀತಲವಾದ ಮಾರುತವು ಮಂದಮಂದವಾಗಿ ಬೀಸತೊಡಗಿತು. ಕಿಶೋರನ ಕಣ್ಣುಗಳು ಮೆಲ್ಲಗೆ ತೆರೆದುವು. ತಾನು ನಿದ್ದೆಯಲ್ಲಿದ್ದೆ ಎಂಬುದನ್ನು ತಿಳಿದೊಡನೆ ಅವನು ಗಾಬರಿಯಿಂದ ಎದ್ದು ಕೂತ. ನೋಡಿದ; ಅವನು ನಿದ್ದೆಗೆ ಹೋಗುವ ಮೊದಲು ಯಾವ ಪ್ರಕಾರ ನಂದಿನಿಯ ಕರು ಅದರ ಹೆಗಲ ಮೇಲೆ ತಲೆ ಇಟ್ಟು ಅವೆರಡು ಮಲಗಿದ್ದುವೋ, ಅದೇ ಪ್ರಕಾರ ಅವು ಆಗಲೂ ಮಲಗಿದ್ದುವು. ಆದರೆ, ಅವೆರಡೂ ಗತಿಹೀನವಾಗಿದ್ದುವು. ಅವುಗಳ ತಣ್ಣಗಾದ ಶರೀರದಿಂದ ಸಂಸಾರದ ನಶ್ವರತೆಯು ತಿಳಿಯುತಿತ್ತು! ಮತ್ತೆ ಕಿಶೋರ? ಅವನ ಸ್ಥಿತಿ ಹೇಳಲಾಗದಂತಾಯಿತು. ಶೋಕ ವಿಹ್ವಲನಾಗಿ ಅವನು ಎರಡೂ ಮೃತಶರೀರಗಳನ್ನು ಅಪ್ಪಿ ಹಿಡಿದ. ಅವುಗಳ ಶರೀರದ ಶೀತವನ್ನು ಸ್ವಲ್ಪ ತನಗೂ ಕೊಟ್ಟು ತನ್ನ ಶರೀರವನ್ನು ತಣ್ಣಗೆ ಮಾಡಿ ಎಂದು ಅವನು ಕೇಳುವ ಹಾಗೆ ಕಿಶೋರ ಅವೆರಡನ್ನು ಬಲವಾಗಿ ಆಲಿಂಗಿಸಿದ. ಅವನು ಹುಟ್ಟಿನಂತಾದ ಪ್ರಾತಃಕಾಲದ ಆ ಎಲ್ಲಾ ಸೌಂದರ್ಯವು ನಂದಿನಿ ಮತ್ತು ಅದರ ಕರುವಿನ ಸಮಾಧಿಯೋ ಎಂಬಹಾಗೆ ಭಾಸವಾಯಿತು. ಕಿಶೋರನ ಹೃದಯ ಹಾರವು ಕಡಿದುಹೋಗಿತ್ತು. ಮುತ್ತಿನಂಥ ಚಿಕ್ಕ ಚಿಕ್ಕ ಕಣ್ಣೀರ ಹನಿಗಳು, ಆ ಎರಡು ಶವಗಳ ಮೇಲೆ ಉದುರ ತೊಡಗಿದ್ದುವು.

(ಹಿಂದೀ ಕಥೆಯೊಂದರ ಅನುವಾದ)

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂ ತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಯುರೋಪಿನಲ್ಲಿ ಯುದ್ಧ ಕೋಲಾಹಲ!



ಜರ್ಮನಿಯ ನಿರ್ದಯ ಆಕ್ರಮಣ!

ಹಾಲೆಂಡು ಶರಣಾಯಿತು! — ಬೆಲ್ಜಿಯಮಿನಲ್ಲಿ ರಣಕ್ಷೇತ್ರ!

ಮಿತ್ರ ರಾಷ್ಟ್ರಗಳ ಬೆಂಬಲ!

ಕಳೆದ ಶುಕ್ರವಾರ ಬೆಳಗ್ಗೆ ಜರ್ಮನ್ ಸೇನೆಯು ಹಾಲೆಂಡಿನ ಮೇಲೆ ಅಕಸ್ಮಾತ್ ದಾಳಿ ನಡೆಸಿತು ರಬ್ಬರ್ ದೋಣಿಗಳಲ್ಲಿ ಕೂತು ಜರ್ಮನ್ ಸೈನಿಕರು, ವೆಲಾಂಡ ನದಿಯ ಮುಖಾಂತರ ಹಾಲೆಂಡಿನ ಗಡಿನಾಡನ್ನು ದಾಟಿದರು. ಪೆರ ಚೂಟ್‌ಗಳೆಂಬ ವಿಮಾನ ಕೊಡೆಗಳಿಂದ ಹಾಲೆಂಡಿನ ಸುತ್ತು ಜರ್ಮನ್ ಸೈನಿಕರು ಇಳಿದರು. ಇಳಿವಾಗ ಹಲವರು ಹಾಲೆಂಡು ಜನರ ವೇಷವನ್ನೇ ಹಾಕಿಕೊಂಡಿದ್ದರು ಹಾಲೆಂಡಿಗೆ ಬ್ರಿಟಿಷ್ ಫ್ರೆಂಚ ವಿಮಾನಗಳು ಬಂದು ಸಹಾಯ ಕೊಟ್ಟವು. ಯುದ್ಧವು ಭೀಕರವಾಗಿ ನಡೆಯಿತು

ಜರ್ಮನರು ಆಂಟ್‌ವರ್ಪ ಎಮೆ ಸ್ಥಳಗಳ ಮೇಲೆ ಬಾಂಬಿನ ಸುರಿ ಮಳೆ ಕರೆದರು ಜನಗಳು ಪಟ್ಟಣಗಳು ಬಾಂಬಿನಿಂದ ಧ್ವಂಸವಾದುವು.

ನಾರ್ವೆಯ ಪೂರ್ಣಾಹುತಿ

ನಾರ್ವೆಯನರು ಜರ್ಮನರಿಗೆ ಶರಣಾದರು. ನಾರ್ವಿಕಿನಲ್ಲಿ ಬ್ರಿಟಿಷ ಫ್ರೆಂಚ ಸೈನ್ಯಗಳು ಜರ್ಮನ್ ವಿರುದ್ಧ ಕೆಲಕಾಲದಿಂದ್ಲ ಕಾದಾಡುತ್ತಿದ್ದು ಈಗ ಅಪಜಯಹೊಂದಿ ಮರಳಿ ಬಂದಿವೆಯೆಂದು ಸುದ್ದಿ ಅಂತೂ ಜರ್ಮನಿಯ ದಾಳಿಗೆ ನಾರ್ವೆಯ ಪೂರ್ಣಾಹುತಿಯಾಯಿತು

ಬೆಲ್ಜಿಯಮಿಗೂ ಆಕ್ರಮಣ

ಬೆಲ್ಜಿಯಮಿಗೂ ಜರ್ಮನರು ದಾಳಿಯಿಟ್ಟಿರುವರು. ಹಲವು ಸಲ ವಿಮಾನ ದಾಳಿ ನಡೆಯಿತು. ಅಲ್ಲಿಗೆ ಬ್ರಿಟಿಷರು ತಮ್ಮ ಸೈನ್ಯವನ್ನು ಕಳುಹಿಸಿರುವರು.

ಲಕ್ಸಂಬರ್ಗದ ಮೇಲೆ ದಾಳಿ

ಲಕ್ಸಂಬರ್ಗಕ್ಕೂ ಜರ್ಮನರು ದಾಳಿಯಾಗಿದೆ. ಹೀಗೆ ಒಟ್ಟಿನಿಂದ ಬ್ರಿಟನಿನ ಬಾಗಿಲಿನಲ್ಲಿ ಜರ್ಮನರು ಪ್ರಚಂಡ ಪರಾಕ್ರಮದಿಂದ ಕಾದಾಡುತ್ತಿದ್ದಾರೆ. ಲಂಡನನ್ನು ಮುತ್ತಿ ಧ್ವಂಸಮಾಡಿ ಬಿಡಬೇಕೆಂಬ ಜರ್ಮನಿಯ ಈ ಕತಪ್ರಯತ್ನವೆಂದು ಸುದ್ದಿ. ಆದರೆ ಬ್ರಿಟಿಷರು ಸಂಪೂರ್ಣ ಶಕ್ತಿಯಿಂದ ಜರ್ಮನಿಯ ಆಕ್ರಮಣಗಳನ್ನು ತಡೆಯುತ್ತಿದ್ದಾರೆ.

ಬ್ರಿಟನಿನಲ್ಲಿ ಸೈನ್ಯಸಿದ್ಧತೆ

ಬ್ರಿಟನ ಸಮರ ಕೋಲಾಹಲಗೊಂಡಿದೆ. ಮೆ ಇನೇ ತಾರೀಕಿಗೆ ೧೯ ವರ್ಷಪ್ರಾಯದ ಮತ್ತು ೩೭ ವರ್ಷಕ್ಕೆಮಿಕ್ಕಿದ ಎಲ್ಲಾ ಗಂಡುಸರೂ ಸೈನಿಕರಾಗಿ ಬರಲು ಪ್ರಕಟಣೆ ಹೊರಟಿದೆ. ಈ ಪ್ರಕಟಣೆಯಿಂದ ೨೫ ಲಕ್ಷ ಸೈನಿಕರು ಹೆಚ್ಚಾಗಿ ಸೈನ್ಯಕ್ಕೆ ಸೇರುವರೆಂದು ತಿಳಿದುಬರುತ್ತದೆ

ಇಂಗ್ಲೆಂಡಿನ ಕರಾವಳಿಯಲ್ಲಿ ಕಾಳಗ

ಇಂಗ್ಲೆಂಡಿನ ನೈರುತ್ಯ ಕರಾವಳಿಯಲ್ಲಿ ಜರ್ಮನರ ವಿಮಾನ ಚಟುವಟಿಕೆಗಳು ತೀವ್ರವಾಗಿ ಆಗಿವೆಯೆಂದು ತಿಳಿದುಬರುತ್ತಿದೆ ಅಲ್ಲಲ್ಲಿ ವಿಮಾನ ವಿಮಾನಗಳಿಗೆ ಕಾದಾಟವು ನಡೆಯಿತು.

ಸ್ವಿಜರ್ಲೆಂಡಿಗೆ ಬಾಂಬು!

ಸ್ವಿಜರ್ಲೆಂಡಿನ ಕೊರೆಂಡಲಿನ್ ಪ್ರಾಂತದ ಮೇಲೆ ಜರ್ಮನರು ವಿಮಾನದಿಂದಬಂದು ಬಾಂಬು ಹಾಕಿದರೆಂದು ತಿಳಿದುಬಂದಿದೆ

ರುಮೇನಿಯದಲ್ಲಿ ಒಳಸಂಚು

ರುಮೇನಿಯದ ಡಾನ್ಯೂಬ್ ನದಿಯ ಕಾರ್ನವೂಡಾ ಸೇತುವೆಯನ್ನು ಹಾರಿಸಿಬಿಡುವ ಒಳಸಂಚು ನಡೆದಿದೆಯೆಂದು ಸುದ್ದಿ, ಆದಕಾರಣ ಡಾನ್ಯೂಬ್ ನದಿಯಲ್ಲಿ ನಾವೆಗಳು ಸಂಚರಿಸಬಾರದೆಂದ ರುಮೇನಿಯ ಸರಕಾರವು ಆಜ್ಞೆ ಹೊರಡಿಸಿದೆ

ಬೆಲ್ಜಿಯಮಿನಲ್ಲಿ ನಾಜಿಗಳ ಮುಂದೊತ್ತುವಿಕೆ

ಬೆಲ್ಜಿಯಮಿನಲ್ಲಿ ನಾಜಿಗಳು ಮುಂದೊತ್ತುತ್ತಿರುವರೆಂದು ತಿಳಿದಿದೆ ಮಿತ್ರ ರಾಷ್ಟ್ರದವರು ವೈಮಾನಿಕ ಸಹಾಯವನ್ನು ಕಳುಹಿಸುತ್ತಿರುವರು ಜರ್ಮನರು ಬಹಳ ಉಗ್ರತೆಯಿಂದ ಕಾದಾಡುತ್ತಿರುವರು

ಬ್ರಿಟಿಷ್ ನಾಗರಿಕರಿಗೆ ಅಪಮಾನ

ರೋಮಿನಲ್ಲಿ ಗಡಿಬಿಡಿ

ಬ್ರಿಟಿಷ್ ವಿರುದ್ಧ ಪ್ರಚಾರ ಪತ್ರಿಕೆಗಳನ್ನು ರೋಮಿನ ಗೋಡೆಗಳಲ್ಲಿ ಅಂಟಿಸಿದ್ದರು. ಅದನ್ನು ಅಲ್ಲಿದ್ದ ಬ್ರಿಟಿಷನೊಬ್ಬನು ಹರಿದು ಬಿಸಾಡಿದ ಅದಕ್ಕಾಗಿ ಆತನನ್ನು ಇಟಲಿಯನರು ಮುತ್ತಿಗೆ ಹಾಕಿ ಬಡಿದರು ಈ ಕುರಿತು ರೋಮಿನಲ್ಲಿರುವ ಬ್ರಿಟಿಷ್ ರಾಯಭಾರಿಯು ಇಟಲಿಯ ಸರಕಾರಕ್ಕೆ ದೂರು ಕೊಟ್ಟಿರುವನು

ಟರ್ಕಿಯು ಸಿದ್ಧವಾಗಿದೆ

ಯುದ್ಧಕ್ಕೆ ಥಕ್ಕನೆ ಇಳಿಯುವ ಸಂದರ್ಭದಲ್ಲಿ ಮಾಡಬೇಕಾದ ಎಲ್ಲಾ ಸಿದ್ಧತೆಗಳನ್ನು ಟರ್ಕಿಯು ಮಾಡುತ್ತಾ ಇದೆ.

ರೂಸ್ ವೆಲ್ಟರ ಮತ್ತು ಪೋಪರ ಸಂತಾಪ

ಹಾಲೆಂಡು, ಬೆಲ್ಜಿಯಂ, ಲಕ್ಸಂಬರ್ಗ್‌ಗಳನ್ನು ಜರ್ಮನಿಯು ಆಕ್ರಮಿಸಿದುದರ ವಿಷಯವಾಗಿ, ಅಮೆರಿಕದ ಅಧ್ಯಕ್ಷರಾದ ರೂಸವೆಲ್ಟರೂ, ಜಗದ್ಗುರು ಪೋಪ ಸಾಹೇಬರೂ ತಮ್ಮ ಸಹ ಸಂತಾಪವನ್ನು ವ್ಯಕ್ತಪಡಿಸಿರುವರು

ರಶ್ಯಾ ಯುಗೋಸ್ಲೋವ್ - ಒಪ್ಪಂದ

ರಶ್ಯಾ ಯುಗೋಸ್ಲಾವಗಳೊಳಗೆ ವ್ಯಾಪಾರ ಒಪ್ಪಂದವು ಆಯಿತು

ಜಯವೆ ನಮ್ಮ ಗುರಿ

ಚರ್ಚಿಲ್ಲರ ವೀರಾವೇಶ

ಹೊಸ ಮಂತ್ರಿ ಮಂಡಳವನ್ನು ರಚಿಸಿದ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಈ ರೀತಿ ವೀರಾವೇಶ ಮಾತುಗಳನ್ನು ಹೇಳಿದರು

"ನಾನು ಪಾರ್ಲಿಮೆಂಟಿಗೆ ಹೇಳುವುದೇನೆಂದರೆ ಇದನ್ನೇ ನಾನು ಮಂತ್ರಿಗಳಿಗೆ ಹೇಳಿದ್ದೆ, ಇಂದ ನಾನು ಸಮರ್ಪಿಸುವುದ ರಕ್ತ ಕಂಬನಿ ಮತ್ತು ಬೆವರ ನಮ್ಮ ಮುಂದೆ ಭಯಂಕರ ಅಗ್ನಿಪರೀಕ್ಷೆಯು ಕಾದಿದೆ ಹಲವು ತಿಂಗಳ ಕಾದಾಟವಾಗಬಹುದಾಗಿದೆ ನಮ್ಮ ಧ್ಯೇಯವೇನೆಂದ ನೀವು ಕೇಳುತ್ತೀರಿ ಆಕಾಶದಲ್ಲಿ, ನೆಲದಲ್ಲಿ ಜಲದಲ್ಲಿ ಹೀಗೆ ಎಲ್ಲಾ ಕಡೆಯಿಂದಲೂ ಯುದ್ಧ ಮಾಡುವುದು ನಮ್ಮ ಧ್ಯೇಯ—ಇಂದು ನಾವು ಐಕ್ಯಮತ್ಯದಿಂದ ಮುಂದೊತ್ತಬೇಕು ನಮ್ಮ ಗುರಿಯೇನೆಂದು ನೀವು ಕೇಳುತ್ತೀರಾ? ಜಯವೇ ನಮ್ಮ ಗುರಿ ಸರ್ವವಿಧದಿಂದಲೂ ಜಯ ಸರ್ವಶಕ್ತಿಯಿಂದಲೂ ಜಯ ನಮ್ಮ ದಾರಿಯು ಎಷ್ಟೇ ದುರ್ಗಮವಿರಲಿ ಕಡೆಗೆ ನಮಗ ವಿಜಯವಾಗುವುದು"

ನಾಜೀ ಆಕ್ರಮಣವು ಅನ್ಯಾಯ

ನಾಜಿಗಳು ಹಾಲೆಂಡು, ಬೆಲ್ಜಿಯಮುಗಳಿಗೆ ದಾಳಿಯಿಟ್ಟದ್ದು ಅನ್ಯಾಯವಾಗಿದೆಯೆಂದು ನೆಹರಗಳು ಮತ್ತು ರಾಜೇಂದ್ರಪ್ರಸಾದರು ಹೇಳಿಕೆಯಿತ್ತಿರುವರು

ಕಾಸ್ಕಾರ ಚಳವಳ

ಕಾಸ್ಕಾರ ಚಳವಳದ ಮೇಲೆ ಪಂಜಾಬ್ ಸರಕಾರವು ಹೊರಿಸಿದ ಪ್ರತಿಬಂಧಗಳನ್ನು ಹಿಂತೆಗೆದ ಕುರಿತು ಕಾಸ್ಕಾರ ಮುಖಂಡರು ಒಟ್ಟು ಸೇರಿ, ಚಳವಳವನ್ನು ನಿಲಿಸುವ ಯೋಚನೆ ಮಾಡಿದರೆಂದು ಗೊತ್ತಾಗಿದೆ

ಶರತ್ಚಂದ್ರ ಮುಕರ್ಜಿ ಎಂಬ ೫೫ ವರ್ಷದ ವೃದ್ಧ ಸ್ಟೇಶನ್ ಮಾಸ್ತರರು ಗಯಾದಲ್ಲಿ ಜರ್ಮನಿಯ ವಿಮಾನ ಇಳಿದು ೨೦೦ ಟನ್ ಪೆಟ್ರೋಲ ತೆಗೆದುಕೊಂಡಿತೆಂದೂ ಜರ್ಮನರು ಮಾನಖಾಟ ಬಳಿಯಲ್ಲಿಯ ಹಾಲೋಹಾಟಪೂಲನು ಬಾಂಬುಗಳಿಂದ ಧ್ವಂಸಮಾಡಿದರೆಂದ ಮುಂತಾಗಿ ಎಲ್ಲ ಸುಳ್ಳು ಹಬ್ಬಿಸಿದರೆಂದು ಅವರ ಮೇಲೆ ಮೊಂಗಿರ ಕೋರ್ಟಿನಲ್ಲಿ ಸಂರಕ್ಷಕ ಕಾಯದೆಯನ್ವಯ ಖಟ್ಲೆ ನಡೆದಿದೆ.

ಮಾಜಿಸ್ಟ್ರೇಟರಿಗೆ ಅಪಮಾನ

ಪಾಟನಾ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕಚೇರಿಯ ಮೇಲೆ ರಾಷ್ಟ್ರಧ್ವಜ ಏರಿಸಿದ್ದಕ್ಕಾಗಿ ನಾಲ್ಕು ಜನ ಕಿಸಾನ ಸ್ವಯಂಸೇವಕರು ಸೆರೆ ಹಿಡಿಯಲ್ಪಟ್ಟರು ರಾಷ್ಟ್ರಧ್ವಜ ಏರಿಸುವದಾದ ಮೇಲೆ ಸ್ವಯಂಸೇವಕರು ಕಚೇರಿಯೊಳಗೆ ಹೊಕ್ಕು ಕಲೆಕ್ಟರರ ಕುರ್ಚಿಯಲ್ಲಿ ಕುಳಿತು ಜಯ ಜಯಕಾರ ಮಾಡಿದರಂತೆ

ಹಿಂದೂಸ್ಥಾನ ಸರಕಾರ

ಡೆನ್ಮಾರ್ಕ ಜರ್ಮನರ ಅಧೀನದಲ್ಲಿರುವುದರಿಂದ ಅಲ್ಲಿನ ವ್ಯಾಪಾರಿಗಳೊಡನೆ ವ್ಯಾಪಾರ ನಡೆಸುವುದನ್ನು ಪ್ರತಿಬಂಧಿಸಲಾಗಿದೆ ನಾರ್ವೆಯ ಕೂಡೆ ವ್ಯಾಪಾರ ನಡೆಸುವಾಗಲೂ ಎಚ್ಚರಿಕೆ ವಹಿಸಬೇಕು. ಸರಕಾರದೊಡನೆ ವಿಚಾರ ವಿನಿಮಯ ಮಾಡಿದ ಹೊರತು ನಾರ್ವೆಯೊಡನೆ ವ್ಯಾಪಾರ ಮಾಡಬಾರದೆಂದು ಮುಂತಾ



THE
BANK OF MANGA
MANGALO
ESTD 19
Branches- Mudabidri & Pe
Fixed Deposits will be received at
For 3 months
" 6 "
" 12 "
" 24 " & upw
Interest Payable
Savings Bank depo
balanc
kinds of banking busi



ನಾಜೀ ಆಕ್ರಮಣವು ಅನ್ಯಾಯವಾದುದು.

ಭಾರತದ ಮುಖಂಡರ ಹೇಳಿಕೆ

ಡಿಫೆನ್ಸ್ ಓಫ್ ಇಂಡಿಯಾ ಆಕ್ಟ್ — ಭಾರತದ ಹೊಸ ಮಂತ್ರಿಗಳು!

ಭಾರತದ ಸಮಸ್ಯಾಪರಿಹಾರವೆಂತು?

ಗಿ ಹಿಂದುಸ್ತಾನ ಸರಕಾರದವರು ಪ್ರಕಟಿಸಿದ್ದಾರೆ.

ಓಡಿಟರ್ ಜನರಲ್

ಎ. ಸಿ. ಬ್ಯಾಡೆನೋಕ್ ಇವರು ಹಿಂದುಸ್ತಾನ ಸರಕಾರದ ಹೊಸ ಆಡಿಟರ ಜನರಲ್‌ರಾಗಿ ನೇಮಿಸಲ್ಪಟ್ಟಿರುವರು. ಈವರೆಗಿದ್ದ ಆಡಿಟರ ಜನರಲ್ ಸರ್ ಆರ್ನೆಷ್ಟ ಬರ್ಡನ್ ಇವರು ಸೇವಾನಿವೃತ್ತರಾದರು

ಉದಾರಿಗಳು!

ಮುಂಬಯಿಯ ಪ್ರಸಿದ್ಧ ಹತ್ತಿ ದಲಾಲರಾದ ಆನಂದೀಲಾಲ ಪೊದ್ದಾರರು ನಿಧನಹೊಂದಿದರು ಇವರು ಒಳ್ಳೇ ದಾನಶೂರರಾಗಿದ್ದರು ತಿಳಕ ಸ್ವರಾಜ್ಯ ಫಂಡಿಗೆ ೩ ಲಕ್ಷ ರೂಪಾಯಿ ಆಯುರ್ವೇದ ಕಾಲೇಜಿಗೆ ೩॥ ಲಕ್ಷ ರೂಪಾಯಿ ಕೊಟ್ಟದಲ್ಲದ ಬನಾರಸ ಹಿಂದೂ ವಿಶ್ವವಿದ್ಯಾಲಯಕ್ಕೆ ೫೫ ಸಾವಿರ ಇನ್ನುಳಿದ ಸಂಸ್ಥೆಗಳಿಗೆ ಸಾವಿರ ಗಟ್ಲೆ ರೂಪಾಯಿಗಳನ್ನು ಕೊಟ್ಟಿದ್ದರ

ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿಗೆ ಬಲಿ

ಮದ್ರಾಸಿನ ಬಿ ಜಿ. ಕನ್ನಾಕರರಾವ್ ಗುಲ್ವಾಡಿ ಇವರನ್ನು ಸಂರಕ್ಷಕ ಕಾಯಿದೆಯನ್ವಯ ಸೆರೆಹಿಡಿಯಲಾಗಿದೆ

ಸರಕಾರದ ಅಪ್ಪಣೆ ಪಡೆಯದೆ ಕಾಂಗ್ರೆಸ ಕೆಲಸಗಾರರ ಪರಿಷತ್ತು ಸೇರಿಸಿದ್ದಕ್ಕಾಗಿ ಡಾಕ್ಕಾದ ಆನಂದ ಪಾಲರೂ ಇನ್ನೂ ಇಬ್ಬರೂ ಸಂರಕ್ಷಕ ಕಾಯಿದೆಯನ್ವಯ ಸೆರೆಹಿಡಿಯಲ್ಪಟ್ಟಿರುವರು

ಭಾರತ ಹೊಸ ಮಂತ್ರಿಗಳು

ಪಾರ್ಲಿಮೆಂಟಿನಲ್ಲಿ ಭಾರತದ ಹೊಸ ಮಂತ್ರಿಗಳಾಗಿ ಮಿ। ಎಲ್. ಎಸ್ ಅಮೇರಿ ಇವರು ನಿಯುಕ್ತರಾಗಿದ್ದಾರೆ.

ಭಾರತದ ಸಮಸ್ಯಾ ಪರಿಹಾರ ಗಾಂಧಿಜಿಯವರ ಹೇಳಿಕೆ

ಭಾರತದ ಸಮಸ್ಯಾ ಪರಿಹಾರವಾಗಬೇಕಾದರೆ ಜನತೆಯು ಪ್ರತಿನಿಧಿಗಳಿಂದ ಕೂಡಿದ ರಾಷ್ಟ್ರ ಘಟನಾ ಸಮಿತಿಯ ರಚನೆಯಾಗಬೇಕು ನನಗೆ ಅದೇ ಉಪಯುಕ್ತ ದಾರಿಯಾಗಿ ತೋರುತ್ತದೆ ಇದಕ್ಕಿಂತ ಬೇರೆ ಒಳ್ಳೆಯ ಉಪಾಯವಿದ್ದರೆ ಆ ಸೂಚನೆಗೆ ನಾನು ಅನುಮೋದಿಸುತ್ತೇನೆ ಹೇಗಿದ್ದರೂ ಪ್ರತಿನಿಧಿಗಳು ಚುನಾಯಿತರಲ್ಲದೆ, ನೇಮಕ ಮಾಡಲ್ಪಟ್ಟವರು ಆಗ ಕೂಡದು ಎಂದು ಗಾಂಧಿಜಿಯವರು ಹೇಳಿದರು ಈ ಸೂಚನೆಯು ವಿಚಾರಾರ್ಹರವಾದುದೆಂದು ಗಾರ್ಡಿಯನ್ ಪತ್ರಿಕೆಯು ಬರೆಯುತ್ತದೆ. ಗಾಂಧಿಜಿಯವರು ಬ್ರಿಟಿಷ್ ಸರಕಾರದೊಡನೆ ಒಪ್ಪಂದಮಾಡಿಕೊಳ್ಳಲು ಸಿದ್ಧವಾಗಿರುವರೆಂಬುದಕ್ಕೆ ಇದೊಂದು ಸೂಚನೆಯೆಂದು ಪತ್ರಿಕೆಯು ಹೇಳಿಕೆಯಾಗಿರುತ್ತದೆ. ಟಿ ಎಸ್ ಗೋಸ್ವಾಮಿಯವರೂ ಇಂದಿನ ಸಂಧರ್ಭದಲ್ಲಿ ರಾಜಕೀಯ ಧುರೀಣರನ್ನು ಒಟ್ಟು ಕೂಡಿಸಿ ವಿಚಾರಮಾಡಿ ಭಾರತದ ರಾಜಕೀಯ ಸಮಸ್ಯೆಯನ್ನು ಸರಕಾರವು ಪರಿಹರಿಸಬೇಕೆಂದು ಹೇಳಿರುವರು

ಪುರೋಗಾಮಿ ಪಕ್ಷದ ಎಂ ಯತಿರಾಜಲು ನಾಯುಡ ಇವರು ಪೊನ್ನೇರಿ ಬಳಿಯಲ್ಲಿರುವ ಅವರ ಹಳ್ಳಿಗೆ ಹೋಗಿ ಇರಬೇಕೆಂದು ಸಂರಕ್ಷಕ ಕಾಯಿದೆಯನ್ವಯ ಹುಕುಮು ವಿಧಿಸಲಾಗಿದೆ.

ಸಂಯುಕ್ತಪ್ರಾಂತ್ಯ ಕಾಂಗ್ರೆಸ ಕಮೀಟಿಯ ಸೋಶಾಲಿಸ್ಟ ಸದಸ್ಯರಾದ ಜಗದೀಶ ಪಾಠಕರು ಸಂರಕ್ಷಕ ಕಾಯಿದೆಯನ್ವಯ ಸೆರೆಹಿಡಿಯಲ್ಪಟ್ಟಿದ್ದಾರೆ. ಮೇ ದಿನದ ದಿವಸ ಆಕ್ಷೇಪಾರ್ಹ ಭಾಷಣ ಮಾಡಿದ್ದಕ್ಕಾಗಿ ಸೆರೆಹಿಡಿಯಲಾಗಿದೆ

ಅಡಬಿ ಲತೀಫ ಎಂಬ ಉರ್ದು ಪತ್ರಿಕೆಗೆ ೧೦೦೦ ರೂಪಾಯಿ ಜಾಮೀನು ಕೇಳಿರುವರು.

ರೂರ್ಕಿಯ ಸರದಾರ ರಾಮಸಿಂಗ ಹಕೀಮ ದಲೀಪಸಿಂಗ ಇವರಿಗೆ ಸಂರಕ್ಷಕ ಕಾಯದೆಯನ್ವಯ ೧ ವರ್ಷ ಸತ್ರಮಶಿಕ್ಷೆ ವಿಧಿಸಲಾಯಿತು.

ಓರಿಯಂಟಲ್ ರೆವ್ಯೂ ಎಂಬ ಮಾಸಪತ್ರಿಕೆಗೆ ೧ ಸಾವಿರ ರೂಪಾಯಿ ಜಾಮೀನ ಬೇಡಿರುವರಲ್ಲದೆ ಆ ಪತ್ರಿಕೆಯ ಏಪ್ರಿಲ ತಿಂಗಳ ಪ್ರತಿಗಳನ್ನು ಜಪ್ತಿ ಮಾಡಿರುವರು ಆಕ್ಷೇಪಾರ್ಹ ವಿಷಯ ಬರೆದಿದ್ದೇ ಇದಕ್ಕೆ ಕಾರಣವಾಗಿದೆ

ಕಲಕತ್ತಾ ಕಾರ್ಪರೇಶನಿನಲ್ಲಿ ಬೊಸ ಪಕ್ಷದವರು ಲೀಗಿನವರೊಡನೆ ಮಾಡಿಕೊಂಡ ಒಪ್ಪಂದವನ್ನು ಮತ್ತು ಪಾಕಿಸ್ಥಾನ ಯೋಜನೆಯನ್ನು ನಿಷೇಧಿಸಲು ನಗರ ಭವನದಲ್ಲಿ ಸಭೆಯೊಂದು ಕೂಡಿತ್ತು ಆದರೆ ಸಭೆಯಲ್ಲಿ ಗೊಂದಲವಾಗಿ ೫—೬ ಜನರಿಗೆ ಗಾಯಗಳಾಗಿ ಗೊಂದಲದಲ್ಲಿಯೇ ಸಭೆ ಮುಕ್ತಾಯವಾಯಿತು.

ಈಸ್ಟ ಆಫ್ರಿಕದ ಟ್ರೇಡ್ ಯೂನಿಯನ್‌ದ ಜನರಲ್ ಸೆಕ್ರೆಟರಿಗಳಾದ ಸರದಾರ ಮಖನಸಿಂಗ ಇವರನ್ನು ಸಂರಕ್ಷಕ ಕಾಯಿದೆಯನ್ವಯ ಸೆರೆಹಿಡಿದಿದ ಇವರು ಮೊನ್ನೆ ಮೊನ್ನೆ ಹಿಂದುಸ್ಥಾನಕ್ಕೆ ಬಂದಿದ್ದರು. ಅಹಮ್ಮದಾಬಾದಿನ ಗಿರಣಿ ಕೂಲಿಕಾರರ ಸಂಪದವರನ್ನೆ ಕೂಡಿಕೊಂಡು ಕೆಲಸ ಮಾಡುತ್ತಿದ್ದರು

• ಮೌಲಾನಾ ಅಬ್ದುಲ್ ರಹೀಮ ಜೇಪಾಲ ಝಾಯಿ ಇವರಿಗೆ ಸಂರಕ್ಷಕ ಕಾಯದೆಯನ್ವಯ ೫ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು

ಹರಿಜನ ಪರಿಷತ್ತು

ಶಿವಮೊಗ್ಗ ಜಿಲ್ಲೆಯ ಹರಿಜನ ಪರಿಷತ್ತು ತಾ. ೯ರಂದು ಶಿವಮೊಗ್ಗೆಯಲ್ಲಿ ಜರಗಿತು. ಶ್ರೀ. ಭೂಪಾಲಂ ಚಂದ್ರಶೇಖರ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು ಮುನ್ಸಿಪಾಲಿಟಿ ಮೊದಲಾದ ಸ್ಥಳೀಕ ಸಂಸ್ಥೆಗಳಲ್ಲಿ ಹರಿಜನರಿಗೆ ಹೆಚ್ಚಿನ ಸೌಕರ್ಯ ಕೊಡುವದೇ ಮೊದಲಾದ ಠರಾವುಗಳಾದವು.

ಫಾರ್ವರ್ಡ್ ಬ್ಲಾಕ್ ಕಾರ್ಯಕಾರೀ ಮಂಡಳ

ಫಾರ್ವರ್ಡ್ ಬ್ಲಾಕಿನ ಕಾರ್ಯಕಾರೀ ಮಂಡಳದ ಜರೂರು ಸಭೆಯೊಂದು ಕಲ್ಕತ್ತದಲ್ಲಿ ತಾ ೨೦ ಮತ್ತು ೨೧ ರಲ್ಲು ಸೇರುವುದು.

ಮದ್ರಾಸು ಬೀಡಿ ಕೆಲಸಗಾರರ ಮುಷ್ಕರ ನಿಂತಿತು

ಮದ್ರಾಸು ಬೀಡಿ ಕೆಲಸಗಾರರ ಮುಷ್ಕರವು ತಾ. ೧೩ರಂದು ಕೊನೆಗೊಂಡಿತು. ಮುಷ್ಕರದ ನಿಮಿತ್ತ ಸೆರೆಹಿಡಿಯಲಾದ ಕೆಲಸಗಾರರನ್ನು ಬಿಡುಗಡೆ ಮಾಡಲಾಗಿದೆ

ಸ್ತ್ರೀಯರ ಆರೋಗ್ಯ ಸೌಭಾಗ್ಯ ಗಳಿಗೆ

ಲೋಧ್ರ

ತಯಾರಿಸುವವರು:
ಕೇಸರಿ ಕುಟೀರ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟೋಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

THE
…GALORE LTD.,
…ALORE.
…D 1931
…: Padubidri.
…d at following rates of interest.
3½%
1%
5%
…t upwards 5½%
…able Quarterly.
…eposit 3½% on daily …ances.
…business transacted.

ಶ್ರೀ ಶಂಕರಾಚಾರ್ಯರು

ಭರತ ಖಂಡದ ಜ್ಯೋತಿರ್ಜ್ಯೋತಿ ಜೀವಜ್ಯೋತಿಗಳು

ಗಳೆನಿಸಿದ ಮಹಾಪುರುಷರಲ್ಲಿ ಒಬ್ಬರಾದ ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವು ಕಳೆದ ತಾ. ೧೨ ರಂದು ನೆರವೇರಿತು. ಅಖಿಲ ಭಾರತದಲ್ಲಿ ಅವರ ಜನ್ಮದಿನವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಜಗದ್ಗುರು ಶಂಕರಾಚಾರ್ಯರ ಜೀವನದ ಮಹತ್ವವೇನು? ಜನತೆಯು ಮುನ್ನಡೆಯನ್ನು ಹೊಂದತಕ್ಕ ಮಹತ್ವದ ಕಾರ್ಯವನ್ನು ಅವರು ಏನನ್ನು ಮಾಡಿರುವರು? ಇಂದಿನ ಸ್ವತಂತ್ರ ವಿಚಾರವಂತರು,—ನವನವಶೋಧನಾ ಕುಶಲರೂ ಕೂಡಾ ಆ ಪ್ರಾಚೀನ ಆಚಾರ್ಯರ ವಿಚಾರ ವಾಹಿನಿಗೆ ತಲೆದೂಗುವುದರ ವೈಶಿಷ್ಟ್ಯವೇನು? ಎಂಬುದು ವಿಚಾರಿಸತಕ್ಕ ಅಂಶವಾಗಿದೆ!

ಜನನ

ಶ್ರೀ ಶಂಕರಾಚಾರ್ಯರು ತಿರುವಾಂಕೂರಿನಲ್ಲಿ ಕಾಲಾಡಿ ಎಂಬ ಊರಲ್ಲಿ ಜನ್ಮವೆತ್ತಿದರು. ಪಶ್ಚಿಮ ಕರಾವಳಿಯು ಮಹಾ ಸಂತರಿಗೆ ಜನ್ಮಭೂಮಿಯಾಗಿದೆ. ಶ್ರೀ ಮಧ್ವಾಚಾರ್ಯರೂ ಉಡುಪಿಯಲ್ಲಿ ಪಶ್ಚಿಮ ಕರಾವಳಿಯಲ್ಲಿಯೇ ಜನ್ಮವೆತ್ತಿದರು. ಪೂರ್ವ ಕರಾವಳಿಯಲ್ಲಿ ಶ್ರೀ ರಾಮಾನುಜಾಚಾರ್ಯರು ಹುಟ್ಟಿದರು. ದಕ್ಷಿಣ ಹಿಂದೂಸ್ಥಾನಕ್ಕೆ ಸೇರಿದ ಈ ಮೂವರು ವಿಭೂತಿ ಪುರುಷರು. ಮೂರು ಮಹಾ ಸಿದ್ಧಾಂತಗಳನ್ನು ಜಗತ್ತಿಗೆ ಸಾರಿ ಪ್ರಖ್ಯಾತರಾದರು. ಶ್ರೀ ಶಂಕರಾಚಾರ್ಯರು ತನ್ನ ಬ್ರಹ್ಮಸೂತ್ರ ಭಾಷ್ಯದಲ್ಲಿ, ದೇಶವು ಬೌದ್ಧರಿಂದ ಬಹಳ ಆಕ್ರಮಿಸಲ್ಪಟ್ಟಿರುವುದೆಂದು ಬರೆದಿರುವರು. ಆ ಕಾರಣ ಶೃಂಗೇರಿಯಲ್ಲಿ ಉಲ್ಲಿಖಿತವಾಗಿರುವಂತೆ ಅವರ ಜನ್ಮವು ಕ್ರಿ. ಪೂ. ೪೪ರಲ್ಲಿ ಆಗಿರಬೇಕೆಂದು ತಿಳಿಯಬಹುದಾಗಿದೆ.

ಧಾರ್ಮಿಕರೂ ನೀತಿ ಪರಾಯಣರೂ ಆದ ಬ್ರಾಹ್ಮಣ ದಂಪತಿಗಳ ಬಸುರಲ್ಲಿ ಅವರು ಜನ್ಮವೆತ್ತಿದರು. ಸುಂದರ ಕಾಯದ ಮನೋಹರ ಗಂಭೀರಾಕೃತಿಯ ಬ್ರಹ್ಮಚಾರಿಯಾದ ಬಾಲಕನು ನಿರ್ಮಲ ವಾತಾವರಣದಲ್ಲಿಯೇ ಬೆಳೆದನು!

ಸುವರ್ಣ ವೃಷ್ಟಿ

ಎಂದಿನಂತೆ, ಒಂದು ದಿನ, ಬ್ರಹ್ಮಚಾರಿಯಾದ ಶಂಕರಾಚಾರ್ಯರು ಭಿಕ್ಷೆಗಾಗಿ ಹೊರಹೋಗಿದ್ದರು. ಒಂದು ಬಡ ಹೆಂಗುಸಿನ ಮನೆಬಾಗಿಲಿಗೆ ಬಂದರು! ಆಕೆ ತನ್ನ ದಾರಿದ್ರ್ಯಕ್ಕಾಗಿ ನೊಂದುಕೊಂಡಳು! ಕೈಯಲ್ಲಿ ವಸ್ತು ಒಡವೆ ಹಣಗಳೇನೂ ಇಲ್ಲವಾಗಿ ಒಂದು ನೆಲ್ಲಿಕಾಯಿಯನ್ನು ಬ್ರಹ್ಮಚಾರಿಗೆ ದಾನಮಾಡಿದಳಂತೆ! ಶಂಕರಾಚಾರ್ಯರು ಅಲ್ಲಿಯೇ ಕನಕಧಾರಾ ಸ್ತೋತ್ರವೆಂಬ ಸ್ತುತಿಯನ್ನು ಕಟ್ಟಿ ಹಾಡಿದರು! ಸಿರಿಯೊಡತಿ ಲಕ್ಷ್ಮಿಯು ಸಂತುಷ್ಟಳಾಗಿ ಬಂಗಾರದ ಸುರಿಮಳೆ ಸುರಿಸಿದಳಂತೆ! ಬಡ ಹೆಂಗಸು ಸಾಕಷ್ಟು ಸಿರಿವಂತಳಾದಳು.

ಇಂತಹ ಅದ್ಭುತಗಳು ಮಹಾತ್ಮರೆಂಬವರ ಜೀವನದಲ್ಲಿ ಅಸಾಧ್ಯವೆನ್ನಲಾಗುವುದಿಲ್ಲ. ಸಾಮಾನ್ಯ ಮನುಷ್ಯರು ಮಾಡಲು ಅಸದಳವಾದ ಕೃತ್ಯಗಳನ್ನು ಮಾಡುವುದರಿಂದಲೇ ಮಹಾತ್ಮರು ಪೂಜನೀಯರಾಗುವರಲ್ಲವೇ!

ಸನ್ಯಾಸ

ಬಾಲ್ಯದಿಂದಲೇ ಶಂಕರಾಚಾರ್ಯರು ಸನ್ಯಾಸ ಜೀವನವನ್ನು ಹಾತೊರೆಯುತ್ತಿದ್ದರು! ಆದರೆ ಹೆತ್ತತಾಯಿಯ ಅನುಮತಿ ಪಡೆಯುವುದು ಕಷ್ಟವಾಗಿತ್ತು. ಒಮ್ಮೆ ಸ್ನಾನಕ್ಕೆಂದು ನದಿಗೆ ಹೋಗಿ ಅಲ್ಲಿ ನೀರಲ್ಲಿ ಮುಳುಗಿದರು. ಮೊಸಳೆಯು ಶಂಕರಾಚಾರ್ಯರ ಕಾಲನ್ನು ಹಿಡಿದುಕೊಂಡಿತು! ತಾನು ಸನ್ಯಾಸಿಯಾಗಲು ಅನುಮತಿಯಿತ್ತರೆ ಮೊಸಳೆಯ ಬಾಯಿಂದ ಬಿಡುಗಡೆ ಹೊಂದುವುದಾಗಿಯೂ ಅದಕ್ಕೆ ತಾಯಿಯು ಸಮ್ಮತಿಸಬೇಕಾಗಿಯೂ ಆಚಾರ್ಯರು ದೀನರಾಗಿ ಬೇಡಿಕೊಂಡರು! ಮಾತೆ ಅನುಮತಿ ಕೊಡದಿರಬಹುದೇ? ತಾಯಿಯು ಸಮ್ಮತಿಸಿದ ಮೇಲೆ ಮೊಸಳೆಯು ಕಾಲನ್ನು ಬಿಟ್ಟುಬಿಟ್ಟಿತು. ಇದರ ಅರ್ಥವೇನೆಂದರೆ ಮೊದಲ ಜನ್ಮವು ಮೊಸಳೆಯು ಹಿಡಿದಿದ್ದರಿಂದ ಹೋಗಿ ಸನ್ಯಾಸವೆಂಬ ಎರಡನೆ ಜನ್ಮದಲ್ಲಿ ಅವರು ಲೋಕದಲ್ಲಿ ಜೀವಂತರಾಗಿ ಬಂದರೆಂಬುದೇ ಆಗಿದೆ.

ತತ್ವ

ಶಂಕರಾಚಾರ್ಯರು ಸನ್ಯಾಸಿಗಳಾಗಿ ವಿಶ್ವಧರ್ಮವನ್ನು—ಅದ್ವೈತವನ್ನು ಜಗತ್ತಿಗೆ ಸಾರಿದರು. ಜೀವಾತ್ಮ ಪರಮಾತ್ಮಗಳು ಎರಡಲ್ಲ ಒಂದೇ ಎಂಬುದು ಅವರ ಸಿದ್ಧಾಂತ! ಸಣ್ಣ ಬೆಳಕು ದೊಡ್ಡ ಜ್ಯೋತಿಯಲ್ಲಿ ಒಂದಾಗುವಂತೆ ನಮ್ಮ ಆತ್ಮವು ಪರಮಾತ್ಮನಲ್ಲಿ ಕಡೆಗೆ ಮುಕ್ತಿ ಹೊಂದುವುದೆಂಬುದು ಅದ್ವೈತ. ಇದರ ವಿವರಣೆಗಾಗಿ ಭಾಷ್ಯವನ್ನೂ ಪ್ರಸ್ಥಾನವನ್ನೂ ಬರೆದರು. ವೇದ ಉಪನಿಷತ್ ಗೀತೆಗಳನ್ನು ವ್ಯಾಖ್ಯಾನಿಸಿದ್ದರು.

ಸರಲತೆ

ಶಂಕರಾಚಾರ್ಯರ ನುಡಿಯು ಶುದ್ಧ ಸರಲವಾದುದು. ಅವರ ಸಂಸ್ಕೃತಭಾಷಾ ಸರಣಿಯು ಅಸರಳತೆಯಿಂದ ಅರ್ಥಗ್ರಾಹ್ಯವೂ ಮೋಹಕವೂ ಆಗಿದೆ. ಅವರ ಲೇಖನ ಶಕ್ತಿಯು ಸಾಮಾನ್ಯರಿಗೆ ಒದಗುವಂತಹುದಲ್ಲ. ಹೃದಯವೇ ನುಡಿದಂತೆ ಹೇಳುವಶಕ್ತಿ ಅವರಲ್ಲಿ ಭಾಸ್ವರವಾಗಿತ್ತು.

ಮಠಗಳು

ಅವರು ಶೃಂಗೇರಿ, ದ್ವಾರಕಾ, ಬದ್ರಿ, ಪುರಿಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ ಅದ್ವೈತಮತಪೀಠಗಳನ್ನಾಗಿ ಮಾಡಿದರು. ತನ್ನ ಮೂವತ್ತೆರಡನೆಯ ವಯಸ್ಸಿನಲ್ಲಿಯೇ ಅವರು ಕೈಲಾಸವಾಸಿಗಳಾದರು. ಅಲ್ಪವಯಸ್ಸಿನಲ್ಲಿಯೇ ಅಳಿಸಲಾರದ ಕೀರ್ತಿಯನ್ನು ಗಳಿಸಿದರು.

ಹೀಗೆ ಮಹಾ ಮೇಧಾವಿ, ಅನುಪಮ ತತ್ವಜ್ಞಾನಿ, ಉಜ್ವಲ ಸನ್ಯಾಸಿ, ಅಪ್ರತಿಮ ಲೇಖಕ, ಪರಮ ಯೋಗಿ, ನಿಶ್ಚಲತ್ಯಾಗಿ, ಉದಾತ್ತ ದೈವಭಕ್ತ, ಪ್ರಚಂಡ ವಿದ್ವಾಂಸ, ಉತ್ತಮ ಉಪದೇಶಿಗಳಾದ ಶಂಕರಾಚಾರ್ಯರು ಭವ್ಯಜೀವನವನ್ನು ಸಾಗಿಸಿದರು. ಮಹಾಕವಿಗಳೂ, ಶಬ್ದಗಳ ಉಪಯೋಗದಲ್ಲಿ ಬಹಳ ಸಮರ್ಥ ಕಲಾವಂತರೂ ಆಗಿದ್ದರು. ತಾತ್ವಿಕ ಜೀವನದಲ್ಲಿ ಶುದ್ಧ ಸಂಸ್ಕಾರವುಳ್ಳವರೆನಿಸಿದ್ದರು. ಪರಮ ಶಕ್ತಿಯ ಸಾಮೀಪ್ಯವನ್ನು ಮುಟ್ಟುವಷ್ಟು ಪ್ರಭಾವಶಾಲಿಗಳಾಗಿದ್ದರು. "ಆನಂದ ರೂಪಂ ಅಮೃತಂ ಯದ್ವಿಭಾತಿ" ಇದರ ಸಾಕ್ಷಾತ್ಕಾರವೇ ಅವರ ಜೀವನದ ಧರ್ಮವಾಗಿತ್ತು.

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try.

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Pandurange Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ಮತ್ತು ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,—ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಸಿನೆಮಾ ಪುಟ

ಪಡೋಶಿ ಇಂಗ್ಲಿಷ್ ಭಾಷೆಯಲ್ಲಿ?

ಪ್ರಭಾತದ ಪಡೋಶಿ ಚಿತ್ರವನ್ನು ಇಂಗ್ಲೀಷ್ ಭಾಷೆಯಲ್ಲಿಯೂ ತಯಾರಿಸಲು ನಿರ್ದೇಶಕ ಶಾಂತಾರಾಮರು ಆಲೋಚಿಸುವರಾಗಿ ತಿಳಿದಿದೆ.

ಕೇಪ್ಟನ್ ಕಿಶೋರಿ

ಮೋಹನ ಪಿಕ್ಚರ್ಸಿನವರ ಕೇಪ್ಟನ್ ಕಿಶೋರಿಯು ಮೇ ೧೭ರಿಂದು ಬೊಂಬಾಯಿಯಲ್ಲಿ ಪ್ರದರ್ಶಿತವಾಗಲಿರುವುದು.

ರಾಮುಗರ ಕಾಂಗ್ರೆಸ್ ಚಿತ್ರ

ಮೋಹನ ಕಂಪೆನಿಯವರು ಚಿತ್ರ ತೆಗೆದ ರಾಮುಗರ ಕಾಂಗ್ರೆಸಿನ ಚಿತ್ರಗಳು ಉತ್ತರ ಭಾರತದ ಪ್ರಾಮುಖ್ಯ ಸ್ಥಳಗಳಲ್ಲಿ ಪ್ರದರ್ಶಿತವಾಗುತ್ತಿವೆ.

ಶಾದಿ

ರಣಜಿತ್ ಕಂಪೆನಿಯ ಮುಂದಿನ ಚಿತ್ರದ ಹೆಸರು 'ಶಾದಿ' ಎಂದಾಗಿದೆ. ಜಯಂತ ದೇಸಾಯಿಯವರು ನಿರ್ದೇಶಿಸುವರು.

ಹಿಂದೀ ಮತ್ತು ಮರಾಠಿಯಲ್ಲಿ

ಹಿಂದೀ ಮತ್ತು ಮರಾಠಿ ಭಾಷೆಯವರಿಗೆ ತೃಪ್ತಿಯುಂಟುಮಾಡುವ ಸಲುವಾಗಿ ಪ್ರಭಾತದವರು ಜ್ಞಾನೇಶ್ವರ ಚಿತ್ರವನ್ನು ಬೊಂಬಾಯಿಯಲ್ಲಿ ಪ್ರತಿದಿನವೂ ಆ ಉಭಯ ಭಾಷೆಗಳಲ್ಲಿಯೂ ತೋರಿಸುತ್ತಿರುವರು.

ಸಂತ ಸಖೂಬಾಯಿ

ನವಯುಗ ಚಿತ್ರಪಟದವರು ಸಂತ ಸುಖೂಭಾಯೀ ಚಿತ್ರವನ್ನು ಬೇಗನೇ ಪ್ರದರ್ಶಿಸಲಿರುವರು.

ಹಿಮಾಂಶುರೈ

ನಿರ್ದೇಶಕ ಹಿಮಾಂಶು ರೈಗಳು ಅಕಸ್ಮಾತಾಗಿ ಕಾಯಿಲೆ ಬಿದ್ದಿರುವರು. ಈಗ ಅವರು ಆಸ್ಪತ್ರೆಯಲ್ಲಿರುವರು.

ತೆನ್ನಾಲ ರಾಮ

ಸಾರಥಿ ಫಿಲ್ಮ್ಸಿನವರ ಮೂರನೇ ಚಿತ್ರ 'ತೆನ್ನಾಲ ರಾಮ' ವನ್ನು ತೆಲುಗು ಭಾಷೆಯಲ್ಲಿ ನಿರ್ದೇಶಕ ರಾಮ ಬ್ರಹ್ಮರವರು ನಿದರ್ಶಿಸುತ್ತಿರುವರು. ಈ ಚಿತ್ರದಲ್ಲಿ ತೆನ್ನಾಲ ರಾಮರ ಜೀವನ ಮಾತ್ರವಲ್ಲದೆ, ತೆಲುಗು ಸಾಹಿತ್ಯದ ಬೆಳವಣಿಗೆಯೂ ತೋರಿಸಲ್ಪಡುವುದು.

ಬಂಗಾರದ ಮೆಡಲು

ಜಪ್ನಾ ಸಂಗೀತ ಸಭೆಯವರು ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಗೆ ಒಂದು ಬಂಗಾರದ ಪದಕವನ್ನು ಕೊಡಲು ನಿಶ್ಚಯಿಸಿದ್ದಾರೆ. ಅಖಿಲ ಭಾರತ ರೇಡಿಯೋದಲ್ಲಿ ಆಕೆಯ ಕರ್ನಾಟಕ ಸಂಗೀತಕ್ಕಾಗಿ ಈ ಬಹುಮಾನ.

ತಮಿಳಿನಲ್ಲಿ ರಾಜ ಗೋಪಿಚಂದ

ಜ್ಯೋತಿ ಫಿಲ್ಮ್ಸಿನವರು ತಮಿಳು ಭಾಷೆಯಲ್ಲಿ ರಾಜಗೋಪೀಚಂದ ಕಥೆಯನ್ನು ಚಿತ್ರ ತೆಗೆಯುವರು. ಶ್ರೀ ಬಲವಂತ ಬಿ. ದಾವೆಯವರು ಚಿತ್ರವನ್ನು ನಿದರ್ಶಿಸುವರು.

ಚಂದ್ರಗುಪ್ತ ಚಾಣಕ್ಯ

ಟ್ರಸಿಟಿ ಪಿಕ್ಚರ್ಸಿನವರು ತಯಾರಿಸಿದ ಚಂದ್ರಗುಪ್ತ ಚಾಣಕ್ಯ ಚಿತ್ರದಲ್ಲಿ ಬ್ರಹದಂಬಾಳ್ ಗ್ರೀಕ್ ರಾಣಿ ಹೆಲೆನಳ ಪಾತ್ರವನ್ನು ಅಭಿನಯಿಸಿರುವಳು.

ಲಾರೆಲ್ ಮತ್ತು ಹಾರ್ಡಿ ಕಂಪೆನಿ

ಇತ್ತೀಚೆಗೆ ಈ ಇಬ್ಬ ನಟರು ಅಭಿಪ್ರಾಯ ಭೇದದಿಂದ ಬೇರೆಯಾಗಲು, ಅವರಿಂದಾದ ನಷ್ಟದಿಂದ ತಿಳಿಗಿ ಎಚ್ಚತ್ತಿರುವರು. ಆದಕಾರಣ ಮುಂದೆ ಇಬ್ಬರೂ ಬೇರೆಯಾಗದಂತೆ ತಮ್ಮ ಇಬ್ಬರ ಒಂದು ಲಿಮಿಟೆಡ್ ಕಂಪೆನಿಯನ್ನು ಮಾಡಿಕೊಂಡಿರುವರಂತೆ. ಇದರ ಪ್ರಕಾರ ಯಾರಾದರೂ ಒಬ್ಬನು ಬೇರೆಯಾಗುವ ಇಚ್ಛೆ ತೋರ್ಪಡಿಸಿದಲ್ಲಿ ಬಾಕಿಯುಳಿದವನು ಆತನ ಮೇಲೆ ದಾವೆ ಹೂಡಬಹುದಾಗಿದೆ ಎಂದು ಫಿಲ್ಮ್ ವೀಕ್ಲಿ ಪತ್ರಿಕೆಯು ಬರೆಯುತ್ತದೆ.

ಫಿಲ್ಮ್ ಪ್ರೇಕ್ಷಕರು ಇಂದು ವಿಚಾರವಂತರಾಗಿದ್ದಾರೆ

ಪ್ರಸಿದ್ಧ ನಿರ್ದೇಶಕರ ಅಭಿಪ್ರಾಯ

"ಸಿನೋಟಿಕಾ"ದ ನಿರ್ದೇಶಕರಾದ ಇನ್ಸ್ಟರ್ ಲುಬಿಜರು ಎಂಬವರು ಇಂದಿನ ಫಿಲ್ಮ್ ಪ್ರೇಕ್ಷಕರು ತಾನು ಮೊದಲು ಫಿಲ್ಮ್ ನಿದರ್ಶಕ ಕೆಲಸಕ್ಕೆ ಆರಂಭ ಮಾಡಿದ ಕಾಲಕ್ಕಿಂತ ಬಹಳ ಬುದ್ಧಿವಂತರಾಗಿರುವರೆಂದು ಹೇಳುತ್ತಾರೆ.

ಅವರ ಅಭಿಪ್ರಾಯವೇನೆಂದರೆ ಫಿಲ್ಮ್‌ನಲ್ಲಿ ನಾಯಕ ನಾಯಕಿ ಪಾತ್ರಗಳ ಆದರ್ಶವೂ ಇಂದು ಪ್ರೇಕ್ಷಕರಲ್ಲಿ ಬೇರೆ ತೆರನಾಗಿದೆಯೆಂದು.

"ಹದಿನೈದು ವರ್ಷಗಳ ಹಿಂದೆ ಫಿಲ್ಮಿನಲ್ಲಿ ನಾಯಕರಾಗಲಿರುವರು ಬಹಳ ಸುಂದರ ದೃಢಕಾಯದವರಾಗಿರಬೇಕಾಗಿತ್ತು. ಆದರೆ ಇಂದು ಅಂತಹ ಶಾರೀರಕ ಪ್ರಕೃತಿಗೆ ಹೆಚ್ಚು ಆದರವಿಲ್ಲ. ಇಂದು ಸುಂದರನದಲ್ಲದವನೂ ಬಹಳ ಯಶಸ್ವಿಯಾಗಿ ನಾಯಕ ಪಾತ್ರವನ್ನು ವಹಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರನಾಗಬಹುದು. ಇಂದು ಸಹಜವಾದ ನಟನೆಗೆ ಹೆಚ್ಚು ಆದರವಿದೆ"

WANTED

Agents to sell Konkani booklets throughout South Kanara and outside.

For terms apply to:—
The Konkani Bhasha Sahithya Mandira
Bantwal S. K.

ಮಾತೆಯೇ, ಮಕ್ಕಳು ರಾತ್ರಿಯಲ್ಲಿ ಎಚ್ಚೆತ್ತು ಅಳುತ್ತಿವೆಯೇ?

ಮಗುವನ್ನು ಮೀಯಿಸಿದ ನಂತರ ಇಡೀ ಮೈಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಸವರಿರಿ, ಆಗ ಮಗುವಿಗೆ ರಾತ್ರಿ ಎಚ್ಚರವಾಗದು—ಅಂದರೆ ನಿಮ್ಮಗೆ ಕೂಡಾ ತೊಂದರೆಯಾಗದೆ ನಿದ್ರೆ ಬೀಳುವುದು. ಕುಟಿಕೂರಾ ಟಾಲ್ಕಮಿನ ಗುಣವು ಎಷ್ಟು ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆಯ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾನಿಯಾಗದು. ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನೇ (Cuticura Talcum) ಶಿಫಾರಸು ಮಾಡುತ್ತಾರೆ. ತುರಿಗಜ್ಜಿ ಮತ್ತು ತುರಿಸುವಿಕೆಯನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿರಿ. ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು. ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಅರುಣ

(ಗರ್ಭಾಶಯ ಟಾನಿಕ್)

ಅರುಣ ಹೆಂಗುಸರಿಗೆ ಒಂದು ಅಮೂಲ್ಯ ಉಪಯುಕ್ತ ಔಷಧಿಯಾಗಿರುವುದಲ್ಲದೆ ಸ್ತ್ರೀಜಾತಿಯ ಎಲ್ಲಾ ಬಾಧೆಗಳಿಗೂ ಗುಣಕಾರಿಯಾಗಿರುವುದು. ಇದರ ತಕ್ಷಣಿಕ ಗುಣದ ಪ್ರಭಾವದಿಂದ ನರಳುವ ಹೆಂಗಸರನ್ನು ಗುಣಪಡಿಸುವುದು. ಬಹಿಷ್ಠೆಯಾಗುವಾಗ ಇರುವ ಬೇನೆಯನ್ನು ನಿವಾರಿಸಿ ಸರಿಯಾಗಿ ಬಹಿಷ್ಠೆಯಾಗುವಂತೆ ಮಾಡುವುದಲ್ಲದೆ ಅದರ ಸಂಬಂಧದ ಎಲ್ಲಾ ಬಾಧೆಯನ್ನು ನಿವಾರಿಸುವುದು. ಎಲ್ಲಾ ಪ್ರಾಯದ ಹೆಂಗಸರಿಗೂ ಉತ್ತಮವಾದ ಟೋನಿಕ್ಕು ಮಾತ್ರವಲ್ಲ ಆರೋಗ್ಯವನ್ನೂ, ಬಲವನ್ನೂ ಹೆಚ್ಚಿಸುವುದು.

ಅರುಣಾ

ಪಂಡಿತ ಡಿ. ಗೋಪಾಲಚಾರ್ಲುರವರ ವಿಶೇಷ ಔಷಧಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ಆಯುರ್ವೇದಾಶ್ರಮಂ ಪೋಸ್ಟ್‌ಬಾಕ್ಸ್ ನಂ. 287 ಮದ್ರಾಸು.

ಮುಸ್ಲಿಂ ಬಾಂಧವರಲ್ಲಿ ಒಂದು ವಿನಂತಿ!

ಮುಸ್ಲಿಂಲೀಗಿನ ಮನೆ ಮುರುಕಧೋರಣೆ!

ಮುಸ್ಲಿಂ ಬಂಧುಗಳಿಗೆ ಅನ್ಯಾಯವಾಗಿದೆ!

ಲೇಖಕರು:—ಚನಬಸಪ್ಪ, ಅಂಬಲಿ ಕಾರ್ಯದರ್ಶಿ ಕರ್ನಾಟಕಪ್ರಾಂತಿಕ ಕಾಂಗ್ರೆಸ್ ಕಮಿಟಿ.

ಪರಕೀಯರ ಕಾರಭಾರದಿಂದ ಭಾರತದಲ್ಲಿ ಬಡತನವೇ ಬಡತನವಾಗಿ ಯಾವತ್ತೂ ಜಾತಿಯ ಜನರು ಅನೇಕ ತರದ ತೊಂದರೆಯಲ್ಲಿಯೇ ಇದ್ದು, ತಮ್ಮ ತಮ್ಮೊಳಗೆ ಕಚ್ಚಾಡುವದೇ ಆಗಿದೆ ಎಂದು ಜಗಜ್ಜಾಹೀರವಾಗಿ ಬಿಟ್ಟಿದೆ. ಗುಲಾಮಗಿರಿಯ ಹೊರತು ಯಾರಿಗೂ ಬೇರೆ ಸ್ಥಾನವಿಲ್ಲ. ಇನ್ನಾವ ಉದ್ಯೋಗ ಉಳಿದಿಲ್ಲ. ಇದರಿಂದ ದೇಶದಲ್ಲಿ ಜಾತೀಯ ಜಗಳಗಳೇ ಮುಖ್ಯ ಕರ್ತವ್ಯವಾಗಿ ಉಳಿದಿವೆ. ಪರಕೀಯರ ಈಗಿನ ಪೂರಾ ಆಳಿಕೆಯು ಅಳಿದು ಹೋಗದ ಹೊರತು ಈ ಜಗಳಗಳು ಹೋಗಲಿಕ್ಕೆ ಶಕ್ಯವಿಲ್ಲ. ಆದರೆ ಈ ಜಗಳಗಳು ಹೋಗದ ಹೊರತು ಈ ಆಳಿಕೆಯು ಹೋಗುವದು ಶಕ್ಯವಿಲ್ಲವೆಂತಾಗಿದೆ. “ಹುಚ್ಚು ಹೋಗದ ಹೊರತು ಲಗ್ನ ಆಗದು! ಲಗ್ನ ಆಗದ ಹೊರತು ಹುಚ್ಚು ಹೋಗದು.” ಎಂಬಂತಾಗಿದೆ. ಆದರೆ ಈ ಜಗಳ ಜೋಡಿ, ಬಡತನ, ಕಷ್ಟತನ, ಗುಲಾಮಗಿರಿ, ಇತ್ಯಾದಿಗೆ ಕಾರಣವಾದ ಅರಿಷ್ಟ ಆಳಿಕೆಯ ಕಾಲವು ಹೋಗಿ ಎಲ್ಲರೂ ಸಖ್ಯರಾಗಿ, ಸುಖಸ್ಥರಾಗಿ, ಸಮಾನಸ್ಥರಾಗಿ ಇರಲು ಸ್ವಾತಂತ್ರ್ಯ ಸಂಪಾದಿಸುವ ಸಮಯ ಈಗ ಬಂದಿರುವದು.

ಈಗ ಸ್ವಾತಂತ್ರ್ಯದ ಸಲುವಾಗಿ ಹೋರಾಡುವವರಿಗೆ ಯಾವದೇ ವಿಘ್ನವನ್ನೊಡ್ಡದೆ ಎಲ್ಲರೂ ಸ್ವಲ್ಪ ಸುಮ್ಮನೆ ಕುಳಿತರೂ ಸ್ವರಾಜ್ಯ ಸಿಗುವಂತಿದೆ. ಇಷ್ಟು ಸುಲಭದಲ್ಲಿ ಸಿಗುವ ಸ್ವರಾಜ್ಯಕ್ಕೆ ಕೇವಲ ಕಲ್ಲುಹಾಕುವ ಕೆಲಸವನ್ನು ಮುಸ್ಲಿಮ ಲೀಗು ನಡಿಸಿದ್ದು ಎಲ್ಲರಿಗೂ ಕಷ್ಟಕಾರಕವಾಗಿದೆ. ಹಿಂದುಸ್ಥಾನದಲ್ಲಿ ಕೋಟ್ಯಾನುಕೋಟಿ ಬಡಕುಟುಂಬಗಳಾದ ಹಿಂದೂ ಮುಸಲ್ಮಾನ ಮುಂತಾದ ಯಾವತ್ತೂ ಜನರಿಗೆ ಬಾಯಿಗೆ ಬರುವಂತಿರುವ ತುತ್ತನ್ನೂ ಬಡಿದು ದೂರು ಕೆಡುವುವಂತೆ ಮಾಡಲು ಶ್ರೀ ಜಿನ್ನಾ ಸಾಹೇಬರು ಟೊಂಕ ಕಟ್ಟಿ ನಿಂತವರಾಗಿರುವರು. ಹಿಂದುಸ್ಥಾನದ ನಿವಾಸಿಯಾದ ಯಾರಿಗೂ ಸುಖಸಿಗಬಾರದು. ಸಖ್ಯತ್ವ ಇರಬಾರದು ಎನ್ನುವಂತಹ ಕಾರ್ಯಕ್ರಮವನ್ನೇ ಅವರು ಇಟ್ಟುಕೊಂಡು ಎಲ್ಲರನ್ನೂ ದೂರಲಿಕ್ಕೆ ಹಚ್ಚಿರುವರು.

ಈಗ ಜಗತ್ತಿಗೇನೆ ಆಶ್ಚರ್ಯವೆನಿಸುವಂಥ ಅವ್ಯವಹಾರ್ಯದ ಯೋಜನೆಯೊಂದನ್ನು ಶ್ರೀ ಜಿನ್ನಾಸಾಹೇಬರು ತೆಗೆದಿರುವರು ಹಿಂದುಸ್ಥಾನವನ್ನು ಕಡಿದು ಎರಡು ಭಾಗಮಾಡಿ ಒಂದನ್ನು ಪಾಕಿಸ್ಥಾನ ಮಾಡಬೇಕೆಂದು ಗಲಾಟೆ ಎಬ್ಬಿಸಿರುವರು. ಇದು ಎಂದಿಗೂ ಆಗದಂಥದ್ದಾಗಿದ್ದರೂ ಹಿಂದುಸ್ಥಾನದ ಜನರನ್ನು ಹೆಚ್ಚುದಿವಸ ಬಡತನದಲ್ಲಿ ಇಡಲಿಕ್ಕೆ ಎಷ್ಟು ಬೇಕು ಅಷ್ಟು ಉಪಯೋಗವಾಗುವದು. ಆದರೆ ಈ ಯೋಜನೆಯು ಅವಿಚಾರದ್ದೆಂದು ಎಲ್ಲ ಕಡೆಯಿಂದಲೂ ವಿಚಾರವಂತ, ಹಾಗೂ ರಾಷ್ಟ್ರೀಯ ಮುಸಲ್ಮಾನ ಬಾಂಧವರಿಂದ ಒಳಿತಾಗಿ ವಿರೋಧ ನಡೆದಿದ್ದು ನೋಡಿದರೆ ಜಿನ್ನಾ ಸಾಹೇಬರ ಹಾಳು ವಿಚಾರದ ಹುರುಳು ಎಲ್ಲರಿಗೂ ಹೊಳೆದಂತಾಗಿದೆ ಎಂದು ಹೇಳಬಹುದು. ಹಿಂದೀಯರ ದುರ್ದೈವ ದೂರಾಗುವಂತಿದೆ ಎಂದು ತಿಳಿಯಲು ಬಹುದು.

ಎಲ್ಲರೂ ವಿಚಾರ ಮಾಡುವಂಥ ಇನ್ನೊಂದು ಸಂಗತಿ—ಎಂದರೆ, ಮುಸ್ಲಿಮ ಲೀಗಿನವರು ಅತ್ಯಂತ ಅಪಾಯಕಾರಕ ಮತ್ತು ವಿಧ್ವಂಸಕವಾದ ವಿಷಯವನ್ನೂ ದೇಶತುಂಬ ಬಿತ್ತಹತ್ತಿದ್ದು ಬಹಳ ಕೆಟ್ಟದ್ದಾಗಿದೆ. ಹಿಂದೂ ಮುಸಲ್ಮಾನರಲ್ಲಿ ವೈಷಮ್ಯ ವೈರತ್ವ ಹೆಚ್ಚಾದಷ್ಟು ಅವರಿಗೆ ಹರ್ಷವಾಗುವದೋ ಏನೋ ಎಂಬಂತೆ ನಡೆಸಿರುವರು. ಅವರ ಈ ಹಟ ಹಾಗೂ ಕೆಟ್ಟ ಮನೋವೃತ್ತಿಯು ಮುಸಲ್ಮಾನ ಸಮಾಜದಲ್ಲಿಯ ಬಹುದೊಡ್ಡ ಭಾಗದ ಬಡಮುಸಲ್ಮಾನ ಬಂಧುಗಳಿಗೆ ಬಹಳ ಘಾತಕವಾಗಿದೆ. ಅದು ಎಷ್ಟು ಕೆಟ್ಟದದೆ ಮತ್ತು ಎಲ್ಲರನ್ನು ಎಷ್ಟು ಕಷ್ಟಕ್ಕೆ ಈಡು ಮಾಡುವದಾಗಿದೆಂಬುದನ್ನು ಮುಸಲ್ಮಾನ ಬಾಂಧವರೇ ವಿಚಾರಮಾಡುವದು ಅತ್ಯವಶ್ಯವಿದೆ. ವಿಚಾರ ಮಾಡಿದರೆ ತಾನೇ ಹೊಳೆಯುವಂತಿದೆ.

ಕೆಲ ಕೆಲ ಪಟ್ಟಣಗಳಲ್ಲಿ ಮುಸ್ಲಿಮ್ ಲೀಗಿನ ಸಭೆಗಳಾದರೆ ಅಲ್ಲಿ ಅಸಭ್ಯ ಹಾಗೂ ಅವಾಚ್ಯ ಮಾತುಗಳನ್ನಾಡುವದೇ ಅವರ ಭಾಷಣದ ಮಾದರಿಯಾಗಿದೆ. ಅತ್ಯಾಚಾರ ಪ್ರವೃತ್ತಿಯ ಮಾತುಗಳನ್ನು ಸಹಸಹಜ ಆಡುವರು. ಇದಕ್ಕಂತೂ ಸರಕಾರದ ನಿರ್ಬಂಧವಿಲ್ಲದ್ದು ವಿಚಾರ ಮಾಡುವಂತಹದಾಗಿದೆ. ಇದು ಹಿಂದೂ ಮುಸಲ್ಮಾನರಲ್ಲಿ ಬದ್ಧದ್ವೇಷ ಬೆಳೆಯುವಂತೆ ಭಾವನೆಯನ್ನು ಸಾಮಾನ್ಯ ಜನರಲ್ಲಿ ಉತ್ಪನ್ನಮಾಡುವದೇ ಮುಸ್ಲಿಮ ಲೀಗಿನ ಮುಖ್ಯ ಕಾರ್ಯಕ್ರಮವಾದಂತಾಗಿದೆ. ಇದರಿಂದಲೇ ಪಟ್ಟಣಗಳಲ್ಲಿ ಹಿಂದೂ ಮುಸಲ್ಮಾನರಲ್ಲಿ ಅನರ್ಥಕಾರಕ ಈರ್ಷೆಯು ಹಬ್ಬಲು ಅವಕಾಶವಾಗಿದೆ. ಇದು ಕೇಡಿಗೆ ಕಾರಣವಾಗಿದೆ.

ಮುಸ್ಲಿಮ ಲೀಗಿನ ವಿಷಯವು ಯಾವದೇ ಉದ್ಯೋಗ ಧಂದೆಮಾಡುವಂಥ ಶ್ರಮಜೀವಿ ಮುಸಲ್ಮಾನರಿಗೆ ಅತಿಶಯ ಕಷ್ಟದ ಸ್ಥಿತಿಗೆ ಒಯ್ಯುವದಾಗಿದೆ. ಪರಸ್ಪರ ಸಂಬಂಧದಿಂದ ನಡೆಯುವ ಉಪಜೀವನಕ್ಕೆ ಬಾಧೆ ತರುವಂತಾಗುವದು. ಇದ್ದ ಮಿತ್ರತ್ವವನ್ನು ಕೆಡಿಸಿ ನಮ್ಮ ನಮ್ಮೊಳಗೆ ಬಡಿದಾಡುವ ಭಾವನೆಯನ್ನು ಹುಟ್ಟಿಸಿದರೆ ಅದರಿಂದ ಯಾರ ಹಿತವೂ ಆಗದು. ಸ್ವರಾಜ್ಯ ಸಿಗದ ವಿನಾ ಯಾರ ಕಲ್ಯಾಣವಾಗುವದಿಲ್ಲ; ಆದ್ದರಿಂದ ಎಲ್ಲರ ದರಿದ್ರತನವನ್ನು ಹಿಂಗಿಸಿ ಎಲ್ಲರ ಕಲ್ಯಾಣಕ್ಕೆ ಕಾರಣವಾಗುವಂತಹ ಮುಖ್ಯವಾದ ಕಾರ್ಯವನ್ನು ನಾವೆಲ್ಲರು ಹಿಂದು, ಮುಸಲ್ಮಾನ, ಪಾರ್ಸಿ, ಕ್ರಿಸ್ತ ಇತ್ಯಾದಿ ಯಾವತ್ತರೂ—ಮಾಡುವದೇ ನನ್ನಮ್ಮ ಧರ್ಮವಾಗಿದೆ. ಈಗ ಅದೇ ನಮ್ಮ ಕರ್ತವ್ಯ ಕರ್ಮವಾಗಿದೆ.

ಮುಸ್ಲಿಮ ಲೀಗಿನವರು ಜಗಳದ ಹೊಲ ಎಬ್ಬಿಸಿ ಇಲ್ಲದ ಈರ್ಷೆ ತುಂಬಿ ಎಲ್ಲರನ್ನೂ ಅನರ್ಥಕ್ಕೆ, ಅವಾಹುತಕ್ಕೆ, ಆಹುತಿ ಮಾಡುವರೇ ವಿನಾ ಒಳ್ಳೆಯದೇನೂ ಮಾಡುವುದಿಲ್ಲ. ಇದರಿಂದ ದುಡಿದು ತಿನ್ನುವ ಬಡಜನರ ಜೀವನಕ್ಕೆ ಧಕ್ಕೆಯಾಗುವದೇ ಹೊರತು ಸುಖವಂತೂ ಇಲ್ಲ. ದೊಡ್ಡವರು ಧನಿಕರೆಂಬುವವರು ದಕ್ಕೆ ಇಲ್ಲದೆ ದೂರಉಳಿಯುವರು. ಇದನ್ನು ಸಾಮಾನ್ಯ ಜನರೆಲ್ಲರೂ ಅರಿಯತಕ್ಕದ್ದಾಗಿದೆ.

ಈ ಅನಿಷ್ಟಕಾರಕ ವಿಷವು ಈ ಭಾಗದ (ದಕ್ಷಿಣ ಹಿಂದುಸ್ಥಾನದ) ಹಳ್ಳಿಗಳ ಮುಸಲ್ಮಾನರು ಬಂಧು ಭಾವದಿಂದಲೇ ಇರುವರು. ದೇವರ ಧಂಡರ ವಿಷಯದಲ್ಲಿ ಭೇದವಿಲ್ಲ. ಮಂದಿರ ಮಸೀದಿಗಳ ಬಗ್ಗೆ ಜಗಳವಿಲ್ಲ. ಎಲ್ಲವೂ ಗ್ರಾಮದ ದೇವಸ್ಥಾನವೆಂದು ಎಣಿಸುವರು. ಹಳ್ಳಿಗಳಲ್ಲಿಯ ಹಸನ ಮನಸಿನ ಮುಸಲ್ಮಾನ ಬಾಂಧವರಿಗೆ ಮುಸ್ಲೀಮ ಲೀಗಿನ ಈ ವಿಷಕಾರಕ ವಿಚಾರವು ಅಸಹ್ಯವೆನಿಸುವಂತಾಗುವದು. ಹಿಂದೂ ಬಾಂಧವರೊಂದಿಗೆ ಇಂದಿಗೂ ಯಾವ ವೈಷಮ್ಯ ವೈಮನಸಿನ ಕಲ್ಪನೆ ಕೂಡಾ ಇಲ್ಲದೆ ಎಲ್ಲರೂ ಬಂಧು ಭಾವದಿಂದ ನಡೆಯುತ್ತ ಬಂದದ್ದನ್ನು ವ್ಯರ್ಥವಾಗಿ ಕೆಡಿಸಿಕೊಂಡು ಮುಂದೆ ಮಾಡುವದೇನು ಎಂಬುದನ್ನು ಅವರು ಅರಿಯುವಂತವರಾಗಿರುವರು.

ಪಟ್ಟಣಗಳಲ್ಲಿಯ ಮುಸಲ್ಮಾನ ಬಂಧುಗಳಾದರೂ ಈ ವಿಷಯಕವಾಗಿ ಹಾಗೂ ನಮ್ಮ ನಮ್ಮ ಪರಿಸ್ಥಿತಿಯ ವಿಷಯಕವಾಗಿ ಪೂರ್ವಾಪರ ವಿಚಾರ ಮಾಡುವದು ಮಹತ್ವದ್ದಾಗಿದೆ. ನಮಗೆ ಸಂಬಂಧ ಸೂತ್ರವಿಲ್ಲದ ಪರಕೀಯರ ಆಳಿಕೆಯ ಮೂಲಕ ನಾವೆಲ್ಲರೂ ದುಃಖದಲ್ಲಿ ಬಿದ್ದಿರುವೆವು ಅದರೊಳಗಿಂದ ಏಳದ ಹೊರತು ನಮ್ಮ ಉದ್ಧಾರವಿಲ್ಲ. ಗುಲಾಮಗಿರಿಯ ಮೂಲಕಾರಣವನು ಕಿತ್ತು ಹಾಕದ ಹೊರತು ನಮ್ಮ ಯಾರ ಬಾಳುವೆಯೂ ಚಂದವಿಲ್ಲ. ಈಗ ನಮ್ಮೆಲ್ಲರ ಹಿತವು ಘಟನಾಸಮಿತಿಯಿಂದ ಪೂರ್ಣ ಸಾಧಿಸುವಂತಿದೆ ಎಂದು ಹಿಂದಿಯ ಹಿತಸ್ವರೆಲ್ಲರೂ ಹೇಳುವ ಮಾತಿನ ಬಗ್ಗೆ ವಿಚಾರ ಮಾಡುವದು ಅವಶ್ಯವಿದೆ. ಘಟನಾ ಸಮಿತಿಯಿಂದಲೇ ಎಲ್ಲ ಜಗಳ ನಿಲ್ಲುವದು. ದಾರಿದ್ರ್ಯವೆಲ್ಲ ದೂರಾಗುವದು ಸರ್ವ ಸೂತ್ರವೂ ಸಾಮಾನ್ಯ ಜನತೆಯ ಹಸ್ತಕ್ಕೆ ಬರುವುದು, ಎಂಬುದಾಗಿ ಹೇಳುವ ಸಂಗತಿಯನ್ನು ಮನವರಿಕೆಯಾದರೂ ಮಾಡಿಕೊಳ್ಳುವುದು ಉಚಿತವಾಗಿದೆ. ಈಗ ನಮ್ಮನ್ನೂ ಬಡತನಕ್ಕೆ ಗುರಿಮಾಡಿ ಜಗಳಾಟಕ್ಕೆ ಹಚ್ಚಿದವರ ಕೂಡ ನಾವು ಬಡಿದಾಡ ಬೇಕಲ್ಲದೆ, ನಮ್ಮ ನಮ್ಮೊಳಗೆ ಬಡಿದಾಡಿ ನಾವು ನಿರಂತರ ಅಸ್ವಸ್ಥರ ಆಳಾಗಿ ಇರುವಂತೆ ಮಾಡತಕ್ಕದ್ದಲ್ಲ.

ಈಗ ಕರ್ಮ ಧರ್ಮ ಸಂಯೋಗದ ಕಾಲ ಬಂದಂತಾಗಿರುವ ಉಪಯೋಗದಲ್ಲವೆಂದು ಎಣಿಸಿ, ಹೆಚ್ಚಾಗಿ ಮುಸಲ್ಮಾನರು ಮುಸ್ಲೀಮ ಲೀಗಿಗೆ ವಿರೋಧಿಸುತ್ತಿರುವರು. ಮುಸ್ಲೀಮ ಲೀಗಿನ ಕಾರ್ಯವು ಮುಸಲ್ಮಾನ ಧರ್ಮದ ವಿರುದ್ಧ ಹಾಗೂ ತತ್ವದ ವಿರುದ್ಧವಾಗಿದ್ದದ್ದನ್ನು ತೋರಿಸಿ ಮುಸಲ್ಮಾನರನು ಎಚ್ಚರಗೊಳಿಸುತ್ತಿರುವರು. ಮತ್ತು ಹಾಗೇ ಇಂದಿನ ರಾಷ್ಟ್ರಕಾರ್ಯಕ್ಕೆ ಹೆಚ್ಚಾಗಿ ಸಹಾಯವಾಗುವಂತೆ ಮುಸಲ್ಮಾನ ಜನರಲ್ಲಿ ಜಾಗ್ರತೆ ಮಾಡುತ್ತಿರುವರು. ದೇಶದ ಸ್ವಾತಂತ್ರ್ಯಕ್ಕೆ ಅಡ್ಡವಾಗಿರುವ ಮುಸ್ಲೀಮ ಲೀಗಿನ ಮುಂದಾಳುಗಳ ಮನೋವೃತ್ತಿಯು ಬದಲಾಗುವಂಥ ಪರಿಸ್ಥಿತಿಯನ್ನು ತೀವ್ರವೇ ಮುಸಲ್ಮಾನ ಬಾಂಧವರೆಲ್ಲರು ತರುವರೆಂದು ಹಾರೈಕೆ.

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು   ಬ್ರಾಂಚ್ ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000.   ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%   ನಿರಖು ಠೇವಣಾತಿ 12 ತಿಂಗಳಿಗೆ 4½

,, 6 ತಿಂಗಳಿಗೆ 4%   ,, 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡೈರೆಕ್ಟರ್.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ಕಳೆದ ವಾರ ಯೂರೋಪಿನಲ್ಲಿ ಅನೇಕ ಪರಿವರ್ತನೆಗಳಾದುವು!

◆

—ಹಾಲೆಂಡು ಬೆಲ್ಜಿಯಂ ಲಕ್ಸೆಂಬರ್ಗ್‌ಗಳನ್ನು ಏಕ ಕಾಲದಲ್ಲಿಯೇ ಜರ್ಮನ್ ಸೈನಿಕರು ಆಕ್ರಮಿಸಿದರು!

—ನಾರ್ವೆಯಿಂದ ಆಂಗ್ಲರು ಹಿಂದೆ ಹೋದರು, ಜರ್ಮನರ ಆಕ್ರಮಣಕ್ಕೆ ನಾರ್ವೆಯು ಆಹುತಿಯಾಯಿತು

ಹಿಟ್ಲರನು ಇಂದು ಬ್ರಿಟಿಷರ ಬಾಗಿಲ ಬಳಿ ಬಂದು ಅರ್ಭಟಿಸುವನು!

◆

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ತೀವ್ರ ಚರ್ಚೆಗಳುಂಟಾದುವು ಮಂತ್ರಿ ಮಂಡಳದಲ್ಲಿ ಬಹಳ ಮಾರ್ಪಾಟುಗಳೂ ಆಗಿವೆ!

ನಾರ್ವೆಯಲ್ಲಿ ನಡೆಸಿದ ಚೆಂಬರ್ಲೀನ್ ಸರಕಾರದ ಯುದ್ಧ ನೀತಿಯನ್ನು ಪಾರ್ಲಿಮೆಂಟಿನಲ್ಲಿ ವಿರುದ್ಧ ಪಕ್ಷದವರು ಕಟ್ಟುಗವಾದ ಮಾತಿನಿಂದ ಟೀಕಿಸಿದರು.

—ಚೆಂಬರ್ಲೆನರ ಈಗ ಬ್ರಿಟಿಷ್ ಜನಾಂಗಕ್ಕೆ ಮಾಡಬಹುದಾದ ಉಪಕಾರವೆಂದರೆ ತನ್ನ ಪದವಿಗೆ ರಾಜಿನಾಮೆ ಕೊಡುವುದಾಗಿದೆಯೆಂದೇ ಲಾಯಿಡ್ ಜಾರ್ಜರ ಹೇಳಿಬಿಟ್ಟರು!

—ಇಂತಹ ಸಂದಿಗ್ಧ ಕಾಲದಲ್ಲಿ ದೇಶದಲ್ಲಿ ಐಕ್ಯತೆ ಇರಬೇಕಾದುದರಿಂದ ತಾನು ತನ್ನ ಪದವಿಗೆ ರಾಜಿನಾಮೆ ಕೊಡುವುದಾಗಿ ಚೆಂಬರ್ಲೆನರ ಹೇಳಿಕೆ

ತನ್ನ ಮಿತರೂ ಸಹೋದ್ಯೋಗಿಗಳೂ ಆದ ಚರ್ಚಿಲ್ಲರು ಹೊಣೆಗಾರಿಕೆಯನ್ನು ಯಶಸ್ವಿಯಾಗಿ ಪೂರೈಸುವರೆಂದು ನಾನು ನಂಬುತ್ತೇನೆ ಎಂದು ಚೆಂಬರ್ಲೆನರು ಪದವೀತ್ಯಾಗ ಮಾಡುವಂದು ಸಮಾಧಾನ ಪಟ್ಟು ಕೊಂಡರು!

ನೋಟಗಳು!

◆

ಚರ್ಚಿಲ್ಲರ ಮುಂದಾಳುತನದಿಂದ ಹೊಸ ಬ್ರಿಟಿಷ್ ಮಂತ್ರಿ ಮಂಡಳದ ರಚನೆಯಾಯಿತು!

—ಬ್ರಿಟಿಷರಲ್ಲಿ ಹಿಟ್ಲರನನ್ನು ಉಗ್ರ ಭಾಷೆಯಲ್ಲಿ ನಿಂದಿಸುವ ಅಪ್ರತಿಮರಾಗಿ ಗಳೆಂದು ಚರ್ಚಿಲ್ಲರು ಪ್ರಖ್ಯಾತರಾಗಿದ್ದಾರೆ

ಚರ್ಚಿಲ್ಲರ ಹೊಸ ಮಂತ್ರಿ ಮಂಡಳದಲ್ಲಿ ಚೆಂಬರ್ಲೇನರಿಗೂ ಒಂದು ಸ್ಥಾನವುಂಟು!

◆

ಮಿಂಚು ಬಡೆದಂತೆ ಜರ್ಮನರ ಹಾಲೆಂಡ ಬೆಲ್ಜಿಯಂ ದಾಳಿಗಳು ಆಕಸ್ಮಿಕವಾಗಿಯೂ ಆಶ್ಚರ್ಯಕರವಾಗಿಯೂ ಸಂಭವಿಸಿದುವು!

—ಜೀವದ ಹಂಗು ತೊರೆದು ಜರ್ಮನರ ಹಾಲೆಂಡು ಬಲ್ಜಿಯಮುಗಳಲ್ಲಿ ಕಾದಾಡುತ್ತಿದ್ದಾರೆ

ಈಗಾಗಲೇ ಬ್ರಿಟನಿನಲ್ಲಿ ಸೈನ್ಯಕ್ಕೆ ಸ್ವಯಂಸೇವಕರನ್ನು ಹೆಚ್ಚಾಗಿ ಸೇರಿಸುತ್ತಿದ್ದಾರೆ

—ಹತ್ತೊಂಬತ್ತು ವರ್ಷಕ್ಕೆ ಮಿಕ್ಕಿದ ೩೦ ವರ್ಷಕ್ಕೆ ಕೆಳಗಿನ ಬ್ರಿಟಿಷ್ ಗಂಡಸರೆಲ್ಲರೂ ಸೈನಿಕರಾಗಿ ರಣರಂಗಕ್ಕಿಳಿಯಬೇಕೆಂದ ಸರಕಾರದ ಆಜ್ಞೆಯಾಗಿದೆ

—ವೈರಿಯು ಮನೆ ಬಾಗಿಲಿಗೆ ಬಂದು ಗರ್ಜಿಸುತ್ತಿರುವಾಗ ಬ್ರಿಟಿಷರೆಂಬವರೂ ಜೀವದ ಹಂಗು ತೊರೆದು ಕಾದಾಡಲೇಬೇಕಾಗಿದೆ

◆

—ಭಾರತದ ಸಮಸ್ಯೆಯು ಮೊದಲಿದ್ದಂತೆಯೇ ಇದೆ

—ಬ್ರಿಟಿಷರ ಕಷ್ಟಕಾಲದಲ್ಲಿ ಅವರನ್ನು ಪೀಡಿಸಿ ಸ್ವಾತಂತ್ರ್ಯ ಪಡೆಯುವುದು ಸಲ್ಲದೆಂದು ಮಹಾತ್ಮಾ ಗಾಂಧಿಜಿಯವರ ಅಭಿಪ್ರಾಯ

ಹಾಲೆಂಡು ಬೆಲ್ಜಿಯಮುಗಳ ಆಕ್ರಮಣ ಕಾಲದಲ್ಲಿ ಜರ್ಮನಿಯ ಹಿಂಸಾತುರ ಬುದ್ಧಿಯನ್ನು ನೆಹರು ಗಳೂ ರಾಜೇಂದ್ರ ಪ್ರಸಾದರೂ ತೀವ್ರವಾಗಿ ಖಂಡಿಸಿದರು!

—ರಾಷ್ಟ್ರೀಯ ಪರಿಸ್ಥಿತಿಯು ಬಿಡಿಸಲಾರದ ಸಮಸ್ಯೆಯಾಗಿ ಗಹನವಾಗಿದ್ದರೂ ಅಂತರರಾಷ್ಟ್ರೀಯ ಪರಿಸ್ಥಿತಿಯ ವಿಷಯದಲ್ಲಿ ಭಾರತ ಮುಖಂಡರು ಬಹಳ ಸ್ಪಷ್ಟವಾದ ಅಭಿಪ್ರಾಯವುಳ್ಳವರಾಗಿದ್ದಾರೆ!

◆

ಖಾಕ್ಸಾರ ಚಳವಳದ ವಿಷಯದಲ್ಲಿ ಜಿನ್ನಾ ಸಾಹೇಬರು ಇತ್ತೀಚೆಗೆ ಒಂದು ಸ್ಪಷ್ಟವಾದ ಪ್ರಕಟಣೆಯನ್ನು ಹೊರಡಿಸಿದರು

ಖಾಕ್ಸಾರ ಚಳವಳಕ್ಕೂ ಮುಸ್ಲಿಂ ಲೀಗಿಗೂ ಏನೇನೂ ಸಂಬಂಧವಿಲ್ಲವೆಂದೂ ಅದರ ಚಟುವಟಿಕೆಗಳಲ್ಲಿ ತಮಗೆ ಯಾವ ಸಂಬಂಧವೂ ಇಲ್ಲವೆಂದೂ ಅವರು ಅದರಲ್ಲಿ ಹೇಳಿರುವರು.

—ಲಾಹೋರಿನ ಲೀಗ್ ಪರಿಷತ್ತಿನಲ್ಲಿ ಖಾಕ್ಸಾರರ ಕುರಿತು ಲೀಗು ಕಂಬನಿ ಸುರಿಸಿದ ವಿಷಯವನ್ನು ನೆನಪಿನಲ್ಲಿಟ್ಟುಕೊಂಡವರಿಗೆ ಜಿನ್ನಾರ ಈ ಮಾತು ಬಹಳ ಆಶ್ಚರ್ಯಕರವೆನಿಸುವುದು

ಹೇಗಿದ್ದರೂ ಖಾಕ್ಸಾರರನ್ನು ಬಹಳ ಸಂದಿಗ್ಧವಾದ ಸಮಯದಲ್ಲಿ ಜಿನ್ನರು ಕೈಬಿಟ್ಟರು

— ತಮಗೆ ಸಹಾಯ ಬೇಕೆಂದು ಹಾತೊರೆದಾಗ ಮುಸ್ಲಿಂ ಲೀಗು ರಕ್ಷಣೆಗೆ ಬರಲಿಲ್ಲ, ಕಾಂಗ್ರೆಸ್ಸು ರಕ್ಷಣೆಗೆ ಬಂತು, ಆದ್ದರಿಂದ ನಾವು ಕಾಂಗ್ರೆಸನ್ನು ಬಿಡಲಾರೆವು ಎಂದು ಮೊನ್ನೆ ಮೊನ್ನೆ ದಯಾ ಕಿದ್ಮತ್‌ಗಾರರ ಮುಖಂಡರಾದ ಗಫರ್ ಖಾನರ ಹೇಳಿದ್ದರು!

—ಖಾಕ್ಸಾರ ಮುಖಂಡರೂ ಲೀಗಿನ ಕುರಿತು ಅದೇ ತರದ ಪ್ರಕಟಣೆಯನ್ನು ಹೊರಡಿಸುವ ಸಂದರ್ಭ ಬರಬಹುದೇ?

◆

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithalbhai Patel Road, BOMABY.

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮಿಯೊಪತಿಕ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್, ಮತ್ತು ಡ್ರಗ್ಗಿಸ್ಟ್ಸ್,

ಹಂಪನಕಟ್ಟಾ, ಮಂಗಳೂರು.

WANTED

1 Two secondary Grade Trained Teachers for the Sri Srinivasa Patashala S. V. Temple Mangalore. Applications should contain previous teaching experience if any and should be accompanied by good references.

2 A teacher for teaching crafts applicant should have at least S. S. L. C. qualification and must be prepared to undergo a course of training in carding and spinning for a period of 4 months at the Grama Seva mandal Nalvadi Wardha District C. P. and also a course of training in weaving for a period of 3 to 6 months in the Maharastra Charaka Sanga's Training centre at Mul Wardha District C. P. Applications should be accompanied by good references and a true copy of marks obtained at the S. S. L. C. Examination. The Selected candidate will be paid his bording and lodging expenses during the period of training. Applications should reach the Office of the Sri Srinivasa Patashala by 31 – 5 – 1940. Further particulars can be obtained from the Office

Sri Srinivasa Patashala
Sri Venkatramana Temple
Mangalore
Dated 10th May 1940

G. Upendra Prabhu
Hon. Manager.

ವಿಜ್ಞಾನಯುಗ

ಕಣ್ಣಿನ ರೋಗಗಳಿಗೆ ಶಸ್ತ್ರಚಿಕಿತ್ಸೆ!

ಕಣ್ಣಿನೊಳಗಡೆ ಇರುವ ಲೆನ್ಸ ಎಂಬ ಭೂತಕನ್ನಡಿಯು ತನ್ನ ಪಾರದರ್ಶಕ ಗುಣವನ್ನು ಕಳಕೊಂಡು ದಪ್ಪವಾಗಿ ಬೆಳೆದಾಗ ಕೆಟರೆಕ್ಟ ಎಂಬ ರೋಗವು ಬರುತ್ತದೆ. ಇದಕ್ಕೆ ಸಾಮಾನ್ಯವಾಗಿ ಕಣ್ಣಿಗೆ ಹೂ ಬರುವದೆಂದು ಹೇಳುತ್ತಾರೆ. ಕಣ್ಣಿಗೆ ಹೂಬಂದಾಗ ಕಣ್ಣಿನ ವೈದ್ಯರು ಆ ಹೂವನ್ನು-ಅಂದರೆ ಕನ್ನಡಿಯ ಮೇಲೆ ಬೆಳೆದ ಪರೆಯನ್ನು ಶಸ್ತ್ರಚಿಕಿತ್ಸೆಯಿಂದ ಕತ್ತರಿಸಿ ತೆಗೆದು, ರೋಗಿಗಳ ಕುರುಡುತನವನ್ನು ಹೋಗಲಾಡಿಸುವರು. ಆದರೆ ಇಂಥ ಚಿಕಿತ್ಸೆಯನ್ನು ಮಾಡಲಿಕ್ಕೆ ಬಹಳ ಅನುಭವವೂ ವಿಶೇಷ ಹಸ್ತ ಕೌಶಲ್ಯವೂ ಬೇಕಾಗುತ್ತದೆ. ಚಿಕಿತ್ಸೆಯ ಕಾಲದಲ್ಲಿ ಎಳ್ಳಷ್ಟು ಹೆಚ್ಚುಕಡಿಮೆಯಾದರೆ ಲಾಭಕ್ಕಿಂತ ಹಾನಿಯೇ ಒದಗಬಹುದು

ಆದರೆ ಡಾಕ್ಟರ ವಿಲಿಯಂ ಲಿಪ್ಸಿಗ್ ಎಂಬ ಘನವೈದ್ಯರೊಬ್ಬರು ಕಣ್ಣಿನ ಈ ತರದ ರೋಗಗಳಿಗೆ ಶಸ್ತ್ರಚಿಕಿತ್ಸೆಯು ಅಗತ್ಯವೇ ಇಲ್ಲವೆನ್ನತೊಡಗಿದ್ದಾರೆ ಇವರು ವರ್ಷಂಪ್ರತಿ ಸುಮಾರು ೨೦೦೦೦ ಕಣ್ಣು ರೋಗಿಗಳನ್ನು ಚಿಕಿತ್ಸೆ ಮಾಡುವ ಮಹಾ ತಜ್ಞರು ಇಷ್ಟರ ತನಕ ಶಸ್ತ್ರಪ್ರಯೋಗದಿಂದಲೇ ಚಿಕಿತ್ಸೆ ಮಾಡುತಿದ್ದರು ಈಗ ಅಂಥ ಚಿಕಿತ್ಸೆಯು ಶಾಶ್ವತ ಫಲವನ್ನು ಕೊಡುವದಿಲ್ಲ ಎನ್ನುತ್ತಾರೆ. ಮಾತ್ರವಲ್ಲ ಕಣ್ಣಿನ ರೋಗಕ್ಕೆ ಶಸ್ತ್ರಚಿಕಿತ್ಸೆ ಮಾಡುವಾಗ, ಎಚ್ಚರ ಕೆಟ್ಟರೆ, ರಕ್ತಸ್ರಾವದಿಂದಾರಂಭಿಸಿ ಉನ್ಮಾದದ ತನಕ ಬೇರೆ ರೋಗಗಳು ಕಾಣಿಸಿಕೊಂಡು ರೋಗಿಯು ಪ್ರಾಣಹಾನಿಯಾಗ ಬಹುದೆನ್ನುತ್ತಾರೆ

ಆಹಾರ ಕ್ರಮದಲ್ಲಿ ಬದಲಾವಣೆ ಮಾಡುವದರಿಂದ ಕಣ್ಣಿನ ರೋಗಗಳನ್ನು ಗುಣಪಡಿಸಬಹುದಾಗಿ ಈ ವೈದ್ಯರು ಅನುಭವದಿಂದ ಹೇಳುತ್ತಿರುವರು. ಆಹಾರ ಕ್ರಮದ ಬದಲಾವಣೆ, ಮನಸ್ಸಿನ ಧೈರ್ಯ ಸ್ಥೈರ್ಯ ಮತ್ತು ಕಣ್ಣಿಗೆ ಸರಿಯಾದ ರೀತಿಯಲ್ಲಿ ತಕ್ಕಷ್ಟು ಬೆಳಕು ಕೊಡುವದರಿಂದ ಕಣ್ಣಿನ ರೋಗಗಳು ಗುಣವಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಅವರು ಹೀಗೆ ಹೇಳುತ್ತಿರುವದರ ಕಾರಣವೇನೆಂದರೆ ಕಣ್ಣಿನ ರೋಗಗಳ ಮೂಲ ಕಾರಣವು ಕಣ್ಣಿನಲ್ಲಿ ಇರದೆ ಅದು ಶರೀರದ ಇತರ ಭಾಗಗಳಲ್ಲಿ ಇರುತ್ತದೆ. ಆ ಕಾರಣಗಳನ್ನು ಕಂಡುಹಿಡಿದು ಇಲ್ಲಿ ಕಂಡುಬರುವ ದೋಷಗಳನ್ನು ದೂರಮಾಡದೆ, ಬರೀ ಕಣ್ಣಿನ ಚಿಕಿತ್ಸೆಯು ಶಾಶ್ವತ ಫಲವನ್ನು ಕೊಡದಿರುವದು ಸಹಜವಾಗಿದೆ.

ಕಂದು ಸಕ್ಕರೆಯಲ್ಲಿ ಜೀವಾತು ಇಲ್ಲ

ಮನುಷ್ಯನ ಶರೀರ ಧಾರಣೆ ಮತ್ತು ಆರೋಗ್ಯಕ್ಕೆ ಜೀವಾತುಗಳು ಅತ್ಯಗತ್ಯವಾಗಿವೆ. ಈ ಜೀವಾತುಗಳು ಕೃತ್ರಿಮ ಆಹಾರ ವಸ್ತುಗಳಲ್ಲಿ ಇರುವದಿಲ್ಲ. ಬಹಳ ಶುದ್ಧಮಾಡಿದ ಬಿಳಿಸಕ್ಕರೆಗಿಂತ, ಅಷ್ಟು ಚೆನ್ನಾಗಿ ಶುದ್ಧ ಮಾಡದ ಕಂದು ಬಣ್ಣದ ಈ ಜೀವಾತುಗಳು ಹೆಚ್ಚಿಗೆ ಇರುವವೆಂದು ತಿಳಿದು ವೈದ್ಯರು ಕಂದು ಸಕ್ಕರೆಯನ್ನೇ ಉಪಯೋಗಿಸಲಿಕ್ಕೆ ಹೇಳುವದು ಇಷ್ಟರತನಕದ ಕ್ರಮವಾಗಿತ್ತು. ಈ ಕಂದು ಸಕ್ಕರೆಯಲ್ಲಿ ಜೀವಾತುಗಳು ಮಾತ್ರವಲ್ಲ. ಆರೋಗ್ಯಕ್ಕೆ ಬೇಕಾದ ಕೆಲವು ಖನಿಜಗಳು ಕೂಡ ಇರುವವೆಂದು ವೈದ್ಯರ ವಿಶ್ವಾಸವಾಗಿತ್ತು ಈಗ ಕೇಂಬ್ರಿಜ್ ಯೂನಿವರ್ಸಿಟಿಯ ಡಾಕ್ಟರ ಸಿಡ್ನಿಕೋಲ್ ಎಂಬವರು ಕೆಲವು ಶೋಧನೆಗಳನ್ನು ನಡೆಸಿ ಕಂದು ಸಕ್ಕರೆಯಲ್ಲಿಯೂ ಜೀವಾತುಗಳು ಮತ್ತು ಖನಿಜಗಳು ಇರುವದಿಲ್ಲವೆಂದು ಹೇಳಿದ್ದಾರೆ

ಜೀವಜಂತುಗಳ ಮೇಲೆ ಚಂದ್ರನ ಪ್ರಭಾವ

ಹಿಂದೂ ಜ್ಯೋತಿಷಿಗಳು ಪುರಾತನ ಭಾರತೀಯ ವೈಜ್ಞಾನಿಕರು ಸೂರ್ಯ ಚಂದ್ರ, ಅಂಗಾರಕ, ಶನಿ, ಬುಧ, ಗುರು ಶುಕ್ರ ಮೊದಲಾದ ನಕ್ಷತ್ರ, ಗ್ರಹೋಪಗ್ರಹಗಳಿಂದ ಜೀವಜಂತುಗಳ ಜೀವನದ ಮೇಲೆ ಒಳ್ಳೆ ಅಥವಾ ಕೆಟ್ಟ ಪರಿಣಾಮವಾಗುತ್ತದೆಂದು ಹೇಳಿದ್ದರು ಆದರೆ ಈಚೆಗೆ ನಕ್ಷತ್ರಾದಿಗಳಿಗೂ ಜೀವಜಂತುಗಳ ಜೀವನಕ್ಕೂ ಇರುವ ಸಂಬಂಧ ಕುರಿತು ವಿಶೇಷ ಪರಿಶೋಧನೆಗಳು ನಡೆಯದೆ ಇದ್ದ ಕಾರಣದಿಂದ ಇಂಥ ಯಾವ ಸಂಬಂಧವೂ ಇರುವದಿಲ್ಲವೆಂದು ಸಾಮಾನ್ಯರು ಹೇಳುವಂತಾಗಿದ್ದಿತು ಈಗ ವಾಷಿಂಗ್ಟನ ಮತ್ತು ಲೀವಿಶ್ವ ವಿದ್ಯಾಲಯಗಳ ಒಬ್ಬ ಆಚಾರ್ಯರಾದ ಪ್ರೊಫೆಸರ ಹಿರೀಟ್ ಎಂಬವರು ಕೆಲವು ಮಹತ್ವ ಪೂರ್ಣ ಶೋಧನೆಗಳನ್ನು ಮಾಡಿ ಅಂಥ ಸಂಬಂಧವು ಇರುವದೆಂದು ಹೇಳಿರುವರು.

ಅವರು ಕಳೆದ ಒಂದೂವರೆ ವರ್ಷದಿಂದ ಸಮುದ್ರ ತಲದಲ್ಲಿ ಬೆಳೆಯುವ ಅಂತರಗಂಗೆಯ ಬೆಳವಣಿಗೆ ಮತ್ತು ಚಂದ್ರನ ಉದಯಾಸ್ತಗಳಿಗಿರುವ ಸಂಬಂಧದ ಸೂಕ್ಷ್ಮಾವಲೋಕನ ಮಾಡಿ ಚಂದ್ರನು ಬೆಳಗುತ್ತಿರುವ ಸಮಯದಲ್ಲಿ ಮಾತ್ರ ಈ ಅಂತರಗಂಗೆಗಳು ಬೆಳೆಯುತ್ತಿರುವವೆಂದೂ, ಚಂದ್ರನು ಅಸ್ತನಾದಾಗ ಅವುಗಳಿಗೆ ಬೆಳವಣಿಗೆಯೇ ಇರುವದಿಲ್ಲವೆಂದೂ, ಹುಣ್ಣಿಮೆಯ ದಿನಗಳಲ್ಲಿ ಮಾತ್ರ ಅಂತರಗಂಗೆಗಳು ಹೂ ಬಿಡುವವೆಂದೂ ತೋರಿಸಿಕೊಟ್ಟಿದ್ದಾರೆ. ಅದೇ ರೀತಿ ಅವರೀಗ ಇತರ ಜಲಚರಗಳಿಗೂ ಚಂದ್ರನಿಗೂ ಇರುವ ಸಂಬಂಧವನ್ನು ಸರಿಯಾಗಿ ಕಂಡುಕೊಂಡ ಬಳಿಕ, ಪಶು ಪಕ್ಷಿ ಮತ್ತು ಚಂದ್ರನಿಗೂ, ಮನುಷ್ಯ ಮತ್ತು ಚಂದ್ರನಿಗೂ ಇರುವ ಸಂಬಂಧವನ್ನು ಕಂಡುಕೊಳ್ಳುವ ನಿರ್ಧಾರ ಮಾಡಿದ್ದಾರೆ. ಅದು ತಿಳಿದ ಬಳಿಕ ಹಿಂದೂಫಲಜ್ಯೋತಿಷದ ಕುರಿತು ಇರುವ ಅನೇಕ ಸಂದೇಹಗಳು ದೂರವಾಗಬಹುದು

ಜೀವನಿರ್ಮಾಣದ ರೀತಿ

ಭೂಮಿ ಬಿಟ್ಟು ಉಳಿದ ಗ್ರಹೋಪಗ್ರಹಗಳು ಮತ್ತು ನಕ್ಷತ್ರಗಳಲ್ಲಿ ಜೀವವಿದೆಯೋ ಇಲ್ಲವೇ ಎಂಬುದನ್ನು ನಿಷ್ಕರ್ಷೆಮಾಡಿ ಹೇಳಲಿಕ್ಕೆ ಇಷ್ಟರತನಕ ಯಾರಿಗೂ ಸಾಧ್ಯವಾಗಿಲ್ಲ ಆದರೆ ಭೂಮಿಯಲ್ಲಿ ಜೀವವು ಹೇಗೆ ಕಾಣಿಸಿಕೊಂಡಿವೆಎಂಬುದಕ್ಕೆ ಕೆಲವು ವೈಜ್ಞಾನಿಕರು ಸಮಾಧಾನಕರವಾದ ಉತ್ತರವನ್ನು ಕೊಡುತಿದ್ದಾರೆ ನ್ಯೂಯೋರ್ಕ ಟ್ರ್ಯಾನ್ಸ ಪತ್ರಿಕೆಯ ವಿಜ್ಞಾನ ವಿಭಾಗದ ಸಂಪಾದಕರಾದ ಮಿ ವಾಲ್ಡೆಮಾರ್ ಕೆಂಫೀಸ್ಟ ಎಂಬವರು ತಾವು ಬರೆದ ಒಂದು ಗ್ರಂಥದಲ್ಲಿ ಜೀವನಿರ್ಮಾಣ ಮತ್ತು ವಿಕಾಸದ ಕುರಿತು ಹೀಗೆ ಬರೆದಿದ್ದಾರೆ—'ಎಮಿಯೊಬಾ ಎಂಬುದು ಸಮುದ್ರಗಳಲ್ಲಿ ಕಂಡು ಬರುವ ಒಂದು ಏಕಕಣಜೀವಿಯಾಗಿದೆ ಇದೇ ಜೀವಪ್ರಪಂಚದ ಮೂಲವಾಗಿರಬಹುದು. ಈ ಏಕಕಣಜೀವಿಯು ಒಂದಕ್ಕೆ ಎರಡಾಗಿ ಒಡೆದು ಸಂತಾನ ವೃದ್ಧಿ ಮಾಡಿಕೊಳ್ಳುತ್ತದೆ, ಮತ್ತು ತನ್ನ ಆಹಾರವನ್ನು ಸುತ್ತಲಿಂದ ಆಕ್ರಮಿಸಿ ಜೀರ್ಣಮಾಡಿಕೊಳ್ಳುತ್ತದೆ ಈ ಏಕಕಣಜೀವಿಯ ರಚನೆಯು ಒಂದು ದೊಡ್ಡ ಡ್ಯಾನಾಮೋ ಯಂತ್ರದ ರಚನೆಗಿಂತ ವಿಚಿತ್ರವೂ ಅದ್ಭುತವೂ ಆಗಿರುವದೆಂದ ಬಳಿಕ ಮನುಷ್ಯನಂಥ ಅನೇಕ ಕಣಜೀವಿಯ ಶರೀರ ರಚನೆಯು ಎಷ್ಟು ಅದ್ಭುತವಾಗಿರುವದೆಂಬುದನ್ನು ತಿಳಿಯಲು ಸಾಧ್ಯವಲ್ಲ. ಎಮಿಯೋಬದಂಥ ಒಂದು ಏಕಕಣಜೀವಿಯ ಶರೀರದಲ್ಲಿ ಅನೇಕ ಧಾತುಗಳಿಂದಾದ ರಚನೆಯಿರುವದು ಮತ್ತು ಈ ಒಂದೊಂದು ರಚನೆಗೆ ಒಂದೊಂದು ಪ್ರತ್ಯಪ್ರತ್ಯೇಕ ಕಾರ್ಯವು ಹಂಚಿ ಹಾಕಲ್ಪಟ್ಟಿರುವದು. ಒಂದು ಏಕಕಣಜೀವಿಯಲ್ಲಿ ಸುಮಾರು ೧೫ ಧಾತುಗಳಿವೆ. ಅವುಗಳಲ್ಲಿ ಶತಮಾಂಶ ೭೨ ಪಾಲು ಆಮ್ಲಅನಿಲ, ೧೩.೫ ಪಾಲು ಅಂಗಾರ, ೯.೧ ಪಾಲು ಜಲಜನಕ, ೨.೫ ಪಾಲು ನಾರಧನಕ ಮಾತ್ರವಲ್ಲದ ಸ್ವಲ್ಪ ಪರಿಮಾಣದಲ್ಲಿ ಕ್ಲೋರಿನ್. ರಂಜಕ, ಗಂಧಕ, ಸೋಡಿಯಂ, ಕೆಲ್ಸಿಯಂ, ಸಿಲಿಕನ್, ಮೆಗ್ನೇಸಿಯಂ, ಕಬ್ಬಿಣ ಆಯೋಡಿನ, ಮೆಂಗನೀಸ, ಫ್ಲೋರೀನ ಮೊದಲಾದ ಧಾತುಗಳೂ ಇರುತ್ತವೆ. ಈ ಎಲ್ಲಾ ಧಾತುಗಳು ಭೂಮಿಯಲಿ ಇರುವವು. ಆದುದರಿಂದ ಜೀವವೆಲ್ಲ ಭೂಮಿಯಿಂದ ಉಂಟಾಯಿತೆಂಬುದು ನಿರ್ವಿವಾದವಾಗಿದೆ. ಆದರೆ ಈ ಧಾತುಗಳಿಂದ ಜೀವವು ಒಮ್ಮಿಂದೊಮ್ಮೆಗೆ ಆಗಲಿಲ್ಲ ಅದು ಅನಿಲ, ಬಂಡೆ, ಮಣ್ಣು, ಇತ್ಯಾದಿ ರೂಪಗಳಲ್ಲಿ ಪರಿವರ್ತನೆ ಹೊಂದುತ್ತ ಮತ್ತೆ ಎಮಿಯೋಬದಂಥ ಜೀವವು ಕಾಣಿಸಿಕೊಂಡಿತು. ಎಮಿಯೋಬದಿಂದ ಅನೇಕ ಕಣಜೀವಿಗಳಾಗಿ ಅಲ್ಲಿಂದ ಮೊದಲನೆ ಬಾರಿಗೆ ಭೂಮಿಯ ಮೇಲೆ ಮನುಷ್ಯನು ಕಾಣಿಸಿಕೊಳ್ಳುವಷ್ಟಕ್ಕೆ ಒಂದು ಮಿಲಿಯ ವರ್ಷಗಳು ಕಳೆದು ಹೋಗಿದ್ದವು ಎಂಬುದರಿಂದ ಧಾತುಗಳ ಪರಸ್ಪರ ಸಂಯೋಗದಿಂದ ಜೀವವು ಕಾಣಿಸಿಕೊಳ್ಳುವ ಕಾರ್ಯವು ಎಷ್ಟು ನಿಧಾನವಾಗಿ ನಡೆಯುತ್ತದೆಂಬುದು ತಿಳಿಯುತ್ತದೆ

ಕನ್ನಡಿಯಲ್ಲಿ ಮುಖ ನೋಡುವುದು

ಇತರರ,ಸಿ ಎದರ ಸ್ತ್ರೀಯರ ಮುಖವನ್ನು ನೋಡಿ ಮತ್ಸರಪಟ್ಟು ಎಷ್ಟು ಮಂದಿ ಸ್ತ್ರೀಯರು ತಾವೂ ಕನ್ನಡಿಯ ಮುಂದು ನಿಂತು ತಮ್ಮ ದೊರಗು ಚರ್ಮಕ್ಕಾಗಿ ಮನೋಹರವಲ್ಲದ ಮುಖಕ್ಕಾಗಿ ಪ್ರಕೃತಿಯನ್ನೇ ನಿಂದಿಸಿರಲಿಕ್ಕಿಲ್ಲ? ಆದ್ದರಿಂದ ಸಹಜವಾಗಿ ಪ್ರಕೃತಿಯನ್ನು ದೂರುವುದು ಯೋಗ್ಯವೆ? ಅಂತಹ ದೊರಗು ಚರ್ಮವುಳ್ಳ ಸ್ತ್ರೀಯರು ತಮ್ಮ ದೋಷಕ್ಕಾಗಿ ತಾವೇ ನಿಂದಾರ್ಹರಲ್ಲವೆ?

ಸುಂದರವಾದ ವರ್ಣ, ಚರ್ಮದ ಹೊಳಪು ಇದು ಲೋಶನ್, ಸೋಪು, ಮತ್ತು ಸುಗಂಧ ದ್ರವ್ಯಗಳ ಉಪಯೋಗದಿಂದ ಬರತಕ್ಕದಲ್ಲ. ಇವುಗಳು ಶರೀರದ ಅಂತರಂಗ ನೈರ್ಮಲ್ಯದ ಕುರುಹುಗಳಾಗಿವೆ

ಒಂದು ಗ್ಲಾಸು ಎಂಡ್ರ್ಯೂಸ್ ಲಿವರ್ ಸಾಲ್ಟ್ ಎಂದರೆ ಶುದ್ಧ ರಕ್ತಪ್ರವಾಹವನ್ನು ಹರಿಸಬಲ್ಲಶಕ್ತಿಯುಳ್ಳದ್ದು, ಹಾಗೆ ರಕ್ತವು ಹರಿಯುವುದರಿಂಧ ಮಾತ್ರ ಶರೀರ ಶೋಭೆಯು ಹೆಚ್ಚುವುದು. ಶರೀರದೊಳಗಿನ ಕಸಕಲ್ಮಲಗಳು ತೊಳೆದು ಹೋದ ಮೇಲೆ ಮಾತ್ರ ಒಂದುಸ್ತ್ರೀಯು ಸುಂದರಳಾಗಿ ತೋರುವಳು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾರೀಕು 13-5-1940ರಿಂದಾ ಶ್ರೀ ತಾರೀಕು 22-5-1940ರ ವರೆಗೆ

ತಿರುಪತಿ ಗೋವಿಂದರಾಜ ಸ್ವಾಮಿ ದೇವಾಲಯದಲ್ಲಿ

ನಡಿಯುವ ಬ್ರಹ್ಮೋತ್ಸವ ಸಮಾರಂಭ

ಗರುಡಸೇವೆ ತಾ. 18-5-1940 ಮತ್ತು ರಥೋತ್ಸವ ತಾ. 21 5 1940 ರಲ್ಲು.

ಮಂಗಳೂರಿನಿಂದ 5-15 a. m.ಗೆ ಹೊರಡುವ ಮೋಡರ್ನ್ ಮೋಟರ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಮಧ್ಯಾಹ್ನ 3-15 p. m.ನ ಒಳಗೆ ಮೈಸೂರಿಗೆ ತಲಪಿ, ಮೈಸೂರಿನಿಂದ 4 p. m.ಗೆ ಬಿಡುವ ರೈಲಿನಲ್ಲಿ ಕೂತು ಸಂಜೆ 7 p. m.ನ ಒಳಗೆ ಬೆಂಗಳೂರಿಗೆ ತಲಪಿ ಬೆಂಗಳೂರಿನಿಂದ 9 p. m. ನ ಬಿಡುವ ರೈಲಿನಲ್ಲಿ ಕೂತು ಕಟ್ಪಾಡಿಗಾಗಿ ತಿರುಪತಿಗೆ ಮರುದಿನ 10 a. m. ನ ಒಳಗೆ ತಲಪಬಹುದು.

ಬಸ್ಸು ಮತು ರೈಲು ಚಾರ್ಜು ರೂಪಾಯಿ 9-8-0 ಮಾತ್ರ

ತಿರುಪತಿಯಲ್ಲಿ ಯಾತ್ರಾರ್ಥಿಗಳಿಗೆ ಉಳಕೊಳ್ಳಲು ಭವ್ಯವಾದ ಛತ್ರಗಳ ಏರ್ಪಾಡನ್ನು ದೇವಸ್ಥಾನದವರು ಮಾಡಿರುವರು

JOINT MANAGERS.

The Combined Booking Agency, MANGALORE. The Joint Booking Office KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಕಡನೆರಡು ಏನು ಮಾಡಿದರೂ ಸುಳುವಾಗುವುದಿಲ್ಲ. ಪೋಲೀ ಪೂರಾ ವಿಚಾರಮಾಡಿ ಔಷಧ ಬೇಡಿರಿ. ... ಸರ್ಟಿಫಿಕೇಟು ಡಾ. ವೈದ್ಯ ಎಲ್. ... ಎಸ್. ಕೆಳಮಾಣಿಕ್ಯ, ಕಾಣೋ ಈ ಚೂರ್ಣದಿಂದ ಯಾವ ತರದ ಅಪಾಯವೂ ಆದ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ಕ್ರಯರೂ. ೪-೦-೦

ವಿ. ಪಿ. ಅಲ್ಲ

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

HOUNSA

ಹಂಸಾ ಸ್ನೋ

ಮತ್ತು

ಬ್ರಿಲಿಂಟ್ಯಾನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಲಿಕಟ್ಟಾ ಬಜಾರ್, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ.,
ಆಯುರ್ವೇದಿಕ್ ಫಾರ್ಮಸಿ, ಪೆರಿಡೆಪಿ,
P. O. Peridepi (ನೆಲ್ಲೂರು ಜಿ.)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಶರದ ಗುಡ್ಡು ಮುಡಿಗೆ		
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	4—12 0	5—0—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—12—0	
,, ದುಯಂ ,, ,,	4—9—0	4—10—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	56—4—0	
,, ದಿಲ್ದಾರಸಂದ ,,	58—12—0	—
ತೆಂಗಿನ ಎಣ್ಣೆ ಮುಡಿಕ್ಕೆ	3—15—0	4—0—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	4—0—0	4—8—0
ಗೇರುಬೀಜ ಮುಡಿಗೆ	3—12—0	4—0—0
ಕಪ್ಪಿನ ಬೆಲ್ಲ ಖಂಡಿಗೆ	35—0—0	41—4—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	13—12—0	14—4—0

Date 17-5-1940 [illegible] Regd. No. M 3408

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 17-5-1940 [ಸಂಚಿಕೆ 20

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live–today–a few years more–when you are old?

If you die–to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES.

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

(Regd).

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ,

ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI



ಸಾಂಚಿಯ ಸಾರನಾಥ ಸ್ತೂಪ

KANNADA ILLUSTRATED WEEKLY

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ
ಸತ್ಯಾಗ್ರಹ ಸಿದ್ಧತೆಯ ವರದಿ

(ಪ್ರಾಂತೀಯ ಸಮಿತಿಯಿಂದ ಕಾಲ ಕಾಲಕ್ಕೆ ಅಖಿಲ ಕಾಂಗ್ರೆಸ ಸಮಿತಿಗೆ ಕಳಿಸಿದ ವರದಿಯ ಮುಖ್ಯಾಂಶಗಳು ೧೦-೫-೪೦ರ ವರೆಗೆ)

ರಾಮಗಢ ಕಾಂಗ್ರೆಸಿನ ನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಗಾಂಧೀಜಿಯವರ ಸಲಹೆ ಸೂಚನೆಗಳಿಗನುಸರಿಸಿ ನಮ್ಮ ಪ್ರಾಂತ್ಯದಲ್ಲಿಯ ಕೆಲಸದ ಸಂಕ್ಷಿಪ್ತ ವರದಿಯು ಈ ಕೆಳಗಿನಂತಿದೆ.

ಪ್ರಾಂತೀಯ ಸಮಿತಿಯ ಕಾರ್ಯಕಾರೀ ಮಂಡಲವು ತಾ. ೧೪-೪-೪೦ನೇ ದಿವಸ ಧಾರವಾಡದಲ್ಲಿ ಸೇರಿತು. ಆ ದಿವಸವೇ ಪ್ರಾಂತೀಯ ಕಾರ್ಯಕಾರೀ ಮಂಡಲವನ್ನು ಸತ್ಯಾಗ್ರಹ ಸಮಿತಿಯನ್ನಾಗಿ ಪರಿವರ್ತಿಸಲಾಯಿತು. ಅದೇ ಸಭೆಯಲ್ಲಿ ಪ್ರಾಂತದಲ್ಲಿಯ ಎಲ್ಲ ಅಧೀನ ಸಮಿತಿಗಳು ತಮ್ಮ ಸಮಿತಿಗಳನ್ನು ಸತ್ಯಾಗ್ರಹ ಸಮಿತಿಗಳನ್ನಾಗಿ ಮಾಡಬೇಕೆಂಬ ಗೊತ್ತುವಳಿಯು ಪಾಸಾಯಿತು. ಮುಂದೆ ತಾ. ೨೮-೪-೪೦ನೇ ದಿನ ಸೇರಿದ ಸಾಧಾರಣ ಸಭೆಯೂ ಇದಕ್ಕೆ ತನ್ನ ಒಪ್ಪಿಗೆಯನ್ನು ಕೊಟ್ಟಿತು. ಒಟ್ಟು ಎಂಟು ಜಿಲ್ಲೆಗಳಲ್ಲಿ (ಸಂಸ್ಥಾನ ಬಿಟ್ಟು) ಧಾರವಾಡ ಬೆಳಗಾಂವಿ, ವಿಜಾಪುರ, ಕಾರವಾರ ಮಂಗಳೂರು, ಕೊಡಗು ಈ ೬ ಜಿಲ್ಲಾ ಕಾಂಗ್ರೆಸ ಸಮಿತಿಗಳ ಕಾರ್ಯಕಾರೀ ಮಂಡಲಗಳು ಸತ್ಯಾಗ್ರಹ ಸಮಿತಿಗಳಾಗಿ ಕೆಲಸ ಮಾಡುತ್ತಲಿವೆ.

ಬೆಂಗಳೂರು ದಂಡು ಮತ್ತು ಬಳ್ಳಾರಿ ಜಿಲ್ಲೆಗಳು ಇನ್ನೂ ಸತ್ಯಾಗ್ರಹ ಸಮಿತಿಗಳಾಗಿ ಪರಿವರ್ತಿಸಿಲ್ಲ.

ಸತ್ಯಾಗ್ರಹ ಪ್ರತಿಜ್ಞೆ

ಈ ಪ್ರತಿಜ್ಞಾ ಪತ್ರಗಳನ್ನು ಮುದ್ರಿಸಿ ಎಲ್ಲಾ ಜಿಲ್ಲಾ ಸಮಿತಿಗಳಿಗೆ ಕಳುಹಿಸಿ ಕೊಟ್ಟಿದ್ದೇವೆ. ನಮ್ಮ ಕಚೇರಿಗೆ ಬಂದ ವರದಿಗಳ ಪ್ರಕಾರ ಈ ಕೆಳಗೆ ಕಾಣಿಸಿದಂತೆ ಸತ್ಯಾಗ್ರಹ ಪ್ರತಿಜ್ಞಾ ಪತ್ರಿಕೆಯ ಮೇಲೆ ಸಹಿ ಮಾಡಿರುವರು.

ಜಿಲ್ಲಾ	ಸಹಿ ಮಾಡಿದವರ ಸಂಖ್ಯೆ
(೧) ಧಾರವಾಡ	೯೨
(೨) ಕಾರವಾರ	೮
(೩) ಮಂಗಳೂರು	೨೪
(೪) ವಿಜಾಪುರ	೧೪೦
(೫) ಬೆಳಗಾಂವ	೨೩
(೬) ಕೊಡಗು (೭) ಬಳ್ಳಾರಿ (೮) ಬೆಂಗಳೂರ ದಂಡು	ವರದಿಗಳು ಬಂದಿರುವದಿಲ್ಲ.
ಒಟ್ಟು ಸಂಖ್ಯೆ	೪೯೧

ಪ್ರಾಂತ್ಯದಲ್ಲಿ ಸತ್ಯಾಗ್ರಹ ಕೆಲಸಗಳ ಮೇಲ್ವಿಚಾರಣೆ ಮಾಡುವುದಕ್ಕಾಗಿ ಒಂದು ಕಾರ್ಯಸಂಘಟನಾ ಸಮಿತಿಯು ಪ್ರಾಂತೀಯ ಸಮಿತಿಯಿಂದ ನಿಯಮಿಸಲ್ಪಟ್ಟಿದೆ. ಅದರಲ್ಲಿ (೧) ಡಾ. ಆರ್. ನಾಗನಗೌಡ (೨) ಶ್ರೀ ಕೃಷ್ಣಾಬಾಯಿ ಪಂಜೀಕರ (೩) ಚೆನ್ನಬಸಪ್ಪ ಅಂಬಲಿ ಇವರು ಸದಸ್ಯರಿರುವರು. ೨೯-೪-೪೦ನೇ ದಿನ ಈ ಉಪಸಮಿತಿಯ ಸಭೆ ಸೇರಿ ಪ್ರಾಂತ್ಯದಲ್ಲಿಯ ಕೆಲಸದ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಲಾಯಿತು. ಪ್ರಾಂತ್ಯದಲ್ಲಿ ಪ್ರತಿಯೊಂದು ಜಿಲ್ಲೆಯೂ ಒಂದೊಂದು ಸತ್ಯಾಗ್ರಹ ಶಿಬಿರವನ್ನು ಪ್ರಾರಂಭಿಸಲು ಪ್ರೋತ್ಸಾಹನ ಕೊಡಬೇಕೆಂದು ಗೊತ್ತಾಯಿತು. ಜಿಲ್ಲಾ ಸಮಿತಿಗಳು ಪ್ರಾರಂಭಿಸಬಹುದಾದ ಈ ಶಿಬಿರಗಳ ಸಲುವಾಗಿ ಪ್ರಾಂತೀಯ ನಿಧಿಯೊಳಗಿಂದ ನೂರು ರೂಪಾಯಿಗಳ ವರೆಗೆ ಪ್ರತಿಯೊಂದು ಜಿಲ್ಲೆಗೆ ಕೊಡಬಹುದೆಂದು ಗೊತ್ತಾಗಿದೆ. ಧಾರವಾಡ, ಕೊಡಗು, ವಿಜಾಪುರ, ಕಾರವಾರ ಜಿಲ್ಲೆಯವರು ಇದೇ ತಿಂಗಳ ೧೫ರಿಂದ ೨೦ನೇ ತಾರೀಖಿನೊಳಗಾಗಿ ಸತ್ಯಾಗ್ರಹ ಶಿಬಿರಗಳನ್ನು ಪ್ರಾರಂಭಿಸಲಿರುವರು. ಬೆಳಗಾವಿ ಜಿಲ್ಲೆಯವರು ಈಗಾಗಲೇ ಶಿಬಿರವನ್ನು ಪ್ರಾರಂಭಿಸುವರು.

ಪ್ರಾಂತೀಯ ಸತ್ಯಾಗ್ರಹ ಸಮಿತಿಯವರು ರಚನಾತ್ಮಕ ಕಾರ್ಯವನ್ನು ಭರದಿಂದ ಸಾಗಿಸುವದರ ಸಲುವಾಗಿ ಈ ಕೆಳಗಿನಂತೆ ವಿಭಾಗಗಳನ್ನು ರಚಿಸಿರುವರು. ಆಯಾ ವಿಭಾಗಗಳು ತಮ್ಮ ತಮ್ಮ ಕೆಲಸಗಳನ್ನು ಪ್ರಾರಂಭ ಮಾಡಿವೆ.

(೧) ಚರಕಾ ವಿಭಾಗ (೨) ಹರಿಜನ ವಿಭಾಗ (೩) ಪ್ರಚಾರ ವಿಭಾಗ (೪) ಸ್ತ್ರೀ ವಿಭಾಗ (೫) ಮುಸ್ಲೀಮ ಸಂಪರ್ಕ ವಿಭಾಗ (೬) ಸ್ವಯಂ ಸೇವಕ ವಿಭಾಗ (೭) ಪ್ರಕಟಣಾ ವಿಭಾಗ ಎಂದು ಪ್ರಧಾನ ಕಾರ್ಯದರ್ಶಿಯವರಾದ ಚೆನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ.

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

24—5—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೪—೫—೧೯೪೦

ಸಿದ್ಧತೆಯಾಗದೆ ಸತ್ಯಾಗ್ರಹವಿಲ್ಲ!

ಟೀಕಾಕಾರರಿಗೆ ನೆಹರುಗಳ ಉತ್ತರ

ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಉಂಟಾದ ಇತ್ತೀಚಿಯ ಘಟನೆಗಳನ್ನು ವಿಚಾರಿಸಿ ಭಾರತವು ಇಂದು ಸತ್ಯಾಗ್ರಹವನ್ನು ಆರಂಭಿಸದಿರುವುದು ಅಯುಕ್ತವೆಂಬ ಅಭಿಪ್ರಾಯದಿಂದ ಸಂಯುಕ್ತ ಪ್ರಾಂತದ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಸಭೆಯಲ್ಲಿ ಅನೇಕ ಕಮ್ಯುನಿಷ್ಟ, ಸೋಷಿಯಲಿಸ್ಟರೇ ಮೊದಲಾದ ಎಡಪಕ್ಷದ ಮುಖಂಡರು ಚರ್ಚೆಮಾಡಿದರು. ಇವರಿಗೆ ಸಮಾಧಾನ ಹೇಳುತ್ತಾ ಪಂಡಿತ ನೆಹರುಗಳೂ ಆಚಾರ್ಯ ನರೇಂದ್ರ ದೇವರವರೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಇಂದಿನ ನಿರ್ಧಾರವನ್ನು ಗಾಂಧಿಜಿಯವರ ಅಭಿಮತವನ್ನೂ ವಿವರಿಸಿ, ಎಲ್ಲರೂ ಇಂದು ಶಾಂತರಾಗಿ ಕಾಂಗ್ರೆಸಿಗೆ ಹಾಗೂ ಮಹಾತ್ಮಾಜಿಯವರಿಗೆ ವಿಧೇಯರಾಗಿ ನಡೆಯುವುದು ಮಾತ್ರವಲ್ಲದೆ ಇಂದಿನ ಪರಿಸ್ಥಿತಿಯನ್ನು ಭಾವನಾವಶರಾಗಿ ವಿಚಾರಿಸದೆ, ವಿಚಾರ ಪೂರ್ವಕವಾಗಿ ನಿರ್ಧರಿಸಬೇಕೆಂದು ಕೇಳಿಕೊಂಡರು.

ಆಚಾರ್ಯ ನರೇಂದ್ರ ದೇವರವರು ಅಂತರರಾಷ್ಟ್ರೀಯ ಪರಿಸ್ಥಿತಿ ಹಾಗೂ ಭಾರತದ ವಿಚಾರವಾಗಿ ಒಂದು ದೀರ್ಘವಾದ ನಿರ್ಣಯವೊಂದನ್ನು ಸಭೆಯ ಮುಂದಿಟ್ಟರು. ಆ ನಿರ್ಣಯದಲ್ಲಿ ದುರ್ಬಲ ರಾಷ್ಟ್ರಗಳು ಇಂದು ಸ್ವಾತಂತ್ರ್ಯವನ್ನು ಕಳಕೊಂಡು ನಿಸ್ಸಹಾಯ ಸ್ಥಿತಿಯಲ್ಲಿರುವ ವಿಷಯವನ್ನೂ, ದೊಡ್ಡರೀತಿಯ ಸಂಯುಕ್ತ ಘಟನೆಗೆ ಸಣ್ಣ ರಾಷ್ಟ್ರಗಳು ಅಂಗವಾಗದಿದ್ದರೆ ಪರಿಸ್ಥಿತಿಯು ಸುಧಾರಿಸಲಾರದೆಂದೂ ಸ್ಪಷ್ಟಪಡಿಸಿತ್ತು. ಮಾತ್ರವಲ್ಲದೆ, ಪ್ರತಿಕಕ್ಷಿಗಳ ಹೋರಾಟದ ಎಡೆಯಲ್ಲಿ ಸಿಲುಕಿ ನಿರಪರಾಧಿಗಳಾಗಿದ್ದು ಕಷ್ಟಗಳಿಗೆ ಗುರಿಯಾದ ಹಾಲೆಂಡು ಬೆಲ್ಜಿಯಂ ಲಕ್ಸೆಂಬರ್ಗ್ ದೇಶಗಳ ಜನರ ಕುರಿತೂ ಸಹಾನುಭೂತಿಯನ್ನು ತಿಳಿಸುವ ಸೂಚನೆಯು ಆ ನಿರ್ಣಯದಲ್ಲಿತ್ತು.

ಬ್ರಿಟನು ಆದಷ್ಟು ಬೇಗನೇ ಭಾರತದ ಸ್ವಾತಂತ್ರ್ಯದ ಕೇಳಿಕೆಯನ್ನು ವಿಚಾರಿಸಿ, ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವ ವಿಷಯವಾಗಿ ಆಲೋಚನೆ ಮಾಡುವುದನ್ನು ಬಿಟ್ಟು, ತನ್ನ ಸಾಮ್ರಾಜ್ಯ ನೀತಿಯ ಕುರಿತೇ ಮಾತನಾಡುತ್ತಿದೆಯೆಂದು ಕಮಿಟಿಯು ಅಭಿಪ್ರಾಯ ಪಟ್ಟಿತು. ಜಗತ್ತಿನ ಹೊಸ ಪರಿಸ್ಥಿತಿಯನ್ನು ವಿಚಾರಿಸಿದಲ್ಲಿ ಬೇಗನೇ ಭಾರತವನ್ನು ಬಂಧ ಮುಕ್ತವಾಗಿ ಮಾಡಿ ಅದರ ಸ್ವಾತಂತ್ರ್ಯವನ್ನು ಅದರ ವಶಕೊಡುವುದು ನ್ಯಾಯವಾಗಿದೆಯೆಂದು ಕಮಿಟಿಯು ಅಭಿಪ್ರಾಯಪಟ್ಟಿತು.

ಮಾತ್ರವಲ್ಲದೆ, ಇಂತಹ ಸಂದರ್ಭದಲ್ಲಿ ಭಾರತೀಯರು ತಮ್ಮ ತಮ್ಮೊಳಗಿನ ವೈಮನಸ್ಯಗಳನ್ನು ಹೋಗಲಾಡಿಸಿ ಒಂದಾಗಬೇಕೆಂದು ಕಮಿಟಿಯು ಮನವಿ ಮಾಡಿಕೊಂಡಿತು. ಕಾಂಗ್ರೆಸ್ಸಿನಲ್ಲಿರುವ ಅಥವಾ ಅದರಿಂದ ಹೊರಗಿರುವ ಎಲ್ಲಾ ಜನರೂ, ದೇಶದ ಸ್ವಾತಂತ್ರ್ಯ ಮತ್ತು ಐಕ್ಯಗಳ ಸಲುವಾಗಿ ಅನ್ಯೋನ್ಯ ಸಹಕಾರವನ್ನು ತೋರಬೇಕೆಂದೂ ಕೇಳಿಕೊಂಡಿತು.

ಭಾರತದ ಸ್ವಾತಂತ್ರ್ಯ ಸಂಪಾದನೆಯ ಸಲುವಾಗಿ ಕಷ್ಟ ಬಲಿ ದಾನಗಳಿಗಾದರೂ ತಲೆಗೊಡಲು ಸಿದ್ಧರೆಂದು ಪ್ರತಿಜ್ಞಾ ಬದ್ಧರಾದ ಸತ್ಯಾಗ್ರಹಿಗಳನ್ನು ಒಳ್ಳೆಯ ಶಿಕ್ಷಣ ಕೊಟ್ಟು ತರಬೇತಿ ಮಾಡುವುದಾಗಿ ನಿರ್ಧಾರಮಾಡಿತು. ಮಾತ್ರವಲ್ಲದೆ ಪ್ರಾಂತದ ಹಳ್ಳಿ ಪಟ್ಟಣಗಳಲ್ಲಿ ಸತ್ಯಾಗ್ರಹಿಗಳನ್ನು ಸೇರಿಸುವ ಕಾರ್ಯವನ್ನು ಭರದಿಂದ ಸಾಗಿಸಬೇಕೆಂದು ನಿರ್ಣಯವಾಯಿತು.

ಡಾ। ರಘುವೀರ ತ್ರಿವೇದಿಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇನ್ನು ಮುಂದೆ ವಿಳಂಬ ಮಾಡದೆ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಸೂಚನೆಯೊಂದನ್ನು ತಂದರು.

ಸಿದ್ಧತೆಯಾಗದೆ ಸತ್ಯಾಗ್ರಹವಿಲ್ಲ.

ಅದಕ್ಕೆ ಉತ್ತರ ಕೊಡುತ್ತಾ ಪಂಡಿತ ನೆಹರುಗಳು ಹೀಗೆ ಹೇಳಿದರು.

ಸತ್ಯಾಗ್ರಹಕ್ಕಾಗಿ ದೇಶವು ನೂರಕ್ಕೆ ನೂರರಷ್ಟು ಸಿದ್ಧವಾಗಿ, ಆ ವಿಷಯದಲ್ಲಿ ಹೆಚ್ಚು ಉತ್ಸಾಹವನ್ನು ತೋರಿಸದ ವಿನಹ ನಾನು ಸತ್ಯಾಗ್ರಹ ಆರಂಭ ಮಾಡಬೇಕೆಂದು ಹೇಳಲಾರೆ. ತಮ್ಮ ಮುಂದೆ ಕಾಂಗ್ರೆಸು ಇಟ್ಟಿರುವ ಕಾರ್ಯಕ್ರಮವನ್ನು ಮುಂದುವರಿಸಲು ಸಾಧ್ಯವಿಲ್ಲದೆ, ತಾವು ಮಾಡುವ ಜವಾಬ್ದಾರಿಕೆಯ ಅಪಜಯವನ್ನು ಇನ್ನೊಬ್ಬರ ತಲೆಯ ಮೇಲೆ ಹೊರಿಸ ಬಯಸುವ ಕೆಲವು ಕಾಂಗ್ರೆಸು ಧುರೀಣರ ಕೆಲಸಗಳನ್ನು ಕಂಡು ನಾನು ವಿಷಾದಿಸುತ್ತೇನೆ. ಈ ಧುರೀಣರು ಪರಿಸ್ಥಿತಿಯನ್ನು ಶಾಂತಚಿತ್ತದಿಂದ ವಿಚಾರಿಸಬೇಕು. ಬರಿಯ ಘೋಷಣೆಗಳಿಂದಲೂ, ನಿರಂತರವಾದ ಟೀಕೆಗಳಿಂದಲೂ ಏನೂ ಕಾರ್ಯವು ನಡೆಯಲಾರದು. ನಮ್ಮ ಗುರಿಯನ್ನು ಹೊಂದಲು ಸತ್ಯಾಗ್ರಹವು ನಮಗೆ ಸಹಾಯವಾಗುತ್ತದೆ. ಆದ ಕಾರಣ ಸತ್ಯಾಗ್ರಹವನ್ನು ನಾವು ನಮ್ಮ ಕೊನೆಯ ಅಸ್ತ್ರವಾಗಿ ತೆಗೆಯಬೇಕಲ್ಲದೆ ಬೇರೆ ಉಪಯೋಗಿಸಲು ಹಾಕೊಡಿಯಬಾರದೆಂದು ಕಾಂಗ್ರೆಸಿನ ಟೀಕಾಕಾರರು ತಿಳಿದುಕೊಳ್ಳಬೇಕು"

ಆಚಾರ್ಯ ನರೇಂದ್ರದೇವರು ಉತ್ತರ ಕೊಡುತ್ತಾ ತನ್ನ ನಿರ್ಣಯವು ಇಂದಿನ ಪರಿಸ್ಥಿತಿಯನ್ನು ವಿಚಾರಿಸಿ ಸಭೆಯ ಮುಂದಿಟ್ಟಿರುವುದಾಗಿದೆಯೆಂದು ಹೇಳಿದರು.

ನಿರ್ಣಯವು ಮಂಜೂರಾಯಿತು.

ಸಭೆಯ ಕೊನೆಗೆ ನೆಹರುಗಳು ತಾನು ಕಮಿಟಿಯ ಸದಸ್ಯತ್ವಕ್ಕೆ ರಾಜಿಕೊಡುವ ಅಭಿಪ್ರಾಯದಲ್ಲಿರುವೆನೆಂದೂ ಆದರೆ ತನ್ನನ್ನು ಕರೆದರೆ ತಾನು ಸಭೆಗೆ ಮುಂದೆಯೂ ಬರಬಹುದಾಗಿ ತಿಳಿಸಿದರು.

ಇವರು ಪ್ರತಿಜ್ಞೆ ತೆಗೆದುಕೊಳ್ಳಬಹುದೇ?

ಗಾಂಧಿಜಿಯವರಿಗೊಂದು ಪ್ರಶ್ನೆ

ಪ್ರ:- ಈ ಕೆಳಗಿನ ಜನರು ಸತ್ಯಾಗ್ರಹ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಹುದೋ?

(ಅ) ಯಾವದೇ ಶಾಸನ ಭಂಗ ಆಂದೋಲನದಲ್ಲಿ ಸೇರುವುದಿಲ್ಲೆಂದು ಕೋರ್ಟಿಗೆ ಬರಕೊಟ್ಟ ವಕೀಲನು.

(ಬ) ಸ್ವತಃ ತಾನು ಖಾದಿಯನ್ನು ಧರಿಸುತಿದ್ದು ಇತರರ ಸಲುವಾಗಿ ಗಿರಣಿ ಅರಿವೆಯನ್ನು ಕೊಳ್ಳುವವನು. ಅಥವಾ ಇತರ ಉಪಯೋಗಕ್ಕೆ ಗಿರಣಿಯ ಅರಿವೆಯನ್ನು ಉಪಯೋಗಿಸುವವನು.

(ಕ) ಸ್ವತಃ ಖಾದಿ ಧಾರಿಯಾದ್ದರೂ ಗಿರಣಿಯ ಅರಿವೆ ವ್ಯಾಪಾರ ಇದ್ದವನು.

ಉ:- ಇವರು ಸತ್ಯಾಗ್ರಹ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾರರು.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು'

ವಿದ್ವಾನ್ ಶ್ರೀ. ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು.)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0—1—6
6ನೆ ತರಗತಿಗೆ	,,	0—2—0
7ನೆ ,,	,,	0—2—6
8ನೆ ,,	,,	0—3—0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಸ್ವದೇಶಾಭಿಮಾನಿ

ತಾರೀಖು 24—6—1940

ಫ್ರಾನ್ಸಿನಲ್ಲಿ ಕದನ!

ಯುದ್ಧ ಆರಂಭವಾದ ಮೊದಲ್ಗೊಂಡು ಮಿತ್ರರಾಷ್ಟ್ರಗಳಾದ ಬ್ರಿಟನು ಫ್ರಾನ್ಸುಗಳು ಜರ್ಮನಿಯ ಆಕ್ರಮಣ ನೀತಿಯನ್ನು ಖಂಡಿಸಿವೆ. ಬಳಿಕ ಪ್ರತ್ಯಕ್ಷವಾಗಿಯೇ ಜರ್ಮನಿಯೊಡನೆ ಯುದ್ಧರಂಗಕ್ಕೆ ಇಳಿದು ಕಾದಾಡಿವೆ. ಇದುವರೆಗಿನ ಮಿತ್ರರಾಷ್ಟ್ರಗಳ ಹೋರಾಟವೆಂದರೆ ಇತರ ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯ ಪಾಲನೆಯ ಸಲುವಾಗಿತ್ತು. ಆದರೆ ದುರ್ಬಲರಾಷ್ಟ್ರಗಳ ಅದೃಷ್ಟವು ಹಾಳಾದುದರಿಂದಲೋ ಏನೋ ಮಿತ್ರರಾಷ್ಟ್ರಗಳ ಬೆಂಬಲದಿಂದಲೂ ಪ್ರಯೋಜನಹೊಂದದೆ ಅವುಗಳು ಒಂದೊಂದಾಗಿ ನಾಜೀ ತುತ್ತಿಗೆ ಬಲಿಯಾಗುತ್ತಾ ಬಂದುವು; ತಮ್ಮ ಸ್ವಾತಂತ್ರ್ಯವನ್ನು ಅನ್ಯಾಯದ ದುರ್ಘರ ಆಕ್ರಮಣದ ಮುಂದು ಕಾಪಾಡಲು ಅಶಕ್ತವಾಗಿ ಬಲಗುಂದಿ ಶರಣಾಹೊಡೆದವು!

ಆದರೆ ಹಿಟ್ಲರನು ಇಷ್ಟರಿಂದ ಮಾತ್ರ ತೃಪ್ತನಾಗಲಿಲ್ಲ. ಯೂರೋಪಿನ ಪ್ರಬಲರಾಷ್ಟ್ರಗಳನ್ನೂ ಸುಮ್ಮಗಿರಲು ಬಿಡುವುದಿಲ್ಲ. ಬೆಲ್ಜಿಯಮನ್ನು ದಾಟಿ ಇಂದು ಹಿಟ್ಲರನ ಪಡೆಯು ಫ್ರಾನ್ಸಿನಲ್ಲಿ ಮುಂದೊತ್ತುತ್ತಿದೆಯೆಂದೂ ಪ್ಯಾರಿಸಿನಲ್ಲಿ ಬಾಂಬಿನ ಬೆದರಿಕೆ ಹೆಚ್ಚಿದೆಯೆಂದೂ ತಿಳಿದು ಬಂದಿದೆ. ಹೇಗಿದ್ದರೂ ಇಂದು ಫ್ರಾನ್ಸೇ ಯೂರೋಪಿನ ಪ್ರತ್ಯಕ್ಷ ರಣಕ್ಷೇತ್ರವಾಗಿ ಪರಿಣಮಿಸಿದೆ.

ಹಿಟ್ಲರನ ರಣಾರಭಸವು ಅಸಾಧ್ಯವಾಗಿದೆ. ಹಿಂದು ಮುಂದುಗಳನ್ನು ಯೋಚಿಸದೆ, ನ್ಯಾಯಾನ್ಯಾಯಗಳಿಗೆ ಕಿವಿಗೊಡದೆ, ಪಾಪಪುಣ್ಯಗಳಿಗೆ ಅಂಜದೆ ಜೀವನ ಮರಣಗಳನ್ನು ಲೆಕ್ಕಿಸದೆ ರಣಮದಾಂಧನಾಗಿ ವಿಚಾರಹೀನನಾಗಿ ರಾಕ್ಷಸ ಪ್ರವೃತ್ತಿಗಿಳಿದ ಹಿಟ್ಲರನು ಇಷ್ಟು ತೀವ್ರವಾಗಿ ಮುಂದೊತ್ತಿ ಕಾದಾಡುತ್ತಿರುವುದು ಆತನ ಸ್ವಭಾವಕ್ಕೆ ಸಹಜವೆನ್ನಬಹುದು. ಆದರೆ, ಇಂತಹ ಸಂದರ್ಭದಲ್ಲಿ ವೈರಿಯು ಇಷ್ಟು ವಿವೇಕಹೀನನಾಗಿ ತೀವ್ರನಾಗಿ ಮುಂದೊತ್ತುತ್ತಿರಲು ಮಿತ್ರರಾಷ್ಟ್ರದವರೂ ತಮ್ಮ ಯುದ್ಧವನ್ನು ಪ್ರಚಂಡ ಮಾಡುವುದು ಅವಶ್ಯವು. ಬ್ರಿಟಿಷ್ ಫ್ರೆಂಚರು ಏಕ ಮನಸ್ಸಿನಿಂದ ಲೋಕಕಂಟಕವಾದ ನಾಜೀ ಆಕ್ರಮಣವನ್ನು ತಡೆವುದೂ, ಯೂರೋಪಿನ ಇತರ ಪ್ರಬಲ ರಾಷ್ಟ್ರಗಳ ಸಹಾಯವನ್ನು ಹಾರೈಸುವುದೂ, ಅವುಗಳಿಗೆ ಇತರ ರಾಷ್ಟ್ರಗಳು ಬೆಂಬಲ ಕೊಡುವುದು ಜಗತ್ತಿನ ಶಾಂತಿಯ ದೃಷ್ಟಿಯಿಂದ ಇಂದು ನ್ಯಾಯವಾದುದಾಗಿದೆ.

ಮುಂದಿನ ವಾರದಲ್ಲಿ ಅತ್ಯಂತ ಕುತೂಹಲಾಶ್ಚರ್ಯಜನಕವಾದ ಘಟನೆಗಳು ಕಾದಿವೆ! ನಿಮಿಷ ನಿಮಿಷಕ್ಕೆ ಭಯಾನಕ

ರಾಷ್ಟ್ರೀಯ ಯೋಜನಾ ಸಮಿತಿಯ ಸಲಹೆಗಳು

ರಾಷ್ಟ್ರೀಯ ಯೋಜನಾ ಸಮಿತಿಯವರು ಸಭೆಯನ್ನು ನಡೆಸಿ ತಮ್ಮ ಕಾರ್ಯಕಲಾಪಗಳನ್ನು ಮುಗಿಸಿದರು. ಹನ್ನೆರಡು ಉಪಸಮಿತಿಗಳು ಕಳುಹಿಸಿದ್ದ ಆರ್ಥಿಕ ವರದಿಗಳನ್ನು ವಿಮರ್ಶೆಮಾಡಲಾಯಿತು. ಇತರ ಉಪಸಮಿತಿಯವರು ಒಪ್ಪಿಸಿರುವ ವರದಿಗಳನ್ನು ವಿಮರ್ಶೆ ಮಾಡಲು ಕಮಿಟಿಯವರು ಜೂನ್ 2ಂರಲ್ಲಿ ಮತ್ತೆ ಸಭೆ ಸೇರಲಿರುವರು

ಸಮಿತಿಯವರು ಅಭಿಪ್ರಾಯಪಟ್ಟಿರುವುದೇನೆಂದರೆ ಆರ್ಥಿಕ ಮತ್ತು ವಾಣಿಜ್ಯ ವ್ಯವಹಾರದಲ್ಲಿ ಭವಿಷ್ಯದಲ್ಲಿ ಹೆಚ್ಚು ಲಾಭವು ಬರುವುದೆಂಬ ಊಹಾಪೋಹದ ನಿರೀಕ್ಷೆಯ ಮೇಲೆ ಗ್ರಾಮಾಂತರಗಳಲ್ಲಿ ಜನರು ಮತ್ತು ವರ್ತಕರು ಮೋಸಕ್ಕೆ ಸಿಕ್ಕಬಾರದು. ಗ್ರಾಮಾಂತರದ ಜನರಲ್ಲಿರುವ ಈ ತರಹದ ಭಾವನೆಯನ್ನು ಹೋಗಲಾಡಿಸಬೇಕು. ಗ್ರಾಮಾಂತರ ಜನಗಳ ಉದ್ಧಾರಕ್ಕಾಗಿ, ಜಮೀನು ಅಡಮಾನದ ಬ್ಯಾಂಕುಗಳು, ವ್ಯವಸಾಯ ಸಾಮಾಗ್ರಿಗಳ ಮತ್ತು ಬೆಳೆಗಳ ಉಗ್ರಾಣಗಳನ್ನು ಸ್ಥಾಪಿಸುವುದು, ವ್ಯವಸಾಯಗಾರರಿಗೆ ಬೇಸಾಯದ ಆಧಾರದ ಮೇಲೆ ಕಮ್ಮಿ ಅವಧಿಯ ಸಾಲಗಳನ್ನು ಕೊಡುವಂತೆ ಏರ್ಪಡಿಸುವುದು, ಮೊದಲಾಗಿ ವ್ಯವಸ್ಥೆಯಾಗಬೇಕು. ಮತ್ತು ಆಹಾರ ಪದಾರ್ಥಗಳ ಪರೀಕ್ಷೆಯೂ, ವಿಮರ್ಶೆಯೂ ಸರಿಯಾಗಿ ನಡೆದು, ಜನರು ಯಾವ ಆಹಾರವನ್ನು ಆರೋಗ್ಯ ಸ್ವಾಸ್ಥ್ಯಕ್ಕಾಗಿ ಸೇವಿಸಬೇಕು ಎಂಬುದು ಗೊತ್ತು ಮಾಡಲ್ಪಡಬೇಕು.

ರೈಲ್ವೆಗಳನ್ನು ವಿದ್ಯುಚ್ಛಕ್ತಿಯಿಂದ ನಡೆಸುವುದು, ಜನತೆಗೆ ಅವಶ್ಯಕವಾದ ವಿದ್ಯುಚ್ಛಕ್ತಿ, ಕಲ್ಲಿದ್ದಲು ಸೌದೆ ಮೊದಲಾಗಿ ಸರಬರಾಯಿಯಾಗುವಂತೆ ವ್ಯವಸ್ಥೆ ಮಾಡುವುದು. ಈ ಬಗ್ಗೆ ಸಾಧನ ಸಂಪತ್ತುಗಳು ರಾಷ್ಟ್ರೀಯ ಸರ್ಕಾರದ ಕೇಂದ್ರ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟಿರಬೇಕು.

ಭಾರತದಲ್ಲಿ ಕಲ್ಲಿದ್ದಲು ಗಣಿಗಳು ವಿಪುಲವಾಗಿಲ್ಲ. ಈಗ ಕಲ್ಲಿದ್ದಲನ್ನು ತೆಗೆಯುವ ಕ್ರಮವೂ ಅದರ ಬಳಕೆಯೂ ಲಾಭದಾಯಕವಾಗಿಲ್ಲ. ಕಲ್ಲಿದ್ದಲು ಕೈಗಾರಿಕೆ ಬಗ್ಗೆ ಸರ್ಕಾರದವರು ವಿಶೇಷ ಗಮನವಿಟ್ಟು ಭಾರತಕ್ಕೆ ಪ್ರಯೋಜನವಾಗುವಂತೆ ವರ್ತಿಸಬೇಕು. ವಿದ್ಯುಚ್ಛಕ್ತಿ ಆಡಳಿತದ ಬೋರ್ಡನ್ನೂ ಕೇಂದ್ರ ಫ್ಯೂಯಲ್ ಬೋರ್ಡನ್ನೂ ಏರ್ಪಡಿಸಬೇಕು.

ವಿಸ್ಮಯಕರ ವಾರ್ತೆಗಳು ಯೂರೋಪಿನಿಂದ ಬರುತ್ತಿವೆ. ಯೂರೋಪಿನ ಇತಿಹಾಸದಲ್ಲಿ ಇದೊಂದು ವಿಷಮ ಪ್ರಸಂಗವಾಗಿದೆ. ಯೂರೋಪಿನ ಪ್ರಜಾಪ್ರಭುತ್ವವಾದೀ ರಾಷ್ಟ್ರಗಳು ನಾಜೀ ಆಕ್ರಮಣವನ್ನು ಇಷ್ಟು ಸಮಯ ಹೀಗೆ ಮುಂದುವರಿಯಬಿಟ್ಟದ್ದೇ ಅವಿಚಾರವಾಯಿತು. ಇನ್ನಾದರೂ ಅದನ್ನು ನಿವಾರಿಸಿ ಲೋಕ ಶಾಂತಿಯನ್ನುಂಟು ಮಾಡಲು ಸರ್ವರೂ ಐಕ್ಯತೆಯಿಂದ ವರ್ತಿಸದಿದ್ದಲ್ಲಿ ನಿರ್ವಾಹವಿಲ್ಲ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಗ್ರಂಥ ಮತ್ತು ಪತ್ರಿಕೆಗಳ ಪ್ರದರ್ಶನ

ಕನ್ನಡ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವವನ್ನು ಜೂನ್ ತಿಂಗಳು ೩ರನೆಯ ತಾರೀಖು ಭಾನುವಾರ ಜರುಗಿಸಲು ನಿಶ್ಚಯಿಸಿದೆ. ಈ ಸಂದರ್ಭದಲ್ಲಿ ಒಂದು ಕನ್ನಡ ಗ್ರಂಥಪ್ರದರ್ಶನವನ್ನು ನಡೆಸಬೇಕೆಂದು ನಿಶ್ಚಯಿಸಿದೆ. ಜತೆಗೆ ಕನ್ನಡ ಪತ್ರಿಕೆಗಳ ಪ್ರದರ್ಶನವೊಂದನ್ನು ಏರ್ಪಡಿಸಬೇಕೆಂದಿದೆ.

ಗ್ರಂಥ ಪ್ರದರ್ಶನದಲ್ಲಿ ೧೯೩೫ನೆಯ ಇಸವಿಯಿಂದ ಈಚೆಗೆ ಪ್ರಕಟವಾದ ಎಲ್ಲ ಕನ್ನಡ ಗ್ರಂಥಗಳಿಗೂ ಸ್ಥಳವುಂಟು. ಎಲ್ಲ ಗ್ರಂಥಗಳೂ ಜೂನ್ ೧೫ರೊಳಗಾಗಿ ಸಾಹಿತ್ಯ ಪರಿಷತ್ತಿನ ಕಾರ್ಯಾಲಯಕ್ಕೆ ಬಂದಿರಬೇಕು. ಪ್ರದರ್ಶನ ಜೂನ್ ೩ನೆಯ ತಾರೀಖಿನಿಂದ ಒಂದು ವಾರದವರೆಗೂ ನಡೆಯುವುದು. ಪ್ರದರ್ಶನ ಮುಗಿಯುವವರೆಗೂ ಗ್ರಂಥಗಳನ್ನು ಪ್ರದರ್ಶನ ಸ್ಥಳದಿಂದ ಹೊರಗೆ ಕೊಡಲಾಗುವುದಿಲ್ಲ. ಗ್ರಂಥಗಳಿಗೆ ಸಂಬಂಧಪಟ್ಟ ಹಸ್ತಪತ್ರಿಕೆಗಳನ್ನು ಪ್ರಕಟನಕರ್ತರು ಕಳಿಸಿದರೆ ಅದನ್ನು ಹಂಚಲು ಏರ್ಪಾಟುಮಾಡಲಾಗುವುದು. ನೋಡಬಂದವರು ಗ್ರಂಥಗಳನ್ನು ಕೊಳ್ಳಲು ಬಯಸಿದಲ್ಲಿ ಅವರ ವಿಳಾಸವನ್ನು ಪ್ರಕಟನಕರ್ತರಿಗೆ ತಿಳಿಸಲಾಗುವುದು. ಪ್ರದರ್ಶನ ಮುಗಿದ ಬಳಿಕ ಗ್ರಂಥಗಳನ್ನು ಪ್ರಕಟನ ಕರ್ತರಿಗೆ ಪರಿಷತ್ತಿನ ಖರ್ಚಿನಿಂದ ಹಿಂದಿರುಗಿಸಲಾಗುತ್ತದೆ.

ಒಂದು ಬಿನ್ನಹ: ಪರಿಷತ್ತಿನ ಸರಸ್ವತೀ ಭಂಡಾರ ಇನ್ನೂ ಬಡವಾಗಿದೆ. ಪರಿಷತ್ತಿನ ಹಣದ ಕೊರತೆ ಹೆಚ್ಚಾಗಿರುವುದರಿಂದ, ಗ್ರಂಥಕರ್ತರೂ ಪ್ರಕಟನಕರ್ತರೂ ತಮ್ಮ ಗ್ರಂಥಗಳನ್ನು ಸರಸ್ವತೀ ಭಂಡಾರಕ್ಕೆ ಉಚಿತವಾಗಿ ಕೊಟ್ಟರೆ ಅವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತದೆ.

ಈ ಪ್ರದರ್ಶನದಲ್ಲಿ ಎಲ್ಲ ಬಗೆಯ ಪತ್ರಿಕೆಗಳನ್ನೂ ಪ್ರದರ್ಶಿಸಲಾಗುವುದು ಪತ್ರಿಕೆಯ ಪ್ರತಿಗಳನ್ನು ಜೂನ್ ೧೫ರೊಳಗೆ ಪರಿಷತ್ತಿನ ಕಾರ್ಯಾಲಯಕ್ಕೆ ಕಳಿಸಬೇಕು. ಪ್ರತಿಯೊಂದು ಪತ್ರಿಕೆಯ ಸದ್ಯದ ಸಂಚಿಕೆಯೊಂದನ್ನೂ, ಮೊತ್ತ ಮೊದಲನೆಯ ಅಥವಾ ಆದಷ್ಟು ಹಿಂದಿನ ಸಂಚಿಕೆಯೊಂದನ್ನೂ ಕಳಿಸಬೇಕು. ಮೊತ್ತಮೊದಲನೆಯ ಅಥವಾ ಬಹಳ ಹಿಂದಿನ ಸಂಚಿಕೆಗಳನ್ನು ಎಚ್ಚರಿಕೆಯಿಂದ ನೋಡಿಕೊಂಡು ಪ್ರದರ್ಶನ ಮುಗಿದ ಬಳಿಕ ಅವನ್ನು ಪರಿಷತ್ತಿನ ಖರ್ಚಿನಿಂದ ಪ್ರಕಾಶಕರಿಗೆ ಹಿಂದಿರುಗಿಸಲಾಗುತ್ತದೆ. ಎಂದು ಕ. ಸಾ. ಪರಿಷತ್ತಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

"ಭಾರತದಲ್ಲಿರುವ ಖನಿಜ ಸಂಪತ್ತೆಲ್ಲವನ್ನೂ ಸರಿಯಾಗಿ ಶೋಧಿಸಬೇಕು. ಪೆಟ್ರೋಲಿಯಂ ದೊರೆಯುವ ಪ್ರದೇಶಗಳನ್ನು ಕಂಡು ಹಿಡಿಯಬೇಕು. ಆಲ್ಕೊಹಾಲ್‌ನಿಂದ ಪವರ್ ತಯಾರಿಸಬೇಕು. ಸೀಮೆ ಎಣ್ಣೆ ಉಪಯೋಗವನ್ನು ಕಮ್ಮಿ ಮಾಡಬೇಕು" ಹೀಗೆಂದು.

ನೋಟಗಳು!

ಯೂರೋಪಿನಿಂದ ನಿಮಿಷ ನಿಮಿಷಕ್ಕೆ ಭಯಾನಕವಾದ ವಾರ್ತೆಗಳು ಬರುತ್ತಿವೆ!

ಜರ್ಮನಿಯು ಹಾಲೆಂಡು ಲಕ್ಸೆಂಬರ್ಗುಗಳನ್ನು ಪುಡಿಮಾಡಿ, ಬೆಲ್ಜಿಯಮನ್ನು ದಾಟಿ ಫ್ರಾನ್ಸಿಗೆ ದಾಳಿಯಿಟ್ಟಿದೆಯೆಂದು ತಿಳಿದಿದೆ.

◆

ಹಿಟ್ಲರನು ಪ್ರಚಂಡ ಸಾಹಸದಿಂದ ಕಾದಾಡುತ್ತಿದ್ದಾನೆ!

—ಫ್ರೆಂಚ್ ಬೆಲ್ಜಿಯಂ ಗಡಿಗಳಲ್ಲಿರುವ ನಗರಗಳ ಮೇಲೆ ನಿರಪರಾಧಿ ನಾಗರಿಕರ ಮೇಲೆ ಆಸ್ಪತ್ರೆಗಳ ಮೇಲೆ ಜರ್ಮನರು ಬಾಂಬೆಸೆದು ಜರ್ಮನರು ಅನ್ಯಾಯ ಮಾಡುತ್ತಿದ್ದಾರೆ!

— ನ್ಯಾಯ ಅನ್ಯಾಯಗಳನ್ನು ವಿಚಾರಿಸದೆ, ಜೀವನ ಮರಣಗಳನ್ನು ಪರಿಗಣಿಸದೆ ಹಿಟ್ಲರನು ಉನ್ಮತ್ತನಂತೆ ವರ್ತಿಸುತ್ತಿದ್ದಾನೆ

◆

ಫ್ರಾನ್ಸು ಇಂದು ರಣಕ್ಷೇತ್ರವಾಗಿದೆ.

—ಫ್ರಾನ್ಸಿನ ಮಂತ್ರಿಮಂಡಳದಲ್ಲಿ ಬದಲಾವಣೆಯಾಯಿತು!

ರಿಯ್ನಾಡರು ಹೊಸ ಮಂತ್ರಿಮಂಡಳದ ಪ್ರಧಾನರಾಗಿದ್ದಾರೆ.

— ಡಲಾಡಿಯವರು ವಿದೇಶಾಂಗ ಮಂತ್ರಿಗಳಾಗಿ ಉಳಿದಿರುವರು.

—ಅಂತೂ ಬ್ರಿಟನು ಫ್ರಾನ್ಸುಗಳು ಮೊದಲಿನ ಸರಕಾರಗಳನ್ನು ಕಿತ್ತು ಹೊಸ ಸರಕಾರಗಳನ್ನು ರಚಿಸುವುದರ ಮೂಲಕ ಹೊಸ ನಿರ್ಧಾರವನ್ನು ಕೈಕೊಂಡಿವೆ.

◆

ಬ್ರಿಟನಿನ ಹೊಸ ಸರಕಾರದಲ್ಲಿ ಭಾರತಕ್ಕೆ ಹೊಸ ಸಚಿವರೊಬ್ಬರು ನಿಯುಕ್ತರಾದರು

—ಭಾರತ ಸಚಿವರಾಗಿ ಮಿ। ಅಮ್ರೆಯವರನ್ನು ನೇಮಿಸಿದ ವಿಷಯ ಬ್ರಿಟನಿನಲ್ಲಿಯೂ ಭಾರತದಲ್ಲಿಯೂ ಹಲವರ ಮೆಚ್ಚುಗೆಯ ಮಾತುಗಳು ಕೇಳುತ್ತವೆ.

— ಎರಡು ತಿಂಗಳ ಹಿಂದೆ ಪಾರ್ಲಿಮೆಂಟಿನಲ್ಲಿ ಎಮ್ರೆಯವರು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ವಾದಿಸಿದ್ದರು.

—ತನ್ನ ಮನೋಭಿಪ್ರಾಯವನ್ನು ಕಾರ್ಯರೂಪದಲ್ಲಿ ಮಾಡಿತೋರಿಸುವ ಸಂದರ್ಭವು ಈಗ ಅವರಿಗೆ ಒದಗಿದೆ.

◆

ಲಂಡನಿನಲ್ಲಿ ಹೊಸ ಭಾರತ ಸಚಿವರಾದ ಎಮ್ರೆಯವರು ಭಾರತದ ಪತ್ರಿಕಾ ಪ್ರತಿನಿಧಿಯೊಡನೆ ಬೊಸ್ಸೆಬಹಳ ಸಹಾನುಭೂತಿಯ ಮಾತುಗಳನ್ನು ಹೇಳಿದರೆಂದು ತಿಳಿದುಬಂದಿದೆ.

—"ತಾನು ಭಾರತದಲ್ಲಿ ಹುಟ್ಟಿದವನು; ತನಗೆ ಭಾರತದ ವಿಷಯದಲ್ಲಿ ನೈಸರ್ಗಿಕವಾದ ಸಹಾನುಭೂತಿಯಿದೆ; ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕೆನ್ನುವ ವಿಚಾರ ನನಗೆ ಆದರವಿದೆ;" ಎಂದು ಎಮ್ರೆಯವರು ಹೇಳಿದರಂತೆ.

—ತಾನು ಆ ಕುರಿತು ಯಾವ ಯೋಜನೆಯನ್ನೂ ಈಗ ತಯಾರಿಸಿಲ್ಲವಾದರೂ, ಭಾರತ ಸ್ವಾತಂತ್ರ್ಯದ ವಿಚಾರ ಸಹಾನುಭೂತಿಯಿಂದಲೇ ವರ್ತಿಸುತ್ತೇನೆಂದು ಅವರು ಹೇಳಿದರೆಂದು ತಿಳಿದು ಬರುತ್ತದೆ.

—ಅಂತೂ ಹೊಸ ಸಚಿವರು ಸ್ವಲ್ಪ ಮೃದು ಹೃದಯದವರೆಂದು ನಂಬಲು ಸಾಕಷ್ಟು ಆಧಾರಗಳಿವೆ.

ಅಸಹಕಾರದ ಕುರಿತು

ಗಾಂಧಿಜಿಯವರ ಸ್ಪಷ್ಟೀಕರಣ!

[ಹರಿಜನದಿಂದ]

ಮಹಾತ್ಮಾಜಿಯವರಿಗೆ ಕೆಳಗಿನ ಒಂದು ಪತ್ರವು ಒಬ್ಬ ರಾಜಕೀಯ ಮಿತ್ರನಿಂದ ಬಂದಿರುತ್ತದೆ:—

"ನಿಮ್ಮ ಜೀವನದಲ್ಲಿ ಅನೇಕ ಸಾರಿ ಕಠಿಣ ನಿರ್ಧಾರಗಳನ್ನು ಮಾಡುವ ಹೊಣೆಯನ್ನು ನೀವು ಹೊತ್ತಿರಬಹುದು. ಆದರೆ ಈಗಿನ ಕಾಂಗ್ರೆಸ್ ನಿರ್ಣಯವು ನಿಮಗೊಪ್ಪಿಸಿದ ಹೊಣೆಯು ಎಲ್ಲಕ್ಕಿಂತಲೂ ಗಂಭೀರವಾಗಿರುತ್ತದೆ. ಭರತಖಂಡದ ಭವಿಷ್ಯತ್ತೇ ಅಲ್ಲ, ಇಡೀ ಜಗತ್ತಿನ ಭವಿತವ್ಯವು ಅದನ್ನವಲಂಬಿಸಿರುತ್ತದೆ.

"ನೀವು ಬುದ್ಧಿವಂತಿಕೆ ಮತ್ತು ಅನುಭವದಲ್ಲಿ ನನಗಿಂತಲೂ ಮಿಗಿಲಾಗಿರುವಿರಿ. ಆದರೆ ನಿಮ್ಮ ಮೇಲೆಯೇ ನೀವು ಅತ್ಯಂತ ಕಠಿಣ ಹೃದಯರಾಗಿರುವಿರೆಂದು ನನಗನಿಸುತ್ತದೆ. ಕೆಲಕಾಲ ನೀವು ನಿಮ್ಮನ್ನು ಹಾಗೂ ಸಾವಿರಾರು ಇತರರನ್ನು ಒಳಗೊಂಡಿರುವ ನಿಮ್ಮ ಸತ್ಯಾನ್ವೇಷಣ ಕಾರ್ಯದಲ್ಲಿ ಮಾಡುತ್ತಿರುವ ಪ್ರಯೋಗಗಳು ನನ್ನನ್ನು ಚಕಿತನನ್ನಾಗಿ ಮಾಡುತ್ತವೆ.

"ಅಹಿಂಸೆ ಮತ್ತು ಸತ್ಯಾಗ್ರಹಗಳನ್ನು ಕುರಿತಿರುವ ನಿಮ್ಮ ಪ್ರಯೋಗಗಳನ್ನು ಅತ್ಯಂತ ನಿಷ್ಠೆಯಿಂದ ನಾನು ಅನುಸರಿಸುತ್ತಿದ್ದೇನೆ. ಮತ್ತು ನೀವು ಬರೆಯುತ್ತಿರುವ ಪ್ರತಿಯೊಂದು ಅಕ್ಷರವನ್ನು ಅತ್ಯಂತ ಮನಃಪೂರ್ವಕವಾಗಿ ಓದುತ್ತಿದ್ದೇನೆ. ಈ ಶಸ್ತ್ರಗಳು ಜಗತ್ತಿನಲ್ಲಿ ನ್ಯಾಯವನ್ನು ಸ್ಥಾಪಿಸಲು ಮತ್ತು ಅನ್ಯಾಯವನ್ನು ನದೆಬಡಿಯಲು ಪರಿಣಾಮಕಾರಿಯಾಗಿವೆಯೆಂದು ನಿಮಗನಿಸುತ್ತದೆ. ಆದರೆ ಜಗತ್ತಿನಲ್ಲಿ ಈ ನಿಮ್ಮ ಶಸ್ತ್ರಗಳ ದುರುಪಯೋಗವಾಗಿದೆ ಮತ್ತು ಆಗುತ್ತಲಿದೆಯೆಂದು ನಾನು ಹೇಳುತ್ತೇನೆ. ಇದರ ಕಾರಣವೆಂದರೆ ಈ ಶಸ್ತ್ರಗಳ ಸಾಮರ್ಥ್ಯದ ಅರಿವು ಜನರಿಗೆ ಒಮ್ಮೆ ಆದ ಕೂಡಲೇ ಅವರ ಅಂತರಂಗದಲ್ಲಿ ಅವಿತಿದ್ದ ದ್ವೇಷವು ಮೇಲೆ ತೇಲಹತ್ತುತ್ತದೆ. ಮತ್ತು ಇದರಿಂದ ಬಲಗೊಂಡು ಹತ್ತುಪಾಲು ನೂರುಪಾಲು ಸಹ ಅನಾಹುತಕ್ಕೆ ಕಾರಣವಾಗುತ್ತಿದೆಯೆಂದು ನನ್ನ ವಿಚಾರ. ದೇಶಕ್ಕೆ ಅದು ಬಹಳ ಅಪಾಯವನ್ನು ಮಾಡುವದು ಖಂಡಿತ ಮತ್ತು ಅದನ್ನು ನಿರ್ಮೂಲಗೊಳಿಸಲು ಯುಗಯುಗಾಂತರಗಳು ಬೇಕಾಗಬಹುದು. ಅಸಹಕಾರವು ದಿನಜೀವನದಲ್ಲಿ ಒಂದು ಶಾಪವಾಗಿ ಪರಿಣಮಿಸಿದೆ. ಅದರ ಅನಿಷ್ಟ ಪರಿಣಾಮಗಳು ಕುಟುಂಬಗಳಲ್ಲಿ ಸಂಘಗಳಲ್ಲಿ ವ್ಯವಹಾರದಲ್ಲಿ ಕರ್ಮಶಾಲೆಗಳಲ್ಲಿ ಮತ್ತು ಸಹಕಾರೀ ಕಾರ್ಯಾಲಯಗಳಲ್ಲಿ ಗೋಚರವಾಗುತ್ತಿವೆ.

"ಅನ್ಯಾಯದಲ್ಲಿದ್ದವರೇ ಈ ಶಸ್ತ್ರವನ್ನು ನ್ಯಾಯದಲ್ಲಿದ್ದವರ ವಿರುದ್ಧ ಉಪಯೋಗಿಸುತ್ತಿರುವದು ಅತ್ಯಂತ ದುರ್ದೈವದ ವಿಚಾರ. ಕುಪುತ್ರ ಅಥವಾ ಕುಪುತ್ರಿಯು ದುಷ್ಟತಂದೆ, ಜಿಪುಣವ್ಯಾಪಾರಿ, ಅಥವಾ ಗಿರಣಿಯೊಡೆಯ, ಅಪ್ರಾಮಾಣಿಕ ಕೆಲಸಗಾರ ಇವರೆಲ್ಲರೂ ತಮ್ಮ ಅಯೋಗ್ಯ ವರ್ತನವನ್ನು ಬಚ್ಚಿಡುವದಕ್ಕೋಸುಗ ಅಸಹಕಾರವನ್ನು ಆಶ್ರಯಿಸುವರು. ನ್ಯಾಯಮಾರ್ಗದಲ್ಲಿದ್ದವರೇ ನಿಮ್ಮ ಶಸ್ತ್ರದಿಂದ ಧಿಕ್ಕೃತರಾಗಿ ನಿರ್ಬಲರಾಗುವರೆಂದು ನನ್ನ ಅನುಭವ. ಅಸಹಕಾರವು ಹಿಂದಿನಿಂದ ಏಟು ಹಾಕುತ್ತದೆ. ಮತ್ತು ಅತ್ಯಂತ ಭೀಕರವಾದ ರೀತಿಯಲ್ಲಿ ಏಟುಕೊಡುತ್ತದೆ. ಹಿಂದುಸ್ಥಾನದಲ್ಲಿ ರಾಜಕೀಯ ಆಂದೋಲನಗಳ ಸಂಬಂಧವಾಗಿ ಎರಡುಸಲ ಅದು ಉಪಯೋಗಿಸಲ್ಪಟ್ಟದ್ದನ್ನು ನಾನು ನೋಡಿದ್ದೇನೆ. ಮತ್ತೂ ನೀವು ಅದನ್ನು ಆಶ್ರಯಿಸಲಿರುವದನ್ನು ನೋಡಿ ನನಗೆ ಕಣ್ಣೀರು ಬರುತ್ತದೆ. ನಿಮ್ಮಿಂದ ಅದರ ಉಪಯೋಗವನ್ನು ತಿಳಿದುಕೊಂಡು ಸ್ವಾರ್ಥಿಗಳು ನಿಮ್ಮ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸಲು ಅದನ್ನು ಉಪಯೋಗಿಸುವರು; ಮತ್ತು ಸಾವಿರಾರು ಜನರನ್ನು ದುಃಖದಲ್ಲಿ ನೂಕುವರು. ಆದುದರಿಂದ ರಾಜಕಾರಣದಲ್ಲಿ ಈ ಶಸ್ತ್ರವನ್ನು ಉಪಯೋಗಿಸಬೇಡಿರೆಂದು ನಾನು ನಿಮಗೆ ಬೇಡಿಕೊಳ್ಳುತ್ತೇನೆ. ಅದರಿಂದ ನಮಗೆ ಕೆಲವು ಹಕ್ಕುಗಳು ದೊರೆಯಬಹುದು; ಆದರೆ ಮಾನವ ಜನಾಂಗದಲ್ಲಿ ಅದು ದ್ವೇಷವನ್ನು ಹರಡುತ್ತಿದೆಯೇ ಹೊರತು ಪ್ರೇಮವನ್ನಲ್ಲ. ನಾವು ಅತ್ಯಂತ ಅಪೂರ್ಣರು. ನೀವು ಬುದ್ಧಿವಂತರು. ದೇವರ ಮನುಷ್ಯರು. ನಿಮಗೆ ಬೇರೊಂದು ಹಾದಿಯನ್ನು ತೋರಿಸಲೆಂದು ದೇವರಿಗೆ ನನ್ನ ಮೊರೆ.

"ಜೀವನ ಮರಣದ ಹೋರಾಟದಲ್ಲಿ ಇಂಗ್ಲೀಷರು ತೊಡಗಿದಾಗ ಅವರನ್ನು ಪೇಚಿನಲ್ಲಿ ಹಾಕಬೇಡಿರೆಂದು ನಾನು ನಿಮಗೆ ಬಿನ್ನವಿಸಿಕೊಳ್ಳುತ್ತೇನೆ. ಆದರೆ ಹಾಗೆ ಮಾಡಲು ನಿಮ್ಮ ಉಪದೇಶದ ಪ್ರಕಾರ ಕಾಂಗ್ರೆಸ್ಸು ಒಪ್ಪಬಹುದಾದರೂ ತನ್ನಷ್ಟಕ್ಕೆ ತಾನೇ ಕಾಂಗ್ರೆಸ್ಸಿಗೆ ಆ ತಾಳ್ಮೆಯು ಬರಲಿಕ್ಕಿಲ್ಲ. ಅಸಹಕಾರ ಪ್ರಾರಂಭವಾದರೆ ಉಚ್ಛೃಂಖಲವಾಗುವ ದ್ವೇಷಾಸೂಯೆಗಳ ಮತ್ತು ಅದರಿಂದುದ್ಭವಿಸುವ ಜಾತಿ ದ್ವೇಷಗಳ ವಿಪರೀತ ಪರಿಣಾಮವು ಯುದ್ಧದ ಮೇಲಾಗಿ ಹಿಂದುಸ್ಥಾನವನ್ನು ಹೆಚ್ಚಿನ ಗಂಡಾಂತರಕ್ಕೆ ಒಡ್ಡಬಹುದು.

'ಹಿಂದು ಮುಸಲ್ಮಾನ ಸಮಸ್ಯೆಯನ್ನು ನಾವು ಬಿಡಿಸಬೇಕಾಗಿದೆ. ಅದಕ್ಕೋಸುಗ ನಾವು ಎಲ್ಲಾ ಜಾತೀಯ ಮುಂದಾಳುಗಳ ಹಾಗೂ ಪಕ್ಷ ಧುರೀಣರ ಪರಿಷತ್ತನ್ನು ಕರೆಯಬೇಕು. ಮೊದಲೇ ನಾವು ಪ್ರಯತ್ನ ಮಾಡಿದರೆ ಸರಕಾರದವರು ರಾಷ್ಟ್ರಘಟನಾ ಸಮಿತಿಯನ್ನು ಕರೆಯುವಷ್ಟರಲ್ಲಿ ನಾವು ಒಕ್ಕಟ್ಟಾಗುವೆವು. ತಡಮಾಡಿ ಪ್ರಯೋಜನವಿಲ್ಲ. ಕಾಲ ಹೋದಂತೆ ಮುಸಲ್ಮಾನರ ಬೇಡಿಕೆಗಳು ಬೆಳೆಯುತ್ತಾ ಹೋಗುವವು. ತಡಮಾಡದೆ ಮನಃಪೂರ್ವಕ ಯತ್ನ ಮಾಡಿದರೆ ಐಕ್ಯವನ್ನು ಸಾಧಿಸಲು ನಮಗೆ ದೇವರು ನೆರವಾಗುವನೆಂದು ಮನವರಿಕೆಯಾಗಿದೆ. ದೇಶದ ಸೂತ್ರಗಳನು ದೇವರು ನಿಮ್ಮ ಕೈಯಲ್ಲಿತ್ತಿರುವನು; ನೀವೇ ದೇಶದ ಭಾಗ್ಯವನ್ನು ಕಟ್ಟಬಹುದು, ಅಥವಾ ಕೆಡಿಸಬಹುದು."

● ಈ ಪತ್ರಕ್ಕೆ ಮಹಾತ್ಮಗಾಂಧಿಯವರು ಈ ರೀತಿಯಿಂದ ಉತ್ತರ ಬರೆದು ಅಸಹಕಾರದ ಮರ್ಮವನ್ನೂ ಅದರ ಉಪಯೋಗ ಕೆಲಸಗಳನ್ನೂ ಸ್ಪಷ್ಟವಾಣಿಯಲ್ಲಿ ವಿವರಿಸುವರು.

ಲೇಖಕರು 'ನಮ್ಮಲ್ಲಿಯ ಅತ್ಯಂತ ಸಮೂಹದವರಲ್ಲಿ ಒಬ್ಬರಾಗಿರುವರು. ಅವರು ಚಿತ್ರದ ಒಂದು ಬದಿಯನ್ನು ತೋರಿಸಿರುವರು. ಆದರೆ ಎಲ್ಲ ಒಮ್ಮುಗ್ಗುಲು ಚಿತ್ರಗಳಂತೆ ಇದಾದರೂ ಭ್ರಾಮಕವಾಗಿದೆ.

"ಪ್ರತಿಯೊಂದು ಪ್ರಭಾವಶಾಲಿ ಪದಾರ್ಥವು ದುರುಪಯೋಗಿಸಲ್ಪಡುವ ಸಂಭವವಿರುತ್ತದೆ. ಅಫೀಮು ಮತ್ತು ಆರ್ಸೆನಿಕ್ ವಿಷವು ಅತ್ಯಂತ ತೀವ್ರವಾದ ಹಾಗೂ ಉಪಯುಕ್ತ ಔಷಧಗಳಾಗಿವೆ. ಮತ್ತು ಅವು ಕುಂಬಾ ದುರುಪಯೋಗಕ್ಕೆ ಇಂಬುಗೊಡುತ್ತವೆ. ಅದಕ್ಕೋಸುಗ ಯಾರೊಬ್ಬರೂ ಅವುಗಳ ಸದುಪಯೋಗವನ್ನು ತಡೆಯಲು ಹೇಳಿಲ್ಲ. ಅಸಹಕಾರವು ಕೆಲವು ಸಂದರ್ಭಗಳಲ್ಲಿ ದುರುಪಯೋಗಿಸಲ್ಪಟ್ಟಿದ್ದರೆ ಅನೇಕ ಸಂದರ್ಭಗಳಲ್ಲಿ ಅದರ ಸದುಪಯೋಗವು ಸಂಪೂರ್ಣ ಹಿತಕರವೆಂದು ಸಿದ್ಧವಾಗಿದೆ. ಯಾವದೊಂದು ವಸ್ತುವಿನ ಒಟ್ಟು ಪರಿಣಾಮದಿಂದ ಅದರ ಗುಣಾವಗುಣಗಳನ್ನು ನಿರ್ಣಯಿಸತಕ್ಕದ್ದು. ಅಹಿಂಸಾತ್ಮಕ ಅಸಹಕಾರದ ಒಟ್ಟು ಪರಿಣಾಮವು ಹಿಂದುಸ್ಥಾನಕ್ಕೆ ಅತ್ಯಂತ ಕಲ್ಯಾಣಕರವಾಗಿದೆ. ಎಷ್ಟೋ ತಲೆಮಾರುಗಳ ವರೆಗೆ ಪ್ರಯತ್ನ ಮಾಡಿದ್ದರೂ ಸಾಧ್ಯವಾಗದಿದ್ದ ಜನಜಾಗೃತಿಯನ್ನು ಅದು ಉಂಟುಮಾಡಿದೆ. ಅದು ರಕ್ತಪಾತ ಮತ್ತು ಅರಾಜಕತೆಗಳನ್ನು ತಡೆದು ಒಟ್ಟಿನಲ್ಲಿ ಬ್ರಿಟಿಷರ ಹಾಗೂ ನಮ್ಮ ಸಂಬಂಧಗಳಲ್ಲಿ ಅಪೂರ್ವ ಸುಧಾರಣೆಯನ್ನು ಮಾಡಿದೆ. ಅಪೂರ್ವವಾದ ಅನ್ಯೋನ್ಯ ಆದರ ವಿಶ್ವಾಸಗಳಿರುವ ಪ್ರಯುಕ್ತ ಪರಸ್ಪರ ಶುಭಕರ ತಿಳುವಳಿಕೆಯಿದೆ. ಹೀಗಿದ್ದರೂ ನಮ್ಮ ಅಸಹಕಾರವು ಮಂದ ಮಂದವಾಗಿ ಅಹಿಂಸಾತ್ಮಕವಾಗಿದೆ. ಅಸಹಕಾರವು ವಿಶ್ವೋಪಯೋಗಿಯಾಗಿದೆಯೆಂದು ನನ್ನ ಅಭಿಪ್ರಾಯ. ಸರಿಯಾಗಿ ಉಪಯೋಗಿಸಿದರೆ, ರಾಜಕಾರಣದಲ್ಲಿ ಅದರ ಉಪಯೋಗದಿಂದ ಒಬ್ಬರನ್ನೊಬ್ಬರು ಕೊಲ್ಲುವ ಅತ್ಯಂತ ಪಾಶವೀ ಆಯುಧಗಳ ಉಪಯೋಗವೇ ಇಲ್ಲದಂತಾಗುವುದು. ಆದುದರಿಂದ ನಾವು ಮಾಡತಕ್ಕ ಕೆಲಸವೆಂದರೆ ಅದರ ಉಪಯೋಗವನ್ನು ಬೆಳೆಸುವದು. ಆಗ ಮಾತ್ರ ಅದರ ಉಪಯೋಗವನ್ನು ನಿಯಮನಗೊಳಿಸುವ ಖ್ಯಾತ ಶಾಸನಗಳ ಪ್ರಕಾರ ಅದನ್ನು ಉಪಯೋಗಿಸತಕ್ಕದ್ದೆಂಬ ಬಗ್ಗೆ ಎಚ್ಚರಿಕೆಯನ್ನು ವಹಿಸತಕ್ಕದ್ದು ದುರುಪಯೋಗದ ಸಂಭವವನ್ನು ಗಣಿಸತಕ್ಕದ್ದೆಂಬ ವಿಷಯವು ನಿಸ್ಸಂದೇಹ. ಆದರೆ ಅದರ ಯೋಗ್ಯ ಉಪಯೋಗದ ಜ್ಞಾನವು ಬೆಳೆದಂತೆ ಅಪಾಯದ ಸಂಭವವು ಕಡಿಮೆಯಾಗಬಹುದು.

'ಅಸಹಕಾರದ ಬಗ್ಗೆ ಒಂದು ಸುರಕ್ಷಿತ ಮಾತೆಂದರೆ ಕೊನೆಗೆ ಅದರ ದುರುಪಯೋಗದ ಪರಿಣಾಮವು ಉಪಯೋಗ ಮಾಡಿದವನ ಮೇಲಾಗುವದೇ ಹೊರತು ಯಾರ ವಿರುದ್ಧ ಅದನ್ನುಪಯೋಗಿಸಿರುವರೋ ಅವರ ಮೇಲಾಗುವದಿಲ್ಲ. ಮತ್ತು ಬೆಳಗದವರಲ್ಲಿ ಅದರ ದುರುಪಯೋಗವು ಹೆಚ್ಚಿದೆ. ಯಾಕೆಂದರೆ ಯಾರ ವಿರುದ್ಧ ಅದು ಉಪಯೋಗಿಸಲ್ಪಡು

[ಕೆಳಗಿನ ಪುಟಕ್ಕೆ ಮುಂದುವರಿದಿದೆ]

ಇಂದಿನ ಮಕ್ಕಳೇ ಮುಂದಿನ ಜನಾಂಗ!
ಮುಂದಿನ ಜನಾಂಗಕ್ಕೆ ವಿಜ್ಞಾನವೇ ನಿಧಿ!!
ಅಪ್ಪುವಿಜ್ಞಾನ
6ನೇ 7ನೇ 8ನೇ ತರಗತಿಗಳಿಗೆ
ನೂತನ ಪಾಠಪಟ್ಟಿಗೆ ಅನುಸಾರವಾಗಿ
ಶ್ರೀ ಎಸ್. ರಾಮಕೃಷ್ಣಾಚಾರ್ ಬಿ. ಎ. ಎಲ್. ಟಿ.
ಇವರಿಂದ ವಿರಚಿತವಾದುದು.
ಹಳ್ಳಿಯ ಶಾಲೆಗಳಲ್ಲೂ ಮಾಡಿಕೋರಿಸಲು ಸುಲಭವಾಗುವಂತಹ ಪ್ರಯೋಗಗಳನ್ನು ಒಳಗೊಂಡಿವೆ.
ಸಚಿತ್ರವಾದ ವಿವರಣೆಗಳನ್ನೂ ಕೊಡಲಾಗಿದೆ.
ಬಡ ವಿದ್ಯಾರ್ಥಿಗಳು ಪಡಕೊಳ್ಳಲು ಸಾಧ್ಯವಾಗುವಂತೆ ಕ್ರಯವು ಅತ್ಯಂತ ಕಡಿಮೆಯಾಗಿಸಿದೆ!
ಜೂನ್ ಮೊದಲನೆಯ ವಾರದಲ್ಲಿ ಪ್ರಕಟವಾಗಲಿದೆ.
ಶಾರದಾ ಛಾಪಖಾನೆ, ರಥಬೀದಿ ಮಂಗಳೂರು

ಅಸಹಕಾರದ ಕುರಿತು ಗಾಂಧಿಜಿಯವರ ಸ್ಪಷ್ಟೀಕರಣ

ವಡೆಯೇ ಅದರ ದುರುಪಯೋಗವನ್ನು ಪ್ರತಿಭಟಿಸುವಷ್ಟು ಅವರು ಸಮರ್ಥರಿರುವದಿಲ್ಲ. ತಪ್ಪು ಉಪಯೋಗದ ಪ್ರೀತಿಯು ದೃಷ್ಟಾಂತವದು. ಸಲಿಗೆಯು ತಾಯಿತಂದೆಗಳು ಮತ್ತು ಹೆಂಡರು ಇದರ ದೊಡ್ಡ ಆಹುತಿಗಳು. ಯಾವದೇ ಬಗೆಯ ಬಿಡಿರಿಕೆಗೆ ಒಳಗಾಗುವದನ್ನು ತಪ್ಪು ಪ್ರೀತಿಯು ಬೇಡುವದಿಲ್ಲೆಂಬುದನ್ನು ಅವರು ಅರಿತ ಬಳಿಕ ಅವರಿಗೆ ಜಾಣತನವು ಬರುತ್ತದೆ. ತದ್ವಿರುದ್ಧ ನಿಜ ಪ್ರೀತಿಯು ಅದನ್ನು ಪ್ರತಿಭಟಿಸುತ್ತದೆ'

'ಪತ್ರಲೇಖಕರು ನಾಡಿಕೆಯ ಶಾಸನ ಸಭೆಗಳ ಪ್ರತಿಬಂಧಕ ಕಾರ್ಯಕ್ರಮವನ್ನು ಸೂಚಿಸಿರುವರು. ಅಸಹಕಾರ ಮತ್ತು ಶಾಸನಭಂಗಗಳ ಸಿದ್ಧತೆಯ ಬೆಂಬಲವಿಲ್ಲದಾಗ ಅದರ ನಿರರ್ಥಕತೆಯು ಸಂಪೂರ್ಣವಾಗಿ ಪ್ರದರ್ಶಿಸಲ್ಪಟ್ಟಿದೆ.

'ಬ್ರಿಟಿಷರ ಮಟ್ಟಿಗೆ ಹೇಳುವದಾದರೆ ಅವರನ್ನು ಪೇಚಿನಲ್ಲಿ ಹಾಕುವಂತೆ ನಾನೇನೂ ಮಾಡುವದಿಲ್ಲೆಂದು ಮೊದಲೇ ಹೇಳಿದ್ದೇನೆ. ಹೋರಾಟವನ್ನು ತಪ್ಪಿಸಲು ನಾನು ಮಿತಿಮೀರಿ ಯತ್ನ ಮಾಡುತ್ತಿದ್ದೇನೆ. ಆದರೆ ಅವರು ಅದನ್ನು ಅಪರಿಹಾರ್ಯವಾಗಿ ಮಾಡಬಹುದು. ಹೀಗಿದ್ದರೂ ನಾನು ದೇಶದಲ್ಲೆಲ್ಲ ಹಿಂಸಾತ್ಮಕ ಸ್ಫೋಟಗಳ ಸ್ವರೂಪದಲ್ಲಿ ಹಾನಿಕಾರಕವಾಗದಂತೆ ಇರುವ ಪರಿಣಾಮಕಾರಿಯಾದ ಕಾರ್ಯರೀತಿಯನ್ನು ಹುಡುಕುತ್ತಿದ್ದೇನೆ'

'ಕಾಂಗ್ರೆಸ್ಸಿನವರ ಕಡೆಯಿಂದ ಪ್ರತ್ಯಕ್ಷ ಸಹಕಾರವಿಲ್ಲೆಂಬ ಮಾತು ನಿಜವಿದ್ದರೂ ಅಪ್ರತ್ಯಕ್ಷ ಸಹಕಾರಕ್ಕೇನೂ ಕೊರತೆಯಿಲ್ಲೆಂದು ಇಲ್ಲಿ ನಾನು ಹೇಳಬೇಕು. ಜನರ ಕಡೆಯಿಂದ ಹಿಂಸಾತ್ಮಕ ಸ್ಫೋಟಗಳಿಂದ ಪ್ರಭಾವಶಾಲಿಯಾದ ರೀತಿಯಲ್ಲಿ ಆ ಹಿಂಸಾ ಶಕ್ತಿಗಳನ್ನೆಲ್ಲ ಒಟ್ಟುಗೂಡಿಸುವ ನನ್ನ ಪ್ರಯತ್ನಗಳು ಹಾಳಾಗಿ ಹೋಗಬಹುದಾಗಿದ್ದವು. ಆದರೆ ಈಗಿದ್ದಂತೆ ಹೇಳುವದಾದರೆ ಅವರು ತೋರಿಸಿದ ಸಂಯಮವು ಭವಿಷತ್ತಿನ ಬಗ್ಗೆ ನನ್ನಲ್ಲಿ ಆಶೆಯನ್ನು ಹುಟ್ಟಿಸಿದೆ.

ಹಿಂದೂ ಮುಸಲ್ಮಾನ ಐಕ್ಯವು ಒಂದು ತೊಡಕು. ಆದರೆ ಮುಸಲ್ಮಾನರು ತಮ್ಮ ಬೇಡಿಕೆಗಳನ್ನು ಬಳೆಸಬಹುದೆಂಬ ಅಂಜಿಕೆಗೋಸುಗ ಐಕ್ಯವನ್ನು ತೀವ್ರ ಸಾಧಿಸಬೇಕೆಂದು ಅವರು ಹೇಳುವಾಗ ನನ್ನ ಮಿತ್ರರು ತಪ್ಪು ದಾರಿಯನ್ನು ಹಿಡಿದಿರುವರೆಂದು ಹೇಳಬೇಕಾಗುತ್ತದೆ. ಯಾರ ವಿರುದ್ಧ ಅವರ ಬೇಡಿಕೆಗಳು? ಹಿಂದುಸ್ಥಾನವು ಇತರರದಿದ್ದಷ್ಟೇ ಅವರದ್ದೂ ಇದೆ. ಐಕ್ಯದ ಹಾದಿಯು ಸರ್ವಕಾಲಿಕ ನ್ಯಾಯಸಮ್ಮತ ಬೇಡಿಕೆಗಳಲ್ಲಿದೆ. ಹೊರತು ನ್ಯಾಯವಿರಲಿ ಅನ್ಯಾಯವಿರಲಿ ದಿನದಿನಕ್ಕೆ ಬೆಳೆಯುವ ಬೇಡಿಕೆಗಳಲ್ಲಿಲ್ಲ. ಸದ್ಯಕ್ಕಂತೂ ಹಿಂದುಸ್ಥಾನವನ್ನು ವಿಭಾಗಿಸುವ ಬೇಡಿಕೆಯು ಐಕ್ಯದ ಪ್ರಯತ್ನಗಳಲ್ಲಿ ಅಂತ್ಯ ಸಂಸ್ಕಾರವನ್ನು ಮಾಡಿದೆ. ಜಾತೀಯ ಒಡಂಬಡಿಕೆಯು ಬ್ರಿಟಿಷರು ತಮ್ಮ ಪರವಾಗಿ ಮಾಡಬೇಕಾದ ನ್ಯಾಯದಾನಕ್ಕೆ ಸರಿಯಿಲ್ಲೆಂದು ನನ್ನ ಅಭಿಪ್ರಾಯ. ಹಿಂದುಸ್ಥಾನದ ಸ್ವಯಂನಿರ್ಣಯದ ಅಧಿಕಾರವನ್ನು ಒಪ್ಪಿಕೊಳ್ಳಬೇಕೆಂದು ಬ್ರಿಟಿಷರಿಗೆ ಯಾವಾಗ ಅನಿಸುವದೋ ಆಗ ತಮ್ಮ ದಾರಿಯಲ್ಲಿರುವ ಆತಂಕಗಳೆಂದು ಮುಂದೆ ಮಾಡುವ ಎಲ್ಲ ತೊಂದರೆಗಳು ಸೂರ್ಯಕಿರಣಗಳ ಮುಂದೆ ಕರಗುವ ಹಿಮದಂತೆ ತಂತಾನೇ ಕರಗಿ ಹೋಗುವವೆಂದು ನನಗನಿಸುತ್ತದೆ. ಸ್ವಯಂ ನಿರ್ಣಯಾಧಿಕಾರವೆಂದರೆ ಪ್ರತಿಯೊಂದು ಗುಂಪಿನ ಮತ್ತು ಪ್ರತಿಯೊಂದು ವ್ಯಕ್ತಿಯ ಸ್ವಯಂ ನಿರ್ಣಯವೆಂದೇ ಅರ್ಥವಾಗುವುದು. ಗುಂಪು ಮತ್ತು ವ್ಯಕ್ತಿಗಳ ನಿರ್ಣಯವು ಏಕರೂಪವಾಗುವದೆಂದು ಘಟನಾ ಸಮಿತಿಯ ಬೇಡಿಕೆಯು ಮೊದಲೇ ಗೃಹೀತವಾಗಿಟ್ಟುಕೊಂಡಿದೆ. ಇದಕ್ಕೆ ವ್ಯತಿರಿಕ್ತವಾದರೆ ಮತ್ತು ವಿಭಾಗೀಕರಣವು ಸಮ್ಮತವಾದರೆ ವಿದೇಶಿಯರ ಆಳಿಕೆಗಿಂತ ನಾವು ವಿಭಾಗೀಕರಣವನ್ನು, ಅಥವಾ ವಿಭಾಗೀಕರಣಗಳನ್ನು ಅಥವಾ ನಾವು ನಮ್ಮ ನಮ್ಮಲ್ಲಿಯೇ ಗುದ್ದಾಡುತ್ತ ವಿದೇಶೀಯರ ಆಳಿಕೆಗೆ ಒಪ್ಪಬಹುದು. ಇಲ್ಲವೇ ಸ್ಪಷ್ಟವಾದ ಅಂತಃಕಲಹದ ಯುದ್ಧವನ್ನಾಡಬಹುದು. ಹೀಗಿದ್ದರೂ ಸದ್ಯದ ಹಳಸಿದ ಪರಿಸ್ಥಿತಿಯು ಹೀಗೇ ಸಾಗಲಾರದು ಎಂದಿಲ್ಲೆಂದು. ರೀತಿಯಿಂದ ಅದು ಕೊನೆಗಾಣಲೇಬೇಕು. ನಾನು ಆಶಾವಾದಿ. ನಾವು ನಿರ್ಧಾರಕ್ಕೆ ಬಂದರೆ ಹಿಂದುಗಳು, ಮುಸಲ್ಮಾನರು ಮತ್ತು ಇತರರೆಲ್ಲರೂ ಹಿಂದುಸ್ಥಾನಕ್ಕೆ ಅನುಕೂಲವಾಗಿ ನಡೆಯುವರೆಂದು ನನಗೆ ಪರಿಪೂರ್ಣ ಆಸೆಯಿದೆ.

ಥಕ್ಕನೇ ಉಂಟಾಗುವ ಥಂಡಿಯು ಶ್ವಾಸಕೋಶಗಳಿಗೆ ಅಪಾಯಕರ!

ಗಂಟಲು, ಎದೆ ಮತ್ತು ಶ್ವಾಸಕೋಶಗಳ ಎಲ್ಲಾ ತರದ ಬಾಧೆಗಳಿಗೆ ಪೆಪ್ಸ ಯೋಗ್ಯ ಗುಣಕಾರಿ.

ಎಲ್ಲಾ ಕಡೆಗಳಲ್ಲಿಯೂ ಬಾಟ್ಲಿಗೆ ರೂ. 1ರಂತೆ ಮಾರಲ್ಪಡುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ಶಾಸಕೀಯ ಗುಳಿಗೆಗಳು

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

Rs.50/-,100/-,500/-,1,000/-&5,000/-

are now issued at all our Branches

For particulars call at or write to

Any of our nearest Branches

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈ ಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ — ಬೆಲೆ ರೂ 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ ಪಿ ಚಾರ್ಜು ಮಾಫಿ — ವ್ಯಾಪಾರಸ್ಥರಿಗೆ ಧಾರಾಳ ಕಮಿಶನು

ವಿ ಪೋ ಪೋರ್ಜು 1.5ರ ಒಳಗೆ ರೂ 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು — ಸೋಲ್ ಏಜೆಂಟ್ಸ್

ಯು ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು — ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ. 1x.3

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂವಿವರ

6ನೇ	7ನೇ	8ನೇ ತರಗತಿಗಳಿಗೆ
0—5—0	0—6—0	0—7—0

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟುದು:

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಈ ವಾರದ ಕಥೆ:

ಬೀಬಿ ಸಕೀನಾ

'ಸ್ವಾಮೀ, ಗಾಡಿ ಎಲ್ಲಿಗೆ ಹೊರಟಿದೆ?' ಎನ್ನುತ್ತ ಸುಮಾರು ಹದಿನಾರು ವರ್ಷದ ಒಬ್ಬ ಸುಂದರ ತರುಣಿ, ನಮ್ಮ ಉತ್ತರವನ್ನು ಕಾಯದೆ, ಎದುರಿಗಿದ್ದ ಖಾಲಿ ಬೆಂಚಿಯ ಮೇಲೆ ಕೂತುಕೊಂಡಳು ಆಗಲೇ ಗಾಡಿ ಸೀಟಿ ಹೊಡೆದು ಕಲ್ಕತ್ತೆಯ ಕಡೆಗೆ ಚಲಿಸಿತು ನಾವು ಪಾಟ್ನಾದಿಂದ ಕಲ್ಕತ್ತೆಗೆ ಟಿಕೇಟು ತೆಗೆದುಕೊಂಡಿದ್ದೆವು ರಾತ್ರಿ ಹತ್ತು ಹೊಡೆದಾಗಿದ್ದಿತು ಜನಸಂದಣಿ ದೊಡ್ಡದಾಗಿತ್ತು ಆದುದರಿಂದ ನಿದ್ದೆ ಬೀಳುತ್ತಿರಲಿಲ್ಲ ನನ್ನ ಮಿತ್ರ ಪ್ರಭಾಕರ ಪೇಪರು ಹಿಡಿದು ಓದುತಿದ್ದ ಜಿನ್ನಾ ಸಾಹೇಬರ ಪಾಕಿಸ್ತಾನ ಯೋಜನೆಯಿಂದ ಅವನ ತಲೆ ಎಲ್ಲ ಕೆಡಾಗಿದ್ದಿತು ಅವನು ಪೇಪರನ್ನು ಮಡಚಿಟ್ಟು—'ಉಗ್ರಾನಂದ! ನಮ್ಮ ಈ ಭಾರತ ಭೂಮಿಯನ್ನು ಹಿಂದೂ ಭಾರತ, ಮುಸಲ್ಮಾನ ಭಾರತ ಎಂದು ಪಾಲು ಮಾಡಿದರೆ ಮತ್ತೆ ಹಿಂದುಗಳ ಸರ್ವನಾಶವು ಬಹಳ ಸುಲಭದಲ್ಲಿ ಆಗುವುದು ನಮ್ಮ ರಾಮಕೃಷ್ಣರ ಕ್ರೀಡಾಸ್ಥಾನಗಳು ಮ್ಲೇಚ್ಛರ ಲೀಲಾಭೂಮಿಗಳಾಗಲಿವೆ. ಇದ ಉತ್ಪನ್ನ ತಿಂದ ಮಾನಗೆ ಎರಡನ್ನು ಬಗೆವ ಆಲೋಚನೆ ಹಿಂದೂ ಸಮಾಜಕ್ಕೆ ದ್ರೋಹ ಮಾಡುವ ಆಲೋಚನೆ, ಹಿಂದೂ ಸಮಾಜಕ್ಕೆ ದ್ರೋಹ ಮಾಡುವ ಉಪಾಯ ಇದನ್ನು ವಿರೋಧಿಸಲೇ ಬೇಕು ಉಗ್ರಾನಂದ! ಈ ಸಾಹೇಬರ ಮೀಸೆ ಮುಗ್ಗಿಸಿ ಮೆಲ್ಲಗೆ ಎಲ್ಲವನ್ನು ತಾವೇ ಆಕ್ರಮಿಸುವ ಧೂರ್ತರ ಇವರ ಆಶೆಯನ್ನು ತಣಿಸಲಿಕ್ಕೆ ಪ್ರಯತ್ನಿಸಿದ ಹಾಗೆ ಇವರ ಲೋಭವು ಬೆಳೆಯುತ್ತದೆ ಆದುದರಿಂದ—'ಸಾಹೇಬರೆ! ನೀವು ವಿದೇಶಿಯರು, ಇಲ್ಲಿ ವಿದೇಶಿಯರಂತೆ ಇರಿ ನೀವು ಅಲ್ಪಸಂಖ್ಯಾಕರಂತೆ ಇರಿ, ನಮ್ಮಿಂದ ನೀವು ಯಾವ ಹೆಚ್ಚಿನ ಅಧಿಕಾರಗಳನ್ನು ಪಡೆದಿದ್ದೀರೋ, ಅವನ್ನು ನಮಗೆ ಹಿಂತಿರುಗಿ ಕೊಡಿ, ಮತ್ತೆ ನಿಮ್ಮ ದಾರಿ ನೀವು ಹಿಡಿಯಿರಿ' ಎಂದು ಇವರಿಗೆ ಹೇಳುವ ಹೊತ್ತೀಗ ಬಂದಿದೆ ಎಂದು ಬಹಳ ಉದ್ವೇಗದಿಂದ ಹೇಳಿದ.

ನಾನು ಪ್ರಭಾಕರನ ಮಾತುಗಳನ್ನು ಕೇಳುತ್ತ ಇದ್ದೆನಾದರೂ ನನ್ನ ದೃಷ್ಟಿ ಅವನ ಕಡೆಗೆ ಇರದೆ, ಎದುರು ಕೂತುಕೊಂಡಿದ್ದ ಆ ಪಾಪದ ಆ ಹುಡುಗಿಯ ಮೇಲೆ ಇದ್ದಿತು ಅವಳು ನಮ್ಮ ಮಾತುಗಳನ್ನು ಕಿವಿಗೊಟ್ಟು ಕೇಳುತ್ತ ಇದ್ದಳು ಜಿನ್ನರ ಮಾತು ಬಂದಾಗಲೆಲ್ಲ ಅವಳ ಮೋರೆ ದುಃಖದಿಂದ ಕಪ್ಪಾಗುತ್ತಿತ್ತು, ಮನೋಹರವಾದ ಕಪೋಲಗಳ ಮೇಲಿಂದ ಕಣ್ಣೀರು ಹರಿಯುತ್ತಿತ್ತು, ನನ್ನಂತೆ ಅವಳೂ ಏನೋ ಒಂದು ಆಪತ್ತಿಗೆ ಬಲಿಯಾಗಿರುವಳೆಂದು ಅವಳನ್ನು ಕಾಣುತ್ತಿದ್ದ ನನಗೆ ಹೊಳೆಯಿತು. ಆದ್ದರಿಂದ ಪ್ರಭಾಕರನ ಮಾತಿನ ಪ್ರವಾಹಕ್ಕೆ ಅಡ್ಡ ಬಂದು —'ತಾವು ಎಲ್ಲಿಗೆ ಹೊರಟಿರಿ?' ಎಂದು ನಾನವಳನ್ನು ಕೇಳಿದೆ. ಅಶ್ರುಬಿಂದುಗಳು ನನ್ನ ಪ್ರಶ್ನೆಗೆ ಅವಳ ಉತ್ತರವಾಯಿತು ಅವಳು ಮಾತನಾಡದೆ ಒಂದು ನಿಟ್ಟುಸಿರು ಬಿಟ್ಟಳು. ಆದನ್ನು ನೋಡಿ ಪ್ರಭಾಕರ ನನ್ನ ಮತ್ತಷ್ಟು ಸಮೀಪಕ್ಕೆ ಬಂದ —'ಗಾಬರಿಯಾಗಬೇಡಿ ಆತ್ಮೀಯರಂತೆ ಸಹಾಯ ಮಾಡುವೆವು' ಎಂದು ತನ್ನ ಸ್ವಭಾವಸಿದ್ಧ ಮಧುರವಾಣಿಯಿಂದ ಹೇಳಿದ

ಅವಳಿಗೆ ನಮ್ಮ ಮಾತಿನಲ್ಲಿ ವಿಶ್ವಾಸವಾಯಿತೆಂದು ಕಾಣುತ್ತೆ ತನ್ನ ಜೀವನದ ಕತೆಯನ್ನು ಆರಂಭಿಸಿದಳು—"ಸ್ವಾಮೀ, ನನ್ನ ತಾಯಿ ತಂದೆಗಳು ಮುಸಲ್ಮಾನರು ಈಗಲೂ ನಾನ ಆ ಜಾತಿಯವಳಾಗಿಯೇ ಇದ್ದೇನೆ ಅವರು ನನ್ನನ್ನು ಸಕೀನಾ ಎಂದು ಕರೆಯುವರು ನಮ್ಮ ಮನೆಗೆ ಒತ್ತಾಗಿ ಒಬ್ಬ ಹಿಂದೂ ಗೃಹಸ್ಥರ ಮನೆ ಇದೆ ಅವರು ಬಹಳ ಒಳ್ಳೆಯವರು. ಅವರಿಗೆ ನನ್ನ ಪ್ರಾಯದ ಒಬ್ಬ ಹುಡುಗಿ ಇದ್ದಳು ನಾನೂ ಅವಳೂ ಬಾಲ್ಯದಿಂದ ಒಡನಾಡಿಗಳಾಗಿದ್ದೆವು ಅನೇಕ ಬಾರಿ ನನ್ನ ಆಟ ಊಟ ಪಾಠಗಳೆಲ್ಲ, ಒಟ್ಟಿಗೆ ಅವಳ ಮನೆಯಲ್ಲೇ ಆಗುತಿತ್ತು ನನಗೆ ನಮ್ಮ ಮಾಂಸಾಹಾರಕ್ಕಿಂತ ಅವರ ಸಸ್ಯಾಹಾರ ಸಾರ ಪಲ್ಯಗಳು ಬಹಳ ರುಚಿಸುತ್ತಿದ್ದವು ನನ್ನ ಗೆಳತಿ ನನಗ ರಾಮಾಯಣ ಭಾರತಗಳನ್ನು ಓದಲಿಕ್ಕೆ ಕೊಡುತಿದ್ದಳು ಅವೂ ನನಗೆ ಬಹಳ ರುಚಿಸುತಿದ್ದವು ಕಳೆದ ವರ್ಷ ನನ್ನ ಗೆಳತಿಯ ವಿವಾಹವಾಯಿತು ಅವಳ ಪತಿಯ ಮನೆಗೆ ಹೋಗುವಾಗ ತನ್ನ ರಾಮಾಯಣ ಭಾರತ ಭಗವದ್ಗೀತ ಮೊದಲಾದವನ್ನು ನನಗೆ ಕೊಟ್ಟು ಹೋಗಿದ್ದಳು ಅವನ್ನು ನಾನ ಶ್ರದ್ಧೆಯಿಂದ ಓದುತಿದ್ದೆ ನನ್ನ ತಂದೆಯವರು ಕಟ್ಟರ ಮುಸಲ್ಮಾನರು. ನನ್ನ ನೇಮನಿಷ್ಠೆ, ಹಿಂದೂ ಧರ್ಮಪ್ರೇಮವು ಅವರಿಗೆ ಚೆನ್ನಾಗಿ ಕಾಣಲಿಲ್ಲ ಮೊನ್ನೆ ಒಬ್ಬ ಮುಸಲ್ಮಾನ ಮುಲ್ಲಾರನ್ನು ಕರೆಸಿ ನನಗೆ ಧರ್ಮೋಪದೇಶ ಮಾಡಿದರು ನನ್ನ ವಿವಾಹ ಮಾಡಲಿಕ್ಕೆ ಒಬ್ಬ ಗಡ್ಡದ ಸಾಹೇಬರನ್ನು ಕರತಂದರು. ಆದರೆ ನಾನು ಯಾವುದಕ್ಕೂ ಒಪ್ಪಲಿಲ್ಲ. ಅವರು ಸಿಟ್ಟಾಗಿ ನನ್ನನ್ನು ಮನೆಯಿಂದ ಹೊರಡಿಸಿ ಬಿಟ್ಟರು. ಆಗ ನನಗೆ ಏನು ಮಾಡುವದೆಂದು ಗೊತ್ತಾಗಲಿಲ್ಲ. ಒಂದು ಬಾರಿಗೆ ನನ್ನ ಗೆಳತಿಯನ್ನು ಕಂಡು ಮುಂದಿನ ಮಾರ್ಗವನ್ನು ಮಾಡಬೇಕೆಂದು ನಿಶ್ಚಯಿಸಿದೆ ಆದರೆ ಕಲ್ಕತ್ತೆಗೆ ಹೋಗಲಿಕ್ಕೆ ಹಣವಿಲ್ಲ ಅವಳು ಎಲ್ಲಿ ಯಾರಲ್ಲಿ ಇರುವಳೆಂದು ಗೊತ್ತು ಇಲ್ಲ ತಾವು ಸಜ್ಜನರೆಂದು ಭಾವಿಸಿ ಇಲ್ಲಿಗೆ ಬಂದೆ"

ಅವಳು ಇಷ್ಟನ್ನು ಹೇಳಿ ಮುಗಿಸುವಾಗ ಗಾಡಿ ಜಮಾಲಪುರ ಸ್ಟೇಶನಿಗೆ ಬಂದು ನಿಂತಿತು 'ನೀವು ನಮ್ಮ ಒಟ್ಟಿಗೇ ಇರಿ; ನಿಮಗೆ ಉಳಕೊಳ್ಳುವ ಯೋಗ್ಯ ವ್ಯವಸ್ಥೆ ಮಾಡುತ್ತೇವೆ' ಎಂದು ಹೇಳಿ ನಾನು ಅವಳಿಗೆ ಕಲ್ಕತ್ತೆಗೆ ಒಂದು ಟಿಕೇಟು ತೆಗೆದುಕೊಂಡ ಮತ್ತೆ ಕೆಲವು ರೊಟ್ಟಿಗಳನ್ನು ಕೊಂಡು, ಅವಳಿಗ ಕೊಟ್ಟೆ ಅವಳು ಅವುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ ತಿನ್ನ ತೊಡಗಿದಳು ನಾವು ಮಾತನ್ನು ಆಲಿಸಿದ್ದೆವು- ಪ್ರಭಾಕರ ಜಿನ್ನರ ಪಾಕಿಸ್ತಾನ ಯೋಜನೆ ನಷ್ಟದ ಇದೇ ಉತ್ತರ ನೋಡ! ನನ್ನ ಈ ಮುಸಲ್ಮಾನ ತರುಣಿಗೆ ಕೈ ಕೊಡು. ಅವಳು ಸುಲಕ್ಷಣೆಯಾಗಿ ನಿನಗೆ ಅನುರೂಪಳಾಗಿದ್ದಾಳೆ ಈ ಸಂಬಂಧದಿಂದ ಹಿಂದೂ ಸಮಾಜದಲ್ಲಿ ಒಂದು ನವೀನ ಆದರ್ಶವು ಉಪಸ್ಥಿತವಾಗುವದು ಆ ಮೇಲೆ ಒಬ್ಬರ ಹಿಂದೆ ಒಬ್ಬರಂತೆ ಅನೇಕ ಮಂದಿ ಹಿಂದೂ ತರುಣರು ಇಂಥ ಮುಸಲ್ಮಾನ ತರುಣಿಯರನ್ನು ವಿವಾಹವಾಗಲು ಮುಂದೆ ಬರುವರು ಆಗ ಹಿಂದೂ ಸಮಾಜಕ್ಕೆ ಎಷ್ಟು ಉಪಕಾರ ಮಾಡಿದಂತಾಗುವದು, ಆಲೋಚಿಸು' ಎಂದೆ ಪ್ರಭಾಕರ ಒಂದು ನಿಶ್ಚಿತ ಸಮಯದ ತನಕ ವಿವಾಹವಾಗುವದಿಲ್ಲವೆಂದು ಹಟತೊಟ್ಟಿದ್ದ ಆದರೆ ಈಗ ಅವನು ನನ್ನ ಮಾತಿಗೆ ತಲೆತಗ್ಗಿಸಲೇ ಬೇಕಾಯಿತು. ನಾನು ಪ್ರಭಾಕರನ ವಿವಾಹದ ಪ್ರಸ್ತಾವವನ್ನು ಸಕೀನಳ ಮುಂದಿಟ್ಟೆ ಅವಳು ಅದನ್ನು ಸಂತೋಷದಿಂದ ಒಪ್ಪಿಕೊಂಡಳು ವಿವಾಹವು ಅವಸರದಿಂದ ಆಗಬೇಕಾಗಿದ್ದಿತು. ಯಾಕೆಂದರೆ ಪ್ರಭಾಕರ ಬಹಳ ದಿನಗಳ ತನಕ ಕಲ್ಕತ್ತೆಯಲ್ಲಿ ನಿಲ್ಲುವಂತಿರಲಿಲ್ಲ. ಸಕೀನಳನ್ನು ಹಾಗೆ ಬಹಳ ದಿನಗಳ ತನಕ ಬಿಟ್ಟಿರುವದು ಹಿತಕರವಾಗಿರಲಿಲ್ಲ ಆದುದರಿಂದ ಕಲ್ಕತ್ತೆಯನ್ನು ಮುಟ್ಟಿದೊಡನೆಯೇ ವಿವಾಹದ ಏರ್ಪಾಡು ನಡೆಯಿತು. ಅಲ್ಲಿಯ ಭವ್ಯ ಆರ್ಯಸಮಾಜ ಮಂದಿರದಲ್ಲಿ ವಿವಾಹ ಕಾರ್ಯವು ನಿರ್ವಿಘ್ನದಿಂದ ನಡೆಯಿತು ಬೀಬಿ ಸಕೀನಾ ಆಗಿದ್ದವಳು ಈಗ ಪ್ರಭಾವತಿ ದೇವಿ ಎಂದು ಹೆಸರಾದಳು.

ವಿವಾಹವು ಮುಗಿದೊಡನೆ ಪ್ರಭಾಕರ ಪ್ರಭಾವತಿದೇವಿ ಅವರು ನಮ್ಮನ್ನು ಬೀಳ್ಕೊಡಲು ಬಂದಿದ್ದರು ಬಂದೊಡನೆಯೇ ಪ್ರಭಾವತಿ ನನ್ನಾಕೆಯನ್ನು ಗುರುತಿಸಿ 'ಇಂದಿರೇ!' ಎಂದಳು. ನನ್ನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ ಬೀಬಿಸಕೀನಳ ಹಿಂದೂ ಗೆಳತಿ, ಮತ್ತೆ ಯಾರೂ ಅಲ್ಲ, ಅವಳು ನನ್ನ ಪತ್ನಿ ಇಂದಿರೆ ಆಗಿದ್ದಳು. ವಿವಾಹ ಕಾರ್ಯಕ್ಕೆ ಇಂದಿರೆ ಬಂದಿದ್ದಳಾದರೂ, ಈಚೆಗ ಕೆಲವು ದಿನಗಳಿಂದ ಆದ ಪರಿವರ್ತನಗಳಿಂದ ಸಕೀನಳನ್ನು ಗುರುತಿಸುವದು ಅವಳಿಗೆ ಕಠಿನ ಸಾಧ್ಯವಾಯಿತು. ಈಗ ಅವಳು—'ಯಾರು! ಸಕೀನಳೆ?' ಎಂದು ಆಶ್ಚರ್ಯ ಕುತೂಹಲಗಳಿಂದ ಪ್ರಶ್ನಿಸಿದಳು ಆಗ ಅವಳು ನಸುನಗುತ್ತ ಕೊಟ್ಟ ಉತ್ತರವು ಈಗಲೂ ನನ್ನ ಮನಸ್ಸಿನೊಳಗೆ ಪ್ರತಿಧ್ವನಿಸುತ್ತಾ ಇದೆ-'ಇಂದಿರೆ! ನಾನೀಗ ಸಕೀನಾ ಅಲ್ಲ ನಿನ್ನ ಪ್ರಭಾವದಿಂದ ಪ್ರಭಾವತಿ ಆಗಿದ್ದೇನೆ! ಅದನ್ನು ಕೇಳಿ ನಮ್ಮೆಲ್ಲರ ನೇತ್ರಗಳಿಂದ ಅಶ್ರುಬಿಂದುಗಳು ತೊಟ್ಟಿಕ್ಕಿದ್ದುವು.

ಆರ್ಯಮಿತ್ರ



DIAMONDS! DIAMONDS!
BEST BRILLIANCY!

K. R. K. SHET,
MANGALORE
ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಪರ್ಸ್ಟ ವಾಟರಿನಂಥ ಬೆಲೆಯ ವಜ್ರಗಳು. ಬಜಾರ ಧಾರಣೆಗಿಂತ ಇದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ ಸಲ್ಲಕ್ಷಣಗಳೂ ಕಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ ಶೆಟ್, ಜುವೆಲ್ಲರ್,

ಪಾಕಿಸ್ತಾನ ಯೋಜನೆಯ ಇತಿಹಾಸ!

ಧರ್ಮವು ರಾಷ್ಟ್ರೀಯತೆಗೆ ಅಡ್ಡಿಯಲ್ಲ

ಟರ್ಕಿಯ ಕೆಮಾಲಪಾಶರ ಆದರ್ಶ

ಮುಸ್ಲಿಂ ಲೀಗಿನ ದೇಶವಿದ್ರೋಹ

(ಟರ್ಕಿಯ ಉದ್ಧಾರಕ ಕೆಮಾಲಪಾಶ)

ಟರ್ಕಿಯಿಂದ ಆರಂಭಿಸಿ ಹಿಂದುಸ್ಥಾನದ ಪೂರ್ವಗಡಿಯ ತನಕ ಒಂದು ವಿಶಾಲ ಮತ್ತು ಸಂಘಟಿತ ಮುಸ್ಲಿಂ ರಾಷ್ಟ್ರವನ್ನು ಸ್ಥಾಪಿಸಬಹುದೆಂದು ಕೆಲವು ವರ್ಷಗಳ ಹಿಂದೆ ಕೆಲವು ಮುಸಲ್ಮಾನ ಉತ್ಸಾಹಿಗಳು ಕನಸು ಕಂಡರು. ಮುಸ್ತಫಾ ಕೆಮಾಲ ಪಾಶರ ಪ್ರತ್ಯಕ್ಷ ಸಹಾಯ ಬೆಂಬಲಗಳಿಂದ ಇದು ಸಾಧ್ಯವಾಗಬಹುದೆಂದು ಅವರು ಎಣಿಸಿದ್ದರು. ಆದರೆ ಮುಸ್ತಫಾ ಕೆಮಾಲಪಾಶರು ಅಧಿಕಾರಕ್ಕೆ ಬಂದೊಡನೆ ಇಂಥ ಮಹತ್ವಾಕಾಂಕ್ಷೆಯನ್ನೇನೂ ಇಟ್ಟುಕೊಳ್ಳಲಿಲ್ಲ ಅವರು ಧರ್ಮಪ್ರೇಮಿಗಳಾಗಿದ್ದುದರಿಂದ ಕೇವಲ ರಾಷ್ಟ್ರೀಯ ಧೋರಣವನ್ನೇ ಅನುಸರಿಸಿದರು. ಟರ್ಕಿಯ ಸ್ವಾತಂತ್ರ್ಯ ಉನ್ನತಿ ಅಭಿವೃದ್ಧಿಗಳಷ್ಟು ಮಾತ್ರ ಅವರ ಜೀವನದ ಧ್ಯೇಯೋದ್ದೇಶಗಳಾಗಿದ್ದುವು. ಆದುದರಿಂದ ಮುಸ್ಲಿಂ ಸಾಮ್ರಾಜ್ಯ ಸ್ಥಾಪನೆಯ ಕನಸು ಕಂಡ ಮುಸಲ್ಮಾನ ಧರ್ಮಾಂಧರು ಆ ತಮ್ಮ ಮೊದಲಿನ ಪ್ರಯತ್ನದಲ್ಲಿ ನಿರಾಶರಾಗಬೇಕಾಯಿತು.

ಮೊದಲು ರಾಷ್ಟ್ರಪ್ರೇಮಿಗಳಾಗಿ ಮತ್ತೆ ಜಾತಿವಾದಿಗಳ ಗುಂಪಿಗೆ ಸೇರಿದ ಸರ್ ಮಹ್ಮದ ಇಕ್ಬಾಲರಂಥವರು, ಇದೇ ಮುಸ್ಲಿಂ ರಾಜ್ಯದ ಕನಸು ಕಂಡು ಅವರೂ ಪಾಕಿಸ್ತಾನ ಯೋಜನೆಯನ್ನು ಸಮರ್ಥಿಸಿದರು. ಆದರೆ ಮುಸ್ಲಿಂ ಸಮಾಜವು ಮಹಾ ಕವಿ ಇಕ್ಬಾಲರನ್ನು ಆದರದಿಂದ ಕಾಣುತ್ತಿದ್ದರೇ ಹೊರತು ಅವರ ಯೋಜನೆಯನ್ನು ಆದರಿಸಲಿಲ್ಲ. ಆದ್ದರಿಂದ ೧೯೩೩ರ ತನಕ ಈ ಯೋಜನೆಯು ಮೂಲೆಗುಂಪಾಗಿತ್ತು. ೧೯೩೩ರ ನಂತರ ನಡೆದ ಘಟನೆಗಳಿಂದ ಮುಸ್ಲಿಂ ಜನತೆಯಲ್ಲಿ ಧರ್ಮಾಂಧತೆಯು ಪ್ರಬಲವಾಗುತ ಬಂದುದರಿಂದ ಮೊದಲು ಯಾವ ಸ್ಥಾನ, ಮಹತ್ವವನ್ನು ಪಡೆದಿರದ ಮುಸ್ಲಿಂ ಲೀಗು ಕೆಲವು ಮುಸ್ಲಿಂ ಜಾತೀಯವಾದಿ ಮುಖಂಡರ ಮತ್ತು ಸರಕಾರದ ಬೆಂಬಲವನ್ನು ಪಡೆದು ಬೆಳಕಿಗೆ ಬಂದಿತು. ವಿಭಾಗಿಸಿ ಆಳುವ ನೀತಿಯನ್ನು ಅನುಸರಿಸಿ ಸರಕಾರವು ಮುಸ್ಲಿಂ ಲೀಗಿನ ಪ್ರತಿಯೊಂದು ಕಾರ್ಯಕ್ಕೋಸ್ಕರ ಅದರ ಬೆನ್ನು ತಟ್ಟತೊಡಗಿತು. ಈ ಲೀಗಿನ ಪ್ರೇರಣೆಯಿಂದ ಹೈದರಾಬಾದಿನ ಡಾಕ್ಟರ ಲತೀಫ ಎಂಬವರು ಹಿಂದೂ ದೇಶವನ್ನು ಸರ್ವದಾಗಿ ವಿಭಾಗಿಸುವ

ಇನ್ನೊಂದು ಪಾಕಿಸ್ತಾನ ಯೋಜನೆಯನ್ನು ತಯಾರಿಸಿದರು ಇದೇ ಯೋಜನೆಯು ಲಾಹೋರಿನ ಅಧಿವೇಶನದಲ್ಲಿ ಲೀಗಿನ ಸ್ವೀಕೃತಿಯನ್ನು ಪಡೆದಿದೆ.

ಮುಸ್ಲಿಂಪರ ವಿರೋಧ

ಕೆಲವು ಮುಸಲ್ಮಾನ ಮುಖಂಡರು ತಮ್ಮ ವ್ಯಕ್ತಿಗತ ಸ್ವಾರ್ಥವನ್ನು ಸಾಧಿಸುವ ಉದ್ದೇಶದಿಂದಲೋ ಎಂಬಂತೆ, ಜಾತಿ ಹಿತವನ್ನು ಸಾಧಿಸುವದೆಂಬಂಥ ಸಿಹಿ ಮಾತುಗಳ ಮರೆಯಲ್ಲಿ ತಾವು ಉಪ್ಪನ್ನವನ್ನು ಉಂಡದೇಶಕ್ಕೆ ದ್ರೋಹವನ್ನು ಬಗೆಯುವ ಈ ದುಷ್ಟ ಯೋಜನೆಯನ್ನು ಪುರಸ್ಕರಿಸಿ ಈಗಿನ ಒಕ್ಕಟ್ಟಿನಲ್ಲಿ ಬಹಳ ಗೊಂದಲವನ್ನುಂಟು ಮಾಡಿ, ದೇಶದ ಮುನ್ನಡೆಗೆ ತಡೆಹಾಕಿದ್ದಾರಾದರೂ, ಬಹುಸಂಖ್ಯಾತ ಮುಸಲ್ಮಾನರು ಧರ್ಮಾಂಧರಾಗಿರದೆ ಈಗಲೂ ದೇಶಪ್ರೇಮಿಗಳಾಗಿದ್ದಾರೆಂಬುದು ಸಂತೋಷದ ವಿಷಯವಾಗಿದೆ. ಈ ಯೋಜನೆಯಿಂದ ಬೇರೆ ಯಾವ ಫಲವು ದೊರೆಯದಿದ್ದರೂ ಅಲ್ಲಲ್ಲಿ ಚೆದರಿ ಹೋಗಿದ್ದ ಈ ರಾಷ್ಟ್ರೀಯ ಮುಸಲ್ಮಾನರು ಸಂಘಟಿತರಾಗಿ ದೇಶ ವಿಭಜನೆಯ ವಿರುದ್ಧ ಆಂದೋಲನವನ್ನು ಹೂಡಲಿಕ್ಕೆ ಅನುಕೂಲವಾಗಿದೆ. ಅಖಿಲಭಾರತ ರಾಷ್ಟ್ರೀಯ ಮುಸಲ್ಮಾನರು ದಿಲ್ಲಿಯಲ್ಲಿ ಸಭೆಸೇರಿ ಪಾಕಿಸ್ತಾನ ಯೋಜನೆಯನ್ನು ನಿಷೇಧಿಸಿ ಬಲವಾಗಿ ವಿರೋಧಿಸಿದ್ದಾರೆ ಲೀಗಿನ ಧೋರಣೆ ಮತ್ತು ಜಿನ್ನಾರ ದೇಶ ವಿಘಾತುಕ ಕಾರ್ಯಕಲಾಪಗಳನ್ನು ಕಂಡು ಬೇಸತ್ತ ಬೊಂಬಾಯಿಯ ಶರೀಫರಾಗಿದ್ದ ಮಿ ರಾವ್ ಜೀಯವರು ತಮ್ಮ ಲೀಗ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುತ್ತಾರೆ

ಮಿ. ಅಸಫಅಲಿ, ಮಿ. ಅಬ್ದುಲ್ ಕಯ್ಯಾಮ್, ಮಿ. ಚಾಗ್ಲಾ, ಡಾಕ್ಟರ ಕಿಚಲೂ, ಮಿ. ಬೇಗ್, ಮೊದಲಾದವರೆಲ್ಲರು ಯೋಜನೆಗೆ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ. ಹಿಂದುಸ್ತಾನದಲ್ಲಿ ಬಹುಸಂಖ್ಯಾಕ ಮುಸಲ್ಮಾನರಾಗಿರುವ ಅಹರಾರರು, ಜಮಾಯತ್ ಉಲ್ ಉಲೇಮಾ, ಕೃಷಕ ಪ್ರಜಾಪಾರ್ಟಿ, ಮೊದಲಾದವರು ಯೋಜನೆಯನ್ನು ಬಹಳೆ ಖಂಡಿಸಿದ್ದಾರೆ.

ಕಾಂಗ್ರೆಸ್ಸು ಈ ಯೋಜನೆಯನ್ನು ಖಂಡಿಸುವದು ಸ್ವಾಭಾವಿಕವಾಗಿದೆ ಕಾಂಗ್ರೆಸು ಮಾತ್ರವಲ್ಲದೆ ಇತರ ಪ್ರಾಮುಖ್ಯ ರಾಜಕೀಯ ಪಂಗಡಗಳೂ ಈ ಯೋಜನೆಯನ್ನು ಖಂಡಿಸಿವೆ ಶ್ರೀಗಳಾದ ಪರಾಂಜಪೆ, ಸರ್ ಚಿಮನಲಾಲ್ ಸೆಟಲ್‌ವಾಡ, ಡಾಕ್ಟರ ಅರುಂಡೇಲ ಸರ ಛೋತ್ ರಾಮ್, ಸರಸಿಕಂದರ ಹಯಾತ್ ಖಾನ ಮೊದಲಾದವರು ತನ್ನು ತಮ್ಮ ಪಂಗಡಗಳ ಪರವಾಗಿ ಈ ಯೋಜನೆಯನ್ನು ನಿಷೇಧಿಸಿದ್ದಾರೆ ಹಾಗೆ ಅಲ್ಪಸಂಖ್ಯಾಕ ಇತರ ಜಾತಿಗಳು ಕೂಡ ಈ ಯೋಜನೆಯು ತಮಗೆ ಅಹಿತವನ್ನುಂಟು ಮಾಡುವದಾಗಿದೆ ಎಂದು ಹೇಳಿವೆ ಹರಿಜನರ ಪರವಾಗಿ ಶ್ರೀ ರಾಜಭೋಜರು, ದೇಶೀ ಕ್ರಿಸ್ತರ ಪರವಾಗಿ ಡಾಕ್ಟರ ಮುಖರ್ಜಿಯವರು, ಪಾರಸಿಗಳ ಪರವಾಗಿ ಸರ್ ಹೋಮಿಮೋದಿಯವರು ಈ ಯೋಜನೆಯನ್ನು ಖಂಡಿಸಿದ್ದಾರೆ.

ಲೀಗಿನ ಮೂರ್ಖತನ

ಜಿನ್ನಾರು ಮತ್ತು ಲೀಗಿನ ಈ ಯೋಜನೆಯನ್ನು ಸಮರ್ಥಿಸುವ ಆ ಕೆಲವು ಜನ ಮುಖಂಡರು ಈ ಯೋಜನೆಯನ್ನು ಮುಂದೆ ತಂದು ತಮ್ಮ ಮೂರ್ಖತನವನ್ನು ಜಗತ್ತಿಗೆ ಸಾರಿದಂತಾಯಿತು. ಈ ಮುಖಂಡರು ಈ ಯೋಜನೆಯನ್ನು ತಯಾರಿಸಿ ಅದನ್ನು ಮುಂದೆ ತರುವ ಮೊದಲು ವಿದೇಶಿ ಮುಸಲ್ಮಾನರಿಂದ ಒಂದೊಂದು ಪಾಠಕಲಿತಿದ್ದರೆ ಚೆನ್ನಾಗುತಿತ್ತು. ಕೆಮಾಲಪಾಶರು ಅಧಿಕಾರಕ್ಕೆ ಬರುವ ಮೊದಲು ಟರ್ಕಿಯಲ್ಲಿ ಜಾತೀಯತೆಯು ಹೊಗೆಯಾಡುತಿತ್ತು. ಸೇನೆ ಮತ್ತು ಆಡಳಿತದಲ್ಲಿ ಮುಸಲ್ಮಾನರ ಕೈಯಿತ್ತು, ವ್ಯಾಪಾರ ಉದ್ಯೋಗಗಳಲ್ಲಿ ಕ್ರೈಸ್ತರು ಮುಖ್ಯರಾಗಿದ್ದರು ರಾಷ್ಟ್ರೀಯ ಜೀವನವು ಜಾತಿ ಧರ್ಮಗಳ ಮೇಲೆ ಅವಲಂಬಿಸಿದ್ದುದರಿಂದ ದೇಶದ ಪ್ರಗತಿಯು ಅಸಾಧ್ಯವಾಗಿತ್ತು. ಆದರೆ ಕೆಮಾಲಪಾಶರು ಅಧಿಕಾರಕ್ಕೆ ಬಂದು ಜಾತೀಯತೆಯ ಸಂಪೂರ್ಣ ನಾಶ ಮಾಡಿದರು ಮುಸ್ಲಿಂ ಧರ್ಮದ ವೈಶಿಷ್ಟ್ಯವಾದ ಫಿಜ ಟೊಪ್ಪಿ, ರುಮಾಲು, ಪರ್ದಾ ಮೊದಲಾದುವನ್ನು ಕಾನೂನು ಮೂಲಕ ನಿಷೇಧಿಸಿ, ಟರ್ಕಿಯ ಪ್ರಜೆಗಳು ಯಾವ ಜಾತಿ ಮತವಾದಿಗಳಾಗಿದ್ದರೂ, ಅವರೆಲ್ಲರು ಒಂದು ಟರ್ಕಿ ಜನಾಂಗದವರೆಂದು ಘೋಷಿಸಿದರು ಆದರೂ ಕೆಮಾಲಪಾಶರಿಗೆ ಧರ್ಮಪ್ರೇಮವು ಕಡಿಮೆಯಾಗಿರಲಿಲ್ಲ ಆದರೆ ಧರ್ಮ ಮತ್ತು ರಾಷ್ಟ್ರಕ್ಕಿರಬೇಕಾದ ಸಂಬಂಧವನ್ನು ಅವರು ಚೆನ್ನಾಗಿ ತಿಳಿದಿದ್ದರು ಧರ್ಮ ಮತ ವಿಚಾರಗಳು ಇಗರ್ಜಿ ಮತ್ತು ಮಸೀದಿಗಳಿಗೆ ಸಂಬಂಧಪಟ್ಟವುಗಳೆಂದು ಹೇಳಿ ರಾಷ್ಟ್ರಕ್ಕೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲವೆಂದರು. ಆದ್ದರಿಂದ ಈ ಕೆಲವೇ ವರ್ಷಗಳ ಒಳಗೆ ಟರ್ಕಿಯು ಯುರೋಪಿನ ಒಂದು ಪ್ರಬಲ ಜನಾಂಗವೆನ್ನಿಸಿದೆ

ಚೀನದ ಮುಸಲ್ಮಾನರ ಆದರ್ಶ

ಚೀನದಲ್ಲಿಯೂ ಮುಸಲ್ಮಾನರಿದ್ದಾರೆ ಅವರೂ ಧರ್ಮಪ್ರೇಮಿಗಳಾಗಿದ್ದಾರೆ. ಆದರೆ ಅವರು ಯಾರೂ ಚೀನವನ್ನು ವಿಭಾಗಿಸಿ ತಮಗೆ ಪ್ರತ್ಯೇಕ ಒಂದು ಸ್ಥಾನ ಬೇಕೆಂದು ಹೇಳುವದಿಲ್ಲ. ಒಂದು ದೇಶದ ಬೇರೆ ಬೇರೆ ಜಾತಿ ಮತ ಪಂಗಡಗಳ ಅಸ್ತಿತ್ವ ಮತ್ತು ಭದ್ರತೆಯು ಆ ದೇಶದ ಎಲ್ಲಾ ಜಾತಿಮತಗಳ ಏಕ ರಾಷ್ಟ್ರೀಯ ಭಾವನೆಯನ್ನು ಅವಲಂಬಿಸಿದೆ. ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಿಂದ ಧರ್ಮವನ್ನು ಹೊರಗಿಡುವದರಿಂದ ಮಾತ್ರ ದೇಶದ ಉನ್ನತಿಯಾಗುವುದು. ಆದ್ದರಿಂದ ಇರಾಕ್, ಇರಾನ, ಅಫಘಾನಿಸ್ತಾನ ಮೊದಲಾದ ದೇಶಗಳೂ ಈಗ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಿ ಪ್ರಗತಿಯನ್ನು ಹೊಂದುತ್ತಾ ಇವೆ. ನಮ್ಮ ದೇಶದ ಲೀಗ ಪ್ರಮುಖರು ಮತ್ತು ಮಿ. ಜಿನ್ನರು ಈ ದೇಶಗಳಿಂದ ಒಂದು ಪಾಠವನ್ನು ಕಲಿತು, ಸ್ವಾತಂತ್ರ್ಯ ಸಂಪಾದನೆಯ ಕಾಂಗ್ರೆಸಿನ ಪ್ರಯತ್ನಕ್ಕೆ ಯಾಕೆ ಸಹಕಾರ ಸಹಾಯಗಳನು ಕೊಡ ಬಾರದು?

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಎಳೆಹುಳ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಜಿಲ್ಲಾ ಸಮಾಚಾರ



★

ಮಂಗಳೂರು

ನಗರ ಸಭೆ: ಮಂಗಳೂರು ನಗರ ಸಭೆಯು ಶ್ರೀ. ಯು. ಲಕ್ಷ್ಮಣ ಶೆಣೈಗಳ ಅಧ್ಯಕ್ಷತೆಯಲ್ಲಿ ತಾ. ೨೦ನೇ ಸೋಮವಾರ ಸಂಜೆ, ಮುನಿಸಿಪಲ್ ಆಫೀಸಿನಲ್ಲಿ ಜರುಗಿತು ಗ್ರೇಡ್ ಪ್ರಕಾರ ವೇತನ ತೆರಲು ಸಾಧ್ಯವಿಲ್ಲವಾದಲ್ಲಿ ಮುನಿಸಿಪಲ್ ಶಾಲೆಗಳಲ್ಲಿ ಇಂಗ್ಲೀಷ್ ಕಲಿಸುವುದನ್ನು ನಿಲ್ಲಿಸಬೇಕು, ಪ್ರತಿಯೊಂದು ಶಾಲೆಯಲ್ಲೂ ಒಂದಲ್ಲ ಒಂದು ವ್ಯಕ್ತಿಯನ್ನು ಕಡ್ಡಾಯವಾಗಿ ಕಲಿಸಬೇಕು ಎಂಬೀ ಮುಂತಾದ ಜಿ ೦ ಗಳು ರಿಕಾರ್ಡು ಮಾಡಲ್ಪಟ್ಟವು ಟ್ರೇಡ್ ಸ್ಕೂಲಿನ ೬ ಮಂದಿ ವಿದ್ಯಾರ್ಥಿಗಳಿಗೆ ಫೆಬ್ರವರಿ ಮತ್ತು ಮಾರ್ಚಿ ತಿಂಗಳ ಬಗ್ಗೆ, ವಿದ್ಯಾರ್ಥಿವೇತನ ಮಂಜೂರು ಮಾಡಲಾಯಿತು

ಅಭಿನಂದನೆ ದಿ ವಂ ಗ ತ ಶ್ರೀ ಎಂ ಎಸ್ ಕಾಮತರ ಕ ಮಾರಿಯಾದ ಶ್ರೀಮತಿ ಎಂ. ಮನೋರಮಾ ಬಾಯಿಯವರು ಈ ಸಲದ ಇಂಟರ್‌ಮಿಡಿಯೆಟ್ ಪರೀಕ್ಷೆಗೆ ಸ್ಯೆಂಟ್ ಎಗ್ನೇಸ್ ಕಾಲೇಜಿನಿಂದ ಕುಳಿತಿದ್ದು ಫಸ್ಟ್ ಕ್ಲಾಸಿನಲ್ಲಿ ಉತ್ತೀರ್ಣರಾಗಿರುವುದು ಅಭಿನಂದನೀಯವಾಗಿದೆ

ಇಂಟರ್ ಮಿಡಿಯೇಟ್ ಪರೀಕ್ಷಾ ಫಲಿತಾಂಶ: ಸ್ಯೆಂಟ್ ಎಲೋಶಿಯಸ್ ಕಾಲೇಜಿನ ೮೫ ಮಂದಿ ವಿದ್ಯಾರ್ಥಿಗಳು ಈ ವರ್ಷ ಪಬ್ಲಿಕ್ ಪರೀಕ್ಷೆಗೆ ಕುಳಿತಿದ್ದರು ೬೨ ಮಂದಿ ಮೂರು ಭಾಗಗಳಲ್ಲಿಯೂ ಉತ್ತೀರ್ಣರಾಗಿರುವರು (ಸೇಕಡ ೭೨ ೯) ಈ ಪೈಕಿ ೩೨ ಫಸ್ಟ್ ಕ್ಲಾಸ್, ೩೦ ಸೆಕೆಂಡ್ ಕ್ಲಾಸ್ ಒಂದನೆಯ ಭಾಗದಲ್ಲಿ ಮಾತ್ರ ಪಾಸಾದವರು ೧೮. ಎರಡನೆಯದರಲ್ಲಿ ಮಾತ್ರ ೮೩ ಮತ್ತು ೩ನೆದರಲ್ಲಿ ಮಾತ್ರ ೬೫

ದ. ಕ ಪಂಡಿತ ಸಂಘ

ಇದರ ಕಾರ್ಯಕಾರಿ ಕಮಿಟಿಯ ಸಭೆಯು ತಾ, ೧೬–೫–೪೦ನೇ ಗುರುವಾರ ಸಂಜೆ ೫ ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಸಾಭಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಅವರ ಮನೆಯಲ್ಲೇ ಜರುಗಿ ತಾ, ೨೮, ೨೯ಕ್ಕೆ ಅಂಬಾಸಮುದ್ರದಲ್ಲಿ ನಡೆಯಲಿರುವ ಪಂಡಿತ ಸಮ್ಮೇಲನದ ಮುಂದೆ ದ ಕ. ಪಂಡಿತ ಸಂಘದ ಪರವಾಗಿ ತರಲಿರುವ ಹಲವು ಉಪಯುಕ್ತ ಠರಾವುಗಳನು ಮಂಜೂರುಮಾಡಿತು.

ಜಪ್ಪಿನ ಮೊಗರು ಯೂನಿಯನ್ ಶಾಲೆ:— ಈ ಶಾಲೆಯ ೯ ಎಂಟನೆಯ ವಾರ್ಷಿಕೋತ್ಸವವು ತಾ. ೧೮ರಂದು ಮಂಗಳೂರು ರೇಂಜಿನ ಶಾಲಾ ಇನ್ಸ್‌ಪೆಕ್ಟರರಾದ ಶ್ರೀ| ಟಿ. ಯಲ್. ರಾವ್, ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ತಾ ೧೯ನೇ ಆದಿತ್ಯವಾರ ಬೆಳಿಗ್ಗೆ ೧೦ ಘಂಟೆಗೆ ಹಳೆವಿದ್ಯಾರ್ಥಿಗಳ ಸಂಘವೊಂದು ಸ್ಥಾಪಿತವಾಯಿತು ಅಂದೇ ರಾತ್ರೆ ೭॥ ಘಂಟೆಗೆ ಹಳೆವಿದ್ಯಾರ್ಥಿಗಳು ಶಾಲಾ ವಾರ್ಷಿಕೋತ್ಸವ ಫಂಡಿಗೆ ಹಣ ಸಂಗ್ರಹಿಸುವ ಬಗ್ಗೆ "ಚಂದ್ರಹಾಸ" ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸಿದರು.

ಶ್ರೀನಿವಾಸ ಪಾಠಶಾಲಾ ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಆಡಳಿತೆಗೊಳಪಟ್ಟ ಶ್ರೀ ಶ್ರೀನಿವಾಸ ಪಾಠಶಾಲೆಯಲ್ಲಿ ಕಳೆದ ಒಂದು ವರ್ಷದಿಂದ ಸಂಸ್ಕೃತ ಕಮಾ ಗಗಳಲ್ಲಿಗ ಎಲಿಮೆಂಟರಿ ಅಥವಾ ಸೆಕೆಂಡರಿ ಶಾಲೆಗಳಲ್ಲಿನ ೮ ೫ ಮತ್ತು ೬ನೇ (I ಫೋರ್ಮ್) ತರಗತಿಗಳಲ್ಲಿ ದೊರೆವ ಶಿಕ್ಷಣವನ್ನು ಈ ಶಾಲೆಯಲಿ ಕೂಡುತ್ತಿರ ವರ ಸಂಸ್ಕೃತವನ್ನು ೮ನೇದರ್ಜೆಯಿಂದ ಕಡ್ಡಾಯವಾಗಿ ಕಲಿಸ ವರು ಅಲ್ಲದೆ ಆಯಾ ಶಾಲೆಗಳಿಗಾಗಿ ಸರಕಾರವು ಹೊಸದಾಗಿ ಪ್ರಕಟಿಸಿರುವ (ಸಿಲಬಸ್) ಪಾಠಕ್ರಮವನ್ನು ಅನುಸರಿಸಿರ ವರು ಈ ಶಾಲೆಯಲ್ಲಿ ಶಿಕ್ಷಣವು ಧರ್ಮಾರ್ಥವಾಗಿ ಕೊಡಲ್ಪಡುವುದು ಯೋಗ್ಯ ಅನುಭವ ವ ತರಬೇತುವುಳ್ಳ ಶಿಕ್ಷಕರನ್ನು ನೇಮಿಸಿರುವರ

ಬರುವ ವರ್ಷ ೭ನೇ ತರಗತಿಯನ್ನು ಕೂಡ ತೆರೆಯುವ ವ್ಯವಸ್ಥೆಯನ್ನು ಮಾಡಲಾಗಿರುವುದು ಈ ಶಾಲೆಯಿಂದ ವಿದ್ಯಾರ್ಥಿಗಳು ಮುಂದಣ ತರಗತಿಗಳಿಗೆ ಸೇರಲು ಅನುಕೂಲವಿಲ್ಲದ ವಿದ್ಯಾರ್ಥಿಗಳು ಇಲ್ಲಿ ಸಂಸ್ಕೃತ, ಕರ್ಣಾಟಕಾದಿಗಳ ಜ್ಞಾನವನ್ನು ಪಡೆದು ಆಗಮ ಪಾಠಶಾಲೆಯನ್ನು ಸುಲಭವಾಗಿ ಸೇರಬಹುದು

ವಾಹನ ಸಂಚಾರ: ಉಪ್ಪಿನಂಗಡಿ ಪುತ್ತೂರು ರಸ್ತೆಯಲಿ 1/1 ಮೈಲಿನಲ್ಲಿರುವ ಸಂಕವು ಸುರಕ್ಷಿತ ಸ್ಥಿತಿಯಲ್ಲಿ ಇಲ್ಲ ಆದುದರಿಂದ ಈ ರಸ್ತೆಯ ಲ್ಲಿ ಚಲಾವಣೆಯಾಗುವ ಎಲ್ಲಾ ವಾಹನಗಳು 'ಡೈವರ್ಶನ್ ರೋಡಿನಲ್ಲಿ' ಹಾಗಿ ಹೋಗತಕ್ಕದು. ವಾಹನಗಳನ್ನು ಚಲಾಯಿಸುವ ಎಲ್ಲ ಜನರಿಗೂ ಈ ಮೂಲಕ ತಿಳಿಯಪಡಿಸಿದ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಟೆಕ್ಸ್ಟ್ ಬುಕ್ ಕಮಿಟಿಯಿಂದ

ಮಂಜೂರಾತಿಪಡೆದಶಾಲಾಪುಸ್ತಕಗಳು

[1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದ, ಮಂಜೂರಾದ ಶಾಲಾ ಪುಸ್ತಕಗಳು]

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
1ನೇ ದರ್ಜೆ	0–3–0
೨ನೇ	0–3–6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
1ನೇ ದರ್ಜೆ	0–2–0
5ನೇ	0–2–6

ಸಿವಿಕ್ಸ್ ಅಥವಾ ಪ್ರಜಾಧರ್ಮ

ಪುಸ್ತಕ	ಬೆಲೆ
1ನೇ ದರ್ಜೆ	0–2–0
೨ನೇ ,,	0–2–6
6ನೇ ,,	0–3–0
7ನೇ ,,	0–3–0
8ನೇ ,,	0–3–0

ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ

ಭೂ ವಿವರ

ಪುಸ್ತಕ	ಬೆಲೆ
4ನೇ	0–2–6
5ನೇ	0–3–6

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ· 1—0—0

ಶಾಲಾ ಉಪಯೋಗಕ್ಕೆ (ಲ್ಯಾಬ್ರೇರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	,,	0—1—6
ಸಿವಿಕ್ಸ್	,,	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಮೂಲ್ಕಿ

ವರ್ಧಂತಿ: ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ೧೩ನೇ ವರ್ಷದ ವರ್ಧಂತ್ಯುತ್ಸವವು ಕಳೆದ ೧೯ನೇ ರವಿವಾರ ಅಪರಾಹ್ನ ಘಂಟೆ ೫-೩೦ಕ್ಕೆ ಮಂಗಳೂರು ರೇಂಜಿನ ಶಾಲೆಗಳ ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ| ಟಿ ಲಕ್ಷ್ಮೀನಾರಾಯಣರಾವ್ ಬಿ. ಎ ಎಲ್ ಟಿ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಅತಿವಿಜೃಂಭಣೆಯಿಂದ ಜರಗಿತು

ಕಾರ್ಕಳ

ಭಾಷಣ: ತಾ ೧೮–೫–೧೯೪೦ರ ದಿನ ಸಾಯಂಕಾಲ ಸ್ಥಳೀಯ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ ಕೃಷ್ಣ ಪೈಗಳವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ ಶ್ರೀ ಆರ್ ಆತ್ಮಾರಾಮ ಶೆಣೈಯವರು 'ನಿತ್ಯ ಜೀವನದಲ್ಲಿ ಗೀತೆಯ ಮಹತ್ವ' ಎಂಬ ಕುರಿತು ಇಂಗ್ಲಿಷಿನಲ್ಲಿ ಒಂದು ಬೋಧಪ್ರದವಾದ ಭಾಷಣವನ್ನು ಕೊಟ್ಟರು ಅಧ್ಯಕ್ಷರು ಭಾಷಣಕರ್ತರನ್ನು ಸಮರ್ಥಿಸಿ ಮಾತನಾಡುತ್ತ ಸ್ವಸೋಶಾಂತಿಗೆ ಗೀತಾಧ್ಯಯನವು ಸುಲಭಸಾಧನವೆಂದು ಭಾಷಣ ಮಾಡಿದರು

ಮಿಯ್ಯಾರು

ವರ್ಧಂತಿ ಉತ್ಸವ: ಇಲ್ಲಿಯ ಮೋಡರ್ನ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ತಾ ೧೬–೫–೪೦ರ ದಿನ ಡಾಕ್ಟರ ಕೆ ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತ ಶ್ರೀ ಪಳ್ಳಿ ಸೀತಾರಾಮನಾಯಕರು ಶಾಲೆಯ ಸ್ವಸ್ತಿ ವಾಚನ ಗೈದಿದ್ದರು ವರದಿ ವಾಚನ, ಭಾಷಣ, ವಿವಿಧ ವಿನೋದಾವಳಿ ಇತ್ಯಾದಿ ಮನೋರಂಜಕ ಮತು ಬೋಧಪ್ರದ ಕಾರ್ಯಕ್ರಮವಿದ್ದಿತು

ಉಡುಪಿ

ವಿಷಾದಕರ ಮರಣ: ತಾರೀಕು ೧೪–೫–೪೦ರಲ್ಲಿ ಪಾಡಿಗಾರದಲ್ಲಿ ನಡೆದ ಉತ್ಸವದಲ್ಲಿ ರಥದ ಚಕ್ರದ ಅಡಿಗೆ ೨೫ ವರ್ಷ ಪ್ರಾಯದ ಕುಡುಬ ಜಾತಿಯ ರಾಮನಾಯಕನೆಂಬ ತರುಣನೊಬ್ಬನು ಬಿದ್ದು ಕೊಲ್ಲಲ್ಪಟ್ಟನು. ರಥವು ಎಳೆಯಲು ಪ್ರಾರಂಭಿಸಲ್ಪಡುತ್ತಿದ್ದಾಗ ತರುಣನು ತಿಂಮ ಕೈಯನ್ನು ರಥದ ಗಾಲಿಯ ಅಡಿಯಲ್ಲಿ ನೋಡಿ ಹೆಕ್ಕಲು ಉದ್ಯುಕ್ತನಾದನು. ರಥವು ಮುಂದೆ ಸಾಗಿ ಈ ಅನರ್ಥವಾಯಿತು. ಚಿಕಿತ್ಸೆಗೋಸ್ಕರ ಬಾರ್ಕೂರು ಆಸ್ಪತ್ರೆಗೆ ಕೊಂಡು ಬರುತ್ತಿರುವಾಗ ದಾರಿಯಲ್ಲೇ ಮೃತಿಹೊಂದಿದನು

ಯೂರೋಪಿನ ರಣಕ್ಷೇತ್ರ—ಫ್ರಾನ್ಸು!

★ ಯುದ್ಧ ವಾರ್ತೆ



ಮಿತ್ರರಾಷ್ಟ್ರಗಳ ಪ್ರಚಂಡತೆ!

ಜರ್ಮನಿಯ ಲೋಕಕಂಟಕ ಕಾರ್ಯ!

ಚರ್ಚಿಲ್ಲರ ವೀರ ಭಾಷಣ!

ಫ್ರಾನ್ಸು ಇಂದು ಯೂರೋಪಿನ ರಣಕ್ಷೇತ್ರವಾಗಿದೆ!

ಜರ್ಮನರು ಫ್ರಾನ್ಸಿನ ಕೆಲವು ಪ್ರದೇಶಗಳನ್ನು ಇಷ್ಟರಲ್ಲಿಯೇ ಸ್ವಾಧೀನ ಪಡಿಸಿಕೊಂಡಿರುವರೆಂದು ತಿಳಿದಿದೆ.

ಫ್ರಾನ್ಸಿನ ಪ್ರಧಾನ ನಗರವಾದ ಪ್ಯಾರಿಸಿಗೆ ಬಾಂಬು ಬೀಳುವ ಭೀತಿಯಿಂದ ಅಲ್ಲಿನ ನಾಗರಿಕರು ಊರು ಬಿಟ್ಟು ಹಳ್ಳಿಗಾಡುಗಳಿಗೆ ಹೋಗಿರುವರಂತೆ.

ಜರ್ಮನರು ಅಮಾನುಷ ವರ್ತನೆಯಿಂದ ನಿರಪರಾಧಿಗಳಾದ ನಾಗರಿಕರ ಮೇಲೆ ಅಗ್ನಿಪ್ರಳಯ ಮಾಡಬಾರದೆಂದೂ ಹೀಗೆ ಮಾಡಿದರೆ ಜರ್ಮನಿಯನ್ನು ತಾನು ಅಧಾರ್ಮಿಕ ರಾಜ್ಯವಾಗಿ ಸಾರಬೇಕಾಗುವುದೆಂದೂ ಕ್ರೈಸ್ತ ಜಗದ್ಗುರುಗಳಾದ ಪೋಪರು ಜರ್ಮನಿಗೆ ತಿಳಿಸಿದ್ದಾರೆ.

ಫ್ರಾನ್ಸುದೇಶದ ಭದ್ರತೆಗಾಗಿ ಕಟ್ಟಿಸಿದ ಮೆಜಿನೋ ಕೋಟೆಯನ್ನು ಜರ್ಮನರು ಕೆಲಭಾಗದಲ್ಲಿ ಪುಡಿಮಾಡಿ ಮುಂದೊತ್ತುತ್ತಿರುವರೆಂದೂ ಸುದ್ದಿ.

ಫ್ರಾನ್ಸು ಬೆಲ್ಜಿಯಮುಗಳ ಗಡಿಯ ಪಟ್ಟಣವೊಂದರ ಮೇಲೆ ಜರ್ಮನರು ಬಾಂಬು ಹಾಕಿ ಲಕ್ಷಾಂತರ ನಾಗರಿಕರನ್ನು ಸುಟ್ಟು ಬಿಟ್ಟರು.

ಬೆಲ್ಜಿಯಮಿನ ಪ್ರಧಾನ ನಗರವು ಜರ್ಮನರ ವಶವಾಯಿತು.

ಬೆಲ್ಜಿಯಂ ಸರಕಾರದ ಪಲಾಯನ

ಬೆಲ್ಜಿಯಂ ಸರಕಾರವು ಬ್ರಸೆಲ್ಸಿನಿಂದ ಬಿಸ್ಕೆಂಡ್ಡಿಗೆ ಹೋಗಿದೆ. ಅಮೇರಿಕದ ಮತ್ತು ಇಟಲಿಯ ರಾಯಭಾರಿಗಳು ಬ್ರಸೆಲ್ಸಿನಲ್ಲಿಯೇ ಇರುವರು.

ಜರ್ಮನಿಗೆ ವಿಮಾನಗಳು

ಪಶ್ಚಿಮ ಜರ್ಮನಿಯ ಕೆಲವು ಭಾಗಗಳ ಮೇಲೆ ರಾಯಲ್ ಏರ್ ಫೋರ್ಸಿನವರು ಹಾರಾಡಿ ಬಾಂಬುಗಳನ್ನೆಸೆದರೆಂದು ತಿಳಿದಿದೆ.

ರೊಟರ್ಡಾಮಿಗೆ ಬಾಂಬು
ನೂರು ಸಾವಿರ ಮಂದಿಯ ಮರಣ

ಹಾಲೆಂಡಿನ ನಗರವಾದ ರೊಟರ್ಡ್ರಾಮಿಗೆ ಜರ್ಮನರು ಬಾಂಬು ಹಾಕಿ ಮೂರರಲ್ಲಿ ಒಂದಂಶ ಪಟ್ಟಣವನ್ನೇ ಪುಡಿಮಾಡಿರುವರೆಂದೂ ನೂರು ಸಾವಿರ ಮಂದಿ ಮರಣ ಪಟ್ಟಿರುವರೆಂದೂ ತಿಳಿದಿದೆ.

ಚರ್ಚಿಲ್ಲರ ಬ್ರಾಡ್‌ಕಾಸ್ಟ್ ಭಾಷಣ

ನಿನ್ನೆ ರಾತ್ರಿ ಬ್ರಿಟಿಷ್ ಪ್ರಧಾನಮಂತ್ರಿ ಚರ್ಚಿಲ್ಲರು ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತಾ ಇಂದಿನ ಯುದ್ಧ ವಿವರವನ್ನು ವರ್ಣಿಸಿ ಜರ್ಮನರು ಅನ್ಯಾಯವನ್ನು ಖಂಡಿಸಿ, ಬ್ರಿಟಿಷರು ತಮ್ಮ ತಮ್ಮೊಳಗಿನ ಆಂತರ್ಯ ಭೇದಗಳನ್ನೆಣಿಸದೆ ಜಗತ್ತಿನ ಪ್ರಳಯಕ್ಕೆಂದು ಅನ್ಯಾಯವನ್ನು ಮಾಡುತ್ತಿರುವ ಜರ್ಮನಿಯನ್ನು ಸದೆಬಡಿದು ಜಯಶಾಲಿಗಳಾಗಬೇಕೆಂದು ಸ್ಫೂರ್ತಿದಾಯಕವಾದ ಭಾಷಣವನ್ನಿತ್ತರು.

ಆಗಸ್ಟ್ ೧೫ಕ್ಕೆ ಶಾಂತಿಯೇ?
ಹಿಟ್ಲರನ ಆಶೆಯಂತೆ

ಹಿಟ್ಲರನು ನಾಜಿಗಳಿಗೆ ಆಗಸ್ಟ್ ೧೫ರೊಳಗಾಗಿ ಶಾಂತಿ ಮಾಡುವುದಾಗಿ ಭರವಸೆ ಕೊಟ್ಟಿರುವನಾಗಿ ವಾರ್ತೆ.

ಹಾಲೆಂಡಿನ ರಾಣಿಯ ಪ್ರಕಟಣೆ

ಹಾಲೆಂಡಿನ ವಿಲ್‌ಹೆಲ್ ಮಿನಾರಾಣಿಯು ಒಂದು ಪ್ರಕಟಣೆ ಹೊರಡಿಸಿದ್ದಾರೆ.

ಅದರಲ್ಲಿ ತಿಳಿಸುವುದೇನೆಂದರೆ:—

"ನಾವು ಮತ್ತು ನಮ್ಮ ಸರಕಾರವು ಹಾಲೆಂಡಿನಲ್ಲಿಯೇ ಇದ್ದುಕೊಂಡು ಸ್ವತಂತ್ರವಾಗಿ ದೇಶಕ್ಕೆ ಮುಂದಾಳತನವನ್ನೀಯುವುದು ಅಸಾಧ್ಯವೆಂದು ನಮಗೆ ತಿಳಿದು ಬಂದಿತು. ಕೂಡಲೇ ನಾವು ನಮ್ಮ ಇಚ್ಛೆಗೆ ವಿರುದ್ಧವಾಗಿಯೇ, ಹಾಲೆಂಡ್ ಸರಕಾರದ ಕೇಂದ್ರವನ್ನು ಬದಲಾಯಿಸಲು ನಿರ್ಧರಿಸಿದೆವು. ಪರಿಸ್ಥಿತಿಯು ಉತ್ತಮಗೊಂಡ ಕೂಡಲೇ ನಾವು ಹಾಲೆಂಡಿಗೆ ಹಿಂತಿರುಗುವೆವು. ಸರಕಾರವು ಈಗ ಇಂಗ್ಲೆಂಡಿನಲ್ಲಿದೆ. ನಮ್ಮ ಉದ್ದೇಶ ಮತ್ತು ಗುರಿಗಳು ಸಾಧಿಸಲ್ಪಡುವವೆಂದು ಭರವಸೆ ಹೊಂದಿದೆ. ಹಾಲೆಂಡಿನ ಮಿಲಿಟರಿ ಕಮ್ಯಾಂಡರರೆ ಎಲ್ಲ ಮಿಲಿಟರಿ ನಿರ್ಧಾರಗಳನ್ನೂ ಅಜ್ಞಾಪಿಸುವರು. ಸ್ಥಳೀಯ ಕೌನ್‌ಸಿಲ್‌ಗಳು ತಮ್ಮ ಕೈಲಾದುದನ್ನೆಲ್ಲಾ ಮಾಡಬೇಕು. ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದಲೇ ಎಲ್ಲ ತೀರ್ಮಾನಗಳನ್ನೂ ಮಾಡಬೇಕು. ನನ್ನ ಹೃದಯವು ನನ್ನ ಪಿತೃದೇಶದಜನರಲ್ಲಿಯೇ ಇದೆ. ಭಗವಂತನ ದಯದಿಂದ ನಾವು ನಾವು ಜಯಪಡೆಯೋಣ. ಹಿಂದಿನ ಘಟನೆಗಳನ್ನೆಲ್ಲಾ ನೆನಪಿಕೊಳ್ಳಿ. ಪುನಃ ಹಾಗೆಯೇ ಆಗುವುದು. ನಮ್ಮ ಉದ್ದಿಷ್ಟ ಸಾಧನೆಗಾಗಿ ಪ್ರಜೆಗಳು ಎಲ್ಲ ಸಹಾಯವನ್ನೂ ಮಾಡಬೇಕು."

ರಶ್ಯವು ಜರ್ಮನಿಯನ್ನು ಖಂಡಿಸುತ್ತದೆ.
"ಬಲಪ್ರಯೋಗದಿಂದ ನಾಗರಿಕತೆಯು ಹಾಳಾಗುವುದು"

ಜರ್ಮನಿಯನ್ನು ಹಾಲೆಂಡ್ ಮತ್ತು ಬೆಲ್ಜಿಯಂಗಳ ಮೇಲೆ ಆಕ್ರಮಣ ಮಾಡಿದುದಕ್ಕಾಗಿ ಸೋವಿಯೆಟ್ ರಷ್ಯಾವು ಖಂಡಿಸಿದೆ. ಈ ಸಂದರ್ಭದಲ್ಲಿ "ಅಕ್ಕಪಕ್ಕದಲ್ಲಿರುವ ಸಣ್ಣಪುಟ್ಟ ರಾಷ್ಟ್ರಗಳ ಮೇಲೆ ಬಲಪ್ರಯೋಗ ಮಾಡುವುದನ್ನು ಸಮಾಜಸತ್ತಾತ್ಮಕವಾದ ಪ್ರಜಾಪ್ರಭುತ್ವ ರಾಷ್ಟ್ರವಾದ ಸೋವಿಯೆಟ್ ರಷ್ಯಾವು ಖಂಡಿಸುತ್ತದೆ, ಅಲ್ಲದೆ, ಧ್ವಂಸ ಮಾಡಲು ಶಕ್ತಿ ಪ್ರದರ್ಶನವೇ ಸಾಧನವೆಂದರೆ, ಅದರಿಂದ ನಾಗರಿಕತೆಯೇ ಹಾಳಾಗುವುದೆಂದು ರಶ್ಯನರು ಭಾವಿಸುತ್ತಾರೆ" ಎಂಬುದಾಗಿ ಲೆನಿನ್ನರು ಹಿಂದೆ ಹೇಳಿದುದನ್ನು ಉಲ್ಲೇಖಿಸಲಾಯಿತು.

ಜರ್ಮನಿಯು ಅನುಸರಿಸುತ್ತಿರುವ ಸಾಮ್ರಾಜ್ಯಶಾಹೀ ರೀತಿ—ನೀತಿಗಳಿಗೆ ತಾವು ಸಹಾನುಭೂತಿ ತೋರಿಸುವುದಿಲ್ಲವೆಂದೂ ತಮ್ಮ ಸಮಾಜಸತ್ತಾತ್ಮಕತೆಯು ರಾಷ್ಟ್ರೀಯವಾದುದೆಂದೂ ಆದರೆ ತಮ್ಮ ಗುರಿಯು ಸಮಾಜಸತ್ತಾತ್ಮಕತೆಯಿಂದ ಜೀವನಮಟ್ಟವನ್ನು ಉತ್ತಮಗೊಳಿಸುವುದು ಅಂತರ್ರಾಷ್ಟ್ರೀಯವಾಗಿದೆ ಎಂದೂ ರೇಡಿಯೋ ಹೇಳಿತು.

ಚರ್ಚಿಲರ ಇನ್ನೊಂದು ಪಟ್ಟಿ

ಬ್ರಿಟಿಷ್ ಮುಖ್ಯಮಂತ್ರಿಗಳಾದ ಮಿ| ವಿನ್‌ಸ್ಟನ್ ಚರ್ಚಿಲ್‌ರು ಒಂದು ಪ್ರಕಟಣೆ ಹೊರಡಿಸಿ ಸರ್ಕಾರದನ್ನ ಉನ್ನತಾಧಿಕಾರಿಗಳಾಗಿ ಹಲವರನ್ನು ನೇಮಿಸಿದ್ದಾರೆ. ಅದರ ಪಟ್ಟಿ ಹೀಗಿದೆ:—

ವೈಕೌಂಟ್ ಕ್ಯಾಲ್ಡಕಾಟ್—ಡೊಮಿನಿಯನ್ ಸೆಕ್ರೆಟರಿಗಳು. ಮಿ| ಅರ್ನೆಸ್ಟ್ ಬ್ರೌನ್—ಸ್ಕಾಟ್ಲೆಂಡಿನ ಸೆಕ್ರೆಟರಿ ಆಫ್ ಸ್ಟೇಟರು. ಲಾರ್ಡ್ ಬೀವರ್‌ಬ್ರೂಕ್—ವಿಮಾನ ತಯಾರಿಕೆಯ ಮಂತ್ರಿಗಳು. ಮಿ. ಹೆರಾಲ್ಡ್ ರಾಮ್ಸ್‌ಬಾತಂ—ವಿದ್ಯಾಖಾತೆಯ ಬೋರ್ಡಿನ ಅಧ್ಯಕ್ಷರು. ಮಿ. ಹ್ಯೂ ಡಾಲ್ಟನ್—ಆರ್ಥಿಕ ಸಮರ ಮಂಡಳದ ಅಧಿಕಾರಿಗಳು. ಮಿ. ರೊನಾಲ್ಡ್ ಕ್ರಾಸ್—ಹಡಗು ಇಲಾಖೆಯ ಮಂತ್ರಿಗಳು. ಸರ್ ಜಾನ್ ರೀತ್—ಟ್ರಾನ್ಸ್‌ಪೋರ್ಟ್ ಮಂತ್ರಿಗಳು. ಮಿ. ಆರ್ ಎಸ್. ಹಡ್ಸನ್—ವ್ಯವಸಾಯ ಮಂತ್ರಿಗಳು. ಲಾರ್ಡ್ ಹಂಕಿ—ಡಚಿ ಆಫ್ ಲ್ಯಾಂಕಸ್ಟರಿನ ಚಾನ್ಸಲರರು. ಸರ್ ಡೊನಾಲ್ಡ್ ಸೋಮರ್—ಆಟೋರ್ನಿ ಜನರಲ್. ಸರ್ ವಿಲಿಯಂ ಜೋವಿಟ್—ಸೋಲಿಸೀಟರ್ ಜನರಲ್. ವೈಕೌಂಟ್ ಕ್ರಾನ್‌ಬೋನ್—ಪೇ ಮಾಸ್ಟರ್ ಜನರಲ್. ಮಿ. ಆರ್. ಎ ಬಟ್ಲರ್—ವಿದೇಶಾಂಗ ವಿಷಯದ ಅಂಡರ್ ಸೆಕ್ರೆಟರಿ. ಮಿ. ಜಿ ಹೆಚ್. ಸೇಕ್ಸ್‌ಪಿಯರ್—ಡೊಮಿನಿಯನ್‌ಗಳ ಅಂಡರ್ ಸೆಕ್ರೆಟರಿ. ಮಿ. ಜಿ. ಹೆಚ್ ಹಾಲ್—ಕಾಲನಿಗಳ ಅಂಡರ್ ಸೆಕ್ರೆಟರಿ. ಮಿ. ಹಾರ್ ಕೋರ್ಟ್ ಜೊನ್‌ಸ್ಸನ್—ಸಮುದ್ರದಾಚಿನ ವ್ಯಾಪಾರದ ಸೆಕ್ರೆಟರಿ. ಮಿ. ಪಾಲ್ಸರ್ ಪುಮರ್‌ಸ್ಟಿ—ಪೆನ್‌ಷನ್ ಸ್. ಮಿ. ಡಬ್ಲ್ಯು ಎಸ್ ಮಾರಿಸನ್—ಪೋಸ್ಟ್‌ಮಾಸ್ಟರ್ ಜನರಲ್ ಮಿ. ಟಿ. ಎಮ್ ಕೂಪರ್—ಲಾರ್ಡ್ ಅಡ್ವೋಕೆಟ್. ಮಿ. ಕ್ರುಕ್‌ಷಾಂಕ್—ಟ್ರೆಜರಿಯ ಫೈನಾನ್ಷಿಯಲ್ ಸೆಕ್ರೆಟರಿ.

ಇಟಲಿಯ ಆಂತರ್ಯವು ಯಾರಿಗೆ ಗೊತ್ತಿಲ್ಲ?
ಇಟಲಿ ಪತ್ರಿಕೆಯ ಹೇಳಿಕೆ

"ನಾವು ಇಂದು ಇತಿಹಾಸದಲ್ಲಿಯೇ ಅತ್ಯಂತ ಮಹತ್ವ ಪೂರ್ಣವಾದ ಕಾಲದಲ್ಲಿದ್ದೇವೆ. ನಮ್ಮ ದೇಶದ ಮುಂದಿನ ಅನೇಕ ಶತಮಾನಗಳ ಭವಿಷ್ಯವನ್ನು ಈ ಸಮಯವೇ ನಿರ್ಧರಿಸುವದಾಗಿದೆ" ಎಂಬುದಾಗಿ ಮುಸೋಲಿನಿಯವರಿಂದ ಸ್ಥಾಪಿತವಾದ ಪೋಪೋಲೋ ಡಿ ಇಟಾಲಿಯಾ ಪತ್ರಿಕೆಯು ಬರೆಯುತ್ತದೆ.

ಅದು ಮುಂದುವರಿದು ಹೀಗೆ ಬರೆದಿದೆ:—"ಮಾಮೂಲಿನಂತೆಯೇ ಧನವಂತರೂ, ಕೊಬ್ಬಿದವರೂ, ಯುದ್ಧ ವಿರೋಧಿಗಳೂ, ಸ್ವಾರ್ಥಿಗಳೂ, ಮತ್ತು ಪ್ರಜಾಸತ್ತೆಗಳ ದುಷ್ಟ ಸ್ನೇಹಿತರುಗಳೂ ನಮ್ಮ ಫ್ಯಾಸಿಸ್ಟ್ ಮನಸ್ಸನ್ನೇ ತಳಮಳಗೊಳಿಸುವುದಕ್ಕಾಗಿ ಪ್ರಯತ್ನ ಪಡುತ್ತಿದ್ದಾರೆ. ಯೂರೋಪಿನ ಯುದ್ಧದಲ್ಲಿ ಫ್ಯಾಸಿಸ್ಟ್ ಇಟಲಿಯ ಮನೋಭಾವವು ಏನಿದೆ ಎಂಬುದನ್ನು ಅರಿತಿಲ್ಲವೆಂದು ಯಾರೂ ಕೂಡ ಹೇಳಲಾರರು. ಹಾಗೆ ತಮಗೆ ತಿಳಿಯದೆಂದು ಹೇಳುವಂತವರು ನಮಗೆ ಶತ್ರುಗಳೆಂದೇ ಭಾವಿಸಬೇಕಾಗುವದು. ಅವರು ಶತ್ರುಗಳಿಗೆ ನಿಜವಾಗಿಯೂ ಸಹಾಯಕರಾಗಿದ್ದಾರೆ ಎಂದೇ ಹೇಳಬಹುದು"

ಭಾರತದ ರಾಜಕೀಯವು ಉದಾಸೀನವಾಗಿದೆ. ಸತ್ಯಾಗ್ರಹವು ಆರಂಭವಾಗುವ ಯಾವ ಸೂಚನೆಗಳೂ ಇಲ್ಲ. ಪಂಡಿತ ಜವಾಹಿರಲಾಲರೇ ಈಗ ಸಿದ್ಧತೆಯಿಲ್ಲದೆ ಸತ್ಯಾಗ್ರಹ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಂತೂ ಯೂರೋಪಿನಲ್ಲಿ ಗಂಡಾಂತರವು ಹೆಚ್ಚುತ್ತಿದ್ದು ಬ್ರಿಟಿಷರು ಕಷ್ಟ ಕಾಲದಲ್ಲಿರುವಾಗ ಭಾರತೀಯರು ಸಮಯ ಸಾಧಿಸಿ ಆಂದೋಲನವನ್ನು ಆರಂಭಿಸುವುದು ನ್ಯಾಯವೂ ಪರಾಕ್ರಮವೂ ಅಲ್ಲೆಂದು ಕಾಂಗ್ರೆಸಿನ ಮುಖಂಡರು ನಿರ್ಧಾರ ಮಾಡಿದಂತೆ ಕಂಡು ಬರುತ್ತದೆ.

ಭಾರತಕ್ಕೆ ಹೊಸ ಸಚಿವರಾಗಿ ಮಿ| ಎಮ್ರೆಯವರನ್ನು ನೇಮಿಸಿದ ವಿಷಯ ದೃಷ್ಟಿ ಬ್ರಿಟನಿನಲ್ಲಿಯೂ ಭಾರತದಲ್ಲಿಯೂ ಹಲವು ಆಶಾದಾಯಕವಾದ ವಾರ್ತೆಗಳು ಹರಡಿವೆ. ಎಮ್ರೆಯವರು ಭಾರತದಲ್ಲಿ ಹುಟ್ಟಿದವರೆಂದೂ, ಭಾರತವು ಸ್ವತಂತ್ರವಾಗುವ ವಿಷಯವಾಗಿ ಅಭಿಮಾನವುಳ್ಳವರೆಂದೂ ಕೇಳುತ್ತದೆ. ಲಂಡನಿನಲ್ಲಿ ಪತ್ರಿಕಾ ಪ್ರತಿನಿಧಿಯೊಡನೆ ಅದೇ ಅಭಿಪ್ರಾಯವನ್ನು ಅವರಾಗಿ ಹೇಳಿದರೆಂದೂ ವಾರ್ತೆ.

ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿಗೆ ಅನೇಕ ಕಾಂಗ್ರೆಸ್ ಕೆಲಸಗಾರರು ಈಗಲೂ ಬಲಿಯಾಗುತಿದ್ದಾರೆ.

ಹಲವುಕಡೆ ಕಾಂಗ್ರೆಸ್ ಕಮಿಟಿಗಳು ಸತ್ಯಾಗ್ರಹ ಸಮಿತಿಗಳಾಗಿ ಮಾರ್ಪಟ್ಟು, ಶಿಕ್ಷಣ ಶಿಬಿರಗಳನ್ನು ತೆರೆದಿವೆ.

ಕೃಪಲಾನಿಯವರ ಹೇಳಿಕೆ

ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳಾದ ಆಚಾರ್ಯ ಕೃಪಾಲನಿಯವರು ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ಕಾಂಗ್ರೆಸು ಧುರೀಣರು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬಾರದೆಂದೂ ರಾಮಗಢ ನಿರ್ಣಯದಂತೆ ವರ್ತಿಸುವಲ್ಲಿ ವರ್ಕಿಂಗ್ ಕಮಿಟಿ ಮತ್ತು ಗಾಂಧೀಜಿಯವರ ಹೇಳಿಕೆಯೇ ಕೊನೆಯ ತೀರ್ಮಾನವಾಗಿ ಎಲ್ಲರು ವರ್ತಿಸಬೇಕೆಂದೂ ತಿಳಿಸಿರುವರು.

ಮದ್ರಾಸು ನಗರದಲ್ಲಿ ಪ್ರಾಯಸ್ಥರ ಶಿಕ್ಷಣ

ಮದ್ರಾಸು ಕಾರ್ಪರೇಶನಿನವರು ಪ್ರಾಯಸ್ಥರ ಶಿಕ್ಷಣ ಕೇಂದ್ರಗಳನ್ನು ತೆರೆದು ಕೆಲಸಮಾಡುತ್ತಿರುವರು. ಅದರ ಉದ್ಘಾಟನಾ ಭಾಷಣವು ಶ್ರೀ ಸಿ. ರಾಜಗೋಪಾಲಾಚಾರಿಯವರಿಂದ ಕೊಡಲ್ಪಟ್ಟಿತು.

ಬೊಂಬಾಯಿಯಲ್ಲಿ ಬಂಧನ

ಬೊಂಬಾಯಿ ಫಾರ್ವರ್ಡ್ ಬ್ಲಾಕಿನವರಾದ ಶ್ರೀಗಳಾದ ಗಿರಿಧರಲಾಲ ಧಕ್ಕರ್ ಮತ್ತು ಸಿ. ಜಾನಿ ಇವರನ್ನು ಜಾಮೀನಿಲ್ಲದೆ ಬಂಧಿಸಿರುವರು.

ಸತ್ಯಾಗ್ರಹವು ಬೇಗನೇ ಇಲ್ಲ!
ನೆಹರೂಜಿ ಹೇಳಿಕೆ

ಬ್ರಿಟನು ಜೀವನ್ಮರಣದ ಹೋರಾಟದಲ್ಲಿರುವಾಗ ಅದರೊಡನೆ ಆಂದೋಲ



ಬ್ರಿಟನಿನ ಕಷ್ಟಕಾಲದಲ್ಲಿ ಸತ್ಯಾಗ್ರಹವಿಲ್ಲ!

ನೆಹರುಗಳ ಸ್ಪಷ್ಟವಾಣಿ!

ಮದ್ರಾಸಿನಲ್ಲಿ ಸಾಕ್ಷರತಾ ಪ್ರಚಾರ!

ಸೋಶಿಯಲಿಸ್ಟ್ ಧುರೀಣರ ಬಂಧನ!

ವೈಸರಾಯರಿಗೆ ತಂತಿ!

ನವನ್ನು ಆರಂಭಿಸುವುದು ಭಾರತೀಯರ ಗೌರವಕ್ಕೆ ಕುಂದು ತರುವಂತಹುದಾಗಿದೆ ಯೆಂದು ನೆಹರುಗಳು ಒಂದು ಹೇಳಿಕೆ ಕೊಟ್ಟಿರುವರು.

ಕೇಂದ್ರ ಎಸೆಂಬ್ಲಿಗೆ ಜೀವದಾನ

ಕೇಂದ್ರ ಎಸೆಂಬ್ಲಿಗೆ ಇನ್ನೂ ಒಂದು ವರ್ಷದ ತನಕ ಜೀವನಾವಧಿಯನ್ನು ಹೆಚ್ಚಿಸಲ್ಪಾಗಿದೆ.

ಕಿಸಾನ್ ಮುಖಂಡರ ಬಂಧನ

ಪರಿಷತ್ತು ನ್ಯಾಯ ಬಾಹಿರವೆ?

ರಾಜಶಾಹಿಯಲ್ಲಿ ಜರಗಲಿರುವ ದ್ವಿತೀಯ ಜಿಲ್ಲಾ ಕೃಷಿಕ ಸಮ್ಮೇಳನವನ್ನು ನ್ಯಾಯ ಬಾಹಿರವೆಂದು ಸರಕಾರದವರು ಜರಗಲು ಬಿಡದೆ ಎಂಟು ಮಂದಿ ಕಿಸಾನ್ ಮುಂದಾಳುಗಳನ್ನು ಬಂಧಿಸಿರುವರು.

ಹೊರಗೆ ಹೋಗಬಾರದು

ಸೂರತಿನ ಕಿಸಾನ್ ಮುಖಂಡರಾದ ಶ್ರೀ. ಪಾಂಗಾರ್ಕರರಿಗೆ ಜಿಲ್ಲೆಯಿಂದ ಹೊರ ಹೋಗಬಾರದೆಂದು ಯಾವ ಚಳವಳದಲ್ಲಿಯೂ ಭಾಗವಹಿಸಕೂಡದೆಂದೂ ನಿರ್ಬಂಧದ ಆಜ್ಞೆ ಹೊರಟಿದೆ.

ಬಲೂಚಿಸ್ಥಾನ ಮುಖಂಡರ ಬಂಧನ

ಅಂಜುಮಾನೆ ವಟ್ಟನ್ ಎಂಬ ಬಲೂಚಿಸ್ಥಾನ ರಾಜಕೀಯ ಪಕ್ಷದ ಅಧ್ಯಕ್ಷರಾದ ಖಾನ್ ಅಬ್ದುಲ್ ಸಾಮದ್ ಖಾನರನ್ನು ಸರಕಾರದ ವಿರೋಧ ಭಾಷಣ ಕೊಟ್ಟರೆಂದು ಡಿಫೆನ್ಸ್ ಒಫ್ ಇಂಡಿಯಾ ಆಕ್ಟಿನಂತೆ ಬಂಧಿಸಿರುವರು. ಬಲೂಚಿಸ್ಥಾನಕ್ಕೆ ಪ್ರಾಂತಿಕ ಸ್ವರಾಜ್ಯವು ಸಿಗಬೇಕೆಂಬ ಕುರಿತು ಅವರ ಭಾಷಣವಾಗಿತ್ತೆಂದು ತಿಳಿದಿದೆ.

ಎಂ. ಎಲ್. ಎಯವರ ಬಂಧನ

ಫಿರೋಜಾಬಾದಿನ ಕಾಂಗ್ರೆಸ್ ಎಂ. ಎಲ್. ಎಗಳಾದ ಶ್ರೀ. ರಾಮಚಂದ್ರ ಪಲ್ಲಿವಾಲರೆಂಬವರನ್ನು ಯುದ್ಧವಿರೋಧ ಭಾಷಣ ಮಾಡಿದರೆಂದು ಡಿಫೆನ್ಸ್ ಒಫ್ ಇಂಡಿಯಾ ಆಕ್ಟಿನಂತೆ ಕೈದುಮಾಡಲಾಗಿದೆ.

ಬೋಸ್ ಸಹೋದರರ ತಿಳಿಗೇಡಿತನ

ಕಲ್ಕತ್ತೆಯ ಮಾಜಿ ಮೇಯರರಾದ ಚಕ್ರವರ್ತಿಯಾರವರು ಪತ್ರಿಕೆಗಳಲ್ಲಿ ಒಂದು ಪತ್ರವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಶ್ರೀ. ಸುಭಾಷ್ ಚಂದ್ರ ಬೋಸರ ವಿನಂತಿಯಂತೆ ಜಕರಿಯಾರವರ ಮನೆಯಲ್ಲಿ ಒಂದು ಔತನ ಸಮಾರಂಭವನ್ನು ಏರ್ಪಡಿಸಲಾಗಿದ್ದಿತೆಂದೂ ಅಲ್ಲಿ ಬೋಸ್ ಸಹೋದರರೂ ಬಂಗಾಳದ ಪ್ರಧಾನರಾದ ಹಕ್ಕರವರೂ ಸಂಧಾನಿಸಿದರೆಂದೂ ಪ್ರಕಟವಾಗಿದೆಯಲ್ಲದೆ, ಬೋಸ್ ಸಹೋದರರು ಬಂಗಾಳದ ಮಂತ್ರಿಮಂಡಲದ ಅಧಿಕಾರದ ಮೇಲೆ ಕಣ್ಣಿಟ್ಟಿರುವರೆಂದೂ, ಮುಸ್ಲಿಂ ಲೀಗಿನೊಡನೆ ಅವರು ಜತೆಗೂಡಿ ಮುನ್ನಡೆಯಲು ಸಿದ್ಧರಾಗಿರುವರೆಂದೂ ತಿಳಿದು ಬರುತ್ತಿದೆ.

ಕಲ್ಕತ್ತೆಯಲ್ಲಿ ಟೌನ್ ಹಾಲಿನಲ್ಲಿ ಬಂಗಾಳ ಹಿಂದೂ ಮಹಾಸಭೆಯವರದೊಂದು ಮೀಟಿಂಗ್ ಪಾಕಿಸ್ಥಾನದ ಯೋಜನೆಯನ್ನು ಖಂಡಿಸಲು ನೆರೆದಿದ್ದಾಗ; ಶ್ರೀ ಸುಭಾಷ್ ಬೋಸರ ಕಡೆಯವರು ಈ ಮೀಟಿಂಗನ್ನು ಧ್ವಂಸಮಾಡಲು ಅಲ್ಲಿದ್ದವರ ಮೇಲೆಲ್ಲ ಕುರ್ಚಿಗಳನ್ನು ಬಿಸಾಡಿ ಗಲಭೆ ಎಬ್ಬಿಸಿ ಕೊನೆಗೆ ಪೋಲೀಸರು ಬರುತ್ತಲೇ ಜಾರಿದರು. ಇದರಲ್ಲಿ ಕೆಲವು ಪ್ರಮುಖರಿಗೆ ಗಾಯಗಳಾಗಿ ಆಸ್ಪತ್ರೆಗೆ ಸೇರಿದ್ದಾರೆ. ಈ ರೀತಿಯ ಪುಂಡತನವು ಕಲ್ಕತ್ತಾ ನಗರದ ಸಾರ್ವಜನಿಕ ಸಭೆಗಳಲ್ಲಿ ಇದುವರೆಗೆ ನಡೆದಿಲ್ಲವೆಂದು ಹೇಳಲಾಗಿದೆ.

ಬ್ರಿಟನಿನಲ್ಲಿರುವ ಭಾರತೀಯರು

ಬ್ರಿಟನ್ನಿನಲ್ಲಿರುವ ಭಾರತೀಯರು ಅಲ್ಲಿ ಎರಡು ವರ್ಷಕಾಲಕ್ಕಿಂತ ಕಮ್ಮಿಯಾಗಿ ವಾಸಮಾಡುತ್ತಿರುವವರಾದರೆ ಅಂಥಾವರಿಗೆ ಯುದ್ಧಕ್ಕೆ ಸೇರಬೇಕೆಂಬ ವಿಧಿಯಿಲ್ಲ. ಮತ್ತು ವಿದ್ಯಾಭ್ಯಾಸಕ್ಕಾಗಿ ಎರಡು ವರ್ಷಕ್ಕಿಂತ ಹೆಚ್ಚಾಗಿ ಬ್ರಿಟನ್ನಿನಲ್ಲಿರುವವರಿಗೂ ಯುದ್ಧಕ್ಕೆ ಸೇರಬೇಕೆಂಬ ನಿಯಮವಿಲ್ಲ. ಮತ್ತು ಬ್ರಿಟನ್ನಿನಲ್ಲಿ ಹಂಗಾಮಿಯಾಗಿರುವರೆಂದು ಸರಿಯಾದ ಆಧಾರವನ್ನು ತೋರಿಸುವ ಭಾರತೀಯರಿಗೂ ಯುದ್ಧಕ್ಕೆ ಸೇರಬೇಕೆಂದು ಕರೆಯುವುದಿಲ್ಲ.

ಶ್ರೀಮತಿ ಬಿಮಲಾಪ್ರತಿಮಾ ದೇವಿ

ತೀವ್ರವಾದೀ ಪಕ್ಷದ ಪ್ರಮುಖ ಕಾಂಗ್ರೆಸ್ ಕೆಲಸಗಾರರೂ ಮಾಜಿ ಡೆಟೆನ್ಯೂ ಕೈದಿಯೂ ಆದ ಶ್ರೀಮತಿ ಬಿಮಲಾಪ್ರತಿಮಾದೇವಿಯವರ ಮೇಲೆ ಬಂಗಾಳ ಸರ್ಕಾರದವರು ಡಿಫೆನ್ಸ್ ಆಫ್ ಇಂಡಿ ಕಾನೂನು ಮೇರೆಗೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದ್ದಾರೆ. ಅವರು ಬರ್‍ದ್ವಾನಪುರದ ಕೈಗಾರಿಕೆ ಪ್ರದೇಶದಲ್ಲಿ ಪ್ರವೇಶ ಮಾಡಬಾರದೆಂದು ಪ್ರತಿಬಂಧಕಾಜ್ಞೆಯಾಗಿದೆ.

ಇಬ್ಬರು ಸ್ವಯಂಸೇವಕರಿಗೆ ಒಂದು ವರ್ಷ ಕಠಿಣ ಶಿಕ್ಷೆ

ಸಬ್ ಡಿವಿಜನ್ ಆಫೀಸ್ ಕೋರ್ಟಿನ ಮೇಲೆ ಕಾಂಗ್ರೆಸ್ ಧ್ವಜವನ್ನು ಹಾರಿಸುವ ಸನ್ನಾಹ ಮಾಡಿದುದಕ್ಕಾಗಿ ಇಬ್ಬರು ಸ್ವಯಂ ಸೇವಕರನ್ನು ದಸ್ತಗಿರಿಮಾಡಲಾಯಿತು. ಮ್ಯಾಜಿಸ್ಟ್ರೇಟರು ಈ ಇಬ್ಬರಿಗೆ ತಲಾ ಒಂದು ವರ್ಷ ಕಠಿಣ ಶಿಕ್ಷೆಯನ್ನು ಕ್ರಮ ಪ್ರಕಾರ ವಿಧಿಸಿದ್ದಾರೆ.

ವೈಸರಾಯರಿಗೆ ತಂತಿ

ಮದ್ರಾಸಿನ ನವ್ಯ ಇಂಡಿಯಾ ಲೀಗಿನ ಪ್ರೆಸಿಡೆಂಟರಾದ ಡಾ। ಜಿ. ಎಸ್. ಅರುಂಡೇಲ್ ರವರು ವೈಸರಾಯರಿಗೊಂದು ತಂತಿಬಿಟ್ಟು ಅದರಲ್ಲಿ ಇಂಡಿಯಕ್ಕೆ ಕೂಡಲೇ ಸ್ವತಂತ್ರ ಸರಕಾರವನ್ನು ಕೊಡಿಸಬೇಕಾಗಿ ಪ್ರಾರ್ಥಿಸಿರುವರಲ್ಲದೆ, ಮಹಾತ್ಮರಿಗೆ ಸಂಯುಕ್ತವಾದ ಏಕಮುಖವಾದ ಕಾರ್ಯಕ್ರಮವನ್ನು ಅನುಸರಿಸಬೇಕೆಂದೂ ತಂತಿಬಿಟ್ಟಿರುವರು.

ಕಾಕ್ನಾರ ಚಳವಳ

ಕಾಕ್ನಾರ ಕೈದುಗಳೂ ದಂಡನೆಯೂ ನಡೆಯುತ್ತಿದೆ. ಆ ಚಳವಳವನ್ನು ಖಂಡಿಸುವ ಸಭೆಗಳೂ ಭಾಷಣಗಳೂ ಆಗುತ್ತಿವೆ.

ಸತ್ಯಾಗ್ರಹ ಶಿಬಿರ

ಇದೇ ಮೇ ತಾ. ೩೦ರಲ್ಲಿ ಲಾಹೋರಿನಲ್ಲಿ ಸತ್ಯಾಗ್ರಹಿಗಳದೊಂದು ಶಿಕ್ಷಣ ಶಿಬಿರವು ಸ್ಥಾಪಿಸಲ್ಪಟ್ಟಿತು. ಸುಮಾರು ೩೦೦ ಮಂದಿ ಸತ್ಯಾಗ್ರಹಿಗಳು ಇಲ್ಲಿ ಶಿಕ್ಷಣಕ್ಕೆ ಬಂದಿದ್ದರು. ಈ ಶಿಕ್ಷಣ ಶಿಬಿರವನ್ನು ಪಂಡಿತ ಜವಾಹರಲಾಲ್ ನೆಹರುಗಳು ತೆರೆದರು.

ಶ್ರೀ ಪ್ರಹ್ಲಾದ ಶೆಟ್ಟರ ಮರಣ

ಶಿವಮೊಗ್ಗಾದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇಲೆ ದಸ್ತಗಿರಿಯಾಗಿದ್ದ ಶ್ರೀ ಪ್ರಹ್ಲಾದಶೆಟ್ಟಿ ಎಂಬವರು, ಇತ್ತೀಚೆಗೆ ಸ್ವಲ್ಪ ದಿನಗಳಿಂದ ಕಾಯಿಲೆಯಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದರು. ಅವರು ಜಾವದಲ್ಲಿ ಆಸ್ಪತ್ರೆಯಲ್ಲಿ ಮರಣ ಹೊಂದಿದರು.

ಇಬ್ಬರು ಸ್ವಯಂಸೇವಕರ ದಸ್ತಗಿರಿ

ಬೆಂಗಳೂರು ಬ್ಯಾಂಕಿನ ಮುಂದೆ ಪಿಕೆಟಿಂಗ್ ಮಾಡಿದ ಇಬ್ಬರು ಸ್ವಯಂಸೇವಕರನ್ನು ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ಮೇರೆಗೆ ದಸ್ತಗಿರಿ ಮಾಡಲಾಗಿದೆ. ಇವರಿಬ್ಬರಲ್ಲಿ ಒಬ್ಬ ಸ್ವಯಂಸೇವಕಿಯೂ ಇದ್ದಾಳೆ.

ರೂ. 14,000

ಸರಿಯಾಗಿ ಉತ್ತರ ಕಳುಹಿಸಿದ 7 ಮಂದಿಗಳೊಳಗೆ ಹಂಚಲಾಗುತ್ತದೆ.

ನಾವು ಸೀಲು ಹಾಕಿದ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ. 75ರ ಬಹುಮಾನ. ನಮ್ಮ ಉತ್ತರದ ಯಾವುದಾದರೂ ಒಂದು ಸಾಲನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ. 20. ಉಚ್ಚದ ಸಾಲಿನ ಎರಡು ಅಂಕೆಗಳನ್ನು ಹೋಲುವ ಆದೇ ಸಾಲಿನ ಉತ್ತರ ಕಳುಹಿಸಿದವರಿಗೆ ದೊಡ್ಡ ಕೊನ್ಸೊಲೇಷನ್ ಬಹುಮಾನ.



ಪ್ರತೀ ಸಾಲನ್ನೂ ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 54 ಬರುವಂತೆ ಬಲಕ್ಕಿರುವ ಅಂಕಣಗಳಲ್ಲಿ 6 ರಿಂದ 21ರ ವರೆಗೆ ಅಂಕೆಗಳನ್ನು ಬರೆಯಿರಿ. ಒಂದು ಬಾರಿ ಉಪಯೋಗಿಸಿದ ಅಂಕೆಯನ್ನು ಪುನರಪಿ ಬರೆಯಕೂಡದು. ಉತ್ತರವನ್ನು ಕಳುಹಿಸುವ ಕಡೇ ದಿನ 4—6—1940. ಫಲಿತಾಂಶ 15—6—1940.

ಒಂದು ಉತ್ತರಕ್ಕೆ ರೂ. 1 ಪ್ರವೇಶಧನ. 3 ಉತ್ತರಗಳಿಗೆ ರೂ. 2. ರೂ. 2ಕ್ಕೆ 5 ಉತ್ತರಗಳು

ನಿಯಮಗಳು — ಮೇಲೆ ನಮೂದಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದ ಮೇಲೆ ಎಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವನ್ನು ಮನಿಆರ್ಡರು ಮೂಲಕವಾಗಲಿ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಕಳುಹಿಸಬೇಕು. ಬಹುಮಾನದ ಮೌಲ್ಯ ಪ್ರವೇಶದ ಹಣದ ಮೇಲೆ ಹೊಂದಿಕೊಂಡಿದೆ. ಆದರೆ ಕಡಿಮೆ ಎಂದರೆ ರೂ. 1500ನ್ನು ನಾವು ಬ್ಯಾಂಕ್ ಒಂದರಲ್ಲಿ ಭದ್ರತೆಯಾಗಿಟ್ಟು ಉತ್ತರವನ್ನು ಹೋಲುವ ಉತ್ತರ ಕಳುಹಿಸಿದವರಿಗೆ ಕೊಡುವೆವೆಂಬ ಭರವಸೆಯನ್ನೀಯುವೆವು. ಎಲ್ಲಾ ಕಳುಹಿಸಿದ ಉತ್ತರಗಳು 1940ನೇ ಜೂನ್ 4ನೇ ತಾರೀಕಿನೊಳಗೆ ಬಂದು ಮುಟ್ಟಬೇಕು. ಅದರನಂತರ ಬಂದ ಉತ್ತರಗಳಿಗೆ ಗಮನಕೊಡಲಾಗದಿಲ್ಲ. ಹೆಸರು, ವಿಳಾಸ, ಅಂಕೆಗಳನ್ನು ಇಂಗ್ಲೀಷಿನಲ್ಲಿಯೇ ಬರೆಯಿರಿ. ಉತ್ತರ ಬೇಕೆಂದವರು ಅಂಚೆಚೀಟನ್ನು ತಮ್ಮ ತಮ್ಮ ವಿಳಾಸ ಬರೆದ ಕವರನ್ನು ಕಳುಹಿಸಿರಿ. ಎಲ್ಲಾ ವಿಷಯಗಳಲ್ಲಿ ಮೆನೇಜರರ ತೀರ್ಮಾನವು ಅಂತ್ಯವೂ ನ್ಯಾಯಬದ್ಧವೂ ಆಗಿರುತ್ತದೆ.

ಕಳೆದ ಬಾರಿಯ 50ರ ಉತ್ತರ.

1ನೇ ಸಾಲು	18	11	8	18
2ನೇ ,,	16	5	10	19
3ನೇ ,,	9	20	15	6
4ನೇ ,,	7	14	17	12

ಎಲ್ಲ ಉತ್ತರವನ್ನು ಪ್ರವೇಶ ಹಣದೊಂದಿಗೆ ಈ ವಿಳಾಸಕ್ಕೆ ಕಳುಹಿಸಿರಿ.

ದಿ ಮೆನೇಜರ್—
ನೇಶನಲ್ ಡಿಸ್ಟ್ರಿಬ್ಯೂಟಿಂಗ್ ಕೊ.,
(ನಂ. 8)
'ದಾವರ್ ಹೌಸ್' 199, ಹಾರ್ನಬಿ ರೋಡ್
ಫೋರ್ಟ್ ಬೊಂಬಾಯಿ.

ಭಾರತಕ್ಕೆ ರಷ್ಯದ ದಾಳಿಯು ಸಾಧ್ಯವಿಲ್ಲ

ಜರ್ಮನ್ ಪತ್ರಿಕೆಗಳ ಹುಚ್ಚು ಬೆದರಿಕೆ

ರಷ್ಯವು ಹಿಂದೂದೇಶವನ್ನು ಆಕ್ರಮಿಸಬಹುದೆಂದು ಜರ್ಮನಿಯ ಪತ್ರಿಕೆಗಳು ಮತ್ತು ರೇಡಿಯೋಗಳು ಆಗಾಗ ಬೆದರಿಕೆ ಹುಟ್ಟಿಸುತ್ತವೆ. ಕಳೆದ ಕೆಲಕಾಲಗಳಿಂದ ರಷ್ಯವು ಹಿಂದೂದೇಶಕ್ಕೆ ದಾಳಿಯಿಡುವುದೆಂಬ ಮಾತುಕತೆಯು ಆಗಾಗ ಅಲ್ಲಲ್ಲಿ ಕೇಳಿಬರುತ್ತದೆ. ಆದರೆ ಇದು ಸಂಭವವಲ್ಲವೆಂಬ ಕುರಿತು ದಿಯಾರ್ಕ್‌ಶಯರ್ ಪೋಸ್ಟ್ ಪತ್ರಿಕೆಯಲ್ಲಿ ಜಾನ್ ಕಾರ್ಟ್‌ಮೇನರು ಒಂದು ಲೇಖನವನ್ನು ಬರೆದಿರುತ್ತಾರೆ.

ಇಂತಹ ಆಕ್ರಮಣವು ಹಿಂದೂದೇಶಕ್ಕೆ ರಷ್ಯದಿಂದ ಆಗಬೇಕಿದ್ದರೆ ಟಾಸ್ಕೆಂಟಿನಲ್ಲಿರುವ ಮಧ್ಯ ಏಶ್ಯ ಸೈನ್ಯ ಮತ್ತು ಕಾಕಾಸಸಿನಲ್ಲಿರುವ ಕೆಂಪು ಧ್ವಜಸೈನ್ಯದವರಿಂದ ಸಾಧ್ಯವಾಗಬೇಕು. ಆದರೆ ಎರಡನೆಯ ಸೈನ್ಯವು ಇರಾನ್ ಅಪಘಾನಿಸ್ಥಾನ್, ಬಲೂಚಿಸ್ಥಾನ್ ಇವುಗಳಿಂದ ತಡೆಯಲ್ಪಟ್ಟು ಭಾರತಕ್ಕೆ ಬರಲಾರದಾಗಿದೆ. ಎರಡನೆಯ ಸೈನ್ಯಕ್ಕೆ ಮಧ್ಯದಲ್ಲಿ ಭಯಂಕರವಾದ ಪಾಮಿರ್ ಮತ್ತು ಹಿಂದೂಕುಶ್ ಪರ್ವತಗಳು ಇವೆ. ತಮಗೆ ಬೇಕಾದ ಎಲ್ಲಾ ಯುದ್ಧಸಾಮಗ್ರಿಗಳನ್ನು ಹೇರಿಕೊಂಡು ಈ ಮಾರ್ಗವಾಗಿ ಬರುವುದು ಯಾರಿಂದಲೂ ಸಾಧ್ಯವಾಗುವ ಮಾತಲ್ಲ. ಆದುದರಿಂದ ಈ ಸೈನ್ಯವು ದಾಳಿಯಿಡಬೇಕಾದರೆ ಪರ್ಶಿಯದ ಮೂಲಕ ಆಗಬೇಕಾಗಿದೆ.

ಕಳೆದ ಕೆಲಸಮಯಗಳಿಂದ ರಷ್ಯವು ಪರ್ಶಿಯದ ಬಳಿ ಮಾರ್ಗವನ್ನು ವಿಸ್ತರಿಸಿ ಮುಂಬರಿವ ಸುದ್ದಿಯು ಕೇಳಿಬರುತ್ತಿದೆ. ಎಷ್ಟು ಪ್ರಯತ್ನ ಪಟ್ಟರೂ ದೊಡ್ಡ ಸೈನ್ಯವನ್ನು ಈ ದಾರಿಯ ಮೂಲಕ ಸಾಗಿಸಿ ತರುವುದು ಬಹಳ ಪ್ರಯಾಸದ ಕಾರ್ಯವಾಗಿದೆ. ಹೇಗಾದರೂ ಮಾಡಿ ರಷ್ಯವು ಮುಂದುವರಿಯುವುದಾದರೆ ಪರ್ಶಿಯದಿಂದ ಅಪಘಾನಿಸ್ಥಾನದ ದಾರಿಯಾಗಿ ಕ್ವೆಟ್ಟಕ್ಕೆ ಕಾಲಿಡತಕ್ಕದ್ದಿದೆ. ಈ ದಾರಿಯಲ್ಲಿ ಅವರು ಭಯಂಕರ ವೈರಿಗಳನ್ನು ಎದುರಿಸಬೇಕಾಗುವುದಲ್ಲದೆ, ಗಡಿನಾಡುಗಳಲ್ಲಿ ಕಾದಾಡಲು ಸನ್ನದ್ಧವಾಗಿರುವ ಭಾರತೀಯ ಸೈನಿಕರು ಅವರನ್ನು ಮುಂದುವರಿಯಲು ಬಿಡುವಂತಿಲ್ಲ.

ಆದಕಾರಣ ಯಾವುದೇ ದೃಷ್ಟಿಯಿಂದ ನೋಡುವುದಾದರೂ, ಪರ್ಶಿಯಾ ಮತ್ತು ಅಪಘಾನಿಸ್ಥಾನ ಈ ಎರಡು ತಟಸ್ಥ ರಾಷ್ಟ್ರಗಳ ತಾಟಸ್ಥ್ಯವನ್ನು ಭಂಗಗೊಳಿಸದ ವಿನಹ ರಷ್ಯವು ಭಾರತಕ್ಕೆ ಆಕ್ರಮಿಸಲು ಸಾಧ್ಯವಿಲ್ಲ. ಅದು ಮಾತ್ರವಲ್ಲ ಈ ರಾಷ್ಟ್ರಗಳ ವಿಷಯವಾಗಿ ಟರ್ಕಿಯೂ ಬಹಳ ಆಸಕ್ತವಾಗಿರುವ ಕಾರಣ, ರಷ್ಯದ ಮುಂದೊತ್ತುವಿಕೆಯ ಕಾಲದಲ್ಲಿ ಟರ್ಕಿಯು ಸುಮ್ಮಗಿರುವಂತಿಲ್ಲ.

ಟರ್ಕಿಯ ಪ್ರಾಬಲ್ಯ

ಭೂಪಟವನ್ನು ಪರಿಶೀಲಿಸಿದರೆ ಟರ್ಕಿಯ ಪ್ರಾಬಲ್ಯವು ಎಷ್ಟರ ಮಟ್ಟಿಗೆ ರಷ್ಯವನ್ನು ತಡೆಗಟ್ಟಲು ಸಮರ್ಥವಾಗುವುದೆಂದು ತಿಳಿಯದಿರದು. ಅಪಘಾನಿಸ್ಥಾನ ಇರಾಕ್, ಇರಾನ್‌ಗಳ ಬೆಂಬಲಕ್ಕಾಗಿ ಟರ್ಕಿಯು ಖಂಡಿತ ನಿಲ್ಲದಿರಲಾರದು. ಟರ್ಕಿಗೆ ಮಿತ್ರರಾಷ್ಟ್ರದ ಬೆಂಬಲವಿರುತ್ತದೆ. ಭೂ, ಜಲ, ಆಕಾಶಗಳ ಮುಖಾಂತರವಾಗಿ ಹೇಗೇ ಆಗಲಿ ದಾಳಿಯಿಟ್ಟಲ್ಲಿ ರಷ್ಯವು ಭಯಂಕರ ಅನಾಹುತಕ್ಕೆ ಒಳಗಾಗಬೇಕಾಗುವುದು.

ಯುದ್ಧ ಸಾಮಗ್ರಿಗಳೆಲ್ಲಿ?

ರಷ್ಯವು ಯುದ್ಧ ಮಾಡಬೇಕಾದರೆ ಅದಕ್ಕೆ ಸಾಕಷ್ಟು ಯುದ್ಧಸಾಮಗ್ರಿಗಳು ಆಗಾಗ ಒದಗಬೇಕಲ್ಲವೆ? ಎಣ್ಣೆ, ಪೆಟ್ರೋಲು, ಸಂಚಾರ ಸೌಕರ್ಯ ಇವುಗಳೆಲ್ಲವನ್ನೂ ಬಲು ದೂರದಿಂದ ಒದಗಿಸಿಕೊಂಡು ರಷ್ಯವು ಹಿಂದೂದೇಶವನ್ನು ಆಕ್ರಮಿಸುವುದು ಸಾಧ್ಯವಿಲ್ಲ.

ಬಿಲ್ಲವರ ಎಸೋಸಿಯೇಶನ್ ಮುಂಬಯಿ

ವಿದ್ಯಾರ್ಥಿವೇತನ: ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ಮಾತ್ರ. ಈ ಮೇಲಿನ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಾ. ೩೧-೫-೪೦ರ ಒಳಗೆ ಈ ಕೆಳಗೆ ನಮೂದಿಸಿದ ಪ್ರಶ್ನೆಗಳಿಗೆ ಉತ್ತರ ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡಲ್ಲಿ ವೇತನವನ್ನು ಪಡೆಯಲು ಅರ್ಹರೆಂದು ಕಂಡುಬಂದವರಿಗೆ ವೇತನವನ್ನು ಕೊಡಲಾಗುವುದು. ಆದರೆ ಈ ವರ್ಷ ಕಾಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ.

೧. ವಿದ್ಯಾರ್ಥಿಯ ಸಂಪೂರ್ಣ ಹೆಸರು. ೨. ತಂದೆ ಯಾ ರಕ್ಷಕನ ಹೆಸರು. ೩. ಇತರ ಸಂಬಂಧಿಕರ ಹೆಸರು ಮತ್ತು ವಿಳಾಸ. ೪. ಕಲಿಯತಕ್ಕ ದರ್ಜೆ ಮತ್ತು ಶಾಲೆಯ ಹೆಸರು. ೫. ಕಳೆದ ಪರೀಕ್ಷೆಯ ಮಾರ್ಕ್ ಪಟ್ಟಿ. ೬. ಶಾಲಾ ಸಂಬಳ. ೭. ವಿದ್ಯಾರ್ಥಿಯ ಗುಣ ನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ. ೮. ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ ಅಥವಾ ಪ್ರಸಿದ್ಧ ವಕೀಲರದ್ದೊಂದು ಪತ್ರ. ಎಸೋಸಿಯೇಶನಿನಿಂದ ಗತವರುಷ ವಿದ್ಯಾರ್ಥಿಯು ವೇತನ ಪಡೆಯಲಿಚ್ಛಿಸುವುದಾದರೆ ತಾ. ೩೦-೬-೪೦ರ ಒಳಗೆ ಕಳುಹಿಸಿಕೊಡತಕ್ಕದ್ದು.

ವಿಳಾಸ: ಮಾನಾರ್ಥ ಜನರಲ್ ಕಾರ್ಯದರ್ಶಿ, ಬಿಲ್ಲವರ ಎಸೋಸಿಯೇಶನ್ ದಫ್ತರ ಪಟೇಲ ಎಂಡ್ ದಿವಾನ್ ಕಂಪೆನಿ, 18 19, ಮೋಡೀ ಸ್ಟ್ರೀಟ್ ಪೋರ್ಟ ಮುಂಬಯಿ.

ಧರ್ಮಾರ್ಥ ಯೋಗಿಕ ಮತ್ತು ನಿಸರ್ಗ ಉಪಚಾರ: ಶ್ರೀ ರಾಮತೀರ್ಥರ ಯೋಗಾಶ್ರಮ (ಸೆಂಡ್‌ಹರ್ಸ್ಟ ರೋಡ್ ಪ್ರಾರ್ಥನಾ ಸಮಾಜ ಟ್ರಾಮ್ ಜಂಕ್ಷನಿನ ಹತ್ತಿರ, ಸೆಕ್ಸರಿ ಬಿಲ್ಡಿಂಗ್ ಮುಂಬಯಿ ೪)ದಲ್ಲಿ ಪ್ರತಿ ಒಂದು ಆದಿತ್ಯವಾರ ಬೆಳಗ್ಗೆ ೭॥ ಘಂಟೆಯಿಂದ ೧೦ ಘಂಟೆಯ ವರೆಗೆ ಕಷ್ಟಸಾಧ್ಯ ರೋಗ ನಿವಾರಣೆ ಸಲುವಾಗಿ ಸೂರ್ಯ ಕಿರಣ ಚಿಕಿತ್ಸೆ, ಮಸಾಜ್, ಮಾನಸಿಕ, ಉಪವಾಸ, ನೀರಿನ ಚಿಕಿತ್ಸೆ, ೬ ಪ್ರಕಾರದ ಮಲ ನಿವಾರಣ ಕ್ರಿಯೆ, ೪೪ ಆಸನಗಳು, ೧೨ ಪ್ರಕಾರದ ಪ್ರಾಣಾಯಾಮಗಳನ್ನು ಉಚಿತವಾಗಿ ಕೊಡಲ್ಪಡುತ್ತದೆ. ಸ್ತ್ರೀಯರಿಗೆ ಸ್ತ್ರೀಯರೇ ಚಿಕಿತ್ಸೆ ಮಾಡುತ್ತಾರೆ. ಅಲ್ಲದೆ ಸ್ಥಳ ಸಹಾ ಪ್ರತ್ಯೇಕವೇ ಇದೆ.

ಮಂಜೇಶ್ವರ

ಜಿಲ್ಲಾ ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನಿನವರಿಂದ ಕಬ್ ಮಾಸ್ತರರ ತರಬೇತಿ ಕೇಂದ್ರವು, ಕಳೆದ ತಾ. ೧೧ರಲ್ಲಿ ಮಂಜೇಶ್ವರ ಶ್ರೀಮದನಂತೇಶ್ವರ ಹಾ. ಎ. ಶಾಲೆಯಲ್ಲಿ ಆರಂಭಿಸಲ್ಪಟ್ಟಿತು. ಡಾ. ನೇಮಿರಾಜ ಅಳ್ವರು ಕೇಂದ್ರದ ಉದ್ಘಾಟನೆಯನ್ನು ನಡೆಸಿದರು. ಜಿಲ್ಲಾ ಸ್ಕೌಟ್ ಕಮಿಶನರಾದ ಶ್ರೀ. ಎಂ. ಎಸ್. ಮಾಧವರಾಯರೂ, ಪ್ರಾಂತಿಕ ವ್ಯವಸ್ಥಾಪಕ ಕಮಿಶನರಾದ ಶ್ರೀ. ಎನ್. ರಾಜಗೋಪಾಲನ್‌ರವರೂ ಭಾಷಣವಿತ್ತರು. ಮರುದಿನ ಜಿಲ್ಲಾ ಅಸಿಸ್ಟಾಂಟ್ ಸ್ಕೌಟ್ ಕಮಿಶನರಾದ ಶ್ರೀ. ಕೆ. ಸಂಜೀವ ಭಟ್ಟರು ಸ್ಕೌಟ್ ಧ್ವಜಾರೋಹಣ ನಡೆಸಿದರು. ಕೇಂದ್ರವು ೫ ದಿನಗಳ ತನಕ ನಡೆಯಲಿದೆ. ೩೦ ಜಿಲ್ಲಾ ಬೋರ್ಡ್ ಶಾಲಾ ಉಪಾಧ್ಯಾಯರ ಸಹಿತ ಸುಮಾರು ೫೬ ಉಪಾಧ್ಯಾಯರು ತರಬೇತಿಗೆ ಸೇರಿದ್ದಾರೆ.

ಬ್ರಹ್ಮಾವರ: ರಜತ ಮಹೋತ್ಸವ: ಬ್ರಹ್ಮಾವರದ ಕೋಪರೇಟಿವ್ ಸೊಸೈಟಿಯ ರಜತ ಮಹೋತ್ಸವವು ತಾ. ೨೯ರಲ್ಲಿ ಶ್ರೀ. ವೈಕುಂಠ್ ಮೋಘಾರವರ ಅಧ್ಯಕ್ಷತೆಯಲ್ಲಿ ನಡೆಯುವುದು.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Pandurange Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಆರ್ಥಿಕ ಸಂಗ್ರಾಮದಲ್ಲಿ ಜರ್ಮನಿಗೆ ವಿಜಯದಾಸೆಯಿಲ್ಲ!

ಬಾಲ್ಕನಿನಲ್ಲಿ ಬ್ರಿಟಿಷರ ಪ್ರಾಬಲ್ಯ!

ಯೂರೋಪಿನಲ್ಲಿ ಈಗ ಬಹು ಭಯಂಕರವಾಗಿ ನಡೆಯುತ್ತಿರುವ ಮಹಾ ಯುದ್ಧದಲ್ಲಿ ಜರ್ಮನಿಯು ಎಲ್ಲೆಲ್ಲಿ ಯಾವ ಯಾವ ದೇಶಗಳನ್ನು ಗೆದ್ದುಕೊಂಡಿದೆ ಎಂಬುದರಿಂದ ಈ ಯುದ್ಧದ ಕೊನೆಯ ಪರಿಣಾಮವನ್ನು ಹೇಳಲಿಕ್ಕಾಗುವುದಿಲ್ಲ. ಮಿತ್ರರಾಷ್ಟ್ರಗಳು ಜರ್ಮನಿಯ ವಿರುದ್ಧ ಹೂಡಿದ ಆರ್ಥಿಕ ಸಂಗ್ರಾಮದಲ್ಲಿ ಜರ್ಮನಿಯ ಸ್ಥಿತಿಗತಿಗಳು ಹೇಗೆ ನಿಲ್ಲುವವು ಎಂಬುದರಿಂದ, ಈ ಯುದ್ಧದಲ್ಲಿ ಗೆಲ್ಲುವವರು ಯಾರು ಎಂಬುದನ್ನು ಊಹಿಸಲಿಕ್ಕಾಗುತ್ತದೆ. ಕಳೆದ ಮಹಾಯುದ್ಧದಲ್ಲಿ ಕೂಡ ಹೀಗೆಯೇ ಆಯಿತು. ಹೋರಾಡುವ ಜರ್ಮನಿಯ ಸೈನ್ಯಬಲವು ಕುಂದಿದುದರಿಂದ ಆಗ ಅದು ಸೋಲಲಿಲ್ಲ. ಆದರೆ ನಾಲ್ಕು ವರ್ಷಗಳ ತನಕ ಹೊರಗಿನಿಂದ ಜೀವನಾವಶ್ಯಕ ಸಾಮಗ್ರಿಗಳು ಜರ್ಮನಿಯನ್ನು ಸೇರದಂತೆ ಮಿತ್ರರಾಷ್ಟ್ರಗಳು ನಿರ್ಬಂಧನ ಮಾಡಿದುದರಿಂದ, ಉಪವಾಸ ಬಿದ್ದು ಅಂತಃಕಲಹವನ್ನೆಬ್ಬಿಸಿದ ತನ್ನ ಪ್ರಜೆಗಳ ಕಾರಣದಿಂದಲೇ ಕೈಸರನು ಪದಚ್ಯುತನಾಗಿ, ಜರ್ಮನಿಯು ಸೋಲನ್ನು ಒಪ್ಪಿಕೊಳ್ಳಬೇಕಾಯಿತು.

ಕೆಲಕೆಲವು ಕಡೆಗಳಿಂದ ಮಿತ್ರರಾಷ್ಟ್ರಗಳು ಜರ್ಮನಿಯೊಂದಿಗೆ ಅಲ್ಪಸ್ವಲ್ಪ ಹೋರಾಡಿ, ಹಿಮ್ಮೆಟ್ಟಿರುವಂತೆ ಈ ಯುದ್ಧದಲ್ಲಿ ಈಗ ನಮಗೆ ತೋರುತ್ತಿದೆಯಾದರೂ, ಯುದ್ಧವನ್ನು ಆದಷ್ಟು ದೀರ್ಘಕಾಲ ಎಳೆದು ಜರ್ಮನಿಯನ್ನು ಉಪವಾಸ ಹಾಕಿ ಸೋಲಿಸುವ ವಿಚಾರದಿಂದಲೇ ಮಿತ್ರರಾಷ್ಟ್ರಗಳು ಹಾಗೆ ಮಾಡಿವೆಯೆಂದು ತಿಳಿಯಬೇಕಾಗುತ್ತದೆ. ಯುದ್ಧವು ಬಹುಕಾಲ ನಡೆದರೆ, ತನ್ನ ಸೈನ್ಯಬಲವು ಎಷ್ಟು ಹೆಚ್ಚಾಗಿದ್ದರೂ, ಸಾಂಪತ್ತಿಕ ಸಂಗ್ರಾಮದಲ್ಲಿ ತಾನು ಖಂಡಿತವಾಗಿಯೂ ಸೋಲುವೆನೆಂದು ಹಿಟ್ಲರನು ತಿಳಿದಿರುವುದರಿಂದಲೇ ಅವನು ಶೀಘ್ರದಲ್ಲಿ ಈ ಯುದ್ಧದ ನಿರ್ಣಯವಾಗಬೇಕೆಂದು ತನ್ನ ಎಲ್ಲಾ ಶಕ್ತಿ ಉಪಾಯಗಳನ್ನು ಉಪಯೋಗಿಸಿ ಭಯಂಕರ ಯುದ್ಧವನ್ನು ಆರಂಭಿಸಿದ್ದಾನೆ. ಈ ಯುದ್ಧದ ಪರಿಣಾಮ—ಅದು ಬಹುಕಾಲದ ತನಕ ನಡೆಯುವಂತೆ ಎಳೆಯಲು ಮಿತ್ರರಾಷ್ಟ್ರಗಳು ಸಮರ್ಥವಾದರೆ ಆ ಮಿತ್ರರಾಷ್ಟ್ರಗಳೇ ಗೆಲ್ಲುವ ಹಾಗೆ ಆಗುವುದು.

ಜರ್ಮನಿಯ ದಿಗ್ಬಂಧನ

ಮಿತ್ರರಾಷ್ಟ್ರಗಳು ಜರ್ಮನಿಯೊಡನೆ ಹಾಕಿದ್ದ ವ್ಯಾಪಾರ ದಿಗ್ಬಂಧನವು ಈಗ ಬಲವತ್ತರವಾಗುತ್ತ ಬರುತ್ತಲಿದೆ ಎಂಬುದು ಸಂತೋಷಕರವಾಗಿದೆ. ನಾರ್ವೆಯು ಜರ್ಮನಿಯ ಅಧೀನವಾಗಿರುವುದಾದರೂ ನಾರ್ವೆ ಸ್ವೀಡನುಗಳಿಂದ ಅದಕ್ಕೆ ಕಬ್ಬಿಣದ ಅದುರು ಸಿಕ್ಕುವುದು ದುಸ್ತರವಾಗಿದೆ. ಜರ್ಮನಿಯ ವ್ಯಾಪಾರ ಹಡಗುಗಳನ್ನು ಮಿತ್ರರಾಷ್ಟ್ರಗಳು ಸಿಕ್ಕಿದಲ್ಲಿ ಮುಳುಗಿಸುತ್ತಲಿರುವುದರಿಂದ, ನಾರ್ವೆ ಸ್ವೀಡನುಗಳಿಂದ ಸಿಕ್ಕಿದ ಅದುರನ್ನು ಒಯ್ಯಲಿಕ್ಕೇ ಜರ್ಮನಿಯ ಕೈಯಲ್ಲಿ ಸಾಧನಗಳು ಉಳಿಯಲಾರವು.

ಯುದ್ಧವನ್ನು ಬಹಳ ಸಮಯದ ತನಕ ನಡೆಸಲಿಕ್ಕೆ ಜರ್ಮನಿಗೆ ಅತ್ಯುತ್ತಮವಾದ ಕಬ್ಬಿಣದ ಅದುರು ಅಗತ್ಯವಾಗಿದೆ. ಇಂಥ ಅದುರು ಜರ್ಮನಿಯಲ್ಲಿ ಸ್ವಲ್ಪವೂ ದೊರೆಯುವುದಿಲ್ಲ. ಜರ್ಮನಿಯಲ್ಲಿ ಸಿಕ್ಕುವಂಥ ಅದುರನ್ನೇ ಉತ್ತಮಗೊಳಿಸುವ ಬಗ್ಗೆ ಅಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಏರ್ಪಡಿಸಿದ್ದಾದರೂ, ಉತ್ತಮ ಫಲವೇನೂ ಕಂಡು ಬಂದಿಲ್ಲ. ರಷ್ಯದಲ್ಲಿ ಉತ್ತಮ ಜಾತಿಯ ಕಬ್ಬಿಣದ ಅದುರು ದೊರೆಯುತ್ತಿದೆಯಾದರೂ, ಸಾಗಿಸುವ ಸಲಕರಣೆಗಳಂತೂ ಇಲ್ಲ, ಮಾತ್ರವಲ್ಲ ಈಗಿನ ಅಂತರಾಷ್ಟ್ರೀಯ ವಿಷಮ ಪರಿಸ್ಥಿತಿಯಲ್ಲಿ ಜರ್ಮನಿಗೆ ಬೇಕಾದಷ್ಟು ಅದುರನ್ನು ರಷ್ಯವು ಕಳಿಸಬಹುದೆಂದು ಆಶಿಸಲಿಕ್ಕೂ ಇಲ್ಲ. ಅಲ್ಲದೆ ಜರ್ಮನಿಗೆ ಪರೋಪಕಾರ ಬುದ್ಧಿಯಿಂದ ರಷ್ಯವು ಸಹಾಯ ಮಾಡುವುದೆಂದು ತಿಳಿಯಲಿಕ್ಕೆ ಆಧಾರಗಳೂ ಇರುವುದಿಲ್ಲ. ಆದುದರಿಂದ ಯುದ್ಧವು ದೀರ್ಘಕಾಲ ನಡೆಯುವ ಸಂದರ್ಭದಲ್ಲಿ ಜರ್ಮನಿಯ ಗಂಡಾಂತರಕ್ಕೆ ಸಿಕ್ಕಲೇಬೇಕು.

ಬಾಲ್ಕನಿನೊಡನೆ ವ್ಯಾಪಾರ

ಒಂದು ಕಡೆಯಿಂದ ಜರ್ಮನಿಗೆ ಯುದ್ಧ ಸಹಾಯಕ ಮತ್ತು ಜೀವನಕ್ಕೆ ಅಗತ್ಯವುಳ್ಳ ಸಾಮಗ್ರಿಗಳು ದೊರೆಯದಂತೆ ವ್ಯಾಪಾರ ನಿರ್ಬಂಧನವನ್ನು ಹಾಕುತ್ತಲಿರುವಂತೆ ಇನ್ನೊಂದು ಕಡೆಯಿಂದ ಮಿತ್ರರಾಷ್ಟ್ರಗಳು ಬಾಲ್ಕನಗಳೊಡನೆ ವ್ಯಾಪಾರ ಒಡಂಬಡಿಕೆಗಳನ್ನು ಮಾಡಿಕೊಂಡು ಅಲ್ಲಿ ಬೆಳೆಯುತ್ತಿರುವ ದವಸ ಧಾನ್ಯಾದಿಗಳನ್ನು ತಾವು ಕೊಂಡುಕೊಂಡು ಸಂಗ್ರಹಿಸುತ್ತಲಿರುವವು. ಬಾಲ್ಕನ ರಾಷ್ಟ್ರಗಳಲ್ಲಿ ಜರ್ಮನಿ, ರಷ್ಯ, ಇಟಲಿಗಳು ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕೆ ಮಹಾ ಪ್ರಯತ್ನಗಳನ್ನು ಮಾಡಿದುವಾದರೂ, ಅಲ್ಲಿ ಮಿತ್ರರಾಷ್ಟ್ರಗಳ ಕೈಯೇ ಮೇಲಾಗಿದೆ. ಹೀಗಾದ್ದರಿಂದ ಒಂದು ಕಡೆಯಿಂದ ಯುದ್ಧಕಾಲದಲ್ಲಿ ಆಹಾರ ಸಾಮಗ್ರಿಗಳ ಮುಟ್ಟಿಗೆ ಮಿತ್ರರಾಷ್ಟ್ರಗಳ ಕಷ್ಟಗಳು ಕಡಿಮೆಯಾದಂತೆ, ಜರ್ಮನಿಯ ಕಷ್ಟಗಳು ಅಪರಿಮಿತ ಬೆಳೆದ ಹಾಗಾಗಿದೆ.

ಸರಕಾರದ ಬದಲಾವಣೆ

ಬ್ರಿಟನನಲ್ಲಿ ಸರಕಾರದ ಬದಲಾವಣೆ ಆಗಿ, ಮಿ. ಚೆಂಬರಲೇನರ ಸ್ಥಾನದಲ್ಲಿ ಮಿ. ಚರ್ಚಿಲ್ಲರು ಪ್ರಧಾನರಾಗಿ ಅಧಿಕಾರ ಪಟ್ಟವನ್ನು ಏರಿರುವರು. ಇವರು ಕಳೆದ ಸಂದರ್ಭದಲ್ಲಿ, ಯುದ್ಧಕಾರ್ಯವನ್ನು ಜಯಶೀಲವಾಗಿ ಮುಂದೊತ್ತಿದ ಸಮರ್ಥರು. ಆದ್ದರಿಂದ ಯುದ್ಧ ಪರಿಣಾಮದ ಕುರಿತು ಸಂದೇಹವೇ ಇಲ್ಲ.

ಇಮ್ಮಡಿ ಉದ್ದೇಶವಿರುವ ಈ ಸಾಬೂನನ್ನುಪಯೋಗಿಸಿರಿ!

ಛಿದ್ರವಾದ ನನ್ನನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ಕೈಲ್ಯ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯಕೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ.

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನು ಉಪಯೋಗಿಸುವುದೇ ಉತ್ತಮ ಹಾದಿ. ಕುಟಿಕೂರಾ ಮುಲಾಮಿ (Cuticura Ointment)ಯಿಂದ ಮೊದಲು ಛಿದ್ರ, ಗಜ್ಜಿಗಳನ್ನು ನಾಶಮಾಡಿ. ಇದರ ವಿಷಹಾರಕ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಹಿತಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನಲ್ಲಿಯೂ ಸ್ನಾನಕ್ಕೆ, ಸಣ್ಣ ಸೈಜಿನಲ್ಲಿಯೂ ಉಪಯೋಗಕ್ಕೆ ದೊರೆಯುತ್ತದೆ.

NACET
De Luxe
SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳು, ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ. ಆದರೆ ಈ ಬಾರಿ ಕೆಲವು ಸುಧಾರಣೆಯಿಂದೊಡಗೂಡಿದೆ. ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟವೆ" ಇದನ್ನು ಒಂದು ಬಾರಿ ನೀವೆ ಪರೀಕ್ಷಿಸಿರಿ. ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು. ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ.

★ ★ ★

ಧರ್ಮಾರ್ಥ ಇಸ್ತ್ರೀಯ ಪೆಟ್ಟಿಗೆಯನ್ನು ಪಡೆಯಿರಿ.

ಈ ಧರ್ಮಾರ್ಥದ ಇಸ್ತ್ರಿಯ ಪೆಟ್ಟಿಗೆಯನ್ನು ಪಡೆಯಲು 'NACET BLADES' ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇದೀ ಸೆಟ್ಟನ್ನು ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್,

1೯, ಸುಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.

ಜೀವನಜ್ಯೋತಿಗಳು: ಮಹಾತ್ಮಾ ಬಸವೇಶ್ವರ

ಕನ್ನಡದ ವಿಭೂತಿಪುರುಷನೂ, ಸಮಾಜಸುಧಾರಕ ಕ್ರಾಂತಿಕಾರನೂ ಆದ ಮಹಾತ್ಮಾ ಬಸವೇಶ್ವರನ ಜಯಂತಿಯು ಮೊನ್ನೆ ಕನ್ನಡ ನಾಡಿನಲ್ಲಿ ಎಲ್ಲೆಡೆಗಳಲ್ಲಿಯೂ ಆಚರಿಸಲ್ಪಟ್ಟಿತು. ಹನ್ನೆರಡನೆಯ ಶತಮಾನದ ಉತ್ತರಭಾಗದಲ್ಲಿ ಜನ್ಮವೆತ್ತಿದ್ದ ಈ ಮಹಾಪುರುಷನು ಆ ಕಾಲದ ಸಮಾಜದಲ್ಲಿ ಧಾರ್ಮಿಕ ರಾಜಕೀಯ, ಸಾಹಿತ್ಯ ವಿಚಾರಗಳೆಲ್ಲವುಗಳಲ್ಲಿಯೂ ತನ್ನ ನೂತನವಾದ ಸಿದ್ಧಾಂತವನ್ನು ಸ್ಥಾಪಿಸಿ ಯುಗಪುರುಷನಾದನು. ಆತನ ಜೀವನವು ಹಲವು ವಿಧದಿಂದ ಕನ್ನಡಿಗರಿಗೆ ಆದರ್ಶವಾಗಿದೆ; ಅನುಸರಣೀಯವಾಗಿದೆ. ಎಲ್ಲದಕ್ಕಿಂತಲೂ ಹೆಚ್ಚು ಆತನು ತನ್ನ ಜೀವಮಾನದಲ್ಲಿ ಕನ್ನಡವೆಂಬ ಸಕಲ ವಸ್ತುಗಳ ಸಲುವಾಗಿ ತೋರಿಸಿದ ಪ್ರೇಮವು ಬಹಳ ಹೆಚ್ಚಿನದಾಗಿ ಸ್ಮರಣೀಯವಾಗಿದೆ.

ಜನ್ಮ

ಉತ್ತರ ಕರ್ನಾಟಕದ ವಿಜಾಪುರದಲ್ಲಿ ಬಾಗೇವಾಡಿ ಎಂಬಲ್ಲಿ ಬಸವೇಶ್ವರನು ಮಾದಿರಾಜನೆಂಬ ಗೃಹಸ್ಥನಿಗೆ ಮೊದಲಾಂಬಿಕೆಯೆಂಬ ಪತಿವ್ರತೆಯ ಬಸುರಲ್ಲಿ ಜನ್ಮವೆತ್ತಿದನು. ಇವರ ವಂಶದವರು ಸ್ಮಾರ್ತ ಬ್ರಾಹ್ಮಣರಾಗಿದ್ದರೆಂದು ತಿಳಿದುಬರುತ್ತದೆ. ಇವನು ಹುಟ್ಟಿದ ವರ್ಷ ಕ್ರಿ. ಶ. ೧೧೩೧ ಎಂದೂ ಲಿಂಗೈಕ್ಯನಾದ ವರ್ಷ ೧೧೬೭ ಎಂದೂ, ಹೀಗೆ ಒಟ್ಟು ೩೬ ವರ್ಷಗಳ ಕಾಲ ಮಾತ್ರ ಬಸವೇಶ್ವರನು ಜೀವಿಸಿದನೆಂದೂ ಹೇಳುವರು. ಈತನಿಗೆ ನಾಗಲಾಂಬಿಕೆಯೆಂಬ ಸಜ್ಜನಳಾದ ಅಕ್ಕನು ಇದ್ದಳೆಂದೂ, ಆಕೆಯ ಪುತ್ರನೇ ಶ್ರೀ ಚೆನ್ನಬಸವೇಶ್ವರನೆಂದೂ ಗ್ರಂಥಗಳು ಸಾರುತ್ತವೆ.

ತನ್ನ ಕೌಮಾರ ವಯಸ್ಸಿನಲ್ಲಿ ಶ್ರೀ ಬಸವೇಶ್ವರನು ಬಾಗೇವಾಡಿಯನ್ನು ಬಿಟ್ಟು ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಸಂಗಮವಾಗುವ ಕಪ್ಪಡಿಯೆಂಬ ಊರಿಗೆ ಹೋಗಿ ಅಲ್ಲಿನ ಮಠಾಧಿಪತಿಗಳಾಗಿದ್ದ ಶಿವಗುರು ಎಂಬ ಮಾಹೇಶ್ವರರಲ್ಲಿ ವಿದ್ಯಾಭ್ಯಾಸ ಮಾಡಿದನು. ಬಸವೇಶ್ವರನು ತನ್ನ ವಚನಗಳಲ್ಲಿ 'ಕೂಡಲಸಂಗಮ' ದೇವನೆಂದು ಸಂಬೋಧಿಸುವುದು ಈ ತನ್ನ ಗುರುವನ್ನು ಕುರಿತೇ ಆಗಿರಬೇಕೆಂದು ಪಂಡಿತರ ಮತ. ಕಪ್ಪಡಿಯ ಆ ಗುರುಗಳ ಆಶ್ರಮವು ಯೋಗ್ಯ ವಿದ್ಯಾನಿಲಯವಾಗಿ ಆ ಕಾಲದಲ್ಲಿ ಬಹಳ ಪ್ರಸಿದ್ಧವಾಗಿತ್ತು.

ಮಂತ್ರೀಶ್ವರ

ಕಲ್ಯಾಣದ ಚಾಲುಕ್ಯರನ್ನು ಸೋಲಿಸಿ ಮುಂದೆ ಬಸವೇಶ್ವರನು ಮಹಾ ಪರಾಕ್ರಮಿಯೆಂದು ಹೆಸರು ಪಡೆದನು. ಕಳಚೂರ್ಯ ಬಿಜ್ಜಳ ರಾಜ್ಯದಲ್ಲಿ ಬಸವೇಶ್ವರನು ಮಂತ್ರಿಯಾಗಿ ಮೆರೆದನು.

ಬಸವೇಶ್ವರನು ತನ್ನ ಸೋದರಮಾವ ಬಲದೇವನ ಪುತ್ರಿ ಗಂಗಾಂಬಿಕೆಯನ್ನು ಮದುವೆಯಾದನು. ಬಸವೇಶ್ವರನಿಗೆ ನೀಲಾಂಬಿಕೆಯೆಂಬ ಇನ್ನೋರ್ವ [illegible] ಪತ್ನಿಯಿದ್ದಳೆಂದೂ ತಿಳಿಯು[illegible] [illegible] ನೀಲಾಂಬಿಕೆಯ ಪಾಂಡಿತ್ಯವನ್ನು ಅನೇಕ ವೀರಶೈವ ಕವಿಗಳು ಪ್ರಶಂಸಿಸಿರುತ್ತಾರೆ. ಬಸವೇಶ್ವರನಿಗೆ ಬಾಲಸಂಗನೆಂಬ ಒಬ್ಬ ಮಗನು ಹುಟ್ಟಿ ಅಕಾಲದಲ್ಲಿಯೇ ನಿಧನಹೊಂದಿದನೆಂದೂ ಇತಿಹಾಸಕಾರರ ಹೇಳಿಕೆ.

ಮತೋದ್ಧಾರ

ಬಸವೇಶ್ವರನು ವೀರಶೈವ ಮತವನ್ನು ಹಲವು ವಿಧಗಳಿಂದ ಉದ್ಧರಿಸಲು ಪ್ರಯತ್ನಮಾಡಿದನು. ಕಲ್ಯಾಣದಲ್ಲಿ ಆ ಸಲುವಾಗಿಯೇ ಆತನು ಅನುಭವ ಮಂಟಪವೆಂಬ ಆಧ್ಯಾತ್ಮಿಕ ಸಂಸ್ಥೆಯೊಂದನ್ನು ಸ್ಥಾಪಿಸಿದನು. ಅಲ್ಲಮ ಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಸಕಳೇಶ ಮಾದರಸ, ಬೊಮ್ಮಯ್ಯ, ಆದಿಶೆಟ್ಟಿ, ಮಡಿವಾಳ ಮಾಚಯ್ಯ, ಮಾದಯ್ಯ, ಚೆನ್ನಬಸವೇಶ್ವರ, ನಾಗಲಾಂಬಿಕೆ, ರೇಣುಕಾಚಾರ್ಯ, ರುದ್ರಮುನಿ ಮೊದಲಾದವರು ಬಸವೇಶ್ವರನ ಈ ಮತೋದ್ಧಾರ ಕಾರ್ಯದಲ್ಲಿ ಬೆಂಬಲನಿಂತರು. ಈ ಅನುಭವ ಮಂಟಪದ ಮೂಲಕ ಬಸವೇಶ್ವರನು ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದನು.

ಶಿವನೇ ಸರ್ವೋತ್ತಮನೆಂದೂ, ಶಿವಶರಣರಲ್ಲಿ ಉಚ್ಚನೀಚ ಭೇದವಿರಕೂಡದೆಂದೂ, ಬಹು ದೇವತೋಪಾಸನೆಯು ಸಲ್ಲದೆಂದೂ, ಜೀವನ ಧಾರಣೆಗಾಗಿ ಪ್ರತಿಯೊಬ್ಬರೂ ಉದ್ಯೋಗಗಳನ್ನು ಮಾಡಬೇಕೆಂದೂ, ಅಸ್ಪೃಶ್ಯತೆಯು ನಿರ್ನಾಮವಾಗಬೇಕೆಂದೂ, ದೇಶಭಾಷೆಯಲ್ಲಿ ಗ್ರಂಥಗಳನ್ನು ಮತತತ್ವಗಳನ್ನು ಪ್ರಚಾರಗೊಳಿಸಬೇಕೆಂದೂ ಆತನು ಬಹಳವಾಗಿ ಸಾಧಿಸಿದನು. ಹೀಗೆ ಪ್ರಯತ್ನಪಟ್ಟುದರ ಮೂಲಕ ಸಮಾಜದಲ್ಲಿ ಅನೇಕ ಕ್ರಾಂತಿಗಳನ್ನು ಹುಟ್ಟಿಸಿ ಜಯಶಾಲಿಯಾದನು.

ಶಾಂತಿ ಕದಡಿತು

ಕೊನೆಗೆ ಅರಸನಾದ ಬಿಜ್ಜಳನಿಗೂ ಮಂತ್ರಿ ಬಸವೇಶ್ವರನಿಗೂ ಭಿನ್ನಾಭಿಪ್ರಾಯವು ತಲೆದೋರಿತು. ಬಿಜ್ಜಳನು ಕೆಲವು ಶಿವಭಕ್ತರನ್ನು ಹಿಂಸಿಸಿದನು. ಅದರ ಫಲವಾಗಿ ಬಿಜ್ಜಳನು ಕೊಲೆ ಮಾಡಲ್ಪಟ್ಟನು. ಕುಮಾರ ಬಿಜ್ಜಳನಿಗೂ ಬಸವನ ಪಕ್ಷದವರಿಗೂ ಕಾದಾಟ ಹಚ್ಚಿತು. ಇದರಿಂದ ಬಸವೇಶ್ವರನ ಮನಸ್ಸಿನ ಶಾಂತಿಯು ಕದಡಿತು. ಆತನು ಕಲ್ಯಾಣವನ್ನು ಬಿಟ್ಟು, ತಿರಿಗಿ ಕಪ್ಪಡಿಯ ಸಂಗಮಕ್ಕೆ ಬಂದು ಅಲ್ಲಿ ಲಿಂಗೈಕ್ಯನಾದನು. ತನ್ನ ಕೇವಲ ೩೬ ವರ್ಷಗಳ ಅಲ್ಪಕಾಲದ ಜೀವಮಾನದಲ್ಲಿಯೇ ಅದ್ಭುತ ಕಾರ್ಯಗಳನ್ನು ಮಾಡಿ ಕೀರ್ತಿಶಾಲಿಯಾದನು.

ಮಹಾತ್ಮಾ ಬಸವೇಶ್ವರ

ಬಸವೇಶ್ವರನನ್ನು ಅನೇಕರು ಅನೇಕ ವಿಧಗಳಲ್ಲಿ ತಿಳಿಯುತ್ತಾರೆ. ಕೆಲವರು ಶಿವಾವತಾರವೆಂದು ಗೌರವಿಸುತ್ತಾರೆ; ಅವರು ಕ್ರಾಂತಿಕಾರಕನೆನ್ನುತ್ತಾರೆ; ಕೆಲವರು ಉಜ್ವಲ ರಾಜಕೀಯ ಧುರೀಣನೆಂದು ಬಹುಮಾನಿಸುತ್ತಾರೆ. ಕೆಲವರು ಕನ್ನಡದ ಉದ್ಧಾರಕನೆಂದು ಶ್ಲಾಘಿಸುತ್ತಾರೆ. ಒಟ್ಟಿನಲ್ಲಿ ಬಸವೇಶ್ವರನ ಜೀವನವು ಭವ್ಯವೂ ಭಾಸ್ವರವಾದುದೆಂದು ಸರ್ವರೂ ಒಪ್ಪತಕ್ಕುದೇ ಆಗಿದೆ.

ಬಾಗೇವಾಡಿಯಲ್ಲಿ ಬಸವ ಜಯಂತ್ಯುತ್ಸವ

ಈ ವರ್ಷ ಬಾಗೇವಾಡಿಯಲ್ಲಿ ಶ್ರೀ. ಬಸವಜಯಂತಿಯ ಉತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಬಸವಜಯಂತಿಯ ದಿನ ಮುಂಜಾನೆ ಭಜನೆ, ಅಭಿಷೇಕ ಮೊದಲಾದ ಕಾರ್ಯಕ್ರಮಗಳು ಯಥಾಸಾಂಗವಾಗಿ ನೆರವೇರಿದ ಬಳಿಕ ಮಧ್ಯಾಹ್ನಕ್ಕೆ ಬಡಬಗ್ಗರಿಗೆಲ್ಲ ಅನ್ನ ಸಂತರ್ಪಣೆಯಾಗಿ ಸಾಯಂಕಾಲಕ್ಕೆ ಬಸವೇಶ್ವರ ದೇವಾಲಯದ ಮುಂದಿನ ಬಯಲಲ್ಲಿ ಶ್ರೀ. ಕುರವತ್ತಿ ಮಾಮಲೇದಾರರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಆ ಕಾಲಕ್ಕೆ ಆರಂಭದಲ್ಲಿ ಶ್ರೀ. ಕೃಷ್ಣ ಜಹಾಗಿರದಾರರು ಒಂದೆರಡು ವಚನಗಳನ್ನು ಸುಂದರವಾಗಿ ಹಾಡಿ ತೋರಿಸಿದರು. ಅನಂತರ ಕೆಲವು ಸ್ತೋತ್ರಪರ ಗೀತಗಳನ್ನು ಇಂಪಾಗಿ ಹಾಡಿದರು. ಬಳಿಕ ಶ್ರೀ. ವೆಂಕಟರಾವ್ ನಾಯಕ ಎಂ. ಎ. ಎಲೆಲ್. ಬಿ. ಸಂಪಾದಕ 'ಕರ್ನಾಟಕ ವೈಭವ' ಇವರು 'ಬಸವೇಶ್ವರರ ಜೀವನ ಸಂದೇಶ' ಎಂಬ ವಿಷಯವನ್ನು ಕುರಿತು ಸುಮಾರು ೧। ಗಂಟೆಯ ವರೆಗೆ ವಿಚಾರಪರಿಪ್ಲುತ ಉಪನ್ಯಾಸವನ್ನು ಮಾಡಿದರು.

ಮರುದಿನ ಮುಂಜಾನೆ ಬಾಲಬಾಲಿಕೆಯರ ವಿವಿಧ ಆಟನೋಟಗಳ ಸ್ಪರ್ಧೆ—ಪಂದ್ಯಾಟಗಳು ಜರುಗಿದವು. ಸಾಯಂಕಾಲಕ್ಕೆ ಕುಸ್ತಿ ಕೀರ್ತನೆ, ನಾಟಕ ಮೊದಲಾದ ಕಾರ್ಯಕ್ರಮಗಳಾದರೂ ಹುರುಪಿನಿಂದ ನಡೆದು ಬಸವಜಯಂತಿಯ ಉತ್ಸವವು ಯಶಸ್ವಿಯಾಗಿ ಕೊನೆಗೊಂಡಿತು. ಶ್ರೀ ರಾಮಣ್ಣ ಕಲ್ಲೂರ ಇವರು ತಮ್ಮ ಮಿತ್ರವೃಂದದೊಡನೆ ಜಯಂತಿಯ ಯಶಸ್ಸಿಗಾಗಿ ಬಹಳ ದುಡಿದಿದ್ದರು.

HALFTONE & LINE
BLOCK MAKING
UNDERTAKEN

Sharada Press,
MANGALORE

A well-rounded programme of
SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit his liabours. Study them; join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.
Head Office:—UDIPI, S. India

ಭಾರತದ ಕುರಿತು
ಬ್ರಿಟನಿನ ಹೃದಯಪರಿವರ್ತನೆಯೆ?

ಹೊಸ ಮಂತ್ರಿಮಂಡಳ! ಹೊಸ ಭಾರತ ಸಚಿವರು!

ಬ್ರಿಟನಿಗೆ ಭಾರತದ ಬೆಂಬಲ ಬೇಕಾಗಿದೆ

ಈಗ ಯುರೋಪಿನ ಮಹಾಯುದ್ಧದಲ್ಲಿ ಬ್ರಿಟನು ಜೀವನ ಮರಣದ ಸಂದಿಗ್ಧದಲ್ಲಿ ಸಿಲುಕಿದೆ. ಆದ್ದರಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವದು ನ್ಯಾಯವಾಗಿದೆ, ಅದನ್ನು ಅದಕ್ಕೆ ಕೊಟ್ಟುಬಿಡುವದು ತನ್ನ ಧರ್ಮವಾಗಿದೆ ಎಂದು ಯುದ್ಧಕಾರ್ಯವನ್ನು ಮುಂದೊತ್ತುವ ಸಮಯ, ಹಿಂದೂಸ್ಥಾನದ ಕ್ರಿಯಾತ್ಮಕ ಸಹಾನುಭೂತಿಯು ತನಗೆ ಪ್ರಾಪ್ತವಾಗದಿದ್ದರೆ, ಅನರ್ಥವಾದೀತು ಎಂಬುದರಿಂದಲೋ ಏನೋ ಬ್ರಿಟನು ಕಾಂಗ್ರೆಸನ್ನು—ಅರ್ಥಾತ್ ಹಿಂದುಸ್ಥಾನವನ್ನು ಸಂತೃಪ್ತ ಪಡಿಸುವ ಮಹಾಪ್ರಯತ್ನವನ್ನು ಈಗ ಮಾಡುವಂತೆ ಕಂಡುಬರುತ್ತದೆ. ಈ ತನಕ ಹಿಂದುಸ್ಥಾನದ ಸ್ವಾತಂತ್ರ್ಯ ವಿಚಾರದೊಡನೆ ಯಾವ ಸಹಾನುಭೂತಿಯನ್ನೂ ತೋರಿಸದಿದ್ದ ಮಹನೀಯರು ಕೂಡ ಈಗ ಮಧುರ ಮಧುರವಾಗಿ ಮಾತನಾಡಲಾರಂಭಿಸಿದ್ದಾರೆ. ಬ್ರಿಟನಿನ ಹೃದಯ ಪರಿವರ್ತನೆ ಆಗುವಂತೆ ತೋರುತ್ತದೆ.

ಚೂಸ್ಟರರ ಭಾಷಣ

ಭಾರತದ ಸ್ವಾತಂತ್ರ್ಯದೊಂದಿಗೆ ಸಹಾನುಭೂತಿ ಇಲ್ಲದಿರುವದಲ್ಲಿ ಹಿಂದೆ ಇಂಡಿಯಾ ಸರಕಾರದ ಅರ್ಥಸಚಿವರಾಗಿದ್ದ ಸರ್ ಜಾರ್ಜ ಚೂಸ್ಟರರೂ ಒಬ್ಬರಾಗಿರುವರು. ಇವರು ಮೊನ್ನೆ ಮೊನ್ನೆಯ ತನಕ ಭಾರತ ವಿರೋಧವಾಗಿಯೇ ಮಾತನಾಡುತ್ತಿದ್ದರು. ಆದರೆ ಕಳೆದ ಬಾರಿ, ಪಾರ್ಲಿಮೆಂಟಿನಲ್ಲಿ ಭಾರತದ ಕುರಿತು ಚರ್ಚೆಯಾಗುತ್ತಿದ್ದಾಗ ಭಾರತದ ಸ್ವಾತಂತ್ರ್ಯ ಪ್ರಯತ್ನಗಳೊಡನೆ ಸಹಾನುಭೂತಿಯನ್ನು ತೋರಿಸಿ ಮಾತನಾಡಿದ್ದುದು ಎಲ್ಲರಿಗೆ ಆಶ್ಚರ್ಯವಾಯಿತು. "ಭಾರತದ ಜನರು ಅಪೇಕ್ಷಿಸುವಂತೆ ಸ್ವಯಂ ನಿರ್ಧಾರದ ಅಧಿಕಾರವನ್ನು ಅವರಿಗೆ ಕೊಡುವದು ಉತ್ತಮವೆಂದು ನನಗೆ ತೋರುತ್ತದೆ. ನಾನು ಶಬ್ದಗಳಿಗಾಗಿ ಹೋರಾಡುವದಿಲ್ಲ. ಭಾರತದ ಜನರು ಸಂಪೂರ್ಣ ಸ್ವಾತಂತ್ರ್ಯವನ್ನೇ ಕೇಳಲಿ, ಅಥವಾ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನೇ ಅಪೇಕ್ಷಿಸಲಿ, ಅವರು ತಮ್ಮನ್ನು ತಾವು ಆಳಿಕೊಳ್ಳಲಿಕ್ಕೆ ಸಮರ್ಥರಾಗಿರುವರೆಂದಾದರೆ, ಅವರ ಅಧಿಕಾರವನ್ನು ನಾವು ಒಂದು ಕ್ಷಣವಾದರೂ ಇಟ್ಟುಕೊಳ್ಳಲಾರೆವು. ಆದ್ದರಿಂದ ಭಾರತದ ಜನರು ಕೇಳುವದನ್ನು ಅವರಿಗೆ ಕೊಡುವದು ವಿಹಿತವಾಗಿದೆ. ಇಂಡಿಯದಲ್ಲಿ ಯಾವ ರಾಜಕೀಯ ಆಂದೋಲನವೂ ನಡೆಯುತ್ತಿಲ್ಲವೆಂಬುದರಿಂದ, ನಾವು—ಬ್ರಿಟಿಷರು—ಮೋಸ ಹೋಗಿ ಕರ್ತವ್ಯ ವಿಮುಖರಾಗಬಾರದು. ಅದರ ಬದಲಿಗೆ ಈಗ ಹಿಂದುಸ್ಥಾನದಲ್ಲಿರುವ ಶಾಂತ ವಾತಾವರಣವನ್ನೇ ಹಿಂದುಸ್ಥಾನದ ಸಮಸ್ಯೆಯನ್ನು ಬಿಡಿಸಲಿಕ್ಕೆ ಉಪಯೋಗಿಸಬೇಕು" ಎಂದು ಚೂಸ್ಟರರು ಹೇಳಿದ್ದಾರೆ.

ಚರ್ಚಿಲರು ಪ್ರಧಾನರಾದುದರ ಫಲ

ಸರ್ ಜಾರ್ಜ ಚೂಸ್ಟರರಿಗೂ ಮೀರಿ, ಮಿ. ಚರ್ಚಿಲರು ಭಾರತ ಸ್ವಾತಂತ್ರ್ಯದ ವಿರೋಧಿಗಳಾಗಿದ್ದರು. ಆದರೆ ಅವರಲ್ಲಿರುವ ಒಂದು ವಿಶೇಷತೆಯೆನಂದರೆ ಅವರು ಯಾವಾಗಲೂ ಭಾವನಾವಶರಾಗಿರುವದಿಲ್ಲ. ಕಾಲಪರಿಸ್ಥಿತಿಯನ್ನು ನೋಡಿ ಅಗತ್ಯವುಳ್ಳದ್ದನ್ನು ಮಾಡುವರು. ಹಿಂದುಸ್ಥಾನದ ಸ್ವಾತಂತ್ರ್ಯದ ವಿಷಯವಾಗಿ ಮತಭೇದವುಂಟಾಗಿ, ಬ್ರಿಟನಿನಲ್ಲಿ ಸರಕಾರದ ಬದಲಾವಣೆಯಾಗಲಿಲ್ಲ. ಮತ್ತು ಮಿ. ಚೆಂಬರಲೇನರ ಬದಲಿಗೆ ಮಿ. ಚರ್ಚಿಲರು ಪ್ರಧಾನರಾಗಲಿಲ್ಲ. ಯುರೋಪಿನ ಮಹಾಯುದ್ಧವನ್ನು ಬ್ರಿಟನಿಗೆ ಜಯಬರುವಂತೆ ಮುಂದೊತ್ತಬೇಕೆಂಬುದೇ ಬ್ರಿಟನಿನ ಗುರಿಯಾಗಿದೆ. ಮತ್ತು ಈ ಧ್ಯೇಯ ಸಾಧನೆಗಾಗಿ ಮಿ. ಚರ್ಚಿಲರು ಅಧಿಕಾರಕ್ಕೆ ಬಂದಿದ್ದಾರೆ. ಅವರು ಯುದ್ಧದಲ್ಲಿ ತಮಗೆ ಜಯವಾಗಲಿಕ್ಕೆ ಎಲ್ಲಾ ಉಪಾಯಗಳನ್ನು ಕೈಕೊಳ್ಳುವರು. ಭಾರತಕ್ಕೆ ಸ್ವರಾಜ್ಯವನ್ನು ಕೊಡುವದರಿಂದ ಯುರೋಪಿನ ಯುದ್ಧದಲ್ಲಿ ಬ್ರಿಟನು ಗೆಲ್ಲುವದೆಂದಾದರೆ, ಮಿ. ಚರ್ಚಿಲರು ಭಾರತದ ಸ್ವರಾಜ್ಯಕ್ಕೆ ವಿರೋಧ ಬರುವದಿಲ್ಲ.

ಮಿ. ಎಮರಿಯವರ ಕರ್ತವ್ಯ

ಲಾರ್ಡ ಜೆಟ್ಲಾಂಡರ ಬದಲಿಗೆ ಮಿ. ಎಮರಿಯವರು ಈಗ ಭಾರತದ ಸಚಿವರಾಗಿದ್ದಾರೆ. ಇವರು ಕನ್ಸರ್ವೆಟಿವರಾದರೂ ಪರಿಸ್ಥಿತಿಯನ್ನು ನೋಡಿ ಕರ್ತವ್ಯ ಮಾರ್ಗವನ್ನು ರೂಪಿಸಿಕೊಳ್ಳುವವರು. ಬರೀ ಎರಡು ತಿಂಗಳ ಹಿಂದೆ—'ಹಿಂದುಸ್ಥಾನವು ಸ್ವತಂತ್ರವಾಗುವ ಸ್ಥಿತಿಯನ್ನು ಮುಟ್ಟಿದೆ' ಎಂದು ಅವರು ಒಂದು ಭಾಷಣದಲ್ಲಿ ಹೇಳಿದ್ದರು. ಅಧಿಕಾರದಲ್ಲಿಲ್ಲದಾಗ ಅವರು ಹೇಳಿದ ಮಾತುಗಳನ್ನು ಅಧಿಕಾರಕ್ಕೆ ಬಂದ ಮೇಲೆ ಕಾರ್ಯರೂಪದಲ್ಲಿ ತೋರಿಸಿಕೊಡುವದು ಅವರ ಕರ್ತವ್ಯವಾಗಿದೆ. ಆದ್ದರಿಂದ ಈ ಒಂದೆರಡು ತಿಂಗಳುಗಳಲ್ಲಿ ಕಾಂಗ್ರೆಸ್ ಮತ್ತು ಬ್ರಿಟಿಷ ಸರಕಾರದೊಡನೆ ಒಡಂಬಡಿಕೆಯಾಗಲಿಕ್ಕೆ ಪುನಃ ಪ್ರಯತ್ನಗಳಾಗುವವೆಂದು ಊಹಿಸಲಿಕ್ಕೆ ಇದೆ. ಮಹಾತ್ಮಾಜಿಯವರಂತೂ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಯಾವಾಗಲೂ ಸಿದ್ಧರು! ಹೇಗಿದ್ದರೂ ಈ ಮುಂದಿನ ಒಂದೆರಡು ತಿಂಗಳುಗಳು ಬಹಳ ಮಹತ್ವದವುಗಳಾಗಿರುವವೆಂಬುದರಲ್ಲಿ ಸಂದೇಹವಿಲ್ಲ.

THE
BANK OF MANGALORE LTD.,
MANGALORE.
ESTD. 1931.

Branches:-

Mudabidri & Padubidri.

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	6½%

Interest Payable Quarterly.

Savings Bank deposit 3½% on daily balances.

[All] kinds of banking business transacted

ಇಂಗ್ಲಾಂಡಿನ ೧೯೪೦-೪೧ರ ಆಯ ವ್ಯಯ

[ಲೇಖಕರು: ಶ್ರೀ. ಕೆ. ಎಲ್. ಕೃಷ್ಣ, ಬಿ ಎ, ಬಿ. ಎಲ್. ವಕೀಲ್, ಕಾರ್ಕಳ]

ಏಪ್ರಿಲ್ ೨೩ ನೆಯಲ್ಲಿ ಇಂಗ್ಲೆಂಡಿನ ತೆರಿಗೆ ಖಾತೆಯ ಮಂತ್ರಿಗಳಾದ ಸರ್ ಜೋನ ಸ್ಯಾಮನವರು ಬರುವ ವರುಷದ ಯುದ್ಧ ಸಂಬಂಧದ ಆಯ ವ್ಯಯದ ಪಟ್ಟಿಯನ್ನು ಪಾರ್ಲಿಮೆಂಟಿನ ಮುಂದೆ ಇಟ್ಟಿರುವರು. ಟೆಲಿಫೋನಿನ ಛಾರ್ಜುಗಳನ್ನು ಶೇಕಡಾ ೧೫ ರಂತೆಯೂ (whisky) ಬಾಟ್ಲಿಗೆ ೧ ಶಿಲಿಂಗ ೯ ಪೆನ್ನಿ (ಸಾಧಾರಣ ರೂ೧ ೫ ೦) ರಂತೆಯೂ ೫೦ ಕಡ್ಡಿಗಳುಯಿರುವ ಬೆಂಕಿಪೆಟ್ಟಿಗೆಗೆ ½ ಪೆನ್ನಿ ಜಾಸ್ತಿಯಾಗಿಯೂ ಹೊರಗಿನ ದೇಶಗಳಿಗೆ ಕಳುಹಿಸುವ ಖಾಸಗಿ ಟೆಲಿಗ್ರಾಮುಗಳಿಗೆ ಶೇಕಡಾ ೨೫ರಂತೆ ಜಾಸ್ತಿಯಾಗಿಯೂ ತೆರಿಗೆಯನ್ನು ಏರಿಸುವರು. ಚಿಲ್ಲರೆ ಸಾಮಾನುಗಳನ್ನು ವ್ಯಾಪಾರ ಮಾಡುವಾಗ್ಯೆ ಸಾಮಾನುಗಳ ಕ್ರಯದ ಮೇಲೆ Purchase Tax ಎಂಬ ತೆರಿಗೆಯನ್ನು ಹಾಕಿರುವರು—ಅದಲ್ಲದೆ ವರ್ಷಾವಧಿಯಲ್ಲಿ ೧೫೦೦ರ ಪವನಿಗಿಂತ ಹೆಚ್ಚಿನ ಉತ್ಪತ್ತಿಯಿರುವವರಿಗೆ ಆದಾಯ ತೆರಿಗೆಯಲ್ಲದೆ ಒಂದು ಹೊಸ ತೆರಿಗೆಯನ್ನು (Soci Tax) ಹಾಕಲು ನಿಶ್ಚೈಸಿರುವರು. ಈ ರೀತಿ ತೆರಿಗೆಯನ್ನು ಹಾಕಿದರೂ ಈ ಯುದ್ಧದ ಖರ್ಚಿಗೆ ಬರುವ ವರ್ಷದಲ್ಲಿ ತಗಲಬಹುದಾದ ೨೬೬೭ ಮಿಲಿಯ ಪವನಿನ ಖರ್ಚಿಯಲ್ಲಿ ೧೨೩೪ ಮಿಲಿಯ ಪವನಿನ ಮೇಲೆ ಉತ್ಪತ್ತಿ ಬರಲಾರದು. ಆದುದರಿಂದ [illegible] ಹೊಸ ಸಾಲಗಳನ್ನು ಇಂಗ್ಲಾಂಡು ತೆಗೆಯಬೇಕಾಗುವುದು.

ಈ ವರೆಗೆ ಇಂಗ್ಲಾಂಡದಲ್ಲಿ ಈ ರೀತಿ ಹೆಚ್ಚಿನ ತೆರಿಗೆಯನ್ನು ಸರಕಾರದವರು ವಸೂಲು ಮಾಡಲಿಲ್ಲ. ೧೯೧೪ರ ಯುದ್ಧದಲ್ಲಿ ಸಾಧಾರಣವಾಗಿ ಪವನಿನಲ್ಲಿ ೫ ಶಿಲಿಂಗ ೬ ಪೆನ್ನಿ ಯಾ ೬ ಶಿಲಿಂಗಿಂತ ಜಾಸ್ತಿ ಆದಾಯ ತೆರಿಗೆಯಿರಲಿಲ್ಲ. ಈಗ ಪವನಿನಲ್ಲಿ ೭ ಶಿಲಿಂಗು ೬ ಪೆನ್ನಿಯಂತೆ ಆದಾಯ ತೆರಿಗೆ, ೧೯೧೮ರಲ್ಲಿ ಪವನಿನಲ್ಲಿ ಸುಪರ್ ಟೇಕ್ಸ ಸಮೇತ ಐಶ್ವರ್ಯವಂತರು ೧೦೫೬ ಅಂದರೆ ತಮ್ಮ ಆದಾಯದಲ್ಲಿ ೪೦।೨೧ನೇ ಅಂಶವನ್ನು ಕೊಡಬೇಕಿತ್ತು. ಈಗ Super tax ಸಾಧಾರಣ ಪವನಿನಲ್ಲಿ ೨೦।೧೭ರಂತೆ ವಸೂಲು ಆಗುವದು. ಮೊದಲು ೨೦೦೦ ಪವನಿಗಿಂತ ಜಾಸ್ತಿ ಆದಾಯದ ಮೇಲೆ ಮಾತ್ರ ಸುಪರ್ ಟೇಕ್ಸ್ ಇತ್ತು. ಈಗ ವರುಷ ೧ಕ್ಕೆ ೧೫೦೦ ಪವನಿಗಿಂತ ಹೆಚ್ಚಿನ ಉತ್ಪತ್ತಿಯುಳ್ಳ ವ್ಯಕ್ತಿಗಳಿಗೆ ಈ ಆದಾಯ ತೆರಿಗೆಯು ಬಾಧಿಸುತ್ತದೆ. ಈ ರೀತಿ ೬೧೪ ಮಿಲಿಯ ಪವನು ಆದಾಯ ತೆರಿಗೆಯಾಗಿ ಸಿಕ್ಕಬಹುದಾಗಿ ಮಂತ್ರಿಗಳು ಅಭಿಪ್ರಾಯಪಟ್ಟರು.

ಇಂಗ್ಲಾಂಡದಲ್ಲಿ ಈಗ ನಡೆಯುವ ಯುದ್ಧದ ಖರ್ಚಿನ ಬಗ್ಗೆ ಯಾವ ರೀತಿಯಲ್ಲಿ ಹೊಸ ತೆರಿಗೆಗಳನ್ನು ವಿಧಿಸಬಹುದು ಎಂಬ ವಿಷಯ ಹೆಚ್ಚಿನ ಚರ್ಚೆಗಳು ನಡೆಯುತ್ತಲಿವೆ. ಧೃಢಕಾಯರಾದ ಪ್ರತಿ ಒಬ್ಬ ವ್ಯಕ್ತಿಯು ಯುದ್ಧಕ್ಕೆ ಸೇರಲೇಬೇಕು. Conscription ಎಂಬ ಶಾಸನದ ಮೇರೆಗೆ ಪ್ರತಿ ಒಬ್ಬ ಪ್ರಾಯಸ್ಥ ವ್ಯಕ್ತಿಯನ್ನು ಸರಕಾರಕ್ಕೆ ಬೇಕಿ ವ್ಯಕ್ತಿಗಳನ್ನು ಅವರ ಶಕ್ತಿಯ ಮಟ್ಟಿನ ಯುದ್ಧದ ಕಾರ್ಯಗಳಿಗೆ ಸೇರುವಂತೆ ಬಲಾತ್ಕರಿಸುವ ಅಧಿಕಾರವು ಸರಕಾರಕ್ಕೆ ಪಾರ್ಲಿಮೆಂಟು ಕೊಟ್ಟಿದೆ. ಅದೇ ರೀತಿ ದೇಶದಲ್ಲಿರುವ ಐಶ್ವರ್ಯವನ್ನು ಸಹಾ ಯುದ್ಧದ ಖರ್ಚಿನ ಬಗ್ಗೆ ಶೇಖರಿಸುವರೆ ಸರಕಾರಕ್ಕೆ ಅಧಿಕಾರ ಕೊಡಬೇಕೆಂಬದಾಗಿ ಲೇಬರ್ ಪಕ್ಷದಲ್ಲಿ ಜನರು ಚರ್ಚಿಸುವರು.

ಇಂಗ್ಲಾಂಡದಲ್ಲಿ ಒಬ್ಬ ವ್ಯಕ್ತಿಯು ಸತ್ತ ನಂತರ ಅವನಿಗೆ ಇರುವ ಐಶ್ವರ್ಯವು ಸರಕಾರದವರು ನಿಶ್ಚೈಯಿಸಿದ ಮಿತಿಗಿಂತ ಹೆಚ್ಚಿದ್ದರೆ ಅದರ ಮೇಲೆ ಸರಕಾರದವರು death duties ಅಂದರೆ ಮರಣ ತೆರಿಗೆಯನ್ನ ವಸೂಲು ಮಾಡುವರು. ಆಸ್ತಿಯ ತೆರಿಗೆ Estate duty ಎಂಬ ತೆರಿಗೆಯನ್ನು ಸಹಾ ವಸೂಲು ಮಾಡುವರು. ನಮ್ಮ ದೇಶದಲ್ಲಿ ವಾರಿಸ ಸರ್ಟಿಫಿಕೇಟಿನ ಕ್ರಯ ಖರ್ಚು ಪ್ರೊಬೇಟ ಅಥವಾ letters of administration ಎಂಬ ಅಧಿಕಾರ ಪತ್ರವನ್ನು ಪಡೆಯುವ ಖರ್ಚು ಮಾತ್ರ ಈ ಮರಣ ತೆರಿಗೆ ಎಂತ ನಾವು ಹೇಳಬಹುದು. ಇಂಗ್ಲಾಂಡಿನಲ್ಲಿ ಕಳೆದ ವರ್ಷ death duties ಸಿಗಿದ ಸರಕಾರಕ್ಕೆ ೮೫ ಮಿಲಿಯ ಪವನು ಉತ್ಪತ್ತಿಯು [illegible] ತ್ರಂತಲೂ ಸ್ಟೇಂಪ ಡ್ಯೂಟಿಯಿಂದ [illegible] ಪವನು ಉತ್ಪತ್ತಿಯಿಂತಲೂ ಬರುತ್ತದೆ. ಈ ತೆರಿಗೆಯನ್ನು ಏರಿಸುವರೆ ಕೆಲವು ಈಗ ಚರ್ಚೆಯಲ್ಲಿರುವ ಕ್ರಮಗಳನ್ನು ಕೆಳಗೆ ಕಾಣಿಸಿಯದೆ.

(೧) ಒಬ್ಬ ವ್ಯಕ್ತಿಯು ಸಂಪಾದಿಸಿದ ಹಣಕ್ಕೂ ಅವನಿಗೆ ಹಿರಿಯರಿಂದ ಬಂದ ದ್ರವ್ಯಕ್ಕೂ ಕಾನೂನು ಮೇರೆಗೆ ಭೇದಯಿರಬೇಕು. ಹಿರಿಯರಿಂದ ಬಂದ ಹಣವನ್ನು ವಿಲ್‌ನಾಮೆ ಮೇರೆಗೆ ಬಿಡಲು ವ್ಯಕ್ತಿಗೆ ಹಕ್ಕಿರಬಾರದು. ಹಿರಿಯರಿಂದ ಬಂದ ಹಣಕ್ಕೆ ೩ ತಲಾಂತರಗಳ ನಂತರ (three generation) ಅದು ಸರಕಾರಕ್ಕೆ ಸೇರಬೇಕು.

(೨) ಒಬ್ಬ ವ್ಯಕ್ತಿಯು ಸಂಪಾದಿಸಿದ ಹಣವು ಮಕ್ಕಳಿಗೆ ಹೋಗಬಹುದು. ಸರಕಾರವು ಕಾನೂನು ಪ್ರಕಾರ ಇದರ ಮಿತಿಯನ್ನು ನಿಶ್ಚಯಿಸಬೇಕು. ಮಕ್ಕಳಿದ್ದಲ್ಲಿ ದೂರದ ಸಂಬಂಧಿಕರಿಗೆ ಹಕ್ಕಿರಬಾರದು. ದೂರ ಸಂಬಂಧಿಕರಿಗೆ ಹೋಗುವದಕ್ಕಿಂತ ಸರಕಾರಕ್ಕೆ ಅದು ಸಿಗಬೇಕು.

(೩) ಸಾಯುವ ೩ ವರುಷಗಳ ಮೊದಲು ಒಬ್ಬ ವ್ಯಕ್ತಿಯು ದಾನಪತ್ರಗಳ ಮುಖಾಂತರ ಧರ್ಮಸಂಸ್ಥೆಗಳಲ್ಲದೆ ಬೇರೆ ವ್ಯಕ್ತಿಗಳಿಗೆ ಕೊಟ್ಟ ಆಸ್ತಿಯ ವಿದ್ಯಮಾನ ಮಟ್ಟಿಗೆ ಇದೇ ಕಾನೂನು ಜಾರಿಯಲ್ಲಿರಬೇಕು. ಈ ದಾನಪತ್ರಗಳನ್ನು ರದ್ದುಮಾಡಲು ಸರಕಾರಕ್ಕೆ ಅಧಿಕಾರವಿರಬೇಕು.

(೪) ಕಂಪನಿಗಳ ಮೂಲಸಂಪತ್ತಿಗೆ ಮಿತಿಯಿಟ್ಟು ಈ ಮಿತಿಗೆ ಮೀರಿದ ಸಂಪತ್ತನ್ನು ತೆಗೆಯಲು ಸರಕಾರಕ್ಕೆ ಹಕ್ಕಿರಬೇಕು.

(೫) ಸರಕಾರಕ್ಕೆ ಒತ್ತಾಯದಿಂದ ವ್ಯಕ್ತಿಗಳನ್ನು ಯುದ್ಧಕ್ಕೆ ಸೇರಿಸುವ ಹಕ್ಕಿರುವಂತೆ ಒತ್ತಾಯದಿಂದ ವ್ಯಕ್ತಿಗಳ ದ್ರವ್ಯವನ್ನು ಕ್ರಮ ಪ್ರಕಾರ ತೆಗೆಯಲು ಹಕ್ಕಿರಬೇಕು.

(೬) ಈ ರೀತಿ ಜಾರಿಗೆ ಬಂದ ಕಾನೂನುಗಳಿಂದ ಜನರಲ್ಲಿ ದ್ರವ್ಯದ ಸಂಪಾದನೆಯು ಕಡಿಮೆಯಾಗಿ ಉದ್ಯಮಗಳಿಗೆ ಬೇಕಾದ ಭಂಡವಾಳವು (Capital) ಸೇರದೆ ಇದ್ದರೆ, ಸರಕಾರವು ಉದ್ಯಮಗಳಿಗೆ ಬೇಕಾದ ಸಹಾಯವನ್ನು ಮಾಡಬೇಕು. ಕೆಲವು ವೇಳೆ ತಾನೇ ಈ ಉದ್ಯಮಗಳನ್ನು ಸುರುಮಾಡಿ ನಡೆಸಬೇಕು.

ಯುದ್ಧದ ಒತ್ತಾಯದಿಂದ ಸಮಾಜವಾದದ ಮುಖ್ಯ ಸೂತ್ರಗಳನ್ನು ಗವರ್ನಮೆಂಟಿನವರು ಜಾರಿಗೆ ತರಲೇಬೇಕಾಗವುದು. ಸರ್ ಜಾನ್ ಸ್ಯಾಮನರು ಈ ರೀತಿ ತಾನು ಕಾನೂನು ಜಾರಿಗೆ ತರುವದಿಲ್ಲವೆಂಬದಾಗಿ ಜನರಿಗೆ ಭರವಸೆ ಕೊಟ್ಟರೂ ಈ ಯುದ್ಧವು ಇನ್ನು ೪—೫ ವರುಷಗಳ ವರೆಗೆ ನಡೆದರೆ ಬೇರೆ ಯಾವ ರೀತಿಯ ಮಾರ್ಗದಿಂದಲೂ ಸಾಕಷ್ಟು ದ್ರವ್ಯ ಸರಕಾರಕ್ಕೆ ಸಂಪಾದನೆ ಆಗಲಾರದು. ಕಳೆದ ೧೯೧೪—೧೯೧೮ನೇ ಯುದ್ಧದಲ್ಲಿ ಅಮೇರಿಕದವರು ಕೊಟ್ಟ ಸಾಲವು ಯುರೋಪ ದೇಶದ ರಾಜ್ಯಗಳಿಂದಲೂ ಇಂಗ್ಲಾಂಡಿನಿಂದಲೂ ವಾಪತಿ ಮಾಡಲು ಸಾಧ್ಯವಾಗಲಿಲ್ಲವಾದದರಿಂದ ಪರರಾಜ್ಯಗಳ ಸಾಲವು ಎಂದಿಗೂ ಇಂಗ್ಲಾಂಡಕ್ಕೆ ಸಿಕ್ಕಲಾರದು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿ ಗುರುತನ್ನು ಮತ್ತು "ಗೊನೊಕಿಲರ್" ಎಂಬ [illegible]

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ರೋಕಸ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಾಯಿ 4

Sole Manufacturer: Dr. D. N JASANI, Vithalbhai Patel Road, BOMABY.

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
ಹಂಪನಕಟ್ಟಾ, ಮಂಗಳೂರು

ಅಮೇರಿಕದ ಯುದ್ಧಸಿದ್ಧತೆಯೆ?

ಅಧ್ಯಕ್ಷ ರೂಸ್‌ವೆಲ್ಟರ ವಿಶೇಷ ಭಾಷಣ

ವರ್ಷಕ್ಕೆ ೫೦,೦೦೦ ವಿಮಾನಗಳು!

ರೂಸ್‌ವೆಲ್ಟರು

ಅಧ್ಯಕ್ಷ ರೂಸ್‌ವೆಲ್ಟರು ರಾಷ್ಟ್ರ ರಕ್ಷಣೆಯ ಬಗ್ಗೆ ವಿಶೇಷ ಕ್ರಮವನ್ನು ಕುರಿತು ಒಂದು ಸಂದೇಶವನ್ನು ಅಮೇರಿಕದ ಕಾಂಗ್ರೆಸಿಗೆ ಸ್ವತಃ ಬಂದು ಅರ್ಪಿಸಿದರು.

ನಗದಾಗಿ ೧೧೮೫ ಲಕ್ಷ ಡಾಲರುಗಳನ್ನೂ ಮಿಲಿಟರಿ ಸಾಮಾನುಗಳಿಗೆ ಕಾಂಟ್ರಾಕ್ಟ್ ಕೊಡುವುದಕ್ಕೆ ಅಧಿಕಾರವನ್ನೂ ಕೊಡಬೇಕೆಂದು ಕಾಂಗ್ರೆಸನ್ನು ಅವರು ಕೇಳಿದರು. ಅಮೇರಿಕದ ಹಿತಗಳ ಮೇಲೆ ಏನಾದರೂ ಹಟಾತ್ತಾಗಿ ಎದುರಾಳಿಗಳು ಬರುವುದಾದರೆ ಅದಕ್ಕಾಗಿಯೇ ಈ ವಿಶೇಷ ರೀತಿಯ ಎಚ್ಚರಿಕೆಯೆಂದು ತಿಳಿದಿದೆ.

ಅಧ್ಯಕ್ಷರು ಮುಂದುವರಿಯುತ್ತಾ ಹೀಗೆಂದರು:—

"ಬಹಳ ವಿಷಮವಾದ ಕಾಲವೊದಗಿದೆ. ಉಗ್ರರೂಪದಲ್ಲಿಯೂ ಮತ್ತು ತ್ವರಿತ ಗತಿಯಲ್ಲಿಯೂ ಈ ವಿಷಮ ಕಾಲವು ಬೆಳೆದುಬರುತ್ತಿದೆ. ಈ ಸಂದರ್ಭದಲ್ಲಿ ತಾಟಸ್ಥ್ಯ ರಾಷ್ಟ್ರಗಳೆಲ್ಲವೂ ತಮ್ಮ ತಮ್ಮ ರಕ್ಷಣೆಗಾಗಿ ಸಿದ್ಧವಾಗಬೇಕಾಗಿದೆ.

"ಯೂರೋಪಿನ ಯುದ್ಧದಿಂದ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಅಪಾಯವುಂಟಾಗುತ್ತಿದೆ. ಆಧುನಿಕ ಸೈನ್ಯಗಳು ಕಾಲವನ್ನೂ ಮತ್ತು ದೇಶವನ್ನೂ ಅತ್ಯಂತ ವೇಗದಿಂದ ಗೆದ್ದು ಬರಬಹುದಾಗಿದೆ.

ಅಧ್ಯಕ್ಷರು ಕೇಳಿದ ಹಣದಲ್ಲಿ ೮೯೬೦ ಲಕ್ಷ ಡಾಲರನ್ನು ಕೂಡಲೇ ಭೂಸೈನ್ಯ, ಜಲಸೈನ್ಯ ಮತ್ತು ವಾಯುಸೈನ್ಯಕ್ಕೆ ಉಪಯೋಗಿಸಬೇಕೆಂದೂ ೧೦೦೦ ಲಕ್ಷ ಡಾಲರುಗಳನ್ನು ಸಮಯವೊದಗಿದಾಗ ಉಪಯೋಗಿಸಬೇಕೆಂದೂ ವಿಂಗಡಿಸಿ ತಿಳಿಸಿದ್ದಾರೆ. ಇದಲ್ಲದೆ ೨೮೬೦ ಲಕ್ಷ ಡಾಲರುಗಳಷ್ಟು ಕಾಂಟ್ರಾಕ್ಟ್ ಕೊಡಲು ಅಧಿಕಾರ ಕೊಡಬೇಕೆಂದೂ ಅವರು ಕೇಳಿದ್ದಾರೆ.

ನಮ್ಮ ರಕ್ಷಣಾ ವ್ಯವಸ್ಥೆಯು ಅಭೇದ್ಯವಾಗಿರಬೇಕಾಗಿದೆ. ನಮ್ಮ ಸುರಕ್ಷತೆಯು ಪೂರ್ಣವಾಗಿರಬೇಕು. ಆದರೆ ಈಗ ನಮ್ಮ ರಕ್ಷಣಾ ವ್ಯವಸ್ಥೆಯು ಮುಂದಿನ ಬೆಳವಣಿಗೆಯನ್ನೂ ಮತ್ತು ಅಪಾಯಗಳನ್ನೂ ಎದುರಿಸಲು ಸಾಕಷ್ಟು ಇಲ್ಲ.

"ರಾಷ್ಟ್ರೀಯ ರಕ್ಷಣೆಯ ವಿಷಯದಲ್ಲಿ ಅಮೇರಿಕನರು ಸರಿಯಾಗಿ ಆಲೋಚಿಸಬೇಕು. ಅಮೇರಿಕಾಕ್ಕೆ ಸೇರಿದ ಹಿತಗಳು ಎಲ್ಲ ಕಡೆಗಳಲ್ಲಿಯೂ ಆವರಿಸಿವೆ. ಅಮೇರಿಕಾ ಖಂಡದ ರಕ್ಷಣೆಯ ದೃಷ್ಟಿಯಿಂದ ಸಂಯುಕ್ತ ಸಂಸ್ಥಾನ ಮತ್ತು ಇತರ ರಿಪಬ್ಲಿಕ್ ಸರಕಾರಗಳ ಐಕ್ಯಮತ್ಯವು ಈಗ ಉಂಟಾಗಿದೆ. ಇದಕ್ಕೆಲ್ಲಾ ಸಿದ್ಧವಾದಂತಹ ಆಯುಧಗಳು ಕೈಯಲ್ಲಿರಬೇಕು. ಪ್ರತಿ ವರ್ಷವೂ ಸಂಯುಕ್ತ ಸಂಸ್ಥಾನವು ೫೦೦೦೦ ವಿಮಾನಗಳನ್ನು ತಯಾರುಮಾಡುವಂತಾಗಬೇಕು. ರಾಷ್ಟ್ರಕ್ಕೆ ೫೦೦೦೦ ಮಿಲಿಟರಿ ವಿಮಾನಗಳು ಇರುವಂತೆ ಏರ್ಪಾಟಾಗಬೇಕು.

"ಒಳದೇಶದಲ್ಲಿಯೂ ಮತ್ತು ಹೊರದೇಶದಲ್ಲಿಯೂ ಶಾಂತಿಯಿರಬೇಕೆಂಬುದೆ ನಮ್ಮ ಉದ್ದೇಶ. ಆದರೆ ರಕ್ಷಣೆಗಾಗಿ ಕೋಟ್ಯಾಂತರ ಡಾಲರುಗಳನ್ನು ಖರ್ಚು ಮಾಡುವುದಕ್ಕೇ ಅಲ್ಲದೆ ಅಮೇರಿಕಾದ ಹಿತಗಳನ್ನು ರಕ್ಷಿಸುವುದಕ್ಕೆ ನಮ್ಮ ಸೇವೆಯನ್ನೂ ಕೊನೆಗೆ ನಮ್ಮ ಪ್ರಾಣವನ್ನೂ ಕೊಡಲು ಸಿದ್ಧರಿದ್ದೇವೆ. ಈಗ ಯುದ್ಧದಲ್ಲಿ ತೊಡಗಿರುವ ರಾಷ್ಟ್ರಗಳಲ್ಲಿ ಒಂದು ರಾಷ್ಟ್ರವು ತನ್ನ ಎದುರು ಪಕ್ಷದ ಎಲ್ಲ ರಾಷ್ಟ್ರಗಳಲ್ಲಿರುವ ವಿಮಾನಗಳ ಮೊತ್ತಕ್ಕಿಂತಲೂ ಜಾಸ್ತಿಯಾಗಿ ವಿಮಾನಗಳನ್ನು ಹೊಂದಿದೆ. ಅಷ್ಟೇ ಅಲ್ಲದೆ ಅದು ತನ್ನ ಎದುರಾಳಿಗಳಿಗಿಂತ ಬಹಳ ಹೆಚ್ಚಾಗಿ ವಾರವಾರವೂ ಕೂಡ ವಿಮಾನಗಳನ್ನು ತಯಾರಿಸಿಕೊಳ್ಳುತ್ತಿದೆ.

"ವಿದೇಶೀ ರಾಷ್ಟ್ರಗಳು ಅಮೇರಿಕಾದಿಂದ ವಿಮಾನಗಳನ್ನು ಕೊಂಡುಕೊಳ್ಳಲು ಬಂದಲ್ಲಿ ಅಂಥವರಿಗೆ ಅವುಗಳನ್ನು ಕೊಡುವುದಕ್ಕೆ ತಡಮಾಡುವುದಾಗಲೀ ಅಡಚಣೆ ಮಾಡುವುದಾಗಲೀ ಕೂಡದೆಂದು ಕಾಂಗ್ರೆಸ್ಸನ್ನು ನಾನು ಪ್ರಾರ್ಥಿಸುತ್ತೇನೆ"

ಕಾಂಗ್ರೆಸಿನ ಸಂಯುಕ್ತ ಅಧಿವೇಶನ (ಪ್ರತಿನಿಧಿ ಸಭೆ ಮತ್ತು ಸೆನೇಟ್ ಸಭೆಗಳ ಸಂಯುಕ್ತ ಅಧಿವೇಶನ) ದಲ್ಲಿಯೇ ಅಧ್ಯಕ್ಷ ರೂಸ್‌ವೆಲ್ಟರು ಮೇಲಿನ ಭಾಷಣ ಮಾಡಿದುದು. ಗ್ಯಾಲರಿಗಳೆಲ್ಲೆಲ್ಲಾ ತುಂಬಿ ಕುಳಿತಿದ್ದ ಜನರೆಲ್ಲರೂ ರೂಸ್‌ವೆಲ್ಟರ ಭಾಷಣವನ್ನು ಪ್ರಶಂಸಿಸಿ ಜಯಧ್ವನಿಗೈದರು. ವಿದೇಶೀಯರಿಗೆ ವಿಮಾನಗಳನ್ನು ಕಳುಹಿಸುವುದಕ್ಕೆ ತಡಮಾಡಕೂಡದು ಎಂದು ಹೇಳಿದಾಗಲಂತೂ ಜನರ ಹರ್ಷಧ್ವನಿ ಹೆಚ್ಚಾಗಿದ್ದಿತು"

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ!



ಜಗತ್ತಿನಲ್ಲಿ ಹೆಸರಾಂತ ಚರ್ಮರೋಗ ನಿವಾರಿಣಿ

ಜ್ಯಾಂಬಕು ಒಂದೇ ಒಂದು!

ನೀವು ಎಕ್ಸಿಮಾ, ವ್ರಣ, ವಿಷದ ಕಡಿತ ಅಥವಾ ಕಾಲಿನ ಬಾಧೆಯಿಂದ ನರಳುತ್ತಿರುವಿರಾದರೆ ಜ್ಯಾಂಬಕನ್ನು ಖಂಡಿತವಾಗಿಯೂ ಉಪಯೋಗಿಸಿರಿ. ಅದರಲ್ಲಿರುವ ಶುದ್ಧ ಮಾಡಲ್ಪಟ್ಟ ಗಿಡಮೂಲಿಕೆಗಳ ಎಣ್ಣೆಯು ಚರ್ಮದೊಳಗೆ ಎಳೆಯಲ್ಪಟ್ಟು ನೋವನ್ನೂ, ಬಾತುವಿಕೆಯನ್ನೂ ಕಡಿಮೆ ಮಾಡಿ, ವ್ರಣ, ಗಾಯಗಳಿಂದ ಬರುತ್ತಿರುವ ರಸಿಗೆಯನ್ನು ಒಣಗಿಸುತ್ತದೆ. ಗಾಯ, ಪರಚುವಿಕೆ, ಸುಟ್ಟ ಗಾಯಗಳು ಮುಂತಾದವುಗಳಿಗೂ ಉತ್ತಮ. ಜ್ಯಾಂಬಕವು ವಿಷ ಕ್ರಿಮಿಗಳನ್ನು ನಾಶಮಾಡಿ ಒಂದೂ ಗಾಯವು ಉಳಿಯದಂತೆ ಗುಣಪಡಿಸುತ್ತದೆ. ಬೆಲೆ ರೂಪಾ 1 ಮತ್ತು 2-4-0 ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಮಾರಲ್ಪಡುತ್ತದೆ.

ಏಜಂಟ್ಸ್:—ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ. ಮದ್ರಾಸು.

ಯಾವಾಗಲೂ ಜ್ಯಾಂಬಕು ಮುಲಾಮನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬಿನಿಂದ ವಿರಹಿತವಾದದ್ದು.

ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ

ಲೋಧ್ರ

ತಯಾರಿಸುವವರು:

ಕೇಸರಿ ಕುಟೀರ :: ರಾಯಪೇಟೆ :: ಮದರಾಸು.

ಸ್ಥಳೀಯ ಸ್ಟಾಕಿಸ್ಟರು:

ಪಾಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು   ಬ್ರಾಂಚ್: ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000.   ಕೊಡಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%   ನಿರಖು ಠೇವಣಾತಿ 12 ತಿಂಗಳಿಗೆ 4½

„ 6 ತಿಂಗಳಿಗೆ 4%   „ 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠ ಪ್ರಭು, ಮೆನೇಜಿಂಗ್ ಡೈರೆಕ್ಟರ್.

ವಿಜ್ಞಾನಯುಗ

ಸರ್ಪದ ಕಡಿತಕ್ಕೆ ಕೋಳಿಯ ಚಿಕಿತ್ಸೆ

ಸ್ವಲ್ಪ ಕಾಲದ ಮೊದಲು ದಾರಿ ನಡೆಯುತ್ತಾ ಇರುವ ಒಬ್ಬ ಮಾರ್ಗಸ್ಥನಿಗೆ ಒಂದು ಸರ್ಪವು ಕಡಿದಿತ್ತು. ಆದರಿಂದ ಅವನು ವಿಷವೇರಿ ಸಾಯುವ ಶೋಚನೀಯ ಸ್ಥಿತಿಯಲ್ಲಿದ್ದ. ಆಗ ಯಾರೋ ಒಬ್ಬ ಹಳ್ಳಿಗನು ಬಂದು ಹೇಳಿದಂತೆ, ಕೆಲವು ಕೋಳಿಗಳನ್ನು ತಂದು, ಅವುಗಳ ಮಲದ್ವಾರವನ್ನು ಒಂದೊಂದಾಗಿ, ಸರ್ಪ ಕಡಿತದಿಂದ ಆದ ಗಾಯಕ್ಕೆ ಒತ್ತಿ ಇಟ್ಟರು. ಕೋಳಿಗಳ ಮಲದ್ವಾರವು ಕಡಿತದ ವಿಷವನ್ನು ಹೀರುತ್ತಾ ಇತ್ತು. ಹೀಗೆ ಮನುಷ್ಯನ ಶರೀರದಲ್ಲಿದ್ದ ಸರ್ಪ ವಿಷವು ಕೋಳಿಗಳ ಶರೀರವನ್ನು ಸೇರಿ, ಅವು ಸತ್ತವು. ಅವನು ಬದುಕಿಕೊಂಡ. ಕೋಳಿಯ ಮಲದ್ವಾರಕ್ಕೆ ವಿಷವನ್ನು ಹೀರಿಕೊಳ್ಳುವ ಶಕ್ತಿ ಇದೆ ಎಂದು ಹೇಳುತ್ತಾರೆ. ಕೋಳಿಗಳ ಮಲದ್ವಾರವನ್ನು ಅವು ವಿಷವೇರಿ ಸಾಯುವ ತನಕ ಅಲ್ಲ ಸ್ವಲ್ಪ ಸ್ವಲ್ಪ ಕಾಲದ ತನಕ ವಿಷದ ಗಾಯಕ್ಕೆ ಒತ್ತಿಡುತ್ತಾ ಬಂದರೆ ಕೋಳಿಗಳೂ ಬದುಕುವವು, ಮನುಷ್ಯನೂ ಬದುಕಿಕೊಳ್ಳುವನು ಎಂದು ಗೊತ್ತಾಗಿದೆ. ಯಾಕೆಂದರೆ ಸ್ವಲ್ಪ ಸ್ವಲ್ಪ ವಿಷದಿಂದ ಕೋಳಿಗಳ ಪ್ರಾಣಾಪಹಾರವಾಗುವುದಿಲ್ಲ. ಆದರೆ ಹೀಗೆ ಮಾಡಿ ಸರ್ಪ ಕಡಿತಕ್ಕೆ ಚಿಕಿತ್ಸೆ ಮಾಡಬೇಕಾದರೆ, ಸ್ವಲ್ಪ ಸ್ವಲ್ಪವಾಗಿ ಮನುಷ್ಯನ ಶರೀರದಲ್ಲಿದ್ದ ಎಲ್ಲ ಸರ್ಪ ವಿಷವನ್ನು ಹೀರಿಕೊಳ್ಳಲಿಕ್ಕೆ ಹೆಚ್ಚು ಕೋಳಿಗಳು ಬೇಕಾಗುವವು.

ವಿಜ್ಞಾನದ ವೇದಿಯ ಮೇಲೆ ಪ್ರಾಣದಾನ

ಬೇರೆ ಬೇರೆ ತರದ ವೈಜ್ಞಾನಿಕ ಆವಿಷ್ಕಾರಗಳನ್ನೂ, ಚಿಕಿತ್ಸೋಪಾಯಗಳನ್ನೂ ಕಂಡುಹಿಡಿಯಲಿಕ್ಕೆ ತಮ್ಮ ಪ್ರಾಣಗಳನ್ನೇ ಬಲಿಕೊಟ್ಟ ಅನೇಕ ಮಂದಿ ಧೀರ ವೀರ ಸಮಾಜೋಪಕಾರಿಗಳು ಇರುತ್ತಾರೆ. ಅಂಥವರು ಪ್ರಾಣದ ಮೇಲಿನ ಮೋಹದಿಂದ ತಮ್ಮನ್ನು ತಾವು ಬಲಿಕೊಡದೆ ಇರುತಿದ್ದರೆ, ವಿಜ್ಞಾನವು ಎಷ್ಟು ಮಾತ್ರಕ್ಕೂ ಈಗಿನ ಉನ್ನತ ಸ್ಥಿತಿಗೆ ಬಂದು ಮುಟ್ಟುತ್ತಿರಲಿಲ್ಲ. ವಿಜ್ಞಾನಕ್ಕಾಗಿ ಪ್ರಾಣಕೊಟ್ಟವರಲ್ಲಿ ವಿಲಾಯತಿಯವರಷ್ಟೇ ಅಲ್ಲ, ನಮ್ಮ ದೇಶದವರೂ ಇದ್ದಾರೆಂಬುದು ಗೌರವದ ಸಂಗತಿಯಾಗಿದೆ. ಆರೇಳು ವರ್ಷಗಳ ಹಿಂದೆ ಕಲ್ಕತ್ತ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿಯು ಹೀಗೆ ತನ್ನ ಪ್ರಾಣವನ್ನು ಕೊಟ್ಟು ಅಮರನಾದನು. ಪೊಟಾಶಿಯಂ ಸ್ಯಾನೈಡ್ ಎಂಬ ಮಹಾ ಭಯಂಕರ ವಿಷವು ಇದೆ. ಅದನ್ನು ಸೇವಿಸಿದ ಒಂದೆರಡು ಕ್ಷಣಗಳಲ್ಲಿಯೇ ಮನುಷ್ಯನು ಮೃತ್ಯುಮುಖನಾಗುವನು. ಆದುದರಿಂದ ಅದು ಯಾವ ರುಚಿಯುಳ್ಳದ್ದಾಗಿದೆ ಎಂದು ಅದನ್ನು ತಿಂದು ಯಾರೂ ಹೇಳಿರಲಿಲ್ಲ. ಅದನ್ನು ಹೇಳುವುದಕ್ಕಾಗಿಯೇ ಈ ವಿದ್ಯಾರ್ಥಿ ಒಂದು ಉಪಾಯ ಹೂಡಿದ. ಅವನು ಒಂದು ಕಾಗದ ತುಂಡಿನ ಮೇಲೆ ಬೇರೆ ಬೇರೆ ರುಚಿಗಳನ್ನು ಬರೆದಿಟ್ಟು, ಈ ವಿಷವನ್ನು ತಿಂದ. ಸಾಯಬೇಕಾದರೆ ಆ ವಿಷದ ರುಚಿ ಬರೆದಿರುವ ಶಬ್ದದ ಎದುರಿಗೆ ಒಂದು ಗುರುತು ಮಾಡಿ ಸತ್ತ. ಆದರಿಂದ ಈ ವಿಷವು ಕ್ಷಾರದಂತಿರುವದೆಂದೂ ತೀಕ್ಷ್ಣವಾಗಿರುವುದೆಂದೂ ಜಗತ್ತಿಗೆ ತಿಳಿಯುವಂತಾಯಿತು. ಆತನ ಪ್ರಾಣ ಹೋದರೂ ಹೆಸರು ಚಿರಸ್ಥಾಯಿಯಾಯಿತು.

ವಾಂತಿಗೆ ಉಪಾಯ

ಯಾರಿಗಾದರೂ ವಾಂತಿಯಾಗಿ ಅದು ಪ್ರಯತ್ನಿಸಿದರೂ ನಿಲ್ಲದೆ ಇದ್ದರೆ, ತುಲಸಿ ಎಲೆಗಳ ರಸ ತೆಗೆದು ಜೇನಿನಲ್ಲಿ ಕಲಿಸಿ ತಿನ್ನುವುದರಿಂದ ತಕ್ಷಣ ನಿಲ್ಲುತ್ತದೆ. ವಾಂತಿಯನ್ನು ನಿಲ್ಲಿಸುವ ಈ ಉಪಾಯವು ಅತ್ಯಂತ ಸರಲ ಮತ್ತು ಸುಲಭವಾಗಿರುವುದು ಮಾತ್ರವಲ್ಲದೆ, ಖರ್ಚಿಲ್ಲದ್ದೂ ಆಗಿದೆ. ಅನೇಕ ಬಾರಿ ಪರೀಕ್ಷಿಸಿ, ಈ ಚಿಕಿತ್ಸಾ ವಿಧಾನವು ಉತ್ತಮ ಫಲಕಾರಿಯಾಗಿರುವುದೆಂದೂ ತಿಳಿದುಬಂದಿದೆ.

ಏಳು ವರ್ಷಗಳಿಂದ ನಿದ್ರಿಸಲಿಲ್ಲ

ವಿಲಾಯತಿಯ ಹೆಡ್ಲೋಕ ಎಂಬ ನಗರದ ಹೆನ್ರಿ ಡೇವಿಜ ಎಂಬ ೬೩ ವರ್ಷ ಪ್ರಾಯದ ಒಬ್ಬ ವ್ಯಕ್ತಿ ಎಡೆಬಿಡದೆ ಏಳು ವರ್ಷಗಳಿಂದ ನಿದ್ರಿಸಿರುವುದಿಲ್ಲ. ೧೯೧೮ರಲ್ಲಿ ಒಂದು ಗಾಯವಾಗಿದ್ದ ಕಾರಣದಿಂದ ಅವನು ಆಸ್ಪತ್ರೆಗೆ ಹೋಗಿ ಶಸ್ತ್ರಚಿಕಿತ್ಸೆ ಮಾಡಿಕೊಂಡಿದ್ದ. ಈ ಚಿಕಿತ್ಸೆಯಾದ ಸ್ವಲ್ಪ ಕಾಲದ ನಂತರ ಅವನು ಕುರುಡನಾದ. ಆದರೆ ಕುರುಡನಾದ ಎರಡು ವರ್ಷಗಳ ನಂತರ ಪುನಃ ಕಣ್ಣು ತೋರತೊಡಗಿತು. ೧೯೩೩ರಲ್ಲಿ ಅವನ ಹೆಂಡತಿ ಕಾಯಿಲೆ ಬಿದ್ದಳು. ಆಗ ಅವನು ಹಗಲೂ ರಾತ್ರಿ ಅವಳ ಆರೈಕೆ ಮಾಡುತಿದ್ದನಾದುದರಿಂದ ಬಹಳ ಕಡಿಮೆ ನಿದ್ರಿಸುತಿದ್ದ. ಒಂಭತ್ತು ತಿಂಗಳು ಕಾಯಿಲೆ ಬಿದ್ದು ಆತನ ಹೆಂಡತಿ ಸತ್ತುಹೋದಳು. ಇದಾದ ನಂತರ ಏಳು ವರ್ಷಗಳು ಕಳೆದರೂ ಅವನಿಗೆ ಒಂದು ದಿನ ಒಂದು ಕ್ಷಣವಾದರೂ ನಿದ್ದೆ ಬರಲಿಲ್ಲ. ಡೇವಿಜನ ಆರೋಗ್ಯ ಬಹಳ ಕೆಟ್ಟು, ಶರೀರದಲ್ಲಿ ಕೆಲಸ ಮಾಡುವ ಯಾವ ಶಕ್ತಿಯೂ ಇದ್ದಿಲ್ಲವಾದರೂ, ಅವನ ಮುಖದ ಮೇಲೆ ವೃದ್ಧಾಪ್ಯ ಅಥವಾ ದುಃಖದ ಯಾವ ಲಕ್ಷಣಗಳೂ ತೋರಿ ಬರುತ್ತಿರಲಿಲ್ಲ. ಅದುದರಿಂದ ದೀರ್ಘಕಾಲದ ತನಕ ಅವನಿಗೆ ನಿದ್ದೆ ಯಾಕೆ ಬರುತ್ತಿರಲಿಲ್ಲವೆಂಬುದು ವಿಜ್ಞಾನಿಗಳಿಗೆ ಒಂದು ಕುತೂಹಲದ ಸಮಸ್ಯೆಯಾಗಿ ಉಳಿದಿರುವುದು.

ವಸ್ತು ಮಾರಾಟಕ್ಕೆ ಯಂತ್ರಸಾಧನಗಳು

ಅಮೇರಿಕದ ಅಂಗಡಿಗಳಲ್ಲಿ ವಸ್ತು ಒಡವೆಗಳನ್ನು ಮಾರಲಿಕ್ಕಾಗಿಯೂ ಯಂತ್ರ ಸಾಧನಗಳನ್ನು ಉಪಯೋಗಿಸುತ್ತಾರೆ. ಇಂಥ ಕೆಲಸಗಳಿಗೆ ಬರುವ ಇದೇ ಪ್ರಕಾರದ ಸಾಧನಗಳು ಅಲ್ಲಿ ಬಳಕೆಯಲ್ಲಿರುವವು. ಇವುಗಳ ಒಂದೊಂದು ವರ್ಷದ ಸಂಪಾದನೆಯು ನಮ್ಮ ದೇಶದ ಸಾಮಾನ್ಯ ಶ್ರೀಮಂತರ ಒಟ್ಟು ಸಂಪತ್ತಿಯ ಬೆಲೆಯನ್ನು ಮೀರಿರುತ್ತದೆ. ನಾಣ್ಯಗಳನ್ನು ಮಾರುವ ಯಂತ್ರಸಾಧನಗಳು ಅಲ್ಲಿ ವರ್ಷಕ್ಕೆ ಮೂವತ್ತು ಕೋಟಿ ರೂಪಾಯಿಯ ನಾಣ್ಯಾದಿಗಳನ್ನು ಮಾರುತ್ತವೆ. ಸಿಗರೇಟು ಮಾರುವ ಯಂತ್ರಗಳು ವರ್ಷಕ್ಕೆ ಎಳೆಂಟು ಕೋಟಿ ರೂಪಾಯಿಗಳ ಸಿಗರೇಟು ಮಾರುತ್ತವೆ. ನ್ಯೂಯೋರ್ಕ ನಗರದ ಎತ್ತರದ ಮಹಡಿ ಮನೆಗಳನ್ನು ಹತ್ತಿಸಲಿಕ್ಕೂ ಇಳಿಸಲಿಕ್ಕೂ ಜನರು ದುಡ್ಡು ಕೊಡಬೇಕಾಗುತ್ತದೆ. ಇದಕ್ಕೆ ಟಿಕೇಟು ಮಾರುವ ಯಂತ್ರಗಳು ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ಟಿಕೇಟು ಮಾರುವವು. ಅಮೇರಿಕದಲ್ಲಿ ರುಮಾಲು ಮಾರುವ ಸಾವಿರ ಯಂತ್ರಗಳು ಒಂದೊಂದು ರುಮಾಲಿಗೆ ೧೦ ಸೆಂಟ್ಸಗಳಂತೆ ವರ್ಷಕ್ಕೆ ೩೦ ಲಕ್ಷದಂತೆ ರುಮಾಲುಗಳನ್ನು ಮಾರಿ ಹಣವನ್ನು ಪಡೆಯುವವು. ಕೇವಲ ನ್ಯೂಯೋರ್ಕ ನಗರ ಒಂದರಲ್ಲೇ, ಟೆಲಿಫೋನದ ಹಣವನ್ನು ವಸೂಲು ಮಾಡಲಿಕ್ಕೆ ಇಟ್ಟಿರುವ ಯಂತ್ರಗಳು ೯ ಲಕ್ಷ ಡಾಲರು ಎಂದರೆ ೩೦ ಲಕ್ಷ ರೂಪಾಯಿಗಳನ್ನು ವಸೂಲು ಮಾಡುತ್ತವೆ. ಅಲ್ಲಿ ಜೀವನ ಕ್ಷೇತ್ರದ ಪ್ರತಿಯೊಂದು ವಿಭಾಗದಲ್ಲಿ ಯಂತ್ರಸಾಧನಗಳೇ ಬಹಳ ಬಳಕೆಗೆ ಬರುತ್ತಾ ಇವೆ. ಅದ ಮಾತ್ರಕ್ಕೆ ಅಲ್ಲಿಯ ಜನರು ಇತರರಿಗಿಂತ ಸುಖಿಗಳಾಗಿರುವರೆಂದು ಹೇಳಬಹುದೆ? ಈ ಪ್ರಶ್ನೆಗೆ ವಿಜ್ಞಾನವು ಸರಿಯಾದ ಉತ್ತರವನ್ನು ಇನ್ನೂ ಕೊಟ್ಟಿರುವುದಿಲ್ಲ.

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never.
Hard Work?	—	Very Often.
Hard work and THRIFT	—	Always.

RESOURCES OF A CRORE.

Estd: 1906

CANARA BANK LIMITED.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—
K. R. GURU, Managing Director.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡಿಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೆಂಗಳೂರಿಗೆ ಹೋಗತಕ್ಕ ವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಒದಗಬಹುದಾದ ಪತ್ರ ವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯಬುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟುಗುಹಕೆಯು ನೇಮದಂತೆ ಸರಿಯಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ಖಾತರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಜಡಿಪಾ, ಇವರು ಈ ಚೂರ್ಣದಿಂದ ಯಾವ ತರದ ಅಪಾಯವೂ ಆದ್ದ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪-೦-೦ ವಿ. ಪಿ. ಅಣೆ ೮.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜೆ, S. M. C

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ

ಕೆ. ವೆಂಕಟೇಶ ಭಾಗ್ವ,
ಗಾಡಿಗೆಟ್ಟು ಬಜಾರ, ಮಂಗಳೂರು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ, ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಫಾರ್ಮಸಿ, ಕರಿಂಜೆ,
P. O. Perjdopi (ಸೌತ್ ಕೆನರಾ)

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ		
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	4—12—0	5—0—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—12—0	
,, ದುಯಂ ,, ,,	4—9—0	4—10—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	56—4—0	
,, ದಿಲ್‌ಪಸಂದ ,,	58—12—0	
ತೆಂಗಿನ ಎಣ್ಣೆ ಮುಡಿಕ್ಕೆ	3—15—0	4—0—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	4—0—0	4—8—0
ಗೋಡುಬೀಜ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	41—4—0
ಒಳ್ಳೆಮೆಣಸು ಹಂಡ್ರೆಡ್‌ವೆಯಿಟಿಗೆ	13—12—0	14—4—0

Date 24-5-1940 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 24-5-1940 [ಸಂಚಿಕೆ 21

The Bombay Life Assurance Company, Ltd.,
(Estd. 1908)

COMPARE

Your Life Assurance with any other property you possess
What is its Guaranteed Value

If you live-today-a few years more-when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age.
If you die, it provides your family with enough income for their maintenance and the education of your children.
OMBAY LIFE," offers all that is best in LIFE ASSURANCE.

1938 RECORD

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To insure or to represent it pays you to consult

KOCHIKAR BROTHERS LTD.,
MADRAS BRANCH SECRETARIES,
Bombay Life Building,
Sir Lalubhai Samaldas Road,
Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.
Car Street, Mangalore.
Visweswarapuram Circle, Bangalore City.
Post Box No. 337 Mount Road, Madras.
Gautam Nivas, Charni Road, Girgaum, Bombay No. 4.
Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಗಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI



ಶತ್ರುಗಳ ಬಾಂಬಿನ ಹೊಡೆತದಿಂದ ಪಾರಾಗಲು
ಲಂಡನಿನಲ್ಲಿರುವ ಸುರಂಗ ಮಾರ್ಗಗಳು

KANNADA ILLUSTRATED WEEKLY

ಇಂದು ನಮ್ಮ ಕರ್ತವ್ಯವಾವುದು?

ಮಹಾತ್ಮರ ಉಪದೇಶ

'ನಮ್ಮ ಕರ್ತವ್ಯ' ಎಂಬ ಶೀರ್ಷಿಕೆಯಲ್ಲಿ ಯುದ್ಧದಲ್ಲಿ ಭಾರತದ ಮನೋಭಾವವನ್ನು ತಿಳಿಸಿ ಹರಿಜನದಲ್ಲಿ ಹೀಗೆ ಬರೆದಿದ್ದಾರೆ.

ಪತ್ರಿಕಾ ಬಾತ್ಮೀದಾರರು, ಈ ಯುದ್ಧದ ಸಮಯದಲ್ಲಿ ನಾಜಿ ಆಕ್ರಮಣದ ಸಮಯದಲ್ಲಿ ಬ್ರಿಟನ್ನಿಗೆ ಸಹಾಯಮಾಡುವುದು ಭಾರತದ ಕರ್ತವ್ಯವಲ್ಲವೇ ಎಂದು ಗಾಂಧೀಜಿಯವರೊಡನೆ ಕೇಳಿದರು.

ಅದಕ್ಕೆ ಉತ್ತರವಾಗಿ ಗಾಂಧೀಜಿಯವರು ಬರೆಯುತ್ತಾ ಹೀಗೆ ತಿಳಿಸಿದ್ದಾರೆ.

"ಈ ರೀತಿಯ ಪತ್ರಗಳನೇಕವು ನನಗೆ ಬಂದಿವೆ. ಈ ಬಾತ್ಮೀದಾರರು ಒಂದು ನಿಜಸ್ಥಿತಿಯನ್ನು ಮರೆಯುತ್ತಾರೆ. ಬ್ರಿಟಿಷರ ಮನೋಭಾವವು ಅವರಿಗೆ ಗೊತ್ತಾಗಿಲ್ಲ. ಬ್ರಿಟಿಷ್ ಜನರು ತಮಗೆ ಅಧೀನವಾಗಿರುವ ರಾಷ್ಟ್ರಗಳಿಂದ ಸಹಾನುಭೂತಿಯನ್ನೇನೂ ಅಪೇಕ್ಷಿಸುವುದಿಲ್ಲ. ಏಕೆಂದರೆ ಅಧೀನ ರಾಷ್ಟ್ರಗಳಿಂದ ತಾವು ಬೇಕಾದುದನ್ನು ಪಡೆಯಲು ಬ್ರಿಟಿಷರಿಗೆ ಶಕ್ತಿಯಿದೆ. ಅವರು ವೀರರು ಮತ್ತು ಹೆಮ್ಮೆಪಡೆದವರು. ಇಂತಹ ನಾಲ್ಕಾರು ಪ್ರತಿಬಂಧಕಗಳು ಬಂದರೂ ಅವರು ಹಿಮ್ಮೆಟ್ಟುವುದಿಲ್ಲ. ಅವರೆದುರಿಗೆ ಬಂದು ನಿಲ್ಲುವ ತೊಂದರೆಗಳನ್ನೆಲ್ಲಾ ಎದುರಿಸಲು ಅವರಿಗೆ ಸಾಕಷ್ಟು ಸಾಮರ್ಥ್ಯವಿದೆ. ಯುದ್ಧದಲ್ಲಿ ಭಾರತವು ಪಾತ್ರವಹಿಸಬೇಕಾಗಿರುವುದಾದರೂ ಆ ಬಗ್ಗೆ ಅದು ಏನನ್ನೂ ಹೇಳಬೇಕಾಗಿಲ್ಲ. ಬ್ರಿಟಿಷ್ ಮಂತ್ರಿ ಮಂಡಳದ ಇಚ್ಛೆಯ ಮೇಲೆ ಭಾರತವು ಯುದ್ಧಕ್ಕೆ ಸೆಳೆಯಲ್ಪಟ್ಟಿತು. ಬ್ರಿಟಿಷ್ ಸರ್ಕಾರದ ಇಚ್ಛೆಯಂತೆ ಭಾರತದ ಸಂಪತ್ತಿನ ಉಪಯೋಗವಾಗುತ್ತಿದೆ. ಭಾರತವು ಅಧೀನ ರಾಜ್ಯ. ಈ ಅಧೀನ ರಾಜ್ಯದಿಂದ ಕಳೆದ ಮಹಾ ಯುದ್ಧದಲ್ಲಿ ಮಾಡಿದಂತೆಯೇ ಈಗಲೂ ಕೂಡಾ ಶೋಷಣೆ ಮಾಡುವರು. ಇಂತಹ ಸಂದರ್ಭದಲ್ಲಿ ಕಾಂಗ್ರೆಸು ಹೇಗೆ ತಾನೇ ಮುಂದೆ ಬರಲು ಸಾಧ್ಯ? ದೇಶದಲ್ಲಿ ಏನೊಂದು ಗಲಾಟೆಯನ್ನೆಬ್ಬಿಸದಿರುವುದೇ ಕಾಂಗ್ರೆಸು ಮಾಡಿರುವ ದೊಡ್ಡ ಸಹಾಯ. ಬ್ರಿಟನ್ನು ತೊಂದರೆಗೆ ಹಾಕದಂತೆ ನೋಡಿಕೊಳ್ಳುವುದಾಗಿ ನಾನೆಷ್ಟೋ ಬಾರಿ ಹೇಳಿದ್ದೇನೆ. ಅದು ನನ್ನ ಸತ್ಯಾಗ್ರಹದರ್ಶಕ್ಕೆ ವಿರುದ್ಧವಾದುದು. ಅದಕ್ಕಿಂತ ಮುಂದಕ್ಕೆ ಕಾಂಗ್ರೆಸು ಹೋಗಲು ಶಕ್ತಿಯಿಲ್ಲ. ಸ್ವಾತಂತ್ರ್ಯವನ್ನು [illegible] ಕಾನೂನು ಭಂಗಕ್ಕೆ ಸಿದ್ಧರಾಗುವುದು ಕಾಂಗ್ರೆಸಿನವರ ಕರ್ತವ್ಯ. ಆ ಸಿದ್ಧತೆಗಳ ಮಾರ್ಗವನ್ನು ಪ್ರಕಟಿಸಬೇಕಾಗಿದೆ. ಎಲ್ಲಾ ರಚನಾತ್ಮಕ ಕಾರ್ಯವನ್ನೂ ನಡೆಸಲಾಗುತ್ತಿದೆ. ಈ ಸಿದ್ಧತೆಯನ್ನೆಲ್ಲಾ ನಿಲ್ಲಿಸಲಾಗದು. ಕಾಂಗ್ರೆಸು ನಿಜವಾಗಿಯೂ ಅಹಿಂಸೆಯಿಂದಿದ್ದು ರಚನಾತ್ಮಕ ಕಾರ್ಯಕ್ರಮವನ್ನೆಲ್ಲಾ ನಡೆಸಿದಲ್ಲಿ ಅದಕ್ಕೆ ಸ್ವಾತಂತ್ರ್ಯ ದೊರಕದೆ ಇರುವುದಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಭಾರತವು ಬ್ರಿಟನ್ನಿಗೆ ಯಾವ ರೀತಿ ಸಹಾಯಮಾಡಬಹುದೆಂಬುದನ್ನು ನಿರ್ಣಯಿಸುವ ಕಾಲ ಬರುವುದು. [illegible]

ಸುತ್ತಾ ಬ್ರಿಟನ್ನು ತನ್ನ ಉದ್ದೇಶ ಸಾಧನೆಗೇ ಭಾರತವನ್ನು ಉಪಯೋಗಿಸಿಕೊಳ್ಳುತ್ತಿದೆ. ನಾನು ಸೂಚಿಸಿದಂತಹ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯು ಎಲ್ಲ ತೊಂದರೆಗೂ ನಿವಾರಣೆಯಂತಿದೆ. ಆದರೆ ಭಾರತದ ಭವಿಷ್ಯದ ಬಗ್ಗೆ ಬ್ರಿಟನ್ನಿನ [illegible] ದರೆ. ಆದರೆ ಅದೇ ತೊಂದರೆಯೆಂದು ಬ್ರಿಟಿಷರು ತಿಳಿಯುವುದಾದರೆ ಕಾಂಗ್ರೆಸ್ ಆತ್ಮ ನಿರ್ಣಯದ ಹಕ್ಕಿಗಾಗಿ ಕಾಯಬೇಕಾಗುವುದು. ಕಾನೂನು ಭಂಗವನ್ನು ಏನೋ ನೆವನದಿಂದ ಆರಂಭಿಸಿಲ್ಲವೆಂದು ನನ್ನ ಮೇಲೆ ಆಕ್ಷೇಪಣೆ ಬರುತ್ತದೆ. ನಾನು ಇನ್ನೂ [illegible] ಕಾಯುತ್ತಿದ್ದೇನೆ. ಹೊರಗಿನ ಒತ್ತಾಯದಿಂದ ನಾನು ಕಾನೂನು ಭಂಗ ನಡೆಸಲಾರೆ. ಕಾಂಗ್ರೆಸ್ಸಿಗರಲ್ಲಿರುವ ಹಿಂಸಾ ಭಾವನೆ ಹೋಗಬೇಕು. ಅಹಿಂಸೆಯಿದ್ದರೆ ಗಂಟೆಗಳಲ್ಲಿಯೇ ಸ್ವರಾಜ್ಯ ಸಿಗುತ್ತಿತ್ತು. ನಾವು ಆಕ್ಷೇಪಣೆ ಮಾಡುವ ಕಾಲ [illegible] ಅಸ್ತ್ರದಿಂದಲೇ [illegible]

ನಿಮ್ಮ ಇಡೀ ಕುಟುಂಬಕ್ಕೆ ಆರೋಗ್ಯ ಮತ್ತು ಬಲವನ್ನೀಯುವುದು!

ನಿಮ್ಮ ಕುಟುಂಬದ ಸೌಖ್ಯ ಆರೋಗ್ಯ ಮತ್ತು ಬಲ ಹಾಗೂ ನವಚೇತನವು ನಿಮ್ಮ ತಕ್ಕುದಾದ ಪೋಷಣೆಯ ಮೇಲೆ ಹೊಂದಿಕೊಂಡಿದೆ. ಆದಕಾರಣ ನಿಮ್ಮ ಕುಟುಂಬದ ಶಕ್ತಿಯುತವಾದ ಆರೋಗ್ಯವನ್ನು ಭದ್ರಪಡಿಸಲು ಯೋಗ್ಯವೂ ಉಚಿತವೂ ಆದ ಪೋಷಣೆಯನ್ನೀಯಿರಿ.

'ಓವಲ್ಟಿನ್' ಎಂಬ ಶ್ರೇಷ್ಠವಾದ ಶಕ್ತಿವರ್ಧಕ ಆಹಾರ ಪಾನಕವು, ದೇಹಕ್ಕೆ ಸಂಪೂರ್ಣವಾಗಿ ತಕ್ಕುದಾದ ಪೋಷಣೆಯನ್ನೀಯುವುದು. ಇದು ಪ್ರಕೃತಿಯ ಸಂಪನ್ನವಾದ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಿದುದಾಗಿರುತ್ತದೆ—ಮಾಗಿ ನೆನೆಹಾಕಿ ಹುರಿದ ಬಾರ್ಲಿ, ದನದ ಹಾಲು ಮತ್ತು ನೈಸರ್ಗಿಕ ಶಕ್ತಿವರ್ಧಕ ವಿಟಮಿನ್ ಮತ್ತು ಫೊಸ್ಫೆಟೈಡ್ಸ್‌ಗಳಿಂದ ಕೂಡಿದೆ. ಪ್ರತೀ ದಿನವೂ ಸೇವಿಸುವ ಅತ್ಯಂತ ರುಚಿಕರವಾದ ಒಂದು ಕಪ್ಪು "ಓವಲ್ಟಿನ್" ನಿಮ್ಮನ್ನೂ ನಿಮ್ಮ ಕುಟುಂಬವನ್ನು ಚಿರಕಾಲದ ಉತ್ತಮ ಆರೋಗ್ಯದಲ್ಲಿರಿಸುವುದು. "ಓವಲ್ಟಿನ್"ನ್ನು ಉಪಯೋಗಿಸಲು ಪ್ರಾರಂಭಿಸಿರಿ—[illegible] ಇದರಿಂದ ನಿಮ್ಮ [illegible] ರೀತಿಯ ಪ್ರಯೋಜನವು [illegible]

ಎಲ್ಲ ಕಮಿಸ್ಸರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು:-

ಜೇಮ್ಸ್‌ರೈಟ್ ಲಿಮಿಟೆಡ್ 149, ಬ್ರೋಡ್‌ವೇ, ಮದ್ರಾಸು.

ಬೊಂಬೈ, ಕಲ್ಕತ್ತಾ ಹಾಗೂ ಕರಾಚಿಯಲ್ಲಿದೆ

'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ಆಹಾರಪಾನೀಯ

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ್ಯ ಬಲೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV.116'39

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

31—5—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೩೧—೫—೧೯೪೦

ಹಿಂದಿನವರು ಹಾಡಿದನ್ನೇ ಇಂದಿನವರೂ ಹಾಡುತ್ತಾರೆ!

ಭಾರತದ ಸಮಸ್ಯೆಯ ಕುರಿತು ಭಾರತ ಸಚಿವರ ಅಭಿಪ್ರಾಯ

ಕಳೆದ ವಾರ ಸೇರಿದ ಪಾರ್ಲಿಮೆಂಟ್ ಸಭೆಯಲ್ಲಿ ಭಾರತ ಸಚಿವರಾದ ಎಮೆರಿಯವರೊಡನೆ, ಮಿ| ವೆಜ್‌ವುಡ್ ಬೆನ್ನರೂ, ಮಿ| ಹಾರ್ವಿಯವರೂ ಭಾರತದ ಸಮಸ್ಯೆಯ ಕುರಿತು ಅಭಿಪ್ರಾಯವೇನೆಂದು ಪ್ರಶ್ನೆಹಾಕಿದಾಗ ಮಿ| ಎಮೆರಿಯವರು ಈ ಸಾರಾಂಶದ ಹೇಳಿಕೆಯನ್ನು ಕೊಟ್ಟರು

'ಭಾರತವು ಬ್ರಿಟಿಷ್ ರಾಜ್ಯದಲ್ಲಿ ಸಮಾನ ಸ್ವಾತಂತ್ರ್ಯದ ಭಾಗವನ್ನು ಪಡೆಯುವುದೇ ನಮ್ಮ ನೀತಿಯಾಗಿದೆ ಭಾರತದ ರಾಜ್ಯಘಟನೆಯನ್ನು ರೂಪುಗೊಳಿಸುವಲ್ಲಿ ಪ್ರಮುಖ ಭಾಗವನ್ನು ಭಾರತೀಯರೇ ವಹಿಸಬೇಕು ೧೯೩೫ನೇ ಇಂಡಿಯಾ ಆಕ್ಟಿನ ಯೋಜನೆಗಳನ್ನು ಪುನರ್ವಿಮರ್ಶಿಸುವ ಅವಕಾಶವಿದೆ ವಿಚಾರವಿನಿಮಯ ಮಾಡಿಕೊಂಡು ನಾವು ಇತ್ಯರ್ಥಕ್ಕೆ ಬರಬೇಕಲ್ಲದೆ, ನಾವು ಹೇಳಿದಂತೆ ಕೇಳಬೇಕೆನ್ನುವ ಹಠವಿಲ್ಲ. ಎಲ್ಲಾ ಜಾತಿ ಮತ್ತು ಹಿತಗಳ ನ್ಯಾಯವಾದ ಹಕ್ಕುಗಳನ್ನು ವಿಚಾರಿಸಿ ಯೋಗ್ಯ ಒಪ್ಪಂದಕ್ಕೆ ಬೇಗನೇ ಬರಬೇಕೆಂಬ ಅಭಿಪ್ರಾಯವಲ್ಲದೆ ತಡೆಮಾಡುವ ಇಚ್ಛೆಯಿಲ್ಲ ಇಂದಿನ ಭಾರತದಸಮಸ್ಯೆ ಈಗ ಇರುವ ಭಿನ್ನಾಭಿಪ್ರಾಯಗಳಿಂದ ಉಂಟಾಗಿದೆ ಈ ಭಿನ್ನಾಭಿಪ್ರಾಯಗಳನ್ನು ಸರಿಗೊಳಿಸಬಹುದು. ಹಾಗೆ ಸರಿಗೊಳಿಸಿ ತಾತ್ಕಾಲಿಕವಾದ ಒಪ್ಪಂದವನ್ನು ಮಾಡಬಹುದು. ಹಾಗೆ ಮಾಡಿದರೆ ಪ್ರಾಂತಗಳಲ್ಲಿ ಮಂತ್ರಿಗಳು ಪುನಃ ಅಧಿಕಾರ ಸ್ವೀಕಾರ ಮಾಡುವರು ಭಾರತದ ಪ್ರತಿನಿಧಿಗಳಾದ ದೊಡ್ಡ ಮನುಷ್ಯರನ್ನು ವೈಸರಾಯರ ಕಾರ್ಯಕಾರೀ ಕೌನ್ಸಿಲಿನ ಸದಸ್ಯರಾಗಿ ಮಾಡಬಹುದು. ಹೀಗೆ ಮಾಡಿದರೆ ಮುಂದಿನ ತೀರ್ಮಾನಕ್ಕೆ ಅನುಕೂಲತೆಯನ್ನುಂಟುಮಾಡಿದಂತಾಗುತ್ತದೆ

'ಭಾರತವು ಮಿತ್ರರಾಷ್ಟ್ರಗಳಿಗೆ ಸಹಾಯ ಸಹಾನುಭೂತಿಯನ್ನು ತೋರಿಸಿದೆ. ಭಾರತದ ದೊಡ್ಡ ದೊಡ್ಡ ರಾಜಕೀಯ ಪಂಗಡದವರು ಒಟ್ಟಾಗಿ ಸೇರಿ ಒಂದು ಒಪ್ಪಂದಕ್ಕೆ ಒಗ್ಗಟ್ಟಿನ ಕಾರ್ಯದಲ್ಲಿ ತೊಡಗಬೇಕು ವೈಸರಾಯರೂ ಎಲ್ಲಾ ಪಕ್ಷಗಳನ್ನು ಒಟ್ಟಿಗೆ ತರಲು ಯತ್ನಿಸುವರು'

ಭಾರತ ಸಚಿವರಿಗೆ ಧುರೀಣರ ಉತ್ತರ!

ಗೌರವಯುತವಾದ ಒಪ್ಪಂದಕ್ಕೆ ನಾನು ಸದಾ ಸಿದ್ಧನಿದ್ದೇನೆ

ಎಮೆರಿಯವರ ಹೇಳಿಕೆ ಮಹಾತ್ಮರ ಉತ್ತರ

ಎಮೆರಿಯವರ ಹೇಳಿಕೆಯ ಕುರಿತು ನಿಮ್ಮ ಅಭಿಪ್ರಾಯವೇನೆಂದು ಪತ್ರಿಕಾ ಪ್ರತಿನಿಧಿಯು ಮಹಾತ್ಮರನ್ನು ಪ್ರಶ್ನಿಸಲು ಅವರು ಹೀಗೆಂದರು "ಗೌರವಯುತವಾದ ಮತ್ತು ಶಾಂತಿಕರವಾದ ಒಪ್ಪಂದಕ್ಕೆ ನನ್ನ ಸಾಧ್ಯವಾದುದನ್ನೆಲ್ಲಾ ಮಾಡಲು ಸದಾ ಸಿದ್ಧನಿದ್ದೇನೆ—ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ತಾಸು ತಾಸಿಗ ಕ್ರೂರ ಹಿಂಸೆಗಳಾಗುತ್ತಿರುವ ಈ ಕಾಲದಲ್ಲಿ ಶಾಂತಿಯಿಂದಿರುವ ಮನೆಗಳು ಬಾಂಬು ಗುಂಡುಗಳ ಬಾಯಿಗೆ ಬಲಿಯಾಗುತ್ತಿರುವಲ್ಲಿ ಹೆಚ್ಚಿಗೆ ಸಾರ್ವಜನಿಕವಾಗಿ ಯಾವ ಅಭಿಪ್ರಾಯವನ್ನೂ ಹೇಳಲಾರೆ"

ಬ್ರಿಟಿಷ್ ಸರಕಾರಕ್ಕೆ ನೆಹರುಗಳ ಸೂಚನೆ

"ಭಾರತ ಸಚಿವರು ಬಹಳ ಸಮಾಧಾನಕರವಾದ ರೀತಿಯಲ್ಲಿ ಮಾತನಾಡಿದ್ದಾರೆ ಆದರೆ ಅವರ ಮಾತಿನ ತಿರುಳು ಭಾರತದ ಅದವಾ ಯೂರೋಪಿನ ನಿಜಸ್ಥಿತಿಗೆ ಸರಿಯಾಗಿಲ್ಲ" ಹೀಗೆಂದು ಪಂಡಿತ ನೆಹರುಗಳು ಎಮೆರಿಯವರ ಹೇಳಿಕೆಯ ಕುರಿತು ಒಂದು ಪ್ರಕಟಣೆ ಕೊಟ್ಟಿದ್ದಾರೆ

ಅದರ ವಿವರ ಹೀಗಿದೆ :

"ಇಂದಿನ ರಾಜ್ಯಘಟನೆಯನ್ನು ಸುಧಾರಿಸುವುದಾಗಿ ಹೇಳುವ ಎಮೆರಿಯವರ ಮಾತು ಈ ಸಮಯಕ್ಕೆ ಹಳೆಯದಾಗಿದೆ ತಾತ್ಕಾಲಿಕವಾಗಿ ಅಲ್ಪಸ್ವಲ್ಪ ಕೊಡುವುದಾಗಿ ಹೇಳುವುದರಿಂದ ಪ್ರಯೋಜನವಿಲ್ಲ ಭಾರತದ ಉದ್ಧಾರವನ್ನು ತಾವೇ ಮಾಡುವವರೆಂಬ ಹೆಮ್ಮೆಯನ್ನು ಬ್ರಿಟಿಷರು ಬಿಟ್ಟು ಬಿಡಬೇಕು ಭಾರತದ ಭವಿಷ್ಯತ್ತನ್ನು ರೂಪಿಸುವುದರಲ್ಲಿ ಭಾರತೀಯರಿಗೇ ಪೂರ್ಣಾಧಿಕಾರವಿರುವುದೆಂಬುದನ್ನು ಒಪ್ಪಿಕೊಳ್ಳಬೇಕು ಇಂದಿನ ಪ್ರಪಂಚದ ಪರಿಸ್ಥಿತಿಯನ್ನೂ ಅದರಿಂದಾಗಿ ಭಾರತದ ಮೇಲೆ ಆಗುವ ಪರಿಣಾಮವನ್ನು ನಾವು ಚೆನ್ನಾಗಿ ತಿಳಿದಿದ್ದೇವೆ ಬ್ರಿಟಿಷ್ ಸರಕಾರವೂ ನಮ್ಮಂತೆಯೇ ಇದನ್ನು ತಿಳಿದು ರಾಷ್ಟ್ರದ ಮೇಲೆ ತಮ್ಮ ಆಳ್ವಿಕೆಯ ಭಾವನೆಗಳನ್ನು ಬಿಟ್ಟು ಬಿಡಬೇಕು.

"ಇಂಗ್ಲೆಂಡು ಭಯಂಕರವಾದ ಸಂಕಷ್ಟದಲ್ಲಿ ಬಿದ್ದಿದೆ. ಇಂದು ಅದರ ಉಪಯೋಗ ಮಾಡಿಕೊಳ್ಳುವುದು ಗೌರವಕರವಲ್ಲ ನಾವು ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಲು ಹೊರಟಿದ್ದೇವೆ ಯುದ್ಧವು ಇಂಗ್ಲೆಂಡಿಗೆ ವಿಷಮವಾಗುತ್ತಿದೆಯೆಂಬುದರಿಂದ ನಮ್ಮ ಧ್ಯೇಯವನ್ನು ನಾವು ಬಿಟ್ಟು ಬಿಡಲಾರೆವು

"ಸತ್ಯಾಗ್ರಹವನ್ನು ಆರಂಭಿಸಬೇಕೆಂಬ ವಿಷಯ ರಾಮಗಢ ಕಾಂಗ್ರೆಸ್ ತಿಳಿಸಿದೆ ಸತ್ಯಾಗ್ರಹದ ಆರಂಭವು ಪರಿಸ್ಥಿತಿಯನ್ನು ಹೊಂದಿಕೊಂಡಿದೆ ಸತ್ಯಾಗ್ರಹವೂ ಕೂಡಲೇ ಬೇಡವೆಂಬುದರಿಂದ, ಯೂರೋಪಿನ ಯುದ್ಧವು ಕೊನೆಗೊಳ್ಳುವ ತನಕ ಮುಂದುವರಿಸಲಾಗುವುದೆಂಬ ಅರ್ಥವಲ್ಲ. ಸತ್ಯಾಗ್ರಹವು ಬ್ರಿಟಿಷ್ ಸರಕಾರವು ತೋರಿಸುವ ಕಾರ್ಯನೀತಿಗಳನ್ನನುಸರಿಸಿದೆ ಆದರೆ ದೀರ್ಘಕಾಲ ಇಂದಿನ ಸ್ಥಿತಿಯು ಹೀಗೆಯೇ ಇರಲಾರದು."

ರಾಷ್ಟ್ರಪತಿಗಳ ಅಭಿಮತ

ಎಮೆರಿಯವರ ಹೇಳಿಕೆಯ ಕುರಿತು ಪತ್ರಿಕಾಪ್ರತಿನಿಧಿಯೊಡನೆ ರಾಷ್ಟ್ರಪತಿ ಆಜಾದರು ಹೇಳುತ್ತಾ "ಭಾರತದ ಕುರಿತು ಬ್ರಿಟಿಷಮಂತ್ರಿಮಂಡಳದ ದೃಷ್ಟಿಕೋನವು ಒಂದಿಷ್ಟು ವ್ಯತ್ಯಾಸ ಹೊಂದದಿರುವುದು ವಿಷಾದಕರವಾಗಿದೆ ಮಾತಿನಲ್ಲಿಯೂ ಅಭಿಪ್ರಾಯದಲ್ಲಿಯೂ ಇಂದಿನ ಭಾರತ ಸಚಿವರು ಅವರ ಹಿಂದಿನವರು ಹಾಡಿದ ರಾಗವನ್ನೇ ಇಂದಿನವರೂ ಹಾಡುತ್ತಿದ್ದಾರೆ." ಎಂದರು.

ಇಂದಿನ ಮಕ್ಕಳೇ ಮುಂದಿನ ಜನಾಂಗ!

ಮುಂದಿನ ಜನಾಂಗಕ್ಕೆ ವಿಜ್ಞಾನವೇ ನಿಧಿ!!

ಲಘುವಿಜ್ಞಾನ

6ನೇ 7ನೇ 8ನೇ ತರಗತಿಗಳಿಗೆ

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಶ್ರೀ ಎಸ್ ರಾಮಕೃಷ್ಣಾಚಾರ್ ಬಿ ಎ ಎಲ್ ಟಿ

ಇವರಿಂದ ವಿರಚಿತವಾದುದು.

ಹಳ್ಳಿಯ ಶಾಲೆಗಳಲ್ಲೂ ಮಾಡಿತೋರಿಸಲು ಸುಲಭವಾಗುವಂತಹ ಪ್ರಯೋಗಗಳನ್ನು ಒಳಗೊಂಡಿವೆ

ಸಚಿತ್ರವಾದ ವಿವರಣೆಗಳನ್ನೂ ಕೊಡಲಾಗಿದೆ.

ಬಡ ವಿದ್ಯಾರ್ಥಿಗಳು ಪಡಕೊಳ್ಳಲು ಸಾಧ್ಯವಾಗುವಂತೆ ಕ್ರಯವು ಅತ್ಯಂತ ಕಡಿಮೆಯಾಗಿರಿಸಿದೆ!

ಜೂನ್ ಮೊದಲನೆಯ ವಾರದಲ್ಲಿ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

ತಾರೀಖು 31—5—1940

ಹಾಡಿನ ಪಲ್ಲವಿಯೊಂದೇ!

ಯೂರೋಪಿನ ಮಹಾಯುದ್ಧದ ಪರಿಣಾಮವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪರಿವರ್ತನೆಯುಂಟಾಗಲು, ಕೂಲಿಕಾರರ ಪಕ್ಷದವರ ಪ್ರಾತಿನಿಧ್ಯವು ಮಂತ್ರಿಮಂಡಲದಲ್ಲಿ ಅಧಿಕವಾಗಿರುವ ಕಾರಣದಿಂದಲೂ, ಭಾರತ ಸಚಿವರಾಗಿ, ಭಾರತದ ಸ್ವಾತಂತ್ರ್ಯದ ವಿಷಯ ಸಹಾನುಭೂತಿಯನ್ನು ತೋರಿಸುತ್ತಿದ್ದ ಎಮೆರಿಯವರು ನೇಮಿಸಲ್ಪಟ್ಟ ನಿಮಿತ್ತವಾಗಿಯೂ, ಮುಂದಕ್ಕೆ ಭಾರತದ ಪರಿಸ್ಥಿತಿಯು ಸುಧಾರಣೆ ಹೊಂದುವ ಶುಭ ಚಿಹ್ನೆಗಳಿವೆಯೆಂದು ಹಲವರು ಆಶಿಸಿದ್ದರು. ಭಾರತದ ಬಗ್ಗೆ ಸದಭಿಪ್ರಾಯವುಳ್ಳ ಐರೋಪ್ಯರೂ ಹಾಗೆಂದು ಅಂದಿದ್ದರು. ಭಾರತದ ಪತ್ರಿಕೆಗಳೂ ಹೆಚ್ಚಿನ ಸಂತೋಷವನ್ನೇ ತೋರ್ಪಡಿಸಿದ್ದವು. ಹೀಗೆ ಜನಮತವು ಭಾರತ ಸಚಿವರಾಗಿ ನಿಯುಕ್ತರಾದ ಎಮೆರಿಯವರ ಕಡೆಗೆ ಆಶಾಮಯವಾಗಿ ಹರಿದಿತ್ತು. ಭಾರತ ಸ್ವಾತಂತ್ರ್ಯದ ಬಗ್ಗೆ ಉಗ್ರರಾದ ಲಾರ್ಡ್ ಜೆಟ್ಲೆಂಡರಂತಹರ ಕಾಲದಲ್ಲಿ ವಿಮುಖವಾದ ಭಾರತ ಮತ್ತು ಬ್ರಿಟನುಗಳ ಸಂಬಂಧವು ತಿರುಗಿ ಸುಮುಖವಾಗಿ ಉಭಯತರಿಗೂ ಕ್ಷೇಮಸಮಾಧಾನಗಳಾಗಬಹುದೇ ಎಂಬ ಕುತೂಹಲವೂ ಹಲವರಲ್ಲಿ ಹೆಚ್ಚಿತ್ತು.

ಮೊನ್ನೆ ಪಾರ್ಲಿಮೆಂಟ್ ಸಭೆಯಲ್ಲಿ ವೆಜ್‌ವುಡ್ ಬೆನ್ನರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಹೊಸ ಭಾರತ ಸಚಿವರಾದ ಎಮೆರಿಯವರು ತಮ್ಮ ಹೃದ್ಗತವನ್ನು ಸ್ಪಷ್ಟಪಡಿಸಿದ್ದಾರೆ. ಅವರ ಮಾತು ಜೆಟ್ಲೆಂಡರ ಮಾತಿನಂತೆ ಕಟುವಾಗಿಯೂ ತೀಕ್ಷ್ಣವಾಗಿಯೂ ಇರಲಿಲ್ಲವೆಂಬುದೇನೋ ನಿಜ; ಆದರೆ ವಿಚಾರಮಾಡಿ ನೋಡುವವರಿಗೆ ಇವರ ಈ ಸೌಮ್ಯವಾದ ನುಡಿಯಲ್ಲಿಯೂ ಇರುವ ಅಭಿಪ್ರಾಯವು ಜೆಟ್ಲೆಂಡರ ಅಭಿಪ್ರಾಯಕ್ಕಿಂತ ಹೆಚ್ಚಿನ ಫಲಕಾರಿಯಲ್ಲವೆಂದು ತಿಳಿಯದಿರದು. ಆದ ಕಾರಣವೇ ರಾಷ್ಟ್ರದ ಮುಖಂಡರು ಹೊಸ ಭಾರತ ಸಚಿವರ ಹೇಳಿಕೆಯ ಕುರಿತು ವಿಷಾದವನ್ನು ವ್ಯಕ್ತಪಡಿಸಿ ಪ್ರಕಟಣೆಗಳನ್ನು ಕೊಟ್ಟಿರುತ್ತಾರೆ. ರಾಷ್ಟ್ರಪತಿ ಆಜಾದರು ತಮ್ಮ ಚಿಕ್ಕದಾದ ಹೇಳಿಕೆಯಲ್ಲಿ ಹಿಂದಿನವರಂತೆಯೇ ಇಂದಿನವರೂ ಹೇಳುತ್ತಿದ್ದಾರೆಂದು ತಿಳಿಸಿ 'ಹಾಡಿನ ಪಲ್ಲವಿಯೊಂದೇ' ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಎಮೆರಿಯವರು ೧೯೩೫ನೆಯ ರಾಜ್ಯಘಟನೆಯನ್ನು ಸುಧಾರಿಸಲಾಗುವುದೆಂದು ತಿಳಿಸಿದ್ದಾರೆ. ಮಾತ್ರವಲ್ಲದೆ ಭಾರತದ ಪಕ್ಷಗಳನ್ನು [illegible] ಮಾಡುವುದಲ್ಲದೇ ಏನೂ ಸಮಾಧಾನವಾಗುವಂತೆ ಹೇಳಿದ್ದಾರೆ. ಈ ಮಾತುಗಳಲ್ಲಿ ವಿಶೇಷವಾದ ಯಾವ ಪ್ರಯೋಜನವೂ ತೋರುವುದಿಲ್ಲ. ೧೯೩೫ನೆಯ ರಾಜ್ಯಘಟನೆಯನ್ನು ಬದಲಾಯಿಸದೆ ಸರಕಾರವನ್ನು ನಡೆಸುವುದು ಸಾಧ್ಯವಿಲ್ಲವೆಂಬುದನ್ನು ಕಾಂಗ್ರೆಸ್ಸೇ ಸ್ಪಷ್ಟಪಡಿಸಿ ತೋರಿಸಿದೆ. 'ಡಿಕ್ಲೇರಶನ್' ಮಾಡುವ ಕಾಲವು ಇಂದು ಕಳೆದುಹೋದುದರಿಂದ, "ಡಿಕ್ಲೇರಶನ್" ಮಾಡುವ ಮನಸ್ಸಿಲ್ಲವೆಂದಮಾತ್ರಕ್ಕೆ ಬ್ರಿಟಿಷ್ ಸರಕಾರವು ಯಾವ ರೀತಿಯಲ್ಲಿ ಭಾರತದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ಇಚ್ಛಿಸುತ್ತಿದೆಯೆಂದು ಹೇಳಿದ ಹಾಗೆ ಆಗಲಿಲ್ಲ. ಯಾವುದು ಬ್ರಿಟಿಷ್ ಸರಕಾರದ ಕೈಮೀರಿಹೋಗಿದೆಯೋ ಅದನ್ನೆನ್ನು ಮಾತ್ರ ಸ್ಪಷ್ಟವಾಣಿಯಲ್ಲಿ ಭಾರತ ಸಚಿವರು ತಿಳಿಸಿರುವರಲ್ಲದೆ, ಬ್ರಿಟಿಷ್ ಸರಕಾರದ ಅಧೀನದಲ್ಲಿರುವ ಮುಂದಿನ ಯಾವುದೇ ರೀತಿಯ ವ್ಯವಹಾರದ ಕುರಿತಾಗಲಿ, ಭಾರತ ಬ್ರಿಟನುಗಳ ಮಧುರ ಸಂಬಂಧವನ್ನು ಬೆಳಸಲು, ಅತ್ಯವಶ್ಯವಾದ ಭಾರತಕ್ಕೆ ಯಾವ ರೂಪದ ಸ್ವಾತಂತ್ರ್ಯವು ಕೊಡಲಾಗುವುದೆಂಬ ವಿಚಾರವಾಗಿಯಾಗಲಿ ಏನೊಂದೂ ಮಾತು ಹೇಳಿರುವುದಿಲ್ಲ. ಭಾರತವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಾನತೆಯ ಭಾಗವಹಿಸುವುದೇ ಬ್ರಿಟನಿನ ಧ್ಯೇಯವೆಂಬಂತಹ ಆಶಾಮಯವಾದ ಹೇಳಿಕೆಯಿಂದ ಇಂದು ಭಾರತೀಯರು ತೃಪ್ತಿಪಡುವುದು ಸಾಧ್ಯವಾಗಲಿಕ್ಕಿಲ್ಲ.

ಜೆಟ್ಲೆಂಡರಂತೆ ಎಮೆರಿಯವರೂ ಭಾರತದ ಬಿಕ್ಕಟ್ಟಿನ ಕುರಿತು ಮಾತನಾಡುವಾಗ, ಇಲ್ಲಿನ ಭಿನ್ನಾಭಿನ್ನ ಪಕ್ಷಗಳ ಭಿನ್ನ ಭಿನ್ನ ಅಭಿಪ್ರಾಯಗಳೇ ಇದರ ಕಾರಣಗಳೆಂದು ಹೇಳುತ್ತಾರೆ. ಭಾರತದಲ್ಲಿ ಭಿನ್ನತೆಯಿದೆಯೆಂಬುದನ್ನು ಟೊಟ್ಟಿಕ್ಕಿ ತೋರಿಸುವುದರಿಂದ, ಸ್ವಾತಂತ್ರ್ಯದ ವಿಚಾರವನ್ನು ಮುಂದುವರಿಸುವ ಬ್ರಿಟಿಷ್ ರಾಜನೀತಿಜ್ಞತೆಯು ಎಮೆರಿಯ ಮಾತಿನಲ್ಲಿಯೂ ಸ್ಪಷ್ಟವಾಗಿ ಒಡಮೂಡಿದೆ. ಭಾರತದ ರಾಜ್ಯಘಟನೆಯ ಕುರಿತು ಭಾರತೀಯರೇ ಸಕಲಪಕ್ಷದವರೂ ಒಂದಾಗಿ ನಿಶ್ಚಯಿಸಬೇಕೆಂದು ಹೇಳಿರುತ್ತಾರೆ. ಪಕ್ಷಗಳ ಭಿನ್ನಭೇದಗಳನ್ನು ಎತ್ತಿಹೇಳಿ, ಅಂತಹ ಪಕ್ಷಗಳ ಮುಖಂಡರು ಏಕಾಭಿಪ್ರಾಯಗೊಂಡು ಮುಂದಿನ ರಾಜ್ಯಘಟನೆಯನ್ನು ಸ್ವತಃ ನಿರ್ಣಯಿಸಿಕೊಳ್ಳಬೇಕೆಂಬ ಮಾತು ನಿಜವಾಗಿಯೂ ಸಾಧ್ಯವಾದುದಲ್ಲ. ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಸಕಲ ಪಕ್ಷದವರನ್ನು ಒಟ್ಟುಸೇರಿಸಿ ಮುಂದಿನ ನಿರ್ಧಾರಕ್ಕೆ ಯಾವ ರೀತಿಯ ಯತ್ನವನ್ನು ಮಾಡುತ್ತಿರುವರೆಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದರೆ ಆಗ ಬ್ರಿಟಿಷ್ ಸರಕಾರದ ಪ್ರಮಾಣಿಕತೆಯು ಸ್ಫುಟವಾಗುತಿತ್ತು.

ಹೀಗಾಗಿ ಮಹಾತ್ಮಾ ಗಾಂಧಿಜಿಯವರಿಂದ ಆದಿಯಾಗಿ ದೇಶದ ನಾನಾ ಮುಖಂಡರು ತಮ್ಮ ತೀವ್ರ ಅತೃಪ್ತಿಯನು ವ್ಯಕ್ತಪಡಿಸಿದ್ದಾರೆ. ಪಂಡಿತ ನೆಹರುಗಳು ತಮ್ಮ ಸುದೀರ್ಘವಾದ ಪ್ರಕಟಣೆಯಲ್ಲಿ ಬ್ರಿಟಿಷ್ ಸರಕಾರವನ್ನು ಎಚ್ಚರಿಸಿದ್ದಾರೆ. ಬ್ರಿಟಿಷರ ಕಷ್ಟಕಾಲದಲ್ಲಿ ಅವರೊಡನೆ ಸಂಗ್ರಾಮ ಹೂಡಿ ಸ್ವಾತಂತ್ರ್ಯ ಪಡೆಯುವುದು ಗೌರವವಲ್ಲವೆಂದು ಅವರು ಅಭಿಪ್ರಾಯ ಪಡುವುದಾದರೂ, ಬಹುಕಾಲ ಯೂರೋಪಿನ ಸಂಗ್ರಾಮವು ಮುಂದುವರಿದಲ್ಲಿ ಸತ್ಯಾಗ್ರಹವು ಆ ವರೆಗೆ ಆರಂಭಿಸಲಾರದು ಎಂದು ತಿಳಿಯಲಾಗದು ಎಂದು ಸಾರಿದ್ದಾರೆ. ರಾಮಗಡ ಕಾಂಗ್ರೆಸ್ ಸತ್ಯಾಗ್ರಹದ ಕುರಿತು ನಿಶ್ಚಯವಾದ ಪ್ರಕಟಣೆ ಹೊರಡಿಸಿರಲು, ಪರಿಸ್ಥಿತಿಯು ಅನುಕೂಲವಾಗಿ ತೋರಿ ಬಂದಲ್ಲಿ ಕೂಡಲೇ ಸತ್ಯಾಗ್ರಹದ ಆರಂಭವಾಗಬಹುದೆಂದು ನೆಹರುಗಳು ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ.

ಬ್ರಿಟಿಷ್ ರಾಜನೀತಿಜ್ಞರು ತಮ್ಮ ರಾಜಕೀಯ ದೃಷ್ಟಿಯನ್ನು ಬದಲಾಯಿಸುವುದು ಅವಶ್ಯವಿದೆ. ಭಾರತೀಯರು ಸ್ವತಂತ್ರ ಜನಾಂಗವಾಗಲು ಅರ್ಹರು ಎಂಬಷ್ಟರ ಮಟ್ಟಿಗೆ ಬ್ರಿಟಿಷ್ ರಾಜನೀತಿಜ್ಞರು ಪ್ರಾಮಾಣಿಕತನದ ಅಭಿಪ್ರಾಯವನ್ನು ಹೊರಗೆಡಹದಿದ್ದಲ್ಲಿ, ಖಂಡಿತವಾಗಿಯೂ ಪರಿಸ್ಥಿತಿಯು ಕೆಡದಿರಲಾರದು. ಪಂಡಿತ ನೆಹರೂಗಳು ಸೂಚಿಸಿದಂತೆ ಭಾರತದ ಮುಂದಿನ ಕಾರ್ಯಕ್ರಮವು ಬ್ರಿಟಿಷ ಸರಕಾರದ ಕಾರ್ಯನೀತಿಗಳನ್ನೇ ಅನುಸರಿಸಿರುತ್ತದೆ.

ಬೋಲೋನ್ ಕೈಬಿಟ್ಟಿತು.

ಫ್ರಾನ್ಸಿನಲ್ಲಿ ಜರ್ಮನರಿಗೂ ಮಿತ್ರಸೈನ್ಯದವರಿಗೂ ಭಯಂಕರ ಯುದ್ಧವು ನಡೆಯುತ್ತಿದೆಯಷ್ಟೆ? ಈ ಸಮಯ ತೀವ್ರರಾಗಿ ಮುಂದೊತ್ತುತ್ತಿರುವ ಜರ್ಮನರು ಫ್ರಾನ್ಸಿಗೆ ದಾಳಿಯಿಟ್ಟು ಹಲವು ಮೈಲುಗಳ ಮುಂದುವರಿದು ಹೋಗಿರುವರೆಂದು ತಿಳಿದಿದೆ. ಡೋವರ್ ಜಲಸಂಧಿಯ ಬಳಿಯ ಪಟ್ಟಣ ರೇವುಗಳಲ್ಲಿ ಪ್ರಾಮುಖ್ಯವಾದ ಬೆಲೋನ್ ಇಂದು ಜರ್ಮನರ ಕೈವಶವಾಗಿದೆಯೆಂದೂ ಕೆಲಿಯು ಅವರಕೈತುತ್ತಾಗದಂತೆ ಮಿತ್ರರಾಷ್ಟ್ರದವರು ರಕ್ಷಣೆಗಾಗಿ ಕಾದಾಡುತ್ತಿರುವರೆಂದೂ ತಿಳಿದಿದೆ. ಇದರಿಂದ ಮಿತ್ರರಾಷ್ಟ್ರಗಳು ಇಂದು ತೀವ್ರವಾಗಿ ಎಚ್ಚತ್ತಿವೆ.

ಬೊಲೋನಿನಿಂದ ಕೆಲೆಗೆ ಬಹಳ ಸಮೀಪದ ಹಾದಿ. ಕೆಲೆಯನ್ನು ಆಕ್ರಮಿಸಲು ಜರ್ಮನರ ಇಂದಿನ ಹಠವಾಗಿದೆ. ಇದರಿಂದ ಹಿಟ್ಲರನು ಮುಂದಕ್ಕೆ ಬ್ರಿಟನಿಗೆ ಅಲ್ಲಿಂದ ಸಿದಾ ದಾಳಿಯಿಡಲು ನಿಶ್ಚಯಿಸಿರುವನೇ ಎಂದು ಎಲ್ಲೆಡೆಯಲ್ಲಿಯೂ ತಳಮಳವೆದ್ದಿರುವುದು. ಹೇಗಿದ್ದರೂ ಸಮುದ್ರತೀರದಾಚೆಯ ಬಂದರ ಪಟ್ಟಣಗಳನ್ನು ಹಿಟ್ಲರನು ಕೈವಶಮಾಡಿಕೊಂಡರೆ ಮುಂದಕ್ಕೆ ಬ್ರಿಟನಿನಿಂದ ಫ್ರಾನ್ಸಿಗೆ ಸಹಾಯವು ಸಿಗಲಾರದು. ಆ ಉಪಾಯವನ್ನು ಮಾಡಿ ಫ್ರಾನ್ಸನ್ನು ವಿಧ್ವಂಸಮಾಡಲು ಸುಲಭವಾದ ರೀತಿಯನ್ನು ಹಿಟ್ಲರನು ಆಲೋಚಿಸಿದಂತಿದೆಯೆಂದು ರಾಜನೀತಿಜ್ಞರ ಸಂದೇಹವಾಗಿದೆ.

ಇಂದಿನ ತನಕ ಮಿತ್ರರಾಷ್ಟ್ರದವರು ಹಿಟ್ಲರನ ಮುಂದೊತ್ತುವಿಕೆಯನ್ನು ಹಿಂದಕ್ಕಟ್ಟುವನ್ನು ಸಮರ್ಥರಾಗಲಿಲ್ಲ. ಇದು ಕೇವಲ ರಾಜನೀತಿಯ ಉಪಾಯವೆಂದೂ, ನಿಜವಾಗಿ ಮಿತ್ರರಾಷ್ಟ್ರಗಳು ಪರಾಜಯ ಹೊಂದಿಲ್ಲವೆಂದೂ, ಜರ್ಮನಿಗೆ ಆದ ವಿಜಯವು ಶಾಶ್ವತವಿಜಯವಲ್ಲವೆಂದೂ ಮಿತ್ರಪಕ್ಷದವರ ಹೇಳಿಕೆ. ಇಂದು ಲೋಕಕಂಟಕ ಧೋರಣೆಯಿಂದ ಮುಂದೊತ್ತುವ ಹಿಟ್ಲರನು ಖಂಡಿತವಾಗಿ ಸೋಲಲೇಬೇಕು. ಆದರೆ ಆ ಬಗ್ಗೆ ಮಿತ್ರರಾಷ್ಟ್ರದವರು ತನ್ನ ಪ್ರಚಂಡ ಎದುರಾಟ ಆದಷ್ಟು ಬೇಗನೇ ಬಲಗೊಳಿಸಿ ಕಾದಾಡಿ ಲೋಕಶಾಂತಿಯನ್ನು ಸ್ಥಾಪಿಸಲು ಯತ್ನಿಸುವರೆಂದು ಹಾರೈಕೆ.

ಬೆಳ್ಳಿ ಬಂಗಾರ ಹಬ್ಬಗಳು

ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿಯ ಬೆಳ್ಳಿ ಹಬ್ಬವು ತಾ. ೨೯ರಂದು ಬಹಳ ವಿಜೃಂಭಣೆಯಿಂದ ಜರಗಿತು! ಮುಂದೆ ಜೂನ್ ತಿಂಗಳ ೩೦ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿ ಹಬ್ಬವು ಬೆಂಗಳೂರಲ್ಲಿ ನೆರವೇರಲಿದೆ! ಕರ್ನಾಟಕದ ಹಿರಿಯ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವವನ್ನು ವಿಶೇಷ ವಿಜೃಂಭಣೆಯಿಂದ ನೆರವೇರಿಸುವ ಸಲುವಾಗಿ ಸಕಲ ಸಿದ್ಧತೆಗಳಾಗುತ್ತಿವೆ! ಅಂತೂ ಈ ವರುಷ ಕನ್ನಡನಾಡಿನಲ್ಲಿ ಹಲವು ಹಿರಿಯ ಗೌರವದ ಸಂಸ್ಥೆಗಳ ಬೆಳ್ಳಿ ಬಂಗಾರ ಹಬ್ಬಗಳ ಆನಂದ! ಕನ್ನಡಿಗರಲ್ಲಿ ಕನ್ನಡತನದ ಹೆಮ್ಮೆಯು ಹೊರಸೂಸುವ ಸುಮುಹೂರ್ತ!

ಸಾಹಿತ್ಯ ಪರಿಷತ್ತಿನ ರಜತೋತ್ಸವವು ಅತ್ಯಂತ ಯಶಸ್ವಿಯಾಗಬೇಕೆಂದು ಪರಿಷದುಪಾಧ್ಯಕ್ಷರಾದ ಶ್ರೀ. ಬಿ. ಎಂ. ಶ್ರೀಕಂಠಯ್ಯನವರೂ, ಪರಿಷದಧ್ಯಕ್ಷರಾದ ಶ್ರೀ. ಮುದವೀಡು ಕೃಷ್ಣರಾಯರೂ ಕರ್ನಾಟಕದ ಮೂಲೆ ಮೂಲೆಗಳನ್ನು ಸಂಚರಿಸಿ, ಕನ್ನಡದ ಕಹಳೆಯಿಂದ ಕನ್ನಡಿಗರನ್ನು ಎಚ್ಚರಿಸುತ್ತಿದ್ದಾರೆ! ಕನ್ನಡದೀ ಹಬ್ಬಕ್ಕೆ ಸಕಲರೂ ಬನ್ನಿರೆಂದು ಪ್ರೀತಿಯ ಆಹ್ವಾನವಿತ್ತಿದ್ದಾರೆ.

ಪ್ರಾಂತದ ಅಭಿಮಾನವು ದೇಶಾಭಿಮಾನದ ಒಂದು ಅಂಗ. ಮಾತೃಭಾಷೆಯ ಬಗ್ಗೆ ಆದರವಿರುವುದು ಮಾತೃಭೂಮಿಯ ಬಗ್ಗೆ ಅಭಿಮಾನವಿದ್ದಂತೆಯೇ! ನಾಡಿಗಾಗಿ ನುಡಿಗಾಗಿ ಹೋರಾಡಲು ಹಿಂಜರಿವರು ನಿಜವಾಗಿಯೂ ಹತವೀರ್ಯರು. ಕನ್ನಡ ನಾಡು ಮತ್ತು ನುಡಿಗಳು ಇಂದು ಬಹಳ ಅಧೋಗತಿಗಿಳಿದಿವೆ! ಕನ್ನಡ ನಾಡು ಒಂದಾಗಬೇಕು; ಕನ್ನಡಿಗರು ಮುಂದಾಗಬೇಕು; ಕನ್ನಡ ನುಡಿ ಬೆಳೆಯಬೇಕು; ಕನ್ನಡ ಜನತೆಯೂ ಬೆಳೆಯಬೇಕು. ಇಂತಹ ಉತ್ಸಾಹವನ್ನು ಈ ವರ್ಷದ ಬೆಳ್ಳಿ ಬಂಗಾರ ಹಬ್ಬಗಳು ಹುಟ್ಟಿಸಲೆಂದು ನಾವು ಬಯಸುತ್ತೇವೆ.



ಸತ್ಯಮೂರ್ತಿ

ಭಾರತ ರಾಜಕೀಯದ ಸಮಸ್ಯಾ ಪರಿಹಾರವೆಂತು?

ಶ್ರೀ| ಸತ್ಯಮೂರ್ತಿಗಳ ವಿಮರ್ಶಾತ್ಮಕ ಲೇಖನ

ನ್ಯಾಯವಾದ ವಿಚಾರಾತ್ಮಕ ರೀತಿಯಿಂದ ವಿಮರ್ಶಿಸಿದರೆ ಭಾರತದ ರಾಜಕೀಯ ಸಮಸ್ಯೆಯು ಪರಿಹರಿಸಲು ಸಾಧ್ಯವಿಲ್ಲವೆನ್ನುವುದು ಸರಿಯಲ್ಲ. ಕಾಂಗ್ರೆಸು ಪೂರ್ಣ ಸ್ವರಾಜ್ಯವೆನ್ನಲಿ ಬ್ರಿಟನು ಸಾಮಂತ ಸ್ವರಾಜ್ಯವನ್ನೆಲ್ಲಿ ಒಟ್ಟು ಉಭಯ ಪಕ್ಷದವರೂ, ಭಾರತಕ್ಕೆ ಪ್ರಜಾಪ್ರಭುತ್ವ ಪದ್ಧತಿಯ ಸ್ವತಂತ್ರರಾಜ್ಯಭರಣವನ್ನು ಕೊಡುವುದು ನ್ಯಾಯವಾಗಿದೆಯೆಂದು ಸಮ್ಮತಿಗೆ ಬಂದಿದ್ದಾರೆ. ಆ ಸಂದರ್ಭದಲ್ಲಿ ಮಿಕ್ಕ ಹಲವಾರು ಸಂದಿಗ್ಧ ವಿಚಾರಗಳನ್ನು ಯಾವ ರೀತಿಯಿಂದ ಬಗೆಹರಿಸಬಹುದೆಂದು ಭಾರತದ ರಾಜಕೀಯ ನಿಪುಣರಾದ ಶ್ರೀ. ಸತ್ಯಮೂರ್ತಿಯವರು ಒಂದು ವಿಚಾರಪೂರ್ಣವಾದ ಲೇಖನವನ್ನು ಬರೆಯುತ್ತಾ ಅದರಲ್ಲಿ ಹೀಗೆ ವಿಮರ್ಶಿಸಿರುವರು.

ಅದರ ಸಾರಾಂಶವು ಇಂತಿದೆ:

ಪ್ರತಿಯೊಂದು ವಿಷಯವನ್ನೂ ನ್ಯಾಯವಾದ ವಿಚಾರವಿನಿಮಯ ಮಾಡಿ ನಿಷ್ಕರ್ಷಿಸಲು ಸಾಧ್ಯವಿದ್ದರೂ ಇಂದು ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಮಹಾತ್ಮಾಜಿಯವರ ಮುಂದಾಳುತನದಲ್ಲಿ ಕಾಂಗ್ರೆಸು ತನ್ನ ಧ್ಯೇಯವನ್ನು ತತ್ವವನ್ನೂ, ಕಾರ್ಯಕ್ರಮವನ್ನು ಸ್ಪಷ್ಟ ಮಾಡಿ ಜನತೆಯ ಮುಂದಿರಿಸಿದೆ. ಭಾರತವು ಸ್ವತಂತ್ರವಾಗಲು ಬ್ರಿಟನೂ ತಾನು ಇಚ್ಛೆಪಡುತ್ತಿರುವುದಾಗಿ ಸಾರಿದೆ. ಆದರೆ ಸ್ವತಂತ್ರ ರಾಜ್ಯಭರಣವನ್ನು ಹೊಂದುವುದರ ಮೊದಲು ಮಧ್ಯಕಾಲದ ವ್ಯವಸ್ಥೆಯನ್ನು ಹೇಗೆ ತೀರ್ಮಾನಿಸಬೇಕೆಂಬ ವಿಷಯವನ್ನೂ ಕಾಂಗ್ರೆಸು ತೀರ್ಮಾನಿಸಿ ಹೇಳಿರುತ್ತದೆ. ಜನರ ಪ್ರತಿನಿಧಿಗಳಿಂದ ಕೂಡಿದ ರಾಷ್ಟ್ರಘಟನಾ ಸಮಿತಿಯು ಮುಂದಿನ ಭಾರತದ ವಿಷಯವನ್ನು ನಿಷ್ಕರ್ಷೆ ಮಾಡುವುದು ಯೋಗ್ಯವೆಂದು ಕಾಂಗ್ರೆಸು ತಿಳಿಸಿರುವುದನ್ನು ಯಾವ ಪ್ರಜಾಪ್ರಭುತ್ವವಾದಿಯೂ ಅಲ್ಲಗಳೆಯಲಾರನು.

ಬೇರೊಂದು ಸೂಚನೆ

'ಹೀಗೆ ಪ್ರಾಯಸ್ಥರಾದ ಜನರ ಮತಗಣನೆಯಿಂದ ಪ್ರತಿನಿಧಿಗಳನ್ನಾರಿಸಿ ಅವರು ಕೂಡಿ ಭಾರತ ಭವಿಷ್ಯತ್ತನ್ನು ನಿಶ್ಚಯಿಸುವ ಯೋಜನೆ ಮಾಡಬೇಕೆಂದು ಕಾಂಗ್ರೆಸು ಹೇಳುತ್ತಿರುವುದನ್ನು, ಅದಕ್ಕೆ ಬ್ರಿಟನು ಪ್ರೋತ್ಸಾಹ ಕೊಡದಿರುವುದನ್ನೂ ವಿಚಾರಿಸಿ, ಕಾಂಗ್ರೆಸಿನ ಮುಂದಾಳುಗಳು ಬೇರೊಂದು ಸೂಚನೆ ಕೊಟ್ಟಿರುವರು. ಈಗ ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಿಗೆ ಆರಿಸಲ್ಪಟ್ಟ ಸದಸ್ಯರು ಜನರ ಪ್ರತಿನಿಧಿಗಳಾಗಿರುವುದರಿಂದ, ಅವರು ಯೋಚಿಸಿದ ರೀತಿಯ ಘಟನೆಗಳನ್ನು ಭಾರತಕ್ಕೆ ಮಾಡಬಹುದೆಂದೂ ಅವರ ಸೂಚನೆಯಾಗಿದೆ.

'ಬ್ರಿಟನಾದರೂ ಈ ಸೂಚನೆಯು ನ್ಯಾಯವಾದುದು ಎಂದು ತಿಳಕೊಂಡಿದೆ. ಆದರೆ ಬ್ರಿಟನು ಅನೇಕ ಸಲ ಸ್ಪಷ್ಟವಾಗಿಯೇ ಭಾರತದಲ್ಲಿ ತನಗೆ ಹಲವಾರು ಹಿತಸಂರಕ್ಷಣೆಗಳಿವೆಯೆಂದು ಸಾರುತ್ತಿದೆ. ಆದರೆ ಮಹಾತ್ಮಾಜಿಯವರಂತಹ ಉದಾರ ಮನಸ್ಕರ ನೇತೃತ್ವದಲ್ಲಿ ಕಾಂಗ್ರೆಸು ಯಾವುದೇ ಅಲ್ಪಸಂಖ್ಯಾಕರ ಇಲ್ಲವೇ ಇತರ ಆಶ್ರಿತರಾಜರ ಹಿತಗಳಿಗೆ ವಿಘ್ನಕಾರಕವಾಗಿ ನಿಲ್ಲಲಾರದೆಂಬುದು ಸುಸ್ಪಷ್ಟವಿದೆ.

ಭಾರತದ ರಕ್ಷಣಾ ವಿಚಾರ

'ಬ್ರಿಟನು ಬಹಳ ವಿಶೇಷವಾಗಿ, ಕಾಂಗ್ರೆಸಿನ ಕೇಳಿಕೆಗೆ ಆತಂಕವಾಗಿ ಹೇಳುವ ವಿಷಯಗಳೆಂದರೆ ಅಲ್ಪಸಂಖ್ಯಾಕರ ವಿಚಾರ, ಆಶ್ರಿತರಾಜರ ವಿಚಾರ, ಭಾರತ ರಕ್ಷಣದ ವಿಚಾರ—ಈ ಮೂರು ವಿಷಯಗಳಾಗಿವೆ.

ಭಾರತದ ರಕ್ಷಣೆಯನ್ನು ಮಾಡುವ ವಿಷಯ ಯಾರೂ ಅಕ್ಷೇಪವೆತ್ತಲಾರರು. ಇಂದಲ್ಲ ನಾಳೆಯಾದರೂ ಭಾರತವನ್ನು ಅನ್ಯರ ದಾಳಿಯಿಂದ ರಕ್ಷಿಸಬೇಕಾಗಿದೆ. ಆದರೆ ತನ್ನ ರಕ್ಷಣೆ ಮಾಡಿಕೊಳ್ಳಲು ಭಾರತಕ್ಕೆ ಶಕ್ತಿಯಿಲ್ಲ; ಆದುದರಿಂದ ಸ್ವರಾಜ್ಯವನ್ನು ಕೊಡುವುದು ಸರಿಯಲ್ಲವೆಂಬ ಮಾತಿಗೆ ಅರ್ಥವಿಲ್ಲ. ಕಳೆದ ೧೫೦ ವರ್ಷಗಳ ಆಡಳಿತದಲ್ಲಿಯಾದರೂ ಭಾರತವು ಆತ್ಮರಕ್ಷಣೆ ಮಾಡಿಕೊಳ್ಳಲು ಸಮರ್ಥವಾಗುವಂತೆ ತಯಾರಿಸದಿರುವುದು ಯಾರ ತಪ್ಪೋ ತಿಳಿಯದು. ಈ ವಿಷಯದ ಕುರಿತು ಭಾರತವು ಆತ್ಮರಕ್ಷಣೆಗೆ ಯಾವ ಉಪಾಯಗಳನ್ನನುಸರಿಸಬೇಕೆಂದು ಬ್ರಿಟನಿನೊಡನೆ ಸಂಕೋಚಪೂರ್ವಕ ವಿಚಾರವಿನಿಮಯ ಮಾಡಲು ಸಿದ್ಧವಿರುವುದು.

ಆಶ್ರಿತರಾಜರೂ ಅಲ್ಪಸಂಖ್ಯಾಕರೂ

'ಬ್ರಿಟಿಷ್ ಭಾರತದ ಫೆಡರೇಶನಿನಲ್ಲಿ ಆಶ್ರಿತರಾಜರ ಸಮಸ್ಯೆಯು ಯಾಕೆ ಬರುತ್ತದೋ ತಿಳಿಯುವುದಿಲ್ಲ. ಬ್ರಿಟಿಷ್ ಭಾರತವು ಸ್ವತಂತ್ರ ಫೆಡರೇಶನಿನ ಒಪ್ಪಂದದ ಮೇಲೆ ಆಶ್ರಿತರಾಜ್ಯಗಳ ಸಮಸ್ಯೆಯು ತನ್ನಿಂದ ತಾನೇ ನಿಷ್ಕರ್ಷಿಸಲ್ಪಡುವುದು. ಎಷ್ಟೆಂದರೂ ಇದನ್ನು ದೇಶದ ಪ್ರಗತಿಗೆ ವಿಘ್ನಕಾರಿಯಾಗಿ ಮುಂದೊಡ್ಡುವುದು ನ್ಯಾಯವಾದುದಲ್ಲ. ಧಾರ್ಮಿಕ ಅಲ್ಪಸಂಖ್ಯಾಕರ ಸಂಗತಿಯು ಭಾರತಕ್ಕೆ ಹೊಸದಲ್ಲ. ರಾಜಕೀಯ ಅಲ್ಪಸಂಖ್ಯಾಕರ ವಿಷಯದಲ್ಲಿ ಪ್ರಜಾಪ್ರಭುತ್ವವಾದಿಗಳು ಚಿಂತಿಸತಕ್ಕ ಅವಶ್ಯಕತೆಯೂ ಇಲ್ಲ. ಇಂದಿನ ರಾಜಕೀಯ ಅಲ್ಪಸಂಖ್ಯಾಕರು ನಾಳಿನ ರಾಜಕೀಯ ಬಹುಸಂಖ್ಯಾಕರಾಗಬಹುದಾಗಿದೆ.

ಅಲ್ಪಸಂಖ್ಯಾಕರು ತಮ್ಮ ಧರ್ಮ, ಸಂಸ್ಕೃತಿಗಳ ರಕ್ಷಣೆಯನ್ನು ನೋಡಿಕೊಳ್ಳಲು ಸಾಧಿಸುವುದು ನ್ಯಾಯವಾಗಿದೆ. ಆದರೆ ಕಾಂಗ್ರೆಸು ರಾಷ್ಟ್ರಘಟನಾ ಸಮಿತಿಯು ಅಲ್ಪಸಂಖ್ಯಾಕರಿಗೆ ಎಷ್ಟು ಸೌಕರ್ಯಗಳನ್ನು ಕೊಡಬೇಕೋ ಅಷ್ಟು ಸೌಕರ್ಯಗಳನ್ನು ಕೊಡಲು ಸಿದ್ಧವಾಗಿದೆಯೆಂದೂ ಅದೇ ನ್ಯಾಯವೆಂದೂ ಹೇಳುತ್ತದೆ. ಹೇಗಿದ್ದರೂ ಸ್ವತಂತ್ರವಾದ ಮಧ್ಯಸ್ಥಿಕೆಯಿಂದ ಕಾಂಗ್ರೆಸು ನ್ಯಾಯವಾದ ತೀರ್ಮಾನವನ್ನು ಮಾಡಲು ಒಪ್ಪುತ್ತಿದೆ.

ಬ್ರಿಟನಿನ ಹೊಣೆಗಾರಿಕೆ

'ಪ್ರಜಾಪ್ರಭುತ್ವಕ್ಕಾಗಿ ಹೋರಾಡುವ ಬ್ರಿಟನು ಭಾರತದ ಸ್ವಾತಂತ್ರ್ಯದ ಕುರಿತು ಹೆಚ್ಚಿನ ಹೊಣೆಗಾರಿಕೆಯುಳ್ಳದ್ದಾಗಿದೆ. ಇಲ್ಲಿನ ಸಮಸ್ಯೆಗಳು ಪರಿಹರಿಸತಕ್ಕವುಗಳು ಬ್ರಿಟನು ಆ ಮನಸ್ಸು ಮಾಡಬೇಕಾಗಿದೆ. ಇಂದಿನ ಯುದ್ಧದಲ್ಲಿ ಹಿಟ್ಲರನು ಸೋಲುವುದರೊಡನೆ ಬ್ರಿಟನೂ ಸಾಮ್ರಾಜ್ಯಶಾಹೀ ಬುದ್ಧಿಯನ್ನು ಬಿಟ್ಟುಕೊಟ್ಟಿದೆಯೆಂಬ ವಿಷಯವು ಭಾರತಕ್ಕೆ ಬ್ರಿಟನು ಕೊಡಬೇಕಾಗಿದೆ ನ್ಯಾಯವನ್ನು ಅವಲಂಬಿಸಿದೆ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೊಳವೆಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಗೊನೊಕಿಲರ್ (ರಿಜಿಸ್ಟರ್ಡ್)

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ್ಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಪದೇಪದೇ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಪರ್ಸಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ–ಕೊಕಸ್ ಎಂಬ ವಿಷಜಂತು, ಅಲ್ಲದೇ ಮೇಲೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI, Vithalbhai Patel Road, BOMABY.**

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,

ಹಂಪನಕಟ್ಟಾ, ಮಂಗಳೂರು.

ಬ್ರಿಟನನ್ನು ಬ್ರಿಟಿಷ ರಾಜನೀತಿಜ್ಞರು ಎಚ್ಚರಿಸುತ್ತಾರೆ!

ಆಯರ್ಲೆಂಡಿನ ಕ್ರಾಂತಿ ಪಾಠವು ಭಾರತದಲ್ಲಿ ಆವೃತ್ತಿಯಾಗದಿರಲಿ!

— ಪ್ರೊಫೆಸರ್ ಕೀತರ ಸಂದೇಶ —

ಪ್ರಕೃತ [illegible] ಯುದ್ಧ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಮಂತ್ರಿಮಂಡಲಗಳು ರಾಜೀನಾಮೆಯನ್ನಿತ್ತು, ಯೂರೋಪಿನ ಯುದ್ಧದಲ್ಲಿ ಕಾಂಗ್ರೆಸು ಅಸಹಕಾರವನ್ನು ವಹಿಸಿದ್ದುದರಿಂದ ಭಾರತೀಯ ಸ್ವಾತಂತ್ರ್ಯ ಪ್ರಶ್ನೆಯ ಕುರಿತು ಬ್ರಿಟನಿನಲ್ಲಿ ಎಂಥ ವಿಚಾರ ಕ್ರಾಂತಿ ಉಂಟಾಗುತ್ತ ಇದೆ ಎಂಬುದು ತಿಳಿಯತಕ್ಕ ವಿಷಯವಾಗಿದೆ. ಈಗೀಗ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಭಾರತದ ಕೇಳಿಕೆಗಳ ಕುರಿತು ಸಹಾನುಭೂತಿಯು ಕಂಡುಬರುತ್ತಲಿದೆಯಲ್ಲದೆ, ಸಾರ್ವಜನಿಕವಾಗಿಯೂ ಅಲ್ಲಿಯ ಪ್ರಸಿದ್ಧ ಪತ್ರಿಕೆಗಳಲ್ಲಿ ಈ ವಿಷಯವನ್ನು ಚರ್ಚಿಸಲಾರಂಭಿಸಿದ್ದಾರೆ. ಸ್ಕೊಟ್ಸ ಮೆನ್ ಎಂಬ ಪತ್ರಿಕೆಯಲ್ಲಿ ಹಿಂದೂ ಮುಸಲ್ಮಾನ ಮತ್ತು ದೇಶೀ ಅರಸರುಗಳ ಸಮಸ್ಯೆಯ ಕುರಿತು ಯುಷ್ ಬರ್ಟಿನ್ ಎಂಬವರು ಎತ್ತಿದ ಕೆಲವು ಆಕ್ಷೇಪಗಳಿಗೆ ಪ್ರೊಫೆಸರ ಕೀತ್ ಎಂಬ ಲೋಕ ಪ್ರಸಿದ್ಧ ರಾಜಕಾರಣ ತಜ್ಞರು ಸಮಾಧಾನಕರವಾದ ಉತ್ತರಗಳನ್ನು ಕೊಟ್ಟು ಭಾರತಕ್ಕೆ ಸ್ವಾತಂತ್ರ್ಯವನ್ನು ಕೂಡಲೇ ಕೊಟ್ಟು ಅದನ್ನು ತೃಪ್ತಿಪಡಿಸುವದು ಅತ್ಯಗತ್ಯವೆಂದಿರುವರು

'ಆಯರ್ಲೆಂಡಿನ ಪ್ರೊಟೆಸ್ಟಾಂಟ ಮತ್ತು ರೋಮನ ಕೆಥೊಲಿಕರೊಳಗಿರುವಂಥ ಅಂತರಕ್ಕಿಂತ ಹೆಚ್ಚಿನದಾದ ಧಾರ್ಮಿಕ ಉದ್ವೇಷವು ಹಿಂದು ಮುಸಲ್ಮಾನರೊಳಗೆ ಇದೆ ಎನ್ನುವದು ತಪ್ಪು. ಆಯರ್ಲೆಂಡಿನ ಪ್ರೊಟೆಸ್ಟಾಂಟ—ರೋಮನ ಕೆಥೊಲಿಕರಿಗೂ, ಹಿಂದುಸ್ತಾನದ ಹಿಂದು ಮುಸಲ್ಮಾನರಿಗೂ ಯಾವ ಸಾಮ್ಯವೂ ಇರುವದಿಲ್ಲ. ಬ್ರಿಟನು ತನ್ನ ಸ್ವಾರ್ಥಸಾಧನೆಗಾಗಿ ಆಯರ್ಲೆಂಡಿನ ಪ್ರೊಟೆಸ್ಟಾಂಟರನ್ನು ಅಲ್ಲಿಯ ರೋಮನ ಕೆಥೊಲಿಕರ ವಿರುದ್ಧ ಹೇಗೆ ಎತ್ತಿ ಕಟ್ಟಿ ಆಯರ್ಲೆಂಡಿನ ಸ್ವಾತಂತ್ರ್ಯದ ಬೇಡಿಕೆಯನ್ನು ಮುರಿಯುವ ಪ್ರಯತ್ನ ಮಾಡಿತೋ, ಅದರಂತೆಯೇ ಹಿಂದುಸ್ತಾನದಲ್ಲಿ ಹಿಂದುಗಳ ವಿರುದ್ಧ ಮುಸಲ್ಮಾನರನ್ನು ಎತ್ತಿ ಕಟ್ಟಿ ಭಾರತೀಯ ಸ್ವಾತಂತ್ರ್ಯವನ್ನು ಮಣ್ಣುಗೂಡಿಸುವ ಪ್ರಯತ್ನವನ್ನು ಬ್ರಿಟನು ಮಾಡುತ್ತಾ ಇದೆ. ಆದರೆ ಬ್ರಿಟನು ಆಯರ್ಲೆಂಡಿನ ಇತಿಹಾಸದಿಂದ ಪಾಠಕಲಿಯುವದು ಅಗತ್ಯ. ಹಿಂದುಸ್ತಾನದ ಒಂದು ಅಲ್ಪ ಸಂಖ್ಯಾಕ ಜಾತಿಯನ್ನು ಒಲಿಸಲಿಕ್ಕೆ ಹೋಗಿ ಬ್ರಿಟನು ಬಹು ಸಂಖ್ಯಾಕರ ಬೇಡಿಕೆಗಳನ್ನು ಅಲಕ್ಷಿಸಿದರೆ ಆಯರ್ಲೆಂಡಿನಲ್ಲಾದಂತೆ ಹಿಂದುಸ್ತಾನದ ಜನರೂ ದಂಗೆ ಏಳುವರು

ಬ್ರಿಟನಿನ ಮಾತುಗಳಿಗೆ ಬೆಲೆ ಇಲ್ಲವೆ?

"ಹಿಂದುಸ್ತಾನಕ್ಕೆ ಸ್ವರಾಜ್ಯವನ್ನು ಕೊಡುವದೇ ತಮ್ಮ ಉದ್ದೇಶವೆಂದು ಬ್ರಿಟನು ೧೯೧೭ ರಿಂದ ಆಗಾಗ ಹೇಳುತ್ತ ಬಂದಿರುವದಾದರೂ, ಅದು ತನ್ನ ಮಾತಿನಂತೆ ಈ ತನಕವೂ ನಡೆದುದಿಲ್ಲ. ಮುಸಲ್ಮಾನ ಧರ್ಮಕ್ಕೆ ಅಥವಾ ಬೇರೆ ಯಾವದೇ ಧರ್ಮಕ್ಕಾದರೂ ಹಿಂದುಗಳಿಂದ ಯಾವ ಹಾನಿಯೂ ಬರುವಂತೆ ಇರುವದಿಲ್ಲ. ಇದನ್ನು ಮುಸಲ್ಮಾನರೂ ಒಪ್ಪುವರು. ಆದರೆ ಅವರು ಬಹುಮತದ ಆಡಳಿತಕ್ಕೆ ಮಾತ್ರ ಒಪ್ಪುವುದಿಲ್ಲ. ಅಲ್ಪಸಂಖ್ಯಾಕರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವದಕ್ಕೋಸ್ಕರ ಬ್ರಿಟನು ಬಹುಸಂಖ್ಯಾಕರನ್ನು ಅಲಕ್ಷಿಸುವದೇ? ಆಯರ್ಲೆಂಡಿನಲ್ಲಿ ಬ್ರಿಟನು ಹಾಗೆ ಆತ್ಮಘಾತಮಾಡಿಕೊಂಡಿತು. ಅದರ ಪರಿಣಾಮವು ಸ್ಪಷ್ಟವಾಗಿ ನಮ್ಮೆಲ್ಲರ ಮುಂದಿದೆ. ಬ್ರಿಟನು ಇತಿಹಾಸದಿಂದ ಪಾಠಕಲಿಯುವದಿಲ್ಲವೆ?

'ದೇಶೀಯರಾಜರುಗಳಿಗೂ ಸಾರ್ವಭೌಮ ಸರಕಾರಕ್ಕೂ ಆಗಿರುವ ಒಡಂಬಡಿಕೆಗಳು ಭಾರತದ ಸ್ವರಾಜ್ಯಕ್ಕೆ ದೊಡ್ಡ ಆತಂಕಗಳಾಗಿವೆ. ಒಡಂಬಡಿಕೆಗಳನ್ನು ಮುರಿದರೆ ದೇಶೀರಾಜರ ಕೈಬಿಟ್ಟ ಹಾಗೆ ಆಗುವದೆಂದು ಹೇಳುವವರಿದ್ದಾರೆ. ಆದರೆ ಸಾರ್ವಭೌಮ ಸರಕಾರವು ಹಿಂದೂದೇಶದ ಸಾಮಾಜಿಕ ಹಿತಕ್ಕೆ ವಿರೋಧವಾಗಿ ದೇಶೀಯರಾಜರೊಡನೆ ಮಾಡಿದ ಯಾವ ಒಡಂಬಡಿಕೆಯೂ ಸಿಂಧು ಆಗತಕ್ಕದ್ದಿಲ್ಲ. ಹಿಂದೆ ಬ್ರಿಟನು ಮಾಡಿದ ಎಷ್ಟೊ ಒಡಂಬಡಿಕೆಗಳು ಈಗ ಮಣ್ಣುಪಾಲಾಗಿವೆ. ಬ್ರಿಟಿಷ ಭಾರತದಂತೆ ಸಂಸ್ಥಾನ ಪ್ರಜೆಗಳೂ ಸ್ವಾತಂತ್ರ್ಯವನ್ನು ಅನುಭವಿಸುವದು ನ್ಯಾಯ ಮತ್ತು ನೀತಿಯಿಂದ ಕೂಡಿದ ಯಾವ ಒಡಂಬಡಿಕೆಗೂ ವಿರೋಧವಾಗವದಿಲ್ಲ. ಸಮಯವು ಕೈಮೀರುತ್ತಾ ಇದೆ. ಸಕಾಲದಲ್ಲಿ ಯಾವ ವ್ಯವಸ್ಥೆಯನ್ನೂ ಮಾಡದೆ ಇದ್ದುದರಿಂದ ಆದ ಆಯರ್ಲೆಂಡಿನ ದುರಂತವು ಬ್ರಿಟನನ್ನು ಸರಿದಾರಿಗೆ ತಂದೀತೇ. ಇಲ್ಲವಾದರೆ ಅದೇ ದುರಂತವನ್ನು ಹಿಂದುಸ್ತಾನದಲ್ಲಿಯೂ ಕಾಣುವ ದಿನಗಳು ದೂರವಾಗಲಾರವು' ಹೀಗೆ ಪ್ರೊ| ಕೀತರು ಹೇಳುವರು.

ಸನ್ಮಾನ್ಯ ಕ್ರೈಸ್ತ ಮುಖಂಡರ ಅಭಿಪ್ರಾಯ

ಭಾರತದ ರಾಜಕೀಯ ಸಮಸ್ಯೆಯ ಕುರಿತು ದಿ ಚರ್ಚ್ ಟೈಮ್ಸು ಎಂಬ ಪತ್ರಿಕೆಯ ಒಬ್ಬ ಪ್ರತಿನಿಧಿಯು ಒಬ್ಬ ಕ್ರೈಸ್ತ ಮುಖಂಡರಿಂದ ತೆಗೆದುಕೊಂಡ ಅಭಿಪ್ರಾಯವು ಆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವರು ಹೀಗೆಂದಿರುವರು:—

'ಹಿಂದೂ ಮುಸಲ್ಮಾನರೊಳಗಿನ ಕಲಹದ ಬೀಜವನ್ನು ಪ್ರಥಮತಃ ಬ್ರಿಟಿಷರೇ ಬಿತ್ತಿದರು. ಮತ್ತು ತಮ್ಮ ಸ್ವಾರ್ಥಸಾಧನೆಗಾಗಿ ಅವರು ವಿಭಾಗಿಸಿ ಆಳುವ ನೀತಿಯನ್ನು ಇಲ್ಲಿ ಅನುಸರಿಸಿದ್ದಾರೆ. ಕೇವಲ ನಗರ ಪೇಟೆಗಳಲ್ಲಿರುವ ಮುಸಲ್ಮಾನರು ಮಾತ್ರ ಹಿಂದುಗಳ ವಿರುದ್ಧ ತಮ್ಮ ರಕ್ಷಣೆ ಭದ್ರತೆಗಳ ಬೇಡಿಕೆಗಳನ್ನು ಸರಕಾರದ ಮುಂದಿಡುತ್ತಾರೆ. ಎಲ್ಲಿ ಬ್ರಿಟಿಷರ ವಿಭಾಗಿಸಿ ಆಳುವ ನೀತಿಯ ಪ್ರಭಾವವು ಕಂಡುಬರುವದಿಲ್ಲವೋ ಹಿಂದುಸ್ತಾನದ ಆ ಲಕ್ಷಾಂತರ ಹಳ್ಳಿಹಳ್ಳಿಗಳಲ್ಲಿ ಹಿಂದು ಮುಸಲ್ಮಾನರ ಹಕ್ಕು ಬಾಧ್ಯತೆಯ ಪ್ರಶ್ನೆಯೇ ಇರುವದಿಲ್ಲ. ಆದರೂ ಸರಕಾರವು ಮುಸಲ್ಮಾನರಿಗೆ ಅವರ ಸಂಖ್ಯೆ, ಪ್ರತಿಷ್ಠೆ, ವಿದ್ಯೆ ಮತ್ತು ಸಂಸ್ಕೃತಿಗನುಸಾರ ದೊರೆಯುವದಕ್ಕಿಂತಲೂ ಹೆಚ್ಚಿನ ರಾಜಕೀಯ ಆರ್ಥಿಕ ಅಧಿಕಾರಗಳನ್ನು ಕೊಟ್ಟಿದೆ. ಬ್ರಿಟಿಷ ಅಧಿಕಾರವು ಹಿಂದುಸ್ತಾನದ ಹೋಯಿತೆಂದರೆ ಮುಸಲ್ಮಾನರಿಗೆ ದೊರೆತ ಈ ಹೆಚ್ಚಿನ ಅಧಿಕಾರಗಳೂ ಹೋಗುವವು. ಆದ್ದರಿಂದಲೇ ಮುಸಲ್ಮಾನರು ದೇಶದ ಸ್ವಾತಂತ್ರ್ಯವನ್ನು ಇಚ್ಛಿಸಿ ಪ್ರಯತ್ನಿಸುವದರ ಬದಲಿಗೆ ಬ್ರಿಟಿಷರ ಅಧಿಕಾರವು ಹಿಂದುಸ್ತಾನದಲ್ಲಿ ಚಿರಸ್ಥಾಯಿಯಾಗಿರಲೆಂದು ಅಪೇಕ್ಷಿಸುತ್ತಾರೆ. ಮುಸಲ್ಮಾನರಂತೆ ದೇಶೀ ಅರಸರೂ ಇರುವರು. ಬ್ರಿಟಿಷರು ಹಿಂದುಸ್ತಾನದಿಂದ ಹೊರಟುಹೋಗುವರಾದರೆ ಅವರ ಕೈಯಿಂದ ತೆಗೆದುಕೊಂಡ ಸಾರ್ವಭೌಮ ಅಧಿಕಾರಗಳನ್ನು ಅವರು ತಮಗೇ ಮರಳಿ ಕೊಡಬೇಕೆಂದು ದೇಶೀ ಅರಸರು ಹೇಳುವದು ಪೊಳ್ಳು ಬೆದರಿಕೆಯಾಗಿದೆ. ಬ್ರಿಟಿಷರ ಸೈನ್ಯ ಬಲದ ಮೇಲೆಯೇ ಮುಸಲ್ಮಾನರ ಮತ್ತು ದೇಶೀ ಅರಸರ ಅಧಿಕಾರವು ನಡೆಯುತ್ತದೆ. [illegible] ಹಿಂದೆ ಹೇಳಿದ [illegible] ಇವರ ನ್ಯಾಯ [illegible] ಒಪ್ಪುವರಾದರೆ ಮಾತ್ರ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬಹುದು.

ಈ ಎಲ್ಲಾ ಸಂಗತಿಗಳನ್ನು ಪರೀಕ್ಷಿಸಿದರೆ ಕಾಂಗ್ರೆಸು ಪೂರ್ಣ ನ್ಯಾಯದಿಂದ ನಡೆಯುತ್ತಾ ಇದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಕಾಂಗ್ರೆಸಿನೊಂದಿಗೆ ಒಡಂಬಡಿಕೆಮಾಡಿಕೊಂಡು ದೇಶವನ್ನು ಮುಂದಿನ ಅನಾಂತರಗಳಿಂದ ಕಾಪಾಡುವದು ಬ್ರಿಟಿನಿನ ಧರ್ಮವೂ ಕರ್ತವ್ಯವೂ ಆಗಿದೆ

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never.
Hard Work?	—	Very Often
Hard work and THRIFT	—	Always.

RESOURCES OF A CRORE.

Estd: 1906

CANARA BANK LIMITED.

ವ್ಯಾಕರಣವು ಸುಲಭವಾಯಿತು'
ಪ್ರಬಂಧವು ಸುಂದರವಾಯಿತು

ವಿದ್ವಾನ್ ಶ್ರೀ| ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0—1—6
6ನೆ ತರಗತಿಗೆ	,,	0—2 0
7ನೆ ,,	,,	0—2—6
8ನೆ ,,	,,	0—3—0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.



ಜಿಲ್ಲಾ ಸಮಾಚಾರ



★

ಮಂಗಳೂರು

ವಿವೇಕಾನಂದ ಸಭಾ:— ಕೆನರಾ ಹೈಸ್ಕೂಲ್ ವಿವೇಕಾನಂದ ಸಭೆಯವರು ತಾ. ೨೬ರಂದು ಸ್ವಾಮಿ ಸುವಿಚಾರಾನಂದಜಿಯವರ ಅಧ್ಯಕ್ಷತೆಯಲ್ಲಿ ಇಂದಿನ ಯುದ್ಧದಲ್ಲಿ ಮಿತರಾಷ್ಟ್ರಗಳಿಗೆ ಜಯವಾಗಲಿ ಎಂದು ಪ್ರಾರ್ಥನೆ ಮಾಡಿದರು

ಉಪನ್ಯಾಸ.— ಕಳೆದ ತಾ ೨೪ನೇ ಸಾಯಂಕಾಲ ಶ್ರೀ ಬಿ ಸಂಜೀವರಾವ್ ಯಂ ಎ, ಐ. ಇ ಎಸ್ ಇವರು ಬಿಲೀಫ್ ಎಂಡ್ ಏಕ್ಷನ್' ಎಂಬ ವಿಷಯವಾಗಿ ಥಿಯಾಸಾಫಿಕಲ್ ಲಾಜಿನಲ್ಲಿ ಉಪನ್ಯಾಸ ವಿತ್ತರು

ಶ್ರೀ ಬುದ್ಧ ಜಯಂತಿ: ಸ್ಥಳೀಯ ಕಲ್ಚರಲ್ ಎಸೋಸಿಯೇಶನಿನ ಆಶ್ರಯದಲ್ಲಿ ಶ್ರೀಬುದ್ಧ ಜಯಂತ್ಯುತ್ಸವವು ನಡೆಯಿತು ಶ್ರೀ ಎಸ್ ವಾಸುದೇವರಾಯರ ಜಾತಕಗಳಲ್ಲಿ ಉಕ್ತವಾದ ಒಂದೆರಡು ಕಥೆಗಳನ್ನು ಓದಿದರು. ಶ್ರೀ ಬಿ ಸಂಜೀವರಾಯರು ಶ್ರೀಬುದ್ಧ ದೇವನು ಪ್ರಪಂಚಕ್ಕೆ ಸಾರಿದ ಸಂದೇಶವನ್ನು ತಿಳಿಸಿದರು.

ಶ್ರೀ ವಿವೇಕಾನಂದ ಸಭೆ - ಕೆನರಾ ಹೈಸ್ಕೂಲಿನ ಶ್ರೀಕೃಷ್ಣ ಮಂದಿರದಲ್ಲಿ ತಾ. ೨-೬-೪೦ರಿಂದ ೩೦-೬-೪೦ರವರೆಗೆ ಪ್ರತಿ ಆದಿತ್ಯವಾರ ಬೆಳಿಗ್ಗೆ ಘಂಟೆ ೮॥ ರಿಂದ ೧೦ರ ವರೆಗೆ ಕೀರ್ತನೆ ಮತ್ತು ಪ್ರವಚನಗಳು ನಡೆಯುವವು ಸರ್ವರಿಗೂ ಸ್ವಾಗತವಿದೆ

ಕಾರ್ಕಳ

ಅಭಿನಂದನೆಗಳು — ಕಾರ್ಕಳದ ತಾ। ಕೆ ನಾರಾಯಣಾಚಾರ್ಯರ ದ್ವಿತೀಯ ಪುತ್ರಿ ಶ್ರೀಮತಿ ಸುಶೀಲಾ ಬಾಯಿಯವರು ಮದ್ರಾಸ್ ಯೂನಿವರ್ಸಿಟಿಯ ವಿದ್ವಾನ್ ಪರೀಕ್ಷೆಯು ಉತ್ತೀರ್ಣರಾಗಿರುತ್ತಾರೆ

ಮಂಗಳೂರು ಗವರ್ನಮೆಂಟ್ ಕಾಲೇಜಿನ ಹಿಂದೀ ಅಧ್ಯಾಪಕರಾದ ಶ್ರೀ ವೆಂಕಟರಾವ್ ಉದ್ಯಾವರ ಬಿ ಎ, ಇವರು ಮದ್ರಾಸು ಯೂನಿವರ್ಸಿಟಿಯ ಬಿ ಓ ಎಲ್ ಉಪಾಧಿಯನ್ನು ಪಡೆದಿರುತ್ತಾರೆ.

ಪರೀಕ್ಷಾ ಫಲಿತಾಂಶ:— ಕಾರ್ಕಳ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಎಂಟನೆ ದರ್ಜೆಯ ಇ. ಯುಸ್ ಯಲ್. ಸಿ. ಪರೀಕ್ಷೆಯನ್ನು ಕೊಟ್ಟ ೨೭ ಮಂದಿ ವಿದ್ಯಾರ್ಥಿಗಳಲ್ಲಿ ೨೩ ಮಂದಿ ತೇರ್ಗಡೆಯಾಗಿ ಸರ್ಟಿಫಿಕೇಟುಗಳನ್ನು ಪಡೆದಿರುವದು ಶಾಲೆಗೂ ವಿದ್ಯಾರ್ಥಿ ವೃಂದಕ್ಕೂ ಭೂಷಣವಾಗಿದೆ.

ಸಹಕಾರಸಂಘದ ಸಭೆ:- ಸ್ಥಳೀಯ ಸಹಕಾರ ಸಂಘದ ಸದಸ್ಯರ ವರ್ಷಾವಧಿ ಸಭೆಯು ತಾ. ೨೬-೫-೧೯೪೦ರ ದಿನ ಬೋರ್ಡ್‌ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ ಯನ್. ಯಮ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿ ಹಿಂದಿನ ವರ್ಷದ ಡೈರೆಕ್ಟರ ಮಂಡಳಿಯನ್ನೇ ಮುಂದಿನ ವರ್ಷದಲ್ಲಿ ಅಧಿಕಾರದಲ್ಲಿರುವಂತೆ ಪುನ ಆರಿಸಲಾದುದು ಮಾತ್ರವಲ್ಲದೆ ಪ್ರಾಂತಿಕ ಕೋಪರೇಟಿವ್ ಯೂನಿಯನಿಗೆ, ರಿಜರ್ವ ಬ್ಯಾಂಕಿಗೆ ಜಿಲ್ಲಾ ಕೌನ್ಸಿಲಿಗ, ಉಡುಪಿ ಕೃಷಿ ಮತ್ತು ಕೈಗಾರಿಕೆ ಸಹಕಾರ ಸಂಘಕ್ಕೆ ಹಾಗೂ ಕಾರ್ಕಳ ಕೋಪರೇಟಿವ್ ಯೂನಿಯನಿಗೆ ಕ್ರಮವಾಗಿ ಶ್ರೀಗಳಾದ ವಕೀಲ ಕೆ ಲಕ್ಷ್ಮಣ ಕಡ್ವ ಡಾಕ್ಟರ ಅಡ್ಯಂತಾಯ ಯಫ್ ಎ ಸಕೂರ ಮತ್ತು ವಕೀಲ ಪಿ ವಿ ಉಪಾಧ್ಯಾಯರನ್ನು ಈ ಸಂಘದ ಪ್ರತಿನಿಧಿಗಳಾಗಿ ಸರ್ವಾನುಮತಿಯಿಂದ ಆರಿಸಲಾಯಿತು

ರಾಜಿ ಆಯಿತು — ದುರ್ಗದಲ್ಲಿ ಶ್ರೀಗಳಾದ ಹೊಸಹಿತ್ಲು ಅನಂತಭಟ್ಟ ಸೋದ ನಾರಾಯಣಭಟ್ಟ ಮತ್ತು ಹಾಜನ ಡೊಂಬ ಇವರೊಳಗಾದ ವಿವಾದದ ಪ್ರಕರಣವು ಸ್ಥಳೀಯ ಹರಿಜನಸೇವಾ ಸಂಘದ ಮಧ್ಯಸ್ಥಿಕೆಯಿಂದ ರಾಜಿ ಆಯಿತು

ಉಡುಪಿ

ಹಳೆ ವಿದ್ಯಾರ್ಥಿ ಸಂಘ:— ತಾ ೨೬ರಂದ ಉಡುಪಿ ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳ ರಚನೆಯ ಬಗ್ಗೆ ಪ್ರಾರಂಭ ಸಭೆಯೊಂದ ಕೂಡಿತ

ದಕ್ಷಿಣ ಕನ್ನಡ ಜಿಲ್ಲಾ ಸಹಕಾರೀ ಪರಿಷತ್ತು ಮತ್ತು ಕೃಷಿ- ಕೈಗಾರಿಕೆ ವಸ್ತು ಪ್ರದರ್ಶನ, ಉಡುಪಿ: ದಕ್ಷಿಣ ಕನ್ನಡ ಜಿಲ್ಲಾ ಸಹಕಾರೀ ಪರಿಷತ್ತು ಮತ್ತು ಕೃಷಿ—ಕೈಗಾರಿಕೆ ವಸ್ತುಪ್ರದರ್ಶನವು ಉಡುಪಿಯಲ್ಲಿ ಇದೇ ತಿಂಗಳ ತಾ ೨೮ ಮತ್ತು ೨೯ರಲ್ಲಿ ಜರಗಿತು.

ಅನೇಕ ಸಂಘಗಳ ತಮ್ಮ ಪ್ರತಿನಿಧಿಗಳನ್ನು ಪರಿಷತ್ತಿಗೆ ಕಳುಹಿಸಿಕೊಟ್ಟಿದ್ದರು.

ಪರಿಷತ್ತು ಮತ್ತು ವಸ್ತುಪ್ರದರ್ಶನವು ಉಡುಪಿಯ ಮೊಡರ್ನ್ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿದವು ಪ್ರತಿನಿಧಿಗಳ ವಸತಿ ಹಾಗೂ ಭೋಜನದ ಏರ್ಪಾಡು ಉಡುಪಿ ಬೋರ್ಡ್ ಹೈಸ್ಕೂಲಿನ ವರಾಂಡದಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ವಸ್ತುಪ್ರದರ್ಶನ ಉದ್ಘಾಟನ ಸಮಾರಂಭವು ಶ್ರೀ ಎ ಬಿ ಶೆಟ್ಟಿ, ಎಮ್ ಎಲ್ ಎ ಇವರಿಂದ ಮಾಡಲ್ಪಟ್ಟಿತು ಪರಿಷತ್ತು ಉದ್ಘಾಟನ ಸಮಾರಂಭವು ಜನಾಬ್ ಎಚ್ ಎಸ್ ಹುಸೇನ್ ಬಿ ಎ ಬಿ ಎಲ್ ಎಮ್ ಎಲ್ ಎ ಇವರಿಂದ ಮಾಡಲ್ಪಟ್ಟಿತು ಶ್ರೀ ಕೆ ಜಿ ಬಲ್ಲಾಳ್, ಬಿ ಎ ಎಲ್ ಎಲ್ ಬಿ, ಇವರ ಸ್ವಾಗತ ಭಾಷಣವಿತ್ತರು ಅಧ್ಯಕ್ಷರಾದ ಶ್ರೀ ಪಿ ಎಲ್. ಮೆಹತಾ, ಬಿ ಎ ಇವರು ವಿಚಾರ ಪೂರ್ಣವಾದ ಭಾಷಣವಿತ್ತರು ರಾತ್ರಿ ವಿನೋದಗಳಿದ್ದುವು.

ಪೆರಡಾಲ ಬೋರ್ಡ್ ಹಯರ್ ಎಲಿಮೆಂಟರಿ ಶಾಲಾ ಪ್ರವೇಶೋತ್ಸವ:— ಉದಾರಿಗಳಾದ ಮಹನೀಯರ ಸಹಾಯದಿಂದ ಬದಿಯಡ್ಕದಲ್ಲಿ ನವೀನವಾಗಿ ಕಟ್ಟಿಸಿದ ಪೆರಡಾಲ ಬೋರ್ಡ್ ಹಯರ್ ಎಲಿಮೆಂಟರಿ ಶಾಲೆಯ ಕಟ್ಟಡದ ಪ್ರವೇಶದ ಮಹೋತ್ಸವನ್ನು ಇದೇ ಬರುವ ಜೂನ್ ತಾ ೬ನೆಯ ಗುರುವಾರ ಅಪರಾಹ್ನ ಘಂಟೆ ೩ಕ್ಕೆ ಜಿಲ್ಲಾ ಬೋರ್ಡಿನ ಅಧ್ಯಕ್ಷರಿಂದ ಶ್ರೀಮಾನ್ ಕೆ ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದು ನಿರ್ಣಯಿಸಿರುತ್ತದೆ. ಉದ್ಘಾಟನಾ ಸಮಾರಂಭವು ಶ್ರೀ ಎಡನೀರು ಮಠಾಧಿಪತಿಗಳಾದ ಶ್ರೀ ಈಶ್ವರಾನಂದ ಭಾರತೀಸ್ವಾಮಿ ಶ್ರೀಪಾದಂಗಳವರಿಂದ ನೆರವೇರಲಿದೆ. ವಿದ್ಯಾಭಿಮಾನಿಗಳಾದ ಎಲ್ಲರೂ ದಯವಿಟ್ಟು ಚಿತ್ತೈಸಿ, ಈ ಸಮಾರಂಭವನ್ನು ಸಾಂಗಗೊಳಿಸಬೇಕೆಂದು ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಕಳತ್ತೋಡಿ ಕೃಷ್ಣ ಭಟ್ಟರು ತಿಳಿಸುತ್ತಾರೆ

ಟೆಕ್ಸ್ಟ್ ಬುಕ್ ಕಮಿಟಿಯಿಂದ
ಮಂಜೂರಾತಿಪಡೆದ ಶಾಲಾ ಪುಸ್ತಕಗಳು

[1939ನೇ ನವೆಂಬರ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಟ್ಟಿಗೆ ಸರಿಯಾಗಿ ಬರೆದ ಮಂಜೂರಾದ ಶಾಲಾ ಪುಸ್ತಕಗಳು]

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
4ನೇ ದರ್ಜೆ	0 3 0
5ನೇ	0 3 6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
4ನೇ ದರ್ಜೆ	0—2 0
5ನೇ	0—2—[illegible]

ಸಿವಿಕ್ಸ್ ಅಥವಾ ಪೌರಧರ್ಮ

ಪುಸ್ತಕ	ಬೆಲೆ
4ನೇ ದರ್ಜೆ	0—2—0
5ನೇ ,,	0—2—6
6ನೇ	0—3—0
7ನೇ	0—3—0
8ನೇ ,	0—3—0

ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ

ಭೂವಿವರ

ಪುಸ್ತಕ	ಬೆಲೆ
4ನೇ	0—2—6
5ನೇ	0 3—6

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ 1 0 0

ಶಾಲಾ ಉಪಯೋಗಕ್ಕೆ (ಲ್ಯಾಬ್ರೇರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	,,	0—1—6
ಸಿವಿಕ್ಸ್	,,	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ಶುದ್ಧ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಬೆಲ್ಜಿಯಮಿನ ರಾಜರ ವಿಶ್ವಾಸಘಾತ!

ಬೊಲೊನೆ ಜರ್ಮನರ ಕೈವಶವಾಯಿತು!

ಕೆಲೆಯನ್ನು ಸ್ವಾಧೀನಪಡಿಸಲಿಲ್ಲ!

ಜರ್ಮನರ ಭಯಂಕರ ನರಹತ್ಯ!

★ ಯುದ್ಧ ವಾರ್ತೆ



ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ಬೆಲ್ಜಿಯಮಿನ ರಕ್ಷಣೆಗೆಂದು ಬೆಲ್ಜಿಯಮಿನೊಳಗೆ ನುಗ್ಗಿ ಬಹು ಸಾಹಸದಿಂದ ಬೆಲ್ಜಿಯಮಿನ ಸೈನಿಕರೊಂದಿಗೆ ಜೀವದ ಹಂಗು ತೊರೆದು ಕಾದಾಡುತ್ತಿರುವಾಗ ಬೆಲ್ಜಿಯಮಿನ ರಾಜರಾದ ಲಿಯೋಪೋಲ್ಡರು ತನ್ನ ಸೈನಿಕರಿಗೆ ಶಸ್ತ್ರ ಕಳಗಿಡಬೇಕೆಂಬ ಅಪ್ಪಣೆಯನ್ನು ಕೊಟ್ಟುಬಿಟ್ಟರು. ಬೆಲ್ಜಿಯಮಿನ ಇತಿಹಾಸದಲ್ಲಿಯೇ ಇಂದಿನ ವರೆಗೆ ನಡೆಯದ ಘಾತುಕತನವು ನಡೆದುಹೋಯಿತು. ಈಗ ಅಲ್ಲಿ ಯುದ್ಧಮಾಡುತ್ತಿರುವ ಮಿತ್ರರಾಷ್ಟ್ರಗಳ ಸೈನಿಕರೂ ಫ್ರೆಂಚ್ ಯೋಧರೂ ಜರ್ಮನರ ಸೈನ್ಯವನ್ನು ಫ್ರಾನ್ಸಿನಲ್ಲಿರುವ ದೊಡ್ಡ ಸೈನ್ಯದೊಂದಾಗಿ ಸೇರುವ ಬಹು ಸಂದಿಗ್ಧ ಪರಿಸ್ಥಿತಿಯಲ್ಲಿ ಬಿದ್ದರು; ಇಲ್ಲವೇ ತಮ್ಮ ಪ್ರಯತ್ನದಲ್ಲಿ ಮಡಿದು ವೀರಸ್ವರ್ಗವನ್ನು ಅಡರಬೇಕು. ಆದರೆ ಧೀರರಾದ ಈ ಸೈನಿಕರೆಂದೂ ಲಿಯೋಪೋಲ್ಡರಂತೆ ಹೇಡಿಗಳಾಗಿ ಶರಣಾಗತರಾಗರೆಂಬುದು ನಿಶ್ಚಯ ವಿಚಾರ.

ಲಿಯೋಪೋಲ್ಡರ ತಂದೆಯು ಕಳೆದ ಯೂರೋಪಿನ ಯುದ್ಧದಲ್ಲಿ ಬಹುಸಾಹಸತೋರಿ ತನ್ನ ಸರ್ವಸ್ವವನ್ನೂ ಗೌರವಕ್ಕಾಗಿ ಒತ್ತೆಯಿಟ್ಟರು. ಅವರ ಮಗನು ಮಾತ್ರ ಇಂದೀಗ ತನ್ನ ಮಂತ್ರಿಮಂಡಳದ ವಿರೋಧವಾಗಿ ಹೀಗೆ ವಿಶ್ವಾಸಘಾತುಕತನವನ್ನು ಮಾಡಿದರು. ಈ ಸಂದರ್ಭದಲ್ಲಿ ಫ್ರೆಂಚ ಮುಖ್ಯ ಮಂತ್ರಿಗಳಿಂದ ರೆನಾಡರ ವೀರವಾಕ್ಯ ಆಶಾದಾಯಕವಿದೆ. ಅವರು ತನ್ನ ಪ್ರಜೆಗಳಿಗೆ "ನಾವು ಯಾವಾಗಲೂ ನಿರ್ಭಾಗ್ಯರಾಗಿದ್ದೆವು. ಇಂದಿನಷ್ಟು ನಿರ್ಭಾಗ್ಯರು ಎಂದೂ ಅಲ್ಲ; ಆದರೆ ನಮ್ಮ ಹಿರಿಯರಿಂದ ಮೊದಲ್ಗೊಂಡು ಶೂರತ್ವಕ್ಕೆ ಹೆಸರಾಗಿರುವವರಾಗಿರುವುದರಿಂದ ಇಂತಹ ಯಾವ ಎಡರಿಗೂ ಭಯಪಡದೆ, ಎದೆಗೊಟ್ಟು ನಿಲ್ಲುವ ಧೈರ್ಯಸಾಹಸಗಳು ನಮ್ಮಲ್ಲಿ ಇನ್ನೂ ಇದೆ ಎಂಬುದನ್ನು ನಮ್ಮ ವೈರಿಗಳಿಗೆ ತೋರಿಸಬೇಕು" ಎಂದು ಹೇಳಿರುವರು.

ಫ್ರಾನ್ಸಿನ ಉತ್ತರ ಭಾಗದಲ್ಲಿ ಮಿತ್ರರಾಷ್ಟ್ರ ಫ್ರೆಂಚ ಸೈನಿಕರಿಗೂ ಜರ್ಮನರಿಗೂ ಭಯಂಕರ ಯುದ್ಧವಾಗುತ್ತಿದೆ. ಫ್ಲಾಂಡರ್ಸಿನ ಯುದ್ಧವು ನಿಜವಾಗಿಯೂ ಭಯಾನಕ ಸ್ಥಿತಿಯಲ್ಲಿ ನಡೆಯುತ್ತಿದೆ. ಈ ಯುದ್ಧದಲ್ಲಿ ಜರ್ಮನರು ವಿಶೇಷ ವಿಮಾನದಳವನ್ನೂ ಸೈನ್ಯಬಲವನ್ನೂ ಉಪಯೋಗಿಸುತ್ತಿರುವರು. ಅಲ್ಲದೆ ಮಿತ್ರರಾಷ್ಟ್ರಗಳ ಸೇನಾವ್ಯೂಹವನ್ನು ಭೇದಿಸಲು ಪ್ರಯತ್ನವನ್ನು ಮಾಡುತ್ತಿರುವರು. ಆದರೆ ಇವರ ಹಿಡಿಮದ್ದಿನ ವ್ಯಯವು ಎಷ್ಟು ಪ್ರಯೋಜನಕಾರಿಯಾದೀತೆಂದು ಈಗ ಹೇಳಲು ಸಾಧ್ಯವಿಲ್ಲ. ಲೀಸ್ ಫ್ರಂಟಿನಲ್ಲಿ ಜರ್ಮನಿ ಎದುರಾಟವು ಅತಿವಿಶೇಷವಿದೆ. ಬ್ರಿಟಿಷ್ ಚೆನಲ್ ತೀರದ ಬೊಲೋನು ನಗರವು ಜರ್ಮನರ ಕೈಗೆ ಕಳೆದ ೨೬ನೇ ತಾರೀಕಿನ ದಿನ ಸಂಜೆ ಬಿದ್ದರೂ ಕೆಲೆಯು ಇನ್ನೂ ಫ್ರೆಂಚರ ಕೈಕೆಳಗೇ ಮಿತ್ರರಾಷ್ಟ್ರಗಳ ರಕ್ಷಣೆಯೊಳಗೆ ಇದೆ. ಸೊಮ್ಮೆಯಲ್ಲಿ ಫ್ರೆಂಚ ಸೈನ್ಯಗಳು ಅಲ್ಲಲ್ಲಿ ಸೇರಿ ಸ್ಥಾನಬಲಪಡಿಸುತ್ತಿದ್ದಾರೆ. ಆರ್ಗೊನ್ ಎಂಬಲ್ಲಿ ಫ್ರೆಂಚರು ಕಳೆದ ಶನಿವಾರ ಕಳಕೊಂಡ ಪ್ರದೇಶವನ್ನು ತಿರುಗಿ ಕೈವಶಮಾಡಿಕೊಂಡಿರುವರು. ಈ ಯುದ್ಧದಲ್ಲಿ ಜರ್ಮನರಿಗೆ ವಿಶೇಷ ನಷ್ಟವಾಗಿದೆ.

ಜರ್ಮನರ ಭಯಂಕರ ನರಹತ್ಯ

ಹೆಂಗುಸು ಮಕ್ಕಳ ನಾಶ

ಫ್ಲೇಂಡರ್ಸಿನಲ್ಲಿ ಜರ್ಮನರು ಹೆಂಗುಸರು ಮಕ್ಕಳೆಂಬ ಭೇದವನ್ನು ತೋರಿಸದೆ ಸರ್ವನಾಶಕಾರಕರಾಗಿ ಮುಂದೊತ್ತಿರುವರು. ಈ ಭಾಗದ ಕದನದಲ್ಲಿ ಸೈನಿಕರನ್ನೂ ಹಿಡಿಮದ್ದನ್ನೂ ವಿವೇಚನೆ ಇಲ್ಲದ ಅಂಥ ದೃಷ್ಟಿಯಿಂದ ವ್ಯಯಿಸುತ್ತಿರುವರು. ಇದರಿಂದ ಹಿಟ್ಲರನು ತಾನು ಏನೂ ಪ್ರಯೋಜನ ಪಡೆಯುವಂತಿಲ್ಲವೆಂಬುದು ಸಾಮಾನ್ಯರಿಗೂ ತಿಳಿಯುವ ವಿಚಾರ. ಜರ್ಮನರ ಅರಂಭಶೂರತನವನ್ನು ಇಲ್ಲಿ ತೋರಿಸಿ ಮಿತ್ರರಾಷ್ಟ್ರಗಳನ್ನು ಬೆದರಿಸುವ ಕಾರ್ಯವನ್ನು ಕೈಕೊಂಡರೂ ಇದರಿಂದ ಮಿತ್ರರಾಷ್ಟ್ರಗಳು ಎಂದೂ ಎದೆಗೆಡಲಿಕ್ಕಿಲ್ಲವೆಂಬುದನ್ನು ಜಗತ್ತು ನೋಡುವುದು. ಬ್ರಿಟಿಷರ, ಫ್ರೆಂಚರ ಮತ್ತು ಬೆಲ್ಜಿಯನರ ಭೂಸೈನ್ಯ ಹಾಗೂ ವಿಮಾನದಳಗಳು ವೈರಿಗಳನ್ನು ಇಕ್ಕಡೆಗಳಲ್ಲಿಯೂ ಎದುರಿಸಿ ಭಯಂಕರ ಯುದ್ಧ ಹೂಡುತ್ತಿದೆ. ಜರ್ಮನರ ಮೋಟರುಗಳ ಸೈನ್ಯವೊಂದು ಕೊಲೆಯ ಮೇಲೇರಿ ಹೋಗಲು ಮಾಡಿದ ಪ್ರಯತ್ನವನ್ನು ಬ್ರಿಟಿಷ್ ಸೈನ್ಯವು ಇದಿರಿಸಿ ಅದನ್ನು ಹೊಡೆದಟ್ಟಿದುದು ಈ ಭಾಗದ ಯುದ್ಧದ ಅತಿಸಾರಸ್ಯವಾದ ವಿಷಯ!

ಅಯರ್ ಮತ್ತು ಲೀ ಪ್ರಾಂತ್ಯಗಳಲ್ಲಿರುವ ಜರ್ಮನರ ಅತಿದೊಡ್ಡ ಸೈನ್ಯ ಒಂದನ್ನು ಬ್ರಿಟಿಷರ ಸಣ್ಣ ವಿಮಾನ ಪಡೆಯು ಎದುರಿಸಿ ವಿಶೇಷ ಹಾನಿಯನ್ನು ಉಂಟುಮಾಡಿರುವುದು. ಅಯರಿನ ಉತ್ತರಭಾಗದಲ್ಲಿ ಜರ್ಮನರಿಗೂ ಫ್ರೆಂಚರಿಗೂ ಭಯಂಕರ ಕಾದಾಟವಾಗಿ ಜರ್ಮನರಿಗೆ ವಿಶೇಷ ನಷ್ಟವಾಗಿದೆ. ಅವರ ಭಯಂಕರ ಹಿಡಿಗುಂಡುಗಳಿಗೆ ಎದೆಗೊಟ್ಟು ನಿಂತು ಫ್ರೆಂಚ ಸೈನ್ಯಗಳು ತಮ್ಮ ಸ್ಥಾನವನ್ನು ರಕ್ಷಿಸಿಕೊಂಡಿರುವರು.

ಜರ್ಮನರು ಹೆಚ್ಚು ಸೈನ್ಯವನ್ನು ಒಟ್ಟುಗೂಡಿಸುತ್ತಿರುವರು

ಜರ್ಮನರ ಸೀಜ್‌ಫ್ರೆಡ್ ಲೈನಿನ ಹಿಂದೆಯೂ ಸ್ವಿಸ್ ಸರಹದ್ದಿನಲ್ಲಿಯೂ ಇದ್ದ ಸೈನ್ಯಗಳನ್ನು ಫ್ರಾನ್ಸಿಗೆ ಸಾಗಿಸುತ್ತಿರುವರು. ಇದರಿಂದ ಉತ್ತರ ಫ್ರಾನ್ಸಿನಲ್ಲಿ ಇನ್ನೂ ಭಯಂಕರ ಕದನವಾಗುವುದೆಂದು ತಿಳಿಯಬಹುದು. ಇದರಿಂದ ಒಂದು ಪ್ರಾಮುಖ್ಯ ವಿಷಯವನ್ನು ತಿಳಿಯಬಹುದು—ಜರ್ಮನಿಯು ತನ್ನ ಹೆಚ್ಚಿನ ಸೇನಾಬಲವನ್ನು ಫ್ರಾನ್ಸಿನ ಕದನ ಒಂದಕ್ಕೇ ವೆಚ್ಚಮಾಡುವಂತೆ ತೋರುತ್ತದೆ. ಲೀಯಲ್ಲಿರುವ ಮಿತ್ರರಾಷ್ಟ್ರಗಳ ವ್ಯೂಹವು ಅತಿ ಭದ್ರತೆಯಾಗಿದೆ. ಯಾಕೆಂದರೆ ಇಲ್ಲಿ ಜರ್ಮನರ ಟೇಂಕ್, ಯಾಂತ್ರಿಕ ಸೈನ್ಯಗಳ ಮುಂದೊತ್ತುವಿಕೆಯನ್ನು ಶಕ್ತಿಯಿಂದ ಇದಿರಿಸಬಹುದಾಗಿದೆ. ಕಾರಣ ಇಲ್ಲಿಯೇ ನಮ್ಮ ಮಿತ್ರರಾಷ್ಟ್ರಗಳ ಸೈನಿಕರು ಕಳೆದ ಯುದ್ಧದಲ್ಲಿ ಜಯಪ್ರದವಾಗಿ ಯುದ್ಧಮಾಡಿರುವರು. ಈ ಸ್ಥಳವು ಮೈದಾನು ಭೂಮಿಯಾಗಿರುವುದರಿಂದ ಜರ್ಮನರ ಹಠಾತ್ತಾಗಿ ಮೇಲೆ ಬೀಳುವ ಉಪಾಯವೆಂದೂ ನಡೆಯಲಾರದೆಂಬ ಭರವಸೆ ಇದೆ. ಇಲ್ಲಿನ ಅಣೆಕಟ್ಟುಗಳೂ ಕಾಲುವೆಗಳೂ ಜರ್ಮನರಿಗೆ ಸ್ವಾಭಾವಿಕ ತಡೆಗಳಾಗುವುದರಲ್ಲಿ ಸಂದೇಹವಿಲ್ಲ.

ಇನ್ನೂ ದಕ್ಷಿಣಕ್ಕೆ ಅಮಿಯೇನ್ಸ್ ಮತ್ತು ಬಪೂಮೆಗಳ ಮಧ್ಯದಲ್ಲಿ ಫ್ರೆಂಚ ಸೈನಿಕರು ಮುಂದೊತ್ತಿ ಬಂದು ಜರ್ಮನ ಸೈನ್ಯವನ್ನು ಸುತ್ತು ಹಾಕುತ್ತಿರುವರು.

ಬ್ರಿಟಿಷ್ ಸರಕಾರಕ್ಕೆ ವಿಶೇಷಾಧಿಕಾರ

ರಾಷ್ಟ್ರದ ರಕ್ಷಣೆಗಾಗಿ ರಾಷ್ಟ್ರದ ಶಕ್ತಿ ಸಂಪತ್ತುಗಳನ್ನು ಸರಕಾರವು ವಶಪಡಿಸಿಕೊಳ್ಳುವ ವಿಶೇಷಾಧಿಕಾರವನ್ನು ಕೊಡುವ ನಿರ್ಣಯವೊಂದು ಮೊನ್ನೆಯ ಪಾರ್ಲಿಮೆಂಟಿನ ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾಯಿತು.

ದಕ್ಷಿಣ ಅಮೇರಿಕದ ನಿರ್ಧಾರ

ಅರ್ಜೆಂಟೈನ್ ಮತ್ತು ಉರುಗ್ವೆ ಸರಕಾರಗಳು ನಾಜೀ ಚಟುವಟಿಕೆಗಳನ್ನು ತಡೆಯಲು ನಿರ್ಧಾರ ಮಾಡಿರುವವು. ಚಿಲಿ ಮತ್ತು ಬೊಲಿವಿಯನ್ ಸರಕಾರಗಳೂ ಇದೇ ನೀತಿಯನ್ನು ಅನುಸರಿಸಬಹುದೆಂದು ತಿಳಿಯಲಾಗಿದೆ.

ಬೊಲೋನ್ ಜರ್ಮನರ ವಶವಾಯಿತು

ಅಬೆವಿಲೆಯು ಶತ್ರುಗಳ ವಶವಾಗಿದೆ. ಬೊಲೋನಿನಲ್ಲಿ ಭಯಂಕರ ಕಾದಾಟ ನಡೆದು ಕೊನೆಗೆ ಅದೂ ಜರ್ಮನರ ವಶವಾಯಿತೆಂದು ತಿಳಿದಿದೆ. ಬೊಲೋನ್ ಎಂಬುದು ಕೆಲೆಯಿಂದ ಸ್ವಲ್ಪ ದೂರದ ಒಂದು ರೇವು ಆಗಿದೆ. ಈಗ ಇಂಗ್ಲೆಂಡಿನಲ್ಲಿ ಬಹಳ ಜಾಗರೂಕತೆ ಹೆಚ್ಚಿದೆ. ಈ ಕಡೆಯಿಂದ ಮುಂದಕ್ಕೆ ಲಂಡನಿಗೆ ದಾಳಿ ಇಡಲು ಹಿಟ್ಲರನು ಯತ್ನಿಸುವನೆಂದೇ ಎಲ್ಲರೂ ಅಂಜುತ್ತಿದ್ದಾರೆ.

ಜರ್ಮನರು ಮುಂದೊತ್ತಿದರು

ಅರಾಸಿಗೂ ಸಮುದ್ರಕ್ಕೂ ಮಧ್ಯ ಪ್ರದೇಶದಲ್ಲಿ ಜರ್ಮನರು ಬಲಸಂಗತವಾಗಿ ಮುಂದುವರಿದರು. ಈ ಸೈನ್ಯವು ಸಮುದ್ರ ತೀರವನ್ನು ಮುಟ್ಟುತ್ತಿವೆಯೆಂದೂ ಫ್ರೆಂಚರ ಹೇಳಿಕೆಯಾಗಿದೆ.

ಜರ್ಮನಿಯು ತನ್ನೆಲ್ಲ ಸಾಮರ್ಥ್ಯವನ್ನೂ ಪಶ್ಚಿಮ ರಣಕ್ಷೇತ್ರದಲ್ಲಿಯೇ ಉಪಯೋಗಿಸುತ್ತಿದೆ ಎಂಬ ಅಂಶವನ್ನು ಜರ್ಮನ್ ಅಧಿಕಾರಿಗಳೇ ಬಹಿರಂಗವಾಗಿ ಒಪ್ಪುತ್ತಾರೆ ಎಂದು ಬರ್ಲಿನ್ನಿನ ಒಬ್ಬ ತಾಟಸ್ಥ್ಯರಾಷ್ಟ್ರದ ಬಾತ್ಮೀದಾರರು ಬರೆಯುತ್ತಾರೆ.

"ಈಗ ನಡೆಯುತ್ತಿರುವ ಕಾದಾಟದ ಫಲಾಫಲಗಳ ಮೇಲೆಯೇ ಜರ್ಮನಿಯ ಭವಿಷ್ಯವೆಲ್ಲವೂ ಆಧಾರವಾಗಿ ನಿಂತಿದೆ. ಎಂದು ಜರ್ಮನರು ಮನಗಂಡಿದ್ದಾರೆ. ಆದ್ದರಿಂದಲೇ ಅವರು ತಮ್ಮ ಎಲ್ಲ ವೈಮಾನಿಕ ಮತ್ತಿತರ ಸಾಧನಗಳನ್ನೂ ಕೂಡ ಹೊರಕ್ಕೆ ತಂದು ಉಪಯೋಗಿಸುತ್ತಿದ್ದಾರೆ."

"ಉತ್ತರ ಫ್ರಾನ್ಸ್ ಮತ್ತು ಬೆಲ್ಜಿಯಂಗಳಲ್ಲಿಯ ಕಾರ್ಯಾಚರಣೆಯು ಹೆರ್ ಹಿಟ್ಲರ್‌ನ ಕಾರ್ಯಕ್ರಮದಲ್ಲಿ ಮೊದಲನೆಯ ಭಾಗವೆಂದು ನಂಬಲಾಗಿದೆ. ಜರ್ಮನರು ತಾವು ಅರಿತಿದ್ದುದಕ್ಕಿಂತಲೂ ಬಿರುಸಾದ ರೀತಿಯಲ್ಲಿ ಎದುರಾಳಿಕೆಯನ್ನು ಪಡೆಯುತ್ತಿದ್ದಾರೆ."

"ಹೆರ್ ಹಿಟ್ಲರನ ಕಾರ್ಯಕ್ರಮದ ಎರಡನೇ ಭಾಗವೆಂದರೆ ಬ್ರಿಟನ್ನಿನ ಮೇಲೆ ನೇರವಾಗಿ ಬೀಳುವುದೇ ಆಗಿದೆ"

ಲಂಡನಿನಲ್ಲಿ ಫ್ಯಾಸಿಸ್ಟ್ ಮತದವರ ಬಂಧನ!

ಪಾರ್ಲಿಮೆಂಟ್ ಸದಸ್ಯರ ದಸ್ತಗಿರಿ

ಪಾರ್ಲಿಮೆಂಟಿನ ಸದಸ್ಯರಾದ ಕ್ಯಾಪ್ಟನ್ ಎ. ಹೆಚ್. ಎಂ. ರಾಮ್ಸೆಯವರನ್ನು ಡಿಫೆನ್ಸ್ ಕಾನೂನಿನ ಪ್ರಕಾರ ದಸ್ತಗಿರಿ ಮಾಡಿ ಬ್ರಿಕ್ಸ್‌ಟನ್ ಕಾರಾಗೃಹದಲ್ಲಿಡಲಾಗಿದೆ.

ಮಿ॥ ರಾಮ್ಸೆಯವರನ್ನು ದಸ್ತಗಿರಿ ಮಾಡಲು ಕಾರಣವಾದ ಡಿಫೆನ್ಸ್ ಕಾನೂನಿನ ೧೮ ಸೆಕ್ಷನ ಸಾರಾಂಶವಿದು:— ವಿದೇಶೀ ಪ್ರಭಾವವನ್ನು ಬೀರುವಂತಹ ಸಂಸ್ಥೆಯ ಉದ್ದೇಶಗಳನ್ನು ರೂಢಿಸಿ ಅವುಗಳಿಗೆ ಬೆಂಬಲನೀಯುವಂತಹವರನ್ನಾಗಲೀ, ಬ್ರಿಟನ್ನಿಗೆ ಶತ್ರುವಾಗಿರುವಂತಹ ರಾಷ್ಟ್ರದ ಸರಕಾರದಲ್ಲಿ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟ ಸಂಸ್ಥೆಗಳಲ್ಲಿ ಯಾರಾದರೂ ಬೆಂಬಲಕಾರರೂ ಅಥವಾ ಸಂಬಂಧಿಸಿದವರೂ ಎಂದು ತಿಳಿದರೂ ಅಂತಹವರನ್ನು ಬಂಧಿಸಲು ಸೆಕ್ರೆಟರಿ ಆಫ್ ಸ್ಟೇಟರಿಗೆ ಅಧಿಕಾರವಿದೆ.

ಫ್ಯಾಸಿಸ್ಟ್ ಯೂನಿಯನಿಗೆ ಪೋಲೀಸರ ಭೇಟಿ

ಸರ್ ಆಸ್ವಾಲ್ಡ್ ಮಾಸ್ಲೆಯವರ ಮುಖಂಡತ್ವದಲ್ಲಿರುವ ಫ್ಯಾಸಿಸ್ಟ್ ಸಂಸ್ಥೆಯಾದ ಬ್ರಿಟಿಷ್ ಯೂನಿಯನ್ ಎಂಬುದರ ಲಂಡನ್ ಭವನಕ್ಕೆ ದಿವಸ ಪೋಲೀಸರು ಭೇಟಿಯಿತ್ತಿದ್ದರು. ಆಮೇಲೆ ಯೂನಿಯನಿನಿಂದ ಅನೇಕರು ಪೋಲೀಸರೊಡನೆ ಹೊರಗೆ ಬಂದರು.

ಇತರ ಬಂಧನಗಳು

ಸರ್ ಆಸ್ವಾಲ್ಡ್ ಮಾಸ್ಲೆಯವರನ್ನೂ ಮತ್ತು ಬ್ರಿಟಿಷ್ ಯೂನಿಯನ್ ಆಫ್ ಇನ್ನೂ ಕೆಲವು ಪ್ರಮುಖ ಸದಸ್ಯರನ್ನೂ ದಸ್ತಗಿರಿ ಮಾಡಲಾಗಿದೆ ಎಂದು ಅಧಿಕಾರಯುತವಾಗಿ ತಿಳಿಸಿದೆ. ದಸ್ತಗಿರಿಯಾದ ಇತರರಾರೆಂದರೆ:—ಮಿ. ಗಳಾದ ರೇವ್ ಥಾಮಸ್, ಫ್ರಾನ್ಸಿಸ್ ಹಾಕಿನ್ಸ್, ಎಫ್. ಇ. [illegible]ಟ್, ಕ್ಯಾ[illegible]. ಎ. ಹಿಕ್, ಸಿ. ಎಫ್. ವಾಟ್ಸ್, ಎಂ. ಮೈಕೆಂಜಿನ್, ಜಿ. ಬ್ರುನಿಂಗ್ ಮತ್ತು ಮಾರ್ಸ್ ಡಾಕ್ರೆಫಾಕ್ಸ್.

ಕಾಮನ್ಸ್ ಸಭೆಯ ಮಾಜಿ ಸದಸ್ಯರೂ ಬ್ರಿಟಿಷ್ ಪೀಪಲ್ಸ್ ಪಾರ್ಟಿಯ ಕಾರ್ಯದರ್ಶಿಯೂ ಆದ ಮಿ. ಜಾನ್ ಬ್ಯಾಕೆಟ್ ರವರು ಕೂಡ ದಸ್ತಗಿರಿಯಾಗಿದ್ದಾರೆ.

ರಷ್ಯಾ—ಬ್ರಿಟನ್ ಸಂಬಂಧ

ಸರ್ ಸ್ಟಾಫರ್ಡ್ ಕ್ರಿಪ್ಸರು ಮಾಸ್ಕೋವಿಗೆ ಹೋಗುವರೇ?

ಸೋವಿಯಟ್ ರಷ್ಯಾದೊಡನೆ ಸಂಬಂಧವನ್ನು ಉತ್ತಮಪಡಿಸಿಕೊಳ್ಳುವುದಕ್ಕಾಗಿ ಬ್ರಿಟಿಷ್ ಸರಕಾರವು ಕೂಡಲೇ ಕಾರ್ಯಕ್ರಮವನ್ನು ಕೈಕೊಳ್ಳುತ್ತಿದೆ ಎಂದು ಕಾಮನ್ಸ್‌ನಲ್ಲಿ ಮಿ॥ ಬಟ್ಲರರು ತಿಳಿಸಿದರು.



ಗಡಿನಾಡಿನಲ್ಲಿ ನೆಹರುಗಳ ಪ್ರವಾಸ!

ಎಲ್ಲೆಲ್ಲೂ ಪ್ರಚಂಡ ಸ್ವಾಗತ!

ಭಾರತ ಸಚಿವರ ಹೇಳಿಕೆಗೆ ವಿಷಾದ!

ಡಿಫೆನ್ಸ್ ಓಫ್ ಇಂಡಿಯಾ ಆಕ್ಟು!

ಈ ಕೇಳಿಕೆಯನ್ನು ನೋಡಿದರೆ ಈಚೆಗೆ ತಾನೇ ಸೋವಿಯಟ್‌ನವರು ಬ್ರಿಟಿಷ್ ಸರಕಾರಕ್ಕೆ ಕಳುಹಿಸಿರುವ ಪತ್ರವು ಈ ಎರಡು ರಾಷ್ಟ್ರಗಳಿಗೂ ವ್ಯಾಪಾರಿ ಒಪ್ಪಂದವಾಗುವುದಕ್ಕೆ ಅವಕಾಶವನ್ನೇರ್ಪಡಿಸಿದೆಯೆಂದು ಅರ್ಥವಾಗುವುದೆಂದು ರಾಯಿಟರ್ ಡಿಪ್ಲೊಮ್ಯಾಟಿಕ್ ಬಾತ್ಮೀದಾರರು ತಿಳಿಸುತ್ತಾರೆ

ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಸರ್ ಸ್ಟ್ಯಾಫರ್ಡ್ ಕ್ರಿಪ್ಸರನ್ನು ಮಾಸ್ಕೋವಿಗೆ ಕಳುಹಿಸಬಹುದೆಂದು ಊಹಿಸಬಹುದಾಗಿದೆ ವ್ಯಾಪಾರಿ ಸಂಧಾನಕ್ಕೆ ಯಾವ ರೀತಿಯ ಮಾರ್ಗವಿದೆ ಎಂಬಂಶವನ್ನು ತಿಳಿದುಬರಲು ಅವರನ್ನು ಕಳುಹಿಸಬಹುದು ಎಂದು ಆ ಬಾತ್ಮೀದಾರರು ತಿಳಿಸುತ್ತಾರೆ

ಹಿಟ್ಲರನ ಕಾರ್ಯಕ್ರಮ

ಉತ್ತರ ಫ್ರಾನ್ಸಿನ ಮೇಲೆ ಬ್ರಿಟನಿಗೆ ಧಾಳಿ?

ಫ್ಲ್ಯಾಂಡರ್ಸ ಯುದ್ಧ

ಫ್ಲ್ಯಾಂಡರ್ಸದಲ್ಲಿಯ ಪುನಃಘೋರ ಯುದ್ಧವು ಸಾಗಿದೆ ಯುದ್ಧದ ವಿವರಗಳು ತೀರ ಗುಪ್ತವಾಗಿರಿಸಲ್ಪಟ್ಟರೂ ಅರಾಸ, ಕಾಂಬ್ರಾಯ, ವ್ಹಾಲೆನ್ಸಿಯಾ ವಿಭಾಗಗಳಲ್ಲಿ ಅತಿ ಕ್ರೂರ ಯುದ್ಧವು ಸಾಗಿದೆ

ಸ್ಕೆಲ್ಡ್ಟದ ಭದ್ರ ಕಾವಲನ್ನು ಒಡದು ಜರ್ಮನರು ಟೂರ್ನೆ ಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡರೆಂದೂ ಮಾಬ್ಯೂಜ ಕೋಟೆಯು ಜರ್ಮನರ ವಶಕ್ಕೆ ಹೋಗಿದೆಯೆಂದು ಬರ್ಲಿನ್ನ ಪ್ರಕಟಣೆಯು ಹೇಳಿಕೆ ಅರಾಸ ಮತ್ತು ಅರಾಸ ಸಮುದ್ರದ ನಡುವೆ ಜರ್ಮನ್ ಸೈನಿಕರು ಫ್ರೆಂಚ ಬಂದರಗಳತ್ತ ಸಾಗಿಬರುತ್ತಿರುವರು ಶತ್ರುಗಳ ಒಂದು ಯುದ್ಧ ಹಡಗ ಮೂರು ವಿನಾಶಿಗಳು ಮುಳುಗಿಸಲ್ಪಟ್ಟವೆಂದು ಜರ್ಮನ್ನರು ಹೇಳುತ್ತಾರೆ.

ಸ್ವಾಸಬರ್ಗ ಎಂಬ ಪಟ್ಟಣದ ಮೇಲೆ ಬಾಂಬಿನ ಮಳೆಗರೆಯಲಾಯಿತು ಎಂದು ನ್ಯೂಯಾರ್ಕಿನಿಂದ ಸುದ್ದಿ ಬಂದಿದೆ

ಯಾರ್ಕ್‌ಷೈರ್ ಮೇಲೆ ಜರ್ಮನ್ ವಿಮಾನ ಧಾಳಿ

ಸರಕಾರಿ ಪ್ರಕಟಣೆ ತಿಳಿಸುವುದೇನೆಂದರೆ.— ಯಾರ್ಕ್‌ಷೈರ್ ಕೌಂಟಿಯ ಉತ್ತರ ಭಾಗದಲ್ಲಿ (ನಾರ್ಥ ರೈಡಿಂಗ್) ಶತ್ರು ವಿಮಾನಗಳು ಬಾಂಬು ಹಾಕಿದವು. ೮ ಜನ ಸಿವಿಲಿಯನ್‌ಗಳಿಗೆ ಗಾಯವಾಯಿತು. ಈಸ್ಟ್ ಆಂಗ್ಲಿಯಾದಲ್ಲಿಯೂ ಕೆಲವು ಬಾಂಬುಗಳು ಬಿದ್ದವು. ಏನೂ ಪ್ರಾಣಹಾನಿಯಾಗಿಲ್ಲ. ಎರಡು ಗುಡಿಸಲುಗಳಿಗೆ ನಷ್ಟವಾಗಿದೆ.

ಭಾರತದಲ್ಲಿ ವಿಶೇಷ ರಾಜಕೀಯ ಚಟುವಟಿಕೆಗಳು ಈಗ ಇಲ್ಲ. ಭಾರತ ಸಚಿವರಾದ ಅಮೆರಿಯವರ ಪಾರ್ಲಿಮೆಂಟ್ ಹೇಳಿಕೆಯ ಕುರಿತು ಭಾರತದ ದುರೀಣರು ವಿಷಾದಕರವಾದ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಪಂಡಿತ ನೆಹರುಗಳು ಗಡಿನಾಡನ್ನು ಪ್ರಯಾಣ ಮಾಡುತ್ತಿದ್ದಾರೆ ಅಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತವು ದೊರೆಯುತ್ತದೆ

ಡಿಫೆನ್ಸ್ ಓಫ್ ಇಂಡಿಯಾ ಆಕ್ಟನ್ನು ಇನ್ನಷ್ಟು ತೀವ್ರವಾಗಿ ಮಾಡಲಾಗಿದೆ

ಭಾರತದಲ್ಲಿ ಚೈನಾ ಪ್ರಮುಖರು

ಅವರಿಗೆ ಜವಾಹಿರಲಾಲರ ಆತಿಥ್ಯ

ಚೈನಾ ಸರಕಾರದ ಮಂಗೋಲಿಯಾ ಮತ್ತು ಟಿಬೆಟ್ ಕಮಿಷನ ಅಧ್ಯಕ್ಷರಾದ ಪ್ರು-ಚಂಗ್ ಹ್ಸಿನ್‌ರವರೂ ಮತ್ತು ಕಲ್ಕತ್ತೆಯಲ್ಲಿರುವ ಕಾನ್ಸಲ್ ಜನರಲ್ (ರಾಯಭಾರಿ) ರಾದ ಸಿಸಿ-ಹಾಂಗ್‌ರವರೂ ಪಂಡಿತ ಜವಾಹಿರಲಾಲ್ ನಹರೂಗಳ ಅಥಿತಿಗಳಾಗಿ ಆಗಮಿಸಿ ಈ ಅಖಿಲಭಾರತ ಕಾಂಗ್ರೆಸ್ ಸಮಿತಿ ಕಛೇರಿಗೆ (ಸ್ವರಾಜ್ಯ ಭವನ) ಭೇಟಿ ಕೊಟ್ಟರು.

ಅಮರಸಿಂಗರ ನಿಧನ!

ಪ್ರಸಿದ್ಧ ಕ್ರಿಕೆಟ ಪಟುಗಳಾದ ಲಾಲ ಅಮರಸಿಂಗರ ಜಾಮ ನಗರದಲ್ಲಿ ದಮ್ಮಿನ ವಿಕಾರದಿಂದ ೨೧ನೇ ತಾರೀಕಿನ ದಿವಸ ನಿಧನಹೊಂದಿದರು.

ಮೈಸೂರಲ್ಲಿ ರಾಜಕೀಯ ಕೈದಿಗಳು

ಮೈಸೂರ ಸಂಸ್ಥಾನದಲ್ಲಿ ೧೯ನೇ ತಾರೀಕಿನ ದಿವಸ ಅನೇಕ ಸ್ಥಳಗಳಲ್ಲಿ ರಾಜಕೀಯ ಕೈದಿಗಳ ದಿನಾಚರಣೆ ನಡೆದು ಜೇಲುಗಳಲ್ಲಿ ಕೈದಿಗಳು ಪಡುತ್ತಿರುವ ಸಂಕಷ್ಟಗಳ ವಿಷಯದಲ್ಲಿ ಸಹಾನುಭೂತಿ ವ್ಯಕ್ತಮಾಡಲಾಯಿತು

ಹಿಂದೂ ಮಹಾಸಭೆಗೆ ರಾಜೀನಾಮೆ

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯ ಸಭಾಸದರಾದ ಪಂ. ಜ್ಯೋತಿ ಶಂಕರ ದೀಕ್ಷಿತ್ ಇವರು ಮಹಾತ್ಮಾಜೀಯವರ ಅನುಯಾಯಿತ್ವ ಸ್ವೀಕರಿಸಲು ತಮ್ಮ ಸಭಾಸದತ್ವಕ್ಕೆ ರಾಜಿನಾಮೆ ಕೊಟ್ಟಿದ್ದಾರೆ.

ಡಿಫೆನ್ಸ್ ಓಫ್ ಇಂಡಿಯಾ ಆಕ್ಟು!

ಮಹಾರಾಷ್ಟ್ರ ಪುರೋಗಾಮಿ ಪಕ್ಷದ ಶ್ರೀ ಬಾಭಳೆಯವರು ಹಿಂದುಸ್ಥಾನ ಸಂರಕ್ಷಣ ಕಾಯಿದೆಯ ಅನ್ವಯ ಕೈದು ಮಾಡಲ್ಪಟ್ಟಿರುವರು. ಇದೇ ರೀತಿ ಸೊಲ್ಲಾಪುರದ ಕೊಲಿಕಾರ ಮುಖಂಡರಾದ ಶ್ರೀ ಕೆ. ಕೆ. ದೇಶಪಾಂಡೆಯವರೂ ಸೆರೆಹಿಡಿಯಲ್ಪಟ್ಟಿದ್ದಾರೆ

ಮುಂಬಯಿ ಸರಕಾರದವರು ಒಂದು ಪ್ರಕಟಣೆ ಹೊರಡಿಸಿ ಯುದ್ಧದ ಸಂಬಂಧದಲ್ಲಿ ಅನಿಷ್ಟವ ಭೀತಿದಾಯಕ ಸುದ್ದಿಗಳನ್ನು ಹರಡಿದವರಿಗೆ ಹಿಂದುಸ್ಥಾನ ಸಂರಕ್ಷಣಾ ಕಾಯಿದೆಯ ಅನ್ವಯ ಶಾಸನ ಮಾಡಲಾಗುವುದೆಂದು ಜಾಹೀರ ಮಾಡಿದ್ದಾರೆ

ಕುಮಾರಿ ಗೋದಾವರಿ ಗೋಖಲೆಯವರು ಹಿಂದುಸ್ಥಾನ ಸಂರಕ್ಷಣೆ ಕಾಯಿದೆಯ ಅನ್ವಯ ಬುಧವಾರ ದಿವಸ ಸೆರೆಹಿಡಿಯಲ್ಪಟ್ಟರು. ಭಾಷಣ ಪ್ರತಿಬಂಧಕ ಹುಕುಮು ಮುರಿದು ಮೇ ದಿನದ ದಿವಸ ಭಾಷಣ ಮಾಡಿದ್ದೇ ಬಂಧನಕ್ಕೆ ಕಾರಣವಾಗಿದೆ

ಭಾರತ ಸೇವಕ ಸಮಾಜದ ಶ್ರೀ ಎನ್ ಪರುಳೇಕರರಿಗೆ ೧೨ ಮತ್ತು ೧೫ ವ ಕಲಮಿನ ಮೇರೆಗೆ ೮ ತಿಂಗಳ ಸಶ್ರಮ ಕೈದು, ಹಾಗೂ ೫೦೦ ರೂಪಾಯಿ ದಂಡ ಶಿಕ್ಷೆ ವಿಧಿಸಲ್ಪಟ್ಟಿರುವರು

ಯುದ್ಧ ವಿರೋಧೀ ಭಾಷಣ ಸಂಬಂಧದಲ್ಲಿ ಪಿರೋಜಾಬಾದದ ಶ್ರೀ ರಾಮಚಂದ್ರ ಪಾಲೀವಾಲರಿಗೆ ಹಿಂದುಸ್ಥಾನ ಸಂರಕ್ಷಣ ಕಾಯಿದೆ ಅನ್ವಯ ೧ ವರ್ಷ ಕಠಿಣ ಕೈದ ಹಾಗೂ ೫೦೦ ರೂಪಾಯಿ ದಂಡ ಹೀಗೆ ಶಿಕ್ಷೆ ವಿಧಿಸಲ್ಪಟ್ಟಿದೆ

ಅಖಿಲ ಭಾರತ ಕಿಸಾನ ಸಭೆಯ ತಾತ್ಕಾಲಿಕ ಜನರಲ್ ಸೆಕ್ರೆಟರಿಗಳಾದ ಇಂದುಲಾಲ ಯಾಜ್ಞಿಕರ ಮೇಲೆ ಭಾರತ ಸಂರಕ್ಷಣೆ ಕಾಯದೆ ಅನ್ವಯ ಅಹಮ್ಮದಾಬಾದ ಬಿಟ್ಟು ಹೋಗಬಾರದೆಂದೂ ರಾಜಕೀಯ ಇಲ್ಲವೆ ಕೂಲಿಕಾರ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳಬಾರದೆಂದೂ ನೋಟಿಸು ಪ್ರಯೋಗಿಸಲ್ಪಟ್ಟಿದೆ

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಮಿ. ಸೈದ್ ಅಬ್ದುಲ್ಲಾ ಖುರುಷೀದರವರನ್ನೂ ಕಾರ್ಯದರ್ಶಿಗಳಾದ ಮಿ. ಮಧುರಲಿಂಗರವರನ್ನೂ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ೨೬ನೇ ಸೆಕ್ಷನ್ ಪ್ರಕಾರ ದಸ್ತಗಿರಿ ಮಾಡಿ, ಮಿ. ಸೈದ್ ಅಬ್ದುಲ್ಲಾರವರನ್ನು ಚಿಕ್ಕಮಗಳೂರು ಜೈಲಿಗೂ, ಮಿ. ಮಧುರಲಿಂಗಂರವರನ್ನು ಹಾಸನದ ಜೈಲಿಗೂ ಕಳುಹಿಸಲಾಗಿದೆ.

ಮೈಸೂರು ಸರ್ಕಾರದ ಆಜ್ಞೆಯ ಮೇರೆಗೆ ಇನ್‌ಸ್ಪೆಕ್ಟರ್ ಶ್ರೀ ಸದಾಶಿವ ರಾಯರು ಇವರನ್ನು ದಸ್ತಗಿರಿ ಮಾಡಿದರು. ಇವರನ್ನು ಅನಿರ್ದಿಷ್ಟಕಾಲ ಬಂಧನದಲ್ಲಿಡಲಾಗುವುದು.

ಈ ದಸ್ತಗಿರಿಯ ಪರಿಣಾಮವಾಗಿ ರೈಲ್ವೆ ವರ್ಕ್‌ಷಾಪಿನಲ್ಲಿ ಯಾವ ಪ್ರತಿಕ್ರಿಯೆಗಳೂ ಇಲ್ಲ. ಎಲ್ಲವೂ ಶಾಂತವಾಗಿದೆ ದಸ್ತಗಿರಿಯಾದವರಿಬ್ಬರೂ ವರ್ಕ್‌ಷಾಪ್ ಕೆಲಸಗಾರರು.

ಕೆಲವು ಪ್ರಶ್ನೋತ್ತರಗಳು

ಮಿ. ಸೊರೆನ್ಸನ್ನರು ಈ ರೀತಿ ಎಮೆರಿಯವರಿಗೆ ಪ್ರಶ್ನೆಮಾಡಿದರು. "ತಾತ್ಕಾಲಿಕವಾಗಿ ಶಾಸನ ಭಂಗವನ್ನು ನಿಲ್ಲಿಸಬೇಕೆಂದು ನೆಹರುಗಳು ಅಂದಿರುವರು. ನೀವು ಆ ಮಾತನ್ನು ಪ್ರಶಂಸಿಸುವಿರೆ? ಭಾರತದ ಹೊಣೆಗಾರರಾದ ಮುಖಂಡರನ್ನು ಕಾಣಲು ತಾವು ಆ ಕಡೆ ಹೋಗುವಿರೆ?

ಉತ್ತರ,—'ಭಾರತಕ್ಕೆ ಹೋಗಬೇಕಾದ ಅನುಕೂಲ ಸಂದರ್ಭವಾದರೆ ಅದನ್ನು ಮುಂದೆ ಯೋಚಿಸಲಾಗುವುದು' ನೆಹರುಗಳು ಶಾಸನ ಭಂಗವನ್ನು ನಿಲ್ಲಿಸುದಾಗಿ ಹೇಳಿಲ್ಲ. ನಮ್ಮ ಕಷ್ಟಸ್ಥಿತಿಯಲ್ಲಿ ಅವರ ಲಾಭಪಡೆವುದಲ್ಲವೆಂದು ಮಾತ್ರ ಹೇಳಿದ್ದಾರೆ ಅದನ್ನು ನಾನು ಪ್ರಶಂಸಿಸುತ್ತೇನೆ'

ವರ್ಧಾದಲ್ಲಿ ವರ್ಕಿಂಗ್ ಕಮಿಟಿ ಸಭೆ.

ಜೂನ್ ೧೭ರಿಂದ ಆರಂಭ.

ವರ್ಕಿಂಗ್ ಕಮಿಟಿಯ ಮುಂದಿನ ಸಭೆಯು ಜೂನ ತಿಂಗಳ ೧೭ರಿಂದ ಆರಂಭವಾಗಿ ವರ್ಧಾದಲ್ಲಿ ನಡೆಯಲಿರುವದೆಂದು ಇಲ್ಲಿ ತಿಳಿದುಬಂದಿದೆ

ಹೊಸ ಉಪಮಂತ್ರಿಗಳು

ಡ್ಯೂಕ ಆಫ್ ಡೆವಿನ್‌ಶಾಯರ ಇವರನ್ನು ಹಿಂದುಸ್ಥಾನದ ಉಪಮಂತ್ರಿಗಳನ್ನಾಗಿ ನಿಯಮಿಸಲಾಗಿದೆ. ಇವರು ಮೊದಲು ಕಾನಡಾದ ಗವ್ಹರ್ನರ ಜನರಲ್ಲರಾಗಿದ್ದರು. ಈಗ ಇವರಿಗೆ ೭೧ ವರ್ಷ ವಯಸ್ಸಾಗಿದೆ

ಭಾರೀ ಯುದ್ಧವು ಇನ್ನು ಬರಲಿದೆಯಂತೆ!

ಕೊನೆಯ ನಿಕರದ ಹೋರಾಟವು ಇನ್ನು ಬರಲಿದೆಯೆಂದು ಜರ್ಮನ್ ಆಕಾಶವಾಣಿಯ ಮೂಲಕ ಜರ್ಮನ್ ಜನತೆಗೆ ಎಚ್ಚರಿಕೆ ಕೊಡಲಾಯಿತು. ಆಕಾಶವಾಣಿಯಲ್ಲಿ ಪಶ್ಚಿಮದಲ್ಲಿ ಭೀಷಣ ಘೋರ ಯುದ್ಧವು ನಡೆದಿದೆಯೆಂದೂ ಶತ್ರುವು ಒಳ್ಳೇ ನಿಕರದಿಂದ ಹೋರಾಡುತ್ತಿರುವನೆಂದೂ ಸಾರಲಾಯಿತ್ತು.

ಗ್ರಾಮ ಮತ್ತು ತಾಲೂಕು ರಾಜಕೀಯ ಸಮ್ಮೇಳನ!

ಕಾಸರಗೋಡು ... ಗ್ರಾಮದ ರಾಜಕೀಯ ಪರಿಷತ್ತು—ಜಿಲ್ಲೆಯ ರಾಜಕೀಯ ಪರಿಷತ್ತು ಕಳೆದ ... ದಿನವಾಗಿ ಕಟ್ಟಿಸಿ ಅಲಂಕರಿಸಲ್ಪಟ್ಟಿದ್ದ 'ನಾಯ್ನಾರ್ ನಗರಿ'ಯಲ್ಲಿ ಯಶಸ್ವಿಯಾಗಿ ಜರಗಿತು.

ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ಶ್ರೀ. ಎ. ಬಿ. ಶೆಟ್ಟಿ, ಯಂ. ಎಲ್. ಎ ಯವರೂ, ಅಧ್ಯಕ್ಷರಾಗಿ, ಮಳೆಯಾಳೀ 'ಮಾತೃಭೂಮಿ' ದೈನಿಕ ಪತ್ರಿಕೆಯ ಸಂಪಾದಕರಾದ ಶ್ರೀ॥ ಕೆ. ಎ. ದಾಮೋದರ ಮೇನನ್‌ರವರೂ ನಿರ್ವಹಿಸಿದರು.

ಹೊಸದುರ್ಗ ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ॥ ಟಿ. ಎಸ್. ತಿರುಮಂಬುರವರು ರಾಷ್ಟ್ರಧ್ವಜವನ್ನಾರೋಹಿಸಿದರು.

ಕುಮಾರಿ ಶಾಂತೆಯು ಪ್ರಾರ್ಥನೆ ಮಾಡಿದ ಬಳಿಕ ಶ್ರೀ॥ ಸಿ. ಕೆ. ರಾಘವನ್ ನಂಬಿಯಾರರು ಸರ್ವರಿಗೂ ಸ್ವಾಗತವನ್ನು ಬಯಸಿದರು

ಪರಿಷತ್ತಿನ ಉದ್ಘಾಟನೆಯನ್ನು ಮಾಡುತ್ತಾ ಶ್ರೀ. ಎ ಬಿ ಶೆಟ್ಟರು, ಇಂತಹ ಸಮ್ಮೇಲನಗಳು ಗ್ರಾಮ ಕ್ರಾಂತಿಗೆ, ಗ್ರಾಮಪ್ರಜರುಜ್ಜೀವನಕ್ಕೆ ಹೇಗೆ ಸಹಾಯಕವಾಗುತ್ತವೆಯೆಂಬುದನ್ನು ವಿವರಿಸಿ ನಮ್ಮ ದೇಶದಲ್ಲಿ ಧಿಕವಾಗಿರುವ ಗ್ರಾಮಗಳದಾರಿದ್ರ್ಯವನ್ನು ಚಿತ್ರಿಸಿ, ರಾಷ್ಟ್ರಕ್ಕಿದರಿಂದುಂಟಾಗುತ್ತಿರುವ ಅಪಾರ ಹಾನಿಯನ್ನು ತೋರಿಸಿಕೊಟ್ಟರು ಸರಕಾರವು ನಮ್ಮ ಕೈಗೆ ಬರುವುದೇ ಈ ಸಂಕಷ್ಟಗಳ ನಿವಾರಣೋಪಾಯವೆಂದು ಮನಗಾಣಿಸಿದುದಲ್ಲದೆ ಅವರು ಕಾಂಗ್ರೆಸ್ ಮಂತ್ರಿಮಂಡಲವು ಅದೆಂತು ತನ್ನ ನಿಯಂತ್ರಿತಾಧಿಕಾರವನ್ನಾದರೂ ಜನರೇಳ್ಗೆಗಾಗಿ ಉಪಯೋಗಿಸಿತೆಂಬುದನ್ನು ತಿಳುಹಿ ಕೇಂದ್ರಸರಕಾರವು ಭಾರತೀಯರ ವಶವಾಗುವುದು ಅತ್ಯವಶ್ಯವೆಂದು ಒತ್ತಿ ಹೇಳಿದರು

ಅಧ್ಯಕ್ಷರು ತಮ್ಮ ಆರಂಭಭಾಷಣದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಸಾಮ್ರಾಜ್ಯ ತೃಷ್ಣೆಯಿಂದುದ್ಭವಿಸಿರುವ ಈ ಮಹಾಯುದ್ಧವು ಜಗತ್ತನ್ನೇ ಅದೆಂತಹ ಅಸಾಮಾನ್ಯ ಪರಿಸ್ಥಿತಿಯಲ್ಲಿ ಕೆಡವಿತೆಂಬುದನ್ನು ವಿವರಿಸಿದರು. ಪಾಶ್ಚಾತ್ಯ ಹಿತಚಿಂತಕರೊಬ್ಬರು ಹೇಳಿದಂತೆ ಇಂದಿನ ಈ ವೈಜ್ಞಾನಿಕ ಯಂತ್ರೋಪಕರಣಗಳನ್ನು ನಿರ್ಮಿಸಿದವನು 'ದೇವದೂತ'ನಾದರೂ ಕೂಡಾ, ಅದೇ ಜ್ಞಾನಿಯು ಹೇಳುವಂತೆ ಅವುಗಳನ್ನಿಂದು ಉಪಯೋಗಿಸುತ್ತಿರುವವರು 'ಮಂಗ'ಗಳಷ್ಟೇ ಅಲ್ಲ, ಅವುಗಳಿಗಿಂತಲೂ ಹೀನರಾದವರೆಂದು ತಾವೆಣಿಸಿರುವುದಾಗಿಯೂ ತಿಳಿಸಿದರು. ನಮ್ಮೆಲ್ಲರ ಪ್ರತೀಕ್ಷೆಯಾಗಿರುವ 'ನವರಾಜ್ಯವೊಂದು' ಸ್ಥಾಪಿತವಾಗುವುದಿದ್ದರೆ ಅದು ಅಹಿಂಸೆಯ ಫಲವಾಗಿರಬೇಕೆಂದೂ ಮಹಾ... ಯವರೊಬ್ಬರೇ ಅಂತಹ ಪವಾಡಕ್ಕೆ ... ರೆಂದೂ ಅವರು ಉದ್ಘೋಷಿಸಿದರು ನಮ್ಮ ಸಮ್ಮತಿ ಇಲ್ಲದೆ ಭಾರತವನ್ನು ಯುದ್ಧಭಾಗಿ ರಾಷ್ಟ್ರವಾಗಿ ಮಾಡಿದುದರಿಂದ ಭಾರತೀಯರಿಗಾದ ಅಪರಿಮಿತ ಅನ್ಯಾಯವನ್ನು ಎತ್ತಿ ಹೇಳಿ, ರಾಷ್ಟ್ರ ಘಟನಾ ಸಮಿತಿಯು ಅವಶ್ಯವಾಗಿಯೂ ಬೇಕು ಎಂದರು. ಭಾರತ ಸ್ವಾತಂತ್ರ್ಯ ಸಮರವನ್ನು ವಿಜಯ ಪ್ರದವಾಗಿ ಕೊನೆಗೊಳಿಸಲು ವಿನಂತಿಸಿಕೊಂಡರು

ಬಳಿಕ ರಾಮಘರ್ ಠರಾವನ್ನು ಪುಷ್ಟೀಕರಿಸಿ, ಏಕಮಾತ್ರ ಗೊತ್ತುವಳಿಯೊಂದು ಸರ್ವಾನುಮತಿಯಿಂದ ಮಂಜೂರು ಗೊಳಿಸಲ್ಪಟ್ಟಿತು

ಅಧ್ಯಕ್ಷ ಪೀಠದ ಸಮಯೋಚಿತ ಭಾಷಣದೊಡನೆ ಸಮಾರಂಭವು ಕೊನೆಗೊಂಡಿತು.

ಹೊಸದುರ್ಗ ತಾಲೂಕು ಸಂಯುಕ್ತ ರಾಷ್ಟ್ರೀಯ ಸಮ್ಮೇಳನ:- ಈ ಸಮ್ಮೇಳನವು ಅದೇ ದಿನ ಸಂಜೆ ಅತಿ ಯಶಸ್ವಿಯಾಗಿ, ಪ್ರಾ ಕಾ ಸಮಿತಿಯ ಕಾರ್ಯದರ್ಶಿ ಶ್ರೀ। ಪಿ ನಾರಾಣ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು ಕರ್ಣಾಟಕ ಧುರೀಣರಾದ ಶ್ರೀ। ಕೆ ಆರ್ ಕಾರಂತ ಎಮ್. ಎಲ್. ಎ ಅವರೂ ಚಿತ್ತೈಸಿದ್ದರು

ರಾಷ್ಟ್ರೀಯ ಸ್ವಯಂಸೇವಕ ದಳದೊಡಗೂಡಿದ ಜನಸಂದಣಿಯು ಬೇಂಡ್ ವಾದ್ಯಗಳೊಡನೆ ತಳಿರ ತೋರಣಗಳಿಂದ ಲಂಕೃತವಾಗಿದ್ದ ಪೇಟೆಯ ಪ್ರಮುಖ ಬೀದಿಗಳಲ್ಲೆಲ್ಲ ಅಧ್ಯಕ್ಷರನ್ನು ಎತ್ತಿನ ಗಾಡಿಯಲ್ಲಿ ಕುಳ್ಳಿರಿಸಿ ಮೆರವಣಿಗೆಯಲ್ಲಿ ಕೊಂಡುಹೋಯಿತು 'ನಾಯನಾರ್ ನಗರಿ'ಯನ್ನದು ತಲಪಿದ ಬಳಿಕ ಸ್ವಯಂಸೇವಕದಳದವರು ಸರದಾರ್ ಚಂದ್ರೋತ್‌ರವರ ನೇತೃತ್ವದಲ್ಲಿ ಕವಾತು ಮಾಡಿದರು. ಕೇರಳದ ಪ್ರಸಿದ್ಧ ಧುರೀಣೆಯಾದ ಶ್ರೀಮತಿ ಶಾರದಾ ಕೃಷ್ಣ ಅವರು ತ್ರಿವರ್ಣ ಪತಾಕೆಯನ್ನು ಏರಿಸಿದ ಬಳಿಕ ಧ್ವಜ ವಂದನೆಯಾಯಿತು

ಶ್ರೀಮತಿ ಶಾರದಾ ಕೃಷ್ಣರವರು ತ್ರಿವರ್ಣ ಧ್ವಜದ ಮೌಲ್ಯಮಾನ್ಯತೆಗಳನ್ನು ವಿವರಿಸಿ ಹೇಳಿ, ಇಂದಿನ ಭಾರತದ ಪರಿಸ್ಥಿತಿಯ ಕುರಿತು ಮಾತನಾಡಿ ಜನತೆಯೊಂದಾಗಬೇಕೆಂದರು

ಕುಮಾರಿ ಶಾಂತೆಯ ಪ್ರಾರ್ಥನೆಯೊಡನೆ ಪರಿಷತ್ತಿನ ಕಾರ್ಯಕಲಾಪಗಳಿಗೆ ಆರಂಭವಾಯಿತು.

ಶ್ರೀ। ಸಿ ಕೆ ರಾಘವನ್ ನಂಬಿಯಾರರು ಸಭಿಕರನ್ನು ಸ್ವಾಗತಿಸುತ್ತಾ, ಈ ತಾಲೂಕಿನ ರಾಷ್ಟ್ರೀಯ ಚಟುವಟಿಕೆಗಳ ಇತಿಹಾಸವನ್ನು ಹೇಳಿ, ಹಿಂದೆ ಅದು ಕರ್ನಾಡು ಸದಾಶಿವರಾಯರ ಅಭಿನೇತೃತ್ವದಲ್ಲಿ ಹೇಗೆ ನಡೆಯಿತೆಂದೂ ಚಾತುಕುಟ್ಟಿ ನಾಯ್ನಾರರ ನಾಯಕತ್ವದಲ್ಲಿ (ಇವರ ಸ್ಮಾರಕಕ್ಕಾಗಿಯೇ ಸಮ್ಮೇಲನದ ಸ್ಥಳವನ್ನು 'ನಾಯ್ನಾರ್ ನಗರಿ' ಎಂದು ಕರೆದುದು) ಏನು ಮಾಡಿತೆಂಬುದನ್ನು ವಿವರಿಸಿ ತಿಳಿಸಿದರು.

ಬಳಿಕ ಸಂದೇಶಗಳು ಶ್ರೀಯುತರಿಂದಲೇ ಓದಲ್ಪಟ್ಟುವು ಕೇ ಪ್ರಾ ಕಾಂ ಸಮಿತಿಯ ಅಧ್ಯಕ್ಷರಾದ ಜನಾಬ್ ಅಬ್ದುಲ್ ರಹಿಮಾನರೂ ಶ್ರೀ।ಗಳಾದ ರಾಜಾಜಿಯವರೂ ಗೋಪಾಲರೆಡ್ಡಿಯವರೂ ಸಮ್ಮೇಳನಕ್ಕೆ ಸರ್ವ ವಿಜಯಗಳನ್ನಾಶಿಸಿ ಬರೆದಿದ್ದರು ಮಹಾತ್ಮಜಿಯವರು ... ಇದನ್ನು ತಾನು ಮರೆತಿಲ್ಲವೆಂದೂ ಜನರಲ್ಲಿ ಕೈಗಾರಿಕೆಯಲ್ಲಿ ಮುಂದುವರಿಯುವುದಾಗಿ ತನಗೆ ಭರವಸೆಯಿರುವುದಾಗಿಯೂ ಪರಿಷತ್ತಿಗೆ ವಿಜಯವನ್ನು ಕೋರಿಯೂ ಸಂದೇಶ ಕಳುಹಿಸಿದ್ದರು

ಪ್ರಾಂತೀಯ ಕಾರ್ಯಕಾರಿಸಮಿತಿಯ ಸದಸ್ಯರಲ್ಲೊಬ್ಬರಾದ ಜನಾಬ್ ಟಿ ಸಿ. ಅಹಮ್ಮದ್‌ರವರು ಸಮ್ಮೇಲನವನ್ನು ಉದ್ಘಾಟಿಸುತ್ತಾ ಪ್ರಸ್ತುತದೀ ಯುದ್ಧದ ಆರಂಭ, ಕಾಂಗ್ರೆಸಿನ ಕೇಳಿಕೆ, ಬ್ರಿಟಿಷರ ಉತ್ತರಗಳ ಕುರಿತು ಮಾತನಾಡಿದುದಲ್ಲದೆ, ಜಾತೀಯ ಪ್ರಶ್ನೆಗಳು ಬಗೆಹರಿಸಲ್ಪಡಬೇಕೆಂದೂ ಪಾಕಿಸ್ಥಾನ್ ಯೋಜನೆಯಷ್ಟು ದುಷ್ಪರಿಣಾಮಕಾರಿ ಬೇರೇನೂ ಇಲ್ಲವೆಂದೂ ಹೇಳಿದರು

ಅಧ್ಯಕ್ಷರ ಬಳಿಕ ಮಾತನಾಡುತ್ತಾ ಸಂಪತ್ಸಮೃದ್ಧವಾದ ಈ ಭಾರತದಲ್ಲಿ ಏಕೆ ಈ ದಾರಿದ್ರ್ಯ, ಎಂದು ಪ್ರಶ್ನಿಸಿ ಅದಕ್ಕೆ ಈಗಿನ ಆಳಿಕೆಯೊಂದೇ ಉತ್ತರವೆಂದರು ಬ್ರಿಟಿಷ್ಸಿನ ದಬ್ಬಾಳಿಕೆಯ ಕುರಿತವರು ಹೇಳುತ್ತಾ ಪ್ರಸ್ತುತದ ರಾಷ್ಟ್ರರಕ್ಷಾ ನಿಯಮದಿಂದಾಗಿ ಬರೀ ಮಲಬಾರಿನಲ್ಲೇ ೩೫೦ ಮಂದಿ ಬಂಧಿತರಾಗಿರುವುದಾಗಿ ತಿಳಿಸಿದುದಲ್ಲದೆ, ಕೇರಳದಲ್ಲಿ ಎಡ–ಬಲ ಪಕ್ಷೀಯರೊಳಗಿದ್ದ ಅಭಿಪ್ರಾಯ ವ್ಯತ್ಯಾಸಗಳ ಕುರಿತೂ ಮಾತನಾಡಿದರು ಸ್ವಾತಂತ್ರ್ಯ ಸನ್ನಾಹದೀ ಸಮಯದಲ್ಲಿ ಜಗಳವನ್ನಷ್ಟೇ ನಿಲ್ಲಿಸಿದ್ದರಲ್ಲದೆ, ಅಭಿಪ್ರಾಯ ವ್ಯತ್ಯಾಸಗಳು ನಾಶವಾಗಿಲ್ಲವಂತೆ!

ಬಳಿಕ ರಾಮಘರ್ ಠರಾವನ್ನು ಪುಷ್ಟೀಕರಿಸಿ, ಸ್ತೋಮ ಸಮರವನ್ನು ಪ್ರಾರಂಭಿಸಲು ಕೇಳಿಕೊಂಡು, ಅನ್ಯಾಯವಾಗಿ ಆದ ಕೈದುಗಳ ವಿಷಯದಲ್ಲಿ ನ್ಯಾಯವು ಸಲ್ಲಿಸಲ್ಪಡುವಂತೆ, ಅ ಭಾ ಕಾಂ ಸ ನೋಡಬೇಕೆಂದೂ, ಕೇರಳದ ಮುಷ್ಕರಗಾರರಿಗೆ ಕೈಲಾದಷ್ಟು ಧನಸಹಾಯ ಮಾಡಬೇಕೆಂದೂ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸಬೇಕೆಂದೂ ಗೊತ್ತುವಳಿಗಳು ಪಾಸಾದುವು

ಈ ಮಧ್ಯೆ ವೊಲಂಟೀಯರ್ ಕ್ಯಾಪ್ಟನ್ ಸರ್ದಾರ್ ಚಂದ್ರೋತ್‌ರವರು ಜನರು ಹೆಚ್ಚು ಹೆಚ್ಚಾಗಿ ಸ್ವಯಂಸೇವಕ ದಳವನ್ನು ಸೇರಬೇಕೆಂದೂ, ಆರ್ ಯುಸ್. ಪಂಡಿತರಿತ್ತ ಬರಲಿರುವಾಗ ತಮ್ಮ ಸಮರ ಸಿದ್ಧತೆಯನ್ನವರಿಗೆ ತೋರಿಸಬೇಕೆಂದೂ ವಿನಂತಿ ಮಾಡಿಕೊಂಡರು

ಬಳಿಕ ಅಧ್ಯಕ್ಷರು ದೀನಬಂಧು ಎಂಡ್ರೂಸ್, ಯಾಕೂಬ್ ಹಸನ್, ಪೆರಿಯ ಕುಂಞಂಬುರವರ ನಿಧನಗಳಿಗಾಗಿ ಸಂತಾಪಸೂಚಕ ಠರಾವನ್ನು ಮುಂತರಲು ಸಭಿಕರೆಲ್ಲ ಸರ್ವಾನುಮತಿಯಿಂದ ಅದನ್ನು ಮಂಜೂರುಮಾಡಿದರು. ಅಧ್ಯಕ್ಷರೆರಡು ಮಾತುಗಳ ಬಳಿಕ, ಶ್ರೀ ರಾಘವನ್ ನಂಬಿಯಾರರು ಧನ್ಯವಾದಗಳನ್ನರ್ಪಿಸಿದ ತರುವಾಯ, ವಿವಿಧ ವಿನೋದಾವಳಿಗಳು ಶ್ರೀ।.ಕೋಮನ್ ನಾಯರ್‌ರವರಿಂದಲೂ ಗಾನರತ್ನಾ ಕುಮಾರಿ ಶಾಂತೆಯಿಂದಲೂ ಪ್ರದರ್ಶಿಸಲ್ಪಟ್ಟುವು

ಈ ಮಹಾ ಸಮಾರಂಭವು ಹೀಗೆ ಯಶಸ್ವಿಯಾಗಿ ಮುಕ್ತಾಯವಾಯಿತು.

ಅರುಣ

(ಗರ್ಭಾಶಯ ಟಾನಿಕ್)

ಅರುಣ ಹೆಂಗುಸರಿಗೆ ಒಂದು ಅಮೂಲ್ಯ ಉಪಯುಕ್ತ ಔಷಧಿಯಾಗಿರುವುದಲ್ಲದೆ ಸ್ತ್ರೀಜಾತಿಯ ಎಲ್ಲಾ ಬಾಧೆಗಳಿಗೂ ಗುಣಕಾರಿಯಾಗಿರುವುದು ಇದರ ತತ್ಕ್ಷಣಿಕ ಗುಣದ ಪ್ರಭಾವದಿಂದ ನರಳುವ ಹೆಂಗಸರನ್ನು ಗುಣಪಡಿಸುವುದು. ಬಹಿಷ್ಠೆಯಾಗುವಾಗ ಇರುವ ಬೇನೆಯನ್ನು ನಿವಾರಿಸಿ ಸರಿಯಾಗಿ ಬಹಿಷ್ಠೆಯಾಗುವಂತೆ ಮಾಡುವುದಲ್ಲದೆ ಅದರ ಸಂಬಂಧದ ಎಲ್ಲಾ ಬಾಧೆಯನ್ನು ನಿವಾರಿಸುವುದು ಎಲ್ಲಾ ಪ್ರಾಯದ ಹೆಂಗಸರಿಗೂ ಉತ್ತಮವಾದ ಟೋನಿಕ್ಕು ಮಾತ್ರವಲ್ಲ ಆರೋಗ್ಯವನ್ನೂ, ಬಲವನ್ನೂ ಹೆಚ್ಚಿಸುವುದು

ಅರುಣ

ಪಂಡಿತ ಡಿ. ಗೋಪಾಲಚಾರ್ಲುರವರ ವಿಶೇಷ ಔಷಧಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ಆಯುರ್ವೇದಾಶ್ರಮಂ ಪೋಸ್ಟ್‌ಬಾಕ್ಸ್ ನಂ.287 ಮದ್ರಾಸು.

ಪುಸ್ತಕ ವಿಮರ್ಶೆ

ಭಾರತ ಮಾರ್ಗ: (ಕಾದಂಬರಿ)

ಮೂಲಲೇಖಕರು ಇ. ಎಂ. ಫಾರ್ಸ್ಟರ್ ಅನುವಾದಕರು ಗುರುರಾಜ ಭೀ. ಜೋಶಿ ಎಂ. ಎ. ಟಿ. ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ. ... ಕ್ರೌನ್ ೧/೧೬ ಆಕಾರದ ೭+೪೧೩ ... ೨-೮-೦

"ಇ. ಎಮ್. ಫಾರ್ಸ್ಟರ್ ಎಂಬವರು ಬರೆದ ಭಾರತ ಮಾರ್ಗವೆಂಬ ಕಾದಂಬರಿಯು ಕಳೆದ ಮೂವತ್ತು ನಾಲ್ವತ್ತು ವರ್ಷಗಳಲ್ಲಿ ಆದ ಕಾದಂಬರಿಗಳಲ್ಲೆಲ್ಲ ಅತ್ಯುತ್ತಮವಾದುದೆಂದು ಅನೇಕ ಆಂಗ್ಲ ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. 'ಇಂದಿನ ಶ್ರೇಷ್ಠತಮ ಕಾದಂಬರಿಗಳಲ್ಲಿ ಇದೂ ಒಂದಾಗಿದೆ.'' ಹೀಗೆಂದು ಪ್ರಾರಂಭದ 'ಮುನ್ನುಡಿಯಲ್ಲಿಯೇ ಬರೆದು ಶ್ರೀ ಜೋಶಿಯವರು ಪುಸ್ತಕದ ಕುರಿತು ಓದುಗರಿಗೆ ಗೌರವವು ಉಂಟಾಗುವಂತೆ ಮಾಡಿದ್ದಾರೆ. ಮುನ್ನುಡಿಕಾರರು ಕೊಟ್ಟ ಮೂಲಕಾವ್ಯದ ಸೂಕ್ಷ್ಮ ಪರಿಚಯವು ಆಂಗ್ಲ ಭಾಷೆಯನ್ನರಿಯದ ಕನ್ನಡಿಗರಿಗೆ ಪ್ರಕೃತ ಕಾದಂಬರಿಯ ಯೋಗ್ಯತೆ ಸ್ಥಾನಗಳನ್ನು ತಿಳಿಸಿ ಹೆಚ್ಚಿನ ಸಹಾಯ ಮಾಡತಕ್ಕುದ್ದಾಗಿದೆ.

ಬ್ರಿಟನಿನಲ್ಲಿ ಭಾರತದ ಕುರಿತು ಕಿಪ್ಲಿಂಗ್ ಮೊದಲಾದವರ ಚಿತ್ರ ಪ್ರಚಾರವೇ ಬಹಳವಾಗಿರಲು, ಅವರ ದೃಷ್ಟಿಯು ಸದೋಷವಾದುದೆಂದೂ, ಆಂಗ್ಲೇಯರು ಭಾರತದಲ್ಲಿ ಸಾಮ್ರಾಜ್ಯಶಾಹೀ ನೀತಿಯಿಂದ, ದರ್ಪದಿಂದ ನಡೆಯುತ್ತಿರುವರೆಂದೂ, ಅವರ ಆ ರೀತಿಯ ನಡತೆಯ ಪ್ರತಿಕ್ರಿಯೆಯಾಗಿ ಭಾರತೀಯರು ಆಂಗ್ಲರನ್ನು ಹೊರದೂಡಲು ಬಯಸುತ್ತಿರುವರೆಂದೂ ಇಲ್ಲಿನ ಪರಿಸ್ಥಿತಿಯು ನಿಜವಾಗಿ ಹೀಗಿದೆಯೆಂದು, ಭಾರತದ ಕುರಿತು ಕೆಟ್ಟ ದಾರಿ ಹಿಡಿದು ಹೋಗುತ್ತಿದ್ದ ಬ್ರಿಟಿಷ್ ಜನಾಂಗದ ವಿಚಾರವನ್ನು ಯಥಾರ್ಥತೆಯ ರಾಜಮಾರ್ಗದಲ್ಲಿ ಕೊಂಡೊಯ್ದ ಉದಾತ್ತ ಸಾಹಿತ್ಯ ಪುರುಷನ ಉಜ್ವಲ ವಿಚಾರ ಪ್ರಚೋದಕ ಕಾದಂಬರಿಯಿದೆಂದು ತಿಳಿದಾಗ, ಯಾವ ಭಾರತೀಯನಿಗೆ ಇದನ್ನೋದಲು ಆತುರವು ಹೆಚ್ಚಲಿಕ್ಕಿಲ್ಲ?

ಕಾದಂಬರಿಯು ಮಸೀದೆ, ಗುಹೆಗಳು, ಗುಡಿಯೆಂದು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ.

ಭಾರತದಲ್ಲಿ ಉಗ್ರಸ್ವಾತಂತ್ರ್ಯ ಚಳವು ಆರಂಭವಾಗುವ ಮೊದಲೇ ಮೂಲಲೇಖಕರಾದ ಫಾರ್ಸ್ಟರರು ಭಾರತಕ್ಕೆ ಬಂದಿದ್ದರು. ಅವರ ಉದಾತ್ತವಾದ ಮನಸ್ಸಿಗೆ ಆಂಗ್ಲ ಅಧಿಕಾರಿಗಳು ದೇಶೀಯ ಜನರೊಡನೆ ಮಾಡುವ ವ್ಯವಹಾರವನ್ನು ನೋಡಿ ದುಃಖವೆನಿಸಿತು. ಬ್ರಿಟನಿನಿಂದ ಬಂದ ಆ ಅಧಿಕಾರೀವರ್ಗದವರಾದ ಅಸಂಸ್ಕೃತಜನರಾದರೂ ಭಾರತದ ಮೇಲೆ, ಭಾರತೀಯರ ಸಂಸ್ಕೃತಿಯ ಮೇಲೆ ನಡೆಸುವ ದರ್ಪವು ಅವರ ನಿಷ್ಪಕ್ಷಪಾತ ದೃಷ್ಟಿಯನ್ನು ತೆರೆಯುವಂತೆ ಮಾಡಿತು. ಆಂಗ್ಲ ಮಹಿಳೆಯರು ಭಾರತೀಯರ ಜೀವನದಲ್ಲಿ ಕಂಡೊಡ್ಡುವ ವಿಷಮತೆಗಳನ್ನು ಕಂಡು ಅವರಿಗೆ ಸಹಿಸಲಾರದಾಯಿತು. ಭಾರತೀಯರ ಕುರಿತು ಸಹಾನುಭೂತಿಯುಳ್ಳ ಆಂಗ್ಲೇಯನೇ ಇರಲಿ ಅವನ ವಿಷಯವಾಗಿ ಆಂಗ್ಲೇಯ ಅಧಿಕಾರಿಗಳಿರುವ ತಾತ್ಸಾರ ಬುದ್ಧಿಯು ಅವರನ್ನು ಕೆರಳಿಸಿತು. ಕಷ್ಟನಷ್ಟಗಳಿಂದ ಪ್ರತಿಹತರಾಗಿ ಬಂಧನದಲ್ಲಿ ನರಳುವ ಭಾರತೀಯರು ಆಂಗ್ಲರ ಹೀನಾಚರಣೆಯ ಅನ್ಯಾಯಕ್ಕಾಗಿ ಮಸಗುತ್ತಿರುವ ಕೆಲವು ವಿದ್ಯಾವಂತರ ಪಂಗಡ, ಮುಂದೆ ಭಾರತೀಯರಲ್ಲಿ ಜಾಗೃತವಾದ ಸ್ವತಂತ್ರ ರಾಷ್ಟ್ರಗಳ ಕಲ್ಪನೆ ಇವಿಷ್ಟನ್ನು ಈ ಕಾದಂಬರಿಯಲ್ಲಿ ಫಾರ್ಸ್ಟರರು ಹೃದಯಂಗಮವಾಗಿ ಚಿತ್ರಿಸಿ ವರ್ಣಿಸಿದ್ದಾರೆ.

ಇದರಲ್ಲಿ ಕಥೆಗೆ ಹೆಚ್ಚಿನ ಮಹತ್ವವಿಲ್ಲ. ಕಥೆಯನ್ನೊಳಗೊಂಡ ತತ್ವವು, ನಿಜವಾಗಿಯೂ ವಿಚಾರ ಪ್ರಚೋದಕವಾದುದು. ಭಾರತಕ್ಕೆ ಬಂದ ಆಂಗ್ಲೇಯರ ರೀತಿ ನೀತಿಗಳನ್ನು ನಿಷ್ಪಕ್ಷಪಾತದಿಂದಲೂ ಮಾರ್ಮಿಕ ರೀತಿಯಿಂದಲೂ ಕಾದಂಬರಿಕಾರರು ಚಿತ್ರಿಸುವಲ್ಲಿ, ದೇಶೀಯರೊಳಗಿರುವ ತೆರೆಕುಳಗಳನ್ನು, ಹಿಂದೂ-ಮುಸ್ಲಿಂ ಜಗಳ ಮೊದಲಾದವುಗಳನ್ನೂ ಯಥಾವತ್ತಾಗಿ ವಿವೇಚಿಸಿದ್ದಾರೆ. ಭಾರತೀಯರ ಜೀವನವನ್ನೂ ಅವರು ಚನ್ನಾಗಿ ಪರಿಚಯ ಮಾಡಿಕೊಂಡಿದ್ದಾರೆ. ''ಎರಡೂ ಜನಾಂಗಗಳ, ದೇಶಗಳ, ಸಂಸ್ಕೃತಿಗಳ ಚಿತ್ತ ವೃತ್ತಿಗಳ ಸಂಘರ್ಷಣ ಚಿತ್ರ; ಇನ್ನೂ ಬೆಳೆಯಲಿದ್ದ ಒಂದು ರಾಷ್ಟ್ರವನ್ನು ಬೆಳೆದು ನಿಂತ ಇನ್ನೊಂದು ರಾಷ್ಟ್ರವು ಜಯಿಸಿದಾಗ ಅದರ ಪರಿಣಾಮವಾಗಿ ಜನಿಸುವ ನೂರೆಂಟು ಪಾಪ ಪುಣ್ಯಗಳ ದಿಗ್ದರ್ಶನ; ಇಂಗ್ಲೆಂಡಿನಂಥ ಕಿರಿದಾದ, ಭರತ ಖಂಡವನ್ನು ಆಳುವ ವಿಚಿತ್ರ; ಭರತ ಖಂಡದವರಾದ ನಾವು ಒಬ್ಬ ಇಂಗ್ಲೇಯನಿಗೆ ಎಂಟು ಜನರಂತೆ ಜನಗಣನೆಯಲ್ಲಿ ಲೆಕ್ಕ ಕೊಟ್ಟು ಆಳಿಸಿಕೊಳ್ಳುವ ವಿಚಿತ್ರ; ನಮ್ಮ ಸಂಪತ್ತನ್ನೆಲ್ಲಾ ಸೂರೆಗೈದರೂ ನಮ್ಮ ಕಲ್ಯಾಣವನ್ನೇ ಚಿಂತಿಸುತ್ತಿರುವೆವೆನ್ನುವ ಆಂಗ್ಲರು; ಅದನ್ನು ಕಂಡು ಕಂಡೂ ನಂಬುವ ನಾವು;''—ಇವು ಈ ಗ್ರಂಥದಿಂದಾಗಿ ತಿಳಿವ ಮಹತ್ವದ ವಿಚಾರಗಳೆಂಬ ಮುನ್ನುಡಿಕಾರರ ಮಾತನ್ನು ನಾವು ಸತ್ಯವೆಂದು ಒಪ್ಪಿಕೊಳ್ಳುತ್ತೇವೆ.

ಅನುವಾದದ ವಾಚನವು ಸರಾಗವಾಗಿ ಸಾಗುವುದಿಲ್ಲ. ಇಂತಹ ಭವ್ಯ ಕಾದಂಬರಿಯನ್ನು ಶುದ್ಧವಾದ ಭಾಷೆಯಲ್ಲಿ ಅನುವಾದ ಮಾಡಿದ್ದರೆ ಕರ್ನಾಟಕದ ಎಲ್ಲಾ ಕಡೆಯವರಿಗೂ ಸಮಾನ ವಾಚನೀಯವಾಗುತ್ತಿತ್ತು ಮಾತ್ರವಲ್ಲದೆ ಗ್ರಂಥದ ಗೌರವವೂ ಹೆಚ್ಚುತ್ತಿತ್ತು ಎಂದು ನಾವು ಎಣಿಸುತ್ತೇವೆ. ಅಂತೂ ಇಂತಹ ಉದಾತ್ತ ಗ್ರಂಥವೊಂದನ್ನು ಕನ್ನಡಕ್ಕೆ ಅನುವಾದ ಮಾಡಿದ ಶ್ರೀ ಜೋಶಿಯವರಿಗೂ ಸುಂದರವಾಗಿ ಒದಗಿಸಿಕೊಟ್ಟ ಮನೋಹರ ಗ್ರಂಥಮಾಲೆಯ ಸಂಚಾಲಕರಿಗೂ ಕನ್ನಡಿಗರು ಋಣಿಗಳು

—ಕಯ್ಯಾರ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಇಂಪೀರಿಯಲ್ ಟೊಬ್ಯಾಕೋ ಕಂಪನಿಯ ಸಿಗರೇಟುಗಳನ್ನು ಬಹಿಷ್ಕರಿಸಿರಿ.

ತಾ. ೨೮-೪-೪೦ನೇ ದಿವಸ ಧಾರವಾಡದಲ್ಲಿ ಪ್ರಾಂತೀಯ ಸತ್ಯಾಗ್ರಹ ಸಮಿತಿ ಸೇರಿದಾಗ್ಗೆ ಇಂಪೀರಿಯಲ್ ಟೊಬ್ಯಾಕೋ ಕಂಪನಿಯ ಸಿಗರೇಟುಗಳನ್ನು ಯಾರೂ ಕೊಳ್ಳಬಾರದು ಮಾರಬಾರದು ಮತ್ತು ಉಪಯೋಗಿಸಬಾರದೆಂದು ಒಂದು ಗೊತ್ತುವಳಿಯು ಪಾಸಾಗಿದೆ.

ಸಂಯುಕ್ತ ಪ್ರಾಂತದಲ್ಲಿಯ ಸಹರಾನಪುರದಲ್ಲಿನ ಈ ಸಿಗರೇಟ ಕಾರ್ಖಾನೆಯ ಕೂಲಿಕಾರರು ಕಳೆದ ಎರಡೂವರೆ ತಿಂಗಳಿನಿಂದ ತುಟ್ಟಿಯ ಬತ್ತೆಯ ಸಲುವಾಗಿ ಮುಷ್ಕರ ಹೂಡಿದ್ದಾರೆ. ಇದರಲ್ಲಿ ಮಧ್ಯಸ್ಥಿಕೆ ಮಾಡಲು ಅಲ್ಲಿಯ ಪ್ರಾಂತೀಯ ಸಮಿತಿಯವರು ಹಾಗು ಸರಕಾರದ ಲೇಬರ್ ಕಮಿಶನರರು ಮಾಡಿದ ಪ್ರಯತ್ನಗಳೆಲ್ಲಾ ಮಾಲಕರು ಒಪ್ಪದ್ದರಿಂದ ವಿಫಲವಾದುವು. ಈ ಮುಷ್ಕರದ ಅವಧಿಯಲಿ ಮೂವರು ಕೈದಾಗಿದ್ದು ೮೫ ಮಂದಿಗೆ ಲಾಠೀ ಹೊಡೆತ ಬಿದ್ದಿದೆ.

ಸಂಯುಕ್ತ ಪ್ರಾಂತೀಯ ಸಮಿತಿಯವರು ಇವೆಲ್ಲವುಗಳನ್ನು ವಿಚಾರಿಸಿ ಈ ಸಿಗರೇಟುಗಳನ್ನು ಬಹಿಷ್ಕರಿಸಬೇಕೆಂದು ತಮ್ಮ ಹಾಗು ಪರಪ್ರಾಂತದವರಿಗೆ ವಿನಂತಿ ಮಾಡಿಕೊಂಡಿದ್ದಾರೆ. ನಮ್ಮ ಪ್ರಾಂತದವರಾದರೂ ಈ ಕಂಪನಿಯ ಸಿಗರೇಟುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿ ಕೂಲಿಕಾರರಿಗೆ ನೆರವಾಗಬೇಕೆಂದು ಬಿನ್ನಹ.

ಈ ಕೆಳಗೆ ಕಾಣಿಸಿರುವ ಗುರುತಿನ ಸಿಗರೇಟುಗಳು ಇಂಪೀರಿಯಲ್ ಟೊಬ್ಯಾಕೊ ಕಂಪನಿಯವು:—

→(ಕಂಪನಿಯ ಟ್ರೇಡ್ ಮಾರ್ಕ:— 'W. D. & H. O. Wills Co. LTD.'),

೧. ಸಿಜರ್ಸ. ೨. ಪಾಸಿಂಗ್ ಶೋ. ೩. ತ್ರಿ. ೪. ಕ್ರೇವನ್. ೫. ಪ್ಲೆಯರ್ಸ ೬. ಕ್ಯಾಪ್‌ಸ್ಟನ್. ೭. ನೆಪ್ಚೂನ್. ೮. ಸ್ಪೋರ್ಟ್ಸ್‌ಮೆನ್. ೯. ಗಿನಿಗೋಲ್ಡ. ೧೦. ಕಮಾಂಡರ್. ೧೧. ಗೋಲ್ಡಫ್ಲೇಕ್. ೧೨. '555' ೧೩. ತ್ರಿ ಕ್ಯಾಸಲ್ಸ. ೧೪. ಅಬ್ದುಲ್ಲಾ. ೧೫. ಗೋಲ್ಡನ್ ಬರ್ಡ್ಸ.

ತಂಬಾಕದ ಡಬ್ಬಿಗಳು:—೧ ಗೋಲ್ಡನ್ ಬರ್ಡ್ಸ ೨ ಕ್ಯಾಪ್‌ಸ್ಟನ್. ೩ ಕ್ರೇವನ್. ೪ ಅಬ್ದುಲ್ಲಾ. ೫ ವರ್ಜೀನಿಯ.

ಧಾರವಾಡ } ಚನಬಸಪ್ಪ ಅಂಬಲಿ.
೨-೫-೪೦ } ಪ್ರ. ಕಾರ್ಯದರ್ಶಿ

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

THE

BANK OF MANGALORE LTD.,

MANGALORE.

ESTD 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit* 3½% *on daily balances.

... kinds of banking business transacted

ಚಲಚ್ಚಿತ್ರಲೋಕಕ್ಕೊಂದು ಮಹಾನಷ್ಟ!

—ಹಿಮಾಂಶು ರೈಗಳ ಮರಣ—

ಸುಪ್ರಸಿದ್ಧ ಕಲಾವಿದರೂ, ಸಿನೆಮಾ ನಟರೂ, ನಿರ್ದೇಶಕರೂ ಆದ ಶ್ರೀ ಹಿಮಾಂಶು ರೈಗಳು ಅಕಾಲ ಮೃತ್ಯುವಿಗೆ ತುತ್ತಾದರು. ತನ್ನ ಪ್ರೀತಿಯ ಪತ್ನಿಯನ್ನು ಕಲಾನಿಪುಣೆಯಾದ ರಸಿಕ ಜೀವಿಯನ್ನು —ಶ್ರೀಮತಿ ದೇವಿಕಾರಾಣಿಯನ್ನು ದುಃಖ ಸಾಗರದಲ್ಲಿ ಮುಳುಗಿಸಿ, ಇಹಲೋಕದಿಂದ ತೆರಳಿಹೋದರು! ಅವರ ಮರಣದಿಂದ ಶ್ರೀಮತಿ ದೇವಿಕಾರಾಣಿಗೆ ಮಾತ್ರವಲ್ಲ ಸಿನೆಮಾ ಜಗತ್ತಿಗೇ ಅಪಾರ ನಷ್ಟವಾಯಿತು! ಭಾರತೀಯ ಸಂಸ್ಕೃತಿಯನ್ನು ಸೇರಿಸಿ ಆಂಗ್ಲಭಾಷಾ ಚಿತ್ರವನ್ನು ಮೊದಲು ಚಿತ್ರಿಸಿಕೊಟ್ಟ ಆ ನಿರ್ದೇಶಕರು ಅಳಿದ್ಧು ಹೋದರು! ಅನೇಕ ಭಾಸ್ವರಚಿತ್ರಗಳಿಂದ ಭಾರತದ ಜನಮನವನ್ನು ಸೂರೆಗೈದ ಬೊಂಬಾಯಿ ಟಾಕೀಸಿನ ಸಂಸ್ಥಾಪಕರು ಕೀರ್ತಿಶೇಷರಾದರು! ಹೀಗೆ ಅವರ ಮರಣದಿಂದ ಭಾರತೀಯ ಸಿನೆಮಾ ಲೋಕದಲ್ಲಿ ರಸಿಕತೆಯ ರಸವಾಹಿನಿಯೇ ಇಂದು ಶುಷ್ಕವಾಗಿ ಹೋಯಿತು!

ಆ ಪತಿಪತ್ನಿಯರು

ಲಂಡನಿನಲ್ಲಿ ಅಭ್ಯಾಸಮಾಡುತ್ತಿದ್ದ ಸಮಯ ದೇವಿಕಾರಾಣಿಯು ಹಿಮಾಂಶು ರೈಗಳನ್ನು ಮೊದಲ ಸಲ ಸಂದರ್ಶನ ಮಾಡಿದಳು. ಅದು ೧೯೨೮ರಲ್ಲಿ ಆಗಿತ್ತು. ಆಗ ದೇವಿಕೆಯು ಕಲಾಭ್ಯಾಸ ಮಾಡುತ್ತಿದ್ದ ಮುಗ್ಧ ಬಾಲಿಕೆ. ಆ ಪ್ರಥಮ ಸಂದರ್ಶನವೇ ಅನುರಾಗವಾಗಿ ಬೆಳೆದು ಮುಂದೆ ಅವರನ್ನು ಪತಿಪತ್ನಿಯರನ್ನಾಗಿ ಜತೆಗೂಡಿಸಿತು. ಹಾಗೆ ವಿವಾಹಿತರಾಗಿ ಅವರು ಮುಂದೆ ಕಲೆಗಾಗಿ ತಮ್ಮ ಜೀವನವನ್ನು ಸಮರ್ಪಿಸಿದರು. ಸಿನೆಮಾಲೋಕದಲ್ಲಿ ಅಸದೃಶವಾದ ಪ್ರತಿಭೆಯನ್ನು ತೋರಿಸಿದರು.

ಹಿಮಾಂಶುರೈಗಳು ಅಂತರ್ರಾಷ್ಟ್ರೀಯ ಪಿಲ್ಮ್ ಉದ್ಯೋಗಕಾರರಾದ ಹಲವರೊಡನೆ ಕೆಲಸಮಾಡಿ; ಪಾತ್ರವಹಿಸಿ ಚಲಚ್ಚಿತ್ರ ಉದ್ಯೋಗವನ್ನು ಬಹಳ ವಿಚಕ್ಷಣತೆಯಿಂದ ಅಭ್ಯಾಸಿಸಿರುವರು. ಇಂತಹ ಹುಟ್ಟು ಚಲಚ್ಚಿತ್ರ ಪ್ರೇಮಿಯ ಪ್ರಥಮ ಸಂದರ್ಶನದಲ್ಲಿಯೇ ದೇವಿಕಾರಾಣಿಯು ಹಿಮಾಂಶುರೈಗಳಲ್ಲಿ ಅನುರಾಗವಿರಿಸಿ ವಿವಾಹವಾದದ್ದು ಅತ್ಯಂತ ನೈಸರ್ಗಿಕವೇ ಆಗಿದೆ.

★ ಸಿನೆಮಾ ಪುಟ ★

'ಕರ್ಮ'ದಲ್ಲಿ ನಟನೆ

ಆಗ ಮಾತನಾಡುವ ವಾಕ್ಪಟಗಳು ಆರಂಭವಾಗಿದ್ದುವು ಮಾತ್ರ. ಜಗತ್ತೇ ಮಾತನಾಡುವ ಹೊಸ ಚಿತ್ರಗಳ ಕಲಾನಿಪುಣತೆಗಾಗಿ ಬೆರಗುಗೊಂಡಿತ್ತು. ಅದೇ ಕಾಲದಲ್ಲಿ ಆ ದಂಪತಿಗಳು "ಕರ್ಮ" ಎಂಬ ಚಿತ್ರದಲ್ಲಿ ಪಾತ್ರವಹಿಸಿದರು. ಶುದ್ಧ ಭಾರತೀಯ ಜೀವನ ಸಂಸ್ಕೃತಿಗಳನ್ನು

ದೇವಿಕಾರಾಣಿ

ಚಿತ್ರಿಸುವ ಆ ಚಿತ್ರವು ಆಂಗ್ಲ ಭಾಷೆಯಲ್ಲಿ ಪ್ರಸಿದ್ಧವಾಗಿ ಅಂತರ್‌ರಾಷ್ಟ್ರೀಯ ಖ್ಯಾತಿಯನ್ನ ಪಡೆಯಿತು. ೧೯೩೦ರಲ್ಲಿ ಅದು ಲಂಡನಿನ ಸಿನೆಮಾಭವನದಲ್ಲಿ ಪ್ರದರ್ಶಿತವಾಗಿತ್ತು. ಮುಂದೆ ಅದು ಹಿಂದೀ ಭಾಷೆಯಲ್ಲಿಯೂ ಚಿತ್ರಿತವಾಯಿತು.

ಈ ಚಿತ್ರದಿಂದ ಆ ಪತಿಪತ್ನಿಯರು ಜಗದ್ವಿಖ್ಯಾತರಾದರು. ದೇವಿಕಾರಾಣಿಯಂತು ಸಿನೆಮಾ ಲೋಕದಲ್ಲಿ ಉತ್ಕೃಷ್ಟ ತಾರೆಯಾಗಿ ಮಿನುಗಿದಳು. ಈ ಯಶಸ್ಸನ್ನು ಕಂಡು ಹಿಮಾಂಶುರೈಗಳು ಭಾರತದಲ್ಲಿ ಒಂದು ಹಾಲಿವುಡ್ಡನ್ನು ತೆರೆಯುವ ಯೋಚನೆ ಮಾಡಿದರು.

ಬೊಂಬೇ ಟಾಕೀಸ್

ಈ ಯೋಚನೆಯು ಫಲವಾಗಿಯೇ ೧೯೩೪ರಲ್ಲಿ ಬೊಂಬಾಯಿ ಟಾಕೀಸ್ ಸ್ಥಾಪಿತವಾಯಿತು. ಅಲ್ಲಿ ಅವರು ಸಿನೆಮಾ ಕೈಗಾರಿಕೆಯ ಕುರಿತು ತೋರಿಸಿದ ಆದರವೇ ಮುಂದೆ ಬೊಂಬೇ ಟಾಕೀಸಿನ ಚಿತ್ರಗಳ ಯಶಸ್ವತೆಗೆ ಕಾರಣವಾಯಿತು. ಬೊಂಬಾಯಿ ಟಾಕೀಸ್ ಒಟ್ಟು ಹದಿನೈದು ಚಿತ್ರಗಳನ್ನು ಇದುವರೆಗೆ ಒದಗಿಸಿದೆ. ಬೊಂಬಾಯಿ ಟಾಕೀಸ್ ಚಿತ್ರಗಳ ಜನಪ್ರಿಯತೆಯು ಅಪರ ನಿರ್ದೇಶಕ ಹಿಮಾಂಶುರೈ ನಟಿ ದೇವಿಕಾರಾಣಿ ಇವರಿಬ್ಬರ ಪ್ರಭಾವದಿಂದಲಾಗಿರುತ್ತದೆ.

'ಕಲ್ಯಾಣಿ' ಚಿತ್ರದ ತಯಾರಿಯಲ್ಲಿ

ದೇವಿಕಾರಾಣಿಯ ಅಭಿನಯವುಳ್ಳ "ಕಲ್ಯಾಣಿ" ಎಂಬ ಚಿತ್ರವನ್ನು ತಯಾರಿಸುತ್ತಿರುವಾಗ ಹಿಮಾಂಶುರೈಗಳು ಬಿದ್ದರು. ಅಸೌಖ್ಯದಿಂದ ಹಾಸಿಗೆ ಹಿಡಿದವರು ಮರಳಿ ಏಳಲೇ ಇಲ್ಲ. ಹೀಗೆ ಬಹಳ ದೀರ್ಘ ಚಿಂತೆ ಭರವಸೆಗಳಿಂದ ಸಿನೆಮಾ ಜಗತ್ತಿನಲ್ಲಿ ನವನೂತನ ವೈವಿಧ್ಯತೆಗಳನ್ನು ಸೃಷ್ಟಿಸಲು ಆಶಿಸಿದ್ದ ಕಲಾಪುರುಷನೊಬ್ಬನು ನಮ್ಮ ಕಣ್ಮರೆಯಾದನು.

ಚಲಚ್ಚಿತ್ರ ವಾರ್ತೆ!

ಸೋಹ್ರಾಬ್ ಮೋದಿಯವರು ಪಿಲ್ಮ್ ಆರ್ಟಿಸ್ಟ್ ಎಸೋಸಿಯೇಶನ್ ಓಫ್ ಇಂಡಿಯಾ ಇದರ ಅಧ್ಯಕ್ಷರಾಗಿ ಪುನಃ ಆರಿಸಲ್ಪಟ್ಟರು. ಚುನಾವಣೆಯಲ್ಲಿ ಒಟ್ಟು ಓಟುಗಳು ೨೬೫! ಅವುಗಳಲ್ಲಿ ೨೬೪ ಮೋದಿಯವರಿಗೆ!

★

'ದೇಶಭಕ್ತಿ' ಎಂಬ ತಮಿಳು ಚಿತ್ರವು ಎಸ್. ಪಿ. ಎಲ್. ದನಯಂತಿಯು ನಾಯಿಕಾ ಪಾತ್ರವನ್ನು ವಹಿಸಿ ತಯಾರಾಗುತ್ತಿದೆ. ಬರುವ ತಿಂಗಳಲ್ಲಿ ಪ್ರದರ್ಶಿತವಾಗಲಿರುವುದು.

★

ಅರ್ದೋರ ಪಿಲ್ಮ್ ಕೋರ್ಪರೇಶನಿನವರು ನ್ಯೂ ಥಿಯೇಟರ್ಸಿನ ಮುಂದಿನ ಎರಡು ಚಿತ್ರಗಳ ಹಂಚುವಿಕೆಯ ಅಧಿಕಾರವನ್ನು ವಹಿಸಿರುವರೆಂದು ತಿಳಿದಿದೆ. ಒಂದನೆಯ ಚಿತ್ರ ನಿತಿನ್ ಬೋಸರಿಂದಲೂ ಎರಡನೆಯ ಚಿತ್ರವು ಹೇಮಚಂದ್ರರಿಂದಲೂ ನಿರ್ದೇಶಿಸಲ್ಪಡುವುದು. ಈ ವರ್ಷದಲ್ಲಿಯೇ ಆ ಎರಡು ಚಿತ್ರಗಳೂ ಪ್ರದರ್ಶಿತವಾಗಲಿರುವುವು.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಘಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

[illegible] 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು:

ಡಾ. ಪಾಂಡುರಂಗ ನಾಯಕ್,
ಕೊಡಿಯಾಲ, ಮಂಗಳೂರು.

ಸೋಲ್ ಏಜೆಂಟ್:

ಪ್ರೇಮ ಮೆಡಿಕಲ್ ಹಾಲ್,
ಗುತ್ತಿಗಾರ್ ದ. ಕ.

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂ ವಿವರ

6ನೇ	7ನೇ	8ನೇ ತರಗತಿಗಳಿಗೆ
0—5—0	0—6—0	0—7—0

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟುದು.

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಯುದ್ಧಕಾಲದಲ್ಲಿ ನಾಣ್ಯಗಳ ವಿಶ್ವರೂಪ!

[ಭಯಂಕರ ಯುದ್ಧಗಳು ದೀರ್ಘಕಾಲದ ತನಕ ನಡೆಯುತ್ತಿರುವಾಗ, ಯುದ್ಧೋಪಕರಣಗಳನ್ನು ತಯಾರಿಸಲಿಕ್ಕೆ ಲೋಹಾದಿಗಳ ಬಹಳ ವ್ಯಯವಾಗುವದರಿಂದ, ನಾಣ್ಯಗಳನ್ನು ಟಂಕ ಹೊಡೆಯಲಿಕ್ಕೆ ಬೇಕಾದಷ್ಟು ಲೋಹವು ಸರಕಾರಗಳ ಹತ್ತಿರ ಸಂಗ್ರಹವಾಗಿ ಇರುವದಿಲ್ಲ. ಆದ್ದರಿಂದ ಶಾಂತಿಯ ಕಾಲದಲ್ಲಿ ಪ್ರಚಾರದಲ್ಲಿದ್ದ ನಾಣ್ಯಗಳ ರಚನೆಯಲ್ಲಿ ಬಹಳ ಬದಲಾವಣೆಗಳು ಆಗುತ್ತವೆ. ಇಂಥ ಬದಲಾವಣೆಗಳು ಆದ ಅನೇಕ ದೃಷ್ಟಾಂತಗಳು ಇತಿಹಾಸದಲ್ಲಿ ದೊರೆಯುತ್ತವೆ. ಯೂರೋಪಿನಲ್ಲಿ ಈಗ ನಡೆಯುತ್ತಿರುವ ಮಹಾಯುದ್ಧದಲ್ಲಿ ಕೂಡ ಅನೇಕ ಯುದ್ಧಾಸಕ್ತ ರಾಷ್ಟ್ರಗಳು ಯುದ್ಧಕಾಲದ ಮಟ್ಟಿಗೆ ನಾಣ್ಯನೋಟುಗಳ ಚಲನೆಯಲ್ಲಿ ಬಹಳ ಪರಿವರ್ತನೆಗಳನ್ನು ಮಾಡಿಕೊಂಡಿವೆ. ಈ ಯುದ್ಧವು ಕೆಲವು ವರ್ಷಗಳ ವರೆಗೆ ನಡೆಯುವ ಸಂದರ್ಭದಲ್ಲಿ ನಾಣ್ಯ ನೋಟುಗಳ ರಚನೆಯಲ್ಲಿ ಮತ್ತೆ ಎಂಥೆಂಥ ಮಹತ್ವದ ಬದಲಾವಣೆಗಳಾಗಬಹುದೆಂಬುದನ್ನು ಹೇಳಲಾಗುವದಿಲ್ಲ.]

ಜರ್ಮನಿಯಲ್ಲಿ ನಿಕ್ಕಲ್ ಇಲ್ಲ

ಜರ್ಮನಿಯಲ್ಲಿ ನಿಕ್ಕಲು ಯುದ್ಧಕಾರ್ಯವನ್ನು ಮುಂದೊತ್ತಲಿಕ್ಕೆ ಅತ್ಯವಶ್ಯವಾಗಿರುವುದರಿಂದ ಅಲ್ಲೀಗ ನಿಕ್ಕಲು ನಾಣ್ಯಗಳು ಪೂರ್ಣ ಮಾಯವಾಗುತ್ತ ಬರುತ್ತಲಿವೆ. ಬ್ರಿಟಿಷರು ಜರ್ಮನಿಯೊಳಗಾಗುತ್ತಿದ್ದ ನಿಕ್ಕಲಿನ ಆಮದಿಗೆ ತಡೆಹಾಕಿರುವದರಿಂದ ಯುದ್ಧೋಪಕರಣಗಳನ್ನು ತಯಾರಿಸಲಿಕ್ಕೆ ಜರ್ಮನಿ ಒಂದೊಂದು ಸಣ್ಣ ಚೂರು ನಿಕ್ಕಲನ್ನು ಕೂಡ ಸಂಗ್ರಹಿಸಬೇಕಾಗಿ ಬಂದಿದೆ. ಆದ್ದರಿಂದ ಈಗ ಜರ್ಮನಿ ನಿಕ್ಕಲ್ ಲೋಹದ ನಾಣ್ಯಗಳನ್ನು ಉಪಯೋಗಿಸುತ್ತಿರುವದರ ಬದಲಿಗೆ ಮಿಶ್ರ ಲೋಹದ ನಾಣ್ಯಗಳನ್ನು ಪ್ರಚಾರಕ್ಕೆ ತಂದಿದೆ! ಜರ್ಮನಿಯ ಅಧೀನವಾದ ಜೆಕೊಸ್ಲೊವೇಕಿಯದ ಭಾಗಗಳಲ್ಲಿ ಒಂದು ಕ್ರೌನು ಬೆಲೆಬಾಳುವ ನೋಟುಗಳು ಒಂದುವರೆ ಪಸ್ಸಿಗೆ ಮಾರುತ್ತವೆ. ಲೋಹದ ನಾಣ್ಯಗಳು ಪ್ರಚಾರದಲ್ಲಿ ಕಡಿಮೆಯಾಗಿರುವದೇ ನೋಟುಗಳ ಬೆಲೆ ಕಡಿಮೆಯಾಗುವ ಕಾರಣವೆಂದು ಹೇಳುತ್ತಾರೆ. ಅಲ್ಲಿ ಒಂದು ಕಡೆಯಿಂದ ಜರ್ಮನ ಸರಕಾರವು ತನ್ನ ಅವಶ್ಯಕತೆಯ ಪೂರ್ತಿಗೆ ಲೋಹಗಳನ್ನು ಸಂಗ್ರಹಿಸುತ್ತಿರುವಾಗ, ಇನ್ನೊಂದು ಕಡೆಯಿಂದ ಭಯಬಾಧಿತ ಜನರೂ ಲೋಹಸಂಗ್ರಹ ಮಾಡುತ್ತಲಿದ್ದಾರೆ. ಹೀಗಾದ್ದರಿಂದ ನೋಟುಗಳ ಬೆಲೆ ಇಳಿಮುಖವಾಗಿದೆ.

ಯುದ್ಧ ಕಾಲದ ನಾಣ್ಯಗಳು

ಯುದ್ಧಕಾಲದಲ್ಲಿ ಆರ್ಥಿಕ ಪ್ರಪಂಚದಲ್ಲೂ ಭಯಂಕರ ಕ್ರಾಂತಿಗಳಾಗುವವು. ಅನೇಕ ವಿಚಿತ್ರತರದ ನಾಣ್ಯಗಳು ಬಳಕೆಗೆ ತರಲ್ಪಡುವವು. ಕಳೆದ ಮಹಾಯುದ್ಧದಲ್ಲಿ ಬ್ರಿಟನಿನ ನಾಣ್ಯ ಚಲಾವಣೆಯಲ್ಲಿ ಕೂಡ ಮಹತ್ವದ ಪರಿವರ್ತನಗಳಾಗಿದ್ದುವು. ಆಗ ಚಿನ್ನವನ್ನು ಸಂಗ್ರಹಿಸಿ ಇಡಬೇಕಾದ ಅಗತ್ಯ ಬಿದ್ದುದರಿಂದ ಬ್ರಿಟನಿನ ಸರಕಾರವು ಪವನುಗಳನ್ನು ಮುದ್ರೆಹೊಡೆಯುವ ಬದಲಿಗೆ ಕಾಗದದ ನೋಟುಗಳನ್ನೇ ಅಚ್ಚುಹಾಕಿ ಪ್ರಚಾರಕ್ಕೆ ತಂದಿತು. ಶಾಂತಿಯ ಕಾಲದಲ್ಲಿ ಎಷ್ಟು ಚಿನ್ನದ ಪವನುಗಳು ಮುದ್ರೆ ಒತ್ತಲ್ಪಡುತ್ತಿದ್ದುವೋ ೧೯೧೬ರ ಅನಂತರ ಆ ಪರಿಮಾಣದ ಇಪ್ಪತ್ತೈದರಲ್ಲಿ ಒಂದು ಪಾಲಿನಷ್ಟೇ ಪವನುಗಳು ಮುದ್ರೆ ಒತ್ತಲ್ಪಡತೊಡಗಿದುವು. ಪವನುಗಳನ್ನು ಕಡಿಮೆ ಮುದ್ರೆ ಒತ್ತುವ ಇನ್ನೊಂದು ಕಾರಣವೂ ಇದ್ದಿತು. ಈ ಪವನುಗಳು ಸವೆದು ಹೋಗುವದರಿಂದ ಪ್ರತಿನೂರು ಪವನುಗಳಿಗೆ ವರ್ಷಕ್ಕೆ ಒಂದುವರೆ ಪವನಿನಷ್ಟು ನಷ್ಟವಾಗುತಿತ್ತು. ಯುದ್ಧಕಾಲದಲ್ಲಿ ಸರಕಾರವು ಈ ನಷ್ಟವನ್ನು ಹೊತ್ತುಕೊಳ್ಳಲಿಕ್ಕೆ ಸಿದ್ಧವಿದ್ದಿಲ್ಲ.

ಕಳೆದ ಯುದ್ಧಕಾಲದ ನಾಣ್ಯಗಳಲ್ಲಾದ ಮತ್ತೊಂದು ಬದಲಾವಣೆ ಎಂದರೆ ಬೆಳ್ಳಿಯ ನಾಣ್ಯಗಳಲ್ಲಿರುವ ಬೆಳ್ಳಿಯ ಅಂಶವನ್ನು ಕಡಿಮೆಮಾಡಿದುದಾಗಿದೆ. ಎಷ್ಟೋ ಶತಮಾನಗಳಿಂದ ಬ್ರಿಟನ ಬೆಳ್ಳಿಯ ನಾಣ್ಯಗಳಲ್ಲಿ ನೀಕಡಾ ೯೨ರಷ್ಟು ಬೆಳ್ಳಿ ಇರುತಿತ್ತು. ಆದರೆ ಕಳೆದ ಯುದ್ಧಕಾಲದಲ್ಲಿ ಶೇಕಡಾ ೫೦ರಷ್ಟು ಮಾತ್ರ ಬೆಳ್ಳಿ ಇರುವ ನಾಣ್ಯಗಳು ಟಂಕ ಹೊಡೆಯಲ್ಪಟ್ಟವು. ಒ ದೆರಡು ವರ್ಷಗಳ ಅವಧಿಯೊಳಗಾಗಿ ಸರಕಾರವು ಹೆಚ್ಚು ಬೆಳ್ಳಿಯ ಅಂಶ ಇರುತ್ತಿದ್ದ ಹಿಂದಿನ ನಾಣ್ಯಗಳನ್ನೆಲ್ಲ ಹಿಂದಕ್ಕೆ ತೆಗೆದುಕೊಂಡು ಕಡಿಮೆ ಬೆಳ್ಳಿಯ ಹೊಸ ನಾಣ್ಯಗಳನ್ನೇ ಪ್ರಚಾರಕ್ಕೆ ತಂದಿತು. ಹೀಗೆ ಆ ಕಾಲದಲ್ಲಿ ಸರಕಾರವು ೭೦೦೦ಟನ್ ಭಾರದ ಬೆಳ್ಳಿಯ ೧೦೦ ಕೋಟಿ ಹಳೆ ನಾಣ್ಯಗಳನ್ನು ಪ್ರಚಾರದಿಂದ ಹಿಂದಕ್ಕೆ ತೆಗೆದುಕೊಂಡಿತ್ತು. ಇದರಿಂದ ಸರಕಾರಕ್ಕೆ ಬಹಳ ಲಾಭವಾಯಿತು. ಈ ರೀತಿ ಸರಕಾರಕ್ಕೆ ಲಾಭವಾದುದರಿಂದ ಅದು ಜನರ ಮೇಲೆ ಹೊಸತೆರಿಗೆಗಳನ್ನು ಹಾಕಿ ಅವರಿಗೆ ಕಷ್ಟ ಕೊಡುವದು ನಿಂತಿತು.

ಇತರ ದೇಶಗಳ ನಾಣ್ಯಗಳಲ್ಲಿ ಬದಲಾವಣೆ

೧೭೮೯ರಲ್ಲಿ ಫ್ರಾನ್ಸದೇಶವು ಭಯಂಕರ ಯುದ್ಧಗಳಲ್ಲಿ ತೊಡಗಿದ್ದಾಗ ಅದಕ್ಕೆ ತಾಮ್ರವು ಅಗತ್ಯವಾಯಿತು. ಅದು ದೊರೆಯುವದು ಕಷ್ಟವಾದಾಗ ಫ್ರೆಂಚ ಸರಕಾರವು ಇಗರ್ಜಿಯ ದೊಡ್ಡದೊಡ್ಡ ಗಂಟೆಗಳನ್ನೇ ಕರಗಿಸಿ ನಾಣ್ಯಗಳನ್ನು ಮುದ್ರೆ ಹೊಡೆಯಿತು. ಶುದ್ಧ ತಾಮ್ರದಿಂದ ಕಂಚಿನ ನಾಣ್ಯಗಳಿಂದ ಸವೆದು ಆಗುವ ನಷ್ಟವು ಕಡಿಮೆ ಎಂದು ಸರಕಾರಕ್ಕೆ ಆಗ ತಿಳಿಯಿತು. ಅಂದಿನಿಂದ ಶುದ್ಧ ಲೋಹದ ನಾಣ್ಯಗಳ ಪ್ರಚಾರವಿರುವ ಎಲ್ಲಾ ರಾಷ್ಟ್ರಗಳಲ್ಲಿಯೂ ಮಿಶ್ರಲೋಹದ ನಾಣ್ಯಗಳು ಪ್ರಚಾರಕ್ಕೆ ಬಂದಿವೆ.

ಕಳೆದ ಮಹಾಯುದ್ಧವು ಮುಗಿಯುವಷ್ಟಕ್ಕೆ ಜರ್ಮನಿಯಲ್ಲಿ ಆರ್ಥಿಕ ವಿಪ್ಲವವುಂಟಾಯಿತು. ಲೋಹವು ಅಪರೂಪವಾಯಿತು. ಆದ್ದರಿಂದ ಕಾಗದದ ನೋಟುಗಳೇ ಪ್ರಚಾರಕ್ಕೆ ಬಂದುವು. ಆ ಕಾಲದಲ್ಲಿ ಛಾಪಖಾನೆಗಳಿಗೆ ತಲೆ ತುರಿಸಿಕೊಳ್ಳಲಿಕ್ಕೂ ಸಮಯ ದೊರೆಯುತ್ತಿದ್ದಿಲ್ಲವಂತೆ. ಲೋಬಜನ ಎಂಬ ಜರ್ಮನಿಯ ಒಂದು ನಗರವು ದಿವಾಳಿ ಆಗಿತ್ತು. ಅದರ ಮುನಿಸಿಪಾಲಿಟಿ ತಾನೇ ನೋಟುಗಳನ್ನು ಅಚ್ಚುಹಾಕಿ ಅವನ್ನು ಪ್ರಚಾರಕ್ಕೆ ತರುವ ಆಲೋಚನೆ ಮಾಡಿತು; ನೋಟುಗಳನ್ನು ಛಾಪಿಸಿ ಕೊಡಿರೆಂದು ಮುನಿಸಿಪಾಲಿಟಿ ಒಂದು ಛಾಪಖಾನೆಗೆ ಹೇಳಿತು. ಛಾಪಿಸಿದ್ದಕ್ಕೆ ಹಣ ಎಲ್ಲಿಂದ ಕೊಡುತ್ತೀರಿ ಎಂದು ಛಾಪಖಾನೆಯವರು ಕೇಳಿದಕ್ಕೆ ನೋಟುಗಳು ಛಾಪಿಸಿ ಬಂದೊಡನೆ ಅವನ್ನೇ ನಿಮಗೆ ಹಣವಾಗಿ ಕೊಡುವೆವು ಎಂದು ಮುನಿಸಿಪಾಲಿಟಿ ಉತ್ತರ ಕೊಟ್ಟಿತಂತೆ.

ಯುದ್ಧಾನಂತರ ಜರ್ಮನಿಯ ಆರ್ಥಿಕ ಸ್ಥಿತಿ ಎಷ್ಟು ಕೆಟ್ಟುಹೋಗಿತ್ತೆಂದರೆ ರೂಪಾಯಿಯ ನೋಟುಗಳನ್ನು ಕಾಸಿಗೆ ಕೊಂಡುಕೊಳ್ಳುವವರ ಕೂಡ ಇದ್ದಿಲ್ಲ. ಬರ್ಲಿನಿನ ಒಂದು ಛಾಪಖಾನೆಯ ಮಾಲಿಕನು ತಾನು ಛಾಪಿಸಿದ ಕೋಟ್ಯಾಂತರ ನೋಟುಗಳ ಸಣ್ಣ ಸಣ್ಣ ಪುಸ್ತಕಗಳನ್ನು ಮಾಡಿ, ಸಾವಿರಾರು ರೂಪಾಯಿಯ ನೋಟುಗಳ ಒಂದೊಂದು ಪುಸ್ತಕವನ್ನು ಕಾಲಾಣೆ ಆಧಾಣೆಗೆ ಮಾರುತ್ತಿದ್ದನಂತೆ. ಈ ಮಹಾಯುದ್ಧವು ಯಾವ ರಾಷ್ಟ್ರಕ್ಕೆ ಇಂಥ ದುರ್ಗತಿಯನ್ನು ತಂದುಕೊಡಬಹುದೆಂದು ಯಾರು ಹೇಳಬಲ್ಲರು?

ನಾಣ್ಯಗಳ ಬದಲಿಗೆ ಚೀಟುಗಳು

ಕಳೆದ ಮಹಾಯುದ್ಧ ಕಾಲದಲ್ಲಿ ಯುರೋಪಿನ ಅನೇಕ ರಾಷ್ಟ್ರಗಳು ನಾಣ್ಯಗಳ ಬದಲಿಗೆ ಟಪಾಲು ಚೀಟುಗಳಂಥ ಚೀಟುಗಳನ್ನೇ ನಾಣ್ಯಗಳಾಗಿ ಉಪಯೋಗಿಸಿವೆ. ಪೋಸ್ಟಲ್ ಆರ್ಡರು ಇಂಥ ದೊಡ್ಡ ಕಾಗದ ತುಂಡುಗಳನ್ನು ನಾಣ್ಯವಾಗಿ ಉಪಯೋಗಿಸಿವೆ!

ಚೀನದ ವಿಚಿತ್ರ ನಾಣ್ಯ

ಕ್ರಿಸ್ತಪೂರ್ವ ೬೫೦ರಲ್ಲಿ ಚೀನದಲ್ಲಿ ಮಹಾ ಯುದ್ಧವೊಂದು ನಡೆದಿದ್ದಾಗ ಆಗಿನ ಅರಸು ತನ್ನ ಸೈನಿಕರಿಗೆ ಚೂರಿಕತ್ತಿಗಳನ್ನೇ ನಾಣ್ಯವಾಗಿ ಉಪಯೋಗಿಸಲಿಕ್ಕೆ ಹೇಳಿದನಂತೆ. ಈ ವಿಚಿತ್ರ ನಾಣ್ಯಗಳು ಯುದ್ಧ ಮುಗಿದ ಅನೇಕ ವರ್ಷಗಳ ಅನಂತರವೂ ಪ್ರಚಾರದಲ್ಲಿದ್ದುವು. ನ್ಯೂಫೌಂಡ್ಲೆಂಡಿನಲ್ಲಿ ಲೋಹದ ಕೊರತೆಯಾದಾಗ ಅಲ್ಲಿಯ ಬೇಂಕು ನಾಣ್ಯಗಳ ಬದಲಿಗೆ ಬೆಂತಕಡ್ಡಿಗಳನ್ನೂ ಗುಂಡುಸೂಜಿಗಳನ್ನು ನಾಣ್ಯವಾಗಿ ಉಪಯೋಗಿಸಿತ್ತಂತೆ. ಯುದ್ಧಕಾಲದ ಆಪತ್ತಿನಿಂದ ಪಾರಾಗುವದಕ್ಕೋಸ್ಕರ ನಾಣ್ಯ ನೋಟುಗಳ ಕ್ರಮದಲ್ಲಿ ಇಂಥ ಬಹಳ ಪರಿವರ್ತನೆಗಳು ಆಗಿವೆ. ಆಗುತ್ತಲಿವೆ. ಆ ಪರಿವರ್ತನಗಳು ಭವಿಷ್ಯದಲ್ಲಿ ಆಗಬಹುದೆ?

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು   ಬ್ರೆಂಚ್ ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ 1,00,000   ತೆರಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ಇಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಲ್ತಿ ಠೇವಣಾತಿ 1½% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ಮುದ್ದತು ಠೇವಣಾತಿ 3 ತಿಂಗಳಿಗೆ 3½%   ಮುದ್ದತು ಠೇವಣಾತಿ 12 ತಿಂಗಳಿಗೆ 4½

6 ತಿಂಗಳಿಗೆ 4%   ,, 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್

ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ

ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಜೀವನಜ್ಯೋತಿಗಳು:

ಭಗವಾನ್ ಬುದ್ಧ

ಲೇಖಕ: ಕೆ. ಕೆ. ಕೃ. ವಿದ್ವಾನ್.

ಮಹಾತ್ಮಾ ಯೇಸು ಕ್ರಿಸ್ತನು ಹುಟ್ಟುವದಕ್ಕಿಂತ ೬ ಶತಮಾನಗಳ ಹಿಂದೆ ನಮ್ಮ ಭರತ ಖಂಡದಲ್ಲಿ ಮಹಾತತ್ವ ಪ್ರಸಾರಕನಾದ ಮಹಾತ್ಮನೊಬ್ಬನು ಜನ್ಮವೆತ್ತಿದನು. ಜನರು ಅಂಧಶ್ರದ್ಧೆಯಿಂದ ಮತಧರ್ಮಗಳ ಹೆಸರಲ್ಲಿ ಹಿಂಸೆಗಳಿಂದ ಕೂಡಿದ ಯಜ್ಞಯಾಗಾದಿಗಳನ್ನು ಮಾಡಿ ಅದರ ಫಲದಿಂದ ಪರಮ ಮುಕ್ತಿಯನ್ನು ಅಪೇಕ್ಷಿಸುತ್ತಾ ಕುರುಡು ದಾರಿ ಹಿಡಿದು ನಡೆಯುತ್ತಿದ್ದಾಗ, ಅವರಿಗೆ ಸನ್ಮಾರ್ಗವಿದೆಂದು, ಸದ್ವಿಧ್ಯೆಯಿದೆಯೆಂದು, ಸದಾಚಾರವಿದೆಂದು, ಪರಲೋಕ ಪ್ರಾಪ್ತಿಗೆ ಪರಮ ಮಾರ್ಗವಿದೆಂದು ಅಹಿಂಸಾ ಪ್ರಧಾನವಾದ ಧರ್ಮದ ತಿರುಳೊಂದನ್ನು ಸಾರಿದನು! ಉಚ್ಚ ನೀಚಕುಲದವರೆನ್ನದೆ, ಪುರುಷ ಸ್ತ್ರೀಯರೆನ್ನದೆ ಆ ಪವಿತ್ರಾತ್ಮ ಭಗವಾನ್ ಬುದ್ಧನ—ಪುಣ್ಯ ಸಂದೇಶಕ್ಕೆ ಜನರು ಕಿವಿಗೊಟ್ಟರು. ಬೌದ್ಧ ಧರ್ಮವು ಪ್ರಬಲವಾಗಿ ಪ್ರಚಾರಗೊಂಡಿತು. ಆದರೆ ಯಾತರ ದೌರ್ಭಾಗ್ಯದಿಂದಲೋ, ಆ ಮತವು ಜನ್ಮವೆತ್ತಿದ ಭರತ ಖಂಡದಲ್ಲಿಯೇ ಮತ್ತೆ ಕ್ಷೀಣಕ್ಷೀಣವಾಗಿ ಇಂದು ಅದರ ಗುರುತೂ ಜನರಿಗೆ ಕಡಿಮೆಯಾಗಿದೆ. ಆದರೂ ಆ ಯುಗಪುರುಷನ ನೆನಹು ಆತನ ಧರ್ಮತತ್ವಗಳು ಅವಿನಾಶಿಗಳಾಗಿ ಆ ಚಂದ್ರಾರ್ಕ ನೆಲೆನಿಲ್ಲುವಷ್ಟು ಪ್ರಭಾವ ಶಾಲಿಗಳಾಗಿವೆ.

ಪವಿತ್ರ ಕಾಶಿಗೆ ಉತ್ತರದಲ್ಲಿ ಹರಿವ ರೋಹಿಣೀ ನದಿಯ ದಡದಲ್ಲಿ ಶಾಕ್ಯಮನೆತನದ ಅರಸರ ರಾಜಧಾನಿ ಕಪಿಲವಸ್ತು ಎಂಬ ನಾಡೊಂದಿತ್ತು. ಅದರ ಅರಸನಾಗಿ ಶುದ್ಧೋದನನು ಧರ್ಮದಿಂದ ಆ ರಾಜ್ಯವಾಳುತ್ತಿದ್ದನು. ಆತನ ಮಡದಿ ಮಾಯಾದೇವಿ. ಬಹು ಕಾಲ ಆ ದಂಪತಿಗಳ ಬಸುರಲ್ಲಿ ಪುತ್ರ ಸಂತಾನವಾಗಲಿಲ್ಲ. ಕೊನೆಗೆ ಮಹಾರಾಣಿಗೆ ನಲ್ವತ್ತೈದು ವರ್ಷ ಪ್ರಾಯವಾಗಲು ಆಕೆ ಗರ್ಭತಳೆದಳು. ಮಹಾ ಪುರುಷರ ಜನ್ಮದ ವಿಷಯವೂ ಆಶ್ಚರ್ಯಕರವೇ ಆದುದು. ಗರ್ಭಿಣಿ ಮಾಯಾದೇವಿಯು ಹೆರಿಗೆಗಾಗಿ ತವರೂರಿಗೆ ಹೊರಟಿದ್ದಳು. ಮಧ್ಯೆ ಮಾರ್ಗದಲ್ಲಿ ನದಿಯ ದಡದ ಮೇಲಿರುವ 'ಲುಂಬಿನೀ' ಎಂಬ ಉಪವನಕ್ಕೆ ಸಮೀಪಿಸಲು ರಾಣಿಗೆ ಆಯಾಸವು ಹೆಚ್ಚಿತು. ರಥದಿಂದಿಳಿದು ಬೂರುಗದ ಮರವೊಂದರ ನೆರಳಲ್ಲಿ ಕುಳಿತುಕೊಳ್ಳಲು, ಮನೋಹರವಾದ ಆ ಹಸುರು ಹುಲ್ಲಿನ ಮೇಲೆ ಉದಯ ಸೂರ್ಯನ ಪ್ರಭೆಯನ್ನು ಬೀರುವ ಶಿಶುವೊಂದನ್ನು ಪಡೆದಳು.

ಮಗುವಿಗೆ ಸಿದ್ಧಾರ್ಥನೆಂದು ಹೆಸರಿಟ್ಟರು. ಹಡೆದ ಏಳು ದಿನಗಳಲ್ಲಿಯೇ ಮಾಯಾ ದೇವಿಯು ಮೃತ್ಯುವಶಳಾದಳು. ಮಗುವಿಗೆ ಅತ್ಯಧಿಕ ಲಾಲನೆ ಪಾಲನೆಗಳನ್ನಿತ್ತು ಶುದ್ಧೋದನನು ಸಾಕಿ ಸಲಹಿದನು. ಬಳೆದು ಸಿದ್ಧಾರ್ಥನು ತೀಕ್ಷ್ಣ ಬುದ್ಧಿಯುಳ್ಳವನಾಗಿ ಗುರುಮುಖದಿಂದ ಉತ್ತಮ ವಿದ್ಯಾಭ್ಯಾಸವನ್ನು ಹೊಂದಿದನು. ಸಕಲ ಶಾಸ್ತ್ರ ತತ್ವಗಳಲ್ಲಿಯೂ ಆತನು ಪಾರಂಗತನಾದನು.

ಚಿಕ್ಕಂದಿನಿಂದಲೇ ಸಿದ್ಧಾರ್ಥನು ಒಂದು ರೀತಿಯ ವಿರಕ್ತನಾಗಿದ್ದನು! ಮಗನ ವಿರಕ್ತಿಯನ್ನು ಕಂಡು ತಂದೆಯು ಬಾಲ್ಯದಲ್ಲಿಯೇ ಯಶೋಧರೆಯೆಂಬ ಸತ್ಕುಲೀನಳೂ, ಸುಂದರಿಯೂ ಅನುರೂಪಳೂ ಆದ ಕನ್ನಿಕೆಯನ್ನು ಮದುವೆ ಮಾಡಿಸಿದನು. ಮುಂದೆ ಅವರ ಹೊಟ್ಟೆಯಲ್ಲಿ ರೋಹಿಲನೆಂಬ ಮಗನು ಜನ್ಮವೆತ್ತಿದನು.

ಆಗ ಸಿದ್ಧಾರ್ಥನಿಗೆ ಇಪ್ಪತ್ತೊಂಬತ್ತನೆಯ ವಯಸ್ಸು ತುಂಬಿತ್ತು. ಒಂದು ದಿನ ಚೆನ್ನನೆಂಬ ಸಾರಥಿಯನ್ನು ಕರೆದು ನಗರ ಸಂದರ್ಶನಕ್ಕಾಗಿ ಹೊರಟನು. ದಾರಿಯಲ್ಲಿ ಅನೇಕ ದೃಶ್ಯಗಳನ್ನು ಕಂಡು ಆತನ ಹೃದಯವು ಕರಗಿತು! ಒಂದೆಡೆ ಹೆಣವನ್ನು ಚಿತೆಗೆ ಒಯ್ಯುತ್ತಿದ್ದರು! ಅಯ್ಯೊ! ಸಾವು ತನಗೂ ತನ್ನ ಬಂಧುಗಳಿಗೂ ತಪ್ಪಿದುದಲ್ಲವಲ್ಲಾ ಎಂದು ಮರುಗಿದನು! ಇನ್ನೊಂದೆಡೆ ಒಬ್ಬ ರೋಗಿಯು ನರಳುತ್ತಿರುವುದನ್ನು ಕಂಡನು. ಅಕ್ಕಟಾ! ಹೀಗೆ ಜೀವನವು ಯಾತನಾಮಯವಾಗಿದೆಯೆ? ಎಂದು ನೊಂದುಕೊಂಡನು! ಮಗದೊಂದೆಡೆ ಮುದುಕನೊಬ್ಬನು ತಡವರಿಸಿ ಅಡಿಯಿಡುವುದನ್ನು ಕಂಡನು! ಆಹಾ! ಈ ಸುಖ—ಈ ಯೌವನವು ನಶ್ವರವೇ ಎಂದು ಚಿಂತಾಪರನಾದನು. ಇಂತಹ ಹಲವಾರು ಜೀವನ ಸಮಸ್ಯೆಗಳು ಆತನ ದೃಷ್ಟಿಯ ಮುಂದೆ ಬಂದುವು!

ಜೀವನದ ಸಂಕಷ್ಟಗಳನ್ನು ಯಾತನೆಗಳನ್ನು ಕಳೆಯುವ ದಾರಿಯುಂಟೇ ಎಂದು ಚಿಂತಿಸಿದನು! ಅದಕ್ಕಾಗಿ ದೀರ್ಘ ವಿಚಾರವನ್ನು ಮಾಡಬೇಕೆಂದೆಣಿಸಿತು. ಅರಮನೆಯು ಅಂತಹ ವಿಚಾರಕ್ಕೆ ಯೋಗ್ಯ ಸ್ಥಳವಲ್ಲವೆಂದು ಒಂದು ದಿನ ರಾತ್ರಿ ಮೋಹದ ಮಡದಿ ಮತ್ತು ಮಗುವು ನಿದ್ರಿಸುತ್ತಿರಲು ಸಂಸಾರದ ಮೋಹಕ್ಕೆ ತಿಲಾಂಜಲಿಯಿತ್ತು, ಅರಮನೆಯಿಂದ ಹೊರಹೊರಟು ಹೋದನು!

ಅರಣ್ಯಕ್ಕೆ ಹೋಗಿ ಸಿದ್ಧಾರ್ಥನು ಸನ್ಯಾಸಿಯಾದನು! ಅನೇಕ ವಿದ್ವಾಂಸರ ಬಳಿಹೋಗಿ ಜೀವನ ಸಮಸ್ಯೆಯ ಕುರಿತು ಚರ್ಚಿಸಿದನು. ತತ್ವಾನ್ವೇಷಣಕ್ಕಾಗಿ ಅಲೆದಾಡಿದನು! ಹಲವು ಕಾಲ ಅನ್ನನೀರಿಲ್ಲದೆ ತಪಸ್ಚರ್ಯೆಯಲ್ಲಿ ಕಳೆದನು. ಅಲಲೋಮನೆಂಬ ಗುರುವಿನಿಂದ ಜೀವನದ ನಶ್ವರತೆಯ ತತ್ವವನ್ನರಿತು ಪ್ರಪಂಚದಲ್ಲಿ ಬಾಂಧವ್ಯ ಪ್ರೇಮವೇ ಮುಖ್ಯ ತತ್ವವೆಂದು ತಿಳಕೊಂಡನು. ಈ ತಿಳುವಳಿಕೆಯಿಂದ ಸಿದ್ಧಾರ್ಥನು ಬುದ್ಧನಾದನು!

ಈ ತತ್ವವನ್ನೇ ಬುದ್ಧನು ಜಗತ್ತಿಗೆ ಸಾರಿದನು! ಸಾವಿರಾರು ಮಂದಿ ಆತನ ಅನುಯಾಯಿಗಳಾದರು. ರಾಜ ಮಹಾಜರೂ ಆತನ ಮತವನ್ನು ಮನ್ನಿಸಿದರು.

ಮಹಾ ಪತಿವ್ರತೆಯಾದ ಯಶೋಧರೆಯು ಪತಿಯ ಧರ್ಮವನ್ನೇ ಅಂಗೀಕರಿಸಿ ಶಿಷ್ಯಳಾದಳು. ಬಹು ಕಾಲದಿಂದ ಅಗಲಿದ್ದ ಪತಿಯು ಶಿಷ್ಯಳಾಗಿ ತನ್ನ ಸನ್ನಿಧಿಯಲ್ಲಿರಿಸಿಕೊಳ್ಳಲು ಒಪ್ಪಿಕೊಂಡಾಗ ಆಕೆಯ ಹೊಟ್ಟೆ ತಣ್ಣಗಾಯಿತು.

ಬುದ್ಧನು ದೇಶ ಸಂಚಾರ ಮಾಡಿ ಬುದ್ಧ ಮತವನ್ನು ನಾನಾ ಸ್ಥಳಗಳಲ್ಲಿ ಪಸರಿಸಿದನು. ಪರೋಪಕಾರ ಮತ್ತು ಬಾಧೆ ಪೀಡೆಗಳಿಂದ ಮುಕ್ತಿಯೆಂದು ಜಗತ್ತಿಗೆ ತಿಳಿಸಿ ಹೇಳಿದನು.

ಕೊನೆಗೆ ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಕಾಶಿಗೆ ಈಶಾನ್ಯದಲ್ಲಿರುವ ಕುಶೀನಗರಕ್ಕೆ ಹೋಗುವ ಮಾರ್ಗದಲ್ಲಿ ಹಿರಣ್ಯವತೀ ಎಂಬ ನದಿಯ ಬಳಿ ಒಂದು ಸಾಲ ವೃಕ್ಷದ ಕೆಳಗೆ ದಕ್ಷಿಣಾಭಿಮುಖನಾಗಿ ಮಲಗಿ ಶಾಶ್ವತ ನಿರ್ವಾಣವನ್ನು ಹೊಂದಿದನು.

ಜಗತ್ತಿನಲ್ಲಿ ಬೌದ್ಧ ಧರ್ಮವು ಪ್ರಸಿದ್ಧವಾದೊಂದು ಧರ್ಮವಾಗಿದೆ. ಭಾರತ ದೇಶದಲ್ಲಿ ಮಾತ್ರವಲ್ಲದೆ, ಚೀನಾ, ಜಪಾನ್, ಟಿಬೇಟ್, ಸಿಲೋನ್, ಮೊದಲಾದ ದೇಶಗಳಲ್ಲಿ ಅನೇಕ ಮಂದಿ ಬೌದ್ಧಾನುಯಾಯಿಗಳಿದ್ದಾರೆ. ಆತನ ಮತತತ್ವಗಳು ಆಗ ಜನರಾಡುತ್ತಿದ್ದ "ಪಾಲೀ" ಎಂಬ ಭಾಷೆಯಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಪಾಲೀ ಭಾಷಾ ಸಾಹಿತ್ಯವು ಬೌದ್ಧ ತತ್ವಗಳಿಂದ ತುಂಬಿ ಪುಷ್ಕಳವಾಗಿದೆ!

ಅಖಿಲ ಜಗತ್ತನ್ನೇ ವ್ಯಾಪಿಸುವಂತಹ ಪ್ರಭಾವವುಳ್ಳ ಉಚ್ಚವಾದ ವಿಶ್ವವಿಶಾಲವಾದ ಮಹಾ ತತ್ವಗಳು ಬೌದ್ಧ ಧರ್ಮದಲ್ಲಿ ಅಡಕವಾಗಿವೆ.



ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟದ್ದು.

7ಓ ಕ್ಲಾಕ್ ಬ್ಲೇಡುಗಳು ನಡುವಿನಲ್ಲಿ ಸಿಗಿಯಲ್ಪಟ್ಟವೆ ಮತ್ತು ಹರಿ ಮಾದರಿಗಳಲ್ಲೂ ವಿಶೇಷ ತರದಲ್ಲಿ ಸುಧಾರಿಸಲ್ಪಟ್ಟವೆ. ಇದರ ಬೆಲೆಯು ಕೇವಲ ಕಡಿಮೆ ಮಾತ್ರವಲ್ಲದೆ ಇದರ ಎರಡೂ ಬದಿಗಳು ಅತ್ಯಂತ ಹರಿತವಾಗಿ ಮನೆಯಲ್ಲಿಯೇ ... ಕ್ಷೌರವನ್ನುಂಟುಮಾಡುವುದು. ಒಂದು ಬ್ಲೇಡು ಬಹು ಸಮಯದ ವರೆಗೆ ಬಳುವುದು.

7ಓ ಕ್ಲಾಕ್ ಬ್ಲೇಡುಗಳು ಹರಿ ಮತ್ತು ಹೊಸ ಮಾದರಿಯ ರೇಜರುಗಳಿಗೆ ...

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ನೆಲ್ಲೂರು ಜಿ.)

ನೋಟಗಳು!

"ಯೂರೋಪಿನ ಘಟನೆಗಳಿಂದಾಗ ಇಂದು ಕಾಂಗ್ರೆಸ್ಸು, ಬ್ರಿಟಿಷ್ ಸರಕಾರದೊಡನೆ ಅಸಹಕಾರ ಮಾಡುವ ಧೋರಣೆಯನ್ನು ಬಿಡಬೇಕಾಗಿದೆ. ಕಾಂಗ್ರೆಸು ಕೂಡಲೇ ಅಧಿಕಾರ ಸ್ವೀಕಾರ ಮಾಡಬೇಕು ಪ್ರಾಂತಿಕ ಸರಕಾರದ ಪ್ರತಿನಿಧಿಗಳು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ಕೂಡಲೇ ರಾಷ್ಟ್ರದ ರಕ್ಷಣೆಗಾಗಿ ಸೈನ್ಯವನ್ನು ಸನ್ನದ್ಧಗೊಳಿಸಬೇಕು' ಹೀಗೆಂದು ಪಂಜಾಬ ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷರಾದ ಸರ್ದಾರ ಶಾರ್ದೂಲ ಸಿಂಗರು ಹೇಳಿದರು!

—ಅಭಿಪ್ರಾಯವೇನೋ ಚೆನ್ನಾಗಿದೆ! ಆದರೆ ಬ್ರಿಟನಿಗೆ "ಕಡೆಯ ನುಡಿ" (ultimatum) ಕೊಡುವ ಸಂಧಾನ ವಿರುದ್ಧ (Anti conpromise) ಪಕ್ಷದವರಿಂದ ಇಂತಹ ಸೂಚನೆಗಳು ಬರುವುದನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದಿರದು!

◈

ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ನ್ಯೂಯಾರ್ಕ್ ಪ್ರತಿನಿಧಿಯು ಹೇಳುವುದೇನೆಂದರೆ ಬ್ರಿಟಿಷರು ಪ್ರಜಾಪ್ರಭುತ್ವಕ್ಕಾಗಿ ಯುದ್ಧಮಾಡುವುದಲ್ಲವೆಂದು ಅಮೇರಿಕದಲ್ಲಿ ನಾಜಿಗಳ ಪ್ರಚಾರವು ಆಗುತ್ತಿದೆಯಂತೆ! ನಾಜಿಗಳ ಮಾತಿಗೆ ಅವರ ಪ್ರಬಲವಾದ ಆಧಾರವೆಂದರೆ ಬ್ರಿಟಿಷರು ಇನ್ನೂ ಕೂಡಾ ಭಾರತದಲ್ಲಿ ಪ್ರಜಾಸಮ್ಮತಿಯ ರಾಜ್ಯಭಾರಣಕ್ಕೆ ಒಪ್ಪದೆ ಇರುವುದೆಂಬುದಾಗಿದೆಯಂತೆ ಹೀಗಾಗಿ ಬ್ರಿಟನಿನ ಪ್ರಾಮಾಣಿಕತೆಯ ಕುರಿತು ಅಮೇರಿಕರು ಸಂಶಯಗೊಳ್ಳುವ ಸಂಭವವೆಂದು ಆ ಸುದ್ದಿಗಾರನು ಬರೆಯುತ್ತಾನೆ

—ಬ್ರಿಟಿಷರ ನಾಜಿಗಳ ಇಂತಹ ಪ್ರಚಾರವನ್ನು ಬೇಗನೇ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವ ಮೂಲಕ ನಿಲ್ಲಿಸಲು ಸಾಧ್ಯವಷ್ಟೆ?

◈

ಮುಸ್ಲಿಂ ಲೀಗು ದೇಶವನ್ನು ವಿಭಾಗಿಸಿ ಹಂಚಿಕೊಳ್ಳಬೇಕೆಂದು, ಹಾಗೆ ಮಾಡದೆ ಖಂಡಿತವಾಗಿ ನಿರ್ವಾಹವಿಲ್ಲವೆಂದೂ ಹೇಳುತ್ತಾ ಪರಸ್ಪರ ಸಂಬಂಧವನ್ನು ದೂರದೂರ ಮಾಡುತ್ತಾ ಹೋಗುತ್ತಿರಲು ನಮ್ಮ ಕ್ರಿಶ್ಚಿಯನ್ ಸಹೋದರರು ಇಂದು ಮೊದಲಿಗಿಂತಲು ಅಧಿಕವಾಗಿ ನ್ಯಾಷನಲಿಷ್ಟರೂ ಒಂದೇ ತಾಯ್ನಾಡಿನವರೆಂದು ಹೇಳಿ ಮತ್ತಷ್ಟು ದೇಶಬಾಂಧವ್ಯವನ್ನು ಸಮೀಪಸಮೀಪಕ್ಕೆ ಎಳೆಯುತ್ತಿದ್ದಾರೆ.

—ಮೊನ್ನೆ ಬೆಂಗಳೂರಲ್ಲಿ ಸೇರಿದ ಅಖಿಲ ಭಾರತ ಕೆಥೋಲಿಕ್ ಸಮ್ಮೇಳನವು ಪಾಕಿಸ್ತಾನ ಯೋಜನೆಯನ್ನು ಖಂಡಿಸುವ ನಿರ್ಣಯವೊಂದನ್ನು ಅಂಗೀಕರಿಸಿತು. "ಎಲ್ಲಾ ಜಾತಿಮತದವರಿಗೂ ಹಿತವಾದ ಭಾರತವು ನಮ್ಮೆಲ್ಲರ ಜನ್ಮ ಭೂಮಿಯೆಂಬೀ ಮಧುರ ವಿಚಾರದ ಬುಡಕ್ಕೆ ಪಾಕಿಸ್ತಾನ ಯೋಜನೆಯು ಕೊಡಲಿಯೆತ್ತಿದೆ" ಎಂದು ಆ ನಿರ್ಣಯದಲ್ಲಿ ಸ್ಪಷ್ಟಪಡಿಸಲಾಗಿತ್ತು!

◈

ವಭಾರ್ಂಗದ ಮಹಾರಾಜರು ಗಾಂಧಿಜಿಯವರ ಪ್ರತಿಮೆಯೊಂದನ್ನು ವೈಸರಾಯರಿಗೆ ಅರ್ಪಿಸಿ, ಅದನ್ನು ಸಾರ್ವಜನಿಕ ಸ್ಥಳವೊಂದರಲ್ಲಿ ವೈಸರಾಯರು ವ್ಯವಸ್ಥಾಪಿಸಬೇಕಾಗಿ ಕೇಳಿಕೊಂಡಿರುವರೆಂದೂ, ವೈಸರಾಯರು ಅದನ್ನು ಅಂಗೀಕರಿಸಿರುವರೆಂದೂ ತಿಳಿದುಬಂದಿದೆ

—ಹೈದರಾಬಾದಿನ ನವಾಬ ಯಾರ್ ಜಂಗ್ ಬಹದೂರರು ಮುಸ್ಲಿಂ ಲೀಗಿನ ದೊರೆ ಜಿನ್ನರ ಪ್ರತಿಮೆಯೊಂದನ್ನು ಬೇಗನೇ ತಯಾರಿಸಿ ವೈಸರಾಯರನ್ನು ಒಕ್ಕಾಯುಪಡಿಸಬಹುದೇ?

◈

—ಸತ್ಯಾಗ್ರಹ ಶಿಬಿರವು ಗಡಿನಾಡಿನಲ್ಲಿ ಬಹಳ ತೀವ್ರವಾಗಿ ಕಾರ್ಯಕಲಾಪಗಳನ್ನು ಮಾಡುತ್ತಿದೆ ಶಿಬಿರದಿಂದ ಒಂದು ತಮಾಷೆಯ ಸುದ್ದಿ ಬಂದಿದೆ ಪ್ರಾತಃಕಾಲ ಬೇಗನೇ ಏಳಲಿಲ್ಲವೆಂದೂ ಬಹಳವಾಗಿ ಮಾತನಾಡಿದರೆಂದೂ ಮಾಜಿ ಮಂತ್ರಿಗಳೂ, ಪಾರ್ಲಿಮೆಂಟ್ ಸೆಕ್ರೆಟರಿಯವರೂ ಆದ ಶ್ರೀ ಬಂಜೂರಾಮ ಗಾಂಧಿ ಮತ್ತು ಖಾನ್ ಅಮೀರ್ ಮಹಮ್ಮದ್ ಖಾನ್ ಎಂಬಿಬ್ಬರಿಗೆ ಇದೀ ಶಿಬಿರವಾಸಿಗಳ ಮುಂದುಗಡೆ ಇಪ್ಪತ್ತು ಸಲ ಕೂತು ಏಳುವ ಶಿಕ್ಷೆ ವಿಧಿಸಿದರಂತೆ!

—ಸತ್ಯಾಗ್ರಹೀ ಸೈನಿಕರಿಗೆ ಶಿಸ್ತುಪಾಲನೆಗಿಂತ ಒಣ ಗೌರವವು ಹೆಚ್ಚಿನದಲ್ಲ!

◈

ನೋಟೀಸು.

ಶ್ರೀ ದೇವಸ್ಥಾನದ ಚಿನ್ನ ವ ಬೆಳ್ಳಿ ತಾರೀಕು ೫-೬-೧೯೪೦ರಲ್ಲು ಬೆಳಿಗ್ಗೆ ಘಂಟೆ ೧೧ಕ್ಕೆ ಮಂಗಳೂರು ಬಂದರ ಕಟ್ಟೆಯಲ್ಲಿ "ಎ. ಐ. ಎಲ್. ಫೋಟೋ ಹೌಸ್" ಇವರಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು

ಖಾಯಿಸ್ ಉಳ್ಳ ದರ್ಖಾಸ್ತುದಾರರು ರೂ ೫೦-೦-೦ನ್ನು ರೇವಣಾತಿಯಾಗಿ ಮುಂಗಡ ಕಟ್ಟತಕ್ಕದ್ದು ಹಾಗೆ ಕಟ್ಟಿದರೆ ಮಾತ್ರ ಏಲಂಗೆ ನಿಲ್ಲುವರೆ ಅರ್ಹರಾಗುವರು

ಅಂಥಾ ಮುಂಗಡದ ಐವಜು ವಾರು ಕಾಯಂ ಆದೊಡನೆ ರೇವಣಾತಿದಾರರಿಗೆ ಪರತ್ ಕೊಡಲಾಗುವುದು.

ಏಲಂಗೆ ಪಡಕೊಂಡ ಚಿನ್ನ ವ ಬೆಳ್ಳಿ ವಾರು ಕಾಯಂ ಆದ ಐವಜನ್ನು ತಕ್ಷಣ ಸುಪರ್ದಿಗೆ ಪಡಕೊಳ್ಳತಕ್ಕದ್ದು.

ಏಲಂ ಕಾಯಂ ಮಾಡುವ ಅಧಿಕಾರವು ಭಂಡಾರದ ಎಕ್ಸಿಕ್ಯೂಟಿವ್ ಆಫೀಸರರದ್ದಾಗಿರುತ್ತದೆ.

ಶ್ರೀ ಧರ್ಮ ಅಗ್ರಹಾರ,
ಮಂಜೇಶ್ವರ
ತಾ. ೨೫-೫-೧೯೪೦

S. N. [illegible]
Mangalore.

ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವ ಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲ್ಹುರುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಹುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣವುಳ್ಳದ್ದು

ಕಜ್ಜಿ, ಕರು, ತುರಿಕಜ್ಜಿ ಗಾಯ, ಪಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT

ಎಂಡ್ರೂಸ್ ಲಿವರ್ ಸೋಲ್ಟ್

ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮಸೂತ್ರ

ವಿಜ್ಞಾನಯುಗ

ಕಪ್ಪೆ ಕಣ್ಣಿನ ದ್ರಾವಕದಿಂದ ಕುರುಡುತನ ನಿವಾರಣೆ!

ಎಲ್ಲಾ ಜೀವಿಗಳ ಕಣ್ಣುಗಳಲ್ಲಿ ಇರುವಂತೆ ಮನುಷ್ಯನ ಕಣ್ಣುಗಳಲ್ಲಿಯೂ ನೇರಳೆ ಬಣ್ಣದ ಒಂದು ಸಾರ ವಸ್ತು ಇರುತ್ತದೆ. ಫೋಟೊಫಿಲ್ಮಿನ ಮೇಲೆ ಎಮಲ್ಶನ ಎಂಬ ತೊಳೆಯುವ ದ್ರಾವಕವು ಯಾವ ಕೆಲಸವನ್ನು ಮಾಡುತ್ತದೋ, ಅದೇ ಕಾರ್ಯವನ್ನು ಈ ನೇರಳೆ ಬಣ್ಣದ ದ್ರಾವಕವು ಕಣ್ಣುಗಳಲ್ಲಿ ಮಾಡುತ್ತದೆ ಸಾಮಾನ್ಯವಾಗಿ ಈ ದ್ರಾವಕವು ನೇರಳೆ ಬಣ್ಣವಾಗಿ ಇರುತ್ತದಾದರೂ, ಪ್ರಕಾಶವು ಅದರ ಮೇಲೆ ಬಿತ್ತೆಂದರೆ ಅದು ಬಣ್ಣಗೆಟ್ಟು ಕಣ್ಣಿಗೆ ತೋರುವದಿಲ್ಲ ಆದರೆ ಕಣ್ಣಿನಲ್ಲಿ ವಸ್ತುವಿನ ಪ್ರತಿಬಿಂಬ ಬಿದ್ದು ಮೆದುಳಿಗೆ ಬಿಂಬದ ಜ್ಞಾನವಾಯಿತೆಂದರೆ ಪುನಃ ಆ ದ್ರಾವಕವು ನೇರಳೆ ಬಣ್ಣಕ್ಕೆ ಬರುತ್ತದೆ. ಈ ದ್ರಾವಕವು ಕಣ್ಣಿನ ಪರದೆಯನ್ನು ಆಗಾಗ ತೊಳೆಯುವದಿಲ್ಲವಾದರೆ, ಕಣ್ಣಿಗೆ ದೃಷ್ಟಿಜ್ಞಾನವು ಆಗವದಿಲ್ಲ. ಈ ದ್ರಾವಕದಲ್ಲಿ ದೋಷ ಬಂದ ಹಾಗೆ, ಕಣ್ಣಿನ ನೋಡುವ ಶಕ್ತಿಯು ಕಡಿಮೆಯಾಗುತ್ತ ಕಣ್ಣು ಕುರುಡಾಗುವದು. ಜನರ ಹೆಚ್ಚಿನ ಮಟ್ಟಿನ ಕುರುಡತನಕ್ಕೆ ಕಣ್ಣಿನೊಳಗಿರುವ ಈ ನೇರಳೆ ದ್ರಾವಕದೊಳಗಿನ ದೋಷವು ಕಾರಣವಾಗಿದೆ

ಎಲ್ಲಾ ಜೀವಿಗಳ ಕಣ್ಣುಗಳಲ್ಲಿ ಈ ದ್ರಾವಕವು ಇರುತ್ತದಾದರೂ ಕಪ್ಪೆಕಣ್ಣಿನೊಳಗಿನ ಈ ದ್ರಾವಕವು ಮನುಷ್ಯನ ಕಣ್ಣಿನ ದ್ರಾವಕವನ್ನು ಬಹಳ ಮಟ್ಟಿಗೆ ಹೋಲುತ್ತದೆ ಜನರ ಕುರುಡುತನವನ್ನು ಹೋಗಲಾಡಿಸಲಿಕ್ಕೆ, ಮನುಷ್ಯನ ಕಣ್ಣಿಗೆ ಕಪ್ಪೆಕಣ್ಣಿನ ದ್ರಾವಕವನ್ನು ಉಪಯೋಗಿಸಿದರೆ ಹೇಗಾದೀತು ಎಂದು ಕೊಲಂಬಿಯ ಯುನಿವರ್ಸಿಟಿಯ ಕೆಲವು ವಿಜ್ಞಾನಿಗಳು ಪರೀಕ್ಷಿಸುತಿದ್ದಾರೆ ಅವರು ಹಲವು ಪರೀಕ್ಷೆಗಳನ್ನು ನಡೆಸಿ, ಕಪ್ಪೆಕಣ್ಣಿನ ದ್ರಾವಕದಿಂದ ಮನುಷ್ಯನ ಕಣ್ಣಿನ ದ್ರಾವಕವನ್ನು ಹೋಲುವಂಥ ಒಂದು ವಿಚಿತ್ರ ದ್ರಾವಕವನ್ನು ತಯ್ಯಾರಿಸಿದ್ದಾರೆ. ಇದನ್ನು ಅವರು 'ವಿಜುವಲ್ ಪರ್ಪಲ್' ಎಂದರೆ 'ನೇರಳೆ ಬಣ್ಣದ ದೃಷ್ಟಿ ದ್ರಾವಕ' ಎಂದು ಹೆಸರಿಟ್ಟಿರುವರು . ಈ ಹೊಸ ದ್ರಾವಕವನ್ನು ಕಣ್ಣಿಗೆ ಉಪಯೋಗಿಸಿ, ಅವರು ಕುರುಡುತನವನ್ನು ಹೋಗಲಾಡಿಸಲಿಕ್ಕೆ ಪ್ರಯತ್ನಿಸುತಿದ್ದಾರೆ. ತಮ್ಮ ಪರಿಶೋಧನೆಗಳಲ್ಲಿ ಕೃತಕೃತ್ಯರಾದರೆ ವಿಜುವಲ್ ಪರ್ಪಲ್ ದ್ರಾವಕವು ಪ್ರಪಂಚದ ಲಕ್ಷಾಂತರ ಮಂದಿ ಕುರುಡ ಅಥವಾ ಅರ್ಧ ಕುರುಡರಿಗೆ ದೇವರ ವರದಾನವಾಗುವದೆಂದು, ಈ ಪರಿಶೋಧನೆಗಳನ್ನು ನಡೆಸುತ್ತಿರುವ ಡಾಕ್ಟರ 'ಎ. ಯಮ್. ಶೇಬರ'ವರು ಹೇಳಿರುವರು.

ರಸಾಯನಗಳ ಉಪಯೋಗದಿಂದ ಮಳೆ ಬರುವುದು

ಹಂಗೇರಿಯದ ಇಬ್ಬರು ವಿಜ್ಞಾನಿಗಳು ಹೇಳುತ್ತಿರುವಂತೆ ಬರಗಾಲದಲ್ಲಿ ನೀರಿನ ಅಭಾವವಾದಾಗ, ವಿವಿಧ ರಸಾಯನಗಳನ್ನು ಉಪಯೋಗಿಸಿ, ಕೃತ್ರಿಮ ಮಳೆಯನ್ನು ಬರಮಾಡಲು ಸದ್ಯದಲ್ಲಿಯೇ ಸಾಧ್ಯವಾಗಬಹುದಂತೆ ಕೆಲವು ತರದ ಗ್ಯಾಸುಗಳನ್ನು, ಅಥವಾ ಧಗಧಗನೆ ಉರಿಯುವಂಥ ಇದ್ದಲಿಯನ್ನು ದೊಡ್ಡ ದೊಡ್ಡ ಗುಡಾಣಗಳಲ್ಲಿ ಸಂಗ್ರಹಿಸಿ ಅವನ್ನು ಬೆಳೆ ಮಾಡಬೇಕಾದ ಜಮೀನಿನ ಮೇಲೆ ಅಥವಾ ಜಲಾಶಯಗಳ ಸಮೀಪ ವಿದ್ಯುಚ್ಛಕ್ತಿಯಿಂದ ಹೊತ್ತಿಸುವದರಿಂದ, ಉಷ್ಣಗಾಳಿಗಳು ಉಂಟಾಗಿ ಅವು ಆ ಎಲ್ಲಾ ಪ್ರದೇಶಗಳನ್ನು ಹರಡಿಕೊಳ್ಳುವವು ಆಗ ಹವೆಯು ಆಕಾಶಕ್ಕೆ ಪಸರಿಸಿ ಬೇರೆ ಕಡೆಗ ತಂಪ ಮೋಡಗಳು ಬಂದೂ, ಮಳೆಯು ಬರುವದು ಹೀಗೆ ಮಾಡಿ ಬರಗಾಲದ ನೀರಿನ ಅಭಾವದ ಕಷ್ಟಗಳನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬಹುದೆಂದು ಈ ವಿಜ್ಞಾನಿಗಳು ನಂಬಿರುತ್ತಾರೆ.

ಕೃತ್ರಿಮ ಹಲ್ಲುಗಳ ಅಪಾಯವನ್ನು ತಪ್ಪಿಸಬಹುದು

ಸ್ವಾಭಾವಿಕವಾದ ಹಲ್ಲುಗಳನ್ನು ಕಳೆಕೊಂಡು ಕೃತ್ರಿಮ ದಂತ ಮಾಲೆಯನ್ನು ಇಟ್ಟುಕೊಂಡ ಹಲವರ ದಂತ ಮಾಲೆಗಳು ಜಾರಿ, ಗಂಟಲಿನೊಳಗೆ ಸಿಲುಕಿಕೊಂಡು ಅಥವಾ ಬೇರೆ ಕಾರಣಗಳಿಂದ ಅವರು ಅಪಾಯಗಳಿಗೆ ಗುರಿಯಾದುದಿದೆ ಅನೇಕರು ಉಸಿರ ಕಟ್ಟಿ ಅಪಮೃತ್ಯುವಿಗೆ ಗುರಿಯಾದದೂ ಇದೆ . ಈಗ ಇಂಥ ಅಪಾಯಗಳಿಂದ ತಪ್ಪಿಸಿಕೊಳ್ಳಲಿಕ್ಕೆ ವಿಜ್ಞಾನಿಗಳು ಒಂದು ಉಪಾಯ ಮಾಡಿದ್ದಾರೆ ಅವರು ದಂತ ಮಾಲೆಗಳಿಗೆ ಲೋಹ ಚುಂಬಕಗಳನ್ನು ಕಟ್ಟಿರುತ್ತಾರೆ ಈ ಲೋಹ ಚುಂಬಕಗಳು ಬಾಯಿಯ ಕೆಳದವಡೆಯ ದಂತ ಮಾಲೆಗೂ ಮೇಲ್ದವಡೆಯ ದಂತ ಮಾಲೆಗೂ, ಯಾರಿಗೂ ತೋರದ ಹಾಗೆ ಅಡಗಿಸಿ ಇಟ್ಟಿರುತ್ತಾರೆ ಈ ಎರಡು ಮಾಲೆಗಳೊಳಗಿನ ಲೋಹ ಚುಂಬಕಗಳು ಒಂದನ್ನೊಂದು ವಿರುದ್ಧ ದಿಕ್ಕಿಗೆ ದೂಡಿ ಕೊಡುವ ವಿರುದ್ಧ ಗತಿಯವುಗಳಾಗಿರುವದರಿಂದ ಅವುಗಳ ಒತ್ತಾಟದಿಂದ ದಂತ ಮಾಲೆಗಳು ತಮ್ಮ ಸ್ಥಾನಗಳಲ್ಲಿ ಭದ್ರವಾಗಿ ಇರುತ್ತವೆ ಅವು ಎಂದೂ ತಮ್ಮ ಸ್ಥಾನಗಳಿಂದ ಜಾರಿ ಬೀಳವದಿಲ್ಲ ಆದ್ದರಿಂದ ಅವು ಗಂಟಲಿನಲ್ಲಿ ಸಿಲುಕಿಕೊಳ್ಳುವ ದ ಅಪಾಯಗಳು ದೂರವಾಗುತ್ತವೆ

ದ್ರುತಗತಿಯ ರೊಕೆಟುಗಳು

ಆಕಾಶದೊಳಗಿನ ಅದ್ಭುತಗಳನ್ನು ತಿಳಿಯಲಿಕ್ಕೆ ಆಕಾಶಕ್ಕೇರುವ [illegible] ನವೂ ಇಲ್ಲದಿದ್ದುದರಿಂದ ವಿಜ್ಞಾನಿಗಳು ಬಹಳ ಬೇಸರದಿಂದಿದ್ದರು ಅಮೇರಿಕದ ಒಬ್ಬ ವಿಜ್ಞಾನಿಯು ಈಗ ಅದಕ್ಕೆ ಒಂದು ಸಾಧನವನ್ನು ಕಂಡುಹಿಡಿದಿರುವನು ಈ ಸಾಧನವನ್ನು ರೊಕೆಟು ಎಂದು ಕರೆಯುವರು ಇದು ಪ್ರಕಾಶ ಕಿರಣವು ಹೋಗುವದಕ್ಕಿಂತ [illegible] ಹೆಚ್ಚು [illegible]ಗವಾಗಿ ಆಕಾಶದಲಿ ಹಾರುವದು [illegible] ವಾಗಿ ಪ್ರಕಾಶವು ಪ್ರತಿ [illegible]೦೦೦ ಅಡಿಗಳ ದೂರಕ್ಕೆ ಹೋಗುವದು. ಆದರೆ ಈ ಗೂಡು ನಿಮಿಷಕ್ಕೆ ೩೦೦೦ ಅಡಿಗಳ ವೇಗದಿಂದ ಅಂದರೆ ಗಂಟೆಗೆ ೧೧೦೦ ಮೈಲುಗಳ ವೇಗದಿಂದ ಆಕಾಶದಲ್ಲಿ ಹಾರುವದು ಇದು ಸ್ಫೋಟನದಿಂದ ಚಲಿಸುವದಿಲ್ಲ ಪೆಟ್ರೋಲಿನ ಉಗಿಯಿಂದ ನಡೆಯುತ್ತದೆ ಆದ್ದರಿಂದ ಗಾಳಿಯು ಅಭಾವವಾದಾಗಲೂ ಅದು ಚಲಿಸಬಲ್ಲುದು. ಈ ಗೂಡಿನಲ್ಲಿ ಗಾಳಿಯ ಒತ್ತಾಟ ಉಷ್ಣತೆ, ತರ, ಗ ಣ, ಇತ್ಯಾದಿ ಎಲ್ಲಾ ಸಂಗತಿಗಳನ್ನು ತಿಳಿಯಲಿಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಇಟ್ಟಿರುತ್ತಾರೆ ಒಂದು ಸಾರಿ ಹಾರಿದ ನಂತರ ನಿಶ್ಚಿತ ಸ್ಥಾನಕ್ಕೆ ಹೋಗಿ, ಬೇಕಾದ ಅನುಭವಗಳನ್ನು ಪಡೆದು ಹಿಂದಕ್ಕೆ ಮರಳುವುದು ಇದು ೧೨ ಅಡಿ ಉದ್ದವಾಗಿಯೂ ಬುಡದಲಿ ಒಂದು ಅಡಿ ವ್ಯಾಸವಾಗಿಯೂ ಇರುತ್ತದೆ ಈ ರೊಕೆಟಿನ ಮೂಲಕ ಆಕಾಶದೊಳಗಿನ ಇಷ್ಟರ ವರೆಗೆ ತಿಳಿಯದಿದ್ದ ಅನೇಕಾನೇಕ ಅದ್ಭುತಗಳನ್ನು ಚಮತ್ಕಾರಗಳನ್ನು ತಿಳಿಯಲು ಸಾಧ್ಯವಾಗುವದು ಇದನ್ನು ರಚಿಸಿದವರು ಡಾಕ್ಟರ ರಾಬರ್ಟ ಯ ಚ್. ಗೋಡಾರ್ಡ [illegible] ಒಬ್ಬ [illegible] ವಿಜ್ಞಾನಿಗಳಾಗಿರುವರು.

ಪರಿಮಳ ಬೀರುವ ಕೋಳಿ ಮೊಟ್ಟೆ

ಶೀ[illegible] ಹೊರಸ್ ಒಟ್ [illegible] [illegible] ಹಿಳೆಯು ಒಂದ ಹೋಟೆಯ[illegible] ನೀಲಗಿರಿ ಎಣ್ಣೆಯ ಪರಿಮಳವನ್ನು ಕೊಡುವ [illegible] ಮೊಟ್ಟೆಗಳನ್ನು ಇಟ್ಟಿದೆ [illegible]ದನ್ನು ಕಂಡು ಆಶ್ಚರ್ಯ ಭರಿತಳಾದ [illegible] ಶೋಧನೆ ಮಾಡಿದಾಗ ಆ ಕೋಳಿಯ ಮೊಟ್ಟೆ ಇಡುವ ಕೆಲವು ದಿನಗಳ ಮೊದಲು ನೀಲಗಿರಿ ಗಿಡದ ಎಲೆ ತಿಂದು ಹೊಟ್ಟೆ ತುಂಬಿಸಿಕೊಂಡಿತ್ತೆಂದು ತಿಳಿಯಿತು. ಅದಾದ ನಂತರ ಕೆಲವು ಪರಿಶೋಧಕರು ಬೇರೆ ಬೇರೆ ಸುಗಂಧಗಳನ್ನು ಮಿಶ್ರಮಾಡಿದ ಆಹಾರವನ್ನು ಕೋಳಿಗಳಿಗೆ ಕೊಡುತ್ತ ಬಂದರು ಆಗ ಆ ಕೋಳಿಗಳು ತಾವು ತಿಂದ ಆಹಾರದ ಪರಿಮಳವನ್ನೇ ಕೊಡುವ ತತ್ತಿಗಳನು ಇಟ್ಟುವು! ಆದ್ದರಿಂದ ಆಹಾರದ ಪರಿಮಳದಲ್ಲಿ ಹೆಚ್ಚು ಕಡಿಮೆ ಮಾಡಿ, ಬೇಕು ಬೇಕಾದ ಪರಿಮಳದ ಮೊಟ್ಟೆಗಳನ್ನು ನಾವು ಪಡೆಯಬಹುದಾಗಿ ಈಗ ಗೊತ್ತಾಗಿದೆ

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
Rs. 50/-, 100/-, 500/-, 1,000/- & 5,000/-
are now issued at all our Branches
For particulars call at or write to
Any of our nearest Branches

HALFTONE & LINE
BLOCK MAKING
UNDERTAKEN
Sharada Press,
MANGALORE

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮೂಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿಗೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶೃಂಗೇರಿ ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ ಶಿವಮೊಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS.

The Combined Booking Agency,
MANGALORE

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಿಂದ ... ರಜಪೂತ ...

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯುಂಟಾಗುತ್ತದೆ ... ಜಟ್ಟಿ ವಿಶೇಷ ಮಕ್ಕಳಾಗುವುದರಿಂದ ... ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ... ಇರುವುದು ಶರೀರಕ್ಕೆ ಏನೂ ಅಪಾಯವಾಗದೆ ... ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ... ಕೊಡಲೇ ... ವಿಚಾರಮಾಡಿ ಔಷಧ ... ಸರ್ಟಿಫಿಕೇಟು ... ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮಣಿ... ಈ ಚೂರ್ಣದಿಂದ ಯಾವ ತರದ ಅಪಾಯವೂ ... ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ... ಕಿಯುರ್ ೪-೦-೦

ವಿ. ಪಿ. ಅಲ್ಲ

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S M C

ಸಾವಕಾರ ಶ್ರೀನಿವಾಸ ರಂಗಪ್ಪ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ		
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	4—14—0	5—0—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—11—0	
,, ದುಯಂ ,, ,,	4—8—0	4—9—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	85—0—0	87—8—0
,, ಸಿಪ್ಪೆ ಇದ್ದದ್ದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	55—0—0	
,, ದಿಲ್‌ಪಸಂದ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—14—0	8—15—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—0—0	4—8—0
ಗೇರುಬೀಜ ಮುಡಿಗೆ	8—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	41—4—0
ಒಣಮೆಣಸು ಹಂಡ್ರವೇಟಿಗೆ	14—0—0	14—8—0

Date 31-5-1940 [illegible] Regd. No. M3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 31—5—1940 [ಸಂಚಿಕೆ 22

The Bombay Life Assurance Company, Ltd.,

(Estd. 1908)

COMPARE

Your Life Assurance with any other property you possess

What is its Guaranteed Value

If you live–today–a few years more–when you are old?

If you die–to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To insure or to represent it pays you to consult.

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷನಾಶ, ಪೋಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು:

AMRUTANJAN DEPOTS BOMBAY MADRAS CALCUTTA

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

[illegible]

[illegible]

ಬರೆ ಹಣಿಸಿದ್ದಾರೆ [illegible] ಶಗೆ [illegible] [illegible] ಚಿತ್ರವನ್ನು [illegible] ಕಾದಂಬರಿಯು 'ಹಳ್ಳಿಯ ಮಾಸ್ತರ' ಕಥೆಯಲ್ಲಿ ಪ್ರಕೃತಿ ವೈದ್ಯಕೀಯುಲ್ಲಿ ಗ್ರಾಮ ಪ್ರಚಾರ ಪ್ರಚಾರದಲ್ಲಿ ಜೀವನ ಸವೆದು, ಹಳ್ಳಿಯ ಚಿತ್ರವನ್ನು ಎಲ್ಲಾ ಮಗ್ಗುಲಿನಿಂದಲೂ ನೋಡಿದ ಅನುಭವಿಗಳಾದ ಶ್ರೀ ಬಾ. ಕೃ. ಅಕ್ಷಿನ್ವರರು ಬರೆದಿದ್ದಾರೆ. ಕಥನಕ್ರಮ, ಶೈಲಿ, ಭಾಷೆ ಇವುಗಳೆಲ್ಲಾ ಹಳೆಯ ರೀತಿಯನ್ನು ಹೊಂದಿದ್ದರೂ, ಶ್ರೀ. ಗೋಕಾಕರು ಒಂದು ಚೆಲುವಾದ ಮುನ್ನುಡಿ ಬರೆದು ಕಾದಂಬರಿಗೆ ಹೊಸತನವನ್ನು ಕೊಟ್ಟಿದ್ದಾರೆ.

ಬೊಮ್ಮಗೇರಿ ಎಂಬುದು ಮಲೆನಾಡಿನ ಒಂದು ಗ್ರಾಮ. ಶ್ರೀಪತಿದೇಸಾಯರು ಅಲ್ಲಿನ ಒಬ್ಬ ಗೃಹಸ್ಥರು; ಉತ್ತಮ ನಡತೆಯುವರು. ಸಂಸಾರದೊಂದಿಗೆ ಇಷ್ಟಮಿತ್ರರೊಂದಿಗೆ ಸುಖವಾಗಿದ್ದರು. ಅವರ ಮನೆಗೆ ಕಲಿಪ್ರವೇಶವಾದಂತೆ ಒಡಕನೆಂಬ ಹುಡುಗನು ಅಲ್ಲಿ ವಿದ್ಯಾಭ್ಯಾಸಕ್ಕಾಗಿ ಬಂದು ಪ್ರವೇಶವಾಗುತ್ತಾನೆ. ಕೃತಘ್ನನು ಜನ್ಮತಃ ಕುಟಿಲ; ನೀಚ ವ್ಯಕ್ತಿಯುವ. ದೇಸಾಯರ ಪತ್ನಿ ಬಂಜೆ. ಇಲ್ಲದ ಸಲ್ಲದ ಮರುಳು ಘಾಟಗಳಿಂದ ಆತ ದೇಸಾಯರ ಹೆಂಡತಿಯ ಮನವೊಲಿಸಿಕೊಳ್ಳುತ್ತಾನೆ! ಮುಂದಕ್ಕೆ ಅವರಿಬ್ಬರ ನೀಚತನದ ಹಲವು ಕಾರ್ಯಗಳು ನಡೆಯುತ್ತವೆ. ಇಬ್ಬರೂ ಸೇರಿ ದೇಸಾಯರಿಗೆ ವಿಷ ಹಾಕಿ ಕೊಲ್ಲುವರು. ಅವರ ಆಸ್ತಿಯೂ ಹೆಂಡತಿಯೂ ವಶವಾಯಿತು. ದೇಶಾಯಿತಿಯು ಒಡಕನ ವಶದವಳೇ! ಮುಂದಕ್ಕೆ ಒಡಕನೇ ದತ್ತ ಪುತ್ರನೂ ಆಗಿಕೊಂಡನು! ಒಡಕ ತನ್ನ ಪಾಪಾಚರಣೆಯ ಕಾರ್ಯದಲ್ಲಿ ಚತುರ್ಭುಜನಾಗಿ ನಿಂತಿರುತ್ತಾನೆ. ಇಲ್ಲಿಗೆ ಈ ಪುಸ್ತಕವು ಕೊನೆಗೊಂಡಿದೆ. ಒಡಕನ ಮುಂದಿನ ಪಾಪೀ ಜೀವಿತದ ಕಥೆಯನ್ನು ಮುಂದಿನ ತನ್ನ ಕಾದಂಬರಿಯಲ್ಲಿ ಪೂರ್ತಿಗೊಳಿಸುವುದಾಗಿ ಬರಹಗಾರರು ಭರವಸೆಯಿತ್ತಿದ್ದಾರೆ.

ಕಾದಂಬರಿಯು ಸ್ವತಂತ್ರವಾಗಿದ್ದು ಚೆಲುವಾಗಿದೆ. ಆರಂಭದಲ್ಲಿ ಬೇಸರಿಕೆಯನ್ನುಂಟುಮಾಡುವಂತೆ ಕಂಡುಬಂದರೂ, ಕಥೆಯನ್ನು ಮುಂದುವರಿಸಿದಂತೆ, ಮತ್ತೆ ಹಿಂದಿನ ಓದುವ ಕೆಳಗಿಡುವಂತಿಲ್ಲ. ಈ ಲೇಖಕರು ಕನ್ನಡ ಕಾದಂಬರಿ [illegible] ಶ್ರೀ. ಗಳಗನಾಥರ ಶಿಷ್ಯರಂತಿದ್ದಾರೆ. ಇವರ ಕಾದಂಬರಿಯು [illegible]ಯನ್ನು ಕಲಿಸಲು ಸಾಕಾಗ [illegible].

[illegible]

ನೋಟೀಸು

[illegible] ಕೋರ್ಟಿನಲ್ಲಿ

O. S. 239/40

[illegible] ಶ್ರೀ [illegible] ದೇವರ ಭಂಡಾರ [illegible] — ವಾದಿ

[illegible] — ಪ್ರತಿವಾದಿರು

[illegible] ಪ್ರತಿವಾದಿಗೆ [illegible] ತಿಳಿಯಪಡಿಸುವ [illegible] ಇವರಿಗೆ

ಮೇಲ್ಕಂಡ [illegible] ವಾದಿಯಿಂದಾರದ ಆಡಳ್ತೆದಾರ [illegible] ಈಶ್ವರ ಶಾಸ್ತ್ರಿಯು ಸದ್ರಿ ಪ್ರತಿವಾದಿರ ಮೇಲೆ ಬಡ್ಡಿ ಬಾಕಿ ಬಾಬು ಬಗ್ಗೆ ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು ಇದರ ಬಗ್ಗೆ ತಾ. 14-6-40ಕ್ಕೆ ಇಟ್ಟಿದೆ. ಆದ್ದರಿಂದ ಆ ದಿವಸ 10ಗಂಟೆಗೆ ಸಂಯದಗಿ ಸದ್ರಿ ಕೋರ್ಟಿನ ಮುಂದೆ ಸ್ವತಹ ಅಗ್ಗಿ ವಕೀಲರ ಮುಖಾಂತ್ರವಾಗ್ಗಿ ಹಾಜ್ರು ಆಗಿ ಎಂಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು ತಿಳಿದಿರಲಿ.

ಪುತ್ತೂರು, ತಾ. 12-4-40	C. S. Shastry. Vakil for Plff—

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No 432/1939

R. I. A. No 2039/1939

ಬಲರಾಮಯ್ಯ—ವಾದಿ. ಅರ್ಜಿದಾರ

ಮತ್ತು

1. ಶಾಂತಾರಾಮ ರಾವ್
2. ದೇವದಾಸ
3. ರೋಹಿದಾಸ (ಮೈನರ್) ಈತನ ಗಾರ್ಡಿಯನ್ 1ನೇ ಪ್ರತಿವಾದಿ.
4. ಗಿರಿಜಾಯಾನೆ ಲಕ್ಷ್ಮಿ ದೇವಿ ಅಮ್ಮ.
5. ಶಾಂತಾ ಭಟ್ಟ.

ಪ್ರತಿವಾದಿರು ಎದ್ರಿರು.

ಇವರವಳಗೆ

ಬೊಂಬಾಯಿ ಶಹರಿನ Fort ಎಂಬಲ್ಲಿ National City Bank of New Yorkನಲ್ಲಿ ಉದ್ಯೋ ಶಂಕರರಾಯರಲ್ಲಿರುವ 1. 2. 3. 4ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವಾದಿಯು ನಿಮ್ಮಮೇಲೆ ಕೂಡಾ ದಾವಾ ಅಡವಿನ ಬಡ್ಡಿ ಬಾಕಿ ರೂಪಾಯಿ 419-14-0ನ್ನುಬರವಾದಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯಲ್ಲಿ ನೀವು ಕೋರ್ಟಿನ ಮುಂದೆ ಹಾಜರಾಗುವರೆಯೂ—ಮತ್ತು ವ್ಯಾನಂ 3ನೇ ಪ್ರತಿವಾದಿಯ ಗಾರ್ಡಿಯನನಾಗಿ 1ನೇ ಪ್ರತಿವಾದಿಗೆ ನೇಮಿಸಬೇಕಾಗಿ ವಗೈರೆ ಕೊಟ್ಟ ಅರ್ಜಿಯಲ್ಲಿ ಆಕ್ಷೇಪ ಇದ್ದರೆ ಹೇಳುವರೆ ಸಹಾ ಇದೇ ತಿಂಗಳ ತಾ. 17ಕ್ಕೆ ಇಟ್ಟಿರುತ್ತದೆ. ಆದ್ದರಿಂದ ನೀವು ತಾ. 17-6-1940ರ ಬೆಳಿಗ್ಗೆ 11ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸದಿದ್ದರೆ ನಿಮ್ಮನ್ನು ಎಕ್ಸಪಾರ್ಟಿ ಮಾಡಿ ದಾವೆ ಮುಂದರಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

B. O.

ಕಾರ್ಕಳ 29-5-1940	H. S. Hussain B. Vasudeva Rao. ವಾದಿಯ ಕಡೆ ವಕೀಲರು

ವೆಂದೇಳಿಸುತ್ತೇವೆ. ಅಲ್ಲಲ್ಲಿರುವ ವರ್ಣನೆಗಳಿಗೆ ಹೆಚ್ಚಿನ ಉಜ್ವಲತೆಯಿಲ್ಲ. ಈ ಕಾದಂಬರಿಯು ಓದುತ್ತಾ ಹೋದಂತೆ ಸ್ವಾರಸ್ಯವನ್ನು ಹೆಚ್ಚಿಸುತ್ತಾ ಬರುವುದರಿಂದ, ಇದರ ಮುಂದಿನ ಭಾಗವು ಇನ್ನಷ್ಟು ಸರಸವಾಗ ಬರುವುದೆಂದೇ ನಾವು ನಿರೀಕ್ಷಿಸುತ್ತೇವೆ.

—[illegible]

ತಣ್ಣಗಾದ "ಓವಲ್ಟಿನ್" ಪಾನೀಯವನ್ನು ಒಂದು ಗ್ಲಾಸ್ ತಣ್ಣಗಿನ ಹಾಲಿಗೆ ಎರಡು ಚಮಚೆಯಷ್ಟು 'ಓವಲ್ಟಿನ್'ನ್ನು ಬೆರಸಿ ಚೆನ್ನಾಗಿ ಕದಡಿಸಿ ಕೂಡಲೇ ತಯಾರಿಸಬಹುದು. ಇದರ ಗುಣವು ಮೆಚ್ಚುಗೆಯ ಪಾನೀಯ ಮಾತ್ರವಲ್ಲದೆ ದೇಹವನ್ನು ಪೋಷಿಸಿ ಬಲವನ್ನೂ ಧಾತುವನ್ನೂ ವೃದ್ಧಿ ಮಾಡುತ್ತದೆ.

ಒಂದು ಗ್ಲಾಸು ತಂಪಾದ 'ಓವಲ್ಟಿನ್'ನ್ನು ಇಂದೇ ಪರೀಕ್ಷಿಸಿರಿ. 'ಓವಲ್ಟಿನ್' ತಣ್ಣಗಾಗಿ ಯಾ ಬಿಸಿಯಾಗಿ ಸೇವಿಸಿದರೂ ಒಂದೇ ತೆರನಾಗಿರುತ್ತದೆ. ಅದು ಹಿಂಗ ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು, ಅಮೂಲ್ಯವಾದ ಪ್ರಾಕೃತಿಕ ವಿಟಮಿನ್ (ಆಹಾರ ಸತ್ವ) ಮತ್ತು ಅನೇಕ ರಂಜಕಗಳಿಂದ ಕೂಡಿದ ಪೌಷ್ಟಿಕ ಆಹಾರವಾಗಿರುತ್ತದೆ. 'ಓವಲ್ಟಿನ್'ನೊಡನೆ ಗುಣದಲ್ಲಿಯೂ, ಪರಿಮಾಣದಲ್ಲಿಯೂ, ಬೆಲೆಯಲ್ಲಿಯೂ ಇದರ ಹೋಲಿಕೆಯ ಬೇರೆ ಪಾನೀಯಗಳೇ ಇಲ್ಲ. ಬದಲಿ ಪಾನೀಯಗಳ ಗೊಡವೆಯನ್ನೇ ಬಿಡಿ.

'ಓವಲ್ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಧಿಕಾರರು: ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್

ಕಥೆಡ್ರಲ್ ಹೌಸ್, ಥರ್ಡ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್, ಮದ್ರಾಸು ಕಲ್ಕತ್ತಾ, ಬೊಂಬಾಯಿ, ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು. ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕುಟುಗಳು. ಅವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. ನಾಲ್ಕು ಟಿನ್ನು ಮತ್ತು 8 ಟಿನ್ನು ಪೆಕೆಟುಗಳಲ್ಲಿಯೂ ಒಂದು ರಾತ್ತಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/50/39.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

7—6—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೭—೬—೧೯೪೦

ಯುದ್ಧದ ಬಿಸಿಯಿಳಿಯದೆ ಶಾಸನಭಂಗ ಆಂದೋಲನವಿಲ್ಲ!

ಮಹಾತ್ಮಾಗಾಂಧಿಯವರ ಹಿತೋಕ್ತಿ

ಕಳೆದ ವಾರದ ಹರಿಜನದಲ್ಲಿ ಮಹಾತ್ಮಾಜಿಯವರು ಈ ಕೆಳಗಿನ ಮಹತ್ವವಾದ ಒಂದು ಪ್ರಕಟಣೆಯನ್ನು ಹೊರಡಿಸಿರುವರು:—

ಡಾ. ರಾಮಮನೋಹರ ಲೋಹಿಯಾರವರು ಕೂಡಲೇ ಶಾಸನಭಂಗ ಸತ್ಯಾಗ್ರಹವನ್ನು ಪ್ರಾರಂಭಿಸುವ ಬಗ್ಗೆ ಪ್ರತಿಪಾದಿಸಿರುವರು. ಜಗತ್ತಿನ ಶಾಂತಿಯನ್ನು ಸ್ಥಿರೀಕರಿಸುವ ಬಗ್ಗೆ ಅವರು ಸೂಚಿಸಿದ ಉಪಾಯಕ್ಕೆ ನನ್ನ ಪೂರ್ಣ ಒಪ್ಪಿಗೆಯಿದೆ. ಅವರು ಕೂಡಲೇ ಸವಿನಯ ಶಾಸನಭಂಗವನ್ನು ಕೈಕೊಳ್ಳಬೇಕೆಂದಿದ್ದಾರೆ. ಡಾ. ಲೋಹಿಯಾ ಇವರು ಅಹಿಂಸಾಚರಣೆಯು ನನ್ನ ಕಲ್ಪನೆಗೆ ಒಪ್ಪುವದಾದರೆ, ಸವಿನಯ ಶಾಸನಭಂಗದ ಮಾರ್ಗದಿಂದ ಬ್ರಿಟಿಷರನ್ನು ಯೋಗ್ಯದಿಸೆಯಲ್ಲಿ ಪ್ರವರ್ತಿಸುವಂತೆ ಮಾಡಲು ಸದ್ಯದ ಸನ್ನಿವೇಶವು ಅನುಕೂಲ ಸನ್ನಿವೇಶವಲ್ಲೆಂಬುದನ್ನು ಅವರು ಕೂಡಲೇ ಒಪ್ಪಿಕೊಳ್ಳುವರು. ಬ್ರಿಟಿಷ ಸರಕಾರವನ್ನು ಪೇಚಿನಲ್ಲಿ ಹಾಕತಕ್ಕದ್ದಲ್ಲೆಂಬುದಕ್ಕೆ ಡಾ. ಲೋಹಿಯಾರವರ ಸಮ್ಮತಿಯಿದೆ. ಶಾಸನಭಂಗದಂತಹ ಪ್ರತ್ಯಕ್ಷ ಕಾರ್ಯಾನುವರ್ತನವು ಬ್ರಿಟಿಷರಿಗೆ ಪೇಚು ಹಾಕುವದೆಂದು ನನ್ನ ಭೀತಿ. ಈಗ ನಾನು ಅದನ್ನು ಆರಂಭಿಸಿದರೆ ಸವಿನಯ ಶಾಸನಭಂಗದ ಇಡೀ ಉದ್ದೇಶವೇ ನಿಷ್ಫಲವಾಗುವದು.

ಅಹಿಂಸೆ ಮತ್ತು ಶಿಸ್ತು

ದೇಶವು ಸ್ಪಷ್ಟವಾಗಿ ಅಹಿಂಸಾಮಯವಾಗಿ ಶಿಸ್ತಿನಿಂದೊಡಗೂಡಿದ್ದರೆ ನಾನು ಅನುಮಾನವಿಲ್ಲದೆ ಸವಿನಯ ಶಾಸನಭಂಗವನ್ನು ಸಾರಲಿದ್ದೇನೆ. ಆದರೆ ದುರ್ದೈವದಿಂದ ಅಹಿಂಸೆಯಲ್ಲಾಗಲೀ ಇಲ್ಲವೆ ಸವಿನಯ ಶಾಸನಭಂಗದಲ್ಲಾಗಲೀ ನಂಬಿಗೆಯಿಲ್ಲದ ಅನೇಕ ಗುಂಪುಗಳು ಕಾಂಗ್ರೆಸಿನ ಒಳಗೆ ಇರುತ್ತವೆ. ಸದ್ಯದ ಕಾಲಕ್ಕೆ ಏನಾದರೂ ತಪ್ಪು ಹೆಜ್ಜೆಯನ್ನು ನಾವಿಟ್ಟರೆ ಕಾಂಗ್ರೆಸು ದೊರಕಿಸಿದ ನೈತಿಕ ಪ್ರತಿಷ್ಠೆಯ ಹ್ರಾಸಕ್ಕೆ ಅದು ಕಾರಣವಾಗಬಹುದು. ಕಾಂಗ್ರೆಸು ಸಾಮ್ರಾಜ್ಯಶಾಹಿತ್ವದ ಬಂಧನ ಹರಿದುಕೊಂಡಿದೆಯೆಂಬುದನ್ನು ಸಾಕಷ್ಟು ನಿಚ್ಚಳವಾಗಿ ತೋರಿಸಿದೆ, ಮತ್ತು ಸ್ವಯಂ ನಿರ್ಣಯದ ಅನಿರ್ಬಂಧ ಅಧಿಕಾರದ ಹೊರತು ಕಾಂಗ್ರೆಸು ಸಮಾಧಾನ ಹೊಂದಲಾರದೆಂಬುದನ್ನೂ ಸ್ಪಷ್ಟಪಡಿಸಿದೆ

ಅಹಿಂಸೆಯ ರೀತಿಯಿದಲ್ಲ

"ತನ್ನ ಘಟನೆಯನ್ನು ತಾನೇ ನಿರ್ಣಯಿಸಿಕೊಳ್ಳುವ ಹಕ್ಕುಳ್ಳ ಸ್ವತಂತ್ರ ರಾಷ್ಟ್ರದ ದರ್ಜೆಯು ಹಿಂದುಸ್ಥಾನಕ್ಕೆ ಉಂಟೆಂದು ಬ್ರಿಟಿಷ ಸರಕಾರವು ಸ್ವಯಂ ಪ್ರೇರಣೆಯಿಂದ ಸಾರದಿದ್ದರೆ ಮಿತ್ರ ರಾಷ್ಟ್ರಗಳ ಎದೆಯ ಮೇಲೆ ನಡೆದ ಯುದ್ಧದ ಬೇಗೆಯು ಶಾಂತವಾಗುವವರೆಗೆ ಮತ್ತು ಈಗಿದ್ದದಕ್ಕಿಂತ ಭವಿಷ್ಯತ್ಪರಿಸ್ಥಿತಿಯು ಹೆಚ್ಚು ನಿಚ್ಚಳವಾಗುವವರೆಗೆ ನಾವು ಮುಂದುವರಿಸಬೇಕೆಂದು ನನ್ನ ಮತ. ಬ್ರಿಟನಿನ ನಾಶದೊಳಗಿಂದ ನಾವು ನಮ್ಮ ಸ್ವಾತಂತ್ರ್ಯವನ್ನು ಬಯಸುವದಿಲ್ಲ. ಅಹಿಂಸೆಯ ರೀತಿಯಿದಲ್ಲ. ಆದರೆ ನಿಜವಾಗಿ ನಮ್ಮಲ್ಲಿ ಬಲವಿದ್ದರೆ ಅದನ್ನು ವ್ಯಕ್ತಪಡಿಸುವ ಅನೇಕ ಪ್ರಸಂಗಗಳು ನಮಗೆ ಒದಗುತ್ತವೆ

ಶೂರರ ಅಹಿಂಸೆ

"ನಮ್ಮಲ್ಲಿ ಬಲವಿದೆಯೆ? ಆಧುನಿಕ ಶಸ್ತ್ರಾಸ್ತ್ರಗಳಿಲ್ಲದೆ ಹಿಂದುಸ್ಥಾನವು ಸುಖಶಾಂತಿಯಲ್ಲಿದೆಯೆ? ಅಥವಾ ಕೆಲವು ವರ್ಷಗಳ ವರೆಗಾದರೂ ಹಿಂದುಸ್ಥಾನಕ್ಕೆ ಬ್ರಿಟನಿನ ಅಥವಾ ಇತರ ರಾಜ್ಯದ ಸಹಾಯವು ಅಗತ್ಯವೆಂದವರಿಗನಿಸುವದಿಲ್ಲವೊ ಹೀಗೆ ನಮ್ಮ ದುರ್ದೈವ ಪರಿಸ್ಥಿತಿಯಿದ್ದರೆ, ಯುದ್ಧ ಮುಗಿದ ನಂತರ ಸನ್ಯಾಸ್ಯ ಒಡಂಬಡಿಕೆಗಾಗಲಿ ಅಥವಾ ಸಾರ್ವತ್ರಿಕ ಶಸ್ತ್ರ ಸನ್ಯಾಸಕ್ಕಾಗಲಿ ಪ್ರಭಾವಶಾಲಿಯಾದ ರೀತಿಯಲ್ಲಿ ನಾವು ಹೇಗೆ ನೆರವಾಗ ಬಲ್ಲೆವು? ಪಾಶ್ಚಾತ್ಯ ದೇಶಗಳಲ್ಲಿಯ ಶಸ್ತ್ರಾಸ್ತ್ರ ನಿಬಿಡಿತವಾದ ರಾಜ್ಯಗಳ ಮೇಲೆ ನಮ್ಮ ಅಹಿಂಸೆಯ ವರ್ಚಸ್ಸನ್ನು ಬೀರುವದಕ್ಕಿಂತ ಮೊದಲು ನಮ್ಮ ದೇಶದಲ್ಲಿಯೇ ನಾವು ಶೂರರ ಅಹಿಂಸೆಯನ್ನು ಪ್ರದರ್ಶಿಸಲಿಕ್ಕೆಬೇಕು

ಸತ್ಯಾಗ್ರಹದಲ್ಲಿ ಅಹಿಂಸೆ

"ಆದರೆ ಅನೇಕ ಕಾಂಗ್ರೆಸ್ಸಿನವರು ಅಹಿಂಸೆಯನ್ನು ಅರಿಕೊಳ್ಳುವರು ಹೇಗಾದರೂ ಮಾಡಿ ಸೆರೆಮನೆಗಳನ್ನು ತುಂಬುವದೇ ಸವಿನಯ ಶಾಸನಭಂಗದ ಅರ್ಥವೆಂದು ಅವರು ತಿಳಿಯುವರು. ಸವಿನಯ ಶಾಸನಭಂಗದಂತಹ ಅದ್ಭುತ ಶಕ್ತಿಯ ಬಾಲಿಶ ಅರ್ಥ. ಪ್ರಾಮಾಣಿಕ ವಿಧಾಯಕ ಪ್ರಯತ್ನವಿಲ್ಲದೆ ಅಥವಾ ತಪ್ಪುಗಾರನ ಬಗ್ಗೆ ಸದಿಚ್ಛೆಯಿಲ್ಲದೆ ಸೆರೆಮನೆಗಳನ್ನು ಸೇರುವುದು ಹಿಂಸೆಯಾದುದರಿಂದ ಸತ್ಯಾಗ್ರಹದಲ್ಲಿ ಅದು ನಿಷಿದ್ಧವೆಂದು ನಾನು ಮತ್ತೆ ಮತ್ತೆ ಹೇಳುತ್ತೇನೆ. ಮನುಷ್ಯನು ಬುದ್ಧಿವಂತಿಕೆಯಿಂದ ಹುಡುಕಿ ತೆಗೆದ ಸಕಲ ಶಸ್ತ್ರಾಸ್ತ್ರಗಳಿಂದ ಹುಟ್ಟುವ ಬಲಕ್ಕಿಂತಲೂ ಅಹಿಂಸೆಯಿಂದುದ್ಭವಿಸಿದ ಸಾಮರ್ಥ್ಯವು ಮಿಗಿಲಾದುದು. ಅತ್ಯಂತ ವಿಷಮತೆಯ ಕಾಲದಲ್ಲಿ ಕಳೆದ ಅರ್ಧ ಶತಮಾನದ ವರೆಗೆ ಯಾವುದರ ಗುಪ್ತ ಶಕ್ತಿಗಳನ್ನು ಹುಡುಕಿ ತೆಗೆಯಲು ನಮ್ರತೆಯಿಂದ ಸಾಹಸಪಡುತ್ತ ಬಂದಿರುವೆನೋ ಆ ಅಹಿಂಸೆಯೊಡನೆ ನಾನು ಚೆಲ್ಲಾಟವಾಡುವದಿಲ್ಲ. ಆದುದರಿಂದ ಸವಿನಯ ಶಾಸನಭಂಗದಲ್ಲಿ ಅಹಿಂಸೆಯೇ ನಿರ್ಣಾಯಕ ಅಂಶ. ಇರುಳಳಿದು ಬೆಳಗಾಗುವದರೊಳಗಾಗಿ ಜನರು ಅಹಿಂಸಾಮಯರಾಗಲಾರರೆಂದು ನನಗೆ ಹೇಳಲ್ಪಡುತ್ತದೆ. ನಾನೆಂದೂ ಹಾಗೆ ಆಗಬಹುದೆಂದು ಪ್ರತಿಪಾದಿಸಿಲ್ಲ. ಆದರೆ ಮನಸ್ಸಿದ್ದರೆ ಯೋಗ್ಯ ಶಿಕ್ಷಣದಿಂದ ಅವರು ಹಾಗೆ ಆಗಬಲ್ಲರೆಂದು ಮಾತ್ರ ನನ್ನ ಅಭಿಪ್ರಾಯವುಂಟು. ಸವಿನಯ ಶಾಸನಭಂಗವನ್ನು ಕೈಕೊಳ್ಳಬೇಕೆನ್ನುವವರಿಗೆ ಪ್ರತ್ಯಕ್ಷ ಅಹಿಂಸೆಯು ಅವಶ್ಯ. ಆದರೆ ಸವಿನಯ ಶಾಸನಭಂಗದ ಸಲುವಾಗಿ ಆರಿಸಿದವರು ಕೂಡ ಸಹಕರಿಸುವದಕ್ಕೆ ಜನರಲ್ಲಿ ಅಹಿಂಸಾ ಬುದ್ಧಿ ಮತ್ತು ಅದರ ತರಬೇತಿಗಳಿದ್ದರೆ ತೀರಿತು. ಕಾಂಗ್ರೆಸ್ಸು ವಿಧಿಸಿದ ವಿಧಾಯಕ ಕಾರ್ಯಕ್ರಮವೇ ಯೋಗ್ಯ ಶಿಕ್ಷಣ. ಈ ಸಿದ್ಧತೆಯನ್ನು ಒದಗಿಸಿಕೊಟ್ಟರೆ ಯೋಗ್ಯ ರೀತಿಯಿಂದ ಯುದ್ಧವನ್ನು ಮುಗಿಸಲು ಅತ್ಯಂತ ಪ್ರಭಾವಿಯಾಗಿ ಕಾಂಗ್ರೆಸ್ಸು ನೆರವಾಗಬಹುದೆಂದು ನನಗನಿಸುತ್ತದೆ. ಹಿಂದುಸ್ಥಾನದ ನಿಃಶಸ್ತ್ರೀಕರಣವು ಮೂಲತಃ ಒತ್ತಾಯದ್ದಿದ್ದರೂ ಅದನ್ನು ಸದ್ಗುಣವೆಂದು ದೇಶವು ಮನಃಪೂರ್ವಕ ಅಂಗೀಕರಿಸಿದರೆ ಮತ್ತು ಶಸ್ತ್ರಾಸ್ತ್ರಗಳಿಂದ ಹಿಂದುಸ್ಥಾನವನ್ನು ರಕ್ಷಿಸಲಿಕ್ಕಿಲ್ಲೆಂದು ಹಿಂದುಸ್ಥಾನವು ಸಾರಿದರೆ ಯುರೋಪಿನ ಪರಿಸ್ಥಿತಿಯ ಮೇಲೆ ಅದ್ಭುತ ಪರಿಣಾಮವಾಗಬಹುದು. ಆದುದರಿಂದ, ಅಹಿಂಸೆಯ ಮಾರ್ಗದಿಂದ ಹಿಂದುಸ್ಥಾನವು ತನ್ನ ಭವಿತವ್ಯವನ್ನು ಕಂಡುಕೊಳ್ಳಬೇಕೆಂದು ಅಪೇಕ್ಷಿಸುವವರೆಲ್ಲರೂ ಸವಿನಯ ಶಾಸನಭಂಗದ ಧ್ಯಾನ ವಿಚಾರವೂ ಇಲ್ಲದೆ ಕೂಡಲೆ ವಿಧಾಯಕ ಕಾರ್ಯಕ್ರಮದ ಸಿದ್ಧಿಗಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಮುಡಿಪುಕಟ್ಟಬೇಕು.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚಿ 15ರ ಒಳಗೆ ರೂ. 1-ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು

ಸೋಲ್ ಏಜೆಂಟ್ಸ್: ಶ್ರೀರಾಮ ಮೆಡಿಕಲ್ ಹಾಲ್, ಗುಲ್ಬರ್ಗ, ದ. ಕ.

ಸ್ವದೇಶಾಭಿಮಾನಿ

ತಾರೀಕು 7—6—1940

ರಾಜಾಜಿಯವರ ಸ್ಪಷ್ಟವಾಣಿ

"ಪಶ್ಚಿಮದಲ್ಲಿ ತೀವ್ರವೂ ಭಯಂಕರವೂ ಆದ ಯುದ್ಧವು ನಡೆಯುತ್ತಿದೆ. ಸಾವಿರಾರು ಮೈಲುಗಳ ದೂರದಲ್ಲಿರುವ ನಮಗೆ ಅದರ ಅನರ್ಥವು ಎಷ್ಟಿರಬಹುದೆಂದು ತಿಳಿಯಲಾರದು. ಪುರಾಣಗಳಲ್ಲಿ ಓದಿದ ರಾಕ್ಷಸರ ಘೋರಂತ ಯುದ್ಧಗಳನ್ನು ಇಂದಿನ ಯುದ್ಧವು ನೆನಪಿಗೆ ತರುತ್ತದೆ. ಕೆಲ ಜನರ ದ್ರಾಹ ಶಾಂತಿಗಾಗಿ ನಿರಪರಾಧಿಗಳನ್ನು ನಿರ್ದಯದಿಂದ ಹತ್ಯೆಮಾಡಲಾಗುತ್ತಿದೆ. ಭಾರತದಲ್ಲಿ ಬಾಂಬಿನ ಪೆಟ್ಟಿನಿಂದ ಆಗಬಹುದಾದ ಅನರ್ಥಗಳು ಉಂಟಾಗಿರದಿದ್ದರೂ, ಆರ್ಥಿಕ ದೃಷ್ಟಿಯಿಂದ ಭಾರತಕ್ಕೂ ಈ ಯುದ್ಧದಿಂದ ಬಹಳ ಪೆಟ್ಟಾಗಿದೆ. ಪರಿಸ್ಥಿತಿಯು ದಿನದಿನಕ್ಕೆ ಭೀಕರವಾಗುತ್ತಿದೆ. ಪಶುಶಕ್ತಿಯು ಬಲಗೊಳ್ಳುತ್ತಿದೆ. ಹಿಟ್ಲರ್ ಮತ್ತು ಹಿಟ್ಲರಿಸಂ ಇವೆರಡನ್ನು ಅಪಜಯಗೊಳಿಸುವುದು ಮಾತ್ರವಲ್ಲ ಭೂಮಿಯಿಂದ ಕಿತ್ತು ಹಾಕಲೇಬೇಕು. ಹಿಟ್ಲರನು ವಿಜಯಿಯಾದರೆ ಲೋಕಕ್ಕೆ ಇನ್ನೂ ಮಹಾ ಸಂಕಟಗಳಿವೆ ಮಾತ್ರವಲ್ಲದೆ ಅನೇಕ ಅನ್ಯಾಯಗಳೂ ಆಗಲಿವೆ. ಇಂದು ಮಿತ್ರಪಕ್ಷದವರು ಹಿಂದಾಗಬೇಕಾಗಿ ಬಂದಿದೆಯೆಂಬುದು ನಿಜ. ಆದರೆ ಸಂಭಂಭರ್ವು ಹಾಗೆ ಒದಗಿದ್ದುದರಿಂದ ಮಾತ್ರ ಆರೀತಿ ಮಾಡಬೇಕಾಯಿತಲ್ಲದೆ, ಅದರಿಂದ ಗೌರವಕ್ಕೆ ಹಾನಿಯಾಗಿಲ್ಲ. ಆದರೆ ಯುದ್ಧದಲ್ಲಿ ಜಯವಾಗುವುದು ನೈತಿಕ ಶಕ್ತಿಯಿಂದ ಮಾತ್ರ. ಬ್ರಿಟನು ಭಾರತಕ್ಕೆ ಸ್ವಯಂನಿರ್ಣಯಾಧಿಕಾರವನ್ನು ಕೊಡಬಲ್ಲುದಾದರೆ ಮಿತ್ರಪಕ್ಷದವರ ನೀತಿ ಪರಾಯಣತೆಯು ವ್ಯಕ್ತವಾಗುವುದು. ಭಾರತದಲ್ಲಿ ಇದು ವರೆಗೆ ಯುದ್ಧ ಸಿದ್ಧತೆಯನ್ನು ಮಾಡಿಲ್ಲವೆಂದರೆ ಇದು ಯಾರ ತಪ್ಪು? ಭಾರತೀಯರು ಇಂತಹ ಪರಿಸ್ಥಿತಿಯಲ್ಲಿಯೂ ಕಾದಾಡಬಲ್ಲರು. ಆದರೆ ಹೋರಾಡುವುದರ ಉದ್ದೇಶವೇನೆಂದು ತಿಳಿಯದೆ, ಸೈನಿಕನು ಆವೇಶಗೊಳ್ಳಲಾರನು" ಹೀಗೆಂದು ಮೊನ್ನೆ ರಾಜಾಜಿಯವರು ಇಂದಿನ ಯುದ್ಧದ ಪರಿಸ್ಥಿತಿ ಹಾಗೂ ಭಾರತದ ವಿಷಯಗಳನ್ನು ವಿವರಿಸುತ್ತಾ ಮದ್ರಾಸಿನ ಸಾರ್ವಜನಿಕ ಸಭೆಯೊಂದರಲ್ಲಿ ಉಜ್ವಲಭಾಷಣವಿತ್ತರು.

ಅವರು ತಮ್ಮ ಭಾಷಣದಲ್ಲಿ ಎಲ್ಲರೂ ಸ್ವಾತಂತ್ರ್ಯ ಪ್ರೇಮಿಗಳಾಗಬೇಕೆಂದೂ, ಸ್ವಾತಂತ್ರ್ಯ ಪ್ರಾಪ್ತಿಗಾಗಿ ನಮ್ಮ ಮಾರ್ಗದರ್ಶಕರಾಗಿರುವ ಮಹಾತ್ಮರ ಹಿತವಚನಗಳನ್ನು ಕೇಳಿ ಅವರ ತೋಳುಗಳನ್ನು ಬಲಗೊಳಿಸಬೇಕೆಂದೂ, ಸ್ವಾತಂತ್ರ್ಯ ವಿರೋಧಕರವಾಗಿರುವ ಪರಸ್ಪರ ಅಭಿಪ್ರಾಯ ವ್ಯತ್ಯಾಸಗಳನ್ನು ಮರೆತು ಬಿಡಬೇಕೆಂದೂ ಸಾರಿದರು.

"ಸ್ವಾತಂತ್ರ್ಯ ಪ್ರೀತಿಯೆಂಬುದು ಮಾನವನ ರಕ್ತಗತವಾದ ಶಕ್ತಿಯು. ಪಾಶ್ಚಿಮಾತ್ಯ ದೇಶಗಳ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರಾಣಗಳನ್ನು ಬಲಿದಾನ ಮಾಡಲೂ ಸಿದ್ಧರಿರುವರು. ಜರ್ಮನಿಯ ಧೂರ್ತದಾಳಿಯಿಂದ ತಪ್ಪಿಸಿಕೊಳ್ಳಲು ಹಲವು ಪಾಶ್ಚಾತ್ಯ ರಾಷ್ಟ್ರಗಳು ಅಗಣಿತ ಸಂಕಷ್ಟಗಳನ್ನು ಎದುರಿಸಿದವು. ಆದರೆ ಹಾಗೆ ಅವರು ಬಲಿದಾನದಂದಲಾದರೂ, ರಾಷ್ಟ್ರವನ್ನು ಕಾಪಾಡಬೇಕೆಂದು ದೃಢತೆಯಿಂದ ಕಾದಾಡಿರುವ ಕಾರಣವೇನೆಂದರೆ ರಾಷ್ಟ್ರವು ತಮ್ಮದು ಎಂಬ ಅಭಿಮಾನವು ಅವರಿಗಿದೆ. ಭಾರತದ ಜನರಿಗಾದರೂ ಇಂತಹ ಆತ್ಮೀಯತೆಯು ಬಂದ ಪಕ್ಷದಲ್ಲಿ ಅವರೂ ಅಂತಹ ಸ್ವಾರ್ಥತ್ಯಾಗಗಳನ್ನೇ ಮಾಡಬಲ್ಲರು" ಎಂದು ರಾಜಾಜಿಯವರು ಸ್ಪಷ್ಟಪಡಿಸಿದರು.

"ಇಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಲ್ಲರೂ ಸೇರಿರುವುದಿಲ್ಲ. ಕೆಲವರು ರಾಜ್ಯವನ್ನು ಹರಿದು ಹಂಚಿಬಿಡಲು ಯತ್ನಿಸುತ್ತಾರೆ. ತಮ್ಮ ಸ್ವಾರ್ಥ ಸಾಧನೆಗಾಗಿ ಅಂತರ್ಯದಲ್ಲಿ ಕಲಹಗಳನ್ನು ಹುಟ್ಟಿಸುತ್ತಾರೆ. ಇದೆಲ್ಲವೂ ನಮ್ಮಲ್ಲಿ ಆಗಲು ಕಾರಣವೆಂದರೆ ರಾಷ್ಟ್ರವು ನಮ್ಮದಾಗಿದೆಯೆಂದು ನಾವು ಅರಿತುಕೊಂಡಿರದುದೇ ಆಗಿದೆ" ಎಂದೂ ಅವರು ತಿಳಿಸಿದರು. ಭಾಷಣವನ್ನು ಉಪಸಂಹಾರ ಮಾಡುತ್ತಾ ಅವರು ಹೀಗೆ ನುಡಿದರು:

"ತಾವಿರುವ ಮನೆಯು ತಮ್ಮ ಸ್ವಂತದ್ದೆಂದು ಆಗುವವರೆಗೆ ಅದರ ವ್ಯವಸ್ಥೆಯ ಬಗೆಗೆ ಜನರು ಅನಾದರ ಮಾಡುವುದು ಸಹಜವಿದೆ. ಮೊದಲು ನಮಗೆ ನಮ್ಮ ಹಕ್ಕು ತಿಳಿದಿರಬೇಕು; ಕೂಡಲೇ ಕೆಲಸಕ್ಕೆ ಕೈಹಾಕಲು ಮನಸ್ಸು ಬಂದೇ ಬರುವುದು. ಕಾಂಗ್ರೆಸು ಅದಷ್ಟನ್ನು ಮಾತ್ರ ಕೇಳುತ್ತದೆ. ಜೀವನ ಮರಣದ ಸಂಗ್ರಾಮದಲ್ಲಿ ಸಿಲುಕಿರುವ ಬ್ರಿಟನನ್ನು ಈಗ ಸೇಚಾಟದಲ್ಲಿ ಬೀಳಿಸಲು ಮಹಾತ್ಮರು ಬಯಸುವುದಿಲ್ಲ. ಭಾರತವು ಸ್ವತಂತ್ರವಾದಿ ಮಾಡಲ್ಪಡುವುದೆಂದು ಬ್ರಿಟನು ಪ್ರಕಟಣೆಯೊಂದನ್ನು ಕೊಟ್ಟರೂ ಮಹಾತ್ಮರು ತೃಪ್ತರಾಗುತ್ತಾರೆ. ಬ್ರಿಟಿಷ್ ಸರಕಾರದ ಮಾತಿನಲ್ಲಿ ಇನ್ನೂ ವೈಯೂ ಅವರು ವಿಶ್ವಾಸವಿಡುತ್ತಾರೆ. ಆದರೆ ಯೋಗ್ಯ ಉತ್ತರವನ್ನು ಕೊಡಲು ಬ್ರಿಟನು ಯಾಕೆ ಹಿಂಜರಿಯಬೇಕು? ಬ್ರಿಟನು ತಾನು ಕಳೆದುಕೊಂಡ ಘನಸ್ಥಿತಿಕೆಯನ್ನು ತಿರಿಗಿ ಹೊಂದಲು ಗಾಂಧಿಜಿಯವರ ಸರ್ಟಿಫಿಕೇಟು ಪಡೆಯಬೇಕಾಗಿದೆ"

ರಾಜಾಜಿಯವರು ಜಗತ್ತಿಗೆ ಬರಿಯ ಒಬ್ಬನ ಆಳ್ವಿಕೆಯು ಹೇಗೆ ಪ್ರಮಾದಕರವೋ ಹಾಗೆಯೇ ಭಾರತಕ್ಕೂ ಒಬ್ಬನ ಆಳ್ವಿಕೆಯೆಂಬುದು ಸಲ್ಲತಕ್ಕದಲ್ಲವೆಂದೂ ಇಂದು ಪ್ರಾಂತದ ಗವರ್ನರರು ತಮ್ಮ ಮನೆಯ ಭಯಂಕರತೆಯಲ್ಲಿ ಮಗ್ನರಾಗಿ ಇಲ್ಲಿನ ಆಡಳಿತವನ್ನು ಸರಿ ಮಾಡುವುದು ಅಸಾಧ್ಯವೆಂದೂ, ಇಂತಹ ಕಾಲದಲ್ಲಿ ದೇಶದುನ್ನತಿಗೆ ಜನರ ಪ್ರತಿನಿಧಿಗಳ ಸರಕಾರವು ಇರುವುದು ಅವಶ್ಯವೆಂದೂ ತಿಳಿಸಿದರು.

ವ್ಯಾಕರಣವು ಸುಲಭವಾಯಿತ!
ಪ್ರಬಂಧವು ಸುಂದರವಾಯಿತು!

ವಿದ್ವಾನ್ ಶ್ರೀ| ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು.)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0—1—6
6ನೆ ತರಗತಿಗೆ	,,	0—2—[illegible]
7ನೆ ,,	,,	0—2—6
8ನೆ ,,	,,	0—3—0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು

ಆದರ್ಶಕರವಾದ
ಪೌಷ್ಟಿಕ.

ಇದರಿಂದ ಬಳಚ್ಚುರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಮಹಾತ್ಮರ ನಿರ್ಧಾರ

ಕಳೆದ ವಾರದ ಹರಿಜನದಲ್ಲಿ ಮಹಾತ್ಮಾ ಗಾಂಧಿಜಿಯವರು ಒಂದು ಮಹತ್ವದ ಪ್ರಕಟಣೆಯನ್ನು ಹೊರಡಿಸಿ ಅದರಲ್ಲಿ, ಇಂದು ಬ್ರಿಟನು ಸಂಕಷ್ಟದಲ್ಲಿರಲು ನಾವು ಅದರ ಸದುಪಯೋಗಪಡಿಸಿಕೊಳ್ಳಲು ಹಾತೊರೆಯಬಾರದೆಂದೂ ಪಶ್ಚಿಮದಲ್ಲಿ ಯುದ್ಧದ ಬಿಸಿಯುಳಿಯದೆ, ಸ್ವಾತಂತ್ರ್ಯ ಆಂದೋಲನವನ್ನು ಆರಂಭಿಸುವುದಿಲ್ಲವೆಂದೂ ನಿರ್ಧಾರಪೂರ್ವಕವಾಗಿ ತಿಳಿಸಿದ್ದಾರೆ.

ಮೊನ್ನೆ ಪಾರ್ಲಿಮೆಂಟಿನಲ್ಲಿ ಭಾರತ ಸಚಿವರಾದ ಎಮೆರಿಯವರೊಡನೆ ಪಂಡಿತ ನೆಹರುಗಳ ಹೇಳಿಕೆಯ ಕುರಿತು ಪ್ರಶ್ನಿಸಲು ಅವರ ಹೇಳಿದ್ದೇನೆಂದರೆ, ನೆಹರುಗಳ ಹೇಳಿಕೆಯಿಂದ ಭಾರತವು ಸ್ವಾತಂತ್ರ್ಯ ಆಂದೋಲನವನ್ನು ಬಿಟ್ಟು ಬಿಟ್ಟಿರುವುದೆಂಬ ಅಭಿಪ್ರಾಯವಾಗುವುದಿಲ್ಲವೆಂದೂ, ಬ್ರಿಟನಿನ ಕಷ್ಟವನ್ನು ನಾವು ನಮ್ಮ ಅನುಕೂಲವೆಂದು ತಿಳಿಯುವುದಿಲ್ಲವೆಂದು ಮಾತ್ರ ಹೇಳಿರುವರೆಂದು ವಿವರಿಸಿದ್ದರು. ಆದರೆ ಇಂದು ಅಖಿಲಜಗತ್ತಿಗೇ ಭಾರತದ ನಿರ್ಧಾರವನ್ನು ಗಾಂಧಿಜಿಯವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಗಾಂಧಿಜಿಯವರು ಈ ಹೇಳಿಕೆಯ ಮೂಲಕ ಬ್ರಿಟಿಷ್ ಸರಕಾರದ ಮೇಲೆ ಹೊರಿಸಿದ ಅತ್ಯಂತಪ್ರಬಲವಾದ ಜವಾಬ್ದಾರಿಯನ್ನು ಇಂದಾದರೂ ಬ್ರಿಟಿಷ್ ರಾಜನೀತಿಜ್ಞರು ಅರ್ಥಮಾಡಿಕೊಳ್ಳುವರೆ?

ಕಾಂಗ್ರೆಸು ಮಂತ್ರಿಗಳು ರಾಜಿನಾಮೆ ಕೊಟ್ಟು ಹೊರಬಂದ ಮೇಲೆ ಭಾರತದ ರಾಜಕೀಯದ ವ್ಯವಸ್ಥೆಯನ್ನು ಮಾಡುವ ಯಾವ ಮನಸ್ಸನ್ನೂ ಸರಕಾರವು ಮಾಡಿದಂತೆ ಕಂಡುಬರುವುದಿಲ್ಲ. ಪ್ರಾಂತಗಳಲ್ಲಿಯೂ ಕೇಂದ್ರದಲ್ಲಿಯೂ ಜವಾಬ್ದಾರೀ ಸರಕಾರವನ್ನು ಮಾಡುವುದೇ ಬ್ರಿಟನು ಇಂದು ಭಾರತದ ರಾಜಕೀಯ ವ್ಯವಸ್ಥೆಯ ಕುರಿತು ತೋರಿಸುವ ಮೊದಲ ಸೂಚನೆಯಾಗಿತ್ತು. ತಕ್ಕ ಕಾಲದಲ್ಲಿ ಬ್ರಿಟನು ವಿಚಾರದಿಂದಾಗಿ ವರ್ತಿಸದಿದ್ದರೆ ಮುಂದಕ್ಕೆ ಪಶ್ಚಾತ್ತಾಪಪಡಬೇಕಾಗಲೂ ಬಹುದು.

ಗಾಂಧಿಜಿಯವರೊಡನೆ ಪ್ರಶ್ನೋತ್ತರಗಳು!

ಗ್ರಂಥಿಜ್ಞಯನರೊಡನೆ ಹಲವರು ಹಲವು ವಿಧದ ಪ್ರಶ್ನೆಗಳನ್ನು ಕೇಳುತ್ತಾರೆ. ತಮ್ಮ ಸಮಸ್ಯೆಗಳನ್ನು ಅವರೊಡನೆ ಬಿನ್ನವಿಸಿಕೊಳ್ಳುತ್ತಾರೆ. ಅಂತಹ ಪತ್ರಗಳು ಅವರಿಗೆ ಸಾವಿರಾರು ಬರುವವು. ಅವುಗಳಿಗೆ ಅವರು ಅವಕಾಶವಿದ್ದಂತೆ ಉತ್ತರ ಕೊಡುತ್ತಿರುವರು. ಇತ್ತೀಚಿಯ ಕೆಲವು ಪ್ರಶ್ನೆಗಳೂ ಅವುಗಳಿಗೆ ಮಹಾತ್ಮಾಜಿಯವರು ಕೊಟ್ಟ ಉತ್ತರವೂ ಹರಿಜನ ಪತ್ರಿಕೆಯಲ್ಲಿ ಈ ಕೆಳಗೆ ಕಂಡಂತೆ ಪ್ರಕಟವಾಗಿದೆ.

ಪ್ರಶ್ನೆ:—ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಿದ ಸತ್ಯಾಗ್ರಹಿಯು ಬಂಧಿತನಾಗಿ ಕೋರ್ಟಿನ ಮುಂದೆ ನಿಂತು ತಾನು ನಿರಪರಾಧಿಯೆಂದು ವಾದಿಸಬಹುದೆ?

ಉತ್ತರ:—ವಾದಿಸಬಹುದು. ಆಜವಿಹರದ ಘಟನೆಯಂತಹುದರಲ್ಲಿ ಅದೇ ಮಾಡಬೇಕಾಗಿದೆ.

ಪ್ರ:—ಬಂಧನವಾಗುವಾಗ ಸತ್ಯಾಗ್ರಹಿಯು ಎಕ್ಲಾಸು ಬಿಕ್ಲಾಸುಗಳಿಗಾಗಿ ಯತ್ನಿಸಬಹುದೆ?

ಉ:—ಕ್ಲಾಸು ಎಂಬುದೇ ನನಗೆ ಆಗುವುದಿಲ್ಲ.

ಪ್ರ:—ಜೈಲಿನಲ್ಲಿ ಎಂತಹ ನಿಯಮವನ್ನಾದರೂ ಸಹಿಸಿ ಸುಮ್ಮಗಿರಬೇಕೆ? ಇಲ್ಲವೆ? ಮನುಷ್ಯ ಸಹಜ ಸೌಕರ್ಯಕ್ಕಾಗಿ ಸೆರೆಮನೆಯಲ್ಲಿಯೂ ಯತ್ನಿಸಬಹುದೆ?

ಉ.—ಜೀವಿತ ಸೌಕರ್ಯಕ್ಕೆ ಸಂಭಂಧಿಸಿ ಯತ್ನಿಸಬಹುದು.

ಪ್ರ—ಸತ್ಯಾಗ್ರಹಿಗೆ ನೂಲಲು ಸಮಯದ ಅವಧಿ ಯಾವುದು?

ಉ—ದಿವಸಕ್ಕೊಂದು ತಾಸು ಅಥವಾ ೩೦೦ ಸುತ್ತಿನ ಒಂದು ಲಡಿದಾರ ನೂಲಬೇಕು.

ಪ್ರ—ನೀವು ಕರೆದಾಗ ಸತ್ಯಾಗ್ರಹಕ್ಕೆ ಕೂಡಲೇ ಬಂದುಬಿಡುವುದೆ? ಅಥವಾ ಅದಕ್ಕೆ ಪೂರ್ವ ಸಿದ್ಧತೆಯಾಗಬೇಕೆ?

ಉ:—ನಾನು ಪೂರ್ವ ಸಿದ್ಧತೆಗೂ ಅವಧಿಯನ್ನು ಇಡಲಾರೆ. ಪ್ರತಿಜ್ಞೆಗೆ ಸಹಿಹಾಕಿ ಜೈಲುಯಾತ್ರೆಗೆ ಹೊರಡುವವರನ್ನೂ ನಂಬಲಾರೆ. ಸತ್ಯಾಗ್ರಹದಲ್ಲಿ ನನಗೆ ಬೆಂಬಲ ಸಿಗದಿದ್ದರೂ ಚಿಂತೆಯಿಲ್ಲ. ಸದ್ಯಕ್ಕೆ ನಾನು ಯಾರನ್ನೂ ಸತ್ಯಾಗ್ರಹಕ್ಕಾಗಿ ಕರೆಯುವುದಿಲ್ಲ.

ವಕೀಲರು ಸತ್ಯಾಗ್ರಹಿಗಳಾಗಬಹುದೆ?

ಪ್ರ:—ವಕೀಲರು ಕಸುಬಿನಿಂದ ಸುಳ್ಳು ಹೇಳುವವರು. ಅವರು ಪ್ರತಿಜ್ಞೆ ತೆಗೆದುಕೊಳ್ಳುವುದರಿಂದ ಸತ್ಯಾಗ್ರಹಿಗಳಾಗಲು ಅರ್ಹರೆ?

ಉ:—ವಕೀಲರಲ್ಲಿ ಸುಳ್ಳುಹೇಳುವವರಿರಬಹುದು. ಹೇಳುವವರೂ ಇದ್ದಾರೆ. ಆದರೆ ಸತ್ಯಾಗ್ರಹಿಯಾಗಬೇಕೆಂಬ ಸಂಕಲ್ಪವೇ ಅವರನ್ನು ಬದಲಾಯಿಸಲಿಲ್ಲವೆ? ಕೆಟ್ಟಜನರು ಎಲ್ಲಿಲ್ಲ? ಕಾಂಗ್ರೆಸಿನಲ್ಲಿಯೂ ಬಹಳ ಮಂದಿ ಇದ್ದಾರೆ. ಹಾಗಾದರೆ ಒಂದು ವೃತ್ತಿಯವರನ್ನೇ ನಾವು ಬಾಹಿರರಾಗಿ ಮಾಡುವದು ಸರಿಯಲ್ಲ.

ಹರಿಜನರನ್ನು ಅಡಿಗೆಗೆ

ಪ್ರ:—ನೀವು ಹರಿಜನರೂ ಸವರ್ಣೀಯರೂ ಭೇದವಿಲ್ಲದೆ ಇರಬೇಕೆನ್ನುತ್ತೀರಿ. ಹಾಗೆ ಆಗಲು ಹರಿಜನರನ್ನು ನಾವು ಅಡಿಗೆಗೆ ಇಟ್ಟುಕೊಳ್ಳುವುದು ಯೋಗ್ಯ ಉಪಾಯ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಉ:—ನಿಜವಾಗಿ ಇದು ಯೋಗ್ಯ ಮಾರ್ಗ. ಇದರಿಂದ ಸಹಜವಾಗಿ ಒಳ್ಳೆಯ ಪರಿಣಾಮವಾಗುವುದು. ತಾರತಮ್ಯವು ಅಳಿಯುವುದು.

ಹೆಂಗಸರು ಮತ್ತು ಗಂಡಸರು

ಪ್ರ:—ಗಂಡಸು ಮತ್ತು ಹೆಂಗಸು ಸತ್ಯಾಗ್ರಹಿಗಳು ಬೇಕಾದ ಹಾಗೆ ಒಂದೆಡೆ ಸೇರಿ ಕೂಡಿ ಕೆಲಸಮಾಡುವದು ನಿಮ್ಮ ಮನಸ್ಸಿಗೆ ಬರುವದೋ ಅಥವಾ ಅವರೆಲ್ಲರನ್ನು ಪ್ರತ್ಯೇಕವಾದ ಘಟಕಗಳಾಗಿ ಸಂಘಟಿಸಿ ಅವರವರಿಗೆ ಒಗ್ಗುವ ಬೇರೆ ಬೇರೆ ಕಾರ್ಯ ಕ್ಷೇತ್ರಗಳನ್ನು ಗೊತ್ತುಪಡಿಸುವದು ಯೋಗ್ಯವಾಗುವದೋ ಎಂಬ ಬಗ್ಗೆ ನಿಮ್ಮ ಮತವನ್ನು ತಿಳಿದುಕೊಳ್ಳಲಪೇಕ್ಷಿಸುತ್ತೇನೆ. ಒಂದೆಡೆ ಸೇರುವದರಿಂದ ನಿಯಮ ಭಂಗಕ್ಕೆ ತುಂಬಾ ಆಸ್ಪದವುಂಟಾಗಿದೆ ಮತ್ತು ಆಗುತ್ತಿದೆಯೆಂದು ನನ್ನ ಅನುಭವ. ನನ್ನ ಅಭಿಪ್ರಾಯವನ್ನು ನೀವು ಒಪ್ಪಿಕೊಂಡರೆ ಈ ಭಾವೀ ಅನರ್ಥವನ್ನು ತಪ್ಪಿಸಲು ನೀವು ಯಾವ ನಿಯಮಗಳನ್ನು ಸೂಚಿಸುವಿರಿ?

ಉ:—ಪ್ರತ್ಯೇಕ ಘಟಕಗಳನ್ನು ಮಾಡುವದು ನನಗೆ ಇಷ್ಟವೆಂದು ತೋರುತ್ತದೆ. ಹೆಂಗಸರಲ್ಲಿಯೇ ಮಾಡತಕ್ಕ ಕೆಲಸವು ಹೆಂಗಸರಿಗೆ ಬೇಕಾದಷ್ಟಿದೆ. ನಮ್ಮ ಹೆಂಗಸರನ್ನು ನಾವು ಬಹಳ ಕಡೆಗಣಿಸಿದ್ದೇವೆ. ಅತ್ಯಂತ ಪ್ರಾಮಾಣಿಕ ಬುದ್ಧಿಯ ನೂರಾರು ಬುದ್ಧಿವಂತರಾದ ಸ್ತ್ರೀಯರು ಈ ಕಾಲಕ್ಕೆ ಬೇಕಾಗಿರುವರು. ಕಸ್ತತಃ ಗಂಡಸರೂ ಹೆಂಗಸರೂ ಬೇರೆಬೇರೆಯಾಗಿ ಕೆಲಸ ಮಾಡುವದು ಯೋಗ್ಯವೆಂದು ನನ್ನ ನಂಬಿಗೆ. ಆದರೆ ನಾನೇನೂ ಅತ್ಯಂತ ಗಡುಸಾದ ನಿಯಮಗಳನ್ನು ಹಾಕಬಯಸುವದಿಲ್ಲ. ಇಬ್ಬರ ನಡುವಿನ ಸಂಬಂಧದ ವಿಷಯದಲ್ಲಿ ಸದ್ಬುದ್ಧಿ ಸತ್ಪ್ರೇರಣೆಗಳು ನೆಲಸಬೇಕು. ಅವರೀರ್ವರ ನಡುವಿನ ನಡತೆಯು ಸ್ವಾಭಾವಿಕ ಹಾಗೂ ಸ್ವಯಂಸ್ಫೂರ್ತವಿರತಕ್ಕದ್ದು.

ಸತ್ಯಾಗ್ರಹ ಶಿಬಿರ ಮತ್ತು ಅಸ್ಪೃಶ್ಯತೆ

ಪ್ರ:—ಸ್ವಯಂಸೇವಕರನ್ನು ತರಬೇತು ಮಾಡುವದಕ್ಕಾಗಿ ದೇಶದ ತುಂಬ ಸತ್ಯಾಗ್ರಹ ಶಿಬಿರಗಳನ್ನು ಸಂಘಟಿಸಲಾಗುತ್ತಿದೆ. ಆದರೆ ಅಸ್ಪೃಶ್ಯತಾ ನಿವಾರಣೆಯ ತತ್ವವನ್ನು ಗಟ್ಟಿಯಾಗಿ ಪಾಲಿಸುತ್ತಿರುವದಿಲ್ಲ. ಹರಿಜನ ಸ್ಪರ್ಶವು ಮೈಲಿಗೆಯೆಂದು ತಿಳಿಯುವವರು ಮತ್ತೂ ಅವರಲ್ಲಿ ಬೇಕಾದಂತೆ ಕೂಡಲಾರದವರಾರೂ ಸತ್ಯಾಗ್ರಹ ಶಿಬಿರಗಳಲ್ಲಿರಕೂಡದೆಂಬ ತತ್ವವನ್ನು ನೀವು ಒಪ್ಪುವಿರಲ್ಲವೇ?

ಉ:—ಒಂದು ಚೂರು ಕೂಡ ಅಸ್ಪೃಶ್ಯತೆಯ ಕಲ್ಪನೆಯುಳ್ಳವನು ಸತ್ಯಾಗ್ರಹ ಸೇನೆಯಲ್ಲಿ ಸೇರಲು ಅಯೋಗ್ಯನೆಂದು ಹೇಳಲು ನನಗೇನೂ ಅನುಮಾನವಿಲ್ಲ. ನಮ್ಮ ಅವನತಿಗೆ ಹಾಗೂ ಹಿಂದೂ ಮುಸಲ್ಮಾನರ ಜಗಳಕ್ಕೆ ಅಸ್ಪೃಶ್ಯತೆಯೇ ಮೂಲ ಕಾರಣವೆಂದು ನಾನು ಭಾವಿಸುತ್ತೇನೆ. ಅಸ್ಪೃಶ್ಯತೆಯು ಹಿಂದುತ್ವದ ಮತ್ತು ಹಿಂದುಸ್ತಾನದ ಒಂದು ಕಲಂಕ. ಒಬ್ಬ ಮನುಷ್ಯನು ಧರ್ಮಾಂತರ ಹೊಂದಿದರೂ ಕೂಡ ಅವನನ್ನು ಈ ಕಲಂಕವು ಬೆನ್ನುಹತ್ತುತ್ತದೆ.

ರಜೆಯನ್ನು ಹೇಗೆ ಕಳೆಯಬೇಕು?

ಪ್ರ:—ರಜೆಯಲ್ಲಿ ವಿದ್ಯಾರ್ಥಿಗಳು ಏನು ಮಾಡಬಹುದು? ಅಭ್ಯಾಸ ಮಾಡುವುದಂತೂ ಅವರಿಗೆ ಬೇಕಾಗಿಲ್ಲ ಮತ್ತು ಸದಾ ನೂಲುವದಕ್ಕೆ ಬೇಸರಬರುವದು.

ಉ:—ನೂಲುವದಕ್ಕೆ ಅವರು ಬೇಸರಿಸ ಹತ್ತಿದರೆ ಅದರ ಅರ್ಥವೇನೆಂದರೆ ನೂಲುವದರಲ್ಲಿರುವ ಸತ್ವದಾಯಕ ಗುಣವನ್ನು ಹಾಗೂ ಅದರ ಅಂತರಿಕ ಆಕರ್ಷಕತೆಯನ್ನು ಅವರು ಅರಿತಿಲ್ಲವೆಂದೇ ಆಗುವದು. ಪ್ರತಿಯೊಂದು ಗಜನೂಲು ರಾಷ್ಟ್ರಸಂಪತ್ತನ್ನು ಬೆಳೆಸುತ್ತದೆಯೆಂಬುದನ್ನು ತಿಳಿದುಕೊಳ್ಳುವದರಲ್ಲಿ ಕಠಿಣ ವಿಷಯವೇನಿದೆ? ಒಂದು ಗಜ ನೂಲಿಂದರೇನೂ ವಿಶೇಷವಲ್ಲ, ಆದರೆ ದುಡಿಮೆಯು ಅತ್ಯಂತ ಸರಳ ಬಗೆಯಿಂದ ಒಳಕ ಅದನ್ನು ಹೆಚ್ಚುಗೊಳಿಸಲು ಬಹುದು. ಈ ಪ್ರಕಾರ ನೂಲುವದರ ಮಾರ್ಮಿಕ ಮಹತ್ವವು ವಿಶೇಷವಾಗಿದೆ. ರಾಟಿಯ ಯಾಂತ್ರಿಕ ರಚನೆಯನ್ನು ಅರಿತುಕೊಂಡು ಅದನ್ನು ಗೆಲುವಾಗಿಡುವುದು ವಿದ್ಯಾರ್ಥಿಗಳು ಮಾಡತಕ್ಕ ಕೆಲಸ. ಹೀಗೆ ಮಾಡುವವರಿಗೆ ನೂಲುವದರ ಬಗ್ಗೆ ಒಂದು ವಿಚಿತ್ರ ಮೋಹವುಂಟಾಗುವದು. ಆದುದರಿಂದ ನಾನು ಬೇರಾವ ಉದ್ಯೋಗವನ್ನು ಸೂಚಿಸುವದಿಲ್ಲ. ಆದರೆ ಹೆಚ್ಚು ಅವಸರದ ಕೆಲಸ ಬಂದಾಗ ನೂಲುವುದನ್ನು ಬದಿಗಿರಿಸಬಹುದು. ಅಕ್ಕಪಕ್ಕದ ಹಳ್ಳಿಗಳನ್ನು ಆರೋಗ್ಯಮಯವಾಗಿಯೂ ಸ್ವಚ್ಛವಾಗಿಯೂ ಇಡುವ ಕೆಲಸದಲ್ಲಿ ಅಥವಾ ಬೇನೆಬಿದ್ದವರಿಗೆ ಉಪಚಾರ ಮಾಡುವುದರಲ್ಲಿ ಅಥವಾ ಹರಿಜನ ಮಕ್ಕಳಿಗೆ ಓದುಬರಹವನ್ನು ಕಲಿಸುವದರಲ್ಲಿ ಅವರ ನೆರವು ಬೇಕಾಗಬಹುದು.

ಸತ್ಯಾಗ್ರಹಿಗಳನ್ನು ಕೂಡಿಸುವುದೇ? ವಿಧಾಯಕ ಕಾರ್ಯಕ್ರಮವೆ?

ಪ್ರ:—ನಮ್ಮ ಎಲ್ಲ ವೇಳೆಯನು ಸತ್ಯಾಗ್ರಹಿಗಳನ್ನು ಕೂಡಿಸುವದರಲ್ಲಿ ಕಳೆಯಬೇಕೋ ಅಥವಾ ನಮ್ಮ ಕಡೆಗೆ ಈ ಮೊದಲೇ ಇರುವ ಸತ್ಯಾಗ್ರಹಿಗಳೊಂದಿಗೆ ವಿಧಾಯಕ ಕಾರ್ಯಕ್ರಮವನ್ನು ಸಂಘಟಿಸಲು ತೊಡಗಬೇಕೋ? ಇದರಲ್ಲಿ ನಿಮಗೆ ಯಾವದು ಹೆಚ್ಚು ಯೋಗ್ಯವೆನಿಸುವದು.

ಉ:—ಈಗಿದ್ದ ಸತ್ಯಾಗ್ರಹಿಗಳೊಂದಿಗೆ ನೀವು ವಿಧಾಯಕ ಕಾರ್ಯಕ್ರಮವನ್ನು ಸಂಘಟಿಸಬೇಕು. ಇದರಿಂದ ತಾನಾಗಿಯೆ ಸತ್ಯಾಗ್ರಹಿಗಳು ಬಂದುಕೂಡುವರು.

ಗಂಟಲು ಮತ್ತು ಶ್ವಾಸಕೋಶಗಳನ್ನು ರೋಗ ತಗಲದಂತೆ ಕಾಯಿರಿ

ಗಂಟಲು, ಎದೆ, ಶ್ವಾಸಕೋಶಗಳ ಬೇನೆಗಳಿಗೆ ಪೆಪ್ಸ ತಕ್ಕುದಾದ, ಗುಣಕಾರಿ ಔಷಧಿ. ಎಲ್ಲಾ ಕಡೆಗಳಲ್ಲಿಯೂ ಬಾಟ್ಲಿಗೆ ರೂ. 1 ರಂತೆ ಮಾರಲ್ಪಡುತ್ತದೆ.

ಪೆಪ್ಸನ್ನು ಸೇವಿಸಿರಿ

PEPS

ಶ್ವಾಸನೀಯ ಮಾತ್ರೆಗಳು

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

Rs. 50/-, 100/-, 500/-, 1,000/- & 5,000/-

are now issued at all our Branches.

For particulars call at or write to

Any of our nearest Branches

ಹಿಟ್ಲರನ ಅಜ್ಞಾತವಾಸಕ್ಕೆ ಸಿದ್ಧತೆಗಳು!

ಅರ್ಜೆಂಟೀನದಲ್ಲಿ ಆಸ್ತಿಯಿದೆ!

ಹಿಟ್ಲರನಿಗೆ ಅಪಮೃತ್ಯುವಾಗುವದೆ?

ಭವಿಷ್ಯವಾದಿಯು ಸಾರುತ್ತಾನೆ!

ಹಿಟ್ಲರ್

ಹಿಟ್ಲರ ಮತ್ತು ಅವನ ಹಸ್ತಕರ ಭವಿಷ್ಯವನ್ನು ತಿಳಿದವರು ಯಾರು? ಅದು ಹಿಟ್ಲರನಿಗೇ ತಿಳಿದಿಲ್ಲವೆಂದ ಮೇಲೆ ಇತರರಿಗೆ ಹೇಗೆ ಗೊತ್ತಾಗಬೇಕು? ಅವನು ತೊಡಗಿದ ಯುದ್ಧದಲ್ಲಿ ಅವನಿಗೆ ಸೋಲಾಗಲೂ ಬಹುದು. ಸೋಲುವ ಸಂಭವವೂ ಹೆಚ್ಚಾಗಿದೆ. ಆದಕ್ಕೋಸ್ಕರ ಸೋತ ಮೇಲೆ ಜೀವವಾದರೂ ಬದುಕಿ ಉಳಿಯಲಿ ಎಂದುಕೊಂಡು ಹಿಟ್ಲರ ಮತ್ತು ಅವನ ಹಸ್ತಕರು ದಕ್ಷಿಣ ಅಮೇರಿಕದ ಅರ್ಜೆಂಟೀನದಲ್ಲಿ ಅಜ್ಞಾತವಾಸದ ಏರ್ಪಾಡು ಮಾಡಿರುವರೆಂದು ಲಂಡನಿನ ಡೈಲಿಸ್ಕೆಚ್ ಎಂಬ ಪತ್ರಿಕೆ ಬರೆಯುತ್ತದೆ.

ಯೂರೋಪಿನಿಂದ ಪಲಾಯನ ಮಾಡುವವರಿಗೆಲ್ಲ ಅರ್ಜೆಂಟೀನವು ದೊಡ್ಡ ಶರಣು ಭೂಮಿಯಾಗಿದೆ. ಅಲ್ಲಿ ಗೋಬೆಲ್ಸ ಮತ್ತು ಇತರ ನಾಝಿ ಮುಖಂಡರು ದೊಡ್ಡ ಆಸ್ತಿಯನ್ನು ತೆಗೆದುಕೊಂಡು ಅದರಲ್ಲಿ ಭವ್ಯವಾದ ಮನೆ ಮಠ ಎಲ್ಲ ಕಟ್ಟಿ ಇಟ್ಟಿದ್ದಾರೆ. ಮತ್ತೆ ಹಿಟ್ಲರ ಜರ್ಮನಿಯಿಂದ ಸೋತು ಪಲಾಯನ ಮಾಡಬೇಕಾದ ಸಂದರ್ಭದಲ್ಲಿ ಅವನನ್ನು ಅರ್ಜೆಂಟೀನಕ್ಕೆ ಕರಕೊಂಡು ಹೋಗಲಿಕ್ಕೆ ಹಲವಾರು ಯು-ಬೋಟುಗಳು ಕೀಲ ಮತ್ತು ಉತ್ತರ ಸಮುದ್ರದ ಇತರ ಬಂದರುಗಳಲ್ಲಿ ಗುಪ್ತರೂಪದಿಂದ ಸಿದ್ಧವಾಗಿ ಇಡಲ್ಪಟ್ಟಿವೆ. ಬ್ರಿಟಿಷರು ಈ ಸಮುದ್ರದಲ್ಲಿ ಹಾಕಿದ ಕಡೆಕಟ್ಟನ್ನು ಮುರಿದು ಈ ನಾವೆಗಳನ್ನು ಕೊಂಡುಹೋಗಲಿಕ್ಕೆ ಬೇಕಾದ ಸನ್ನಾಹಗಳೆಲ್ಲ ಆಗಿವೆ!

ಪಲಾಯನಕ್ಕೆ ಇನ್ನೊಂದು ಮಾರ್ಗ!

ಉತ್ತರ ಸಮುದ್ರ ಮಾರ್ಗವಾಗಿ ಅಲ್ಲದೆ ಇನ್ನೊಂದು ಮಾರ್ಗವಾಗಿಯೂ ಹಿಟ್ಲರನನ್ನು ಅರ್ಜೆಂಟೀನಕ್ಕೆ ಸಾಗಿಸಲಿಕ್ಕೆ ಏರ್ಪಾಡು ಆಗಿರುವದು. ಮೊದಲು ಇಟಲಿಗೆ ಹೋಗಿ ಅಲ್ಲಿಂದ ಭೂಮಧ್ಯ ಸಮುದ್ರ ಮತ್ತು ಜಿಬ್ರಾಲ್ಟರ ಮಾರ್ಗವಾಗಿ ಸಬ್‌ಮೆರೀನಿನಲ್ಲಿ ಹೋಗಬೇಕೆಂಬುದು ಆ ಎರಡನೆ ಉಪಾಯವಾಗಿದೆ. ಅದಕ್ಕೋಸ್ಕರ ಪ್ರತ್ಯೇಕ ಒಂದು ಸಬ್‌ಮೆರೀನು ಇಟಲಿಯ ಒಂದಾನೊಂದು ಬಂದರಿನಲ್ಲಿ ಸಿದ್ಧವಾಗಿ ನಿಂತಿದೆಯಂತೆ.

ಅರ್ಜೆಂಟೀನದಲ್ಲಿ ೨೦ ವರ್ಷಗಳ ತನಕ ವಾಸವಾಗಿ ಈಗ ತಾನೇ ಅಲ್ಲಿಂದ ಬ್ರಿಟನಿಗೆ ಮರಳಿದ ಒಬ್ಬ ಬ್ರಿಟಿಷನು ಹಿಟ್ಲರನ ಅರ್ಜೆಂಟೀನದ ಆಸ್ತಿಯ ಕುರಿತು ಕೆಲವು ವಿವರಗಳನ್ನು ಕೊಟ್ಟಿರುವನು. ಹಿಟ್ಲರ ಮತ್ತು ಅವನ ಹಸ್ತಕರು ಅರ್ಜೆಂಟೀನದ ಸಾವಿರಾರು ಎಕ್ರೆ ವಿಸ್ತಾರವಾದ ಸವನ್ನಾ ಹುಲ್ಲುಗಾವಲನ್ನು ಕ್ರಯಕ್ಕೆ ತೆಗೆದುಕೊಂಡು ಅದರಲ್ಲಿ ನೂರಾರು ದನಕರು ಕುರಿಆಡುಗಳನ್ನು ಸಾಕಿ ಬಂದಿದ್ದಾರಂತೆ. ಈ ಆಸ್ತಿಯ ಆಡಳಿತ ನೋಡಲಿಕ್ಕೆ ಒಬ್ಬ ಮೆನೇಜರ ಇದ್ದಾನೆ. ಹಿಟ್ಲರನೇ ಕಳುಹಿಸಿ ಕೊಟ್ಟ ಚಿತ್ರ ನಕಾಶೆಗಳ ಪ್ರಕಾರ ಅಲ್ಲಿ ಅವನ ಉಳಕೊಳ್ಳಲಿಕ್ಕೆ ಬೇಕಾದ ಮನೆ ಮತ್ತು ಇತರ ಕಟ್ಟಡಗಳನ್ನು ಕಟ್ಟುತಲಿರುವರು. ಅರ್ಜೆಂಟೀನದ ರಾಜಧಾನಿ ಬ್ಯುಯೆನಸ್ ಏರೀಸದ ಬೇಂಕುಗಳಲ್ಲಿ ಗೋಬೆಲ್ಸ ೯೦೦೦೦೦ ಪವನುಗಳ ನಗದಿ ಹಣವನ್ನು ಠೇವಣಾತಿಯಾಗಿ ಇಟ್ಟಿದ್ದಾನೆ. ಬ್ರೇಜಿಲದ ಬೇಂಕುಗಳಲ್ಲಿ ಹರ್‌ಹೆಸ್ಸನು ೫೦೦೦೦೦ ಪವನುಗಳನ್ನು ಠೇವಣಾತಿ ಇಟ್ಟಿರುವನು. ಈ ಹಣವೆಲ್ಲ ಕೇಳಿದಾಗ ಕೊಡುವಂಥದ್ದಾಗಿದೆ. ಇಷ್ಟು ಸಂಪತ್ತಿಯಲ್ಲಿ ಹಿಟ್ಲರನಿಗೆ ಯಾವಪಾಲು ಇದೆ ಎಂದು ಹೇಳುವದು ಕಷ್ಟವಾಗಿದೆ. ಅರ್ಜೆಂಟೀನದ ಬೇಂಕುಗಳಲ್ಲಿ ನಾಝಿಗಳ ಇನ್ನೂ ಅನೇಕ ಠೇವಣಾತಿಗಳು ಇರಬಹುದು. ಆದರೆ ಯಾವುವೂ ಹಿಟ್ಲರನ ಹೆಸರಿನಲ್ಲಿ ಇರುವದಿಲ್ಲ. ದಕ್ಷಿಣ ಅಮೇರಿಕದಲ್ಲಿ ವಾನ್‌ರಿಬ್ಬನ್‌ಟ್ರಾಪನ ಏಜಂಟರುಗಳ ಮೂಲಕ ಹಿಟ್ಲರನು ಲೇವಾದೇವಿಯ ವ್ಯವಹಾರಗಳನ್ನು ಇಟ್ಟುಕೊಂಡಿದ್ದಾನೆ.

ಹಿಟ್ಲರನ ಅಪಮೃತ್ಯು

ಆದರೆ ಯುದ್ಧದ ಕೊನೆಯ ನಿರ್ಧಾರವು ಇನ್ನೆರಡು ತಿಂಗಳ ಒಳಗೆ ಆಗದೆ ಇದ್ದರೆ...? ಅದು ಬರುವ ವರ್ಷದ ಫೆಬ್ರುವರಿ ತನಕ ಮುಂದುವರಿದರೆ...? ಪರಿಣಾಮ ಏನಾಗಬಹುದು? ಆರ್ಥರ ಪ್ರಿಗ್ ಎಂಬ ಪ್ರವಾದಿಯು ಒಂದು ಭವಿಷ್ಯವನ್ನು ನುಡಿದಿದ್ದಾನೆ. ೧೯೩೯ರಲ್ಲಿ ಮಹಾಯುದ್ಧವು ಆರಂಭವಾಗುವದೆಂಬುದನ್ನು ಅವನು ಸಪ್ಟಂಬರ ೧೯೩೩ರಲ್ಲಿಯೇ ಹೇಳಿದ್ದನು. ಈಗ ಅವನು ಡೈಲಿಮಿರರ್ ಪತ್ರಿಕೆಯ ಸುದ್ದಿಗಾರನೊಡನೆ ಮಾತನಾಡುತ್ತಾ 'ಈ ಯುದ್ಧವು ೧೯೪೧ರ ಫೇಬ್ರುವರಿಯಲ್ಲಿ ಮುಗಿಯುತ್ತದೆ. ಆಗ ನಾಝಿಗಳೊಳಗೇ ಅಂತಃಕಲಹವೆದ್ದು ಕೆಲವು ಅನುಯಾಯಿಗಳು ಹಿಟ್ಲರನ ಕೊಲೆಮಾಡುವರು. ಇನ್ನು ಏಳುವರ್ಷಗಳಲ್ಲಿ ರಶ್ಯದಲ್ಲಿ ಬೊಲ್ಶೆವಿಝಮಿನ ಅಂತ್ಯವೂ ಆಗುವುದು. ಮತ್ತೆ ಪ್ರಪಂಚದಲ್ಲಿ ಉದಾರ ವಾದಿಗಳ ಪ್ರಭಾವವು ಕಂಡು ಬರುವುದು' ಎಂದಿದ್ದಾನೆ. ಈ ಭವಿಷ್ಯವಾದಿ ಕಳೆದ ಮಹಾಯುದ್ಧವು ಯಾವಾಗ ಕೊನೆಗಾಣುವದೆಂಬುದನ್ನು ೧೯೧೪ರಲ್ಲಿಯೇ ಹೇಳಿದ್ದನಂತೆ.

ಆಶ್ರಿತರಾಜರು ಸ್ವಾತಂತ್ರ್ಯ ವಿರೋಧಿಗಳೇ?

ಡಾಕ್ಟರ್ ಪಟ್ಟಾಭಿಯವರ ಸಂದೇಶ!

"ಭಾರತದ ರಾಜಕೀಯ ಭವಿಷ್ಯದಲ್ಲಿ ಸಂಸ್ಥಾನವು ಆಡಬೇಕಾದ ಆಟವು ಯಾವುದೆಂಬ ಕುರಿತು ಭಿನ್ನಭಿನ್ನ ಅಭಿಪ್ರಾಯಗಳು ತಲೆದೋರಿವೆ. ಭಾರತದಲ್ಲಿ ತಮ್ಮ ಸ್ಥಾನ-ಅಧಿಕಾರವನ್ನು ಭದ್ರಪಡಿಸುವ ನಿಮಿತ್ತವಾಗಿಯೇ ಬ್ರಿಟಿಷರು ಸಂಸ್ಥಾನಾಧೀಶರನ್ನು ದುಂಡುಮೇಜಿನ ಪರಿಷತ್ತುಗಳಿಗೆ ಆಮಂತ್ರಿಸಿದ್ದರು. ಅಲ್ಲಿ ಅವರು ಸಂಸ್ಥಾನಗಳ ಪ್ರತಿನಿಧಿಗಳಾಗಿ ಅಲ್ಲ, ಬ್ರಿಟಿಷರ ಗೊಂಬೆಗಳಾಗಿ ಕೆಲಸ ಮಾಡಿದರು. ಬ್ರಿಟಿಷ್ ಚಾಣಕ್ಯರು ಈ ಸಂಸ್ಥಾನಾಧೀಶರನ್ನು ಎತ್ತಿ ಕಟ್ಟಿದ್ದರಿಂದ ಸಂಸ್ಥಾನಗಳಿಂದ ಕೂಡಿದ ಸಮಂಜಸವಾದ ಸಂಯುಕ್ತ ರಾಜ್ಯಘಟನೆಯನ್ನು ತಯಾರಿಸಲಿಕ್ಕೆ ಈ ಸಂಸ್ಥಾನಾಧೀಶರು ದೊಡ್ಡ ಆತಂಕವಾಗಿ ಪರಿಣಮಿಸಿದರು.

ಸಂಸ್ಥಾನ ಪ್ರಾಂತ ಸಂಬಂಧ.

"ಹೀಗಿದ್ದರೂ ಬ್ರಿಟಿಷ ಭಾರತದ ಪ್ರಾಂತಗಳಲ್ಲಿ ಉಂಟಾದ ಜನಜಾಗೃತಿಯ ಪರಿಣಾಮವು ನೆರೆಯ ಸಂಸ್ಥಾನ ಪ್ರಜೆಗಳ ಮೇಲೂ ಬೀಳದೆ ಇಲ್ಲ. ಸ್ವಾತಂತ್ರ್ಯ, ಹಕ್ಕು, ಅಧಿಕಾರ ಮೊದಲಾದ ಶಬ್ದಗಳು ಸಂಸ್ಥಾನ ಪ್ರಜೆಗಳನ್ನು ಮೋಹಿಸಿವೆ. ಅವರೂ ತಮ್ಮ ಹಕ್ಕು ಅಧಿಕಾರಸ್ವಾತಂತ್ರ್ಯಗಳಿಗಾಗಿ ಚಳವಳಿಸತೊಡಗಿದ್ದಾರೆ. ಬ್ರಿಟಿಷ್ ಭಾರತ ಮತ್ತು ಸಂಸ್ಥಾನಗಳಲ್ಲಿ ಆರಂಭವಾಗಿ ಪ್ರಚಂಡವಾಗಿ ನಡೆಯುತ್ತಿರುವ ಆಂದೋಲನವನ್ನು ಕಂಡು ಅರಸರಿಗೆ ದಿಗ್ಭ್ರಮೆಯಾಗಿರುವದು. ಅಷ್ಟರಿಂದಲೇ ಮೊದಲು ಫೆಡರೇಶನಿಗೆ ಅನುಕೂಲರಾಗಿದ್ದ ಸಂಸ್ಥಾನಾಧೀಶರು ಈಗಲಿದೇ ಫೆಡರೇಶನಿಗೆ ತಮ್ಮ ಬದ್ಧವಿರೋಧವನ್ನು ತೋರಿಸುತ್ತಿರುವರು. ಅವರ ಈ ವಿರೋಧದಿಂದ ಪ್ರಾಂತಗಳ ಸ್ವಾತಂತ್ರ್ಯ ಆಂದೋಲನಕ್ಕೆ ಭಂಗ ಬಂದಿರುವುದು. ಮಾತ್ರವಲ್ಲ, ಅವರು ಸಂಸ್ಥಾನಗಳಲ್ಲಿ ಉಂಟಾಗಿರುವ ಸ್ವಾತಂತ್ರ್ಯ ಆಂದೋಲನವನ್ನು ಮುರಿಯಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡುತಿರುವರು.

ದೇಶೀಯ ಅರಸರ ದಬ್ಬಾಳಿಕೆ

"ಈ ದೇಶೀಯ ಅರಸರ ದಬ್ಬಾಳಿಕೆಯು ಬ್ರಿಟಿಷ್ ಸರಕಾರದ ದಬ್ಬಾಳಿಕೆಯನ್ನು ಮೀರಿಸಿರುವದು. ಭಾವನಗರದಲ್ಲಿ ಶ್ರೀ ವಲ್ಲಭ ಭಾಯಿ ಪಟೇಲರ ಮೆರವಣಿಗೆಯಾಗುತ್ತಿದ್ದಾಗ, ಗುಂಡರ ಅತ್ಯಾಚಾರದಿಂದ ಇಬ್ಬರು ನಿರಪರಾಧಿಗಳ ಪ್ರಾಣಾಪಹಾರವಾಯಿತು. ಬರೋಡದಲ್ಲಿ ವಲ್ಲಭ ಭಾಯಿಗಳ ಪ್ರಾಣಾಪಹಾರದ ಬಹು ದೊಡ್ಡ ಪ್ರಯತ್ನ ನಡೆಯಿತು. ಲಿಂಬ್ಡಿ ಸಂಸ್ಥಾನದಲ್ಲಿ ಪ್ರಜೆಗಳ ಗೋಳು ಸರ್ವಶ್ರುತವಾಗಿದೆ. ತಿರುವಾಂಕೂರಿನಲ್ಲಿ ಪೋಲೀಸರು ಶಾಂತ ಪ್ರಜೆಗಳ ಮೇಲೆ ಗುಂಡು ಹಾರಿಸಿದರು. ಮೈಸೂರಿನಲ್ಲಿ ಪ್ರಜೆಗಳ ಮೇಲೆ ಅಸಭ್ಯರೀತಿಯ ಅತ್ಯಾಚಾರವು ನಡೆಯುತ್ತದೆ. ಹೈದರಾಬಾದಿನಲ್ಲಿ ಜಾತಿದ್ವೇಷವು ಭಯಂಕರ ರೂಪವನ್ನು ತಾಳಿರುವದು. ಇವೆಲ್ಲ ಪ್ರಜೆಗಳ ಸ್ವರಾಜ್ಯ ಲಾಲಸೆಯನ್ನು ಅತ್ಯಾಚಾರದ ಮೂಲಕ ನಡೆಯುವ ದುಷ್ಪ್ರಯತ್ನಗಳಲ್ಲದೆ ಮತ್ತೇನು? ಸಂಸ್ಥಾನಗಳಲ್ಲಿ ನ್ಯಾಯ ಮತ್ತು ನೀತಿಗನುಕೂಲವಾದ ಸರಕಾರದ ಆಡಳಿತ ಕ್ರಮವು ಇಂದು ನಷ್ಟವಾಗಿದೆ.

ಪರಿಣಾಮ ಏನಾದೀತು?

"ಆದರೆ ಈ ಎಲ್ಲ ಘಟನೆಗಳ ಪರಿಣಾಮ ಏನಾಗಬಹುದು? ಸಂಸ್ಥಾನ ಪ್ರಾಂತ ಸಂಬಂಧವು ಈಗ ಬಹಳವಾಗಿ ಕೆಟ್ಟು ಹೋಗಿರುವದು, ಮುಂದೆ ಆ ಸಂಬಂಧವು ಸುಧಾರಿಸುವ ಪೂರ್ವ ಸೂಚನೆಯಾಗಬಹುದು. ಆದರೆ ಹಾಗೆ ಆ ಸ್ಥಿತಿಗತಿಗಳು ಎಂದಾದರೂ ಸುಧಾರಿಸಬಹುದೆ? ಉತ್ತಮಗೊಳ್ಳಬಹುದೆ? ಎಂದು ಡಾಕ್ಟರ ಪಟ್ಟಾಭಿಯವರು 'ಸಂಸ್ಥಾನ ಪ್ರಜೆಗಳು' ಎಂಬ ಆಂಗ್ಲ ಭಾಷೆಯ ಪತ್ರಿಕೆಯಲ್ಲಿ ಬರೆದ ಒಂದು ಲೇಖನದಲ್ಲಿ ಶಂಕಿಸುತ್ತಾರೆ.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ ಪಂಡಿತ,
P. O. Peridepi (ನೆಲ್ಲೂರು ಡಿ.)

ಈ ವಾರದ ಕಥೆ:

ತಾಯಿ-ಮಗು

ಕತೆಗಾರ ಅಚ್ಯುತಾನಂತ, ಮಂಗಳೂರು

ಸಿದ್ದಕ್ಕ ಚೋಮನನ್ನು ರಘುನಂದನ ರಾಯರಲ್ಲಿ ಕೆಲಸಕ್ಕೆ ನಿಲ್ಲಿಸಿ ಕರಿಂಜೆಗೆ ಹಿಂತಿರುಗಿದಳು.

ಕರಿಂಜೆ ಮೂಡಬಿದ್ರೆಯಿಂದ ಆರು ಮೈಲು ದೂರವಿರುವ ಚಿಕ್ಕದೊಂದು ಹಳ್ಳಿ. ಸುತ್ತ ಮುತ್ತ ಹತ್ತಾರು ಮನೆಗಳಿವೆ ಮುಂಚಿನ ಆಟಿಯಲ್ಲಿ ಗಟ್ಟಕ್ಕೆ ಜನ ನೆರೆ ನೀರಿನಂತೆ ಹೋಗಿತ್ತು. ಆ ವೇಳೆ 'ತಾನೂ ಹಣಮಾಡುತ್ತೇನೆ'ಂದು ಸಿದ್ದಕ್ಕನ ಮಾತು ಕೇಳದ ಆಕೆಯ ಗಂಡ-ಐತಪ್ಪ ಗಟ್ಟ ಹತ್ತಿಯೇ ಬಿಟ್ಟ ಹೋದವನ ಸುದ್ದಿಯೇ ಇಲ್ಲ. 'ಇಂದು ಬಂದಾನು ನಾಳೆ ಬಂದಾನು' ಎಂದು ಸಿದ್ದಕ್ಕ ಐದಾರು ವರ್ಷ ನೂಕಿದಳು ಆದರೂ ಆತನ ಸುದ್ದಿ ಇಲ್ಲ ಅವನನ್ನು ಗಟ್ಟಕ್ಕೆ ಉಬ್ಬಿಸಿ ಕಳುಹಿಸಿದ ಕೆಳಗಿನ ಗುತ್ತು ರಾಮಯ್ಯ ಸೆಟ್ಟರಲ್ಲಿ ಹೋಗಿ ಕೇಳಿದರೆ ಕಳುಹಿಸುವುದೊಂದು ಮಾತ್ರ ನನಗೆ ಗೊತ್ತು ಎಂದು ಅವರನ್ನುತ್ತಿದ್ದರು ಅಂತೂ ಐತಪ್ಪನ ಸುದ್ದಿಯೇ ಬರಲಿಲ್ಲ

ಐತಪ್ಪ ಗಟ್ಟಕ್ಕೆ ಹೋಗುವಾಗ ಚೋಮನು ನಾಲ್ಕು ವರ್ಷದವನಾಗಿದ್ದ ಈಗ ಅವನಿಗೆ ಹತ್ತು ವರ್ಷ ತುಂಬುತ್ತಿತ್ತು ಸಿದ್ದಕ್ಕ ಮಗುವಿನೊಂದಿಗೆ ಕರಿಂಜೆಯಲ್ಲಿ ದಿನ ದೂಡುತ್ತಿದ್ದಳು

ಹಳ್ಳಿಯ ಮಧ್ಯದಿಂದ ಕಿರುಮಾರ್ಗವೊಂದು ವೇಣೂರಿಗೆ ಹಾದುಹೋಗುವುದು ವೇಣೂರಿಗೆ ಹೋಗುವ ಮಾರ್ಗದ ಎಡಬದಿಯಲ್ಲಿ-ಚಿಕ್ಕದೊಂದು ಹಳ್ಳ ಹರಿಯುತ್ತದೆ ಬಲಬದಿಯಲ್ಲಿ ಕಣ್ ತಣಿಯುವ ವರೆಗೂ ಹಚ್ಚಹಸುರಾದ ಗದ್ದೆಗಳು ಊರ ಹೆಂಗಸರೂ ದನಕರುಗಳೂ ಹಳ್ಳಕ್ಕೆ ದಿನ ನಿತ್ಯ ಬರುತ್ತಿದ್ದರು ಚೋಮನು ಕೂಡ ದಿನಾಲೂ ತನ್ನ ಗೆಳೆಯರೊಡನೆ ಆಟ ವಾಡಲು ಅಲ್ಲಿಯೇ ಬರುತ್ತಿದ್ದ ಮಧ್ಯಾಹ್ನ ನೀರಡಿಕೆಯಿಂದ ಬಂದ ದನಕರುಗಳನ್ನು ಸಂಜೆ ಹಳ್ಳದಲ್ಲಿ ಹೊರಳಾಡುತ್ತಿರುವ ಎಮ್ಮೆಗಳನ್ನೂ ಕಂಡು ಆನಂದಿಸುತ್ತಿದ್ದ ನೀರು ಕುಡಿದು ಮರದ ನೆರಳಲ್ಲಿ ದಣಿದು ಮಲಗಿದ ದನಕರುಗಳನ್ನೆಲ್ಲ ಕಂಡು ಸಂತೋಷವೂ ಕರುಣೆಯೂ ಅವನಲ್ಲಿ ಉಂಟಾಗುತ್ತಿತ್ತು ಆ ನೈಸರ್ಗಿಕ ಸೌಂದರ್ಯದ ಮಡಿಲಲ್ಲಿ ಬೆಳೆದ ಹುಡುಗ ಕೊಂಚ ಸ್ವಚ್ಛಂದ ಪ್ರಕೃತಿಯವನಾಗಿದ್ದ ತಾಯ ಮಾತನ್ನೂ ಕೂಡ ಕೇಳದೆ ಸಂಜೆ ಬೆಳಗ್ಗೆ ಯಾವಾಗಲೂ ಹಳ್ಳದ ಬದಿಯಲ್ಲಿ ತನ್ನ ಗೆಳೆಯರೊಡನೆ ಹಾಜರಿರುತ್ತಿದ್ದ. ಆ ಮಂಗಡಿಗರ ಕೂಟ ನಡೆಯುವುದಾದರೂ ಆ ಹಳ್ಳದ ಬಳಿಯಲ್ಲಿನ ಮರಗಳಡಿಯ ಸುಖವಾದ ನೆರಳಲ್ಲಿ, ಮರಗಳ ಕೊಂಬೆಗಳ ಮಡಿಲಲ್ಲಿ. ಹಳ್ಳಕ್ಕೆ ತಾಗಿಕೊಂಡು ಒಂದು ಎತ್ತರವಾದ ಬೋರು ಗುಡ್ಡವಿತ್ತು. ಕೆಲವೊಮ್ಮೆ ಗುಡ್ಡದ ತುದಿಗೆ ಓಡುವ ಪಂದ್ಯಾಟವೂ ಅವರಲ್ಲಿ ನಡೆಯುವದಿತ್ತು ಆ ಮಂಗಡಿಗರಲ್ಲಿ ಚೋಮ ಸಣ್ಣವನಾದುದರಿಂದ ಕೆಲವೊಮ್ಮೆ ಅವರಿಂದ ಪೆಟ್ಟುತಿಂದುದುಂಟು. ತಾನು ಹೊಡೆದು ಓಡಿ ಬಂದುದೂ ಉಂಟು. ಪೆಟ್ಟು ತಿಂದು ಕೂಗಿ ಬಂದುದಿನಗಳೇ ಹೆಚ್ಚು. ಪ್ರತೀ ದಿವಸ 'ಕೇಸ್' ಬಂದು ಸಿದ್ದಕ್ಕನ ಬಳಿ ಹಾಜರಿರುತ್ತಿತ್ತು ಹೀಗಾಗಿ ಸಿದ್ದಕ್ಕನಿಗೆ ಚೋಮನ ವಾರ್ತೆ ತೆಗೆದುಕೊಳ್ಳುವುದು ಕಷ್ಟಕಿಟ್ಟುಬಿಟ್ಟಿತು ದಿವಸ ದಿವಸ ಅವನ ಪೋಕ್ರಿ ಹೆಚ್ಚುತ್ತಿತ್ತು ಸಾಲೆಗೆ ಹಾಕೋಣವೆಂದರೆ ಅಲ್ಲಿ ಸಾಲೆ ಇರಲಿಲ್ಲ ಮೂಡಬಿದ್ರೆಗೆ ಸಾಲೆಗೆ ಕಳುಹಿಸೋಣವೆಂದರೆ ಬಹಳದೂರ

ಮೂಡಬಿದ್ರೆಯಲ್ಲಿ ವಾರಕ್ಕೊಂದು ಬಾರಿ ಸಂತೆಯೊಂದು ಜರಗುವುದಿದೆ ಸುತ್ತಮುತ್ತಲಿನ ಹತ್ತಿಪ್ಪತ್ತು ಹಳ್ಳಿಗಳಿಂದ ಜನರು ಬಂದು ಒಟ್ಟುಕೂಡುತ್ತಾರೆ ಸಿದ್ದಕ್ಕ ಕೂಡಾ ಕೆಲವೊಮ್ಮೆ ಸಂತೆಗೆ ಬರುತ್ತಿದ್ದಳು ಅವ ಗಟ್ಟಕ್ಕೆ ಹೋದ ನಂತರ ಸಿದ್ದಕ್ಕ ತಿಂಗಳಿಗೊಂದ ಬಾರಿ ಸಂತೆಗೆ ಬರುತ್ತಿದ್ದಳು. ಈ ಬಾರಿ ಹೊರಡುವಾಗ ಚೋಮನನ್ನು ಕರೆದುಕೊಂಡೇ ನಡೆದಳು ಅವಳ ತಲೆಯಲ್ಲಿ ಆಲೋಚನೆಯೊಂದು ಸುಳಿದಿತ್ತು ಅವಳ ಚಿಕ್ಕಂದಿನ ಗೆಳತಿ ಭಾಗಿ ಮೂಡಬಿದ್ರೆಯಲ್ಲಿದ್ದಳು ಸಿದ್ದಕ್ಕ ಚೋಮನನ್ನು ಕರೆಕೊಂಡು ಮೊದಲು ಅಲ್ಲಿ ಬಂದ ಅವಳೊಡನೆ ಮಾತಾಡಿ ರಘುನಂದನ ರಾಯರಲ್ಲಿ ಮಗುವನ್ನು ಹಿಡಿಯಲಿಕ್ಕೆಂದ ನಿಲ್ಲಿಸಿದಳು ಪರರ ಕೈಯಲ್ಲಿ ಮಕ್ಕಳಿಗೆ ಸರಿಯಾಗಿ ಬುದ್ಧಿ ಬರುತ್ತದೆ ಪೋಕ್ರಿತನ ಕೂಡ ನಿಂತೀತ ಹೊಟ್ಟೆ ತಣ್ಣಗಿದ್ದೀತು ಎಂದೇ ಸಿದ್ದಕ್ಕ ಎಣಿಸಿ ಅವನನ್ನಲ್ಲಿ ನಿಲ್ಲಿಸಿ ಕರಿಂಜೆಗೆ ನಡೆದಳು

ಹುಡುಗನೊಬ್ಬನಿಗೆ ೭-೮ ವರ್ಷಗಳು ದಾಟಿದೊಡನೆಯೇ ಅವರು ಪ್ರಾಯಸ್ಥರಾಗಿ ದುಡಿಯಲು ಶಕ್ತಿಯುಳ್ಳವರಾದರು ಎಂಬದೊಂದು ಭಾವನೆ ನಮ್ಮಲ್ಲಿ ಹೆಚ್ಚಾಗಿ ಬಡವರಲ್ಲಿ ಬೇರೂರಿದೆ ೧೦ ವರ್ಷ ದಾಟಿದೊಡನೆಯೇ ಅವನನ್ನು ಎಲ್ಲಿ ಯಾದರೂ ಕೆಲಸಕ್ಕೆ ಸೇರಿಸುವರು ಬಹಳ ಶೋಚನೀಯ ನಮ್ಮಲ್ಲಿ ವಿದ್ಯಾಭ್ಯಾಸದ ಸೌಕರ್ಯವು ಹೆಚ್ಚಿಲ್ಲದಿದ್ದರೂ ಇದ್ದ ಕಡೆಗಳಲ್ಲಿ ತಾಯಿ—ತಂದೆಗಳು ಸಾಲೆಗೆ ಕಳುಹುವುದಿಲ್ಲ "ನಮ್ಮ ಮಗ ಕಲಿತು ಏನು ದೊಡ್ಡ ಕಲೆಕ್ಟರು ಆಗ ಬೇಕಿಲ್ಲ, ಕಲಿತು ಏನು ಮಾಡುವುದು ಕೆಲಸಕ್ಕೆ ಹೋದರೆ ಮನೆಖರ್ಚು ಹೋಗುತ್ತದೆ' ಎನ್ನುತ್ತಾರೆ ಅವರು ದಿನಕ್ಕೆ ಒಂದಾಣೆ ಎರಡಾಣೆ ತರುವುದರಿಂದ ಅವರಿಗೆ ಬಹಳ ಸಂತೋಷವಾಗುತ್ತದೆ ಅವರು ಕೆಲಸಕ್ಕೆ ನಿಂತಕಡೆ ಯಜಮಾನರ ನಿಷ್ಠುರ ಮಾತಿನಿಂದ ಬಾಲಕರ ಕೋಮಲ ಮನಸ್ಸಿನ ಮೇಲೆ ವ್ಯಾಘಾತವಾಗಿ ಅವರ ಭವಿಷ್ಯ ಜೀವನವು ಯಾತನಾಮಯವಾಗುತ್ತದೆ ಬಾಲ್ಯ ಪ್ರಾಯದಲ್ಲಿ ದುಡಿದುದುಡಿದು ನಂತರ ಅವರಿಗೆ ಕೆಲಸ ಮಾಡಲುಸಾಧ್ಯವಾಗುವುದೇ ಇಲ್ಲ ಇಂತಹ ಘಟನೆಗಳಿಗೆ ಬಹುಮಟ್ಟಿಗೆ ನಮ್ಮಲ್ಲಿ ಬಡತನವೇ ಕಾರಣವಾಗಿದೆ.

ತಾಯಿ ಮಗನಿಗೆ ಸಮಾಧಾನ ಹೇಳಲಾಗಿ ಆಣೆಯ ಬಿಸ್ಕುಟನ್ನು ತೆಗೆಸಿಕೊಟ್ಟು ಮನೆಗೆ ಬಂದಿದ್ದಳು ಹುಡುಗ ತಾಯಿಯನ್ನು ಕಣ್ಮರೆಯಾಗುವವರೆಗೂ ತುಂಬುಗಣ್ಣಿನಿಂದ ನೋಡಿದನು ತಾಯಿ ಹೋದ ನಂತರ ಹುಡುಗ ಬಹಳ ಬೇಸರದಿಂದ ಮೊಗಬಾಡಿಸಿ ಒಂದೆಡೆ ಕೂತ ಕೂಡಲೇ ಯದುನಂದನ ರಾಯರ ಹೆಂಡತಿ ಬಂದಳು "ಏ ಹುಡುಗಾ ಹಾಗೇಕೆ ಕೂತುಕೊಂಡಿದ್ದಿ ನೀನಿಲ್ಲಿ ಕೂತು ಕೊಳ್ಳಲು ಬಂದಿದ್ದಿಯಾ?" ಎಂದಳು ಚೋಮನೊಡನೆ ಅಂತಹ ಮಾತನ್ನು ಯಾರೂ ಇಷ್ಟರ ವರೆಗೆ ಹೇಳಿರಲಿಲ್ಲ. ಆಶ್ಚರ್ಯದಿಂದ 'ನನ್ನ ಚೋಮಾ' ಅನ್ನುತ್ತಿದ್ದಳು. ಅವನಿಗೆ ಆ ಅಪರಿಚಿತ ಹೆಂಗಸಿನ ಮಾತುಕೇಳಿ ಬಹಳ ದುಃಖವಾಯಿತು ಯದುನಂದ ರಾಯರ ಹೆಂಡತಿ ಗುಡಾಣಕ್ಕೆ ನೀರು ಹಾಕಲು ಹೇಳಿದಳು ಹುಡುಗ ಎದ್ದುಹೋಗಿ ನೀರು ಹಾಕಿದ

ಚೋಮನಿಗೆ ಎರಡೇ ಎರಡು ದಿವಸಗಳಲ್ಲಿ ಅಲ್ಲಿನ ಕೆಲಸ ಸಾಕೇ ಸಾಕಾಯಿತು. ಅವನೊಡನೆ ಯಾರೂ ಪ್ರೀತಿಯಿಂದ ಮಾತನಾಡುತ್ತಿರಲಿಲ್ಲ ಯದುನಂದನ ರಾಯರ ಮಕ್ಕಳು ದಿವಸದಿಡೀ ಆಡುತ್ತಿದ್ದರು ಚೋಮ ಮನೆಕೆಲಸ ಮಾಡಬೇಕಿತ್ತು ಮನೆಯ ಎಲ್ಲಾ ಕೆಲಸಗಳನ್ನು ಅವನೇ ಮಾಡಬೇಕಿತ್ತು ಹುಡುಗ ಕೊಂಚ ಕೂತುಕೊಂಡರೆ ಶಾರದಮ್ಮ ಕಣ್ಣು ಕೆಂಪಗೆಮಾಡಿ "ಏನೋ ಯಾಕೆ ಕೂತುಕೊಂಡಿದ್ದಿಯೋ ಕೆಲಸ

(ಆನೇ ಪುಟಕ್ಕೆ ಮುಂದುವರಿಯುವುದು)

THE

BANK OF MANGALORE LTD.,

MANGALORE

ESTD 193

Branches -

Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ ಸ್ಟಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಬಿಡು ವರ್ಗ ಟಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯ ಸಲ್ಲಿಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್ ಕೆ. ಶೆಟ್, ಜುವೆಲ್ಲರ್,

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ತಾಯಿ-ಮಗು

ದೇನು, ಇಲ್ಲವೊ?" ಎಂದು ಗದರಿಸುವರು. ಚೋಮನಿಗೆ ಅವರ ಗದರಿಕೆಗೆ ಮುಖ ಬಹಳ ಸಣ್ಣದಾಗುವುದು.

ಅವನು ಮೆಲ್ಲನೆ ಬೇಸರದಿಂದೆದ್ದು ಸಾಯಂಕಾಲ ಎಲ್ಲಾ ಕೆಲಸ ಮುಗಿದ ನಂತರ ಚೋಮ ಮನೆಯ ಒಂದು ಮೂಲೆಯಲ್ಲಿ ಕೂತುಕೊಂಡು ಹಳ್ಳಿಯಲ್ಲಿ ಆಡಿ ದಿನಗಳನ್ನು ಕಳೆಯುತ್ತಿದ್ದುದನ್ನು ಎಣಿಸುತ್ತಿದ್ದನು. ಹುಡುಗನಿಗೆ ಕೂಗು ಬರುತ್ತಿತ್ತು. ಕೆರಿಂಜೆಯಲ್ಲಿ ಯಾರಾದರೂ ಅವನಿಗೆ ಹೇಳಿದರೆ ಅವನು ಅವರಿಗೆರಡು ಹೊಡೆದು ತಾನೆರಡು ತಿಂದೂ ಮನೆಗೆ ಓಡಿಬರುತ್ತಿದ್ದನು. ಆದರೆ ಇಲ್ಲಿ ತೆಪ್ಪಗೆ ಅಳುಮೋರೆಯಿಂದ ಕೂತುಕೊಳ್ಳುತ್ತಿದ್ದನು. ಚೋಮನಿಗೆ ಬೆಳಗ್ಗೆಯಿಂದ ಸಾಯಂಕಾಲದ ವರೆಗೆ ದುಡಿದು ಮನೆ ದೀಪ ಹೊತ್ತಿಸಿದೊಡನೆಯೇ ಬಹಳ ಆಯಾಸವಾಗುತ್ತಿತ್ತು. ಕೆಲವೊಮ್ಮೆ ಕೂತಲ್ಲಿಯೇ ನಿದ್ರೆ ಹೋದುದೂ ಇತ್ತು. ಆ ರಾತ್ರಿ ಉಪವಾಸ. ಅವನನ್ನು ಯಾರೂ ಎಬ್ಬಿಸುತ್ತಿರಲಿಲ್ಲ. ಏಳೆಂಟೇ ದಿವಸಗಳಲ್ಲಿ ಹುಡುಗನ ಗೆಲವು-ಉತ್ಸಾಹ—ಆನಂದ ಎಲ್ಲಾ ಆವಿಯ ಹಾಗೆ ಆರಿ ಹೋದುವು. ಈ ಬಾರಿ ಅಮ್ಮ ಬಂದ ಕೂಡಲೇ ಅವಳ ಕುತ್ತಿಗೆಗೆ ಜೋತು ಬಿದ್ದು ಅವಳಿಗೆ ಇಲ್ಲಿಯ ಕಷ್ಟ ಎಲ್ಲಾ ಹೇಳಬೇಕು. ಇನ್ನು ನಾನು ಇಲ್ಲಿ ನಿಲ್ಲುವುದಿಲ್ಲವೆಂದು ಹಟಮಾಡಿ ತಾನು ಕರಿಂಜೆಗೆ ಹೋಗುತ್ತೇನೆ ಮತ್ತು ಅಲ್ಲಿನ ತನ್ನ ಸಂಗಾತಿಗಳೊಡನೆ ಸುಖವಾಗಿ ಇರುತ್ತೇನೆ ಎಂದು ಚೋಮ ಎಣಿಸಿ ಮನಸ್ಸನ್ನು ಕೊಂಚ ಸಮಾಧಾನ ಮಾಡಿಕೊಂಡ. ಈಗಲೇ ಊರಿಗೆ ಹೋಗೋಣವೆಂದರೆ ಅವನಿಗೆ ದಾರಿ ಸರಿಯಾಗಿ ಗೊತ್ತಿರಲಿಲ್ಲ.

ಒಂದು ದಿನ ರಾತ್ರಿ ಮನೆಯವರೆಲ್ಲ ನಾಟಕಕ್ಕೆ ಹೋದರು. ಹೋಗುವಾಗ ಚೋಮನನ್ನು ಮನೆಯಲ್ಲೇ ಬಿಟ್ಟರು. ಹುಡುಗನಿಗೆ ಹೆದರಿಕೆಯಾಯಿತು. ಅವನು ಹೆದರಿ ಹೆದರಿ ರಾಧಮ್ಮನವರ ಹತ್ತಿರ ಹೇಳಿದ. ಅವರು 'ನಾಯಿ ಎಂತಾ ಹೆದರಿಕೆ ಮಲಗಿಲ್ಲಿ' ಎಂದು ಮೂಗು ಮುರಿದುಕೊಂಡು ಹೇಳಿದರು. ಮತ್ತು ಅವರು ನಾಟಕಕ್ಕೆ ಹೋದರು. ಮನೆಯಿಡೀ ಕತ್ತಲೆ ತುಂಬಿತು. ಚೋಮ ಅಳುತ್ತಾ ಜಗಲಿಯ ಮೂಲೆಯಲ್ಲಿ ಬಿದ್ದುಕೊಂಡ. ಅವನ ಅಮ್ಮ ಇದ್ದರೆ ಅವನನ್ನು ಹಾಗೆ ಬಿಡುತ್ತಿದ್ದಳೇ? ರಾತ್ರಿ ಆತನ ಕಣ್ಣ ಮುಂದೆ ಏನೋ ಬಂದು ನಿಂತ ಹಾಗೆ ಆಯಿತು. ಹುಡುಗನಿಗೆ ಹೆದರಿ ಮೈ ಬೆವರಿ ಹೋಯಿತು. ಅವನು 'ಅಮ್ಮಾ' ಎಂದು ಅರಚಿದ. ಅನಂತರ ಅವನಿಗೆ ಒಂದೇ ಸಮನೆ ಜ್ವರ. ಇಹದ ಜ್ಞಾನ ಇಲ್ಲ.

ದಿನ ಹಾಲು ಕೊಡುವಾಗ ಮಾತ್ರ ಅದನ್ನು ಪ್ರೀತಿಸುತ್ತಾರೆ. ಹಾಲು ಬತ್ತಿ ಹೋದ ನಂತರ ಅದನ್ನು ನೋಡುವವರಿಲ್ಲ. ಕೆಲಸಮಾಡುವ ಶಕ್ತಿಯಿದ್ದಷ್ಟು ಕಾಲ ಕೆಲಸಮಾಡಿ ಅವನು ಅವರಲ್ಲಿ ದುಡಿದು ತನ್ನ ದೇಹ ಸವೆಸಿ ಗಡ್ಡ ಬೆಳೆದು ಮಾಡಿಕೊಳ್ಳಲಿ ಅವನು ಒಂದು ದಿವಸ ಬೇನೆ ಬಿದ್ದರೆ ಅವನನ್ನು ಕಣ್ಣೆತ್ತಿ ನೋಡುವವರು ಕಡಿಮೆ. ಇಲ್ಲವೆಂದರೂ ಸಲ್ಲುವುದು. ಆ ಸಣ್ಣ ಹುಡುಗನಿಂದ ಇಡೀ ಮನೆಯ ಕೆಲಸಮಾಡಿಸಿ ಸರಿಯಾಗಿ ಅನ್ನ ಹಾಕದಿದ್ದ ರಾಧಮ್ಮ ಅವನು ಬೇನೆಬಿದ್ದ ನಂತರ "ಏನೇ ಉಪದ್ರ ಈ ಹುಡುಗನದ್ದು. ಅವನನ್ನು ಯಾಕೆ ಕರೆಸಿದ್ದು? ಮನೆಗೆ ಕಳಿಸಿ" ಎಂದು ಹೇಳಿದಳು.

ಚೋಮನಿಗೆ ಮೂರು ದಿನಗಳಿಂದ ಜ್ವರ ಬರುತ್ತಿದ್ದರೂ ಅವನಿಗೆ ಯಾರಾದರೊಬ್ಬರೂ ಕೂಡ ಹೇಗಿದ್ದಿ ಎಂದು ಕೇಳಿದ್ದಿಲ್ಲ. ಮೂರು ದಿನ ಅವನಿಗೆ ಮೈಮೇಲಿನ ಜ್ಞಾನ ಇದ್ದಿಲ್ಲ. ಜ್ವರದ ತಾಪ ಬಹಳ ಇದ್ದು ಏನೇನೂ ಮಾತಾಡುತ್ತಿದ್ದ. ಕಡೆಗೆ ಮನೆಯ ಚಾಕರಿ ಹೆಂಗಸು ಕರುಣೆಯಿಂದ ಕೊಂಚ ಆರೈಕೆ ನೋಡಿದಳು. ನಾಲ್ಕನೇ ದಿವಸ ಹುಡುಗನಿಗೆ ಕೊಂಚ ಜ್ಞಾನಬಂತು. ಅವನು ಅತ್ತಿತ್ತ ನೋಡಿ ಯಾರನ್ನೋ ಹಾರೈಸುತ್ತಿದ್ದನು. ಆದರೆ ಯಾರೂ ಕಂಡುಬರಲಿಲ್ಲ. ಆ ಕಡೆ ಯಾರೂ ಸುಳಿಯುತ್ತಿರಲಿಲ್ಲ.

ಸಂಜೆಗೆ ಸಿದ್ದಕ್ಕ ಬಂದಳು. ಅವಳಿಗೆ ಯಾರೋ ಹುಡುಗನಿಗೆ 'ಚೆನ್ನಾಗಿಲ್ಲ' ವೆಂದು ವರ್ತಮಾನ ಕೊಟ್ಟಿದ್ದರು. ಮನೆಯ ಹಿಂದಿನ ಜಗಲಿಯಲ್ಲಿ ಹುಡುಗನನ್ನು ಕಂಡೊಡನೆ ಆ ತಾಯಿಯ ಎದೆಯೊಡೆದು ನೀರಾಯಿತು. ಹುಡುಗನನ್ನು ಪ್ರೀತಿಯಿಂದ ಕರೆದಳು. ಆದರೆ ಅವನಿಗೆ ಜ್ಞಾನವಿದ್ದಿಲ್ಲ. ಅವನ ಮೈಮೇಲೆ ಬಿದ್ದು ಅತ್ತಳು. ಆಗ ರಾಧಮ್ಮ ಬಂದು "ಏನೇ ನಿನ್ನ ಮಗನನ್ನು ಕೊಂಡುಹೋಗು ಇಲ್ಲಿ ಯಾರೂ ನೋಡುವವರಿಲ್ಲ" ಎಂದಳು. ಆದರೆ ಸಿದ್ದಕ್ಕ ಮಾತಾಡಲಿಲ್ಲ. ಕಣ್ಣೀರಿನಿಂದಲೇ ಉತ್ತರವಿತ್ತಳು.

ಸಿದ್ದಕ್ಕ ಹುಡುಗನನ್ನು ಭಾಗಿಯ ಮನೆಗೆ ತಂದಳು. ಆಸ್ಪತ್ರೆಯ ಮದ್ದು ತಂದುಕೊಟ್ಟಳು. ಮರುದಿನ ಬೆಳಗೆ ಕೊಂಚ ಗುಣಮುಖವಾಯಿತು.

ಹುಡುಗ ಮೆಲ್ಲನೆ ಕಣ್ಣುಬಿಟ್ಟ. ಹತ್ತಿರ ತಾಯಿ ಕೂತುಕೊಂಡಿದ್ದಳು. ಕೆಲ ಹೊತ್ತು ಕಣ್ಣುಗಳನ್ನು ಅಗಲವಾಗಿ ಮಾಡಿ ತಾಯಿಯ ಮುಖವನ್ನೇ ನೋಡ ಹತ್ತಿದ. ನೋಡುತ್ತಿದ್ದಂತೆ ಕಣ್ಣು ತುಂಬಿ ಬಂದು 'ಅಮ್ಮಾ' ಎಂದ. ಹೆದರಬೇಡ ಮಗೂ! ನಾನು ಇಲ್ಲಿದ್ದೇನೆ ನಿನ್ನ ತಾಯಿ ಎಂದಳು. ಹುಡುಗನಿಗೆ ಕೊಂಚ ಧೈರ್ಯಬಂತು. ಅವನು ತಾಯಿಕುತ್ತಿಗೆಗೆ ಜೋತುಬಿದ್ದು 'ಅಮ್ಮಾ ನನ್ನನ್ನು ಬಿಟ್ಟು ಹೋಗಬೇಡಮ್ಮಾ ನಾನು ನಿನ್ನ ಒಟ್ಟಿಗೆ ಕರಿಂಜೆಗೆ ಬರುತ್ತೇನಮ್ಮಾ' ಎಂದ. ತಾಯಿ ತುಂಬುಗಣ್ಣಿನಿಂದ 'ಆಯಿತು ನನ್ನ ಚಿನ್ನಾ' ಎಂದಳು.

ಹುಡುಗನ ಮುಖದಲ್ಲಿ ನಗು ಮಿನುಗಿತು. 'ನೀನು ಬಹಳ ಒಳ್ಳೆಯವಳಮ್ಮಾ' ಎಂದು ಹುಡುಗ ತಾಯಿ ತೊಡೆಯಲ್ಲಿ ಸುಖವಾಗಿ ನಿದ್ದೆ ಹೋದ.

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never.
Hard Work?	—	Very Often.
Hard work and THRIFT	—	Always.

RESOURCES OF A CRORE.

Estd: 1906

CANARA BANK LIMITED.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at $2\frac{1}{2}$% per annum. Savings Bank Deposits at $4\frac{1}{2}$% per annum

FIXED DEPOSITS

For 2 Years 5% 1 Year $4\frac{1}{2}$% For 6 months 4% 3 months $3\frac{1}{2}$%

Auction chit funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ. ಆದರೆ ಈ ಬಾರಿ ಕೆಲವು ಸುಧಾರಣೆಯಿಂದೊಡಗೂಡಿದೆ. ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟಿವೆ" ಇದನ್ನು ಒಂದು ಬಾರಿ ನೀವೆ ಪರೀಕ್ಷಿಸಿರಿ. ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು. ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ.

★ ★ ★

ಧರ್ಮಾರ್ಥ ಇಸ್ಪೀಟು ಪಟ್ಟಿಗೆಯನ್ನು ಪಡೆಯಿರಿ.

ಈ ಧರ್ಮಾರ್ಥದ ಇಸ್ಪೀಟು ಪಟ್ಟಿಗೆಯನ್ನು ಪಡೆಯಲು 'NACET BLADES' ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇಡೀ ಸೆಟ್ಟನ್ನು ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್, 16, ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.



ಜಿಲ್ಲಾ ಸಮಾಚಾರ



ಮಂಗಳೂರು

ಸಹಕಾರೀಭಾಷಣ — ಜಿಲ್ಲಾ ಸಹಕಾರಿ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ವಹಿಸಲು ಬಂದಿದ್ದ ಶ್ರೀ ವೈಕುಂಠ ಎಲ್ ಮೇಥಾರವರು ಕಳೆದ ತಾರೀಕು ೩೦ನೇ ಸಾಯಂಕಾಲ ಥಿಯಾಸಾಫಿಕಲ್ ಲಾಜಿನಲ್ಲಿ ಗ್ರಾಮ ಕೈಗಾರಿಕೆಗಳ ವಿಷಯದಲ್ಲಿ ಭಾಷಣಮಾಡಿದರು

ಶ್ರೀ ಯಂ ಎಸ್ ಮಾಧವರಾಯರು ಶ್ರೀ ಮೇಥಾರವರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು ತರುವಾಯ ಭಾಷಣಕರ್ತರು ಹಿಂದುಸ್ಥಾನದ ಜನರ ಆರ್ಥಿಕ ಸ್ಥಿತಿಯನ್ನು ವರ್ಣಿಸಿದರು ಕಳೆದ ೮೦-೫೦ ವರ್ಷಗಳಿಂದ ಹತ್ತಿಯ ಗಿರಣಿಗಳು ವೃದ್ಧಿಗೆ ಬಂದಿರುವ ಸಂಗತಿಯನ್ನೂ ಅವು ಎಷ್ಟು ಮಂದಿಗೆ ಉದ್ಯೋಗವನ್ನು ಕೊಡುವುವೆಂಬುದನ್ನೂ ವಿವರಿಸಿದರು ದೇಶದಲ್ಲಿ ಜನಸಂಖ್ಯೆಯು ವರ್ಷವರ್ಷ ಹೆಚ್ಚುತ್ತಿದೆಯೆಂದೂ, ಇದರ ಪರಿಣಾಮವಾಗಿ ವ್ಯವಸಾಯದ ಮೂಲಕ ಜೀವನಮಾಡುವವರ ಸಂಖ್ಯೆಯು ಕೂಡ ಹೆಚ್ಚಾಗುತ್ತಾ ಹೋಗಿದೆಯೆಂದೂ, ರೈತರ ಉತ್ಪತ್ತಿಯು ಸ್ವಲ್ಪ ಮಟ್ಟಿಗಾದರೂ ಸುಧಾರಿಸಬೇಕಾದರೆ ಮನೆ ಕೈಗಾರಿಕೆಗಳನ್ನು ವೃದ್ಧಿಪಡಿಸಬೇಕೆಂದೂ ಮುಂತಾಗಿ ಸೂಚನೆಗಳನ್ನು ಕೊಟ್ಟರು

ಶ್ರೀ ಕೆ ಬಿ ಜಿನರಾಜ ಹೆಗ್ಗಡೆ, ಯಂ ಎಲ್ ಎ ಇವರು ಧನ್ಯವಾದಗಳನ್ನರ್ಪಿಸಿದ ತರುವಾಯ ಸಭಾಂತ್ಯವಾಯಿತು.

ಪತ್ರಿಕೋದ್ಯಮಿಗಳ ಸಭೆ — ಜಿಲ್ಲಾ ಪತ್ರಿಕೋದ್ಯಮಿಗಳ ಸಂಘದ ವಾರ್ಷಿಕ ಸಭೆಯು ಇದೆ ತಾ ೯ರಲ್ಲಿ ಡಿ ಸಿ ಯಂ ಶಾಲಾ ಪರಾರದಲ್ಲಿ ನಡೆಯುವುದೆಂದು ತಿಳಿದುಬರುತ್ತದೆ

ಪೆರ್ಲ: — ಶ್ರೀ ಸತ್ಯ ನಾರಾಯಣ ಹಾ. ಎ. ಶಾಲಾ ಹಳೆವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾ ಸಭೆಯು ತಾ. ೨೬ನೇ ಸಾಯಂ ಶ್ರೀ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು

ಪಣಂಬೂರು: — ಇಲ್ಲಿಯ ಸಾರ್ವಜನಿಕವಾಚನಾಲಯದ ತೃತೀಯವರ್ಷದ ವಾರ್ಷಿಕೋತ್ಸವವು ಕಳೆದ ತಾ ೨೮ರಲ್ಲಿ ಶ್ರೀ ಯಂ. ವಾಸುದೇವಪ್ರಾವ್, ಬಿ ಎ. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದಲೂ, ಯಶಸ್ವಿಯಾಗಿಯೂ ಜರಗಿತು. ಅಧ್ಯಕ್ಷರು ತಮ್ಮ ಸ್ವಾರಸ್ಯವಾದ ಭಾಷಣದಲ್ಲಿ ಹಳ್ಳಿಯು ಬೆಳ್ಳಿಯಾಗಬೇಕಾದರೆ ವಾಚನಾಲಯವು ಅದರ ಜೀವಾಳವಾಗಿದ್ದು ಗ್ರಾಮೋದ್ಧಾರದ ಎಲ್ಲಾ ತರದ ಚಟುವಟಿಕೆಗಳಿಗೆ ಹೇಗೆ ಮಾತೃಸ್ಥಾನದಲ್ಲಿ ನಿಂತು ಕೆಲಸ ಮಾಡಬಹುದೆಂಬುದನ್ನು ಪರದೇಶದಲ್ಲಿನ ಉದಾಹರಣೆಗಳು ಸಹಿತ ವಿವರಿಸಿದರು

ನಂದಳಿಕೆ: — ಸ್ಥಳೀಯ ಬೋ। ಹಾ ಎ ಶಾಲೆಯ ವರ್ಧಂತಿ ಉತ್ಸವವು ದಕ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಮಾನ್ಯ ಡಾ। ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ಯಕ್ಷಗಾನ, ತುಳುನಾಟಕ ಮೊದಲಾದವು ಇದ್ದುವು

ಕಿನ್ನಿಗೋಳಿ: — ಇಲ್ಲಿಯ ಸೈಂಟ್ ಮೇರಿಸ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿ ಕೂಟದವರು ತಾ ೨೬ರಲ್ಲಿ 'ಜೋಸೆಫನ ಚರಿತ್ರೆ' ಎಂಬ ನಾಟಕವನ್ನು ಆಡಿ ತೋರಿಸಿದರು ವಿ ಯಂ ಫೆರ್ನಾಂಡೀಸರು ಮಕ್ಕಳ ಕಲಾ ಕೌಶಲ್ಯವನ್ನು ಪ್ರಶಂಸಿಸಿದರು

ಇನ್ನಂಜೆ: — ಇಲ್ಲಿಯ ವಿಷ್ಣು ಮೂರ್ತಿ ಸ್ವಾಮಿ ಹಾ ಎ ಶಾಲಾ ವರ್ಧಂತ್ಯುತ್ಸವವು ಜೂನ್ ತಾ ೨ನೇ ಅಪರಾಹ್ನ ಗಂಟೆ ೫ಕ್ಕೆ ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತ

ಅಭಿನಂದನೆ — ಮಂಚಿ ಪಂಚಾಯತ್ ಶಾಲಾ ಉಪಾಧ್ಯಾಯರಾದ ಶ್ರೀ ಪಿ ಕೆ ನಾರಾಯಣನವರು ಕನ್ನಡ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವದು ಅಭಿನಂದನೀಯವಾಗಿದೆ ಮಡಿವಾಳರ ಜಾತಿಯಲ್ಲಿ ವಿದ್ವಾನ್ ಪಾಸಾದವರು ಇವರೊಬ್ಬರೇ

ಕೋರ್ಟುಗಳು — ಮಂಗಳೂರು ಡಿ। ಮುನ್ಸೀಫ್ ಕೋರ್ಟು ಸೆಕೆಕಾಲದ ರಜೆ ಮುಗಿದು ಕಳೆದ ಸೋಮವಾರ ತೆರೆಯಲ್ಪಟ್ಟಿದೆ ಸಬ್ ಮತ್ತು ಜಿಲ್ಲಾ ಕೋರ್ಟುಗಳು ಇದೇ ತಿಂಗಳ ೨೪ರಂದು ತೆರೆಯಲ್ಪಡುವವು

ಕಾರ್ಕಳ

ಮಾರಿಪೂಜೆ — ಬಿಲ್ಲವ ಸಮಾಜ ಮತ್ತು ಇತರ ಸುಧಾರಕಪಂಕ್ತಿಗಳ ಭಗೀರಥ ಪ್ರಯತ್ನಗಳು ನಡೆದಿದ್ದರೂ ಆಡಳಿತದಾರರು ಈ ಸುಧಾರಣೆಗೆ ಅನುಕೂಲರಾಗಿ ಇಲ್ಲದಿದ್ದ ಕಾರಣದಿಂದ ವರ್ಷಾವಧಿ ನಡೆಯಬೇಕಾಗಿದ್ದ ಸ್ಥಳೀಯ ಮಾರಿಪೂಜೆಯು ಈ ವರ್ಷ ೩ದೇ ತಾ ೨೭ ೫ ೪೦ರ ದಿನ ಹಿಂಸಾತ್ಮಕವಾಗಿಯೇ ನಡೆಯಿತು ಒಂದು ಕೋಣ, ಕೆಲವು ಕುರಿ, ಹಂದಿ ಮತ್ತು ಅಸಂಖ್ಯಾತ ಕೋಳಿಗಳ ಬಲಿಯೊಂದಿಗೆ ಈ ಪೂಜೆಯು ಆಯಿತು ಆದರೆ ಹಿಂಸಾತ್ಮಕ ದೇವಿ ಪೂಜೆಯನ್ನು ನಿಲ್ಲಿಸಲಿಕ್ಕೆ ಸುಧಾರಕರು ಪಟ್ಟ ಪ್ರಯತ್ನಗಳು ಶ್ಲಾಘನೀಯವಾಗಿವೆ

ವಿದ್ಯುಚ್ಛಕ್ತಿಯ ತಯಾರಿ. — ಕಾರ್ಕಳಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಲಿಕ್ಕೂ ಇಲ್ಲಿಂದ ಪವರ್ ಹೌಸನ್ನು ಸ್ಥಾಪಿಸಲಿಕ್ಕೂ ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕಂಪನಿಯವರ ಇಲ್ಲಿ ಪಾಲು ಬಂಡವಾಳವನ್ನು ಸಂಗ್ರಹಿಸುತ್ತಿರುವರು. ಜನ ಪ್ರೋತ್ಸಾಹವು ಚೆನ್ನಾಗಿರುವದರಿಂದ ಇನ್ನು ಒಂದೆರಡು ತಿಂಗಳುಗಳ ಒಳಗಾಗಿ ಕಾರ್ಕಳಕ್ಕೆ ವಿದ್ಯುಚ್ಛಕ್ತಿ ಬರಬಹುದೆಂದು ಎಲ್ಲರು ನಿರೀಕ್ಷಿಸಿದ್ದಾರೆ

ಉಪಾಧ್ಯಾಯರ ಸಭೆ: — ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳಸಭೆಯು ತಾ ೧೬ ೪೦ರ ದಿನ ಡಿಪ್ಟಿ ಇನ್ಸ್ಪೆಕ್ಟರ ಶ್ರೀ ಬಿ ವಿ ರಮಣ ಬಿ ಎ ಯಲ್ ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿ ವರದಿಸರ್ಕಿಲಾರ ಓದುವದು ಇತ್ಯಾದಿ ಕಾರ್ಯಕ್ರಮವು ಮುಗಿದ ಬಳಿಕ ಶ್ರೀ ಭಾಸ್ಕರರಾಯರು ವ್ಯವಸಾಯಿಕ ಲೆಕ್ಕಗಳು ಮತ್ತು ಅವನ್ನು ಮಕ್ಕಳಿಗೆ ಕಲಿಸುವ ಆವಶ್ಯಕತೆ ಎಂಬ ಕುರಿತು ಭಾಷಣವನ್ನು ಕೊಟ್ಟರು ಅಧ್ಯಕ್ಷಭಾಷಣ ಮತ್ತು ವಂದೇಮಾತರಂದೊಂದಿಗೆ ಸಭೆ ಮುಗಿಯಿತು.

ಮೂಲ್ಕಿ

ಸ್ಥಳೀಯ ಯೂನಿಯನ್ ಕ್ಲಬ್ಬಿನ ೧೫ನೇ ವರ್ಷ ವರ್ಧಂತ್ಯುತ್ಸವವೂ ದಿವಂಗತ ಡಾಕ್ಟರ್ ಜೋಳ ಶ್ಯಾಮರಾಯರ ಜನ್ಮ ದಿನಾಚರಣೆಯೂ ಇದೇ ಬರುವ ತಾ ೧೬ನೇ ರವಿವಾರ ಅಪರಾಹ್ನ ಗಂಟೆ ೪-೩೦ಕ್ಕೆ ಕ್ಲಬ್ಬಿನ ಸಭಾಮಂದಿರದಲಿ ಜರುಗಿಸಲ್ಪಡುವುದಾಗಿ ತಿಳಿದುಬರುತ್ತದೆ

ಟೆಕ್ಸ್ಟ್ ಬುಕ್ ಕಮಿಟಿಯಿಂದ
ಮಂಜೂರಾತಿಪಡೆದ ಶಾಲಾಪುಸ್ತಕಗಳು

[1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದು ಮಂಜೂರಾದ ಶಾಲಾ ಪುಸ್ತಕಗಳು]

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
4ನೇ ದರ್ಜೆ	0 1 0
5ನೇ	0–3 6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
4ನೇ ದರ್ಜೆ	0–2 0
5ನೇ	0–2 6

ಸಿವಿಕ್ಸ್ ಅಥವಾ ಪೌರಧರ್ಮ

ಪುಸ್ತಕ	ಬೆಲೆ
4ನೇ ದರ್ಜೆ	0–2–0
5ನೇ	0–2–6
6ನೇ	0–3–0
7ನೇ	0–3–0
8ನೇ ,,	0–3–0

ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ

ಭೂ ವಿವರ

ಪುಸ್ತಕ	ಬೆಲೆ
4ನೇ	0–2–6
5ನೇ	0–3–6

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ 1 0–0

ಶಾಲಾ ಉಪಯೋಗಕ್ಕೆ (ಲ್ಯಾಬ್ರೆರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	,,	0—1—6
ಸಿವಿಕ್ಸ್	,,	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಓರಿಯೆಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಬೊಂಬೈ

ಈ ಕಂಪನಿಯು ಕಳೆದ ವರ್ಷದಲ್ಲಿ ೭,೭೩,೧೧,೦೪೦ ರೂಪಾಯಿಗಳ ೩೯,೯೭೫ ಹೊಸ ಪೋಲಿಸಿಗಳನ್ನು ಕೊಟ್ಟಿರುತ್ತದೆ.

ಸಾದರ ಸ್ವೀಕಾರ

೧. **ಮಾರ್ಗದರ್ಶಕ**; (ಸಣ್ಣ ಕತೆಗಳು. ಮನೋಹರ ಗ್ರಂಥಮಾಲೆ. ಧಾರವಾಡ) ಪಾರ್ವತೀ ಬಾಯಿ ಆಲವಳಿ ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು

ಪ್ಯಾರಿಸಿನ ಮೇಲೆ ಬಾಂಬಿನ ಸುರಿಮಳೆ!



★ ಯುದ್ಧ ವಾರ್ತೆ

ಜರ್ಮನರ ನಿರ್ದಯ ವರ್ತನೆ!

ನಿರಪರಾಧೀ ನಾಗರಿಕರ ವಧೆ! ಇಟೆಲಿಯು ಯುದ್ಧಕ್ಕಿಳಿವುದೆ?

ಮುಸಲೋನಿ

ಜರ್ಮನಿ ಮತ್ತು ಮಿತ್ರರಾಷ್ಟ್ರಗಳ ಯುದ್ಧವು ತೀವ್ರವಾಗುತ್ತಾ ಬರುತ್ತಿದೆ.

ಪ್ಯಾರಿಸಿಗೆ ಜರ್ಮನರು ತಾ. ೩ರಂದು ಮೊದಲ ಬಾರಿಯಾಗಿ ವಿಮಾನ ದಾಳಿ ಮಾಡಿ ಬಾಂಬು ಹಾಕಿರುವರು. ಪ್ಯಾರಿಸ್ ಪಟ್ಟಣದ ಕೇಂದ್ರ ಸ್ಥಳಕ್ಕೇ ಹಲವು ಬಾಂಬುಗಳು ಎಸೆಯಲ್ಪಟ್ಟವು. ಹಲವು ಮನೆಗಳಿಗೆ ಬೆಂಕಿ ತಾಗಿತು.

ಅಮೇರಿಕದ ರಾಯಭಾರಿಯು ಈ ಬಾಂಬಿನ ಆಹುತಿಯಿಂದ ತಪ್ಪಿಸಿಕೊಂಡಿರುವನಾಗಿ ತಿಳಿದಿದೆ.

ಇಟಲಿಯು ಯುದ್ಧರಂಗಕ್ಕೆ ಪ್ರವೇಶಿಸುವುದೆಂಬ ವಾರ್ತೆ ಬಲವಂತವಾಗಿ ಹೊರಡಿದೆ. ಇಂದು ತಾವು ಸುಮ್ಮಗಿರಲು ಸಾಧ್ಯವಿಲ್ಲವೆಂದು ಇಟೆಲಿಯ ಪತ್ರಿಕೆಯೊಂದು ಸಾರಿದೆ. ಮುಸಲನಿಯು ಮಿತ್ರ ಪಕ್ಷದವರೊಡನೆ ಕೆಲವು ಸಂಧಿಶರತ್ತುಗಳನ್ನು ಹಾಕಿರುವನೆಂದೂ, ಅವುಗಳಿಗೆ ಅವರು ಒಪ್ಪದಿದ್ದಲ್ಲಿ ಜರ್ಮನಿಯ ಪಕ್ಷದಿಂದ ರಣರಂಗಕ್ಕಿಳಿವನೆಂದೂ ವಾರ್ತೆಯು ಪ್ರಚಾರವಾಗಿದೆ. ಆದರೆ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರು ಶಾಂತ ಸಂಧಾನವನ್ನು ನಡೆಸುವ ಯತ್ನ ಮಾಡುತ್ತಿರುವರೆಂದೂ ತಿಳಿದಿದೆ.

ನಾರ್ವಿಕದಲ್ಲಿ ಕಾಳಗವು ನಡೆಯುತ್ತಾ ಇದೆ. ಡಂಕರ್ಕನಲ್ಲಿ ರಕ್ಷಣಾ ಯುದ್ಧವೂ ನಡೆಯುತ್ತಿದೆ.

ನಾರ್ವಿಯನ್ನು ಹಿಡಿದರು

ಜರ್ಮನಿಯು ಸ್ವಾಧೀನ ಪಡಿಸಿದ್ದ ನಾರ್ವಿಕನ್ನು ಮಿತ್ರಪಕ್ಷದವರು ಪುನಃ ಹಿಡಿದಿದ್ದಾರೆ.

ಬ್ರಿಟನಿನ ರಕ್ಷಣಾಯತ್ನ

ಬ್ರಿಟನಿಗೆ ಜರ್ಮನಿಯು ದಾಳಿಯಾಗದಂತೆ, ಅದರ ರಕ್ಷಣಾಯತ್ನಗಳು ಕಳೆದ ವಾರದಿಂದ ಭರದಿಂದ ಸಾಗುತ್ತಿದೆ. ಅಲ್ಲಿನ ಪತ್ರಿಕೆ, ಪ್ರೆಸ್ಸುಗಳ ಮೇಲೆ ಬಲವಂತ ಮಾಡಲಾಗಿದೆ.

ಬ್ರಿಟನಿನ ಪ್ರಾಂತದ ೪೭ ಸಾವಿರ ಮಂದಿ ಮಕ್ಕಳನ್ನು ಬೇರೆ ಕಡೆಗೆ ಸಾಗಿಸುವ ಏರ್ಪಾಡು ಪೂರೈಸುತ್ತ ಬಂದಿದೆ. ಜರ್ಮನ್ ಆಸ್ಪತ್ರೆಯೊಂದರ ೨೯ ಮಂದಿ ಜರ್ಮನ್ ನರ್ಸ್‌ಗಳನ್ನು ನಿರ್ಬಂಧದಲ್ಲಿರಿಸಿರುವರು.

ಇಟೆಲಿಯ ಶಾಂತಿಸೂಚನೆಗಳು

ಇಟೆಲಿ, ಜರ್ಮನಿಗಳ ಸಂಧಾನದ ಶರತ್ತುಗಳನ್ನು ಇಟೆಲಿಯು ಮಿತ್ರಪಕ್ಷದವರಿಗೆ ಸೂಚಿಸಲಿದೆ. ಅದನ್ನು ಅವರು ಒಪ್ಪದಿದ್ದಲ್ಲಿ ಯುದ್ಧರಂಗಕ್ಕೆ ಇಳಿಯುವ ಸಂಭವವಿದೆಯೆಂದು ವಾರ್ತೆ.

ಇಟಲಿ ದುಮುಕುವದೇ

ರೂಸ್‌ವೆಲ್ಟರಿಗೂ ಇತರರಿಗೂ ಪತ್ರವ್ಯವಹಾರ

"ಜರ್ಮನಿಗೆ ಸಕಲ ಸಹಾಯವನ್ನೂ ನೀಡುವುದಾಗಿ ನಾವು ನಿಶ್ಚಯಿಸಿದ್ದೇವೆ. ಈ ವಿಷಯದಲ್ಲಿ ನಾನು ಹಿಟ್ಲರನಿಗೆ ವಾಗ್ದಾನ ಕೊಟ್ಟಿರುವೆನಾದ್ದರಿಂದ, ಅದರಿಂದ ಹಿಂಜರಿಯಲು ಸಾಧ್ಯವಿಲ್ಲ" ಎಂಬುದಾಗಿ ಇಟಲಿಯ ಸರ್ವಾಧಿಕಾರಿಗಳಾದ ಸಿನಾರ್ ಮುಸಲೋನಿಯವರು ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಹೇಳಿದರೆಂದು ಅನೇಕಾನೇಕ ವದಂತಿಗಳು ಬಂದಿದ್ದವು.

ಈ ಸುದ್ದಿಯು ನಿಜವೇ ಅಥವಾ ಸುಳ್ಳೇ ಎಂಬುದನ್ನು ದೃಢಪಡಿಸಿಕೊಳ್ಳಲು ಅನೇಕ ಪತ್ರಿಕಾ ಪ್ರತಿನಿಧಿಗಳು ವೈಟ್ ಹೌಸಿಗೆ ಹೋಗಿ ವಿಚಾರಿಸಿದರು. ವೈಟ್ ಹೌಸ್ ಅಧಿಕಾರಿಗಳು ಸುದ್ದಿಯನ್ನು ನಿಜವೆಂದೂ ಹೇಳಲಿಲ್ಲ, ಸುಳ್ಳೆಂದೂ ಸಾರಲಿಲ್ಲ.

ಪ್ರೆಸಿಡೆಂಟ್ ರೂಸ್‌ವೆಲ್ಟರ ಕಾರ್ಯದರ್ಶಿಗಳಾದ ಮಿ॥ ಸ್ಟೀಫನ್ ಅರ್ಲಿಯವರು ಪತ್ರಿಕಾ ಪ್ರತಿನಿಧಿಗಳನ್ನುದ್ದೇಶಿಸಿ, "ಪ್ರೆಸಿಡೆಂಟ್ ರೂಸ್‌ವೆಲ್ಟರಿಗೂ, ಹೊರರಾಷ್ಟ್ರದ ಆಡಳಿತಮುಖ್ಯಾಧಿಕಾರಿಗಳಿಗೂ ಏಕಪ್ರಕಾರವಾದ ಪತ್ರವ್ಯವಹಾರಗಳು ನಡೆಯುತ್ತಿವೆ, ಅಷ್ಟೇ. ಅದಕ್ಕಿಂತ ಹೆಚ್ಚಾಗಿ ನಾನು ಏನನ್ನೂ ಹೇಳಲಾರೆ" ಎಂದುಬಿಟ್ಟರು.

ಸೋವಿಯೆಟ್ ರಷ್ಯಾದೊಡನೆ ಸ್ನೇಹದ ಅಗತ್ಯ

"ಹಿಟ್ಲರ್‌ನಲ್ಲಿ ಸ್ಟಾಲಿನ್ನನ ನಂಬಿಕೆ ಇಲ್ಲ"

ಬ್ರಿಟಿಷ್ ಸರ್ಕಾರವು ಇತ್ತೀಚೆಗೆ ಸರ್ವಾಧಿಕಾರ ಹೊಂದಿದುದರ ಬಗ್ಗೆ, ಜಾರ್ಜ್ ಬರ್ನಾರ್ಡ್ ಷಾ ಮತ್ತು ಹೆಚ್ ಜಿ ವೆಲ್ಸ್‌ರವರುಗಳು ಮಾತನಾಡುತ್ತಾ; "ಸ್ಟಾಲಿನ್ನನಿಗೆ ಹಿಟ್ಲರನಲ್ಲಿ ನಿಜವಾಗಿಯೂ ನಂಬಿಕೆಯಿಲ್ಲ. ಜರ್ಮನಿಯ ಆಕ್ರಮಣ ಮನೋಭಾವನೆಯನ್ನು ಶಾಂತಿ ಪ್ರೇಮಿಯಾದ ರಷ್ಯಾವು ಖಂಡಿಸಿದೆ. ರಷ್ಯಾಕ್ಕೆ ಆಕ್ರಮಣದಾಹವಿಲ್ಲ. ಫಿನ್‌ಲೆಂಡಿನಲ್ಲಿದ್ದ ನಾಜಿಗಳನ್ನು ಓಡಿಸುವ ಉದ್ದೇಶದಿಂದಲೇ ಸೋವಿಯೆಟ್ಟು ಫಿನ್‌ಲೆಂಡಿನ ಮೇಲೆ ದಂಡೆತ್ತಿ ಹೋಯಿತು. ಸೋವಿಯೆಟ್ ರಷ್ಯಾವು ಪ್ರಜಾಸತ್ತೆ ಸ್ವಾತಂತ್ರ್ಯಗಳಿಗೆ ನೆರವಾಗುವುದು ಖಂಡಿತ. ನಾವು (ಬ್ರಿಟಿಷರು) ರಷ್ಯಾವನ್ನು ಗೌರವ ರೀತಿಯಲ್ಲಿ, ಸರಿಸಮಾನ ಸ್ನೇಹದಿಂದ ಕಾಣಬೇಕು. ರಷ್ಯಾದ ಮಿತ್ರತ್ವವನ್ನು ನಾವು ಪಡೆದರೆ ಅದರಿಂದ ನಮ್ಮ ಬಲವು ಇಮ್ಮಡಿಯಾಗುವುದು. ಆದ್ದರಿಂದ ರಷ್ಯಾದೊಡನೆ ಸ್ನೇಹವು ಅವಶ್ಯಕವಾಗಿದೆ" ಎಂದು ಅಭಿಪ್ರಾಯಪಟ್ಟರು.

ಬ್ರಿಟನ್ ಮತ್ತು ಸೋವಿಯೆಟ್ ರಷ್ಯಾಗಳ ವ್ಯಾಪಾರಿ ಒಪ್ಪಂದ ಸಮಾಲೋಚನೆಗಾಗಿ ಬ್ರಿಟನಿನವರ ಪೂರ್ಣ ಅಧಿಕಾರ ಪಡೆದ ಸರ್ ಸ್ಟಾಫರ್ಡ್ ಕ್ರಿಪ್ಸರನ್ನು ಸೋವಿಯೆಟ್ಟಿಗೆ ಕಳುಹಿಸುವುದಾಗಿ ತಿಳಿಸಲಾಗಿತ್ತಷ್ಟೆ. ಈಗ ಸೋವಿಯೆಟ್ ಸರಕಾರವು ಈ ಸಲಹೆಯನ್ನು ನಿರಾಕರಿಸಿ ಮಾಸ್ಕೋದಲ್ಲಿರುವ ಬ್ರಿಟಿಷ್ ರಾಯಭಾರಿಯನ್ನಾಗಲೀ ಅಥವಾ ಆ ಸ್ಥಾನಕ್ಕೆ ಬರುವ ಇನ್ನಾವುದೇ ಅಧಿಕಾರಿಯನ್ನಾಗಲೀ ಆ ಕೆಲಸಕ್ಕೆ ನೇಮಿಸಬೇಕೆಂದು ತಿಳಿಸಿದೆ.

ಸರ್ ಸ್ಟಾಫರ್ಡ್ ಕ್ರಿಪ್ಸರನ್ನಾಗಲೀ ಅಥವಾ ಇನ್ನಾರನ್ನೇ ಆಗಲೀ ವಿಶೇಷ ಅಥವಾ ಅಸಾಧಾರಣ ಪ್ರತಿನಿಧಿಯ ರೂಪದಲ್ಲಿ ತಾವು ಅಂಗೀಕರಿಸುವುದಿಲ್ಲವೆಂದು ಸೋವಿಯೆಟ್ ಸರಕಾರವು ಬ್ರಿಟಿಷ್ ಸರಕಾರಕ್ಕೆ ತಿಳಿಸಿದೆ. ಈ ಅಂಶವನ್ನು ಬ್ರಿಟಿಷ್ ಸರಕಾರಕ್ಕೆ ತಿಳಿಯಪಡಿಸಬೇಕೆಂದು ಲಂಡನಿನಲ್ಲಿರುವ ಸೋವಿಯೆಟ್ ಸರಕಾರವು ತಿಳಿಸಿದೆ ಎಂದು ಟಾಸ್ ಏಜನ್ಸಿಯು ಪ್ರಕಟಿಸಿದೆ.

"ಸೋವಿಯೆಟಿಗೂ, ಬ್ರಿಟನ್ನಿಗೂ ಇರುವ ಸಂಬಂಧದ ಬಗ್ಗೆ ಏನೋ ಬದಲಾವಣೆಯಾಗಿರುವಂತೆಯೂ, ಆ ಬದಲಾವಣೆಯ ಬಗ್ಗೆ ಸಮಾಲೋಚನೆ ನಡೆಸಬೇಕೆಂದೂ ಬ್ರಿಟಿಷ್ ಸರಕಾರವು ಆಲೋಚಿಸದೆ, ನಿಜವಾಗಿಯೂ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳಬೇಕೆಂಬ ಉದ್ದೇಶ ಹೊಂದಿದ್ದಲ್ಲಿ ಮಾಸ್ಕೋವಿನಲ್ಲಿರುವ ಬ್ರಿಟಿಷ್ ರಾಯಭಾರಿಗೆ ಅಧಿಕಾರವನ್ನು ಕೊಡಲಿ. ಅದಿಲ್ಲದಿದ್ದರೆ ಅವರ ಸ್ಥಾನಕ್ಕೆ ಬರುವ ಮತ್ತಾರಿಗಾದರೂ ಆ ಅಧಿಕಾರ ಕೊಡಲಿ" ಎಂದು ಆ ಉತ್ತರದಲ್ಲಿ ಸೋವಿಯೆಟ್ ಸರಕಾರ ತಿಳಿಸಿದೆ.

ವಿದೇಶೀ ರೇಡಿಯೋ ಕಾರ್ಯಕ್ರಮಗಳನ್ನು ಕೇಳಕೂಡದೆಂದು ಕೈರೋದಲ್ಲಿ ಮಾಡಿದುವಂತೆ ಪ್ರತಿಬಂಧಿಸುವುದು ಅಷ್ಟು ಸೂಕ್ತವಲ್ಲವೆಂದು ಹೇಳಲಾಗಿದೆ. ಆದರೂ ಸಾರ್ವಜನಿಕ ರೀತಿಯಲ್ಲಿ ವಿದೇಶೀ ಕಾರ್ಯಕ್ರಮಗಳನ್ನು ರೇಡಿಯೋಗಳಲ್ಲಿ ಟ್ಯೂನ್ ಮಾಡಿ ಕೇಳುವುದನ್ನಾದರೂ ಪ್ರತಿಬಂಧಿಸಬೇಕೆಂದು ಇಂಡಿಯಾ ಸರ್ಕಾರವೂ ಪ್ರಾಂತ ಸರಕಾರಗಳೂ ಆಲೋಚಿಸುತ್ತಿವೆ ಎಂದು ತಿಳಿದಿದೆ. ಹೋಟಲುಗಳಲ್ಲಿಯೂ ಈ ರೇಡಿಯೋ ಕಾರ್ಯಕ್ರಮಗಳನ್ನೇರ್ಪಡಿಸಿ ಜನರೆಲ್ಲಾ ಅಲ್ಲಿ ನೆರೆದು ಕೇಳುವುದನ್ನು ನಿಲ್ಲಿಸಬೇಕೆಂಬುದೇ ಈ ಆಲೋಚನೆಯ ಉದ್ದೇಶ. ಆದರೆ ಈ ಬಗ್ಗೆ ಇನ್ನೂ ಯಾವ ಅಂತ್ಯ ನಿರ್ಧಾರವೂ ಆಗಿಲ್ಲ.

ಫ್ಲಾಂಡರ್ಸ್ ಮತ್ತು ಡನ್‌ಕರ್ಕ್‌ಗಳಲ್ಲಿಯ ಕಾದಾಟ ಬಹಳ ಭೀಕರವಾಗಿದೆ.

ಡನ್‌ಕರ್ಕ್ ಬಂದರಿನ ರಕ್ಷಣಾ ವ್ಯವಸ್ಥೆ ಬಹಳ ಚನ್ನಾಗಿದೆ.

ಸುತ್ತಲೂ ಪ್ರವಾಹವನ್ನು ಬಿಟ್ಟು ಜರ್ಮನರು ಮುಂದೆ ಬರುವುದನ್ನು ಅಡ್ಡಗಟ್ಟಿದೆ.

ಕೆಲೆಯನ್ನು ಇನ್ನೂ ಫ್ರೆಂಚರೇ ಹಿಡಿದಿದ್ದಾರೆ.

ಬ್ರಿಟಿಷ್ ವಿಮಾನಗಳ ಸಾಹಸ ಕಾರ್ಯಗಳು ಬಹಳ ಜಾಸ್ತಿಯಾಗುತ್ತಿವೆ. ಫ್ರಾನ್ಸಿನ ನೈರುತ್ಯ ಭಾಗದಲ್ಲಿಯೂ ಬೆಲ್ಜಿಯಮಿನಲ್ಲಿಯೂ ಮಿತ್ರರಾಷ್ಟ್ರಗಳ ಸೈನ್ಯಗಳಿಗೆ ರಾಯಲ್ ಏರ್ ಫೋರ್ಸ್ ವಿಮಾನಗಳ ಸಹಾಯ ಅತಿರೇಕವಾಗಿ ಬರುತ್ತಿದೆ.

ಉತ್ತರದಲ್ಲಿ ಫ್ರೆಂಚ್ ಮತ್ತು ಬ್ರಿಟಿಶ್ ಸೈನ್ಯಗಳು ಕಾರ್ಯಾಚರಣೆ ನಡೆಸುತ್ತಿದ್ದಂತೆಯೇ ಬೆಲ್ಜಿಯನರು ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟುದರಿಂದ ಮಿತ್ರರಾಷ್ಟ್ರದವರಿಗೆ ಬಹಳ ತೊಂದರೆಯುಂಟಾಗಿದೆ.

ಬೆಲ್ಜಿಯಮಿನ ರಾಜರು ಆಕ್ರಮಣಕಾರರ ಕೈವಶವಾಗಿರುವುದರಿಂದ ಅವರು ಬೆಲ್ಜಿಯಮನ್ನು ಆಳುವ ಹಾಗಿಲ್ಲವೆಂದು ಬೆಲ್ಜಿಯನ್ ಮಂತ್ರಿಮಂಡಳವು ನಿರ್ಣಯಿಸಿದೆ.

ಬೆಲ್ಜಿಯಮಿನ ಅನೇಕ ಉನ್ನತಾಧಿಕಾರಿಗಳು ರಾಜರ ಆಜ್ಞೆಯನ್ನು ಉಲ್ಲಂಘಿಸಿದ್ದಾರೆ. ಶಸ್ತ್ರಾಸ್ತ್ರಗಳನ್ನು ಕೆಳಗಿಡಲು ನಿರಾಕರಿಸಿ ಇನ್ನೂ ಕೂಡ ಫ್ಲಾಂಡರ್ಸಿನಲ್ಲಿ ಬ್ರಿಟಿಷ್ ಮತ್ತು ಫ್ರೆಂಚರ ಜೊತೆಯಲ್ಲಿ ಭುಜಕ್ಕೆಭುಜಕೊಟ್ಟು ಕಾದಾಡುತ್ತಿದ್ದಾರೆ.

ಬೆಲ್ಜಿಯಮಿನಲ್ಲಿ ೧೮ ದಿನಗಳ ಕಾಲ ನಡೆದ ಭೀಕರ ಕದನದಲ್ಲಿ ಒಟ್ಟು ೮ ಲಕ್ಷ ಬೆಲ್ಜಿಯನರಲ್ಲಿ ಈಗ ೩ ಲಕ್ಷ ಜನರು ಮಾತ್ರ ಉಳಿದಿದ್ದಾರೆ.

ಹಿಟ್ಲರನು ಚಾನಲ್ ಪೋರ್ಟ್‌ಗಳನ್ನು ಹಿಡಿದ ಮೇಲೆ, ಫ್ರಾನ್ಸಿಗೆ ಇಂಗ್ಲೆಂಡಿನ ಸೈನ್ಯವು ಬರುವುದಕ್ಕೆ ಅಡ್ಡಿಯಾದ ಮೇಲೆ, ಮುಸಲೋನಿಯು ಹಿಟ್ಲರನ ಪರವಾಗಿ ಫ್ರಾನ್ಸಿಗೆ ಶಾಂತಿ ಸಲಹೆಗಳನ್ನು ಮಾಡುವನೆಂದು ಬರೆದಿದ್ದಾರೆ. ಅವರು ಮತ್ತೂ ಬರೆಯುವುದೇನೆಂದರೆ, ಮುಸಲೋನಿಯು ಫ್ರಾನ್ಸಿಗೆ ಶಾಂತಿ ಸಲಹೆ ಮಾಡುತ್ತಾ, ಇಂಗ್ಲೆಂಡಿನಿಂದ ಸಹಾಯವು ಇನ್ನು ಬರುವ ಹಾಗಿಲ್ಲವೆಂದೂ, ಫ್ರಾನ್ಸು ಶಾಂತಿಗೆ ಒಪ್ಪದೆ ಹೋದರೆ ಹಿಟ್ಲರನು ಫ್ರಾನ್ಸಿನ ಮೇಲೆ ಬಾಂಬಿನ ಸುರಿಮಳೆ ಕರೆಸಿ ಭಸ್ಮ ಮಾಡುವನೆಂದೂ ತಿಳಿಸುವರು. ಒಟ್ಟಿನಲ್ಲಿ ಫ್ರಾನ್ಸನ್ನೂ, ಇಂಗ್ಲೆಂಡನ್ನೂ ಪ್ರತ್ಯೇಕಿಸಿ ಒಡೆಯಲು ಮುಸೋಲಿನಿಯು ಯತ್ನಿಸುವನೆಂದು ಮಿ. ವರ್ನಾನ್ ಬಾರ್ಟ್‌ಲೆಟ್‌ರವರು ಬರೆಯುತ್ತಾರೆ. ಆದರೆ, ಈಗಿನ ಫ್ರಾನ್ಸ್ ಮುಖ್ಯ ಮಂತ್ರಿ ಈ ಬೆದರಿಕೆಯ ನೀತಿಗೆ ಇಳಿ ಬೀಳುವವರಲ್ಲವೆಂದೂ ಮಿ. ಬಾರ್ಟ್‌ಲೆಟ್‌ರವರು ಬರೆಯುತ್ತಾರೆ.

ಇಂಗ್ಲಂಡಿನ ಮುತ್ತಿಗೆಗೆ ಹಿಟ್ಲರನ ಸಾಹಸ

ಹಿಟ್ಲರನು ಇಂಗ್ಲಂಡಿನ ಮೇಲೆ ದಾಳಿ ಮಾಡಿದರೆ ಆಗ ದೇಶವನ್ನು ಹೇಗೆ ಸಂರಕ್ಷಿಸಿಕೊಳ್ಳಬೇಕೆಂಬ ಬಗ್ಗೆ ಬ್ರಿಟಿಶ ಪತ್ರಿಕೆಗಳು ವಿಚಾರ ನಡೆಸಿವೆ. ಕಡಲ್ಗಾಲುವೆಯ ಬಂದರಗಳು ಈಗಾಗಲೇ ಜರ್ಮನರ ವಶವಾಗುತ್ತ ಬಂದಿರುವದರಿಂದ ಹಿಟ್ಲರನು ಇಂಗ್ಲಂಡಿನ ಮೇಲೆ ಬೇಗನೇ ಮುತ್ತಿಗೆ ಹಾಕಬಹುದೆಂದು ಅಂದಾಜು ಮಾಡಲಾಗಿದೆ.

ಜರ್ಮನರ ಈ ದಾಳಿಯನ್ನು ತಡೆಯುವದಕ್ಕಾಗಿ ಬ್ರಿಟಿಶ ಸರಕಾರದವರು ಅನೇಕ ಮುಂಜಾಗ್ರತೆಯ ಉಪಾಯ



ಭಾರತದಲ್ಲಿ ಶಸ್ತ್ರಸನ್ನಾಹಗಳ ಸಿದ್ಧತೆ!

ಸದ್ಯಕ್ಕೆ ಸತ್ಯಾಗ್ರಹವಿಲ್ಲ — ಮಹಾತ್ಮರ ಹೇಳಿಕೆ

ರಾಜಾಜಿಯವರ ಹಿತವಚನ

ಡಿಫೆನ್ಸ್ ಓಫ್ ಇಂಡಿಯಾ ಆಕ್ಟು!

ಗಳನ್ನು ಕೈಕೊಂಡಿರುವರು.

ಮಿತ್ರಪಕ್ಷದವರಿಗೆ ಗಂಡಾಂತರ

ಪ್ಯಾರಿಸಿನ ಪ್ರಕಟಣೆ

ಪ್ಯಾರಿಸಿನ ಅಧಿಕೃತ ಪ್ರಕಟನೆಯೊಂದು ಈ ರೀತಿಯಾಗಿ ಹೇಳುತ್ತಿರುವದು:— ಲಿಯೋಪೋಲ್ಡ ಅರಸರು ವಿಶ್ವಾಸ ಘಾತಕ ಮಾಡಿದರು ಇದರಿಂದ ಮಿತ್ರಪಕ್ಷದವರ ಮೇಲೆ ಗಂಡಾಂತರವು ಪ್ರಾಪ್ತವಾಗಿದೆ ಮಿತ್ರಪಕ್ಷದ ದಂಡುಗಳು ಕಷ್ಟಕ್ಕೀಡಾಗಿರುವವು ಪರಿಸ್ಥಿತಿಯು ಚಿಂತಾಜನಕವಾಗಿದೆ ಆದರೆ ನಿರಾಶಾಜನಕವಾಗಿಲ್ಲ

ರಕ್ತಾಘ ಕಾಲುವೆ ಹರಿಯಿತು

ಬೆಲ್ಜಿಯಮದಲ್ಲಿ ಜರ್ಮನ ದಂಡುಗಳು ಮೆನಿನ್ ಪಟ್ಟಣದ ಹತ್ತಿರ ಮಿತ್ರಬಲದ ವ್ಯೂಹವನ್ನು ಭೇಧಿಸಿ ಅಲ್ಲಿಂದ ಯು ಪೆ ಸಿ ನವರಿಗೆ ನುಗ್ಗಿರುವವೆಂದು ಜರ್ಮನ ಪ್ರಕಟನೆಯಿಂದ ತಿಳಿದು ಬರುತ್ತದೆ

ವೈರಿಗಳ ಒಂದು ವಿಮಾನಶಕ್ತಿಯ ಮೇಲೆ ದಾಳಿಮಾಡಿ ಅದನ್ನು ನಾಶಗೊಳಿಸಲಾಯಿತು, ಪ್ಯಾರಿಸಿನ ಸಮೀಪದಲ್ಲಿರುವ ರೇಲ್ವೆ ರಸ್ತೆಗಳ ಮೇಲೆ ಜರ್ಮನ ವಿಮಾನಗಳು ದಾಳಿ ಮಾಡಿದವು ಒಂದೇ ವಿಮಾನಗೃಹದಲ್ಲಿ ನಿಂತಿದ್ದ ಸುಮಾರು ೨೦ ವಿಮಾನಗಳ ನಾಶವಾದವು

ಮೆನಿನ ಪಟ್ಟಣದ ಸಮೀಪದಲ್ಲಿ ಘನಘೋರ ಕಾಳಗವಾಗುತ್ತಿದೆಯೆಂದು ಫ್ರೆಂಚ ಯುದ್ಧ ಪ್ರಕಟನೆಯೊಂದು ತಿಳಿಸುತ್ತದೆ ಆದರೆ ಫ್ರೆಂಚ ಮತ್ತು ಮಿತ್ರಬಲದ ದಂಡುಗಳು ಅಲ್ಲಿ ವೈರಿಗಳ ದಾಳಿಯನ್ನು ತಡೆದಿರುವವಂತೆ ಅಲ್ಲಿ ಕಾಳಗವು ಅತಿಘೋರವಾಗಿದ್ದು ಜರ್ಮನರು ಜೀವದಾಶೆ ತೊರೆದು ಕಾದುತ್ತಿರುವರಂತೆ

ದಳಪತಿಗಳಲ್ಲಿ ಬದಲಾವಣೆ

ಜನರಲ್ ವೇಗ್ಯಾನರು ಜನರಲ್ ಗ್ಯಾಮೆಲಿನ್‌ರ ಸ್ಥಳದಲ್ಲಿ ಫ್ರೆಂಚ ಸೇನಾಪತಿಗಳಾಗಿ ನಿಯಮಿಸಲ್ಪಟ್ಟ ಮೇಲೆ ಸುಮಾರು ೧೫ ದಳಪತಿಗಳನ್ನು ಕೆಲಸದಿಂದ ದೂರ ಮಾಡಲಾಗಿದೆ ಗೃಹರಕ್ಷಣ ದಳಗಳ ದಳಪತಿಯಾದ ಸರ್ ವಾಲ್ಟರ ಕರ್ಕಿಯವರು ನಿವೃತ್ತರಾದುದರಿಂದ ಜ ಅಯರನ ಸಾಮಡರು ಅವರ ಸ್ಥಳದಲ್ಲಿ ನೇಮಿಸಲ್ಪಟ್ಟಿರುವರು

ಅಯರ್ಲಂಡಿನ ಮೇಲೆ ಜರ್ಮನಿಯ ಧಾಳಿ

ಅಯರ್ಲಂಡಿನ ಮೇಲೆ ಜರ್ಮನಿಯು ಧಾಳಿಮಾಡಬಹುದೆಂದು ಪಾರ್ಲಿಮೆಂಟಿನಲ್ಲಿ ಕೆಲವು ಸಭಾಸದರ ಅಭಿಪ್ರಾಯ. ಅಯರ್ಲಂಡಿನಲ್ಲಿ ಜರ್ಮನರು ವಿಶೇಷವಾಗಿ ಕೂಡಿಕೊಂಡಿದ್ದು ಮತ್ತು ಆಯರಿಶ ಕ್ರಾಂತಿಕಾರರಿಂದ ಚಳವಳಿಯು ಪ್ರಾರಂಭವಾಗಿದ್ದು ಈ ಪರಿಸ್ಥಿತಿಯ ಲಾಭಪಡೆದು ಜರ್ಮನಿಯು ಧಾಳಿಮಾಡಬಹುದೆಂದು ನಂಬಲಾಗಿದೆ

ಆಸ್ಟಂಡ ಬಂದರವೂ ಕೈವಶವಾಯಿತು

ಡಿಕ್ಸಮೂಡ, ಅರ್ಮೆಂಟೀಸ ಬೈಲ ಯುಲ ಮತ್ತ ಡಂಕರ್ಕದ ಪಶ್ಚಿಮಕ್ಕೆ ಒರ್ಗೆಸ ಎಂಬಲ್ಲಿದ್ದ ಬ್ರಿಟಿಷ ದಂಡುಗಳು ಸರ್ವನಾಶವಾಗುವ ಸಮಯ ಒದಗಿದೆಯೆಂದು ಆ ಪ್ರಕಟನೆಯಲ್ಲಿ ಹೇಳಲಾಗಿದೆ

ಜರ್ಮನರು ಆಸ್ಟಂಡವನ್ನು ವಶಪಡಿಸಿಕೊಂಡ ಡಿಕ್ಸಮೂಡದವರೆಗೆ ಬಂದಿರುವರಂತೆ ಕ್ಯಾಸಲ ಪಟ್ಟಣದ ಪೂರ್ವ ಭಾಗವು ತಮ್ಮ ವಶವಾಗಿದ್ದು ಇದರಿಂದ ಫ್ರಾನ್ಸ-ಬೆಲ್ಜಿಯಮ ಗಡಿನಾಡನ್ನು ದಾಟಿದಂತಾಯಿತೆಂದು ಜರ್ಮನ್ ಸೇನಾಧಿಪತಿಗಳು ಹೇಳುತ್ತಾರೆ

ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯೂ ಕಂಡು ಬರುವುದಿಲ್ಲ ಯುದ್ಧದ ಕಾವು ಇಳಿಯದೆ ಸತ್ಯಾಗ್ರಹ ಆಂದೋಲನವನ್ನು ಆರಂಭಿಸುವುದಿಲ್ಲವಾಗಿ ಮಹಾತ್ಮಾಜಿಯವರು ಹೇಳಿಕೆ ಹೊರಡಿಸಿದ್ದಾರೆ

ಭಾರತದ ರಕ್ಷಣಾ ಸಿದ್ಧತೆಗಳು ಸರಕಾರದಿಂದ ನಡೆಸಲ್ಪಡುತ್ತಿವೆ

ರಾಜಾಜಿಯವರು ಮೊನ್ನೆ ಮದ್ರಾಸಿನಲ್ಲಿ ಒಂದು ಭಾಷಣ ಮಾಡುತ್ತಾ ಅದರಲ್ಲಿ ಬ್ರಿಟನು ಭಾರತದ ವಿಷಯವಾಗಿ ಇಂದು ಯೋಗ್ಯ ವಿಚಾರವನ್ನು ಕೈಕೊಳ್ಳುವುದು ಅಗತ್ಯವೆಂದೂ, ಜನರ ಪ್ರತಿನಿಧಿ ಸರಕಾರ ವಿಡಬೇಕಾಗಿದೆಯಲ್ಲದೆ ಏಕಪ್ರಭುತ್ವವು ಸಲ್ಲದೆಂದೂ ಎಚ್ಚರಿಕೆ ಕೊಟ್ಟಿರುವರು

ಹಿಂದುಸ್ಥಾನದ ರಕ್ಷಣಾಸೈನ್ಯಗಳನ್ನು ಹೆಚ್ಚಿಸಲಿವೆ

ಒಂದು ಲಕ್ಷ ಜನರು ಬೇಕಾಗಿವೆ ವಿಮಾನ ದಳವು ನಾಲ್ಮಡಿಯಾಗಬೇಕು

ಹಿಂದುಸ್ಥಾನದ ರಕ್ಷಣಾರ್ಥವಾಗಿ ಈಗ ಇದ್ದ ದಳಗಳನ್ನು ಹೆಚ್ಚಿಸುವುದನ್ನು ಕುರಿತು ಇಂದು ರಾತ್ರಿ ಮಾನ್ಯ ಕಮಾಂಡರ್ ಇನ್ ಚೀಫ್‌ರವರು ಜನರಿಲ್ಲರಿಗೆ ಬ್ರಾಡ್‌ಕಾಸ್ಟ ಮೂಲಕ ಪ್ರಕಟಿಸಿದ್ದಾರೆ.

ಹಿಂದುಸ್ಥಾನದ ಸೈನ್ಯಕ್ಕೆ ಒಂದು ಲಕ್ಷ ಯಾ ಅದಕ್ಕೂ ಹೆಚ್ಚಿಗೆ ಜನರು ಬೇಕಾಗಿದ್ದಾರೆ ಟೆರಿಟೋರಿಯಲ್ ದಳಗಳನ್ನೂ ಬಡಕಾಯಿಸಬೇಕು ವಿಮಾನ ದಳವನ್ನೂ ನಾಲ್ಮಡಿ ಹೆಚ್ಚಿಸಬೇಕು ಈ ಒಗ್ಗೆ ಬೇಕಾದವರನ್ನು ಕರಬೇಕುವಾದ ವ್ಯವಸ್ಥೆ ಮಾಡಲಿದೆಯೆಂಬದಾಗಿ ಆ ಪ್ರಕಟಣೆಯ ತಾತ್ಪರ್ಯವಾಗಿತ್ತು

ಯುದ್ಧದ ಬಿಸಿ ಆರಬೇಕು

ಅಲ್ಲಿಯವರೆಗೆ ಶಾಸನ ಭಂಗವಿಲ್ಲ ಗಾಂಧೀಜಿಯವರ ಹೇಳಿಕೆ

ಕೂಡಲೇ ಶಾಸನ ಭಂಗವನ್ನೇಕೆ ಸರುಮಾಡಕೂಡದು ಎಂದು ಡಾ| ಲೋಹಿಯಾರವರು ಕೇಳಿದ್ದ ಪ್ರಶ್ನೆಗೆ ಗಾಂಧೀಜಿಯವರು ಇಂದಿನ ಹರಿಜನದಲ್ಲಿ ಉತ್ತರವೀಯುತ್ತಾ 'ಯುದ್ಧದ ಬಿಸಿಯು ಇಳಿಯುವವರೆಗೂ ಭಾರತವು ತನ್ನ ಸ್ವಾತಂತ್ರ್ಯ ಸಾಧನವನ್ನು ನಿಧಾನಿಸಬೇಕು' ಎಂದು ತಿಳಿಸಿದ್ದಾರೆ

ಡಿಫೆನ್ಸ್ ಆಫ್ ಇಂಡಿಯಾ ಕಾನೂನು

ಅಮಿನ್ ಹೈದರ್ ಖಾನರ ದಸ್ತಗಿರಿ

ಆಕ್ಷೇಪಣಾರ್ಹವಾದ ಭಾಷಣ ಮಾಡಿದರೆಂದ ಡಿಫೆನ್ಸ ಆಫ್ ಇಂಡಿಯಾ ಆಕ್ಟ ಪ್ರಕಾರ ಬೊಂಬಾಯಿ ಪ್ರಾಂತ ಕಾಂಗ್ರೆಸ್ ಕಮಿಟಿಯ ಸದಸ್ಯರಾದ ಮಿ| ಅಮಿನ್ ಹೈದರ್ ಖಾನರು ನಿನ್ನೆ ರಾತ್ರಿ ದಸ್ತಗಿರಿಯಾದರು

ಶ್ರೀ ಬಂಕಿಂ ಮುಖರ್ಜಿಯವರ ದಸ್ತಗಿರಿ

ಬಂಗಾಳ ಲೆ| ಅಸೆಂಬ್ಲಿ ಸದಸ್ಯರೂ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಮಾಜಿ ಅಧ್ಯಕ್ಷರೂ ಆದ ಶ್ರೀ ಬಂಕಿಂ ಮುಖರ್ಜಿಯವರು ಡಿಫೆನ್ಸ್ ಓಫ್ ಇಂಡಿಯಾ ಆಕ್ಟ ಪ್ರಕಾರ ದಸ್ತಗಿರಿಯಾಗಿದ್ದಾರೆ

ಶ್ರೀ ದಿನಕರ ದೇಸಾಯರ ದಸ್ತಗಿರಿ

ಬೊಂಬಾಯಿನ ಲೇಬರ್ ಮುಖಂಡರೂ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರು ಆದ ಶ್ರೀ. ದಿನಕರ ದೇಸಾಯರು ಅಂಕೋಲಾದಲ್ಲಿ ಡಿಫೆನ್ಸ ಆಫ್ ಇಂಡಿಯಾ ಆಕ್ಟ ಪ್ರಕಾರ ದಸ್ತಗಿರಿಯಾದರೆಂದು ಇಲ್ಲಿಗೆ ಸುದ್ದಿ ಬಂದಿದೆ,

ಮಹಾತ್ಮಾಜಿಯವರ

ಕಾಂಗ್ರೆಸು ವರ್ಕಿಂಗ್ ಕಮಿಟಿ

ತಾ ೧೬ರಿಂದ ವಾರ್ಧಾದಲ್ಲಿ ಸೇರುವದೆಂದು ತಿಳಿದುಬರುತ್ತದೆ

ಪಂಡಿತನೆಹರುಗಳು

ಗಡಿನಾಡಿನ ಪ್ರವಾಸಕ್ಕೆ ತೆರಳಿದ ಪಂಡಿತ ನೆಹರುಗಳು ಅಬ್ದುಲ ಗಫಾರ್ ಖಾನರೊಡನೆ ಶ್ರೀನಗರಕ್ಕೆ ಬಂದು ಮುಂದೆ ಕಾಶ್ಮೀರಕ್ಕೆ ತೆರಳಿದರು ಅಲ್ಲಲ್ಲಿಯೂ ಅವರಿಗೆ ಪ್ರಚಂಡ ಸ್ವಾಗತಗಳಾದುವು

ಭಾರತದಲ್ಲಿ ಜರ್ಮನರ ಬಂಧನ

ಕಲ್ಕತ್ತೆಯಲ್ಲಿ ಸುಮಾರು ೮೫ ಜರ್ಮನರನ್ನೂ ಸಿಮ್ಲಾದಲ್ಲಿ ಒಬ್ಬ ಡಾಕ್ಟರನನ್ನೂ ಮಧುರೆಯಲ್ಲಿ ಇಬ್ಬರು ಜರ್ಮನ್ ಪಾದ್ರಿಗಳನ್ನೂ ಬಂಧಿಸಿರುವರು

ಅಲ್ಲಹಾಬಾದಿನ ಫಾರ್ವರ್ಡ ಬ್ಲಾಕಿನ ಸೆಕ್ರೆಟರಿ ಶ್ರೀ ಪದ್ಮಕಾಂತ ಮಾಳವ್ಯರನ್ನೂ ಶ್ರೀ ಕೇದಾರನಾಥ ಮಾಳವ್ಯರನ್ನೂ ರಕ್ಷಣಾ ಕಾನೂನಿನ ಮೇರೆಗೆ ದಸ್ತಗಿರಿ ಮಾಡಲಾಗಿದೆ

ಇಂಡಿಯಾ ರಕ್ಷಣೆಯ ಕಾನೂನಿನ ಮೇರೆಗೆ ಕೋಲಾಪುರದಲ್ಲಿ ಶ್ರೀ ಗಳಾದ ವಿಷ್ಣುಪಂತ ಪಾಟೀಲ್, ಮಧೂರ್, ಎಂ ಡಿ ವಿಭೂತಿ ಮೊದಲಾದವರನ್ನೂ ಕಲ್ಲಿಕೋಟೆಯಲ್ಲಿ ಶ್ರೀ ಗಳಾದ ಎ ಶೇಖರನ್, ಒ ಟಿ ಜೋಸೆಫ್ ಮೊದಲಾದವರನ್ನೂ ಕೈದುಮಾಡಲಾಗಿದೆ

ಗಯಾ ಜಿಲ್ಲೆಗಾಗಿ ಸತ್ಯಾಗ್ರಹ ಶಿಕ್ಷಣ ಶಿಬಿರವೊಂದು ಆಚಾರ್ಯ ಕೃಪಲಾನಿಯವರಿಂದ ಈಚೆಗೆ ತೆರೆಯಲ್ಪಟ್ಟಿದೆ. ಪಂಡಿತ ಜವಾಹರಲಾಲ ನೆಹರುಯವರಿಂದ ಲಾಹೋರಿನಲ್ಲಿ ತೆರೆಯಲಾದ ಇದೇ ಶಿಬಿರವು ಇದೀಗ ತನ್ನ ಕಾರ್ಯಭಾರ ಪೂರೈಸಿದೆ. ಸಿಂಧೀ ಸತ್ಯಾಗ್ರಹ ಶಿಕ್ಷಣ ಶಿಬಿರವೊಂದು ಇಂದು ನಾಳೆಯಲ್ಲಿಯೇ ತೆರೆಯಲ್ಪಟ್ಟು ಸುಮಾರು ೧೦೦ ಮಂದಿಗೆ ಅಲ್ಲಿ ಒಂದು ವಾರದ ಶಿಕ್ಷಣದೊರಕಲಿದೆ

ಫಿಲಿಪಿನ್ ದ್ವೀಪದಲ್ಲಿ ಭಾರತೀಯರ ಹೆಜ್ಜೆ

ಮನುವಿಗೆ ಗೌರವವು ಸಂದಿತು

ಇಂದಿನ ಸಮಾನ ಸ್ವಾತಂತ್ರ್ಯ ಸಂಗ್ರಾಮ

ದೂರದ ಫಿಲಿಪಿನ್ ದ್ವೀಪನಿವಾಸಿಗರು ಸ್ವಲ್ಪಮಾತ್ರ ಸ್ವಾತಂತ್ರ್ಯವನ್ನು ಹೊಂದಿಕೊಂಡಿದ್ದಾರೆ. ಇಂದು ಆ ಜನರು ತಮ್ಮ ಬಹುಕಾಲದ ಹಿಂದಿನ ಭಾರತೀಯ ಸಂಬಂಧವನ್ನು ಸ್ಮರಿಸುತ್ತಿರುವರು. ಆ ಇಡೀ ದ್ವೀಪದಲ್ಲಿ ಭಾರತದ ಸಂಪರ್ಕದ ಕುರಿತು ಉತ್ಸಾಹವು ಹೆಚ್ಚಾಗಿ ಹರಡಿದೆ.

ಫಿಲಿಪಿನ್ ದ್ವೀಪದ ಜನರು ತಮ್ಮ ಭಾಷೆಗೂ, ಸಂಸ್ಕೃತಿಗೂ ಯಾವ ರೀತಿಯ ಸಂಬಂಧವಿದೆಯೆಂದು ಕಂಡು ಹುಡುಕುತ್ತಿದ್ದಾರೆ ಎಂದು ಶ್ರೀ ಗಿರಿಧರನ್ ಯಾಶದೇವರು ಒಂದು ಲೇಖನದಲ್ಲಿ ಬರೆಯುತ್ತಾರೆ. ಭಾರತದ ವರ್ತಮಾನ ಮತ್ತು ವಿಷಯಗಳಿಗಾಗಿ ಅಲ್ಲಿನ ಪತ್ರಿಕೆಗಳು ಬಹಳ ಉತ್ತೇಜನವೀಯುತ್ತಿವೆ. ಬಹು ಕಾಲದ ಹಿಂದೆ ಭಾರತಕ್ಕೂ ಫಿಲಿಪಿನ್ನಿಗೂ ಇದ್ದ ಸಂಬಂಧವನ್ನು ಸಂಶೋಧಿಸುವುದರಲ್ಲಿ ಅಲ್ಲಿನ ವಿದ್ವಾಂಸರು ನಿರತರಾಗಿದ್ದಾರೆ. ಗಾಂಧಿಜಿ ಪಂಡಿತನೆಹರು ಮತ್ತು ಕವಿ ಠಾಗೂರರ ಹೆಸರು ಅವರಲ್ಲಿ ಬಹಳ ಪ್ರಸಿದ್ಧವಾಗಿರುವ ಹೆಸರುಗಳಾಗಿವೆ.

ಭಾರತದ ಸಂಬಂಧ

ಫಿಲಿಪಿನರು ತಮ್ಮ ಮನೆಗಳಲ್ಲಿ ಮತ್ತು ಬಹಿರಂಗ ಸ್ಥಳದಲ್ಲಿಯೂ ಕೂಡಾ ಭಾರತದ ಮುಖಂಡರ ಹೆಸರುಗಳನ್ನು ತಮ್ಮ ದೇಶದ ಸ್ವಾತಂತ್ರ್ಯದ ಸಲುವಾಗಿ ಕಾದಾಡಿದ ವೀರರ ಹೆಸರಿನೊಡನೆ ಭಕ್ತಿಯಿಂದಲೇ ಉಚ್ಚರಿಸುತ್ತಾರೆ.

ಭಾರತದ ಕಾಲ ಹೆಜ್ಜೆಯು ಇಂದು ಆ ದೂರದ ಫಿಲಿಪಿನ್ ದ್ವೀಪಗಳಲ್ಲಿ ಕಾಣಸಿಗುತ್ತದೆ. ಪ್ರಾಚೀನ ಫಿಲಿಪನರ ಜೀವನ ರೀತಿಯು ಪ್ರತಿಯೊಂದು ವಿಧದಲ್ಲಿಯೂ ಭಾರತೀಯ ಜೀವನ ರೀತಿಯನ್ನೇ ಅನುಸರಿಸಿದೆ. ಪ್ರಾಚೀನ ಕಾಲದಲ್ಲಿ ಫಿಲಿಪಿನ್ನರು ತಮ್ಮ ತಲೆಗೆ ಮುಂಡಾಸು ಕಟ್ಟಿಕೊಳ್ಳುತ್ತಿದ್ದರು.

ಮನುವಿನ ಪ್ರತಿಮೆ

ಕೆಲವು ವರ್ಷಗಳ ಹಿಂದೆ ಫಿಲಿಪಿನ್ನರು ಒಂದು ನ್ಯಾಯವಿಧಾಯಕ ಸಭೆಯನ್ನು ಕಟ್ಟಿಸಿದರು. ಆ ಕಟ್ಟಡದಲ್ಲಿ ಅವರು ಪ್ರಾಮುಖ್ಯ ನ್ಯಾಯನೀತಿ ವಿಶಾರದರ ನಾಲ್ಕು ವಿಗ್ರಹಗಳನ್ನು ಪ್ರತಿಷ್ಠಿದರು! ಆ ನಾಲ್ಕು ಜನರಲ್ಲಿ ಭಾರತೀಯ ಸ್ಮೃತಿಶಾಸನ ಕಾರನಾದ ಮನುವಿನ ವಿಗ್ರಹವೂ ಒಂದಾಗಿದೆ!

ಸುಲಿಗೆ ಮಾಡಲಿಲ್ಲ

ಒಂದು ದೇಶದ ಜನರು ಇನ್ನೊಂದು ದೇಶಕ್ಕೆ ಹೋಗಿ ಅಲ್ಲಿನ ಸೊತ್ತನ್ನು ಸುಲಿಗೆಮಾಡುವುದೇ ಹೆಚ್ಚಾಗಿ ಇಂದು ಕಂಡು ಬರುತ್ತದೆ. ಆದರೆ ಒಂದಾನೊಂದು ಕಾಲದಲ್ಲಿ ಭಾರತದಿಂದ ಫಿಲಿಪಿನ್ ದೇಶಕ್ಕೆ ಹೋದಜನರು ಅಲ್ಲಿ ಸುಲಿಗೆಯನ್ನು ಮಾಡಲು ಆರಂಭಿಸಲಿಲ್ಲ. ಬದಲಾಗಿ ತಮ್ಮ ಸಂಸ್ಕೃತಿಯನ್ನು ಆ ದೇಶದ ಜನರಿಗೆ ಧಾರೆಯೆರೆದು ಅವರ ಜ... ವನ್ನು ಉದಾತ್ತಗೊಳಿಸಲು ಪ್ರ... ಸಿದರು. ಇಂದೂ ಫಿಲಿಪಿನರೂ ಹಿ... ಮನುವಿನಂತೆ ಇಂದಿನ ಗಾಂಧಿಜಿಯನ್ನು ಆರಾಧಿಸುತ್ತಿದ್ದಾರೆ.

ಹೀಗೆ ಪೂರ್ವದಲ್ಲಿ ಭಾರತವು ... ಹತ್ತನ್ನು ಹಿಡಿದಿದ್ದಿತ್ತು ಎಂಬುದು ... ವಾಗಿ ತಿಳಿದು ಬರುವುದಾದರೂ ... ಹಿಡಿದ ವಸಾಹತುಗಳನ್ನು ಸುಲಿಗೆ... ಡುವ ಯೂರೋಪಿನ ರಾಷ್ಟ್ರಗಳ... ಯನ್ನು ಭಾರತವು ಅನುಸರಿಸದೆ ಒ... ವಿಶಿಷ್ಟವಾದ ರೀತಿಯಿಂದ ತಾವು ಗ... ವಸಾಹತ್ತಿನಲ್ಲಿ ಸುಖಶಾಂತಿಗಳನ್ನು ... ಟುಮಾಡಲು ಯತ್ನಿಸಿದ್ದಿತು. "ಭಾ... ಮತ್ತು ಫಿಲಿಪಿನ್ ದ್ವೀಪಗಳ ಸಂ... ದಿಂದ ರಕ್ತದ ಕಾಲುವೆ ಹರಿ... ಕಾಳಗವಾಗಿಲ್ಲ; ದ್ವೇಷ ಹುಟ್ಟ... ಎಂದು ಅಲ್ಲಿನ ಗ್ರಂಥಕರ್ತರೊಬ್ಬ... ಬರೆದಿರುವರು.

ಹೊಸಯುಗದ ದರ್ಶನ

ಆ ಲೇಖಕರೇ ಹೀಗೆಂದೂ ಬರೆದಿರುವ...

"ಹಿಂದಿನ ಅಳಿಸದ ಕಥೆಯು ನ... ಸ್ಮೃತಿಗೆ ಬರುತ್ತಿದೆ ಮುಂದಿನ ಭವಿ... ತೆಯನ್ನು ನಮಗೆ ತೋರಿಸುತ್ತದೆ. ಭ... ತದ ಸಾಂಸ್ಕೃತಿಕ ವೈಭವ ಉದಾತ್ತ ... ಗಳ ಮಧುರ ಸಂಪರ್ಕವು ಮುಂದೆಯ... ನಮಗೆ ಆಗಬೇಕಾಗಿದೆ. ಭಾರತೀಯ... ಮತ್ತು ಫಿಲಿಪಿನರೂ ತೀವ್ರ ಮಾರ್ಪಾ... ಗುವ ಸಂಧಿಕಾಲದಲ್ಲಿದ್ದಾರೆ. ಎರ... ದೇಶದವರೂ ಸ್ವಾತಂತ್ರ್ಯಕ್ಕಾಗಿ ... ಭರವಸೆಗಳಿಂದ ಹೋರಾಡುತ್ತಾ... ಇಂತಹ ಸಮಾನ ಕಾರ್ಯಸಾಧನೆ... ಕಾಲದಲ್ಲಿ ಉಭಯ ದೇಶಗಳ... ಅನ್ಯೋನ್ಯ ಪ್ರೀತಿಹಸ್ತವನ್ನು ನೀಡ... ಕಾಗಿದೆ"



PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ನೋಟಗಳು!

ದಿನದಿಂದ ದಿನಕ್ಕೆ ಜರ್ಮನರು ಮುಂದೆ ಮುಂದೆ ಆಕ್ರಮಿಸುತ್ತಾ ಬರುವ ಮಹಾಸಾಹಸವನ್ನು ತೋರಿಸುತ್ತಿರುವಾಗ, ಬ್ರಿಟನಿನ ರಕ್ಷಣಾ ಯತ್ನಗಳೂ ಮೊದಲಿಗಿಂತ ಹೆಚ್ಚು ಹೆಚ್ಚಾಗಿ ಈಗ ಆಗುತ್ತಿವೆಯೆಂದು ಸುದ್ದಿ.

—ಜನರಲ್ ಸರ್ ಎಡ್ಮಂಡ್ ಅಯರ್ನ್ ಸೈಡರು ಬ್ರಿಟನಿನ ರಕ್ಷಣಾಧಿಕಾರದಲ್ಲಿ ನಿಯುಕ್ತರಾಗಿರುವರು. ಪೂರ್ವ ಕರಾವಳಿಯು ಷಟ್ಟಣ ...ಬೆಲ್ಜಿಯಮ್ ಮತ್ತು ಡಚ್ಚ್ ಕರಾವಳಿಗಳಿಂದ ಆಕ್ರಮಿಸಲು ಸುಲಭಸಾಧ್ಯವಾಗಿರುವವುಗಳಾದುದರಿಂದ ಅಲ್ಲಿನ ಪ್ರಜೆಗಳೆಲ್ಲಾ ಊರು ಬಿಟ್ಟು ಬೇರೆ ಕಡೆ ಹೋಗಿರುತ್ತಾರೆ. ಸಂಶಯವುಳ್ಳ ಅನೇಕ ಶತ್ರು ಗುಪ್ತಚಾರರನ್ನೂ, ದಂಗೆಗಾರರನ್ನೂ ಸೆರೆಹಿಡಿಯಲಾಗಿದೆ.

—ಸರ್ ಒಸ್ವಾಲ್ಡ್ ಮೊಸ್ಲೆವ್ ಮೊದಲಾದ ಅನೇಕ ಪ್ಯಾಸಿಸ್ಟರನ್ನು ಬಂಧನದಲ್ಲಿರಿಸಲಾಗಿದೆ.

ಹೀಗೆ ಬ್ರಿಟಿಷರು ಜರ್ಮನಿಯ ದಾಳಿಯನ್ನು ತಡೆಯಲು ಪ್ರಚಂಡ ಯತ್ನಗಳನ್ನು ಮಾಡುತ್ತಿರುವರು.

◆

ಕೆಲ ಸಮಯದ ಹಿಂದೆ ಭಾರತಕ್ಕೆ ಆಗಮಿಸಿದ ಬ್ರಿಟಿಷ್ ರಾಜನೀತಿಜ್ಞರಾದ ಸರ್ ಸ್ಟಾಫೋರ್ಡ್ ಕ್ರಿಪ್ಸರವರು, ಭಾರತೀಯ ಸ್ವಾತಂತ್ರ್ಯದ ವಿಷಯವಾಗಿ ಮೊನ್ನೆ ಬ್ರಿಟನಿನಲ್ಲಿ ಒಂದು ಉದಾತ್ತ ಭಾಷಣವಿತ್ತರು.

"ಇಂದು ಭಾರತದಲ್ಲಿರುವ ಪ್ರತಿಯೊಬ್ಬನೂ, ವಿದೇಶೀಯರ ಆಡಳಿತಕ್ಕಾಗಿ ಬೇಸರಪಟ್ಟು ಸ್ವಾತಂತ್ರ್ಯವನ್ನು ಹೊಂದಲು ಆತುರಗೊಂಡಿದ್ದಾನೆ. ನಾನು ಹಲವು ಜನರನ್ನು ಸಂದರ್ಶಿಸಿದೆ. ಅವರೆಲ್ಲರೂ ಸ್ವಾತಂತ್ರ್ಯಕಾತುರರೇ ಆಗಿರುವರು. ಕಾಂಗ್ರೆಸಿನ ಪ್ರಭಾವವು ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಪ್ರಸರಿಸಿದೆ. ಇಂತಹ ಸಂದರ್ಭದಲ್ಲಿ ಭಾರತದ ಪರಿಸ್ಥಿತಿಯಿಂದ ನನ್ನ ಹೃದಯವು ಅತ್ಯಂತ ವಿಚಲಿತವಾಗಿದೆ. ಮುಂದಕ್ಕೆ ಬ್ರಿಟಿಷರ ನೊಗದ ಭಾರದಿಂದ ಅದು ಬಿಡುಗಡೆ ಹೊಂದಿಯೇ ತೀರುವುದು."

—ಬ್ರಿಟಿಷ್ ರಾಜನೀತಿಜ್ಞರೇ ಹೀಗೆ ಹೃದಯ ಕರಗುವ, ರೀತಿಯಲ್ಲಿ ಬ್ರಿಟನಿಗೆ ಉಪದೇಶಿಸಲು ಆರಂಭಿಸಿದ್ದಾರೆ.

◆

ಪ್ರಸಿದ್ಧ ಕ್ರಿಕೆಟ್ ಆಟಗಾರರಾದ ವಿಜಯನಗರದ ಮಹಾರಾಜ ಕುಮಾರರು ಬ್ರಿಟಿಷ್ ಪ್ರಧಾನರಿಗೆ ಒಂದು ಎಚ್ಚರಿಕೆಯ ತಂತಿ ಕಳುಹಿಸಿದ್ದಾರೆ.

—"ಬಂಧಮುಕ್ತವಾದ ಸ್ವತಂತ್ರವಾದ ಭಾರತವು ನಾಜಿಗಳ ವಿರುದ್ಧವಾಗಿ ಬ್ರಿಟನಿಗೆ ಸಹಾಯಮಾಡುವುದು ಅವಶ್ಯವಾಗಿದೆ. ಭಾರತವು ಸ್ವತಂತ್ರವಾಗಲು ಅವಕಾಶ ಕೊಡದಿದ್ದರೆ, ಅದು ಬ್ರಿಟನಿನ ಗೌರವಕ್ಕೆ ಪ್ರಬಲವಾದ ಕೊರತೆಯಾಗಿದೆ. ಅಧಿಕಾರಾಣ ನೀವು ನಿಮ್ಮ ಉದಾತ್ತವ ನನ್ನಿಂದ ಭಾರತವು ತತ್‍ಕ್ಷಣವೇ ಯಾವ ಶರತೂ ಇಲ್ಲದೆ, ಸರಲರೀತಿಯಿಂದಲೇ, ಸ್ವತಂತ್ರ ನಿರ್ಣಯಾಧಿಕಾರವುಳ್ಳದ್ದನ್ನಾಗಿ ಮಾಡಿಬಿಡಬೇಕು. ಮುಂದಿನ ರಾಜ್ಯಘಟನೆಯು ವಿದೇಶೀಯರ ಮಧ್ಯಸ್ಥಿಕೆಯಿಲ್ಲದ ಭಾರತೀಯರಿಂದಲೇ ರಚಿತವಾಗಬೇಕು."

—ಭಾರತಕ್ಕೆ ಬೆನ್ನು ಹಾಕಿ ಕಣ್ಮುಚ್ಚಿ ಗೊರಕೆ ಹೊಡೆದು ನಿದ್ರಿಸುತ್ತಿರುವ ಬ್ರಿಟಿಷ್ ಸಿಂಹಕ್ಕೆ ಕ್ರಿಕೆಟ್‌ಗಾರರ ಈ ಬಾಂಡರಿ ಪೆಟ್ಟು ಹೋಗಿ ತಾಗುವುದರಿಂದ ಎಚ್ಚರವಾಗುವುದುಂಟೆ?

◆

ರಾಮಗಢದ ನಿರ್ಣಯವನ್ನು ಕಾಂಗ್ರೆಸು ಈಗ ಬದಲಾಯಿಸಿರುವುದೆಂದು ಇಂಗ್ಲಿಷ್ ಪತ್ರಿಕೆಯೊಂದು ಬರೆದಿದೆ.

—ಅದನ್ನು ಅಲ್ಲಗಳೆಯುತ್ತಾ ರಾಷ್ಟ್ರಪತಿ ಅಜಾದರು, ರಾಮಗಢ ನಿರ್ಣಯವನ್ನು ಬದಲಾಯಿಸುವ ಅಗತ್ಯವು ನಮಗೆ ಬೀಳಲಿಲ್ಲ. ಕಳೆದ ಮಾರ್ಚಿಯಲ್ಲಿ ಪರಿಸ್ಥಿತಿಯು ಹೇಗಿತ್ತೋ ಇಂದೂ ರಾಷ್ಟ್ರದಲ್ಲಿ ಅದೇ ಪರಿಸ್ಥಿತಿಯು ಉಳಿದಿದೆ ಎಂದು ಹೇಳಿರುವರು.

—ಕಾಂಗ್ರೆಸು ಸ್ವಾತಂತ್ರ್ಯಕ್ಕಾಗಿ ಪ್ರಯತ್ನ ಮಾಡುವುದರಲ್ಲಿ ಹಿಂದೆ ಬೀಳವುದೆಂದು ಆಂಗ್ಲೇಯರು ಈಗ ತಿಳಿದುಕೊಂಡಿರುವರೋ ಏನೋ?

◆

ಮಹಮ್ಮದಲಿ ಜಿನ್ನರು ಹೊಸತೊಂದು ಸಂಶೋಧನೆಯನ್ನು ಕಂಡು ಹುಡುಕಿದ್ದಾರೆ.

—ಮಹಾತ್ಮಾಜಿಯವರು ಇಂದು ಸತ್ಯಾಗ್ರಹವನ್ನು ಆರಂಭಿಸಲು ಹಿಂಜರಿಯುವುದು ಮುಸ್ಲಿಂ ಲೀಗಿನ ಪ್ರಭಾವದ ಫಲವಾಗಿ ಎಂದು ಅವರ ಹೇಳಿಕೆ!

—ಪಂಡಿತ ಜವಾಹಿರಲಾಲರು ಬ್ರಿಟನಿನ ಕಷ್ಟಕಾಲದಲ್ಲಿ ಸರಕಾರವನ್ನು ಪೇಚಿನಲ್ಲಿರಿಸಲು ಆಂದೋಲನ ಆರಂಭಿಸುವುದು ಭಾರತದ ಗೌರವಕ್ಕೆ ಕುಂದು ಎಂದು ಕೊಟ್ಟ ಹೇಳಿಕೆಗೆ ಬ್ರಿಟಿಷ ರಾಜನೀತಿಜ್ಞರಿಂದ ದೊರಕಿದ ಹೊಗಳಿಕೆಯನ್ನು ಕೇಳಿ ಜಿನ್ನರಿಗೆ ಸಹಿಸಲಾಗದೆ, ಕಾಂಗ್ರೆಸು ಇಂದು ಸತ್ಯಾಗ್ರಹವನ್ನು ಆರಂಭಿಸದಿರಲು ಲೀಗಿನ ಧೋರಣೆಯೇ ಕಾರಣವೆಂಬ ಪ್ರಕಟಣೆಹೊರಡಿಸಿ ನೆಹರುಗಳ ಮನ್ನಣೆಯಲ್ಲಿ ತಮಗೂ ಪಾಲಿರಲೆಂದು ಹೀಗೊಂದು ಹೊಸ ಶೋಧನೆ ಮಾಡಿರಬಹುದೆ?

◆

ಕಾಂಗ್ರೆಸಿನಿಂದ ಬಹಿಷ್ಕೃತವಾದ ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಮೊನ್ನೆ ಡಾಕ್ಕಾದಲ್ಲಿ ಸೇರಿ, ಹೋರಾಟವನ್ನು ತೀವ್ರಗೊಳಿಸುವ ಠರಾವೊಂದನ್ನು ಮಂಜೂರು ಮಾಡಿತು.

—ಎರಡು ತಿಂಗಳ ಹಿಂದೆಯೇ ಬೋಸರು ಹೋರಾಟವನ್ನು ಆರಂಭ ಮಾಡಿದ್ದರಷ್ಟೆ? ಅದರ ಹೋರಾಟದಿಂದ ಆದ ಫಲವೆಂದರೆ ಬೋಸ್ ಲೀಗ್ ಒಪ್ಪಂದವೊಂದೇ!

—ಮುಂದಕ್ಕೆ ಹೋರಾಟವನ್ನು ಹೆಚ್ಚಿಸಬೇಕೆನ್ನುವ ಬೋಸರ ಅಭಿಪ್ರಾಯವೇನೋ ತಿಳಿಯುವುದಿಲ್ಲ. ಅಖಿಲ ಭಾರತದಲ್ಲಿಯೂ ಕಾಂಗ್ರೆಸಿನ ವಿರುದ್ಧವಾಗಿ ಬೋಸ್-ಲೀಗ್ ಹೋರಾಟವನ್ನು ಆರಂಭಿಸುವುದೇ ಅದಾಗಿರಬಹುದೆ?

—ಬೋಸರು ಯಾವುದನ್ನು ಆರಂಭಿಸಿದರೂ ಅದಕ್ಕಾಗಿ ನಾವು ಇಂದು ಆಶ್ಚರ್ಯಪಡಬೇಕಿದ್ದಿಲ್ಲ. ಸ್ಥಿರತೆಯೆಂಬುದು ಅವರಲ್ಲಿ ಇಂದು ಕಾಣಸಿಗದ ಗುಣ!

—ಏಕೆಂದರೆ, ಬೊಂಬಾಯಿಯಲ್ಲಿ ಕಾಂಗ್ರೆಸು ಮಂತ್ರಿಮಂಡಳವು ಕೈಕೊಂಡ ಮದ್ಯಪಾನ ಬಹಿಷ್ಕಾರಕ್ಕಾಗಿ, ಮಂತ್ರಿಮಂಡಳವನ್ನು ರಾಷ್ಟ್ರಪತಿಯಾಗಿದ್ದಾಗ ಹೊಗಳಿದವರೇ, ರಾಷ್ಟ್ರಪತಿ ಪದವಿಯಿಂದ ಕೆಳ ಬಿದ್ದ ಮೇಲೆ, ಮದ್ಯಪಾನವನ್ನು ನಿಷೇಧಿಸಿದಕ್ಕಾಗಿ ಬೊಂಬಯಿ ಮಂತ್ರಿಮಂಡಳವನ್ನು ದೂರಲೂ ಬೋಸರು ಹಿಂಜರಿಯಲಿಲ್ಲ.

ಇಂದಿನ ಮಕ್ಕಳೇ ಮುಂದಿನ ಜನಾಂಗ!

ಮುಂದಿನ ಜನಾಂಗಕ್ಕೆ ವಿಜ್ಞಾನವೇ ನಿಧಿ!

ಅಕ್ಷರ ವಿಜ್ಞಾನ

6ನೇ 7ನೇ 8ನೇ ತರಗತಿಗಳಿಗೆ

ನೂತನ ಪಾಠಪಟ್ಟಿಗೆ ಅನುಸಾರವಾಗಿ
ಶ್ರೀ ಎಸ್ ರಾಮಕೃಷ್ಣಾಚಾರ್ ಬಿ. ಎ. ಎಲ್. ಟಿ.
ಇವರಿಂದ ವಿರಚಿತವಾದುದು.
ಹಳ್ಳಿಯ ಶಾಲೆಗಳಲ್ಲೂ ಮಾಡಿತೋರಿಸಲು ಸುಲಭವಾಗುವಂತಹ
ಪ್ರಯೋಗಗಳನ್ನು ಒಳಗೊಂಡಿದೆ
ಸಚಿತ್ರವಾದ ವಿವರಣೆಗಳನ್ನೂ ಕೊಡಲ್ಪಟ್ಟಿದೆ
ಬಡ ವಿದ್ಯಾರ್ಥಿಗಳು ಪಡಕೊಳ್ಳಲು ಸಾಧ್ಯವಾಗುವಂತೆ ಕ್ರಯವು
ಅತ್ಯಂತ ಕಡಿಮೆಯಾಗಿರಿಸಿದೆ!
ಜೂನ್ ಮೊದಲನೆಯ ವಾರದಲ್ಲಿ ಪ್ರಕಟವಾಗಲಿದೆ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.



ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮ ಔಷಧ ಮತ್ತು ಬಲವರ್ಧಕ

ತಯಾರಿಸುವವರು

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಜೀವನಜ್ಯೋತಿಗಳು:

ಶ್ರೀ ವಿದ್ಯಾರಣ್ಯರು

ವಿದ್ವಾನ್ ಶ್ರೀ. ಕೆ. ಕೆ. ಶೈ.

[illegible] ಇಹದಲ್ಲಿಯೇ ಸುಖ [illegible] ಹಲವು ಮಂದಿ, ಸಂಸಾರವು ಅಸಾರವೆಂದು ಪರಮಾರ್ಥವನ್ನು ತಿಳಿಯಲು ಪರಲೋಕದ ಕಡೆಗೇ ದೃಷ್ಟಿ ನೋಡುವವರು ಇನ್ನು ಕೆಲವರು. ಹೀಗೆ ಇವರಿಬ್ಬರಲ್ಲಿ ಒಂದು ಪಕ್ಷಕ್ಕೆ ಇನ್ನೊಂದು ಪಕ್ಷದವರ ಸಹಾನುಭೂತಿ ಸಿಗುವುದಿಲ್ಲ. ಪ್ರಪಂಚದಲ್ಲಿ ಹುಟ್ಟಿದ್ದೇ ಪಾಪವಲ್ಲ; ಪರಮಾರ್ಥದ, ಪರಲೋಕದ ಕುರಿತು ವಿಚಾರಮಾಡುವುದೂ ಪ್ರಪಂಚ ಜೀವನಕ್ಕೆ ಬಾಹಿರವಲ್ಲ; ಎಂಬ ಈ ಜೀವನ ಸಾಮರಸ್ಯವನ್ನು ತಂದುಕೊಳ್ಳುವುದು ಕೇವಲ ಮಹಾಪುರುಷರಿಗೆ, ಉದಾತ್ತ ಜ್ಞಾನಿಗಳಿಗೆ ಮಾತ್ರ ಸಾಧ್ಯ! ಅದರಲ್ಲಿಯೂ ಪ್ರಾಪಂಚಿಕ ಪಾರಮಾರ್ಥಿಕ ವಿಚಾರಗಳನ್ನು ಕಾರ್ಯರೂಪದಲ್ಲಿ ಸಮರಸತೆಯಿಂದ ಜತೆಗೂಡಿಸಿ ತೋರಿಸಿದವರು ಸಿಗುವುದು ದುರ್ಲಭ! ಹದಿಮೂರನೆಯ ಶತಮಾನದ ಕೊನೆಯ ಭಾಗದಲ್ಲಿ ಅಂತಹರು ವಿಭೂತಿ ಪುರುಷರೊಬ್ಬರು ನಮ್ಮ ಕನ್ನಡ ನಾಡಿನಲ್ಲಿಯೇ ಜನ್ಮವೆತ್ತಿದರು. ಅವರೇ ಶ್ರೀ ವಿದ್ಯಾರಣ್ಯರು!

ತುಂಗಭದ್ರಾ ನದಿಯ ತೀರದಲ್ಲಿ ಪಂಪೆಯೆಂಬ ಪುಣ್ಯಕ್ಷೇತ್ರದಲ್ಲಿ ಧಾರ್ಮಿಕನೂ, ಸುಶೀಲನೂ, ವಿದ್ವಾಂಸನೂ ಆದ ಮಾಯಣನೆಂಬ ಬ್ರಾಹ್ಮಣನಿಗೆ ಆತನ ಧರ್ಮಪತ್ನಿ ಶ್ರೀಮತಿಯ ಬಸುರಲ್ಲಿ ಮಾಧವನು ಜನ್ಮವೆತ್ತಿದನು. ವಿದ್ಯಾರಣ್ಯರು ಎಂಬುದು ಮಾಧವನ ಸನ್ಯಾಸ ಜೀವನದ ಹೆಸರು. ಸಾಯಣ, ಭೋಗನಾಥ ಎಂಬೀರ್ವರು ಮಕ್ಕಳು ಆ ದಂಪತಿಗಳ ಬಸುರಲ್ಲಿ ಮಾಧವನ ನಂತರ ಹುಟ್ಟಿದರು. ಈ ಮೂರ್ವರು ಮಕ್ಕಳಿಗೂ ತಂದೆಯು ಉತ್ತಮ ಶಿಕ್ಷಣವನ್ನು ಕೊಟ್ಟನು. ಚತುರ ಬುದ್ಧಿಯುಳ್ಳ ಮಾಧವನು ತನ್ನ ಜ್ಞಾನಪಿಪಾಸೆಯನ್ನು ತೃಪ್ತಿಪಡಿಸುವ ಸಲುವಾಗಿ, ತಮ್ಮಂದಿರೊಡನೆ ಅನೇಕ ವಿದ್ವಾಂಸರ ಬಳಿಯಲ್ಲಿ ವ್ಯಾಸಂಗ ಬೆಳೆಸಿದನು. ಸಕಲ ಶಾಸ್ತ್ರಗಳಲ್ಲಿಯೂ ಪಾರಂಗತನಾದನು. ಶ್ರೇಷ್ಠ ವಿದ್ವಾಂಸನಾದನು.

ಸಕಾಲದಲ್ಲಿ, ಮಾಧವನು ವಿವಾಹಿತನಾಗಿ ಗೃಹಸ್ಥನಾದನು. ತನ್ನ ತಮ್ಮ ಸಾಯಣನೊಡನೆ ಮಹಾ ಮಹಾ ಗ್ರಂಥಗಳನ್ನು ಬರೆದನು. ತನ್ನ ಬಳಿಗೆ ಬಂದ ಅನೇಕ ಶಿಷ್ಯರಿಗೆ ಜ್ಞಾನದಾನವನ್ನು ಮಾಡಿದನು. ಮಾಧವನ ಪ್ರೇರಣೆಯಿಂದ ಸಾಯಣನೂ ಅನೇಕ ಸಂಸ್ಕೃತ ಗ್ರಂಥಗಳಿಗೆ ವ್ಯಾಖ್ಯಾನವನ್ನು ರಚಿಸಿದನು. [illegible] ಗ್ರಂಥವೆಂದು ಮಾಧವನು ಸಾಯಣನಿಗೆ ಉತ್ಸಾಹವನ್ನೀಯುತ್ತಾ [illegible] ಮಾರ್ಗದರ್ಶಕನಾಗಿದ್ದನು. ಸಾಯಣನು ಅಣ್ಣನ ಈ ಉತ್ಸಾಹದಿಂದ [illegible] ಸಹಾಯ ಪಡೆದುಕೊಂಡು ಜಗದ್ವಿಖ್ಯಾತವಾದ ಅನೇಕ ಗ್ರಂಥಗಳನ್ನು ವೇದಭಾಷ್ಯಾದಿಗಳನ್ನೂ ಬರೆದನು.

ಆಗ, ರಾಜಕೀಯದಲ್ಲಿ ಅತ್ಯಂತ ಕೋಲಾಹಲವುಂಟಾಗಿತ್ತು! ಉತ್ತರವನ್ನು ಸೂರೆ ಮಾಡುತ್ತಾ ಕೆಲವು ದುಷ್ಟರಾದ [illegible] ರಾಜರು ದಕ್ಷಿಣಕ್ಕೂ ಕಾಲಿಟ್ಟಿದ್ದರು. ಜನರ ಸ್ವಾತಂತ್ರ್ಯವನ್ನು ಸೂರೆ ಮಾಡುತ್ತಿದ್ದರಲ್ಲದೆ ಹಿಂದೂ ಧರ್ಮವನ್ನು ಸಂಸ್ಕೃತಿಯನ್ನೂ [illegible] ನಾಶಗೊಳಿಸುತ್ತಿದ್ದರು. ಮಲಿಕಾಫರ ಮೊದಲಾದವರ [illegible] ಅನೇಕ ಅನ್ಯಾಯಗಳೇ ನಡೆದುಹೋದವು. ಹೀಗೆ ತನ್ನ ಸುತ್ತುಮುತ್ತಲೂ ಆಗುತ್ತಿರುವ ದೇಶದ ಪ್ರಕ್ಷೋಭ ಪರಿಸ್ಥಿತಿಯು ಮಾಧವನ ಮನಸ್ಸು ಸಹಜವಾಗಿ ಕೆರಳಿತು! ದೇಶವು ಸ್ವಾತಂತ್ರ್ಯವನ್ನು ಕಳೆದುಕೊಂಡು, ನಿರ್ವೀರ್ಯವಾಗುತ್ತಾ ಬರುವುದನ್ನು ಕಂಡು ಆತನಿಗೆ ಸಹಿಸಲಾರದ ಸಂಕಟವಾಯಿತು. ನಾಡಿನುನ್ನತಿಗಾಗಿ ತನ್ನ ಸೇವೆಯನ್ನು ಸಲ್ಲಿಸಲು ಮಾಧವನು ಬದ್ಧಕಂಕಣನಾದನು!

ಹುಕ್ಕ ಬುಕ್ಕರೆಂಬ ಅಣ್ಣ ತಮ್ಮಂದಿರು [illegible] ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮುಂದೆ ಬಂದಿದ್ದರು. ಮಾಧವನು, ಅವರಿಗೆ ಪ್ರೋತ್ಸಾಹವಿತ್ತನು. ತನ್ನ ಅಪೂರ್ವ ಬುದ್ಧಿಶಕ್ತಿಯಿಂದ ಅವರನ್ನು ಸ್ವಾತಂತ್ರ್ಯ ಸಂಗ್ರಾಮದ ಯೋಗ್ಯ ಮಾರ್ಗದಲ್ಲಿ ಮುನ್ನಡಿಸಿದನು. ತನ್ನ ಸ್ಫೂರ್ತಿಯಿಂದ ಮಾಧವನು ದೇಶದ ಜನರನ್ನು ಅನ್ಯಾಯದ ಎದುರು ಒಕ್ಕಟ್ಟಿನಿಂದ ಇದಿರಾಗಿ ನಿಲ್ಲುವಂತೆ ಹುರಿದುಂಬಿಸಿದನು. ಹುಕ್ಕಬುಕ್ಕರು ಈ ಸಹಾಯದಿಂದ ಮತ್ತಷ್ಟು ಬಲಶಾಲಿಗಳೂ ಸಮರ್ಥರೂ ಆಗಿ [illegible] ಎದುರಿಸಿ ವಿಜಯಶಾಲಿಗಳಾಗುತ್ತಾ ಬಂದರು.

ಮಾಧವನು ತನ್ನ ತಪಃ ಪ್ರಭಾವದಿಂದ ರಾಜ್ಯ ಸ್ಥಾಪನೆಗಾಗಿ ದೇವೀ ಭುವನೇಶ್ವರಿಯನ್ನು ಪ್ರಾರ್ಥಿಸಿ ಸುವರ್ಣ ವೃಷ್ಟಿಯನ್ನು ಸುರಿಸಿಕೊಂಡನೆಂದು ಒಂದು ಪ್ರವಾದವಿದೆ! ಮಹಾತ್ಮರ ಜೀವನದಲ್ಲಿ ಇಂತಹ ಪ್ರವಾದಗಳು ವಿಶೇಷವಲ್ಲ. ದೇಶೋದ್ಧಾರದಂತಹ ಉತ್ತಮ ಕಾರ್ಯದಲ್ಲಿ ತೊಡಗಿದವರಿಗೆ ಸುವರ್ಣ ವೃಷ್ಟಿಯಂತೆ ಧನ ಸಹಾಯವು ಸಿಗುವುದು ಸಾಧ್ಯವೆಂಬುದನ್ನು ನಾವು ಇಂದಿನ ನಮ್ಮ ಕಣ್ಣ ಮುಂದಿನ ಹಲವು ನಿದರ್ಶನಗಳಿಂದಲೇ ಅರಿತುಕೊಳ್ಳಬಹುದಾಗಿದೆ!

ಕರ್ನಾಟಕ ರಾಜ್ಯವು ಹಂಪೆಯಲ್ಲಿ ಸ್ಥಾಪಿತವಾಯಿತು! ಹಕ್ಕನಿಗೆ ರಾಜ್ಯಪಟ್ಟವನ್ನು ಮಾಧವನು ಕಟ್ಟಿದನು. ದಿನದಿಂದ ದಿನಕ್ಕೆ ಈ ರಾಜ್ಯವು ವಿಸ್ತರಿಸುತ್ತಾ ಬಂತು. 'ವಿಜಯನಗರ ಸಾಮ್ರಾಜ್ಯ'ವೆಂದು ಅದು ಪ್ರಸಿದ್ಧವಾಯಿತು. ಚೆದರಿ ಛಿದ್ರವಾಗಿದ್ದ ಕರ್ನಾಟಕವು ವಿಜಯನಗರ ಸಾಮ್ರಾಜ್ಯದಲ್ಲಿ ಒಂದೇ ಕೊಡೆಯ ನೆರಳಲ್ಲಿ ಒಟ್ಟುಗೂಡಿತು! ಕರ್ನಾಟಕ ಸಾಮ್ರಾಜ್ಯದ ಸ್ಥಿರ [illegible] ಯಾಗಿ ಮಾಧವನೇ ರಾಜಕಾರ್ಯ [illegible] ಯಶಸ್ವಿಯಾಗಿ ಹಲಗಾಲ ನಡೆಸಿದನು.

ಸ್ವಾರ್ಥ, ಅಧಿಕಾರ, ಸುಖಗಳ ಲಾಲಸೆಗಳಿಲ್ಲದೆ ಮಾಧವನು ಸ್ವತಃ ರಾಜ್ಯಸೂತ್ರಗಳನ್ನು ನಡೆಸಿ ವಿಜಯನಗರ ಸಾಮ್ರಾಜ್ಯದ ಕೀರ್ತಿಯನ್ನು ದಶದಿಕ್ಕುಗಳಲ್ಲಿಯೂ ಪಸರಿಸಿದನು. ಅನೇಕ ಸಮಯಗಳಿಂದ ಅನ್ಯರ ತುಳಿತದಿಂದ ನೊಂದಿದ್ದ ಜನರ ಹೃದಯದಲ್ಲಿ ಸುಖವೂ ಶಾಂತಿಯೂ ನೆಲೆಗೊಂಡಿತು! ರಾಜಕೀಯ ಚಟುವಟಿಕೆಗಳೆಲ್ಲ ಮಾಧವನಿಗಾದರೂ ಅದೇ ಉದ್ದೇಶವಿತ್ತಲ್ಲದೆ ಅನ್ಯಥಾ ಆಶೆಗಳಿರಲಿಲ್ಲ. ಹೀಗೆ ಮಾಧವನು 'ಕರ್ನಾಟಕ ಸಿಂಹಾಸನಸ್ಥಾಪನಾಚಾರ್ಯ'ನೆಂದು ಪ್ರಖ್ಯಾತಿ ಪಡೆದನು.

ವೇದ ವಿವರಣೆಯಿಂದ ತೊಡಗಿ, ರಾಜ್ಯಸ್ಥಾಪನೆಯ ವರೆಗೆ ಮಾಧವನ ವರ್ಚಸ್ಸು ಎಲ್ಲೆಲ್ಲೂ ಅಸ್ಖಲಿತವಾಗಿತ್ತು. ಹೀಗೆ [illegible] ಸಮರ್ಥರು ಸಿಗುವುದು ದುರ್ಲಭವೇ ಸರಿ! ನಮ್ಮ ಕರ್ನಾಟಕ ಮಾತೆಯು ಮಾತ್ರ ಒಮ್ಮೆ ಅಂತಹ ವಿಭೂತಿ ಪುರುಷನನ್ನು ಪಡೆದಳು!

ಮಾಧವನು ಕೊನೆಗೆ ಸನ್ಯಾಸವನ್ನು ಅಂಗೀಕರಿಸಿ ಶೃಂಗೇರಿಯಲ್ಲಿ ಜಗದ್ಗುರುವಾಗಿ ನೆಲಸಿದನು. ಜಗದ್ಗುರುವಾಗಿ ಶ್ರೀ ವಿದ್ಯಾರಣ್ಯರೆಂದು ಹೆಸರು ಬಂತು. ಜಗದ್ಗುರು ಪೀಠದಲ್ಲಿದ್ದು ನಿರಂತರ ಗ್ರಂಥ ಲೇಖನವೇ ಮೊದಲಾದ ಪವಿತ್ರಕಾರ್ಯಗಳಲ್ಲಿಯೂ ತೀರ್ಥಾಟನೆಯಲ್ಲಿಯೂ ಜೀವನವನ್ನು ಸಾರ್ಥಕಗೊಳಿಸಿದರು. ಹೀಗೆ ತಮ್ಮ ಜೀವನವನ್ನು ಪವಿತ್ರಗೊಳಿಸಿ ಶ್ರೀ ವಿದ್ಯಾರಣ್ಯರು [illegible] ರಲ್ಲಿ ಸಮಾಧಿಸ್ಥರಾದರು.

ಅನೇಕ ಆಕ್ರಮಣಗಳಿಂದ ಛಿದ್ರಛಿದ್ರವಾಗಿ ಸಾತಂತ್ರ್ಯವನ್ನು ಕಳೆದುಕೊಂಡ ಕರ್ನಾಟಕ ಸಾಮ್ರಾಜ್ಯವನ್ನು ಇಂದು ಪುನಃ ಒಂದುಗೂಡಿಸಲು ಇನ್ನೊಮ್ಮೆ ಅಂತಹ ವಿಭೂತಿ ಪುರುಷರೇ ಜನ್ಮವೆತ್ತಿ ಬಂದು ಕನ್ನಡಿಗರನ್ನು ಎಚ್ಚರಿಸಬೇಕಾಗಿದೆ!

ಶ್ರೀ ವಿದ್ಯಾರಣ್ಯರ ನೆನಹು ಕನ್ನಡಿಗರಿಗೆ ಜ್ಞಾನ ಸ್ಫೂರ್ತಿಗಳನ್ನು ಕೊಟ್ಟು ತಮ್ಮ ಜೀವನವನ್ನು ಸಾಧಿಸಲು ಸಹಾಯ ಮಾಡುವಷ್ಟು ಪ್ರಭಾವಶಾಲಿಯಾಗಿದೆ.

A well-rounded programme of
SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours. Study them, join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried purely cosmopolitan Institution.

The Canara Industrial & Banking Syndicate, Limited.

Head Office:—UDIPI, S. India.

ಚೈನಾದಲ್ಲಿ ಜಪಾನಿಗೆ ಜಯದಾಸೆಯಿಲ್ಲ!

ಗೋರಿಲ್ಲಾ ಸೈನಿಕರ ಉಪಟಳ!

ನಿರ್ವೀರ್ಯವಾದ ಜಪಾನು!

ಯೂರೋಪಿನಲ್ಲಿ ಯುದ್ಧವು ಆರಂಭವಾದ ಮೇಲೆ ನಮಗೆ ಪೂರ್ವದಲ್ಲಿ—ಚೀನಾದಲ್ಲಿ ನಡೆವ ಯುದ್ಧದ ವಿಷಯ ಸುದ್ದಿ ಬರುವುದೇ ಕಡಿಮೆಯಾಗಿದೆ. ಇಂದು ಜಪಾನು ಚೈನದ ಕೆಲಭಾಗಗಳಲ್ಲಿ ಆಕ್ರಮಿಸಿಕೊಂಡಿದ್ದರೂ, ಅವರು ಚೈನೀಯರೊಡನೆ ಹಲವು ವರ್ಷಗಳಿಂದ ನಡೆಸಿ ಬರುತ್ತಿರುವ ಹೋರಾಟವು ಕುತೂಹಲಜನಕವಾಗಿದೆ. ಚೀನದ ದಳಪತಿ ಚಿಯಾಂಗ್ ಕೈಶೇಕರು ಇಂದು ಗೋರಿಲ್ಲಾ ಯುದ್ಧಕ್ರಮವನ್ನು ಅಂಗೀಕರಿಸಿರುವರು. ಈ ಯುದ್ಧ ಕ್ರಮದಿಂದ ತಮ್ಮ ವೈರಿಗಳನ್ನು ಕೊನೆಗೊಮ್ಮೆ ಸಂಪೂರ್ಣ ಸದೆಬಡಿದು ಬಿಡುವೆವೆಂದು ಚೈನೀಯರು ಖಂಡಿತ ಮಾಡಿದ್ದಾರೆ.

ಚೈನಾ ಜಪಾನುಗಳೊಳಗೆ ಇಂದೂ ಭಯಂಕರ ರೀತಿಯ ಕಾದಾಟವು ನಡೆಯುತ್ತಾ ಇದೆ. ಭಯಂಕರ ವೈರಿಯೊಡನೆ ಹೋರಾಡುವ ಚೈನವು ಇಂದು ಹೊಸತೊಂದು ರೀತಿಯ ಯುದ್ಧವನ್ನೇ ಆರಂಭಿಸಿದೆ. ಮರದೆಯೊಳಗೆ ನಿಂತು, ತನಗೆ ಅನುಕೂಲ ಸಿಕ್ಕಿದಾಗ ಶತ್ರುವಿನ ಮೇಲೆ ಬಿದ್ದು ಕೊರಳು ಹಿಸುಕಿ ಬಿಡುವ ಈ ಯುದ್ಧವೇ ಇಂದಿನ ಚೈನೀಯರು ಅನುಸರಿಸುವ 'ಗೋರಿಲ್ಲಾ' ಯುದ್ಧವಾಗಿದೆ.

ಹೊಸ ಹುರುಪು; ಒಂದೇ ಬುದ್ಧಿ

ಚೈನವು ವಿಜಯ ಹೊಂದುವ ತನಕ, ಚೈನೀಯರೊಳಗೆ ಯಾವ ರೀತಿಯ ಅಂತಃಕಲಹ, ಗೃಹಕಲಹ, ಜಾಡ್ಯ, ಬೇಸರಗಳೂ ಇರಲಾರವು. ಚಿಯಾಂಗ್ ಕೈಶೇಕರು ದಳಪತಿಯಾಗಿ ಮುಂದೆ ಬಂದ ಮೇಲೆ ಚೈನೀಯರು ತಮ್ಮ ಜನಾಂಗದ ರಕ್ಷಣೆಗಾಗಿ ಒಂದೇ ಜನ, ಒಂದೇ ಮನ, ಒಂದೇ ಉಸಿರಾಗಿ ಒಕ್ಕಟ್ಟಿನಿಂದಿರುತ್ತಾರೆ. ಜಪಾನನ್ನು ತಾವು ಎದುರಾಡಿ ಹಿಂದಟ್ಟಲು ಅಸಮರ್ಥರಾದರೆ, ಮುಂದಕ್ಕೆ ತಮ್ಮ ನೆಲೆಯೇ ಸ್ಥಿರವಲ್ಲವೆಂದು ಚೈನೀಯರು ಚೆನ್ನಾಗಿ ತಿಳಿದುಕೊಂಡು ದೃಢ ನಿಶ್ಚಯದಿಂದ ಕಾದಾಡುತ್ತಾರೆ.

ದೀರ್ಘ ಯುದ್ಧ

ಜಪಾನರು ತಮ್ಮಿಂದ ಸೆಳೆದುಕೊಂಡ ಸ್ಥಳಗಳನ್ನು ತಿರಿಗಿ ಸ್ವಾಧೀನಪಡಿಸಲು ಚೈನೀಯರು ಇಂದು ಹೋರಾಡುತ್ತಿಲ್ಲ. ಇನ್ನೊಂದು ರೀತಿಯಿಂದ ತಮಗೆ ಈ ದೇಶದಲ್ಲಿ ನಿಲ್ಲಲು ಸಾಧ್ಯವಿಲ್ಲವೆಂದು ತಿಳಿದು ಜಪಾನರೇ ಹಿಂದಕ್ಕೆ ಓಡಿಹೋಗುವಂತೆ ಚೈನೀಯರು ಕಾದುತ್ತಿದ್ದಾರೆ. ಚೈನದವರಿಗೆ ಬಹುಕಾಲ ಯುದ್ಧ ನಡೆದಲ್ಲಿ ಏನೂ ಅನಾನುಕೂಲಗಳಿಲ್ಲ. ಆದರೆ ಜಪಾನು ಬಹುಕಾಲದ ಯುದ್ಧದಿಂದ ಖಂಡಿತ ಕಂಗೆಡದಿರದು.

ಸರ್ವ ಪ್ರಶಾಂತಿ

ಮಂಚುಕೋ ಜಪಾನಿಯರ ವಶವಾಗಿ ಅವರ ೫೦೦,೦೦೦ ಸೈನಿಕರು ಅಲ್ಲಿರುವರಷ್ಟೆ? ಆದರೂ ಅದೇ ಸ್ಥಳದಲ್ಲಿಯೇ ಇಂದು ಯುದ್ಧವು ಸಾಗುತ್ತಿದೆ. ೧೯೧೦ರಲ್ಲಿ ಸ್ವಾಧೀನಪಡಿಸಿದ ಕೊರಿಯಾ ಎಂಬಲ್ಲಿ ಶಾಂತಿಯನ್ನು ರಕ್ಷಿಸಿಕೊಳ್ಳಬೇಕಾದರೆ ಕೇವಲ ೨೪,೦೦೦,೦೦೦ ಜನಸಂಖ್ಯೆಯಿರುವ ಆ ಸ್ಥಳಕ್ಕೆ ೩೫ ಮಿಲಿಯ ಸಂಖ್ಯೆಯುಳ್ಳ ಭಾರತದ ರಕ್ಷಣೆಗೆ ಇಂಗ್ಲಿಷರಿಟ್ಟಷ್ಟು ಸೈನ್ಯವೇ ಜಪಾನರಿಗೂ ಬೇಕಾಯಿತು. ಆದರೆ ವರ್ಷಂಪ್ರತಿ ಹೀಗೆ ಸ್ವಾಧೀನಪಡಿಸಿಕೊಂಡ ದೇಶದ ಭಾಗಗಳನ್ನು ಇಷ್ಟು ಖರ್ಚಿನಿಂದ ಕಾಪಾಡಿಕೊಳ್ಳಲು ಜಪಾನಿಗೆ ಸಾಧ್ಯವೆ?

ಮನುಷ್ಯ ಬಲ

ಚೈನದ ಯುದ್ಧವು ಇಂದು ಸಂಪೂರ್ಣ ಮನುಷ್ಯ ಬಲವನ್ನು ಹೆಚ್ಚಾಗಿ ಆಧರಿಸಿದೆ. ಚೈನೀಯರ ಯುದ್ಧವಾಡುತ್ತಿರುವ ಸ್ಥಳಗಳಲ್ಲಿ ೫೦೦,೦೦೦ ಸೈನಿಕರು ಇದ್ದಾರೆ. ೩೦೦,೦೦೦ ಜನರಿಂದ ಬೇರೆ ಬೇರೆ ಗೋರಿಲ್ಲಾ ಸೈನಿಕರ ಆಗಾಗ ಜಪಾನರಿಗೆ ಭಯಂಕರ ವಿಪತ್ತು ಕೊಡುತ್ತಾರೆ. ಟೆಲಿಗ್ರಾಮು ವಗೈರೆ ತುಂಡು ಮಾಡುವುದು, ಟೆಲಿಫೋನ್ ಮುರಿಯುವುದ, ಸಣ್ಣ ಸಣ್ಣ ಪಟ್ಟಣಗಳನ್ನು ಸುಡುವುದೇ ಇದೇ ಗೋರಿಲ್ಲಾ ಸೈನಿಕರ ಉಪಾಯವಾಗಿದೆ. ಇಂತಹ ಚೈನೀಯರ ಯುದ್ಧಕ್ರಮದಿಂದ ದಿನ ಹೋದಂತೆ ಜಪಾನು ಅತ್ಯಂತ ಕಷ್ಟಕ್ಕೆ ಒಳಗಾಗಿದೆ.

ಶಕ್ತಿ ಸವೆಯಿತು

ಜಪಾನ ತನ್ನ ಇಷ್ಟೆಲ್ಲ ಬಲವನ್ನೆಲ್ಲ ತೋರಿಸಿಬಿಟ್ಟಿದೆ. ಮುಂದೆ ಅದಕ್ಕಿಂತ ಹೆಚ್ಚಿನ ಶಕ್ತಿ ಅದಕ್ಕಿಲ್ಲ. ಚೈನವು ದುರ್ಬಲವಾಗಿದ್ದರೂ ದಿನದಿಂದ ದಿನಕ್ಕೆ ಶಕ್ತಿಯುತವಾಗುತ್ತಾ ಬರುತ್ತದೆ.

ಆರ್ಥಿಕ ಪರಿಸ್ಥಿತಿಯಲ್ಲಿ ಚೈನವು ಸಮರ್ಥವಾಗಿದೆ. ಚೈನದ ಐಶ್ವರ್ಯವು ಅಗಣಿತವಾಗಿದೆ. ಚೈನದ ಸ್ವಾತಂತ್ರ್ಯಕ್ಕಾಗಿ ಎಷ್ಟು ಹಣವನ್ನಾದರೂ ಚೈನೀಯರು ಒಟ್ಟುಗೂಡಿಸಲು ಸಿದ್ಧರಿದ್ದಾರೆ. ಆದರೆ ಜಪಾನು ಈಗಾಗಲೇ ಸಾಲದಿಂದ ಸಂಕಷ್ಟ ಪಡುತ್ತಿದೆಯೆಂದು ತಿಳಿದುಬರುತ್ತದೆ. ಜಪಾನು ಇಂದು ಸಂದಿಗ್ಧತೆಯಲ್ಲಿದೆ. ಈ ದೀರ್ಘ ಯುದ್ಧದಲ್ಲಿ ಜಪಾನಿಗೆ ಆದ ನಷ್ಟಕ್ಕೆ ಲೆಕ್ಕ ಮಿತಿಯಿರುವುದಿಲ್ಲ. ತನ್ನ ಸಾಮಾನುಗಳಿಗೆ ಬೇಕಾದ ಸಂಕೆಯೂ ಇಲ್ಲ. ಆದಾಗದೆ ಜಪಾನು ಹೇಗೆ ಆರ್ಥಿಕ ಮುಗ್ಗಟ್ಟಿನಿಂದ ಪಾರಾಗಬಹುದು?

ನಾವೆಲ್ಲವರೂ ಅದನ್ನು ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ. ಕುಟಿಕೂರಾ ಟಾಲ್ಕವು (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಅನುಸಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡು ಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಂ (Cuticura Talcum) ಒಡನೆ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ವಿಷಪ್ರಾಯವಾದ ಕಡಿತಗಳ ವಿಷಯ ಜಾಗರೂಕರಾಗಿರಿ

ಜಾಂಬಕನ್ನು ಸವರಿಸಿ ತೊಡಕನ್ನು ನಿವಾರಿಸಿರಿ

ಕ್ರಿಮಿಕೀಟಗಳಿಂದ ಕಡಿಯಲ್ಪಟ್ಟ ಗಾಯಗಳು, ಕಡಿತಗಳು ಭಯಂಕರವಾಗಿ ಬಾತು ವಿಷಪ್ರಾಯವಾಗಿ ಹಾನಿಯುಂಟಾಗುವುದು. ಆದುದರಿಂದ ಆ ತೊಡಕುಗಳನ್ನು ನಿವಾರಿಸುವ ವಿಷಹಾರಿ ಜಾಂಬಕನ್ನು ಸವರಿರಿ. ಜಾಂಬಕಿನಲ್ಲಿರುವ ಅಮೂಲ್ಯ ಔಷಧೀಯ ಗಿಡಮೂಲಿಕೆಗಳ ಎಣ್ಣೆಯು ನಿಮ್ಮ ನರನಾಡಿಗಳನ್ನು ಪ್ರವೇಶಿಸಿ ನೋವನ್ನು ನಿವಾರಿಸುತ್ತದೆ. ಬಾತುವಿಕೆಯನ್ನು ಗುಣಮಾಡುತ್ತದೆ. ಜಾಂಬಕು ಒಂದೂ ಕಲೆಯನ್ನುಂಟುಮಾಡದೇ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಜಾಂಬಕನ್ನು ರೂ 1 ಮತ್ತು ರೂ 2–4–0ರಂತೆ ಮಾರುತ್ತಾರೆ

ಏಜಂಟ್ —

ಮೆಸರ್ಸ್ ದಾಧಾ ಮೆಣ್ಸ್ ಕಂಪೆನಿ,
ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಜರ್ಮನಿಗೆ ಒದಗಿರುವ ಪ್ರಾಣಸಂಕಟ!

ಎಣ್ಣೆಯಿಲ್ಲದೆ ಯುದ್ಧವು ಸಾಧ್ಯವಿಲ್ಲ!

ಯುದ್ಧವನ್ನು ಕೊನೆಗಾಣಿಸಬೇಕೆಂಬ ಆಶೆ!

...ಇದೇ ಜುಲೈ ಆಗೋಸ್ಟಿನೊಳಗಾಗಿ ಮಹಾಯುದ್ಧವು ಮುಗಿಯುವುದೆಂದು ಹಿಟ್ಲರನು ಅನೇಕ ಬಾರಿ ಹೇಳಿದ್ದಾನೆ. ಅವನ ಈ ಮಾತಿನಲ್ಲಿ ಒಂದು ಒಳ ಅರ್ಥವಿದೆ. ಇನ್ನೆರಡು ತಿಂಗಳೊಳಗಾಗಿ ಮುಗಿಯುವ ಮಹಾಯುದ್ಧದಲ್ಲಿ ವಿಜಯಶ್ರೀಯು ತನ್ನ ಕೊರಳಿಗೆ ಜಯಮಾಲೆ ಹಾಕುವಳೆಂದು ಹಿಟ್ಲರ್ ಹೇಳುವುದಿಲ್ಲ. ಜಯಾಪಜಯಗಳನ್ನು ಈಗ ಊಹಿಸುವದು ಕಷ್ಟಸಾಧ್ಯ. ಅದು ಹೇಗಿದ್ದರೂ ಯುದ್ಧವಂತೂ ಶೀಘ್ರದಲ್ಲಿ ಮುಗಿಯಬೇಕಾಗಿದೆ. ಯಾಕೆಂದರೆ ದೀರ್ಘಕಾಲ ಯುದ್ಧ ಮಾಡಲಿಕ್ಕೆ ಬೇಕಾದಂತಹ ಎಣ್ಣೆಯ ಸಂಗ್ರಹವು ಜರ್ಮನಿಯ ಹತ್ತಿರ ಇರುವುದಿಲ್ಲ.

ಆಧುನಿಕ ಯುದ್ಧಗಳಲ್ಲಿ ಪ್ರಳಯಕಾರಿ ಶಸ್ತ್ರಾಸ್ತ್ರಗಳಿಗಿಂತ ಅವುಗಳನ್ನು ನಡೆಸಲಿಕ್ಕೆ ಎಣ್ಣೆ ಮತ್ತು ಜಿಡ್ಡುಗಳು ಇರುವದು ಅತ್ಯಂತ ಆವಶ್ಯಕವಾಗಿದೆ. ಎಣ್ಣೆಯ ಸಂಗ್ರಹವು ಇರುವದಿಲ್ಲವಾದರೆ ಎಂತೆಂಥ ಶಸ್ತ್ರೋಪಕರಣಗಳಿದ್ದರೂ ವ್ಯರ್ಥವೆ. ಇಂದು ಜರ್ಮನಿಯ ವಿಮಾನಗಳು ಟ್ಯಾಂಕುಗಳು, ಫಿರಂಗಿಗಳು ಇತ್ಯಾದಿ ಕೊಲ್ಲುವ ಸಾಧನಗಳು ಮಿತ್ರರಾಷ್ಟ್ರಗಳ ವಶ ಇರುವದಕ್ಕಿಂತ ಮೀರಿ ಇರಬಹುದು. ಆದರೆ ಎಣ್ಣೆ ಇರುವದಿಲ್ಲವಾದ್ದರಿಂದ ಅವುಗಳೆಲ್ಲ ಮೂಲೆಪಾಲಾಗುವ ಸಂಭವವುಂಟು. ಜಗತ್ತಿಗೆ ಬೇಕಾದ ಎಣ್ಣೆಯನ್ನು ಮುಖ್ಯವಾಗಿ ಅಮೆರಿಕ, ರಸ್ಯ ಮತ್ತು ವೆನೆಜೂಲಿಯಾಗಳು ಒದಗಿಸಿ ಕೊಡುವವು. ಈ ರಾಷ್ಟ್ರಗಳು ತಮ್ಮ ಎಲ್ಲಾ ಎಣ್ಣೆಯನ್ನು ಯುದ್ಧಾಸಕ್ತ ರಾಷ್ಟ್ರಗಳಿಗೆ ಕೊಟ್ಟರೂ ಯುದ್ಧವು ಬೇಗ ಮುಗಿಯಬೇಕಾಗಿದೆ. ಯಾಕೆಂದರೆ ಯುದ್ಧಾಸಕ್ತ ರಾಷ್ಟ್ರಗಳ ಎಣ್ಣೆ ಖರ್ಚು ಅಪರಿಮಿತವಾಗಿರುವುದು.

ಜರ್ಮನಿಯ ಎಣ್ಣೆ ಸಂಗ್ರಹ

೧೮೬೦ರಿಂದ ಈವರೆಗಿನ ಜರ್ಮನಿಯ ಯುದ್ಧನೀತಿಯು ಇತರ ದೇಶಗಳಿಗೆ ಹೋಗಿ ಯುದ್ಧ ಮಾಡುವುದಾಗಿದೆ. ಹೀಗಾದ್ದರಿಂದ ಯುದ್ಧದ ಕಷ್ಟನಷ್ಟವು ಜರ್ಮನಿಗೆ ಆಗಬೇಕಾದಷ್ಟು ಇದುತನಕ ಆಗಿಲ್ಲ. ಆದರೆ ಈ ಯುದ್ಧದ ಸಂಗತಿ ಹಾಗಲ್ಲ. ಆಧುನಿಕ ಯುದ್ಧವು ಕೇವಲ ರಣಕ್ಷೇತ್ರಗಳಲ್ಲಿ ಮಾತ್ರ ನಡೆಯುತ್ತಿರುವದಿಲ್ಲ. ವಿಮಾನಗಳ ಮೂಲಕ ಆಕಾಶದಲ್ಲಿ ನಡೆಯುವ ಯುದ್ಧವಾದ್ದರಿಂದ ಅದು ಎಲ್ಲಿಯೂ ನಡೆಯಬಹುದಾಗಿದೆ. ಯುದ್ಧದಲ್ಲಿ ಸೇರಿರದ ಶಾಂತ ಪ್ರಜೆಗಳು ಕೂಡ ಯುದ್ಧದ ಕಷ್ಟನಷ್ಟಗಳನ್ನು ಅನುಭವಿಸಬಹುದಾಗಿದೆ. ೧೯೩೮ರಲ್ಲಿ ಜರ್ಮನಿ ೨೯೦೦೦೦೦ ಟನ್ ಎಣ್ಣೆ ಪದಾರ್ಥಗಳನ್ನು ತನ್ನಲ್ಲಿಯೇ ತಯಾರಿಸಿಕೊಂಡಿತು. ಜರ್ಮನಿಯಲ್ಲಿ ಪೆಟ್ರೋಲು ತಯ್ಯಾರಿಸುವ ಕ್ಷೇತ್ರಗಳು ಬಹಳ ಕಡಿಮೆಯಾಗಿವೆ. ಹೀಗಿದ್ದರೂ ಶಾಂತಿಯ ಕಾಲದಲ್ಲಿ ಜರ್ಮನಿಯಲ್ಲಿ ೬,೦೦೦,೦೦೦ರಿಂದ ೭,೦೦೦,೦೦೦ ಟನ್ ತನಕ ಎಣ್ಣೆ ಪದಾರ್ಥಗಳು ಖರ್ಚಾಗುತ್ತವೆ. ಅದರಲ್ಲಿ ನೇಕಡಾ ೬೦ರಷ್ಟು ವಿದೇಶಗಳಿಂದ ಆಮದಾಗಬೇಕು. ಹೀಗೆ ೧೯೩೮ರಲ್ಲಿ ಜರ್ಮನಿ ೪,೯೫೮೦೦೦ ಟನ್ ಪೆಟ್ರೋಲು ಮತ್ತು ಇತರ ಎಣ್ಣೆ ಪದಾರ್ಥಗಳನ್ನು ವಿದೇಶಗಳಿಂದ ತರಿಸಿತು. ಈ ಆಮದು ವರ್ಷವರ್ಷ ಹೆಚ್ಚುತ್ತಾ ಬಂದಿದೆ. ೧೯೩೮ರಲ್ಲಿ ಜರ್ಮನಿ ತನ್ನಲ್ಲೇ ತಯ್ಯಾರಿಸಿದ ಮತ್ತು ವಿದೇಶಗಳಿಂದ ತರಿಸಿದ ಒಟ್ಟು ಎಣ್ಣೆ ಪದಾರ್ಥಗಳು ೫,೫೦೦,೦೦೦ ಟನ್ ಆಗಿತ್ತು. ಇದರಿಂದ ಖರ್ಚಾಗಿ ಉಳಿದ ಎಣ್ಣೆ ಪದಾರ್ಥಗಳು ಕೇವಲ ೧,೦೦೦,೦೦೦ ಟನ್ ಆಗಿರಬಹುದು. ಆದ್ದರಿಂದ ಜರ್ಮನಿಯ ಹತ್ತಿರ ಬಹಳ ದೊಡ್ಡ ಎಣ್ಣೆ ಸಂಗ್ರಹವು ಇರುವುದಿಲ್ಲವೆಂಬುದು ನಿಸ್ಸಂದೇಹವಾಗಿದೆ. ಈ ಮಾತು ಜಿಡ್ಡು ಪದಾರ್ಥಗಳಿಗೂ ಅನ್ವಯಿಸುತ್ತದೆ.

ಹೊಸ ವೈಜ್ಞಾನಿಕ ಕ್ರಮಗಳಿಂದ ಜರ್ಮನಿಯಲ್ಲಿ ಎಣ್ಣೆ ಮತ್ತು ಜಿಡ್ಡುಗಳು ತಯ್ಯಾರಾಗುತ್ತವೆ ಎಂದು ಹೇಳುವದಾದರೂ ಈ ಮಾತು ಒಪ್ಪತಕ್ಕದ್ದಾಗಿರುವದಿಲ್ಲ. ಯಾಕೆಂದರೆ ಈ ಕೃತ್ರಿಮ ಉಪಾಯಗಳಿಗೆ ಅವುಗಳನ್ನು ತಯಾರಿಸಲಿಕ್ಕೆ ಖರ್ಚು ಅಪಾರವಾಗಿರುವುದು. ಆ ಉಪಾಯಗಳಿಂದ ಆಗುವ ಉತ್ಪತ್ತಿ ಬಹಳ ಕಡಿಮೆ ಇರುತ್ತದೆ. ಆದರೂ ಕೂಡ ಯುದ್ಧ ನಡೆದ ಮೊದಲಿನ ಆರು ತಿಂಗಳುಗಳಲ್ಲಿ ಯುದ್ಧವು ಅಷ್ಟು ಭಯಂಕರ ರೂಪವನ್ನು ತಾಳದೆ ಇದ್ದಾಗ— ಆಗಲೇ ೨೦,೦೦೦,೦೦೦ ಟನ್ ಎಣ್ಣೆ ಪದಾರ್ಥಗಳು ಜರ್ಮನಿಯಲ್ಲಿ ಖರ್ಚಾಗಿದ್ದಿತೆಂದು ಹೇಳಲಾಗುತ್ತಿದೆ. ಮತ್ತೆ ಈಗ ಆ ಖರ್ಚು ಯಾವ ಪ್ರಮಾಣದಲ್ಲಿ ಬೆಳೆದಿರಬಹುದೆಂಬುದನ್ನು ಸುಲಭದಲ್ಲಿ ಆಲೋಚಿಸಬಹುದು.

ಮಿತ್ರರಾಷ್ಟ್ರಗಳ ಅನುಕೂಲತೆ

ಯುದ್ಧ ನಡೆಯುವಾಗಲೂ ಮಿತ್ರರಾಷ್ಟ್ರಗಳು ತಮಗೆ ಬೇಕಾದ ಎಣ್ಣೆ ಪದಾರ್ಥಗಳನ್ನು ಇತರ ದೇಶಗಳಿಂದ ತರಿಸಿ ಕೊಳ್ಳಬಹುದು. ಎಣ್ಣೆ ಪದಾರ್ಥಗಳನ್ನು ತಯ್ಯಾರಿಸುವ ದೊಡ್ಡ ರಾಷ್ಟ್ರ ಅಮೇರಿಕದ ಪೂರ್ಣ ಸಹಾಯ ಸಹಾನುಭೂತಿಗಳನ್ನು ಮಿತ್ರರಾಷ್ಟ್ರಗಳಿಗೆ ಪ್ರಾಪ್ತವಾಗಿದೆ. ಅಮೆರಿಕವಲ್ಲದೆ ಇತರ ರಾಷ್ಟ್ರಗಳು ಕೂಡ ಮಿತ್ರರಾಷ್ಟ್ರಗಳಿಗೆ ಎಣ್ಣೆಗಳನ್ನು ಒದಗಿಸಿ ಕೊಡುವವು. ನಾಝಿ ಉಪದ್ರವದಿಂದ ಪಾರಾಗಲಿಕ್ಕೆ ಮಿತ್ರರಾಷ್ಟ್ರಗಳಂತೆ ಪ್ರಪಂಚದ ಇತರ ರಾಷ್ಟ್ರಗಳು ಕೂಡ ಪ್ರಯತ್ನಿಸಬೇಕಾಗಿದೆ.

ಜರ್ಮನಿಯ ಪ್ರಾಣಸಂಕಟ

ರುಮೇನಿಯವು ಎಣ್ಣೆ ತಯಾರಿಸುವ ಒಂದು ಚಿಕ್ಕ ರಾಷ್ಟ್ರ. ಅದಕ್ಕಾಗಿ ಜರ್ಮನಿ ರುಮೇನಿಯದಲ್ಲಿ ಚತುರೋಪಾಯಗಳನ್ನು ಹೂಡಿದೆ. ರುಮೇನಿಯದ ಎಣ್ಣೆ ಜರ್ಮನಿಗೆ ದೊರೆಯುವುದೆಂಬುದು ಸಂದೇಹಾಸ್ಪದವಾಗಿದೆ. ತನ್ನ ಕಾರ್ಯಸಾಧನೆಗಾಗಿ ರಶ್ಯವು ಜರ್ಮನಿಯ ಸ್ನೇಹದಲ್ಲಿ ಬಿದ್ದಿದ್ದರೂ, ಅಂತರಾಷ್ಟ್ರೀಯ ಪರಿಸ್ಥಿತಿಯ ಕಾರಣದಿಂದ ರಶ್ಯವು ದೊಡ್ಡ ಪ್ರಮಾಣದಲ್ಲಿ ಜರ್ಮನಿಗೆ ಎಣ್ಣೆ ಕಳುಹಿಸಲಾರದು. ಜರ್ಮನಿಗೆ ಕಳುಹಿಸಿ ಕೊಡುವ ಸುಲಭ ಮಾರ್ಗಗಳು ಈಗ ಉಳಿದಿರುವುದಿಲ್ಲ. ಆದ್ದರಿಂದ ಎಣ್ಣೆ ಪದಾರ್ಥಗಳ ಅಭಾವದಿಂದಲೇ ಜರ್ಮನಿಗೆ ಪ್ರಾಣಸಂಕಟವಾಗಿದೆ; ಆದ್ದರಿಂದ ಸೋಲಾಗಲೀ ಗೆಲವಾಗಲಿ ಅತಿಶೀಘ್ರದಲ್ಲಿ ಯುದ್ಧಕಾರ್ಯವನ್ನು ಮುಗಿಸಿಬಿಡಬೇಕೆಂಬ ಹಠದಲ್ಲಿದೆ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER ORIGINAL

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲ್ನು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು, ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ರೋಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY

Madras Agent: **Appah & Co, China Bazar Madras.**

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O.S. 130/36 R. E. P. 32/40

ಅರ್ಜಿದಾರ—ವೈ. ಕೃಷ್ಣಪ್ಪ ಸೆಟ್ಟಿ, ಅಣ್ಣಪ್ಪ ಸೆಟ್ರ ಅಳಿಯ, ಕುಂದಾಪುರ ತಾಲೂಕು ಯಡ್ತರೆ ಗ್ರಾಮ;

ಎದ್ರುಡು—1. ಸೂಳೇರಿ ನಾರಾಯಣ ಮೂಡಕೇರಿ ಲಕ್ಷ್ಮೀಹೆಂಗ್ಸಿನ ಮಗ, ಕುಂದಾಪುರ ಕ್ಷಬೆ,

2. ಶಂಕರ ಉಪಾಧ್ಯ, ಸುಬ್ರಾಯ ಅಡಿಗಳ ಮೊಮ್ಮಗ, ಕುಂದಾಪುರ ತಾಲೂಕು ಬೈಂದೂರು ಗ್ರಾಮ,

ಸದ್ರಿ ಅಮ್ಲುಜ್ಯಾರಿಯಲ್ಲಿ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ ಸದ್ರಿ ಅಮ್ಲುಜ್ಯಾರಿಯನ್ನು ತಾ. 12—6—40ಕ್ಕೆ ತಖ್ಕಿ ಇಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ,

ಮೊಕ್ಕಾಂ ಕುಂದಾಪುರ, ತಾರೀಕು ೧-೬-೧೯೪೦ } ಅರ್ಜಿದಾರನ ಕಡೆ ವಕೀಲ,

K. Venkappa Shetty

ಸಿನೆಮಾ ಪುಟ

ಇಂಗ್ಲಿಷ್ ಫಿಲ್ಮಿನಲ್ಲಿ ಸಾಧನಾ—

ಸಾಧನಾ ಬೋಸಳು ವಾಡಿಯಾ ಮುವಿಟೋನಿನವರು ತಯಾರಿಸುತ್ತಿರುವ 'ರಾಜನರ್ತಕಿ' ಚಿತ್ರದ ಆಂಗ್ಲಭಾಷಾಂತರದಲ್ಲಿ ಅಭಿನಯಿಸುವಳೆಂದು ತಿಳಿದಿದೆ ಈ ಚಿತ್ರವು ಹಿಂದೀ ಬಂಗಾಳಿ ಭಾಷೆಗಳಲ್ಲಿಯೂ ತೆಗೆಯಲಾಗಿದೆ

ಈ ಚಿತ್ರತಯಾರಿಗಾಗಿ ನಿರ್ದೇಶಕರಾದ ಶ್ರೀ ಮಾಧುಬೋಸರು ಕಲ್ಕತ್ತೆಯಲ್ಲಿ ಕೆಲಕಾಲದಿಂದ ಅನೇಕ ನಟನಟಿಯರೊಡನೆ ಇದ್ದಾರೆ ಕಾಶೀಶ್ವರ ಗೋಸ್ವಾಮಿಯ ಪಾತ್ರವನ್ನು ಶ್ರೀ ಅಹೀಂದ ಚೌಧುರಿಯವರು ಅಭಿನಯಿಸುವರು ಪ್ರೀತಿ ಮಜುಂದಾರ್, ಬಿಭೂತಿ ಗಂಗೊಳ್ಳಿ, ಪ್ರಪಾತಸಿಂಗ ಮಿಸ್ ಪತಿಮಾದಾಸ ಗುಪ್ತ ಮೊದಲಾದವರು ಅಭಿನಯಿಸುವರು ಹಿಮಾಂಶುದತ್ತರು ಸಂಗೀತ ನಿರ್ದೇಶಕರು

ಇಂತಹ ಹೊಸ ಸಾಹಸವನ್ನು ಆರಂಭಿಸಿದ ಬಗೆ ವಾಡಿಯಾ ಮುವಿಟೋನಿನವರಿಗೆ ಅಭಿನಂದನೆಗಳು

ಹೃದಯವನ್ನು ಕದಡಿಸಿದ ಪ್ರೇಮ ಕಥೆ

ನ್ಯೂಥಿಯೇಟರಿನ ಹೊಸಚಿತ್ರ

ಕಾನನ ಮತ್ತು ಪಹಾರಿಯವರು ನಾಯಿಕಾನಾಯಕರಾಗಿ ಮುಂದಿನ ನ್ಯೂಥಿಯೇಟರ್ಸ್ ಚಿತ್ರದಲ್ಲಿ ಅಭಿನಯಿಸುವರು ಪ್ರೇಮವು ಹೃದಯ ಸ್ಪರ್ಶಿಯಾಗಿ ಸಮಾಜದ ವಾಸ್ತವಿಕತೆಯನ್ನು ಪ್ರೇಮ ದಾರುಣ ವೇದನೆಯನ್ನು ಈ ಚಿತ್ರವು ಪ್ರದರ್ಶಿಸಲಿರುವುದು

ಇದು ಈಗ ಸಿದ್ಧವಾಗುತ್ತಿದೆ

ಎರಡು ದಿನಗಳಲ್ಲಿ ೬೦೦೦ ರೂಪಾಯಿಗಳು

ಪ್ರಭಾತದ ಧ್ಯಾನೇಶ್ವರ ಚಿತ್ರದ ಎರಡು ದಿನದ ಪ್ರದರ್ಶನದಿಂದ ಬೊಂಬಾಯಿಯಲ್ಲಿ ೬,೦೦೦ ರೂಪಾಯಿಗಳು ಸಂಗ್ರಹವಾಗಿದೆಯೆಂದು ತಿಳಿದು ಬರುತ್ತದೆ.

ಭಕ್ತ ದಾಮಾಜಿ

ನಿರ್ದೇಶಕ ಬಾಲ್‌ಪೆಂಡಾರ್ಕರರು 'ಭಕ್ತ ದಾಮಾಜಿ' ಚಿತ್ರವನ್ನು ತಯಾರಿಸುತ್ತಿದ್ದಾರೆ ಇದು ಮರಾಠಿ ಭಾಷೆಯಲ್ಲಿ ಮಾತ್ರ ಸಿದ್ಧವಾಗಿದೆ

ಮಿತ್ರ ಮುರಾರಿ

ಕೊಯಂಬುತ್ತೂರಿನ ಜ್ಯುವೆಲ್ ಪಿಕ್ಚರ್ಸ್‌ನವರು ಮಿತ್ರಮುರಾರಿ ಎಂಬ ಚಿತ್ರವನ್ನು ತಯಾರಿಸುತ್ತಿರುವರು ವಿ ವಿ ಶರಗೋಪಾಲು ಮತ್ತು ವಸಂತ ಕೋಕಿಲ ಇವರು ಮುಖ್ಯ ನಾಯಕ ನಾಯಕಿಯರ ಪಾತ್ರವನ್ನು ಅಭಿನಯಿಸುವರು.

ಮರ್ಚೆಂಟ್ ಓಫ್ ವೆನಿಸ್ ತಮಿಳಿನಲ್ಲಿ

ಭಾರತ ಪಿಕ್ಚರ್ಸ್‌ನವರು ಶೇಕ್ಸಪಿಯರ್ ಕವಿಯ ಮರ್ಚೆಂಟ್ ಓಫ್ ವೆನಿಸನ್ನು ತಮಿಳಿನಲ್ಲಿ ಚಿತ್ರ ತಯಾರಿಸುತ್ತಿದ್ದಾರೆ.

ನೇಶನಲ್ ಸ್ಟುಡಿಯದ ಪ್ರಥಮ ಚಿತ್ರ

ಬೊಂಬಾಯಿ ನ್ಯಾಶನಲ್ ಸ್ಟುಡಿಯೋ ಇವರ ಪ್ರಥಮ ಚಿತ್ರವಾದ ಹೆಂಗಸು ಎಂಬ ಚಿತ್ರವು ಮೇ ೧೧ರಲ್ಲಿ ಪ್ರಕಟಿತವಾಯಿತು. ಈ ಚಿತ್ರವು ಎರಡು ತಾಸು ೫೫ ಮಿನಿಟು ಗಳವರೆಗೆ ಪ್ರದರ್ಶಿತವಾಗುವುದು ಇದರ ಕಥೆಯು ಅತ್ಯಂತ ಹೃದಯಂಗಮವಾಗಿದೆ ತಾಯಿಯು ತನ್ನ ಸ್ವತಂತ್ರ ಗನನ್ನು ಗಂಡಿಕ್ಕಿ ಕೊಲ್ಲುವ ಕಥಾ ದುರ್ಘಟನೆಯು ನಿಜವಾಗಿ ಹೃದಯದ ಪರವಾಗಿದೆ ಸಂಗೀತವೂ ಸುಶ್ರಾವ್ಯವಿದೆ, ಒಟ್ಟು ಚಿತ್ರದಲ್ಲಿ ೧೧ ಹಾಡುಗಳಿವೆ ಅನಿಲ ವಿಶ್ವಾಸರ ಸಂಗೀತ ನಿದರ್ಶಕರು

ಸುನಲಿಸೀದೇವಿ, ಕನ್ಹೈಲಾಲ್, ಯಾಕೂಬ್ ಅರುಣ, ಇವರೇ ಮೊದಲಾದವರು ಅಭಿನಯಿಸುವರು

ಮಹಬೂಬರು ನಿರ್ದೇಶಕರಾಗಿದ್ದಾರೆ

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು, ಕೆನರಾ ಹೈಸ್ಕೂಲ್ ರೋಡು ಬ್ರಾಂಚ್ ಸೆಂಟ್‌ಲೆಂಡ್‌ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನ್ನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½

" 6 ತಿಂಗಳಿಗೆ 4% " 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು, ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

ವಿಚಿತ್ರ - ಪ್ರಪಂಚ

ಚೆಂಬರ್ಲೆನರ ಅಧಿಕಾರಚ್ಯುತಿ ಭವಿಷ್ಯ ನಿಜವಾಯಿತು!

ಜಾನ್ ಗಂಥರರ ಹೇಳಿಕೆ.

ಪ್ರಸಿದ್ಧ ಗ್ರಂಥ ಕಾರರಾದ ಜಾನ್ ಗಂಥರರು ಕೆಲ ಮಾಸಗಳ ಹಿಂದೆಯೇ ಚೆಂಬರ್ಲೆನರು ಅಧಿಕಾರಚ್ಯುತರಾಗುವರೆಂದೂ, ಚರ್ಚಿಲ್ಲರು ಮುಂದಕ್ಕೆ ಬ್ರಿಟಿಷ್ ಪ್ರಧಾನರಾಗುವರೆಂದೂ ಹೇಳಿದ್ದರು ಆ ಹೇಳಿಕೆಯು ಇಂದಿಗೆ ಸತ್ಯವಾಗಿದೆ

ಯುದ್ಧದಂತಹ ಕಾಲದಲ್ಲಿ ಚೆಂಬರ್ಲೆನರ ಸತ್ವವು ಸಾಲದೆಂದೂ, ಚರ್ಚಿಲ್ಲರೇ ಆ ರೀತಿಯ ರಾಜಸ ಗುಣವುಳ್ಳವರೆಂದೂ ಜಾನ್ ಗಂಥರರು ಸ್ಪಷ್ಟವಾಗಿ ಬರೆದಿದ್ದರು

ಮತ್ತೂ ಓಂ ಮಂಡಳಿ?

ಸಿಂಧದ ಪ್ರಧಾನ ನ್ಯಾಯಾಧ್ಯಕ್ಷರ ನ್ಯಾಯ ಸ್ಥಾನದಲ್ಲಿ ಅಲ್ಲಿನ ಒಬ್ಬ ಸಿಪಾಯಿಯನು ಮಾಡಿದ ದಾವೆಯು ಪುನಃ ಓಂ ಮಂಡಳಿಯ ಅಸ್ತಿತ್ವ ಮತ್ತು ಕಾರ್ಯಕಲಾಪಗಳನ್ನು ನೆನಪಿಗೆ ತರುತ್ತದೆ

ಶ್ರೀ ಗಂಗನಮಾಲನೆಂಬವನು ತನ್ನ ಹೆಂಡತಿಯ ಇಬ್ಬರು ಹುಡುಗರ ಮತ್ತು ಇಬ್ಬರು ಹುಡುಗಿಯರೊಡನೆ ತನ್ನೊಡನೆ ಕೇಳದೆ ಓಂ ಮಂಡಳಿಯಲ್ಲಿ ಹೋಗಿ ನೆಲಸಿರುವಳೆಂದೂ, ಆ ಮಕ್ಕಳನ್ನು ತನಗೆ ಕೊಡಬೇಕೆಂದೂ ಆತನ ದಾವೆ ಹೂಡಿರುವನು

ಕರಾಚಿಯಲ್ಲಿ ಈ ಓಂ ಮಂಡಳಿಯವರು ಈಗಲೂ ಕೂಡಾ ಬೇರೆಬೇರೆ ಕಡೆಗಳಲ್ಲಿ ತಮ್ಮ ಕಾರ್ಯಕಲಾಪಗಳನ್ನು ಮಾಡುತ್ತಿರುವರೆಂದೂ ತಿಳಿದು ಬರುತ್ತದೆ

ದುಃಖಾರ್ತೆಯ ನಿಧನ

ತನ್ನ ಗಂಡನು ಮೃತಹೊಂದಿದನೆ ಒ ವಾರ್ತೆಯನ್ನು ಕೇಳಿ ಸಯುಕ್ತ ಪ್ರಾಂತದ ಸರ್ಕಲ್ ಇನ್‌ಸ್ಪೆಕ್ಟರ್ ಪಂಡಿತ ಮುರಲೀಧರನೆಂಬವನೊಬ್ಬನ ಹೆಂಡತಿಯು ತನ್ನ ಗಂಡನು ತೀರಿಹೋದ ಇಪ್ಪತ್ತನಾಲ್ಕು ತಾಸಿನೊಳಗೆ ಮೃತಿ ಹೊಂದಿರುವಳೆಂದು ತಿಳಿದುಬಂದಿದೆ ಆ ವಿಧವೆಯು ತನ್ನ ವಸ್ತ್ರವನ್ನು ಚಿಮಿಣಿಯಲ್ಲಿ ನೆನಸಿ, ಅದನ್ನು ಉಟ್ಟುಕೊಂಡು ವಸ್ತ್ರಕ್ಕೆ ಬೆಂಕಿಕೊಟ್ಟು ಆತ್ಮಹತ್ಯೆ ಮಾಡಿಕೊಂಡಳಂತೆ!

ನೆಹರುಗಳ ದಸ್ಕತ್ತು ಹಾಕಿ ಕೆಲಸ ಪಡೆಕೊಳ್ಳುವ ಯತ್ನ

ಗೋರಖಪುರದಿಂದ ಒಂದು ವಾರ್ತೆ ಬಂದಿದೆ ಬಿ ಎನ್ ಡಬ್ಲ್ಯು ರೈಲ್ವೆಯಲ್ಲಿ, ಒಂದು ಕೆಲಸಕ್ಕೆ ಪ್ರಯತ್ನ ಮಾಡುತ್ತಿದ್ದ ಒಬ್ಬ ಯುವಕನು, ಆ ಬಗ್ಗೆ ನೆಹರುಗಳ ದಸ್ಕತ್ತು ಹಾಕಿದ ಗುರುತು ಪ್ರಶಸ್ತಿ ಸರ್ಟಿಫಿಕೇಟೊಂದನ್ನು ರೈಲ್ವೆ ಅಧಿಕಾರಿಗಳಿಗೆ ಕಳುಹಿಸಿದ ಮೊದಲು ಅವರು ನೆಹರುಗಳ ಪತ್ರವಿದ್ದುದರಿಂದ ಕೆಲಸ ಕೊಡುವುದಾಗಿ ಒಪ್ಪಿದರು. ಆದರೆ ಸರ್ಟಿಫಿಕೇಟನ್ನು ಬರೆದ ಭಾಷೆ ಕ್ರಮಗಳನ್ನು ನೋಡಿ ಅವರಿಗೆ ಸಂಶಯ ಬಂತು

ಆತನನ್ನು ಮರುದಿನ ಬರಹೇಳಿ, ಕೂಡಲೇ ಪಂಡಿತ ನೆಹರುಗಳಿಗೆ ತಂತಿ ಬಿಟ್ಟರಂತೆ! ಅಲ್ಲಿಂದ ನಿಜ ವರ್ತಮಾನವು ತಿಳಿಯಿತು. ಮರುದಿನ ಕೆಲಸಕ್ಕೆ ಸೇರಲು ಬಂದ ಆ ಯುವಕನನ್ನು ಪೋಲೀಸರು ಹಿಡಿದುಕೊಂಡು ಹೋಗಿ ಸೆರೆಮನೆಯಲ್ಲಿಟ್ಟರು!

ಮಂಗನು ಕೊಲೆಪತ್ತೆ ಮಾಡಿತು

ಜೇಲಂ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಂದು ಮಂಗನ ತನ್ನ ಯಜಮಾನನ ಕೊಲೆಯನ್ನು ಪತ್ತೆಹಚ್ಚಲು ಪೋಲೀಸಿನವರಿಗೆ ನೆರವಾದ ಸುದ್ದಿಯೊಂದು ಬಂದಿದೆ

ಮನೆಗೆ ಮರಳಿ ಬರುವ ದಾರಿಯಲ್ಲಿ ಆತನನ್ನು ಆತನ ಶತ್ರುಗಳ ಕೊಂದು ಹಾಕಿದರು ಅವರು ಆತನ ದೇಹವನ್ನು ಅಲ್ಲಿಯೇ ಮಣ್ಣಿನಡಿಯಲ್ಲಿ ಹುದುಗಿಸಿ, ಹೊರಟ್ಟರು ಆ ಮಂಗನು ಪೋಲೀಸಿನವರನ್ನು ಮತ್ತು ಸತ್ತವನ ಗೆಳೆಯರನ್ನೂ ಆ ಸ್ಥಳಕ್ಕೆ ಕೊಂಡೊಯ್ಯಿತು. ಅಲ್ಲಿಗೆ ಹೋದ ಮೇಲೆ ಮಂಗನು ಆ ಸ್ಥಳವನ್ನು ಗುರುತುಮಾಡಿ ತೋರಿಸಿತು ಪೋಲೀಸಿನವರು ಅಗೆದು ನೋಡಲು ಅಲ್ಲಿ ಹೆಣ ಕಾಣಸಿಕ್ಕಿತು ವಿಚಾರಣೆಯು ನಡೆಯುತ್ತಿದೆ

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂವಿವರ

6ನೇ	7ನೇ	8ನೇ ತರಗತಿಗಳಿಗೆ
0—5—0	0—6—0	0—7—0

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟಿದು.

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

7-6-1940

ವಿಜ್ಞಾನಯುಗ

ವಿಜ್ಞಾನದಲ್ಲಿ ದೈವಯೋಗದ ಬಲ

ವಿಜ್ಞಾನದಲ್ಲಿ ದೈವಯೋಗವೇ ಇರುವದಿಲ್ಲವೆಂದು ಸಾಧಿಸುವದು ಈಗೀಗ ಹೆಚ್ಚಾಗುತ್ತ ಇದೆ ಸ್ವಪ್ರಯತ್ನಗಳ ಫಲದಿಂದಾಗಿಯೇ ವಿಜ್ಞಾನಿಗಳು ಅನೇಕಾನೇಕ ಆವಿಷ್ಕಾರಗಳನ್ನೂ ಶೋಧನೆಗಳನ್ನೂ ನಡೆಸಿ ಪ್ರಪಂಚವನ್ನು ಈಗಿನ ಸ್ಥಿತಿಗೆ ತಂದರೆಂದು. ಅವರು ಹೇಳುತ್ತಾರೆ ದೈವಯೋಗವೆಂಬ ಒಂದು ಸಂಗತಿ ಇಲ್ಲವೇ ಇಲ್ಲವೆಂದು ಹೇಳುವ ಜನರೂ ಇದ್ದಾರೆ, ಆದರೂ ಈ ಮಾತುಗಳನ್ನು ಸಂಪೂರ್ಣ ಸತ್ಯವೆನ್ನಲಾಗುವದಿಲ್ಲ. ದೈವಯೋಗ ಇಲ್ಲವೆಂದು ಹೇಳಬಹುದು, ಆದರೆ ವೈಜ್ಞಾನಿಕ ಪ್ರಪಂಚದಲ್ಲಿ ನಡೆದ ಅನೇಕ ಆವಿಷ್ಕಾರಗಳು ಈ ದೈವಯೋಗವು ಇದೆ ಎಂಬುದನ್ನು ಸ್ಪಷ್ಟ ಮಾಡುತ್ತದೆ ದೊಡ್ಡದೊಡ್ಡ ಯಂತ್ರ ಸಲಕರಣೆ ಮತ್ತು ಪರಿಶೋಧನಾಲಯಗಳ ಅನುಕೂಲವಿದ್ದರೆ ಮಾತ್ರ ದೊಡ್ಡ ದೊಡ್ಡ ಆವಿಷ್ಕಾರಗಳಾಗಬಲ್ಲವು ಎನ್ನುವದು ತಪ್ಪು ದೈವಯೋಗವು ಅನುಕೂಲವಾಗಿದ್ದರೆ, ಅಂಥ ಸಲಕರಣೆಗಳು ಯಾವುವೂ ಇಲ್ಲದೇನೇ ಮಹತ್ವದ ಆವಿಷ್ಕಾರಗಳನ್ನು ಮಾಡಿ ಸ್ವಪ್ರಯೋಜನದೊಂದಿಗೆ ಲೋಕೋಪಕಾರವನ್ನು ಮಾಡುತ್ತಿರಬಹುದು.

ಎನಿಲೀನ್ ಬಣ್ಣಗಳ ಆವಿಷ್ಕಾರ

ಈಗ ಎನಿಲೀನವೆಂಬ ಬಣ್ಣಗಳ ಬಣ್ಣಗಳನ್ನು ನೋಡದವರಿಲ್ಲ, ಕೇಳದವರಿಲ್ಲ ಈ ಬಣ್ಣಗಳ ಆವಿಷ್ಕಾರದಿಂದ ಪ್ರಪಂಚಕ್ಕೆ ಮಹತ್ತಾದ ಉಪಕಾರವಾಗಿದೆ. ಆದರೆ ದೈವಯೋಗದ ಬಲದಿಂದಲೇ ಈ ಬಣ್ಣಗಳ ಆವಿಷ್ಕಾರವಾಯಿತು ಈ ಬಣ್ಣಗಳನ್ನು ಹುಡುಕಿ ತೆಗೆದವನು ಪರ್ಕಿನ್ ಎಂಬಾತನು ಅವನು ಬಣ್ಣಗಳನ್ನು ಹುಡುಕುವ ಪ್ರಯತ್ನದಲ್ಲಿ ಇದ್ದಿರಲಿಲ್ಲ. ಕೋಲ್‌ತಾರ್ ಎಂಬ ಡಾಮರು ಎಣ್ಣೆಯಿಂದ ಕ್ವಿನೀನನ್ನು ಹುಡುಕಿ ತೆಗೆಯುವ ಮಹತ್ಪ್ರಯತ್ನಗಳಲ್ಲಿ ಅವನಿದ್ದನು ಶ್ರೀ ಹಲವಾರು ಪರೀಕ್ಷೆಗಳನ್ನು ನಡೆಸಿದರೂ ಅವನಿಗೆ ಡಾಮರಿನಲ್ಲಿ ಕ್ವಿನೀನು ದೊರೆಯಲಿಲ್ಲ ತನ್ನ ಪ್ರಯತ್ನಗಳಲ್ಲಿ ನಿರಾಶನಾಗಬೇಕಾಯಿತು ಬಹಳ ಪ್ರಯತ್ನಗಳ ಫಲವೆಂಬಂತೆ ಡಾಮರಿನ ಹಲವು ದ್ರಾವಕಗಳಿಂದ ಕೂಡಿದ ಒಂದು ಕರಿಯ ಮಿಶ್ರಣವಷ್ಟೇ ಅವನ ಕೈಯಲ್ಲಿ ಉಳಿಯಿತು. ಅವನದನ್ನು ಬೇಸರದಿಂದ ದೂರ ಒಗೆಯಲಿದ್ದ, ಆದರೆ ಆ ಕರಿಯ ಮುದ್ದೆಗೆ ಸ್ವಲ್ಪ ಅಲ್ಕೊಹಾಲನ್ನು ಸೇರಿಸಿದರೆ ಏನಾಗಬಹುದೋ ಎಂಬ ಕುತೂಹಲವು ಅವನಿಗುಂಟಾಯಿತು ಅದನ್ನು ಸೇರಿಸಿ ನೋಡಿದ ಪರಿಣಾಮ ನೋಡಿ ಅವನಿಗೆ ಅತ್ಯಾಶ್ಚರ್ಯವಾಯಿತು ಆ ಡಾಮರಿನ ಕರಿಯ ಮುದ್ದೆಯು ಅಲ್ಕೊಹಾಲಿನ ಬೆರಕೆಯಿಂದ ಹೊಳೆಯುವ ನೇರಳೆಬಣ್ಣಕ್ಕೆ ಪರಿವರ್ತಿತವಾಗಿತ್ತು. ಹೀಗೆ ಅಕಸ್ಮಿಕವಾಗಿ ಪರ್ಕಿನನು ಎನಿಲಿನ ಬಣ್ಣಗಳನ್ನು ಕಂಡುಹಿಡಿದು ಲೋಕಪ್ರಸಿದ್ಧನಾದನು ದೈವಯೋಗವಿದ್ದುದರಿಂದಲೇ ಅವನು ಈ ಬಣ್ಣಗಳನ್ನು ಕಂಡುಹಿಡಿಯಲಿಕ್ಕೆ ಸಮರ್ಥನಾದನು

ಸಕ್ರೀನಿನ ಶೋಧನೆ

ಒಬ್ಬ ರಸವಿಜ್ಞಾನಿಯು ತನ್ನ ಕೆಲಸಗಳನ್ನು ಮಾಡಿ ಮುಗಿಸಿದ ತರುವಾಯ ತನ್ನ ಕೈಗಳನ್ನು ತೊಳೆಯದೆ ಇದ್ದುದರಿಂದ ಸಕ್ರೀನಿನ ಪರಿಶೋಧನೆಯಾಯಿತು ಸಕ್ರೀನು ಎನ್ನುವಂಥಾದ್ದು ಸಕ್ಕರೆಗಿಂತಲೂ ನೂರಾರು ಪಾಲು ಸಿಹಿಯಾದ ಒಂದು ವಸ್ತು ಇದನ್ನು ಸೋಡ ಅಂಗಡಿಗಳಲ್ಲಿ ಲೇಮನೇಡ, ಆರೆಂಜ್ ಮೊದಲಾದವನ್ನು ತಯಾರಿಸಲಿಕ್ಕೆ ಉಪಯೋಗಿಸುತ್ತಾರೆ ಬೆಳಗ್ಗೆ, ಕೆಲವು ಪರಿಶೋಧನೆಗಳನ್ನು ಮಾಡಿದ ತರುವಾಯ ಮಧ್ಯಾಹ್ನದ ಹೊತ್ತಾದ್ದರಿಂದ ಅವನ ಕೈಗಳನ್ನು ತೊಳಕೊಳ್ಳದೆಯೇ, ಅವಸರದಿಂದ ಊಟಕ್ಕೆ ಕೂತನು. ಅಡಿಗೆ ಮಾಡಿದ ಮಾಂಸದಗೂರನ್ನು ಬೆರಳಿನಿಂದ ಎತ್ತಿ ಬಾಯೊಳಗಿಟ್ಟಾಗ, ಬೆರಳಿನ ಸ್ಪರ್ಶವಾದ ಮಾಂಸದ ತುಂಡಿನ ಭಾಗವು ಬಹಳ ಸಿಹಿಯಾಗಿ ಕಂಡಿತು ಅವನು ಚೂರನ್ನು ಅಲ್ಲಿಯೇ ಬಿಟ್ಟು ಒಂದು ಬಟ್ಟಲು ನೀರು ಕುಡಿಯಲಿಕ್ಕೆ ಹೋದ ಆಗಲೇ ಅವನಿಗೆ-ತಾನು ಊಟಕ್ಕೆ ಕೂತುಕೊಳ್ಳುವ ಮೊದಲು ಕೈತೊಳೆದಿರಲಿಲ್ಲವೆಂಬುದು ಹೊಳೆಯಿತು ಆದ್ದರಿಂದ ಊಟಕ್ಕೆ ಕೂತುಕೊಳ್ಳುವ ಮೊದಲು ಯಾವಯಾವ ವಸ್ತುಗಳನ್ನು ಮುಟ್ಟಿದ್ದನೆಂಬುದನ್ನು ಅವನು ಬಹು ಜಾಗ್ರತೆಯಿಂದ ನೆನಪು ಮಾಡಿ ನೋಡಿದ ಆ ವಸ್ತುಗಳ ಸಂಯೋಗದಿಂದಲೇ ಸಕ್ರೀನು ತಯಾರಾಯಿತು ಇಲ್ಲಿಯೂ ಕೂಡ, ಸಕ್ರೀನನ್ನು ಹುಡುಕಿ ತೆಗೆಯಲಿಕ್ಕೆ ವಿಜ್ಞಾನಿಯು ಕೂತಿರಲಿಲ್ಲವಾದರೂ, ದೈವಯೋಗವು ಅನುಕೂಲವಾಗಿದ್ದುದರಿಂದ ಅವನು ಅದನ್ನು ಆಕಸ್ಮಿಕವಾಗಿ ಕಂಡುಹಿಡಿದು ಕೃತಾರ್ಥನಾದನು

ಕಪ್ಪೆಗಳ ಚಿಕಿತ್ಸೆಗೆ ಮೊದಲನೆ ಆಸ್ಪತ್ರೆ

ಈಗ ಪ್ರಪಂಚದಲ್ಲಿ ಮನುಷ್ಯರ ರೋಗ ಚಿಕಿತ್ಸೆಗಾಗಿಯೂ, ದನಕರು ಮೊದಲಾದ ಸಾಕುಪ್ರಾಣಿಗಳ ಚಿಕಿತ್ಸೆಗಾಗಿಯೂ ಆಸ್ಪತ್ರೆಗಳು ಇರುವದಲ್ಲ, ಕಪ್ಪೆಗಳಂಥ ಅಲ್ಪಜೀವಿಗಳ ಚಿಕಿತ್ಸೆಗಾಗಿಯೂ ಆಸ್ಪತ್ರೆಗಳು ಉಂಟಾಗುತ್ತಲಿವೆ! ಇಂಥ ಒಂದು ಕಪ್ಪೆಗಳ ಆಸ್ಪತ್ರೆಯನ್ನು ಕೆಲಿಫೋರ್ನಿಯಾದಲ್ಲಿ ತೆರೆದಿರುತ್ತಾರೆ ಈ ಬಗೆಯ ಆಸ್ಪತ್ರೆಯು ಪ್ರಪಂಚದಲ್ಲಿ ಇದು ಮೊದಲನೆಯದಾಗಿದೆ. ಈ ಆಸ್ಪತ್ರೆಯಲ್ಲಿ ಸಣ್ಣ ಗಾಯಗಳ ಮೊದಲುಗೊಂಡು ಶಸ್ತ್ರೋಪಚಾರದ ತನಕ ಎಲ್ಲಾ ಬಗೆಯ ಕಪ್ಪೆಗಳ ನೋವು ಬೇನೆ ರೋಗರುಜೆಗಳಿಗೆ ಚಿಕಿತ್ಸೆಯಾಗುತ್ತದೆ ಕಪ್ಪೆಗಳಂಥ ನಿರೋಗ ಪ್ರಾಣಿಗಳೇ ಪ್ರಪಂಚದಲ್ಲಿ ಇರವದಿಲ್ಲ ಆದರೂ ಕೆಲವು ಬಾರಿ ಅವುಗಳಿಗೂ ಕಾಲು ಕೆಂಪಾಗುವಂಥ ಒಂದು ವಿಚಿತ್ರರೋಗವಾಗುತ್ತದೆ ಈ ರೋಗದಿಂದ ಸ್ವಭಾವದಿಂದ ಬಹು ಕಡಿಮೆಯಾಗಿದ್ದ ರಕ್ತಬಲವು ಇನ್ನಷ್ಟು ಕಡಿಮೆಯಾಗಿ ಕಪ್ಪೆಗಳು ಸಾಯುತ್ತವೆ ಆದ್ದರಿಂದ ಇಂಥ ರೋಗಬಾಧಿತ ಕಾಲುಗಳ ಮೇಲೆ ಶಸ್ತ್ರಚಿಕಿತ್ಸೆ ಮಾಡಿ ಅವನ್ನು ಕಡಿದು ತೆಗೆದು ಈ ಆಸ್ಪತ್ರೆಯಲ್ಲಿ ಕಪ್ಪೆಗಳನ್ನು ಬದುಕಿಸುವರು ಆದರೆ ಕಪ್ಪೆಗಳಿಗೆ ನೋವಿನ ಅನುಭವವಾಗುವದು ಕಡಿಮೆ ಯಾದ್ದರಿಂದ ಈ ಚಿಕಿತ್ಸೆ ನಡೆಯುವಾಗ ಅವುಗಳಿಗೆ ಕ್ಲೋರೊಫಾರ್ಮ್ ಕೊಟ್ಟು ಎಚ್ಚರತಪ್ಪಿಸುವದಿಲ್ಲ

ನೋಟುಗಳಿಗೆ ಕಾಣದ ನೂಲು

ಕರೆನ್ಸಿ ನೋಟುಗಳ ಫೋರ್ಜರಿ ಮಾಡಿ ಕಳ್ಳ ನೋಟುಗಳನ್ನು ಬಳಕೆಗೆ ತಂದು ಸರಕಾರವನ್ನು ಮೋಸಮಾಡುವ ಸಫಲ ಪ್ರಯತ್ನಗಳು ಎಲ್ಲಾದೇಶಗಳಲ್ಲಿ ನಡೆಯುತ್ತಿರುತ್ತವೆ ಸರಕಾರಕ್ಕಾಗುವ ಈ ನಷ್ಟವನ್ನು ತಪ್ಪಿಸಲಿಕ್ಕೆ ಇಂಗ್ಲಾಂಡಿನ ಬೇಂಕ್ ಆಫ್ ಇಂಗ್ಲಾಂಡು ತನ್ನ ನೋಟುಗಳನ್ನು ತಯಾರಿಸುವಲ್ಲಿ ದಕ್ಷಿಣ ಆಫ್ರಿಕದ ರಿಜರ್ವ್ ಬೇಂಕಿನ ಕಾರ್ಯಕ್ರಮವನ್ನು ಅನುಸರಿಸಿದೆ ನೋಟುಗಳ ಕಾಗದವನ್ನು ತಯಾರಿಸುವಾಗ ವಿಶೇಷ ಜಾಗರೂಕತೆಯನ್ನು ತೆಗೆದುಕೊಳ್ಳಲಾಗುತ್ತದೆ, ಮಾತ್ರವಲ್ಲ, ಒಂದು ಇಂಚಿನ ಐವತ್ತರಲ್ಲಿ ಒಂದುಪಾಲಿನಷ್ಟು ಸೂಕ್ಷ್ಮವಾದ ಒಂದು ದಾರವು ಈ ನೋಟುಗಳ ನಡುವಿನಿಂದ ಉದ್ದಕ್ಕೆ ಹಾದು ಹೋಗುವಂತೆ ನೋಟಿನ ಕಾಗದವನ್ನು ತಯಾರಿಸುತ್ತಾರೆ ಈ ನೂಲು ನೋಟಿನೊಳಗೆ ಇರುವದು ಬರಿ ಕಣ್ಣಿಗೆ ಕಾಣುವದಾಗಲಿ ಕೈಗೆ ಸ್ಪರ್ಶವಾಗುವದಾಗಲೀ ಇಲ್ಲ. ಅದನ್ನು ನೋಟಿನ ಕಾಗದದೊಳಗೆ ಹೇಗೆ ನೇಯುತ್ತಾರೆ. ಮತ್ತು ಅಷ್ಟು ಸೂಕ್ಷ್ಮವಾದ ನೂಲನ್ನು ಹೇಗೆ ತಯಾರಿಸುತ್ತಾರೆ ಎಂಬುದು ಒಂದು ರಹಸ್ಯವಾಗಿದೆ.

ಮೈಸೂರಲ್ಲಿ ಹೊಸ ಕೈಗಾರಿಕೆ

ಸೋಡಿಯಂ ಬೈಕಾರ್ಬೋನೇಟಿನ ತಯಾರಿ

ಮೈಸೂರಲ್ಲಿ ಸೋಡಿಯಂ ಬೈಕಾರ್ಬೊನೈಟೆಂಬ ಪದಾರ್ಥವನ್ನು ತಯಾರಿಸಲು ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸರಕಾರದವರು ಉದ್ದೇಶಿಸಿರುತ್ತಾರೆ ಈ ಸಂಬಂಧದಲ್ಲಿ ಬೇಕಾಗಬಹುದಾದ ಪ್ರಾರಂಭದ ವೆಚ್ಚಗಳನ್ನು, ಸರಕಾರದ ಡೈರೆಕ್ಟರವರಿಗೆ ಒದಗಿಸಬೇಕೆಂದು ಕಂಟ್ರೋಲರವರನ್ನು ಕೋರಲಾಗಿದೆ

ದಿನವೊಂದಕ್ಕೆ 1। ಟನ್ ಗಳಷ್ಟು ಸೋಡಿಯಂ ಬೈಕಾರ್ಬೊನೈಟನ್ನು ತಯಾರಿಸುವಂತಹ ಕಾರ್ಖಾನೆಯೊಂದನ್ನು ಸ್ಥಾಪಿಸಲು ೫೫೦೦ ರೂಪಾಯಿಗಳ ವೆಚ್ಚವಾಗುವುದು ಇದಲ್ಲದೆ ಇತರ ಸಹಾಯ ಸಲಕರಣೆಗಳಿಗೆ ೧೫,೦೦೦ ರೂಪಾಯಿಗಳಾಗಬಹುದು. ಇದಲ್ಲದೆ ವೆಚ್ಚದ ಬಂಡವಾಳಕ್ಕಾಗಿ ೭೦,೦೦೦ ರೂಪಾಯಿಗಳು ಬೇಕಾಗುತ್ತವೆ ಕಾರ್ಖಾನೆಯು ಬೆಳಗುಳದಲ್ಲಿರುತ್ತದೆ

ಸದ್ಯದಲ್ಲಿ ದೇಶದಲ್ಲಿ ಸೋಡಿಯಂ ಬೈಕಾರ್ಬೊನೈಟಿನ ಸರಬರಾಯಿ ಸ್ವಲ್ಪ ಕಡಿಮೆಯಾಗಿದೆ ಕ್ರಾವಿನ ಆದುದರಿಂದ ಬೈಕ್ರೋಮೇಟುಗಳನ್ನು ತಯಾರಿಸುವ ವಿಷಯವನ್ನು ಸರ್ಕಾರದವರು ಕೆಲವು ಕಾಲದಿಂದಲೂ ಪರಿಶೀಲಿಸುತ್ತಿದ್ದರು. ಈ ವಿಷಯವನ್ನು ಪರಿಶೀಲಿಸಲು ಶ್ರೀ ಎ ಎ ಶ್ರೀನಿವಾಸನ್ ಬಿ ಎ ಕೈಗಾರಿಕಾ ಸಂಸ್ಥೆಗಳ ಡೈರೆಕ್ಟರವರು, ಡಾ|| ಕೆ ಆರ್ ಕೃಷ್ಣಸ್ವಾಮಿ ಬಿ ಎ. ಡಿ ಎಸ್ ಸಿ (ಲಂಡನ್) ಎಫ್ ಡಿ. ಸಿ ಮತ್ತು ಶ್ರೀ ಬಿ ರಾಮರಾವ್, ಎಂ ಎ. ಡಿ ಐ ಸಿ, ಎಫ್ ಜಿ ಎಸ್ ಭೂಗರ್ಭ ಇಲಾಖೆಯ ಡೈರೆಕ್ಟರು, ಈ ಮಹನೀಯರುಗಳನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಿದ್ದಿತು ಈ ಕಾರ್ಖಾನೆಗೆ ಬೇಕಾದ ಯಂತ್ರಗಳೂ ಇತರ ಉಪಕರಣಗಳೂ, ಸ್ಥಳದಲ್ಲಿಯೇ ದೊರೆಯುತ್ತವೆ ಎಂದು ಸಮಿತಿಯವರು ಅಭಿಪ್ರಾಯ ಪಟ್ಟಿರುತ್ತಾರೆ

ಅಂದವಾದ ಮುದ್ರಣಕ್ಕೆ

ಶಾರದಾ ಛಾಪಖಾನೆಗೇನೇ

ಬಂದು ವಿಚಾರಿಸಿರಿ.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಘ್ರಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಏರ್ಪಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ, ಹರಿಹರ ವರೆಗೆ.

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ, ಎಲ್. ಸಿ. ಪಿ. ಎಸ್. ಕೆಳವಾಣಿಸುವರು, ಆದರೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ಕ್ರಯರೂ. ೪-೦-೦

ವಿ. ಪಿ. ಅಲ್ಲ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C

ಸಾಹುಕಾರ ಶ್ರೀನಿವಾಸರಂಗಪ್ಪೆ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡೆ ಮುಡಿಗೆ		
,, ದುಯಂ ,, ,,		
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡೆ ,,	4—14—0	5—0—0
,, ದುಯಂ ,, ,,	4—10—0	4—12—0
,, ಅವ್ವಲ್ ಸುಗ್ಗಿ ,,	4—11—0	
,, ದುಯಂ ,, ,,	4—8—0	4—9—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	85—0—0	87—8—0
,, ಸಿಪ್ಪೆ ಇದ್ದದು ,,	87—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	55—0—0	
,, ದಿಲ್ ಪಸಂದಿ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—14—0	8—15—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	4—0—0	4—8—0
ಗೇರುಬೀಜ ಮುಡಿಗೆ	8—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	85—0—0	41—4—0
ಒಣಮೆಣಸು ಹಂಡ್ರೆಡ್ವೇಟಿಗೆ	14—0—0	14—8—0

7-6-1940 … Regd No M34

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 7-6-1940 [ಸಂಚಿಕೆ

The Bombay Life Assurance Company Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live–today–a few years more–when you are old?

If you die–to your family and dependants?

REMEMBER THAT

If you live, Life Insurance takes the place of your professional income during your old age.

If you die, it provides your family with enough income for thei maintenance and the education of your children.

"BOMBAY LIFE" offers all that is best in LIFE ASSURANCE.

1938 RECORD

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautum Nivas, Charni Road, Girgaum, Bombay No. 4.

Central Station Road Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಸೊಂಟನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಅ)ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1909

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಭಾರತದ ಪಶ್ಚಿಮೋತ್ತರ ಗಡಿಗಳಲ್ಲಿ!

ರಕ್ಷಣಾಯತ್ನದ ಸೂಚನೆ! — ಸರಕಾರದ ಕರ್ತವ್ಯ!

ಹಿಂದೂಸ್ಥಾನಕ್ಕೆ ಹೊರದೇಶಗಳ ಆಕ್ರಮಣದ ಭಯವಿದೆಯೆ? ಈಗಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಇನ್ನು ಕೆಲವು ವರ್ಷಗಳ ತನಕ ವಾದರೂ ಅಂಥ ಭಯವು ಇರುವ ದಿಲ್ಲವೆಂದು ಪಂಡಿತ ಜವಾಹರ ಲಾಲರು ಹೇಳುವರು. ಹೇಗಿದ್ದರೂ ಹಿಂದುಸ್ಥಾನವು ಸ್ವರಕ್ಷಣೆಗೆಬೇಕಾದ ಏರ್ಪಾಡುಗಳನ್ನು ಮಾಡುವುದು ಆಗತ್ಯವಾಗಿದೆ. ಈಗ ನಡೆಯುತ್ತಿರು ವಂಥ ಯುದ್ಧಕ್ರಮಗಳನ್ನು ನೋಡಿ ದರೆ, ಹಿಂದುಸ್ಥಾನದಲ್ಲಿ ಆಗಿರುವ ರಕ್ಷಣೋಪಾಯಗಳು ತೃಪ್ತಿಕರ ವಲ್ಲವೆಂದು ಗೊತ್ತಾಗುತ್ತದೆ. ಆದು ದರಿಂದ ಹಿಂದುಸ್ಥಾನದ ಸರ್ವ ಸೇನಾಧಿಪತಿಗಳೂ ಈಗ ತಾನೇ ಹೊಸ ಯೋಜನೆಗಳನ್ನು ದೇಶದ ಮುಂದಿಟ್ಟಿದ್ದಾರೆ. ಆದರೆ ಅವೂ ಅಷ್ಟು ಸಂತೋಷಜನಕವಾಗುವ ದಿಲ್ಲವೆಂದು, ರಕ್ಷಣಾ ವಿಷಯದ ಗಂಭೀರ ಅಧ್ಯಯನ ಮಾಡಿದ ಭಾರ ತೀಯ ಮುಖಂಡರು ಅಂದಿದ್ದಾರೆ

ಸ್ಟೇಟ್ಸಮೆನ ಪತ್ರಿಕೆಯ ಸೂಚನೆ

ನಮ್ಮ ದೇಶದ ಪಶ್ಚಿಮೋತ್ತರ ಗಡಿಯ ಆಚೆಗೆ ಇರುವ ರಾಷ್ಟ್ರಗಳನ್ನು ಶತ್ರುಪಕ್ಷ ದವರು ತಮ್ಮ ಅಧೀನ ಮಾಡಿಕೊಂಡು ಹಿಂದುಸ್ಥಾನವನ್ನು ಆಕ್ರಮಿಸಲಿಕ್ಕೆ ಬಂದರೂ ಆ ಇತರದೇಶಗಳನ್ನು ಸ್ವಾಧೀನ ಮಾಡಿಕೊಂಡಷ್ಟು ಈ ದೇಶವನ್ನು ಆಕ್ರ ಮಿಸಿ ಅಧೀನ ಮಾಡಿಕೊಳ್ಳುವದು ಶತ್ರು ಪಕ್ಷದವರಿಗೆ ಸುಲಭವಾಗಿರುವದಿಲ್ಲ. ಏಕೆಂದರೆ ಈ ಗಡಿಯಲ್ಲಿರುವ ಪ್ರಾಕೃ ತಿಕ ತಡೆಗಳು ಆಕ್ರಮಣಕ್ಕೆ ದೊಡ್ಡ ವಿಘ್ನ ಗಳಾಗಿರುವವು. ಹೊರದೇಶಗಳಿಂದ ಈ ದೇಶಕ್ಕೆ ಬರಲಿಕ್ಕೆ ಗಡಿಯಲ್ಲಿರುವ ಪರ್ವತ ಮಾಲೆಗಳು ಹತ್ತಿಇಳಿಲಸಾಧ್ಯ ವಾಗಿರುವವು ಮತ್ತು ಅಲ್ಲಲ್ಲಿ ಇರುವ ಕಣಿವೆ ದಾರಿಗಳು ಬಹಳ ಚಿಕ್ಕವಾಗಿರು ವವು. ಆದುದರಿಂದ ಭಾರವಾದ ಯುದ್ಧೋಪಕರಣಗಳನ್ನು ಈ ಮಾರ್ಗ ವಾಗಿ ತರಲಿಕ್ಕೆ ಭಗೀರಥ ಪ್ರಯತ್ನಗಳೇ ಬೇಕಾಗುವವು. ಈ ಕಣಿವೆಗಳ ಒಟ್ಟು ಉದ್ದವು ೨೦೦ ಮೈಲುಗಳಷ್ಟು ಇರುವ ದಿಲ್ಲ. ಇಷ್ಟು ಸಣ್ಣ ಪ್ರದೇಶದಲ್ಲಿ ಮಾತ್ರ ಸರಕಾರವು ಮೆಜಿನೋ ಲೈನಿನಂಥ ಕೋಟೆ ಕೊತ್ತಳಗಳ ಸಾಲನ್ನು ನೆಲದ ಮೇಲೂ ಕೆಳಗೂ ಕಟ್ಟಿಬಿಟ್ಟರೆ, ಮತ್ತೆ ಆ ಮಾರ್ಗಗಳಿಂದ ಶತ್ರುಗಳಿಗೆ ಬರು ವದು ಸಂಪೂರ್ಣ ಅಸಾಧ್ಯವಾಗುವದು. ಬಲೂಚಿಸ್ಥಾನದ ಆಚೆಗಿರುವ ಪ್ರದೇಶವು ಭಯಂಕರ ಮರುಭೂಮಿಯಾಗಿದೆ. ಅಲ್ಲಿ ಬಾವಿಗಳನ್ನಿಟ್ಟು ಶತ್ರುಪಕ್ಷದವರಿಗೆ ನೀರು ದೊರೆಯದಂತೆ ಮಾಡಿದರೆ, ಎಂಥ ಪ್ರಬಲ ಸೇನೆಗಾದರೂ ಹಿಂದುಸ್ಥಾನ ವನ್ನು ನೆಲಮಾರ್ಗದಿಂದ ಆಕ್ರಮಿಸುವ ಧೈರ್ಯವು ಕನಸಿನಲ್ಲಿ ಕೂಡ ಬರ ಲಾರದು.

ಭಾರತದ ರಕ್ಷಣಾ ಕಾರ್ಯದಲ್ಲಿ ಉದ್ಯುಕ್ತವಾಗಿರುವ ಸರಕಾರದ ಲಕ್ಷ್ಯ ಈ ಕಡೆಗೆ ಅಗತ್ಯ ಹೋಗಬೇಕಾಗಿದೆ ಈಗಿನಂಥ ಸಂದಿಗ್ಧಕಾಲದಲ್ಲಿ ದೇಶದ ರಕ್ಷಣೆಗೆ ಸರಕಾರವು ಮಾಡುವ ಪ್ರತಿ ಯೊಂದು ಹಿತಕಾರ್ಯವೂ ಜನರಿಗೆ ಸರಕಾರದಲ್ಲಿ ಹೆಚ್ಚೆಚ್ಚು ವಿಶ್ವಾಸವನ್ನು ಹುಟ್ಟಿಸಿ, ಸರಕಾರದ ಇತರ ಕಾರ್ಯ ಸಂಪಾದನೆಯನ್ನು ಸುಲಭಮಾಡಿಕೊಡು ವದು.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 3 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P O Peridepi (ನೆಲ್ಲೂರು ಜಿ)

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂವಿವರ

6ನೇ	7ನೇ	8ನೇ ತರಗತಿಗಳಿಗೆ
0—5—0	0—6—0	0—7—0

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟದು.

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು "ಓವಲ್ಟಿನ್" ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೆಲ ಸಮಯದ ಮೊದಲು ಒಂದು ಕಪ್ಪು 'ಓವಲ್ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯೂ ಉಂಟಾಗುತ್ತದೆಂದು ಖಂಡಿತ ಹೇಳಬಹುದು

ಇಷ್ಟು ಮಾತ್ರವಲ್ಲದೆ ಉತ್ತಮ ವಾಗಿ ಬಲಿತ [illegible] ಬಾರ್ಲಿ ದನದ ಹಾಲು ಮತ್ತು ಇತರ [illegible] ವಾದ ವಿಟಮಿನ [illegible] ಗಳಿಂದ ತಯಾರಿಸಲ್ಪಟ್ಟ 'ಓವಲ್ಟಿನ್' ಉತ್ತ [illegible] ವಲ್ಲದೆ, ರಾತ್ರೆ ಸುಖವಾದ ನಿದ್ದೆಗೂ ಶರೀರ ಬೆಳವಣಿಗೆಗೂ ಸಹಕಾರಿಯಾಗುತ್ತದೆ ಇತರ ನಕಲಿ ಪಾನೀಯಗಳನ್ನು ಬಿಡಿರಿ

'ಓವಲ್ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೋ.
(ಇಂಡಿಯಾ) ಲಿಮಿಟೆಡ್

ಕ್ವೈತನೆಸ್ ಹೋಲ್ ಥರ್ಡ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು
ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತವಾದುವು. ಎಲ್ಲಾ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವಿಶಿಷ್ಟ ಬಗೆಯ ಓವಲ್ಟಿನ್ ಸೇರಿರುವುದು. 4 ಮತ್ತು 8 ಔನ್ಸುಗಳ ಪೆಟ್ಟಿಗೆಗಳಲ್ಲಿ ಮತ್ತು ಒಂದು ರಾತ್ತಲ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

66/40

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

14—6—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೪—೬—೧೯೪೦

ಭಾರತೀಯರನ್ನು ತೃಪ್ತಿಪಡಿಸಲಾರರೇ?

ದಬ್ಬಾಳಿಕೆಗೆ ಅಮೇರಿಕದ ಬೆಂಬಲವಿಲ್ಲ!

ಬ್ರಿಟನಿನ ಹೃದಯ ಪರೀಕ್ಷೆ!

ತಪ್ಪನ್ನು ತಿದ್ದುವುದು ಸಾಧ್ಯವೆ?

ಅಂತರ್ರಾಷ್ಟ್ರೀಯ ರಾಜನೀತಿಜ್ಞರಾದ ಪಂಡಿತ ನೆಹರೂಜಿ

ಬ್ರಿಟನು ಕಾಂಗ್ರೆಸಿನ ಕೋರಿಕೆಗಳನ್ನು ತಿರಸ್ಕರಿಸುವದರಿಂದ ಹಿಂದುಸ್ಥಾನದಲ್ಲಿ ಹಿಂದೆ ನಡೆದಿರದ ಮುಂದೆ ನಡೆಯಲಾರದ ಒಂದು ಪ್ರಚಂಡ ಸ್ವಾತಂತ್ರ್ಯ ಆಂದೋಲನವು ಆರಂಭವಾಗುವುದು. ಈ ಆಂದೋಲನದ ಪರಿಣಾಮವಾಗಿ ಸರಕಾರದ ಖರ್ಚು ಅಪರಿಮಿತ ಬೆಳೆದು ಅದು ತೊಂದರೆಗೀಡಾಗುವುದು ಮಾತ್ರವಲ್ಲದೆ, ಜಗತ್ತಿನ—ಮುಖ್ಯವಾಗಿ ಅಮೇರಿಕದ ಸಹಾನುಭೂತಿಯನ್ನು ಕಳಕೊಳ್ಳುವುದು. ಹಿಂದಿನ ವರ್ಷಗಳಲ್ಲಿ ಹಿಂದುಸ್ಥಾನದಲ್ಲಿ ಬ್ರಿಟನಿನ ನೀತಿಧರ್ಮಗಳು ಎಂಥವಾಗಿದ್ದರೂ, ಈಗ ಬ್ರಿಟನು ಅಂಥ ಆಂದೋಲನವನ್ನು ಎದುರಿಸಿ ಆ ಮೂಲಕ ಪ್ರಾಪ್ತವಾಗಬಹುದಾದ ಕಷ್ಟನಷ್ಟಗಳಿಗೆ ತಲೆಕೊಡಲು ಸಮರ್ಥವಾಗಿರುವುದಿಲ್ಲ ಎಂದು ಅಮೇರಿಕದ ಸುಪ್ರಸಿದ್ಧ ಪತ್ರಿಕೆ 'ನೇಷನ್' ಎಂಬುದು ಬರೆಯುತ್ತದೆ.

"ಕಾಂಗ್ರೆಸಿನ ಇತಿಹಾಸವನ್ನು ನೋಡುವದಾದರೆ—ಅದು ೧೯೩೩ರಿಂದಲೂ ತನ್ನ ಧ್ಯೇಯೋದ್ದೇಶ ಮತ್ತು ಕಾರ್ಯಧೋರಣೆಯನ್ನು ಅತಿ ಸ್ಪಷ್ಟವಾದ ಮಾತುಗಳಿಂದ ಜಗತ್ತಿಗೆ ತಿಳಿಸುವ ಪ್ರಯತ್ನಗಳನ್ನು ಮಾಡುತ್ತ ಬಂದಿರುವದು ಗೊತ್ತಾಗುತ್ತದೆ. ಫೆಸಿಜಮ್ ಮತ್ತು ನಾಜಿಜಮ್‌ಗಳೊಂದಿಗೆ ಕಾಂಗ್ರೆಸ ಮುಖಂಡರು ಯಾವ ತರದ ಸಹಾನುಭೂತಿಯನ್ನೂ ತೋರಿಸಿರುವದಿಲ್ಲ ಮಾತ್ರವಲ್ಲ, ಅವನ್ನು ಅವರು ಕಟೂಕ್ತಿಗಳಿಂದ ನಿಷೇಧಿಸಿದ್ದಾರೆ. ಆದರೂ ಕೂಡ ಫೆಸಿಜಮ್ ಮತ್ತು ನಾಜಿಜಮ್‌ಗಳು ಪ್ರಬಲವಾಗುವದರಲ್ಲಿಷ್ಟು ಬ್ರಿಟನಿನ ಜವಾಬ್ದಾರಿಕೆಯನ್ನು ಅವರು ತೋರಿಸಿಕೊಟ್ಟಿದ್ದಾರೆ. ಮಾತ್ರವಲ್ಲ ಯೂರೋಪಿನ ಯುದ್ಧದಲ್ಲಿ ಹಿಂದುಸ್ಥಾನವು ಭಾಗವಹಿಸುವ ಅಥವಾ ವಹಿಸದಿರುವ ನಿರ್ಣಯವನ್ನು ಲಂಡನಿನಲ್ಲಿ ಬ್ರಿಟಿಷ ಸರಕಾರವಲ್ಲ, ಹಿಂದುಸ್ಥಾನದಲ್ಲಿ ಪ್ರಜಾಪ್ರಮುಖರು ಮಾಡಬೇಕಾಗಿತ್ತೆಂಬುದನ್ನೂ ಕಾಂಗ್ರೆಸ ಮುಖಂಡರು ಹೇಳಿದ್ದಾರೆ."

ಬ್ರಿಟನಿನ ಹೃದಯ ಪರೀಕ್ಷೆ

ಬ್ರಿಟನು ಪ್ರಜಾಸತ್ತೆಯ ಸಿದ್ಧಾಂತಗಳ ರಕ್ಷಣೆ ಮತ್ತು ಭದ್ರತೆಗಾಗಿ ಯುದ್ಧದಲ್ಲಿ ಆಸಕ್ತನಾಗಿರುವನಾದರೆ, ಅದು ಹಿಂದುಸ್ಥಾನಕ್ಕೆ ಪ್ರಜಾಸತ್ತೆಯ ಹಕ್ಕು ಅಧಿಕಾರಗಳನ್ನು ಕೊಟ್ಟರೆ ಮಾತ್ರ ಬ್ರಿಟನಿನ ಯಥಾರ್ಥ ಬುದ್ಧಿಯು ಜಗತ್ತಿಗೆ ಗೊತ್ತಾಗುವದು. ಹಿಂದುಸ್ಥಾನದಲ್ಲಿ ಅಲ್ಪಸಂಖ್ಯಾಕರಿರುವದು ನಿಜ. ಆದರೆ ನಾವು ಊಹಿಸಬಹುದಾಗಿರುವದಕ್ಕಿಂತಲೂ ಈ ಅಲ್ಪಸಂಖ್ಯಾಕರ ಸಂಖ್ಯೆ ಕಡಿಮೆ ಇರುತ್ತದೆ. ಒಟ್ಟು ಜನಸಂಖ್ಯೆಯ ಕಾಲಂಶದಷ್ಟು ಮಾತ್ರ ಹಿಂದುಸ್ಥಾನದಲ್ಲಿ ಮುಸಲ್ಮಾನರು ಇರುತ್ತಾರೆ. ಇವರಲ್ಲಿ ಕೂಡ ಕಾಂಗ್ರೆಸನ್ನು ಸಮರ್ಥಿಸುವ ಮತ್ತು ಅದರೊಡನೆ ಸಹಾನುಭೂತಿಯನ್ನಿಟ್ಟಿರುವ ಮುಸಲ್ಮಾನರು ಅನೇಕ ಮಂದಿ ಇರುತ್ತಾರೆ.

ಆದ್ದರಿಂದ ಹಿಂದುಸ್ಥಾನವು ಯುದ್ಧಾಸಕ್ತವಾಗುವ ಕುರಿತು ಕಾಂಗ್ರೆಸಿನೊಡನೆ ವಿಚಾರಿಸದೆ ಬ್ರಿಟನು ಪ್ರಾರಂಭದಲ್ಲಿಯೇ ದೊಡ್ಡ ಪ್ರಮಾದ ಮಾಡಿತು ಎಂದು 'ಫೋರಿನ್' ಎಂಬ ಅಮೇರಿಕದ ಇನ್ನೊಂದು ಪತ್ರಿಕೆಯಲ್ಲಿ ಸರ್ ಆಲ್ಫ್ರೆಡ ವಾಟ್ಸನರು ಬರೆದಿರುತ್ತಾರೆ. ಹಿಂದುಸ್ಥಾನವು ಯುದ್ಧಾಸಕ್ತವಾಗುವದೆಂದು ವ್ಹೈಸ್‌ರಾಯರು ಹಿಂದುಸ್ಥಾನದ ಮುಖಂಡರಿಗೆ ತಿಳಿಸಿದ್ದರು, ಆದರೆ ಆ ನಿರ್ಣಯವನ್ನು ಮಾಡುವ ಮೊದಲು ಆ ಮುಖಂಡರ ಅಭಿಪ್ರಾಯವನ್ನು ಕೇಳಲಿಲ್ಲ. ಹೀಗೆ ಮಾಡಿದ್ದರಿಂದ ವ್ಹೈಸ್‌ರಾಯರು ಕಾನೂನಿಗೆ ವಿರೋಧವಾಗಿ ನಡೆಯಲಿಲ್ಲವಾದರೂ, ಅವರು ಮುಖಂಡರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅವರ ಕರ್ತವ್ಯಧರ್ಮವಾಗಿತ್ತು. ಚೀನ, ಅಬಿಸೀನಿಯ, ಆಸ್ಟ್ರಿಯ, ಜೆಕೋಸ್ಲೊವೇಕಿಯದಲ್ಲಾದ ಜಪಾನ, ಇಟಲಿ ಮತ್ತು ಜರ್ಮನಿಯ ಅತ್ಯಾಚಾರಗಳನ್ನು ಹಿಂದುಸ್ಥಾನದ ಮುಖಂಡರು ತೀವ್ರ ನಿಷೇಧಿಸಿದ್ದರು. ಆದ್ದರಿಂದ ಈ ಪ್ರಮುಖರ ಒಪ್ಪಿಗೆಯನ್ನು ಪಡೆದೇ ಬ್ರಿಟನು ಹಿಂದುಸ್ಥಾನವನ್ನು ಯುದ್ಧಾಸಕ್ತರಾಷ್ಟ್ರವೆಂದು ಸಾರಿದ್ದರೆ ಹಿಂದುಸ್ಥಾನವು ಸ್ವೇಚ್ಛೆಯಿಂದ ತನ್ನ ತನುಮನಧನ ಸಹಾಯವನ್ನು ಬ್ರಿಟನಿಗೆ ಕೊಡುತ್ತಿತ್ತು. ಹೀಗೆ ಮಾಡದೆ ಬ್ರಿಟನು ಯುದ್ಧಾರಂಭದಲ್ಲಿಯೇ ದೊಡ್ಡ ತಪ್ಪನ್ನು ಮಾಡಿತು.

ತಪ್ಪನ್ನು ತಿದ್ದುವುದು ಕಠಿಣವಾಗಿದೆ

ಆದರೆ ಬ್ರಿಟನು ಆಗ ಮಾಡಿದ ತಪ್ಪನ್ನು ಈಗ ತಿದ್ದುಪಡಿಸುವದು ಕಷ್ಟತರವಾಗಿ ಪರಿಣಮಿಸಿದೆ. ಹಿಟ್ಲರಿಜಮನ್ನು ಕೊನೆಗಾಣಿಸಲಿಕ್ಕೆ ಕಾಂಗ್ರೆಸು ಸಿದ್ಧವಾಗಿದೆಯಾದರೂ, ಹಿಂದುಸ್ಥಾನದ ಜನರ ಒಪ್ಪಿಗೆಯನ್ನು ಪಡೆಯದೆ ಬ್ರಿಟನು ಹಿಂದುಸ್ಥಾನವನ್ನು ಯುದ್ಧಾಸಕ್ತ ರಾಷ್ಟ್ರವೆಂದು ಸಾರಿತಾಗಿ ಕಾಂಗ್ರೆಸು ಬ್ರಿಟನನ್ನು ದೂರುತ್ತದೆ. ಯುದ್ಧಾರಂಭದಲ್ಲಿ ಮಹಾತ್ಮಾಗಾಂಧಿಯವರು ಬ್ರಿಟನಿಗೆ ಯಾವ ಶರತ್ತೂ ಇಲ್ಲದೆ ಕಾಂಗ್ರೆಸಿನ ನೈತಿಕ ಬೆಂಬಲವನ್ನು ಕೊಡಲು ಸಿದ್ಧರಿದ್ದರು. ಆದರೆ ಯುದ್ಧ ಮುಗಿದೊಡನೆ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವೆವೆಂದು ಬ್ರಿಟನು ಸಾರಿದ ಹೊರತು ಈ ರೀತಿಯ ನೈತಿಕ ಬೆಂಬಲವನ್ನು ಕೊಡಲಾಗುವುದಿಲ್ಲವೆಂದು ಕಾಂಗ್ರೆಸು ನಿರ್ಣಯಿಸಿತು. ಗಾಂಧಿಯವರೂ ಅದು ಸರಿಯೆಂದರು. ಕಾಂಗ್ರೆಸು ಈ ರೀತಿಯ ನಿರ್ಣಯ ಮಾಡಿದ್ದು ಯುಕ್ತಿಯುಕ್ತ ಮತ್ತು ಸಮಂಜಸವಾಗಿತ್ತೆಂಬುದು ಅಲ್ಲಿಂದ ಮುಂದೆ ನಡೆದ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಯುದ್ಧವು ಕೊನೆಗೊಂಡೊಡನೆ ಭಾರತೀಯ ಘಟನಾ ಸಮಿತಿ ಅಥವಾ ಕಾನ್ಸ್ಟಿಟ್ಯೂಯಂಟ್ ಎಸೆಂಬ್ಲಿಯು ತಯಾರಿಸುವ ಘಟನೆಯನ್ನು ಬ್ರಿಟಿಷ ಸರಕಾರವು ಚರ್ಚೆಯಿಲ್ಲದೆ ಒಪ್ಪಬೇಕೆಂದು ಕಾಂಗ್ರೆಸು ಹೇಳುವ ಮಾತಿನಲ್ಲಿ ನ್ಯಾಯವಿದೆ. ಆದುದರಿಂದ ಈಗಲಾದರೂ ಕಾಂಗ್ರೆಸಿಗೆ ಈ ಭರವಸೆಯನ್ನು ಕೊಟ್ಟು, ಯುದ್ಧಕಾರ್ಯದಲ್ಲಿ ಜಗತ್ತಿನ ಪೂರ್ಣ ಸಹಾನುಭೂತಿಯನ್ನು ಪಡೆಯಲಿಕ್ಕೆ ಬ್ರಿಟನು ಹಿಂದಾಗಲಾರದೆಂದು ನಂಬಿದ್ದೇವೆ. ಯುದ್ಧಕಾರ್ಯದಲ್ಲಿ ಶಸ್ತ್ರಾಸ್ತ್ರ ಮತ್ತು ಜನಬಲಕ್ಕಿಂತಲೂ ನೈತಿಕಬಲದಿಂದ ಹೆಚ್ಚಿಗೆ ಸಫಲತೆಯು ದೊರೆಯುವದೆಂಬುದನ್ನು ಬ್ರಿಟನು ಒಪ್ಪುತ್ತದೆ. ಹಾಗಿದ್ದ ಮೇಲೆ ಅದು ಕಾಂಗ್ರೆಸನ್ನು ಒಲಿಸಿ ಹಿಂದುಸ್ಥಾನದ ಮತ್ತು ಜಗತ್ತಿನ ನೈತಿಕ ಬೆಂಬಲವನ್ನು ಪಡೆಯಲಿಕ್ಕೆ ಹಿಂದೆ ಮುಂದೆ ನೋಡುವದೇಕೆ? ಬ್ರಿಟನು ಪ್ರಜಾಸತ್ತೆಗಾಗಿ ಹೋರಾಡುತ್ತಿರುವದಿಲ್ಲವೆ? ಅದು ಕೇವಲ ಸಾಮ್ರಾಜ್ಯಸ್ವಾರ್ಥಗಳ ರಕ್ಷಣೆಗಾಗಿ ಮಾತ್ರ ಹೋರಾಡುತ್ತಲಿದೆಯೆ?

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿ

ತಾರೀಕು 14—6—1940

ಭಾರತದ ವಿಚಾರ

"ಭಾರತವು ಇಂದಿನ ಯುದ್ಧದಲ್ಲಿ ಬ್ರಿಟನಿಗೆ ತನ್ನ ಸೈನಿಕರನ್ನು ಕೊಡಬೇಕಾದರೆ, ಆ ಸೈನಿಕರು ಯುದ್ಧದಲ್ಲಿ ಜೀವದ ಹಂಗಿಲ್ಲದೆ ಕಾದಾಡಬೇಕಾದರೆ ಅವರು ಆಂಗ್ಲೇಯರು ಮತ್ತು ಜರ್ಮನರೊಳಗಿನ ತಾರತಮ್ಯಗಳನ್ನು ತಿಳಿದುಕೊಂಡರೆ ಸಾಲದು, ಅಗತ್ಯಬಿದ್ದರೆ ಸಾಯಲೂಬೇಕೆಂದು ಯುದ್ಧ ಮಾಡಬೇಕೆಂಬ ಅಭಿಲಾಷೆಯು ಒಂದು ದೇಶದ ಜನರಿಗೆ ಬರಬೇಕಾದರೆ, ನಿಜವಾಗಿ ಅವರು ಸ್ವತಂತ್ರರಾಗಿ ಬಂಧನದಿಂದ ಬಿಡುಗಡೆ ಹೊಂದಿರುವವರಾಗಿ ತಿಳಿದಿರಬೇಕು" ಹೀಗೆಂದು ಪ್ರಕೃತದ ಯುದ್ಧದಲ್ಲಿ ಬ್ರಿಟನು ಭಾರತದ ವಿಷಯ ಮಾಡತಕ್ಕ ಕರ್ತವ್ಯವೇನೆಂಬ ವಿಚಾರವಾಗಿ ರಾಜಗೋಪಾಲಾಚಾರ್ಯರು ತಿನ್ನೆವೆಲ್ಲಿ ಜಿಲ್ಲೆಯ ರಾಜಕೀಯ ಪರಿಷತ್ತಿನಲ್ಲಿ ಕೊಟ್ಟ ಭಾಷಣದಲ್ಲಿ ತಿಳಿಸಿದರು.

ಇಂದು ಯೂರೋಪಿನ ಯುದ್ಧದಿಂದ ಜಗತ್ತೇ ವಿಷಮ ಪರಿಸ್ಥಿತಿಯಲ್ಲಿದೆ! ಅದರಲ್ಲಿ ಜರ್ಮನಿಯೆದುರು ನಿಂತ ಮಿತ್ರರಾಷ್ಟ್ರಗಳು ಅತ್ಯಂತ ವಿಷಮ ಕಾಲದಲ್ಲಿವೆ ಈಗ ಭಾರತದಿಂದ ಬ್ರಿಟನು ಬೆಂಬಲವನ್ನು ಹಾರೈಸುವುದು ಅಗತ್ಯವಾದರೂ, ಬ್ರಿಟನು ಭಾರತಕ್ಕೆ ಸಲ್ಲತಕ್ಕ ನ್ಯಾಯವನ್ನು ಕೊಡಲು ಯಾವ ರೀತಿಯಿಂದಲೂ ಹಿಂಜರಿಯುವುದು ಯುಕ್ತವಾಗಲಿಕ್ಕಿಲ್ಲ. ಜನತೆಯು ಸಂಗ್ರಾಮರಂಗಕ್ಕಿಳಿದು ಕಾದಾಡಬೇಕಾದರೆ, ಅವರು ಮಾಡುವ ಯುದ್ಧವು ಅವರ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಇದೆಯೆಂಬ ಅಭಿಪ್ರಾಯವಾಗದೆ ನಿರ್ವಾಹವಿಲ್ಲ. ಅಂತಹ ಅಭಿಪ್ರಾಯವು ಭಾರತೀಯರಲ್ಲಿ ಹುಟ್ಟಿ ಅವರು ಬ್ರಿಟನಿಗೆ ಬೆಂಬಲಕೊಡಬೇಕಾದಲ್ಲಿ ಬ್ರಿಟನು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವ ಬಗ್ಗೆ ಹಿಂದುಮುಂದೆ ನೋಡಬಾರದು. ಇದರಿಂದ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಬ್ರಿಟನಿನ ಸಾರಿದ ಯುದ್ಧೋದ್ದೇಶವೂ ಸ್ಪಷ್ಟವಾಗಿ ಜನತೆಯ ಹೃದಯದಲ್ಲಿ ಹೆಚ್ಚು ಪರಿಣಾಮವನ್ನು ಉಂಟುಮಾಡುವುದು.

ದೇಶದಲ್ಲಿ ರಾಷ್ಟ್ರೀಯ ಸರಕಾರವಿರದೆ ಇಂದು ಜನತೆಯು ಪೂರ್ಣ ಶಕ್ತಿಯಿಂದ ಕಾದಾಡಲಾರದು. ಪ್ರಾಂತಿಕ ಆಡಳಿತ ಮಾತ್ರವಲ್ಲ ಕೇಂದ್ರದ ಆಡಳಿತವನ್ನೂ ಜನತೆಯ ಪ್ರತಿನಿಧಿಗಳ ವಶ ಒಪ್ಪಿಸಿ ಜನರಿಗೆ ಸರಕಾರವು ನಮ್ಮದು ಎಂಬ ಪ್ರೀತಿಯು ಹುಟ್ಟಬೇಕು ಇಂತಹ ಅಪೇಕ್ಷೆಯನ್ನು ಜನರಲ್ಲಿ ಹುಟ್ಟಿಸಬೇಕೆಂದಾದರೆ ಬ್ರಿಟನಿನ ನೀತಿಯಲ್ಲಿ ತೀವ್ರವಾದ ಬದಲಾವಣೆಯಾಗಬೇಕು. ಬ್ರಿಟನು ಸಾಮ್ರಾಜ್ಯಶಾಹೀ ನೀತಿಯನ್ನು ತಿಲಾಂಶವಾದರೂ ಇಟ್ಟುಕೊಳ್ಳಬಾರದು.

ರಾಷ್ಟ್ರೀಯ ಸರಕಾರದ ಮಹತ್ವದ ಸಂದರ್ಭದಲ್ಲಿ ಯಾವುದೇ ಆಕ್ಷೇಪವನ್ನು ಮುಂದೊಡ್ಡಿ ಕಾಲವಿಳಂಬ ಮಾಡುವುದು ಬ್ರಿಟನಿನ ಗೌರವಕ್ಕೆ ಕುಂದನ್ನು ತರಬಹುದು. ಅಲ್ಪಸಂಖ್ಯಾಕರ ಹಿತಸಂರಕ್ಷಣೆಗಳಿರಬೇಕು; ಸರಕಾರವು ಏಕ ಪಕ್ಷದ ಸರಕಾರವಾಗಿರದೆ, ರಾಷ್ಟ್ರೀಯ ಸರಕಾರವಾಗಿರಬೇಕು ಆದರೆ ರಾಷ್ಟ್ರೀಯ ಸರಕಾರದಲ್ಲಿ ಯಾದರೂ ಜಾತೀಯತೆಯ ಸಂಕೋಚ ಬುದ್ಧಿಗಳ ಪ್ರಚಾರಕ್ಕೆ ಖಂಡಿತ ಆಸ್ಪದವಿಲ್ಲವೆಂಬುದನ್ನು ಲೋಕದಲ್ಲಿ ಪ್ರಜಾಪ್ರಭುತ್ವ ವಾದಿಗಳೆನ್ನುವ ಬ್ರಿಟಿಷರೇಕೆ ತಿಳಿದುಕೊಳ್ಳುವುದಿಲ್ಲ?

ಬ್ರಿಟಿಷ್ ರಾಜನೀತಿಜ್ಞರು ಇಂದು ನಿಷ್ಕಲ್ಮಷ ಬುದ್ಧಿಯಿಂದ ಭಾರತದ ಕುರಿತು ವಿಚಾರಿಸಿ ನ್ಯಾಯರೀತಿಯಿಂದ ನಡೆಯುವುದರ ಮೂಲಕ ಬ್ರಿಟನಿಗೆ ಭಾರತಕ್ಕೂ ಲೋಕಕ್ಕೂ ಕ್ಷೇಮವಾಗಲಿದೆ.

ಇಟೆಲಿಯ ಯುದ್ಧಪ್ರವೇಶ

ಬಹುಕಾಲದ ನಿರೀಕ್ಷೆಯಾಗಿದ್ದ ಇಟಲಿಯ ಯುದ್ಧನಿರ್ಧಾರವು ಇಂದು ಪ್ರಕಟವಾಯಿತು. ತನ್ನ ಪಾಶವಿಕ ಮಹತ್ವಾಕಾಂಕ್ಷೆಗೆ ಅನುಗುಣವಾಗಿ ಮುಸಲಿನಿಯು ಹಿಟ್ಲರನನ್ನೇ ಪ್ರೋತ್ಸಾಹಿಸಲು ಬಂದಿದ್ದಾನೆ. ಮಿತ್ರರಾಷ್ಟ್ರದವರು ಜೀವನ-ಮರಣದ ಸಂಕಷ್ಟದಲ್ಲಿರುವಾಗ ಅವರ ಎದುರಾಳಿಯನ್ನು ಸೇರಿಕೊಂಡು ಮಿತ್ರರಾಷ್ಟ್ರದವರಿಗೆ ಮುಸಲನಿಯು ಇಂದು ಅಪಾಯ ಕಾಲದಲ್ಲಿ ಮಹಾ ಅನ್ಯಾಯವನ್ನು ಮಾಡಿರುತ್ತಾನೆ

ಇದರಿಂದ ಭೂಮಧ್ಯ ಸಮುದ್ರದ ಪ್ರದೇಶದಲ್ಲಿ ಮುಂದಿನ ಯುದ್ಧದ ಆವೇಶವು ಆರಂಭವಾಗುವುದು ಬಾಲ್ಕನ್ ರಾಷ್ಟ್ರಗಳು ತಟಸ್ಥವಾಗಿರುವವೆಂದು ಇಂದು ಮುಸಲನಿಯು ಸಾರುತ್ತಿರುವನಾದರೂ ಮುಂದಕ್ಕೆ ಅವುಗಳೂ ಯುದ್ಧಕ್ಕೆ ಪ್ರವೇಶಿಸದೆ ತಟಸ್ಥವಾಗುವುವೇ ಎಂಬುದು ಪ್ರಶ್ನೆಯಾಗಿದೆ.

ಇಟೆಲಿಯು ಯುದ್ಧಕ್ಕಿಳಿಯಿತೆಂಬ ವಾರ್ತೆಯು ಕೇಳಿದಂತೆ ಅಮೇರಿಕದ ಗರ್ಜನೆಯೂ ತೀವ್ರವಾಗಿದೆ. ಮಿತ್ರರಾಷ್ಟ್ರಗಳ ಬಗ್ಗೆ ಆದಿಯಿಂದಲೂ ಸಹಾನುಭೂತಿಯನ್ನು ತೋರ್ಪಡಿಸುತ್ತಿರುವ ಅಮೇರಿಕವು ಇಂದು ಮಿತ್ರರಾಷ್ಟ್ರಗಳಿಗೆ ವಿಪತ್ತು ಹೆಚ್ಚು ಹೆಚ್ಚಾಗುತ್ತಾ ಬರಲು ತನ್ನ ಸಹಾಯವನ್ನು ಆದಷ್ಟು ಬೇಗನೇ ಕೊಡಲು ಮುಂದೆ ಬರುವುದೆಂದು ತಿಳಿಯ ತಕ್ಕದ್ದಾಗಿದೆ. ಅಮೇರಿಕವು ಮಿತ್ರರಾಷ್ಟ್ರಗಳಿಗೆ ಸರ್ವ ರೂಪದ ಸಸ್ನೇಹ ಸಹಾಯಗಳನ್ನೂ ಕೊಡಲು ಖಂಡಿತ ಮುಂದು ಬರಲಿದೆ!

ಅಂತೂ ದಿನದಿಂದ ದಿನಕ್ಕೆ ಒಂದೊಂದೇ ಪ್ರಬಲ ರಾಷ್ಟ್ರಗಳು ರಣರಂಗಕ್ಕೆ ಇಳಿಯುತ್ತಿವೆ. ಯೂರೋಪು ಆದ್ಯಂತವಾಗಿ ಯುದ್ಧಕ್ಷೇತ್ರವಾಗಿದೆ. ಅಮಾನುಷ ನರಹತ್ಯೆಯು ನಡೆಯುತ್ತಿದೆ. ನಿರಪರಾಧಿಗಳಿಗೆ ಹಲವರಿಗೆ ಅನ್ಯಾಯವಾಗಿದೆ! ಜೀವಲೋಕವೇ ಸಂಕಷ್ಟದಿಂದ ಹೀಗೆ ನರಳುತ್ತಿದೆ!

ಚರ್ಚಿಲ್ಲರ ಸ್ಪಷ್ಟೋಕ್ತಿ

ಬ್ರಿಟಿಷ್ ಪ್ರಧಾನಮಂತ್ರಿ ಚರ್ಚಿಲ್ಲರು ಮೊನ್ನೆ ಸುದೀರ್ಘವಾದೊಂದು ಭಾಷಣವನ್ನು ಕೊಟ್ಟು ಯುದ್ಧದ ವಿಷಯದಲ್ಲಿ ವಿಸ್ತಾರದ ವಿವರವೊಂದನ್ನು ಸಾಮ್ರಾಜ್ಯದ ಮುಂದಿಟ್ಟಿರುತ್ತಾರೆ. ಅದರಲ್ಲಿ ಫ್ಲಾಂಡರ್ಸ್ ಕದನದ ವರೆಗಿನ ವಿವರವನ್ನು ಕೊಟ್ಟಿರುತ್ತಾರೆ. ಬ್ರಿಟಿಷರ ಮತ್ತು ಫ್ರೆಂಚರ ಯುದ್ಧ ನಿರ್ಧಾರವನ್ನು ದೃಢ ನಿಶ್ಚಯದಿಂದ ಸಾರಿದ್ದಾರೆ. ಆದರೆ ಮಿತ್ರರಾಷ್ಟ್ರದವರ ದೃಢ ನಿಶ್ಚಯವನ್ನು ಸಾರುವುದರೊಡನೆ, ಇಂದಿನ ಕಾಳಗದಲ್ಲಿ ಮಿತ್ರರಾಷ್ಟ್ರದವರಿಗೆ ಒದಗಿದ ಮಹಾ ನಷ್ಟವನ್ನೂ ತಿಳಿಸದೆ ಬಿಡಲಿಲ್ಲ ಯುದ್ಧದ ಆಗುಹೋಗುಗಳನ್ನು ಎಲ್ಲಾ ವಿಧದಿಂದಲೂ ತಿಳಿದುಕೊಂಡು ಚರ್ಚಿಲ್ಲರು ತಮ್ಮ ಭಾಷಣವನ್ನು ಅತ್ಯಂತ ಸ್ಪಷ್ಟವಾದ ಮಾತಿನಲ್ಲಿ ಹೇಳಿದ್ದಾರೆ

ಚರ್ಚಿಲ್ಲರು ತಮ್ಮ ಭಾಷಣದಲ್ಲಿ ಬೆಲ್ಜಿಯಮ್ ಅರಸನ ರಾಜದ್ರೋಹ, ಇದರಿಂದ ಬೆಲ್ಜಿಯಮಿಗಾದ ದುರವಸ್ಥೆ ಇವುಗಳನ್ನು ಸ್ಪಷ್ಟಪಡಿಸಿದ್ದಾರೆ ಚರ್ಚಿಲ್ಲರು ಇಂದಿನ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಉಚ್ಚವಾದ ಧ್ಯೇಯದಿಂದ ಕಾದಾಡುತ್ತಿರುವಲ್ಲಿ ಒಂದು ಪಕ್ಷ ಅಪಜಯ ಹೊಂದಿದ ಪಕ್ಷದಲ್ಲಿಯೂ ಈ ಯುದ್ಧವನ್ನು ತಮ್ಮ ಸಾಮ್ರಾಜ್ಯದ ಜನರು ಮುಂದುವರಿಸದಿರಲು ತಕ್ಕದು ಅಭಿಪ್ರಾಯ ಪಟ್ಟಿದ್ದಾರೆ ಮಿತ್ರರಾಷ್ಟ್ರಗಳ ತನ್ನ ಸಾಮ್ರಾಜ್ಯಗಳು ತಮ್ಮನ್ನು ಅನುಸರಿಸಬೇಕೆಂದು ಹಾರೈಸುತ್ತಿರುವುದರೊಡನೆ, ತಮ್ಮ ಸಾಮ್ರಾಜ್ಯದ ಜನತೆಯನ್ನು ನ್ಯಾಯದಾನದಿಂದ ತೃಪ್ತಿಪಡಿಸುವುದೂ ಅವಶ್ಯವಾಗಿದೆ.

ಕಾಕ್ಸಾರರ ಗೊಂದಲ

ಲಾಹೋರಿನಲ್ಲಿ ಕಾಕ್ಸಾರರ ಗೊಂದಲವು ತಿರುಗಿ ವಿಪರೀತವಾಗಿದೆ ಈ ಚಳವಳಗಾರರನ್ನು ಅಡಗಿಸುವಲ್ಲಿ ಸರಕಾರವು ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದೆ. ತಿರುಗಿ ಈಗ ಅವರನ್ನೆಲ್ಲಾ ಬಂಧಿಸಿ ಸೆರೆಯಲ್ಲಿರಿಸುವ ಆಜ್ಞೆ ಹೊರಟಿದೆ.

ಕಾಕ್ಸಾರರನ್ನು ಬಂಧಿಸುವ ಆಜ್ಞೆ ಹೊರಟು ಪೋಲೀಸರು ಆ ಕಾರ್ಯೋದ್ಯುಕ್ತರಾಗಲು ದೊಂಬಿಯುಂಟಾಯಿತು. ಇದರ ಪರಿಣಾಮವಾಗಿ ಚಳವಳಿಗಾರರಲ್ಲಿ ಒಬ್ಬನು ಮೃತಿಹೊಂದಿ ಹದಿನಾಲ್ಕು ಮಂದಿ ಗಾಯಗೊಂಡಿರುವರು. ಸುಮಾರು ೩೦೦ ಮಂದಿ ಕಾಕ್ಸಾರ ಚಳವಳಗಾರರನ್ನು ಹಿಡಿದು ಬಂಧನದಲ್ಲಿರಿಸಲಾಗಿದೆ

ಈ ಕಾರ್ಯದಲ್ಲಿ ಸುಮಾರು ಸಾವಿರ ಮಂದಿ ಪೋಲಿಸರು ಉದ್ಯುಕ್ತರಾಗಿದ್ದರು. ಇಬ್ಬರು ಕಾನ್‌ಸ್ಟೇಬಲರಿಗೂ ಎಂಟು ಪೋಲೀಸರಿಗೂ ಬಹಳ ಗಾಯವಾಗಿರುತ್ತದೆ. ಪೋಲೀಸರು ಮಧ್ಯರಾತ್ರಿಯ ಮೇಲೆ ಸುಮಾರು ಹನ್ನೊಂದು ಮಸೀದಿಗಳನ್ನು ಮುತ್ತಿಗೆಹಾಕಿದರು. ಇವುಗಳಲ್ಲಿ ಐದು ಮಸೀದಿಗಳಲ್ಲಿ ಪೋಲೀಸರಿಗೂ ಕಾಕ್ಸಾರರಿಗೂ ಭಯಂಕರ ಕಾದಾಟವೇ ಆಯಿತು.

ಹಲವು ಸಮಯಗಳಿಂದ ಈ ಕಾಕ್ಸಾರರೆಂಬ ಗುಪ್ತ ಚಳವಳಗಾರರು ಚಟುವಟಿಕೆಗಳನ್ನು ತೋರಿಸುತ್ತಿರುವರು. ಇವರ ಉದ್ದೇಶವು ಕೇವಲ ಜಾತಿಯ ಬುದ್ಧಿಯ ಸಂಕೋಚಭಾವದ್ದೆಂದು ಗೊತ್ತಾಗಿದೆ. ಕ್ರಾಂತಿಯ ಆತುರವೂ ಇವರಲ್ಲಿ ಇರುವುದೆಂದು ಹಲವು ಆಧಾರಗಳಿಂದ ತಿಳಿದು ಬಂದಿದೆ. ಇಂತಹ ಚಟುವಟಿಕೆಗಳನ್ನು ತಡೆಯುವುದು ಸರಕಾರದ ಕರ್ತವ್ಯವೇ ಆಗಿರುತ್ತದೆ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಬೊಂಬಾಯಿ

ಪ್ರಗತಿಪರವಾದ ಈ ಜೀವವಿಮಾ ಕಂಪನಿಯ ಕಳೆದ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ಇದರೊಡನೆ ಇದರ ಚೇರ್‌ಮೇನರು ಕಂಪನಿಯ ವಾರ್ಷಿಕಾಧಿವೇಶನದ ಸಂದರ್ಭದಲ್ಲಿ ಕೊಟ್ಟ ಭಾಷಣದ ವಿವರವೂ ಇದೆ ಇವೆರಡನ್ನೂ ನಾವು ಅತ್ಯಂತ ಆದರದಿಂದ ಸ್ವೀಕರಿಸುತ್ತೇವೆ

ಈ ಕಂಪನಿಯು ಜೀವವಿಮಾ ಪ್ರಪಂಚದಲ್ಲಿ ಕಾಲಿಟ್ಟ ಮೇಲೆ ದಿನೇ ದಿನೇ ಅಭಿವೃದ್ಧಿ ಹೊಂದಿ ಭಾರತದ ವಿವಿಧ ಭಾಗಗಳಲ್ಲಿ ಅನೇಕ ಶಾಖೆಗಳನ್ನು ತೆರೆದು ಜನಾದರಣೀಯವಾಗಿರುವ ವಿಷಯವು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಕಳೆದ ೬೫ ವರ್ಷಗಳಿಂದ ಈ ಸಂಸ್ಥೆಯು ಬಹಳ ಅಭಿವೃದ್ಧಿಯನ್ನು ತೋರಿಸಿ, ಪ್ರಮುಖ ಕಂಪನಿಯಲ್ಲಿ ಒಂದಾಗಿ ಮೆರೆಯುತ್ತಿದೆ.

ಇಂದಿನ ಕಾಲದಲ್ಲಿ ಜೀವವಿಮೆಗಳು ಮಾನವನ ದಿನನಿತ್ಯದ ವ್ಯವಹಾರಗಳಲ್ಲಿ ಸೇರಿಹೋಗಿರುವಷ್ಟು ಬಳಕೆಯಲ್ಲಿವೆ. ಜನರಿಗೆ ಬೇರೆಬೇರೆ ವಿಧದ ಖರ್ಚುವೆಚ್ಚಗಳ ದಾರಿಯಿರುವಾಗ ಇಂತಹ ಭದ್ರವಾದ ಸಂಸ್ಥೆಗಳಲ್ಲಿ ವಿಮೆ ಮಾಡುವುದರಿಂದ ಜನರು ತಮ್ಮ ಮತ್ತು ಮುಂದಿನ ತಮ್ಮ ಸಂತತಿಯ ಏಳಿಗೆಯ ಬಗ್ಗೆ ಕೆಲಸ ಮಾಡಿದಂತೆಯೇ ಆಗಿದೆ.

ಈ ಪ್ರಗತಿಪರವಾದ ಸಂಸ್ಥೆಗೆ ನಾವು ಸರ್ವತೋಮುಖವಾದ ಅಭಿವೃದ್ಧಿಯನ್ನು ಹಾರೈಸುತ್ತೇವೆ

ಅಭಿನಂದನೆ

ಬಾಂಬೆ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್. ಇದರ ಪಾಲಿಸಿದಾರರ ಪರವಾಗಿ ಶ್ರೀ ಸಂಜೀವ ಪುಂಡಲೀಕ ನಾಯಕರು ಡೈರೆಕ್ಟರರಾಗಿ ತಾ ೧೧-೬-೪೦ ರಂದು ಚುನಾಯಿಸಲ್ಪಟ್ಟಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಇವರು ಬೊಂಬಾಯಿಯಲ್ಲಿ ಕಮಿಶನ್ ಏಜೆಂಟರಾಗಿದ್ದಾರೆ. ಇವರು ಕೆನರಾ ಬೇಂಕ್ ಸದರ್ನ್‌ಲೇಂಡ್ ಟ್ರಸ್ಟ್ ಇದರ ಡೈರೆಕ್ಟರರೂ ಆಗಿರುತ್ತಾರೆ. ಒಳ್ಳೆಯ ಉತ್ಸಾಹೀ ತರುಣರು ಮಾತ್ರವಲ್ಲದೆ ಜನಪ್ರೀತರೂ ಆದ ಕುಶಲರಾದ ವ್ಯವಹಾರ ನಿಪುಣರಾಗಿದ್ದಾರೆ.

ಕಾಂಗ್ರೆಸಿಗೆ ಅಧಿಕಾರ ಸ್ವೀಕಾರದಾಶೆಯಿಲ್ಲ!



ರಾಷ್ಟ್ರಪತಿ ಅಜಾದರು
ಕಾಂಗ್ರೆಸಿಗೆ ಅಧಿಕಾರ
ಸ್ವೀಕಾರದ ಯೋಚನೆಯಿಲ್ಲ
ಸುದ್ದಿಗಳೆಲ್ಲಾ ಸುಳ್ಳು
ರಾಷ್ಟ್ರಪತಿ ಅಜಾದರ ಹೇಳಿಕೆ

ಕಾಂಗ್ರೆಸ್ ಪ್ರಾಂತಗಳ ಮಾಜಿ ಮಂತ್ರಿ ಮಂತ್ರಿಗಳೆಲ್ಲಾ ದಿಲ್ಲಿಯಲ್ಲಿ ಜುಲೈ ೧ಳನೇ ತಾರೀಕು ಮೌಲಾನಾ ಅಜಾದರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪುನಃ ಅಧಿಕಾರ ಸ್ವೀಕಾರದ ಅಂಶವನ್ನು ಕುರಿತು ಪರಿಶೀಲಿಸುವರೆಂಬ ಒಂದಾಗಿ ಪತ್ರಿಕೆಗಳಲ್ಲಿ ಬಂದಿದ್ದ ವದಂತಿಯನ್ನು ಕುರಿತು ಮೌ| ಅಜಾದರೊಡನೆ ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯು ಭೇಟಿ ಮಾಡಿ ಪ್ರಶ್ನಿಸಿದರು. ಆ ಸುದ್ದಿಗಾಗಿ ಮೌ| ಅಜಾದರು ವಿಸ್ಮಯವನ್ನೇ ತೋರ್ಪಡಿಸಿ ಅದು ಶುದ್ಧ ನಿರಾಧಾರವಾದುದು ಎಂದ ನುಡಿದರು. “ಕಾಂಗ್ರೆಸಿಗೆ ಸಂಬಂಧಿಸಿದಂತೆ ಆ ರೀತಿಯ ಯಾವ ಸಮ್ಮೇಳನವೂ ಇಲ್ಲ. ಈಗಿನ ಸಂದರ್ಭದಲ್ಲಿ ಅಧಿಕಾರವನ್ನು ಸ್ವೀಕರಿಸುವುದ ಕೂಡ ಅಸಾಧ್ಯದ ಮಾತು. ೧೯೩೯ನೇ ಅಕ್ಟೋಬರ ೧೦ರಲ್ಲಿ ಕಾಂಗ್ರೆಸ ಯಾವ ತೀರ್ಮಾನಕ್ಕೆ ಬಂದಿತೋ ಅದೇ ತೀರ್ಮಾನವನ್ನೇ ಇಂದೂ ಕಾಂಗ್ರೆಸು ಅನುಸರಿಸುತ್ತಿದೆ.”

ಬೇಂಕುಗಳಿಂದ ಹಣವಾಪಾಸು
ತೆಕೊಳ್ಳಬೇಡಿ
ಗಾಂಧಿಜಿಯವರ ಹೇಳಿಕೆ

“ಈ ದೇಶದಲ್ಲಿ ಜನರು ಭೀತಿಗೊಳಗಾಗಕೂಡದು” ಎಂಬುದಾಗಿ ಗಾಂಧೀಜಿಯವರು ಹರಿಜನದಲ್ಲಿ ಸಲಹೆಯಿತ್ತಿದ್ದಾರೆ.

“ಯಾವಾಗಲೂ ಭೀತಿಯು ಮಾನಸಿಕ ಸ್ಥಿರತೆಯನ್ನು ಕದಲಿಸುವುದು. ಫ್ರಾನ್ಸ್ ಮತ್ತು ಬ್ರಿಟನ್‌ಗಳಲ್ಲಿ ಪರಿಸ್ಥಿತಿಯು ಹೇಗಿದ್ದರೂ ಕೂಡ ಅಲ್ಲಿನ ಜನರು ಭೀತರಾಗಿಲ್ಲ. ಈ ಪಶ್ಚಿಮ ರಾಷ್ಟ್ರಗಳ ಕಷ್ಟಸ್ಥಿತಿಯಿಂದ ನಾವು ಕಲಿತು ನಮ್ಮಲ್ಲಿ ಭೀತಿಯನ್ನು ದೂರವಿಡಬೇಕು.

“ನಿಮ್ಮ ನಿಮ್ಮ ಕೆಲಸದಲ್ಲಿ ಎಂದಿನಂತೆಯೇ ನೀವು ತೊಡಗಿ ನಿಮ್ಮ ಡಿಪಾಜಿಟ್‌ಗಳನ್ನು ವಾಪಾಸು ತೆಗೆದುಕೊಳ್ಳುವ ಗೋಜಿಗೆ ಹೋಗಬೇಡಿ. ನಿಮ್ಮ ಕಾಗದದ ಹಣವನ್ನು (ಕರೆನ್ಸಿನೋಟು ಮುಂತಾದುವು) ನಗದಾಗಿ ಮಾಡಿಕೊಳ್ಳುವದಕ್ಕಾಗಿ ತವಕಪಡಬೇಡಿ. ನೀವು ಎಚ್ಚರಿಕೆಯಿಂದಿದ್ದರೆ ನಿಮಗೇನೂ ತೊಂದರೆಯಾಗುವುದಿಲ್ಲ. ಅರಾಜಕತೆಯು ನಮ್ಮಲ್ಲೇನಾದರೂ ಬರುವುದಾದರೆ ಅಗ್ನಿ ಭೂಮಿಯಲ್ಲಿ ಹೂತಿಟ್ಟ ನಗನಾಣ್ಯಗಳು, ಬ್ಯಾಂಕುಗಳಲ್ಲಿರುವ ಹಣಗಳ ಅಥವಾ ಕಾಗದಪತ್ರಗಳಿಗಿಂತ ಏನೂ ಹೆಚ್ಚು ಸುರಕ್ಷಿತವಾಗಿರುವುದಿಲ್ಲ. ಎಲ್ಲದರಲ್ಲಿಯೂ ಈಗ ಅಪಾಯವಿದ್ದೇ ಇದೆ. ಇಂತಹ ಪರಿಸ್ಥಿತಿಯಲ್ಲಿ ನೀವು ಹೇಗಿದ್ದಿರೋ ಹಾಗೇ ಇರುವುದೊಳ್ಳೆಯದು ನಿಮ್ಮ ಸ್ಥಿರತೆಯನ್ನು ಬಲಪಡಿಸಿಕೊಳ್ಳುತ್ತಾ ಹೋದಂತೆಲ್ಲಾ ಮಾರ್ಕೆಟು ಕೂಡ ಸ್ಥಿರಗೊಳ್ಳುವುದು. ಅರಾಜಕತೆಗೆ ಇದೇ ಸರಿಯಾದ ಮದ್ದು” ಎಂದು ಗಾಂಧಿಜಿಯವರು ಬರೆದಿದ್ದಾರೆ.

ರಾಷ್ಟ್ರಪತಿಗಳ ಘೋಷಣೆ!
ಬೇಂಕುಗಳಿಂದ ಹಣ ತೆಗೆಯಬೇಡಿ!
ಗಾಂಧಿಜಿಯವರ ಹೇಳಿಕೆ! ಡಾ|ಲೋಹಿಯರ ಬಂಧನ!

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್

‘ಹಿಂದೂ-ಮುಸ್ಲಿಂ’ ಎಂಬ ಶಿರೋನಾಮೆಯಲ್ಲಿ ಹರಿಜನ ಪತ್ರಿಕೆಯಲ್ಲಿ ಗಾಂಧೀಜಿಯವರು ಬರೆಯುತ್ತಾ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಸ್ಥಿತಿಗತಿಗಳನ್ನು ಕುರಿತು ಬರೆದಿದ್ದಾರೆ. ದಿಲ್ಲಿಯ ಒಬ್ಬ ಖಾನ್ ಬಹದ್ದೂರರ ಪತ್ರಕ್ಕೆ ಉತ್ತರವಾಗಿಯೇ ಈ ಲೇಖನ. ಮುಸ್ಲಿಂ ಲೀಗನ್ನು ಮುಸ್ಲಿಮರ ಏಕಮಾತ್ರ ಪ್ರತಿನಿಧಿ ಸಂಸ್ಥೆಯೆಂದು ಕಾಂಗ್ರೆಸು ಒಪ್ಪಬೇಕೆಂದು ಕೇಳುವುದಾದರೂ ಏತಕ್ಕೆ ಎಂದು ಗಾಂಧಿಜಿಯವರು ಕೇಳಿದ್ದಾರೆ. “ಅಂತಹ ಸ್ಥಾನವನ್ನು ಯೋಗ್ಯತೆಯಿಂದ ಪಡೆಯಬೇಕೇ ಹೊರತು ಅದನ್ನೊಪ್ಪಬೇಕೆಂಬುದು ಅನಾವಶ್ಯಕ. ಕಾಂಗ್ರೆಸು ಕೂಡ ಭಾರತೀಯ ಪ್ರಜೆಗಳೆಲ್ಲರ ಪ್ರತಿನಿಧಿ ಸಂಸ್ಥೆಯೆಂದು ಹೇಳುತ್ತಿಲ್ಲ. ಆದರೆ ಎಲ್ಲ ಮತಗಳ ಎಲ್ಲ ಜಾತಿಗಳ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯೆಂದು ಮಾತ್ರ ಹೇಳುತ್ತಿದೆ. ಆ ಹೇಳಿಕೆಯನ್ನು ಯಾರೂ ಏನೂ ಒಪ್ಪಬೇಕಾಗಿಲ್ಲ. ಒಂದು ಸಂಗಡವು ಇನ್ನೊಂದು ಸಂಗಡದೊಡನೆ ಸ್ನೇಹ ಬೆಳೆಸಲು ಬಂದರೆ ಅಷ್ಟೇ ಸಾಕು. ರಾಷ್ಟ್ರೀಯ ಮುಸ್ಲಿಮರು ಕಾಂಗ್ರೆಸಿಗೆ ಸೇರಿದ್ದರಿಂದ ಅವರು ‘ಮೀರ್ ಜಾಫರ’ ರೆಂದ ತಿರಸ್ಕರಿಸುವದು ಸರಿಯಲ್ಲ. ಅಥವಾ ಕಾಂಗ್ರೆಸು ಬ್ರಿಟಿಷರಂತೆ ಒಡೆದು ಆಳುವ ನೀತಿಯನ್ನು ಅನುಸರಿಸಿಲ್ಲ” ಎಂದು ತಿಳಿಸಿದ್ದಾರೆ.

ಡಾ|| ಲೋಹಿಯಾರವರ
ಬಂಧನ
ಕಾಂಗ್ರೆಸ್ ಕಚೇರಿಯ ಪುಸ್ತಕ
ಭಂಡಾರದಲ್ಲಿ

ಸ್ವರಾಜ್ಯ ಭವನದಲ್ಲಿದ್ದಾಗ ಡಾ|| ರಾಮಮನೋಹರ ಲೋಹಿಯಾರವರನ್ನು ಅಲಹಾಬಾದ್ ಪೋಲೀಸರು ಸರಕಾರದಿಂದ ಬಂದಿದ್ದ ಆಜ್ಞೆಯ ಪ್ರಕಾರ ದಸ್ತಗಿರಿ ಮಾಡಿದರು. ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ಪ್ರಕಾರ ಸ್ವರಾಜ್ಯಭವನದಲ್ಲಿ ಬಂಧನವಾದದ್ದು ಇದೇ ಮೊದಲನೆಯ ಸಲ.

ಡಾ|| ಲೋಹಿಯಾರವರು ಕಲ್ಕತ್ತೆಯಿಂದ ಬಂದು ಸ್ವರಾಜ್ಯಭವನದಲ್ಲಿರುವ ಎ. ಐ. ಸಿ. ಸಿ. ಕಚೇರಿಯಲ್ಲಿರುವ ಪುಸ್ತಕ ಭಂಡಾರದಲ್ಲಿ ಪುಸ್ತಕಗಳನ್ನು ಬಿಚ್ಚುತ್ತಾ ಕುಳಿತಿರಲು ಆಗಲೇ ಪೋಲೀಸರು ಬಂದು ಅವರ ಬಂಧನ ಮಾಡಿದರು.

ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯಾದ ಕೃಪಲಾನಿಯವರು ಕಚೇರಿಗೆ ಬರುತ್ತಿದ್ದಾಗ ಅವರಿಗೆ ಈ ಬಂಧನದ ಸಮಾಚಾರ ಗೊತ್ತಾಯಿತು. ಕೂಡಲೇ ಕೃಪಲಾನಿಯವರೂ ಅವರ ಪತ್ನಿಯವರೂ ಲೋಹಿಯಾರವರ ಪ್ರಯಾಣಕ್ಕೆ ಸಿದ್ಧತೆಯನ್ನು ಮಾಡಿಕೊಟ್ಟರು.

ಡಾ|| ಲೋಹಿಯಾರವರು ಮಲಕಾಂಡ ಜೈಲಿಗೆ ಹೊರಟರು. ಅವರಿಗೆ ಎ. ಐ. ಸಿ. ಸಿ. ಕಚೇರಿಯ ಎಲ್ಲ ಉದ್ಯೋಗಸ್ಥರೂ ಕೂಡ ಜಯಕಾರ ಮಾಡಿದರು.

ಭಾರತದಲ್ಲಿ ವೈಮಾನಿಕ ವಸ್ತು
ಸನ್ನಾಹ

ಭಾರತದ ರಕ್ಷಣಾ ವ್ಯವಸ್ಥೆಯ ಸಲುವಾಗಿ ಭಾರತದಲ್ಲಿ ವೈಮಾನಿಕ ಸಿದ್ಧತೆಗಳು ಸರಕಾರದವರಿಂದ ನಡೆಸಲ್ಪಡುತ್ತಿರುವ ವಾರ್ತೆಯು ಸಿಮ್ಲಾದಿಂದ ಬರುತ್ತಿದೆ, ಅದಕ್ಕೆ ಬೇಕಾದ ಸಾಮಾನುಗಳನ್ನು ಹೇಗೆ ಒದಗಿಸುವುದು ಎಲ್ಲಿ ಸಿಗುತ್ತಿವೆಯೆಂಬ ವಿಚಾರದಲ್ಲಿ ಸರಕಾರದವರು ಅತ್ಯಂತ ಆಸಕ್ತಿ ವಹಿಸುತ್ತಾರೆಯೆಂದೂ ಗೊತ್ತಾಗಿದೆ.

ಕೇಂದ್ರಶಾಸನ ಸಭೆಯಲ್ಲಿ ಅನೇಕ ಕಾಲಕ್ಕೆ ಹಿಂದೆಯೇ ಶ್ರೀಗಳಾದ ಸತ್ಯಮೂರ್ತಿ ಮೊದಲಾದವರು ಸರಕಾರವನ್ನು ಎಚ್ಚರಿಸಿದ್ದರು. ಆಗಲೇ ಸರಕಾರವು ಹೆಚ್ಚು ಉತ್ಸಾಹ ತೆಕ್ಕೊಂಡಿದ್ದಾರೆ. ಇಂದು ಕೈಕಾಲು ಬಿಡುವ ಸಂದರ್ಭ ಏರುತ್ತಿಲ್ಲವೆಂಬುದಾಗಿ ಭಾರತ ಪ್ರಮುಖ ಪತ್ರಿಕೆಗಳು ಬರೆದಿವೆ. ರಕ್ಷಣಾ ಇಲಾಖೆಯ ಮುಖ್ಯಸ್ಥರು ಆಗ ಆಗತ್ಯವಿಲ್ಲವೆಂದೂ ಸೂಚನೆಯನ್ನು ನಿರಾಕರಿಸಿದ್ದೂ ಉಂಟು. ಆದರೆ ಇಂದು ಭಯಂಕರ ಯುದ್ಧ ನಡೆಯುತ್ತಿರುವುದರಿಂದ ಆಕಾಶ ಯುದ್ಧವೇ ಇಂದಿನ ಪ್ರಬಲ ಆಯುಧವಾದುದರಿಂದ ಇಂಡಿಯಾ ಸರಕಾರವೂ ಎಚ್ಚತ್ತು ಆ ಕಡೆ ತೀವ್ರ ಗಮನಕೊಟ್ಟಿದೆ. ದೇಶದ ರಕ್ಷಣಾ ವಿಚಾರದಲ್ಲಿ ಸರಕಾರವು ಇಂದಾದರೂ ಎಚ್ಚತ್ತು ಸನ್ನಾಹ ಮಾಡುತ್ತಿರುವುದು ಶುಭಸೂಚನೆಯಾಗಿದೆ.

ಬಂಗಾಳದಲ್ಲಿ, ಟ್ರಾವೆಂಕೂರಿನಲ್ಲಿ, ಒಂದೊಂದು ಕಂಪನಿಯನ್ನು ಸ್ಥಾಪಿಸಿ ಅಲ್ಯೂಮಿನಿಯಂ ತಯಾರಿಯ ಕುರಿತು ವಿಚಾರ ನಡೆಸುತ್ತಿದ್ದಾರೆ. ಅಲ್ಯೂಮಿನಿಯಮನ್ನು ಸಾಕಷ್ಟು ತಯಾರಿಸುವುದು ಸಾಧ್ಯವೆಂದೂ ತಿಳಿದಿದೆ. ಅಲ್ಯೂಮಿನಿಯಂ ಭಾರತದಲ್ಲಿಯೇ ಸಾಕಷ್ಟು ಸಿಗುತ್ತಿದೆ.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು.)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0—1—6
6ನೆ ತರಗತಿಗೆ	,,	0—2—0
7ನೆ ,,	,,	0—2—6
8ನೆ ,,	,,	0—3—0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ಬ್ರಿಟಿಷ ಪ್ರಧಾನಮಂತ್ರಿ
ಚರ್ಚಿಲ್

ಸಮುದ್ರ - ಭೂಮಿ - ಆಕಾಶಗಳಲ್ಲಿ ಕಾದಾಡುವೆವು!

ಚರ್ಚಿಲ್ಲರ ವೀರಘೋಷ!

ಸಂಗ್ರಾಮದ ಸಿಂಹಾವಲೋಕನ!

ಬೆಲ್ಜಿಯಮ್ ರಾಜರ ದ್ರೋಹ!

ಬ್ರಿಟನಿನ ಮೇಲೆ ಧಾಳಿಯೆ?

"ಬ್ರಿಟಿಷರೂ ಫ್ರೆಂಚರೂ ಒಂದಾಗಿಯೇ ಯುದ್ಧ ಮಾಡುವರು. ನಾಜಿ ಆಕ್ರಮಣಕ್ಕೆ ಯುರೋಪಿನ ರಾಷ್ಟ್ರಗಳು ಬಲಿ ಬೀಳಬಹುದು. ಆದರೆ ನಾವು ಮಾತ್ರ ಕೊನೆಯ ವರೆಗೂ ಎದುರಾಡುವೆವು. ಫ್ರಾನ್ಸಿನಲ್ಲಿ ಯುದ್ಧ ಮಾಡುವೆವು; ಸಮುದ್ರದಲ್ಲಿ ಯುದ್ಧ ಮಾಡುವೆವು; ಭೂಮಿಯ ಮೇಲೆ ಗಿರಿಕಂದರಗಳ ಮೇಲೆ ವ್ಯೋಮಾನಿನಲ್ಲಿ ಯುದ್ಧ ಮಾಡುವೆವು ಎಂದೆಂದಿಗೂ ನಾವು ಶರಣಾಗತರಾಗುವುದಿಲ್ಲ. ನಮ್ಮ ದ್ವೀಪದ ಜನರು ಕಷ್ಟಕ್ಕೀಡಾಗಿ ಹಸಿದು ತೊಳಲಿ ಬಳಲಿ ಬಿದ್ದರೆಂದು ಹೇಳಿದರೂ ಆ ಮೇಲೆ ನಮ್ಮ ಸಾಮ್ರಾಜ್ಯದ ಜನರೆಲ್ಲರೂ ಯುದ್ಧವನ್ನು ಮುಂದುವರಿಸುವರು" ಹೀಗೆಂದು ಮೊನ್ನೆ ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್ಲರು ಯುದ್ಧದ ಕುರಿತು ಅತ್ಯಂತ ಆವೇಶಪೂರ್ಣವಾದ ಭಾಷಣವಿತ್ತರು.

"ಫ್ಲಾಂಡರ್ಸಿನಿಂದ ೩,೩೫,೦೦೦ ಜನ ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರನ್ನು ವಾಪಸು ಕರೆಸಲಾಯಿತು. ಅಲ್ಲಿನ ಕಾದಾಟದಲ್ಲಿ ಮಿತ್ರರಾಷ್ಟ್ರಗಳ ಕಡೆ ೩೦,೦೦೦ ಜನರು ಹತರಾದರು, ಗಾಯ ಹೊಂದಿದವರು ಅಥವಾ ಪತ್ತೆಯಿಲ್ಲವಾಗಿದ್ದಾರೆ. ಗಾಯಹೊಂದಿದವರಲ್ಲಿ ಬಹು ಮಂದಿಯನ್ನು ಸ್ವದೇಶಕ್ಕೆ ಕರೆತರಲಾಗಿದೆ. ಪತ್ತೆಯಿಲ್ಲದಿರುವ ಎಲ್ಲ ಸೈನಿಕರೂ ಕೂಡ ಹಿಂತಿರುಗಿ ಬರಬಹುದು.

"ಶತ್ರುಗಳ ಕಡೆ ೫೦ರಿಂದ ೬೦ ಸಾವಿರದ ವರೆಗೆ ಪ್ರಾಣಹಾನಿಯಾಗಿದೆ"

ಎಂಬುದಾಗಿ ಬ್ರಿಟಿಷ್ ಮುಖ್ಯಮಂತ್ರಿ ಚರ್ಚಿಲರು ಯುದ್ಧ ಪರಿಸ್ಥಿತಿಯ ಬಗ್ಗೆ ಕೊಟ್ಟ ಹೇಳಿಕೆಯಲ್ಲಿ ತಿಳಿಸಿದರು.

"ಫ್ಲಾಂಡರ್ಸ್ ಕದನದಿಂದ ಉಂಟಾಗಿರುವ ನಷ್ಟಗಳು ಬಹಳವಾಗಿವೆ. ೧೦೦೦ ಫಿರಂಗಿಗಳು ನಾಶವಾಗಿವೆ- ಟ್ರಾನ್ಸ್‌ಪೋರ್ಟ್ ಮತ್ತು ಆರ್ಮರ್ಡ್ ವಾಹನಗಳೆಲ್ಲವೂ ಕೈತಪ್ಪಿ ಹೋದವು. ಒಟ್ಟಿನಲ್ಲಿ ಫ್ಲಾಂಡರ್ಸ್ ಕದನವು ಒಂದು ಪ್ರಚಂಡವಾದ ಅನರ್ಥವೇ ಆಗಿದೆ.

"ಫ್ರೆಂಚ್ ಸೈನ್ಯವು ದುರ್ಬಲಗೊಂಡಿದೆ. ಬೆಲ್ಜಿಯನ್ ಸೈನ್ಯವು ನಾಶವೇ ಆಯಿತು. ಶತ್ರುಗಳು ಈಗ ಅನೇಕ ಗಣಿ ಜಿಲ್ಲೆಗಳನ್ನೂ ಸೈನ್ಯ ದೃಷ್ಟಿಯಿಂದ ಬಹು ಮುಖ್ಯವಾದ ನಗರಗಳನ್ನೂ ಹಿಡಿದಿದ್ದಾರೆ.

[illegible]ಯುದ್ಧದಲ್ಲಿ ಯೆಲ ಶತ್ರುಗಳು [illegible] ಬಲವಾದ ಹೊಡೆತ ಹೊಡೆಯುವರೆಂದು ನಿರೀಕ್ಷಿಸಬಹುದು. ಅದು ನಮ್ಮ ಮೇಲಾದರೂ ಇರಬಹುದು ಅಥವಾ ಫ್ರಾನ್ಸಿನ ಮೇಲಾದರೂ ಇರಬಹುದು" ಎಂದರು.

ಮಿ॥ ಚರ್ಚಿಲರು ಮಾಡಿದ ಭಾಷಣದ ಸಾರಾಂಶ ಹೀಗಿದೆ:—

ಮೇ ತಿಂಗಳಿನ ಎರಡನೇ ವಾರದ ಕೊನೆಯಲ್ಲಿ ಸೆಡಾನ್ ಮತ್ತು ಮ್ಯೂಸ್‌ಗಳಲ್ಲಿಯ ಫ್ರೆಂಚ್ ರಕ್ಷಣೆಗಳು ಯಾವಾಗ ಮುರಿದು ಬಿದ್ದವೋ ಆಗಲೇ ಬೆಲ್ಜಿಯನ್ ರಾಜರ ಪ್ರಾರ್ಥನೆಯ ಮೇಲೆ ಬೆಲ್ಜಿಯಮಿಗೆ ಹೋಗಿದ್ದ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ದಕ್ಷಿಣಕ್ಕೆ ಮತ್ತು ಏಮಿಯನ್ಸ್ ಕಡೆಗೆ ವಾಪಾಸು ಬಂದು ಬಿಟ್ಟಿದ್ದಲ್ಲಿ ಎಲ್ಲರೂ ರಕ್ಷಿಸಲ್ಪಡುತ್ತಿದ್ದರು. ಆದರೆ ಆ ಕೂಡಲೇ ಈ ತಂತ್ರವನ್ನು ಯಾರೂ ಮನಗಾಣಲಿಲ್ಲ. ಜರ್ಮನ್ ಸೈನ್ಯದಾಳಿಯು ಬಲಗಡೆಗೆ ಮುನ್ನುಗ್ಗಿತು ಮತ್ತು ಉತ್ತರದ ಸೈನ್ಯದ ಹಿಂಭಾಗಕ್ಕೂ ಮುನ್ನುಗ್ಗಿತು. ತಲಾ ೪೦೦ ಆರ್ಮರ್ಡ್ ವಾಹನಗಳನ್ನೊಳಗೊಂಡ ಎಂಟು ಒಂಭತ್ತು ಡಿವಿಜನ್‌ಗಳನ್ನು ಅವರು ಉಪಯೋಗಿಸಿದರು. ಈ ಬಲವಾದ ಜರ್ಮನ್ ಸೈನ್ಯವು ನಮಗೂ ಫ್ರೆಂಚರ ಮುಖ್ಯ ಸೈನ್ಯಗಳಿಗೂ ಇದ್ದ ಮಾರ್ಗಾನುಕೂಲ ಸಂಬಂಧವನ್ನೂ ಮತ್ತು ತಂತಿ ಸಂಬಂಧವನ್ನೂ ಕಡಿದು ಹಾಕಿತು. ಏಮಿಯನ್ಸ್ ಮತ್ತು ಅಬೆವಿಲೆ ಕಡೆಗಳಿಂದ ಬರುತ್ತಿದ್ದ ಆಹಾರ ಸಾಮಗ್ರಿಗಳನ್ನೂ ತಡೆಗಟ್ಟಿತು. ಅಷ್ಟೇ ಅಲ್ಲದೆ ಆ ಸೈನ್ಯವು ಸಮುದ್ರ ತೀರದ ವರೆಗೂ ಹೋಗಿ ಬೊಲಾಯಿನ್, ಕೆಲೆ ಮತ್ತು ಡನ್‌ಕರ್ಕ್ ವರೆಗೂ ಬಂದುಬಿಟ್ಟಿತು.

"ಈ ಆರ್ಮರ್ಡ್ ಮತ್ತು ಮೆಕಾನೈಸ್ಡ್ ಸೈನ್ಯಗಳ ಧಾಳಿಗಳ ಹಿಂಭಾಗದಲ್ಲಿ ಅನೇಕ ಜರ್ಮನ್ ಸೈನ್ಯ ಡಿವಿಜನ್‌ಗಳು ಲಾರಿಗಳಲ್ಲಿಯೂ ಬರತೊಡಗಿದವು. ಈ ಸೈನ್ಯಗಳು ಡನ್‌ಕರ್ಕ್‌ನ ಹತ್ತಿರಕ್ಕೆ ಬಂದವೇ ಹೊರತು ಡನ್‌ಕರ್ಕ್‌ನ್ನು ಮುಟ್ಟಲಿಲ್ಲ. ಬೊಲಾಯಿನ್‌ನಲ್ಲಿ ರಕ್ಷಕರು ಅದನ್ನು ಸ್ವಲ್ಪಕಾಲ ರಕ್ಷಿಸಿದರು. ಆದರೆ ನಮ್ಮ ದೇಶದಿಂದ ಕಳುಹಿಸಲಾದ ಆಜ್ಞೆಯ ಪ್ರಕಾರ ಅವರೆಲ್ಲಾ ಹಿಂದಕ್ಕೆ ಬಂದರು.

"೪ ದಿನಗಳ ಕಾಲ ರಸ್ತೆಗಳಲ್ಲೆಲ್ಲಾ ಬಿರುಸಾದ ಕಾದಾಟ ನಡೆದು ಕೊನೆಗೆ ಕೆಲೆ ನಗರದಲ್ಲಿ ಶಾಂತಿಯು ನೆಲಸಿತು. ಅತ್ಯಂತ ಅಮೋಘವಾದ ರಕ್ಷಣಾ ಕಾರ್ಯಕ್ರಮವನ್ನು ಇಲ್ಲಿ ಕಾಣಬಹುದು.

[illegible]ಜಿಯಮಿನ ತಪ್ಪು

"ಕಳೆದ ಮಹಾಯುದ್ಧದಲ್ಲಿ ನಾಶವಾಗಿ ಹೋಗುತ್ತಿದ್ದ ಬೆಲ್ಜಿಯನ್ ರಾಷ್ಟ್ರವನ್ನು ರಕ್ಷಿಸಿದ ಮಿತ್ರ ರಾಷ್ಟ್ರಗಳವರ ಸಹಾಯವನ್ನು ಮರೆತು, ಬೆಲ್ಜಿಯನ್ ರಾಜರೂ ಅವರ ಸರ್ಕಾರವೂ ಮಿತ್ರರಾಷ್ಟ್ರಗಳ ಸಂಬಂಧವನ್ನು ತ್ಯಜಿಸದಿದ್ದಲ್ಲಿ ಮತ್ತು ಅವರು ಹಂತಕವಾದಂತಹ ತಾಟಸ್ಥ್ಯ ನೀತಿಯನ್ನು ಅನುಸರಿಸದೇ ಇದ್ದಿದ್ದಲ್ಲಿ, ಮೊದಲೇ ಬೆಲ್ಜಿಯಮನ್ನು ಬ್ರಿಟನ್ ಫ್ರಾನ್ಸ್‌ಗಳು ರಕ್ಷಿಸುತ್ತಿದ್ದವು. ಅಷ್ಟೇ ಅಲ್ಲ, ಪೋಲೆಂಡನ್ನೂ ಕೂಡ ಅವು ರಕ್ಷಿಸಲು ಅನುಕೂಲವಾಗುತ್ತಿದ್ದಿತು.

ಲಿಯೋಪೋಲ್ಡರ ದ್ರೋಹ

"ಆದರೆ ಇದಕ್ಕಿದ್ದಂತೆಯೇ ಯಾವ ಪೂರ್ವ ಸೂಚನೆಯನ್ನೂ ಕೊಡದೆ, ತಮ್ಮ ಮಂತ್ರಿಗಳ ಸಲಹೆಯೂ ಇಲ್ಲದೆ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಲಿಯೋಪೋಲ್ಡರು ಜರ್ಮನ್ ಸೈನ್ಯಕ್ಕೆ ಒಬ್ಬ ಪೂರ್ಣ ಅಧಿಕಾರ ಹೊಂದಿದ ಪ್ರತಿನಿಧಿಯನ್ನು ಕಳುಹಿಸಿಬಿಟ್ಟರು. ತಮ್ಮ ಸೈನ್ಯವನ್ನು ಶರಣಾಗತಮಾಡಿಸಿ ನಮ್ಮ ಸೈನ್ಯವನ್ನೆಲ್ಲಾ ಮತ್ತು ರಕ್ಷಣಾ ವ್ಯವಸ್ಥೆಯನ್ನೆಲ್ಲಾ ಶತ್ರುಗತವನ್ನಾಗಿ ಮಾಡಿದರು.

ಬ್ರಿಟಿಷ್ ವಿಮಾನ ಸೈನ್ಯದ ಸಾಹಸ

"ಈ ಮಧ್ಯೆ ರಾಯಲ್ ಏರ್ ಫೋರ್ಸು ಈ ಕಾದಾಟದ ಮಧ್ಯೆ ಪ್ರವೇಶಿಸಲು ಪ್ರಾರಂಭಿಸಿತು. ಒಳದೇಶದ ಸಿದ್ಧಾಣಗಳಿಂದ ಎಷ್ಟು ದೂರದ ವರೆಗೆ ಸಾಗಲು ಸಾಧ್ಯವೋ ಅಲ್ಲಿಯ ವರೆಗೂ ಅವು ಹೋಗಹತ್ತಿದವು. ಅನೇಕ ಜರ್ಮನ್ ಫೈಟರ್‌ಗಳನ್ನೂ ಬಾಂಬರ್‌ಗಳನ್ನೂ ಹೊಡೆದುರುಳಿಸಿದವು. ಈ ಕಾದಾಟವು ಬಹಳ ಜಟಿಲವಾದುದೂ ಮತ್ತು ಭಯಂಕರವಾದುದೂ ಆಗಿತ್ತು.

"ಈ ವಿಮಾನ ಸೈನ್ಯದ ಯುವಕರು ದಿನವೂ ಬೆಳಿಗ್ಗೆ ತಮ್ಮ ದೇಶದ ರಕ್ಷಣೆಗಾಗಿ ಹಾರಿ ಹೋಗುವರು. ಈ ಅಸಾಧಾರಣ ಶಕ್ತಿ ಪಡೆದ ಅಸ್ತ್ರವನ್ನು ಹಿಡಿದು ಮುಂದೆ ಹೋಗುವರು. ಪ್ರತಿ ಮುಂಜಾನೆಯೂ ಅವರಿಗೆ ಒಂದು ಹೊಸ ಶಕ್ತಿ ಪ್ರದರ್ಶನದ ಅವಕಾಶವನ್ನು ತರುವದೆಂಬ ಭಾವನೆಯಿರುವುದು. ಇಂತಹ ಯುವಕರಿಗೆ ನಮ್ಮ ಕೃತಜ್ಞತೆಯಿದೆ. ಅನೇಕ ಸಂದರ್ಭಗಳಲ್ಲಿ ಅನೇಕ ರೀತಿಗಳಲ್ಲಿ ತಮ್ಮ ಪ್ರಾಣವನ್ನೂ ತಮ್ಮ ಸರ್ವಸ್ವವನ್ನೂ ದೇಶಕ್ಕಾಗಿ ಧಾರೆಯೆರೆಯಲು ಸದಾ ಸಿದ್ಧರಾಗಿರುವ ಈ ಯುವಕರು ವೀರರಲ್ಲೆಲ್ಲಾ ಶಿಖಾಮಣಿಗಳೆಂದು ಹೇಳಬಹುದು.

ಭೂಸೈನ್ಯ

"ಇನ್ನು ಭೂಸೈನ್ಯದ ವಿಷಯ. ಒಂದೇ ಸಾರಿ ಎರಡು ಮೂರು ರಣಕ್ಷೇತ್ರಗಳಲ್ಲಿ ಕದನ ನಡೆಸಬೇಕು, ಎರಡು ಮೂರು ಡಿವಿಜನ್‌ಗಳು ಮಾತ್ರ ಸಮಾನಸ್ಕಂಧರಾದ ಅಥವಾ ಹೆಚ್ಚಿನ ಸಂಖ್ಯೆಯ ಶತ್ರುಗಳನ್ನೆದುರಿಸಬೇಕು. ಇಂತಹ ಭೀಕರ ಮತ್ತು ಉಗ್ರ ಕಾದಾಟಗಳ ಮಧ್ಯೆ ಬ್ರಿಟಿಷ್ ಸೈನ್ಯಕ್ಕೆ ೩೦೦೦೦ ಜನರ ನಷ್ಟವಾಗಿದೆ. ಇಷ್ಟು ಜನರಲ್ಲಿ ಹಲವರು ಹತರಾಗಿದ್ದಾರೆ. ಇನ್ನೂ ಹಲವರು ಗಾಯಗೊಂಡಿರುವರು. ಇನ್ನುಳಿದವರು ಪತ್ತೆಯಿಲ್ಲದವರಾಗಿದ್ದಾರೆ.

"ನಮ್ಮ ಕಡೆ ವಸ್ತುಗಳ ನಷ್ಟ ಅಗಾಧವಾಗಿದೆ. ೧೯೧೮ನೇ ಮಾರ್ಚ್ ೨೧ರಲ್ಲಿ ನಡೆದ ಕಾದಾಟದಲ್ಲಿ ನಾವು ಪಡೆದ ಪ್ರಾಣಹಾನಿಯಲ್ಲಿ ಮೂರನೇ ಒಂದು ಪಾಲನ್ನು ಈಗ ಪಡೆದಿದ್ದೇವೆ.

"ಈ ಸ್ಥಿತಿ ಎಷ್ಟು ಕಾಲ ಇರುವದು ಎಂಬುದು ನಮ್ಮ ದ್ವೀಪದ ಜನರ ಸಾಹಸದ ಮೇಲೆ ನಿಲ್ಲುವದು. ಈಗ ನಮ್ಮ ದೇಶದಲ್ಲಿ ಹಗಲೂ ರಾತ್ರಿಯೂ ಕೆಲಸ ನಡೆಯುತ್ತಿದೆ. ಒಡೆಯಾಳಗಾರರೂ, ಶ್ರಮ ಜೀವಿಗಳೂ ಒಂದಾಗಿ ಶ್ರಮಿಸುತ್ತಿದ್ದಾರೆ. ನಮಗೆ ಉಂಟಾಗಿರುವ ನಷ್ಟವನ್ನು ಒಂದೆರಡು ತಿಂಗಳುಗಳೊಳಗೇ ಸರಿಪಡಿಸಿಕೊಳ್ಳಲು ಸಾಧ್ಯವಾಗುವದರಲ್ಲಿ ಸಂದೇಹವಿಲ್ಲ.

ಬ್ರಿಟನ್ನಿನ ಮೇಲೆ ದಂಡಯಾತ್ರೆ

"ಹೆರ್ ಹಿಟ್ಲರನು ಬ್ರಿಟಿಷ್ ದ್ವೀಪಗಳ ಮೇಲೆ ಧಾಳಿ ನಡೆಸುವನೆಂದು ಹೇಳಲಾಗಿದೆ. ನಮ್ಮ ದ್ವೀಪದ ಮಿಲಿಟರಿ ಶಕ್ತಿಯು ಅಗಾಧವಾಗಿದೆ. ಈಗಿನ ಯುದ್ಧದಲಿ ಅಥವಾ ಹಿಂದಿನ ಯಾವ ಯುದ್ಧದಲ್ಲಿಯೂ ಇಲ್ಲದಷ್ಟು ಹೆಚ್ಚಿನ ಶಕ್ತಿಯು ಈಗ ಒದಗಿರುವ ವ್ಯವಸ್ಥೆಗಿದೆ.

ನಮ್ಮ ಜನರಿಗೆ ಪೂರ್ಣ ರಕ್ಷಣೆಯನ್ನು ಕೊಡಲು ಇದುವರೆಗಕ್ಕಿಂತಲೂ ಈಗ ಆವಶ್ಯಕ ಕಾಲವೊದಗಿದೆ. ನೆಪೋಲಿಯನನ ಕಾಲದಲ್ಲಿ ಕಡಲ್ಗಾಲುವೆಯನ್ನು ದಾಟಿ ಬರಲು ಅನುಕೂಲವಾಗುತ್ತಿದ್ದ ಗಾಳಿಯೇ ಆ ಹಡಗುಗಳನ್ನಲ್ಲಿಯೇ ತಡೆದು ನಿಲ್ಲಿಸಿಬಿಡುವ ಸಂಭವವಿತ್ತು. ಈಗ ಹೊಸ ಮಾರ್ಗಗಳನ್ನನುಸರಿಸಲಾಗುವದೆಂದು ಹೇಳಲಾಗುತ್ತಿದೆ. ನಮ್ಮ ಶತ್ರುವಿನ ಚಾಕಚಕ್ಯತೆಯನ್ನು ನೋಡಿದರೆ ನಾವು ಎಲ್ಲ ರೀತಿಯ ಉಗ್ರತೆಗೂ, ಯುಕ್ತಿಗೂ ತಯಾರಿರಬೇಕೆಂದು ಗೊತ್ತಾಗುವುದು.

"ನಾವು ಸರಿಯಾಗಿ ಪರಿಶೀಲನೆ ನಡೆಸುತ್ತಿರಬೇಕು. ಎಲ್ಲರೂ ತಮ್ಮ ತಮ್ಮ ಕೆಲಸವನ್ನು ಸರಿಯಾಗಿ ಮಾಡಿಕೊಂಡಲ್ಲಿ ಮತ್ತು ಹಂಚಿಕೆಗಳೆಲ್ಲಾ ಸರಿಯಾಗಿದ್ದಲ್ಲಿ ನಮ್ಮ ದ್ವೀಪವನ್ನು ರಕ್ಷಿಸಲು ಸಾಮರ್ಥ್ಯವನ್ನು ಹೊಂದಿರುವೆವೆಂಬುದನ್ನು ತೋರಿಸಲಾಗುವುದು. ಇದೇ ನಮ್ಮೆಲ್ಲರ ಗುರಿಯಾಗಿದೆ.

ಈ ವಾರದ ಕಥೆ:

ನಿರಾಶೆ!

ಕತೆಗಾರ. ಕೆ. ಶ್ರೀನಿವಾಸ ಶೆಣೈ ಕಾರ್ಕಳ.

'ಒಂದಾದರೂ ತುಂಡು ಕೊಡುತ್ತಿದ್ದರೆ..' ರಾಮು ಮನಸ್ಸಿನಲ್ಲಿಯೇ ಹೇಳಿದ. ಹೇಳುತ್ತಿದ್ದ ಹಾಗೆ ಅವನ ದೃಷ್ಟಿ ಭೂಗತವಾಯಿತು. ಒಮ್ಮೊಮ್ಮೆ ರಾಮು ರೊಟ್ಟಿಯನ್ನು ಸುಡುತ್ತಿದ್ದ ಕೂಲಿಯನ್ನು ನೋಡುತ್ತಿದ್ದ. ಒಮ್ಮೊಮ್ಮೆ ಅವನ ದೃಷ್ಟಿ ಹೊರಳಿ ಕಾಲಿನ ಬುಡದಲ್ಲಿರುವ ಭೂಮಿಯ ಕಡೆಗೆ ಬರುತ್ತಿತ್ತು. ಮತ್ತೊಮ್ಮೆ ಅವನು ಉಗುರು ಕಚ್ಚುತ್ತ ಆಲೋಚನಾಪರನಾಗುತ್ತಿದ್ದ. ಒಮ್ಮೊಮ್ಮೆ ಅವನು ಎಲ್ಲಾ ಆಲೋಚನೆ ಬಿಟ್ಟು ಆಕಾಶದ ಕಡೆಗೆ ನೋಡುತ್ತಿದ್ದ. ಕೂಡಲೇ ಅತ್ತಿತ್ತ ತಿರುಗುತ್ತಿದ್ದ. ಮರುಕ್ಷಣ ಮರದಡಿ ಕೂತು ದೀರ್ಘಶ್ವಾಸವನ್ನು ಬಿಡುತ್ತಿದ್ದ 'ಅವ ಒಂದಾದರೂ ತುಂಡು ಕೊಡುತ್ತಿದ್ದರೆ.....'

◆

ಈ ದಿನ ರಾಮು ಜೀವನದಿಂದ ಪೂರ್ಣ ನಿರಾಶನಾಗಿದ್ದ. ಕಳೆದ ಮೂರು ದಿನಗಳಿಂದ ಅನ್ನದ ಒಂದು ಕಾಳು ಕೂಡ ಅವನ ಹೊಟ್ಟೆಯನ್ನು ಸೇರಿರಲಿಲ್ಲ. ಹೀಗೆ ಮೂರು ದಿನಗಳು ಕಳೆದಾದ ಮೇಲೆ ನಾಲ್ಕನೆಯ ದಿನ ಅವನು ಕಾಡಿನ ಕಡೆಗೆ ನಡೆದ. ಎಲ್ಲಿಯಾದರೂ ಕಾಡಿನ ಹಣ್ಣು ಹಂಪಲು ಗಡ್ಡೆ ಗೆಣಸು ತಿಂದು ಹೊಟ್ಟೆ ತುಂಬಿಸೋಣ ಎಂಬುದು ಅವನ ಮನಸ್ಸಿನ ಆಶೆಯಾಗಿತ್ತು. ಭಾಗ್ಯವೋ, ಅಭಾಗ್ಯವೋ—ಅವನು ನಡುದಾರಿಯಲ್ಲಿಯೇ ಕೇಳಿದ—ಕಂಪೆನಿಯವರು ಆ ಕಾಡಿನ ಮಾರ್ಗವಾಗಿ ರೈಲು ಕೊಂಡುಹೋಗುತ್ತಾರೆಂದು. ಸರಿ, ಆ ಮಾತು ಕೇಳಿದೊಡನೆ ರಾಮು ಸಂತೋಷದಿಂದ ಆಕಾಶಕ್ಕೆ ಹಾರಿದ. ಮೂರು ದಿನಗಳಿಂದ ಉಪವಾಸವಿದ್ದನಾದರೂ, ಸುದ್ದಿಯನ್ನು ಕೇಳಿ ಅವನ ಕಾಲುಗಳಿಗೆ ಜಗಜಟ್ಟಿ ಗಾಮನ ಬಲ ಬಂತು. ಅವನು ತ್ವರಿತಗತಿಯಿಂದ ಕಾಡಿನ ಕಡೆಗೆ ನಡೆದ. ಅಷ್ಟು ವೇಗದಿಂದ ಅವನು ಆ ಮೊದಲು ನಡೆದಿರಲಿಕ್ಕೇ ಇಲ್ಲ. ತಾನು ಹಸಿದಿದ್ದೇನೆ, ಬಾಯಾರಿದ್ದೇನೆ, ಅಂಗಾಂಗಗಳು ಶಿಥಿಲವಾಗಿವೆ ಎಂಬುದರ ನೆನಪೂ ಕೂಡ ಆಗ ಅವನಿಗೆ ಉಳಿಯಲಿಲ್ಲ. ವಾಯುವೇಗದಿಂದ ಹೋಗುತ್ತ ಇದ್ದ.

ಹೋಗುತ್ತ ಹೋಗುತ್ತ ಅವನ ಹೃದಯದಲ್ಲಿ ತರತರದ ಭಾವನೆಗಳು ವಿಧವಿಧದ ಕಲ್ಪನೆಗಳು ಎದ್ದೇಳುತ್ತಿದ್ದುವು. ಆಲೋಚಿಸುತ್ತಿದ್ದ —'ಕೂಲಿಗಳಲ್ಲಿ ಭರ್ತಿಯಾಗಿ ಚೆನ್ನಾಗಿ ಸಂಪಾದಿಸುವೆ. ಸರಿ ಒಂದು, ಎರಡು, ಮೂರು, ಹತ್ತು, ಐವತ್ತು ನೂರು ಆಗುವವು. ಹಾಂ, ಕೊನೆಗೆ ನನ್ನದೇ ಮನೆ, ನನ್ನ ತಾಯಿ ತಂದೆಗಳ ಅವರಿಗೂ ಕೂಡುತ್ತ ಬರುವೆನು. ಇಲ್ಲ, ಅವರಿಗೆ ಈಗಲೇ ಕೊಡುವದಿಲ್ಲ. ಸ್ವಲ್ಪ ಸಂಪಾದಿಸಿ ಶಾಲೆಗೆ ಹೋಗುವೆನು. ರಾಮಾಯಣ, ಭಾರತ ತಿಳಿಯಲಿಕ್ಕೆ ಬೇಕಾದಷ್ಟು ಓದು ಬರಹ ಕಲಿಯುವೆನು.' ಈ ರೀತಿ ಆಲೋಚಿಸುತ್ತ, ಯೋಚಿಸುತ್ತ, ಮನಸ್ಸಿನಲ್ಲಿ ನಾನಾ ಬಗೆಯ ನಿರ್ಣಯ, ನಿರ್ಧಾರಗಳನ್ನು ಮಾಡಿಕೊಳ್ಳುತ್ತ, ಬಹಳ ಉಲ್ಲಸಿತನಾಗುತ್ತ ಎಷ್ಟೋ ಮೈಲು ನಡೆದು ಬಂದ. ಭಾವತರಂಗಗಳಲ್ಲಿ ಮುಳುಗಿ ಏಳುತ್ತ ತಾನು ಹೇಗೆ ಯಾವ ವೇಗದಿಂದ ಎಷ್ಟು ದೊಡ್ಡ ಹೆಜ್ಜೆಗಳನ್ನು ಮುಂದ ಮುಂದಕ್ಕೆ ಇಡುತ್ತ ಹೋಗುತ್ತಿದ್ದೇನೆ ಎಂಬುದರ ಕಡೆಗೆ ಅವನ ಲಕ್ಷ್ಯವೇ ಇರಲಿಲ್ಲ. ಒಂದು ಕಾಲು ಎತ್ತಿ ಇಟ್ಟು ಮತ್ತೊಂದ ಕಾಲು ತೆಗೆಯುವಷ್ಟರಲ್ಲಿ ಅವನ ಒಂದು ವಿಚಾರವು ಮುಗಿದು ಇನ್ನೊಂದು ವಿಚಾರದ ಆರಂಭವಾಗುತ್ತಿತ್ತು. ಎಷ್ಟೋ ವಿಚಾರಗಳು ಆಗಿ ಮುಗಿದುವಾದರೂ ಕೊನೆಯ ಯಾವ ನಿರ್ಧಾರವನ್ನೂ ಮಾಡದೆ ರಾಮು, ಕಾಡಿನಲ್ಲಿ ರೈಲ್ವೆಲೈನಿನ ಹತ್ತಿರವಾದ ಹತ್ತು ಮೈಲು ದೂರ ನಡೆದು ಬಂದಿದ್ದನಾದ್ದರಿಂದ ಪಾಪದ ರಾಮು ಹಸಿವು ಬಾಯಾರಿಕೆಗಳಿಂದ ಸೋತು ಸುಣ್ಣವಾಗಿದ್ದ. ಆದರೆ ಮುಂದೇನಾದರೂ ಮಾಡುವ ಮೊದಲು ಕಂಟ್ರಾಕ್ಟರನನ್ನು ಕಾಣಬೇಕೆಂದು ಅವನಿದ್ದಲ್ಲಿಗೆ ಹೋದ.

'ಸ್ವಾಮಿ, ಮೂರು ದಿನಗಳಿಂದ ಹಸಿದಿದ್ದೇನೆ ಹತ್ತು ಮೈಲು ಓಡಿಬಂದಿದ್ದೇನೆ ನನ್ನನ್ನೂ ಕೂಲಿಯಾಗಿ ತೆಗೆದುಕೊಂಡರೆ ಆ ಜನ್ಮ ಋಣಿಯಾಗಿ ಇರುವೆನು' ರಾಮು ಇಷ್ಟು ಮಾತುಗಳನ್ನು ಒಂದೇ ಉಸಿರಿನಲ್ಲಿ ಹೇಳಿದ.

'ನಡೆ ಇಲ್ಲಿಂದ ಈಗ ಹೆಚ್ಚಿಗೆ ಕೂಲಿಗಳ ಅಗತ್ಯ ಇಲ್ಲ' ಹೀಗೆಂದು ಕೆಲವು ಕೂಲಿಗಳ ನಡುವೆ ನಿಂತು, ಅವರ ಕೆಲಸದಿಂದ ಸಿಟ್ಟಾದ ಕಂಟ್ರಾಕ್ಟರ, ಬೈದು ಹೇಳಿದ.

ಮಾತು ಕೇಳಿ ರಾಮು ಸ್ತಬ್ಧನಾದ. ಕಡಿದರೂ ಅವನ ಶರೀರದಲ್ಲಿ ರಕ್ತವಿರಲಿಲ್ಲ. ನಾಲ್ಕೂ ಸುತ್ತ ಕಗ್ಗತ್ತಲೆ ಹರಡಿತು. ಎಲ್ಲಾ ಆಶೆಗಳೂ ಮಣ್ಣುಪಾಲಾದುವು. ತರತರದ ಸಂಕಲ್ಪ ವಿಕಲ್ಪಗಳು ಹಾಗೇ ಉಳಿದವು. ಎಂತಹ ಆಕಾಶ ಗೋಪುರಗಳನ್ನು ಕಟ್ಟಿದ್ದ. ಎಲ್ಲವೂ ಕ್ಷಣಮಾತ್ರದಲ್ಲಿ ಉರುಳಿ ಧೂಳೀಪಟವಾದುವು. ಹಸಿವು ಬಾಯಾರಿಕೆಗಳನ್ನು ಲೆಕ್ಕಿಸದೆ ಹತ್ತು ಮೈಲು ಓಡಿಬಂದದ್ದು ವ್ಯರ್ಥವಾಯಿತು. ನಡೆಯುತ್ತ ನಡೆಯುತ್ತ ಮಂದವಾಗಿದ್ದ ಅವನ ಕ್ಷುಧಾಗ್ನಿ ಈಗ ಏಳೂ ನಾಲಗೆಗಳನ್ನು ಚಾಚಿ ಪ್ರಜ್ವಲಿಸತೊಡಗಿತ್ತು. ಅದೇ ಸಮಯ ಅವನ ದೃಷ್ಟಿ ಆ ರೊಟ್ಟಿಯನ್ನು ಸುಡುತ್ತಿದ್ದ ಕೂಲಿಯ ಮೇಲೆ ಬಿದ್ದಿತು.

◆

ಎಷ್ಟರ ತನಕ ಕೂಲಿ ತನ್ನ ರೊಟ್ಟಿಗಳನ್ನು ಕಟ್ಟಿ ಸುಟ್ಟು ಮುಗಿಯಲಿಲ್ಲ, ಅಷ್ಟರ ತನಕ ರಾಮು ಮರದಡಿ ನಿಂತು ಅವನ ರೊಟ್ಟಿಗಳನ್ನು ನೋಡುತ್ತ ನಿಂತ. ರೊಟ್ಟಿ ಸುಟ್ಟಾಯಿತು, ಬಟಾಟೆ ಮತ್ತು ಬದನೆ ಹುಳಿಮಾಡಿದ ಕೊಳಂಬೆಗೆ ಒಗ್ಗರಣೆ ಕೊಟ್ಟು ಮುಗಿಯಿತು. ಕೂಲಿ ಎಲ್ಲಾ ಸಾಮಾನುಗಳನ್ನು ಕ್ರಮದಲ್ಲಿಟ್ಟು ಊಟಕ್ಕೆ ಕೂತ. ಬಳಸಿಕೊಂಡು ಊಟವನ್ನು ಆರಂಭಿಸಿದ. ರಾಮು ನಿಂತಲ್ಲಿಯೇ ನಿಂತುಕೊಂಡಿದ್ದ. ಒಮ್ಮೆ ಅವನ ದೃಷ್ಟಿ ಎಲೆಯ ಮೇಲಿದ್ದ ರೊಟ್ಟಿಗಳ ಮೇಲೆ, ಇನ್ನೊಮ್ಮೆ ಕೂಲಿಯ ಕೈ ಬಾಯಿಗಳ ಮೇಲೆ, ಮತ್ತೊಮ್ಮೆ ತಾನು ನಿಂತುಕೊಂಡಿದ್ದ ಕಾಲುಬುಡದ ಭೂಮಿಯ ಕಡೆಗೆ ಹೊರಳುತ್ತ ಇತ್ತು. ಆದರೂ ಅವನ ಆಶಾಪೂರ್ಣನೇತ್ರಗಳು ಸಫಲವಾಗಲಿಲ್ಲ. ಒಂದು, ಎರಡು, ಮೂರು, ನಾಲ್ಕು ಎಂದು ಎಲ್ಲಾ ರೊಟ್ಟಿಗಳೂ ತಿಂದು ಮುಗಿಯುತ್ತ ಬಂದುವು. ರಾಮು ನಿಂತಲ್ಲಿಯೇ ನಿಂತಿದ್ದ. ಕೊನೆಗೆ ಎಲೆಯ ಮೇಲೆ ಒಂದೇ ಒಂದು ರೊಟ್ಟಿ ಉಳಿಯಿತು 'ಇದನ್ನಾದರೂ ಕೊಟ್ಟಿದ್ದರೆ...' ರಾಮು ಉದ್ವಿಗ್ನತಾಪೂರ್ಣ ಆಕಳಿಕೆ ತೆಗೆದು ಕೊನೆಗೆ ಹೇಳಿದ—'ಒಂದು ಚೂರಾದರೂ ಕೊಡುತ್ತಿದ್ದರೆ. . .' ಆದರೆ ನೋಡು ನೋಡುತ್ತಿದ್ದಂತೆ ಆ ಕೊನೆಯ ಚಿಕ್ಕ ಚೂರೂ ಕೂಲಿಯ ಬಾಯನ್ನು ಸೇರಿತು. ಕೂಲಿ ಎದ್ದು ಕೈ ಬಾಯಿ ತೊಳೆಯಲಿಕ್ಕೆ ಹೋದ. ರಾಮು ನೋಡುತ್ತಾ ನಿಂತಲ್ಲಿಯೇ ನಿಂತ!

—ಮಹಾವೀರ ಪ್ರಸಾದ ಗುಪ್ತ.

PHYSICAL FITNESS
is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA N KANARA.)
Stockist U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕೊಡುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,—ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ನಾಜೀ ಸೈನಿಕರ ಮೇಲೆ ಒಕ್ಕಲಿಗರು ಕೈಮಾಡಿದರು!

ಸುಪ್ರಸಿದ್ಧ ಪ್ರಚಾರಕ ಗೊಬೆಲ್ಸ್

ಯುದ್ಧಾರಂಭವಾದ ಮೊದಲುಗೊಂಡು ಜರ್ಮನಿಯಲ್ಲಿ ಲೋಹಗಳು ಬಹಳ ಪ್ರಿಯವಾಗಿವೆ. ಶಸ್ತ್ರೋಪಕರಣಗಳಿಗೆ ಬೇಕಾದ ಕಬ್ಬಿಣ, ತುಕ್ಕು ಇತ್ಯಾದಿಯನ್ನು ಸಂಗ್ರಹಿಸುವುದು ಜರ್ಮನ್ ಸರಕಾರಕ್ಕೆ ಬಹಳ ಪ್ರಯಾಸದ ಕೆಲಸವಾಗಿ ಪರಿಣಮಿಸಿದೆ. ಹೊರದೇಶಗಳಿಂದ ಈ ಲೋಹಗಳು ಆಮದಾಗುವುದು ಕಡಿಮೆಯಾಗಿರುವುದು, ಅಲ್ಲ, ಸಂಪೂರ್ಣ ನಿಂತು ಹೋಗಿದೆ ಎಂದರೂ ಹೇಳಬಹುದು. ಆದುದರಿಂದ ಜರ್ಮನಿಯಲ್ಲೀಗ ಹಳೆತು ಲೋಹಗಳನ್ನು ಸಂಗ್ರಹಿಸುವ ಕಾರ್ಯವು ಬಹಳ ಭರದಿಂದ ನಡೆಯುತ್ತಾ ಇದೆ.

ಹೀಗೆ ಜರ್ಮನ್ ನಾಝಿ ಸೈನಿಕರು ವೇಗ್ ಚೀಡ್ ಎಂಬ ಹಳ್ಳಿಯಲ್ಲಿ ಹಳೆತು ಲೋಹವನ್ನು ಸಂಗ್ರಹಿಸಲಿಕ್ಕೆ ಒಂದು ದಿನ ಹೋಗಿದ್ದರು. ಅವರು ಆ ಹಳ್ಳಿಯಿಂದ ಜೀವಸಹಿತ ಮರಳಬೇಕಾದರೆ ಬಹಳ ಪ್ರಯಾಸ ಪಡಬೇಕಾಯಿತು. ಹಳ್ಳಿಯ ಜನರೆಲ್ಲ ನಾಝಿ ಶಾಸನದ ವಿರೋಧವಾಗಿದ್ದರು. ಲೋಹವನ್ನು ಸಂಗ್ರಹಿಸಲಿಕ್ಕೆ ಬಂದೊಡನೆ ಆ ಹಳ್ಳಿಯ ಜನರೆಲ್ಲ ನಾಝಿ ಸೈನಿಕರ ಮೈಮೇಲೆ ಬಿದ್ದು ಅವರನ್ನು ಬಡಿದು ಹಾಕಿದರು. ಸೈನಿಕರಿಗೆ ಹೊರಗಿನ ಸಹಾಯವು ಬಂದು ಅನಂತರವೇ ಅವರನ್ನು ಜೀವ ಸಹಿತ ಬೇರೆ ಕಡೆಗೆ ಸಾಗಿಸುವುದು ಸಾಧ್ಯವಾಯಿತು.

ಜನರಲ್ಲಿ ಅಸಂತೋಷ

ನಾಝಿ ಶಾಸನದ ಕುರಿತು ಜನರಲ್ಲಿ ಹರಡಿರುವ ಅಸಂತೋಷವು ಸಾರ್ವತ್ರಿಕವಾಗಿರುವುದು. ಮೈನ್ ನದಿಯ ಮೇಲಿರುವ ಮಾರ್ಕ್‌ಬ್ರಿಟ ಎಂಬ ನಗರದಲ್ಲಿಯೂ ಜನರು ನಾಝಿ ಕೆಲಸಗಾರರನ್ನು ಹೊಡೆದು ಹಾಕಿದ್ದಾರೆ. ಕೆಲಸಗಾರರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ಸತ್ತುಹೋಗಿರುವನು. ಅನೇಕ ಮಂದಿ ಪ್ರಾಣಾಂತಿಕ ಸ್ಥಿತಿಯಲ್ಲಿದ್ದಾರೆ.

ಜರ್ಮನಿಯಲ್ಲಿ ಅಂತಃಕಲಹವು ಆರಂಭವಾಗುವುದೋ ಎಂಬ ಭಯವೂ ಇದೆ. ಜನರನ್ನು ನಾಝಿ ಸರಕಾರದ ವಿರುದ್ಧ ದಂಗೆಗೆ ಪ್ರೇರೇಪಿಸುವ ಕರಪತ್ರಗಳು ಜರ್ಮನಿಯಲ್ಲೆಲ್ಲ ಲಕ್ಷಗಟ್ಟಲೆ ಹಂಚಲ್ಪಡುತ್ತಾ ಇವೆ. ಇವು ಹೇಗೆ ಎಲ್ಲಿಂದ ಹಂಚಲ್ಪಡುತ್ತವೆ ಎಂಬುದು ಯಾರಿಗೂ ತಿಳಿಯುವುದಿಲ್ಲ.

ಕರಪತ್ರಗಳ ಬೋಧನೆ

ಜನರೇ! ನೀವು ಉಪವಾಸ ಬಿದ್ದು ಸಾಯುತ್ತಲಿದ್ದೀರಾದರೂ, ನಾಝಿ ಸರಕಾರವು ಅನ್ಯಾಯವಾದ ಯುದ್ಧದಲ್ಲಿ ತೊಡಗಿದೆ. ಅದರಿಂದ ನಿಮ್ಮ ಕಷ್ಟನಷ್ಟಗಳು ಅಪರಿಮಿತವಾಗಿ ಬೆಳೆದಿವೆ. ಸರಕಾರವು ನಿಮ್ಮ ಹಳೆತು ಲೋಹ ಸಾಮಗ್ರಿಗಳನ್ನು ಸಂಗ್ರಹಿಸುತ್ತಿರುವುದ. ಆದರೆ ನೀವು ಅವನ್ನು ನಾಝಿ ಸೈನಿಕರಿಗೆ ಕೊಡಬೇಡಿರಿ. ಯಾರಿಗೂ ತಿಳಿಯದಂತೆ ಅವನ್ನು ಅಡಗಿಸಿ ಇಡಿರಿ. ಅದು ಸಾಧ್ಯವಲ್ಲದಿದ್ದರೆ ಹೊಳೆ ಕೆರೆಗಳಿಗಾದರೂ ಬಿಸಾಡಿ ಬಿಡಿರಿ. ಯಾಕೆಂದರೆ ಹಸಿವು ಬಾಯಾರಿಕೆಗಳನ್ನು ತಡೆಯಲಾಗದೆ ನಿಮ್ಮ ಗೋಳನ್ನು ಹೇಳಲಿಕ್ಕೆ ನೀವು ಬೀದಿಗೆ ಇಳಿದಾಗ ನೀವು ಕೊಟ್ಟ ಈ ಲೋಹದ ಗುಂಡುಗಳೇ ನಿಮ್ಮನ್ನು ಬಂದು ಸುಡುವವು. ನಿಮ್ಮ ಲೋಹದ ಗುಂಡುಗಳಿಂದಲೇ ಸರಕಾರವು ನಿಮ್ಮನ್ನು ಕೊಂದುಹಾಕುವುದು. ಆದುದರಿಂದ ಎಚ್ಚರವಾಗಿರಿ! ನಿಮ್ಮೊಡನಿರುವ ಲೋಹದ ಒಂದೇ ಒಂದ ಸಣ್ಣ ಚೂರು ಕೂಡ ಹಿಟ್ಲರನಿಗೆ ದೊರೆಯದಂತೆ ಮಾಡಿರಿ! ಎಂದು ಈ ಕರಪತ್ರಗಳು ಜನರನ್ನು ಬೋಧಿಸುತ್ತಾ ಇವೆ.

ನಾಝಿಗಳ ಕುತಂತ್ರ ಸಫಲವಾಗಲಿಲ್ಲ

ಜರ್ಮನಿ ತನ್ನ ಪಶುಬಲದ ಮೂಲಕ ಡೆನ್ಮಾರ್ಕನ್ನು ತನ್ನ ಅಧೀನ ಮಾಡಿಕೊಂಡೊಡನೆ ಅಲ್ಲಿ ಆ ವರೆಗೆ ವಾಸವಾಗಿದ್ದ ಇಂಗ್ಲಿಷ ಮತ್ತು ಫ್ರೆಂಚ ರಾಜನೀತಿಜ್ಞರು ರೈಲ್ವೆ ಹತ್ತಿ ತಮ್ಮ ತಮ್ಮ ದೇಶಗಳಿಗೆ ಮರಳಿದರು. ಅವರಿಗೆ ಬ್ರಿಟಿಷ್ ಮತ್ತು ಫ್ರೆಂಚರ ಅನೇಕ ಯುದ್ಧ ರಹಸ್ಯಗಳು ತಿಳಿದಿದ್ದುವು. ಅವನ್ನು ಗೊತ್ತುಮಾಡಿಕೊಳ್ಳುವುದಕ್ಕೋಸ್ಕರ ನಾಝಿಗಳು ಯಾರಿಗೂ ತಿಳಿಯದ ಹಾಗೆ ಅವರು ಹತ್ತಿಕೊಂಡಿದ್ದ ರೈಲುಗಳು ಮ್ಯಾಕ್ರೊಫೋನು ಅಥವಾ ಧ್ವನಿವಾಹಕ ಯಂತ್ರಗಳನ್ನಿಟ್ಟು ಈ ರಾಜನೀತಿಜ್ಞರ ಪರಸ್ಪರ ಮಾತುಕತೆಗಳನ್ನು ತಾವು ದೂರದಲ್ಲಿದ್ದು ಕೇಳುವ ಉಪಾಯಗಳನ್ನು ಮಾಡಿದ್ದರು. ಆದರೆ ನಾಝಿಗಳ ಈ ತಂತ್ರವು ಸಫಲವಾಗಲಿಲ್ಲ. ರೈಲಿನಲ್ಲಿದ್ದ ಮಿತ್ರ ಪಕ್ಷದ ಒಬ್ಬ ಮಿಲಿಟರಿ ತಜ್ಞನಿಗೆ ಈ ಮ್ಯಾಕ್ರೊಫೋನುಗಳಿರುವುದು ಗೊತ್ತಾಗಿ ಅವನು ಆ ಸಂಗತಿಯನ್ನು ಎಲ್ಲರಿಗೆ ತಿಳಿಸಿಬಿಟ್ಟನು. ರಾಜನೀತಿಜ್ಞರು ತಾವು ಸ್ವದೇಶದಲ್ಲಿ ತಲಪುವ ತನಕ ಒಟ್ಟಿಂದು ಒಂದೇ ಒಂದು ಮಾತನ್ನಾದರೂ ಆಡಲಿಲ್ಲ. ಮೌನವಾಗಿಯೇ ಹಗಲಿರುಳುಗಳನ್ನು ಕಳೆದರು. ಆದ್ದರಿಂದ ಮಿತ್ರಪಕ್ಷದ ಯಾವ ಯುದ್ಧರಹಸ್ಯವೂ ನಾಝಿಗಳಿಗೆ ತಿಳಿಯಲಿಲ್ಲ.

'The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು
ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು — ಬ್ರಾಂಚ್ ಸೆಂಟ್ರಲ್ ಮಾರ್ಕೆಟ
ರಿಜಿಸ್ಟರ್ಡ್ ಮೂಲಧನ ರೂ 1,00,000 — ತೆತ್ತಿರುವ ಮೂಲಧನ ರೂ 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 45
„ 6 ತಿಂಗಳಿಗೆ 4% — „ 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
Rs. 50/-, 100/-, 500/-, 1,000/- & 5,000/-
are now issued at all our Branches.
For particulars call at or write to
Any of our nearest Branches

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never
Hard Work?	—	Very Often.
Hard work and THRIFT	—	Always.

RESOURCES OF A CRORE.
Estd: 1906
CANARA BANK LIMITED.

ಜಿಲ್ಲಾ ಸಮಾಚಾರ

ಮಂಗಳೂರು

ಕೋರ್ಟುಗಳು ತೆರೆಯಲ್ಪಟ್ಟವು

ಬೇಸಿಗೆ ರಜೆಯ ಸಂಬಂಧ ಮುಚ್ಚಲ್ಪಟ್ಟಿದ್ದ ಮುನ್ಸಿಫ್ ಕೋರ್ಟು ಕಳೆದ ತಾ. ೩ರಲ್ಲಿ ತೆರೆಯಲ್ಪಟ್ಟಿತು

ಹವಾಮಾನ—ಈ ವಾರ ಮಳೆ ಚೆನ್ನಾಗಿದೆ ಹವೆಯು ತಂಪಾಗಿದೆ

ಉಳ್ಳಾಲ—ಇಲ್ಲಿಯ ಬೋವಿ ಎಲಿಮೆಂಟರಿ ಶಾಲೆಯ ನೂತನ ಕಟ್ಟೋಣದ ಪ್ರವೇಶ ಮಹೋತ್ಸವವೂ ಶಾಲಾ ವರ್ಧಂತ್ಯುತ್ಸವವೂ ಇದೇ ಕಳೆದ ತಾ ೩೦ಕ್ಕೆ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ॥ ಕೆ ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಯುತ ಕಣ್ಣಪ್ಪನವರೂ ಹಾಜರಿದ್ದರು ಪ್ರಾರ್ಥನೆ, ವರದಿವಾಚನ, ಶಾಲಾಭಿನಂದನೆ, ಸಭಿಕರ ಭಾಷಣಗಳಾದ ಮೇಲೆ ಅಧ್ಯಕ್ಷರ ಸುರಸ ಭಾಷಣವಾಯಿತು ವಿದ್ಯಾರ್ಥಿಗಳಿಂದ ಲೇಜಿಮ್, ಕೋಲಾಟ, ಕಥೆ ಹೇಳೋಣ ಇವುಗಳಾದ ಮೇಲೆ ೪ ಮತ್ತು ೫ನೇ ಕ್ಲಾಸಿನ ಮಕ್ಕಳು ನಾಟಕವನ್ನು ಅಭಿನಯಿಸಿದರು.

ಅಧ್ಯಾಪಕರ ಸಭೆ

ಮಂಗಳೂರು ಪಟ್ಟಣದ ದಕ್ಷಿಣ ಭಾಗಕ್ಕೆ ಸೇರಿದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ಕಾರ್ಯಕಾರೀ ಸಭೆಯು ಇದೇ ತಿಂಗಳ ತಾರೀಕು ೮ನೇ ಶನಿವಾರ ದಿನ ಜೆಪ್ಪು ಸೈಂಟ್ ಜೋಸ್ಸ್ ಹಾ ಎ ಶಾಲೆಯಲ್ಲಿ ಜಪ್ಪು ಎಸ್ಸ್ಯಲಂ ಹಾ. ಎ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ಸಿಕ್ವೇರರ ಅಧ್ಯಕ್ಷತೆಯಲ್ಲಿ ಜರಗಿತು ಜೆಪ್ಪು ಸೈಂಟ್ ಹಾ ಎ ಶಾಲೆಯ ಸಹಾಯಕ ಅಧ್ಯಾಪಕರಾದ ಶ್ರೀಯುತ ಗೋಪಾಲಕೃಷ್ಣ ರಾವ್, ಬಾಳ, ಇವರನ್ನು ಸಂಘದ ಕಾರ್ಯದರ್ಶಿಗಳನ್ನಾಗಿಯೂ, ಶ್ರೀಯುತ ಯಚ್ ವಾಸುದೇವನಾವಡ ಇವರನ್ನು ಕೋಶಾಧಿಕಾರಿಗಳನ್ನಾಗಿಯೂ ಆರಿಸಿದ ನಂತರ ಸಭಾಂತ್ಯವಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಗಜೇಟು

ಲೋಕಲ್ ಮತ್ತು ಮುನ್ಸಿಪಲ್ ಸಪ್ಲಿಮೆಂಟು

1934ನೇ ಇಸವಿ ಮೇ ತಾರೀಕು ೧ರ ವರೆಗೆ ತಿದ್ದುಪಡಿಯಾದ 1920ನೇ ಇಸವಿಯ ಮದ್ರಾಸು ಲೋಕಲ್ ಬೋರ್ಡುಗಳ 14ನೇ ಆಕ್ಟಿನ 198 ಮತ್ತು 212 (೨)ನೇ ಪ್ರಕರಣಗಳ ನಿಬಂಧನೆಗನುಸಾರವಾಗಿ ಪ್ರಕಟಣೆ.

1939ನೆ ಇಸವಿ ಅಕ್ಟೋಬರ ತಿಂಗಳ ತಾ 9ರ ನಂಬ್ರ 865/5 P. K. S] ಗವರ್ನಮೆಂಟ್ ಹುಕುಮಿಗನುಸಾರವಾಗಿ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನಲ್ಲಿ ತಾ 13–5–1940ರಲ್ಲಿ ಮಂಜೂರಾದ ನಂಬ್ರ 5ನೇ ನಿರ್ಣಯದ ಮೇರೆಗೆ 1936ನೇ ಇಸವಿ ಅಗೋಸ್ತು ತಿಂಗಳ ತಾ. 20ರ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಲ್ಪಟ್ಟ ಅಪಾಯಕರ ವ್ಯಾಪಾರಗಳನ್ನು ನಡೆಸುವವರು ಸದ್ರಿ ವ್ಯಾಪಾರದ ಲೈಸನ್ಸು ಬಗ್ಗೆ ನವೀಕರಣದ ಬಾಬ್ತು ವರ್ಷಾಂತ್ಯದ 30 ದಿನಗಳ ಮುಂಚಿತವಾಗಿಯೂ, ತೀರ ಹೊಸ ಲೈಸನ್ಸ್‌ಗಳ ಬಗ್ಗೆ ವ್ಯಾಪಾರವನ್ನು ಪ್ರಾರಂಭಿಸುವ 30 ದಿನಗಳ ಮುಂಚಿತವಾಗಿಯೂ ದ ಕ ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೆ ತಲುಪುವಂತೆ ಅರ್ಜಿಗಳನ್ನು ಕಳುಹಿಸದಿದ್ದರೆ ಆಯಾ ವ್ಯಾಪಾರದ ಬಾಬ್ತು ನಿಶ್ಚಯಿಸಲ್ಪಟ್ಟ ಫೀಸಿನ ಶೇಕಡಾ 12½ ದರದಲ್ಲಿ ಹಾಗೂ ಶೇಕಡಾ 25ಕ್ಕೆ ಮೀರದಷ್ಟು ದಂಡನೆಯನ್ನು ವಿಧಿಸಲಾದೀತೆಂದು ಈ ಮೂಲಕ ಸಮಸ್ತ ಜನರಿಗೆ ತಿಳಿಸಲಾಗುತ್ತದೆ

ಸೂಚನೆ—ಈ ಪ್ರಕಟಣೆಯು ಜಿಲ್ಲಾ ಗಜೇಟಿನಲ್ಲಿ ಪ್ರಕಟವಾದ 60 ದಿವಸದ ನಂತರದಿಂದ ಜಾರಿಗೆ ಬರತಕ್ಕದ್ದು.

(*Sd*) **K Vittal Shetty**
President

ಪರೀಕ್ಷಾ ಫಲಿತಾಂಶ—ಮಂಗಳೂರು ಸೈಂಟ್ ಅಲೋಶಿಯಸ್ ಕಾಲೇಜಿನಿಂದ ಎಸ್ ಎಸ್. ಎಲ್ ಸಿ ಗೆ ಕುಳಿತುಕೊಂಡ ೧೧೫ ವಿದ್ಯಾರ್ಥಿಗಳಲ್ಲಿ ೮೨ ಮಂದಿಯೂ ಕೆನರಾ ಹೈಸ್ಕೂಲಿನ ೧೩೫ರಲ್ಲಿ ೭೫ ಮಂದಿಯೂ ತೇರ್ಗಡೆ ಹೊಂದಿರುವರು

ಹಿಂದುಸ್ಥಾನ ಸ್ಕೌಟ್:—ಹಿಂದುಸ್ಥಾನ ಸ್ಕೌಟ್ ಅಸೋಸಿಯೇಶನಿನ ಕಾರ್ಯಕಾರಿ ಮಂಡಲಿಯ ಸಭೆಯೊಂದು ಶ್ರೀ ಎಂ ಎಸ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಸ್ಥಳೀಯ ಥಿಯಾಸಫಿಕಲ್ ಲಾಜಿನಲ್ಲಿ ಕಳೆದ ಆದಿತ್ಯವಾರ ಜರಗಿತು

ನೀಲೇಶ್ವರ

ಯಂಗ್‌ಮೆನ್ಸ್ ಕ್ಲಬ್ ಇಲ್ಲಿಯ ತಪ್ಪಿಹೀ ತರುಣರು ಕಳೆದ ತಾ ೨ನೇ ರವಿವಾರ ಶ್ರೀ. ಎನ್. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಒಂದು ಯಂಗ್ ಮೆನ್ಸ್ ಕ್ಲಬ್‌ನ್ನು ಸ್ಥಾಪಿಸಿಕೊಂಡಿರುವರು. ಶ್ರೀಯುತ ರಾಘವನ್ ಸೌಭಿಯಾರ್ ಸಿ. ಕೆ ಯವರು ಸ್ಥಿರಾಧ್ಯಕ್ಷರಾಗಿಯೂ ಶ್ರೀ. ಕೆ ಅಪ್ಪು ನಂಬಿಯಾರರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ವಯಸ್ಕರ ವಿದ್ಯಾಭ್ಯಾಸ—ನೀಲೇಶ್ವರ ಗ್ರಾಮಸತ್ಯಾಗ್ರಹ ಸಮಿತಿಯು, ವಯಸ್ಕರ ವಿದ್ಯಾಭ್ಯಾಸದಲ್ಲಿ ಪರಿಶ್ರಮ ತೆಗೆದುಕೊಳ್ಳಬೇಕೆಂದು ಠರಾವೊಂದನ್ನು ಮಂಜೂರು ಮಾಡಿದೆ.

ಕಾಸರಗೋಡು

ಸಿಡಿಲಿನ ಬಡಿತ—ಸಿಡಿಲಿನ ಬಡಿತದ ಪರಿಣಾಮವಾಗಿ ಕಳೆದ ವಾರದಲ್ಲಿ ಹಲವು ಅನಾಹುತಗಳುಂಟಾಗಿವೆ. ಹೆಂಗಸೊಬ್ಬಳು ಅರೆಜೀವಸ್ಥಿತಿಯಲ್ಲಿರುವಳೆಂದು ಹೇಳಲಾಗಿದೆ ಉಳಿಯತಡ್ಕ ಎಂಬಲ್ಲಿ ಮೇಯುತ್ತಿದ್ದ ಎಳೆಂಟು ದನಗಳು ಒಮ್ಮೆಗೇ ಭಸ್ಮೀಭೂತವಾಗಿವೆ

ವಿಟ್ಲ—ವಿಟ್ಲ ಬೋರ್ಡು ಹಾ. ಎ. ಶಾಲಾ ವರ್ಧಂತಿ ಉತ್ಸವವು ಡಾ. ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಕಳೆದ ತಾ ೪ರಂದು ಜರಗಿತು. ವಿಟ್ಲದ ಅರಸರಾದ ರಾವ್ ಸಾಹೇಬ್ ವಿ. ಆರ್ ಲಕ್ಷ್ಮೀಕಾಂತ ಅರಸರು ಸ್ವಾಗತ ಭಾಷಣವನ್ನು ಮಾಡಿದರು ವರದಿವಾಚನ, ಹಿತಚಿಂತಕರ ಭಾಷಣ, ಅಧ್ಯಕ್ಷರ ಭಾಷಣಗಳ ನಂತರ ವಿವಿಧ ವಿನೋದಾವಳಿಗಳಿಂದ ಸಭೆ ಮುಕ್ತಾಯವಾಯಿತು

ಗ್ರಾಮ ಸೇವಾ ಸಂಘ

ವಿಟ್ಲದ ಗ್ರಾಮ ಸೇವಾ ಸಂಘದ ವಾರ್ಷಿಕೋತ್ಸವವು ಕಳೆದ ತಾ. ೫ರಂದು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರಾದ ಶ್ರೀ ಎಂ ವರದರಾಜುಲು ನಾಯ್ಡುರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಎಸ್. ಕಾರಂತರು "ಗ್ರಾಮ ಪುನರುಜ್ಜೀವನ"ದ ವಿಚಾರವಾಗಿ ಭಾಷಣವಿತ್ತರು

ಕಾರ್ಕಳ

ಪರೀಕ್ಷಾ ಫಲಿತಾಂಶ: ಸ್ಥಳೀಯ ಬೋರ್ಡ್ ಹೈಸ್ಕೂಲಿನಿಂದ ಈ ವರ್ಷದ ಯಸ್. ಯಸ್. ಯಲ್. ಸಿ ಪರೀಕ್ಷೆಯನ್ನು ಕೊಟ್ಟ ೮೨ ಮಂದಿಯಲ್ಲಿ ೩೦ ಮಂದಿಯೂ ಸಂಸ್ಕೃತ ಕಾಲೇಜಿನಿಂದ ಶಿರೋಮಣಿ ಫೈನಲ್ ಪರೀಕ್ಷೆಯನ್ನು ಕೊಟ್ಟವರಲ್ಲಿ ಇಬ್ಬರೂ, ಪ್ರಿಲಿಮಿನರಿ ಪರೀಕ್ಷೆಯನ್ನು ಕೊಟ್ಟವರಲ್ಲಿ ೩ ಮಂದಿಯೂ, ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಿಂದ ಇ. ಯಸ್.

[ಇನ್ನೂ ಪುಟಕ್ಕೆ ಮುಂದುವರಿಯುವುದು]

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿಪಡೆದ ಶಾಲಾ ಪುಸ್ತಕಗಳು

[1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದು ಮಂಜೂರಾದ ಶಾಲಾ ಪುಸ್ತಕಗಳು]

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
1ನೇ ದರ್ಜೆ	0–ɔ–0
5ನೇ	0 3–6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
1ನೇ ದರ್ಜೆ	0–2 0
5ನೇ ,,	0–2–6

ಸಿವಿಕ್ಸ್ ಅಥವಾ ಪೌರಧರ್ಮ

ಪುಸ್ತಕ	ಬೆಲೆ
1ನೇ ದರ್ಜೆ	0–2–0
5ನೇ ,,	0–2–6
6ನೇ ,,	0–3–0
7ನೇ ,,	0–3–0
8ನೇ ,,	0–3–0

ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ

ಭೂ ವಿವರ

ಪುಸ್ತಕ	ಬೆಲೆ
4ನೇ	0–2–6
5ನೇ	0–3–6

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ. 1—0—0

ಶಾಲಾ ಉಪಯೋಗಕ್ಕೆ (ಲೈಬ್ರೆರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	,,	0—1—6
ಸಿವಿಕ್ಸ್	,,	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಇಟಲಿಯು ಜರ್ಮನಿಯ ಪಕ್ಷ ವಹಿಸಿತು!

ಯುದ್ಧ ವಾರ್ತೆ



ಪ್ರೆಸಿಡೆಂಟ್ ರೂಸ್‌ವೆಲ್ಟರ ಎಚ್ಚರಿಕೆ!

ಪ್ಯಾರಿಸಿನ ಮೇಲೆ ಜರ್ಮನ್ ಧಾಳಿ

ಮಿತ್ರಪಕ್ಷದವರ ಪ್ರಚಂಡ ಯುದ್ಧ

ಇಟಲಿಯು ದುಮುಕಿತು!

ಯೂರೋಪಿನ ಯುದ್ಧವು ಮತ್ತಷ್ಟು ಬಿಗಿಯಾಯಿತು. ಇಟಲಿಯು ಜರ್ಮನಿಗೆ ಬೆಂಬಲವಾಗಿ, ಮಿತ್ರರಾಷ್ಟ್ರದವರಿಗೆ ವಿರೋಧವಾಗಿ ಯುದ್ಧರಂಗಕ್ಕಿಳಿದಿದೆ. ಫ್ಲಾಂಡರ್ಸಿನ ಪತನವಾದ ಮೇಲೆ ಮಿತ್ರರಾಷ್ಟ್ರಗಳು ವಿಷಮಕಾಲದಲ್ಲಿರಲು ಹೀಗೆ ಇಟಲಿಯು ಅನ್ಯಾಯ ಮಾಡಿದೆ.

ಫ್ರಾನ್ಸಿನ ಯುದ್ಧ

ಫ್ರಾನ್ಸಿನಲ್ಲಿ ಭಯಂಕರ ಸಂಗ್ರಾಮವು ನಡೆದಿದೆ. ಜರ್ಮನರೂ ಇಟೇಲಿಯನರೂ ಮುತ್ತುತಿದ್ದಾರೆ. ಫ್ರಾನ್ಸಿನ ರಾಜಧಾನಿ ಪ್ಯಾರಿಸಿಗೆ ಬಾಂಬುಗಳು ಬಿದ್ದಿವೆ. ಹಲವು ಅನಾಹುತಗಳು ಆಗಿವೆ.

ಚರ್ಚಿಲ್ಲರ ಉದ್ಘೋಷ

ಯುದ್ಧ ಪರಿಸ್ಥಿತಿಯ ಕುರಿತು ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರು ಬಹು ದೀರ್ಘವಾದೊಂದು ಭಾಷಣವಿತ್ತು ಅದರಲ್ಲಿ ಇಂದು ಮಿತ್ರರಾಷ್ಟ್ರಗಳ ಪರಿಸ್ಥಿತಿ, ಮುಂದಿನ ದೃಢನಿಶ್ಚಯ ಮೊದಲಾದುಗಳನ್ನು ತಿಳಿಸಿದರು.

ಅಮೇರಿಕದ ಬೆಂಬಲ

ಅಮೇರಿಕವು ಮಿತ್ರರಾಷ್ಟ್ರಗಳ ಬಗ್ಗೆ ಹೆಚ್ಚು ಸಹಾನುಭೂತಿಯನ್ನು ತೋರಿಸುತ್ತಿದೆ. ಇಟಲಿಯು ಪ್ರತ್ಯಕ್ಷವಾಗಿ ರಣರಂಗಕ್ಕೆ ದುಮುಕಿದುದರಿಂದ ಅಮೇರಿಕವು ಇಂದೋ ನಾಳೆಯೋ ಜರ್ಮನ್ ವಿರುದ್ಧ ಮಿತ್ರಪಕ್ಷದವರ ಸಹಾಯವಾಗಿ ಯುದ್ಧಕ್ಕೆ ಇಳಿಯಬಹುದೆಂದು ನಂಬಲಾಗಿದೆ.

ರಶ್ಯದ ಅವಸ್ಥೆಯೇನು?

ರಶ್ಯದ ಅವಸ್ಥೆಯೇನು ಎಂಬ ಕುರಿತು ಇಂದು ವಿಚಾರವು ಎದ್ದಿದೆ. ರಶ್ಯವು ಯಾವ ಪಕ್ಷವನ್ನು ಸೇರಿರುವುದೋ ತಿಳಿಯುವುದಿಲ್ಲ. ತಟಸ್ಥವಾಗಿ ನಿಲ್ಲಲೂ ಸಂಭವವಿದೆಯೆಂದು ತಿಳಿದು ಬರುತ್ತದೆ.

ಇಂಗ್ಲೆಂಡಿನಲ್ಲಿ ಶತ್ರು ವಿಮಾನಗಳು

ಈಸ್ಟ್ ಎಂಗ್ಲಿಯಾ, ಲಿಂಕೋಲ್‌ಶಯರ್, ಯಾರ್ಕ್‌ಶಯರ ಪ್ರಾಂತಗಳ ಹಲವೆಡೆಗಳಲ್ಲಿ ಶತ್ರುವಿಮಾನಗಳ ಆಗಮನ ಸೂಚಕವಾದ ಶಂಖಧ್ವನಿಯಾಗಿ, ಲಂಕ್ಯಾಷಯರಿನ್ನ ಒಂದು ನಗರದಲ್ಲಿ ಬಾಂಬುಗಳೂ ಬಿದ್ದುವೆಂದು ತಿಳಿದು ಬಂದಿದೆ.

ಇಟಲಿಗೆ ರಶ್ಯದ ಎಚ್ಚರಿಕೆ

ಇಟಲಿಯ ಕಾರ್ಯನೀತಿಯ ಕುರಿತು ಕ್ರೋಧವೂ ಅಸಹ್ಯವೂ ಬೆಳೆಯುತ್ತ ಬರುತ್ತಿದೆ. ಇದರಿಂದ ಬ್ರಿಟಿಷ್ ಪತ್ರಿಕೆಗಳೂ ಬೇಸರಗೊಂಡಾಗಿ ಇಟಲಿ ಯುದ್ಧಕ್ಕಿಳಿದರೆ ಅದನ್ನು ಜಜ್ಜಿಬಿಡಬೇಕೆಂದು ಅವು ಕೂಗಾಡುತ್ತಿವೆ. ರಷ್ಯಾ ಮತ್ತು ಟರ್ಕಿಗಳ ಅಭಿಪ್ರಾಯ ವಾದರೂ ಅದೇ. ಮಾಸ್ಕೋವಿನ ಒಂದು ರೇಡಿಯೋ ವಾರ್ತೆ;- "ಮಿತ್ರರ ಮೇಲಿನ ಇಟಲಿಯ ಧಾಳಿ ತೀರ ಅನ್ಯಾಯ. ಬಾಲ್ಕನಿನಲ್ಲಿ ಇಟಲಿ ಕೈಯಿಕ್ಕಿದರೆ ಜೋಕೆ" ಎಂದೂ ಸಾರಿದೆ.

ಮಿತ್ರರಿಗೆ ಅಮೇರಿಕದವರ ಸಹಾಯ

ಅಮೇರಿಕದಿಂದ ಅತಿ ಶೀಘ್ರವಾಗಿ ಮಿತ್ರರಿಗೆ ಯುದ್ಧ ಸಾಮಗ್ರಿಗಳನ್ನು ಕಳುಹಿಕೊಡಬೇಕೆಂದು ಎಲ್ಲ ಕಡೆಗಳಿಂದಲೂ ಒತ್ತಾಯವಾಗಿದ್ದು ಅದರಂತೆ ಅಲ್ಲಿನ ಕಾರ್ಖಾನೆಗಳಲ್ಲಿ ಜೋರಾಗಿ ಕೆಲಸ ನಡೆಯುತ್ತಿದೆ. ಇಷ್ಟರಲ್ಲೇ ಅಮೇರಿಕವು ಮಿತ್ರರಿಗೆ ೩೩೦ ವಿಮಾನಗಳನ್ನು ಒದಗಿಸಿದೆ ಎಂದು ಪ್ರಕಟವಾಗಿದೆ.

ಮಿತ್ರರಾಷ್ಟ್ರಗಳಿಗೆ ಯುದ್ಧ ಸಾಮಗ್ರಿಗಳನ್ನೊದಗಿಸುವಲ್ಲಿ ಅತಿಶಯವಾದ ಆತುರವನ್ನು ಅಮೇರಿಕವು ತೋರ್ಪಡಿಸುತ್ತಿದೆ. ಸದ್ಯಕ್ಕೆ ಸೈನ್ಯ ಶಾಖೆಯಲ್ಲಿ ೧೭ ಸಾವಿರ ಮಂದಿ ಆ ಸಾಮಗ್ರಿಗಳನ್ನು ಸಿದ್ಧ ಮಾಡುತ್ತಿದ್ದಾರೆ. ಕೆಲವೊಂದು ಕಾರ್ಖಾನೆಗಳಲ್ಲಿ ೨೪ ಗಂಟೆಗಳ ಕೆಲಸವೂ ರಭಸದಿಂದ ಸಾಗುತ್ತಿದೆ. ಬೇಗನೇ ಅಮೇರಿಕದಿಂದ ಮಿತ್ರರಿಗೆ ೫೦೦ ಸೈನ್ಯದ ಹಾಗೂ ನೌಕಾ ವಿಮಾನಗಳೂ ೬ ಲಕ್ಷ ರೈಫಲ್‌ಗಳೂ ೫೦೦ ತೋಪುಗಳೂ ಬರಲಿವೆ.

ಬರ್ಲಿನಿನ ಆಸುಪಾಸಿನಲ್ಲಿ ಬಾಂಬು

ಫ್ರೆಂಚರ ನೌಕಾ ಯುದ್ಧ ವಿಮಾನಗಳು ಈಚೆಗೆ ಬರ್ಲಿನಿನ ಸುತ್ತಮುತ್ತಲಿನ ಕಾರ್ಖಾನೆಗಳ ಮೇಲೆ ಬಾಂಬು ಸುರಿಸಿ ಸುರಕ್ಷಿತವಾಗಿ ಹಿಂದಿರುಗಿವೆ. ಈ ಸಂದರ್ಭದಲ್ಲಿ ೧೭ ಜರ್ಮನ್ ವಿಮಾನಗಳು ನಾಶವಾಗಿದೆ.

ಫ್ರಾನ್ಸಿನಲ್ಲಿ ತೀವ್ರ ಯುದ್ಧ

ಉತ್ತರ ಫ್ರಾನ್ಸಿನಲ್ಲಿ ಕಾಲಿವೆಯ ಬಳಿ ಘೋರ ಸಂಗ್ರಾಮವು ಭೀಕರವಾಗಿ ನಡೆಯುತ್ತಿದೆ. ಮುಖ್ಯವಾಗಿ ಆಸ್ಲೀನ್ ಪ್ರಾಂತದಲ್ಲಿ ಜರ್ಮನರು ಪದೇ ಪದೇ ಆಕ್ರಮಿಸಿ ತಮ್ಮ ಹಲವು ಟ್ಯಾಂಕುಗಳನ್ನು ಕಳೆದುಕೊಂಡರು. ಪಶ್ಚಿಮ ರಣರಂಗದಲ್ಲಿ ಪ್ಯಾರಿಸಿನ ಉತ್ತರದಲ್ಲಿ ಜರುಗಿದ ಕಾದಾಟವೂ ಉಗ್ರವಾಗಿಯೇ ಇದ್ದಿತಾದರೂ ಜರ್ಮನರು ಬಹಳ ಮುಂದೆ ನುಗ್ಗಲಿಲ್ಲ. ಫ್ರೆಂಚರ ರಕ್ಷಣಾ ಸೂತ್ರಗಳ ನಡುವೆ ಅವರು ನುಗ್ಗಲಾಗಲಿಲ್ಲ. ಕೆಲವು ಕಡೆ ಎಲೆಟ್ಟೆ ಕಾಲಿವೆಯನು ಜರ್ಮನರು ದಾಟಿದರೂ ಫ್ರೆಂಚರು ತಮ್ಮ ಸಾಲನ್ನು ಹಿಡಿದುಕೊಂಡೇ ಇದ್ದಾರೆ. ಸೊಮ್ಮೆ ರಣರಂಗದಲ್ಲಿ ಜರ್ಮನರ ದಾಳಿ ಸಾಮಾನ್ಯ ರೀತಿಯದಾಗಿದ್ದು ಅದನು ಎಲ್ಲ ಕಡೆಗಳಲ್ಲಿಯೂ ಹಿಂದಕ್ಕೆ ಅಟ್ಟಲಾಗಿದೆ. ಫ್ರೆಂಚರ ಪ್ರಕಟನೆಯ ಪ್ರಕಾರ ಘೋರ ಕಾದಾಟವೆಲ್ಲೆಲ್ಲೂ ಸಾಗುತ್ತಿದೆ; ಹಲವು ಕಡೆ ಶತ್ರುಗಳ ನುಗ್ಗಾಟವನ್ನು ತಡೆಯಲಾಗಿದೆ ಎಂದಿದೆ.

ಪ್ಯಾರಿಸಿಗೆ ಮೂರು ಕಡೆಯಿಂದಲೂ ದಾಳಿ

ಪ್ಯಾರಿಸ್ ನಗರಕ್ಕೆ ಜರ್ಮನರು ಮೂರು ಕಡೆಗಳಿಂದ ದಾಳಿ ಇಡುವಂತೆ ಯತ್ನಿಸುತಿದ್ದಾರೆ. ಅಮಿನ್ಸ್ ಮತ್ತು ಕೆಳಗಿನ ಸೊಮ್ಮೆ ಕಡೆಯಿಂದ ಮತ್ತು ಂದೊತ್ತಿ ಮಧ್ಯದಲ್ಲಿ ಕೋಂಪೈನ್ ಸೀಡ ಓಯಿಸಿನ ಮೂಲಕ ಪ್ಯಾರಿಸಿಗೆ ಒರಬೇಕೆಂದೂ ಪೂರ್ವ ದಿಕ್ಕಿನಿಂದ ಐಸೇನನ್ನು ದಾಟಿ ಕೃತಕಾರ್ಯರಾಗಬೇಕೆಂದೂ ಅವರ ಗುರಿ. ಈ ಕಾರ್ಯದಲ್ಲಿ ಅವರು ಉಪಯೋಗಿಸಿರುವ ಸೈನಿಕರ ಸಂಖ್ಯೆ ೫ ಲಕ್ಷಕ್ಕಿಂತ ಹೆಚ್ಚಿಗೆ ಇಲ್ಲ. ಇದರಿಂದ ಜರ್ಮನರು ಮೆಗ್ನಿಟೊ ಮತ್ತು ವೇಗಾಂಡ್ ಲೈನುಗಳ ಮಧ್ಯದಲ್ಲಿ ದಾಳಿ ನಡೆಸಬಹುದೆಂಬ ಅನುಮಾನ ತೋರುತ್ತದೆ. ಹಾಗೇ ಲಓನ್ ಮತ್ತು ರೆತಲ್‌ನ ಮಧ್ಯೆ ತುಂಬುತ್ತಿರುವ ಸೈನ್ಯಗಳು ಎಲ್ಲಿಗೆಂದೂ ತಿಳಿಯುವುದಿಲ್ಲ.

ಜಪಾನ್ ಯುರೋಪಿನ ಯುದ್ಧದಲ್ಲಿ ಸೇರುವುದಿಲ್ಲ

ಜಪಾನ್ ಮುಖ್ಯಮಂತ್ರಿಯ ಹೇಳಿಕೆ

"ಯೂರೋಪಿನ ಯುದ್ಧದಲ್ಲಿ ಭಾಗವಹಿಸದೆ ದೂರವಾಗಿರುವ ನೀತಿಯನ್ನು ಜಪಾನ್ ಸರಕಾರವು ಇನ್ನೂ ಮುಂದರಿಸುವುದು. ಆ ನೀತಿಯಲ್ಲಿ ಬದಲಾವಣೆಯೇನೂ ಇಲ್ಲ" ಎಂಬುದಾಗಿ ಜಪಾನ್ ಮುಖ್ಯ ಮಂತ್ರಿ ಯೋನಾಯ್‌ರವರು ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಮಾತನಾಡುತ್ತಾ ತಿಳಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ "ಸಂಯುಕ್ತ ಸಂಸ್ಥಾನವು ಜಗಳಕ್ಕಾಗಿಯೇ ಕಾಲು ಕೆರೆದು ನಿಂತಿದೆ. ಆದೇನಾದರೂ ಯೂರೋಪಿನ ಯುದ್ಧಕ್ಕೆ ಸೇರಿದರೆ ಪಶ್ಚಿಮ ಪೆಸಿಫಿಕ್‌ನಲ್ಲಿರುವ ಅದರ ಅಧೀನ ಪ್ರದೇಶಗಳ ಸ್ಥಾನಮಾನಗಳು ಬದಲಾವಣೆ ಹೊಂದುವವು. ಪೆಸಿಫಿಕ್‌ನಲ್ಲಿ ಅಮೇರಿಕಾದ ನೌಕಾ ಸೈನ್ಯವನ್ನು ಬಲಪಡಿಸುವುದರಿಂದ ಜಪಾನೇನೂ ಹೆದರುವುದಿಲ್ಲ. ನೆದರ್‌ಲೇಂಡ್ಸ್ ಇಂಡೀಸಿನ ಬಗ್ಗೆ ಮಿ॥ ಅರಿಟಾರವರು ಹೇಳಿರುವ ನೀತಿಯನ್ನೇ ಜಪಾನ್ ಸರಕಾರವು ಅನುಸರಿಸುವುದು. ಜಪಾನಿಗೂ ಇಂಡೀಸ್‌ಗೂ ಇರುವ ಆರ್ಥಿಕ ಸಂಬಂಧವನ್ನು ಬಲಪಡಿಸಿಕೊಳ್ಳಲು ಅದರ ಸ್ಥಾನಮಾನಗಳನ್ನು ರಕ್ಷಿಸಿಕೊಂಡು ಬರಲು ಜಪಾನು ಇಷ್ಟ ಹೊಂದಿದೆ" ಎಂದರು.

ಅಮೇರಿಕೆಯಲ್ಲಿ ಕಾಲಿಡಕೂಡದು

ವಿದೇಶಿಯರ ಅಮೇರಿಕೆಯೊಳಗೆ ಬರುವದನ್ನು ತಡೆಯುವದಕ್ಕಾಗಿ ಸರಕಾರದವರು ಕಾಯಿದೆಗಳನ್ನು ಮಾಡಿದ್ದಾರೆ. ಸದುದ್ದೇಶದಿಂದ ಬಂದಿರುವ ನೆಂಬವಕ್ಕೆ ಯೋಗ್ಯ ಕಾರಣಗಳನ್ನು ತೋರಿಸಿದವರನ್ನು ಸಾರ್ವಜನಿಕ ಶಾಂತತೆಗೆ ಅಪಾಯಕಾರಿಗಳೆಂದು ಕಂಡು ಬಂದವರನ್ನು ಹೊರಗೆ ಹಾಕಬೇಕೆಂದು ನಿರ್ಧರಿಸಲಾಗಿದೆಯಂತೆ.

> **ಉದಮುಸಿಂಗರಿಗೆ ಫಾಶಿ!**
>
> ಸರ್ ಮಾಯಕಲ್ ಓಡ್ವಾಯರ ಕೊಲೆಯ ಸಂಬಂಧದಲ್ಲಿ ಆಪಾದನೆಗೆ ಗುರಿ ಮಾಡಲ್ಪಟ್ಟ ಉದಮುಸಿಂಗರ ವಿಚಾರಣೆಯು ಮುಗಿದು ಅವರು ದೋಷಿಗಳಾಗಿ ನಿರ್ಣಯಿಸಲ್ಪಟ್ಟು, ಅವರಿಗೆ ಫಾಶೀ ಶಿಕ್ಷೆ ವಿಧಿಸಲ್ಪಟ್ಟಿತು!

ನಾಝಿ ಗುಪ್ತಚಾರರ ಹಾವಳಿ

ನಾಝಿ ಅಧಿಕಾರಿಗಳು ಝೆಕೋಸ್ಲೋವಾಕಿಯಾದಿಂದ ರಶಿಯಾಕ್ಕೆ ಹೋಗುವ ಯಾವತ್ತೂ ನಿರ್ಯಾತಗಳನ್ನು ಪ್ರತಿಬಂಧಿಸಿರುವರೆಂದೂ ಅಲ್ಲಿಂದ ಬಂದ ಯಾವತ್ತೂ ಆರ್ಡರುಗಳನ್ನು ರದ್ದು ಮಾಡಬೇಕೆಂದು ಹುಕುಮ್ ವಿಧಿಸಿರುವರೆಂದೂ ಮಾಸ್ಕೋಕ್ಕೆ ವ್ಯವಹಾರದ ಸಲುವಾಗಿ ಹೋಗಲಿದ್ದ ಝೆಕ್ ಉದ್ದಿಮೆಗಾರರಿಗೆ ಅಲ್ಲಿಗೆ ಹೋಗಲು ಅಪ್ಪಣೆ ನಿರಾಕರಿಸಿರುವರೆಂದೂ ಝೆಕ್ ಸರಹದ್ದಿನಿಂದ ಬಂದ ಸುದ್ದಿಯಿಂದ ತಿಳಿದು ಬರುತ್ತದೆ.

ಹಡಗಗಳ ಓಡಾಟಕ್ಕೆ ಅಪಾಯಕರ

ಇಟಲಿ ಅಲ್ಬೇನಿಯಾ ಮತ್ತು ಇತರ ಇಟಾಲಿಯನ್ ವಸಾಹತುಗಳ ಸುತ್ತಲಿನ ಸಮುದ್ರ ದಂಡೆಯ ಹನ್ನೆರಡು ಮೈಲು ಪ್ರದೇಶವು ಹಡಗಗಳ ಓಡಾಟಕ್ಕೆ ಯೋಗ್ಯವಾಗಿಲ್ಲವೆಂದು ಸಾರಲಾಗಿದೆ. ಈ ಪ್ರದೇಶಗಳಲ್ಲಿ ಬರಲಿಚ್ಛಿಸುವ ಹಡಗಗಳು ವಿಶೇಷ ಒಪ್ಪಿಗೆ ಪಡೆದುಕೊಳ್ಳಬೇಕಂತೆ.

೪೮ ಸಾವಿರ ಬಾಲಕರ ಸ್ಥಳಾಂತರ

ಸಫೋಲ್ಕ್ ಕರಾವಳಿ ಮತ್ತು ಪೂರ್ವ ಕರಾವಳಿ ಉತ್ತರದ ನಗರಗಳಲ್ಲಿಯ ಒಟ್ಟು ೪೮ ಸಾವಿರ ಬಾಲ-ಬಾಲಿಕೆಯರು ವೆಲ್ಸ ಹಾಗು ಮಿಡಲಂಡಕ್ಕೆ ಸ್ಥಳಾಂತರಿಸಲ್ಪಲ್ಪರು. ಇದು ಈ ಹುಡುಗರ ಎರಡನೇ ಸ್ಥಳಾಂತರವಿರುವದು. ಅವರು ಮೊದಲನೇ ಸಾರೆ ಲಂಡನಿನಿಂದ ಇಲ್ಲಿಗೆ ತರಲ್ಪಟ್ಟಿದ್ದರು.

ಇಟಲಿ ಏಕೆ ಯುದ್ಧಕ್ಕಿಳಿಯಿತು?

ಇದೇ ತಾ. 11 ನೆಬೆಳಿಗ್ಗೆ ಮುಸಲೋನಿ ಭಾಷಣಕೊಟ್ಟು, ಇಟಲಿಯ ಕೇಳಿಕೆಗಳನ್ನು ಮಿತ್ರರಾಷ್ಟ್ರಗಳ ಮುಂದಿಟ್ಟಿರುವನು. ಮಾಲ್ಟಾ ಮತ್ತು ಭೂಮಧ್ಯ ಸಾಗರಗಳನ್ನು ಇಟಲಿಗೆ ಬಿಟ್ಟುಕೊಡಬೇಕು, ಈಗ ಫ್ರಾನ್ಸಿಗೆ ಸೇರಿರುವ ಕೊರ್ಸಿಕ ಮತ್ತು ಟ್ಯುನೀಸಿಯಾಗಳನ್ನು ಬಿಟ್ಟುಕೊಡಬೇಕು, ಉತ್ತರ ಆಫ್ರಿಕದ ಜಿಬ್ರಾಲ್ಟರ ಮತ್ತು ಸುವೇಜ್ ಕಾಲುವೆಗಳನ್ನು ಬಿಟ್ಟುಕೊಡಬೇಕೆಂಬುದೇ ಇಟಲಿಯ ಕೇಳಿಕೆಗಳಾಗಿದ್ದುವು. ಇವುಗಳಿಗೆ ಎಷ್ಟು ಮಾತ್ರಕ್ಕೂ ಮಿತ್ರರಾಷ್ಟ್ರಗಳಿಗೆ ಒಪ್ಪಲು ಸಾಧ್ಯವಿಲ್ಲ. ಆದುದರಿಂದ ಇಟಲಿಯು, ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಪೀಡೆಯಿಂದ ಯೂರೋಪನ್ನು ಬಿಡಿಸಲು ಜರ್ಮನ್ ಸಹೋದರರೊಂದಿಗೆ ತಾ. ೧೧ರಲ್ಲು ಯುದ್ಧಕ್ಕೆ ಸೇರಿರುವುದು.

ಪ್ರೆಸಿಡೆಂಟ್ ರೂಸ್‌ವೆಲ್ಟರ ಎಚ್ಚರಿಕೆ.

ಇಟಲಿಯು ಜರ್ಮನಿಯೊಂದಿಗೆ ಯುದ್ಧಕ್ಕೆ ಸೇರಬಾರದೆಂದೂ, ಸೇರಿದರೆ ಅಮೇರಿಕವು ಮಿತ್ರರಾಷ್ಟ್ರಗಳ ಕಡೆಗೆ ಸೇರಬೇಕಾಗುವುದೆಂದೂ ಪ್ರೆಸಿಡೆಂಟ್ ರೂಸ್‌ವೆಲ್ಟರು ಮುಸಲೋನಿಗೆ ಎಚ್ಚರವಿತ್ತಿರುವರೆಂದೂ ತಿಳಿದುಬರುತ್ತದೆ.

ಅಮೇರಿಕವು ಯುದ್ಧಕ್ಕೆ ಸೇರಿದರೆ ಶಾಂತಸಾಗರದಲ್ಲಿರುವ ಯುದ್ಧಹಡಗಗಳನ್ನು ಅಟ್ಲಾಂಟಿಕ ಸಾಗರಕ್ಕೆ ತರಬೇಕಾಗುವುದು. ಇದರಿಂದ ಜಪಾನು ತನ್ನಿಚ್ಛಾನುಸಾರ ನಡೆಯುವಂತಾಗುವುದು. ದಕ್ಷಿಣ ಅಮೇರಿಕಾದ ರಾಷ್ಟ್ರಗಳ ವ್ಯಾಪಾರವನ್ನು ಅಮೇರಿಕವು ಕಳೆದುಕೊಂಡು ಜಪಾನಿಗೆ ಆಸ್ಪದವಿತ್ತಂತಾಗುವುದೆಂದು ರಶ್ಯದ ಪ್ರವಾದ ಪತ್ರಿಕೆಯು ಎಚ್ಚರಿಸಿರುವುದು.

ಇಟಲಿ... ಮೇಲೆ ... ದು-ರಶ್ಯ... ಬಂದಿದೆ. ಫಿನ್ಲೆಂಡಿನ... ವೈಷಮ್ಯ... ಸೌಹಾರ್ದ... ರಾಯಭಾ... ಕೊಂಡಿವೆ.

ಭಾರತ...

ಭಾರ... ನಾದರೂ ... ಗಬಹುದೆ... ಡಿದೆ. ... ಮರಣ ... ಜರ್ಮನಿ ... ಯೂ ... ತನ್ನ ಸಾ... ಧನ ಬೆಂ... ಆದಕಾರ... ವನ್ನು ತ್ಯ... ಕಷ್ಟ ... ಬ್ರಿಟನು ... ನೀತಿಜ್ಞರ...

ರಾಜ...

ಈ ಸಂ... ತಿನ್ನವೆಲ್ಲ... ಒಂದು ಭಾ... ತಾ ಸರಕ... ವುದು ಅ... ಮಾತ್ರವಲ್ಲ... ಜನರ ... ಬ್ರಿಟನು ... ಸ್ವತಂತ್ರ ... ಭಾರತೀಯ... ಕೊಡಬಲ್ಲ...

... ಪಂಜಾ... ಗಾರರನ್ನು ... ತೀವ್ರವಾಗಿ ... ಯನ್ನು ಈ ... ಸೆರೆ ಹಿಡಿ... ರಿಗೂ ಚಳ... ಬಹಳ ಅ...

ಇನ್ನೂ ... ಭಾರತ... ಕಾರವು ... ಕ್ರಮವನ್ನ...



ಜನತೆಯ ಸರಕಾರವು ಸ್ಥಾಪಿತವಾಗುವುದೇ?

ಸುಭಾಸ ಬೋಸರ ಬಿನ್ನಹ
ರಾಷ್ಟ್ರಪತಿ ಅಜಾದರ ಹೇಳಿಕೆ

ಹಿಂದೂ ಮುಸ್ಲಿಂ ಐಕ್ಯ ಪ್ರಯತ್ನ! ಪಂಜಾಬಿನ ಕಾಕ್ಸಾರರ ಗಲಭೆ!

ಇಟಲಿಯು ಬಾಲ್ಕನ್ ರಾಷ್ಟ್ರಗಳ ಮೇಲೆ ಧಾಳಿನಡಿಸದೆ ದೂರವಿರಬೇಕೆಂದು ರಶ್ಯವು ಎಚ್ಚರಿಸಿರುವುದಾಗಿ ತಿಳಿದು ಬಂದಿದೆ ರಶ್ಯ ಮತ್ತು ಇಟಲಿಗಳೊಳಗೆ ಫಿನ್ಲೆಂಡಿನ ಸಂಬಂಧವಾಗಿ ಉಂಟಾಗಿದ್ದ ವೈಷಮ್ಯವು ದೂರವಾಗಿ ಅವುಗಳೊಳಗೆ ಸೌಹಾರ್ದವುಂಟಾಗಿದೆ ಅವು ಪರಸ್ಪರ ರಾಯಭಾರಿಗಳನ್ನು ಬದಲಾವಣೆಮಾಡಿಕೊಂಡಿವೆ

ಭಾರತಕ್ಕೆ ನ್ಯಾಯದಾನವುಂಟೇ?

ಭಾರತದ ರಾಜಕೀಯದಲ್ಲಿ ಏನಾದರೂ ಇಂಥ ವ್ಯತ್ಯಾಸವುಂಟಾಗಬಹುದೇ ಎಂಬ ಆಶಂಕೆಯು ಹರಡಿದೆ ಬ್ರಿಟನು ಇಂದು ಜೀವನ ಮರಣದ ಸಂಗ್ರಾಮದಲ್ಲಿರಲು ಜರ್ಮನಿಗೆ ಬೆಂಬಲವಾಗ್ಯಿ ಇಟಲಿಯೂ ಬಂದು ಸೇರಲು ಬ್ರಿಟನಿಗೆ ತನ್ನ ಸಾಮ್ರಾಜ್ಯದ ಸಂಪೂರ್ಣ ಜನ ಧನ ಬೆಂಬಲಗಳಿಲ್ಲದೆ ಸಾಧ್ಯವಿಲ್ಲ ಆದಕಾರಣ, ಭಾರತದ ಜನಮತವನ್ನು ತೃಪ್ತಿಪಡಿಸಿ ಅಲ್ಲಿಂದ ಸಾಕಷ್ಟು ಬೆಂಬಲವನ್ನು ಪಡಯಲು ಬ್ರಿಟನು ಯತ್ನಿಸಬಹುದಾಗಿ ರಾಜನೀತಿಜ್ಞರ ಅಭಿಪ್ರಾಯವಾಗಿದೆ

ರಾಜಾಜಿಯವರ ಹೇಳಿಕೆ

ಈ ಸಂದರ್ಭದಲ್ಲಿ ರಾಜಾಜಿಯವರು ತಿನ್ನವೆಲ್ಲಿಯ ರಾಜಕೀಯ ಪರಿಷತ್ತಿನಲ್ಲಿ ಒಂದು ಭಾಷಣಮಾಡುತ್ತಾ ಇಂದು ಜನತಾ ಸರಕಾರವು ಆಡಳಿತವನ್ನು ನಡೆಸುವುದು ಅವಶ್ಯವಿದೆಯೆಂದೂ, ಪ್ರಾಂತದ ಮಾತ್ರವಲ್ಲ, ಕೇಂದ್ರದ ಆಡಳಿತವೂ ಜನರ ಪ್ರತಿನಿಧಿಗಳ ಕೈಗೆ ಬರುವಂತೆ ಬ್ರಿಟನು ಕಾರ್ಯಮಾಡಿ, ಭಾರತವನ್ನು ಸ್ವತಂತ್ರ ರಾಜ್ಯವಾಗಿ ಮಾಡುವುದರಿಂದ ಭಾರತೀಯರು ಅಸಿರೀಕ್ಷಿತಬೆಂಬಲವನ್ನು ಕೊಡಬಲ್ಲರೆಂದೂ ಬ್ರಿಟನಿಗೆ ಸಾರಿದ್ದಾರೆ.

ಕಾಕ್ಸಾರರ ಉಪಟಳ

ಪಂಜಾಬಿನಲ್ಲಿ ಕಾಕ್ಸಾರ ಚಳವಳಗಾರರನ್ನು ಸೆರೆಹಿಡಿವ ಕಾರ್ಯವು ತೀವ್ರವಾಗಿ ಜರಗುತ್ತಿದೆ ೩೦೦ ಮಂದಿಯನ್ನು ಈಗಾಗಲೇ ಸೆರೆ ಹಿಡಿದಿರುವರು ಸೆರೆ ಹಿಡಿವ ಸಮಯದಲ್ಲಿ ಪೋಲೀಸರಿಗೂ ಚಳವಳಗಾರರಿಗೂ ಹೊಕ್ಕೈಯ್ಯಾಗಿ ಬಹಳ ಅನರ್ಥವೂ ಆಗಿದೆ.

ಇನ್ನೂ ಉದಾಸೀನವಾಗಿದೆ!

ಭಾರತದ ಪರಿಸ್ಥಿತಿಯ ಕುರಿತು ಸರಕಾರವು ಯಾವುದೇ ರೀತಿಯ ಕಾರ್ಯಕ್ರಮವನ್ನು ಕೈಕೊಳ್ಳುವ ಸೂಚನೆ ತೋರಿಸಿಲ್ಲ ಅಲ್ಲಲ್ಲಿ ಯುದ್ಧ ಕಮಿಟಿಗಳಾಗಬೇಕೆಂದು ವೈಸರಾಯರೂ ಗವರ್ನರರೂ ಪ್ರಕಟಣೆ ಹೊರಡಿಸಿ ಕೆಲಸಮಾಡುತ್ತಾರೆ ಭಾರತೀಯರನ್ನು ಅಲ್ಲಗಳೆದು, ಅವರ ಹೇಳಿಕೆಗಳಿಗ ಕಿವಿಗೊಡದೆ ತನ್ನಿಷ್ಟ ಬಂದಂತೆ ವರ್ತಿಸುವುದರಿಂದ ಬ್ರಿಟನಿಗೆ ಹೆಚ್ಚಿನ ಉಪಕಾರವಾಗಲಿ, ಕ್ಷೇಮವಾಗಲಿ ಸಿಗಲಾರದೆಂಬುದು ಖಂಡಿತವಾಗಿದೆ.

ಭಾರತ ಸ್ವಾತಂತ್ರ್ಯ ಮತ್ತು ಸಂಸ್ಥಾನಗಳು

ಪಂಡಿತ ಜವಾಹಿರಲಾಲ್ ನಹರುಗಳ ಭಾಷಣ

ಬ್ರಿಟಿಷ್ ಭಾರತವು ಸ್ವಾತಂತ್ರ್ಯಗಳಿಸಿ ದೇಶೀಯ ಸಂಸ್ಥಾನಗಳು ಹಿಂದುಳಿದಿರಲೆಂದು ಯಾರೂ ಹಾರೈಸಲಾರರು ಎಂಬದಾಗಿ ಪಂಡಿತ ಜವಾಹಿರಲಾಲರು ಶ್ರೀನಗರದಲ್ಲಿ ರಾಷ್ಟ್ರೀಯ ಸಮ್ಮೇಳನದ ಆಶ್ರಯದಲ್ಲಿ ಏರ್ಪಟ್ಟ ಸಭೆಯಲ್ಲಿ ಭಾಷಣಮಾಡುತ್ತಾ ಹೇಳಿದರು

"ತನ್ನ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ಒಬ್ಬ ತವಂದ ಸರಕಾರದೊಡನೆ ಹೋರಾಟ ನಡೆಸಬೇಕೆಂದು ಕಾಂಗ್ರೆಸ್ಸು ನಿರ್ಧರಿಸಿದೆಯೇ ಹೊರತು, ಅದನ್ನು ಅನೇಕ ಕಡೆಗಳಲ್ಲಿ ಒಡೆಯಬೇಕೆಂದಲ್ಲ ಇಂದಿನ ಪರಿಸ್ಥಿತಿಯಲ್ಲಿ ಭಾರತೀಯ ಸಂಸ್ಥಾನಗಳು ಉಳಿದ ಭಾರತದಂತೆಯೇ ಮುಂದುವರಿಯಬೇಕಾಗಿದೆ ಭಾರತವನ್ನು ಒಡೆಯುವ ಆಲೋಚನೆಯು ತಿಳಿಗೇಡಿತನ" ಎಂದರು

ಬಂಧನ

ಕಲ್ಲಿಕೋಟೆಯಲ್ಲಿ ಪ್ರಭಾತಂ ಪ್ರೆಸ್ಸಿನ ಮಾಲಕ ಶ್ರೀ ರಾಮನ್ ಕುಟ್ಟಿ ನಾಯರನ್ನೂ ಕಣ್ಣಾನೂರಿನಲ್ಲಿ ಕೆ. ಪಿ. ಸಿ. ಸಿ. ವರ್ಕಿಂಗ್ ಕಮಿಟಿ ಮೆಂಬರ್ ಶ್ರೀ ನಾರಾಯಣ ನಂಬಿಯಾರ್ ಹಾಗೂ ಶ್ರೀ ಎಂ. ವಾಸುದೇವರನ್ನೂ ಕೈದುಮಾಡಿದ್ದಾರೆ.

ಯುದ್ಧ ಕಮಿಟಿ

ಮುದ್ರಾಸ್ ಅಧಿಪತ್ಯದ ಗವರ್ನರರಾದ ಸರ್ ಆರ್ಥರ್ ಹೋಪ್ ರವರು ಇದೇ ೧೬ನೇ ತಾರೀಕಿನಲ್ಲಿ ಉದಕಮಂಡಲದಿಂದ ಮದ್ರಾಸಿಗೆ ತೆರಳಿ ಅಲ್ಲಿ ಪ್ರಾಂತಿಕ ಯುದ್ಧಕಮಿಟಿಯ ಆರಂಭೋತ್ಸವ ನಡೆಸುವರು. ಅವರು ತಾ. ೧೬-೧೮ರಲ್ಲಿ ಮದ್ರಾಸಿನದ್ದು ೧೯ನೇ ತಾರೀಕಿನಲ್ಲಿ ಉದಕಮಂಡಲಕ್ಕೆ ಹಿಂದಿರುಗುವರು ಇದೇ ತಾ॥ ೧೬ರಲ್ಲಿ ಆ ಯುದ್ಧ ಕಮಿಟಿಯ ಪ್ರಥಮ ಸಭೆ ನಡೆದು ಗವರ್ನರರು ಒಂದು ಭಾಷಣ ಕೊಟ್ಟಾಗ ಅದನ್ನು ಸಮಗ್ರ ಭಾರತ ರೇಡಿಯೋ ಬ್ರಾಡ್‌ಕಾಸ್ಟ್ ಮಾಡುವುದು ಈ ಸಮಿತಿಯಲ್ಲಿ ೮೦ ಮಂದಿ ಸದಸ್ಯರಿರುವರೆಂದು ತಿಳಿದುಬಂದಿದೆ. ಅಲ್ಲದೆ ಒಂದು ಸಿವಿಕ್ ಗಾರ್ಡ್ ದಳವನ್ನೂ ಏರ್ಪಡಿಸಲು ಮದ್ರಾಸ್ ಸರಕಾರವು ನಿರ್ಧರಿಸಿದೆ

ಬೊಂಬಾಯಿಯಲ್ಲಿಯೂ ಅಲ್ಲಿನ ಗವರ್ನರರು ಇಷ್ಟರಲ್ಲೇ ಯುದ್ಧದ ಸಮಿತಿಯ ಉದ್ಘಾಟನಕ್ಕಾಗಿ ಒಂದು ಸಾರ್ವಜನಿಕ ಸಭೆ ಕರೆದಿರುವರು ಶಾಸನ ಸಭೆಯ ಸದಸ್ಯರು, ಬೊಂಬಾಯಿ ಕಾರ್ಪರೇಶನಿನ ಮೇಯರರು, ಇತರ ಪ್ರಮುಖರೇ ಮೊದಲಾದವರಿಗೆ ಆಹ್ವಾನ ಹೋಗಿದೆ ಆದರೆ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರು, ತಮ್ಮ ಪಂಗಡದವರೇ ಕಾರ್ಯದಲ್ಲಿ ಭಾಗವಹಿಸತಕ್ಕದಲ್ಲವೆಂದು ಅಪ್ಪಣೆ ಹೊರಡಿಸಿರುವ ಕಾರಣ ಅಲ್ಲಿನ ಶಾಸನ ಸಭೆಯ ೧೧೨ ಮಂದಿ ಕಾಂಗ್ರೆಸ್ ಮಂದಿಯಾದ ಕಾರ್ಪರೇಶನ್ ಮೇಯರರೂ, ಬೊಂಬಾಯಿ ಕಾರ್ಪರೇಶನಿನ ಕಾಂಗ್ರೆಸ್ ಸದಸ್ಯರೂ ಆ ಸಭೆಯಲ್ಲಿ ಭಾಗವಹಿಸಲಾರರೆಂದು ತಿಳಿದು ಬಂದಿದೆ

ಸಾರ್ವಜನಿಕ ರೇಡಿಯೋಗಳ ಮೇಲೆ ನಿರ್ಬಂಧ

ಶತ್ರು ರಾಷ್ಟ್ರಗಳ 'ಪ್ರೋಗ್ರಾಂ'ಗಳನ್ನು ಹಾಕಕೂಡದು

'ಪ್ರೈವೇಟ್' ಲೈಸೆನ್ಸ್ ಸುದಾರರಿಗೆ ಈ ನಿಯಮವಿಲ್ಲ

ಭಾರತದಲ್ಲಿನ ಸಾರ್ವಜನಿಕ ಬ್ರಾಡ್‌ಕ್ಯಾಸ್ಟಿಂಗ್‌ನಲ್ಲಿ ಜರ್ಮನ್ ಪ್ರಚಾರಗಳನ್ನು ಕೂಡಲೇ ನಿಲ್ಲಿಸಲು ಸರ್ಕಾರವು ಕಾರ್ಯಕ್ರಮಗಳನ್ನು ಕೈಕೊಳ್ಳಲಿದೆ

ಜರ್ಮನಿಯಿಂದಲೂ ಅದರ ಅಧೀನದಲ್ಲಿರುವ ರಾಷ್ಟ್ರಗಳಿಂದಲೂ ಅದರ ಸ್ನೇಹ ಪಡೆದ ರಾಷ್ಟ್ರಗಳಿಂದಲೂ ಗಾಬರಿಯ ಸುದ್ದಿಗಳು ಮತ್ತು ವದಂತಿಗಳು ಹುಟ್ಟಿ ಹೆದರಿಕೆಯು ಹರಡುತ್ತಿರುವುದರಿಂದಲೇ ಸರ್ಕಾರದ ಈ ಮೇಲಿನ ನಿರ್ಧಾರವಾಗಿದೆ.

ವ್ಯಾಪಾರಿಗಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಉಪಯೋಗಿಸಲು ಕೊಡಲಾಗಿರುವ ರೇಡಿಯೋ ಲೈಸೆನ್ಸ್‌ಗಳನ್ನೆಲ್ಲಾ ಪೋಸ್ಟ್, ಮತ್ತು ಟೆಲಿಗ್ರಾಫ್ ಇಲಾಖೆಯವರು ಹಿಂದಕ್ಕೆ ಪಡೆದು ಅವುಗಳ ಬದಲು ಹೊಸ ಲೈಸೆನ್ಸ್‌ಗಳನ್ನೀಯಬೇಕೆಂದು ಸೂಚಿಸಲಾಗಿದೆ ಹೀಗೆ ಹೊಸ ಲೈಸೆನ್ಸನ್ನು ಕೊಡುವಾಗ ಅದರಲ್ಲಿ ಒಂದು ನಿಬಂಧನೆ ಹಾಕಲಾಗುವುದು ಶತ್ರು ರಾಷ್ಟ್ರಗಳಿಂದ ಬರುವ ಕಾರ್ಯಕ್ರಮಗಳನ್ನು ರೇಡಿಯೋಗಳಲ್ಲಿ 'ಟ್ಯೂನ್' ಮಾಡಕೂಡದೆಂಬುದೇ ಈ ನಿಬಂಧನೆ. ಈ ನಿಬಂಧನೆಯನ್ನು ಉಲ್ಲಂಘಿಸಿದ್ದೇ ಆದರೆ ಲೈಸೆನ್ಸ್ ಕೂಡ ರದ್ದುಪಡಿಸಬಹುದು.

ಆದರೆ 'ಪ್ರೈವೇಟ್ ಲೈಸೆನ್ಸ್'ಗಳನ್ನು ಉಪಯೋಗಿಸುವ ಎಲ್ಲಾ ಜನರ ಮೇಲೆ ಈ ನಿಬಂಧವಿಲ್ಲ

ಹೊಸ ವಾರ್ತೆ

ಇಟಲಿಯ ೨೭ ಹಡಗುಗಳು ಮುಳುಗಿವೆ

ಪ್ಯಾರಿಸಿನಲ್ಲಿ ಭಯಂಕರ ಯುದ್ಧವಾಗುತ್ತಿದೆ ಫ್ರೆಂಚರು ವೀರಾವೇಶದಿಂದ ಕಾದಾಡುತ್ತಿದ್ದಾರೆ

ಅಮೇರಿಕವು ಒಂದು ಗುಪ್ತಾಸ್ತ್ರವನ್ನು ಮಿತ್ರರಾಷ್ಟ್ರದವರಿಗೆ ಕೊಡುವುದಾಗಿ ತಿಳಿದಿದೆ

ಶತ್ರು ಪಕ್ಷದವರು ಮಾಲ್ಟಾಕ್ಕೆ ಬಾಂಬೆಸೆದಿರುವರು

ಸ್ಪೈನು ಇಟಲಿಗೆ ಸಹಾನುಭೂತಿ ತೋರಿಸಿದೆ.

★

ಯುದ್ಧದ ವಿಷಯದಲ್ಲಿ ಗಾಬರಿಗೊಳ್ಳಬಾರದು; ಮಹಾತ್ಮರ ಹೇಳಿಕೆಯಂತೆ ನಾವು ನಡೆಯಬೇಕು, ಆದುದರಿಂದ ಮಾರ್ಗದ ಕಡೆಗೆ ಮುಂದಿನ ಕರ್ತವ್ಯದ ಕುರಿತು ಕುತೂಹಲದಿಂದ ನೋಡಬೇಕಾಗಿದೆಯೆಂದು ರಾಷ್ಟ್ರಪತಿಗಳು ಹೇಳಿಕೆಯಿತ್ತಿರುವರು

ಶ್ರೀ ಸುಭಾಸಬೋಸರು, ಗಾಂಧಿ, ಜಿನ್ನಾ, ಕಾಂಗ್ರೆಸು, ಮುಸ್ಲಿಂ ಲೀಗುಗಳಿಗೆ ಒಂದು ಬಿನ್ನಹಮಾಡುತ್ತಾ ಎಲ್ಲರೂ ಏಕಮತದಿಂದ ಇಂದು ಅಧಿಕಾರವು ಜನತೆಯ ಕೈಗೆ ಬರಬೇಕೆಂಬ ಸಂಯುಕ್ತ ಹೇಳಿಕೆ ಹೊರಡಿಸಬೇಕೆಂದು ಹೇಳಿರುವರು.

ಭಾರತದ ರಾಜಕೀಯದ ಕುರಿತು ಇತ್ಯರ್ಥಕ್ಕಾಗಿ ಸಿಕಂದರ ಖಾನರು ರಾಷ್ಟ್ರಪತಿಗಳಲ್ಲಿಗೆ ಹೋಗಿರುವರು

ಹಿಂದೂ ಮುಸ್ಲಿಂ ಐಕ್ಯಕ್ಕಾಗಿ ಧುರೀಣರು ಮಾತುಕತೆ ನಡೆಸುತ್ತಿರುವರು.

[೯ನೇ ಪುಟದಿಂದ ಮುಂದುವರಿದುದು]

ಯಲ್. ಸಿ. ಪರೀಕ್ಷೆಯನ್ನು ಕೊಟ್ಟ ೨೭ ರಲ್ಲಿ ೨೩ ಮಂದಿಯೂ ತೇರ್ಗಡೆಯಾಗಿರುತ್ತಾರೆ.

ಕಂಟ್ರಾಕ್ಟರರ ಸಭೆ:— ಕಾರ್ಕಳ ತಾಲೂಕಿನ ಲೋಕಲ್ ಬೋರ್ಡ್ ರಿಜಿಸ್ಟರ್ಡ್ ಕಂಟ್ರಾಕ್ಟರ್ರ ಸಭೆಯು ತಾರೀಖು ೨೭—೫—೧೯೪೦ರಲ್ಲಿ ಘಂಟೆ ೩ಕ್ಕೆ ಬೋರ್ಡ್ ಹ್ಯಾಸ್ಕೂಲಿನಲ್ಲಿ ಶ್ರೀ. ಕೆ. ಸದಾನಂದ ಹೆಗ್ಗಡೆರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ಠರಾವುಗಳು ಪಾಸು ಮಾಡಲಾಯಿತು.

೧. ಕಾರ್ಕಳ ತಾಲೂಕು ರಿಜಿಸ್ಟರ್ಡ್ ಕಂಟ್ರಾಕ್ಟರ್ರ ಸಂಘವನ್ನು ಸ್ಥಾಪಿಸಬೇಕಾಗಿ ನಿರ್ಣಯಿಸಲಾಯಿತು. ೨. ಸದ್ರಿ ಸಂಘವು ಕಾರ್ಕಳ ತಾಲೂಕು ಲೋಕಲ್ ಫಂಡ್ ರಿಜಿಸ್ಟರ್ಡ್ ಕಂಟ್ರಾಕ್ಟರ್ರ ಸಂಘವೆಂದು ಕರೆಯಲ್ಪಡುವದು. ೩. ಸದ್ರಿ ಸಂಘಕ್ಕೆ ಪ್ರಕೃತ ಒಬ್ಬ ಅಧ್ಯಕ್ಷ ಒಬ್ಬ ಕಾರ್ಯದರ್ಶಿ ಮತ್ತು ಖಜಾನ್ಚಿ ಮತ್ತು ೭ ಜನರಿರುವ ಒಂದು ಕಮಿಟಿಯನ್ನು ನೇಮಿಸಬೇಕಾಗಿ ನಿರ್ಣಯಿಸಲಾಯಿತು. ಸಂಘದ ಉದ್ದೇಶ್ಯ ಮತ್ತು ಕೊನ್ಸ್ಟಿಟ್ಯೂಶನ್ ನಿರ್ಣಯಿಸುವರೇ ಈ ಮೇಲಿನ ಕಮಿಟಿಯವರು ಡ್ರಾಫ್ಟು ತಯಾರು ಮಾಡಿ ಬರುವ ಮಹಾಸಭೆಯಲ್ಲಿ ಇಡಬೇಕಾಗಿ ನಿರ್ಣಯಿಸಲಾಯಿತು. ೪. ಬರುವ ಮಹಾಸಭೆ ವರೆಗೆ ಈ ಕೆಳಗೆ ಕಾಣಿಸಿದವರನ್ನು ಮೇಲೆ ಹೇಳಿದ ಸ್ಥಾನಗಳಿಗೆ ನೇಮಿಸಲಾಯಿತು. ೫. ಅಧ್ಯಕ್ಷ ಶ್ರೀ ಕೆ. ರಾಮಯ ಹೆಗ್ಡೆ. ಕಾರ್ಯದರ್ಶಿ ಮತ್ತು ಖಜಾನ್ಚಿ ಶ್ರೀ ಎಲ್. ಪಿಂಟೋ. ಕಮಿಟಿ ಶ್ರೀಗಳಾದ ರುದ್ರಪ್ಪ ಶೆಟ್ಟಿ, ಎ. ನಾರಾಯಣ ಹೆಗ್ಡೆ, ಕೆದಿಂಜೆ ಮಂಜಯ ಹೆಗ್ಡೆ, ವಿಟ್ಠಲ ಹೆಗ್ಡೆ, ಕೆ. ಪದ್ಮನಾಭ, ಕೆ. ಮಹಾಬಲ ಕಡಂಬ,ಎ ಮತ್ತು ಎ. ದೂಮಣ್ಣ ಶೆಟ್ಟಿ.

ಉಡುಪಿ

ಉಡುಪಿ ಕ್ಲಬ್:— ಉತ್ಸಾಹಿ ತರುಣರ ಚಟುವಟಿಕೆಗಳಿಂದಾಗಿ ಕಳೆದ ಆದಿತ್ಯವಾರ ದಿಲ್ ಖುಶ್ ಕಟ್ಟಡದಲ್ಲಿ ಉಡುಪಿ ಕ್ಲಬ್ ಸ್ಥಾಪಿಸಲಾಯಿತು. ಈ ಸಂಸ್ಥೆಯ ಅಧಿಕಾರಿಗಳಾಗಿ ಶ್ರೀಗಳಾದ ಕೆ. ಜಿ. ಬಲ್ಲಾಳ್ (ಅಧ್ಯಕ್ಷ) ಕೆ. ಪಾಂಡುರಂಗ ಪೈ ಮತ್ತು ಪಂಡಿತ್ ಟಿ. ಎನ್. ಕೇಳು ನಂಬಿಯಾರ್ [ಉಪಾಧ್ಯಕ್ಷರು] ಬಿ. ವಾಸುದೇವರಾವ್]ಕಾರ್ಯದರ್ಶಿ] ಸಚ್ಚಿದಾನಂದ ಹೆಗ್ಡೆ (ಖಜಾನ್ಚಿ) ಯವರು ಆರಿಸಲ್ಪಟ್ಟರು. ಕ್ಲಬ್ಬಿನ ಉದ್ಘಾಟನಾ ಸಮಾರಂಭದಲ್ಲಿ ಡಾ| ಮಾಧವ ಪೈಗಳವರು ಅಧ್ಯಕ್ಷತೆ ವಹಿಸಿದ್ದರು. ಡಾ| ಪಿ. ಜಿ. ಆಚಾರ್ಯರೇ ಮೊದಲಾದವರು ಹಾಜರಿದ್ದರು.

ಬ್ರಹ್ಮಾವರ ಸಂಘದ ರಜತೋತ್ಸವ:— ಉಡುಪಿ ತಾಲೂಕಿನ ಎ. ತರಗತಿಯ ಸಹಕಾರಿ ಸಂಘಗಳಲ್ಲೊಂದಾದ ಬ್ರಹ್ಮಾವರ ಸಂಘದ ರಜತೋತ್ಸವವು ಕಳೆದ ತಾ. ೨೬ರಲ್ಲಿ ಶ್ರೀ ವಿ. ಎಲ್. ಮೆಹತಾರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಡಾ| ಯು. ರಾಮರಾವ್, ಸರ್ ಮಿರ್ಜಾ ಇಸ್ಮಾಯಿಲ್, ಬಿ. ಜಿ. ಖೇರ್ ಕೋಅಪರೇಟಿವ್ ರಿಜಿಸ್ಟ್ರಾರ್ ವೆಂಕಟ್ರಾಮನ್ ಮೊದಲಾದವರಿಂದ ಬಂದ ಶುಭ ಸಂದೇಶಗಳನ್ನು ಸಂಘದ ಪ್ರೆಸಿಡೆಂಟರಾದ ಶ್ರೀ ಬಿ. ವಿ. ಮಾಧವರಾಯರು ಓದಿದರು, ಸಂಘದ ಕಾರ್ಯದರ್ಶಿಯರಾದ ಶ್ರೀ ಎಮ್. ರಾಮಕೃಷ್ಣ ಭಟ್ಟರು ರಜತೋತ್ಸವ ಸ್ಮಾರಕ ವರದಿಯನ್ನೋದಿದರು. ಶ್ರೀಗಳಾದ ಎಮ್. ಶಿವರಾವ್, ಕೆ. ಎಲ್. ಭಂಡಾರಿ, ಕೆ. ಜಿ. ಬಲ್ಲಾಳ್, ಕೋಟಿಕಾರ್ ಸುಬ್ಬಣ್ಣಯ್ಯ, ಜಾಯಿಂಟ್ ರಿಜಿಸ್ಟ್ರಾರರೇ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ಸಂಘದ ಮಾಜಿ ಅಧ್ಯಕ್ಷರಾಗಿದ್ದ ಕೀರ್ತಿಶೇಷರಾದ ವಾರಂಬಳ್ಳಿ ಸುಬ್ಬರಾಯರ ಭಾವಚಿತ್ರವನ್ನು ಶ್ರೀ ಕೆ. ಆರ್. ಕಾರಂತ ಎಮ್. ಎಲ್. ಎ. ಯವರು ಅನಾವರಣ ಮಾಡಿದರು. ಅಧ್ಯಕ್ಷರು ಹಲವಾರು ಹಿತಸೂಚನೆಗಳನ್ನಿತ್ತು ಸಂಘದ ಶ್ರೇಯಸ್ಸನ್ನು ಕೋರಿದರು. ಫಲಹಾರ ಸತ್ಕಾರವಾದ ಬಳಿಕ ರಿ|| ಫಾ|| ರೋಶಿಯವರು ಧನ್ಯವಾದಗಳನ್ನರ್ಪಿಸಿದರು.

ಮಿಸೆಸ್ ಫೆನಾರ್ಂದೀಸರಿಗೆ ಗೌರವದ ಹುದ್ದೆ:— ಬೋರ್ಡ್ ಹ್ಯಾಸ್ಕೂಲಿನ ಹೆಡ್ಮಾಸ್ಟರ್ ಮಿ. ರೋಶ್ಕಿ ಫೆನಾರ್ಂದೀಸರ ಧರ್ಮಪತ್ನಿ ಎಲ್. ಎಂ. ಫೆನಾರ್ಂದೀಸರು ಸ್ಥಳೀಯ ಸಬ್ ಜೈಲಿನ ನಾನ್ ಒಫೀಶಿಯಲ್ ಸಂದರ್ಶಕರಾಗಿಯೂ ಗವರ್ನಮೆಂಟ್ ಆಸ್ಪತ್ರೆಯ ಎಡ್ವೈಜರಿ ಕಮಿಟಿಯ ಸದಸ್ಯೆಯರಾಗಿಯೂ ನೇಮಕ ಹೊಂದಿರುವರು. ಶ್ರೀಮತಿಯವರಿಗೆ ನಮ್ಮ ಅಭಿನಂದನೆಗಳು.

ಪೆರಡಾಲ

ಶಾಲಾ ಪ್ರವೇಶೋತ್ಸವ:— ಪೆರಡಾಲ ಗ್ರಾಮಸ್ಥರು ಜಿಲ್ಲಾ ಬೋರ್ಡಿಗೆ ಹಯ್ಯರ್ ಎಲಿಮೆಂಟರಿ ಶಾಲೆಯನ್ನು ತೆರೆಯುವ ಸಲುವಾಗಿ, ಕಟ್ಟಿಸಿ ಕೊಡಲೊಪ್ಪಿದ, ಹಯ್ಯರ್ ಎಲಿಮೆಂಟರಿ ಶಾಲಾ ಕಟ್ಟೋಣದ ಪ್ರವೇಶೋತ್ಸವವು ಕಳೆದ ತಾ. ಆರರಂದು ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡಾ| ಕೆ. ವಿಟ್ಠಲಶೆಟ್ರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು.

ಶಾಲಾ ಕಟ್ಟೋಣದ ಉದ್ಘಾಟನಾ ಸಮಾರಂಭವು ಶ್ರೀ ಪುತ್ತರಮಹಂಸಾದ್ಯನೇಕ ಬಿರುದಾಂಕಿತ ಶ್ರೀ ಯಡನೀರ ಮಠಾಧಿಪ ಶ್ರೀ ಮದೀಶ್ವರಾನಂದ ಭಾರತೀ ಸ್ವಾಮಿ ಶ್ರೀಪಾದಂಗಳವರಿಂದ ನೆರವೇರಿಸಲ್ಪಟ್ಟಿತು. ಶ್ರೀಪಾದಂಗಳವರನ್ನೂ, ಅಧ್ಯಕ್ಷ ಡಾ| ಕೆ. ವಿಟ್ಠಲಶೆಟ್ರನ್ನೂ ಊರ ಗೃಹಸ್ಥರು ವಾದ್ಯಘೋಷದಿಂದ ಇದಿರುಗೊಂಡರು. ಪ್ರಾರಂಭದಲ್ಲಿ ದೇವತಾ ಪ್ರಾರ್ಥನೆಯಾದ ಬಳಿಕ, ಡಾ| ಪಿ. ಎಸ್. ಶಾಸ್ತ್ರಿಗಳು ಸ್ವಾಗತ ಭಾಷಣಮಾಡಿದರು. ಶಾಲಾ ಹೆಡ್ ಮಾಸ್ತರರಾದ ಶ್ರೀ. ಯಂ. ರಾಮಕೃಷ್ಣ ರಾಯರು ಶಾಲಾ ವರದಿಯನ್ನೋದಿದರು. ಬಂದು ನೆರೆದಿದ್ದವರಲ್ಲಿ ಶ್ರೀಗಳಾದ ಡಾ| ಪಿ. ಎಸ್. ಭಟ್ಟ, ಬಿ. ನಾರಾಯಣ ಭಟ್ಟ, ಖಂಡಿಗೆ ಮಹಾಲಿಂಗ ಭಟ್ಟ, ಯು. ದೇಜು ಇವರೇ ಮೊದಲಾದ ಮಹನೀಯರು ಸಂಸ್ಥೆಯ ಅಭ್ಯುದಯವನ್ನು ಹಾರೈಸಿ ಭಾಷಣವಿತ್ತರು.

ಅಧ್ಯಕ್ಷರಾದ ಡಾ| ಕೆ. ವಿಟ್ಠಲಶೆಟ್ರು ತಮ್ಮ ವಿಚಾರಪರಿಪೂರ್ಣವಾದ ಭಾಷಣದಲ್ಲಿ ಜಿಲ್ಲೆಯ ವಿದ್ಯಾಪ್ರಚಾರದ ವಿಷಯವನ್ನು ವಿವರಿಸಿ ಪೆರಡಾಲ ಗ್ರಾಮಸ್ಥರು ತೋರಿಸುತ್ತಿರುವ ಚಟುವಟಿಕೆಗಳನ್ನು ಬಹಳವಾಗಿ ಕೊಂಡಾಡಿದರು.

ಶಾಲಾ ಕಟ್ಟಡ ಸಮಿತಿಯ ಅಧ್ಯಕ್ಷರಾದ ಶ್ರೀ ಈಳಂತೋಡಿ ಕೃಷ್ಣಭಟ್ಟರು ಕೃತಜ್ಞತಾ ಸಮರ್ಪಣೆ ಮಾಡಿದರು. ಶಾಲಾವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ನಾಟಕಗಳು ಅಲ್ಲದೆ ಅನೇಕತರದ ವಿವಿಧ ವಿನೋದಾವಳಿಗಳು ತೋರಿಸಲ್ಪಟ್ಟವು. ಶ್ರೀಪಾದಂಗಳವರು ಶಾಲಾಕಟ್ಟೋಣದ ಸಹಾಯಾರ್ಥವಾಗಿ ೧೦೧ ರೂಪಾಯಿಗಳ ಉದಾರಸಹಾಯ ಮಾಡಿದರು. ಮಂಗಲಗೀತದೊಡನೆ ಉತ್ಸವವು ಕೊನೆಗೊಂಡಿತು. ಎರಡು ಸಾವಿರಕ್ಕಿಂತಲೂ ಮಿಕ್ಕಿದ ಜನಸಂದಣಿಯು ನೆರೆದಿತ್ತು.

ನಾರಾವಿ:— ಇಲ್ಲಿಯ ಪ್ರಾಥಮಿಕ ಬೋರ್ಡ್ ಶಾಲೆಯ ವರ್ಧಂತಿ ಉತ್ಸವವು ಕಳೆದ ತಾರೀಖು ೮-೬-೪೦ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಇಲ್ಲಿಯ ಇಗರ್ಜಿ ಗುರುಗಳಾದ ಮಾನ್ಯ ಬ್ಯಾಪ್ಟಿಸ್ಟ್ ಎಲ್ಯರಿಸ್ ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶಾಲಾವಿದ್ಯಾರ್ಥಿಗಳ ಮೆರವಣಿಗೆ, ಉಪಹಾರ ನೆಲ್ಲಿಕಾರು ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆ ದೇವರ ಪ್ರಾರ್ಥನೆ ಇನಾಂ ಹಂಚೋಣ, ಹಿತಚಿಂತಕರ ಭಾಷಣ, ಅಧ್ಯಕ್ಷರ ಭಾಷಣವೇ ಮೊದಲಾದವು ಸಾಂಗವಾಗಿ ನೆರವೇರಿದುವು. ಕೋಲಾಟ, ನಾಟಕಗಳೂ ಇದ್ದುವು. ಧನ್ಯವಾದವನ್ನು ಶಾಲೆಯ ಮುಖ್ಯೋಪಾಧ್ಯಾಯರಿಂದ ಅರ್ಪಿಸಲಾಯಿತು.

ಕರ್ನಾಟಕ

ತುಂಗಭದ್ರಾ—ಪ್ರೇಮ ವಿದ್ಯಾಪೀಠದ ಪದವೀಧರರಿಗೆ:— ನಮ್ಮ ವಿದ್ಯಾಪೀಠದ ಭಿಷಗಿಂದು ಆಯುರ್ವೇದ ಶಿರೋಮಣಿ ಮುಂತಾದ ಡಿಗ್ರಿಗಳೂ ಮತ್ತು ಅಖಿಲ ಭಾರತ ಆಯುರ್ವೇದ ಮಹಾಮಂಡಲದ ಭಿಷಕ್ ಪದವಿಯೂ ಬೊಂಬಾಯಿ ಸರಕಾರದವೆಲ್ಲಿ ಮಾನ್ಯವಾಗಿವೆ ಎಂದೂ, ಮತ್ತು ಅವುಗಳನ್ನು ಪಡೆದವರು ಆ ಸರಕಾರದಲ್ಲಿ ರಿಜಿಸ್ಟರ್ ಮಾಡಿಕೊಳ್ಳಬಹುದೆಂದೂ ಆ ಪ್ರಾಂತ್ಯದ ಸುಪ್ರಸಿದ್ಧ ಪತ್ರಿಕೆಗಳಲ್ಲಿ ಸುಮಾರು ೧ ತಿಂಗಳ ಹಿಂದೆಯೇ ಪ್ರಕಟವಾಗಿತ್ತು. ಆದರೆ ಈ ಪ್ರಾಂತದ ಕೆಲವು ಕಡೆಗಳಲ್ಲಿ ವೈದ್ಯರಾಗಿರುವ ನಮ್ಮ ಪದವೀಧರರಿಗೆ ಈ ಸಂಗತಿಯು ತಿಳಿದು ಬಂದಿರಲಿಕ್ಕಿಲ್ಲ. ಆದಕ್ಕಾಗಿ ಈ ಮಾನ್ಯಪತ್ರಿಕೆಯ ದ್ವಾರಾ ಅವರಿಗೆ ತಿಳಿಯಪಡಿಸುವದೇನೆಂದರೆ ತಮ್ಮ ರಿಜಿಸ್ಟ್ರೇಷನ್‌ನ ಸಂಪೂರ್ಣ ಮಾಹಿತಿಗಾಗಿ ಅವರುಗಳು ಕೆಳಗಿನ ವಿಲಾಸಕ್ಕೆ ಕೂಡಲೆ ಬರೆಯಬೇಕು.

ಪಂಡಿತ ತಾರಾನಾಥ
೨೪, ಕಾನಕಾಗ ಹಳ್ಳಿ ರೋಡ್
ಬಸವನ ಗುಡಿ,
ಬೆಂಗಳೂರು.

ಬಾಳೇಬರೆ

ಗುಡ್ಡದಲ್ಲಿ ಬೆಂಕಿ:— ಕಳೆದ ಗುರುವಾರ ತಾ ೬-೬-೧೯೪೦ನೇ ದಿನ ಇಲ್ಲಿ ಮೈಸೂರು ಪ್ರಾಂತದ ಹುಲಿಕಲ್ಲಿನಲ್ಲಿ ಮಧ್ಯಾಹ್ನ ಒಂದು ಸ್ಫೋಟನದಂತೆ ಶಬ್ದವಾಗಿ ಗುಡ್ಡದಿಂದ ೧೦ ನಿಮಿಷಗಳ ತನಕ ಹೊಗೆಯೆದ್ದು—ಬೆಂಕಿಯಾಗಿರುವ ಸಂಗತಿ ತಿಳಿದು ಬಂದಿದೆ. ಇದು ಯಾವ ನಮೂನೆಯೆಂತ ತಿಳಿಯುವದಿಲ್ಲ. ಹುಲಿಕಲ್ಲಿನಿಂದ ಎರಡುವರೆ ಮೈಲು ದಕ್ಷಿಣದ ಕಾಡಿನಲ್ಲಿ ವಾರಾಹಿ ನದಿಯು ಘಟ್ಟದಿಂದ ಕೆಳಗೆ ಹಾರುತ್ತದೆ. ಈ ವಾರಾಹಿ ಜೋಗು ಪುರಾಣಪ್ರಸಿದ್ಧವೆಂತ ಊರು ಪರವೂರಿನವರು ಸ್ನಾನಕ್ಕಾಗಿ ಇಲ್ಲಿಗೆ ಆಗಾಗ್ಗೆ ಹೋಗುತ್ತಾರೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 15/1940

1. ಪೂವಣ್ಣ—ಪಾಯಿಲ ಗೌಡರ ಮಗ
2. ಸೇವಮ್ಮ ಪಾಯಿಲ ಗೌಡರ ಹೆಂಡತಿ

ಪುತ್ತೂರು ತಾಲ್ಲೂಕು ಪಡಚಿತ್ತಾಡಿ ಗ್ರಾಮದಲ್ಲಿರುವವರು, } ಅರ್ಜಿದಾರರು

1. ಚೆನ್ನಪ್ಪ ಗೌಡ
2. ನಾರಾಯಣ ಬೈಪಡಿತ್ತಾಯ
3. ಶಾರದಾ ಯಾನೆ ದುಕ್ಕಿಣಿ ಅಮ್ಮ
4. ವಾಮನ ಆರ್ಬಿತ್ತಾಯ

} ಎದ್ರಿರು

ಅರ್ಜಿದಾರರ ಕಡೆಯಿಂದ ೪ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಅರ್ಜಿದಾರರು ತಮ್ಮ ಹಕ್ಕಿನ ನಿವೇಶನ್ನು ಬರಪಾಡಿಕೊಳ್ಳುವರೆ ಈ ಕೋರ್ಟಿನಲ್ಲಿ ಸದ್ರಿ ಪಾಪರಿ ವ್ಯಾಜ್ಯದಾಕಲು ಮಾಡಿರುತ್ತಾರೆ. ಅವರಿಗೆ ದಸೆ ಕಟ್ಟುವರೆ ಅನುಕೂಲವಿಲ್ಲವೆಂಬದರ ಬಗ್ಗೆ ಮೇಲಿನ ಅರ್ಜಿ ದಾಕಲು ಮಾಡಿರುವುದರಿಂದ ಆ ಬಾಬ್ತು ಆಕ್ಷೇಪವನ್ನು ಕೇಳುವರೆ ತಾ. 5-7-40 ಕ್ಕೆ ಇಟ್ಟಿರುತ್ತದೆ. ಆಕ್ಷೇಪವಿದ್ದರೆ ಆ ದಿನ ಪೂರ್ವಾಹ್ನ ಘಂಟೆ 10ಕ್ಕೆ ಕೋರ್ಟಿಗೆ ಬಂದು ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟ್ ಹುಕುಂ ಪ್ರಕಾರ.

ಪುತ್ತೂರು
ತಾ. 11-6-40 } **S. Chinnappa Gowda**
Pleader for ptrs.

ಸಿನೆಮಾ ಪುಟ

ಮಕ್ಕಳು ಹಿರಿಯರನ್ನು ಮಿಗಿಸಿದರು!

ಪ್ರಭಾತದ ಹೊಸ ಚಿತ್ರ!

ಭಾರತ ಚಿತ್ರ ನಿರ್ಮಾಪಕರು ಮಕ್ಕಳನ್ನು ಯಾಕೆ ಅಭಿನಯ ಮಾಡಿಸುವುದಿಲ್ಲ ಎಂಬುದು ಅನೇಕರ ಪ್ರಶ್ನೆ! ಆದರೆ ಮಕ್ಕಳನ್ನು ಯಾರು ಹತೋಟಿಗೆ ತರಬಲ್ಲರು ಎಂಬುದು ಸಿನೆಮಾ ನಿರ್ಮಾಪಕರ [illegible] ಬಹುಕಾಲದ ಈ ಸಮಸ್ಯೆಯು ಪ್ರಭಾತದ ಹೊಸ ಚಿತ್ರವಾದ ಧ್ಯಾನೇಶ್ವರದಲ್ಲಿ ಪರಿಹಾರವಾಯಿತು! ಇದರಲ್ಲಿ ನಾಲ್ಕೈದು ಸಂದಿ ಮಕ್ಕಳು ಬಹಳ ಅಪೂರ್ವವಾದ ರೀತಿಯಲ್ಲಿ ತಮ್ಮ ನಟನಾ ಸಾಮರ್ಥ್ಯವನ್ನು ತೋರಿಸಿದ್ದಾರೆ! ಈ ಮಕ್ಕಳೇ ಇಡೀ



ವಿಷ್ಣುಪಂತ್ ಪಗ್ನೀಸ್

ಚಿತ್ರದಲ್ಲಿ ಒಂದು ವೈಶಿಷ್ಟ್ಯವಾದ ರೀತಿಯ ಅಭಿನಯ ಸಾಮರ್ಥ್ಯವನ್ನು ತೋರ್ಪಡಿಸಿರುವರು.

ನಮ್ಮ ಚಿತ್ರಗಳಲ್ಲಿ ಯಾವುದಾದರೊಂದು ಹೊಸತನವು ಆಗಬೇಕೆಂದು ಸಿನೆಮಾ ಪ್ರೇಕ್ಷಕರು ಬಹಳ ಕಾಲದಿಂದ ಹೇಳುತ್ತಿದ್ದಾರೆ. ಈ ಚಿತ್ರದಲ್ಲಿ ಅಂತಹ ಹೊಸತೇ ಅಡಕವಾಗಿದೆ

ನವಯುಗದ ಯುವತಿಯು ಅಪೂರ್ವ ಭಕ್ತೆಯಾದಳು!

ನವಯುಗದ ನವತರುಣಿಯು ಪಾತ್ರವನ್ನು "ಬ್ರಹ್ಮಚಾರಿ"ಯಲ್ಲಿ ಅಭಿನಯಿಸಿದ ಮಿಸ್ ಮೀನಾಕ್ಷಿಯು, "ಸಮೂ ಬಾಯಿ" ಎಂಬ ಮರಾಠೀ ಹೊಸ ಚಿತ್ರವೊಂದರಲ್ಲಿ ಭಕ್ತೆಯ ಪಾತ್ರವನ್ನು ಅಭಿನಯಿಸುವಳು ಇದರಲ್ಲಿ ಮೀನಾಕ್ಷಿ, ಬಾಬುರಾವ್ ಪೆಂಡಾರ್ಕರ್, ವನಮಾಲೀ ಇವರು ಅಭಿನಯಿಸುವರು. ಶ್ರೀ ಕೆ ನಾರಾಯಣ ಕಾಲೆಯವರು ನಿರ್ದೇಶಕರು

ನಾರದನ ಮದುವೆ!

ಸರಸ್ವತೀ ಸಿನಿಟೋನಿನವರು ತಯಾರಿಸಲಿರುವ ಹಾಸ್ಯಚಿತ್ರದ ಹೆಸರು 'ನಾರದನ ಮದುವೆ'ಯೆಂದು ಶ್ರೀ ಪುಷ್ಕರು ಈ ಕಥೆಯನ್ನು ಬರೆದವರು

ಈ ಚಿತ್ರದ ಮುಖ್ಯ ಸ್ತ್ರೀ ಪಾತ್ರವನ್ನು ಕುಮಾರಿ ಪದ್ಮಾ ಸಾಲಿಗ್ರಾಮಳು ವಹಿಸುವಳು ಪ್ರೊ ಸುರೇಶ ಬಾಬು, ದಾಮಲೆ ಲಕ್ಷ್ಮಣರಾವ್, ದಿನಕರ, ಕಾಮಣ್ಣ ಮತ್ತು [illegible] ಇವರೂ ಅಭಿನಯಿಸುವರು ಇಂದ್ರಲೋಕದ ಚಿತ್ರತೆಗೆಯುವ ಸಲುವಾಗಿ ಸ್ಟುಡಿಯೋದಲ್ಲಿ ಅನೇಕ ಚಂದ ಕೈ ಮನೆ ಗಳ [illegible] ಲಾಗಿದೆ

ಹೊಲಿವುಡ್ ತಾರೆಯು ಭಾರತಕ್ಕೆ!

[illegible] ವೆನ ಬರಿ [illegible] ಲಿವುಡ್ ಸಿನೆಮಾ ತಾರೆಯಾದ ಜಾನೆಟ್ ಗರ್ ಎಂಬ ಕೆ [illegible] ಭಾರತಕ್ಕೆ ಬಂದ [illegible] ಲ್ಲಿ ಯೋಗಾಭ್ಯಾಸ ಮಾಡಲಿ [illegible] ಬಂದಿದೆ

ದೇವೀ ಚೌಧರಾಣಿ

ಸುಪ್ರಸಿದ್ಧ ವಂಗ ಕಾದಂಬರೀಕಾರರ ಲೇಖನಿಯಿಂದ ಹೊರಟ ಉಜ್ವಲ ಕಥೆಯಾದ ದೇವೀ ಚೌಧರಾಣಿಯನ್ನು ಸಿನೆಮಾ ಚಿತ್ರವಾಗಿ ತಯಾರಿಸುವ ಬಗ್ಗೆ ಕಲ್ಕತ್ತದ ಫಿಲ್ಮ್ ಕಾರ್ಪೊರೇಶನಿನವರು ತೀವ್ರ ಯೋಚನೆ ಮಾಡುತ್ತಿದ್ದಾರೆ

ಈ ಚಿತ್ರವನ್ನು ಹಿಂದೀ ಮತ್ತು ಬಂಗಾಳಿ ಈ ಉಭಯ ಭಾಷೆಗಳಲ್ಲಿಯೂ ಏಕಕಾಲದಲ್ಲಿಯೇ ತೆಗೆವ ಯೋಚನೆ ಮಾಡಲಾಗಿದೆ ಸುಶೀಲ ಮುಜುಮ್ದಾರರು ಇದನ್ನು ನಿರ್ದೇಶಿಸುವರು.

ಮಾರ್ಚ್ 15!

ಮಿನರ್ವದಲ್ಲಿ ಕೇಶವರಾವ್ ದೇವರ್ ನಿರ್ದೇಶಿಸುವ ಹೊಸ ಚಿತ್ರದ ಹೊಸ ಹೆಸರು ಮಾರ್ಚ್ 15! ಎಂದು. ಇದನ್ನು ತಯಾರಿಸುವುದರಲ್ಲಿ ಅದರ ನಿರ್ದೇಶಕರು ಈಗ ನಿರತರಾಗಿರುವರು.

ಶಿಕ್ಷಣ ವಿಚಾರ

ಶಿಕ್ಷಣ ಪ್ರಚಾರವು ಪುಣ್ಯಕಾರ್ಯವಾಗಿದೆ!

ಯಡನೀರ ಶ್ರೀಪಾದಂಗಳವರ ಉದಾತ್ತ ಭಾಷಣ!

"ದೇಶ ವಿದೇಶಗಳಲ್ಲಿರುವವರೊಡನೆ ವ್ಯಾಪಾರ ವ್ಯವಹಾರವು ನಡೆಯುತ್ತಿರುವ ಈ ಕಾಲದಲ್ಲಿ, ವ್ಯವಹಾರ ಸಂಪರ್ಕಗಳಿಂದ ದೇಶವಿದೇಶಗಳಲ್ಲಿರುವವರ ಜೀವನದ ಮರ್ಮವನ್ನು ಅರಿತು ಅವರಿಗೆ ಸಹ ತನ್ನ ಜೀವನಕ್ರಮವು ಸಹಕಾರಿಯಾಗುವಂತೆ ತನ್ನ ಜೀವನಕ್ರಮವನ್ನು ನಿರ್ಧರಿಸುವುದು ಪ್ರತಿಯೊಬ್ಬ ನಾಗರಿಕನ ಪ್ರಥಮ ಕರ್ತವ್ಯವಾಗಿದೆ ಪರಿಸ್ಥಿತಿಯು ಹೀಗಿದ್ದರೂ ನಮ್ಮ ದೇಶದಲ್ಲಿ ನಾನಾ ಭಾಷೆಗಳನ್ನಾಡುವ ಅಕ್ಷರಾಭ್ಯಾಸವಿಲ್ಲದ ಅನೇಕ ಪಂಗಡದವರಿದ್ದು, ಒಂದು ಪಂಗಡದವರು ಇನ್ನೊಂದು ಪಂಗಡದವರೊಡನೆ ಅಭಿಪ್ರಾಯ ವಿನಿಮಯ ಮಾಡಲು ಅಸಮರ್ಥರಾಗಿರುವಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು, ದೇಶದ ಏಳಿಗೆಯಾಗಲು, ಮಾನವಕೋಟಿಯು ಜ್ಞಾನ ಲಾಭದಿಂದ ಪರತತ್ವವೇನೆಂದು ತಿಳಿಯಲು ಶಿಕ್ಷಣ ಪ್ರಚಾರವು ಅವಶ್ಯವಾಗಿದೆ, ಮತ್ತು ಪುಣ್ಯಕಾರ್ಯವಾಗಿದೆ"

ಹೀಗೆಂದು [illegible] ಹೈಸ್ಕೂಲ್ ಎಲಿಮೆಂಟರಿ ಶಾಲೆಯ ಉದ್ಘಾಟನಾ ಸಮಾರಂಭ [illegible] ಕ್ತಪ್ರ ಶ್ರೀ ವತ್ರವ ಹ [illegible] ದ ಶ್ರೀ ಮತ್ ಎಡನೀರ ಮ [illegible] ಶ್ರೀ ದತ್ತಾ [illegible] ಅಪ್ಪಣೆ ಕೊಡಿಸಿದರು.

ಅವರ ತಮ್ಮ ಉದ್ಘಾಟನಾ ಭಾಷಣದಲ್ಲಿ ಅನೇಕ ಅಮೂಲ್ಯ ಸಲಹೆಗಳನ್ನು ಕೊಟ್ಟರು. ನಮ್ಮಿಂದಿನ ಜನಾಂಗವನ್ನು ಸುಶಿಕ್ಷಿತ ಜನಾಂಗವನ್ನಾಗಿ ಮಾಡಿ ದೇಶದೇಳಿಗೆಯನ್ನು ಸಾಧಿಸಬೇಕೆಂಬ ಉದಾತ್ತ ಧ್ಯೇಯದಿಂದ, ಸಾವಿರಾರು ರೂಪಾಯಿಗಳ ವೆಚ್ಚದಿಂದ ನಿರಂತರ ಪರಿಶ್ರಮದಿಂದ ಪೆರಡಾಲಿನ ಗ್ರಾಮಸ್ಥರು ಜಿಲ್ಲಾ ಬೋರ್ಡಿಗೆ ಇಂತಹ ಭವ್ಯವೂ ನೂತನವೂ ಆದ ಕಟ್ಟೋಣವನ್ನು ಕಟ್ಟಿಸಿಕೊಟ್ಟದ್ದಾಗಿ ಅವರನ್ನು ಅಭಿನಂದಿಸಿದರು.

ಶ್ರೀ ಪಾದಂಗಳವರು ಭಾಷಣವನ್ನು ಮುಂದುವರಿಸುತ್ತಾ ಭರತಖಂಡದ ಮಾನವ ಸಮುದಾಯದ ಅಧಃಪತನಕ್ಕೆ ನಿರಕ್ಷರತೆಯೇ ಮುಖ್ಯ ಕಾರಣವೆಂದೂ ಅದನ್ನು ನಿವಾರಿಸುವ ಪರಿಶ್ರಮವು ದೇಶಸೇವಾ ಕಾರ್ಯದಲ್ಲಿ ಅತ್ಯಂತ ಪ್ರಶಂಸಾರ್ಹವಾದುದೆಂದೂ ಅಪ್ಪಣೆ ಕೊಡಿಸಿದರು ತನ್ನ ಜೀವನವು ಅನ್ಯರ ಜೀವನಕ್ಕೆ ಸಹಕಾರಿಯೂ, ಸಹಾಯಕಾರಿಯೂ ಆಗಿ ಪರಿಣಮಿಸಬೇಕೆಂಬ ಉಚ್ಚ ಧ್ಯೇಯವು ಮಾನವ ಸಮಾಜದಲ್ಲಿ ಅಂಕುರಿಸುವ ತನಕ ಆ ಸಮುದಾಯವು ಪ್ರಶಾಂತ ನಾಗರಿಕ ಜೀವನದ ಸುಖವನ್ನು ಅನುಭವಿಸಲಾರದೆಂದೂ, ಇಂತಹ ಉಚ್ಚ ಧ್ಯೇಯವು ಮೃಗಪಕ್ಷಿ ಕ್ರಿಮಿಕೀಟಾದಿಗಳಲ್ಲಿಯೂ ಗೋಚರಿಸುವುದೆಂದೂ, ಇಂದಿನ ಮಾನವ ಜೀವನವು ಕ್ರಿಮಿಕೀಟಾದಿಗಳ ಜೀವನಕ್ಕಿಂತಲೂ ನಿಕೃಷ್ಟಾವಸ್ಥೆಯಲ್ಲಿದೆಯೆಂದೂ, ಇಂತಹ ಶೋಚನೀಯ ದೆಶೆಯನ್ನು ನೀಗಲಾಡಿಸುವುದು ನಮ್ಮೆಲ್ಲರ ಕರ್ತವ್ಯವೆಂದೂ ಸಾರಿದರು.

ಹತ್ತು ಮೈಲಿನ [illegible] ವ್ಯಾಪ್ತಿಯ ಜನವಸತಿಯುಳ್ಳ ಈ ಕೇಂದ್ರದಲ್ಲಿ ಹೈಸ್ಕೂಲ್ ಎಲಿಮೆಂಟರಿ ಶಾಲೆಯು ಇದ ಮೊದಲೇ ಆಗಬೇಕಾದುದು ಅವಶ್ಯವಿತ್ತೆಂತಲೂ, ಇಂದಾದರೂ ಇಲ್ಲಿನ ಚಿಕ್ಕ ಮಕ್ಕಳಿಗೆ, ಮುಂದಿನ ಜನಾಂಗವಾದ ವಿದ್ಯಾರ್ಥಿಗಳಿಗೆ, ದೇಶ ಕಾಲೋಚಿತ ವ್ಯವಹಾರ ಜ್ಞಾನವು ಅನಾಯಾಸವಾಗಿ ದೊರಕುವಂತೆ ಮಾಡಿದ ಸಹಕಾರ್ಯವು ಸರ್ವೋತ್ಕೃಷ್ಟವೂ ಸರ್ವ ಶ್ಲಾಘ್ಯವೂ ಆಗಿದೆಯೆಂದರು.

ಭಾಷಣದ ಕೊನೆಯಲ್ಲಿ ವಿದ್ಯಾಸಂಸ್ಥೆಗೆ ಉತ್ತರೋತ್ತರ ಶ್ರೇಯಸ್ಸನ್ನು ಹಾರೈಸಿ, ದೇಶಸೇವಾ ಬುದ್ಧಿಯಿಂದ ಇಂತಹ ಸಾರ್ವಜನಿಕ ಕಾರ್ಯದಲ್ಲಿ ದುಡಿದ ಸಕಲರಿಗೂ ಆಯುರಾರೋಗ್ಯ ಐಶ್ವರ್ಯಾದಿ ಸಕಲಾಭೀಷ್ಟವನ್ನು ಭಗವಂತನು ದಯಪಾಲಿಸಲೆಂದೂ ಆಶೀರ್ವದಿಸಿದರು.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಪತ್ತಿರವಿದ್ದರ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ಜ್ವರ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಭಾರಿ ಕಮಿಷನು.

ವಿ ಸೂ ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ಪ. ಕ

ಜೀವನ ಜ್ಯೋತಿಗಳು:

ಸಾರ್ವಭೌಮ ಪುಲಿಕೇಶಿ

ಲೇಖಕರು: ವಿದ್ವಾನ್ ಶ್ರೀ। ಕೆ. ಕೆ. ರೈ.

ಕನ್ನಡ ನಾಡಿನ, ಕನ್ನಡ ವೀರರ ಶಕ್ತಿಸಾಹಸಗಳನ್ನು ಅಖಿಲಭಾರತದಲ್ಲಿ ಪ್ರದರ್ಶಿಸಿ ಮೆರೆಸಿದ ಮಹಾಪ್ರಭಾವಶಾಲಿಯಾದ ರಾಜನೆಂದರೆ ಚಾಲುಕ್ಯವೀರನಾದ ಪುಲಿಕೇಶಿಯು. ತನ್ನ ವರಾಹಧ್ವಜವನ್ನೆತ್ತಿ, ವಿಜಯಯಾತ್ರೆ ಮಾಡಿ ಅನೇಕ ಮಾಂಡಲಿಕರನ್ನು ಶರಣುಮಾಡಿ ಉತ್ತರದ ಹರ್ಷವರ್ಧನನ ಗರ್ವವನ್ನೂ ಮುರಿದು ಮೆರೆದವನೇ ಆ ಸತ್ಯಾಶ್ರಯ ಪರಮೇಶ್ವರನು. ಕನ್ನಡದ ವೀರರು ಒಬ್ಬ ಪ್ರತಾಪಶಾಲಿಯಾದ ರಾಜನ ಕೊಡೆಯ ನೆರಳಲ್ಲಿ ಒಟ್ಟುಗೂಡಿ, ಅಟ್ಟಹಾಸವನ್ನು ಮೆರೆಸಿದ್ದು ಆತನ ಆಳುವಿಕೆಯ ಕಾಲದಲ್ಲಿ. ಹೀಗೆ ಕನ್ನಡ ನಾಡಿನ ಇತಿಹಾಸವು ಚಾಲುಕ್ಯ ವಂಶದ ವೀರನಾದ ಸತ್ಯಾಶ್ರಯ ಪುಲಿಕೇಶಿಯ ಉಜ್ವಲ ಇತಿಹಾಸದಿಂದ ರಮಣೀಯವಾಗಿದೆ.

ಚಾಲುಕ್ಯ ಕುಲವು ಬಹಳ ಸುಪ್ರಸಿದ್ಧವಾದ ರಾಜವಂಶವು. ಇದರಲ್ಲಿ ಜಯಸಿಂಹನೆಂಬ ಪ್ರಖ್ಯಾತನಾದ ರಾಜನಿದ್ದನು. ಆತನೇ ಚಾಲುಕ್ಯವಂಶಕ್ಕೆ ಹೆಚ್ಚಿನ ಪ್ರಸಿದ್ಧಿಯನ್ನು ತಂದವನು. ಅವನ ಮಗನು ಕೀರ್ತಿವರ್ಮನೆಂಬವನು. ಆತನ ಪುತ್ರನೇ ಪುಲಿಕೇಶಿಯು.

ತಂದೆಯು ಮಕ್ಕಳು ಚಿಕ್ಕವರಾಗಿರುವಾಗಲೇ ಸ್ವರ್ಗಸ್ಥನಾಗಲು, ಪುಲಿಕೇಶಿಯು ತಮ್ಮಂದಿರೊಡನೆ ಚಿಕ್ಕತಂದೆಯ ಪಾಲನೆಯಲ್ಲಿ ಬೆಳೆದನು. ಪ್ರಾಯಕ್ಕೆ ಬಂದ ಮೇಲೆ ಪುಲಿಕೇಶಿಯೇ ಸ್ವತಃ ಸಿಂಹಾಸನಾರೋಹಣ (ಕ್ರಿ. ಶ. ೬೧೦) ಮಾಡಿದನು. ಬಾದಾಮಿ (ವಿಜಾಪುರ ಜಿಲ್ಲೆಯಲ್ಲಿದೆ) ಯು ಚಾಲುಕ್ಯರ ರಾಜಧಾನಿಯಾಗಿತ್ತು.

ರಾಜ್ಯದಲ್ಲಿ ಆಗ ಎಲ್ಲೆಲ್ಲೂ ಗೊಂದಲವಿತ್ತು! ಮಾಂಡಲಿಕ ಅರಸರು ಸ್ವತಂತ್ರರಾಗಲು ಚಳವಳವೆಬ್ಬಿಸಿದ್ದರು. ಪರಾಕ್ರಮಿಯಾದ ಪುಲಿಕೇಶಿಯು ಅವರನ್ನೆಲ್ಲಾ ಅಣಗಿಸಿದನು. ಕದಂಬ, ಗಂಗ, ಕಾಂಚಿ, ಕೇರಳ, ಪಾಂಡ್ಯ, ಚೋಳರೇ ಮೊದಲಾದವರು ಶರಣಾಗತರಾದರು. ಉತ್ತರದಿಂದ ಮಹಾದಳದೊಡನೆ ಆರ್ಭಟಿಸಿ ಬರುತ್ತಿದ್ದ ಕಾನೋಜಿನ ಹರ್ಷವರ್ಧನನನ್ನೂ ಪುಲಿಕೇಶಿಯು ತನ್ನ ಪರಾಕ್ರಮದಿಂದ ಹೊಡೆದೋಡಿಸಿದನು.

ಪುಲಿಕೇಶಿಯು ತನ್ನ ರಾಜ್ಯದ ಆಡಳಿತವನ್ನು ಬಹಳ ಯಶಸ್ವಿಯಾಗಿ ನಡೆಸಿದನು. ಇವನು ಹಡಗುಗಳನ್ನು ಸಮುದ್ರದಲ್ಲಿ ನಡೆಸುತ್ತಿದ್ದನೆಂದೂ ವರ್ಣಿತವಾಗಿದೆ! ನರ್ಮದೆಯಿಂದ ಸಿಂಹಲದ ವರೆಗಿರುವ ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳ ನಡುವಣ ಭೂಮಿಯನ್ನು ಆತನು ಸ್ವಾಧೀನಪಡಿಸಿಕೊಂಡಿದ್ದನು. ಈ ವಿಸ್ತಾರವಾದ ರಾಜ್ಯವನ್ನು ವ್ಯವಸ್ಥೆಯಿಂದ ಆಳಲು, ಬೇರೆ ಬೇರೆ ಪ್ರಾಂತಗಳಾಗಿ ವಿಂಗಡಿಸಿ, ಒಂದೊಂದು ಪ್ರಾಂತವನ್ನು ತನ್ನ ಸಮೀಪದ ಒಬ್ಬೊಬ್ಬ ಬಂಧುವಿನ ಸ್ವಾಧೀನ ಕೊಟ್ಟು ತಾನು ಮಹಾ ಸಾಮ್ರಾಟನಾಗಿ ಧರ್ಮದಿಂದಲೂ ನೀತಿಯಿಂದಲೂ ರಾಜ್ಯವನ್ನು ಆಳುತ್ತಿದ್ದನು. ಇರಾನದ ರಾಜನಾದ ಎರಡನೆಯ ಖುಸ್ರು ಎಂಬವನು ಇವನ ಆಸ್ಥಾನಕ್ಕೆ ಕಾಣಿಕೆಯನ್ನರ್ಪಿಸಲು ಬಂದಿದ್ದನೆಂಬುದು ಅಜಂತಾ ಗುಹೆಯ ಚಿತ್ರಗಳಿಂದ ತಿಳಿಯುತ್ತದೆ.

ಸುಪ್ರಸಿದ್ಧ ಚೈನಾ ಯಾತ್ರಿಕನಾದ ಹ್ಯುವೆನ್ ತ್ಸಾಂಗನು ಪುಲಿಕೇಶಿಯ ರಾಜ್ಯಭಾರವನ್ನು ಮುಕ್ತಕಂಠದಿಂದ ಹೊಗಳಿರುವನು. ಜನರು ನಿಷ್ಕಪಟಿಗಳೆಂದೂ, ಸತ್ಯವಂತರೆಂದೂ, ಅಭಿಮಾನಧನರೆಂದೂ, ಪರೋಪಕಾರಿಗಳೆಂದೂ ಬರೆದಿರುವುದಲ್ಲದೆ, ಪುಲಿಕೇಶಿಯ ದಂಡಾಳುಗಳು ಅನುಪಮ ಶೂರರೆಂದೂ ಉಲ್ಲೇಖಿಸಿರುವನು.

ಇಂದು ಕರ್ನಾಟಕವು ಒಡೆದು ಛಿದ್ರಛಿದ್ರವಾಗಿದೆ. ಕನ್ನಡಮಾತೆಯು ಕಳೆಗುಂದಿದ್ದಾಳೆ! ಕನ್ನಡಿಗರು ಸತ್ವಹೀನರಾಗಿದ್ದಾರೆ! ಆದರೆ ಹತ್ತೊಂಬತ್ತು ಶತಮಾನಗಳ ಹಿಂದೆ, ಕನ್ನಡವು ಒಂದು ರಾಜನ ಒಡೆತನದಲ್ಲಿ ಒಂದಾಗಿ ಮೆರೆದಿತ್ತು! ಸ್ವಾತಂತ್ರ್ಯದ ಗದ್ದಲದಲ್ಲಿ ಅಖಿಲ ಭಾರತಖಂಡದಲ್ಲಿಯೇ ಘನತೆಯ ಹೆಸರನ್ನು ಪಡೆಯಿತು! ಅಂತಹ ಘನತೆಯನ್ನು ಕನ್ನಡದೇಶಕ್ಕೆ ಒದಗಿಸಿದ ಪ್ರಭಾವಶಾಲಿಯೇ ಪುಲಿಕೇಶಿಯು!

ಹೀಗೆ ಚಾಲುಕ್ಯ ವಂಶದ ಮಾತ್ರವಲ್ಲ ಕರ್ನಾಟಕ ಕುಲದ ಕೀರ್ತಿಯೇ ಪುಲಿಕೇಶಿಯಿಂದ ಬೆಳಗಿದೆ!

ಭಾರತ ಖಂಡದ ಇತಿಹಾಸದಲ್ಲಿ ಕರ್ನಾಟದ ಹೆಸರು ಸುವರ್ಣಾಕ್ಷರಗಳಿಂದ ಬರೆಯುವಂತೆ ಮಾಡಿದ ಮಹಾ ಕೀರ್ತಿಯು ಪುಲಿಕೇಶಿಗೆ ಸಲ್ಲತಕ್ಕದ್ದಾಗಿದೆ. ಆ ಮಹಾ ಪುರುಷನ ಪುಣ್ಯನಾಮವು ಕನ್ನಡಿಗರಿಗೆ ಪ್ರಾತಃ ಸ್ಮರಣೀಯವಾಗಿದೆ!

—K K Ra

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction .. .. ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars:-

K. R. GURU, *Managing Director*

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲನ್ನು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ಸ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 3 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4.

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY 4

Madras Agent: **Appah & Co, China Bazar Madras.**

DIAMONDS! DIAMONDS!
BEST BRILLIANCY!

K. R. K. SHET

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗಿದ್ದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಯಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್ಸ್.

ಜರ್ಮನ್ ದಾಳಿಯಿಂದ ಫ್ರಾನ್ಸ್ ಎದೆಗುಂದಲಿಲ್ಲ!

ಫ್ರೆಂಚ್ ಪ್ರಧಾನಮಂತ್ರಿಗಳ ಹೇಳಿಕೆ

ಮಿತ್ರಪಕ್ಷದ ಯುದ್ಧ ಪ್ರಶಂಸೆ!

ಪ್ರಪಂಚವು ಮರೆಯದ ಕಾದಾಟ!

"೩೩೩೦೦೦ ಜನ ಮಿತ್ರ ಸೈನಿಕರು ಡಂಕರ್ಕಿಗೆ ಬಂದು ಹಡಗು ಹತ್ತಿದರು ಸಮುದ್ರದ ಮೇಲೆ ನಮಗಿರುವ ಸ್ವಾಮ್ಯವನ್ನು ಜರ್ಮನಿಗೆ ತೋರ್ಪಡಿಸಿದರು ನಮ್ಮ ಸೈನ್ಯಗಳ ಒಕ್ಕಟ್ಟು ಮತ್ತು ನೈತಿಕ ಶಕ್ತಿಯು ನಾಶವಾಗುವ ಬದಲು ನಮ್ಮ ದೇಶವು ನಮ್ಮ ಪೂರ್ವಜರ ಶೌರ್ಯ ಸಾಮರ್ಥ್ಯಗಳಿಗೆ ಸರಿಸಮಾನವಾಗಿದೆ ಎಂಬುದನ್ನು ತೋರ್ಪಡಿಸಲಾಯಿತು ಫ್ಲಾಂಡರ್ಸ್ ಕದನವೂ ಡಂಕರ್ಕಿನ ಹಿಂಭಾಗದಲ್ಲಿಯ ಕದನವೂ ಈಚಿನ ಇತಿಹಾಸದಲ್ಲಿ ಒಂದು ಗಣ್ಯ ಸ್ಥಾನವನ್ನು ಈಗಾಗಲೇ ಪಡೆದಿವೆ" ಎಂದು ಫ್ರಾನ್ಸಿನ ಪ್ರಧಾನ ಮಂತ್ರಿ ರೇನಾಡರವರು ಒಂದು ಭಾಷಣವಿತ್ತರು ಅದರ ಸಾರಾಂಶ ಹೀಗಿದೆ ಈ ಕದನಗಳಲ್ಲಿ ನಮ್ಮ ಜನರು ಇಡೀ ಜಗತ್ತಿನ ಪ್ರಶಂಸೆಯನ್ನು ಪಡೆದಿದ್ದಾರೆ ವಿಪ್ಲವದ ಕಾಲದಲಿದ್ದ ಮುಖಂಡರಗಳನ್ನೂ, ಫ್ರೆಂಚ್ ರಾಜರುಗಳ ಅಡ್ಮಿರಲ್‌ಗಳನ್ನೂ ಈ ಘಟನೆಗಳಲ್ಲಿ ನಮ್ಮ ಸೈನಿಕರು ನೆನಪಿಗೆ ತಂದಿದ್ದಾರೆ ನಮ್ಮ ಉತ್ತರದ ಸೈನಿಕರು ಮತ್ತು ನಾವಿಕರು ಸಾವಿರಾರು ಮಂದಿ ಮಾಡಿರುವ ತ್ಯಾಗಗಳು ಹೊರಕ್ಕೆ ಬರದೇ ಅಲ್ಲಿಯೇ ಮುಸುಕುಮುಸುಕಾಗಿ ನಿಲ್ಲುವದು. ಆದರೂ ಅವರ ತ್ಯಾಗದಿಂದಲೇ ಪೂರ್ವ ಯಶವು ಈಗ ಪುನರ್ಜನ್ಮ ತಾಳಿದೆ

"ನಮ್ಮ ಗೇಲಾರ ಸೈನಿಕರು ಗೇಲರ ನಮ್ಮ ಸೈನಿಕರ ಸಮಾನರಾಗಿದ್ದಾರೆಂಬುದನ್ನು ತೋರಿಸಿಕೊಂಡಿದ್ದಾರೆ ಜರ್ಮನರು ಜಯವನ್ನು ಪಡೆಯುತ್ತಿರುವುದನ್ನು ಅವರು ನೋಡುತ್ತಿದ್ದರೂ ತಮಗೆ ಮಾತ್ರ ಅಂತ್ಯ ಜಯವಾಗುವದೆಂಬದರಲ್ಲಿ ಸ್ವಲ್ಪ ಅನುಮಾನವನ್ನೂ ಹೊಂದದೆ ಅವರು ವಿಶ್ವಾಸ ಹೊಂದಿರುವರು

ಪ್ಯಾರಿಸ್ ನಗರದ ಮೇಲಿನ ಧಾಳಿ

"ಕಳೆದ ಸೋಮವಾರ ಪ್ಯಾರಿಸಿನ ಮೇಲೆ ವಿಮಾನ ಧಾಳಿ ನಡೆಸಿದರು ಆ ಧಾಳಿಯಿಂದ ಹೆಂಗಸರೂ, ಮಕ್ಕಳೂ, ಮುದುಕರೂ ಸಾವುನೋವುಗಳಿಗೆ ಗುರಿಯಾದರು ಇವೆಲ್ಲಾ ಪ್ಯಾರಿಸ್‌ನ ಮನಸ್ಸನ್ನು ಕದಲಿಸಿತೇ? ಧಾಳಿ ನಡೆದ ಕೆಲವು ನಿಮಿಷಗಳ ನಂತರ ಪ್ಯಾರಿಸ್ ನಗರದ ಬೀದಿಗಳಲ್ಲಿ ಫ್ರೆಂಚ್ ಕೆಲಸಗಾರರು—ಹೆಂಗಸರೂ—ಗಂಡಸರೂ—ಯಾವ ಆತಂಕವೂ ಇಲ್ಲದೆ ಹೆಮ್ಮೆಯಿಂದ ಓಡಾಡುತ್ತಿದ್ದುದನ್ನು ನಾನು ನೋಡಿದೆ. ಈ ಜನರು ಕಂಪನವನ್ನೇ ಅರಿಯರು. ಎಷ್ಟೇ ಪ್ರಚಂಡ ಧಾಳಿಯಾಗಿದ್ದರೂ ಈ ವಿಮಾನ ಧಾಳಿಯಿಂದ ಪ್ಯಾರಿಸಿನ ಆತ್ಮಕ್ಕೆ ಏನೂ ಆಗಿಲ್ಲ.

"ಈ ಧಾಳಿಗೆ ಪ್ರತಿಯಾಗಿ ಉತ್ತರವನ್ನೀಯದೆ ಬಿಟ್ಟಿಲ್ಲ ಮಂಗಳವಾರ ರಾತ್ರಿ ರುಹರ್ ಕಾರ್ಖಾನೆಗಳ ಮೇಲೆ ಬ್ರಿಟಿಷ್ ವಿಮಾನಗಳು ಹೋಗಿ ಧಾಳಿ ನಡೆಸಿದವು. ಡಾರ್ಟ್‌ಮಂಡ್, ಫ್ರಾಂಕ್‌, ಫರ್ಟ್, ಡಸೆಲ್‌ಡಾರ್ಫ್, ಕೊಲೋನ್ ಮತು ಎಸ್ಸೆನ್‌ಗಳ ಮೇಲೆ ಬಾಂಬುಗಳು ಬಿದ್ದವು ಪೆಟ್ರೋಲ್ ಶೇಖರಣೆಗಳಿಂದ ಹೊರಡುತಿದ್ದ ಬೆಂಕಿಯನ್ನು ೧೫೦ ಕಿಲೋಮೀಟರುಗಳ ದೂರದಿಂದ ನೋಡಬಹುದಾಗಿತ್ತು ಫ್ರೆಂಚ್ ವಿಮಾನಗಳು ಮ್ಯಾನ್‌ಹೀಂ, ವುಲ್, ಲುಡ್ವಿಗ್‌ಷೇವನ್ ಮತ್ತು ಮ್ಯೂನಿಕ್‌ಗಳ ಮೇಲೆ ಹಾರಾಡಿ ಬ್ಯಾಡಿಶ್ಚ ಅನಿಲೈನ್‌ನ ಪ್ರಚಂಡ ಕಾರ್ಖಾನೆಯ ಮೇಲೆ ಬಾಂಬು ಹಾಕಿ ಅದನ್ನು ಹತ್ತಿಸಲಾಯಿತು ಫ್ರೆಂಚ್ ಗಡಿಯಿಂದ ನೋಡಿದರೆ ಧ್ವಜಗಳ ಕಾಣಬರುತ್ತಿದ್ದವು

"ಇನ್ನು ಮುಂದೆ ಫ್ರೆಂಚ್ ನಗರದ ಮೇಲೆ ನಡೆಸುವ ಒಂದೊಂದು ಧಾಳಿಗೂ ಪ್ರತಿಧಾಳಿಯನ್ನು ನಾವು ನಡೆಸುವೆವು

ಫ್ರಾನ್ಸಿಗಾಗಿ ಕದನ

'ಫ್ರಾನ್ಸಿಗಾಗಿಯೇ ನಡೆಯುತ್ತಿದೆ ಹರ್ ಹಿಟ್ಲರನ ಘೋಷಣೆ, ನಂತರ ಒಬ್ಬನಾದ ಮುಕ್ತಿಗೆ. ಈ ಮುಕ್ತಿಗೆಯು ಕಾರ್ಯಾಚರಣೆಗೆ ಎಲ್ಲ ಶಕ್ತಿಯನ್ನೂ ಅವನು ಉಪಯೋಗಿಸುತ್ತಿದ್ದಾನೆ. ವಿಮಾನಗಳೂ ಮತ್ತು ಆರ್ಮರ್ಡ್ ಸ್ಕ್ವಾಡ್ರನ್‌ಗಳೂ ಪುನಃ ಒಮ್ಮೆಗೆ ಮುಂದೆ ಬರುತ್ತಿವೆ ನಮ್ಮ ರಣಕ್ಷೇತ್ರವನ್ನು ಒಡೆದು ಒಳಗೆ ಬರಲು ಜರ್ಮನರ ಯತ್ನ

"ಕದನವು ಈಗಾಗಲೇ ಪ್ರಾರಂಭವಾಗಿದೆ ಕದನವು ಸುರುವಾಗಿರುವ ರೀತಿಯಲ್ಲಿ ನಾನು ಸಮಾಧಾನ ಹೊಂದಿದ್ದೇನೆ, ಮತ್ತು ನನ್ನ ಆಜ್ಞೆಯು ಯಾವ ಅಪೋಹವೂ ಇಲ್ಲದೆ ನಡೆಸಲ್ಪಡುತ್ತಿರುವುದಕ್ಕಾಗಿಯೂ ಸಮಾಧಾನ ಹೊಂದಿದ್ದೇನೆ

"ನಮ್ಮ ಸೈನಿಕರು ಹೊಸ ಯುದ್ಧಕ್ರಮದ ಪರಿಸ್ಥಿತಿಗೆ ಸರಿಹೊಂದಿಸಿಕೊಂಡಿದ್ದಾರೆ ಯುದ್ಧಾರಂಭಕಾಲದಲ್ಲಿ ನೂರಾರು ಶತ್ರು ಟ್ಯಾಂಕ್‌ಗಳು ನಾಶವಾಗಿವೆ ನಮ್ಮ ಸೈನ್ಯ ಕಾರ್ಯಾಚರಣೆಗೆ ಮಿತ್ರರಾಷ್ಟ್ರ ವಿಮಾನಗಳೂ ಸಹಾಯ ಮಾಡುತ್ತಿವೆ. ಈ ಕದನದ ಬೆಳವಣಿಗೆಯನ್ನು ಇಡೀ ಪ್ರಪಂಚವೇ ಉತ್ಸುಕತೆಯಿಂದ ನಿರೀಕ್ಷಿಸುತ್ತಿದೆ.

೧೯೪೦ನೇ ಜೂನಿನ ಕದನವು ಪ್ರಪಂಚದ ಅದೃಷ್ಟವನ್ನೇ ನಿರ್ಮಿಸುವುದಾಗಿದೆ ಅನೇಕ ಶತಮಾನಗಳ ವರೆಗೆ ಪ್ರಪಂಚದ ಅದೃಷ್ಟವನ್ನು ಇದು ನಿರ್ಧರಿಸುವುದಾಗಿದೆ

ಇಂದು ಎದುರಿಸಬೇಕಾಗಿರುವ ಅಪಾಯ

'ಇಂದು ಯೂರೋಪಿನಲ್ಲಿ ಹಿಂದೆ ಎತ್ತ ಹೋದರೂ ಎಂತಹ ಅಪಾಯವನ್ನು ಎದುರಿಸಬೇಕಾಗಿದೆ ಎಂಬುದನ್ನು ಮನಗಾಣಬೇಕಾಗಿದೆ ಜರ್ಮನಿಯಿಂದ ಪದಾಕ್ರಮಿಸಲ್ಪಟ್ಟವರ ಆಡಳಿತವೆಂಬುದನ್ನು ಇಡೀ ಪ್ರಪಂಚವೇ ಅರಿತಿದೆ ಆ ಆಡಳಿತದಲ್ಲಿ ಜರ್ಮನರನ್ನು ಬಿಟ್ಟು ಉಳಿದವರೆಲ್ಲಾ ಗುಲಾಮರಾಗಬೇಕು ಹೆರ್ ಹಿಟ್ಲರನು ತನ್ನ ಘೋಷಣೆಯಲ್ಲಿ ತಿಳಿಸಿರುವ ಹೊಸ ಪ್ರಪಂಚವು ಕೇವಲ ಮೋಸಯುಕ್ತಿಯಿಂದ ಪ್ರಾರಂಭವಾಗಬಹುದು ಅದು ಹಿಂದಿನ ಕಾಲಕ್ಕೆ ಹೋದಂತಾಗುವದು ಕ್ರಿಸ್ತನ ದಯಾಭಾವನೆಯಿಂದ ವಿವರ್ಜಿತವಾದ ಕಾಲವಾಗುವದು ಜರ್ಮನಿಯ ನಾಯಕರ ಈ ಸ್ವಪ್ನವು ಫ್ರೆಂಚರ ಎದುರಾಳಿಕೆಯಿಂದ ಮುರಿದು ಬೀಳುವದು. ಏಕೆಂದರೆ ಹಿಟ್ಲರನಿಗೆ ಎದುರಾಗಿ ಇಂದು ನಿಂತಿರುವ ಫ್ರಾನ್ಸು ಎರಡು ಯುದ್ಧಗಳ ಮಧ್ಯೆ ಇದ್ದ ಫ್ರಾನ್ಸಲ್ಲ. ಇದು ಇನ್ನೊಂದು ಫ್ರಾನ್ಸು. ಹಿಟ್ಲರನನ್ನು ಇಂದು ಎದುರಿಸುತ್ತಿರುವ ಬ್ರಿಟನ್ನು ೨೦ ವರ್ಷಗಳ ಹಿಂದಿನ ಬ್ರಿಟನ್ನಲ್ಲ".



ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕ್ಯೂರಾ ಟ್ಯಾಲೆಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು ಕುಟಿಕ್ಯೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಕೋಮಲವಾಗಿರಿಸುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ಸುವಾಸನೆಯ ಕುಟಿಕ್ಯೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಹಾಕಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕ್ಯೂರಾ ಸೋಪ್

CUTICURA SOAP

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 280/1933

R E P No 1391/1939

ಲಕ್ಷ್ಮೀ ನಾರಾಯಣ ಭಟ್ಟ ವಾದಿ ಅರ್ಜಿದಾರ ಮತ್ತು

ನರಸಿಂಹ ಆಚಾರ್ಯ—ಪ್ರತಿವಾದಿ ಎದ್ರಿ

ಸದ್ರಿ ಪ್ರತಿವಾದಿ ಎದ್ರಿ ನರಸಿಂಹ ಆಚಾರ್ಯ ಕೃಷ್ಣಾಚಾರ್ಯರ ಮಗ ಮಂಗಳೂರು ತಾಲೂಕು ಬಪ್ಪನಾಡು ಕ್ಷೇತ್ರ ಗ್ರಾಮದಲ್ಲಿರುವವರಿಗೆ

ಕೊಡುವ ಅಮ್ಲ ಜಾರಿಯಲ್ಲಿ ... ಆಚಾರ್ಯ ಮತ್ತು ಗೋಪಾಲಕೃಷ್ಣ ಆಚಾರ್ಯ ಕೂಡ ೨ ಜನರು ಅಧ್ಯಕ್ಷರಾಗಿ ರೂಪಾಯಿ ೩೦೦೦ಕ್ಕೆ ನಿರ್ಧರಿಸಿದ ಚಿಟ್ಟು ಸಂಬಂಧ ಕುರಿತು ತಾರೀಕು ೨—೫—೧೯೩೧ರಲ್ಲಿ ರಜಿಸ್ಟ್ರ ಆದ ಚಿಟ್ಟು ಕರಾರು ಮೇರೆಗೆ ಸದ್ರಿ ಚಿಟ್ಟಿಯ ಆನ್ ಮೆಂಬರರಾದ ನಿಮಗೆ ಸದ್ರಿ ಅಧ್ಯಕ್ಷರಿಂದ ಕೂಡ ಬರತಕ್ಕ ಅಸಲು ರೂಪಾಯಿ ೫೦ ಮ ಅದರ ಮೇಲಿನ ಬಡ್ಡಿ ಕೂಡ ನಿಮಗೆ ವಸೂಲು ಮಾಡುವ ಹಕ್ಕು ವಿಧಿ ಅಪೇಕ್ಷಿಸಿ ಅರ್ಜಿದಾರನು ಹಾಜರು ಮಾಡಿದ ಎಕ್ಸಿಕ್ಯೂಶನ್ ಮಂಜೂರು ಮಾಡುವದೇ ಸದ್ರಿ ಅಮ್ಲ ಜಾರಿಯ ತಾರೀಕು ೬—೭—೧೯೪೦ಕ್ಕೆ ಮತ್ತು ಸದ್ರಿ ಹಕ್ಕು ವಿಧಿ ಸಮಯ ದರ್ಖಾಸ್ತಿಗೆ ಸಲ್ಲುವದೇ ತನಗೆ ಯಾ ತನ್ನ ಒಗ್ಗೆ ತನ್ನ ಕಡೆ ವಕೀಲರಿಗೆ ಅನುಮತಿ ಕೊಡಬೇಕಾಗಿ ಅರ್ಜಿದಾರ ಒದಗಿಸಿಂದ R E A 448/40 ನೇ ಅರ್ಜಿಯು ಕೂಡಾ ಸದ್ರಿ ತಾರೀಕು ೬—೭—೧೯೪೦ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ತನಿಖೆಗೆ ಇಟ್ಟಿರುವದರಿಂದ ಈ ಕುರಿತು ಆಕ್ಷೇಪವಿರುವಲ್ಲಿ ಅದನ್ನು ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ ೧೧ ಗಂಟೆ ಸಮಯಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರು ಆಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದಲ್ಲಿ ಸದ್ರಿ ಅಮ್ಲ ಜಾರಿಯೂ ಮ R E A 448/40ನೇ ಅರ್ಜಿಯೂ ಕೂಡ ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ ಎಂಬ ಸಂಗತಿ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

ಕಾರ್ಕಳ ता. ೮—೬—೪೦ | A N S Achar ಅರ್ಜಿದಾರನ ಕಡೆ ವಕೀಲ್

ಸತ್ತ ನಾಯಿ ಪುನಃ ಜೀವಕ್ಕೆ ಬಂದಿತು

ರಷ್ಯ ವೈಜ್ಞಾನಿಕನ ಅದ್ಭುತ ಶೋಧ

ರಷ್ಯದ ಒಬ್ಬ ವಿಜ್ಞಾನಿಯು ಸತ್ತ ನಾಯಿಯೊಂದನ್ನು ಒಂದು ವೈಜ್ಞಾನಿಕ ಪ್ರಯೋಗದ ಮೂಲಕ ಪುನಃ ಬದುಕಿಸಿದ್ದಾನೆ. ಅವನ ಈ ಪ್ರಯೋಗವು ಎಲ್ಲಾ ಪ್ರಾಣಿಗಳ ಮೇಲೂ ಸರ್ವಸಾಧಾರಣವಾಗಿ ಸಫಲವಾಗುಥದಾದರೆ ಅದರಿಂದ ಮನುಷ್ಯ ಜೀವಿಯ ರೋಗ್ಯ ಚಿಕಿತ್ಸೆಯಲ್ಲಿ ಒಂದು ಮಹಾಕ್ರಾಂತಿಯೇ ಆಗಧರದು.

ವಿಜ್ಞಾನಿಯು ಒಂದು ನಾಯಿಗೆ ವಿಷ ಕೊಟ್ಟು ಉಪಕರಣದ ಮೂಲಕ ಅದರ ರಕ್ತವನ್ನೆಲ್ಲ ಹೀರಿ ತೆಗೆದನು. ಆ ಮೇಲೆ ವಿಷ ಪೂರಿತ ಆ ರಕ್ತದೊಳಗಿಂದ ಕೆಂಪು ಕಣಗಳನ್ನೆಲ್ಲ ಬೇರೆ ಮಾಡಿ, ಅವುಗಳಲ್ಲಿರುವ ವಿಷವು ಹೋಗುವಂಥ ಒಂದು ದ್ರಾವಕದೊಳಗೆ ಅವನ್ನು ಸ್ವಲ್ಪ ಸಮಯದ ತನಕ ಇಟ್ಟನು ಮತ್ತೆ ವಿಷದಿಂದ ಪರಿಶುದ್ಧವಾದ ಆ ಕೆಂಪು ಕಣಗಳನ್ನು ಪುನಃ ನಾಯಿಯ ರಕ್ತದ್ರವದೊಂದಿಗೆ ಸೇರಿಸಿ ಆ ರಕ್ತವನ್ನು ಪುನಃ ನಾಯಿಯ ಶರೀರಕ್ಕೆ ಕೊಟ್ಟನು. ಈ ಕ್ರಿಯೆಗಳು ನಡೆಯುತ್ತಿರುವಾಗ ಸತ್ತಿದ್ದ ನಾಯಿಯು ಶುದ್ಧ ರಕ್ತವು ಶರೀರವನ್ನು ಸೇರಿ ಕೊಂಡೊಡನೆಯೇ ಬದುಕಿಕೊಂಡಿತು ಇಷ್ಟಾಗುವಾಗ ನಾಲ್ಕು ತಾಸಿನ ಸಮಯವು ಕಳೆದು ಹೋಗಿದ್ದಿತು.

ಐದು ವರ್ಷ ಪ್ರಾಯದ ಗಣಿತಾಚಾರ್ಯ

ಈಗ ರಷ್ಯದ ಅಧೀನವಾಗಿರುವ ಪೋಲಾಂಡಿನ ಬಿಯಾಲಿ ಸ್ಟೋಕು ಎಂಬಲ್ಲಿ ಬೆನಿರುಚ್ ಡ್ರೇಸಿಯರ್ ಎಂಬ ಒಬ್ಬ ಐದುವರ್ಷ ಪ್ರಾಯದ ಚಿಕ್ಕ ಬಾಲಕನಿದ್ದಾನೆ ಅವನು ತನ್ನ ಈ ಸಣ್ಣಪ್ರಾಯದಲ್ಲಿಯೇ ಗಣಿತದಲ್ಲಿ ಅದ್ಭುತ ಸಾಮರ್ಥ್ಯವನ್ನು ತೋರಿಸಿರುವನು ಒಂದು ಬೀದಿಯಲ್ಲಿ ೯೬ ಮನೆಗಳಿವೆ. ಒಂದೊಂದು ಮನೆಗೆ ೧೨೮ ಕಿಟಿಕಿಗಳಿವೆ ಒಂದೊಂದು ಕಿಟಿಕಿಗೆ ಆರಾರು ಕನ್ನಡಿ ಹರಳುಗಳಿವೆ ಹಾಗಾದರೆ ಆ ಬೀದಿಯಲ್ಲಿರುವ ಎಲ್ಲಾ ಮನೆಗಳ ಕಿಟಿಕಿಗಳಿಗೆ ಇರುವ ಕನ್ನಡಿ ಹರಳುಗಳೆಷ್ಟು?— ಈ ಲೆಕ್ಕವನ್ನು ಆ ಹುಡುಗನು ಎರಡೇ ಮಿನಿಟುಗಳಲ್ಲಿ ಮಾಡಿ ಸರಿಯಾದ ಉತ್ತರವನ್ನು ಕೊಟ್ಟಿದ್ದಾನೆ ೩೨೫೬೩೩೫ಕ್ಕೆ ೪೮ ರಿಂದ ಗುಣಿಸಿದರೆ ದೊರೆಯುವ ಫಲವೆಷ್ಟು ಕೂಡ ಅವನು ಎರಡೇ ಮಿನುಟುಗಳಲ್ಲಿ ಉತ್ತರ ಕೊಡುತ್ತಾನೆ. ಈ ಹುಡುಗನ ಅದ್ಭುತ ಗಣಿತ ಸಾಮರ್ಥ್ಯವನ್ನು ಸಾರ್ವಜನಿಕ ಅವಗಾಹನೆಗೆ ತರಬೇಕೆಂದು ಅವನ ಹೆತ್ತವರು ಅಧಿಕಾರಿಗಳಿಗೆ ಅರ್ಜಿ ಬರೆಕೊಂಡಿದ್ದಾಗ ಹುಡುಗನ ವಿಷಯವು ಎಲ್ಲರಿಗೂ ತಿಳಿದು ಬಂದಿತು, ಈ ಹುಡುಗನ ಅದ್ಭುತ ಸಾಮರ್ಥ್ಯದ ಕುರಿತು ಪರೀಕ್ಷೆ ಮಾಡಿ ವರದಿ ಬರೆಯುವುದಕ್ಕೋಸ್ಕರ ಬ್ಯೆಲಿಸ್ಟೋಕಿನ ವಿದ್ಯಾಖಾತೆಯ ಮೇಲಧಿಕಾರಿಗಳು ಕೆಲವು ಜನಪ್ರಮು_

ವಿಚಿತ್ರ -- ಪ್ರಪಂಚ

ಖರ ಒಂದು ಕಮಿಶನನ್ನು ನೇಮಿಸಿದೆ

ದಂಪತಿಗಳ ದುಃಖ!

ದಂಪತಿಗಳು ತಮ್ಮ ಜೀವನದ ವೈವಾಹಿಕ ಜೀವನದಲ್ಲಿ ದುಃಖವನ್ನೇ ಅನುಭವಿಸುವ ಕಾರಣವೇನು? ದಾಂಪತ್ಯದ ಅನುಪಮ ಸ್ವರ್ಗೀಯ ಸುಖವನ್ನು ಅನುಭವಿಸುವ ಆಶೆಯಿಂದ ವಿವಾಹವಾದ ದಂಪತಿಗಳು ಮುಂದೆ ಜೀವನದಲ್ಲಿ ಯಾಕೆ ಲವ ಮಾತ್ರವಾದರೂ ಸುಖವನ್ನು ಕಾಣುವದಿಲ್ಲ ಲಂಡನಿನ ಯುನಿವರ್ಸಿಟಿ ಕಾಲೇಜಿನ ಪ್ರೊಫೆಸರ ಜೊನ್ ಫ್ಲೂಗಲ್ ಎಂಬವರು ಈ ಪ್ರಶ್ನೆಗಳಿಗೆ ಹೀಗೆಂದು ಉತ್ತರ ಕೊಡುತ್ತಾರೆ. 'ಗಂಡ ಹೆಂಡಿರು ಪರಸ್ಪರವಾಗಿ ಮಿತಿಮೀರಿದ ಆಶೆ ಪ್ರತ್ಯಾಶೆಗಳನ್ನಿಟ್ಟು ಕೊಂಡಿರುವದೇ ವೈವಾಹಿಕ ಅಸಂತುಷ್ಟಿಯು ಕಾರಣವಾಗಿದೆ. ಎಷ್ಟೊ ಮಂದಿ ಯುವಕ ಯುವತಿಯರು ತಮ್ಮ ವೈವಾಹಿಕ ಭವಿಷ್ಯ ಜೀವನವು ಸಂಪೂರ್ಣ ಸುಖಮಯವಾಗುವದೆಂಬ ಭಾವನೆಯಿಂದ ವಿವಾಹವಾಗುತ್ತಾರೆ. ಅವರು ಜೀವನದಲ್ಲಿ ದುಃಖವೆಂಬುದೊಂದು ವಸ್ತು ಉಂಟೆಂದು ತಿಳಿಯುವದೇ ಇಲ್ಲ ಗಂಡ ಅಥವಾ ಹೆಂಡತಿ ಆದರ್ಶ ಪುರುಷ ಅಥವಾ ಸ್ತ್ರೀ ಆಗಿರಬೇಕೆಂದು ಅವರು ಪರಸ್ಪರ ತಿಳಿಯುತ್ತಾರೆ ಆದರೆ ಪ್ರಪಂಚದಲ್ಲಿ ಕವಿಯ ಕಲ್ಪನೆಯಲ್ಲಿ ಅಲ್ಲದ ವಾಸ್ತವಿಕವಾದ ಆದರ್ಶ ಸ್ತ್ರೀ ಪುರುಷರು ಇರುವದೇ ಇಲ್ಲ. ಸರ್ವ ಗುಣಸಂಪನ್ನವಾದವರು ಯಾರು ಇಲ್ಲ. ಎಲ್ಲರಲ್ಲಿ ಹೆಚ್ಚುಕಡಿಮೆ ಸಣ್ಣದೊಡ್ಡ ದೋಷಗಳು ಇದ್ದೇ ಇರುತ್ತವೆ. ಆದರೆ ಈ ಬಗೆಯ ಜ್ಞಾನವು ನವವಿವಾಹಿತರಿಗೆ ಇರುವುದಿಲ್ಲವಾದ್ದರಿಂದ ಗಂಡ ಅಥವಾ ಹೆಂಡತಿಯ ಲೋಪ ದೋಷಗಳು ತಮ್ಮ ಅನುಭವಕ್ಕೆ ಬಂದೊಡನೆ ಅವರು ದುಃಖಿಗಳಾಗುತ್ತಾರೆ ಆದರೆ ಎಲ್ಲರೂ ಗುಣದೋಷಿಗಳಾಗಿದ್ದಾರೆ, ತಪ್ಪುತಡೆಗಳು ಎಲ್ಲರಿಂದ ಆಗುತ್ತವೆ ಎಂಬ ಭಾವನೆ ಇದ್ದು ತರುಣಿಯರು ವಿವಾಹವಾಗುವರಾದರೆ ಅವರು ವೈವಾಹಿಕ ಜೀವನದಲ್ಲಿ ದುಃಖಾನುಭವ ಮಾಡುವ ಕಾರಣವಿರುವದಿಲ್ಲ ದಂಪತಿಗಳು ಪರಸ್ಪರ ಕ್ಷಮಾಶೀಲರು ಮತ್ತು ಅಲ್ಪ ಸಂತುಷ್ಟರು ಆಗುವರಾದರೆ ಜೀವನದಲ್ಲಿ ಅವರು ಪರಮ ಸುಖವನ್ನು ಕಾಣುವರು

ಹುಟ್ಟಿದ ಮಕ್ಕಳು ಈಜಬಲ್ಲವು

ಎಲ್ಲಾ ಮಕ್ಕಳಲ್ಲಿ ಈಜುವ ಶಕ್ತಿಯು ಬೀಜರೂಪದಲ್ಲಿ ಇರುತ್ತದೆಂದು ಅಮೆರಿಕದ ನ್ಯೂಯೋರ್ಕಿನ ಮಕ್ಕಳ ಆಸ್ಪತ್ರೆಯ ಪ್ರಧಾನ ಚಿಕಿತ್ಸಕರು ಹೇಳುತ್ತಾರೆ ಈ ಆಸ್ಪತ್ರೆಯಲ್ಲಿ ಹುಟ್ಟಿದ ಕೆಲವು ದಿನಗಳ ಶಿಶುಗಳನ್ನು ವಿಶಾಲವಾದ ಆದರೆ ಹೆಚ್ಚು ಆಳವಿಲ್ಲದ ನೀರಿನ ಕಾಲುವೆಗಳಲ್ಲಿ ಬಿಟ್ಟಾಗ ಅವು ಕೂಡಲೇ ಈಜಲಿಕ್ಕಾಗಿ ಕೈಕಾಲುಗಳನ್ನು ಅಲುಗಾಡಿಸ ತೊಡಗಿದುವಂತೆ ಹಾಗೂ ಅವುಗಳ ತಲೆಗಳು ನೀರಿನೊಳಗೆ ಮುಳುಗಿದ್ದಾಗ ನೀರು ಮೂಗಿನೊಳಗೆ ಸೇರಬಾರದೆಂದು ಅವು ಸ್ವಾಭಾವಿಕ ಪ್ರೇರಣೆಯಿಂದ ಉಸಿರಾಡುವದನ್ನು ನಿಲ್ಲಿಸಿದುವಂತೆ. ಶ್ವಾಸವನ್ನು ಬಹಳ ಹೊತ್ತು ತಡೆಯಲಿಕ್ಕಾಗದಿದ್ದಾಗ ಪ್ರಾಯಹೋದ ಒಂದು ಮಗು ನೀರಿನಲ್ಲಿ ಅಂಗಾತ ಮಲಗಿಕೊಳ್ಳಲು ಪ್ರಯತ್ನಿಸಿದಂತೆ ಮಕ್ಕಳು ಎರಡು ವರ್ಷದವುಗಳಾದಾಗ ಈಜುವ ಉತ್ತಮ ಲಕ್ಷಣಗಳನ್ನು ತೋರಿಸುವವು. ಆದ್ದರಿಂದ ಬಲತ್ಕರಿಸಲ್ಪಟ್ಟಾಗ ಇತರ ಪ್ರಾಣಿಗಳ ಮರಿಗಳಂತೆ ಮಕ್ಕಳೂ ಈಜಬಲ್ಲರೆಂಬುದು ಇದರಿಂದ ಸಿದ್ಧವಾಗುತ್ತದೆ.

ಅಮೃತ

ನರಗಳಿಗೆ ಬಲಕೊಡುವ ರಕ್ತಶುದ್ಧಿ ದ್ರಾವಕ.

ತಯಾರಿಸುವವರು.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೊ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವ

ಅಂದವಾದ ಮುದ್ರಣಕ್ಕೆ ಶಾರದಾ ಛಾಪಖಾನೆಗೇನೇ

ಬಂದು ವಿಚಾರಿಸಿರಿ

ನೋಟಗಳು!

ಯುರೋಪಿನಿಂದ ರಣಗರ್ಜನೆಯು ಮತ್ತಷ್ಟು ಭೀಕರವಾಗಿ ಕೇಳಿಬರುತ್ತಿದೆ!

—ಇಟಲಿಯೂ ಯುದ್ಧರಂಗಕ್ಕೆ ದುಮುಕಿದೆ!

◆

ಪೋಪ ಸಾಹೇಬರು ಜೀವಲೋಕವನ್ನು ರಣಕಾಳಿಯ ಬಾಯಿಂದ ಕಾಪಾಡಿರೆಂದು ಯುದ್ಧಕಾತರವಾದ ರಾಷ್ಟ್ರಗಳಿಗೆ ಬಿನ್ನಹ ಮಾಡಿಕೊಂಡಿರುವರು.



ವಜ್ರ ಹೃದಯಿಗಳಾದ ಸರ್ವಾಧಿಕಾರಿಗಳು

—ಆದರೆ, ಪಶುಕೃತ್ಯವೇ ಉದ್ದೇಶವಾಗಿರುವ ಇಂದಿನ ಯುರೋಪ್ಯ ಜನಾಂಗಗಳ ಕಿವಿಗೆ ಆಶಾಂತಿ ಸಂದೇಶಗಳು ಹೋಗಿ ಮುಟ್ಟುವ ಸೂಕ್ಷ್ಮ ಸೂಚನೆಗಳೂ ಕಂಡುಬರುವದಿಲ್ಲ.

—ತೀಕ್ಷ್ಣ ಹೃದಯಿಗಳಿಗೆ ವ್ಯರ್ಥ ವಾಕ್ಯಗಳಿಂದ ಯಾವ ಪರಿಣಾಮವೂ ಆಗುವಂತೆ ಇಲ್ಲ!

—ಪೋಪ ಸಾಹೇಬರು ಮನವಿ ಮಾಡಿಕೊಂಡ ೨೪ ತಾಸುಗಳೊಳಗೇ ವ್ಯಾಟಿಕನ್ನಿಗೆ ಹಿಟ್ಲರನ ಬಾಂಬುಗಳು ಬಿದ್ದುವೆಂಬ ಭೀಷಣ ವಾರ್ತೆಯೂ ಬಂತು.

◆

ರಶ್ಯದೊಡನೆ ಬ್ರಿಟನು ಇಂದು ಸಂಧಾನ ಮಾಡಿಕೊಳ್ಳುವ ಯತ್ನ ಮಾಡುತ್ತಿರುವುದಾಗಿ ತಿಳಿದಿದೆ.

—ಕ್ರಿಪ್ಸರನ್ನು ಮಾಸ್ಕೋಗೆ ಕಳುಹಿಸಲು, ಸ್ಟಾಲಿನನು ಅವರಿಗೆ ಅಲ್ಲಿ ಭೇಟಿ ಕೊಡಲು ಸಮ್ಮತಿಸಲೇ ಇಲ್ಲವಂತೆ!

—ಹಾಗಾಗಿ ಕ್ರಿಪ್ಸರನ್ನು ಬ್ರಿಟನಿನ ರಾಯಭಾರಿಯಾಗಿ ಇಂದು ಮಾಸ್ಕೋಗೆ ತಿರಿಗಿ ಕಳುಹಿಸಲಾಗಿದೆ.

—ಕ್ರಿಪ್ಸರಿಗೆ ಒಮ್ಮೆ ಅವಮಾನವಾದರೂ, ಇಂದು ತಿರಿಗಿ ಮಾಸ್ಕೋದಲ್ಲಿ ಅವರಿಗೆ ಸ್ವಾಗತವು ದೊರಕಿದೆ.

—ಕ್ರಿಪ್ಸರ ರಾಯಭಾರೀ ಕಾರ್ಯದ ಕುರಿತು ಯಾವ ಭವಿಷ್ಯವನ್ನೂ ಇಂದು ಹೇಳಲು ಸಾಧ್ಯವಿಲ್ಲ.

—ಆದರೆ ಬ್ರಿಟನಿಗೆ ಇದರಿಂದ ಬಹಳ ದೊಡ್ಡದಾದ ಪಾಠವೊಂದು ದೊರಕಿದೆ.

—ಬಹಳ ತಡಮಾಡಿ, ಯಾವುದಾದರೂ ಒಂದು ಕೆಲಸವನ್ನು ಮಾಡಲು ಮನಸ್ಸು ಮಾಡುವುದು ಕೆಲಸವನ್ನು ಮಾಡದೇ ಇರುವಷ್ಟೇ ಫಲಕಾರಿಯಾದುದು.

ಈ ಪಾಠವನ್ನು ಬ್ರಿಟಿಷ್ ರಾಜ್ಯನೀತಿಜ್ಞರು ಬೇಗನೇ ಮರೆಯಲಾರರು!

◆

ಸೇನಾಪತಿ ಬಾಪಟರು ಬೊಂಬಯಿ ಪೋಲೀಸರನ್ನು ಭ್ರಾಂತಿಗೊಳಿಸಿದ ಸುದ್ದಿಯೊಂದು ಬಂದಿದೆ.

—ಬಾಪಟರು ಬೊಂಬಯಿಗೆ ಪ್ರವೇಶಿಸಬಾರದಾಗಿ ಅವರನ್ನು ಪಟ್ಟಣದಿಂದ ಹೊರಗೆಹೋಗಲು ಪೋಲೀಸು ಆರ್ಡರು ಆಗಿತ್ತು.

—ಸಾರ್ವಜನಿಕ ಸಭೆಯೊಂದು ಏರ್ಪಾಟು ಮಾಡಿದರು. ಅಲ್ಲಿ ಭಾಷಣ ಕೊಡುವದಾಗಿಯೂ ಪ್ರಕಟವಾಗಿತ್ತು.

—ಪೋಲೀಸರ ಬಾಪಟರನ್ನು ಕರೆದುಕೊಂಡು ಹೋಗಿ ದೂರದ ಒಂದು ಮನೆಯಲ್ಲಿ ಬಿಟ್ಟು ಅಲ್ಲಿ ಕಾವಲು ನಿಂತಿದ್ದರಂತೆ!

ಆದರೆ ಸಾರ್ವಜನಿಕ ಸಭೆಯಲ್ಲಿ ಬಾಪಟರೇ ಆ ದಿನ ಒಂದು ಭಾಷಣ ಮಾಡಿದರಂತೆ!

—ಇದು ಎಲ್ಲರಿಗೂ ಆಶ್ಚರ್ಯವಾಗಿದೆ. ಬಾಪಟರು ಆ ಮನೆಯಿಂದ ಹೊರಟಿಲ್ಲವೆಂದೂ, ಅವರ ಪರಿತಯವು ತಮಗೆ ಚೆನ್ನಾಗಿದೆಯೆಂದೂ, ಆದರೆ ಬಿಸಿಲಿನಲ್ಲಿ ಬಟ್ಟರ ವಸ್ತ್ರವನ್ನು ಮಾತ್ರ ಹಾಕಿಕೊಂಡು ಯಾರೋ ಬಿದ್ದರೆಂದೂ ಪೋಲೀಸರು ಹೇಳಿದರು.

—ಅಂತೂ ಬಾಪಟರು ಪೋಲೀಸರನ್ನು ಭ್ರಾಂತಿಗೊಳಿಸಿದರು.

ಪುಸ್ತಕ-ವಿಮರ್ಶೆ

ಮಾರ್ಗದರ್ಶಕ:—(ಸಣ್ಣ ಕಥೆಗಳ ಸಂಗ್ರಹ) ಬರೆದವರು: ಶ್ರೀ ಎಂ. ವಿ. ಸೀತಾರಾಮಯ್ಯ ಎಂ. ಎ. ಮನೋಹರ ಗ್ರಂಥಮಾಲೆಯ ೪೨ನೆಯ ಕುಸುಮ. ಪ್ರಕಾಶಕರು, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ಪುಟಗಳು ೧/೮ ಆಕಾರದ ೧೪೨. ಬೆಲೆ ಬರಿ ನಾಲ್ಕಾಣೆ.

ಶ್ರೀ ಎಂ. ವಿ. ಸೀತಾರಾಮಯ್ಯನವರು ತಮ್ಮ ಭಾವಕವನಗಳಿಂದ ಭಾವನಾ ಪೂರ್ಣವಾದ ಸಣ್ಣ ಕತೆಗಳಿಂದ ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಶ್ರೀಯುತರು ಬರೆದ ಹದಿಮೂರು ಸ್ವತಂತ್ರ ಸಣ್ಣ ಕತೆಗಳ ಮೊದಲ ಸಂಗ್ರಹವಾಗಿ ಈಗ ಈ ಪುಸ್ತಕವು ಹೊರಬಿದ್ದಿದೆ. ಈ ಪುಸ್ತಕಕ್ಕೆ ಕವಿವರ್ಯ ಬೇಂದ್ರೆಯವರು ತಮ್ಮ ಕವನವಾಣಿಯಲ್ಲಿಯೇ ಅಂದವಾದ ಒಂದು ಮುನ್ನುಡಿ ಬರೆದಿದ್ದಾರೆ. "ಇಲ್ಲಿ ಕಥನ ಶಕ್ತಿಯ ಬೀಜವು ಮೊಳೆತು ಎಲೆ ಬಿಟ್ಟು ಕುಡಿಚಾಚಿ ಹೂವಾಗಿರುವುದನ್ನು ಕಾಣಬಹುದು. ಆಧುನಿಕ ಸಾಹಿತ್ಯ ಸೃಷ್ಟಿಯ ಕಥಾಪೂರದಲ್ಲಿ ಈ ಸಂಗ್ರಹವೂ ಒಂದು ತರಂಗ" ಹೀಗೆಂದು ಈ ಪುಸ್ತಕದ ಕುರಿತು ಮುನ್ನುಡಿಕಾರರು ಅಭಿಪ್ರಾಯ ಪಟ್ಟಿದ್ದಾರೆ.

ಮೊದಲನೆಯ ಕತೆಯೆ 'ಮಾರ್ಗದರ್ಶಕ'ವೆಂಬುದು. ಇದು ಭಾವನಾಪ್ರಧಾನವಾದ ಕತೆ. ಯಾವುದೋ ಒಂದು ಅದೃಶ್ಯಶಕ್ತಿಯು ಮಾನವನಿಗೆ ಮಾರ್ಗದರ್ಶಕವಾಗಿದೆಯೆಂಬುದೇ ಈ ಕತೆಯ ಗೂಢವಾಗಿದೆ. "ಕತೆಗಾರ ಚಂದು" ಒಂದು ಪ್ರಣಯಚಿತ್ರ. ಎಲ್ಲಿ ಪ್ರೇಮವು ವಿರಸವಾಗುತ್ತದೋ ಎಂಬ ಶಂಕೆಯನ್ನು ಹುಟ್ಟಿಸಿ ಕತೆಗಾರರು ದಂಪತಿಗಳ ನಿಷ್ಕಲಂಕ ಪ್ರೇಮ ಜೀವನವನ್ನು ಕೊನೆಗೆ ಚಿತ್ರಿಸಿ, ಕಥೆಯನ್ನು ಸ್ವಾರಸ್ಯವಾಗಿ ಮಾಡಿದ್ದಾರೆ. "ನಂಬಿದರೆ ನಂಬಿಬಿಟ್ಟರೆ ಬಿಡಿ" ಎಂಬ ಕತೆಯು ಸಾಮಾನ್ಯವಾಗಿ ಜೋಯಿಸರು ತಮ್ಮ ಹೇಳಿಕೆಯ ಸತ್ಯತೆಯನ್ನು ಸ್ಥಾಪಿಸಲು ಹೇಳುವ ಕಡೆಯ ಒಂದು ಮಾದರಿಯಾಗಿದೆ. 'ಬಗೆದಂತೆ ಬಾಳು' ಎಂಬುದು ಭೀಕರವಾದ ಕಥೆ! ಸಮಾಜದಲ್ಲಿ ಕಾಣುವ ಕೆಲ ಜನರ ಬಾಳುವೆಯ ರುದ್ರ ಚಿತ್ರವು ಇಲ್ಲಿ ಚಿತ್ರಿತವಾಗಿದೆ. "ಸರೋಜಳ ಬೊಂಬೆ"ಯಲ್ಲಿ ಹೆಣ್ಣುಮಗಳನ್ನು ಕಳಕೊಂಡ ತಾಯಿಯ ಹೃದಯದ ನೋವು ವರ್ಣಿತವಾಗಿದೆ. 'ಸೋದರರು' ಎಂಬುದು ಗಿಬ್ಸನ್ ಕವಿಯ 'ಬ್ರದರ್ಸ್' ಕವನದ ಆವೇಶದಿಂದ ಬಂದುದಾಗಿ ಕಥೆಯಲ್ಲಿ ಯುರೋಪ್ಯ ಜೀವನದ ಸ್ಪರ್ಶವೇ ಎದ್ದು ಕಾಣುತ್ತದೆ. 'ಹುಚ್ಚನ ಹಂಬಲಿ'ನಲ್ಲಿ ಕತೆಗಾರರು ವಿಧಿಯೊದಗಿಸಿದ ವಿಷಮ ಜೀವನಕ್ಕೆ ಅಂತ್ಯದಲ್ಲಿ ಸಮಾಧಾನದ ಸರದಿಯನ್ನು ಕೊಟ್ಟಿದ್ದಾರೆ. ಗಂಡನು ಕೈಬಿಟ್ಟುಹೋದ ಪತ್ನಿಗಾಗಿಯೂ ಹೆಂಡತಿಯು ಅಗಲಿಹೋದ ತನ್ನ ಅಕ್ಕನಿಗಾಗಿಯೂ ಪರಿಕಾಲದಲ್ಲಿ ವ್ಯಸನಪಡುವರು. ಅವಳ 'ನೆನಪಿ'ನಲ್ಲಿದೆ ಎಳೆಯ ತಾರುಣ್ಯದ ಒಬ್ಬಕೆ ಯುವತಿಯರ ಹುಚ್ಚು ಪ್ರಣಯವನ್ನು 'ಮೂಕಪ್ರೇಮ'ವು ತಿಳಿಸಿದೆ. ದಂಪತಿಗಳ ನಿಷ್ಕಲಂಕ ಪ್ರೇಮವನ್ನು 'ಪ್ರೇಮಪರೀಕ್ಷೆ'ಯು ಚಿತ್ರಿಸಿದೆ. 'ಕಳ್ಳರಂಗ' ಎಂಬುದು ಒಬ್ಬ ಜನರು ಹೇಗೆ ಸಮಾಜದಲ್ಲಿ ಕಳ್ಳತನಕ್ಕೆ ತಳ್ಳಲ್ಪಡುತ್ತಾರೆಂಬುದನ್ನು ತಿಳಿಸುತ್ತದೆ. 'ಸೋಲಿಯ ಗೆಲುವು' ಎಂಬುದು ಒಂದು ಪ್ರಣಯದ ರುದ್ರಜೀವನವನ್ನು ಚಿತ್ರಿಸುವ ಕಥೆ. ಇಲ್ಲಿ ಕಥೆಗಾರಿಕೆಗೆ ಒಪ್ಪುವಂತಿದೆ 'ಕುಮುದೆ'ಯೆಂಬುದೇ ಕೊನೆಯದು. ಇದೂ ಪ್ರೇಮ ಜೀವನದ ಕಥೆ. ಪ್ರೇಮದ ಹಾದಿಯಲ್ಲಿ ಮುಳ್ಳು ಚುಚ್ಚಿತು. ಆದರೆ ಮುಗ್ಧರಿಸಿ ಓಳುವಾಗ ಕೈಗೆ ಹೂವಿನೆಸಳೊಂದು ತಾಗಿತು. ಈ ಕಥೆಯು ಇಂತು ಸ್ವಾರಸ್ಯವಾಗಿದೆ.

ಎಲ್ಲಾ ಕಥೆಗಳೂ ಭಾವನಾಮಯವಾಗಿವೆ. ಸಮಾಜದ ಚಿತ್ರವನ್ನು ಎತ್ತಿ ತೋರಿಸುವ ಯಥಾರ್ಥತೆಗಿಂತ ಬಗೆಯನ್ನು ಕೆರಳಿಸುವ ಭಾವನೆಗಳ ಕಲಾಶಕ್ತಿಯೇ ಕತೆಗಾರರ ವೈಶಿಷ್ಟ್ಯವೆನ್ನಬೇಕು. ಈ ಕತೆಗಾರರಿಂದ ಮುಂದಕ್ಕೆ ಉತ್ತಮೋತ್ತಮ ಭಾವನಾಪ್ರಧಾನವಾದ ಕಥೆಗಳನ್ನು ಹಾರೈಸುತ್ತೇವೆ. ಕತೆಗಾರರ ಚಿತ್ರಗಾರಿಕೆಯ ಕೌಶಲ್ಯವು ಪುಸ್ತಕದ ಬಹಿರಾವರಣದಲ್ಲಿ ವ್ಯಕ್ತವಾಗಿ ಪುಸ್ತಕಕ್ಕೆ ಅಂದವನ್ನು ಹೆಚ್ಚಿಸಿದೆ.

ಕಳೆದ ಏಳು ವರ್ಷಗಳಲ್ಲಿ ಸುಮಾರು ೫೦ರಷ್ಟು ಶ್ರೇಷ್ಠ ತರಗತಿಯ ಗ್ರಂಥಗಳನ್ನು ಹೊರಡಿಸಿದ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರ ಸಾಹಿತ್ಯ ಸೇವೆಯು ಅತ್ಯಂತ ಪ್ರಶಂಸಾರ್ಹವಾದುದು. ಕನ್ನಡಿಗರು ಗ್ರಂಥಮಾಲೆಗೆ ಸರ್ವತೋಮುಖವಾದ ಪ್ರೋತ್ಸಾಹವನ್ನು ಕೊಡುವುದು ಕರ್ತವ್ಯವಾಗಿದೆ.

—ಕಯ್ಯಾರ.



ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ, ಅಂದರೆ ಗುಣಪಡಿಸುವ ಆಶೆಯಿಂದ ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ, ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಕೌಳದತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು, ಸಾವಕಾಶವಾಗಿ ಶಕ್ತಿಯು ತುಂಬಿಬಂದು ಫುಪ್ಫುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೪ ಔ, ೮ ಔ, ಮತ್ತು ೧೬ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ ೧-೭-೦, ೨-೧೨-೦ ಮತ್ತು ೫-೮-೦ಗಳಿಗೆ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ಪನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.



ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರಿ

ವಿಜ್ಞಾನಯುಗ

ಸುಗಂಧವೂ ದೇಹಾರೋಗ್ಯವೂ

ದೇಹಾರೋಗ್ಯಕ್ಕೂ ವಾಸನೆಗೂ ಬಹಳ ಸಮೀಪ ಸಂಬಂಧವಿರುತ್ತದೆ. ಸುಗಂಧದಿಂದ ದೇಹಾರೋಗ್ಯವೂ ಬೆಳೆಯುವದು. ದುರ್ಗಂಧದಿಂದ ದೇಹಾರೋಗ್ಯವು ಕೆಡುವದು. ಸುಗಂಧದಲ್ಲಿ ಅತ್ತರು, ಎಣ್ಣೆ, ಹೂವು ಮೊದಲಾದವು ಸೇರಿವೆ. ದುರ್ಗಂಧದಲ್ಲಿ ಕೊಳೆ, ಕಶ್ಮಲ, ಮಲ, ಮೂತ್ರ ಮೊದಲಾದವು ಸೇರುತ್ತವೆ. ವಾಸನೆಯ ನಿರ್ಣಯವು ಮೂಗಿನ ಮೂಲಕ ಆಗುತ್ತದೆ. ಸುಗಂಧದಿಂದ ಎಷ್ಟು ಲಾಭವಿದೆಯೋ ದುರ್ಗಂಧದಿಂದ ಅಷ್ಟೇ ಹಾನಿ ಇದೆ.

ಪೂರ್ವಕಾಲದಲ್ಲಿ

ಬಹು ಪೂರ್ವಕಾಲದಿಂದಲೂ ಜನರು ಗಂಧ ವಿಜ್ಞಾನವನ್ನು ತಿಳಿದಿದ್ದರೆಂದು ಗೊತ್ತಾಗುತ್ತದೆ. ಆಯುರ್ವೇದದಲ್ಲಿ ಗಂಧ ಮಹತ್ವವನ್ನು ಬಹಳವಾಗಿ ವರ್ಣಿಸಿದ್ದಾರೆ. ಆದುದರಿಂದಲೇ ಭಜನೆ ಉತ್ಸವ ವಿವಾಹ ಉಪನಯನ ಇತ್ಯಾದಿ ಮಂಗಲೋತ್ಸವಗಳು ನಡೆಯುವಾಗ ಹಿಂದುಗಳು ಗಂಧ, ಧೂಪ, ಪುಷ್ಪ, ಯಾಲಕ್ಕಿ ಇತ್ಯಾದಿ ಅನೇಕ ಪ್ರಕಾರಗಳ ಸುಗಂಧ ದ್ರವ್ಯಗಳನ್ನು ಉಪಯೋಗಿಸುವ ಪರಿಪಾಟಿಯು ಅನೇಕ ವರ್ಷಗಳಿಂದ ನಡೆದುಬಂದಿದೆ. ಯಜ್ಞ ಯಾಗಾದಿಗಳಲ್ಲಿ ಬಹಳ ಸುಗಂಧ ದ್ರವ್ಯಗಳನ್ನೇ ಉಪಯೋಗಿಸುತ್ತಿದ್ದರು. ಪ್ರಾಚೀನ ಸಭ್ಯತೆಯ ರಂಗಭೂಮಿಗಳಾದ ರೋಮ, ಗ್ರೀಸ ರಾಜ್ಯಗಳಲ್ಲಿಯೂ ಜನರು ಸುಗಂಧದ ಮಹತ್ವವನ್ನು ತಿಳಿದಿದ್ದರು. ಸುಗಂಧದ ಪ್ರಭಾವವು ಮಾನಸಿಕ ಮತ್ತು ದೇಹಾರೋಗ್ಯದ ಮೇಲೆ ಬಹು ಚೆನ್ನಾಗಿ ಬೀಳುವದೆಂದು ಅವರು ಹೇಳಿದ್ದಾರೆ.

ಆಧುನಿಕ ಪ್ರಯೋಗ

ಸುಮಾರು ೩೦ ವರ್ಷಗಳ ಹಿಂದೆ ಪ್ರೊಫೆಸರ ಗುಪ್ತಾಲ್ ನೇಶರ್ ಎಂಬವರು ಸುಗಂಧ ಮಹತ್ವದ ಕುರಿತು ಕೆಲವು ಪ್ರಯೋಗಗಳನ್ನು ಮಾಡಿದ್ದರು. ಅವರೂ ಸುಗಂಧದಿಂದ ದೇಹಾರೋಗ್ಯವು ಉತ್ತಮಗೊಳ್ಳುವದು ಎಂಬ ನಿರ್ಧಾರಕ್ಕೆ ಬಂದಿದ್ದರು. 'ಸುಗಂಧದಿಂದ ಕಣ್ಣು, ಮೂಗು, ಕಿವಿ, ಮೆದುಳು, ಮತ್ತು ಪಾಚನ ಕ್ರಿಯೆಯ ಸಂಬಂಧವುಳ್ಳ ಅವಯವಗಳ ಮೇಲೆ ಸ್ವಾಸ್ಥ್ಯಕರ ಪ್ರಭಾವ ಬೀಳುವದೆಂದು ಹೇಳಿದ್ದಾರೆ. ಕೆಲವು ಸುಗಂಧ ದ್ರವ್ಯಗಳಿಗೆ ಕೀಟಾಣುಗಳನ್ನು ನಾಶಮಾಡುವ ಸಾಮರ್ಥ್ಯವಿದೆ. ವಾಂತಿಭೇದಿ, ಅತಿಸಾರ, ಪ್ಲೇಗು, ಸನ್ನಿಪಾತ ಮೊದಲಾದವುಗಳ ಅಣುಗಳು ಸುಗಂಧ ದ್ರವ್ಯಗಳಿಂದ ಸುಲಭದಲ್ಲಿ ನಾಶವಾಗುತ್ತವೆ. ಸುಗಂಧದಿಂದ ಮಸ್ತಿಷ್ಕದೊಳಗಿನ ಜ್ಞಾನ ತಂತುಗಳು ಕೆರಳಲ್ಪಟ್ಟು, ಅದರಿಂದ ರಕ್ತ ಚಲನೆಯು ತೀವ್ರವಾಗುತ್ತದೆ. ಸುಗಂಧದ್ರವ್ಯಗಳನ್ನು ಮೂಸುವದರಿಂದ ಒಂದು ಪ್ರಕಾರದ ಉಲ್ಲಾಸವು ಆಗಲು ಇದೇ ಕಾರಣವಾಗಿದೆ. ಸುಗಂಧವು ದಣುವಾರಿಸುವಂತಹದ್ದು ಆಗಿದೆ.

ಸುಗಂಧದಿಂದ ರೋಗಗಳು ಗುಣವಾಗುತ್ತವೆ

ಲಿವೆಂಡರ್ ವಾಟರ್, ಗುಲಾಬದ ನೀರು, ಕಸ್ತೂರಿ, ಗುಲಾಬದ ಅತ್ತರು ಗಳನ್ನು ಲೇಪಿಸುವದರಿಂದ—ತಲೆನೋವು ನಿಲ್ಲುತ್ತದೆ, ಮನಸ್ಸಿನ ಆಯಾಸದ ಪರಿಹಾರವಾಗುತ್ತದೆ. ಗಂಧದೆಣ್ಣೆಯು, ಜ್ವರ ಬಂದಾಗಿನ ನರಗಳ ಕೆರಳಿಕೆಗೆ ಉತ್ತಮವಾಗಿದೆ. ಕ್ಷಯಿಲೆ ಮಕ್ಕಳಿಗೆ ಸುಗಂಧ ಪುಷ್ಪಗಳನ್ನು ಮೂಸಲಿಕ್ಕೆ ಕೊಡುವದರಿಂದ ಬಹಳ ಪ್ರಯೋಜನವಿದೆ. ಆದುದರಿಂದಲೇ ಪಾಠಶಾಲೆ, ಆಸ್ಪತ್ರೆ ಪುಸ್ತಿಗಳ ಮೊದಲಾದವುಗಳ ಮುಂದೆ ಹೂಗಿಡಗಳನ್ನು ನಡುವರು. ಆಯಾಸ, ಚಿಂತೆ, ಶೋಕ ಮೊದಲಾದವು ಸುಗಂಧವನ್ನು ಮೂಸುವದರಿಂದ ದೂರವಾಗುವವು. ಆದರೆ ಅದಕ್ಕಾಗಿ ಅತ್ತರ ಎಣ್ಣೆಗಳ ಲೇಪನಕ್ಕಿಂತಲೂ ಹೂ ತೋಟಗಳಲ್ಲಿ ಸಂಚಾರಮಾಡುವದು ಒಳ್ಳೇ ಫಲವನ್ನು ಕೊಡುತ್ತದೆ. ನಮ್ಮ ಆರೋಗ್ಯದ ಮೇಲೆ ಸುಗಂಧದ ಸತ್ಪರಿಣಾಮ ಎಷ್ಟು ... ಆಗುತ್ತ ಹೋಗುವದೆಂದರೆ ಅದು ... ತಿಳಿಯುವದೇ ಇಲ್ಲ.

ಡಾಕ್ಟರ ಟೆಂಪಲರ ಹೇಳಿಕೆ

... ವಿಶ್ವವಿದ್ಯಾಲಯದ ಸುವಿಖ್ಯಾತ ವೈಜ್ಞಾನಿಕರಾದ ಡಾ. ಟೆಂಪಲ ಎಂಬವರ ಇತ್ತೀಚಿನ ... ಶೋಧನೆಗಳನ್ನು ನಡೆಸಿ ಗುಲಾಬಿ ... ಮೊದಲಾದವುಗಳನ್ನು ಮೂಸುವದರಿಂದ ನಮ್ಮ ಪ್ರಾಣೇಂದ್ರಿಯ ಶಕ್ತಿವೃದ್ಧಿಯಾಗುತ್ತದೆಂದು ಹೇಳಿದ್ದಾರೆ. ಇವುಗಳ ಅಧಿಕ ಸೇವನೆಯು ಮನುಷ್ಯನನ್ನು ಮತ್ತೆನನ್ನಾಗಿ ಮಾಡುತ್ತದೆ. ಅವರು ಹೇಳುವ ಪ್ರಕಾರ ಮಲಬದ್ಧ ಮತ್ತು ಅತಿಸಾರಕ್ಕೆ ಸುಗಂಧವು ದಿವ್ಯ ಔಷಧಿಯಾಗಿರುವುದಂತೆ. ಕಾಯಿಲೆಯಿಂದ ಅಶಕ್ತರಾದವರು ಸುಗಂಧ ಸೇವನೆ ಮಾಡುವುದರಿಂದ ಬಹು ಬೇಗ ತಮ್ಮ ಕಳಕೊಂಡ ಶಕ್ತಿಯನ್ನು ಪುನಃ ಸಂಪಾದಿಸುವರು.

ಎಚ್ಚರಿಕೆ

ಆದರೆ ಇಲ್ಲೊಂದು ಎಚ್ಚರಿಕೆಯನ್ನು ಕೊಡಲಿಕ್ಕೆ ಇಚ್ಛಿಸುತ್ತೇವೆ. ಸುಗಂಧ ದ್ರವ್ಯಗಳನ್ನು ಹದಮೀರಿ ಉಪಯೋಗಿಸುವುದರಿಂದ ಮನುಷ್ಯನು ... ನಾಗುತ್ತಾನೆ. ... ಕಾಮವಾಸನೆಯು ತೀವ್ರವಾಗುತ್ತದೆ. ವೇಶ್ಯೆಯರೂ ... ಸುಗಂಧ ದ್ರವ್ಯಗಳನ್ನು ... ಉಪಯೋಗಿಸಿ ... ತಮ್ಮ ಕಡೆಗೆ ಆಕರ್ಷಿಸುವರು. ರಾಜ ಮಹಾರಾಜರುಗಳ ... ಸ್ತ್ರೀಯರೂ ಸುಗಂಧ ದ್ರವ್ಯಗಳನ್ನು ಬಹಳ ಉಪಯೋಗಿಸುತ್ತಿದ್ದರು—ಅವರು ... ತಮ್ಮ ... ಗಳನ್ನಾಗಿ ಮಾಡಲಿಚ್ಛಿಸುತ್ತಿದ್ದರು. ... ಸುಗಂಧ ದ್ರವ್ಯಗಳು ... ಸುಗಂಧವು ಹದವಾಗಿ ಉಪಯೋಗಿಸಿದರೆ ಅಮೃತದಂತೆ ಉಪಯುಕ್ತವು ... ಹದಕೆಟ್ಟು ಉಪಯೋಗಿಸಿದರೆ ಅದು ವಿಷದಂತೆ ಹಾನಿಕರವಾಗುವುದು.

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

kinds of banking business transacted

ಇಂದಿನ ಮಕ್ಕಳೇ ಮುಂದಿನ ಜನಾಂಗ'
ಮುಂದಿನ ಜನಾಂಗಕ್ಕೆ ವಿಜ್ಞಾನವೇ ನಿಧಿ !

ಆರೋಗ್ಯವಿಜ್ಞಾನ

6ನೇ 7ನೇ 8ನೇ ತರಗತಿಗಳಿಗೆ

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಶ್ರೀ ಎಸ್ ರಾಮಕೃಷ್ಣಾಚಾರ್ ಬಿ ಎ ಎಲ್ ಟಿ

ಇವರಿಂದ ವಿರಚಿತವಾದುದು.

ಹಳ್ಳಿಯ ಶಾಲೆಗಳಲ್ಲೂ ಮಾಡಿತೋರಿಸಲು ಸುಲಭವಾಗುವಂತಹ

ಪ್ರಯೋಗಗಳನ್ನು ಒಳಗೊಂಡಿದೆ

ಸಚಿತ್ರವಾದ ವಿವರಣೆಗಳನ್ನೂ ಕೊಡಲಾಗಿದೆ

ಬಡ ವಿದ್ಯಾರ್ಥಿಗಳು ಪಡಕೊಳ್ಳಲು ಸಾಧ್ಯವಾಗುವಂತೆ ಕ್ರಯವು

ಅತ್ಯಂತ ಕಡಿಮೆಯಾಗಿರಿಸಿದೆ!

ಪ್ರತಿಗಳು ಮಾರಾಟಕ್ಕೆ ಸಿದ್ಧವಾಗಿವೆ'

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.'

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS.

The Combined Booking Agency,
MANGALORE

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಆಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು, ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸರಿಯಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು, ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಕೂಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು—ಡಾ ವೈದ್ಯ ಎಲ್. ಸಿ. ಪಿ ಎಸ್. ಕೆಳವಾಗಿಸಿವು, ಈಹೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ ೪ ೦—೦ ವಿ ಪಿ ಅಣೆ ೮

ವಿಳಾಸ. ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S M C

ಸಾವುಕಾರ ಶ್ರೀನಿವಾಸರಂಗಪ್ಪ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ.

ಸಾವಕಾರ ಮಹಾಲ್, ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡ ಮುಡಿಗೆ	2—0—0	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡ ,,	5—0—0	5—0—0
,, ದುಯಂ ,, ,,	4—12—0	4—14—0
,, ಅವ್ವಲ್ ಸುಗ್ಗಿ ,,	4—12—0	
,, ದುಯಂ ,, ,,	4—8—0	4—10—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	52—8—0	
,, ದಿಲ್‌ಪಸಂದಿ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—14—0	8—15—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—0—0	4—4—0
ಗೇರುಬೀಜ ಮುಡಿಗೆ	8—8—0	8—10—0
ಕಬ್ಬಿನ ಬೆಲ್ಲ ಖಂಡಿಗೆ	35—0—0	43—12—0
ಒಳ್ಳೇಮೆಣಸು ಹಂಡ್ರವೇಟಿಗೆ	14—0—0	14—8—0

Date 14-6-1940 ವಾರ್ಷಿಕ ಚಂದಾ ರೂ 2-0-0 ಅಂಚೆವೆಚ್ಚ ಸೇರಿ ರೂ 2-13-0 Regd. No. M3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 14-6-1940 [ಸಂಚಿಕೆ 24

The Bombay Life Assurance Company, Ltd.

(Estd. 1908)

COMPARE

Your Life Assurance with any other property you possess

What is its Guaranteed Value

If you live-today-a few years more when you are old?
If you die-to your family and dependants?

REMEMBER THAT

If you live, Life Insurance takes the place of your professional income during your old age

If you die, it provides your family with enough income for their maintenance and the education of your children

BOMBAY LIFE" offers all that is best in LIFE ASSURANCE

1938 RECORD

Completed Business	Rs	14491000
Life Assurance Fund	Rs	1,17 69 748
Total Assets	Rs	1,31,28,998

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

Bombay Life Building,

Sri Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES

Puthiyara, Calicut
Car Street, Mangalore.
Visweswarapuram Circle, Bangalore City
Post Box No. 37, Mount Road, Madras
Gautam Nivas, Charni Road, Girgaum, Bombay No 4.
Central Station Road, Trivandrum.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಗಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



ಸಮುದ್ರದಲ್ಲೇ ವೈರಿ ವಿಮಾನಕ್ಕೆ ಹಾರಿಬಿಟ್ಟ ಬ್ರಿಟಿಷ್ ವಿಮಾನ

KANNADA ILLUSTRATED WEEKLY

ನೋಟುಗಳ ಚಲಾವಣೆ!
ಸ್ಥಾನಮಾನವು ಭದ್ರವಾಗಿದೆ
ಭಯಕ್ಕೆ ಕಾರಣವಿಲ್ಲ

ನೋಟುಗಳ ವಿಷಯದಲ್ಲಿ ಜನರು ಸ್ವಲ್ಪವಟ್ಟು ರೂಪಾಯಿ ನಾಣ್ಯಗಳನ್ನೇ ಕೇಳಲು ಮತ್ತು ಬ್ಯಾಂಕುಗಳಲ್ಲಿದ್ದ ಠೇವಣಿ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳಲು ಯೋಗ್ಯ ಕಾರಣಗಳಿಲ್ಲವೆಂದೂ, ಹಿಲ್ಲದ' ಅಧಿಕಾರೀ ಕ್ಷೇತ್ರದಲ್ಲಿ ಅಭಿಪ್ರಾಯಪಡಲಾಗಿದೆ, ಹಿಂದುಸ್ಥಾನ ಸರಕಾರದ ನೋಟಿನ ಸ್ಥಾನಮಾನವು ಭದ್ರವಾಗಿಯೇ ಇರುವುದರಿಂದ ಭಯಪಡಲು ಅವಕಾಶವೇ ಇಲ್ಲ. ಅಮೇರಿಕವನ್ನು ಬಿಟ್ಟರೆ ಉಳಿದ ಯಾವ ರಾಷ್ಟ್ರದ ನೋಟಿನ ಸ್ಥಿತಿಯೂ ಇಷ್ಟು ಭದ್ರವಾಗಿಲ್ಲ.

ರಿಸರ್ವ್ ಬೇಂಕಿನವರು ಪ್ರಸಿದ್ಧಿಸಿದ ಮೇರೆಗೆ ಈಗ ರೂ. ೨೫೦ ಕೋಟಿಗಳ ನೋಟು ಚಲಾವಣೆಯಿದೆ. ಈ ಪ್ರತಿಯೊಂದು ನೋಟನ್ನೂ ನಾಣ್ಯಕ್ಕೆ ವಿನಿಮಯ ಮಾಡುವಷ್ಟು 'ರಿಸರ್ವ್ ನಾಣ್ಯ' ವಿದೆ. ರಿಸರ್ವ್ ಬೇಂಕೊಂದರಲ್ಲೇ ೪೪ ಕೋಟಿ ರೂಪಾಯಿಗಳ ಚಿನ್ನ ದಾಸ್ತಾನಿದೆ. ಈಗಿನ ಬೆಲೆಯ ಮೇರೆಗೆ ಅದರ ಇಮ್ಮಡಿ ಬೆಲೆಯು ಬರಬಹುದು ಇನ್ನು ೧೨೦ ಕೋಟಿ ಸ್ಟರ್ಲಿಂಗ್‌ಗಳ ಸೆಕ್ಯೂರಿಟಿ ರಿಸರ್ವ್ ಧನವಿದೆ ರಿಸರ್ವ್-ಬೇಂಕಿನ ಕಾಯಿದೆಯಲ್ಲಿ ನಮೂದಿಸಿದಕ್ಕಿಂತಲೂ ಹೆಚ್ಚಿನ ಭದ್ರತೆಯಿದೆ. ಹೊರಗೆ ಕೊಟ್ಟ ಚಿಂದಿಗೆ ಹಣದ ೨ನೇ ೩ ಅಂಶ ಎಂದರೆ ಶೇಕಡ ೪೦ ರಷ್ಟಾದರೂ ಚಿನ್ನವಿರಬೇಕೆಂದು ಕಾಯಿದೆಯಲ್ಲಿದ್ದೆ. ಈಗ "ಹೊರಗಿರುವ ರಿಸರ್ವ್" ರೂಪದಲ್ಲಿ ಶೇಕಡ ೬೪ ರಷ್ಟು ಮೌಲ್ಯದ ಚಿನ್ನವಿದೆ ನೋಟಿನ ವಿನಿಮಯದಲ್ಲಿ ಏನಾದರೂ ಅಬಲತೆ ತೋರಿ ಬಂದರೆ ಅದನ್ನು ಪರಿಹರಿಸಲು ಇದ್ದು ಸಾಕು. ಆದರೆ ಅಂಥಾ ಅಬಲತೆಯು ಗಂಡಾಂತರಕ್ಕೆ ಪ್ರಕೃತ ಅವಕಾಶವೇ ಇಲ್ಲ.

"ಹೊರಗಿರುವ ಈ ರಿಸರ್ವ್" ಧನವನ್ನು ಬಿಟ್ಟು, ರಿಸರ್ವ್ ಬೇಂಕಿನಲ್ಲಿ ೫೦ ಕೋಟಿ ರೂಪಾಯಿ ಮೌಲ್ಯದ ನಾಣ್ಯಗಳಿವೆ. ೪೦ ಕೋಟಿ ರೂಪಾಯಿಗಳ ಸೆಕ್ಯೂರಿಟಿಗಳು ಪ್ರತ್ಯೇಕವಿದೆ ಕಾಯಿದೆಯಲ್ಲಿ ನಮೂದಿಸಿದ ಆದರ್ಶಸ್ಥಾನಮಾನ ಇದು ಇತ್ತೀಚೆಗೆ ಬೇಂಕಿನಲ್ಲಿ ರೂಪಾಯಿ ನಾಣ್ಯಗಳು ಬೇಕಾದ್ದುದಕ್ಕಿಂತ ಹೆಚ್ಚಿದ್ದುದರಿಂದ ೫ ಕೋಟಿ ರೂಪಾಯಿಗಳನ್ನು ಪ್ರತಿವರ್ಷವೂ ಸರಕಾರಕ್ಕೆ ಹಿಂದೆ ಕೊಡುತ್ತಿತ್ತು ಈ ವರುಷ ಇದರ ಆವಶ್ಯಕತೆಯಿಲ್ಲ.

ಪ್ರತಿಯೊಂದು ನೋಟಿನಷ್ಟೇ ಮೌಲ್ಯದ ಚಿನ್ನ, ಸ್ಟರ್ಲಿಂಗ್, ಬೆಳ್ಳಿರೂಪಾಯಿ, ಇದೆ. ಆದುದರಿಂದ ನೋಟುಗಳ ಸ್ಥಾನಮಾನದ ಭದ್ರತೆಯು ಕಡೆ ಸಂಶಯಪಡಲು ಕಾರಣವೇ ಇಲ್ಲ.

ರೂಪಾಯಿ ನಾಣ್ಯದ 'ಬೇಡಿಕೆಯನ್ನು ಪೂರೈಸುವುದು ಸರಕಾರದ ಧೋರಣೆಗಳಾಗಿದೆ. ಆದರೆ ಕಾರಣವಿಲ್ಲದೆ ಈ ಲೋಹ ನಾಣ್ಯಗಳನ್ನು ಕೂಡಿಹಾಕುವ ಆವಶ್ಯಕತೆಯಿಲ್ಲ.'



ನಮ್ಮ ಸೂಚನೆ

ಸರಕಾರದವರು ನೋಟುಗಳ ಭದ್ರತೆಯ ವಿಷಯವಾಗಿ ಸಮಾಧಾನಕರವಾದ, ಮೇಲೆ ನಮೂದಿಸಿದ ಉತ್ತರವನ್ನು ಕೊಟ್ಟಿದ್ದಾರೆ. ಯುದ್ಧದ ದೆಸೆಯಿಂದ ಜನರು ಸ್ವಲ್ಪಮಟ್ಟಿಗೆ ಸಂಶಯಪಟ್ಟುದೇನೋ ಸ್ವಾಭಾವಿಕವೇ! ಸರಕಾರದ ಅಧಿಕಾರಿಗಳು ಹೇಳಿಕೆಯನ್ನು ಕೊಟ್ಟು ಅಂಥಾ ಸಂದೇಹಕ್ಕೆ ಆಸ್ಪದವಿಲ್ಲವೆಂದು ಹೇಳಿರುವುದು ಸಮಯೋಚಿತವಾಗಿದೆ ಸರಕಾರದ ಈ ಭರವಸೆಯು ಕಡೆ ಎಲ್ಲರೂ ಗಮನಕೊಡಬೇಕು, ಮತ್ತು ನೋಟಿನ ಸ್ಥಾನಮಾನದ ಬಗೆ ಒಂದು ವೇಳೆ ನಿರಕ್ಷರತೆಯಿರುವ ಅಜ್ಞರಲ್ಲಿ ಸಂಶಯವಿದ್ದರೆ, ಅವರಿಗೆ ಸತ್ಯಸ್ಥಿತಿಯನ್ನು ತಿಳಿಸಿ, ಗಾಬರಿಪಡದಂತೆ ಸಮಾಧಾನ ಹೇಳಬೇಕು

(ವಿಮಾ ವಾಣಿಜ್ಯ)

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

21-6-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೧-೬-೧೯೪೦

ಯುದ್ಧ ಕಾರ್ಯಾಚರಣೆಯಲ್ಲಿ ನಾವು ಭಾಗವಹಿಸುವುದಿಲ್ಲ

ನೆಹರುಗಳ ಹೇಳಿಕೆ

ಸಿವಿಲ್ ಗಾರ್ಡ್‌ಗಳಿಗೂ ಕೂಡ ಸೇರುವ ಹಾಗಿಲ್ಲ

"ಅಂತರ್ರಾಷ್ಟ್ರೀಯ ಪರಿಸ್ಥಿತಿಯು ನಿಸ್ಸಂಶಯವಾಗಿಯೂ ವಿಷಮವಾದುದಾಗಿದೆ. ಆದರೆ ಅದರಿಂದ ಭಾರತದ ಪರಿಸ್ಥಿತಿಯು ಏನೂ ಬದಲಾವಣೆ ಹೊಂದುವುದಿಲ್ಲ. ಭಾರತದ ಪ್ರಶ್ನೆ ಬಗ್ಗೆ ಬ್ರಿಟನ್ನಿನ ಮನೋಭಾವವು ಯಾವ ರೀತಿ ಇರುವುದೋ ಅದರಂತೆ ಭಾರತದ ಪರಿಸ್ಥಿತಿಯೂ ಕೂಡ ಇರುವುದು" ಎಂಬುದಾಗಿ ಪಂಡಿತ ಜವಾಹಿರಲಾಲ್ ನೆಹರುಗಳು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

"ಫ್ರಾನ್ಸ್ ಮತ್ತು ಬ್ರಿಟನ್ನಿನ ಜನರು ಇಂದು ಕಡು ಕಷ್ಟದಲ್ಲಿ ಸಿಕ್ಕಿದ್ದಾರೆ. ಈಗ ಈ ಕಷ್ಟ ಸ್ಥಿತಿಯಲ್ಲಿ ನಾನು ಅವರಿಗೆ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ.

"ಇಟಲಿಯು ಇಷ್ಟು ಕಾಲವೂ ಬೇಲಿಯ ಗೋಡೆಯ ಮೇಲೆ ದೀನದಂತಿದ್ದು ಇಂದು ಯುದ್ಧಕ್ಕೆ ದುಮುಕಿದೆ. ಅದರ ಈ ವರ್ತನೆಗಾಗಿ ನನ್ನ ಸಹಾನುಭೂತಿ ಎಳ್ಳಷ್ಟೂ ಇಲ್ಲ. ಸಮಯವನ್ನು ಕಾದುಕೊಂಡಿದ್ದು ವರ್ತಿಸುವುದಕ್ಕೆ ಇಟಲಿಯ ವರ್ತನೆಗಿಂತ ಇನ್ನೊಂದು ನಿದರ್ಶನ ಬೇಕಿಲ್ಲ.

"ಯೂರೋಪಿನ ಪರಿಸ್ಥಿತಿಯು ನಿಸ್ಸಂಶಯವಾಗಿಯೂ ವಿಷಮವಾಗತೊಡಗಿದೆ. ಆದರೆ ಅದರಿಂದ ಭಾರತದ ಪರಿಸ್ಥಿತಿ ಅದರಲ್ಲಿಯೂ ಕಾಂಗ್ರೆಸಿನ ಸ್ಥಿತಿಯು ಏತಕ್ಕಾಗಿ ಬದಲಾಗಬೇಕೋ ನನಗೆ ಬೇರೆ ಗೊತ್ತಿಲ್ಲ. ಹಿಂದೆಲ್ಲಾ ಹೇಳಿದಂತೆ ಬ್ರಿಟಿಷ್ ಸರಕಾರದ ಕಡೆಗೆ ಕಾಂಗ್ರೆಸಿನ ಮನೋಭಾವವು ಯುದ್ಧ ಪರಿಸ್ಥಿತಿಯನ್ನು ಅವಲಂಬಿಸುವುದಿಲ್ಲ. ಭಾರತದ ಸಮಸ್ಯೆಗೆ ಬ್ರಿಟಿಷ್ ಸರಕಾರದ ಮನೋಭಾವವೇನಿದೆಯೋ ಅದನ್ನೇ ಅವಲಂಬಿಸುವದು.

"ಆದ್ದರಿಂದ ನಾವು ರಾಮಘಡ ಕಾಂಗ್ರೆಸ್ ಅಧಿವೇಶನದಲ್ಲಿ ತೀರ್ಮಾನಿಸಿದ ಸ್ಥಾನದಲ್ಲಿಯೇ ಇಂದಿಗೂ ಕೂಡ ಇದ್ದೇವೆ. ಈ ವಿಷಯವಾಗಿ ಮುಂದಿನ ವರ್ಕಿಂಗ್ ಕಮಿಟಿ ಸಭೆಯು ಸ್ಪಷ್ಟವಾದಂತಹ ಮಾರ್ಗದರ್ಶನವನ್ನೀಯುವದು.

"ಆದರೆ ಒಂದು ದುರದೃಷ್ಟದ ಸಂಗತಿ ಈಗಾಗಲೇ ಅನೇಕ ಹೇಳಿಕೆಗಳು ಹೊರಟಿವೆ. ಈ ಹೇಳಿಕೆಗಳೆಲ್ಲಾ ಜನರ ಮನಸ್ಸಿನಲ್ಲಿ ತೊಡಕನ್ನುಂಟುಮಾಡುವವು. ನಾನು ತಿಳಿದಿರುವಷ್ಟು ಮಟ್ಟಿಗೆ ಕಾಂಗ್ರೆಸಿನ ಸ್ಥಿತಿಯು ಸ್ವಲ್ಪವೂ ಬದಲಾಯಿಸಿಲ್ಲ. ಈ ಪರಿಸ್ಥಿತಿಯಲ್ಲಿರುವಾಗ ವೈಸರಾಯರೂ ಕಮ್ಯಾಂಡರ್ ಇನ್ ಚೀಫರೂ ಇಚೆಗೆ ಹೊರಡಿಸಿರುವ ಹೇಳಿಕೆ ಪ್ರಕಾರ ಕಾಂಗ್ರೆಸು ಯುದ್ಧ ಕಾರ್ಯಾಚರಣೆಯಲ್ಲಿ ಸೇರುವುದಕ್ಕಾಗುವುದಿಲ್ಲ. ಅಥವಾ ಈಗ ಸೂಚಿತವಾಗಿರುವ ಸಿವಿಲ್ ಗಾರ್ಡ್‌ಗಳಿಗೂ ಕೂಡ ನಾವು ಸೇರುವ ಹಾಗಿಲ್ಲ."

ಭಾರತದಲ್ಲಿ ಎರಡು ಪಕ್ಷಗಳು

ಕಾಂಗ್ರೆಸು ಒಂದು ಇತರರೆಲ್ಲಾ ಒಂದು

ಗಾಂಧಿಜಿಯವರ ಲೇಖನ

'ಎರಡೇ ಪಕ್ಷಗಳ' ಎಂಬ ಶಿರೋನಾಮೆಯಲ್ಲಿ ಗಾಂಧಿಜಿಯವರ ಹರಿಜನದಲ್ಲಿ ಲೇಖನ ಬರೆಯುತ್ತಾ 'ಇಂದು ಭಾರತ ದೇಶದಲ್ಲಿ ಎರಡೇ ಪಕ್ಷಗಳಿವೆ. ಒಂದು ಕಾಂಗ್ರೆಸ್ ಮತ್ತು ಕಾಂಗ್ರೆಸಿಗೆ ಸಂಬಂಧಿಸಿದವರು. ಇನ್ನೊಂದು ಕಾಂಗ್ರೆಸಿನ ಪರವಾಗಿಲ್ಲದ ಎಲ್ಲಾ ಪಕ್ಷಗಳು. ಈ ಎರಡು ಪಕ್ಷಗಳಲ್ಲಿ ಒಂದು ತನ್ನ ಉದ್ದೇಶವನ್ನು ಇನ್ನೊಂದಕ್ಕೆ ಧಾರೆಯೆರೆಯದ ಪಕ್ಷದಲ್ಲಿ ಈ ಎರಡು ಪಕ್ಷಗಳಲ್ಲಿಯೂ ಒಂದಕ್ಕೊಂದು ಒಪ್ಪಂದ ಸಾಧ್ಯವಿಲ್ಲ. ಈಗ ಇರುವ ಬಿಕ್ಕಟ್ಟು ಇದೇ. ಕಾಂಗ್ರೆಸ ಇತರರನ್ನು ಬದಲಾಯಿಸುವ ಉದ್ದೇಶದಲ್ಲಿಯೇ ತೊಡಗಿದೆ. ಇತರರ ಮನವೊಲಿಸಿ ಅವರಲ್ಲಿ ನಂಬಿಕೆಯನ್ನು ಹುಟ್ಟಿಸುವದು ಕಾಂಗ್ರೆಸಿನ ಕೆಲಸ. ಇದು ಸ್ವಲ್ಪ ನಿಧಾನದ ಕೆಲಸ. ಆದರೂ ಅದೇನೂ ಅಪ್ರಯೋಜಕವಾದುದಲ್ಲ" ಎಂದು ತಿಳಿಸಿದ್ದಾರೆ.

ಸ್ವಾತಂತ್ರ್ಯವು ಬಹುಮಾನವಾಗಿ ಸಿಗುವುದಿಲ್ಲ

ಎಮೆರಿಯವರ ಹೇಳಿಕೆ

ಭಾರತದ ವಿವಿಧಾಭಿಪ್ರಾಯಗಳ ಮುಖಂಡರುಗಳೊಡನೆ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಬರುವುದಕ್ಕಾಗಿಯೇ ನಾನು ನನ್ನ ಶಕ್ತಿಯ ಪ್ರತಿಯೊಂದು ಅಂಶವನ್ನೂ ಕೂಡ ವಿನಿಯೋಗಿಸುವೆನು. ಈ ವಿಷಯವನ್ನು ಭಾರತಕ್ಕೆ ತಿಳಿಸಬೇಕೆಂಬುದಾಗಿ ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟ್‌ರಾದ ಎಮೆರಿಯವರು ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ಪ್ರತಿನಿಧಿಗೆ ಇತ್ತ ಸಂದರ್ಶನದಲ್ಲಿ ತಿಳಿಸಿದರು.

ಭಾರತವು ಮಹಾ ನಿರ್ಣಯಗಳನ್ನು ಮಾಡಲು ಎಷ್ಟರಮಟ್ಟಿನ ಸಾಮರ್ಥ್ಯ ಹೊಂದಿದೆಯೋ ಅದರ ಮೇಲೆಯೇ ಅದು ಸ್ವಾತಂತ್ರ್ಯವೂ ಕೂಡ ಅವಲಂಬಿಸುವದು. ಹೋರಾಟದಲ್ಲಿ ಭಾರತದ ಮಿತ್ರರ ಮಹಿಮೆಯೇನೆ ಒಗ್ಗಿಸಿದ್ದ ಭಾರತದ ಸ್ವಾಭಾವಿಕ ಮುಖಂಡರು ನಮಗೆ ಬೇಕು. ನಮಗೆಲ್ಲರಿಗೂ ಸಮಸಮಾದ ಶತ್ರುಗಳಾಗಿರುವಂತಹವರ ಮೇಲೆ ನಾವೆಲ್ಲರೂ ಮಾಡಬೇಕಾಗಿರುವ ಈ ಪ್ರಯತ್ನದಲ್ಲಿ ಭಾರತವು ಸೂಕ್ತವಾದ ಸ್ಥಾನವನ್ನು ಪಡೆಯಬೇಕಾದುದರ ಮಹತ್ವವೇನಿದೆ ಎಂಬುದನ್ನೂ ಆ ಮುಖಂಡರು ಅರಿಯಬೇಕು.

ಸ್ವಾತಂತ್ರ್ಯವು ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ಹೊರಿಸುವಂತಹ ಬಹುಮಾನವಲ್ಲ. ಆಚರಣೆಗೆ ಬಂದಂತಹ ಸಂಬಂಧವನ್ನು ಜಾರಿಗೆ ತಂದ ಅದನ್ನು ಒಪ್ಪುವುದೇ ಡೊಮಿನಿಯನ್ ಸ್ವಾತಂತ್ರ್ಯವಾಗಿರುವುದು. ಯಾವುದೇ ರಾಷ್ಟ್ರವು ಸ್ವಾತಂತ್ರ್ಯವನ್ನು ಸಾಮರ್ಥ್ಯ ಹೊಂದಬೇಕಾದರೆ ಅದು ಮಹಾ ನಿರ್ಣಯಗಳನ್ನು ಮಾಡಲು ಎಷ್ಟು ಶಕ್ತವಾಗಿದೆ ಎಂಬುದರ ಮೇಲೆಯೇ ಅದು ಅವಲಂಬಿಸುವುದು. ಆ ಶಕ್ತಿಯನ್ನು ಇಂದು ಭಾರತದ ಮುಖಂಡರುಗಳು ತೋರಿಸಬೇಕಾಗಿದೆ.

ನನ್ನ ಹೃದಯವು ಪೂರ್ಣವಾಗಿಯೂ ಯಾವ ಭೇದವು ಇಲ್ಲದೆಯೂ ಒಮ್ಮತ ಹೊಂದಿದಲ್ಲಿ ರಾಜ್ಯಾಂಗದ ವಿವಿಧ ವಿವರಗಳಲ್ಲಿ ನಮ್ಮ ನಮ್ಮಲ್ಲಿರುವ ವ್ಯತ್ಯಾಸಗಳನ್ನೇನೂ ತೆಗೆದು ಹಾಕುವುದು ಕಷ್ಟವಾಗಲಾರದು ಎಂದು ಎಮೆರಿಯವರು ನುಡಿದರು.

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂವಿವರ

6ನೇ	7ನೇ	8ನೇ ತರಗತಿಗಳಿಗೆ
0—5—0	0—6—0	0—7—0

ನೂತನ ಪಾಠಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟುದು.

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಾಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಸ್ವದೇಶಾಭಿಮಾನಿ

ತಾರೀಕು 21-6-1940

ಮುಸ್ಲಿಮ್ ಲೀಗಿನ ಮನೋವೃತ್ತಿ

ಮುಸ್ಲಿಮ್ ಲೀಗಿನ ವರ್ಕಿಂಗ್ ಕಮಿಟಿಯು ಎರಡು ಸೂಚನೆಗಳನ್ನು ಮಂಜೂರು ಮಾಡಿತು. ಮೊದಲನೆಯದು ಹಿಂದೂದೇಶಕ್ಕೆ ಮುಂದಿನ ಸುಧಾರಣೆಗಳನ್ನು ಕೊಡಲು ಮೊದಲಾಗಿ ಹಿಂದೂ ಮುಸ್ಲಿಮರು ತಮ್ಮೊಳಗಣ ಜಗಳಗಳನ್ನು ರಾಜಿ ಮಾಡಿಕೊಳ್ಳಬೇಕೆಂಬುದು. ಇದನ್ನೇ ವೈಸರಾಯರು ಕೂಡ ಇಲ್ಲಿನ ಜನರ ಕೇಳಿಕೆಗೆ ಉತ್ತರವಾಗಿ ಕೊಟ್ಟಿರುವರು. ಈ ಮಧ್ಯದಲ್ಲಿ ಯೂರೋಪಿನಲ್ಲಿ ನಾಜಿಗಳ ಬಲಾತ್ಕಾರವು ವಿಶೇಷವಾಗಿ, ಅಲ್ಲಿನ ರಾಜಕೀಯ ಹಾಗೂ ಜನಜೀವನ ಸ್ಥಿತಿಯೇ ಭಯಂಕರ ರೂಪವನ್ನು ತಾಳಿದೆ. ಆದುದರಿಂದ ಸದ್ಯ ನಮ್ಮ ಸ್ವಾತಂತ್ರ್ಯವನ್ನು ಕೇಳುವ ಬದಲು ಯೂರೋಪಿಗೂ ನಮ್ಮ ಆಳರಸರ ಜನಾಂಗಕ್ಕೂ ನಾಜಿಯರಿಂದ ಬಂದ ತೊಂದರೆ ನಿವಾರಣೆಗೆ ತಕ್ಕ ಸಹಾಯ ಮಾಡುವುದು ಮೇಲು. ಇದಕ್ಕಾಗಿ ಅಖಿಲ ಹಿಂದೂದೇಶದ ಪ್ರತಿಯೊಬ್ಬನೂ ತನ್ನ ಕೈಲಾದ ಸಹಾಯವನ್ನು ಮಾಡಬೇಕು.

ಇಂದಿನವರೆಗೆ ಶೂರಜನಾಂಗಗಳೆಂದು ಹೆಸರಾದ ಜನರಲ್ಲಿ ಕೆಲವರನ್ನು ಮಾತ್ರವೇ ಸೈನಿಕರಾಗಿ ತರಬೇತು ಮಾಡಿ ಹಿಂದೂ ದೇಶದ ರಕ್ಷಣಾ ಸೈನ್ಯವಾಗಿ ಮಾಡುವುದು ಪದ್ಧತಿ ಇದ್ದರೂ ಈಗ ಮಾತ್ರ ಇಂತಹ ಅಲ್ಪ ಪ್ರಯತ್ನವು ಪ್ರಕೃತ ಒದಗಿರುವ ಸಂದಿಗ್ಧ ಪರಿಸ್ಥಿತಿಯನ್ನು ಸುಧಾರಿಸಲಾರದು ಎಂಬುದು ಸರ್ವವಿದಿತವಿದೆ. ಆದುದರಿಂದ ಈ ಲೀಗು ಇಂಡಿಯಾ ಸರಕಾರವು ಕೂಡಲೇ ಅಖಿಳ ದೇಶವನ್ನು ಎಂತಹ ಪರಿಸ್ಥಿತಿಯನ್ನಾದರೂ ಇದಿರಿಸುವ ಸ್ಥಿತಿಯಲ್ಲಿ ಇರಬೇಕು. ಇಷ್ಟರ ವರೆಗೆ ವೈಸರಾಯರು ಗವರ್ನರುಗಳು ಮಾಡಿರುವ 'ವಾರ್ ಕೌನ್ಸಿಲು' ಇತ್ಯಾದಿ ಏನೇನೂ ಸಾಲದು. ಆದುದರಿಂದ ವೈಸರಾಯರು ಹಿಂದೂ ದೇಶದ ಎಲ್ಲಾ ಶಕ್ತಿಯನ್ನು ಯುದ್ಧಕ್ಕೆ ಉಪಯೋಗಿಸಬೇಕೆಂದು ಈ ವಿಷಯದಲ್ಲಿ ಜಿನ್ನರು ಅವರಿಗೆ ಸಲಹೆ ಕೊಡಬಹುದೆಂದೂ ಜಿನ್ನರಿಗೂ ಅಧಿಕಾರ ಕೊಟ್ಟಿರುತ್ತದೆ.

ಇದರಿಂದ ಜಿನ್ನರ ಯೋಚನೆ ಏನೆಂದು ಸುಲಭವಾಗಿ ತಿಳಿಯಬಹುದಾಗಿದೆ. ಅಖಿಲ ಹಿಂದೂದೇಶದ ಮುಸ್ಲಿಂ ಲೀಗ್‌ಗಳ ಮತ್ತು ಇತರ ಯುದ್ಧ ಸಹಾಯಕ ಸ್ಸಂಗಡ, ಸಂಸ್ಥೆಗಳ ಸಹಾಯವನ್ನು ನಮ್ಮ ಆಳರಸರಿಗೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಕೊಟ್ಟು ಯುದ್ಧಕ್ಕೆ ಒತ್ತಾಸೆಕೊಡುವುದು ಮತ್ತು ಸಹಕರಿಸುವುದು.

ಮೇಲಿನ ಸೂಚನೆಯಲ್ಲಿ ತೋರುವ ಮುಖ್ಯ ಎರಡು ವಿಷಯಗಳು ಎಲ್ಲರನ್ನೂ ಕಣ್ಣು ತೆರೆಯಿಸುವುದು. ಹಿಂದೊಮ್ಮೆ ವೈಸರಾಯರು ಮುಸ್ಲಿಮರೂ ಹಿಂದುಗಳೂ ಒಂದು ರಾಜಿ ಪಂಚಾಯತಿಕೆಗೆ ಬರಬೇಕೆಂದು ಕೇಳಿದಾಗ ಮುಸ್ಲಿಮರಿಗೆ ಬೇರೆಯೇ ಸ್ವಾತಂತ್ರ್ಯಗಳಾಗಬೇಕಾಯಿತು. ಈಗ ಮಾತ್ರ ಅಖಿಲ ಹಿಂದೂದೇಶವು ಯುದ್ಧಕ್ಕಾಗಿ ಒಂದಾಗಬೇಕೆಂದು ಅಖಿಲ ಹಿಂದೂದೇಶದ ಸಹಾಯ ಅಗತ್ಯ ಕಂಡಿತು. ಇದನ್ನೇ, ಈ ವಿಚಾರವನ್ನೇ ಕಾಂಗ್ರೆಸು ಕೂಡ ಒತ್ತಿಹೇಳುತ್ತಿತ್ತು. ಅದನ್ನೇ ಒತ್ತಿಹೇಳುತ್ತಿದೆ ಎಂದು ತಿಳಿಯಬೇಕು.

ಮುಸ್ಲಿಂ ಲೀಗಿನ ಎರಡನೆ ವಿಷಯವೆಂದರೆ ಹಿಂದೂದೇಶವು ಪ್ರಕೃತ ಬಹಳ ಅಪಾಯಕರ ಸ್ಥಿತಿಯಲ್ಲಿದೆ ಎಂಬುದು. ಈ ಪಲ್ಲವಿಯನ್ನು ಹಿಂದೂದೇಶದ ಎಲ್ಲಾ ರಾಜಕೀಯ ಮುಖಂಡರೂ ಪಂಗಡಗಳೂ ಹಾಡುತ್ತಿದ್ದರು; ಹಾಡುತ್ತಿದ್ದಾರೆ. ಇಲ್ಲಿನ ಎಲ್ಲಾ ಜನರೂ ಮಿತ್ರರಾಷ್ಟ್ರಗಳಿಗೆ ಎಲ್ಲಾ ತರದ ಸಹಾಯ ಕೊಡುವುದಕ್ಕೆ ಸಿದ್ಧರಾಗಿರುವುದು ಮಾತ್ರವಲ್ಲದೆ ಹಿಂದೂದೇಶದ ರಕ್ಷಣೆಯನ್ನು ಇನ್ನೂ ಭದ್ರಪಡಿಸಬೇಕೆಂದು ಮನಗಂಡಿರುವರು. ಈ ಎರಡು ವಿಚಾರಗಳನ್ನು ನೋಡುವಾಗ ಹಿಂದೂದೇಶವು ಒಂದಾಗುವ ಅಗತ್ಯವಿದೆ ಎಂದು ಹೇಳಿದಂತಾಯಿತು. ಆದುದರಿಂದ ಇನ್ನಾದರೂ ಮುಸ್ಲಿಂ ಲೀಗು ಹಿಂದೂದೇಶ ಬಹುಬಲಿಷ್ಠ ಪಂಗಡಗಳೊಂದಿಗೆ ಸಹಕರಿಸಿ ರಾಷ್ಟ್ರೀಯ ಸರಕಾರ ನಿರ್ಮಾಣಕ್ಕೆ ಸಹಾಯ ಮಾಡುವುದೇ ಅಥವಾ ಇನ್ನೂ ಅದರ ಹಾಳು ಪಲ್ಲವಿಯಾದ 'ಕಾಂಗ್ರೆಸಿನೊಂದಿಗೆ ಕೂಡಿ ರಾಜಿಸಾಧ್ಯವಿಲ್ಲ'ವೆಂದೇ ಹಾಡೀತೆ?

ಕರ್ನಾಟಕ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

ಬೆಳ್ಳಿಯ ಹಬ್ಬ

ಪರಿಷತ್ತಿನ ಬೆಳ್ಳಿಯ ಹಬ್ಬ (ಸಿಲ್ವರ್ ಜ್ಯೂಬಿಲಿ) ಇದೇ ಇಸವಿ ಜೂನ್ ೩೦ನೆಯ ತಾರೀಖಿನ ದಿನ ಪ್ರಾರಂಭವಾಗಿ, ಎರಡು ದಿವಸ ನಡೆಯಬೇಕೆಂದು ನಿರ್ಧಾರವಾಗಿರುತ್ತದೆ. ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರೂ, ಪರಿಷತ್ತಿನ ಮಹಾ ಪೋಷಕರೂ ಆಗಿರುವ ಶ್ರೀಮನ್ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಜಿ. ಬಿ. ಇ. ಮಹಾಸ್ವಾಮಿಯವರು ಉತ್ಸವವನ್ನು ಸಮಾರಂಭಗೊಳಿಸುವುದಕ್ಕೆ ಕೃಪೆಯಿಟ್ಟು ಸಮ್ಮತಿಸಿರುವುದು ನಮ್ಮಂತೆಯೇ ತಮಗೂ ಆನಂದದಾಯಕವಾಗಿರುವುದೆಂದು ನಂಬುತ್ತೇವೆ. ಕನ್ನಡನಾಡಿನ ಮತ್ತೆ ಕೆಲವರು ರಾಜರೂ ಶ್ರೀಮಂತರೂ ದಯಮಾಡಿ ಈ ಶುಭ ಸಮಾರಂಭವನ್ನು ಅಲಂಕರಿಸುವರೆಂಬ ನಿರೀಕ್ಷೆ ಇದೆ.

ಈ ಮಹೋತ್ಸವವನ್ನು ಯೋಗ್ಯಂತೆಯ ವಿಜೃಂಭಣೆಯಿಂದ ನೆರವೇರಿಸತಕ್ಕದ್ದು ಪರಿಷತ್ತಿನ ಕರ್ತವ್ಯವಾಗಿದೆ. ಶ್ರೀಮನ್ ಮಹಾರಾಜರವರಿಗೆ ಒಂದು ಬೆಳ್ಳಿಯ ಕರಂಡದಲ್ಲಿ ಬಿನ್ನವತ್ತಳೆಯನ್ನೊಪ್ಪಿಸಬೇಕೆಂದೂ, ಬಂದ ಅತಿಥಿಗಳನ್ನೆಲ್ಲಾ ಉಚಿತಸತ್ಕಾರದಿಂದ ಆದರಿಸಬೇಕೆಂದೂ, ಸಂಗೀತ, ಗಮಕ, ನಾಟಕ, ಯಕ್ಷಗಾನ, ವ್ಯಾಖ್ಯಾನ, ಮಕ್ಕಳ ಮತ್ತು ಹೆಣ್ಣು ಮಕ್ಕಳ ವಿನೋದಗಳು ಮುಂತಾದ ಕರ್ನಾಟಕ ವೈಶಿಷ್ಟ್ಯಗಳ ಪ್ರದರ್ಶನಕ್ಕಾಗಿ ಕಲಾ ವಿದ್ವಾಂಸರನ್ನೂ ನಿಪುಣರನ್ನೂ ಕೂಡಿಸಬೇಕೆಂದೂ, ಪುಸ್ತಕ ಪ್ರಕಟನ ಮುಂತಾದ ಪರಿಷತ್ತಿನ ನಾನಾ ಮುಖವಾದ ಚಳವಳಿಗಳ ರೂಪು ರೇಖೆಗಳನ್ನು ಪ್ರಕಾಶಗೊಳಿಸಬೇಕೆಂದೂ ಕಾರ್ಯಕ್ರಮ ಏರ್ಪಟ್ಟಿದೆ. ಇದಕ್ಕೆಲ್ಲಾ ಸುಮಾರು ೩೦೦೦ ರೂ. ವೆಚ್ಚ ಅಂದಾಜಾಗಿದೆ.

ಪರಮೋದಾರಿಗಳಾದ ತಾವು ಪರಿಷತ್ತು ಇದುವರೆಗೆ ಸಲ್ಲಿಸುತ್ತ ಸೇವೆಯನ್ನೂ ಮುಂದೆ ಸಮರ್ಪಿಸಬೇಕೆಂದಿರುವ ಶ್ರದ್ಧೋತ್ಸಾಹಗಳನ್ನೂ ತಮ್ಮ ಘನವಾದ ಚಿತ್ತಕ್ಕೆ ತಂದುಕೊಂಡು, ಕನ್ನಡ ನಾಡಿನ ನಾನಾ ಪ್ರಾಂತಗಳ ಪ್ರತಿನಿಧಿಗಳೂ ಮಹಾಜನರೂ ಸೇರಿ ನೆರವೇರಿಸುವ ಈ ಉತ್ಸವ ಯಶಸ್ವಿಯಾಗಿ ಜರಗಲನುಕೂಲಿಸುವಂತೆ ಧಾರಾಳವಾಗಿ ಧನ ಸಹಾಯ ಮಾಡಿ ನಮ್ಮ ದೊಡ್ಡ ಪ್ರಯತ್ನಕ್ಕೆ ನೆರವಾಗಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇವೆ ಎಂದು ಸಂಬಂಧಿಸಿದ ಅಧಿಕಾರಿಗಳು ತಿಳಿಸುತ್ತಾರೆ.

ಬೆಳ್ಳಿಯ ಹಬ್ಬದ ಸಲುವಾಗಿ ಮೈಸೂರು ಶ್ರೀಮನ್ಮಹಾರಾಜರವರು ೫೦೦ ರೂಪಾಯಿಗಳ ಉದಾರದಾನವನ್ನು ಕೃಪೆಮಾಡಿರುತ್ತಾರೆ.

ಶೀತ ಮತ್ತು ಕೆಮ್ಮನ್ನು ಎಂದೂ ನಿರ್ಲಕ್ಷಿಸದಿರಿರಿ!

ಗಂಟಲು, ಎದೆ ಮತ್ತು ಶ್ವಾಸಕೋಶಗಳ ಬಾಧೆಗಳಿಗೆ ಪೆಪ್ಸ ಯೋಗ್ಯ ಔಷಧಿ. ಎಲ್ಲಾ ಕಡೆಗಳಲ್ಲಿಯೂ ಬಾಟ್ಲಿಗೆ ರೂ. 1ರಂತೆ ಮಾರುತ್ತಾರೆ.

ಪೆಪ್ಸನ್ನು ಪ್ರಯೋಗಿಸಿರಿ

PEPS

ಶ್ವಾಸನೀಯ ಮಾತ್ರೆಗಳು

NOTICE

In the Court of the District Munsif of Mangalore

R. E. P. No. 215/1940
in O. S. 492/1938

Between:-

A. Sanjiva Punja, son of A. Devappa Punja, Advocate Madras — Petitioner Pltf

and

1. Rosario Miranda, son of Lawrence Miranda, residing in Kulshekar of Padava Village, Mangalore Tq. 2. Sila Souza son of Gregory Souza residing in Makale of Padava Village Mangalore Taluqe — Respts Defts

To 2nd Respt-Sila Souza

Please take notice that the above-execution petition R. E. P. 215/1940 filed against you and 1st Respt for the sale of the immoveable property belonging to the 1st Respt mortgaged to you is posted for hearing on 11-7-1940 for settling the terms of the sale proclamation before the Court. You may appear either in person or by a pleader and contest the same; failing which the petition will be proceeded with in your absence.

Mangalore 20-6-40 — M. N. Chouta, Vakil for Petitioner

WHAT MAKES A MAN RICH?

Luck?	—	Very rarely.
Inheritance?	—	Not often.
Speculation?	—	Once in a blue moon.
Gambling?	—	Never.
Hard Work?	—	Very Often.
Hard work and THRIFT	—	Always.

RESOURCES OF A CRORE.

Estd: 1906

CANARA BANK LIMITED.

ಇಟಲಿಯ ಸರ್ವಾಧಿಕಾರಿ ಮುಸಲೋನಿ

ಮುಸಲೋನಿಯ ಮರುಳು ಬುದ್ಧಿ

ಇಟಲಿಗೆ ಮಹಾ ವಿಪತ್ತು ಕಾದಿದೆ!

ಮಿತ್ರರಾಷ್ಟ್ರಗಳಿಗೆ ಅಂತ್ಯ ವಿಜಯವು ಖಂಡಿತ!

ಹಿಟ್ಲರನ ಮರುಳು ಮಾತುಗಳಿಂದ ಹುಚ್ಚಾಗಿ ಮುಸಲೋನಿ ಅವನ ಪರವಾಗಿ ಯುದ್ಧ ರಂಗವನ್ನು ಸೇರಿದ್ದಾನೆ. ಸುಯೇಜ್ ಮತ್ತು ಜಿಬ್ರಾಲ್ಟರುಗಳಿಂದ ಭೂಮಧ್ಯ ಸಮುದ್ರವನ್ನು ಪ್ರವೇಶಿಸುವ ಮಿತ್ರರಾಷ್ಟ್ರಗಳ ಪ್ರತಿಯೊಂದು ಹಡಗನ್ನು ಅವನು ಮುಳುಗಿಸುವನಂತೆ! ಜಿಬ್ರಾಲ್ಟರಿನ ಬಂದರು ಮತ್ತು ಹಡಗು ರಾಣವನ್ನು ಬಾಂಬು ಹಾಕಿ ಧ್ವಂಸಮಾಡುವನಂತೆ! ಮಾಲ್ಟಾ ಮತ್ತು ನ್ಯಾಪ್ರಸದ್ವೀಪಗಳನ್ನು ಕ್ಷಣಾರ್ಧದಲ್ಲಿ ಸ್ವಾಧೀನ ಮಾಡಿಕೊಳ್ಳುವನಂತೆ! ಒಟ್ರಾಂಟೊ ಜಲಸಂಧಿನ್ನು ಮಿತ್ರರಾಷ್ಟ್ರಗಳ ಹಡಗು ಚಲಾವಣೆಗೆ ಮುಚ್ಚಿಬಿಡುವನಂತೆ! ಭೂಮಧ್ಯ ಸಮುದ್ರದ ಮೇಲೆ ಅವನು ತನ್ನ ನಿರಂಕುಶ ಅಧಿಕಾರವನ್ನು ಸ್ಥಾಪಿಸುವನಂತೆ! ಆದರೆ ಇನೆಲ್ಲ ಅವನಿಗೆ ಸಾಧ್ಯವೆ? ಮುಸಲೋನಿಯ ಈ ಕನಸು—ಕನಸಾಗಿಯೇ ಉಳಿಯಲಾರದೆ? ಹಿಟ್ಲರ್ ಮತ್ತು ಮುಸಲೋನಿಗಳು ಆಫ್ರಿಕವನ್ನು ತಮ್ಮೊಳಗೆ ಪಾಲುಮಾಡಿಕೊಳ್ಳುವ ಕನಸು ಕಾಣುತ್ತಿರುವುದು ಪ್ರಯೋಜನವುಂಟೇ?

ಮಿತ್ರರಾಷ್ಟ್ರಗಳ ಹಡಗುಬಲ

ಯುದ್ಧಾರಂಭದ ಮೊದಲು ಬ್ರಿಟಿಷರ ಹತ್ತಿರ ಮೊದಲನೆಯ ತರಗತಿಗೆ ಸೇರಿದ ೩೦೦೦೦ದಿಂದ ೩೫೦೦೦ ಟನ್ ಭಾರದ ೧೫ ಯುದ್ಧ ನಾವೆಗಳಿದ್ದವು. ಅವುಗಳಲ್ಲಿ ರೋಯಲ್ ಓಕ್ ಎಂಬ ಒಂದನ್ನು ಅವರು ಯುದ್ಧದಲ್ಲಿ ಕಳೆಕೊಂಡಿದ್ದಾರಾದರೂ, ಯುದ್ಧಾರಂಭವಾದ ವೇಳೆ ೫ ನಾವೆಗಳನ್ನು ಹೊಸದಾಗಿ ಸೇರಿಸಿಕೊಂಡಿದ್ದಾರೆ. ಈ ಹಡಗುಗಳು ಉದ್ದೇಶ ಸಾಧನೆಗೆ ಯಾವದರಲ್ಲಿಯೂ ಕಡಿಮೆಯಾಗುವಂತಿಲ್ಲ. ಹಾಗೆಯೇ ಬ್ರಿಟಿಷರ ಹತ್ತಿರ ನಮ್ಮ ಕಲ್ಪನೆಗೆ ಬರಲಾರದಷ್ಟು ಹೆಚ್ಚು ಕ್ರುಯಿಜರುಗಳೂ, ವಿಮಾನಗಳನ್ನು ತೆಗೆದುಕೊಂಡು ಹೋಗುವ ಹಡಗುಗಳೂ ಡಿಸ್ಟ್ರಾಯರುಗಳೂ, ಸಬ್‌ಮೇರೀನುಗಳೂ, ಇತರ ಯುದ್ಧೋಪಕರಣಗಳೂ ಇವೆ. ಅಲ್ಲದೆ, ದಿನನಿತ್ಯ ಹೊಸತಾದವುಗಳನ್ನು ಕಟ್ಟಿಸುತ್ತಲೂ ಅಮೇರಿಕೆಯಿಂದ ತರಿಸಿಕೊಳ್ಳುತ್ತಲೂ ಇದ್ದಾರೆ.

ಬ್ರಿಟಿಷರ ೧೫ ದೊಡ್ಡ ಯುದ್ಧ ಹಡಗುಗಳೊಂದಿಗೆ ಫ್ರೆಂಚರ ೮ ಉತ್ತಮ ತರಗತಿಯ ಯುದ್ಧ ಹಡಗುಗಳಿವೆ. ಅಲ್ಲದೆ ೩೫೦೦೦ ಟನ್ನಿನ ಎರಡನ್ನು ಹೊಸದಾಗಿ ಕಟ್ಟಿಸಿಕೊಂಡಿದ್ದಾರೆ. ಫ್ರೆಂಚರ ಹಡಗು ರಾಣಗಳಲ್ಲಿ ೨ ಮತ್ತು ಬ್ರಿಟಿಷರ ಹಡಗು ರಾಣಗಳಲ್ಲಿ ಇನ್ನೆರಡು ಕಟ್ಟಿ ತಯಾರಾಗುತ್ತಾ ಇವೆ

ಮಿತ್ರರಾಷ್ಟ್ರಗಳು ಸಾಧಿಸುವ ಕಾರ್ಯಗಳು

ಇಟಲಿಯು ಇಂಗ್ಲಿಷರು ಮತ್ತು ಫ್ರೆಂಚರ ವಿರೋಧವಾಗಿ ಯುದ್ಧಕ್ಕೆ ನಿಂತಿರುವದರಿಂದ ಅವರೀಗ ತಮ್ಮ ಈ ಸ್ವತಂತ್ರವಾಗುವಂತೆಯೂ ಮಾಡುವದಲ್ಲದೆ ಇಟಲಿಯನ್ನು ನಿತ್ಯಜೀವನದ ಕಷ್ಟಕ್ಕೆ ಗುರಿಮಾಡಬಹುದು. ಇಟಲಿಯು ಸಪೂರವಾಗಿ ಸಮುದ್ರದಲ್ಲಿ ಚಾಚಿರುವದರಿಂದ, ಈಜಿಪ್ತ ಮತ್ತು ಜಿಬ್ರಾಲ್ಟರಿನಿಂದ ಮಿತ್ರರಾಷ್ಟ್ರಗಳ ವಿಮಾನಗಳು ಬಂದು ಇಟಲಿಯ ಯಾವತ್ತು ಪ್ರಾಮುಖ್ಯಸ್ಥಾನಗಳನ್ನು ಬಾಂಬುಗಳಿಂದ ನಾಶ ಮಾಡುವದು ಅತ್ಯಂತ ಸುಲಭವು ಮಾತ್ರವಲ್ಲ ಇಟಲಿಯು ಹೊರದೇಶಗಳಿಂದ



ಸ್ಕಾಟ್‌ಲೆಂಡಿನಲ್ಲಿ ಜಯಿಸಿದ ಬ್ರಿಟಿಷ್ ವೈಮಾನಿಕರಿಗೆ ಸಾರ್ಜೆಂಟ್ ... ಪದಕ [illegible]

ಪಟ್ಟಿತ ಯುದ್ಧ ನಾವೆಗಳ ... [illegible] ಲಿಬಿಯದೊಡನೆ ಇಟಲಿಗಿರುವ ವ್ಯವಹಾರ ಎರಿಟ್ರಿಯ ಮತ್ತು ಅಬಿಸೀನಿಯದೊಡನೆ ಇದ್ದ [illegible] ಸಂಭವದಲ್ಲಿ ಮರಿದು ಹಿಡಿಯಲು [illegible] ಅಟ್ಲಾಂಟಿಕ ಸಮುದ್ರದ ತಡಹಾಕಿ [illegible] ವು ಉಪವಾಸ ಬೀಳುವಂತೆಯೂ, ಆಫ್ರಿಕದ ಇಟಾಲಿಯನ ವಸತಿಗಳು [illegible] ಬೇಕಾದ ಆವಶ್ಯಕತೆಗಳ ಸ್ವೀಕರಿಸಿಕೊಂಡಿರಪ್ಪ [illegible] ಸುಯೇಜ ಮತ್ತು ಜಿಬ್ರಾಲ್ಟರ್ ಮಾರ್ಗವಾಗಿ ಬರಬೇಕಿವೆ. ಈ ಸ್ಥಾನಗಳು ಮಿತ್ರರಾಷ್ಟ್ರಗಳ ಅಧಿಕಾರದಲ್ಲಿರುವದರಿಂದ ಈ ಆವಶ್ಯಕತೆಗಳು ಇನ್ನು ಇಟಲಿಗೆ ದೊರೆಯುವದು ತಪ್ಪಿದೆ. ಇಟಲಿಯ ಹೆಚ್ಚಿನ ವ್ಯಾಪಾರವು ಈ ಎರಡು ಮಾರ್ಗಗಳಿಂದ ನಡೆಯುತ್ತಿದ್ದುದರಿಂದ ಈಗ ಆ ವ್ಯಾಪಾರವೂ ಸಂಪೂರ್ಣ ನಿಂತುಹೋಗಿ ಇಟಲಿ ಅಪರಿಮಿತ ಕಷ್ಟನಷ್ಟಗಳಿಗೆ ಗುರಿಯಾಗುವದು.

ಇಟಲಿಗೆ ಜರ್ಮನಿಯ ಸಹಾಯ

ಇಟಲಿ ಜರ್ಮನಿಯ ಪರವಾಗಿ ಯುದ್ಧಕ್ಕೆ ಹೊರಟಿದೆಯಾದರೂ ಸಂದಿಗ್ಧದಲ್ಲಿ ಇಟಲಿಗೆ ಜರ್ಮನಿಯಿಂದ ಯಾವ ಸಹಾಯವೂ ಬರುವಂತಿಲ್ಲ. ಜರ್ಮನಿಯು ಸ್ವತಃ ಯುದ್ಧರಂಗದಲ್ಲಿದೆ ಎಂಬುದೊಂದು ಕಾರಣವು ಮಾತ್ರವಲ್ಲದೆ ಜರ್ಮನಿಯ ಹಡಗು ಬಲವು ಈಗ ಹೆಸರಿನ ಮಟ್ಟಿಗೂ ಇರುವದಿಲ್ಲ ಎಂಬ ಕಾರಣದಿಂದಲೂ ಅದರ ಅಸಹಾಯಕತೆಯನ್ನು ತಿಳಿದುಕೊಳ್ಳಬಹುದು. ಸ್ವತಹ ಇಟಲಿಯ ಹತ್ತಿರ ಇರುವ ಯುದ್ಧ ಹಡಗುಗಳೆಂದರೆ ಒಟ್ಟಿಗೆ ೯ ಮಾತ್ರ. ಇಟಲಿಯ ಹತ್ತಿರ ಸಣ್ಣ ಸಣ್ಣ ಡಿಸ್ಟ್ರಾಯರು ಮೊದಲಾದವು ಕೆಲವು ಇರುವವು. ಆದರೂ ಮಿತ್ರರಾಷ್ಟ್ರಗಳ ಶಕ್ತಿಯೊಂದಿಗೆ ಅದರ ತುಲನೆ ಇರುವದಿಲ್ಲ. ಆದರೆ ಮಿತ್ರರಾಷ್ಟ್ರಗಳಿಗೆ ಸಮುದ್ರಗಳ ಮೇಲಿರುವ ಬಲವನ್ನು ಜರ್ಮನಿ ತನ್ನ ವಿಮಾನ ಬಲದ ಮೂಲಕ ಕಗ್ಗಿಸಿ ಇಟಲಿ ಜರ್ಮನಿಗಳೆರಡು ಯುದ್ಧದಲ್ಲಿ [illegible] ಯಾರಾದರೂ ಸಂದೇಹಪಡಬಹುದು. ಜರ್ಮನಿಯು ಒಳ್ಳೆ ದೊಡ್ಡ ವಿಮಾನಪಡೆ ಇರುವದನ್ನು ಮತ್ತು ಅಮೇರಿಕದ ಕ್ರಿಯಾತ್ಮಕ ಸಹಾಯ ಭೀತಿಯು ಮಿತ್ರರಾಷ್ಟ್ರಗಳಿಗೆ ಪ್ರಾಪ್ತವಾಗಿರುವಾಗ, ಮಿತ್ರರಾಷ್ಟ್ರಗಳ ವಿಮಾನದ ಕೊರತೆಯನ್ನು ಅಮೇರಿಕವು ಸಂಭವದಲ್ಲಿ ಪೂರಯಿಸಲು ಸಮರ್ಥವಿರುವಾಗ, ಜರ್ಮನಿಯು ವಿಮಾನ ಬಲವು ಮಿತ್ರರಾಷ್ಟ್ರಗಳ ತೇಜೋಭಂಗ ಮಾಡಲಿಕ್ಕೆ ಎಷ್ಟರ ತನಕ ಸಮರ್ಥವಾಗಬಹುದು? ಇಲ್ಲ, ಎಷ್ಟರ ತನಕ ಮಿತ್ರರಾಷ್ಟ್ರಗಳು ಪ್ರಜಾಸತ್ತೆ ಮತ್ತು ಲೋಕಶಾಂತಿಗಾಗಿ ಹೋರಾಡುತ್ತಿರುವವೆಂಬುದ ನಿಶ್ಚಯವೋ, ಎಷ್ಟರ ತನಕ ಪ್ರಪಂಚದ ನೈತಿಕ ಬೆಂಬಲವು ಅವುಗಳಿಗೆ ಪ್ರಾಪ್ತವಾಗ ವದೋ, ಎಷ್ಟರ ತನಕ ಅಮೇರಿಕದ ಧನಜನ ಮತ್ತು ವಸ್ತು ಸಹಾಯವು ಅವುಗಳಿಗಿದೆಯೋ, ಮಿತ್ರರಾಷ್ಟ್ರಗಳು ಈ ಯುದ್ಧದಲ್ಲಿ ಸೋಲುವವೆಂದು ತಿಳಿಯುವದು ಅಜ್ಞಾನವಾಗಿದೆ.

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

Rs.50/-,100/-,500/-,1,000/-&5,000/-

are now issued at all our Branches

For particulars call at or write to

Any of our nearest Branches

ಮದನಕಾಮೇಶ್ವರ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಫಾರ್ಮಸಿ, ಪೆರಡೇಪಿ,
P. O. Peridepi (ಸೌತ್ ಕೆನರಾ)

ಪಾಕಿಸ್ತಾನ ಯೋಜನೆಯು ನ್ಯಾಯಸಮ್ಮತವಲ್ಲ!

ನೈತಿಕ ಆರ್ಥಿಕ ರಾಜಕೀಯ ಕಾರಣಗಳು

ಮುಸಲ್ಮಾನರ ಖಿಲಾಫತ್ ಆಂದೋಲನವು ಸರ್ವತ್ರ ಭರದಿಂದ ನಡೆಯುತ್ತಿದ್ದ ಆ ದಿನಗಳಲ್ಲಿ ನವೀನ ಉತ್ಸಾಹದಿಂದ ತುಂಬಿದ ಸಾವಿರಾರು ಮಂದಿ ಮುಸಲ್ಮಾನರು ಬ್ರಿಟಿಷ ಸರಕಾರದ ನೀತಿಯಿಂದ ಅಸಂತುಷ್ಟರಾಗಿ ಹಿಂದುಸ್ಥಾನವನ್ನು ಬಿಟ್ಟು ಇತರ ದೇಶಗಳಿಗೆ ಹೋಗಿದ್ದರು. ಮುಸಲ್ಮಾನರು ಈ ನಿರ್ಗಮನವು ಹಿಜ್ರತ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪಂಜಾಬ, ಸಿಂಧ, ಗಡಿನಾಡುಗಳ ಮುಸಲ್ಮಾನರು ಕಾಫರರಿಂದ ಆಳಲ್ಪಡುವ ದೇಶಗಳಲ್ಲಿ ವಾಸಿಸುವುದು ಅಧರ್ಮವೆಂದು ಭಾವಿಸಿ, ಅಲ್ಲಿರುವ ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಮಾರಿಕೊಂಡು ಅಫಘಾನಿಸ್ಥಾನಕ್ಕೆ ಹೋಗಿದ್ದರು. ಈ ಧರ್ಮಾಂಧ ಮುಸಲ್ಮಾನರ ತ್ಯಾಗವು ಹೊರದೇಶಗಳ ಮುಸಲ್ಮಾನರ ಶ್ಲಾಘನೆಗೆ ಪಾತ್ರವಾಗಬಹುದೆಂದು ಅವರು ಭಾವಿಸಿದ್ದರು. ಆದರೆ ಅವರ ಆ ಕಲ್ಪನೆಯು ಕಲ್ಪನೆಯಾಗಿಯೇ ಉಳಿಯಿತು. ಹೊರದೇಶಗಳ ಮುಸಲ್ಮಾನರು ಇವರನ್ನು ಸಹೋದರ ಭಾವದಿಂದ ಪ್ರೇರಿತರಾಗಿ ಸ್ನೇಹ ವಾತ್ಸಲ್ಯಗಳಿಂದ ಕಾಣುವದರ ಬದಲಿಗೆ ಅವರ ಹತ್ತಿರ ಇದ್ದ ಹಣ ಕಾಸುಗಳನ್ನು ಲೂಟಿಮಾಡಿ ಈ ಮುಸಲ್ಮಾನರನ್ನು ದಾರಿಯ ಭಿಕಾರಿಗಳನ್ನಾಗಿ ಮಾಡಿದರು. ಕೆಲವು ಕಡೆಗಳಲ್ಲಿ ಈ ಮುಸಲ್ಮಾನರ ಸ್ತ್ರೀಯರನ್ನು ಪಠಾಣರು ಹಾರಿಸಿಕೊಂಡು ಹೋಗಿದ್ದರು! ಉಪವಾಸ ಮತ್ತು ಕಷ್ಟಗಳನ್ನು ಸಹಿಸಲಿಕ್ಕಾಗದ್ದೆ ದೇಶಾಂತರ ವಾಸಿಗಳಾದ ಮುಸಲ್ಮಾನರು ಕೆಲವು ದಿನಗಳ ಅನಂತರ ನಮ್ಮ ಭಾರತ ಭೂಮಿಗೆ ಮರಳಬೇಕಾಯಿತು.” ಹೀಗೆಂದು ಭಾಯಿ ಪರಮಾನಂದರು ಒಂದು ಲೇಖನದಲ್ಲಿ ಬರೆದಿರುವರು.

ಅವರು ಮುಂದುವರಿಸುತ್ತಾ ಹೀಗೆನ್ನುತ್ತಾರೆ:–

“ಇದೇ ಮುಸಲ್ಮಾನರು ಹಿಂದಿನ ಉತ್ಸಾಹವನ್ನು ಇನ್ನೊಂದು ರೀತಿಯಿಂದ ತೋರಿಸಲಾರಂಭಿಸಿದ್ದಾರೆ. ದೇಶವನ್ನು ವಿಭಾಗಿಸಿ ತಮಗೊಂದು ಸ್ವತಂತ್ರದ ರಾಜ್ಯವನ್ನು ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಆದರೆ ದೇಶವನ್ನು ವಿಭಾಗಿಸುವ ಅವರ ಈ ಪ್ರಯತ್ನವು ಹಿಜ್ರತದಂತೆ ವ್ಯರ್ಥವರಿಶ್ರಮವೇ ಆಗಿದೆ.

ನೈತಿಕ ದೃಷ್ಟಿಯಿಂದ ವಿರೋಧ

“ನೈತಿಕ ರಾಜಕೀಯ ಮತ್ತು ಆರ್ಥಿಕ ದೃಷ್ಟಿಗಳಿಂದ ಇದು ಅನ್ಯಾಯವಾಗಿದೆ. ಮುಸಲ್ಮಾನ ಧರ್ಮವು ಅರೇಬಿಯದಲ್ಲಿ ಆರಂಭವಾಗಿ ಯೂರೋಪ, ಆಫ್ರಿಕ, ಏಶ್ಯಗಳಲ್ಲಿ ಹರಡಿಕೊಂಡಿತು. ಆದರೆ ಈಜಿಪ್ತ, ಪರ್ಶಿಯಾ, ಅಫಘಾನಿಸ್ಥಾನಗಳಲ್ಲಿಯಂತೆ ಹಿಂದುಸ್ಥಾನದಲ್ಲಿಯೂ ಮುಸಲ್ಮಾನ ಧರ್ಮಕ್ಕೆ ಸಫಲತೆಯು ದೊರೆಯಲಿಲ್ಲ. ಶತಮಾನಗಳಿಂದ ಮುಸಲ್ಮಾನರು ಈ ದೇಶದ ಕೆಲಕೆಲವು ಪ್ರದೇಶಗಳನ್ನು ಆಳುತಿದ್ದರೂ ಹಿಂದುಗಳು ಮುಸಲ್ಮಾನರನ್ನು ಸಂಪೂರ್ಣ ಸೋಲಿಸಿ ಹಿಂದೂ ಸಾಮ್ರಾಜ್ಯವನ್ನೇ ಸ್ಥಾಪಿಸಿದ್ದರು. ಈಗ ಪಾಕಿಸ್ತಾನವೆಂದು ಮುಸಲ್ಮಾನರು ಎಣಿಸಿರುವ ಹಿಂದೂದೇಶದ ಆ ಪಂಜಾಬ ಮತ್ತು ಗಡಿನಾಡಿನ ಪ್ರದೇಶಗಳಲ್ಲಿಯೇ ರಣಜಿತ್ ಸಿಂಗನ ಹಿಂದೂ ಸಾಮ್ರಾಜ್ಯವು ಸ್ಥಾಪನೆಯಾಗಿದ್ದಿತು.



ಇಂಗ್ಲಾಂಡಿನ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಸಾವಿರಾರು ಸ್ತ್ರೀಯರಲ್ಲಿ ಒಬ್ಬಳು.

“ಆದುದರಿಂದಲೇ ಹಿಂದೂ ಮುಸಲ್ಮಾನರ ಧಾರ್ಮಿಕ ಭಾವನೆಗಳಲ್ಲಿ ಯಾವದೇ ಅಂತರವು ಇರಬಹುದಾಗಿದ್ದರೂ ರಾಜಕೀಯ ದೃಷ್ಟಿಯಿಂದ ಅವರೆಲ್ಲರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೆಂದು ಸರ್ ಸಯ್ಯಬ್ ಅಹ್ಮದ್ ಖಾನರು ಹೇಳಿದ್ದರು. ಸ್ಪೈನಿನಲ್ಲಿ ಮುಸಲ್ಮಾನರು ೬೦೦ ವರ್ಷಗಳ ತನಕ ಆಳಿದ್ದರೂ ಅಲ್ಲಿ ಪುರಾತನ ಕಾಲದಿಂದ ವಾಸವಾಗಿದ್ದ ಕ್ರೈಸ್ತರು ಪುನಃ ಸಂಘಟಿತರಾಗಿ ಮತ್ತೆ ತಮ್ಮದೇ ರಾಜ್ಯವನ್ನು ಸ್ಪೈನಿನಲ್ಲಿ ಸ್ಥಾಪಿಸಿಕೊಂಡರು. ಯಾವಾಗ ಹಿಂದುಸ್ತಾನದಲ್ಲಿ ಮುಸಲ್ಮಾನ ಧರ್ಮವು ಸಫಲವಾಗಿಲ್ಲವೋ ಆಗ ಇಲ್ಲಿ ತಮಗೊಂದು ಪ್ರತ್ಯೇಕ ರಾಜ್ಯವೇ ಬೇಕೆಂದು ಮುಸಲ್ಮಾನರು ಹೇಳುವುದು ನೀತಿಯ ದೃಷ್ಟಿಯಿಂದ ಸಮಂಜಸವಾಗಿರುವದಿಲ್ಲ.

ಸಂಖ್ಯಾಬಲ

“ಎಲ್ಲೆಲ್ಲಿ ಮುಸಲ್ಮಾನರು ಬಹುಸಂಖ್ಯಾಕರಾಗಿದ್ದಾರೋ ಅಲ್ಲೆಲ್ಲಾ ಮುಸಲ್ಮಾನ ರಾಜ್ಯವಾಗಬೇಕೆನ್ನುವುದು ರಾಜಕೀಯ ದೃಷ್ಟಿಯಿಂದ ಸರಿಯೆಂದು ಯಾರೂ ಹೇಳಲಾರರು. ಪಾಕಿಸ್ತಾನ ಮಾಡಲಿಕ್ಕೆ ಸಂಖ್ಯಾಬಲವೇ ಮುಖ್ಯವೆನ್ನುವದಾದರೆ ಹಿಂದುಸ್ತಾನದ ಯಾವ ಪ್ರಾಂತ್ಯವನ್ನಾದರೂ ಮುಸಲ್ಮಾನ ಪ್ರಾಂತ್ಯವೆಂದು ವಿಂಗಡಿಸ ಬರುವದಿಲ್ಲ. ಪಂಜಾಬ ಒಂದರಲ್ಲಿಯೇ ಹಿಂದುಗಳು ಬಹುಸಂಖ್ಯಾಕರಾಗಿರುವ ಅನೇಕ ಕ್ಷೇತ್ರಗಳೂ ನಗರಗಳೂ ಇರುತ್ತವೆ. ಧರ್ಮದೃಷ್ಟಿಯಿಂದ ರಾಜಕೀಯ ವಿಭಾಗಗಳನ್ನು ಮಾಡುವದಾದರೆ ದೇಶವನ್ನು ಹಿಂದುಸ್ತಾನ ಮತ್ತು ಪಾಕಿಸ್ತಾನವೆಂದೂ ಎರಡಲ್ಲ ಅಸಂಖ್ಯಾತ ತುಂಡುಗಳಾಗಿ ಒಡೆಯಬೇಕಾಗುವದು. ಹಿಂದುಸ್ತಾನವು ಒಂದಾಗಿರಬಾರದು. ಹಿಂದುಸ್ತಾನದಲ್ಲಿ ಸಮರ್ಥವಾದ ಒಂದು ಕೇಂದ್ರ ಸರಕಾರವು ಇರಬಾರದು ಎನ್ನುವದೇ ಪಾಕಿಸ್ತಾನ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶವು ಸಫಲವಾದರೆ ದೇಶದಲ್ಲಿ ಅನರ್ಥ ಮತ್ತು ಅನಾಯಕತ್ವವಲ್ಲದೆ ಮತ್ತೇನೂ ಉಂಟಾಗಲಾರದು.

“ಧರ್ಮವು ವ್ಯಕ್ತಿಗತವಾದ್ದು. ಇಂದಿನ ಮುಸಲ್ಮಾನನಾಗಿದ್ದವನು ಯಾವಾಗಲೂ ಮುಸಲ್ಮಾನನಾಗಿ ಇರುವನೆಂದು ಹೇಳಲಾಗುವುದಿಲ್ಲ. ಧರ್ಮಾಂತರವು ಎಲ್ಲಾ ಕಡೆಗಳಲ್ಲಿ ಎಲ್ಲಾ ಸಮಯ ನಡೆಯುತ್ತಿರುವದು. ಪಂಜಾಬಿನಲ್ಲಿ ಸೇಕಡಾ ೫೫ ಮಂದಿ ಮುಸಲ್ಮಾನರು ಮತ್ತು ೪೫ ಮಂದಿ ಹಿಂದುಗಳು ಇದ್ದಾರೆಂದು ಹೇಳುತ್ತಾರೆ. ಸೇಕಡಾ ೫ರಷ್ಟು ಈ ಪ್ರಾಂತ್ಯದ ಮುಸಲ್ಮಾನರು ಹಿಂದುಗಳಾಗಿ ಬಿಟ್ಟರೆ, ಪಂಜಾಬನ್ನು ಪಾಕಿಸ್ತಾನವನ್ನಾಗಿ ಹೇಗೆ ಮಾಡಬಹುದು? ಜನರ ಧರ್ಮಾಂತರವು ಆಗುತ್ತ ಹೋದಹಾಗೆ ದೇಶವಿಭಜನೆಯೂ ಆಗುತ್ತಿರಬೇಕೆಂದು ಮುಸ್ಲಿಂ ಲೀಗು ಹೇಳುವದೆ? ಸಿಂಧದಲ್ಲಿ ಮುಸಲ್ಮಾನರು ಅಧಿಕ ಸಂಖ್ಯಾಕರಾಗಿದ್ದಾರಾದರೂ ಅದರಲ್ಲಿರುವ ಕರಾಚಿ, ಹೈದರಾಬಾದು, ಸಿಕಾರಪುರ ಮತ್ತು ಸುಕ್ಕೂರುಗಳಲ್ಲಿ ಹಿಂದುಗಳು ಬಹುಸಂಖ್ಯಾಕರಾಗಿದ್ದಾರೆ. ಈ ನಗರಗಳನ್ನು ಪಾಕಿಸ್ತಾನಕ್ಕೆ ಹೇಗೆ ಸೇರಿಸಬಹುದು?

ಆರ್ಥಿಕ ವಿರೋಧ

“ಹಿಂದುಸರಕಾರದ ಮುಖ್ಯ ಕರ್ತವ್ಯವು ರಾಜ್ಯವನ್ನು ಹೊರಗಿನ ಆಕ್ರಮಣಗಳಿಂದ ರಕ್ಷಿಸುವದಾಗಿರುತ್ತದೆ. ಇದಕ್ಕೆ ಧಾರಾಳ ಹಣವು ಖರ್ಚಾಗುತ್ತಿರಬೇಕು. ದೇಶವನ್ನು ಸಣ್ಣ ಸಣ್ಣ ಪ್ರಾಂತ್ಯಗಳನ್ನಾಗಿ ಒಡೆಯುವದಾದರೆ, ಪ್ರಾಂತೀಯ ಸರಕಾರಗಳಿಗೆ ಖರ್ಚಿಗೆ ಬೇಕಾದಷ್ಟು ಹಣವು ಆ ಸಣ್ಣ ಪ್ರಾಂತ್ಯಗಳಿಂದ ಎಂದೂ ಹುಟ್ಟಬಲಾರದು. ಅದಕ್ಕೆ ಸಿಂಧ ಮತ್ತು ಗಡಿನಾಡು ಉದಾಹರಣೆ ಆಗಿದೆ. ಈ ಪ್ರಾಂತ್ಯಗಳಿಗೆ ಖರ್ಚಿಗೆ ಹಣಸಾಕಾಗುವದಿಲ್ಲವಾದುದರಿಂದ ಕೇಂದ್ರ ಸರಕಾರವು ಅವುಗಳಿಗೆ ವರ್ಷಾಸನ ಕೊಡುತ್ತದೆ. ಆದರೂ ಕೂಡ ಈ ಪ್ರಾಂತ್ಯಗಳು ತಮ್ಮದೇ ಆದ ಹ್ಯಾಕೋರ್ಟು ಅಥವಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಇನ್ನೂ ಸಮರ್ಥರಾಗಿಲ್ಲ.

“ಜಾತಿ ಮತ್ತು ಧರ್ಮ ದೃಷ್ಟಿಯಿಂದ ದೇಶ ವಿಭಜನೆಯಾದರೆ ಹಿಂದುಸ್ತಾನವು ಸದಾಕಾಲಕ್ಕೆ ಹಿಂದೂ ಮುಸಲ್ಮಾನ ಮೊದಲಾದ ಜಾತಿಧರ್ಮಗಳ ಪರಸ್ಪರ ಕಲಹಭೂಮಿಯಾಗಿ ಪರಿಣಮಿಸುವದು. ಪಾಕಿಸ್ತಾನ ಯೋಜನೆಯು ಯಾವ ದೃಷ್ಟಿಯಿಂದಲೂ ದೇಶಹಿತಕಾರಿಯಾಗಿ ಇರುವದಿಲ್ಲ.

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು.)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0–1–6
6ನೆ ತರಗತಿಗೆ	,,	0–2–0
7ನೆ ,,	,,	0–2–6
8ನೆ ,,	,,	0–3–0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಈ ವಾರದ ಕಥೆ:

ಅತ್ತೆಗೆ ಸಮಾಧಾನ?

ಲೇಖಕ: ಕೆ. ಶ್ರೀನಿವಾಸ ಶೆಣೈ, ಕಾರ್ಕಳ.

ಸಹರಾನಪುರದಿಂದ ಮೂರು ಮೈಲುಗಳ ದೂರದಲ್ಲಿ ಗೂಜರಖಾನ ಒಂದು ಸಣ್ಣ ಹಳ್ಳಿ. ಆ ಹಳ್ಳಿಯಲ್ಲಿ ಸುಂದರಿಯ ತಾಯಿತಂದೆಗಳು ವಾಸವಾಗಿದ್ದರು. ಹೆತ್ತವರ ಒಬ್ಬಳೇ ಮಗಳಾದುದರಿಂದ ಸುಂದರಿ ಬಹಳ ಪ್ರೇಮದಿಂದ ಸಾಕಲ್ಪಟ್ಟಿದ್ದಳು. ಮನೆಯಲ್ಲಿ ಬಡತನವಿದ್ದಿತಾದರೂ, ಅವಳ ಸುಖಕ್ಕೆ ಯಾವುದರಲ್ಲಿಯೂ ಕೊರತೆಯಾಗುತ್ತಿದ್ದಿಲ್ಲ. ಆದರೆ ಸುಂದರಿಯ ದೌರ್ಭಾಗ್ಯ ಅವಳು ಏಳು ವರ್ಷದವಳಾಗಬೇಕಾದರೆ ತಂದೆ ಕಾಲೇರದಿಂದ ಮೃತ್ಯುವಶನಾದನು. ಸುಂದರಿಯನ್ನು ಸಾಕುವ ಮತ್ತು ಅವಳನ್ನು ಒಬ್ಬ ಯೋಗ್ಯ ಯುವಕನಿಗೆ ಕೊಟ್ಟು ಮದುವೆ ಮಾಡುವ ಸಮಸ್ತ ಭಾರವೂ ವಿಧವೆ ತಾಯಿಯ ಮೇಲೆ ಬಿದ್ದಿತು. ಸುಂದರಿ ಹತ್ತು ವರ್ಷದವಳಾಗುವಾಗ ಅವಳ ವಿವಾಹದ ಚಿಂತೆಯು ತಾಯಿಯನ್ನು ಹಣ್ಣು ಮಾಡಿತು. ಕೊನೆಗೆ ಒಂದು ಗರೀಬ ಮನೆತನದ ಹುಡುಗನೊಂದಿಗೆ ಗರೀಬ ಮನೆತನದ ಹುಡುಗಿಯ ವಿವಾಹ ಸಂಬಂಧವು ನಿಶ್ಚಯವಾಯಿತು.

ಸುಂದರಿ ಮಾವನ ಮನೆಗೆ ಬಂದಳು. ನಾಲ್ಕೈದು ದಿನ ಇದ್ದು ಅವರು ಪದ್ಧತಿ ಪ್ರಕಾರ ತಾಯಿ ಮನೆಗೆ ಮರಳಿದಳು. ಮೂರು ತಿಂಗಳು ಕಳೆಯಬೇಕಾದರೆ ಅತ್ತೆ ಕರೆಕಳುಹಿಸಿದಳು. - 'ಪ್ಯಾರೆಲಾಲ ನೌಕರಿಯ ನಿಮಿತ್ತ ಕಾಶಿಗೆ ಹೋಗಿರುತ್ತಾನೆ. ಮನೆಯಲ್ಲಿ ನಾನು ಒಬ್ಬಳು ಅಲ್ಲದೆ ಬೇರೆ ಯಾರೂ ಇಲ್ಲ. ಆದುದರಿಂದ ಸುಂದರಿಯನ್ನು ಕೂಡಲೆ ಕಳುಹಿಸಿಕೊಡು. ಸ್ವಲ್ಪ ಸಮಯದ ನಂತರ ಬೇಕಾದರೆ ಕರಕೊಂಡು ಹೋಗಬಹುದು.

ತಾಯಿ ಪತ್ರವನ್ನು ಓದಿದಳು. ಏನು ಮಾಡಿಯಾಳು? ಉಪಾಯವಿರಲಿಲ್ಲ. ಸುಂದರಿಯನ್ನು ಗಂಡನ ಮನೆಗೆ ಕಳುಹಿಸಿದಳು. ಹೆಣ್ಣು ಮಕ್ಕಳು ಅನ್ಯರ ವಸ್ತುಗಳು. ಅವರ ಮೇಲೆ ಹೆತ್ತವರಿಗೆ ಏನು ಅಧಿಕಾರ? ಆದರೂ ಸುಂದರಿ ಹೋದ ಮೇಲೆ ತಾಯಿಗೆ ಮಗಳ ಅಗಲುವಿಕೆಯನ್ನು ಬಹಳ ದಿನಗಳ ತನಕ ಸಹಿಸಿಕೊಂಡಿರಲಿಕ್ಕಾಗಲಿಲ್ಲ. ಸಾಧಾರಣ ಜ್ವರವು ಪ್ರಾಣಾಂತಿಕವಾಗಿ ಪರಿಣಮಿಸಿತು. ಅವಳು ತನ್ನ ಕಾಯಿಲೆಯನ್ನು ತಿಳಿಸಿ ಮಗಳನ್ನು ನೋಡುವ ಆಸೆಯಾಗಿದೆ ಎಂದು ಸುಂದರಿಯ ಅತ್ತೆಗೆ ಕಾಗದ ಬರೆದಳು. ಆದರೆ ಅತ್ತೆ ಸುಂದರಿಯನ್ನು ಕಳುಹಿಸಿಕೊಡಲಿಲ್ಲ. ಮನಸ್ಸಿನ ಬೇಸರಕ್ಕಾಗಿ ಬರೆದಿರಬಹುದೆಂದು ಸುಮ್ಮಗಿದ್ದಳು. ಮತ್ತೆ ತಾಯಿ ಸತ್ತಳೆಂದು ಟಪ್ಪಾಲಿನವನು ಸುಂದರಿಗೆ ವಾರ್ತೆಯನ್ನು ಕೊಟ್ಟು ಹೋದ. ಸುಂದರಿ ಅಳುತ್ತ ಕಣ್ಣೀರಿನ ಪ್ರವಾಹವನ್ನು ಹರಿಯಬಿಟ್ಟಳು. ಅವಳ ಜೊತೆಗೆ ಅವಳ ಅತ್ತೆಯೂ ಒಂದೆರಡು ಹನಿ ಕಣ್ಣೀರು ಸುರಿಸಿದ್ದಳು.

ಈಗ ಸುಂದರಿಗೆ ತಾಯಿ ತಂದೆ ಬಂಧುಬಾಂಧವರು—ಯಾರೂ ಇಲ್ಲ. ಗಂಡನು ಪರದೇಶಿಯಾಗಿದ್ದಾನೆ. ಮೊದಮೊದಲು ಅವನು ತಿಂಗಳಿಗೆ ಒಂದೆರಡು ಬಾರಿ ತಾಯಿಗೆ ಕಾಗದ ಬರೆಯುತ್ತಿದ್ದ. 'ನಾನು ಕ್ಷೇಮವಾಗಿದ್ದೇನೆ. ನಿಮ್ಮೆಲ್ಲರ ಕ್ಷೇಮಕ್ಕೆ ಬರೆಯುತ್ತಾ ಇರಬೇಕು. ಸುಂದರಿಯನ್ನು ಪ್ರೇಮದಿಂದ ಕಾಣಬೇಕು. ಈಗ ಕೆಲಸವೇನೂ ಇಲ್ಲ. ಆದುದರಿಂದ ಊರಿಗೆ ಬಂದು ಮಾಡುವುದೇನು.' ಕೆಲಸ ದೊರೆತು ಸ್ವಲ್ಪ ಸಮಯದ ನಂತರ ಬರುತ್ತೇನೆ'. ಮತ್ತು ಪತ್ರಗಳು ಬರುವುದು ಅಪರೂಪವಾಯಿತು. ವರ್ಷಕ್ಕೆ ಎಲ್ಲಿಯಾದರೂ ಒಂದೆರಡು ಪತ್ರಗಳು ಬರುತ್ತಿದ್ದುವಾದರೂ ಅವುಗಳಲ್ಲಿ ಅವನ ಪತ್ತೆ ಇರುತ್ತಿದ್ದಿಲ್ಲ. ಆದುದರಿಂದ ಎಲ್ಲಿ ಏನು ಮಾಡುತ್ತಾನೆಂಬುದು ತಿಳಿಯುತ್ತಿದ್ದಿಲ್ಲ.

ಗಂಡನದು ಈ ಅವಸ್ಥೆ. ಹತ್ತು ವರ್ಷಗಳು ಕಳೆದುವು, ಅತ್ತೆಯ ಮನೆಯಲ್ಲಿ ಸುಂದರಿಯ ಜೀವನವು ಏಳು ಜನ್ಮದ ಪರಮಶತ್ರುಗಳಿಗೂ ಬರಕೂಡದಂಥದಾಗಿತ್ತು. ಮಾತುಮಾತಿಗೆ, ಕ್ಷಣಕ್ಷಣಕ್ಕೆ ಅತ್ತೆ, ಅವಳ ಮೇಲೆ ಉರಿದು ಬೀಳುತ್ತಿದ್ದಳು. ಅತ್ತೆ ಯಾವಾಗಲೂ ಯಾವ ಕೆಲಸವನ್ನೂ ಮಾಡುತ್ತಿದ್ದಿಲ್ಲ. ಬೆಳಿಗೆ ಎದ್ದು ಅಂಗಳ ಗುಡಿಸುವುದರಿಂದ ಆರಂಭಿಸಿ ರಾತ್ರಿ ಅತ್ತೆಗೆ ಚಾಪೆ ಹಾಸಿ ಕೊಡುವ ತನಕದ ಎಲ್ಲಾ ಕೆಲಸ ಕಾರ್ಯಗಳನ್ನು ಸುಂದರಿ ಒಬ್ಬಳು ಮಾಡಬೇಕಾಗಿದ್ದಿತು. , ಅದರ ಮೇಲೆ ಅತ್ತೆಯ ನಿತ್ಯದ ಸಹಸ್ರನಾಮದ ಜಪ ಸುಂದರಿಗೆ ಆಗುತ್ತಿದ್ದಿತು. ಅತ್ತೆಯ ಬೈಗಳನ್ನು ಕೇಳದೆ, ಅವಳು ತನ್ನ ಭಾಗ್ಯಕ್ಕಾಗಿ ಅಳದೆ ಒಂದು ದಿನವಾದರೂ ಕಳೆಯುತ್ತಿದ್ದಿಲ್ಲ.

ಕೊನೆಗೆ ಒಂದು ದಿನ ಪತ್ರ ಬಂದಿತು. ಪ್ಯಾರೆಲಾಲನು ಮನೆಗೆ ಬರುವನೆಂದು ಅದರಲ್ಲಿ ಬರೆದಿದ್ದಿತು. ಗೊತ್ತಾದ ದಿನ ಪ್ಯಾರೆಲಾಲ ಮನೆಗೆ ಮರಳಿದ. ಅಂದಿನಿಂದ ಸುಂದರಿಯ ಅತ್ತೆಯ ಸ್ವಭಾವದಲ್ಲಿ ಪೂರ್ಣ ಪರಿವರ್ತನೆಯಾಯಿತು. ಅವಳು ಸೊಸೆಯನ್ನು ಆದರದಿಂದಲೂ ಪ್ರೀತಿಯಿಂದಲೂ ಕಾಣತೊಡಗಿದಳು. ಸುಂದರಿಯ ಸಂತೋಷಕ್ಕೆ ಪಾರವೇ ಉಳಿಯಲಿಲ್ಲ. ಪ್ಯಾರೆಲಾಲ ಬರುವಾಗ ಎರಡು ಮೂರು ಸಾವಿರ ರೂಪಾಯಿ ಸಂಪಾದಿಸಿ ತಂದಿದ್ದ. ಅವನು ಹಳೆಮನೆಯನ್ನು ಕಿತ್ತು ಹಾಕಿ ಅಚ್ಚುಕಟ್ಟಾದ ಒಂದು ಚಿಕ್ಕ ಹೊಸ ಮನೆಯನ್ನು ಕಟ್ಟಿದ. ಅದರಲ್ಲಿ ಅತ್ತೆ, ಗಂಡ ಮತ್ತು ಸುಂದರಿ ಸುಖದಿನಗಳನ್ನು ಕಳೆಯತೊಡಗಿದರು.

ಆದರೆ ಸುಂದರಿ ಏನು ಪಾಪಮಾಡಿದ್ದಳೊ? ಸುಖಜೀವನದ ಒಂದು ವರ್ಷವೂ ಕಳೆದಿರಲಿಲ್ಲ. ಪುನಃ ಅತ್ತೆಯ ಸ್ವಭಾವದಲ್ಲಿ ಮೊದಲಿನ ಸಿಡುಕುತನವೂ ಅತೃಪ್ತಿಯೂ ತೋರತೊಡಗಿದುವು. ಆಚೆ ಮನೆಯ ಲಕ್ಷ್ಮಿಯ ಸೊಸೆ, ತಾಯಿ ಮನೆಗೆ ಹೋಗಿ ಎರಡು ಸೀರೆ, ಒಂದು ಕಟ್ಟಿ, ಎರಡು ತೋಪು ತಂದಿದ್ದಾಳೆ. ಈಚೆ ಮನೆಯ ಕಸ್ತೂರಿಯ ಸೊಸೆ ತಂದೆ ಮನೆಯಿಂದ ಎರಡು ಚಿನ್ನದ ಬಳೆ ಮಾಡಿಸಿ ತಂದಿದ್ದಾಳೆ ಎಂಬಂಥ ಮಾತುಗಳನ್ನು ಕೇಳಿದಾಗಲೆಲ್ಲ ಸುಂದರಿಯ ಅತ್ತೆಯ ಹೊಟ್ಟೆಯಲ್ಲಿ ಕಿಚ್ಚು ಏಳೂ ನಾಲಗೆಗಳನ್ನು ತೋರಿಸಿ ಉರಿಯುತ್ತಿತ್ತು. 'ನನ್ನ ಸೊಸೆ ಎಲ್ಲಿಗೆ ಹೋಗುವುದು, ಏನು ತರುವುದು, ಅವಳಿಗೆ ತಾಯಿಯಿಲ್ಲ, ತಂದೆ ಇಲ್ಲ' ಎಂದವಳು ಅಂತರಂಗದಲ್ಲಿ ಕೊರಗಿಕೊಳ್ಳುತ್ತಿದ್ದಳು.

ಅವಳು ಸುಂದರಿಯನ್ನು ಸೊಸೆಯಾಗಿ ಮನೆಗೆ ತಂದು ದೊಡ್ಡ ಅಪರಾಧ ಮಾಡಿದಳು. ಅದಕ್ಕೀಗ ಪ್ರಾಯಶ್ಚಿತ್ತವಾಗಬೇಕು. ಪ್ಯಾರೆಲಾಲನನ್ನು ಕರೆದು— 'ಅಪ್ಪಾ! ನೀನು ಬಂದು ಒಂದು ವರ್ಷಕ್ಕೆ ಮೀರಿತು. ನಾನು ಮುದುಕಿಯಾದೆ. ಈಗಲೋ ಆಗಲೋ ಎಂಬಂತಾಗಿದೆ. ನನಗಿಂತ ಕಿರಿಯರಾದ ಲಕ್ಷ್ಮಿ, ಕಸ್ತೂರಿ ನಾಲ್ಕೈದು ಮಂದಿ ಮೊಮ್ಮಕ್ಕಳನ್ನು ಆಡಿಸುವ ಭಾಗ್ಯವಂತೆಯರಾಗಿದ್ದಾರೆ. ನನಗೆ ಒಬ್ಬನ ಭಾಗ್ಯವೂ ಇಲ್ಲ. ಅಪ್ಪಾ, ನಿನ್ನ ಹೆಂಡತಿ ಬಂಜೆ. ಬಂಜೆಯನ್ನು ಕಟ್ಟಿಕೊಂಡು ಏನು ಮಾಡುವಿ? ಇನ್ನೊಂದು ಮದುವೆಯಾಗು. ಸಾಯಬೇಕಾದರೆ ನಿನ್ನ ಒಂದು ಮಗನನ್ನಾದರೂ ತೊಡೆಯ ಮೇಲೆ ಆಡಿಸಿ ಸಾಯಬೇಕೆಂದು ಆಸೆ' ಎಂದಳು. ಈ ಮಾತುಗಳನ್ನು ಆಡುವಾಗ ಅವಳು ಆಗಾಗ ಸೂ-ಸೂ ಎಂದು ಕಣ್ಣೀರು ಸುರಿಯುತ್ತಿದ್ದಳು.

ಸುಂದರಿ ನೀರು ತರಲಿಕ್ಕೆ ಹೋಗಿದ್ದಳು. ಅವಳು ಒಳಬರುತ್ತಾ ಮರೆಯಲ್ಲಿ ನಿಂತು ಈ ಮಾತುಗಳನ್ನು ಕೇಳಿದಳು. 'ಅಮ್ಮಾ, ನಾನು ಇನ್ನೊಂದು ಮದುವೆ ಎಂದಿಗೂ ಮಾಡಿಕೊಳ್ಳುವುದಿಲ್ಲ. ನನಗೆ ಅದರ ಅಗತ್ಯ ತೋರುವುದಿಲ್ಲ' ಎಂದಷ್ಟೇ ಹೇಳಿ ಪ್ಯಾರೆಲಾಲ ಹೊರಗೆ ನಡೆದ. ಸುಂದರಿ ಅದನ್ನು ಕೇಳಿ, ನೀರಿನ ಕೊಡ ತೆಗೆದುಕೊಂಡು ಒಳಗೆ ನಡೆದಳು.

ಆ ದಿನದಿಂದ ಸುಂದರಿ ಆಲೋಚನೆಯಲ್ಲಿ ಬಿದ್ದಳು. ತಾನು ಜೀವದಿಂದಿರುವಾಗ ಪತಿದೇವನ ದ್ವಿತೀಯ ವಿವಾಹ! ಅವಳು ಈ ಆಲೋಚನೆಯಿಂದ ಸುಟ್ಟು ಸುಣ್ಣವಾದಳು. ಐದಾರು ದಿನಗಳು ಕಳೆದುವು. ತನ್ಮಧ್ಯೆ ಇದೇ ವಿಚಾರವಾಗುವಾಗ ಅತ್ತೆ, ಮಗನನ್ನು ಬಲಾತ್ಕರಿಸುವುದನ್ನು ಅವಳು ಕೇಳಿದ್ದಳು. ನೋಡಿದ್ದಳು. ಅವಳಿಗೆ ಜೀವನವು ನೀರಸವಾಯಿತು. ಅದು ಅವಳಿಗೆ ಬೇಡವಾಯಿತು.

ಒಂದು ದಿನ ರಾತ್ರಿ ಅವಳು ಜಲದೇವತೆಯ ಶರಣು ಹೋದಳು. ಮರುದಿನ ಬಹಳ ಹುಡುಕಿದ ಮೇಲೆ ಸುಂದರಿಯ ಶವವು, ಹಳ್ಳಿಯ ಕೆರೆಯಲ್ಲಿ ತೇಲುವುದು ತೋರಿತು. ಅದನ್ನು ಈಚೆಗೆ ಎಳೆದು ನೋಡಿದಾಗ, ಉಟ್ಟಿದ್ದ ಸೀರೆಯ ಸೆರಗಿನಲ್ಲಿ ಒಂದು ಕಾಗದವು ಬರೆದಿದ್ದಿತು. ಅದರಲ್ಲಿ – 'ಪ್ರಾಣನಾಥ! ನಾನೀಗ ಹೋಗುತ್ತೇನೆ. ನಾನು ಯಾರ ಸುಖಕ್ಕೂ ಅಡ್ಡ ಬರುವುದಿಲ್ಲ. ತಾವು ಎರಡನೆ ಮದುವೆ ಅಗತ್ಯ ಮಾಡಿಕೊಳ್ಳಬೇಕು. ತಾವು ನನಗೆ ಬಹಳ ಸುಖ ಕೊಟ್ಟಿರಿ. ಆದರೆ ನಾನು ತಮಗೆ ಯಾವ ಸುಖವನ್ನೂ ಕೊಡಲಾರದವಳಾದೆ. ಈ ಪಾಪಿಯನ್ನು ಕ್ಷಮಿಸಿರಿ. ಇನ್ನೊಬ್ಬ ಭಾಗ್ಯವಂತೆಯನ್ನು ಮದುವೆಯಾಗಿ ನೀವು ಸುಖಿಗಳಾಗಿರಿ. ಅತ್ತೆಮ್ಮನವರನ್ನೂ ಸುಖಿಗಳನ್ನಾಗಿ ಮಾಡಿರಿ' ಎಂದಿದ್ದಿತು.

ಪತ್ರವನ್ನು ಓದಿ, ಅದರಲ್ಲೂ ಅದರ ಕೊನೆಯ ಮಾತುಗಳನ್ನು ಓದಿ, ಪ್ಯಾರೆಲಾಲನಿಗೆ ಮರ್ಮಸ್ಥಾನಕ್ಕೆ ಚೇಳು ಕಡಿದಂತಾಯಿತು. ಅವನು ಸುಂದರಿಯನ್ನು ನೋಡಿ ಅತ್ತ. ಅತ್ತೆಯೂ ಪದ್ಧತಿಪ್ರಕಾರ ಅತ್ತಳು. ಸುಂದರಿಯ ಶವಸಂಸ್ಕಾರವು ನಡೆದು ೧೨ ೧೩ ದಿನಗಳಾದವು. ನಡುವೆ ತಾಯಿ ಬಂದ—'ಮಗೂ' ಸತ್ತವಳಿಗಾಗಿ ಇಷ್ಟು ಪಶ್ಚಾತ್ತಾಪವೇಕೆ? ನಿನಗೆ ಇನ್ನೊಂದು ಹುಡುಗಿಯನ್ನು ತಂದು ಮದುವೆ ಮಾಡಿಸುತ್ತೇನೆ' ಹೀಗೆಂದು ಎರಡು ಮೂರು ಬಾರಿ ಪ್ಯಾರೆಲಾಲನನ್ನು ಸಂತೈಸಿದಳು.

ಒಂದು ತಿಂಗಳಾಗುತ್ತ ಬಂದಿತ್ತು. ಮಧ್ಯಾಹ್ನದ ಸಮಯವಾಗಿತ್ತು. ತಾಯಿ ಎಲ್ಲಿಂದಲೋ ಹೊರಗಿನಿಂದ ಬಂದು— 'ಪ್ಯಾರೆಲಾಲ! ನಾನು ಭಾಗ್ಯವಂತೆ! ಎಲ್ಲಾ ನಿಶ್ಚಯವಾಯಿತು. ಅಪ್ಸರೆಯಂಥ ಹುಡುಗಿಯನ್ನು ನೋಡಿ ಬಂದಿದ್ದೇನೆ. ಅವರು ನಿನ್ನ ಹತ್ತಿರ ಒಂದು ಮಾತು ಕೇಳಲಿಕ್ಕೆ ಈಗಲೇ ಎರಡು ಗಂಟೆಗೆ ಬರುತ್ತಾರೆ. ನೀನು ಬಚ್ಚಲಿಗೆ ಹೋಗಿ ಸ್ನಾನ ಮಾಡಿ ಊಟ ಮುಗಿಸು' ಎಂದಳು. ವಿಚಾರಪರನಾಗಿದ್ದ ಪ್ಯಾರೆಲಾಲ ತಾಯಿಯ ಮಾತುಗಳನ್ನು ಕೇಳಿ— 'ಅಮ್ಮಾ' ಶರೀರವೆಲ್ಲ ಉರಿಯುತ್ತದೆ. ಬಿಸಿನೀರು ಬೇಡ. ಹಳ್ಳಕ್ಕೆ ಹೋಗಿ ತಣ್ಣೀರು ಸ್ನಾನ ಮಾಡಿ ಬರುತ್ತೇನೆ.' ಹೀಗೆಂದು ಹೇಳಿ ಅವನು ಹಳ್ಳಕ್ಕೆ ಹೋದ ಮತ್ತೆ ಭಾರವಾದ ಒಂದು ಕಲ್ಲನ್ನು ಕಟ್ಟಿಕೊಂಡು ಹಳ್ಳದಲ್ಲಿ ಹಾರಿಬಿಟ್ಟ.

ತಾಯಿ ಕಾಯುತ್ತ ಇದ್ದಳು. ಗಂಟೆ ಮೂರಾದರೂ ಪ್ಯಾರೆಲಾಲ ಬರಲಿಲ್ಲ. ಬಂದವರು ಬಹಳ ಹುಡುಕಿದರು. ಆದರೆ ಅವನು ಎಲ್ಲಿಯೂ ಕಾಣಸಿಗಲಿಲ್ಲ.

- 'ಯುಗಾಂತರ'

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ಈಗಿನ ಯುದ್ಧ ಪರಿಸ್ಥಿತಿ!

[ಲೇಖಕರು. ಶ್ರೀ. ಕೆ. ಎಲ್. ಕುಡ್ವ, ಬಿ. ಎ. ಬಿ. ಎಲ್. ಕಾರ್ಕಳ.]

ಕಾಲದ ಯುದ್ಧದಲ್ಲಿ ಫ್ರಾನ್ಸಿನ ಮತ್ತು ಇಂಗ್ಲಾಂಡಿನ ಮುಂದಿನ ಗತಿಯು ನಿಶ್ಚಯವಾಗುತ್ತಲಿರುವುದು. ಈಗಿನ ನಾಗರಿಕತೆಯೂ ಸ್ವಾತಂತ್ರ್ಯವೂ ನಾಶವಾಗುತ್ತದೋ-ಈ ವಿಷಯವೂ ಈ ಯುದ್ಧದಲ್ಲಿಯೇ ನಿಶ್ಚಯವಾಗುತ್ತದೆ. ಬ್ರಿಟಿಷ ಮುಖ್ಯ ಮಂತ್ರಿಗಳಾದ ವಿನ್ಸ್ಟನ್ ಚರ್ಚಿಲರು ಈ ಕಾರಣದಿಂದಲೇ ತಮ್ಮ ಭಾಷಣದಲ್ಲಿ ಜಯವು ಮಿತ್ರಪಕ್ಷದವರಿಗೆ ಸಿಕ್ಕುವ ವರೆಗೆ ನೆಲ-ಜಲ-ಆಕಾಶಗಳಲ್ಲಿ ಎಲ್ಲಿಯೂ ಯುದ್ಧ ಮಾಡುವೆವೆಂದು ಅಭಯವನ್ನು ಕೊಟ್ಟಿರುವರು.

ಜಯ ಸಿಕ್ಕಲು ಆಂಗ್ಲೇಯರಿಗೆ ಸಮಯಬೇಕು, ಸಮಯ ಹೋಗುತ್ತಲೇ ಅವರು ಯುದ್ಧಕ್ಕೆ ತಯಾರಾಗುವರು. ಈ ವಿಷಯ ಹಿಟ್ಲರನು ತಿಳಿದಿರುವನು ಜರ್ಮನಿಯ ಸೈನಿಕರು ಬಹಳವಾಗಿ ಸತ್ತಿರುವರು. ಆದರೂ ಈಗ ೨ ಮಿಲಿಯ ಜರ್ಮನಿಯವರು ೧೨೦ ಮೈಲು ಉದ್ದದ ರಣರಂಗದಲ್ಲಿ ಕಾದಾಡುವರು.

ಹಿಡಿದ ನಂತರ ಇಂಗ್ಲಾಂಡಿನ ಕೂಡೆ ಯುದ್ಧ ಮಾಡಬೇಕೋ-ಯಾ ಫ್ರಾನ್ಸಿನ ಮುಖ್ಯ ಪಟ್ಟಣವನ್ನು ಹಿಡಿಯಬೇಕೋ ಎಂಬದರ ವಿಷಯ ಹಿಟ್ಲರನಿಗೆ ಮುಂಚೆ ನಿಶ್ಚಯವಾಗಿರಲಿಲ್ಲ. ಲಂಡನಿನ ಮೇಲೆ ಯುದ್ಧ ಮಾಡಿದರೆ ಅಮೇರಿಕದವರು ಯುದ್ಧಕ್ಕೆ ಸೇರುವರು. ಯುದ್ಧವು ಕೊನೆಗೊಳಿಸಬೇಕಾದರೆ ಫ್ರಾನ್ಸನ್ನು ಜಯಿಸಬೇಕು ಹಿಂದೆ ಫ್ರೆಂಚರು ಇದ್ದು ಆಂಗ್ಲೇಯರೊಡನೆ ಯುದ್ಧ ಮಾಡುವುದು ಕಷ್ಟ ಫ್ರೆಂಚರ ಮೇಲಣ ಯುದ್ಧದಲ್ಲಿ ಇಟಲಿಯವರು ತನ್ನ ಕಡೆಗೆ ಸೇರಬಹುದು. ಈ ಕಾರಣದಿಂದ ಜರ್ಮನಿಯ ಸೇನಾಧಿಪತಿಯವರು ಆಂಗ್ಲಾಳದ ಮೇಲಣ ಯುದ್ಧವನ್ನು ಮುಂದರಿಸದೆ ಪ್ಯಾರಿಸ್ ಹಿಡಿಯಬೇಕೆಂಬ ಧ್ಯೇಯವನ್ನು ಇಟ್ಟು

ಈ ಪ್ರಪಂಚದ ಸೃಷ್ಟಿಯಾಗಾಯ್ತು ಇಂಥಾ ಮಹಾಯುದ್ಧವು ನಡೆಯಲಿಲ್ಲ. ಎರಡು ಪಕ್ಷದವರು ಅತ್ಯಂತ ಪರಾಕ್ರಮವನ್ನು ಶೌರ್ಯವನ್ನು ಚಾತುರ್ಯವನ್ನು ತೋರಿಸುತ್ತಲಿರುವರು. ಮಿತ್ರ ಸೈನಿಕರ ಗಂಡಾಂತರವನ್ನು ನೋಡಿ ನೀಚ ಬುದ್ಧಿಯಿಂದ ಹಿಂದಿನಿಂದ ಮೋಸ ಕೃತ್ಯದಿಂದ ಮಿತ್ರರಾಜ್ಯರಿಗೆ ಪೆಟ್ಟು ಕೊಡಬೇಕೆಂತ ತಾ. ೧೧ರಲ್ಲು ಇಟಲಿಯು ಜರ್ಮನಿಯ ಸಹಾಯಕ್ಕೆ ಯುದ್ಧವನ್ನು ಸೇರಿರುವುದು ಇಟಲಿಯು ಯುದ್ಧ ಪ್ರವೇಶವಾದುದರಿಂದ ತಟಸ್ಥರಾದ ಅಮೇರಿಕದವರು ಮಿತ್ರಪಕ್ಷದವರಿಗೆ ಸಹಾಯಕ್ಕೆ ಬಾರದೆ ನಿಲ್ಲಲಾರರು ಈ ವರೆಗೂ ಯುದ್ಧದಲ್ಲಿ ಸೇರದಂತೆ ಇಟಲಿಯು ತಟಸ್ಥರಾಗಿ ಇರುವ ಹಾಗೆ ಪ್ರೆಸಿಡೆಂಟ ರೂಸ

ಕಾಲಿವೆಯು ಮಾರ್ಗವನ್ನು ಇನ್ನು ಉಪಯೋಗಿಸಲು ಸಾಧ್ಯವಿಲ್ಲ. ಇಟಲಿಯ ಕೂಡೆ ೨೦೦೦ ವಾಯು ವಿಮಾನಗಳು ಇರುವುವು. ಅವುಗಳಿಂದ ಫ್ರಾನ್ಸಿನ ದಕ್ಷಿಣ ಪ್ರಾಂತ್ಯಗಳಿಗೆ ಬೋಂಬಿನ ಸುರಿಮಳೆಯನ್ನು ಹಾಕಬಹುದು. ಇಟಲಿಯ ಹೊಸ ನೌಕಾ ಸೈನ್ಯಕ್ಕೆ ಬ್ರಿಟಿಷರು ಹೆದರಲಿಕ್ಕಿಲ್ಲ. ಪ್ರಜಾಪ್ರಭುತ್ವದಲ್ಲಿ ಮುಂದಾಳಾಗಿಯೂ ರೋಮಿನ ಸಂಸ್ಕೃತಿಯಲ್ಲಿ ಉತ್ತಮ ಜನಾಂಗವಾಗಿದ್ದ ಫ್ರೆಂಚರ ದೇಶಕ್ಕೆ ಈ ಇಟಲಿಯಿಂದ ಹೆಚ್ಚಿನ ತೊಂದರೆಯು ಉಂಟಾಗುವ ಸಂದರ್ಭವು ಈಗ ಬಂದೊದಗಿಯದೆ.

ಯುದ್ಧದ ವಾಯು ಹಡಗಗಳನ್ನು ನಡಿಸಲು ಬೇಕಾದ ೫೦ ಸಾವಿರ(pilot) ಜನರೂ ಯುದ್ಧಕ್ಕೆ ಬೇಕಾಗುವ ಹತ್ತು ಮಿಲಿಯ ಜನರು ಭಾರತ ದೇಶದಲ್ಲಿರುವರು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ಭರವಸೆಯನ್ನು ಕೊಟ್ಟರೆ ನಮ್ಮ ದೇಶದ ಸರ್ವಸ್ವವೂ ಬ್ರಿಟಿಷರ ಸಹಾಯಕ್ಕೆ ಹೊರಡುವುದೆಂಬದಕ್ಕೆ ಸಂದೇಹವಿಲ್ಲ ಹಿಂದೂದೇಶದಲ್ಲಿ ಒಂದು ವರ್ಷದಲ್ಲಿ ೫೦೦೦ ಜನರನ್ನು ಯುದ್ಧ ಹಡಗುಗಳನ್ನು ನಡಿಸುವುದಕ್ಕೆ ತಯಾರು ಮಾಡಬಹುದು. ೧ ಮಿಲಿಯ ಜನರನ್ನು ಸೈನಿಕರಾಗಿ ತರಬೇತು ಮಾಡಬಹುದು ಹಿಂದೂದೇಶದ ಸೈನ್ಯದ ಕಮಾಂಡರಾಗಿದ್ದು ಈಗ ೧೯೩೩ರಲ್ಲಿ ಪೆನ್ಶನ್ ಹೊಂದಿ ಹಿಂದೂದೇಶದಲ್ಲಿ ವಾಸಮಾಡಿಕೊಂಡಿರುವ ಲೆಫ್ಟಿನೆಂಟ ಕರ್ನಲ್ ಎಂ ಸಿ ಕೂಟ್ ಎಂಬ ಪ್ರಖ್ಯಾತ ಮನುಷ್ಯರು ಹಿಂದೂದೇಶಕ್ಕೆ ಕೂಡಲೇ ಸ್ವರಾಜ್ಯವನ್ನು ಕೊಟ್ಟು ಅಲ್ಲಿಂದ ಸಹಾಯವನ್ನು ಪಡೆಯಬೇಕೆಂದ ಅಭಿಪ್ರಾಯಪಟ್ಟಿರುವರು

ಆಗಲಿಂದರೆ ಬ್ರಿಟಿಷ್ ಜನಾಂಗವು ಕಸ್ತರಿಸುವುದೇ? ಅಥವಾ ಹಿಂದೂದೇಶದ ಜನರ ಮೇಲೆ ನಂಬಿಕೆಯಿಲ್ಲದ ಹಿಂದಿನಂತೆ ನಡೆಯುವುದೇ?

ಗವರ್ನರರು ಹೆಕ್ಕಿದ ಕೆಲವು ಜನರನ್ನು ಈ ವಿಷಯ ಮಾತನಾಡುವರಿಯಾ ಚರ್ಚಿಸುವರೆ ಕರೆದಿರುವರು ಗ್ರಾಮದಲ್ಲಿಯೂ ಪಟ್ಟಣಗಳಲ್ಲಿಯೂ ಯುದ್ಧದ ಕಮಿಟಿಗಳು ಸ್ಥಾಪನೆ ಮಾಡುವರೆ ನಮ್ಮರಸರು ಆಲೋಚಿಸುವರು

ಈ ರೀತಿ ನಡೆದರೆ ಸಾಕಷ್ಟು ಸಹಾಯವು ಬ್ರಿಟಿಷರಿಗೆ ಸಿಕ್ಕೀತೇ? ಮಹಾತ್ಮಾ ಗಾಂಧಿಯವರ ಶ್ರೀ ರಾಜಗೋಪಾಲಾಚಾರಿಯವರ ಸಹಾಯವಿಲ್ಲದೆ ಅಥವಾ ಅವರ ಸಹಾನುಭೂತಿಯಿಲ್ಲದೆ ಎಂದಿಗೂ ಈ ಪ್ರಯತ್ನವು ಸಫಲವಾಗಲಾರದು.



ಬ್ರಿಟನಿನ ಕ್ವೀನ್ ಎಲಿಜಬೆತ್ ಹಡಗು ನ್ಯೂಯೋರ್ಕ್ ಸಮುದ್ರದಿಂದ ಪ್ರಯಾಣ ಮಾಡುವಾಗ ತೆಗೆದ ಚಿತ್ರ

ಫ್ಲಂಡರ್ಸನಲ್ಲಿರುವ ೩॥ ಲಕ್ಷ ಬ್ರಿಟಿಷ ಮತ್ತು ಬೆಲ್ಜಿಯಮಿನ ಸೈನಿಕರು ತನ್ನ ಕೈ ತಪ್ಪಿದರೆಂಬ ಮನೋವ್ಯಥೆಯು ಹಿಟ್ಲರನಿಗೆ ಇರುವುದು ಈ ವರೆಗೆ ಜಯಲಕ್ಷ್ಮಿಯು ಹಿಟ್ಲರನ ಕಡೆಗೆ ಇರುವುದು ಹೊಲೆಂಡನ್ನು ಜಯಿಸಿ ಬೆಲ್ಜಿಯಮನ್ನು ಪ್ರವೇಶಿಸಿ ಬೆಲ್ಜಿಯಮಿನ ಅರಸನಾದ ಲಿಯೋಪೋಲ್ಡನು ತನಗೆ ಶರಣಾಗತನಾದ ಕೂಡಲೇ ಆಂಗ್ಲಾಳದ ಮೇಲೆ ಯುದ್ಧ ಮಾಡಬೇಕೆಂತ ಹಿಟ್ಲರನು ಮೊದಲು ತನ್ನ ಸೈನ್ಯವನ್ನು ಇಂಗ್ಲಿಷ ಚಾನಲಿನ ಮೇಲಿರುವ ಬೊಲೋನ್, ಡಂಕರ್ಕ್, ಕಲೆ ಎಂಬ ಬಂದರುಗಳನ್ನು ಹಿಡಿದನು. ೧೯೧೪-೧೯೧೮ರಲ್ಲಿ ಕೈಸರನಿಗೆ ಈ ಸ್ಥಳಕ್ಕೆ ಮುಟ್ಟಲಿಕ್ಕೆ ಮತ್ತು ಫ್ರಾನ್ಸಿನ ಬಂದರುಗಳನ್ನು ಹಿಡಿಯುವ ಪ್ರಯತ್ನ ಮಾಡುವರೆ ೩ ವರ್ಷಗಳು ಹಿಡಿಯಿತು ಈಗಿನ ಜರ್ಮನಿಯವರಿಗೆ ೫ ತಿಂಗಳ ಯುದ್ಧದಲ್ಲಿ ಇಷ್ಟು ಸಾಮ್ರಾಜ್ಯ ಸಿಕ್ಕಿರುವುದು.

ಇಂಗ್ಲಿಷ ಚಾನಲಿನ ಬಂದರುಗಳನ್ನು ಕೊಂಡು ಸೋಮ ನದಿಯ ಬಳಿಯಲ್ಲಿ ಅತ್ಯಂತ ಘೋರವಾದ ಯುದ್ಧವನ್ನು ಈಗ ನಡಿಸುತ್ತಲಿರುವರು.

ಈ ಮಹಾಯುದ್ಧದಲ್ಲಿ ಮಿತ್ರ ಸೈನಿಕರು ಹಿಮ್ಮೆಟ್ಟಲಿಲ್ಲ ಟೆಂಕುಗಳ ಮತ್ತು ವಾಯು ಹಡಗಗಳ ಕೂಡುವಿಕೆಯಿಂದ ಈ ಯುದ್ಧವು ನಡೆಯುತ್ತಲಿರುವುದು.

ವೆಲ್ಟರು. ಬಹಳ ಪ್ರಯತ್ನಮಾಡಿದರು ಅವರ ಪ್ರಯತ್ನವು ನಿಷ್ಫಲವಾಯಿತು. ಮುಸಲೋನಿಯ ಅತ್ಯಾಸೆಯೂ ಕುಟಿಲ ಬುದ್ಧಿಯೂ ಇಟಲಿಯ ನಾಶದ ಕಾರಣವಾಗುವ ಸಂದರ್ಭವು ಒದಗಿಯದೆ ಈ ರೀತಿ ಇಟಲಿಯು ಯುದ್ಧಕ್ಕೆ ಸೇರಿದ ಸಂಬಂಧ ಹಿಂದೂದೇಶಕ್ಕೆ ಬರುವ ಸುಯೋಜ

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿದೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಭಾರೀ ಕಮಿಷನು.

ಈ ಸೂ ಮಾರ್ಚಿ 15ರ ಒಳಗೆ ರೂ 1 ಕಳುಹಿಸುವವರಿಗೆ ಸಹ್ಯಾದ್ರಿ ಖಂಡದಲ್ಲೇ ಕಳುಹಿಸುವೆವು

ಮಂಗಳೂರು ಏಜೆಂಟರು
ಯು. ಪಾಂಡುರಂಗ ನಾಯಕ್,
ರಥಬೀದಿ ಮಂಗಳೂರು

ಸೋಲ್ ಏಜೆಂಟ್ಸ್
ಶ್ರೀಮ ಮೆಡಿಕಲ್ ಹಾಲ್,
ಗುತ್ತಿಗಾರ್ ಹ ಕ.

HALFTONE & LINE
BLOCK MAKING
UNDERTAKEN
Sharada Press,
MANGALORE

ಜಿಲ್ಲಾ ಸಮಾಚಾರ

ಮಂಗಳೂರು

ಯುದ್ಧ ಸಹಾಯ ಬೇಡಿಕೆ:— ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಮದ್ರಾಸ್ ಶಾಖೆಯ ವ್ಯವಸ್ಥಾಪಕ ಕಾರ್ಯದರ್ಶಿ ಮಿಸ್. ಮುರಿಯಲ್ ಸ್ಕೈಮನ್‌ರವರು ಕಳೆದ ಶನಿವಾರ ಸಂಜೆ ಕೆನರಾ ಹೈಸ್ಕೂಲಿನಲ್ಲಿ, ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಟಿ. ಎಸ್ ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ಒಂದು ಭಾಷಣವೀಯುತ್ತಾ ಇಂದಿನ ಮಹಾಯುದ್ಧದಲ್ಲಿ, ಬ್ರಿಟಿಶ್ ರೆಡ್ ಕ್ರಾಸ್ ದಳವು ನಡೆಸುತ್ತಿರುವ ಅಸಮಾನ ಸೇವೆಯನ್ನು ವಿವರಿಸಿ, ರೆಡ್ ಕ್ರಾಸ್ ಸಂಸ್ಥೆಗೆ ಸಕಲರೂ ಉದಾರ ಹಸ್ತದಿಂದ ಸಹಾಯ ಮಾಡಬೇಕಾಗಿ ಕೇಳಿಕೊಂಡರು. ಜಿಲ್ಲಾ ಕಲೆಕ್ಟರರಾದ ರಾವ್ ಬಹದ್ದೂರ್ ವಿ ಪೊನ್ನುಸ್ವಾಮಿ ಪಿಳ್ಳೆಯವರು ಪ್ರಕೃತದ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿ, ಗವರ್ನರರ ವಾರ್ ಚೇರಿಟೀಸ್-ಫಂಡಿಗೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿಕೊಂಡರು.

ಪತ್ರಿಕೋದ್ಯಮಿ ಸಂಘದ ಮಹಾಸಭೆ:— ದ ಕ ಜಿಲ್ಲಾ ಪತ್ರಿಕಾ ವ್ಯವಸಾಯಿಗಳ ಸಂಘದ ವಾರ್ಷಿಕ ಮಹಾಸಭೆಯು ತಾ ೧೬ನೇ ಆದಿತ್ಯವಾರ ಮು ಜಾನೆ ೯। ತಾಸಿಗೆ ಸರಿಯಾಗಿ ಡಿ ಪಿ ಮಿಶನ್ ಹಾ ಎ ಶಾಲೆಯಲ್ಲಿ ಜರಗಿತು. ಶ್ರೀ ಹುರುಳಿ ಭೀಮರಾವ ರ ಅಧ್ಯಕ್ಷತೆ ವಹಿಸಿದ್ದರು. ಲೆಕ್ಕಪತ್ರ ಸ್ವೀಕಾರ ಇತ್ಯಾದಿಗಳಾದ ಬಳಿಕ, ೧೯೪೦ ದಿನ ವರ್ಷದ ಕಾರ್ಯಕಾರೀ ಮಂಡಳಿಯ ಚುನಾವಣೆ ನಡೆಯಿತು. ಹೀಗಳಾದ ಹುರುಳಿ ಭೀಮರಾಯರು ಅಧ್ಯಕ್ಷ, ಹಿ ರಾಮರಾಯ ಸುಳ್ಯ-ಉಪಾಧ್ಯಕ್ಷ, ಕೆ ಕೃಷ್ಣರಾವ್-ಕೋಶಾಧಿಕಾರಿ, ಕುಮಾರ ವೆಂಕಣ್ಣ-ಕಾರ್ಯದರ್ಶಿ, ಕಡೆಂಗೋಡ್ಲು ಶಂಕರಭಟ್ಟ, ಉಡುಪಿ ಗೋವಿಂದ ರಾವ್ ಮತ್ತು ಎಂ ಎಸ್ ಶ್ರೀನಿವಾಸ-ಕಾರ್ಯಕಾರಿ ಮಂಡಳಿ ಸದಸ್ಯರು. ಲಘು ಉಪಹಾರದೊಡನೆ ಸಭಾಂತ್ಯವಾಯಿತು.

ಸತ್ಕಾರ್ಯೋತ್ತೇಜಕ ನಾಟಕ ಸಭಾ, ಮಂಗಳೂರು:— ಇವರು ಶ್ರೀ ಜ್ಞಾನೋದಯ ಸಮಾಜದ ರಾತ್ರಿ ಶಾಲೆಯ ಸಹಾಯಾರ್ಥವಾಗಿ, ಕಳೆದ ಆದಿತ್ಯವಾರ ಸಂಜೆ ದಿವಂಗತ ಮಾಧವ ತಿಂಗಳಾಯರಿಂದ ಬರೆಯಲ್ಪಟ್ಟ "ಬದಿರಕ್ಕಸೆ" ಎಂಬ ತುಳು ನಾಟಕವನ್ನು, ತುಳು ಮಹಾಸಭೆಯ ಅಧ್ಯಕ್ಷರೂ, ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯೂಟರರೂ ಆದ ಶ್ರೀ. ಆನಂದ ಕಳ್ಳಾರ್, ಬಿ. ಎ, ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣಾ ಸಿನೆಮಾ ಮಂದಿರದಲ್ಲಿ ಯಶಸ್ವಿಯಾಗಿ ಅಭಿನಯಿಸಿದರು. ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ತುಳು ಸಾಹಿತ್ಯದ ವಿಚಾರವಾಗಿಯೂ, ಅದರ ಏಳ್ಗೆಗಾಗಿ ನಾವು ಹೋರಾಡಬೇಕಾದ ಅಗತ್ಯವನ್ನೂ, ತುಳು ರಾಷ್ಟ್ರದ ಗತ ವೈಭವವನ್ನೂ ವಿವರಿಸಿದರು. ಶ್ರೀ ಮೋಹನ ಪ ತಿಂಗಳಾಯರು ನಾಟಕದ ಅಂತ್ಯದಲ್ಲಿ ಆ ನಾಟಕದ ಉದ್ದೇಶವನ್ನು ವಿವರಿಸುತ್ತಾ ತುಳು ಸಾಹಿತ್ಯದ ಏಳ್ಗೆಯನ್ನು ತಿಳಿಸಿ ಅದಕ್ಕೆ ಪ್ರೋತ್ಸಾಹ ಕೊಡುವುದಕ್ಕಾಗಿಯೂ, ಜ್ಞಾನೋದಯ ಸಮಾಜದ ರಾತ್ರಿ ಶಾಲೆಯ ಸಹಾಯಾರ್ಥವಾಗಿಯೂ ಪರದಕ್ಷಿಣೆಯ ಬ ರಾಷ್ಟ್ರ ಸನನ್ನ ಸಮಾಜದಿಂದೋಡಿಸಿ ತನ್ಮೂಲಕ ಸಮಾಜೋದ್ಧಾರ ನಡೆಸುವ ಮಹತ್ಕಾಂಕ್ಷೆಯಿಂದಲೂ ಈ ನಾಟಕ ಅಭಿನಯಿಸಲ್ಪಟ್ಟಿದೆ ಎಂದರು. ಶ್ರೀ ಪಿ ನರಸಪ್ಪನವರೂ ಸಮಯೋಚಿತ ಭಾಷಣ ವಿತ್ತರು. ನಾಟಕವು ಸರ್ವ ಜನಾದರಣೀಯವಿತ್ತು. ಅಭಿನಯಗಾರರು ಆಸ ಸಮಾಜಾತ ವರ್ಗ ತೋರಿ ಅಭಿನಯಿಸಿ, ತುಳು ಸಾಹಿತ್ಯದ ಪ್ರತಿಭೆ-ಶಕ್ತಿಗಳನ್ನು ತೋರಿದರು.

ಯುವಕ ದಳ— ಕುದ್ರೋಳಿ ಶ್ರೀ ಬಿಕುಂಭ ಭಗವತೀ ಕ್ಷೇತ್ರದ ಯುವಕ ದಳದ ಸ್ಥಾಪನೆಯು, ಕಳೆದ ಆದಿತ್ಯವಾರ ಸಂಜೆ ಭಗವತೀ ದೇವಸ್ಥಾನದಲ್ಲಿ ಶ್ರೀ ಕುಮಾರ ವೆಂಕಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಬಿ ಕರ್ಕಪ್ಪನವರು, ಸಂಘದ ಅಧ್ಯಕ್ಷರಾಗಿಯೂ ಶ್ರೀ ಬಿ ಬಾಬುರವರ ಕೋಶಾಧಿಕಾರಿಯಾಗಿಯೂ ಶ್ರೀ ಪಿ ಶೀನಪ್ಪನವರು ಯುವಕ ದಳದ ನಾಯಕ (ಕೆಪ್ಟನ್) ರಾಗಿಯೂ ಚುನಾಯಿಸಲ್ಪಟ್ಟರು.

ನಗರ ಸಭೆ:— ನಮ್ಮ ನಗರ ಸಭೆಯು ತಾ ೧೭ನೇ ಸಂಜೆ ೫ಕ್ಕೆ ಸಾಮಾನ್ಯವಾಗಿ ಮುನ್ಸಿಪಲ್ ಆಫೀಸಿನಲ್ಲಿ ಜರಗಿತು.

ಕಳವು:— ತಾರೀಕು ೧೩ನೇ ರಾತ್ರಿ ಕದ್ರಿ ಜೋಗಿ ಮಠದಲ್ಲಿ ಬಹಳ ಪುರಾತನ ಕಾಲದಿಂದಲೂ ಇದ್ದ ಶ್ರೀ ಗೋರಕ ನಾಥ ಪ್ರತಿಮೆಯನ್ನು ಯಾರೋ ದುರಾತ್ಮರು ಅಪಹರಿಸಿಕೊಂಡು ಹೋಗಿರುವರಲ್ಲದೆ, ಶ್ರೀ ಮಚ್ಛೇಂದ್ರ ವಿಗ್ರಹವನ್ನು ಮುರಿದು ಒಂದು ಜಾಗದ ಮುಂದ ಬೇಲಿ ಮಾಡಿ ಅಲ್ಲಿಯೇ ಬಿಟ್ಟು ಹೋಗಿರುವುದಾಗಿಯೂ ತಿಳಿದುಬಂದಿದೆ.

ಟೆಕ್ಸ್ಟ್ ಬುಕ್ ಕಮಿಟಿಯಿಂದ

ಮಂಜೂರಾತಿಪಡೆದ ಶಾಲಾಪುಸ್ತಕಗಳು

[1939ನೇ ಇಸವಿ ತಿಂಗಳ ಸರಕಾರವು ಹೊರಡಿಸಿದ ಪಟ್ಟಿಗೆ ಸರಿಯಾಗಿ ಒಪ್ಪಿದ ಮಂಜೂರಾದ ಶಾಲಾ ಪುಸ್ತಕಗಳು.

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರೆ ಮತ್ತು ಕಥೆಗಳು		ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ	
ಪುಸ್ತಕ	ಬೆಲೆ	ಪುಸ್ತಕ	ಬೆಲೆ
4ನೇ ದರ್ಜೆ	0-[illegible]-0	4ನೇ ದರ್ಜೆ	0—2—0
5ನೇ	0-[illegible]-0	5ನೇ	0—[illegible]

ಸಿವಿಕ್ಸ್ ಅಥವಾ ಪ್ರಜಾಧರ್ಮ		ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ	
ಪುಸ್ತಕ	ಬೆಲೆ	ಭೂವಿವರ	
4ನೇ ದರ್ಜೆ	0—2—0	ಪುಸ್ತಕ	ಬೆಲೆ
5ನೇ	0—2—[illegible]	4ನೇ	0—2—0
6ನೇ	0—[illegible]—0	5ನೇ	0—3—0
7ನೇ	0—3—0		
8ನೇ	0—3—0		

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ 1—0—0

ಶಾಲಾ ಉಪಯೋಗಕ್ಕೆ (ಲೈಬ್ರೇರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	„	0—1—6
ಸಿವಿಕ್ಸ್	„	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಇಟೆಲಿಯನರ ಸೆರೆ:— ಇಟಲಿಯು ಮಿತ್ರರಾಷ್ಟ್ರಗಳ ಮೇಲೆ ಯುದ್ಧ ಹೂಡಿದುದರಿಂದ ನಮ್ಮ ಜಿಲ್ಲೆಯಲ್ಲಿರುವ ಇಟಲಿಯನರು ವೈರಿ ರಾಜ್ಯದ ಪ್ರಜೆಗಳಾಗಿದ್ದಾರೆ. ಜಿಲ್ಲೆಯಲ್ಲಿ ೩೮ ಮಂದಿ ಇಟೆಲಿಯನ ಪಾದ್ರಿಗಳೂ ೧೫ ಮಂದಿ ಪಾದ್ರಿಣಿಗಳೂ ಇದ್ದಾರೆ.

ಜಿಲ್ಲೆಯಲ್ಲಿರುವ ಎಲ್ಲಾ ಇಟಲಿಯನ ಗಂಡಸರು ಹಾಗೂ ಹೆಂಗಸರು ತಮ್ಮ ತಮ್ಮ ವಾಸಸ್ಥಳಗಳನ್ನು ಅಪ್ಪಣೆ ಹೊರತು ಬಿಟ್ಟು ಹೋಗಕೂಡದೆಂದೂ, ವಾಸಿಸುತ್ತಿರುವ ಸ್ಥಳ-ಪಟ್ಟಣಗಳನ್ನು ಬಿಡುವರದೆ ಈ ಜಿಲ್ಲಾ ಪೋಲೀಸ್ ಅಧಿಕಾರಿಗಳು ತಾ ೧೩ರಂದು ಮಂಗಳೂರಿನ ಸಕಲ ಇಟಲಿಯನರಿಗೂ ಅಪ್ಪಣೆ ಕೊಟ್ಟಿದ್ದಾರೆ.

ಸೈಂಟ್ ಎಲೋಸಿಯಸ್ ಕಾಲೇಜ್: ಬಿ ಎ ಪರೀಕ್ಷೆಯ ಫಲಿತಾಂಶ—

	ಪರೀಕ್ಷೆಗೆ ಕುಳಿತವರು	ಪಾಸಾದವರ ಸಂಖ್ಯೆ	ಕ್ಲಾಸ್ I	II	III
ಎಲ್ಲಾ ಭಾಗಗಳಲ್ಲಿ	[illegible]	[illegible]	[illegible]		
ಇಂಗ್ಲಿಷ್	[illegible]	[illegible]	[illegible]		[illegible]
ದೇಶಭಾಷೆ	[illegible]	[illegible]	[illegible]	[illegible]	[illegible]
ಗಣಿತ ಶಾಸ್ತ್ರ	[illegible]	[illegible]	[illegible]	[illegible]	[illegible]
ಫಿಸಿಕ್ಸ್	[illegible]	[illegible]	[illegible]	[illegible]	[illegible]
ಕೆಮಿಸ್ಟ್ರಿ	[illegible]	[illegible]	[illegible]	[illegible]	[illegible]
ಅರ್ಥಶಾಸ್ತ್ರ	[illegible]	[illegible]	[illegible]	[illegible]	[illegible]

ಪುತ್ತೂರು

ಅಭಿನಂದನೆ ಪುತ್ತೂರಿನ ವಿದ್ವಾನ್ ಶ್ರೀ ಜಿ ಎನ್ ಲಕ್ಷ್ಮಣ ಪೈಗಳ ಮದರಾಸ ವಿಶ್ವವಿದ್ಯಾನಿಲಯದ ಎಂ ಓ ಎಲ್ ಡಿಗ್ರಿ ಪರೀಕ್ಷೆಯ ಮೂರನೆಯ ಭಾಗದಲ್ಲಿ ಉತ್ತೀರ್ಣರಾಗಿದ್ದಾರೆ.

ಕುಂದಾಪುರ

ಹರಿಜನರ ವಿದ್ಯಾರ್ಥಿ ಭವನ: ಇಲ್ಲಿ ಹೊಸತಾಗಿ ಹರಿಜನ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿಭವನವು ತೆರೆಯಲ್ಪಟ್ಟಿದೆ ೧೦ ಮಂದಿ ವಿದ್ಯಾರ್ಥಿಗಳಿದ್ದಾರೆ.

ವಗಾರ್ವರ್ಗಿ—ಸ್ಥಳೀಯ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಕೆ ರಾಮಯ್ಯ ಶೆಟ್ಟರಿಗೆ ಕಾಸರಗೋಡಿಗೆ ವರ್ಗವಾಗಿದೆ.

ಪುತ್ತೂರು ರೇಂಜ್ ಉಪಾಧ್ಯಾಯರ ಸಭೆ:— ಕಳೆದ ತಾ. ೮—೬—೪೦ನೇ ಶನಿವಾರ ಇಲ್ಲಿಯ ಬಿ. ಎಂ. ಹಾ. ಎ. ಶಾಲೆಯಲ್ಲಿ ಶ್ರೀ ಕೆ. ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

(ಬನೆಯ ಪುಟಕ್ಕೆ ಮುಂದುವರಿಯುತ್ತದೆ)

ಈಗಿನ ಯುದ್ಧ ಪರಿಸ್ಥಿತಿ!

[ಲೇಖಕರು ಶ್ರೀ. ಕೆ. ಎಲ್. ಕುಡ್ವ, ಬಿ ಎ ಬಿ ಎಲ್. ಕಾರ್ಕಳ]

ಇಂದಿನ ಯುದ್ಧದಲ್ಲಿ ಫ್ರಾನ್ಸಿನ ಮತ್ತು ಇಂಗ್ಲಾಂಡದ ಮುಂದಿನ ಗತಿಯು ನಿಶ್ಚಯವಾಗುತ್ತಲಿರುವುದು. ಈಗಿನ ನಾಗರಿಕತನವೂ ಸ್ವಾತಂತ್ರ್ಯವೂ ನಾಶವಾಗುತ್ತದೋ—ಈ ವಿಷಯವೂ ಈ ಯುದ್ಧದಲ್ಲಿಯೇ ನಿಶ್ಚಯವಾಗುತ್ತದೆ. ಬ್ರಿಟಿಷ ಮುಖ್ಯ ಮಂತ್ರಿಗಳಾದ ವಿನ್ಸ್ಟನ್ ಚರ್ಚಿಲರು ಈ ಕಾರಣದಿಂದಲೇ ತಮ್ಮ ಭಾಷಣದಲ್ಲಿ ಜಯವು ಮಿತ್ರಪಕ್ಷದವರಿಗೆ ಸಿಕ್ಕುವ ವರೆಗೆ ನೆಲ—ಜಲ—ಆಕಾಶಗಳ ಎಲ್ಲೆಲ್ಲಿಯೂ ಯುದ್ಧ ಮಾಡುವೆವೆಂದು ಅಭಯವನ್ನು ಕೊಟ್ಟಿರುವರು

ಜಯ ಸಿಕ್ಕಲು ಆಂಗ್ಲೇಯರಿಗೆ ಸಮಯಬೇಕು, ಸಮಯ ಹೋಗುತ್ತಲೇ ಅವರು ಯುದ್ಧಕ್ಕೆ ತಯಾರಾಗುವರು. ಈ ವಿಷಯ ಹಿಟ್ಲರನು ತಿಳಿದಿರುವನು ಜರ್ಮನಿಯ ಸೈನಿಕರು ಬಹಳವಾಗಿ ಸತ್ತಿರುವರು ಆದರೂ ಈಗ ೨ ಮಿಲಿಯ ಜರ್ಮನಿಯವರು ೧೨೦ ಮೈಲು ಉದ್ದದ ರಣರಂಗದಲ್ಲಿ ಕಾದಾಡುವರು.

ಫ್ಲೆಂಡರ್ಸನಲ್ಲಿರುವ ೩॥ ಲಕ್ಷ ಬ್ರಿಟಿಷ ಮತ್ತು ಬೆಲ್ಜಿಯಮಿನ ಸೈನಿಕರು ತನ್ನ ಕೈ ತಪ್ಪಿದರೆಂಬ ಮನೋವ್ಯಥೆಯು ಹಿಟ್ಲರನಿಗೆ ಇರುವುದು. ಈ ವರೆಗೆ ಜಯಲಕ್ಷ್ಮಿಯು ಹಿಟ್ಲರನ ಕಡೆಗೆ ಇರುವುದು. ಹೊಲ್ಲೆಂಡನ್ನು ಜಯಿಸಿ ಬೆಲ್ಜಿಯಮನ್ನು ಪ್ರವೇಶಿಸಿ ಬೆಲ್ಜಿಯಮಿನ ಅರಸನಾದ ಲಿಯೋಪೊಲ್ಡನು ತನಗೆ ಶರಣಾಗತನಾದ ಕೂಡಲೇ ಇಂಗ್ಲಾಂಡದ ಮೇಲೆ ಯುದ್ಧಮಾಡಬೇಕೆಂತ ಹಿಟ್ಲರನು ಮೊದಲು ತನ್ನ ಸೈನ್ಯವನ್ನು, ಇಂಗ್ಲಿಷ ಚನಲಿನ ಮೇಲೆಯಿರುವ ಬೊಲೋನ್, ಡಂಕರ್ಕ್, ಕೆಲೆ ಎಂಬ ಬಂದರುಗಳನ್ನು ಹಿಡಿದನು. ೧೯೧೪—೧೯೧೮ರಲ್ಲಿ ಕೈಸರನಿಗೆ ಈ ಸ್ಥಳಕ್ಕೆ ಬರುವರೆ ಮತ್ತು ಫ್ರಾನ್ಸಿನ ಬಂದರುಗಳನ್ನು ಹಿಡಿಯುವ ಪ್ರಯತ್ನಮಾಡುವರೆ ೪ ವರ್ಷಗಳು ಹಿಡಿಯಿತು ಈಗಿನ ಜರ್ಮನಿಯವರಿಗೆ ೮ ತಿಂಗಳ ಯುದ್ಧದಲ್ಲಿ ಅಷ್ಟು ರಾಜ್ಯವು ಸಿಕ್ಕಿರುವುದು

ಇಂಗ್ಲಿಷ ಚನಲಿನ ಬಂದರುಗಳನ್ನು ಹಿಡಿದ ನಂತರ ಇಂಗ್ಲಾಂಡಿನ ಕೂಡೆ ಯುದ್ಧ ಮಾಡಬೇಕೋ—ಯಾ ಫ್ರಾನ್ಸಿನ ಮುಖ್ಯ ಪಟ್ಟಣವನ್ನು ಹಿಡಿಯಬೇಕೋ ಎಂಬದರ ವಿಷಯ ಹಿಟ್ಲರನಿಗೆ ಮುಂಚೆ ನಿಶ್ಚಯವಾಗಿರಲಿಲ್ಲ. ಲಂಡನಿನ ಮೇಲೆ ಯುದ್ಧ ಮಾಡಿದರೆ ಅಮೇರಿಕದವರು ಯುದ್ಧಕ್ಕೆ ಸೇರುವರು ಯುದ್ಧವು ಕೊನೆಗೊಳಿಸಬೇಕಾದರೆ ಫ್ರಾನ್ಸನ್ನು ಜಯಿಸಬೇಕು. ಹಿಂದೆ ಫ್ರೆಂಚರು ಇದ್ದು ಆಂಗ್ಲೇಯರೊಡನೆ ಯುದ್ಧ ಮಾಡುವುದು ಕಷ್ಟ ಫ್ರೆಂಚರ ಮೇಲಣ ಯುದ್ಧದಲ್ಲಿ ಇಟೆಲಿಯವರು ತನ್ನ ಕಡೆಗೆ ಸೇರಬಹುದು ಈ ಕಾರಣದಿಂದ ಜರ್ಮನಿಯ ಸೇನಾಧಿಪತಿಯವರು ಆಂಗ್ಲಾಂಡದ ಮೇಲಣ ಯುದ್ಧವನ್ನು ಮುಂದರಿಸದೆ ಪ್ಯಾರಿಸ್ ಹಿಡಿಯಬೇಕೆಂಬ ಧ್ಯೇಯವನ್ನು ಇಟ್ಟುಕೊಂಡು ಸೋಮ ನದಿಯ ಬಳಿಯಲ್ಲಿ ಅತ್ಯಂತ ಘೋರವಾದ ಯುದ್ಧವನ್ನು ಈಗ ನಡಿಸುತ್ತಲಿರುವರು.

ಈ ಮಹಾಯುದ್ಧದಲ್ಲಿ ಮಿತ್ರ ಸೈನಿಕರು ಹಿಮ್ಮೆಟ್ಟಲಿಲ್ಲ ಟೆಂಕುಗಳ ಮತ್ತು ವಾಯು ಹಡಗಗಳ ಕೂಡುವಿಕೆಯಿಂದ ಈ ಯುದ್ಧವು ನಡೆಯುತ್ತಲಿರುವುದು. ಈ ಪ್ರಪಂಚದ ಸೃಷ್ಟಿಯಾಗಾಯ್ತು ಇಂಥಾ ಮಹಾಯುದ್ಧವು ನಡೆಯಲಿಲ್ಲ. ಎರಡು ಪಕ್ಷದವರು ಅತ್ಯಂತ ಪರಾಕ್ರಮವನ್ನು ಶೌರ್ಯವನ್ನು ಚಾತುರ್ಯವನ್ನು ತೋರಿಸುತ್ತಲಿರುವರು ಮಿತ್ರ ಸೈನಿಕರ ಗಂಡಾಂತರವನ್ನು ನೋಡಿ ನೀಚ ಬುದ್ಧಿಯಿಂದ ಹಿಂದಿನಿಂದ ಮೋಸ ಕೃತ್ಯದಿಂದ ಮಿತ್ರರಾಜ್ಯರಿಗೆ ಪೆಟ್ಟು ಕೊಡಬೇಕೆಂತ ೧೯೧೫ರಲ್ಲಿ ಇಟಲಿಯು ಜರ್ಮನಿಯ ಸಹಾಯಕ್ಕೆ ಯುದ್ಧವನ್ನು ಸೇರಿರುವುದು ಇಟಲಿಯು ಯುದ್ಧ ಪ್ರವೇಶವಾದುದರಿಂದ ತಟಸ್ಥರಾದ ಅಮೇರಿಕದವರು ಮಿತ್ರಪಕ್ಷದವರಿಗೆ ಸಹಾಯಕ್ಕೆ ಬಾರದೆ ನಿಲ್ಲಲಾರರು ಈ ವರೆಗೂ ಯುದ್ಧದಲ್ಲಿ ಸೇರದಂತೆ ಇಟಲಿಯು ತಟಸ್ಥರಾಗಿ ಇರುವ ಹಾಗೆ ಪ್ರೆಸಿಡೆಂಟ ರೂಸವೆಲ್ಟರು ಬಹಳ ಪ್ರಯತ್ನಮಾಡಿದರು ಅವರ ಪ್ರಯತ್ನವು ನಿಷ್ಫಲವಾಯಿತು ಮುಸಲೋನಿಯ ಅತ್ಯಾಸೆಯೂ ಕುಟಿಲಬುದ್ಧಿಯೂ ಇಟಲಿಯ ನಾಶದ ಕಾರಣವಾಗುವ ಸಂದರ್ಭವು ಒದಗಿಯದೆ ಈ ರೀತಿ ಇಟಲಿಯು ಯುದ್ಧಕ್ಕೆ ಸೇರಿದ ಸಂಬಂಧ ಹಿಂದೂದೇಶಕ್ಕೆ ಬರುವ ಸುಯೋಜನಾಲಿವೆಯು ಮಾರ್ಗವನ್ನು ಇನ್ನು ಉಪಯೋಗಿಸಲು ಸಾಧ್ಯವಿಲ್ಲ. ಇಟಲಿಯು ಕೂಡ ೨೦೦೦ ವಾಯು ವಿಮಾನಗಳು ಇರುವುವು. ಅವುಗಳಿಂದ ಫ್ರಾನ್ಸಿನ ದಕ್ಷಿಣ ಪ್ರಾಂತ್ಯಗಳಿಗೆ ಬೋಂಬಿನ ಸುರಿಮಳೆಯನ್ನು ಹಾಕಬಹುದು. ಇಟಲಿಯ ಹೊಸ ನೌಕಾ ಸೈನ್ಯಕ್ಕೆ ಬ್ರಿಟಿಷರು ಹೆದರಲಿಕ್ಕಿಲ್ಲ. ಪ್ರಜಾಪ್ರಭುತ್ವದಲ್ಲಿ ಮುಂದಾಳಾಗಿಯೂ ಕೋಪಿನ ಸಂಸ್ಕೃತಿಯಲ್ಲಿ ಉತ್ತಮ ಜನಾಂಗವಾಗಿದ್ದ ಫ್ರೆಂಚರ ದೇಶಕ್ಕೆ ಈ ಇಟಲಿಯಿಂದ ಹೆಚ್ಚಿನ ತೊಂದರೆಯು ಉಂಟಾಗುವ ಸಂದರ್ಭವು ಈಗ ಬಂದೊದಗಿಯದೆ.

ಯುದ್ಧದ ವಾಯು ಹಡಗಗಳನ್ನು ನಡಿಸಲು ಬೇಕಾದ ೫೦ ಸಾವಿರ (pilot) ಜನರೂ ಯುದ್ಧಕ್ಕೆ ಬೇಕಾಗುವ ಹತ್ತು ಮಿಲಿಯ ಜನರು ಭಾರತ ದೇಶದಲ್ಲಿರುವರು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ಭರವಸೆಯನ್ನು ಕೊಟ್ಟರೆ ನಮ್ಮ ದೇಶದ ಸರ್ವಸ್ವವೂ ಬ್ರಿಟಿಷರ ಸಹಾಯಕ್ಕೆ ಹೊರಡುವುದೆಂಬದಕ್ಕೆ ಸಂದೇಹವಿಲ್ಲ ಹಿಂದೂದೇಶದಲ್ಲಿ ಒಂದು ವರ್ಷದಲ್ಲಿ ೫೦೦೦ ಜನರನ್ನು ಯುದ್ಧ ಹಡಗುಗಳನ್ನು ನಡಿಸುವುದಕ್ಕೆ ತಯಾರು ಮಾಡಬಹುದು. ೧ ಮಿಲಿಯ ಜನರನ್ನು ಸೈನಿಕರಾಗಿ ತರಬೇತು ಮಾಡಬಹುದು ಹಿಂದೂದೇಶದ ಸೈನ್ಯದ ಕಮಾಂಡರಾಗಿದ್ದು ಈಗ ೧೯೩೩ರಲ್ಲಿ ಪೆನ್ಶನು ಹೊಂದಿ ಹಿಂದೂದೇಶದಲ್ಲಿ ವಾಸಮಾಡಿಕೊಂಡಿರುವ ಲೆಫ್ಟಿನೆಂಟ ಕರ್ನಲ್ ಜೆ. ಸಿ ಕೊರ್ ಎಂಬ ಪ್ರಖ್ಯಾತ ಪುರುಷರು ಹಿಂದೂದೇಶಕ್ಕೆ ಕೂಡಲೇ ಸ್ವರಾಜ್ಯವನ್ನು ಕೊಟ್ಟು ಅಲ್ಲಿಯ ಸಹಾಯವನ್ನು ಪಡೆಯಬೇಕೆಂದು ಅಭಿಪ್ರಾಯಪಟ್ಟಿರುವರು

ಈಗಲಾದರೂ ಬ್ರಿಟಿಷ ಜನಾಂಗವು ಕಣ್ತೆರೆಯುವುದೇ? ಅಥವಾ ಹಿಂದೂದೇಶದ ಜನರ ಮೇಲೆ ನಂಬಿಕೆಯಿಲ್ಲದ ಹಿಂದಿನಂತೆ ನಡೆಯುವುದೇ?

ಗವರ್ನರರು ಹೆಕ್ಕಿದ ಕೆಲವು ಜನರನ್ನು ಈ ವಿಷಯ ಮಾತನಾಡುವರೆಯಾ ಚರ್ಚಿಸುವರೆ ಕರೆದಿರುವರು ಗ್ರಾಮದಲ್ಲಿಯೂ ಪಟ್ಟಣಗಳಲ್ಲಿಯೂ ಯುದ್ಧದ ಕಮಿಟಿಗಳು ಸ್ಥಾಪನೆ ಮಾಡುವರೆ ನಮ್ಮರಸರು ಆಲೋಚಿಸುವರು

ಈ ರೀತಿ ನಡೆದರೆ ಸಾಕಷ್ಟು ಸಹಾಯವು ಬ್ರಿಟಿಷರಿಗೆ ಸಿಕ್ಕಿತೇ? ಮಹಾತ್ಮಾ ಗಾಂಧಿಯವರ ಶ್ರೀ ರಾಜಗೋಪಾಲಾಚಾರಿಯವರ ಸಹಾಯವಿಲ್ಲದೆ ಅಥವಾ ಅವರ ಸಹಾನುಭೂತಿಯಿಲ್ಲದೆ ಎಂದಿಗೂ ಈ ಪ್ರಯತ್ನವು ಸಫಲವಾಗಲಾರದು



ಬ್ರಿಟನಿನ ಕ್ವೀನ್ ಎಲಿಜಬೆತ್ ಹಡಗು ನ್ಯೂಯೊರ್ಕಿಗೆ ಸಂಭ್ರಮದಿಂದ ಪ್ರಯಾಣ ಮಾಡುವಾಗ ತೆಗೆದಚಿತ್ರ

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು — ಸೋಲ್ ಏಜೆಂಟ್ಸ್

ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ ಕ

HALFTONE & LINE BLOCK MAKING UNDERTAKEN

Sharada Press, MANGALORE

ಜಿಲ್ಲಾ ಸಮಾಚಾರ



ಮಂಗಳೂರು

ಯುದ್ಧ ಸಹಾಯ ಚೀಡಿಕೆ:— ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಮದ್ರಾಸ್ ಶಾಖೆಯ ವ್ಯವಸ್ಥಾಪಕ ಕಾರ್ಯದರ್ಶಿ ಮಿಸ್ ಮುರಿಯಲ್ ಸ್ಪೈಮನ್‌ರವರು ಕಳೆದ ಶನಿವಾರ ಸಂಜೆ ಕೆನರಾ ಹೈಸ್ಕೂಲಿನಲ್ಲಿ, ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಟಿ ಎಸ್ ರಾಮಚಂದ್ರನ್‌ರವರ ಅಧ್ಯಕ್ಷತೆಯಲ್ಲಿ ಒಂದು ಭಾಷಣವೀಯುತ್ತಾ ಇಂದಿನ ಮಹಾಯುದ್ಧದಲ್ಲಿ, ಬ್ರಿಟಿಶ್ ರೆಡ್ ಕ್ರಾಸ್ ದಳವು ನಡೆಸುತ್ತಿರುವ ಅಸಮಾನ ಸೇವೆಯನ್ನು ವಿವರಿಸಿ, ರೆಡ್ ಕ್ರಾಸ್ ಸಂಸ್ಥೆಗೆ ಸಕಲರೂ ಉದಾರ ಹಸ್ತದಿಂದ ಸಹಾಯ ಮಾಡಬೇಕಾಗಿ ಕೇಳಿಕೊಂಡರು ಜಿಲ್ಲಾ ಕಲೆಕ್ಟರರಾದ ರಾವ್ ಬಹದ್ದೂರ್ ಪಿ ಪೊನ್ನುಸ್ವಾಮಿ ಪಿಳ್ಳೆಯವರ ಪ್ರಕೃತದ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿ, ಗವರ್ನರರ ವಾರ್ ಚೇರಿಟೀಸ್ ಫಂಡಿಗೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿಕೊಂಡರು.

ಪತ್ರಿಕೋದ್ಯಮಿ ಸಂಘದ ಮಹಾಸಭೆ — ದ ಕ ಜಿಲ್ಲಾ ಪತ್ರಿಕಾ ವ್ಯವಸಾಯಿಗಳ ಸಂಘದ ವಾರ್ಷಿಕ ಮಹಾಸಭೆಯು ತಾ ೧೬ನೇ ಆದಿತ್ಯವಾರ ವ ಜೂನ್ ೯ ತಾಸಿಗೆ ಸರಿಯಾಗಿ ಡಿ ಕೆ ಮಿಶನ್ ಹಾ ಎ ಶಾಲೆಯಲ್ಲಿ ಜರಗಿತ ಶ್ರೀ ಹುರುಳಿ ಭೀಮರಾವರ ಅಧ್ಯಕ್ಷತೆ ವಹಿಸಿದ್ದರು ಲೆಕ್ಕಪತ್ರ ಸ್ವೀಕಾರ ಇತ್ಯಾದಿಗಳಾದ ಬಳಿಕ, ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ ಚುನಾವಣೆ ನಡೆಯಿತ ಶ್ರೀಗಳಾದ ಹುರುಳಿ ಭೀಮರಾಯರು ಅಧ್ಯಕ್ಷ, ಓ ರಾಮರಾಯ ಮಲ್ಯ-ಉಪಾಧ್ಯಕ್ಷ, ಕೆ ಕೃಷ್ಣರಾವ್-ಕೋಶಾಧಿಕಾರಿ ಕುಮಾರ ವೆಂಕಣ್ಣ-ಕಾರ್ಯದರ್ಶಿ, ಕಡೆಂಗೋಡ್ಲು ಶಂಕರಭಟ್ಟ, ಉಡುಪಿ ಗೋವಿಂದ ರಾವ್ ಮತ್ತು ಎಂ ಎಸ್ ಶ್ರೀಷ-ಕಾರ್ಯಕಾರಿ ಮಂಡಳಿ ಸದಸ್ಯರು ಲಘು ಉಪಹಾರದೊಡನೆ ಸಭಾಂತ್ಯವಾಯಿತು

ಸತ್ಕಾರ್ಯೋತ್ತೇಜಕ ನಾಟಕ ಸಭಾ, ಮಂಗಳೂರು: – ಇವರು ಶ್ರೀ ಜ್ಞಾನೋದಯ ಸಮಾಜದ ರಾತ್ರಿ ಶಾಲೆಯ ಸಹಾಯಾರ್ಥವಾಗಿ, ಕಳೆದ ಆದಿತ್ಯವಾರ ಸಂಜೆ ದಿವಂಗತ ಮಾಧವ ತಿಂಗಳಾಯರಿಂದ ಬರೆಯಲ್ಪಟ್ಟ "ಬದಿರಕ್ಕಸೆ" ಎಂಬ ತುಳು ನಾಟಕವನ್ನು, ತುಳು ಮಹಾಸಭೆಯ ಅಧ್ಯಕ್ಷರೂ, ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯೂಟರ್‌ರೂ ಆದ ಶ್ರೀ. ಆನಂದ ಕಳ್ವರ್, ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣಾ ಸಿನೆಮಾ ಮಂದಿರದಲ್ಲಿ ಯಶಸ್ವಿಯಾಗಿ ಅಭಿನಯಿಸಿದರು ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ತುಳು ಸಾಹಿತ್ಯದ ವಿಚಾರವಾಗಿಯೂ, ಅದರ ಮೇಲ್ಮೆಗಾಗಿ ನಾವು ಹೋರಾಡಬೇಕಾದ ಅಗತ್ಯವನ್ನೂ, ತುಳು ರಾಷ್ಟ್ರದ ಗತ ವೈಭವವನ್ನೂ ವಿವರಿಸಿದರು ಶ್ರೀ ಮೋಹನಪ್ಪ ತಿಂಗಳಾಯರು ನಾಟಕದ ಅಂತ್ಯದಲ್ಲಿ ಆ ನಾಟಕದ ಉದ್ದೇಶವನ್ನು ವಿವರಿಸುತ್ತಾ ತುಳು ಸಾಹಿತ್ಯದ ಮೇಲ್ಮೆಯನ್ನು ತಿಳಿಸಿ ಅದಕ್ಕೆ ಪ್ರೋತ್ಸಾಹ ಕೊಡುವುದಕ್ಕಾಗಿಯೂ, ಜ್ಞಾನೋದಯ ಸಮಾಜದ ರಾತ್ರಿ ಶಾಲೆಯ ಸಹಾಯಾರ್ಥವಾಗಿಯೂ ವರದಕ್ಷಿಣೆಯೆಂಬ ರಾಕ್ಷಸನನ್ನು ಸಮಾಜದಿಂದೋಡಿಸಿ ತನ್ಮೂಲಕ ಸಮಾಜೋದ್ಧಾರ ನಡೆಸುವ ಮಹತ್ಕಾಂಕ್ಷೆಯಿಂದಲೂ ಈ ನಾಟಕ ಅಭಿನಯಿಸಲ್ಪಟ್ಟಿದೆ ಎಂದರು ಶ್ರೀ ಬಿ ನರ್ಸಪ್ಪನವರೂ ಸಮಯೋಚಿತಭಾಷಣವಿತ್ತರ ನಾಟಕವು ಸರ್ವ ಜನಾದರಣೀಯವಿತ್ತು ಅಭಿನಯಗಾರರು ಅನುಪಮ ಚಾತುರ್ಯ ತೋರಿ ಅಭಿನಯಿಸಿ ತುಳು ಸಾಹಿತ್ಯದ ಪ್ರತಿಭೆ-ಶಕ್ತಿಗಳನ್ನು ತೋರಿದರು

ಯುವಕ ದಳ – ಉದ್ಯೋಳಿ ಶ್ರೀ ಚಿರುಂಭ ಭಗವತೀ ತೀಯಾ ಯುವಕ ದಳದ ಸ್ಥಾಪನೆಯು, ಕಳೆದ ಆದಿತ್ಯವಾರ ಸಂಜೆ ಭಗವತೀ ದೇವಸ್ಥಾನದಲ್ಲಿ ಶ್ರೀ ಕುಮಾರ ವೆಂಕಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಬಿ ಕರ್ತಪ್ಪನವರು ಸಂಘದ ಅಧ್ಯಕ್ಷರಾಗಿಯೂ ಶ್ರೀ ಬಿ ಬಾಬುರವರ ಕೋಶಾಧಿಕಾರಿಯಾಗಿಯೂ ಶ್ರೀ ಪಿ ಶೀನಪ್ಪನವರು ಯುವಕ ದಳದ ನಾಯಕ (ಕೆಪ್ಟನ್) ರಾಗಿಯೂ ಆರಿಸಲ್ಪಟ್ಟರು.

ನಗರ ಸಭೆ: – ನಮ್ಮ ನಗರ ಸಭೆಯು ತಾ ೧೭ನೇ ಸಂಜೆ ೫½ಗೆ ಸರಿಯಾಗಿ ಮುನ್ಸಿಪಲ್ ಆಫೀಸಿನಲ್ಲಿ ಜರಗಿತ

ಕಳವು: – ತಾರೀಕು ೧೩ನೇ ರಾತ್ರಿ ಕದ್ರಿ ಜೋಗಿ ಮಠದಲ್ಲಿ ಬಹಳ ಪುರಾತನ ಕಾಲದಿಂದಲೂ ಇದ್ದ ಶ್ರೀ ಗೋರಕನಾಥ ಪ್ರತಿಮೆಯನ್ನು ಯಾರೋ ದುರಾತ್ಮರ ಅಪಹರಿಸಿಕೊಂಡು ಹೋಗಿರುವರಲ್ಲದೆ ಶ್ರೀ ಮತ್ಸ್ಯೇಂದ್ರ ವಿಗ್ರಹವನ್ನು ಮುರಿದ ರುಂಡ ಬೇರೆ ಮುಂಡ ಬೇರೆ ಮಾಡಿ ಅಲ್ಲಿಯೇ ಬಿಟ್ಟು ಹೋಗಿರುವುದಾಗಿಯೂ ತಿಳಿದುಬಂದಿದೆ

ಇಟೆಲಿಯನರ ಸೆರೆ: – ಇಟಲಿಯು ಮಿತ್ರರಾಷ್ಟ್ರಗಳ ಮೇಲೆ ಯುದ್ಧ ಹೂಡಿದುದರಿಂದ ನಮ್ಮ ಜಿಲ್ಲೆಯಲ್ಲಿರುವ ಇಟಲಿಯಾನರ ವೈರಿ ರಾಜ್ಯದ ಪ್ರಜೆಗಳಾಗಿದ್ದಾರೆ ಜಿಲ್ಲೆಯಲ್ಲಿ ೨೮ ಮಂದಿ ಇಟಲಿಯಾನ ಪಾದ್ರಿಗಳೂ ೧೫ ಮಂದಿ ಪಾದ್ರಿಗಳೂ ಇದ್ದಾರೆ

ಜಿಲ್ಲೆಯಲ್ಲಿರುವ ಯಾವತ್ತೂ ಇಟಲಿಯಾನ ಗಂಡಸರು ಹಾಗೂ ಹೆಂಗಸರ ತಮ್ಮ ತಮ್ಮ ವಾಸಸ್ಥಳಗಳನ್ನು ಅಪ್ಪಣೆ ವಿನಹ ಬದಲಾಯಿಸ ಕೂಡದೆಂದೂ ವಾಸಿಸುತ್ತಿರುವ ಪೇಟೆ-ಪಟ್ಟಣಗಳನ್ನು ಬಿಡಬಾರದೆಂದೂ ಜಿಲ್ಲಾ ಪೋಲೀಸ್ ಅಧಿಕಾರಿಗಳ ತಾ ೧೨ರಂದು ಮಂಜೂರಾನೆ ಸಕಲ ಇಟಲಿಯಾನರಿಗೂ ಅಪ್ಪಣೆ ಕೊಟ್ಟಿದ್ದಾರೆ

ಸೈ ಎ ಕಾಲೇಜ್: ಬಿ ಎ ಪರೀಕ್ಷೆಯ ಫಲಿತಾಂಶ:—

	ಪರೀಕ್ಷೆಗೆ ಕುಳಿತವರು	ಪಾಸಾದವರು	ಸೇಕಡ	ಕ್ಲಾಸ್ I	II	III
ಎಲ್ಲಾ ಭಾಗಗಳಲ್ಲಿ	೯೬	೫೯	[illegible]			
ಇಂಗ್ಲಿಷ್	೪೬	೩೨	೬೯.೬			೩೨
ದೇಶಭಾಷೆ	೫೪	೪೫	೮೩.೩	೩	೯	೩೩
ಗಣಿತಶಾಸ್ತ್ರ	೮	೮	೧೦೦	೫		೩
ಫಿಜಿಕ್ಸ್	೧೯	೧೪	೭೩.೭	೩	೧	೪
ಕೆಮಿಸ್ಟ್ರಿ	೧೪	೧೪	೧೦೦	೩	೫	೬
ಅರ್ಥಶಾಸ್ತ್ರ	೧೯	೧೮	೯೪.೭		೩	೧೫

ಪುತ್ತೂರು

ಅಭಿನಂದನೆ ಪುತ್ತೂರಿನ ವಿದ್ವಾನ್ ಶ್ರೀ ಜಿ ಎನ್ ಲಕ್ಷ್ಮಣ ಪೈಗಳು ಮದರಾಸು ವಿಶ್ವವಿದ್ಯಾನಿಲಯದ ಬಿ ಓ ಎಲ್ ಡಿಗ್ರಿ ಪರೀಕ್ಷೆಯ ಮೂರನೆಯ ಭಾಗದಲ್ಲಿ ಉತ್ತೀರ್ಣರಾಗಿದ್ದಾರೆ

ಕುಂದಾಪುರ

ಹರಿಜನರ ವಿದ್ಯಾರ್ಥಿ ಭವನ. ಇಲ್ಲಿ ಹೊಸತಾಗಿ ಹರಿಜನ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿಭವನವು ತೆರೆಯಲ್ಪಟ್ಟಿದೆ ೧೦ ಮಂದಿ ವಿದ್ಯಾರ್ಥಿಗಳಿದ್ದಾರೆ

ವರ್ಗಾವರ್ಗಿ – ಸ್ಥಳೀಯ ಹೈಸ್ಕೂಲಿನಲ್ಲಿ ಕುಸ್ತಿಉಪಾಧ್ಯಾಯರಾಗಿದ್ದ ಶ್ರೀ ಕೆ ರಾಮಯ್ಯ ಶೆಟ್ಟರಿಗೆ ಕಾಸರಗೋಡಿಗೆ ವರ್ಗವಾಗಿದೆ

ಪುತ್ತೂರು ರೇಂಜ್ ಉಪಾಧ್ಯಾಯರ ಸಭೆ— ಕಳೆದ ತಾ. ೮-೬-೪೦ನೇ ಶನಿವಾರ ಇಲ್ಲಿಯ ಬೋ. ಹಾ. ಎ ಶಾಲೆಯಲ್ಲಿ ಶ್ರೀ. ಕೆ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು.

(೧೩ನೆಯ ಪುಟಕ್ಕೆ ತಿರುಗಿಸಿ)

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದ ಶಾಲಾ ಪುಸ್ತಕಗಳು

[1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದ ಮಂಜೂರಾದ ಶಾಲಾ ಪುಸ್ತಕಗಳು]

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರ ಮತ್ತು ಕಥೆಗಳು

ಪುಸ್ತಕ	ಬೆಲೆ
4ನೇ ದರ್ಜೆ	0 3–0
5ನೇ	0–3 6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
4ನೇ ದರ್ಜೆ	0–2 0
5ನೇ	0–2 6

ಸಿವಿಕ್ಸ್ ಅಥವಾ ಪೌರಧರ್ಮ

ಪುಸ್ತಕ	ಬೆಲೆ
4ನೇ ದರ್ಜೆ	0–2–0
5ನೇ	0–2–6
6ನೇ	0–3–0
7ನೇ	0–3–0
8ನೇ ,	0–3–0

ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ

ಭೂ ವಿವರ

ಪುಸ್ತಕ	ಬೆಲೆ
4ನೇ	0–2–6
5ನೇ	0–3–6

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ 1—0—0

ಶಾಲಾ ಉಪಯೋಗಕ್ಕೆ (ಲೈಬ್ರೇರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	,,	0—1—6
ಸಿವಿಕ್ಸ್	,,	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಮಿತ್ರರಾಷ್ಟ್ರಗಳಿಗೆ ಅಮೇರಿಕದ ಸಹಾಯ!



ಪ್ಯಾರಿಸಿನಲ್ಲಿ ಜರ್ಮನರು!

ಟರ್ಕಿ ಯುದ್ಧಕ್ಕೆ ಸೇರುವುದಿಲ್ಲ! — ಅಬಿಸೀನಿಯದಲ್ಲಿ ಒಳದಂಗೆ!

ಮುಸಲೋನಿಯ ಗರ್ವೋಕ್ತಿ!

ಮುಸೋಲಿನಿಯ ಗರ್ವೋಕ್ತಿ ನಮಗೆ ಸಮುದ್ರ ಮಾರ್ಗಗಳ ಸ್ವಾತಂತ್ರ್ಯ ಬೇಕು

'ನಾವು ಜಗತ್ತನ್ನೇ ಜಯಿಸುವೆವು' ಎಂಬುದಾಗಿ ಸಿನಾರ್ ಮುಸೋಲಿನಿಯು ಯುದ್ಧಾರಂಭದಲ್ಲಿ ಮಾಡಿದ ಬ್ರಾಡ್ ಕ್ಯಾಸ್ಟ್ ಭಾಷಣದ ಮುಕ್ತಾಯದಲ್ಲಿ ತಿಳಿಸಿದನು.

"ನಾವು ಇಂದು ಪಶ್ಚಿಮದಲ್ಲಿರುವ ಬಂಡವಾಳಗಾರಿಕೆಯ ಮತ್ತು ಪ್ರಗತಿ ನಿರೋಧಕರವಾದ ರಾಷ್ಟ್ರಗಳ ಮೇಲೆ ಯುದ್ಧ ಹೂಡಿದ್ದೇವೆ. ಈ ರಾಷ್ಟ್ರಗಳು ಇಟಲಿ ಜನಾಂಗದ ಬೆಳವಣಿಗೆಗೂ ಜೀವನಕ್ಕೂ ಅಡಚಣೆಯಾಗಿದ್ದವು. ಈಚೆಗೆ ಈ ರಾಷ್ಟ್ರಗಳು ನಡೆಸಿದ ಕೃತ್ಯಗಳನ್ನು ಕೇವಲ ಕೆಲವೇ ಪದಗಳಲ್ಲಿ ವಿವರಿಸಬಹುದು, ಅರ್ಥವಾಗ್ದಾನಗಳು ಸತತವಾದ ಬೆದರಿಕೆ, ಕಣ್ಣಿಗೆ ಮಣ್ಣೆರಚುವದು ಮತ್ತು ಕೊನೆಯದಾಗಿ ೫೨ ರಾಷ್ಟ್ರಗಳು ಸೇರಿದ ಈ ಲೀಗ್ ಆಫ್ ನೇಷನ್ಸಿನ ದೌರ್ಜನ್ಯ.

"ನಮ್ಮ ಮನಸ್ಸು ಶಾಂತತೆಯಿಂದ ಕೂಡಿದೆ. ಯೂರೋಪಿನ ಮೇಲೆ ಹಾವಳಿ ನಡೆಸುತ್ತಿರುವ ಸುಂಟರಗಾಳಿಯನ್ನು ತಪ್ಪಿಸಲು ವಿಕ್ಟರ್ ರವರ ಇಟಲಿಯು ಮಾನವ ಶಕ್ತಿಗೆ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನಿಸಿತು ಎಂಬಂಶವನ್ನು ಇಡೀ ಜಗತ್ತೇ ಕಾಣುತ್ತದೆ. ಆದರೂ ಈ ಪ್ರಯತ್ನವೆಲ್ಲಾ ನಿಷ್ಫಲವಾದವು. ಆಗಿರುವಂತಹ ಕೌಲುಕರಾರುಗಳನ್ನು ರಾಷ್ಟ್ರಗಳ ಜೀವನದ ಮೂಲಭೂತ ಅವಶ್ಯಕತೆಗಳನ್ನು ನೋಡಿಕೊಂಡು ಸರಿ ಹೊಂದಿಸಿಕೊಂಡಿದ್ದರೆ ಸಾಕಿತ್ತು. ಸುಮ್ಮನೇ ಈ ಕೌಲು ಕರಾರುಗಳೇ ಚಿರವಾಗುಳಿಯುವವೆಂದು ತಿಳಿಯಕೂಡದಾಗಿತ್ತು. ಭರವಸೆಗಳನ್ನಿತ್ತಿದ್ದೇವೆ ಎಂದು ಹೇಳಿಕೊಂಡು ಅವುಗಳನ್ನೇ ದೊಡ್ಡದು ಮಾಡಿಕೊಂಡು ಹೋಗಕೂಡದಿತ್ತು. ಈ ಭರವಸೆಗಳನ್ನೊಪ್ಪಿದವರಿಗೆಲ್ಲಾ ಅವು ಅನರ್ಥಕಾರಿಯಾಗಿಯೇ ಪರಿಣಮಿಸಿವೆ. ಕಳೆದ ಅಕ್ಟೋಬರಿನಲ್ಲಿ ಪೋಲೀಸ್ ಆಕ್ರಮಣ ಮುಗಿದ ಮೇಲೆ ಹೆರ್ ಹಿಟ್ಲರನು ಕೊಟ್ಟ ಸಲಹೆಯನ್ನು ನಿರಾಕರಿಸಿದ್ದು ತಪ್ಪು.

ಇಟಲಿಗೆ ಸಮುದ್ರ ಸ್ವಾತಂತ್ರ್ಯ ಬೇಕು

ಈಗ ನಾವು ನಮ್ಮ ಸಮುದ್ರ ಸರಹದ್ದುಗಳನ್ನು ಇತ್ಯರ್ಥಪಡಿಸಿಕೊಳ್ಳಲು ಶಸ್ತ್ರವನ್ನು ಎತ್ತುತ್ತಿದ್ದೇವೆ. ಸಮುದ್ರದಲ್ಲಿ ನಮಗಿರುವ ಬಂಧನವನ್ನು ಕಿತ್ತೊಗೆಯಬೇಕಾಗಿದೆ. ನಾಲ್ಕೂವರೆ ಕೋಟಿ ಜನರ ರಾಷ್ಟ್ರಕ್ಕೆ ಸ್ವತಂತ್ರವಾದ ಸಮುದ್ರ ಮಾರ್ಗವಿಲ್ಲದಿದ್ದಲ್ಲಿ ಅದು ನಿಜವಾಗಿಯೂ ಸ್ವತಂತ್ರವಾಗಿರುವುದಿಲ್ಲ. ಈಗ ಇಟಲಿಯು ತಾನು ಯುದ್ಧಕ್ಕೆ ಸೇರಿದರೂ ಭೂ ಮತ್ತು ಜಲಮಾರ್ಗಗಳಲ್ಲಿ ನೆರೆ ರಾಷ್ಟ್ರಗಳಿಗಿರುವಂತಹ ಇತರ ರಾಷ್ಟ್ರಗಳು ಯುದ್ಧದಲ್ಲಿ ಸೇರಬೇಕೆಂಬುದು ಇಟಲಿಯ ಇಷ್ಟವಲ್ಲ. ಸ್ವಿಟ್ಜರ್ಲೆಂಡ್ ಯುಗೋಸ್ಲೇವಿಯಾ, ಟರ್ಕಿ, ಈಜಿಪ್ಟ್ ಮತ್ತು ಗ್ರೀಸ್ ದೇಶಗಳು ಈ ಅಂಶವನ್ನು ಅರಿಯಲಿ.

ಇಂಗ್ಲಾಂಡಿನ ಸಹಾಯಕ್ಕಾಗಿ ನ್ಯೂಜಿಲೆಂಡಿನಿಂದ ಬಂದ ಸೈನಿಕರನ್ನು ಡೊಮಿನಿಯನ್ ಸೆಕ್ರೆಟರಿಯವರಾದ ಎಂತೋನಿ ಇಡನ್ನರು ಸ್ವಾಗತೀಕರಿಸುವುದು

ಇಂತಹ ಬಹುಮುಖ್ಯ ಸಮಯದಲ್ಲಿ ನಾವು ನಮ್ಮ ಚಕ್ರವರ್ತಿಯವರಿಗೆ ಪೂರ್ಣ ರಾಜಭಕ್ತಿಯನ್ನು ವ್ಯಕ್ತಪಡಿಸಿ ಅವರ ಆಶ್ರಯದಲ್ಲಿಯೇ ಕಾರ್ಯಾಚರಣೆಗೆ ಹೊರಟಿದ್ದೇವೆ. ನಮ್ಮ ಮಿತ್ರ ರಾಷ್ಟ್ರವಾದ ಮಹಾ ಜರ್ಮನ್ ರಾಷ್ಟ್ರಕ್ಕೂ ನಮ್ಮ ವಂದನೆಯನ್ನರ್ಪಿಸುತ್ತೇವೆ. ಪ್ರೊಲಿಟೇರಿಯನ್ ಮತ್ತು ಫ್ಯಾಸಿಸ್ಟ್ ಸಿದ್ಧಾಂತವನ್ನು ಅನುಸರಿಸಿರುವ "ಇಟಲಿಯು ಇದೇ ಮೂರನೇ ಸಾರಿ ಅತ್ಯಂತ ಶಕ್ತಿಯುತವಾಗಿಯೂ ಐಕಮತ್ಯದಿಂದಲೂ ಮುಂದೆ ಹೊರಟಿದೆ.

'ನಾವು ಜಗತ್ತನ್ನೇ ಜಯಿಸುವೆವು' ಎಂದು ಅವನು ಭಾಷಣ ಮುಗಿಸಿದನು.

ಮಾಲ್ಟಾದ ಮೇಲೆ ಶತ್ರುವಿನ ದಾಳಿ

ಶತ್ರುಗಳ ವಿಮಾನಗಳು ೧೧ನೇ ತಾರೀಖಿನ ದಿನ ಮಾಲ್ಟಾದ ಮೇಲೆ ಬಾಂಬುಗಳನ್ನೊಗೆದು ದಾಳಿ ಮಾಡಿದವು. ಆದರೆ ಬಾಂಬುಗಳೆಲ್ಲ ಸಮುದ್ರದಲ್ಲಿ ಬಿದ್ದುದರಿಂದ ವಿಶೇಷ ಹಾನಿಯೇನೂ ಆಗಲಿಲ್ಲ.

ಪಶ್ಚಿಮ ರಣರಂಗದಲ್ಲಿ ಯುದ್ಧವು ಒಳ್ಳೇ ಜೋರಿನಿಂದ ನಡೆದಿದ್ದು ಜರ್ಮನ್ನರ ಒತ್ತಡ ಹೆಚ್ಚುತ್ತಿದೆ. ಇಂದು ಪಾರಿಸದ ವಾಯುವ್ಯ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಮೂವತ್ತೆಂಟೇ ಮೈಲುಗಳಲ್ಲಿ ಜರ್ಮನರು ಬಂದಿರುವರು. ಹಿಂದೆಂದೂ ಪ್ರದರ್ಶಿಸದ ಕಾರ್ಯದಿಂದ ಫ್ರೆಂಚರು ತಮ್ಮ ಎಡಬಲ ಪಾರ್ಶ್ವಗಳನ್ನು ರಕ್ಷಿಸಿಕೊಳ್ಳುತ್ತಿರುವರು. ಸರಕಾರವು ಪಾರಿಸ ಬಿಟ್ಟು ಬೇರೆಡೆಗೆ ಹೋಗಿದೆ.

ಪ್ಯಾರಿಸ್‌ನಲ್ಲಿ ಜರ್ಮನರು ಫ್ರೆಂಚರು ಕಾದಾಟವಿಲ್ಲದೆ ಹಿಂದಕ್ಕೆ ಹೋದರು

ಜರ್ಮನ್ ಹೈಕಮ್ಯಾಂಡ್ ಪ್ರಕಟಣೆಯ ಪ್ರಕಾರ ಜರ್ಮನರು ಈಗ ಪ್ಯಾರಿಸ್ ನಗರವನ್ನು ಪ್ರವೇಶಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಜರ್ಮನರು ಪ್ಯಾರಿಸ್ ನಗರದೊಳಕ್ಕೆ ಪ್ರವೇಶಿಸುತ್ತಿದ್ದಾರೆಂಬುದು ನಿಜವೆಂದು ತಿಳಿದಂತಹ ಫ್ರೆಂಚ್ ಆವರಣದಲ್ಲಿ ಹೇಳಲಾಗುತ್ತಿದೆ.

ಟರ್ಕಿ ಯುದ್ಧಕ್ಕೆ ಸೇರುವುದಿಲ್ಲ

ತಟಸ್ಥವಾಗಿಯೇ ಇರುವುದು ಮಿತ್ರರಾಷ್ಟ್ರಗಳಿಗೆ ಸಹಾನುಭೂತಿ ಟರ್ಕಿ ಪಾರ್ಲಿಮೆಂಟಿನ ತೀರ್ಮಾನ

ಟರ್ಕಿಯ ಪಾರ್ಲಿಮೆಂಟಿನ ಪೂರ್ಣ ಸಭೆಯು ನಡೆದು ಇಟಲಿಯು ಯುದ್ಧಕ್ಕೆ ಸೇರಿದುದರಿಂದ ಟರ್ಕಿಯು ಯುದ್ಧದ ಬಗ್ಗೆ ಯಾವ ಮನೋಭಾವ ಹೊಂದಬೇಕೆಂಬ ಬಗ್ಗೆ ಚರ್ಚೆ ನಡೆಯಿತು.

ಟರ್ಕಿಯು ವಾಗ್ದಾನದಂತೆ ನಡೆದುಕೊಂಡು ಹೋಗುತ್ತಿದೆ ಎಂಬುದಾಗಿ ಟೀಕಾಕಾರರು ತಿಳಿಸುತ್ತಿದ್ದಾರೆ. ಆದರೆ ಅದು ಒಂದೊಂದು ಹೆಜ್ಜೆಯನ್ನಿಡಬೇಕಾದರೂ ಅವಶ್ಯವಾದೆಲ್ಲಾ ಅಂಶಗಳನ್ನೂ ಬಹಳ ಜಾಗರೂಕತೆಯಿಂದ ಪರಿಶೀಲಿಸುತ್ತಿರುವದು. ಆದುದರಿಂದ ಟರ್ಕಿಯು ಇಟಲಿಯ ಮನೋಭಾವವನ್ನು ಪರಿಶೀಲಿಸಿರುವದೇ ಅಲ್ಲದೆ ತನ್ನ ನೆರೆರಾಷ್ಟ್ರವೂ ಮತ್ತು ಅತ್ಯಂತ ಪ್ರಭಾವಶಾಲಿ ರಾಷ್ಟ್ರವೂ ಆದ ಸೋವಿಯೆಟ್ ರಷ್ಯಾದ ಅಂಶವನ್ನೂ ಅದು ಪರಿಗಣನೆಗೆ ತೆಗೆದುಕೊಂಡಿದೆ. ಟರ್ಕಿಗೂ ರಷ್ಯಾಕ್ಕೂ ಮಧ್ಯೆ ವಿಶಾಲವಾದಂತಹ ಸರಹದ್ದು ಇದೆ.

ಟರ್ಕಿಯ ಮನಸ್ಸೆಲ್ಲಾ ಮತ್ತು ಸಹಾನುಭೂತಿಯೆಲ್ಲಾ ಮಿತ್ರರಾಷ್ಟ್ರಗಳ ಕಡೆಗೇ ಇದೆ. ಆದರೂ ಅದು ನ್ಯಾಯಬದ್ಧವಾಗಿ ತಾಟಸ್ಥ್ಯ ರಾಷ್ಟ್ರವೇ ಆಗಿ ಉಳಿಯುವದು. ಟರ್ಕಿಗೂ ಜರ್ಮನಿಗೂ ಒಂದು ವ್ಯಾಪಾರಿ ಒಪ್ಪಂದದ ಸಮಾಲೋಚನೆಗೆ ಶುರುವಾಗಿದೆ. ೪೦ ಲಕ್ಷ ಪೌಂಡುಗಳ ವ್ಯಾಪಾರವನ್ನೇ ನಡೆಸುವದೇ ಈ ಒಪ್ಪಂದದ ಉದ್ದೇಶ. ಈ ಒಪ್ಪಂದದ ಸಮಾಲೋಚನೆಯು ಅನೇಕ ತಿಂಗಳುಗಳ ಕಾಲ ನಡೆಯಬಹುದು. ಹೆರ್ ವಾನ್ ಪೇಪನ್ ರವರೇ ಒಪ್ಪಂದ ಸಮಾಲೋಚನೆಗೆ ಆರಂಭಿಸಿದ್ದಾರೆ.

ಇಷ್ಟಾದರೂ ಅಂಕಾರಾದಲ್ಲಿಯೂ ಇಸ್ತಾಂಬುಲ್‌ನಲ್ಲಿಯೂ ವಿವಿಧ ವೃತ್ತಿಗಳ ಪ್ರವೀಣ ಜನರನ್ನು ಸೈನ್ಯಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾತ್ರ ತ್ವರಿತವಾಗಿ ನಡೆದೇ ಇದೆ.

ಪ್ಯಾರಿಸ್ ನಾಶವಾಗದಂತೆ ಎಚ್ಚರಿಕೆ

ಪ್ಯಾರಿಸ್ ನಗರವು ರಕ್ಷಿತವಾದ ಒಂದು ನಗರವೆಂದು ತಿಳಿಸಲಾಗಿದ್ದುದರಿಂದ ಫ್ರೆಂಚ್ ಸೈನ್ಯಗಳು ಪ್ಯಾರಿಸನ್ನು ರಕ್ಷಿಸುವ ಗೋಜಿಗೆ ಹೋಗಲಿಲ್ಲ. ಪ್ಯಾರಿಸ್ ನಗರವನ್ನು ರಕ್ಷಿಸುವ ಗೋಜಿಗೆ ಹೋದರೆ ಅಲ್ಲಿ ಕಾದಾಟವಾಗಿ ನಗರವು ನಾಶವಾಗುವುದರಲ್ಲಿ ಸಂದೇಹವಿಲ್ಲ. ಪ್ಯಾರಿಸ್ ನಗರವನ್ನು ನಾಶಪಡಿಸಿ ಅಲ್ಲಿ ಕಾದಾಟ ನಡಸುವಷ್ಟು ಆ ಪ್ರದೇಶವು ಸೈನಿಕ ದೃಷ್ಟಿಯಿಂದ ಪ್ರಾಮುಖ್ಯವಾಗಿಲ್ಲವೆಂದು ಅಧಿಕಾರಿಗಳು ತಿಳಿದಿದ್ದರು.

ಅಮೆರಿಕದ ಸಹಾಯ ಮಿತ್ರರಾಷ್ಟ್ರಗಳಿಗೆ

ಕೆನಡಾ ಮುಖ್ಯ ಮಂತ್ರಿಯ ಭರವಸೆ

"ಇಡೀ ಅಮೆರಿಕಾ ಖಂಡದ ಸಂಪತ್ತೆಲ್ಲವನ್ನೂ ... ಮಿತ್ರರಾಷ್ಟ್ರಗಳ ಕಡೆಗೇ ಕೊಡುವುದಾಗಿ ನಾನು ಎಂ. ರೇನಾರವರಿಗೆ ತಿಳಿಸಬಲ್ಲೆ" ಎಂಬುದಾಗಿ ಕೆನಡಾದ ಕಾಮನ್ಸಿನಲ್ಲಿ ಮಾತನಾಡುತ್ತಾ ಮುಖ್ಯಮಂತ್ರಿ ಮೆಕೆಸ್ ಸಿಕಿಂಗರು ತಿಳಿಸಿದರು.

ಎಂ. ರೇನಾರವರಿಗೆ ಬ್ರಿಟಿಷ್ ಸರಕಾರವಿತ್ತಿರುವ ಭರವಸೆಯನ್ನು ಮಿ|| ಕಿಂಗರು ಸಭೆಯ ಮುಂದೆ ಓದಿದರು. "ಈ ಭರವಸೆಯ ಪ್ರತಿಯೊಂದು ಪದವೂ ಕೂಡ ಕೆನಡಾದ ಜನರ ಭಾವನೆ, ಉದ್ದೇಶ ಮತ್ತು ದೃಢನಿಶ್ಚಯವನ್ನು ತೋರಿಸುವುದಾಗಿದೆ" ಎಂದರು.

ಇಟಲಿಯ ಮೇಲೆ ಕೆನಡಾದ ಯುದ್ಧ ಘೋಷಣೆ

ಕೆನಡಾ ದೇಶದ ಕಾಮನ್ಸ್ ಸಭೆಯವರು ಇಟಲಿಯ ... ದಿಂದ ಯುದ್ಧ ...

ಕೆನಡಾ ... ಮೆಕೆನ್ಸಿಕಿಂಗ್ ... ಇಟಲಿಯ ವಿ... ಬೇಕಾಗಿದೆ. ... ಕೂಡಲೇ ... ಎಂದರು.

ವಿರೋಧ ... ಮಿ|| ಹ್ಯಾನ ... ಅನುಮೋದಿ...

ಸಾಯಂ...

ಅಬಿಸೀ...

ಇಟಲಿ...

ದಿನದಿನ...

ಅಬಿಸಿ... ಗಳು ... ಸುಡಾನಿ... ತಿಳಿಸುತ್ತ... ಶುರುವಾಗ... ಸೈನ್ಯ ಪಡೆ... ಈಗ ಹೊ...

ಅಬಿಸಿ... ನೆಯೂ, ... ರಾಗಿದ್ದ... ಲಂಡನ್ನಿ... ಅವರ ಭ... ಅಬಿಸ...



ಮದ್ರಾಸು ಗವರ್ನರರ ಭಾಷಣ!

ಭಾರತದೊಡನೆ ಒಪ್ಪಂದಕ್ಕೆ ಬ್ರಿಟಿಷ್ ಪತ್ರಿಕೆಯ ಹೇಳಿಕೆ

ರಾಜಕೋಟೆ ಠಾಕೂರ್ ಸಾಹೇಬರ ಮರಣ!

ಅಖಿಲ ಭಾರತ ಕಮಿಟಿಗೆ ಪಂತರ ನಾಮಕರಣ!

ವರು ಇಟಲಿಯ ಮೇಲೆ ಸರ್ವಾನುಮತದಿಂದ ಯುದ್ಧ ಘೋಷಿಸಿದರು

ಕೆನಡಾ ಮುಖ್ಯಮಂತ್ರಿಗಳಾದ ಮಿ|| ಮೆಕೆನ್ಸಿಕಿಂಗ್‌ರು ಭಾಷಣ ಮಾಡುತ್ತಾ ಇಟಲಿಯ ಮೇಲೆ ನಾವು ಯುದ್ಧ ಹೂಡಬೇಕಾಗಿದೆ ನಮ್ಮ ಸಾರ್ವಭೌಮರು ಕೂಡಲೇ ಯುದ್ಧ ಘೋಷಿಸಬೇಕು ' ಎಂದರು

ವಿರೋಧ ಪಂಗಡದ ನಾಯಕರಾದ ಮಿ|| ಹ್ಯಾನ್‌ಸನ್‌ರು ನಿರ್ಣಯವನ್ನು ಅನುಮೋದಿಸಿದರು

ಸಿಯವರು ಬಾತ್ ಎಂಬಲ್ಲಿದ್ದ ತಮ್ಮ ಮನೆಯನ್ನು ಬಿಟ್ಟು ಈಗ ಲಂಡನಿಗೆ ಬಂದಿದ್ದಾರೆ ಅವರು ಲಂಡನಿನ ವೆಸ್ಟ್ ಎಂಡ್‌ನಲ್ಲಿ ಒಂದು ಹೋಟೆಲಿನಲ್ಲಿ ಇಳಿದುಕೊಂಡಿದ್ದಾರೆ ಅವರ ಈ ಭೇಟಿಯ ಉದ್ದಿಶ್ಯವೇನೆಂಬುದು ಗೊತ್ತಾಗಿಲ್ಲ ಇಟಲಿ ಯುದ್ಧಕ್ಕೆ ಸೇರುವುದೆಂಬ ಪ್ರಕಟಣೆ ಹೊರಡುವುದಕ್ಕಿಂತ ಮುಂಚೆಯೇ ಅವರು ಈ ರೀತಿ ಹೊರಟು ಬಂದುದು

ಏಡನಿನ ಮೇಲೆ ಬಾಂಬಿನ ಮಳೆ

ಮೊನ್ನೆ ಬುಧವಾರ ದಿನ ಸುಮಾರು

ಮದ್ರಾಸು ಗವರ್ನರರ ಭಾಷಣ

"ಯುದ್ಧದಲ್ಲಿ ಯಾರು ಜಯಶೀಲರಾದರೇನು, ಇಂಗ್ಲೆಂಡಾಗಲಿ ಅಥವಾ ಜರ್ಮನಿಯಾಗಲಿ ಭಾರತವನ್ನು ಆಳಿದರೆ ನಮಗೇನೂ ವ್ಯತ್ಯಾಸವಿಲ್ಲ ಎಂಬುದಾಗಿ ಈ ರಾಷ್ಟ್ರದಲ್ಲಿ ಅನೇಕ ಜನರು ಹೇಳಿಕೊಳ್ಳುವರು ಹಾಗೆ ಹೇಳುವುದು ಸರಿಯಲ್ಲ ಈ ಯುದ್ಧದಲ್ಲಿ ನಾವು ಕಳೆದುಕೊಂಡರೆ, ಸ್ವಾತಂತ್ರ್ಯವಾಗಲಿ ಅಥವಾ ಡೊಮಿನಿಯನ್-ಸ್ಟೇಟಸ್ ಆಗಲಿ ಎಂದೆಂದಿಗೂ ದೊರೆಯಲಾರದು" ಎಂದು ಪ್ರದವಾಗ್ಯ, ನಮಗೆ ವಿಜಯವುಂಟಾಗುವಂತೆ ಮಾಡಲು ಕೃಷಿಯನ್ನಾದ, ನಾವು ನಮ್ಮ ಕಾರ್ಯ ಭಾಗವನ್ನು ವಹಿಸಬೇಕು" ಎಂದರು

ರಾಜಕೋಟೆ ಠಾಕೂರ್ ಸಾಹೇಬರ ಮರಣ

ಹೃದಯ ಸ್ತಂಭನದಿಂದ

ರಾಜಕೋಟೆಯ ಠಾಕೂರ್ ಸಾಹೇಬರಾದ ಧರ್ಮೇಂದ್ರಸಿಂಗ್‌ರವರು ಜೂನ್ ೧೦ರಂದು ಹಠಾತ್ತನೆ ಹೃದಯಸ್ತಂಭನದಿಂದ ನಿಧನರಾದರು ಅವರ ಸೋದರರು ಈ ಬೇಗನೆ ರಾಜಕೋಟೆಗೆ ಬಂದರು.

ನಾಲ್ಕು ದಿನಗಳು ಸಂಸ್ಥಾನದಲ್ಲಿ ಹರತಾಳವೂ ಶೋಕ ಪ್ರದರ್ಶನವೂ ನಡೆಯುವುದು.

ಅಖಿಲ ಭಾರತ ವರ್ಕಿಂಗ್ ಕಮಿಟಿಗೆ

ಪಂಡಿತ ಗೋವಿಂದವಲ್ಲಭ ಪಂತರ ನಾಮಕರಣ

ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಬುಲ್ ಕಲಾಂ ಆಜಾದರು ಅಖಿಲ ಭಾರತ ವರ್ಕಿಂಗ್ ಕಮಿಟಿಗೆ ಸಂಯುಕ್ತ ಪ್ರಾಂತದ ಮಾಜೀ ಮುಖ್ಯ ಮಂತ್ರಿಗಳಾದ ಪಂಡಿತ ಗೋವಿಂದವಲ್ಲಭ ಪಂತರನ್ನು ಸದಸ್ಯರನ್ನಾಗಿ ನಾಮಕರಣ ಮಾಡಿದ್ದಾರೆ ವರ್ಕಿಂಗ್ ಕಮಿಟಿಯಲ್ಲಿ ಖಾಲಿ ಬಿದ್ದಿದ್ದ ಹದಿನಾಲ್ಕನೆಯ ಸ್ಥಾನವನ್ನು ಈಗ ಭರ್ತಿ ಮಾಡಿದಂತಾಯಿತ



ಸಾಯಂಕಾಲದ ವೊದನೆ ವ್ಯಾಪಾರಿ ಹಡಗಗಳು ಸುರಕ್ಷಿತವಾಗಿ ಬಂದರವನ್ನು ಸೇರುತ್ತವೆ —ಬ್ರಿಟಿಷ್ ನೌಕೆಯು ಇದು ಬೆಂಗಾವಲಿಗಿರುವುದು

ಅಬಿಸೀನಿಯದಲ್ಲಿ ಒಳದಂಗೆ

ಇಟಲಿ ಸೈನ್ಯ ಪಡೆಯ ನಾಶ!

ದಿನದಿನಕ್ಕೂ ಪರಿಸ್ಥಿತಿ ಕೆಡುತ್ತಿದೆ

ಅಬಿಸೀನಿಯಾ ದೇಶದಲ್ಲಿ ಒಳದಂಗೆಗಳು ಪ್ರಬಲಿಸಿವೆಯೆಂದು ಪೋರ್ಟ್ ಸುಡಾನಿನಿಂದ ಬರುತ್ತಿರುವ ವರದಿಗಳು ತಿಳಿಸುತ್ತವೆ ಯುರೋಪಿನ ಯುದ್ಧವು ಶುರುವಾಗುವುದಕ್ಕೆ ಮೊದಲು ಇಟಲಿ ಸೈನ್ಯ ಪಡೆಯೊಂದು ನಾಶವಾಯಿತೆಂದು ಈಗ ಹೊರಬಿದ್ದಿದೆ

ಅಬಿಸೀನಿಯನ್ನರು ರೈಫಲ್‌ಗಳೊಡನೆಯೂ, ಬಾಂಬುಗಳೊಡನೆಯೂ ಸಶಸ್ತ್ರರಾಗಿದ್ದಾರೆಂದು ತಿಳಿದುಬಂದಿದೆ.

ಲಂಡನ್ನಿಗೆ ನೆಗಸ್‌ರ ಆಗಮನ

ಅವರ ಭೇಟಿಯ ಉದ್ದಿಶ್ಯ ಗೊತ್ತಿಲ್ಲ

ಅಬಿಸೀನಿಯಾ ಚಕ್ರವರ್ತಿ ಹೈಲಿಸೆಲಾ

೯ ಗಂಟೆ ಸುಮಾರಿಗೆ ಏಡನದ ಮೇಲೆ ಇಟಾಲಿಯನರು ಬಾಂಬುಗಳನ್ನು ಸುರಿಸಿದರು ತಾ|| ೧೩ನೇ ದಿನ ೭ ಗಂಟೆಗೂ ಬಾಂಬನ್ನು ಸುರಿಸಲಾಯಿತ ವಿಶೇಷವೇನೂ ನಷ್ಟವಾಗಿಲ್ಲ ಶತ್ರುಗಳ ಒಂದು ವಿಮಾನವು ನೆಲಕ್ಕುರುಳಿಸಲ್ಪಟ್ಟಿತ ಐದು ಮಂದಿ ಅರಬರು ಕೊಲ್ಲಲ್ಪಟ್ಟರು ಆರ ಜನರು ಗಾಯಗೊಂಡಿದ್ದಾರೆ

ಏಡನಿನ ಮೇಲೆ ಇಟಾಲಿಯನರು ಮಾಡಿದ ಈ ದಾಳಿಯು ಅಯಶಸ್ವಿಯಾಯಿತೆಂದೂ ಬಾಂಬುಗಳಲ್ಲಿ ಅನೇಕ ಬಾಂಬುಗಳು ಸಮುದ್ರದಲ್ಲಿ ಹಾಗು ಬಂಡೆಗಳ ಮೇಲೆ ಬಿದ್ದು ನಿರರ್ಥಕವಾದುವೆಂದೂ ಬಿ. ಬಿ. ಸಿ. ಯಿಂದ ತಿಳಿಯುತ್ತದೆ.

ಮದ್ರಾಸಿನ ಗವರ್ನರೆಂದ ಸರ್ ಆರ್ಥರ್ ಹೋಪ್‌ರವರು ಉದಕಮಂಡಲದ ವೈ. ಎಂ. ಸಿ. ಎ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದಾಗ ಭಾಷಣ ಮಾಡಿದರು 'ಈ ಯುದ್ಧದಲ್ಲಿ ಜರ್ಮನಿಗೆ ವಿಜಯವಾದರೆ ಜರ್ಮನಿಯು ಭಾರತಕ್ಕೆ ಎಂತಹ ಸ್ವಾತಂತ್ರ್ಯವನ್ನು ಬೇಕಾದರೂ ಕೊಡುವುದೆಂದು ನೀವು ಎಣಿಸುವಿರಾ? ಹಾಗೊಂದು ವೇಳೆ ಆದರೆ ಅದು ತನ್ನ ವಿಜಯದ ಪರಿಣಾಮವಾಗಿ ಭಾರತವನ್ನು ಬಹಳ ಅಮೂಲ್ಯವಾದ ಬಹುಮಾನವೆಂದು ಕಂಡು ವಶಪಡಿಸಿಕೊಳ್ಳುವುದೇ ಹೊರತು ಮತ್ತೇನಲ್ಲ. ಮೂಲತಃ ದೌಷ್ಟ್ಯದಿಂದ ಕೂಡಿದ ಒಂದು ಕೆಟ್ಟ ಪದ್ಧತಿಯನ್ನು ನಿರ್ಮೂಲನಮಾಡುವುದರಲ್ಲಿಯೇ ಯುದ್ಧವು ಕೊನೆಗೊಳ್ಳುವುದು. ಯುದ್ಧವು ಜಯ

ಭಾರತದೊಡನೆ ಒಪ್ಪಂದಕ್ಕಾಗಿ ಪ್ರಯತ್ನಿಸಬೇಕೆಂದು ಬ್ರಿಟಿಷ್ ಪತ್ರಿಕೆಗಳ ಸಲಹೆ

ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಭಾರತದ ಬಗ್ಗೆ ಟೀಕಿಸುತ್ತ ಮಿತ್ರರಾಷ್ಟ್ರಗಳಿಗೆ ಸಹಾಯ ಮಾಡುವುದರಲ್ಲಿ ಭಾರತವು ಬಹಳ ಆಸೆ ಹೊಂದಿದೆಯೆಂದೂ, ಭಾರತಕ್ಕೂ ಬ್ರಿಟನ್ನಿಗೂ ಸಂಬಂಧವನ್ನು ಸರಿಪಡಿಸಲು ಸಿಮ್ಲಾ ಸರಕಾರವು ಯತ್ನಿಸಬೇಕೆಂದೂ ಭಾರತ ಸ್ಟೇಟ್ ಸೆಕ್ರೆಟರಿ ಮಿ ಎಲ್ ಎಸ್ ಎಮರಿಯವರು ಭಾರತಕ್ಕೆ ಭೇಟಿಯಿತ್ತು ಭಾರತೀಯ ಮುಖಂಡರೊಡನೆ ಸಂಪರ್ಕ ಪಡೆಯಬೇಕೆಂದೂ ತಿಳಿಸಿದೆ.

ನ್ಯೂಸ್ ಕ್ರಾನಿಕಲ್ ಪತ್ರಿಕೆಯು ಟೀಕಿಸುತ್ತಾ ಎರಡು ಪಕ್ಷಗಳಲ್ಲಿಯೂ ಎ ಸಾಹಾರ್ದ ಮತ್ತು ವಿಶ್ವಾಸವಿದ್ದರೆ ಆಗ್ಲೋ ಭಾರತೀಯ ಪ್ರಶ್ನೆಯನ್ನು ಪರಿಹರಿಸುವದೇನೂ ಕಷ್ಟವಾಗುವುದಿಲ್ಲವೆಂದ ತಿಳಿಸಿ ಅಮೇರಿಕಾದಲ್ಲಿಯೂ ಮತ್ತು ಬ್ರಿಟನ್ನಿನಲ್ಲಿಯೂ ಅನೇಕರು ಭಾರತವೇ ಪ್ರಜಾಸತ್ತೆಗೆ ಬಲವಾದ ಬೆಂಬಲವಾಗುವುದು ಎಂದು ಆಲೋಚಿಸುತ್ತಿದ್ದಾರೆಂದೂ ಬರೆದಿದೆ.

ಕೇಶಿರಾಜನು ಯಾವ ಮತದವನು?

ಕೇಶಿರಾಜನು ಶಬ್ದಮಣಿದರ್ಪಣವನ್ನು ಬರೆದು ಪ್ರಖ್ಯಾತನಾದ ವೈಯ್ಯಾಕರಣನು. ಮಲ್ಲಿಕಾರ್ಜುನನು ಜೈನನೆಂಬುದರಲ್ಲಿ ಸಂದೇಹವಿಲ್ಲ. ಈ ಮಲ್ಲಿಕಾರ್ಜುನನ ದೌಹಿತ್ರನೆಂದು ಕೇಶಿರಾಜನು ಹೇಳಿಕೊಳ್ಳುವುದರಿಂದ ಇವನೂ ಜೈನನೆಂದು ಕವಿಚರಿತ್ರೆಕಾರರೇ ಮೊದಲಾದವರು ಒಪ್ಪಿರುವರು. ಆದರೆ ಇತ್ತೀಚೆಗೆ ಕೇಶಿರಾಜನು ಜೈನನಲ್ಲವೆಂದೂ, ಇವನು ಹಿಂದೂ ಧರ್ಮದವನೆಂದೂ ಪ್ರತಿಪಾದಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿರುವುದರಿಂದ ಇವನ ಜಾತಿ ಇಂತಹುದೇ ಎಂದು ನಿಷ್ಕರ್ಷೆ ಮಾಡಬಹುದೇ ಎಂದು ನೋಡುವ. ಒಬ್ಬ ಕವಿಯ ಕಾಲ, ಜಾತಿ ವಿಚಾರ ಸರಿಯಾಗಿ ತಿಳಿಯಬೇಕಾದರೆ ಅದಕ್ಕೆ ಎರಡು ತೆರದ ಸಾಕ್ಷ್ಯಗಳು ಬೇಕು. ಒಂದು ಆಂತರಿಕ (Internal) ಸಾಕ್ಷಿ ಅಂದರೆ ಆ ಕವಿಯೇ ಬರೆದಿರುವ ಗ್ರಂಥದಲ್ಲಿ ದೊರಕುವ ಸಾಕ್ಷಿ. ಇನ್ನೊಂದು ಬೇರೆ ಗ್ರಂಥಗಳಲ್ಲಿಯೂ ಶಾಸನಗಳಲ್ಲಿಯೂ ದೊರಕುವ (External) ಬಾಹ್ಯಸಾಕ್ಷಿ. ಕೇಶಿರಾಜನ ಕುರಿತಾದ ಬಾಹ್ಯಸಾಕ್ಷಿಯ ವಿಚಾರ ನಾನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಪ್ರಕೃತ ಕೇಶಿರಾಜನು ಬರೆದಿರುವ ಶಬ್ದಮಣಿದರ್ಪಣದಲ್ಲಿಯೇ ಅವನ ಜಾತಿಯ ನಿಷ್ಕರ್ಷೆ ಮಾಡಬಹುದೇ ಎಂದು ನೋಡುವ.

ಜೈನರು ತಮ್ಮ ಗ್ರಂಥಾದಿಯಲ್ಲಿ ಸಾಮಾನ್ಯವಾಗಿ ವೀರಜಿನನನ್ನೋ, ಸಿದ್ಧರನ್ನೋ ಅಥವಾ ತೀರ್ಥಂಕರರನ್ನೋ ಹೊಗಳುವ ವಾಡಿಕೆಯನ್ನು ಇಟ್ಟುಕೊಂಡಿರುವರು. ಹಿಂದೂ ಕವಿಗಳು ತಮ್ಮ ಗ್ರಂಥದಲ್ಲಿ ಇಷ್ಟದೇವತೆಯನ್ನು ಮೊದಲಾಗಿ ಸ್ತುತಿಮಾಡುವುದೂ ವಾಡಿಕೆಯಾಗಿದೆ. ಕೇಶಿರಾಜನು ತನ್ನ ಗ್ರಂಥಾದಿಯಲ್ಲಿ ವಾಗ್ದೇವಿಯನ್ನು ಅಂದರೆ ಸರಸ್ವತಿಯನ್ನು ನಮಸ್ಕರಿಸುತ್ತಾನೆ. ಸರಸ್ವತಿಯು ಹಿಂದುಗಳ ವಿದ್ಯಾಧಿದೇವತೆ. ಜೈನರು ಭಾಷಾಜ್ಞಾನ, ವಿದ್ವತ್ತಿನ ವಿಚಾರದಲ್ಲಿ ಸರಸ್ವತಿ ಎಂಬ ಪದವನ್ನು ಉಪಯೋಗಿಸ ತ್ತಾರಾದರೂ ದೇವಿಯೆಂದು ನಮಸ್ಕರಿಸುವುದಿಲ್ಲ.

ಶ್ರೀ ವಾಗ್ದೇವಿಗೆ ಶಬ್ದದಿ—।
ನಾವಾವಿಂದ್ರಿಯದ ವಿಷಯಮುಂ ಶ್ರೋತ್ರದೊಳು—॥
ದ್ಭಾವಿಸ ನಿರ್ಮಲ ಮೂರ್ತಿಗಿ—।
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ—॥

ಎಂದು ವಾಗ್ದೇವಿಗೆ ಅವನತನಾಗುತ್ತಾನೆ.

ಇದರಿಂದ ಕೇಶಿರಾಜನು ನಿಜವಾಗಿಯೂ ಹಿಂದೂ ಧರ್ಮದವನೆಂದೂ ಜೈನನಲ್ಲವೆಂದೂ ಹೇಳಬಹುದು.

ಸಂಜ್ಞಾ ಪ್ರಕರಣದ ೧೧ನೆಯ ಸೂತ್ರಕ್ಕೆ ವೃತ್ತಿಯನ್ನು ಬರೆಯುವಾಗ

"ವರ ಸಂಧ್ಯಕ್ಷರ ದಂತಿರೆ।
ಗುರುದೀರ್ಘಸ್ವರ ಗೂಢ ಸಂಧಿಯನೆ ತೋಳ್ಪ ಸಮಾಮ್ನಾಯಂ॥
ಕರಮೊಸೆ ದ್ವಾತ್ರಿಂಶ ಪದ್ಮಾ—।
ದರಂಗೆ ಚತುಸ್ತ್ರಿಂಶಂ ಖಚಾರ್ಣಸಮೇತಂ॥

ಎಂಬ ಕಂದವನ್ನು ಸೇರಿಸಿರುವನು. ಉದಾಹರಣೆಯು ಕಂದ ಪದ್ಯವಾಗಿದ್ದರೆ ಬೇರೆ ಗ್ರಂಥದಿಂದ ಎತ್ತಿಬರೆದುದೆಂದು ಹೇಳಬಹುದಿತ್ತು. ಆದರೆ ಮೇಲಿನ ಕಂದಪದ್ಯವು ವೃತ್ತಿಯೊಂದಿಗೆ ಸೇರಿರುವುದರಿಂದ ಇದನ್ನು ಕೇಶಿರಾಜನೇ ಬರೆದರಬೇಕೆಂದು ಊಹಿಸಲು ಬಲವಾದ ಕಾರಣವಿದೆ. ಈ ಕಂದ ಪದ್ಯದಲ್ಲಿ ಕೇಶಿರಾಜನು ಸಂಧ್ಯಕ್ಷರಗಳ ವಿವರಣೆ ಕೊಡಲು ಬಹು ಚೆಲುವಾದ ವೃತ್ತಿಯನ್ನು ಬರೆದಿರುವನೆಂದು ಎಲ್ಲರೂ ಒಪ್ಪಬೇಕಾಗಿದೆ. ಎರಡನೆಯದಾಗಿ ಈ ಕಂದವನ್ನು ವಿಷ್ಣುವಿನ ಆರಾಧಕನು ಭಕ್ತಿಪೂರ್ವಕವಾಗಿ ಬರೆದಂತೆಯೂ ಭಾಸವಾಗುತ್ತಿದೆ. ಈತನು ಜೈನನಾಗಿದ್ದರೆ ತನ್ನ ಧರ್ಮಕ್ಕೆ ಸಂಬಂಧಿಸಿದ ಯಾವನೊಬ್ಬ ಮಹಾಪುರುಷನನ್ನು ಎತ್ತಿಕೊಂಡು ಗ್ರಂಥಬರೆಯುವ ಅವಸರದಲ್ಲಿ ಹೊಗಳಿ ತನ್ನ ಧರ್ಮವನ್ನೇ ಮೆರೆಯಿಸುತ್ತಿದ್ದನು. ಯಾಕೆಂದರೆ ಆ ಕಾಲದ ಕವಿಗಳು ತಮ್ಮ ಮತ ಪ್ರಚಾರದ ಕೆಲಸವನ್ನು ಮೊದಲನೆಯದಾಗಿ ಮುಂದಿಟ್ಟುಕೊಂಡು ಕಾವ್ಯಗಳನ್ನು ಬರೆಯುತ್ತಿದ್ದರೆಂಬುದು ಸರ್ವವಿದಿತವಿದೆ.

ಇನ್ನು ಮಲ್ಲಿಕಾರ್ಜುನನ —ಜೈನನ— ಮಗಳ ಮಗನು ಹಿಂದುವೆಂತಾಗಬಲ್ಲನೆಂಬ ಸಹಜಪ್ರಶ್ನೆ ಹುಟ್ಟುವುದು. ಇದಕ್ಕೆ ಇಷ್ಟೇ ಸಮಾಧಾನ ಹೇಳಬಹುದು.

ಜೈನರೊಳಗೂ ಹಿಂದುಗಳೊಳಗೂ ಸಂಬಂಧ ಬೆಳೆಯುತ್ತಿತ್ತು ಮತ್ತು ಇದರಿಂದಾಗಿ ಈ ಎರಡು ಮತದವರೊಳಗೆ ರಕ್ತಸಂಬಂಧ ಹಿಂದೆ ಇತ್ತೆಂದು ಹೇಳಲು ಸಾಕಷ್ಟು ಆಧಾರಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯ ಹಿಂದುಗಳಾದ ಬಂಟರಲ್ಲಿ ಪಿತೃಗಳಿಗೆ ಚರು ನೈವೇದ್ಯ ಮಾಡುವಾಗ ಜೈನರಿಗೆ ಬೇರೆ ಚರುವನ್ನು ನೈವೇದ್ಯ ಮಾಡುವ ವಾಡಿಕೆ ಇಂದಿಗೂ ನಡೆದುಬಂದಿದೆ. ಇದರಲ್ಲಿ ಜೈನ ಹಿರಿಯರ ಚರುವಿನೊಂದಿಗೆ ಮಾಂಸ, ಮೀನು ಇತ್ಯಾದಿ ಹಾಕದೆ ಬರೇ ಶಾಖಾಹಾರವನ್ನೇ ನೈವೇದ್ಯ ಮಾಡಿ ಇತರ ಪಿತೃಗಳಿಗೆ ಮಾಂಸ ಮೀನು ಇತ್ಯಾದಿ ನೈವೇದ್ಯ ಮಾಡುತ್ತಾರೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಒಂದು ದೊಡ್ಡ ಬಂಟರ ಕುಟುಂಬಕ್ಕೂ ಅಲ್ಲೇ ನೆರೆಕರೆಯಲ್ಲಿರುವ ಒಂದು ಜೈನ ಕುಟುಂಬಕ್ಕೂ ಈಗಲೂ ಪರಸ್ಪರ ಸೂತಕ ಆಚರಣೆ ಇದೆ. ಎಂದ ಮೇಲೆ ಹಿಂದುಗಳಿಗೂ ಜೈನರಿಗೂ ಸಂಬಂಧವಿತ್ತೆಂದು ಧಾರಾಳವಾಗಿ ಹೇಳಬಹುದಲ್ಲವೇ? ಈ ಕ್ರಮವು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಉತ್ತರದ ದೇಶದಿಂದ ಬಂದಿರಬೇಕೆಂದೂ ಊಹಿಸಬಹುದಾಗಿದೆ. ಅಲ್ಲದೆ ನಮ್ಮ ಪೂರ್ವದ ಇತಿಹಾಸಗಳಿಂದಲೂ ಈ ರೀತಿಯ ಸಂಬಂಧವಾದ ವಿಚಾರವು ತಿಳಿಯುತ್ತದೆ. ಆದುದರಿಂದ ಜೈನನಾದ ಮಲ್ಲಿಕಾರ್ಜುನನ ಮಗಳ ಮಗನು ಹಿಂದುವಾಗಿ ಇರಲು ಯಾವ ಅಡ್ಡಿಯೂ ಇರಲಾರದು.



ಸರಿಯಾಗಿ ಉತ್ತರ ಕಳುಹಿಸಿದ 8 ಮಂದಿಗಳೊಳಗೆ ಹಂಚಲಾಗುವುದು

ನಾವು ಸೀಲು ಹಾಕಿದ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 125ರ ಬಹುಮಾನ. ನಮ್ಮ ಉತ್ತರದ ಯಾವುದಾದರೂ ಒಂದು ಸಾಲನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 20. ಉದ್ದದ ಸಾಲಿನ ಎರಡು ಅಂಕೆಗಳನ್ನು ಹೋಲುವ ಅದೇ ಸಾಲಿನ ಉತ್ತರ ಕಳುಹಿಸಿದವರಿಗೆ ರೂ 5ರ ಕೊನ್ಸೊಲೇಷನ್ ಬಹುಮಾನ.

ಪ್ರತೀ ಸಾಲನ್ನೂ ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 38 ಬರುವಂತೆ ಖಾಲಿಯಿರುವ ಅಂಕಣಗಳಲ್ಲಿ 2ರಿಂದ 17ರ ವರೆಗೆ ಅಂಕೆಗಳನ್ನು ಬರೆಯಿರಿ. ಒಂದು ಬಾರಿ ಉಪಯೋಗಿಸಿದ ಅಂಕೆಯನ್ನು ಪುನರಪಿ ಬರೆಯಕೂಡದು. ಉತ್ತರವನ್ನು ಕಳುಹಿಸುವ ಕಡೇ ದಿನ 3—7—1940 ಫಲಿತಾಂಶ 15—7—1940

ಒಂದು ಉತ್ತರಕ್ಕೆ ರೂ 1 ಪ್ರವೇಶಧನ 3 ಉತ್ತರಗಳಿಗೆ ರೂ 2 ರೂ 5ಕ್ಕೆ 8 ಉತ್ತರಗಳು

ನಿಯಮಗಳು — ಮೇಲೆ ನಮೂದಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದ ಮೇಲೆ ಎಷ್ಟೂ ಉತ್ತರಗಳನ್ನು ಕಳುಹಿಸಬಹುದು. ಹಣವನ್ನು ಮನಿಆರ್ಡರು ಮೂಲಕವಾಗಲಿ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಕಳುಹಿಸಬೇಕು. ಬಹುಮಾನದ ಮೌಲ್ಯವು ಜಮೆಯಾದ ಹಣದ ಮೇಲೆ ಹೊಂದಿಕೊಂಡಿದೆ. ಆದರೆ ಕಡಿಮೆ ಎಂದರೆ ರೂ 2000ನ್ನು ನಾವು ಬೊಂಬಾಯಿ ಪ್ರಾಮುಖ್ಯ ಬೇಂಕೊಂದರಲ್ಲಿ ಭದ್ರತೆಯಾಗಿಟ್ಟು ಉತ್ತರವನ್ನು ಹೋಲುವ ಉತ್ತರ ಕಳುಹಿಸಿದವರಿಗೆ ಕೊಡುವೆವೆಂಬ ಭರವಸೆಯನ್ನೀಯುವೆವು. ಎಲ್ಲಾ ಕಳುಹಿಸಿದ ಉತ್ತರಗಳು 1940ನೇ ಜುಲೈ 3ನೇ ತಾರೀಕಿನೊಳಗೆ ಬಂದು ಮುಟ್ಟತಕ್ಕದ್ದು. ತದನಂತರ ಬಂದ ಉತ್ತರಗಳಿಗೆ ಗಮನಕೊಡಲಾಗಲಿಕ್ಕಿಲ್ಲ. ನಿಮ್ಮ ಹೆಸರು, ಎಡ್ರೆಸು ಅಂಕೆಗಳನ್ನು ಇಂಗ್ಲಿಷಿನಲ್ಲಿಯೇ ಬರೆಯಿರಿ. ಉತ್ತರ ಬೇಕಾದರೂ ಅಂಚೆಚೀಟನ್ನು ತಮ್ಮ ತಮ್ಮ ವಿಳಾಸ ಬರೆದ ಕವರನ್ನು ಕಳುಹಿಸಿರಿ. ಎಲ್ಲಾ ವಿಷಯಗಳಲ್ಲಿ ಮೆನೇಜರರ ತೀರ್ಮಾನವು ಅಖೈರೂ ನ್ಯಾಯಬದ್ಧವೂ ಆಗಿರುತ್ತದೆ.

ಕಳೆದ ಬಾರಿಯ 34ರ ಉತ್ತರ

1ನೇ ಸಾಲು	12	13	6	3
2ನೇ	2	7	16	9
3ನೇ	15	10	1	8
4ನೇ	5	4	11	14

ನಿಮ್ಮ ಉತ್ತರವನ್ನು ಪ್ರವೇಶ ಹಾಸಲಿನೊಂದಿಗೆ ಈ ವಿಳಾಸಕ್ಕೆ ಕಳುಹಿಸಿರಿ

ದಿ ಮೆನೇಜರ್

ನೇಶನಲ್ ಡಿಸ್ಟ್ರಿಬ್ಯೂಟಿಂಗ್ ಕೊ.,

'ಟಾವೆರ್ ಹೌಸ್' 199, ಹಾರ್ನಬಿ ರೋಡ್

ಫೋರ್ಟ್ ಬೊಂಬಾಯಿ

The Auttur & Jawahar Bank, Limited.

ದಿ ಅತ್ತೂರ್ & ಜವಾಹರ್ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು — ಬ್ರೆಂಚ್ ಸಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ 1,00,000 — ಕೊಡಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 4½

" 6 ತಿಂಗಳಿಗೆ 4% — " 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡ್ಯಾರೆಕ್ಟರ್

ಕಾರ್ಕಳ

ಕೋಪರೇಟಿವ್ ಸ್ಟೋರು

ಕಾರ್ಕಳ ಕೋಪರೇಟಿವ್ ಸ್ಟೋರ್ಸಿನ ಪ್ರಾರಂಭೋತ್ಸವವು ತಾ ೧೦-೬ ೪೦ರ ದಿನ ಸಾಯಂಕಾಲ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ ಶ್ರೀ ವಿ ಪೋಲಾರೆಡ್ಡಿ ಬಿ ಎ ಬಿ ಯಲ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ಟೋರ್ಸಿನ ಆವಶ್ಯಕತೆ ಮತ್ತು ಪರಸ್ಪರ ಸಹಾಯ ಸಹಕಾರಗಳ ಪ್ರಯೋಜನದ ಕುರಿತು ಭಾಷಣಗಳಾದ ಬಳಿಕ ಸ್ಟೋರ್ಸಿನ ಸರ್ವತೋಮುಖವಾದ ಉನ್ನತಿಯನ್ನು ಕೋರಿ ಅಧ್ಯಕ್ಷರು ಭಾಷಣಮಾಡಿದರು. ಧನ್ಯವಾದ ಮತ್ತು ಪಾನಕ ಸತ್ಕಾರದೊಂದಿಗೆ ಸಭೆ ಮುಗಿಯಿತು.

ಸಂತೋಷ ಕೂಟ:— ಇಲ್ಲಿ ಸಂಗೀತ ಅಧ್ಯಾಪಕರಾಗಿರುವ ವಿದ್ವಾನ್ ಶ್ರೀ ಯಸ್ ಯನ್ ಹರಿದಾಸರವರು ಶೃಂಗೇರಿಯ ಶ್ರೀ ನಾಗಪ್ಪಯ್ಯನವರ ಪುತ್ರಿ ಶ್ರೀಮತಿ ಸುಗುಣಾಬಾಯಿಯನ್ನು ವಿವಾಹವಾದ ಸಂಬಂಧ ತಾ ೧೬ ೬ ೪೦ರ ದಿನ ಸಾಯಂಕಾಲ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಒಂದು ಸಂತೋಷ ಕೂಟವು ವಿಜೃಂಭಣೆಯಿಂದ ನಡೆಯಿತು. ಈ ನವವಧೂವರರಿಗೆ ದೀರ್ಘಾಯುರಾರೋಗ್ಯ ಭಾಗ್ಯಾದಿಗಳನ್ನು ಹಾರೈಸುತ್ತೇವೆ.

ಮಠಾಧೀಶರ ಆಗಮನ: ಭೀಮನಕಟ್ಟೆ ಮತ್ತು ಭಂಡಾರಕೇರಿ ಮಠಾಧೀಶರು ತಾ. ೮-೬-೪೦ರ ದಿನ ಸ್ಥಳೀಯ ಅನಂತಶಯನ ದೇವಸ್ಥಾನಕ್ಕೆ ವಿಜಯಮಾಡಿಸಿ ಭಕ್ತವರ್ಗದ ಸೇವೆ ಸತ್ಕಾರಾದಿಗಳನ್ನು ಸ್ವೀಕರಿಸಿ ಆಶೀರ್ವಾದಗಳನ್ನು ಕೊಟ್ಟು ಮರುದಿನ ಮುಂದಕ್ಕೆ ಪ್ರಯಾಣ ಬೆಳಸಿದರು.

ಸಿನೆಮಾ ಪುಟ

ವಿಜಯಂ

ಗಂಧರ್ವ ಮೂವಿಟೋನ್ (ಮದ್ರಾಸು) ಈ ಹೊಸ ಕಂಪೆನಿಯವರು ಒಂದು ಚಿತ್ರವನ್ನು ತೆಲುಗಿನಲ್ಲಿಯೂ, ಇಂಗ್ಲೀಷಿನಲ್ಲಿಯೂ ತಯಾರಿಸಲು ನಿರ್ಧರಿಸಿದ್ದಾರೆ. ವಿಜಯಂ ಎಂಬುದು ತೆಲುಗು ಚಿತ್ರದ ಹೆಸರು. ವಿಕ್ಟರಿ (ವಿಜಯ) ಎಂಬುದು ಇಂಗ್ಲಿಷ್ ಚಿತ್ರದ ಹೆಸರು

ಗೀತಾ

ಸಿರ್ಕೋನ್ ಕಂಪೆನಿಯ ಮುಂದಿನ ಚಿತ್ರವು 'ಗೀತಾ' ಎಂಬುದು ಇದರಲ್ಲಿ ದುರ್ಗಾಖೋಟೆ, ಚಂದ್ರಮೋಹನ್ ಮುಂತಾದ ಪ್ರಸಿದ್ಧ ನಟನಟಿಯರು ಪಾತ್ರವಹಿಸಿರುವರು ಮೋಹನ್ ಸಿಂಹಾರವರ ಅನುರಾಧಾ ಎಂಬ ಚಿತ್ರದ ತಯಾರಿಕೆಯೂ ಮುಂದುವರಿಯುತ್ತಿದೆ ಪೃಥ್ವಿರಾಜನು ಪಾತ್ರವಹಿಸುವ ಇನ್ನೊಂದು ಚಿತ್ರವನ್ನು ಸಿರ್ಕೋ ಪ್ರಾಡಕ್ಷನ್ಸಿನವರು ತಯಾರಿಸಲಿರುವರು.

ಬಂಧನ

ಬಾಂಬೆ ಟಾಕೀಸ್ ರವರ ಹೊಸ ಚಿತ್ರಕ್ಕೆ ಬಂಧನ' ಎಂಬ ಹೆಸರನ್ನು ಕೊಡಲಾಗಿದೆ. ಲೀಲಾ ಚಿಟ್ನೀಸ್ ಮತ್ತು ಅಶೋಕ್ ಕುಮಾರ್ ಇವರಿಬ್ಬರೂ ಇದರಲ್ಲಿ ಮುಖ್ಯ ನಾಯಕ ನಾಯಕಿ ಪಾತ್ರ ವಹಿಸಿರುವರು. ಮುಖರ್ಜಿಯವರು ಡೈರೆಕ್ಟರರು

ಸುಖ ತಾರಾ

ಫಿಲ್ಮ್ ಪ್ರೊಡ್ಯೂಸರ್ಸ್ ಲಿಮಿಟೆಡ್ ಡೈರೆಕ್ಟರ್ ನಿರಂಜನಪಾಲ್ ರವರು ಸುಖತಾರಾ ಎಂಬ ಚಿತ್ರ ತಯಾರಿಕೆಯನ್ನು ತ್ವರಿತದಲ್ಲಿಯೇ ಮುಗಿಸಲಿರುವರು. ಇದೇ ಕಂಪೆನಿಯ 'ಕೈದಿ' ಎಂಬ ಚಿತ್ರದ ತಯಾರಿಕೆ ಮುಗಿಯುತ್ತಲಿದೆ ಮೆಹ್ತಾ ಮತ್ತು ನಂದರೇಕರ್ ರು ಮುಖ್ಯ ಪಾತ್ರ ವಹಿಸಿದ್ದಾರೆ.

ಮೋಹನ್ ಪಿಕ್ಚರ್ಸ್

'ಹಕೀಂ ತಾಯಿ ಕಿ ಭೇಟಿ' ಎಂಬ ಹೊಸ ಚಿತ್ರವನ್ನು ನನುಭಾಯಿ ವಕೀಲರು ತಯಾರಿಸಿದ್ದಾರೆ. ಅವರ ಮುಂದಿನ ಚಿತ್ರ 'ದೀಪಕ ಮಹಲ್' ಎಂಬುದು.

ಶಾಪ ಮುಕ್ತಿ

ಕ್ರಿಸೆಂಟ್ ಮೂವಿಟೋನ್ ನವರ ಸುಪ್ರಸಿದ್ಧ ಡೈರೆಕ್ಟರಾದ ಪಿ. ಸಿ. ಬರುವಾರವರು ಈಗ 'ಶಾಪ ಮುಕ್ತಿ' ಎಂಬ ಬಂಗಾಳಿ ಚಿತ್ರ ತಯಾರಿಕೆಯಲ್ಲಿ ಡೈರೆಕ್ಟರಾಗಿರುವರಷ್ಟೆ. ಈ ಚಿತ್ರದಲ್ಲಿ ಮಿಸ್ ಗಾಯತ್ರಿರಾವ್ ಎಂಬ ಹೊಸ ವಿದ್ಯಾವಂತ ತರುಣಿಯನ್ನು ತೆಗೆದುಕೊಳ್ಳಲಾಗಿದೆ. ಶಾಪ ಮುಕ್ತಿ ಚಿತ್ರದ ಶೂಟಿಂಗ್ ನಡೆಯುತ್ತಿದೆ

ಹಿಂದೂಸ್ಥಾನ್ ಹಮಾರಾ

ಡೈರೆಕ್ಟರ್ ರಾಮದರ್ಯಾಣಿಯವರ 'ಹಿಂದೂಸ್ಥಾನ್ ಹಮಾರಾ' ಎಂಬ ಚಿತ್ರ ತಯಾರಿಕೆ ಮುಗಿದಿದೆ ಜಮುನಾ ಮತ್ತು ಪದ್ಮಾದೇವಿ ಪಾತ್ರವಹಿಸಿದ್ದಾರೆ. 'ಚಾಂದ್ನಿರಾತ್' ಎಂಬ ಇನ್ನೊಂದು ಹೊಸ ಚಿತ್ರವನ್ನು ರಾಮದರ್ಯಾಣಿಯವರು ತಯಾರಿಸುವರು ಅದಕ್ಕಾಗಿ ಸಂಭಾಷಣೆಗಳನ್ನು ಬರೆದು ಕೊಡಲು ಬೊಂಬಾಯಿಯಿಂದ ವ ಘೋಷ್ ರು ಬರಲಿರುವರು.

ಬರೋಸಾ

ಮಿನರ್ವ ಮೂವಿಟೋನ್ ನವರ ಭರೋಸಾ ಎಂಬ ಚಿತ್ರ ತಯಾರಿಕೆಯು ಬಹಳ ಬಿರುಸಿನಿಂದ ನಡೆಯುತ್ತಿದೆ. ಚಂದ್ರಮೋಹನ್, ಸರ್ದಾರ್ ಅಖ್ತರ್ ಶೀಲಾ ಮಾಯಾದೇವಿ ಮಜ಼ರ್ ಖಾನ್ ಎರುಚ್ ತಾರಾಪೋರ್ ಮತ್ತು ಗುಲಾಬ್ ಇವರ ಪಾತ್ರ ವಹಿಸಿದ್ದಾರೆ

ಮೀನಾಕ್ಷಿ ಕಲ್ಯಾಣಂ

ಈಸ್ಟ್ ಇಂಡಿಯಾ ಚಿತ್ರ ಕಂಪೆನಿಯ ಮೀನಾಕ್ಷಿ ಕಲ್ಯಾಣವು ಈ ವಾರದಲ್ಲಿ ಪ್ರದರ್ಶಿತವಾಗಲಿದೆ ಪಾರ್ವತಿಯು ಮೀನಾಕ್ಷಿಯ ಅವತಾರವೆತ್ತಿ ಬಂದ ಕಥೆಯು ಇದರಲ್ಲಿ ವರ್ಣಿತವಾಗಿದೆ ಶ್ರೀ ಆರ್ ಪದ್ಮನಾಭನವರಿಂದ ನಿರ್ದೇಶಿಸಲ್ಪಟ್ಟಿದೆ ಟಿ ಮೀನಾಕ್ಷಿಯು ನಾಯಿಕಾ ಪಾತ್ರವನ್ನು ವಹಿಸುವಳು

ರಾಮ ಕುಮಾರ್

"ಮುಗಲ ಆಸ್ಥಾನದಲಿ ತಮಿಳನು' ಎಂಬ ಚಿತ್ರವು ರಾಮಕುಮಾರರ ಅಭಿನಯದಿಂದ ತಯಾರಾಗುತ್ತಿದೆ ರಾಮಕುಮಾರರು ಸಹಸ್ರಾಕೃತಿಯವರೆಂದು ಹೆಸರಾದವರು

ಇಟಲಿಯ ರಂಗಭೂಮಿಯಲ್ಲಿ ಶಾಕುಂತಳ

ಅಲ್ಲಿ ಕಾಳಿದಾಸನಿಗೆ ಅತ್ಯಂತ ಗೌರವವು ಸಲ್ಲುತ್ತಿದೆ!

ಕಾಳಿದಾಸನು ಇಂದು ಪಾರ್ಥಿವ ಶರೀರದಿಂದ ವ್ಯಕ್ತಿ ಹೊಂದಿದ್ದರೂ ತನ್ನ ಅಮರ ಕೃತಿಯಾದ ಶಾಕುಂತಳ ನಾಟಕದಿಂದಾಗಿ ಇಂದೂ ಜೀವಂತನಾಗಿಯೇ ಇರುವನೆನ್ನಬೇಕು.

ಇಟಲಿ ಮತ್ತು ಕೆನಡಗಳಲ್ಲಿ ಕಾಳಿದಾಸ ಕೃತ ಶಾಕುಂತಳ ನಾಟಕಕ್ಕೆ ಅತ್ಯಂತ ಆದರವು ಸಲ್ಲುತ್ತಿದೆ.

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿ ಇಟ್ಟಿರಿಸಿ ನಂತರ ಯಾವ ಪೆಟ್ಟು ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯ, ಪೆಟ್ಟು, ಪರಚುವಿಕೆ, ಮುದ್ದಣ ಇವುಗಳಿಗೆ ಹಚ್ಚಿರಿ. ರೋಗ ಮಾಗದೇತೆಂಬ ಚಿಂತೆಯಿಲ್ಲ ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಮತ್ತು ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹರಡದಂತೆ ಮಾಡುತ್ತದೆ ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ ಅಸಹ್ಯವಾದ ತುರಿಗಜ್ಜಿಗಳು. ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತ್ತವೆ ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ ತುರಿ, ಗಾಯ, ಪೆಟ್ಟು ಮುದ್ದಣ ಬಾತುವಿಕೆ ತುರಿಕಜ್ಜಿ ವಿಷವಾಯ ವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿ.

ಕುಟಿಕೂರಾ ಮುಲಾಮು
Cuticura Ointment



ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ, ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು 'ಪುರೋಹಿತ ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದನ್ನು ತೆಗೆದುಕೊಳ್ಳುತ್ತಿದ್ದ ಕೂಡಲೇ ಕೆಮ್ಮು ನಿಲ್ಲುವುದು, ತೀಕು ಕಡಿಮೆಯಾಗುವುದು, ಶೀತದಿಂದೆಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು. ನಾವ ಕ್ರಮವಾಗಿ ಶಕ್ತಿಯು ತುಂಬಬಂದು ಫುಪ್ಫುಸವು ಗಟ್ಟಿಯಾಗಿ ದಮ್ಮು ಹೆಸರಿಲ್ಲದೆ ನೆಟ್ಟಗಾಗುತ್ತದೆ ಪುರೋಹಿತ ಶ್ವಾಸಹಾರಿಯು ೪ ಔ., ೬ ಔ ಮತ್ತು ೧೨ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ. ೨-೩-೪, ೩-೧೨-೦ ಮತ್ತು ೬ ರೂಗಳಿಗೆ ಎಲ್ಲಾ ಕಡೆಸಿಗುವುದು. ತರಿಸಿಕೊಳ್ಳುವ ವಿಳಾಸ,

ಡಾ॥ ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

ಜೀವನಜ್ಯೋತಿಗಳು:

ಪಾರ್ವತೀಬಾಯಿ ಆಠವ್ಳೆ

[ಬರೆದವರು: ಎಚ್. ವೈ. ಸರಸ್ವತಮ್ಮ. ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಕೋಟೆ ಬೆಂಗಳೂರು ಸಿಟಿ. ಕ್ರೌನ್ ೧/೮ ಆಕಾರದ ೧೧೬ ಪುಟಗಳು. ಬೆಲೆ ಹತ್ತಾಣೆ.

ಹಿಂದೂ ವಿಧವೆಯರ ಬಾಳುವೆ ಸಮಾಜದಲ್ಲಿ ಅತ್ಯಂತ ಹೀನವೆಂದು ಎಣಿಸಲ್ಪಡುವ ಬಾಳುವೆ. ಅವರ ಯಾತನೆ ಯಮಯಾತನೆ. ಪ್ರಪಂಚದ ಸಂಕಷ್ಟಕ್ಕೆ ಬಲಿಯಾಗಿ ನಿರಾಶೆಯಲ್ಲಿ ಅವರು ಜೀವನ ನಡೆಸಬೇಕಾಗಿದೆ. ಇಂತಹ ದುಃಖಮಯ ಪರಿಸ್ಥಿತಿಯನ್ನು ಕಂಡು, ಮನನೊಂದು ಹಿಂದೂ ವಿಧವೆಯರ ಉದ್ಧಾರದ ಸಲುವಾಗಿ ದುಡಿದ ಮಹನೀಯರು ಕೆಲವರಿದ್ದಾರೆ. ಇಂತಹ ಪವಿತ್ರಾತ್ಮರಲ್ಲಿ, ಮರಾಠದ ಒಬ್ಬ ಲೋಕಪೂಜ್ಯಳ ಹೆಸರು ಅತ್ಯಂತ ಪ್ರಶಂಸೆಗೆ ಪಾತ್ರವಾಗಿದೆ. ಹಿಂದೂ ವಿಧವೆಯರ ಉದ್ಧಾರದ ಸಲುವಾಗಿಯೇ ತನ್ನ ಜೀವನವನ್ನು ಮೀಸಲಾಗಿರಿಸಿ, ಅದಕ್ಕಾಗಿ ಅನೇಕ ಕೆಲಸಗಳನ್ನು ಕೈಕೊಳ್ಳಲು, ಅಂತಃಸ್ಫೂರ್ತಿಯಿಂದ ಮುಂದುವರಿದು ಕಾರ್ಯರಂಗಕ್ಕಿಳಿದು, ಅಮೇರಿಕಾ ದೇಶದಂತಹ ಪ್ರಗತಿಪರ ರಾಷ್ಟ್ರವನ್ನು ಸಂಚರಿಸಿ, ಸಮಾಜದ ರೀತಿ ನೀತಿಗಳನ್ನು ಅಭ್ಯಾಸಿಸಿ, ಸಾಮಾನ್ಯ ಹೆಂಗುಸಾಗಿದ್ದ ಒಬ್ಬಾಕೆ ಆಂಗ್ಲಭಾಷೆಯನ್ನೂ ಚೆನ್ನಾಗಿ ಕಲಿತುಕೊಂಡು, ಆ ಅನುಭವದ ಫಲದಿಂದ ಭಾರತಕ್ಕೆ ಮರಳಿ ಬಂದು ಒಂದು ಆದರ್ಶ ವಿಧವಾಶ್ರಮವನ್ನು ನಡೆಸುತ್ತಾ, ಇಂದೂ ನಿರಂತರ ದುಡಿಯುತ್ತಿರುವಳೆಂದು ತಿಳಿದರೆ ಯಾರಿಗೆ ಆಕೆಯ ಜೀವನ ಚರಿತ್ರೆಯನ್ನು ತಿಳಿಯಲು ಕುತೂಹಲ ಹುಟ್ಟಲಿಕ್ಕಿಲ್ಲ...? ಅವರೇ ಪಾರ್ವತೀಬಾಯಿ ಆಠವ್ಳೆಯವರು. ಅವರ ಜೀವನ ಚರಿತ್ರೆಯನ್ನು ತಿಳಿಗನ್ನಡ ಭಾಷೆಯಲ್ಲಿ ಮನೋಹರವಾಗಿ ಶ್ರೀಮತಿ ಎಚ್. ವೈ. ಸರಸ್ವತಮ್ಮನವರು ಬರೆದು ಕನ್ನಡಿಗರಿಗೆ ಹೊಸ ವಿಭೂತಿ ಪುರುಷಳೊಬ್ಬಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಲೋಕಸುಂದರೀ ರಾಮನ್‌ರವರು ಅದಕ್ಕೆ ಒಂದು ಬೆಲೆಯುಳ್ಳ ಮುನ್ನುಡಿಯನ್ನೂ ಬರೆದಿದ್ದಾರೆ.

ಮುಂಬಯಿ ಪ್ರಾಂತದ ಕೊಂಕಣ ದೇಶದಲ್ಲಿ ರತ್ನಗಿರಿಯೆಂಬ ಜಿಲ್ಲೆಯಿದೆ. ಆ ಜಿಲ್ಲೆಗೆ ಸೇರಿದ ದೇವರುಕ ಎಂಬ ಗ್ರಾಮದಲ್ಲಿ ಬಾಲಕೃಷ್ಣ ಕೇಶವ ಜೋಶಿಯೆಂಬ ಪರೋಪಕಾರ ನಿರತರೂ, ಧರ್ಮಪರಾಯಣರೂ ಆದ ಕುಲೀನ ಬ್ರಾಹ್ಮಣ ಗೃಹಸ್ಥರು ಬೇಸಾಯ ವೃತ್ತಿಯಿಂದ ಅನುಕೂಲೆಯಾದ ತನ್ನ ಧರ್ಮಪತ್ನಿಯೊಂದಿಗೆ ಜೀವನ ಮಾಡುತ್ತಿದ್ದರು. ಆ ಪುಣ್ಯ ದಂಪತಿಗಳ ಗರ್ಭದಲ್ಲಿ ೧೮೭೦ನೆಯ ಇಸವಿಯಲ್ಲಿ ಒಂದು ಹೆಣ್ಣು ಮಗು ಹುಟ್ಟಿತು. ಆಕೆಯೇ ಪಾರ್ವತೀಬಾಯಿಯು.

ಪಾರ್ವತೀಬಾಯಿಗೆ ಹದಿನೊಂದು ವರ್ಷ ಪ್ರಾಯ ತುಂಬಿತ್ತು. ಆರೇಳು ವರ್ಷದಲ್ಲಿಯೇ ಹುಡುಗಿಯನ್ನು ಯಾವನಾದರೊಬ್ಬ ವರನ ಕೊರಳಿಗೆ ಕಟ್ಟಿಬಿಡುವುದು ಬ್ರಾಹ್ಮಣರ ಸಾಂಪ್ರದಾಯವಷ್ಟೆ. ಇನ್ನೂ ಮದುವೆ ಮಾಡಿಲ್ಲವೆಂದು ನೆರೆಕರೆಯವರು ಪಿಸುಪಿಸು ಮಾತನಾಡುತ್ತಿದ್ದರು. ಕೊನೆಗೆ ಪಾರ್ವತೀಬಾಯಿಯ ತಂದೆಯು ಗೋವಧಲ್ಲಿ ಹದಿನೈದು ರೂಪಾಯಿ ಸಂಬಳದಲ್ಲಿದ್ದ ಪೋಟುಗಾಲಿನ ಯುವಕನೊಬ್ಬನಿಗೆ ಆಕೆಯನ್ನು ಮದುವೆ ಮಾಡಿಕೊಟ್ಟರು.

ಗಂಡ ಹೆಂಡರು ಕೆಲಕಾಲ ಬಡತನದಿಂದಲಾದರೂ ಸುಖವಾಗಿ ಬಾಳಿದರು. ಪಾರ್ವತೀಬಾಯಿಯು ಇಪ್ಪತ್ತು ವರ್ಷ ಪ್ರಾಯವಾಗಲು ಮೂರು ಮಕ್ಕಳನ್ನು ಪಡೆದಳು. ಅಷ್ಟರಲ್ಲಿ ಆಕೆಯ ಪತಿಯು ಮಲೇರಿಯಾ ರೋಗಕ್ಕೆ ಬಲಿಬಿದ್ದು ದೈವಾಧೀನನಾದನು. ಪಾರ್ವತೀಬಾಯಿಯ ಸ್ಥಿತಿಯು ಬಹಳ ಶೋಚನೀಯವಾಯಿತು.

ಇನ್ನೇನು ಮಾಡಬೇಕು? ತನ್ನ ಮಕ್ಕಳನ್ನು ಕರೆಕೊಂಡು ಆಕೆ ತಂದೆ ತಾಯಿಗಳಿದ್ದಲ್ಲಿಯೇ ಬಂದು ವಾಸಮಾಡಿದಳು. ಆಕೆಯ ಅಕ್ಕನಾದ ಬಾಯ ಎಂಬವಳಿಗೆ ಕೇವಲ ಒಂಬತ್ತನೆಯ ವರ್ಷದಲ್ಲಿಯೇ ವೈಧವ್ಯ ದುಃಖವು ಒದಗಿತ್ತು! ಬಾಯು ಬಾಲ ವಿಧವೆಯಾದುದರಿಂದ ಆಕೆಯನ್ನು ಅವಳ ಅಣ್ಣನು ಮುಂಬಯಿಯಲ್ಲಿ ಪಂಡಿತ ರಮಾಬಾಯಿಯು ಸ್ಥಾಪಿಸಿದ್ದ 'ಶಾರದಾ ಸದನ'ಕ್ಕೆ ಓದಲು ಕಳುಹಿಸಿದನು. ಅಲ್ಲಿ ಆಕೆ ವಿದ್ಯಾಭ್ಯಾಸ ಮಾಡುತ್ತಿರಲು ಫರ್ಗ್ಯುಸನ್ ಕಾಲೇಜಿನ ಪ್ರೊಫೆಸರ್ ಕರ್ವೆಯವರೆಂಬ ಸಮಾಜ ಸುಧಾರಕರು ಆ ಬಾಲವಿಧವೆಯನ್ನು ವಿವಾಹಮಾಡಿಕೊಂಡರು. ಜ್ಞಾನಿಯಾಗಿದ್ದ ಬಾಲಕೃಷ್ಣ ಜೋಶಿಯವರೂ ಬಾಲ ವಿಧವೆಯರ ಮದುವೆಯು ದೋಷವಲ್ಲವೆಂದು ಅದಕ್ಕೆ ಸಮ್ಮತಿಯಿತ್ತರು.

ಪಾರ್ವತೀಬಾಯಿಯ ಮಗನನ್ನು ಪ್ರೊ। ಕರ್ವೆಯವರು ವಿದ್ಯಾಭ್ಯಾಸಕ್ಕೆಂದು ಕರೆದುಕೊಂಡು ಹೋದರು. ಪಾರ್ವತೀಬಾಯಿಯ ಅಕ್ಕ ಬಾಯುಳು ತಂಗಿಯನ್ನೂ ತಮ್ಮಲ್ಲಿ ಇದ್ದು ವಿದ್ಯಾಭ್ಯಾಸ ಹೊಂದುವಂತೆ ಒತ್ತಾಯಪಡಿಸಿದಳು. ವಿಧವೆಯರ ಬಗ್ಗೆ ದುಡಿಯುತ್ತಿದ್ದ ಕರ್ವೆ ದಂಪತಿಗಳ ಉಪದೇಶವು ಪಾರ್ವತೀಬಾಯಿಯಲ್ಲಿ ಒಳ್ಳೆಯ ಪರಿಣಾಮವನ್ನು ಹುಟ್ಟಿಸಿತು.

ಇಪ್ಪತ್ತಾರು ವರ್ಷದ ಮಹಿಳೆಯು ಅ. ಆ. ಇ. ಈ ಕಲಿಯಲು ಆರಂಭಿಸಿದಳು. ವಿದ್ಯಾಭ್ಯಾಸವನ್ನು ಆರಂಭಿಸಿದ್ದೇ ತಡ, ತಾನು ವಿದ್ಯಾರ್ಜನೆ ಮಾಡಿ ಸ್ವತಂತ್ರ ಜೀವನಮಾಡಿಕೊಂಡಿರಬೇಕೆಂದೂ, ಅನಾಥ ವಿಧವೆಯವರ ಸಲುವಾಗಿ ದುಡಿಯಬೇಕೆಂದೂ ಆಕೆಯಲ್ಲಿ ಹಿರಿಯ ಹಂಬಲ ಹುಟ್ಟಿತು. ಪಾರ್ವತೀಬಾಯಿಯು ಪುಣೆಯಲ್ಲಿ ಅಲ್ಪಸ್ವಲ್ಪ ವಿದ್ಯಾಭ್ಯಾಸವನ್ನು ಪಡೆಕೊಂಡಳು.

ಈ ವಿದ್ಯಾಭ್ಯಾಸದಿಂದ ಆಕೆಗೆ ಪುನರ್ಜನ್ಮವೇ ಬಂದಂತಾಯಿತು. ಎಲ್ಲಾ ಪ್ರಪಂಚದಲ್ಲಿ ತನ್ನ ಸ್ಥಾನವೇನೆಂಬುದನ್ನು ಆಕೆ ಅರ್ಥಮಾಡಿಕೊಂಡಳು. ವಿಧವೆಯರ ಪಾಲಿಗೆ ತಾನು ಮಾಡತಕ್ಕ ಸೇವೆಯನ್ನು ತಿಳಿದುಕೊಂಡಳು. ಪ್ರೊ। ಕರ್ವೆಯವರು ಸ್ಥಾಪಿಸಿದ ವಿಧವಾಶ್ರಮದ ಸಲುವಾಗಿ ದುಡಿಯಲು ಮನಮಾಡಿದಳು. ಆಶ್ರಮದ ಅಭಿವೃದ್ಧಿಗಾಗಿ ಕಷ್ಟಪಟ್ಟು ಹಣ ಕೂಡಿಸಿದಳು. ಒಮ್ಮೆ ತನ್ನ ಮಗನು ಕಠಿಣ ಅಸೌಖ್ಯದಲ್ಲಿ ಬಿದ್ದಿರಲು ಆತನನ್ನು ಇತರರ ವಶ ಒಪ್ಪಿಸಿ, ಆಕೆ ವಿಧವಾಶ್ರಮದ ಸಲುವಾಗಿ ದುಡಿಯಲು ಹೋಗಿದ್ದಳಂತೆ.

ಹೀಗೆ ಹಣ ಶೇಖರಿಸಲು ಹೊರಗೆ ಹೋದೊಡನೆಯೇ ಜನರೊಡನೆ ಮಾತುಕತೆ ಮಾಡಬೇಕಾಗಿ ಬಂತು. ವಿಧವೋದ್ಧಾರದ ಕುರಿತು ಅಲ್ಲಲ್ಲಿ ಭಾಷಣವಿತ್ತಳು. ಬೊಂಬಾಯಿಯಲ್ಲಿ ೧೯೦೮ರಲ್ಲಿ ನೆರೆದ ಸುಧಾರಕರ ಸಮ್ಮೇಳನದಲ್ಲಿ ಪಾರ್ವತೀಬಾಯಿಯು ಆಮಂತ್ರಿತಳಾಗಿ ಒಳ್ಳೆಯ ಸ್ವಾರಸ್ಯಕರವಾದ ಭಾಷಣವಿತ್ತಳು. ಹಲವರು ಆಕೆಯನ್ನು ಅತ್ಯಂತ ಪ್ರಶಂಸಿಸಿದರು.

ಮುಂದೆ ಆಕೆಗೆ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಯಬೇಕೆಂಬ ಆತುರವು ಹೆಚ್ಚಾಯಿತು. ಅದನ್ನು ಪ್ರೊ। ಕರ್ವೆಯವರು ತಿಳಿದು, ಆಂಗ್ಲ ಭಾಷೆಯನ್ನು ಆಡುವ ದೇಶಕ್ಕೇ ಆಕೆಯನ್ನು ಕಳುಹಿಸಿದರೆ ಒಳ್ಳೆಯದಾಗಿ ಆ ಭಾಷೆಯನ್ನು ಕಲಿಯಬಹುದೆಂದು, ಪಾರ್ವತೀಬಾಯಿಯು ಆಂಗ್ಲ ಭಾಷಾಭ್ಯಾಸವನ್ನು ಮಾಡುವುದರಿಂದ ವಿಧವೋದ್ಧಾರದ ಕಾರ್ಯದಲ್ಲಿ ಹೆಚ್ಚಿನ ಪ್ರಯೋಜನವಾಗಬಹುದೆಂದೂ ತಿಳಿದು ಆಕೆಯನ್ನು ಅಮೇರಿಕಾ ದೇಶಕ್ಕೆ ಕಳುಹಿಸುವ ಏರ್ಪಾಡು ಮಾಡಿದರು.

ಅಮೇರಿಕಾ ದೇಶಕ್ಕೆ ಪಾರ್ವತೀಬಾಯಿಯು ಹೊರಟಳು. ಅಲ್ಲಿ ತಾನು ಚಾಕರಿ ಮಾಡಿಕೊಂಡೂ ಅಲ್ಲಿನ ಸ್ಥಿತಿಗತಿಗಳನ್ನು ಅನುಭವ ಮಾಡಿಕೊಂಡಳು. ಅದರೆಡೆಯಲ್ಲಿ ಆಂಗ್ಲಭಾಷೆಯನ್ನೂ ಚೆನ್ನಾಗಿ ಕಲಿತುಕೊಂಡಳು. ಯೂರೋಪು ದೇಶದಲ್ಲಿನ ಸಾಮಾಜಿಕ ಸಂಸ್ಕಾರಗಳನ್ನು ತಿಳಕೊಂಡಳು. ಅದಕ್ಕಾಗಿ ಆಕೆ ಬಹಳ ಕಷ್ಟಗಳನ್ನು ಸಹಿಸಬೇಕಾಯಿತು. ಆಕೆ ಅಲ್ಲಿ ನ್ಯೂಯೋರ್ಕ್ ನಗರದಲ್ಲಿ ನಡೆದ ಅಂತರ್‌ರಾಷ್ಟ್ರೀಯ ಕೆಲಸಗಾರರ ಸಮ್ಮೇಳನದಲ್ಲಿ ಹೆಂಗಸರ ಭಾಗಕ್ಕೆ ಭಾರತದ ಪ್ರತಿನಿಧಿಯಾಗಿಹೋಗಿ ಭಾಗವಹಿಸಿದಳು.

ಅಮೇರಿಕದಿಂದ ಮರಳಿ ಬಂದು, ಈಗ ಪೂನಾದಲ್ಲಿ ವಿಧವಾಶ್ರಮದಲ್ಲಿ ನಿರಂತರ ಸಮಾಜದ ದಳಿತ ವರ್ಗದವರಾದ ವಿಧವೆಯವರ ಸಲುವಾಗಿ ಈಕೆ ದುಡಿಯುತ್ತಿದ್ದಾಳೆ. ಇಂತಹ ಮಹಾನುಭಾವಳ ಜೀವನಚರಿತ್ರೆಯನ್ನು ಸುಂದರವಾದ ಶೈಲಿಯಲ್ಲಿ, ವಿವರವಾಗಿ ಬರೆದು ಕನ್ನಡಿಗರ ನೆರೆನಾಡ ಒಬ್ಬ ಮಾನ್ಯ ಮಹಾತ್ಮಳ ಪರಿಚಯವನ್ನು ಮಾಡಿಕೊಟ್ಟ ಶ್ರೀಮತಿ ಸರಸ್ವತಮ್ಮನವರಿಗೆ ಕನ್ನಡಿಗರು ಋಣಿಗಳಾಗಿದ್ದಾರೆ. ಇದನ್ನು ಪ್ರಕಟನೆ ಮಾಡಿದ ಬೆಂಗಳೂರು ಸತ್ಯಶೋಧನ ಪ್ರಕಟಣ ಮಂದಿರದವರೂ ಪ್ರಶಂಸಾರ್ಹರು.

—ಕಯ್ಯಾರ.

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly.

Savings Bank deposit 3½% on daily balances.

[All] kinds of banking business transacted

ಯೂರೋಪಿನ ಮಹಾಯುದ್ಧವು ಬಹು ಭಯಂಕರವಾಗಿ ನಡೆಯುತ್ತಲಿದೆ. ಇಕ್ಕಡೆಯ ಸೈನಿಕರ ರಕ್ತವು ಪ್ರವಾಹ ಕಟ್ಟಿ ಹರಿಯುತ್ತಲಿದೆ. ಯೂರೋಪಿನಲ್ಲಿ ಪ್ರಳಯಕಾಲವು ಸಮೀಪವಾಗಿದೆಯೋ ಎಂಬಹಾಗೆ ಈ ಯುದ್ಧದಿಂದ ಭಾಸವಾಗುತ್ತದೆ. ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡುತ್ತಾ ಬರುತ್ತಲಿದೆ. ಹೀಗಾದ್ದರಿಂದ ಅಧೀನ ರಾಜ್ಯಗಳ ಕುರಿತು ಬ್ರಿಟನಿನ ಮೊದಲಿನ ದರ್ಪಯುಕ್ತ ಮನೋವೃತ್ತಿಯು ಬದಲಾಗುತ್ತಾ ಬರುತ್ತಿರುವದು ಕಾಣುತ್ತದೆ. ಯುದ್ಧ ಧೋರಣೆಯಿಂದ ಪ್ರಾಂತ್ಯಗಳಲ್ಲಿ ಕಾಂಗ್ರೆಸ ಮಂತ್ರಿಮಂಡಲಗಳು ರಾಜಿನಾಮೆಯನ್ನು ಕೊಟ್ಟದ್ದರಿಂದ ಉಂಟಾದ ಬಿಕ್ಕಟ್ಟು ಇನ್ನು ಬಹಳ ದಿನಗಳ ತನಕ ಇರಬಾರದೆಂಬ ಭಾವನೆಯು ಬ್ರಿಟನಿನಲ್ಲಿ ಬಲವಾಗಲಾರಂಭಿಸಿರುವದು. ಹಿಂದುಸ್ಥಾನದಲ್ಲಿರುವ ಆಂಗ್ಲೇಯರು ಬಿಕ್ಕಟ್ಟನ್ನು ಪರಿಹರಿಸುವ ಸದುಪಾಯಗಳನ್ನು ಬ್ರಿಟಿಷ ಸರಕಾರವು ಕೂಡಲೇ ಕೈಕೊಳ್ಳಬೇಕಾಗಿದೆ ಎಂದು ವಾಯ್ಸರಾಯರನ್ನು ಭಿನ್ನವಿಸಿ ಕೊಂಡಿದ್ದಾರೆ; ಮಾತ್ರವಲ್ಲ ಈವರೆಗೆ ಭಾರತೀಯ ಸ್ವಾತಂತ್ರ್ಯದ ಕಡೆಗೆ ಯಾವ ಸಹಾನುಭೂತಿಯನ್ನು ಇಟ್ಟಿರಲಾರದಂಥ ನಿವೃತ್ತ ಸೈನ್ಯದ ಮತ್ತು ಇತರ ಅಧಿಕಾರಿ ವರ್ಗದವರು ಕೂಡ ಭಾರತಕ್ಕೆ ಕೂಡಲೇ ಸ್ವರಾಜ್ಯ ಕೊಡಿರೆಂದು ಅನ್ನತೊಡಗಿದ್ದಾರೆ.

ಭಾರತಕ್ಕೆ ಈಗಲೇ ಸ್ವರಾಜ್ಯ ಕೊಡಿರಿ!

ನಿವೃತ್ತ ಮಿಲಿಟರಿ ಅಧಿಕಾರಿಯ ಲೇಖನ!

ಬ್ರಿಟನಿಗೆ ಭಾರತದ ಸಹಾಯವು ಅವಶ್ಯ!

ಲೆಫ್ಟನೆಂಟ ಕರ್ನಲ್ ಕೂಟರು ಭಾರತದ ಸೇನೆಯಲ್ಲಿ ಹಿರಿದೆ ಉಚ್ಚ ಅಧಿಕಾರದಲ್ಲಿದ್ದು ಈಗ ನಿವೃತ್ತರಾಗಿರುವ ಲೆಫ್ಟನೆಂಟ ಕರ್ನಲ ಕೂಟರ ಮಹಾಶು ಬ್ರಿಟಿಷರ ಹೃದಯ ಪರಿವರ್ತನೆಯ ಪ್ರತ್ಯಕ್ಷ ಉದಾಹರಣೆ ಆಗಿದೆ.



ಸಮುದ್ರವನ್ನು ಕಾಯುತ್ತಿರುವ ಬ್ರಿಟಿಷ್ ಯುದ್ಧನೌಕೆಗಳಲ್ಲಿನ ತೋಪುಗಳು.

ಅವರೀಗ—'ಭಾರತಕ್ಕೆ ಕೂಡಲೇ ಸಾಮಂತ ಸ್ವರಾಜ್ಯ ಕೊಡಿರಿ' ಎಂದು ಸಪ್ರಮಾಣವಾಗಿ ವಾದಿಸಿದ್ದಾರೆ.

ಯುದ್ಧಕಾರ್ಯವನ್ನು ಜಯಶೀಲವಾಗಿ ಮುಂದೊತ್ತಲಿಕ್ಕೆ ಅಗತ್ಯವುಳ್ಳ ಎಲ್ಲಾ ಬಗೆಯ ಸಹಾಯವನ್ನು ಬ್ರಿಟನಿಗೆ ಕೊಡಲಿಕ್ಕೆ ಹಿಂದುಸ್ಥಾನವು ಸಮರ್ಥವಾಗಿದೆ. ಅಗತ್ಯಕಂಡರೆ ಹಿಂದುಸ್ಥಾನವು ವರ್ಷವರ್ಷ ಒಂದೊಂದು ಮಿಲಿಯ ಸೈನಿಕರ ತರಬೇತಿ ಹೊಂದಿದ ಮತ್ತು ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳಿಂದ ಸಿದ್ಧವಾದ ಸೇನೆಯನ್ನು ತಯಾರಿಸಬಲ್ಲದು, ಹಿಂದುಸ್ಥಾನವು ವರ್ಷವರ್ಷ ಐದೈದು ಸಾವಿರ ಹಾರಾಟಗಾರರಿಗೆ ವೈಮಾನಿಕ ಶಿಕ್ಷಣವನ್ನು ಕೊಟ್ಟು, ಅಜೇಯವಾದ ಒಂದು ವಿಮಾನಪಡೆಯನ್ನೇ ತಯಾರಿಸಬಲ್ಲದು. ಈ ಎಲ್ಲಾ ಕಾರ್ಯಗಳಿಗೆ ಬೇಕಾದ ಸಾಮಗ್ರಿ, ಸಂಪತ್ತು, ಧೈರ್ಯ, ಸಾಹಸ, ಯುಕ್ತಿ ಬಲಗಳು ಹಿಂದುಸ್ಥಾನದಲ್ಲಿ ವಿಪುಲವಾಗಿವೆ. ಈ ಸಹಾಯ ಸಂಪತ್ತು ಬ್ರಿಟನಿಗೆ ದೊರೆಯುವದಾದರೆ, ಬ್ರಿಟನನ್ನು ಸೋಲಿಸುವ ಶಕ್ತಿ ಇಡೀ ಪ್ರಪಂಚದಲ್ಲಿ ಉಳಿಯುವದಿಲ್ಲ. ಎಂದು ಅವರು ಹೇಳಿದ್ದಾರೆ.

ದಬ್ಬಾಳಿಕೆಯಿಂದ ಫಲವಿಲ್ಲ

ಆದರೆ ಹಿಂದುಸ್ಥಾನದ ಹಾರ್ದಿಕ ಸ್ನೇಹವು ಬ್ರಿಟನಿಗೆ ಪ್ರಾಪ್ತವಾಗಿದ್ದರೆ ಮಾತ್ರ ಬ್ರಿಟನು ಹಿಂದುಸ್ಥಾನದ ಈ ಅಪಾರ ಬಲವನ್ನು ಕೇಳಿ ಪಡೆಯಬಹುದು. ಹಿಂದುಸ್ಥಾನವನ್ನು ಒಲಿಸಿ ಅಲ್ಲದೆ, ದಬ್ಬಾಳಿಕೆ, ಬಲಾತ್ಕಾರ ಮೊದಲಾದ ಇತರ ಉಪಾಯಗಳಿಂದ ಈ ಸಹಾಯವನ್ನು ಪಡೆಯುವದು ಅಸಾಧ್ಯವು. ಆದುದರಿಂದ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಡಬೇಕೆಂದು ಕೂಟರು ಸ್ಪಷ್ಟವಾಡಿರುವರು. ಕೇವಲ ಸ್ವರಾಜ್ಯ ಸರಕಾರವು ಮಾತ್ರ ಬ್ರಿಟನಿಗೆ ಈ ಸಹಾಯವನ್ನು ಕೊಡಬಲ್ಲದು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣ ವ್ಯಾಧಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಳವಾಗಿ ನಾಶವಾಗುವವು.

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY 4.

Mdas Agent: **Appah & Co, China Bazar Madras.**

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಪುಸ್ತಕ—ವಿಮರ್ಶೆ

ಎಕ್ಸ್—ರೇ

ಎಕ್ಸ್—ರೇಯ ವಿಚಾರವಾಗಿ ಅಲ್ಪಸ್ವಲ್ಪ ಕೇಳಿದವರು ಈ ಕಾಲದಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಆದರೆ ಸರ್ವಸಾಧಾರಣವಾಗಿ ತಿಳಿದಿರುವುದು ಎಕ್ಸ್—ರೇಯಿಂದ ನಮ್ಮ ಶರೀರದೊಳಗಿನ ಎಲುಬುಗಳನ್ನು ಕಣ್ಣಾರೆ ಕಾಣಬಹುದೆಂಬ—ಎಂಬಿಷ್ಟೇ ವಿಚಾರ. ಎಕ್ಸ್‌ರೆ ಎಂದರೇನು? ಅದರ ರಹಸ್ಯವೇನು? ಅದರ ಗುಣಲಕ್ಷಣಗಳಾವುವು? ಅದು ಮಾಡುವ ಅಥವಾ ಮಾಡಬಹುದಾದ ಕೆಲಸಗಳೆಂಥಹವು? ಅದನ್ನು ಯಾವ ಯಾವ ಕಾರ್ಯಸಾಧನೆಗಳಿಗೆ ಉಪಯೋಗಿಸಿದ್ದಾರೆ? ಎಂಬಿವೇ ಮೊದಲಾದ ವಿಷಯಗಳನ್ನು ತಿಳಿದವರು ಸಾವಿರಕ್ಕೆ ವಿದ್ಯಾವಂತರಲ್ಲಿ ಬಹಳ ವಿರಳವೆಂದೇ ಹೇಳಬೇಕು. ಅಂಥವರ ಪ್ರಯೋಜನಾರ್ಥವಾಗಿ ಲೋಯೊಲೊ ಕಾಲೇಜಿನ ಭೌತಿಕ ಶಾಸ್ತ್ರದ ಅಧ್ಯಾಪಕರಾದ ಶ್ರೀಮಾನ್ ಯು ರಾಘವೇಂದ್ರ ಆಚಾರ್ಯ, ಬಿ. ಎಸ್. ಸಿ (ಆನರ್ಸ್) ಇವರು, ತಮ್ಮ ನಾಡ ಭಾಷೆಯಾದ ಕನ್ನಡದಲ್ಲಿ ಬರೆದು ಕನ್ನಡ ವಾಙ್ಮಯದ ಸೇವೆಯನ್ನು ಮಾಡಿರುತ್ತಾರೆ ಈ ಸೇವೆಯ ಮಹತ್ವವನ್ನು ಮನಗಂಡು, ಮದರಾಸು ವಿಶ್ವವಿದ್ಯಾಲಯದವರು, ಸ್ವದೇಶ ಭಾಷೆಗಳಲ್ಲಿ ನವೀನ ಶಾಸ್ತ್ರ ಪುಸ್ತಕಗಳ ಪ್ರಚಾರಕ್ಕಾಗಿ ತಾವು ಏರ್ಪಡಿಸಿದ್ದ 750 ರೂಪಾಯಿಯ ಬಹುಮಾನವನ್ನು ಈ ಗ್ರಂಥಕರ್ತರಿಗೆ ಸಲ್ಲಿಸಿರುತ್ತಾರೆ.

ಈ ಪುಸ್ತಕವನ್ನು ಓದುವಾಗ ಮನಸ್ಸಿಗೆ ಹೊಳೆಯುವ ಒಂದೆರಡು ವಿಶೇಷ ಸ್ವರೂಪಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಿರುವೆವು. ಮುಖ್ಯವಾಗಿ ಈ ಪುಸ್ತಕದಲ್ಲಿ ಒಂದು ಸ್ವಾಭಾವಿಕತೆಯಿದೆ, ವೈಶಿಷ್ಟ್ಯವಿದೆ. ಶ್ರೀ ಆಚಾರ್ಯರು ಎಕ್ಸ್—ರೇ ಕುರಿತಾದ (ಪ್ರಕೃತ ಲಭಿಸುವ) ಎಲ್ಲಾ ಜ್ಞಾನವನ್ನೂ ಜೀರ್ಣಿಸಿ ಕೊಂಡಿರುವರೆಂಬುದಕ್ಕೆ ಅವರ ನಿರಾತಂಕವಾಗಿ, ನಿರಾಯಾಸವಾಗಿ ಹರಿಯುವ ಭಾಷಾ ಶೈಲಿಯೇ ಒಂದು ಉದಾಹರಣೆಯಾಗಿದೆ ವಿಚಾರವೆಷ್ಟು ಕಠಿಣವಾಗಿದೆಯೋ, ಭಾಷೆಯು ಅಷ್ಟೇ ಮಧುರವಾಗಿರ ಬೇಕೆಂಬುದನ್ನು ಅವರು ಮನಗಂಡಿದ್ದಾರೆ 'ಪುಸ್ತಕವು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿರುವುದಲ್ಲದೆ, ಇದರಲ್ಲಿ ಬಹಳ ಕೂದಕಾದ ಶಾಸ್ತ್ರೀಯ ವಿವರಣೆಗಳು ಕೂಡ ಓದುವವರಿಗೆ ಕಥೆಗಳನ್ನೋದಿದಂತೆ ಆದರವನ್ನು ಹುಟ್ಟಿಸುವ ಹಾಗಿದೆ." ಎಂದು ಡಾಕ್ಟರ್ ಯು ರಾಮರಾಯರು ಈ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹೇಳಿರುವರು. ಇದು ಸರ್ವರೂ ಒಪ್ಪತಕ್ಕ ವಿಷಯ. ಈ ಪುಸ್ತಕಕ್ಕೆ ಸಂಗ್ರಹಿಸಿರುವ ಚಿತ್ರಗಳನ್ನೂ ವಿಷಯ ಪ್ರತಿಪಾದನಾ ಕ್ರಮವನ್ನೂ ಗ್ರಹಿಸಿದರೆ, ಶ್ರೀ ಆಚಾರ್ಯರು, ಎಕ್ಸ್—ರೇ ವೈದ್ಯಶಾಲೆಗಳಿಗೆ ಹೋಗಿ ಅಲ್ಲಿ ನಡೆಯುವ ವಿಧ್ಯಮಾನಗಳನ್ನೆಲ್ಲಾ ಕಣ್ಣಾರೆ ಪರ್ಯಾಲೋಚಿಸಿ ತಮ್ಮ ಪರಿಶ್ರಮದ ಫಲವನ್ನು ಕನ್ನಡಿಗರ ಮುಂದಿಟ್ಟಿರುವರೆಂಬುದು ವ್ಯಕ್ತವಾಗದಿರಲಾರದು

ಪಾರಿಭಾಷಿಕ ಶಬ್ದಗಳ ವಿಷಯದಲ್ಲಿ ಶ್ರೀ ಆಚಾರ್ಯರು ಅನುಸರಿಸಿರುವ ಪಥವು ಯೋಗ್ಯವಾಗಿರುವುದೆಂದು ಹೇಳಬೇಕು. ಸಾಧ್ಯವಾಗುವಲ್ಲೆಲ್ಲ ಕನ್ನಡ ಅಥವಾ ಸಂಸ್ಕೃತ ಸಮ ಶಬ್ದಗಳನ್ನು ಉಪಯೋಗಿಸಿದ್ದಾರೆ. ಈ ವಿಷಯದಲ್ಲಿ ಮದರಾಸು ಸರಕಾರದವರು ಪ್ರಕಟಿಸಿರುವ ಭಾಷಾಂತರವನ್ನು ಅನುಸರಿಸಿರುವರು. ಕೆಲವು ಕಡೆಗಳಲ್ಲಿ ಪಾಶ್ಚಾತ್ಯ ಭಾಷೆಗಳಲ್ಲಿರುವ ಶಬ್ದಗಳನ್ನೇ ಬಳಸಿದ್ದಾರೆ ಪಾರಿಭಾಷಿಕ ಶಬ್ದಗಳಿಗೆ ಸಾಂಕೇತಿಕವಾದ ಒಂದು ಅರ್ಥವಿಶೇಷತೆಯು ಇರುತ್ತದೆ. ಅಲ್ಲದೆ–ಒಂದು ಪಾರಿಭಾಷಿಕ ಶಬ್ದದಿಂದ ಜ್ಞಾನವು ಬೆಳೆದಂತೆ ಹಲವು ಬೇರೆ ಶಬ್ದಗಳು ಉತ್ಪನ್ನವಾಗುತ್ತವೆ ಉದಾಹರಣೆಗಾಗಿ ಒಕ್ಸಿಜನ್‌ನಿಂದ ಒಕ್ಸೈಡ್, ಡೈಒಕ್ಸೈಡ್, ಪೆರೋಕ್ಸೈಡ್, ಹೈಡ್ರೋಕ್ಸೈಡ್ ಮೊದಲಾದ ಹಲವು ಶಬ್ದಗಳು ಉಂಟಾಗಿವೆ, ಇಂತಹ ಅರ್ಥವಿಶೇಷತೆಯು ಭಾಷಾಂತರ ಕನ್ನಡ ಅಥವಾ ಸಂಸ್ಕೃತ ಭಾಷಾಂತರದಲ್ಲಿ ರೂಪುಗೊಳ್ಳುವುದಿಲ್ಲವೋ ಮತ್ತು ಅವನ್ನು ಹೊಂದಿಕೊಂಡಿರುವ ಇತರ ಶಬ್ದಗಳ ರಚನೆಗೆ ಅನುಗುಣವಾಗುವುದಿಲ್ಲವೋ ಅಂತಹ ಭಾಷಾಂತರವು ಒಳ್ಳೆಯ ಪರಿಣಾಮಕಾರಿಯಾಗಲಿಕ್ಕಿಲ್ಲ. ಅಂತಹ ಸಂದರ್ಭಗಳಲ್ಲಿ ಮೂಲ ಶಬ್ದಗಳನ್ನೇ—ಅದು ಇಂಗ್ಲಿಷ್, ಫ್ರೆಂಚ್ ಜರ್ಮನ್, ಅಥವಾ ಬೇರೆ ಯಾವ ಭಾಷೆಯಲ್ಲಿರುವುದಾದರೂ—ಉಪಯೋಗಿಸುವುದು ಲೇಸು, ಭಾಷೆಯ ಗೌರವವನ್ನುಳಿಸುವ ಹವಣಿಕೆಯಲ್ಲಿ ಎಲ್ಲಾ ಭಾಷೆಗಳಲ್ಲೂ ಒಕ್ಸಿಜನ್ ಎಂದು ಕರೆಯಲ್ಪಡುವ ಅನಿಲಕ್ಕೆ 'ಆಮ್ಲಜನಕ'ವೆಂದು ನಾಮಕರಣ ಮಾಡಿರುವೆವು. ಆದರೆ ಇದನ್ನು ಮೂಲವಾಗಿಟ್ಟುಕೊಂಡು ಡೈಓಕ್ಸೈಡ್, ಹೈಡ್ರೋಕ್ಸೈಡ್ ಇವನ್ನೆಲ್ಲ ಹೇಗೆ ಭಾಷಾಂತರಿಸುವುದು?

ಈ ಪುಸ್ತಕದಲ್ಲಿ ೯ ಪ್ರಕರಣಗಳಿವೆ. ಮೊದಲನೆಯದಕ್ಕೆ "ವಿಜ್ಞಾನದ ನೆಲೆಗಟ್ಟು" ಎಂಬ ಶಿರೋಲೇಖನವಿದೆ. "ಎಕ್ಸ್—ರೇ" ಅಗಾಧವಾದ ಅಸ್ತಿಭಾರದ ಮೇಲೆ ನಿರ್ಮಿತವಾದ ವಿಜ್ಞಾನ ಗೋಪುರದಂತಿದೆ. ಅಸ್ತಿಭಾರವನ್ನು ಅರಿಯದೆ ಈ ಗೋಪುರವು ಎಟುಕಲಾರದು ಆದುದರಿಂದ ಈ ಪ್ರಕರಣದಲ್ಲಿ ಕಿರಣಗಳ ಕುರಿತೂ, ವಸ್ತುಗಳ ಪರಮಾಣುವಿನ ರಚನೆಯ ಕುರಿತೂ ವಿದ್ಯುಚ್ಛಕ್ತಿಯ ಕುರಿತೂ ಹೇಳಲ್ಪಟ್ಟಿದೆ ಎಕ್ಸ್ ರೇಯು ಬೆಳಕಿನ ಕಿರಣಗಳ ಬಳಗಕ್ಕೆ ಸೇರಿದ ಒಂದು ಕಿರಣ

ವಿದ್ಯುಚ್ಛಕ್ತಿಯ ಉದರದಿಂದ ಎಕ್ಸ್‌ರೇಯು ಉದಯಿಸುತ್ತದೆಯೆಂದು ಹೇಳಿದರೆ ತಪ್ಪಾಗಲಾರದು. ಕಿರಣಗಳ ಮತ್ತು ವಿದ್ಯುಚ್ಛಕ್ತಿಯ ಪರಿಜ್ಞಾನವಿಲ್ಲದೆ ಎಕ್ಸ್—ರೇಯ ಹುಟ್ಟಿನ ಪರಿಚಯವಾಗಲಾರದು ಶ್ರೀ ಆಚಾರ್ಯರು ವಿದ್ಯುಚ್ಛಕ್ತಿಯ ಕುರಿತಾಗಿ ಇನ್ನೂ ಹೆಚ್ಚು ಸವಿವರವಾಗಿ ಬರೆಯ ಬಹುದಿತ್ತೆಂದೇ ನಮಗೆ ಅನಿಸುತ್ತದೆ ಇಲೆಕ್ಟ್ರೋನ್ ಮತ್ತು ಪ್ರೋಟೋನ್‌ಗಳಿಗೂ ವಿದ್ಯುತ್ಪ್ರವಾಹಕ್ಕೂ ಇರುವ ಸಂಬಂಧವನ್ನು ವ್ಯಕ್ತಪಡಿಸಿ ಧನ ಮತ್ತು ಋಣ ವಿದ್ಯುತ್ಕಣಗಳ ಗುಣಲಕ್ಷಣಗಳನ್ನು ನಿರೂಪಿಸುತ್ತಿದ್ದರೆ ಮುಂದಕ್ಕೆ ಬರುವ ಕೆಲವು ವಿಷಯಗಳ ಗ್ರಹಣಕ್ಕೆ ಸುಲಭವಾಗುತ್ತಿತ್ತು

ಎಕ್ಸ್-ರೇಯನ್ನು ರೋಂಟ್ಜೆನನೆಂಬವನು ಮೊದಲು ಹೇಗೆ ಶೋಧಿಸಿದನೆಂಬುದೂ ಆ ಮೇಲೆ ಹಲವು ವಿಜ್ಞಾನಿಗಳು ಅದರ ಸ್ವರೂಪವನ್ನೂ ಹೇಗೆ ಗೊತ್ತು ಮಾಡಿದರೆಂದೂ, ಎರಡನೆಯ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ ಎಕ್ಸ್ ರೇಯನ್ನು ಹೊರಡಿಸುವ ಉಪಕರಣಗಳಲ್ಲಿ ಏನೆಲ್ಲ ಸುಧಾರಣೆಗಳು ನಡೆದಿವೆಯೆಂಬುದು ಮೂರನೆಯ ಪ್ರಕರಣದಲ್ಲಿ ಕೊಡಲಾಗಿದೆ ೪, ೫ನೆಯ ಪ್ರಕರಣಗಳಲ್ಲಿ ಎಕ್ಸ್-ರೇಯನ್ನು ರೋಗಪರೀಕ್ಷೆಗೂ ಚಿಕಿತ್ಸೆಗೂ ಹೇಗೆ ಉಪಯೋಗಿಸುತ್ತಾರೆಂಬುದೂ ಹಾಗೆಯೇ ಮತ್ತಿನ ಪ್ರಕರಣದಲ್ಲಿ ಕೈಗಾರಿಕೆಯಲ್ಲಿ ಎಕ್ಸ್ ರೇಯ ಉಪಯೋಗವೇನೆಂಬುದೂ ವರ್ಣಿತವಾಗಿವೆ ಈ ಮೂರು ಪ್ರಕರಣಗಳು ಸುಲಭಗ್ರಾಹ್ಯವಾಗಿರುವುವಲ್ಲದೆ, ಇವುಗಳಲ್ಲಿ ಅಡಗಿರುವ ವಿಷಯಗಳು ಸರ್ವರೂ ತಿಳಿದಿರತಕ್ಕದ್ದು ೭, ೮ನೆಯ ಪ್ರಕರಣಗಳಲ್ಲಿ ಗ್ರಂಥಕರ್ತರು ಹರಳಿನ ರಚನೆಯ ಕ್ರಮ ಮತ್ತು ಎಕ್ಸ್ ರೇಯ ಭೌತಿಕ ಶಾಸ್ತ್ರ—ಈ ವಿಷಯಗಳ ಕುರಿತು ವಿಚಾರಾತ್ಮಕವಾಗಿ ಬರೆದಿರುತ್ತಾರೆ. ಈ ಭಾಗವು ಸಾಮಾನ್ಯರಿಗೆ ಕಷ್ಟವಾಗಿ ಕಂಡುಬರುವುದರಲ್ಲಿ ಆಶ್ಚರ್ಯವಿಲ್ಲ ಮತ್ತು ಇವುಗಳಿಂದ ಸಾಮಾನ್ಯ ಜನರಿಗೆ ಅಷ್ಟು ಉಪಯೋಗವೂ ಇಲ್ಲ. ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ವ್ಯಾಸಂಗ ಮಾಡಿದವರ ಸಲುವಾಗಿ ಮಾತ್ರ ಇವುಗಳನ್ನು ಕೊಡಲಾಗಿದೆ ಅಂತೂ ಒಟ್ಟಿನ ಮೇಲೆ ಹೇಳುವುದಾದರೆ ಶ್ರೀ ಆಚಾರ್ಯರು ಈ ನವೀನ ವಿಜ್ಞಾನ ಶಾಸ್ತ್ರದ ಭಾಗವಾದ ಎಕ್ಸ್—ರೇಯನ್ನು ಸರ್ವರ ಮನೋಪ್ರವೃತ್ತಿಗಳಿಗೊಪ್ಪುವಂತೆ, ತಿಳಿಗನ್ನಡದಲ್ಲಿ ಬರೆದಿರುವುದು ಅತ್ಯಂತ ಪ್ರಶಂಸನೀಯವಾಗಿರುತ್ತದೆ, ಶ್ರೀ ಆಚಾರ್ಯರು ಹಿಡಿದಿರುವ ಈ ಭಾಷಾಸೇವೆಯ ಧಾರೆಯಲ್ಲಿ ಅವರಿನ್ನೂ ಮುಂದುವರಿಯುವಂತೆ ಭಗವಂತನು ಆಗಾಗ ಪ್ರೇರಣೆಯನ್ನೂ ಹೆಚ್ಚುಹೆಚ್ಚಾಗಿ ಶಕ್ತಿಯನ್ನೂ ಕೊಡಲೆಂದು ನಾವು ಹಾರೈಸುತ್ತೇವೆ.

ಎಸ್. ರಾಮಕೃಷ್ಣಾಚಾರ್, ಬಿ.ಎ., ಎಲ್.ಟಿ.

ಇಂದಿನ ಮಕ್ಕಳೇ ಮುಂದಿನ ಜನಾಂಗ!
ಮುಂದಿನ ಜನಾಂಗಕ್ಕೆ ವಿಜ್ಞಾನವೇ ನಿಧಿ!!

ಲಘುವಿಜ್ಞಾನ

6ನೇ 7ನೇ 8ನೇ ತರಗತಿಗಳಿಗೆ

ನೂತನ ಪಾಠಪಟ್ಟಿಗೆ ಅನುಸಾರವಾಗಿ
ಶ್ರೀ ಎಸ್. ರಾಮಕೃಷ್ಣಾಚಾರ್ ಬಿ ಎ. ಎಲ್ ಟಿ
ಇವರಿಂದ ವಿರಚಿತವಾದುದು.
ಹಳ್ಳಿಯ ಶಾಲೆಗಳಲ್ಲೂ ಮಾಡಿತೋರಿಸಲು ಸುಲಭವಾಗುವಂತಹ ಪ್ರಯೋಗಗಳನ್ನು ಒಳಗೊಂಡಿವೆ
ಸಚಿತ್ರವಾದ ವಿವರಣೆಗಳನ್ನೂ ಕೊಡಲಾಗಿದೆ.
ಬಡ ವಿದ್ಯಾರ್ಥಿಗಳು ಪಡಕೊಳ್ಳಲು ಸಾಧ್ಯವಾಗುವಂತೆ ಕ್ರಯವು ಅತ್ಯಂತ ಕಡಿಮೆಯಾಗಿರುವುದು!
ಪ್ರತಿಗಳು ಮಾರಾಟಕ್ಕೆ ಸಿದ್ಧವಾಗಿವೆ

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.



ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮ ಔಷಧ ಮತ್ತು ಬಲವರ್ಧಕ. ತಯಾರಿಸುವವರು

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*



ನೋಟಗಳು

ಹಿಟ್ಲರನು ವಿದ್ಯುದ್ವೇಗದಿಂದ ಯುದ್ಧ ರಂಗದಲ್ಲಿ ಮುಂದುವರಿಯುತ್ತಿದ್ದಾನೆ!

—ಸುಂದರವಾದ ಪ್ಯಾರಿಸ್ ನಗರವು, ನಿರ್ದಯನಾದ ಹಿಟ್ಲರನ ಹೊಡೆತದಿಂದ ಧ್ವಂಸವಾಗುವುದು ಬೇಡವೆಂದು ಫ್ರೆಂಚರು ಅದನ್ನು ಶತ್ರುವಿನ ಹಸ್ತ ಬಿಟ್ಟುಕೊಟ್ಟರಂತೆ!

—ಯುದ್ಧದಲ್ಲಿ ಸೋಲು ಒದಗುವುದೆಂಬ ನಿಶ್ಚಯದಿಂದ ಹೀಗೆ ಪ್ಯಾರಿಸನ್ನು ಬಿಟ್ಟುಕೊಟ್ಟಿಲ್ಲ; ಖಂಡಿತವಾಗಿ ಮುಂದೆ ಪ್ಯಾರಿಸನ್ನು ಹಿಡಿಯುವೆವೆಂದೂ, ಆಗ ತಿರಿಗಿ ಅದನ್ನು ಪುನರ್ರಚನೆ ಮಾಡುವ ಪ್ರಯಾಸಬೇಡವೆಂದೂ ಇಂದು ತಾತ್ಕಾಲಿಕವಾಗಿ ಶತ್ರುವಿನ ವಶ ತಮ್ಮ ರಾಜಧಾನಿಯನ್ನು ಫ್ರೆಂಚರು ಬಿಟ್ಟುಕೊಟ್ಟರುವರೆಂದು ಹಲವರು ವಿಚಾರಿಸುವರು

—ಹೇಗಿದ್ದರೂ ಇಂದು ಪ್ಯಾರಿಸನ್ನು ಹಿಡಿದು, ಹಿಟ್ಲರನು ಸ್ವಸ್ತಿಕಾ ಧ್ವಜವನ್ನು ಅಲ್ಲಿ ಹಾರಿಸುತಿದ್ದಾನೆ!

—ತಮ್ಮ ರಾಜಧಾನಿಯ ದುರವಸ್ಥೆಗಾಗಿ ಫ್ರೆಂಚರು ಕಂಬನಿ ಸುರಿಸುತ್ತಿರಬಹುದು!

◆

ಫ್ರೆಂಚ್ ಪ್ರಧಾನಮಂತ್ರಿಗಳು ಅಮೇರಿಕೆಗೆ ಬಂದು ತಮಗ ಸಹಾಯ ಮಾಡಿರೆಂದು ಕಣ್ಣೀರು ಸುರಿಸಿ ಬೇಡಿಕೊಂಡರು

—ಫ್ರೆಂಚರು ಯುದ್ಧ ನಿರ್ಧಾರದಿಂದ ಎಲ್ಲಾ ಕಡೆಗಳಿಂದಲೂ ಜರ್ಮನರನ್ನು ಎದುರಿಸಿ ಕಾದಾಡುತ್ತಿರುವೆವೆಂದು ಹೇಳುವುದರೊಡನೆ, ತಮಗೊದಗಿದ ವಿಷಮ ವಿಪತ್ತನ್ನೂ ದೂರಿಕೊಂಡರು

—ಅಮೇರಿಕದಿಂದ ಅದಕ್ಕೆ ಉತ್ತರ ಬಂದಿದೆ ಪ್ರೆಸಿಡೆಂಟ್ ರೂಸ್‌ವೆಲ್ಟರು ತಮ್ಮಲ್ಲಿಂದ ಸಾಧನ ಸಹಾಯವನ್ನು ಮೊದಲಿಗಿಂತ ಇಮ್ಮಡಿ ಕಳುಹಿಸಲಾಗುವುದೆಂದು ಸಾರಿದ್ದಾರೆ.

—ತನ್ನ ಸಹಾನುಭೂತಿಯು ಮಿತ್ರರಾಷ್ಟ್ರಗಳ ಪರವಾಗಿದೆಯೆಂದೂ ವ್ಯಕ್ತಪಡಿಸಿದ್ದಾರೆ.

—ಆದರೆ, ಅಮೇರಿಕವು ಜರ್ಮನಿಯ ವಿರುದ್ಧವಾಗಿ ಯುದ್ಧರಂಗಕ್ಕಿಳಿಯಬೇಕಾದರೆ, ಅಮೇರಿಕಾ ಕಾಂಗ್ರೆಸಿನ ಸಮ್ಮತಿ ಬೇಕಾಗಿದೆಯೆಂದೂ, ಅದು ಸಿಗುವ ತನಕ ತಾನು ಅಸಹಾಯಿಯಾಗಿದ್ದೇನೆಂದೂ ತಿಳಿಯಪಡಿಸಿದ್ದಾರೆ

—ಅಮೇರಿಕಾ ಕಾಂಗ್ರೆಸು, ಮಿತ್ರರಾಷ್ಟ್ರಗಳ ಸಹಾಯವಾಗಿ, ಯುದ್ಧರಂಗಕ್ಕಿಳಿವ ಮಸೂದೆಯನ್ನು ಮಂಜೂರು ಮಾಡುವ ಶುಭಮುಹೂರ್ತವನ್ನು ಮಿತ್ರರಾಷ್ಟ್ರದವರು ಎದುರು ನೋಡುತ್ತಿದ್ದಾರೆ!

◆

ಹಿಟ್ಲರನು ಯುದ್ಧದ ಕುರಿತು ಒಂದು ಪ್ರಚಂಡವಾದ ಹೇಳಿಕೆಯನ್ನು ಕೊಟ್ಟಿರುವನು

—"ನಾನು ಬ್ರಿಟಿಷರನ್ನು ನಾಶಮಾಡಲು ಇಚ್ಛಿಸುವುದಿಲ್ಲ, ಯಾವ ಬ್ರಿಟಿಷ್ ಭಂಡವಾಳಗಾರರು ಬ್ರಿಟಿಷರನ್ನು ನಾಶಪಡಿಸುತ್ತಾರೋ ಅವರನ್ನು ನಾಶಪಡಿಸಲು ಇಚ್ಛಿಸುತ್ತೇನೆ" ಎಂದು ಹಿಟ್ಲರನು ಸಾರುತ್ತಾನೆ!

—ತನ್ನ ಇಂದಿನ ವಿಧ್ವಂಸಕಾರ್ಯಕ್ಕೆ ಬ್ರಿಟಿಷ್ ಕೂಲಿಗಾರರ ಬೆಂಬಲವು ಬರಲೆಂದು ಈ ಉಪಾಯವೇ?

◆

ಎಮೆರಿಯವರು ಭಾರತ ಸಚಿವರಾಗಿ ನಿಯುಕ್ತರಾದಾಗ ಹಲವರು ಅತ್ಯಂತ ಆಶಾತುರರಾದರು.

—ಸತ್ಯಮೂರ್ತಿ-ಪಕ್ಷದವರು ಭಾರತಕ್ಕೆ ಸ್ವರಾಜ್ಯವೇ ದೊರಕಿಬಿಟ್ಟಿತು ಎಂಬಲ್ಲಿವರೆಗೆ ಉತ್ಕಂಠಿತರಾಗಿದ್ದರು.

—ಎಮೆರಿಯವರು ಭಾರತದಲ್ಲಿ ಹುಟ್ಟಿದವರು ಭಾರತ ಸ್ವಾತಂತ್ರ್ಯ ಪ್ರಿಯರೆಂದು ಹಲವು ಪತ್ರಿಕೆಗಳು ಉದ್ಘೋಷಿಸಿದವು

—ಆದರೆ ಎಮೆರಿಯವರ ಮಾತು, ರವಷ್ಟಾದರೂ ಬದಲಾವಣೆ ಹೊಂದಿದಂತೆ ಕಂಡುಬರುವುದಿಲ್ಲ.

—ಸ್ವಾತಂತ್ರ್ಯವೆಂಬುದು ಕೊಟ್ಟು ಪಡೆಯುವ ವಸ್ತುವಲ್ಲ. ನಿಮ್ಮ ನಿಮ್ಮೊಳಗಿನ ಭೇದಗಳನ್ನು ಅಳಿಸಿ ನೀವದನ್ನು ಗಳಿಸಿಕೊಳ್ಳಿರೆಂದು ಅವರ ಉಪದೇಶ

—ಅಲ್ಪಸಂಖ್ಯಾಕರು, ಆಶ್ರಿತರಾಜರು ಮೊದಲಾದವರ ಹಿತಸಂರಕ್ಷಣೆಯ ಕರ್ತವ್ಯಭಾರವು ನಮ್ಮದಾಗಿರುವಾಗ ನಾವು ಭಾರತದಿಂದ ನಮ್ಮ ಹಿಡಿತವನ್ನು ಹಾಗೆ ವಿಚಾರಿಸದೇ ಬಿಟ್ಟುಕೊಡಲಾಗುವುದಿಲ್ಲವೆಂದು ಹಿಂದಿನ ಭಾರತ ಸಚಿವರು ಉದ್ಘೋಷಿಸಿದ್ದರು

—ಎಮೆರಿಯವರ ಮಾತು, ಅದಕ್ಕಿಂತ ಸ್ವಲ್ಪ ನಯವಾಗಿ ಕಂಡು ಬಂದರೂ, ಅರ್ಥದಲ್ಲಿ ಎಳ್ಳಷ್ಟೂ ಬೇರಿಲ್ಲ

—ಅಣ್ಣನಿಗಿಂತ ತಮ್ಮ ಕಡು ಜಾಣ!

◆

ಭಾರತದ ಸ್ವಾತಂತ್ರ್ಯ ವಿಚಾರವು ಇಂದು ಕಾಲೋಚಿತವಲ್ಲದ ವಿಷಯವೆಂದು ಬ್ರಿಟಿಷ್ ರಾಜನೀತಿಜ್ಞರು ತಿಳಿಕೊಂಡಿರುವಂತಿದೆ!

—ಅಂತರ್‌ರಾಷ್ಟ್ರೀಯ ಗೊಂದಲದಲ್ಲಿ ಭಾರತೀಯರು ರಾಷ್ಟ್ರೀಯ ವಿಚಾರಕ್ಕೆ ತಿಲಾಂಜಲಿಯೆರೆಯುವರೆಂದು ತಿಳಿದಿದ್ದರೆ ಅದು ಭ್ರಮಾತ್ಮಕವಾದುದೆಂದು ನೆಹರುಗಳು ಮೊನ್ನೆ ಪ್ರಕಟಿಸಿದ ಹೇಳಿಕೆಯೊಂದರಲ್ಲಿ ತಿಳಿಸಿದರು.

—ಭಾರತದ ಸ್ವಾತಂತ್ರ್ಯ ವಿಚಾರವು ಧುರೀಣರ ಮನಸ್ಸಿನಲ್ಲಿ ಇಂದು ಮೊದಲಿಗಿಂತಲೂ ಶುಭ್ರವಾಗಿ ನಿಂತಿದೆ.

—ಕಾಂಗ್ರೆಸಿನೊಡನೆ ಕೆರಳಿ ನಿಂತ ಬೋಸರೂ, ಇಂದು ಗಾಂಧಿ, ಜಿನ್ನಾ, ಕಾಂಗ್ರೆಸು, ಲೀಗುಗಳು ಒಂದಾಗಿ ದೇಶದ ಮುಂದಿನ ವಿಚಾರ ಮಾಡಬೇಕೆಂದು ಹೇಳಿಕೆಯಿತ್ತಿರುವರು

—ರಾಷ್ಟ್ರದ ಸಂಕಷ್ಟ ಪರಿಹಾರಕ್ಕಾಗಿ ಎಲ್ಲರೂ ಏಕ ಬುದ್ಧಿಯಿಂದ ವರ್ತಿಸುವರೆಂಬುದಕ್ಕೆ ಸಂಶಯವೇ ಇಲ್ಲ

—ಸತ್ಯಾಗ್ರಹದ ವಿಚಾರವಾಗಿ ಗಾಂಧಿಜಿಯವರು ಇತ್ತೀಚೆಗೆ ಉತ್ಸಾಹಪರವಾದ ಹೇಳಿಕೆಯನ್ನು ಕೊಟ್ಟಿಲ್ಲ

—ಆದರೆ ಇಂದು ಅಲ್ಲಲ್ಲಿ ಆಗುವ ಹಲವಾರು ಕಾಂಗ್ರೆಸು ಕಾರ್ಯಕರ್ತರ ಬಂಧನವು ಅವರ ಮನಸ್ಸನ್ನು ಕೆರಳಿಸಿದೆ.

—ಮುಂದೆ, ನಾವೆಲ್ಲರೂ ಸೆರೆಮನೆಗಳನ್ನು ಬೇಗನೇ ತುಂಬಬೇಕಾಗಬಹುದೆಂದು ಅವರು ಸೂಚಿಸಿದ್ದಾರೆ.

ವಾರ್ಧಾದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆ ಸೇರಿದೆ

—ರಾಷ್ಟ್ರದ ಭವಿಷ್ಯವನ್ನು ಅಲ್ಲಿ ಧುರೀಣರು ನಿರ್ಧರಿಸುತ್ತಿದ್ದಾರೆ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

PHYSICAL FITNESS
is the first essential in games and in every social activity.
You need not worry hereafter for your impaired vitality premature old age and nervous break-down if you try
'BHUVANENDRA AMRITHPRASH"
which will tone the nervous system, build healthy tissues and enrich the blood.
Thus keeps you fresh and sprightly.
Bhuvanendra Products, Ltd.,
Katapady, S, Kanara.
(BRANCH—KUMTA, N KANARA.)
Stockist. **U. Panduranga Nayk,** Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆ
ಯಿಂದ ಇರಬೇಕಾದರೆ ಸಾಕಷ್ಟು
ದೇಹದಾರ್ಢ್ಯತೆಯಿರಬೇಕು.
ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾ
ಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ
ಭುವನೇಂದ್ರ 'ಅಮೃತಪ್ರಾಶ'ವು
ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.
ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ವಿಜ್ಞಾನಯುಗ

ಜೊಂಡು ಹುಲ್ಲಿನಿಂದ ಕಾಗದ ತಯಾರಿ

ಮಹಾಯುದ್ಧಗಳು ಆರಂಭವಾಗುವದರಿಂದ ಬಹಳ ಅನಿಷ್ಟಗಳು ಸಂಭವಿಸುವದು ನಿಜ. ಆದರೆ ಅವುಗಳೊಂದಿಗೆ ಕೆಲವು ಲಾಭಗಳೂ ಆಗುವದಿದೆ. ಜನರ ಆವಶ್ಯಕತೆಗಳು ಉಂಟಾದಂತೆ ಆ ಕಾಲದಲ್ಲಿಯೇ ಹೊಸ ಹೊಸ ವೈಜ್ಞಾನಿಕ ಶೋಧಗಳು ಆಗುತ್ತವೆ. ಜನಜೀವನದ ಅನೇಕ ಉಪಯುಕ್ತ ಸಾಮಗ್ರಿಗಳಲ್ಲಿ ಒಂದಲ್ಲ, ಎರಡಲ್ಲ, ಹಲವು ಉಪಾಯಗಳಿಂದ ತಯಾರಿಸುವ ವಿಧಾನಗಳನ್ನು ಕಂಡುಹಿಡಿಯುತ್ತಾರೆ ದೃಷ್ಟಾಂತವಾಗಿ ಕಾಗದವನ್ನು ತೆಗೆದುಕೊಳ್ಳಿ ನಾಗರಿಕ ಪ್ರಪಂಚದಲ್ಲಿ ಈ ಒಂದು ವಸ್ತುವು ಇರುವದಿಲ್ಲವಾದರೆ ಜನರು ಬಹಳ ಕಷ್ಟಗಳಿಗೆ ಗುರಿಯಾಗಬೇಕಾಗುವದು ಬ್ರಿಟನಿನಲ್ಲಿ ಅನೇಕ ಕಾಗದ ಕಾರ್ಖಾನೆಗಳು ಇರುವದಾದರೂ ಅದು ಕಾಗದದ ಮಟ್ಟಿಗೆ ಬಹಳ ಪರಾವಲಂಬಿಯಾಗಿದೆ ವರ್ಷಕ್ಕೆ ३,००,००० ಟನ್ ಭಾರದಷ್ಟು ಹುಲ್ಲಿನ ಕಾಗದವನ್ನು ಅದು ಬೇರೆ ದೇಶಗಳಿಂದ ಪ್ರತಿವರ್ಷ ಆಮದು ಮಾಡುತ್ತದೆ ಯುದ್ಧಕಾಲದಲ್ಲಿ ಅದಷ್ಟು ಮಟ್ಟಿಗೆ ಸ್ವಾವಲಂಬಿಯಾಗಿರುವದು ಹಿತಕರವಾದ್ದರಿಂದ, ಇಂಗ್ಲಾಂಡಿನಲ್ಲಿ ಬೆಳೆಯುವ ಯಾವ ಯಾವ ಹಸಿ ಪದಾರ್ಥಗಳಿಂದ ಕಾಗದ ತಯಾರಿಸಬಹುದೆಂಬ ಪರೀಕ್ಷೆಯಾಗಿ, ಈಗ ವೈಜ್ಞಾನಿಕರು "ರೀಡ್ಸ್" ಎಂದು ಕರೆಯಲ್ಪಡುವ ಒಂದು ಜಾತಿಯ ಹುಲ್ಲಿನಿಂದ ಕಾಗದ ತಯಾರಿಸುವ ಕ್ರಮವನ್ನು ಹೊಸದಾಗಿ ಕಂಡುಕೊಂಡಿದ್ದಾರೆ.

ಈ ಹುಲ್ಲು ಇಂಗ್ಲಾಂಡಿನ ಈಸ್ಟ್ ಎಂಗ್ಲಿಯಾ ಎಂಬಲ್ಲಿ ಜೊಂಡುಜೊಂಡಾಗಿ ಸಾವಿರಾರು ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಬೆಳೆಯುತ್ತದೆ ಮೊದಲ ಅಲ್ಲಿನವರು ಈ ಹುಲ್ಲನ್ನು ಮಾಡು ಹೊದಿಸಲಿಕ್ಕೂ ಗೋಡೆಕಟ್ಟಲಿಕ್ಕೂ ಉಪಯೋಗಿಸುತ್ತಿದ್ದರು. ಈಗ ಇದೇ ಹುಲ್ಲಿನಿಂದ ಕಾಗದ ತಯಾರಿಸುತ್ತಿದ್ದಾರೆ. ಈ ಹುಲ್ಲಿನಿಂದಾದ ಕಾಗದವು ಮರದಿಂದಾದ ಕಾಗದದಷ್ಟು ಉತ್ತಮವಾಗಿರುವದಿಲ್ಲವಾದರೂ, ಇತರ ಜಾತಿಯ ಹುಲ್ಲುಗಳಿಂದಾದ ಕಾಗದಕ್ಕಿಂತ ನಿಕೃಷ್ಟವಾಗಿರುವದಿಲ್ಲ. ಸರಕಾರದಿಂದ ಆರ್ಥಿಕಸಹಾಯ ಪಡೆದು ದೊಡ್ಡ ಕಾರ್ಖಾನೆಯನ್ನು ಸ್ಥಾಪಿಸಿ ಈ ಹುಲ್ಲಿನ ಕಾಗದವನ್ನು ತಯಾರಿಸಬೇಕೆಂದು ವಿಲಾಯತಿಯಲ್ಲೀಗ ಮಾತುಕತೆ ನಡೆಯುತ್ತಾ ಇದೆ. ಇಂಥ ಕಾರ್ಖಾನೆಗಳ ಸ್ಥಾಪನೆಯಿಂದ ಕಾಗದದ ಮಟ್ಟಿಗೆ ಬ್ರಿಟನು ಸಾಕಾದಷ್ಟು ಸ್ವಾವಲಂಬಿಯಾಗುವುದು ಮಾತ್ರವಲ್ಲದೆ ಅಲ್ಲಿಯ ನಿರುದ್ಯೋಗಿಗಳಿಗೆ ಹೊಸ ಒಂದು ಜೀವನ ಮಾರ್ಗವನ್ನು ತೋರಿಸಿ ಕೊಟ್ಟಂತಾಗುವುದು.

ಹಿಮ ಸಂಗ್ರಹಮಾಡುವ ದೇಶ

ಜನಜಾನುವಾರು, ಗಿಡಮರವೊದಲಾದ ಯಾವತ್ತು ಜೀವಿಗಳಿಗೆ ಹಿಮವು ಹಾನಿಕಾರಿಯಾಗಿದೆ. ಹಿಮ ಬೀಳುವದರಿಂದ ಜೀವನವೇ ನಷ್ಟವಾಗುತ್ತದೆ, ಅಲ್ಲವಾದರೆ ಕಷ್ಟಕರವಾಗುತ್ತದೆ. ಯುದ್ಧಕಾಲದಲ್ಲಿ ಇದು ಹೋರಾಡುವವರ ಪ್ರಬಲ ಶತ್ರುವಾಗಿ ಪರಿಣಮಿಸುತ್ತದೆ ಈ ಬಾರಿಯ ಫಿನ್ಲಾಂಡಿನ ಯುದ್ಧದಲ್ಲಿ ಅಕಾಲ ಹಿಮ ಬಿದ್ದುದರಿಂದ ರಶ್ಯದ ಸೇನೆಯು ಅಪಾರ ಕಷ್ಟನಷ್ಟಗಳಿಗೆ ಬಲಿಬೀಳಬೇಕಾಯಿತು. ಹೀಗೆ ಹಿಮವು ಬಹಳ ಅಪಕಾರಿಯಾಗಿದೆಯಾದರೂ ಅದು ಕೆಲವು ಪ್ರದೇಶಗಳ ಜನರಿಗೆ ಉಪಕಾರಿಯಾಗಿಯೂ ಇರುವದು ರಶ್ಯದ ಉರಾಲ್ ಪ್ರದೇಶದಲ್ಲಿ ಮಳೆ ಅಪರೂಪ, ನೀರಿನ ಆಸರೆ ಬಹಳ ಕಡಿಮೆ ಆದದರಿಂದ ಅಲ್ಲಿಯ ಜನರು ಬೇಸಗೆಯ ಉಪಯೋಗದ ಚಳಿಗಾಲದಲ್ಲಿ ಬಿದ್ದ ಹಿಮವನ್ನೆ ದೊಡ್ಡ ದೊಡ್ಡ ಗುಡಾಣಗಳಲ್ಲಿ ಸಂಗ್ರಹಿಸಿ ಇಡುವರು ಸಂಗ್ರಹಿಸಿಟ್ಟ ಹಿಮವೇ ಬೇಸಗೆಯಲ್ಲಿ ಕರಗಿ ನೀರಾಗಿ ಜನರ ಉಪಯೋಗಕ್ಕೆ ಒದಗುತ್ತದೆ ಇದೇ ರೀತಿ ಅಲಾಸ್ಕದ ಬೆರೋ ಎಂಬ ಭೂಶಿರ ಪ್ರದೇಶದಲ್ಲಿರುವವರೂ ನೀರಿಗಾಗಿ ಹಿಮವನ್ನು ಸಂಗ್ರಹಿಸಿ ಇಡುವರು. ವಿಷವಾಗಿರುವದು ಅಮೃತವಾಗುವದೆಂದರೆ ಹೀಗೆ!

ಜಂಗಲಿ ಎತ್ತುಗಳ ಪುನಃ ಸೃಷ್ಟಿ

ಅನೇಕ ಶತಮಾನಗಳ ಹಿಂದೆ ಯೂರೋಪಿನ ಕಾಡುಗಳಲ್ಲಿ ಕ್ರೂರ ಸ್ವಭಾವದ ಎತ್ತುಗಳು ವಾಸವಾಗಿದ್ದವು ಇವು ಭಯಂಕರವಾಗಿ ಹೋರಾಡುವ ಪ್ರಾಣಿಗಳಾಗಿ ಇದ್ದುದರಿಂದ ಬೇಟೆಗಾರರಿಗೆ ಇವುಗಳನ್ನು ಬೇಟೆಯಾಡುವದು ಒಂದು ದೊಡ್ಡ ವಿನೋದವಾಗಿದ್ದಿತು ವಿನೋದಕ್ಕೋಸ್ಕರ ಅವರು ಇವುಗಳನ್ನೇ ಹೆಚ್ಚುಹೆಚ್ಚು ಬೇಟೆಯಾಡುತ್ತ ಬಂದುದರಿಂದ ಕ್ರಮೇಣ ಈ ಎತ್ತುಗಳ ಜಾತಿ ನಷ್ಟವಾಗುತ್ತ ಬಂದು ಮುನ್ನೂರು ವರ್ಷಗಳ ಹಿಂದೆ ಲಿಥುವಿನಿಯದಲ್ಲಿ ಈ ಕಾಡೆತ್ತುಗಳು ಪೂರ್ಣ ನಾಮಾವಶೇಷವಾದುವು ಆದರೆ ಯೂರೋಪಿನಲ್ಲಿರುವ ಎತ್ತು ಪನ ಕರುಗಳಲ್ಲಿ ಹಿಂದೆ ನಾಮಾವಶೇಷವಾದ ಕಾಡೆತ್ತುಗಳ ಸಂತತಿಯೇ ಇದೆ ಯೂರೋಪದ ಪಶುಪಾಲಕರು ಕಳೆದ ಹತ್ತು ವರ್ಷಗಳಿಂದ ಅನೇಕ ಪರೀಕ್ಷೆಗಳನ್ನು ನಡೆಸಿ ಇದೇ ಸಂತತಿಯ ಮೂಲಕ ಹಿಂದೆ ನಾಶವಾದ ಆ ಕಾಡೆತ್ತಿನ ಜಾತಿಯನ್ನು ಪುನಃ ಸೃಷ್ಟಿಸಲಿಕ್ಕೆ ಸಮರ್ಥರಾಗಿದ್ದಾರೆ ತನ್ಮೂಲಕ ಈ ಸಾಮರ್ಥ್ಯದ ಮೂಲಕ ಅವರ ಒಂದು ದೊಡ್ಡ ಪವಾಡವನ್ನೇ ಮಾಡಿ ತೋರಿಸಿರುವರು ಬೇರೆ ಬೇರೆ ಎತ್ತುಗಳಲ್ಲಿ ರೂಢ ಸಂಘ ಗುಣಗಳು ಪ್ರತ್ಯೇಕವಾಗಿ ಅವುಗಳ ಒಡಲಿಗೆ ... ಬರುವಂತೆ ಸಾಧಿಸಿ ಈ ಪಶುಪಾಲಕರು ಉತ್ತಮವಾದ ಕಾಡೆತ್ತಿನ ಜಾತಿಯನ್ನು ಹುಟ್ಟಿಸಿ, ಸೃಷ್ಟಿ ಸ್ಥಿತಿಲಯ ಕರ್ತರಾದ ಬ್ರಹ್ಮ ವಿಷ್ಣು ಮಹೇಶ್ವರರನ್ನು ಮೀರಿಸಿರುವರು, ವಿಜ್ಞಾನವೆಂದರೆ ದೇವರು-ದೇವರು ಎಂದರೆ ವಿಜ್ಞಾನವು ಎಂಬುದನ್ನು ಇವರು ಚೆನ್ನಾಗಿ ತೋರಿಸಿ ಕೊಟ್ಟಿರುವರು.

NOTICE

In the Court of the District Munsif of Mangalore

S. C. No. 734/1938
R E P. No. 698/1940

Between –
Ullal Deva Rao & Co } **Petitioner**
And
Frank M Saldanha **Respondent**

Notice to above respondent Frank M Saldanha son of B. B Saldanha Coffee-planter and merchant residing at Falnir in Mangalore Town

Please take notice that the above R E P. has been posted to 4-7-1940 for settling the terms of the sale proclamation of the immoveable property attached in the said Petition. You may appear on the said day in person or by Pleader and oppose the terms of the draft sale-proclamation filed on behalf of the petitioner for the said purpose, otherwise the matter will be heard and decided in your absence.

Mangalore } **M. Vasudeva Rao**
1[illegible] 1940 } Vakil for petitioner

A well-rounded programme of SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially, stand the Syndicate's time tested thrift schemes for guaranteed security

We have a few select plans which enable any man to fully enjoy the fruit of his labours Study them, join any that suits you and see what great benefit you derive

Syndicate keeps pace with the times by providing a service that fully meets any sort of need of the society This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.

Head Office:- UDIPI, S. India.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ತೀಡಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಸೇವನೆಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೇಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೆಟು-ಡಾ ವೈದ್ಯ ಎಲ್. ಸಿ. ಪಿ. ಎಸ್ ಕೊಡಮಾಡಿರುವರು, ಆದರೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪-೦-೦ ಪೋ. ಖ. ೨

ವಿಳಾಸ. ಸಂಜೀವಿನೀ ಔಷಧಾಲಯ ಮು. ಪೊ. ವಿರಜೆ, S. M. C

ಸಾವಕಾರ ಶ್ರೀನಿವಾಸರಂಗಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯು

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	2—0—0	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡ ,,	5—0—0	5—0—0
,, ದುಯಂ ,, ,,	4—12—0	4—14—0
,, ಅವ್ವಲ್ ಸುಗ್ಗಿ ,,	4—12—0	
,, ದುಯಂ ,, ,,	4—8—0	4—10—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದ್ದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	52—8—0	
,, ದಿಲ್‌ಪಸಂದ ,,	57—8—0	—
ತೆಂಗಿನ ಎಣ್ಣೆ ಮುಡಿಕ್ಕೆ	8—14—0	8—15—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—0—0	4—4—0
ಗೇರುಬೀಜ ಮುಡಿಗೆ	8—8—0	8—10—0
ಕಬ್ಬಿನ ಬೆಲ್ಲ ಖಂಡಿಗೆ	35—0—0	48—12—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	14—0—0	14—8—0

Date 21-6-1940 … ರೂ. 2-13-0 Regd. No. M 3406

ಸ್ವದೇಶಾಭಿಮಾನಿ

ಸಂಪುಟ [34] ತಾರೀಖು 21-6-1940 [ಸಂಚಿಕೆ 25

The Bombay Life Assurance Company, Ltd.,
(Estd. 1908)

LIFE INSURANCE

Dispels darkness of the mind and brings
Enlightenment and Courage, Immortalises
major portion of your Income whether you
survive or not and thus makes life worth
living to you and your dependants in reality

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To insure or to represent it Pays you to consult

KOCHIKAR BROTHERS LTD.,

MADRAS BRANCH SECRETARIES LTD

Chief Agents for B… … & Suburbs

The Bombay Life Building,

Sri Lalubhai Samaldas Road.

Gandhi Nagar, UDIPI

OR ANY OF THEIR FOLLOWING OFFICES

Pithyari	Car Street	Central Station Road
Calicut	Mangalore	Trivandrum
Gautam Niva Charni Road	Post Box No. …	Visweswarapuram Circl
Girgaum Bombay No. 4	Mount Road Madras	Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು … ವೇದನೆಗಳಿಗೂ ಎದೆನೋವು … ಗಳು, ಬಾತುಕೊಳ್ಳುವುದು, ಚೇಳ ವಿಷ … ಪಕ್ಷವಾತ, … ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ

ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ)ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

ಬ್ರಿಟಿಷ್‌ವೈಮಾನಿಕರು ಹೊರಡುವ ಮೊದಲು ತಾವು ಹೋಗುವ ಹಾದಿಯನ್ನು ಅಭ್ಯಾಸಿಸುತ್ತಿರುವುದು.

KANNADA ILLUSTRATED WEEKLY

ಪುಸ್ತಕ—ಪರಿಚಯ

ಅಂಗದ ಸಂಧಾನ (ಯಕ್ಷಗಾನ ಪ್ರಸಂಗ): ಅರ್ಥ, ಬರೆದವರು: ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು. ಪ್ರಕಾಶಕರು: ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಕುಂದಾಪುರ. ಬೆಲೆ ೦–೬–೬.

ಯಕ್ಷಗಾನ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಶಿಷ್ಟವಾದ ಪ್ರತ್ಯೇಕ ಸ್ಥಾನವೊಂದಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ದಕ್ಷಿಣ ಕನ್ನಡದಲ್ಲಿ ಪಂಡಿತ ಪಾಮರರಿಗೆಲ್ಲ ಸರ್ವಜನಾದರಣೀಯವಾಗಿರುವ ಏಕಮಾತ್ರ ಸಾಹಿತ್ಯವೆಂದರೆ ಅದೇ ಆಗಿದೆ. ಯಕ್ಷಗಾನದಲ್ಲಿ ದುಡಿವ ನಮ್ಮ ಜಿಲ್ಲೆಯ ಕೆಲವು ಪ್ರಸಿದ್ಧ ಸಾಹಿತ್ಯ ಭಕ್ತರಲ್ಲಿ ಶ್ರೀ ಸಾಮಗರೂ ಒಬ್ಬರು. ಪ್ರಾಚೀನ ಯಕ್ಷಗಾನಾಚಾರ್ಯನಿಂದ ವಿರಚಿತವಾದ ಯಕ್ಷಗಾನ ಅಂಗದ ಸಂಧಾನಕ್ಕೆ ಶ್ರೀ ಸಾಮಗರು ಈ ಅರ್ಥವಿವರಣೆಯನ್ನು ಬರೆದಿದ್ದಾರೆ. ಕುಂದಾಪುರ ಕರ್ನಾಟಕ ಸಾಹಿತ್ಯಸಂಘದ ಕಾರ್ಯದರ್ಶಿಗಳಾದ ಶ್ರೀ ವಿ. ಕೆ. ಆಚಾರ್ಯ ವಿದ್ವಾನ್, ಇವರು ಇದಕ್ಕೆ ಒಂದು ಮುನ್ನುಡಿಯನ್ನು ಬರೆದಿರುವರು.

ಯಕ್ಷಗಾನದ ಅರ್ಥವಿವರಣೆಯಲ್ಲಿ ಶ್ರೀ ಸಾಮಗರು ತಮ್ಮ ಪ್ರತ್ಯೇಕವಾದೊಂದು ಶೈಲಿಯನ್ನು ಅಭಿವೃದ್ಧಿಮಾಡಿಕೊಂಡಿದ್ದರೂ ಇದು ಆದರ್ಶವಿಧಾನವೆನ್ನಲಾಗುವುದಿಲ್ಲ. ಹಿಂದೆ ಶ್ರೀ ಅರ್ಕುಳ ಸುಬ್ರಾಯಾಚಾರಿಯವರು ಕೃಷ್ಣಸಂಧಾನದ ಅರ್ಥವಿವರಣೆಯನ್ನು ಬರೆದಿದ್ದರು. ಕಲಾದೃಷ್ಟಿಯಿಂದ ಸಹಜ ಸರಳತೆಯಿಂದ ಭಾಷಾಶುದ್ಧಿಯಿಂದ, ಅವರದೇ ಅನುಸರಣೀಯವಾಗಿದೆ. ಇಲ್ಲಿ ಶ್ರೀ ಸಾಮಗರು ತಮ್ಮ ಪಾಂಡಿತ್ಯವನ್ನು ಬಹುದುಃಖವಾಗಿ ಮೆರೆಸಲು ವಿಶೇಷ ಪ್ರಯತ್ನಪಟ್ಟಂತೆ ತೋರುತ್ತದೆ. ಕಥೆ, ಪಾತ್ರಕೌಶಲ್ಯ, ಸರಲತೆ, ಭಾಷಾಶುದ್ಧಿ ಇವುಗಳ ಕಡೆಗೆ ಸಾಕಷ್ಟು ಗಮನಕೊಟ್ಟು, ಯಕ್ಷಗಾನ ಸಾಹಿತ್ಯದ ಸಹಜ ಸೌಂದರ್ಯವನ್ನು ಕಲಿಸಲು ಅರ್ಥಗಾರರು ಪ್ರಯತ್ನಿಸಬೇಕಾದುದು ಅವಶ್ಯವಾಗಿತ್ತು.

ಈ ಪುಸ್ತಕವು ವಾಚನೀಯವಿದೆ. ನಿರಂತರವಾಗಿ ಹರಿವ ವಾಕ್ಸರಣಿ, ಶಬ್ದಪ್ರಾಸಗಳೇ ಮೊದಲಾದುವುಗಳು ಶ್ರವಣಸುಂದರವಾಗಿವೆ. ಬೆಲೆ ಕಡಿಮೆ ಇಳಿಸಿದ್ದರೆ ಈ ಪುಸ್ತಕವು ಸರ್ವಗ್ರಾಹ್ಯವಾಗುತ್ತಿತ್ತು. ಯಕ್ಷಗಾನದ ಸೇವೆಯಲ್ಲಿ ಹೆಚ್ಚಿನ ಶ್ರಮವಹಿಸುತ್ತಿರುವ ಶ್ರೀ ಸಾಮಗರ ಪ್ರಥಮಕೃತಿಗೆ ಸ್ವಾಗತವು.

ಅಂದವಾದ ಮುದ್ರಣಕ್ಕೆ

ಶಾರದಾ ಛಾಪಖಾನೆಗೇನೇ

ಬಂದು ವಿಚಾರಿಸಿರಿ.



ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

28—6—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೮—೬—೧೯೪೦

ಮುಸ್ಲಿಂ ಲೀಗಿನ ನಿಜಸ್ವರೂಪ

ಪಂಜಾಬ್ ಮತ್ತು ಬಂಗಾಳ ಪ್ರಧಾನರ ವಿಚಿತ್ರ ವರ್ತನೆ

ಬಹಳ ಸಮಯದಿಂದ ಮುಸ್ಲಿಂ ಲೀಗಿನ ಪರವಾಗಿ ಮಾತನಾಡುತ್ತಿದ್ದ ಪ್ರಭೃತಿಗಳು ತಮಗೆ ಸಮಗ್ರ ಭಾರತದ ಮುಸಲ್ಮಾನರ ಮೇಲೆ ವರ್ಚಸ್ಸಿದೆ ಎಂಬ ಪೊಳ್ಳು ವಾದವನ್ನು ಗಂಟಲು ತೆರೆದು ಪದೇ ಪದೇ ಬಾರಿಸುತ್ತಲಿದ್ದರು. ಇತ್ತೀಗ ಬೊಂಬಾಯಿಯಲ್ಲಿ ಸೇರಿದ ಲೀಗಿನ ಕಾರ್ಯಕಾರಿ ಸಭೆಯಲ್ಲಿ ಮಂಜೂರಾದ ಯುದ್ಧ ಸಂಬಂಧವಾದ ಠರಾವುಗಳು ಕೆಲವು ಲೀಗಿನ ಮತ್ತು ಇತರ ನಾಯಕರ ನಿಜಸ್ವರೂಪವನ್ನು ಬಯಲಿಗೆಳೆಯಿತು.

ಲೀಗ್ ಮೀಟಿಂಗಿಗೆ ಸಿಕಂದರ್ ಹಯತ್ ಖಾನರೂ ಬಂದಿದ್ದರು. ಹೆಚ್ಚು ಕಮ್ಮಿ ಕಾಂಗ್ರೆಸಿನ ಧೋರಣೆಯನ್ನೇ ಅನುಸರಿಸಿಕೊಂಡು ಬಂದಿರುವ ಲೀಗಿಗೆ ಸರಕಾರದ ನಿರ್ದೇಶತ್ವದಲ್ಲಿ ಸ್ಥಾಪಿತವಾದ ಯುದ್ಧ ಕಮಿಟಿಗಳೊಡನೆ ಯಾವ ರೀತಿಯಲ್ಲಿ ಸಹಕರಿಸಬೇಕೆಂಬ ಯೋಚನೆ ಹೊಳೆಯಲಿಲ್ಲ. ಕೊನೆಗೆ ತಮ್ಮ ಬಿಗುವನ್ನು ತೋರಿಸಲೆಳಸುವ ಅರ್ಧಮರ್ಧ ಮನಸ್ಸಿನ "ಸದ್ಯಕ್ಕೆ ವ್ಯಾಸ್‌ರಾಯರ ಯುದ್ಧ ಕೂಟದಲ್ಲಿ ಮುಸಲ್ಮಾನರು ಸೇರುವುದು ನಿಷ್ಪ್ರಯೋಜಕ" ವೆಂಬರ್ಥದ ಠರಾವೊಂದು ಪಾಸಾಯಿತು.

ಬಿರುಕಿಗೆ ಆರಂಭ

ಬೊಂಬಾಯಿಯಿಂದ ಹಿಂತೆರಳಿದಾಕ್ಷಣ ಸರ್ ಸಿಕಂದರರು ಒಂದು ಹೇಳಿಕೆಯನ್ನು ಹೊರಡಿಸಿ "ಮುಸ್ಲಿಮ್ ಲೀಗಿನ ಠರಾವು ಪಂಜಾಬ್, ಬಂಗಾಳ ಮತ್ತು ಆಸ್ಸಾಂಗಳಲ್ಲಿನ ಮಂತ್ರಿಮಂಡಲಕ್ಕೆ ಯಾವ ಸಂಬಂಧವೂ ಇಲ್ಲ. ಮುಸಲ್ಮಾನರೂ ಯುದ್ಧ ಕೂಟದಲ್ಲಿ ಭಾಗಿಗಳಾಗಬೇಕು" ಎಂದು ಪ್ರಕಟಿಸಿದರು.

ಅತ್ತ ಬಂಗಾಳದಲ್ಲಿ ಮಿ॥ ಫಜಲುಲ್ ಹಕ್‌ರೂ ಇದೇ ಅರ್ಥದ ಹೇಳಿಕೆಯೊಂದನ್ನು ಹೊರಡಿಸಿ ಸ್ವತಃ ಯುದ್ಧ ಕಮಿಟಿಗಳನ್ನೂ ಏರ್ಪಡಿಸುವ ಉದ್ಯಮದಲ್ಲಿ ತೊಡಗಿದ್ದಾರೆ.

ಜಿನ್ನರ ಪಾಡು.

ಕೂಟಗಾರರು ನಿರಾಶಾಜನಕ ಹೇಳಿಕೆಗಳನ್ನು ಹೊರಡಿಸಿದನ್ನು ಕಂಡು ಜಿನ್ನರು ಪ್ರತಿ ಹೇಳಿಕೆಯೊಂದನ್ನು ಹೊರಡಿಸಿ "ಸಿಕಂದರರ ಮತ್ತು ಹಕ್ಕರ ವರ್ತನೆಗಳಿಗೆ ಖೇದಾಶ್ಚರ್ಯ" ಸೂಚಿಸಿದ್ದಾರೆ.

ಮೇಲಿನ ಸಂಗತಿಗಳಿಂದ ವಿಶದವಾಗುವ ವಿಷಯಗಳೆಂದರೆ ಮುಖ್ಯವಾಗಿ ಮುಸ್ಲಿಂ ಲೀಗು ತಾನು ಹೇಳಿಕೊಂಡಷ್ಟು ವರ್ಚಸ್ಸುಳ್ಳದ್ದಾಗಿಲ್ಲವೆಂದು ಸ್ಪಷ್ಟವಾಯಿತು.

ವ್ಯಾಸ್‌ರಾಯರೆಂದರೂ ಈ ವಿಷಯವನ್ನು ಚೆನ್ನಾಗಿ ಗಮನಿಸದೆ ಇರಲಾರರು. ಮುನ್ನಡೆಯುವ ಜಿನ್ನಾ ವ್ಯಾಸ್‌ರಾಯರ ಭೇಟಿಯಲ್ಲಿ ವ್ಯಾಸ್‌ರಾಯರು ಜಿನ್ನಾರವರ ಬೆಂಬಲ ಹೀನತ್ವವನ್ನು ಬೊಟ್ಟು ಮಾಡಿ ತೋರಿಸದಿರಲಾರರೆಂದು ರಾಜಕೀಯ ಕೇಂದ್ರಗಳು ಅಭಿಪ್ರಾಯಪಡುತ್ತಿವೆ.

ಭಾರತದಲ್ಲಿ ಯುದ್ಧ ಸಾಹಸ

ಯುದ್ಧ ಸಹಕಾರ ಮಂಡಳಿಗಳೂ ನಾಗರಿಕ ದಳ ಕಮಿಟಿಗಳೂ

ದೇಶಿ ಸಂಸ್ಥಾನಾಧಿಪತಿಗಳ ಉತ್ಸಾಹ

ದೇಶದಲ್ಲೆಲ್ಲಾ ನಾಗರಿಕರ ಸಹಕಾರವನ್ನೊಳಗೊಂಡ ಯುದ್ಧ ಸಹಾಯಕ ಮಂಡಳಿಗಳನ್ನೂ ಶಿಕ್ಷಣದಳಗಳನ್ನೂ ಸ್ಥಾಪಿಸಬೇಕೆಂದು ಮಾನ್ಯ ವ್ಯಾಸ್‌ರಾಯರು ಮನವಿ ಮಾಡಿಕೊಂಡಂತೆ ಪ್ರಾಮುಖ್ಯ ನಗರಗಳಲ್ಲಿಯೂ ಜಿಲ್ಲಾ ಕೇಂದ್ರಗಳಲ್ಲಿಯೂ ಚಟುವಟಿಕೆಯ ಕಾರ್ಯಕಲಾಪಗಳನ್ನು ಕೈಕೊಳ್ಳಲಾಗಿದೆ. ಪ್ರಾಂತ್ಯಗಳಲ್ಲೆಲ್ಲಾ ದೇಶಿ ಸಂಸ್ಥಾನಗಳಲ್ಲೂ ಸಂಬಂಧಪಟ್ಟ ಅಧಿಕಾರಿಗಳು ಉತ್ಸುಕತೆಯಿಂದ ನಿರ್ವಹಣ ಕಾರ್ಯದಲ್ಲಿ ತೊಡಗಿರುತ್ತಾರೆ.

ಅಗಲೇ ಧನ ಜನಗಳನ್ನು ಶೇಖರಿಸುವ ವಿಧ ವಿಧ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸಲಾಗಿದೆ. ಸಂಸ್ಥಾನಾಧೀಶ್ವರರೂ ಜಮೀನ್ದಾರರುಗಳೂ ಶಕ್ತ್ಯಾನುಸಾರ ಧನಸಹಾಯವನ್ನು ವಿವಿಧ ರೂಪಗಳಲ್ಲಿ ವ್ಯಾಸ್‌ರಾಯರ ಯುದ್ಧನಿಧಿಗೆ ಕಳುಹಿಸಿರುವರು.

ಸೈನ್ಯದಳಗಳನ್ನು ಕಟ್ಟಲು ಯುವಕರನ್ನು ಶೇಖರಿಸುವ ಉದ್ಯಮವು ಪಂಜಾಬ್, ಮದ್ರಾಸು, ಬಂಗಾಳ ಪ್ರಾಂತ್ಯಗಳಲ್ಲಿ ಬಿರುಸಾಗಿ ನಡೆಯುತ್ತದೆ.

'ಭಾರತದಲ್ಲಿ ನಮ್ಮ ಸುಸಂಧಿ'

ಗಾರ್ಡಿಯನ್ ಪತ್ರಿಕೆಯ ಹಿತೋಕ್ತಿ

"ಹಿಂದೀ ಜನತೆಯೂ ಜನತಾ ನಾಯಕರೂ ಯುದ್ಧ ಸಾಹಸ ಸಾಧನಗಳನ್ನು ಹೆಚ್ಚಿಸುವರೆ ಬಹಳ ಇಚ್ಛೆಯುಳ್ಳವರಾಗಿದ್ದಾರೆ. ಆದರೆ ಹಿಂದೀ ಜನತಾ ಪ್ರತಿನಿಧಿಗಳ ಸ್ವೈಸರಕಾರದ ಹಕ್ಕನ್ನು ಪ್ರತಿಪಾದಿಸುವರು. ಈ ಜನತಾ ಪ್ರತಿನಿಧಿಗಳಲ್ಲಿ ಭರವಸೆ ಇಟ್ಟು ಅವರ ದೇಶದ ಮತ್ತು ಜನರ ದೆಸೆಗಳನ್ನು ನಿರ್ದೇಶಿಸುವ ಜವಾಬ್ದಾರಿಯನ್ನು ಅವರಿಗೇ ಕೊಟ್ಟರೆ ಅದರಿಂದ ನಮ್ಮ ಧ್ಯೇಯಕ್ಕೆ ಹೆಚ್ಚು ಕೀರ್ತಿಯಿದೆ. ನಮ್ಮಂತೆ ಸರಿಸಮಾನರಾಗಬೇಕೆಂಬ ಅವರ ಆಶೆ ಆಕಾಂಕ್ಷೆಗಳನ್ನು ನಾವು ಸಹಾನುಭೂತಿಯಿಂದ ಕಾಣದಿರುವುದಕ್ಕೆ ಹೇತುವೇನು? ಇದೊಂದು ದೊಡ್ಡ ಸುಸಂಧಿ. ಈಗ ನಾವು ಕಾರ್ಯರೂಪವಾಗಿ ನಮ್ಮ ಕರ್ತವ್ಯವನ್ನು ಮಾಡುವ ಸುಸಂಧರ್ಭವನ್ನು ಕಳೆದುಕೊಳ್ಳಬಾರದು. ಮಿ॥ ಅಮೆರಿಯವರು ಈ ವಿಷಯವನ್ನು ಅರಿಯುವರು. ಭಾರತದ ವಿಷಯದಲ್ಲಿ ಭರವಸಾಯುಕ್ತವಾದ ಇದೊಂದು ಕರ್ತವ್ಯವನ್ನು ಮಾಡುವುದರಿಂದ ಬ್ರಿಟಿಷ್ ಸರಕಾರವು ರಾಜಪಟುತ್ವದ ಶೀಲತೆಯನ್ನು ಜಗತ್ತಿಗೆ ಬೆಳಗಿದಂತಾಗುವುದೆಂದು ನಾವು ನಂಬಿದ್ದೇವೆ."

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಆಸ್ತಿ ಜ್ಯಾರಿ ನಂಬ್ರ 92/1940

R E A 304/1940

ಗುರುಪುರ ರಾಮಚಂದ್ರಪೈ—ಅರ್ಜಿದಾರ

ಬೈಲ ಯಿದಿನಬ್ಬಾರಿ ಹಮದಬ್ಬಾರಿ ಮಗ ಒಕಗವುಳ ಪಾಡಿಗ್ರಾಮದ ಸುರಲ್ಪಾಡಿಯಲ್ಲಿ ಬವನ } ರೆಸ್ಪಾಂಡೆಂಟ್

ಸದ್ರಿ ಪ್ರತಿವಾದಿ ಬೈಲಯಿದಿನಬ್ಬಾರಿಗಳಿಗೆ ಸದ್ರಿ ಅಮ್ಲಜಾರಿಯಲ್ಲಿ ಜಪ್ತಾದ ಸ್ಥಿರಾಸ್ತಿಯನ್ನು ಸೀಲಮ್ ಬಗ್ಗೆ ಯಿಸ್ತ್ಯಾರು ಮಾಡಿ ಜಾಹೀರು ಪಡಿಸುವಲ್ಲಿಂದ ಅದು ಮಂಜೂರು ಮಾಡುವ ಬಗ್ಗೆ ಮತ್ತು ಸದ್ರಿ ಆಸ್ತಿ ಲೀಲಮ್ ನಮೂದು ಅರ್ಜಿದಾರನ ದರ್ಖಾಸ್ತಿಗೆ ನಿಲ್ಲುವರೆಗೆ ಮಾಡುವ ಬಗೆ ನಂತರೆ ದರ್ಖಾಸ್ತಿನ ಖರ್ಚು ಸೈತ್ ಹಣಕ್ಕೆ ಹಿಮ್ಮತ್ತು ಮಾಡುವರೇ ಪರ್ಮಿಶನ್ ಕೊಡುವ ಕುರಿತು ದಾಖಲು ಮಾಡಿದ ಸದ್ರಿ R. E A 304/1940ನೇ ಅರ್ಜಿಯಲ್ಲಿ ಆಕ್ಷೇಪವಿದ್ದರೆ ನ್ಯಾಯ ಹೇಳುವದಕ್ಕಾಗಿ ತಾ 13–7–1940ರಲ್ಲು ಮಧ್ಯಾಹ್ನ 11 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಇಟ್ಟಿರುತ್ತದೆ. ಆ ಕಾಲಕ್ಕೆ ಆಕ್ಷೇಪ ಇದ್ರೆ ಜಾಹಿರು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಬಿಟ್ಟು ಏಕಪಕ್ಷ ತೀರ್ಮಾನವಾಗುವದು ತಿಳಿದಿರುವದು.

25–6–1940 ಮಂಗಳೂರು } P. N. Bhandarkar, Vakil for Petitioner

WHAT MAKES A MAN RICH?

Luck?	—	Very rarely
Inheritance?	—	Not often
Speculation?	—	Once in a blue moon
Gambling?	—	Never
Hard-Work?	—	Very Often
Hard work and THRIFT	—	Always

RESOURCES OF A CRORE.

Estd. 1906

CANARA BANK LIMITED.

ಸ್ವದೇಶಾಭಿಮಾನಿ

ತಾರೀಕು 28—6—1940

ಫ್ರಾನ್ಸಿನ ಪರಿಸ್ಥಿತಿ!

ಫ್ರಾನ್ಸಿನಲ್ಲಿ ಇಂದು ಭೀಕರ ಶಾಂತಿ ನೆಲೆಗೊಂಡಿದೆ! ಯುದ್ಧವು ಅಲ್ಲಿ ಸಂಪೂರ್ಣ ಕೊನೆಗೊಂಡಿದೆ! ಇಬ್ಬರು ಸರ್ವಾಧಿಕಾರಿಗಳೊಳಗೆ, ಫ್ರಾನ್ಸು ಕೊನೆಗೆ ತಲೆವಾಗಿ ಒಪ್ಪಂದಕ್ಕೆ ಸಹಿಹಾಕಿಕೊಂಡಿದೆ! ಕಾಲಿನಿಂದ ತಲೆವರೆಗೆ ಈ ಒಪ್ಪಂದದ ಸೂತ್ರಗಳು ಫ್ರಾನ್ಸನ್ನು ಬಲವಾಗಿ ಬಂಧಿಸುವೆ! ಫ್ರಾನ್ಸು ಯಾವ ಗೌರವ ಪೂರ್ಣವಾದ ಒಪ್ಪಂದವನ್ನು ಬಯಸುತ್ತಿತ್ತೋ ಅದರ ಲವಲೇಶವೂ ಇಲ್ಲದೆ, ಫ್ರಾನ್ಸಿನ ಬಹುಕಾಲದ ಅಭಿಮಾನ, ಸ್ವಾತಂತ್ರ್ಯ, ಕೀರ್ತಿಗಳು ಧೂಳೀಪಟವಾಗಿವೆ! ಅಪಜಯಹೊಂದಿದರೂ, ಗೌರವಶಾಲಿಯಾಗಿದ್ದ ರಾಷ್ಟ್ರವೆಂದು ಸರ್ವಾಧಿಕಾರಿಗಳು ಬಗೆದಂತೆ ಕಂಡುಬರುವುದು ಮಾತ್ರವಲ್ಲದೆ, ಒಂದು ಗುಲಾಮ ರಾಜ್ಯದಂತೆ ಫ್ರಾನ್ಸನ್ನು ತಮ್ಮ ವಜ್ರಮುಷ್ಟಿಯಿಂದ ಹಿಡಿದು, ಹೊಡೆದ ತಾಳಕ್ಕೆ ಕುಣಿವಂತೆ ಶತ್ರುಗಳು ಮಾಡಿದ್ದಾರೆ! ಇಂದು ಹೀಗೆ ಇಬ್ಬರು ಸರ್ವಾಧಿಕಾರಿಗಳ ನಿರ್ದಯ ನಿಪಾತದಲ್ಲಿ ನರಳುತ್ತ ಫ್ರಾನ್ಸು ಜಗತ್ತಿನ ಕರುಣೆಗೆ ಈಡಾಗಿದೆ!

ಹಿಂದಿನ ಫ್ರಾನ್ಸು

ಫ್ರಾನ್ಸಿನ ವೀರೇತಿಹಾಸವು ಇಂದು ನಿನ್ನೆಯದಲ್ಲ, ಫ್ರಾನ್ಸಿನ ವೈಭವವು ಇತ್ತೀಚಿಗಿನದಲ್ಲ, ಫ್ರಾನ್ಸಿನ ನಾಗರಿಕತೆ ಅರ್ವಾಚೀನವಲ್ಲ. ಫ್ರಾನ್ಸು ಸ್ವಾತಂತ್ರ್ಯಕ್ಕಾಗಿ ಕಾದಾಡುವ ಸಂದರ್ಭವು ಅದರ ದೀರ್ಘಕಾಲದ ವೀರ ಇತಿಹಾಸದಲ್ಲಿ ಹಲಕಾಲ ಬಂದಿದೆ, ಅನೇಕ ಸಲ ಆಕ್ರಮಣಗಳು ಆಗಿವೆ, ಅವುಗಳನ್ನು ಫ್ರಾನ್ಸು ಅನುಪಮ ಧೈರ್ಯೋತ್ಸಾಹದಿಂದ ಎದುರಿಸಿದೆ! ಎಪ್ಪತ್ತು ವರ್ಷಗಳಲ್ಲಿ ಫ್ರಾನ್ಸಿಗೆ ಹಿಂದೆ ಪ್ರಶ್ಯಿಯನ್ ಸೈನಿಕರು ಮೂರು ಸಲ ಧಾಳಿಯಿಟ್ಟಿದ್ದರು; ಅವರನ್ನು ಮೂರು ಸಲವೂ ಫ್ರೆಂಚರು ಬಡಿದಟ್ಟಿದ್ದರು, ಎಷ್ಟೋ ಆಕ್ರಮಣ ಹೋರಾಟಗಳು ಒದಗಿದ್ದರೂ, ಫ್ರಾನ್ಸು ಅವೆಲ್ಲವನ್ನೂ ಪ್ರಪಂಚವೇ ಬೆರಗಾಗುವಂತಹ ಧೈರ್ಯ ಸಾಹಸಗಳಿಂದ ಎದುರಿಸಿ ಅವಿಚಲವಾಗಿ ನಿಂತಿತ್ತು. ಇಂಗ್ಲೆಂಡಿನಲ್ಲಿ ಮತ್ತು ಇತರಗಳಲ್ಲಿ ಫ್ರಾನ್ಸು ಬರಲಾರದ ಬವಣೆಗೆ ತುತ್ತಾಗಿತ್ತು, ಆದರೆ ಅಖಿಲ ಪ್ರಪಂಚವೇ ವಿಸ್ಮಯಗೊಳ್ಳುವಷ್ಟು ತೀವ್ರವಾಗಿ, ಫ್ರಾನ್ಸು ತನ್ನ ನಷ್ಟವನ್ನು ಪೂರ್ತಿಗೊಳಿಸಿಕೊಂಡು ನವ ಚೈತನ್ಯವನ್ನು ಪಡೆಯಿತು! ಹೀಗೆ ಫ್ರಾನ್ಸು ಏತರಿಂದಲೂ, ಎಷ್ಟರಿಂದಲೂ, ಇಷ್ಟುಕಾಲದ ತನಕ ಇಷ್ಟೊಂದು ಕರುಣಾಜನಕ ಪರಿಸ್ಥಿತಿಗೆ ಬಂದಿರಲಿಲ್ಲ!

ಇಂದಿನ ಅಪಜಯ

ಇಂದು ಫ್ರಾನ್ಸು ಹೊಂದಿದ ಅವನತಿಯಿಂದ ಫಲ್ಗುಣೇ ಅದು ತಲೆಯೆತ್ತುವುದು ಸಾಧ್ಯವುಂಟೆ? ಲೋಕಕಂಟಕರಾದ ಇಬ್ಬರು ಸರ್ವಾಧಿಕಾರಿಗಳ ವಜ್ರಮುಷ್ಟಿಯಿಂದ ಫ್ರಾನ್ಸಿಗೆ ಬೇಗನೇ ಬಿಡುಗಡೆಯುಂಟೆ? ಜನತೆಯಲ್ಲಾದರೂ ಅಳಿದುಹೋದ ತಮ್ಮ ರಾಜ್ಯವನ್ನು ಪುನಃ ಕಟ್ಟುವ ಅಭಿಮಾನವು ಉಳಿದಿದೆಯೆ? ಜರ್ಮನಿಯ ಆಕ್ರಮಣವು ಅನಿವಾರ್ಯವೆಂದು ಫ್ರಾನ್ಸಿಗೆ ಇಂದು ನಿನ್ನೆಯಲ್ಲ ಬಹುಕಾಲದಿಂದ ತಿಳಿದಿತ್ತು, ಫ್ರಾನ್ಸು ಶಸ್ತ್ರಸಜ್ಜಿತವಾಗಿತ್ತು, ವೈರಿಯ ಆಕ್ರಮಣ ಕಾಲದಲ್ಲಿ ತಾವು ಸ್ವಾತಂತ್ರ್ಯದ ಬಲಿಗೆ ಜೀವವನ್ನು ಕೊಟ್ಟು ಕಾದಾಡಬೇಕೆಂದು ಫ್ರೆಂಚರು ತಿಳಿದಿದ್ದರು. ಆದರೆ ಶತ್ರುವಿನ ಆಕ್ರಮಣವು ತಡೆಯಿಲ್ಲದೆ ಸಾಗಿದಂತೆ ಫ್ರೆಂಚ ದಳಪತಿಗಳು ಹಿಮ್ಮೆಟ್ಟುತ್ತಾ ಬಂದದ್ದು ಮಾತ್ರವಲ್ಲದೆ, ತಮ್ಮ ಸೈನಿಕರನ್ನು ಶರಣು ಹೊಡೆವಂತೆ ಸಾರಿದರು! ಮಂತ್ರಮುಗ್ಧರಾದಂತೆ ಜರ್ಮನಿಯ ಆಕ್ರಮಣದಿಂದ ಫ್ರಾನ್ಸು ನಿಮಿಷ ಕಾಲದಲ್ಲಿ ಶತ್ರುಗಳ ವಶವಾಯಿತು! ಒಂದು ರೀತಿಯಿಂದ ನೋಡಿದರೆ ಜನತೆಯ ಸ್ವಾತಂತ್ರ್ಯ ಪ್ರೇಮವು ಯುದ್ಧಾತುರತೆಯೂ ಚೆನ್ನಾಗಿ ಪರೀಕ್ಷೆಯಾಗದೆ ಫ್ರಾನ್ಸು ಶತ್ರು ವಶವಾಯಿತು! ಲೋಕವೇ ಅಚ್ಚರಿ ಪಡುವಷ್ಟು ಸುಲಭವಾಗಿ ಫ್ರೆಂಚರು ತಮ್ಮ ಸ್ವಾತಂತ್ರ್ಯವನ್ನು ನೀಗಿಕೊಂಡರು! ಫ್ರೆಂಚರಲ್ಲಿ ಸ್ವಾತಂತ್ರ್ಯ ಪ್ರೇಮವಿರಲಿಲ್ಲವೆ? ಯೋಗ್ಯವಾದ ಮುಂದಾಳುತನವಿರಲಿಲ್ಲವೆ? ಅಥವಾ ಫ್ರಾನ್ಸಿಗೆ ವಿಧಿಯು ವಿಮುಖವಾಗಿತ್ತೆ?

ಒಪ್ಪಂದದ ಶರತ್ತುಗಳು

ಒಪ್ಪಂದದ ಶರತ್ತುಗಳು ಫ್ರಾನ್ಸನ್ನು ಹತವೀರ್ಯವನ್ನಾಗಿ ಮಾಡಿವೆ. ಫ್ರಾನ್ಸಿನ ಪವಭಾಗದ ಒಂದು ಸಣ್ಣ ಪ್ರದೇಶವನ್ನುಳಿದು ಪೂರ್ಣ ಫ್ರಾನ್ಸೇ ಶತ್ರುವಶವಾಗುವುದು, ಜರ್ಮನಿಯು ಚಾನಲಿನ ಬಂದರಗಳನ್ನೂ, ಇಟಲಿಯು ಮೆಡಿಟರೇನಿಯನ್ ಬಂದರಗಳನ್ನೂ ಸ್ವಾಧೀನಪಡಿಸಿಕೊಳ್ಳುವುದು ಎಲ್ಲಾ ವಿಮಾನಾಲಯಗಳೂ ಜರ್ಮನ್ ಸ್ವಾಧೀನವಾಗುವವು. ಶಸ್ತ್ರಸಂಗ್ರಹ, ನಿರ್ಮಾಣ ಕಾರ್ಯಾಲಯಗಳೂ ಶತ್ರುಗಳಿಗೆ ಒಪ್ಪಿಸಬೇಕು, ಫ್ರೆಂಚರ ಹಡಗುಗಳು ಎಲ್ಲಾ ಹಿಂದಕ್ಕೆ ಕರೆಯಲ್ಪಡುವವು, ಮಾತ್ರವಲ್ಲದೆ ಬಂಧನದಲ್ಲಿರಿಸಲ್ಪಡುವವು, ಎಲ್ಲಾ ಕಾರ್ಖಾನೆಗಳನ್ನು ಜರ್ಮನರಿಗೆ ಒಪ್ಪಿಸಲ್ಪಡುವವು, ಎಂದರೆ, ಮುಂದಕ್ಕೆ ಖಂಡಿತವಾಗಿಯೂ ಜರ್ಮನಿಯು ಆ ಕಾರ್ಖಾನೆಗಳನ್ನು ತಮ್ಮ ಉಪಯೋಗಕ್ಕಾಗಿ ಉಪಯೋಗಿಸುವವೇ!

ಈ ಶರತ್ತುಗಳನ್ನು ಒಪ್ಪಿಕೊಂಡು ಫ್ರಾನ್ಸು ಸರ್ವಾಧಿಕಾರಿಗಳೊಡನೆ ಒಪ್ಪಂದ ಮಾಡಿಕೊಂಡಿದೆ. ಫ್ರೆಂಚರಿಗೆ ಜೀವನ ಮತ್ತು ಗೌರವ ಇವುಗಳಲ್ಲಿ ಗೌರವಬಿಟ್ಟ ಜೀವನವು ಬೇಕಾಗಿಲ್ಲವೆಂದು ಮೊನ್ನೆ ಫ್ರೆಂಚ್ ಪ್ರಧಾನರೊಬ್ಬರು ಸಾರಿದ್ದರು! ಆದರೆ ಇಂದಿನ ಪರಿಸ್ಥಿತಿಯಲ್ಲಿ ಫ್ರೆಂಚರು ಬರಿಯ ಜೀವನವನ್ನು ಮಾತ್ರ ಉಳಿಸಿಕೊಂಡರಲ್ಲದೆ ಗೌರವನ್ನಲ್ಲ!

ಫ್ರಾನ್ಸನ್ನು ಹೀಗೆ ಬಲಪಡಿಸಿರುವುದರಿಂದ ಬ್ರಿಟನಿಗೆ ಅಪಾಯವು ಖಂಡಿತ ಹೆಚ್ಚಾಗಿದೆ. ಆದರೆ ಬ್ರಿಟನಿನ ಇಂದಿನ ಯುದ್ಧ ನಿರ್ಧಾರವು ಅವಿಚಲವಾಗಿದೆ! ಬ್ರಿಟನಿನ ಸಾಹಸವು, ಪರಾಕ್ರಮವು ವೈರಿಯ ಆಕ್ರಮಣದಿಂದ ಜಗ್ಗತಕ್ಕುವಲ್ಲ!

ಭಾರತದ ಹೊಸ ಮಸೂದೆ

ಇಂದು ಯುದ್ಧವು ವಿಷಮ ರೋಗದಂತೆ ಹರಡುತ್ತಿರಲು ಭಾರತ ಸರಕಾರವು ಇಲ್ಲಿನ ರಕ್ಷಣಾ ವಿಚಾರಗಳ ಕುರಿತು ವಿಶೇಷ ಯತ್ನಗಳನ್ನು ಕೈಕೊಳ್ಳುತ್ತಲಿದೆ. ಪ್ರಾಮುಖ್ಯವಾಗಿ, ಇಂದು ಭಾರತದ ಪ್ರಾಂತಗಳ ಆಡಳಿತದಲ್ಲಾಗಲಿ, ಕೇಂದ್ರ ಆಡಳಿತದಲ್ಲಾಗಲಿ ನಿರ್ಣಯವಾದ ಯಾವುದೇ ಸುಧಾರಣೆಯು ಶಾಸನವಾಗಬೇಕಾಗಿದ್ದರೆ ಪಾರ್ಲಿಮೆಂಟಿನ ಸಮ್ಮತಿ ಪಡೆಯಬೇಕಷ್ಟೆ? ಇಂದು ಬ್ರಿಟನು ಯುದ್ಧ ಕೋಲಾಹಲದಲ್ಲಿರಲು ಅಲ್ಲಿ ಯಾವುದೇ ವಿಷಯಕ್ಕೆ ಅವಕಾಶ್ಟು ಲಕ್ಷ್ಯವು ಹೇಳುವುದು ಸಾಧ್ಯವಿಲ್ಲ ಮಾತ್ರವಲ್ಲದೆ, ಇಲ್ಲಿನ ಪತ್ರಗಳು ವಾರ್ತೆಗಳು ಖಂಡಿತವಾಗಿ ಬ್ರಿಟನಿಗೆ ಮುಂದಕ್ಕೆ ತಡೆಯಿಲ್ಲದ ಸಾಗಬಹುದೆಂಬ ನಿಶ್ಚಯವೂ ಇಲ್ಲ. ಹೀಗಾಗಿ ಇಲ್ಲಿನ ಆಡಳಿತವು ಇಲ್ಲಿನ ಸರಕಾರದ ಪ್ರತಿನಿಧಿಯಾದ ವೈಸರಾಯರ ಸಂಪೂರ್ಣ ಆಡಳಿತಕ್ಕೆ ಒಳಪಟ್ಟು ಅವರಿಗೇ ವಿಶೇಷಾಧಿಕಾರವನ್ನು ಕೊಡತಕ್ಕ ಒಂದು ಹೊಸ ಸೂಚನೆಯು ಪಾರ್ಲಿಮೆಂಟಿನಲ್ಲಿ ತರಬದು!

ಈ ಸೂಚನೆಯು [illegible] ಜಾರಿಗೆ ಬರುವುದೆಂಬುದೇನೋ [illegible] ವಿಚಾರವೇ. ಇಂತಹ ಸಂದಿಗ್ಧ ಕಾಲದಲ್ಲಿ ಬಹಳ ಸಮೀಪದ ಅಧಿಕಾರವನ್ನು ಸ್ಥಾಪಿಸುವ ಈ ಸೂಚನೆಯೂ ನ್ಯಾಯವಾದುದಾಗಿದೆ. ಆದರೆ, ಈ ಸಂದರ್ಭದಲ್ಲಿ ದೇಶದಹಿತವನ್ನು ಆಲೋಚಿಸಿ ಸರಕಾರವು ಕೆಲವು ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅವಶ್ಯವಿದೆ. ಯಾವುದೇ ಸರಕಾರವಾಗಲಿ ಜನತಾ ಪ್ರಾತಿನಿಧ್ಯವಿಲ್ಲದೆ, ಏಕಪ್ರಭುತ್ವದಿಂದ ಆಳುವುದಕ್ಕೆ ಒಂದು ಅವಧಿಯುಂಟು. ಅದರಲ್ಲಿಯೂ ಇಂದಿನ ಯುದ್ಧದಂತಹ ಕಾಲದಲ್ಲಿ ಜನಧನ ಸಹಾಯ ಮೊದಲಾದವು ಬೇಕಾದಾಗ ಜನತಾ ಸರಕಾರದ ಮೂಲಕ ಅದನ್ನು ಪಡೆಯುವುದು ಬ್ರಿಟನಿಗೂ ಸುಲಭ; ಆ ಕಾರ್ಯವು ಜನತಾ ಪ್ರತಿನಿಧಿ ಸರಕಾರಕ್ಕೂ ಸುಲಭವೇ ಆಗುವುದು. ದೇಶದ ರಕ್ಷಣೆಗಾಗಿ ಸೈನ್ಯ ಸಂಗ್ರಹ ಮಾಡುವ ವಿಚಾರ, ಯುದ್ಧಕಾಲದಲ್ಲಿ ಅಧಿಕ ಕರಕಂದಾಯಗಳನ್ನು ತೆರಬೇಕಾದವಿಚಾರ, ಇವೆಲ್ಲವೂ ಜನತೆಯ ಪ್ರತಿನಿಧಿ ಸರಕಾರಕ್ಕೆ ಹೆಚ್ಚಿನ ಸೌಲಭ್ಯಕರವಾದುದು.

ಇದು ಪ್ರಜಾಪ್ರಭುತ್ವದ ಕಾಲ, ಬ್ರಿಟನು ಪಾರ್ಲಿಮೆಂಟಿನ ಅಧಿಕಾರವನ್ನು ವೈಸರಾಯರಿಗೊಪ್ಪಿಸಿದುದರಿಂದ ಪ್ರಜಾಪ್ರಭುತ್ವಕ್ಕೆ ವಿಶೇಷ ಮನ್ನಣೆ ಕೊಟ್ಟಂತೆ ಆಗಲಿಲ್ಲ. ಜನತೆಯ ಮನಸ್ಸನ್ನು ಒಲಿಸಬೇಕಾದರೆ, ಪ್ರಾಂತಗಳ ಮತ್ತು ಕೇಂದ್ರದ ಆಡಳಿತದಲ್ಲಿ ಪ್ರಾಮುಖ್ಯ ಭಾಗವು ಜನತೆಯ ಪ್ರತಿನಿಧಿಗಳ ಹಸ್ತವಿರಬೇಕಲ್ಲದೆ ಒಬ್ಬ ವೈಸರಾಯರ ಅಧೀನವಲ್ಲ. ಇದನ್ನು ಸರಕಾರದವರು ಯೋಚಿಸಿ ಮುಂದಿನ ಆಲೋಚನೆ ಮಾಡುವುದು ಅವಶ್ಯವಾಗಿದೆ.

ಕೇಂದ್ರದಲ್ಲಿ ಕೂಡಲೇ ರಾಷ್ಟ್ರೀಯ ಸರಕಾರವಾಗುವಂತೆ ಯತ್ನಿಸಬೇಕು. ವೈಸರಾಯರು ಈಗಾಗಲೇ ಗಾಂಧಿ ಜಿನ್ನಾ ಪ್ರಭೃತಿಗಳನ್ನು ಕರೆದಿರುವರೆಂಬುದು ನಿಜವಾಗಿ ಈ ವಿಷಯದಲ್ಲಿ ಹೆಚ್ಚಿನ ಆಶಾದಾಯಕವಾದ ವಾರ್ತೆಯಾಗಿದೆ! ಅಂತೂ, ಪ್ರಜಾಭಿಪ್ರಾಯವನ್ನು ಸರಕಾರವು ಬೇಗನೇ ಮನ್ನಿಸುವುದರಿಂದ ಭಾರತದಲ್ಲಿ ಉಭಯತರಿಗೂ ಕ್ಷೇಮವಾಗಲಿದೆ!

ಸಾದರ—ಸ್ವೀಕಾರ

ಜೀವನ—(ಮಾಸಪತ್ರಿಕೆ) ಸಂಪಾದಕರು ಶ್ರೀಗಳಾದ ದ. ರಾ ಬೇಂದ್ರೆ ಎಂ ಎ, ಗುತ್ತಿ ನಿ ಶ್ಯ ಗೋಕಾಕ ಬಿ ಎ (ಆಕ್ಸನ್) ಪ್ರಕಾಶಕರು ಗೋವಿಂದ ಭೀಮಾಚಾರ್ಯ ಜೋಶಿ, ಜೀವನ ಕಾರ್ಯಾಲಯ, ಧಾರವಾಡ ವಾರ್ಷಿಕ ಚಂದಾ ರೂಪಾಯಿ ನಾಲ್ಕು.

ಈ ಮಾಸಪತ್ರಿಕೆಯು ಪ್ರಥಮ ಸಂಪುಟದ ಎ[illegible]ಟನೆಯ ಸಂಚಿಕೆಯು ನಮ್ಮ ಕೈಸೇರಿದೆ. ಪತ್ರಿಕೆಯು ಉತ್ತಮ ತರಗತಿಯದೆಂಬುದಕ್ಕೆ ಇಬ್ಬರ ಹೆಸರಾಂತ ಕನ್ನಡ ಸಾಹಿತಿಗಳ ಸಂಪಾದಕತ್ವವೇ ಸಾಕಷ್ಟು ಪ್ರಮಾಣವಾಗಬಹುದು. ಈ ಸಂಚಿಕೆಯಲ್ಲಿಯೂ ಕನ್ನಡದ ಹಲವು ಪ್ರಸಿದ್ಧ ಬರೆಹಗಾರರ ಲೇಖನಗಳಿವೆ. ಶ್ರೀ ಶ್ರೀನಿವಾಸರ, ಮುಗಳಿಯವರು ಎಂ ವಿ ಸೀ, ಗೋಕಾಕರು ಇವರೇ ಮೊದಲಾದವರ ವಿಚಾರಪರ ಕತೆ ಕವನ ಲೇಖನಗಳೂ ಇವೆ. ಕುಮಾರಿ ಶಾಂತಾ ಇವರು ಒಳ್ಳೆಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ದಯೆಯ ಸ್ವರೂಪ' 'ಶ್ರೀ ರಾಮನೇ ಪರತತ್ವ' 'ರಸನಿಮಿಷಗಳು' 'ಶಿಕ್ಷಣದಲ್ಲಿ ಶಾಸ್ತ್ರಕಾರರು' 'ಜ್ಞಾನೇಶ್ವರ' ಇವೇ ಮೊದಲಾದ ಬರೆಹಗಳು ಅತ್ಯಂತ ವಾಚನೀಯವಿದೆ. ಹೊರಪುಟದಲ್ಲಿ ಕೊಟ್ಟಿರುವ ವೃಕ್ಷ ಚಿತ್ರವು ಭಾವಪೂರ್ಣವಾಗಿ, ಕಲಾಪೂರ್ಣವಾಗಿ ಪತ್ರಿಕೆಯ ಸೌಂದರ್ಯವನ್ನು ಹೆಚ್ಚಿಸಿದೆ. ಶ್ರೇಷ್ಠ ತರಗತಿಯ ಮಾಸಪತ್ರಿಕೆಗಳನ್ನು ಸಂಪಾದಿಸುವರೆ, ಧಾರವಾಡದ ಕನ್ನಡಿಗರು ನಿಜವಾಗಿ ಪ್ರಖ್ಯಾತಿ ಪಡೆದಿದ್ದಾರೆ. 'ಜಯಕರ್ನಾಟಕ'ದ ಆದಿಯಾಗಿ, ಇಂದಿನ ಜಯಂತಿ, ಜೀವನಗಳಿಂದ ಕನ್ನಡಿಗರೆಲ್ಲರೂ ಹೆಮ್ಮೆ ಪಡತಕ್ಕ ನೆಲೆಯು, ಬೆಲೆಯು, ಮಾಸಪತ್ರಿಕೆಗಳನ್ನು ಸಂಪಾದಿಸುವ ಅವರ ಉತ್ಸಾಹವು ಅಭಿನಂದನೀಯವು. ಕನ್ನಡಿಗರೆಲ್ಲರೂ ಪತ್ರಿಕೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕು.

ಹಿಟ್ಲರ್ ವಾದಕ್ಕೆ ಅಹಿಂಸಾತತ್ವವೇ ರಾಮಬಾಣ!

ಶಕ್ತಿ ರಾಷ್ಟ್ರಗಳಿಗೆ ಮಹಾತ್ಮರ ಸಲಹೆ!

ಪಶುಬಲದ ಪೊಳ್ಳುತನ!

'ಇಷ್ಟೊಂದು ಮಿಲಿಯಾಂತರ ಜೀವಿಗಳ ರಕ್ತವನ್ನು ಚೆಲ್ಲಿದನಾದರೂ ಹಿಟ್ಲರನು ಜಗತ್ತಿನ ನೈತಿಕ ಉನ್ನತಿಗೆ ತಿಲ ತೂಕದಷ್ಟು ಕೀರ್ತಿಯನ್ನು ಗಳಿಸಿಕೊಟ್ಟಂತಾಗಲಿಲ್ಲವೆಂಬುದು ನನ್ನ ದೃಢ ನಂಬಿಗೆ' ಹೀಗೆಂದು ಮಹಾತ್ಮಾ ಗಾಂಧಿಯವರು ಐರೋಪ್ಯ ಶಕ್ತಿರಾಷ್ಟ್ರಗಳಿಗೆ ಸಲಹಾ ರೂಪದಲ್ಲೆಂಬಂತೆ ಒಂದು ಲೇಖನದಲ್ಲಿ ಬರೆದಿರುವರು ಆ ಪ್ರಜ್ವಲಿತ ಲೇಖನದ ಸಾರಾಂಶವು ಗಮನೀಯವಾಗಿದೆ:

ಹಿಟ್ಲರ್ ವಾದವು ಅಂತ್ಯದಲ್ಲಿ ಯಾವ ರೂಪವನ್ನಾದರೂ ತಾಳಬಹುದು ಆದರೆ ನವಗದು ವೈಜ್ಞಾನಿಕ ರೀತಿಯಲ್ಲಿ ಬಳಗಿಸಿಕೊಂಡ ಪಾಶವೀ ಶಕ್ತಿಯೆಂದೇ ಅರ್ಥವಾಗುತ್ತದೆ

ಎದುರಿಸಲಾಗದಂತಿರುವ ಯಾಂತ್ರಿಕ ಬಲದ ಪಶುಶಕ್ತಿ ಒಂದು ಕಡೆ ಅದನ್ನು ಎದುರಿಸಿ ಆನೆಯಂತೆ ನಿಂತಿರುವ ಅಹಿಂಸಾತ್ಮಕ ರೂಪವಾದ ಆತ್ಮಶಕ್ತಿ ಒಂದು ಕಡೆ ಈ ಶಕ್ತಿಯೇ ಕೊನೆಯಲ್ಲಿ ಜಯಶೀಲವಾಗುವುದೆಂಬುದರಲ್ಲಿ ಸಂದೇಹವಿಲ್ಲ ಅಚಲವಾದ ಈ ಶಕ್ತಿಯ ಅಗಾಧ ಮರ್ಮವನ್ನು ಆಫ್ರಿಕದಲ್ಲಿ ಸತ್ಯಾಗ್ರಹದ ಆರಂಭದಲ್ಲಿಯೇ ಅಲ್ಲಿನ 'ಸ್ಟಾರ್' ಪತ್ರಿಕೆಯ ವ್ಯಂಗ ಚಿತ್ರಕಾರನೊಬ್ಬನು ತನ್ನೊಂದು ಚಿತ್ರದಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದು ನೆನಪಿಗೆ ಬರುತ್ತದೆ ಅಲ್ಲಿ ಸತ್ಯಾಗ್ರಹ ಚಳವಳಿವು ಯಶಸ್ವಿಯಾಯಿತು

ಈ ತತ್ವ ಹಿಂದೆ ಸತ್ಯವೆಂದು ಸಿದ್ಧಾಂತವಾಗಿದ್ದರೆ ಅದು ಈಗಲೂ ಅಷ್ಟೇ ಸತ್ಯವಾಗಿದೆ ಹಿಟ್ಲರ್ ವಾದವನ್ನು ಅಂಥಾದ್ದೆ ಮತ್ತೊಂದು ಹಿಟ್ಲರ್ ಶಕ್ತಿವಾದದಿಂದ ಎದುರಿಸಿದರೆ ಮತ್ತೊಂದು ಅತಿ ಭೀಕರ ಹಿಟ್ಲರ್ ವಾದವು ಉದ್ಭವಿಸುವುದು ಖಂಡಿತ ನಮ್ಮ ಕಣ್ಣೆದುರು ನಡೆಯುವ ಈ ಐರೋಪ್ಯ ಹತ್ಯೆ ಪ್ರಕರಣವು ಹಿಂಸಾತ್ಮಕ ಹಿಟ್ಲರ್ ವಾದದ ಪೊಳ್ಳುತನದ ಪ್ರದರ್ಶನವಲ್ಲದೆ ಬೇರೆನೂ ಅಲ್ಲ

ಹಿಟ್ಲರ್ ವಾದವು ಯಶಸ್ವಿಯಾಗುವುದಿಲ್ಲ. ಇಂದು ಅನೇಕ ರಾಷ್ಟ್ರಗಳು ಅದರಿಂದ ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡಿವೆ ಅದರ ಭೀಕರ ಒತ್ತಡದಿಂದ ಫ್ರಾನ್ಸ್ ಶಾಂತಿಗೆ ಒಪ್ಪಬೇಕಾದ ಪ್ರಸಂಗ ಬಂದಿದೆ ಫ್ರಾನ್ಸಿನ ಪರಾಜಯದಿಂದ ಪರಿಸ್ಥಿತಿಯು ಕೆಟ್ಟು ಬ್ರಿಟನ್ನು ತನ್ನ ಧೋರಣೆಯನ್ನು ನಿರ್ಧರಿಸುವ ಯೋಚನೆಯಲ್ಲಿ ಮಗ್ನವಾಗಿದೆ ಪರಸ್ಪರ ಹತ್ಯದ ನಿಷ್ಪ್ರಯೋಜಕತೆಯನ್ನು ಕಂಡುಕೊಂಡ ಫ್ರೆಂಚ್ ರಾಜನೀತಿಜ್ಞರ ಧೈರ್ಯವು ಸ್ತುತ್ಯಾರ್ಹವೇ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯದ ಪ್ರಶ್ನೆಯು ಬರೀ ಒಂದು ಪ್ರಹಸನವೇ ಸರಿ ಸ್ವಾತಂತ್ರ್ಯದ ಫಲವನ್ನುಣ್ಣುವ ಭಾವಿ ಯುವಕ ಜನಾಂಗವು ರಣರಂಗದಲ್ಲಿ ಆಹುತಿಯಾದರೆ ಸ್ವಾತಂತ್ರ್ಯ ಯಾರಿಗೆ? ಶೌರ್ಯ ಸಾಹಸಗಳಿಗೆ ಫ್ರೆಂಚ್ ಸೈನ್ಯಗಳು ಜಗತ್ ಖ್ಯಾತಿಗೊಂಡಿವೆ. ಆದರೆ ಸಂಧಾನಕ್ಕೆ ಒಪ್ಪಿದ ಫ್ರೆಂಚ್ ರಾಜಕಾರಣಪಟುಗಳ ಸಾಹಸವು ಇನ್ನೂ ಹೆಚ್ಚಿನ ಮಾನ್ಯತೆಗೆ ಅರ್ಹವಾಗಿದೆ ಧೀರ ಸೈನಿಕರಿಗೆ ಸಹಜವಾದ ಗಾಂಭೀರ್ಯದಿಂದ ತಲೆಬಾಗದ ಇವರಿಗೆ ಕ್ರೂರಶಕ್ತಿಪ್ರದರ್ಶಕನಾದ ಹಿಟ್ಲರನು ಕರುಣೆ ತೋರಿಸಿಕೊಳ್ಳಲಾರನೆಂದು ನಾನು ಆಶಿಸುತ್ತೇನೆ

ಈ ವಿಗ್ರಹದಿಂದ ಹಿಟ್ಲರನ ಏನು ಮಾಡಬಲ್ಲನ? ಇಷ್ಟೊಂದು ಅಪಾರ



ಜರ್ಮನ್ ವೈರಿಗಳನ್ನು ಎದುರಿಸಲು ಸಿದ್ಧವಾಗಿ ನಿಂತ ಆರ್ ಎ ಎಫ್ ನ ಭಯಂಕರ ಬಾಂಬರುಗಳು

ವಾದ ಶಕ್ತಿ ಅಧಿಕಾರಗಳನ್ನು ಅವನು ನುಂಗಿ ಜೀರ್ಣಿಸಿಕೊಳ್ಳಬಲ್ಲನೆ? ಅಲೆಕ್ಸಾಂಡರ್, ನೆಪೋಲಿಯನ್ ಮೊದಲಾದ ಅನೇಕಾನೇಕ ಹಿಂದಿನ ಪ್ರಭೃತಿಗಳ ಪಾಡೇನಾಯಿತೆಂದು ಹಿಟ್ಲರನು ಅರಿಯನೆ?

ಈಗ ಜರ್ಮನರಿಗೆ ಹಿಟ್ಲರನು ಅತ್ಯಮೋಘ ಸಾಮ್ರಾಜ್ಯವನ್ನು ಗಳಿಸಿಕೊಟ್ಟಂತಾಗುವ ಬದಲು ಹೊರಲಾಗದ ಸಾಮ್ರಾಜ್ಯದ ಭಾರದಿಂದ ಅವರನ್ನು ಜಜ್ಜಿದಂತಾಗಿದೆ ಜಯಿಸಿದ ಇಷ್ಟೊಂದು ಜನಾಂಗಗಳನ್ನು ಹಿಟ್ಲರನು ಸದಾ ಗುಲಾಮಗಿರಿಯಲ್ಲಿ ಇರಿಸಲು ಸಾಧ್ಯವಿದೆಯೇ? ಇಂತಹ ಗಂಡಾಂತರದಲ್ಲಿ ಬಿದ್ದ ಜರ್ಮನರು ಹಿಟ್ಲರ್ ವಾದವನ್ನು ಹೇಗೆ ಹೆಮ್ಮೆಯಿಂದ ಕಾಣುವರೊ ಸಹಗರಿಯದ

ಹಿಟ್ಲರನ ಅಗಾಧ ಜ್ಞಾನಶಕ್ತಿಗಾಗಿ ಜರ್ಮನರು ಅವನನ್ನು ಸನ್ಮಾನಿಸಬಹುದು. ಅವನ ಅದ್ವಿತೀಯ ವ್ಯವಸ್ಥಾಪನಾ ಚತುರತೆಯನ್ನು ಅವರು ಹೊಗಳಿಕೊಂಡಿರಬಹುದು. ಆದರೆ ಜರ್ಮನರು ಇಂದು ತಾರತಮ್ಯಗಳ ತೂಕವನ್ನು ಚೆನ್ನಾಗಿ ಅರಿದಂತಾಯಿತು

ಇಂದಿನ ಐರೋಪ್ಯದ ಪರಿಸ್ಥಿತಿಯನ್ನು ಎಣಿಸಿದಲ್ಲಿ ಅದೆಷ್ಟು ದರಂತವಾಗಿದೆ ಹಿಟ್ಲರ್ ಶಕ್ತಿಗೆ ಪದಾಕ್ರಾಂತರಾದ ಜನಾಂಗದವರ ಇಂದು ಹಿಟ್ಲರನನ್ನು ಉದ್ದೇಶಿಸಿ 'ನಿನ್ನ ವೈಜ್ಞಾನಿಕ ರೀತಿಯ ಹತ್ಯವು ಬೇಡ ನಿನ್ನ ಹಿಂಸಾತ್ಮಕ ಶಕ್ತಿಬಲವನ್ನು ನಾವು ಅಹಿಂಸಾತ್ಮಕ ರೀತಿಯಲ್ಲಿ ಎದುರಿಸುವೆವು' ಎಂದಿದ್ದರೆ ಇಂದಿನ ಐರೋಪ್ಯ ಇತಿಹಾಸವೇ ಹೊಸ ರೂಪವನ್ನು ತಾಳುತಿತ್ತು. ರಣಹತ್ಯಾಗಳಿಗೆ ಬಲಿಬಿದ್ದ ಮಾನವಕೋಟಿಯೆಷ್ಟು ಜಗತ್ತಿನ ನಾಗರಿಕತೆಯ ಕಟ್ಟಡವನ್ನು ಕಟ್ಟಲು ಸಹಾಯವಾಗುತಿತ್ತು.

ಅಹಿಂಸಾವಾದಿ ಸತ್ಯಾಗ್ರಹಿಗಳಾಗಿದ್ದರೆ ಏನೂ ಮಾಡುತಿದ್ದರು? ಪಾಶವೀ ಶಕ್ತಿಯನ್ನು ಆತ್ಮಬಲದ ಸ್ಥೈರ್ಯದಿಂದ ಎದುರಿಸುವವರಾಗುವರು ವೈರಿಗೆ ಕ್ಷಣಕಾಲವೂ ದ್ವೇಷವೆಣಿಸದೆ ಪಶುಬಲದ ಸಕಲ ಸಂಕಷ್ಟಗಳನ್ನು ಸ್ವತಃ ಅನುಭವಿಸುವ ಛಂದವರಿಯುತಿದ್ದರು. ಕೆಲವು ಮಂದಿಗಳು ಶತ್ರುವಿನ ಮೇಲೆ ಕೈಯೆತ್ತದೆ ಪ್ರಾಣವನ್ನು ಬಲಿದಾನ ಕೊಡುವ ಸಂದರ್ಭಗಳು ಬರಬಹುದು

ಹೀಗಾದರೆ ಮಾತ್ರವೇ ಜಗತ್ತಿನ ನೈತಿಕ ಉನ್ನತಿಗೆ ನಾವು ಕಾರ್ಯ ರೂಪಾತ್ಮಕವಾದ ಸೇವೆ ಸಲ್ಲಿಸಿದಂತಾಗುವುದೆಂದು ನಾನು ಧೈರ್ಯದಿಂದ ಹೇಳಬಲ್ಲೆ'

ನನ್ನ ಈ ದೀನ ಉಕ್ತಿಗಳೆರಡು ಐರೋಪ್ಯ ಶಕ್ತಿ ರಾಷ್ಟ್ರಗಳಿಗೆ ಸಲಹೆಗಳಾಗಿದ್ದರೂ ಬಾರತೀಯರಾದ ನಾವೂ ಇದರಿಂದ ಅನೇಕ ವಿಷಯಗಳನ್ನು ಕಲಿಕೊಳ್ಳಬಹುದು 'ನಮ್ಮ ಸ್ವಾತಂತ್ರ್ಯವನ್ನು ನಾವು ಶಸ್ತ್ರಾಸ್ತ್ರಗಳಿಂದಲ್ಲ ಅಹಿಂಸಾತ್ಮಕ ಶಕ್ತಿಯ ಬಲದಿಂದ ಎದುರಿಸುವೆವು ಎಂದು ಈಗಲಾದರೂ ಹೇಳಬಹುದಲ್ಲವೆ?

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದ ಬರುವುವು

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಮುಖವಾಡವನ್ನಾಗಿರಿಸಿ ಗೂಢ ಸ್ವಾರ್ಥವನ್ನು ಸಾಧಿಸುವದಕ್ಕೋಸ್ಕರ ಇಂಗ್ಲಂಡು ಯೂರೋಪದ ಯುದ್ಧದಲ್ಲಿ ಭಾಗಿಯಾಗಿರುವದಿಲ್ಲವೆಂದು ಜಾರ್ಜ ಬಾದಶಹರು ಅಪ್ಪಣೆ ಕೊಡಿಸುತ್ತಾರೆ. ಇಂಗ್ಲಂಡು ಯುದ್ಧಭಾಗಿಯಾಗಿರುವದು, ಕೇವಲ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಸಿದ್ಧಾಂತಗಳ ರಕ್ಷಣೆಗಾಗಿಯಂತೆ! ಮಿ. ವಿನ್ಸೆಂಟ್ ಶೀಯಾನ್ ಎಂಬ ಅಮೆರಿಕದ ಒಬ್ಬ ಪ್ರಸಿದ್ಧ ಲೇಖಕರು ಕರೆಂಟ್ ಹಿಸ್ಟರಿ ಎಂಬ ಪತ್ರಿಕೆಯಲ್ಲಿ ಲೇಖನವನ್ನು ಬರೆದು ಈಗಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯು ಇನ್ನೂ ಅನೇಕ ಯುದ್ಧಗಳು ನಡೆದು ೨೦-೩೦ ವರ್ಷಗಳು ಕಳೆಯುವ ತನಕವೂ ಸುಧಾರಿಸುವದಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿರುವರು.

ಹೊಂದಿಕೆಯಿಲ್ಲದ ಮಾತುಗಳು

ಯೂರೋಪದ ಪ್ರತಿಯೊಂದು ರಾಷ್ಟ್ರದವರೂ ಪರಸ್ಪರ ಹೊಂದಿಕೆಯಾಗದ ಮಾತುಗಳನ್ನು ಆಡುತ್ತಿದ್ದಾರೆ. ಅವರ ಮಾತಿಗೂ ಕೃತಿಗೂ ಪರಸ್ಪರ ಸಂಬಂಧವಿರುವದಿಲ್ಲ. ಬೇರೆಯವರ ದೋಷಗಳನ್ನು ತೋರಿಸಿಕೊಡುವದರಲ್ಲಿ ಸಂತೋಷಪಡುತ್ತಾರೆ; ಆದರೆ ತಮ್ಮ ದೋಷಗಳಿಂದ ಅವರಿಗೆ ಎಳ್ಳಷ್ಟು ದುಃಖವಾಗುವದಿಲ್ಲ. ಜರ್ಮನಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ಬೊಲ್ಶೆವಿಜಮನ್ನು ವಿರೋಧಿಸುವ ಒಂದೇ ಒಂದು ಉದ್ದೇಶವನ್ನಿಟ್ಟುಕೊಂಡು ಜರ್ಮನಿಯಲ್ಲಿ ನೇಶನಲ್ ಸೋಶಿಯಲಿಸ್ಟ್ ಪಾರ್ಟಿಯು ಉದಯವಾಯಿತು. ಹರ್ ಹಿಟ್ಲರನು ಈ ಪಾರ್ಟಿಯ ಸೂತ್ರಧಾರನಾದನು. ಆದರೆ ಈಗ ಅದೇ ಪಾರ್ಟಿ ತನ್ನ ಪರಮ ಶತ್ರುವಾದ ಬೊಲ್ಶೆವಿಕರ ಸ್ನೇಹಕ್ಕಾಗಿ ಹೇಚಾಡುತ್ತದೆ. ರಶ್ಯದ ಬೊಲ್ಶೆವಿಕರ ಆರ್ಥಿಕ ಸಹಾಯ ಬೆಂಬಲಗಳು ಇಲ್ಲದೆ ಹಿಟ್ಲರನು ಪ್ರಕೃತ ಯುದ್ಧದಲ್ಲಿ ಗೆಲ್ಲುವ ಸಂಭವವೇ ಇಲ್ಲ.

ಶಾಂತಿ ರಕ್ಷಕ ರಶ್ಯ

ಜಗತ್ತಿನಲ್ಲಿ ಚಿರಶಾಂತಿಯನ್ನು ಸ್ಥಾಪಿಸುವದೇ ರಶ್ಯದ ಬೊಲ್ಶೆವಿಕ ಸರಕಾರದ ಉದ್ದೇಶವಾಗಿದ್ದಿತು. ಕಳೆದ ೨೦ ವರ್ಷಗಳಿಂದ ಆ ಸರಕಾರವು ಇದೇ ನೀತಿ ಧೋರಣೆಯನ್ನು ಅನುಸರಿಸಿಕೊಂಡು

ಇನ್ನೆರಡು ತಲಾಂತರಗಳ ತನಕ ಯುದ್ಧಗಳು ಮುಗಿಯವು!

ಯುರೋಪಿನ ಯುದ್ಧದ ಕುರಿತು ಅಮೇರಿಕದ ಅಭಿಪ್ರಾಯ

ಬಂದಿದ್ದಿತು. ಇತರ ರಾಷ್ಟ್ರಗಳ ಸ್ವಾತಂತ್ರ್ಯಾಪಹಾರಮಾಡುವ ಉದ್ದೇಶ ಅಥವಾ ಸಾಮ್ರಾಜ್ಯ ಸ್ಥಾಪನೆಯ ಮಹತ್ವಾಕಾಂಕ್ಷೆ ರಶ್ಯ ಸರಕಾರಕ್ಕೆ ಇದ್ದಿರಲಿಲ್ಲ.

ಆದರೆ ಅದೇ ರಶ್ಯ ಸರಕಾರವು ಈಗ ತನ್ನ ಸುತ್ತ ಮುತ್ತಲಿನ ದುರ್ಬಲ ಚಿಕ್ಕ ರಾಷ್ಟ್ರಗಳ ಮೇಲೆ ದಂಡೆತ್ತಿ ಹೋಗಿ ಅವುಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದೆ.



ಜೆರೂಸಲೇಮನ್ನು ದಾಟಿ ಕೆಲವು ಆಸ್ಟ್ರೇಲಿಯನ್ ಸೈನ್ಯದವರು ಪಾಲಿಸ್ತೈನಿಗೆ ಬಂದಿಳಿದಿರುವರು.

ಪೋಲಾಂಡ್, ಫಿನ್ಲಾಂಡ್, ಲಿಥುವೇನಿಯ ಲಿಟವಿಯ, ಎಸ್ತೋನಿಯಗಳನ್ನು ಸ್ವಾಧೀನ ಮಾಡಿಕೊಂಡಿದೆ. ಬಾಲ್ಟಿಕ ರಾಜ್ಯ ಮೇಲೆ ಅದರ ಕಣ್ಣು ಬಿದ್ದೇ ಇದೆ. ಅವನ್ನೂ ಗಬಳಿಸಿಕೊಳ್ಳಲಿಕ್ಕೆ ಕ್ಷುಧಾತುರ ಕರಡಿಯಂತೆ ಹೊಂಚು ಹಾಕಿ ಕೂತುಕೊಂಡಿದೆ.

ನಂಬುವದು ಕಷ್ಟ.

ಆದುದರಿಂದ ಯೂರೋಪದ ಯಾವ ರಾಷ್ಟ್ರವು ಸ್ವಾತಂತ್ರ್ಯಕ್ಕೆ ಅನುಕೂಲ, ಯಾವದು ಪ್ರತಿಕೂಲ; ಯಾರು ನಾಝಿಗಳು, ಯಾರು ಕಮ್ಯೂನಿಸ್ಟರು, ಯಾರ ಮಾತನ್ನು ನಂಬಬೇಕು, ಯಾರ ಮಾತನ್ನು ನಂಬಬಾರದು ಎಂದು ತಿಳಿಯುವದು ಕಷ್ಟವಾಗಿದೆ. ಈ ರಾಷ್ಟ್ರಗಳಲ್ಲಿ ಕುರಿಗಳಿಂದ ಆಡುಗಳನ್ನು, ನರಿಗಳಿಂದ ಸಿಂಹಗಳನ್ನು ಪ್ರತ್ಯೇಕಿಸಲಿಕ್ಕೆ ಆಗುವದಿಲ್ಲ. ಒಮ್ಮೆಗೆ ಪರಮ ಸಾಧುಗಳೂ ಸಜ್ಜನರೂ ಎಂದು ತೋರಿದವರು ಮರುಕ್ಷಣದಲ್ಲಿ ಧೂರ್ತರೂ ಸ್ವಾರ್ಥಿಗಳೂ ಆಗಿ ಕಾಣುತ್ತಾರೆ.

ಅನೇಕ ಯುದ್ಧಗಳಾಗುವವು.

ಯೂರೋಪದ ಈ ಗೊಂದಲವು ದೂರವಾಗಿ ಪ್ರಪಂಚದಲ್ಲಿ ನಿಜವಾದ ಶಾಂತಿಯು ತಲೆದೋರಬೇಕಾದರೆ ಒಂದರ ಹಿಂದೆ ಒಂದರಂತೆ ಅನೇಕ ಯುದ್ಧಗಳು ಆಗಬೇಕಾಗಬಹುದು. ಪ್ರಕೃತ ಯುದ್ಧದಿಂದ ಯೂರೋಪದ ಎಲ್ಲಾ ಪ್ರಶ್ನೆಗಳ ತೀರ್ಮಾನವಾಗಿ ಶಾಂತಿ ಸ್ಥಾಪನೆಯಾಗಲಾರದು. ಈ ಯುದ್ಧಾಂತ್ಯದಲ್ಲಿ ರಾಷ್ಟ್ರ ರಾಷ್ಟ್ರಗಳೊಳಗೆ ಪುನಃ ಅಸಂತುಷ್ಟಿ ಅತೃಪ್ತಿಗಳಾಗುವವು; ಅಂತಃಕಲಹಗಳು ಏಳುವವು. ಸ್ವಲ್ಪ ಸ್ವಲ್ಪ ಸಮಯ ಬಿಟ್ಟು ಪುನಃ ಯುದ್ಧಗಳು ಹೂಡಲ್ಪಡುವವು. ಆದ್ದರಿಂದ ಮುಂದಿನ ಕೆಲವು ವರ್ಷಗಳಲ್ಲಿ ಜಗತ್ತು ಅಂಧಕಾರದಿಂದ ತುಂಬಿರುವದು. ಈ ಕೆಲವು ವರ್ಷಗಳಲ್ಲಿ ನಿಜವಾದ ಪ್ರಜಾ ಪ್ರಭುತ್ವಗಳು ಬದುಕಿ ಉಳಿಯುವದು ಬಹಳ ಕಷ್ಟವಾಗುವದು.

ಜಗದ್ಭಕ್ಷಕ ಸರ್ವಾಧಿಕಾರಿಗಳು.

ಹಿಟ್ಲರ ಮುಸೋಲಿನಿಯವರು ಜಗದ್ಭಕ್ಷಕರಾಗಿ ಯುದ್ಧಕ್ಕೆ ಹೊರಟಿದ್ದಾರೆ. ಹಿಟ್ಲರ್ ಮುಸೋಲಿನಿಯರು ಪರಸ್ಪರ ಮಾತನಾಡಿಕೊಂಡು ಪ್ರಕೃತ ಯುದ್ಧದಲ್ಲಿ ತಾವು ವಿಜಯಿಗಳಾದೆವಾದರೆ ಜಗತ್ತನ್ನು ತಮ್ಮೊಳಗೆ ಹೇಗೆ ಹಂಚಿಕೊಳ್ಳಬಹುದೆಂಬ ಕುರಿತು ಒಂದು ಒಡಂಬಡಿಕೆ ಮಾಡಿಕೊಂಡಿರುವರೆಂದು ಬೊಂಬಾಯಿ ಕ್ರಾನಿಕಲಿನ ಲಂಡನ್ ಸುದ್ದಿಗಾರನು ಬರೆಯುತ್ತಾನೆ. ಯುದ್ಧದಲ್ಲಿ ಜಯಮಾಲಿಕೆ ಈ ಸರ್ವಾಧಿಕಾರಿಗಳ ಕೊರಳಿಗೆ ಬೀಳುವದಾದರೆ ಫ್ರಾನ್ಸಿನ ಉತ್ತರ ಆಫ್ರಿಕದ ಎಲ್ಲಾ ವಸಾಹತುಗಳು, ಅಂದರೆ ಮೊರೊಕ್ಕೊ, ಅಲ್ಜೀರಿಯಾ ಟ್ಯುನೀಸಿಯಗಳನ್ನೂ, ಇಜಿಪ್ತ, ಸೋಮಾಲಿಲ್ಯಾಂಡ್, ಜಿಬ್ರಾಲ್ಟರ, ಸುಯೇಜ ಮತ್ತು ಟ್ಯಾಂಜಿಯರಗಳನ್ನೂ ಮುಸೋಲಿನಿ ತನಗಾಗಿ ಇಟ್ಟುಕೊಳ್ಳುವನು. ಅಲ್ಲದೆ ದಕ್ಷಿಣ ಫ್ರಾನ್ಸಿನ ಒಂದು ದೊಡ್ಡ ತುಂಡೂ ಗ್ರೀಕ್ ದ್ವೀಪಗಳೂ, ಮಾಲ್ಟಾ ಮತ್ತು ಕೊರ್ಸಿಕಗಳೂ ಅವನ ಪಾಲಿಗೆ ಹೋಗುವವು. ದಕ್ಷಿಣ ಆಫ್ರಿಕ, ಪೂರ್ವ ಆಫ್ರಿಕ, ಹಿಂದುಸ್ಥಾನ ಮತ್ತು ಆಸ್ಟ್ರೇಲಿಯ ಮೊದಲಾದ ಬ್ರಿಟಿಷ್ ಸಾಮ್ರಾಜ್ಯದ ಭಾಗಗಳನ್ನು ಹಿಟ್ಲರನು ಜರ್ಮನಿಗೆ ಸೇರಿಸುವನಂತೆ! ಹಿಟ್ಲರ ಮುಸೋಲಿನಿಯರ ಯುದ್ಧ ಉದ್ದೇಶಗಳು ಇವೇ ಆಗಿರುವರಾದರೆ ಈ ಯುದ್ಧಾಂತ್ಯದಲ್ಲಿ ಪ್ರಪಂಚದಲ್ಲಿ ಶಾಂತಿ ಸ್ಥಾಪನೆ ಆಗುವದಾದರೂ ಹೇಗೆ? ಸ್ವಾತಂತ್ರ್ಯ ಪ್ರಿಯ ರಾಷ್ಟ್ರಗಳು ಈ ವ್ಯವಸ್ಥೆಗೆ ಹೇಗೆ ಸದಾಕಾಲ ಒಪ್ಪಿಕೊಂಡು ಇರಬಹುದು?

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ.

HALFTONE & LINE
BLOCK MAKING
UNDERTAKEN.

Sharada Press,
MANGALORE

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ಈ ವಾರದ ಕಥೆ:

ಭಾಗ್ಯ!

ಲೇಖಕ: ಕೆ. ಶ್ರೀನಿವಾಸ ಶೆಣ್ಯೆ ಕಾರ್ಕಳ.

ರಾಮಣ್ಣ ತೋಟದಲ್ಲಿ ಮಣ್ಣು ಅಗೆಯುತ್ತ ಇದ್ದ. ಅಷ್ಟರಲ್ಲಿ ಚರ ಚರ ಎಂದು ಮೆಟ್ಟಿನ ಶಬ್ದ ಮಾಡುತ್ತ ಯಾರೋ ಬರುವುದನ್ನು ಅವನು ತಿರುಗಿ ನೋಡಿದ. ಅಷ್ಟು ದೂರದಲ್ಲಿ ಹೇಟು-ಬೂಟ್ಸ್-ಸೂಟು ಹಾಕಿಕೊಂಡಿದ್ದ ಒಬ್ಬ ಕರಿ ದೊರೆ ಎದುರು ನಿಂತಿದ್ದ. ರಾಮಣ್ಣ ಹೆದರುತ್ತ ನೆಟ್ಟಗೆ ನಿಂತು—'ಸ್ವಾಮಿ, ನಮಸ್ಕಾರ, ಕ್ಷಮಿಸಬೇಕು' ಎಂದ.

ದೊರೆ—'ರಾಮಣ್ಣ! ೨೦ ವರ್ಷಗಳ ಮೊದಲು ರಾಜಾ ಜಗದೀಶಸಿಂಗರ ತೋಟದಲ್ಲಿ ಕೆಲಸಕ್ಕಿದ್ದಿಯಲ್ಲವೆ? ನೆನಪಿದೆಯೆ?'

'ಸ್ವಾಮಿ, ಆ ಮಹಾತ್ಮರನ್ನು ಹೇಗೆ ಮರೆಯಬಹುದು? ಅವರು ಮನುಷ್ಯರಲ್ಲ, ತಮ್ಮ ಎಲ್ಲವನ್ನೂ ಕೊಟ್ಟು ದೀನ ದರಿದ್ರರ ಸೇವೆ ಮಾಡುತಿದ್ದರು'.

'ಅವರು ಈಗ ಸ್ವರ್ಗಸ್ಥರಾಗಿದ್ದಾರೆಂಬುದನ್ನು ಕೇಳಿದ್ದೀಯಾ?'

'ಹೌದು, ಸ್ವಾಮಿ, ಅವರು ಆರೋಗ್ಯ ಲಾಭಕ್ಕಾಗಿ ವಿಲಾಯತಿಗೆ ಹೋಗಿದ್ದರು. ಆದರೆ ಅಲ್ಲಿ ಎಷ್ಟು ಉತ್ತಮವಾದ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ ಏನು ಮಾಡಲಿ, ಇಂಥ ಪುಣ್ಯಾತ್ಮರು ಮನುಷ್ಯ ಲೋಕದಲ್ಲಿ ಇರಲು ಯೋಗ್ಯರಲ್ಲವೆಂದು ತಿಳಿದು ದೇವರು ಅವರನ್ನು ತಮ್ಮ ಲೋಕಕ್ಕೆ ಕರೆಸಿಕೊಂಡರು. ಸ್ವಾಮಿ, ತಾವು ಅವರ ಸಂಬಂಧಿಗಳೆ?'

'ಅಲ್ಲ, ನಾನು ಅವರ ವಕೀಲ, ಸಾಯುವ ಮೊದಲು ಒಂದು ವಿಲ್ ಬರೆದು ಹೋಗಿದ್ದಾರೆ.'

'ಗೊತ್ತಾಯಿತು, ನಮ್ಮೂರ ಶಾಲೆಗೆ ಏನಾದರೂ ಉಂಬಳಿ ಬಿಟ್ಟಿರಬಹುದು, ಅವರು ಧರ್ಮಾತ್ಮರು. ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ಹಣ ಖರ್ಚು ಮಾಡುತಿದ್ದರು.'

'ನಿಜ, ಶಾಲೆಗೆ ಮಾತ್ರವಲ್ಲದೆ, ನಿನಗೂ ಸ್ವಲ್ಪ ಹಣ ಕೊಡಬೇಕೆಂದು ವಿಲ್ಲಿನಲ್ಲಿ ಬರೆದಿದ್ದಾರೆ ಇಗೋ, ತಗೊಳ್ಳು; ವೃದ್ಧಾಪ್ಯದಲ್ಲಿ ಸುಖಜೀವನಕ್ಕೆ ಒಂದು ಉಪಾಯವಾಯಿತು.'

ಒಂದು ಕ್ಷಣದ ತನಕ ರಾಮಣ್ಣನಿಗೆ ತನ್ನ ಕಿವಿಗಳನ್ನೇ ನಂಬುವುದಾಗಲಿಲ್ಲ ಅವನ ಭಾಗ್ಯೋದಯವು ಹೀಗೆ ಒಮ್ಮಿಂದೊಮ್ಮೆಗೆ ಆಗುವುದೆಂದು ಅವನು ಕನಸಿನಲ್ಲಿಯೂ ಎಣಿಸಿರಲಿಲ್ಲ. ಆ ಮೇಲೆ ವಕೀಲರಿಗೆ ನಮಸ್ಕಾರ ಮಾಡಿ, ನಡುಗುವ ಕೈಗಳಿಂದ ರೂಪಾಯಿಯ ಥೈಲಿಯನ್ನು ತೆಗೆದುಕೊಂಡನು. ಅವನು ಕೇಳಿದ—'ಸ್ವಾಮಿ ಇದರಲ್ಲಿ ಎಷ್ಟು ರೂಪಾಯಿಗಳಿವೆ?'

'ಮೂರು ಸಾವಿರ' ಎನ್ನುತ್ತ ವಕೀಲರು ರಶೀದಿ ತೆಗೆದುಕೊಂಡು ಹೊರಟು ಹೋದರು.

*

ಈಗ ರಾಮಣ್ಣನ ಮಾನಸಿಕ ನೇತ್ರಗಳ ಮುಂದೆ ಅವನ ತಾರುಣ್ಯದ ಚಿತ್ರಪಟವು ಚಲಿಸತೊಡಗಿತು. ಬಾಲ್ಯದಿಂದಲೂ ಅವನು ಜಗದೀಶ ಸಿಂಹರಲ್ಲಿ ನೌಕರಿಯನ್ನು ಆರಂಭಿಸಿದ್ದ. ನಾಲ್ಕೈದು ವರ್ಷಗಳಲ್ಲಿ ಅವನಿಗೆ ತಿಂಗಳಿಗೆ ೨೦ ರೂಪಾಯಿ ದೊರೆಯಲಾರಂಭಿಸಿದ್ದವು. ತಾರುಣ್ಯದ ಉಬ್ಬರದಲ್ಲಿ ರಾಮಣ್ಣ ಕೈಗೆ ಸಿಕ್ಕಿದುದನ್ನೆಲ್ಲಾ ಖರ್ಚು ಮಾಡುತಿದ್ದ ವಿವಾಹದ ಯೋಚನೆಯೇ ಅವನಿಗೆ ಆಗಿರಲಿಲ್ಲ. ಆದರೆ ಯಾವಾಗ ಜಗದೀಶ ಸಿಂಹರು ಅಸ್ವಸ್ಥರಾದರೋ ಅವರು ಚಿಕಿತ್ಸೆ ಮಾಡಿಕೊಳ್ಳಲಿಕ್ಕೆ ವಿಲಾಯತಿಗೆ ಹೋದರು ಇನ್ನೊಬ್ಬ ನೌಕರ ಅವರ ಆಸ್ತಿಪಾಸ್ತಿಯ ಮೇಲು ವಿಚಾರ ತೆಗೆದುಕೊಳ್ಳತೊಡಗಿದ ಅವನಿಗೂ ರಾಮಣ್ಣನಿಗೂ ಮನಸ್ಸು ಕೂಡಿ ಬರಲಿಲ್ಲ. ಅದುದರಿಂದ ರಾಮಣ್ಣ ಕೆಲಸಬಿಟ್ಟು ಹೊರಟು ಬಂದ ಬಹಳ ಹುಡುಕಿದ ಮೇಲೆ ಈಗಿನ ನೌಕರಿ ಸಿಕ್ಕಿತು. ಆ ತೋಟ ಬಹು ಚಿಕ್ಕ ವಿಶಾಲವಾಗಿತ್ತು ಅದರಲ್ಲಿ ಮಾವು, ಹಲಸು, ಲಿಂಬೆ, ದಾಳಿಂಬ ಮೊದಲಾದ ಎಲ್ಲಾ ಜಾತಿಯ ಮರಗಳಿದ್ದುವು ಪೂರ್ವದ ಕಡೆ ಒಂದು ಮೂಲೆಯಲ್ಲಿ ರಾಮಣ್ಣನ ಗುಡಿಸಲು ಇದ್ದಿತು. ಅದರ ಬಳಿಯೇ ಕಟ್ಟಿದ್ದ ಒಂದು ದೊಡ್ಡ ಗುಡಿಸಲಿನಲ್ಲಿ ಕೂಲಿಗಾರರ ಮೇಸ್ತ್ರಿ ಭೀಮಣ್ಣ ಇರುತಿದ್ದ ರಾಮಣ್ಣ, ಬೆಳಿಗ್ಗೆ ೬ ಗಂಟೆಯಿಂದ ಸಾಯಂಕಾಲ ೬, ೭ರ ತನಕ ಕೆಲಸ ಮಾಡಿದಾಗ ಎಲ್ಲಿಯಾದರೂ ದಿನಕ್ಕೆ ನಾಲ್ಕಾಣೆ ಕೂಲಿ ದೊರೆಯುತಿತ್ತು ಈಗ ರಾಮಣ್ಣನ ಪ್ರಾಯವೂ ಕುಂದುತ್ತ ಬಂದಿತ್ತು ಮೊದಲಿನಂತೆ ಕೆಲಸ ಮಾಡಲಿಕ್ಕೆ ಅವನಿಂದ ಆಗುತ್ತಿರಲಿಲ್ಲ ಮೂರು ಸಾವಿರ ರೂಪಾಯಿಗಳ ದೊಡ್ಡ ಗಂಟು ಪಡೆದು ಅವನು ಪರಮಾನಂದ ಭರಿತನಾದನು ಹೃದಯ ಮನಸ್ಸುಗಳಿಂದ ಪರಮಾತ್ಮನಿಗೆ ಧನ್ಯವಾದ ಕೊಟ್ಟನು.

*

ಸಾಯಂಕಾಲವಾಗುತ್ತ ಬಂದಿತು. ರಾಮಣ್ಣನಿಗೆ ರೂಪಾಯಿ ಎಲ್ಲಿಡಲೆಂಬ ಚಿಂತೆ ಹತ್ತಿತು ತನ್ನ ಗುಡಿಸಲಿನಲ್ಲಿ ಅಷ್ಟು ದೊಡ್ಡ ಹಣದ ಗಂಟು ಇಡುವದು ಚೆನ್ನಾಗಿರಲಿಲ್ಲ. ಆ ಗುಡಿಸಲಿಗೆ ಬೀಗ ಇರಲಿಲ್ಲ ಕೀಲು ಇರಲಿಲ್ಲ ಅಲ್ಲದೆ ಭೀಮಣ್ಣನ ಪೋಕ್ರಿ ಹುಡುಗ ಯಾವಾಗಲೂ ಬಂದು ಅವನ ಗುಡಿಸಲಿನ ತಲಾಶಿ ಮಾಡುತ್ತ ಇದ್ದ ಒಂದು ದಿನಕ್ಕಾಗಿ ಎಲ್ಲಿಯಾದರೂ ಬೇರೆ ಕಡೆ ಇಡಬೇಕೆಂದು ಅವನು ನಿಶ್ಚಯಮಾಡಿದ ಆ ರಾತ್ರಿ ಕಳೆಯಿತೆಂದರೆ, ಲೆಕ್ಕಾಚಾರ ಕೈಡು ಮಾಡಿ ಅವನು ಕೆಲಸ ಬಿಟ್ಟು ಬೇರೆ ಊರಿಗೆ ಹೋಗುವೆನೆಂದು ನಿಶ್ಚಯ ಮಾಡಿದ್ದ ಆದುದರಿಂದ ಸೂರ್ಯನು ಮುಳುಗಿ ನಾಲ್ಕು ಕಡೆ ಕತ್ತಲೆ ತುಂಬಿದೊಡನೆ ಅವನು ಎದ್ದು ತೋಟಕ್ಕೆ ಹೋದ ಅಲ್ಲಿ ಒಣಗಿದ ಒಂದು ಮಾವಿನ ಮರವಿದ್ದಿತು. ಅದರಲ್ಲಿ ಒಂದು ಪೊಟ್ಟರೆ ಇದ್ದಿತು ಅದರೊಳಗೆಯೇ ಹಣದ ಥೈಲಿ ಇಟ್ಟು ಅವನು ಮರಳಿದ

ಯಾರೂ ಇದನ್ನು ನೋಡಿಲ್ಲವೆಂದು ರಾಮಣ್ಣ ಎಣಿಸಿದ್ದ ಆದರೆ ಭೀಮಣ್ಣನ ಪೋಕರಿ ಹುಡುಗನಿಗೆ ಎಲ್ಲವೂ ಗೊತ್ತಾಗಿತ್ತು ಅವನು ಸಾಯಂಕಾಲದ ಸಮಯ ತೋಟದಲ್ಲಿ ಆಡುತ್ತ ಇದ್ದ ರಾತ್ರಿ ಆಗುವಾಗ ಆ ದಿನ ಮಾತ್ರ ರಾಮಣ್ಣ ತೋಟದೊಳಗೆ ಹೋದುದನ್ನು ನೋಡಿ, ಹುಡುಗನಿಗೆ ಆಶ್ಚರ್ಯವಾಗಿತ್ತು. ಮರ-ಮರಗಳ ಹಿಂದೆ ಅವಿತುಕೊಳ್ಳುತ್ತ ಅವನು ರಾಮಣ್ಣನನ್ನು ಹಿಂಬಾಲಿಸಿ ಬಂದಿದ್ದ. ರಾಮಣ್ಣ ಹೊರಟುಹೋದ ಮೇಲೆ ಆ ಹಳೆಯ ಮಾವಿನ ಮರವನ್ನು ಹತ್ತಿ ಪೊಟ್ಟರೆಯೊಳಗೆ ಕೈಹಾಕಿದ. ದೊಡ್ಡ ಒಂದು ಗಂಟು ದೊರೆಯಿತು. ಅವನ ಆಶ್ಚರ್ಯಕ್ಕೆ ಪಾರವುಳಿಯಲಿಲ್ಲ. ಗಂಟು ತೆಗೆದುಕೊಂಡು ಮನೆಗೆ ಓಡಿದ. ಭೀಮಣ್ಣ ಅದನ್ನು ನೋಡಿ—'ಓಹೋ, ಎಲ್ಲಿಂದಲೋ ಕದ್ದು ತಂದಿದ್ದಾನೆ. ಇದರ ಮೇಲೆ ರಾಮಣ್ಣನಿಗೆ ಯಾವ ಅಧಿಕಾರ? ಇದು ನಮ್ಮ ಹತ್ತಿರವೇ 'ಇರಲಿ' ಎಂದು-ಮನಸ್ಸಿನೊಳಗೆ ಅಂದುಕೊಂಡು ತನ್ನ ಬಳಿ ಇಟ್ಟುಕೊಂಡ.

ಆ ರಾತ್ರಿ ಮತ್ತೆ ಅವರೊಳಗೆ ಯಾವ ಮಾತೂ ನಡೆಯಲಿಲ್ಲ ಮರುದಿನ ಬೆಳಗ್ಗೆ ರಾಮಣ್ಣ ಬಂದು—'ಭೀಮಣ್ಣ, ಊರಿನಿಂದ ಕಾಗದ ಬಂದಿದೆ ಕೂಡಲೇ ಹೊರಟು ಬರಬೇಕಂತೆ. ಅಗತ್ಯದ ಕೆಲಸವುಂಟಂತೆ. ಲೆಕ್ಕಾಚಾರ ಮಾಡಿ ನನ್ನ ಬಾಕಿ ಹಣ ಕೊಡು ಕೆಲವೇ ದಿನಗಳಲ್ಲಿ ತಿರುಗಿ ಬರುತ್ತೇನೆ' ಎಂದ

ಭೀಮಣ್ಣ ಲೆಕ್ಕಮಾಡಿ ಹಣಕೊಟ್ಟ. ರಾಮಣ್ಣ ಅದನ್ನು ತೆಗೆದುಕೊಂಡು ಊರಿಗೆ ಹೊರಟ ಭೀಮಣ್ಣ ಮತ್ತು ಅವನ ಪೋಕರಿ ಹುಡುಗ ರಾಮಣ್ಣನನ್ನು ಮಡಬಾಗಿಲಿನ ತನಕ ಕಳುಹಿಸಿಕೊಟ್ಟು ಹಿಂದಕ್ಕೆ ಬಂದರು.

'ಅಪ್ಪಾ' ಈಗ ಹೋಗಿ ಅವನ ಹಣದ ಗಂಟನ್ನು ಹುಡುಕುವನು ಅದು ಅವನಿಗೆ ಸಿಕ್ಕುವದಿಲ್ಲ ಪೋಲೀಸಿಗೆ ಫಿರ್ಯಾದಿ ಕೊಟ್ಟರೆ. . ? ಎಂದು ಹುಡುಗ ತಂದೆಯನ್ನು ಕೇಳಿದ

'ಯಾವುದಕ್ಕೂ ಹೆದರಬೇಡ. ಪೋಲೀಸರು ಬಂದು ಎಷ್ಟು ಹುಡುಕಿದರೂ ಗಂಟು ಅವರಿಗೆ ದೊರೆಯುವಂತೆ ಇಲ್ಲ'

'ಎಲ್ಲಿ ಅಡಗಿಸಿ ಇಟ್ಟಿದ್ದಿ, ಅಪ್ಪಯ್ಯಾ?'

'ಯಾರಿಗೂ ಹೇಳಬೇಡ, ಜಾಗ್ರತೆ ಇರಲಿ ನೋಡು, ತೋಟದಲ್ಲಿ ಹಳೆಯ ಮಾವಿನ ಮರ ಇದೆಯಲ್ಲ? ಅದರ ಪೊಟರೆಯಲ್ಲಿ ಇಟ್ಟಿದ್ದೇನೆ'

ಅಯ್ಯೋ ಅಪ್ಪಯ್ಯಾ, ಏನುಮಾಡಿದಿ?' ಎಂದು ಸಿಡಿಲು ಬಡಿದವನ ಹಾಗೆ ಹುಡುಗ ಅರಚಿ ಹೇಳಿದ—'ರಾಮಣ್ಣ ಅದರಲ್ಲಿಯೇ ಆ ಗಂಟನ್ನು ಅಡಗಿಸಿ ಇಟ್ಟಿದ್ದ. ನಿನಗೆ ಮೊದಲು ಹೇಳಲಿಕ್ಕೆ ಮರೆತಿದ್ದೆ. ಈಗ ಏನು ಮಾಡಲಿ? ನಾವು ಹೋಗುವಷ್ಟರಲ್ಲಿ ಅವನು ಹಣ ತೆಗೆದುಕೊಂಡು, ಅಲ್ಲಿಂದ ಹೊರಟುಹೋಗಬಹುದು.'

ಆದರೂ ಅವರು ಅಲ್ಲಿ ಹೋಗಿ ನೋಡಿದರು. ಪೊಟರೆಯೊಳಗೆ ಗಂಟು ಇರಲಿಲ್ಲ. ಅದನ್ನು 'ರಾಮಣ್ಣ ತೆಗೆದುಕೊಂಡು ಹೋಗಿ ಸಮಯ ಆಗಿತ್ತು. ತನ್ನ ಹಾಕಲಿಕ್ಕೆ ಬಂದ ಕಳ್ಳನ ಕೈಗೆ, ಚೇಳು ಕಡಿದರೆ ಹೇಗಾಗುತ್ತದೋ, ' ಹಾಗೆ ಭೀಮಣ್ಣ ಮತ್ತು ಅವನ ಪೋಕರಿ ಹುಡುಗನ ಸ್ಥಿತಿ ಆಯಿತು.

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri.

Fixed Deposits will be received at following rates of interest.

For 3 months	3¼%
„ 6 „	4%
„ 12 „	5%
„ 24 „ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

ವಿಮಾನದಾಳಿಗಳಿಂದ ಕಾಪಾಡಿಕೊಳ್ಳಲಿಕ್ಕೆ ಚರಕವೇ ನಮ್ಮ ಸಾಧನೋಪಾಯ!

ಒಪ್ಪೊತ್ತು ಅನ್ನವಿಲ್ಲದವರ ಹೊಟ್ಟೆತುಂಬುವದೂ ಅದರಿಂದ ಗುಲಾಮದೇಶವು ಸ್ವತಂತ್ರವಾಗುವುದೂ ಅದರಿಂದ!

ಮಹಾತ್ಮಾಗಾಂಧಿಯವರ ಧುರೀಣತ್ವದ ಪರಿಣಾಮವಾಗಿ ನೂಲುವ ಮತ್ತು ನೇಯುವ ಕಲೆಗಳು ನಮ್ಮ ದೇಶದಲ್ಲಿ ಸರ್ವಜನಪ್ರಿಯವಾಗುತ್ತಲಿರುವವು. ಜನರು ಸಾಂಪತ್ತಿಕ ಉನ್ನತಿಗಾಗಿ ಹಿಂದುಸ್ಥಾನವು ಮಾತ್ರವಲ್ಲ ಯುದ್ಧಾಸಕ್ತವಾಗಿರುವ ಯೂರೋಪೂ, ಈ ವಿಷಯದಲ್ಲಿ ಭಾರತದ ಅನುಕರಣೆ ಮಾಡಿ ತನ್ನನ್ನು ಶತ್ರುಪಕ್ಷದ ವಿಮಾನಧಾಳಿಗಳಿಂದ ಕಾಪಾಡಿಕೊಳ್ಳಬೇಕಾಗುವದು(!) ಎಂದು ಶ್ರೀ ಉದ್ಯಾವರರು ಮರಾಠಾ ಪತ್ರಿಕೆಯಲ್ಲಿ ಒಂದು ವಿಚಾರ ಪರಿಪ್ಲುತವಾದ ಲೇಖನದಲ್ಲಿ ಬರೆದಿರುವರು.

ಯೂರೋಪದಲ್ಲಾಗುತ್ತಿರುವ ಭಯಂಕರ ಯುದ್ಧದ ಫಲವೆಂಬಂತೆ ಯಾಂತ್ರಿಕ ಯುಗವು ಕೊನೆಗಾಣುವದರಲ್ಲಿದೆ ಎಂಬುದು ನಮಗೆ ಸ್ಪಷ್ಟವಾಗುವದಿಲ್ಲವೆ? ಪ್ರಕೃತ ಯುದ್ಧವು ಯಾಂತ್ರಿಕ ಯುಗದ ಪ್ರಬಲ ಶತ್ರುವಾಗಿರುವದು. ಯೂರೋಪದ ಯುದ್ಧದಲ್ಲಿ ಯಾವ ಪಕ್ಷವು ಗೆದ್ದರೂ ಪಾಶ್ಚಾತ್ಯ ನಾಗರೀಕತೆಯು ಈ ಯುದ್ಧದಿಂದ ನಿರ್ನಾಮವಾಗುವದೆಂಬುದರಲ್ಲಿ ಸಂದೇಹವಿಲ್ಲ. ಯೂರೋಪಕ್ಕೆ ಬಂದ ಗಂಡಾಂತರದ ಒಂದು ಪಾಲು ನಮ್ಮ ದೇಶದ ದೊಡ್ಡ ನಗರಗಳಿಗೂ ಬರಬಹುದು. ನಮ್ಮ ದೇಶದ ಶಹರುಗಳಲ್ಲಿ ವಾಸಿಸುವ ಜನರು ಈ ದೇಶದ ಹಳ್ಳಿಪಳ್ಳಿಗಳಲ್ಲಿ ಚೆದರಿಹೋದ ಹೊರತು ಅವರನ್ನು ರಕ್ಷಿಸುವ ಬೇರೆ ಉಪಾಯವೇ ಇರುವದಿಲ್ಲ. ದೊಡ್ಡ ಪಟ್ಟಣಗಳ ಅಸಂಖ್ಯಾತ ಕೆಲಸಗಾರರು ಹಳ್ಳಿಪಳ್ಳಿಗಳಿಗೆ ಹೋಗುವ ಸಂದರ್ಭದಲ್ಲಿ ನೂಲುವದು ಮತ್ತು ನೇಯುವದು ಇವೆರಡೇ ಅವರು ಅವಲಂಬಿಸಬಹುದಾದ ಜೀವನ ವೃತ್ತಿಗಳಾಗಿರುವವು. ಕೆಲವು ಜನರು ಬೇಸಾಯವನ್ನು ಅವಲಂಬಿಸಬಹುದು ಇವು ಹೊರತು ಅವರಿಗೆ ಜೀವನ ನಿರ್ವಾಹದ ಬೇರೆ ಉಪಾಯಗಳೇ ಇರುವದಿಲ್ಲ. ಆದುದರಿಂದ ಶತ್ರುಪಕ್ಷದ ವಿಮಾನಧಾಳಿಗಳಿಂದ ಕಾಪಾಡಿ ಜನರು ಸುಖಿಗಳೂ ಶಾಂತರೂ ಆಗಿ ಇರಲಿಕ್ಕೆ ಚರಕವು ಮುಖ್ಯ ಸಾಧನವಾಗಿರುವದೆಂಬ ಮಾತಿನಲ್ಲಿ ಅತಿಶಯೋಕ್ತಿ ಇರುವದಿಲ್ಲ.

ಚರಕದ ಲಾಭ

ಚರಕವು ಅತ್ಯಂತ ಸುಲಭವಾದ ಒಂದು ಯಂತ್ರವಾಗಿದೆ. ಅದರಿಂದ ಸಿದ್ಧವಾಗುವ ಸಾಮಗ್ರಿಗಳಿಗೆ ಬೆಲೆ ಬರಲಿಕ್ಕೇ ಬೇಕು. ಮಹಾತ್ಮಾ ಗಾಂಧಿಯವರು ಗ್ರಾಮೋದ್ಯೋಗಗಳ ಪುನರುದ್ಧಾರ ಕಾರ್ಯದಲ್ಲಿ ತೊಡಗಿದಂದಿನಿಂದ ನಮ್ಮ ದೇಶದಲ್ಲಿ ನೂಲುವ ಮತ್ತು ನೇಯುವ ಕಲೆಗಳು ಜೀವಿಸಿರುವಂತಾಗಿರುವದು ಮಾತ್ರವಲ್ಲದೆ ಅವು ಸರ್ವತ್ರ ಜನಪ್ರಿಯವಾಗುತ್ತಲೂ ಇವೆ. ಚರಕದ ಪ್ರಚಂಡ ಶಕ್ತಿಯನ್ನು ತಿಳಿದೇ ಇಂಗ್ಲಾಂಡಿನ ಜನರು ಬೇಸಾಯ ಮತ್ತು ಗ್ರಾಮೋದ್ಯೋಗಗಳಲ್ಲಿ ಹೆಚ್ಚು ಲಕ್ಷವನ್ನು ಕೊಡಬೇಕಾಗಿದೆ ಎಂದು ಅಲ್ಲಿಯ ಮುಖಂಡರು ಹೇಳಲಾರಂಭಿಸಿದ್ದಾರೆ. ಯೂರೋಪದ ಇತರ ರಾಷ್ಟ್ರಗಳೂ, ವಿಮಾನಧಾಳಿಗಳಿಂದ ತಮ್ಮನ್ನು ಕಾಪಾಡಿಕೊಳ್ಳಲಿಕ್ಕೆ ಚರಕವು ಪ್ರಬಲ ಶಸ್ತ್ರವಾಗಿರುವದೆಂದು ತಿಳಿಕೊಳ್ಳತೊಡಗಿರುವರು. ಚರಕದ ಪ್ರಚಾರದಿಂದ ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿ ಒಂದು ನವೀನ ಸಮಾಜರಚನೆಯಾಗುವದು. ಅದರ ಶ್ರೇಯಸ್ಸಿಗೆ ಮಹಾತ್ಮಾಜೀಯವರು ದೊಡ್ಡ ಪಾಲುಗಾರರಾಗುವರು.

ಹಿಂದುಸ್ಥಾನದ ಒಂದು ವೈಶಿಷ್ಟ್ಯವಿದೆ ಅದರ ನಾಗರಿಕತೆಯೂ ಸಭ್ಯತೆಯೂ ಪಾಶ್ಚಾತ್ಯ ನಾಗರಿಕತೆ ಸಭ್ಯತೆಗಳಿಂದ ಭಿನ್ನವಾಗಿದೆ. ಈ ವೈಶಿಷ್ಟ್ಯದ ಮೂಲಕ ಯುದ್ಧದಲ್ಲಿ ಹಿಂದುಸ್ಥಾನವು ಪಾಶ್ಚಾತ್ಯ ರಾಷ್ಟ್ರಗಳನ್ನು ಕಷ್ಟನಷ್ಟಗಳಿಗೆ ಗುರಿಯಾಗದು. ಚರಕದ ಮೂಲಕ ಅದು ಪಾಶ್ಚಾತ್ಯರ ಎಲ್ಲಾ ವಿನಾಶಕಾರಿ ಶಸ್ತ್ರಾಸ್ತ್ರಗಳ ಪ್ರಯೋಗಗಳಿಗೆ ಎದೆಕೊಟ್ಟು ಬದುಕಿರಲಿಕ್ಕೆ ಸಮರ್ಥವಾಗುವದು. ಯುದ್ಧದ ಹಾನಿಗಳಿಂದ ಹಿಂದುಸ್ಥಾನವನ್ನು ಕಾಪಾಡಲಿಕ್ಕೆ ಚರಕವೊಂದೇ ಸಾಧನವಾಗಿದೆ.

ಹಸಿದವರಿಗೆ ಒಂದು ತುತ್ತು

ಬ್ಯಾಸಿಕಲುಗಳ ಮೇಲೆ ಸವಾರಿಹೊರಟಿದ್ದ ಕೆಲವು ಜನ ಯುವಕರು ವಾರ್ಧಾಕ್ಕೆ ಬಂದಿದ್ದರು. ಅವರು ಶ್ರೀ ಮಹಾದೇವದೇಸಾಯರ ಭೇಟಿ ತೆಗೆದುಕೊಳ್ಳಲು ಹೋದಾಗ ಶ್ರೀ ದೇಸಾಯರು ಚರಕದಲ್ಲಿ ನೂಲು ತೆಗೆಯುತ್ತಿದ್ದರು. 'ಚರಕದಿಂದ ಕೆಲವು ಜನ ವೃದ್ಧರಿಗೆ ದಿನಕ್ಕೆ ಒಂದಾಣೆ ಎರಡಾಣೆಗಳಂತೆ ಕೂಲಿ ದೊರೆಯಬಹುದು ಆದರೆ ಚರಕದ ಮೂಲಕ ಸ್ವರಾಜ್ಯ ದೊರೆಯುವದು ಹೇಗೆ' ಎಂದು ಆ ಯುವಕರು ಕುತೂಹಲದಿಂದ ಶ್ರೀ ದೇಸಾಯರನ್ನು ಪ್ರಶ್ನಿಸಿದರು ಅದಕ್ಕೆ ದೇಸಾಯರು ಕೊಟ್ಟ ಉತ್ತರವು ಚರಕದ ಅಮೋಘವಾದ ಶಕ್ತಿಯನ್ನು ತೋರಿಸಿಕೊಡುತ್ತದೆ.

'ಲಕ್ಷಗಟ್ಟಲೆ ಜನಗಳು ಚರಕದಲ್ಲಿ ನೂಲುತ್ತಿದ್ದರೂ ಹಿಂದುಸ್ಥಾನಕ್ಕೆ ಸ್ವರಾಜ್ಯವು ಬರಲಾರದು. ೧೫೦ ವರ್ಷಗಳ ಮೊದಲು ಬಹುಸಂಖ್ಯಾಕ ಜನರು ಚರಕದಲ್ಲಿ ನೂಲುತ್ತಿದ್ದರು. ಆದರೆ ಆಗಲೂ ದೇಶವು ಪರತಂತ್ರವಾಗಿದ್ದಿತು. ಚರಕದ ಮೂಲಕ ಸ್ವರಾಜ್ಯವು ಬರಬೇಕಾದರೆ ಸರಿಯಾದ ಭಾವನೆಯಿಂದ ನೂಲಬೇಕು. ಹೇಗೆ ನೂತರೂ ಚರಕದಿಂದ ಲಕ್ಷಾಂತರ ಹಸಿದ ಜನರಿಗೆ ಒಂದು ತುತ್ತು ಅನ್ನ ದೊರೆಯುವದರಲ್ಲಿ ಸಂದೇಹವಿಲ್ಲ. ಚರಕದಲ್ಲಿ ನೂಲುತ್ತಿರುವದರ ಮೂಲಕ ನಾವು ಹೆಚ್ಚು ಪರಿಶ್ರಮಿಗಳೂ, ಶಿಸ್ತುಳ್ಳವರೂ ಸರಳಜೀವಿಗಳೂ, ಉತ್ತಮ ವಿಚಾರಿಗಳೂ ಸತ್ಯವಂತರೂ, ಅಹಿಂಸಕರೂ ಆಗುವೆವಾದರೆ ಮಾತ್ರ ಅದರ ಮೂಲಕ ನಮಗೆ ಸ್ವರಾಜ್ಯಬರುವದು. ಪರಂತು ಸರಿಯಾದ ಭಾವನೆಯಿಂದ ಚರಕದಲ್ಲಿ ನೂತರೆ ಚರಕವು ಈ ಗುಣಗಳನ್ನು ನಮಗೆ ಕೊಡಲು ಶಕ್ತವಾಗಿದೆ.

'ಈ ಗುಣಗಳು ಯಾಕೆಂದು ನೀವು ಕೇಳಬಹುದು. ಕಾಯದೆ ಭಂಗದ ಸಫಲ ಆಂದೋಲನವನ್ನು ಹೂಡಲಿಕ್ಕೆ ಈ ಗುಣಗಳು ಅತ್ಯಂತ ಆವಶ್ಯಕವಾಗಿದೆ. ಕಾಯಿದೆ ಭಂಗವು ಸಫಲವಾದರೆ ಅದು ನಮ್ಮನ್ನು ಸ್ವರಾಜ್ಯಕ್ಕೆ ಯೋಗ್ಯರನ್ನಾಗಿ ಮಾಡುವದು. ಕಳೆದ ಇಪ್ಪತ್ತು ವರ್ಷಗಳ ಇತಿಹಾಸವು ಇದಕ್ಕೆ ಪ್ರಮಾಣವಾಗಿದೆ ಇಪ್ಪತ್ತು ವರ್ಷಗಳ ಮೊದಲು ನಮ್ಮ ದೇಶದ ಜನರು ಪೋಲೀಸರ ಕೆಂಪು ಪಗಡಿಗಳನ್ನು ಕಣ್ಣೆತ್ತಿ ನೋಡಲಾರದಷ್ಟು ಅಂಜುಬುರುಕರಾಗಿದ್ದರು ತಮಗಾದ ಅನ್ಯಾಯದ ತಕ್ಕ ಪ್ರತಿಕಾರ ಮಾಡಲು ಅವರಲ್ಲಿ ಶಕ್ತಿ ಇದ್ದಿತಾದರೂ ಧೈರ್ಯ ಸಾಹಸಗಳಿರಲಿಲ್ಲ ಆದರೆ ಈಗ ಪರಿಸ್ಥಿತಿಯು ತುಂಬಾ ಬದಲಾಗಿರುವದು ಈಗ ಸರಕಾರ ನೌಕರರು ತಮ್ಮ ಜನರ ಯಜಮಾನರೆಂದು ಅವರನ್ನು ಮೆಟ್ಟಿಕೊಂಡು ಆಳುತ್ತಿರುವದಿಲ್ಲ. ಆದರೆ ಅವರು ತಮ್ಮನ್ನು ಜನರ ಸೇವಕರೆಂದು ತಿಳಿದು ನಮ್ರರಾಗಿ ಕಾರ್ಯನಿರ್ವಾಹ ಮಾಡುತ್ತಾರೆ

ಬಾರ್ಡೋಲಿಯನ್ನು ನೋಡಿರಿ.

ಬಾರ್ಡೋಲಿ ಅಥವಾ ಬೊರ್ಸಾದಾಕ್ಕೆ ಯಾರಾದರು ಹೋಗಿ ನೋಡುವರಾದರೆ ಅವರಿಗೆ ಈ ಸಂಗತಿಯು ಚೆನ್ನಾಗಿ ತಿಳಿಯುವದು. ಬಾರ್ಡೋಲಿ-ಬೋರ್ಸಾದಗಳ ಜನರು ಕಾಯಿದೆಭಂಗದಲ್ಲಿ ಚೆನ್ನಾಗಿ ದುರಿತ ಅನುಭವಿಗಳಾಗಿರುವರು ಅಲ್ಲಿ ಪೋಲೀಸ ರಾಜ್ಯವು ಬಹಳ ಕಡಿಮೆ ಇರುವದು. ಜನರು ಸ್ವರಾಜ್ಯದ ಸುಖವನ್ನೇ ಅನುಭವಿಸುತ್ತಿದ್ದಾರೆ. ಬಾರ್ಡೋಲಿ ಮತ್ತು ಬೋರ್ಸಾದದ ಜನರು ಕಾಯಿದೆಭಂಗದ ಪ್ರಚಂಡ ಆಂದೋಲನಗಳನ್ನೇ ಹೂಡಿ ವಿಜಯಿಗಳಾದರು ಅವರ ವಿಜಯಕ್ಕೆ ಚರಕದಲ್ಲಿ ಸರಿಯಾದ ಭಾವನೆಯ ಮೂಲಕ ಅವರಿಗೆ ಬಂದ ಕಷ್ಟ ಸಹಿಷ್ಣುತೆ, ಶಿಸ್ತು, ವ್ಯವಸ್ಥೆ, ತಾಳ್ಮೆ ಸರಳತೆ, ಸತ್ಯ, ಅಹಿಂಸೆ ಮೊದಲಾದ ಗುಣಗಳೇ ಬೇಕಾದಷ್ಟು ಬಲವನ್ನು ತಂದು ಕೊಟ್ಟವು.

ದೇಶದ ಸ್ವಾತಂತ್ರ್ಯ ಸಂಪಾದನೆಗೆ ಕಾಯಿದೆ- ಭಂಗದ ಆಂದೋಲನವನ್ನು ಹೂಡುವ ಮೊದಲು, ದೇಶದ ಸರ್ವತ್ರ ಈ ಭಾವನೆಯಿಂದ ಚರಕದ ಪ್ರಚಾರವಾಗಬೇಕೆಂದು ಮಹಾತ್ಮರು ಹಠ ಹಿಡಿಯುವ ಕಾರಣವು ಇದುವೇ ಆಗಿದೆ.

ಅಮೃತ

ನರಗಳಿಗೆ ಬಲಕೊಡುವ ರಕ್ತಶುದ್ಧಿ ದ್ರಾವಕ.

ತಯಾರಿಸುವವರು:

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಜಿಲ್ಲಾ ಸಮಾಚಾರ

ದಕ್ಷಿಣ ಕನ್ನಡ ಜಿಲ್ಲೆಯ ಯುದ್ಧ ಸಮಿತಿಯ ಸಭೆ

ಕಳೆದ ೧೮-೬-೪೦ರಂದು ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಯುದ್ಧ ಸಹಾಯ ಸಮಿತಿಗೆ ಸಹಾಯ ಮಾಡಲಿಚ್ಛಿಸುವ ದಕ್ಷಿಣ ಕನ್ನಡ ಜಿಲ್ಲೆಯ ಮಹಿಳೆಯರೂ ಮಹನೀಯರೂ ಒಂದು ಯುದ್ಧ ಸಹಾಯಕ ಸಮಿತಿಯನ್ನು ನಿರ್ಮಾಣ ಮಾಡಬೇಕೆಂದು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಜಿಲ್ಲಾ ಸಮಿತಿಯು ಈ ಕೆಳಗಣವರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿ ಈ ಸಮಿತಿಯು ಇತರ ಸಹಾಯಕ ಸಮಿತಿಗಳನ್ನು ಏರ್ಪಡಿಸಬೇಕೆಂದು ನಿರ್ಣಯವಾಯಿತು.

(೧) ಜಿಲ್ಲಾ ಕಲೆಕ್ಟರರು ,(೨) ರೈ ರೆ. ಫಾ. ವಿ ಆರ್ ಫೆರ್ನಾಂಡಿಸ್ ಮಂಗಳೂರು ಬಿಶೋಪರು, (೩) ಮೆ ಡಬ್ಲ್ಯು ಜೆಫ್ರಿಯಸ್-ಸೀಝ್ಯೂಎಲ್ಸ್ಲಿ, (೪) ಶ್ರೀ ಎ. ಶ್ರೀನಿವಾಸಪ್ಪೈ ಬಿ. ಎ ಬಿ ಎಲ್ ಕಾಸರಗೋಡು, (೫) ಖಾನ್ ಬಹದ್ದೂರ್ ಎಮ್ ಶಮ್ನಾಡ್ ಸಾಹೇಬ ಬಹದ್ದೂರ್ ಎಂ ಎಲ್ ಎ ಕಾಸರಗೋಡು, (೬) ಮೆ ಜೆ ಎ. ಸಲ್ಡಾನ ಬಿ. ಎ, ಎಲ್ ಎಲ್ ಬಿ ಎಂ ಎಲ್ ಸಿ. ಮಂಗ್ಲೂರ್, (೭) ಮೆ ಟಿ. ಎಸ್ ರಾಮಚಂದ್ರನ್ ಐ. ಸಿ ಎಸ್. ಡಿಸ್ಟ್ರಿಕ್ಟ್ ಜಜ್ಜ್, (೮) ಖಾನ್ ಬಹದ್ದೂರ ಎಮ್ ಜಿಯಾವುದ್ದೀನ್ ಸಾಹೇಬ ಬಹದ್ದೂರ್ ಡಿ. ಪೋಲೀಸ್ ಸುಪರಿಂಟೆಂಡೆಂಟ್. (೯) ಶ್ರೀ ಎ ಕೆ. ಶೇಷಗಿರಿ ಪ್ರಭು ಕಾರ್ಕಳ, (೧೦) ಡಾ. ಎಲ್ ಪಿ ಫೆರ್ನಾಂಡಿಸ್ ಕಂಕನಾಡಿ, (೧೧) ಶ್ರೀ ರಾವ್ ಬಹದ್ದೂರ್ ಯು ಆನಂದರಾವ್ ಮಂಗಳೂರು, (೧೨) ಶ್ರೀ ರಾವ್. ಬಹದ್ದೂರ್. ಎಸ್ ಎಸ್ ಸುವರ್ಣ ಮಂಗಳೂರು, (೧೩) ಶ್ರೀ ಪಿ ಗೋಪಾಲ ನಾಯ್ಕ್ ಉಡುಪಿ, (೧೪) ಮಿಸಿಸ್. ಎಬ್ನರ್ ಸೋನ್ಸ್ ಮಂಗಳೂರು, (೧೫) ಮಿಸಿಸ್. ಶಾಂಭವಿ. ಆರ್ ಪೂಂಜ ಮಂಗಳೂರು, (೧೬) ರೆಫಾ ರೆಕ್ಟರ್. ಸೈ. ಅಲೋಸಿಯಸ್ ಕಾಲೇಜ್, (೧೭) ಮ್ಯಾ ಸ್ಟರ್. ಕೆ. ನಂಬಿಯಾರ್—ಬಾರ್ ಅಟ್-ಲಾ ಮಂಗಳೂರು, (೧೮) ರಾವ್ ಸಾಹೇಬ್; ಎ. ಎಲ್. ಪಿಂಟೊ ಮಂಗಳೂರು, ಈ ಮೇಲಿನ ಮಹಿಳೆಯರೂ ಮಹನೀಯರೂ ಕೂಡಲೇ ಸಭೆಸೇರಿ ಮೂರು ಉಪಸಮಿತಿಗಳನ್ನು ನಿರ್ಮಾಣ ಮಾಡಿದರು (೧) ಪ್ರಚಾರಕಾರ್ಯದ ಉಪಸಮಿತಿ—ಇದರಲ್ಲಿ ೩೩ ಮಂದಿ ಸದಸ್ಯರಿರುವರು.

(೨) ಸೈನಿಕ ಆರಿಕೆ ಉಪಸಮಿತಿ—ಇದರಲ್ಲಿ ೨೫ಮಂದಿ ಸದಸ್ಯರಿರುವರು (೩) ಆರ್ಥಿಕ ವಿಚಾರದ (ಹಣಶೇಖರಿಸುವ) ಉಪಸಮಿತಿ—ಇದರಲ್ಲಿ ೩೨ ಮಂದಿ ಸದಸ್ಯರಿರುವರು

ಮಂಗಳೂರು

ಭೇಟಿ —ಇಲ್ಲಿಗೆ ಬಂದಿದ್ದ ಮಿಸ್ ಮ್ಯೂರಿಯಲ್ ಸೈಮನ್‌ರವರು ಭಗಿನೀ ಸಮಾಜದವರಿಂದ ನಡಿಸಲ್ಪಡುವ ಶಿಶು ಸಂಗೋಪನ ಕೇಂದ್ರಗಳಿಗೆ ಭೇಟಿಯಿತ್ತು ಸ್ತ್ರೀಯರಸಭೆಯೊಂದರ ಮುಂದೆ ಭಾಷಣ ಮಾಡುತ್ತಾ ಇಂತಹ ಶಿಶುಸಂಗೋಪನ ಕೇಂದ್ರಗಳನ್ನು ಸ್ಥಾಪಿಸುವುದರಲ್ಲಿ ಯೂ ಪ್ರಥಮ ಚಿಕಿತ್ಸೆ, ಗೃಹಚಿಕಿತ್ಸೆ ಮೊದಲಾದುವುಗಳನ್ನು ಸ್ಥಾಪಿಸುವುದರಲ್ಲಿಯೂ ಸ್ತ್ರೀಯರು ಹೆಚ್ಚು ಆಸಕ್ತಿಯನ್ನು ತೋರಿಸಬೇಕೆಂದರು ಮತ್ತು ಈ ಶಿಶುಸಂಗೋಪನ ಕೇಂದ್ರಗಳಿಗೆ ಪ್ರಾಂತಿಕ ರೆಡ್‌ಕ್ರೋಸ್ ಸಂಸ್ಥೆಯಿಂದ ಸಹಾಯ ದೊರೆಯುವಂತೆ ತಾವು ಪ್ರಯತ್ನಿಸುವುದಾಗಿಯೂ ಹೇಳಿದರು

ಖಾಸಗಿ ಆಸ್ತಿಯನ್ನು ಸರಕಾರವು ವಶಪಡಿಸಿ ಕೊಳ್ಳುವುದಿಲ್ಲ—ಸರಕಾರಿ ಪ್ರೆಸ್ ಪ್ರಕಟಣೆ —ಸ್ವಲ್ಪದಿಂದ ಒಂದು ಅನಧಿಕೃತ ಮತ್ತು ನಿಜವಲ್ಲದವಾರ್ತೆಯು ಹೊರಟಿದೆ ಅದರಿಂದಾಗಿ ಜನರು ಗಾಬರಿಗೊಂಡಿದ್ದಾರೆ ಆದಕಾರಣ ಸರಕಾರದವರು ಮೇ ೧೬ನೇ ೩೧ರಲ್ಲಿ ಪ್ರಕಟಿಸಿದ್ದ ಪ್ರಕಟಣೆಯನ್ನೇ ಪುನಃ ಪ್ರಕಟಿಸಿದ್ದಾರೆ ಅದು ಹೀಗಿದೆ—

ಇಂಗ್ಲೆಂಡಿನ ಸರಕಾರವು ಖಾಸಗಿ ಜನರ ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಳ್ಳುವುದಕ್ಕೆ ತಮಗೆ ಅಧಿಕಾರವಿರಬೇಕೆಂದು ಒಂದು ಶಾಸನವನ್ನು ಮಾಡಿದ್ದಾರಷ್ಟೆ. ಹಿಂದೀ ಸರಕಾರವೂ ಕೂಡ ಜನರ ಆಸ್ತಿ ಪಾಸ್ತಿಗಳನ್ನು ತನ್ನ ವಶಪಡಿಸಿಕೊಳ್ಳಲು ಕಾನೂನು ಮಾಡುವುದೆಂದು ಕೆಲವರು ವದಂತಿ ಹುಟ್ಟಿಸಿದ್ದಾರೆ. ಇದರಿಂದಾಗಿ ಜನರು ತಮ್ಮ ಭದ್ರತೆಗಳನ್ನು ಮಾರುವುದು, ಬೇಂಕುಗಳಿಂದಲೂ, ಸೇವಿಂಗ್ಸ್ ಬೇಂಕುಗಳಿಂದಲೂ ಹಣವನ್ನು ಹಿಂದಕ್ಕೆ ತೆಗೆಯುವುದು ಇವೇ ಮೊದಲಾದ ತಮಗೆನೇ ನಷ್ಟ ಬರುವಂತಹ ಕಾರ್ಯಗಳನ್ನು ಮಾಡುವ ಸಂಭವವಿದೆ. ಮೇಲಿನ ವದಂತಿಯನ್ನು ಸರಕಾರದವರು ನಿರಾಧಾರವಾದುದೆಂದೂ, ಸುಳ್ಳೆಂದೂ ತಿಳಿಸಿದ್ದಾರೆ. ಸರಕಾರಕ್ಕೆ ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಳ್ಳುವ ಬಗ್ಗೆ ಶಾಸನ ಮಾಡುವ ಉದ್ದೇಶವೇ ಇಲ್ಲವೆಂದು ಸರಕಾರದವರು ತಿಳಿಸಿದ್ದಾರೆ.

ಮದ್ರಾಸು ಸರಕಾರದ ಪ್ರಕಟಣೆ

(ಪಬ್ಲಿಕ್ ಡಿಪಾರ್ಟ್‌ಮೆಂಟ್)

ತಾ ೧೧-೬-೧೯೪೦

ಈ ಕೆಳಗಿನ ತಾತ್ಪರ್ಯದ ಜಾಹೀರಾತನ್ನು ಸರಕಾರದವರು ಪ್ರಕಟಿಸಿರುತ್ತಾರೆ:—

ಕೆಲವು ಆಶ್ಚರ್ಯಕರವಾದ ಯುದ್ಧದ ವಾರ್ತೆಯನ್ನು ಕೇಳಿದ ಕೆಲವು ಜನರು ತತ್‌ಕಾಲಕ್ಕೆ ಭಾಷಣಮಾಡುತ್ತ ಅಥವಾ ಚರ್ಚೆ ನಡೆಸುತ್ತ, ಆ ವಾರ್ತೆಗಳನ್ನು ಕಠಿಣವಾಗಿ ಅತಿಶಯಗೊಳಿಸುತ್ತ ಅಥವಾ ಅವುಗಳಿಂದಾಗಿ ಮುಂದಕ್ಕೆ ಹೀಗೆ ಆಗುವುದಾಗಿ ದಿಗಿಲು ಎಬ್ಬಿಸತಕ್ಕ ಅವಶ್ಯವಿಲ್ಲದ ಭವಿಷ್ಯ ಹೇಳುವ ಪ್ರವೃತ್ತಿಯಲ್ಲಿ ವಿಶೇಷವಾಗಿರುವರೆಂದು ಸರಕಾರದವರಿಗೆ ಬಂದ ವರದಿಗಳಿಂದ ತಿಳಿದುಬರುತ್ತದೆ ಇವುಗಳು ಸುಶಿಕ್ಷಿತ ಜನರಿಂದ ಬಂದವುಗಳಾಗಿದ್ದು ಮತ್ತೂ ಅತಿಶಯವಾಗಿ ಪ್ರಸಾರವಾಗುವುದಕ್ಕೆ ಮೂಲಾಧಾರವಾಗಿದೆ, ಮತ್ತು ಅವು ಹರಡುತ್ತಲೆ, ನಿಜತ್ವಹೊಂದುತ್ತ ಕೊನೆಗೆ ಅವು ಸಾಮಾನ್ಯ ಜನರ ಮತ್ತು ಅನೇಕ ಹೆಂಗಸರ ಕಿವಿಗೆ ಮುಟ್ಟುತ್ತಲೆ, ದಿಗಿಲಿಗೆ ಕಾರಣವಾಗುತ್ತದೆ

ಈ ತಪ್ಪುಗಾರರಾದರೋ ಅನ್ಯಥಾ ಸರಕಾರದ ಕಡೆ ತಪ್ಪಿ ಹೋಗುವವರಲ್ಲ ಮತ್ತು ಸಾಧಾರಣ ಸ್ಥಿತಿಯಲ್ಲಾದರೆ, ಸರಕಾರದವರೂ ಇಂಥಹ ಉದ್ಗಾರಗಳಿಗೆ ಲಕ್ಷ್ಯ ಕೊಡತಕ್ಕವರಲ್ಲವಿತ್ತು ಆದರೆ, ಪ್ರಕೃತದ ವಿಪರೀತ ಸಮಯದಲ್ಲಿ, ನಿಜವಾದ ಸಂಗತಿಯು ಸಾಕಷ್ಟು ಗಂಭೀರವಿರುವಾಗ, ಅವರ ಕಲ್ಪನೆಗಳು ಅಧಿಕವಾದ ನಂಬಿಕೆಯನ್ನು ಹುಟ್ಟಿಸಿ ಬಹುಸಂಖ್ಯಾತ ಜನರಲ್ಲಿ ಕಂಗೆಡುವ ಸ್ಥಿತಿಯನ್ನುಂಟುಮಾಡುತ್ತಿವೆ ಇಂಥ ಬೆಸಿಯುವಿಕೆಯನ್ನು ನಿಲ್ಲಿಸಲಿಕ್ಕೆ ಸರಕಾರದವರು ಆಲೋಚಿಸುವುದಿಲ್ಲವಾದರೆ ಅವರು ಕರ್ತವ್ಯ ಶೂನ್ಯರಾಗುವರೆಂದು ಭಾವಿಸಬೇಕಾಗುವುದು. ಅಂಥವನನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ದರ್ಯಾಪ್ತಿ ಮಾಡುವುದಕ್ಕೆಮುಂಚೆ ಪ್ರತಿ ಒಬ್ಬನಿಗೆ ಎಚ್ಚರಿಕೆ ಕೊಡುವುದು ಸಾಧ್ಯವಿಲ್ಲವಾದ ಕಾರಣ, ಸರಕಾರದವರು ಸರ್ವ ಜನರಿಗೆ ಸರ್ವಸಾಮಾನ್ಯವಾದ ಎಚ್ಚರಿಕೆಯನ್ನು ಈ ಮೂಲಕ ಕೊಡಲು ನಿರ್ಣಯಿಸಿರುತ್ತಾರೆ.; ಅಂದರೆ, ದಿಗಿಲು ಹುಟ್ಟಿಸತಕ್ಕ ಭಾಷಣವನ್ನು ಯಾರಾದರು ಮಾಡುವುದನ್ನು ಕಂಡ—ಕೇಳಿದ ಯಾವ ಕೌತುಕವರ ಸಂಘಟನೆಯು ತಾತ್ಕಾಲಿಕ ಪ್ರೇರೇಪಣೆಯು ಕಾರಣದಿಂದ ಮಾಡಿದ್ದರಲ್ಲಿ, ಅಲ್ಲದಿರಲಿ, —ಅವರು, ಮತ್ತೊಂದು ಎಚ್ಚರಿಕೆ ಶಿವಾಯ್ ಫಿರ್ಯಾದಿಗೆ ಒಳಗಾಗುವರು.

ಇನ್ನು ಮುಂದೆ ಆದರೂ ಅಂಥಹ ಮನುಷ್ಯರು ತಂತಮ್ಮ ಜವಾಬ್ದಾರಿಯ ಮಹತ್ವವನ್ನು ಮನಸ್ಸಿಗೆ ತಂದುಕೊಂಡು, ಪ್ರಕೃತದ ಯುದ್ಧಕಾಲದಲ್ಲಿ ಈ ರೀತಿಯು ಶಿಥಿಲವಾದವನ್ನು ಅವಲಂಬಿಸಿದರೆ ಕಾನೂನು ಮೇರೆಗೆ ತಪ್ಪಿತಸ್ಥರಾಗುವರೆಂಬುದನ್ನು ಖಚಿತಮಾಡಿಕೊಳ್ಳುವರು—ಎಂದು ಸರಕಾರದವರ ಕೋರಿಕೆಯಾಗಿದೆ.

ಕಾರ್ಕಳ

ತೆರೆಯಲ್ಪಟ್ಟಿತು — ಕಾರ್ಕಳ ಜನರಲ್ ಪ್ರೊವಿಜನ ಸಪ್ಲ್ಯಾಸ್ ಲಿಮಿಟಡ್ ಎಂಬ ಒಂದು ಹೊಸ ಸಂಸ್ಥೆಯು ತೆರೆಯುವ ಸಮಾರಂಭವು ತಾ. ೨೪-೬-೪೦ ರ ದಿನ ಶ್ರೀ ಕುಕ್ಕುಂದೂರು ಸುಬ್ರಾಯ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು.

ನೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಫ್ರೆಂಚ್ ಸಂಧಾನ ಸಮಾಪ್ತಿ!



ಪಶ್ಚಿಮ ಕರಾವಳಿಯ ಆಕ್ರಮಣ!

ಫ್ರೆಂಚ್ ನೌಕೆಯನ್ನು ಹಿಂದಕ್ಕೆ ಕರೆಸಬೇಕು

ಜರ್ಮನ್ ಸೈನ್ಯ ಆಕ್ರಮಣ!

'ಮಾರ್ಶಲ್ ಪಿಟೈನ್‌ರ ಸರಕಾರದಿಂದ ಒಪ್ಪಲಾದ ಜರ್ಮನ್ ಸಂಧಾನ ಶರತ್ತುಗಳು ಈ ಕೆಳಗೆ ಸಂಕ್ಷೇಪವಾಗಿ ಕೊಟ್ಟಂತೆ ಇವೆ' —

ಫ್ರಾನ್ಸಿನ ಪಶ್ಚಿಮ ಕರಾವಳಿ ಪ್ರದೇಶವನ್ನೂ, ಜನಿವಾ ಮತ್ತು ಟೂರ್ ನಗರಗಳ ನಡುಪ್ರದೇಶದಿಂದ ಉತ್ತರಕ್ಕೆ ಚಾಚಿರುವ ಪ್ರದೇಶವನ್ನೂ ಜರ್ಮನಿಯು ಆಕ್ರಮಿಸುವುದು ಆಕ್ರಮಣದ ಖರ್ಚನ್ನು ಫ್ರಾನ್ಸ್ ವಹಿಸಬೇಕು

ಫ್ರೆಂಚ್ ಸೈನ್ಯ ಸಂಖ್ಯೆಯನ್ನು ಕಡಿಮೆ ಮಾಡಿ ನಿಶಸ್ತ್ರವಾಗಿ ಮಾಡುವುದು ಆಕ್ರಮಿಸಲ್ಪಡದ ಪ್ರದೇಶಗಳಲ್ಲಿ ಮಾತ್ರ ಇಟಲಿ ಜರ್ಮನಿಗಳಿಂದ ನಿರ್ಧರಿಸಲ್ಪಡುವ ಚಿಕ್ಕ ಸೇನೆಗಳನ್ನಿಡಬಹುದು

ಎಲ್ಲಾ ಯುದ್ಧ ಹತ್ಯಾರಗಳನ್ನು ಸುವ್ಯಸ್ಥಿತ ರೀತಿಯಲ್ಲಿ ಬಿಟ್ಟುಕೊಡಲು ಜರ್ಮನಿಯು ಕೇಳಬಹುದು

ಫ್ರೆಂಚ್ ಸೈನ್ಯವಾವುದೂ ಫ್ರಾನ್ಸನ್ನು ಬಿಟ್ಟು ಹೊರಗೆ ಹೋಗುವ, ಹಾಗಿಲ್ಲ ಬ್ರಿಟನ್ನಿಗೆ ಯಾವ ಸರಕುಗಳನ್ನೂ ಸಾಗಿಸಲಾಗದು ಫ್ರೆಂಚ್ ವ್ಯಾಪಾರಿ ಹಡಗುಗಳು ಬಂದರು ಬಿಟ್ಟು ಚಲಿಸಬಾರದು. ಹೊರಗಿದ್ದ ಫ್ರೆಂಚ್ ನೌಕೆಗಳನ್ನು ಪುನಃ ಕರೆಸಿಕೊಳ್ಳಬೇಕು

ಎಲ್ಲಾ ಕೋಟೆಕೊತ್ತಲಗಳನ್ನೂ ಸಾಮಾನು ಸಂಗ್ರಹಗಳನ್ನೂ ಸಂಪೂರ್ಣ ಬಿಟ್ಟುಕೊಡಬೇಕು ಇದೇ ಶರ್ತವು ಎಲ್ಲಾ ನೌಕಾ ಶಿಬಿರಗಳಿಗೂ ರೈಲ್ವೆ ಮಾರ್ಗಗಳಿಗೂ ಸಂಬಂಧಿಸಿರತ್ತದೆ

ಆಕ್ರಮಿಸಲ್ಪಟ್ಟ ಪ್ರದೇಶಗಳಲ್ಲಿನ ಎಲ್ಲಾ ವಾಯರ್ಲೆಸ್ ಕೇಂದ್ರಗಳು ನಿಲ್ಲಿಸಲ್ಪಡಬೇಕು.

ಜರ್ಮನಿ ಮತ್ತು ಇಟಲಿಗಳೊಳಗೆ ಪರಸ್ಪರ ವಾಣಿಜ್ಯ ವ್ಯವಹಾರಗಳಿಗೆ ಫ್ರೆಂಚ್ ಸರಕಾರವು ಅನುಕೂಲತೆಗಳನ್ನು ಕಲ್ಪಿಸಬೇಕು ಜರ್ಮನ್ ಕೈದಿಗಳನ್ನು ಕೂಡಲೇ ಬಿಟ್ಟುಕೊಡಬೇಕು ಫ್ರೆಂಚ್ ಕೈದಿಗಳನ್ನು ಒಪ್ಪಂದಕ್ಕೆ ಸಹಿಹಾಕಿದ ಮೇಲೆ ಬಿಡಲಾಗುವುದು.

ಫ್ರೆಂಚ್ ನೌಕೆಯನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಮತ್ತವುಗಳನ್ನು ನಿಶ್ಶಸ್ತ್ರವಾಗಿ ಮಾಡಿದ ಮೇಲೆ ಅವುಗಳು ಜರ್ಮನಿ ಮತ್ತು ಇಟಲಿಗಳ ಆಜ್ಞಾಬದ್ಧವಾಗಿದ್ದು ಅವರು ಸೂಚಿಸಿದ ಬಂದರುಗಳಲ್ಲಿರಬೇಕು. ಆದರೆ ಫ್ರಾನ್ಸಿನ ಕರಾವಳಿಯನ್ನೂ ಸಾಮ್ರಾಜ್ಯ ವಸಾಹತನ್ನೂ ರಕ್ಷಿಸಲ್ಕು ಅವುಗಳನ್ನು ಉಪಯೋಗಿಸಬಹುದು.

ಈ ಸಂಧಾನದ ಶರ್ತಗಳನ್ನು ಫ್ರಾನ್ಸು ಎಲ್ಲಿಯ ತನಕ ಪೂರೈಸಿಕೊಂಡು ನಡೆಯುತ್ತದೆಯೊ ಅಲ್ಲಿಯ ತನಕ ಒಪ್ಪಂದವನ್ನು ಮುರಿಯಲಾಗುವುದಿಲ್ಲ.

ಫ್ರೆಂಚ್ ಒಪ್ಪಂದದ ಖಂಡನೆ

ಬ್ರಿಟನ್ನಿಗೆ ವಸಾಹತುಗಳ ಸಹಾಯ

ಇಂಗ್ಲೆಂಡಿನಲ್ಲಿ ಫ್ರೆಂಚ್ ರಾಷ್ಟ್ರೀಯ ಮಂಡಳದ ರಚನೆ

ಲಂಡನಿನಲ್ಲಿ ಪ್ರಕಟವಾದ ಅಧಿಕಾರಯುಕ್ತ ಹೇಳಿಕೆಯೊಂದರ ಸಾರಾಂಶ ಹೀಗಿತ್ತು:—

ಸಾರ್ವಭೌಮ್ಯ ಸರಕಾರವು ಫ್ರೆಂಚ್ ಜರ್ಮನ್ ಸಂಧಾನವು ಮಿತ್ರರಾಷ್ಟ್ರಗಳ ಕರಾರುಗಳ ತದ್ವಿರೋಧವಿರುವುದೆಂದು ತಿಳಿಯುತ್ತದೆ ಬೋರ್ಡಿಯೊದಲ್ಲಿನ ಮಾರ್ಶಲ್ ಪಿಟೈನರ ಸರಕಾರವು ವೈರಿಗಳ ಶರ್ತಗಳಿಗೆ ಮಣಿದುದರಿಂದ ಸ್ವತಂತ್ರ ಫ್ರೆಂಚ್ ನಾಗರಿಕರ ಹಕ್ಕುಬಾಧ್ಯತೆಗಳನ್ನು ಹಂಬಲಿಸಿದಂತಾಗಿದೆ ಆದುದರಿಂದ ಈಗಿನ ಫ್ರೆಂಚ್ ಸರಕಾರವು ಸ್ವತಂತ್ರ ರಾಷ್ಟ್ರದ ಸರಕಾರವಾಗಿ ಪರಿಗಣಿಸಲ್ಪಡುವುದಿಲ್ಲ

ಈ ಸಂದರ್ಭದಲ್ಲಿ ಸಾರ್ವಭೌಮ ಸರಕಾರದವರು ಸಕಲ ಫ್ರೆಂಚ್ ಹಿತಗಳ ಪ್ರಾತಿನಿಧ್ಯ ವಹಿಸಿ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧವನ್ನು ಮುಂದುವರಿಸುವರೆ ಭಾಗಿಯಾಗುವ ಒಂದು ಫ್ರೆಂಚ್ ಪ್ರಾತಿನಿಧ್ಯವುಳ್ಳ ಮಂಡಳವನ್ನು ರಚಿಸಲು ಒಪ್ಪಿಗೆಯನ್ನಿತ್ತಿದ್ದಾಗಿದೆ

ಫ್ರೆಂಚ್ ರಾಷ್ಟ್ರೀಯ ಮಂಡಳಿಯ ಮುಖಂಡರು

ರಾಜೀನಾಮೆಯಿತ್ತ ರೈನೋಲ್ಡರ ಸರಕಾರದಲ್ಲಿ ಸೈನ್ಯ ನಿರ್ವಹಣದ ಅಧಿಕಾರಿಗಳಾಗಿದ್ದ ಜನರಲ್ ಡಿ ಗಾಲ್ ಇವರು ಫ್ರೆಂಚ್ ರಾಷ್ಟ್ರೀಯ ಮಂಡಳದ ಮುಖಂಡತ್ವವನ್ನು ವಹಿಸುವರು.

ಮುಂದೆ ಫ್ರಾನ್ಸಿನಲ್ಲಿ ನಿಜವಾದ ಜನತಾ ಸರಕಾರವು ಸ್ಥಾಪಿತವಾಗುವ ವರೆಗೆ ಇಂಗ್ಲೆಂಡಿನಿಂದ ತಮ್ಮ ಫ್ರೆಂಚ್ ಜನರ ಮತ್ತು ಅವರ ಹಿತಗಳನ್ನೂ ಸಂರಕ್ಷಿಸಲು ಈ ಮಂಡಳವು ಜವಾಬ್ದಾರಿ ವಹಿಸಿದೆ

ಫ್ರೆಂಚ್ ವಸಾಹತು ಮುಖಂಡರು ಯುದ್ಧ ಮಾಡುವರು

ಫ್ರೆಂಚ್-ಜರ್ಮನ್ ಸಂಧಾನವನ್ನು ವಸಾಹತು ರಾಜ್ಯಗಳು ಒಪ್ಪುವುದಿಲ್ಲವೆಂದು ಆಧಾರಯುಕ್ತ ಸುದ್ದಿಗಳು ಬಂದಿವೆ. ಸಿರಿಯಾದ ಸೈನ್ಯಾಧಿಕಾರಿಗಳೂ, ಫ್ರೆಂಚ್ ಮೊರೊಕ್ಕೊ, ಫ್ರೆಂಚ್ ಇಂಡೊಚೈನಾ, ಮುಕ್ತಿಕರ ಫ್ರೆಂಚ್ ವಸಾಹತುಗಳ ಜವಾಬ್ದಾರಿ ಅಧಿಕಾರಿಗಳು ಯುದ್ಧವನ್ನು ಕಡೆಯ ತನಕ ಹೋರಾಡುವುದಾಗಿ ಮಿತ್ರರಾಷ್ಟ್ರಗಳಿಗೆ ತಿಳಿಸಿಗುವರು

ಫ್ರೆಂಚ್ ವಸಾಹತು ಸಾಮ್ರಾಜ್ಯದ ಈ ಘನ ಉದ್ದೇಶವನ್ನು ಯಶಸ್ವಿಗೊಳಿಸುವುದರಲ್ಲಿ ಬ್ರಿಟಿಷ್ ಸರಕಾರವು ಎಲ್ಲಾ ತರದ ಆರ್ಥಿಕ ಸೌಕರ್ಯಗಳನ್ನು ಕೊಡುವುದಕ್ಕೆ ಸದಾ ಸಿದ್ಧವಾಗಿದೆಯಾಗಿ ಪ್ರಕಟಿಸಲಾಗಿದೆ.

ವ್ಯಾಸ್‌ರಾಯರ ಹಿರಿಯ ಪುತ್ರ

ಪ್ರಾಣಾಪಾಯವಿಲ್ಲದೆ ಇರುವರು

ಮಾನ್ಯ ವ್ಯಾಸ್‌ರಾಯರ ಪ್ರಥಮ ಪುತ್ರ ಅರ್ಲ್ ಆಫ್ ಹೋಪ್ಸನ್ ಇವರು ಫ್ರಾನ್ಸಿನ ರಣರಂಗದಲ್ಲಿ ಕಾಣೆಯಾಗಿರುವರೆಂಬ ಕಳವಳದ ಸುದ್ದಿಯೊಂದು ಕಳೆದವಾರ ಬಂ[illegible]

ಈಗ ಅವರ ಪ್ರಾಣಾಪಾಯವಿಲ್ಲದೆ ಸುರಕ್ಷಿತರಾಗಿರುವರೆಂದ ವಾರ್ತೆ ಬಂದಿದೆ ಫ್ರಾನ್ಸ್ ರಣಾಂಗಣದ ರಾವದೊ ಒಂದು ಭಾಗದಲಿ ಯಂತ್ರಾಸ್ತ್ರ ದಳದ ನಾಯಕರಾಗಿದ್ದಾಗ ಅ[illegible] ಜರ್ಮನ್ ಸೈನ್ಯದ [illegible] ವೈರಿಗಳಿಂದ ತಪ್ಪಿ[illegible] ಅಧಿಕಾರಿಗಳು ಅವ[illegible] ಸುದ್ದಿಯನ್ನು ತಂದಿ[illegible]

ಫ್ರಾನ್ಸ್ ಯುದ್ಧದಲ್ಲಿ ಪರಾಜಯವಾದದ್ದೇಕೆ?

ಇವೆಲ್ಲವೂ ಇದ್ದರೂ ನಮಗೆ ಫ್ರಾನ್ಸಿಗೆ ಮಹಾಕದನದಲ್ಲಿ ಸೋಲುಂಟಾದುದೇಕೆ ಎಂಬದಾಗಿ ಅನೇಕರು ಪ್ರಶ್ನಿಸಬಹುದು ನಮಗೆ ಇಷ್ಟರ ಮಟ್ಟಿನ ರಕ್ಷಣೆಯಿದ್ದರೂ ಕೇವಲ ಹನ್ನೆರಡು ಡಿವಿಜನ್ನುಗಳು ಮಾತ್ರ ಹೊರನಾಡಿಗೆ ಹೋಗಿ ಯುದ್ಧಮಾಡಲು ತಯಾರಾಗಿದ್ದವು ಯುದ್ಧಾರಂಭವಾದ ಒಂಭತ್ತನೆ ತಿಂಗಳಿನಲ್ಲಿ ಈ ಹನ್ನೆರಡು ಡಿವಿಜನ್ನುಗಳು ಮಾತ್ರ ಫ್ರೆಂಚ್ ರಣಾಂಗಣದ ಸಮರ ಸೇವೆಗೆ ಸಿದ್ಧವಾಗಿದ್ದವು ಇದಕ್ಕಿಂತ ಹೆಚ್ಚಿನ ಸಹಾಯವನ್ನು ಆಗ ನೀಡುವುದಕ್ಕಾಗಲಿಲ್ಲ'' ಎಂದರು

ಬ್ರಿಟನ್ ಮೇಲೆ ಆಕ್ರಮಣವಾದರೆ ?

ಬ್ರಿಟನ್ ಮೇಲೆ ಬಲವಾದ ಧಾಳಿ ನಡೆಸಬೇಕಾದರೆ ಶತ್ರು ಪಕ್ಷದವರು ತಮ್ಮ ಸೇನಾ ವೃಂದವನ್ನು ಇಂಗ್ಲೀಷ್ ಕಡಲ್ಗಾಲುವೆಯ ಮುಖಾಂತರ ದಾಟಿಸಿಕೊಂಡು ಬರಬೇಕು. ಹೀಗೆ ಅವರನು ದಾಟಿಸಿಕೊಂಡು ಬಂದ ಮೇಲೆ ಅವರನ್ನು ನಮ್ಮ ಭೂಮಿಯಲ್ಲಿ ಕಾಪಾಡಬೇಕು ಬಿರುಸಾದ ಕದನದಲ್ಲಿ ಆವಶ್ಯಕವಾದಂತಹ ಸಮರ ಸಲಕರಣೆಗಳೊಡನೆ ಅವರನ್ನು ಕಾಪಾಡಬೇಕು ಇವೆಲ್ಲವೂ ನಡೆಯುವುದೆಂದೇ ನಂಬೋಣ ಆದರೆ ನಮಗೆ ನೌಕಾದಳವಿರುವುದು ಎಲ್ಲರಿಗೂ ಗೊತ್ತು (ಹರ್ಷ ಧ್ವನಿಗಳು) ಈ ನಿಜಾಂಶವನ್ನು ಹಲವರು ಮರೆತಿರಬಹುದು ಆದರೆ ಅಂತಹವರನ್ನು ಈಗ ಜ್ಞಾಪಿಸಬೇಕಾಗಿದೆ ಈಗ ಮೂವತ್ತು ವರ್ಷಗಳಿಂದಲೂ ಬ್ರಿಟನ್ ಮೇಲಿನ ಆಕ್ರಮಣದ ಆಗಹೋಗುಗಳನ್ನು ನಾನು ಯೋಚಿಸುತ್ತಲೇ ಬಂದಿದ್ದೇನೆ. ಕಳೆದ ಮಹಾಯುದ್ಧದ ಆರಂಭದಲ್ಲಿ ನಾನು ನೌಕಾದಳದ ಜವಾಬ್ದಾರಿಯನ್ನು ವಹಿಸಿದ್ದೆ ಆಗಲೂ ಸಹ ನಾವು ನಮ್ಮ ರೆಗ್ಯುಲರ್ ಸೇನಾ ವೃಂದವೆಲ್ಲವನ್ನೂ ಹೊರಗಡೆಯ ಸೇವೆಗೆ ಕಳುಹಿಸಿಬಿಟ್ಟೆವು ಈಗಿನಂತೆಯೇ ಆಗಲೂ ಟೆರಿಟೋರಿಯಲ್ ಪಡೆಗಳವರು ಸಮರ ಸೇವೆಗೆ ಇನ್ನೂ ತಯಾರಾಗಿರಲಿಲ್ಲ ಆಗಿನ ಪರಿಸ್ಥಿತಿಗಳಲ್ಲಿ ನಮ್ಮ ಅಚ್ಚುಮೆಚ್ಚಿನ ಈ ದ್ವೀಪದಲ್ಲಿ ರಕ್ಷಣೆಯೇ ಇರಲಿಲ್ಲ, ಅನೇಕ ತಿಂಗಳ ಕಾಲ ನಮಗೆ ಸೈನಿಕ ಸಹಾಯವೇ ಇರಲಿಲ್ಲ. ಬ್ರಿಟಿಷ್ ನೌಕಾದಳದವರು ಮಾತ್ರ ಹೊರಗಿನ ಧಾಳಿಗಳಿಂದ ನಮ್ಮ ಈ ದ್ವೀಪವನ್ನು ಕಾಯುತ್ತಿದ್ದರು. ಜರ್ಮನರಿಗೆ ೧೦-೧೭ರ ಪರಿಮಾಣದಲ್ಲಿ ನೌಕಾದಳವಿದ್ದರೂ ಸಹ ನಮಗೆ ಎಳ್ಳಷ್ಟೂ ಕುಂದಕವುಂಟಾಗಲಿಲ್ಲ ಈಗ ನಾಜಿಗಳಿಗೆ ಎಲ್ಲೋ ಹಲಕೆಲವು ನೌಕೆಗಳು ಮಾತ್ರವಿವೆ'' ಎಂದರು

ಜರ್ಮನಿಯು ಯುದ್ಧವನ್ನೆಲ್ಲಿಯ ವರೆಗೆ ಸಾಗಿಸ[illegible]ಯು

ಯುದ್ಧಕ್ಕೆ ಅವಶ್ಯವಾದ ಪೆಟ್ರೋಲು

ಇನ್ನು ಯುದ್ಧ ಸಮಯದಲ್ಲಿ ಬೇಕಾಗುವ ಪೆಟ್ರೋಲಿನ ಬಗ್ಗೆ ಸ್ಟೆನ್ ಬರ್ಜರ ಮತ್ತು ಪೊಸೆನಿ ಎಂಬ ಇಬ್ಬರು ಜರ್ಮನರು ಕೆಳಗಿನಂತೆ ಹೇಳಿರುವರು ಪೆಟ್ರೋಲು ಖರ್ಚಾಗುವದು (೧) ನೆಲದ ಮೇಲಿನ ರಕ್ಷಣೆ, ಆಕಾಶ ಮಾರ್ಗವಾಗಿ ಹಲ್ಲೆಮಾಡುವದು. (೨) ಮತ್ತು ಭೂಮಿಯ ಮೇಲೆ ಎಲ್ಲ ಶಸ್ತ್ರಾಸ್ತ್ರಗಳನ್ನುಪಯೋಗಿಸಿ ಏರಿಹೋಗುವದು ಇದರ ಮೇಲೆ ಅವಲಂಬಿಸಿದೆಯೆಂದು ಲೆಕ್ಕ ಹಾಕಿರುವರು ಮೊದಲನೇ ಕದನದ ಯುದ್ಧಕ್ಕೆ ನಾಲ್ಕು ಲಕ್ಷ ಮೋಟಾರುಗಳು (ಯುದ್ಧದಲ್ಲಿ ತೊಡಗಿದ ಪ್ರತಿ ದೇಶಕ್ಕೆ) ಬೇಕು ಈ ಲೆಕ್ಕದ ಪ್ರಕಾರ ಪ್ರತಿ ವರ್ಷ ೪ ಕೋಟಿ ಟನ್ ಪೆಟ್ರೋಲು ಖರ್ಚಾಗುವದು ಇನ್ನು ಎರಡು ದಶಲಕ್ಷ ಟನ್ ಭಾರದ ನೌಕಾಬಲ ವಿದ್ದರೆ ಒಟ್ಟು ಆರು ಲಕ್ಷ ಟನ್ ಪೆಟ್ರೋಲು ಬೇಕಾಗುವದು. ಈ ಲೆಕ್ಕದ ಪ್ರಕಾರ ಬ್ರಿಟನಿಗೆ ಪ್ರತಿ ವರ್ಷ ೨೭ ದಶ



ಫ್ರಾನ್ಸಿನ ಮಾಜೀ ಅಧ್ಯಕ್ಷರಾದ ಏಮ್ ಆರ್ಬಾನರು ಬ್ರಿಟಿಷ್ ಸೈನ್ಯದ ಕಮಾಂಡರ್ ಇನ್‌ಚೀಫರಾದ ಲೋಡ್



ಗಾಂಧಿ-ವೈಸರಾಯರ ಭೇಟಿ!

ಮಲಯದಲ್ಲಿ ಸೈನ್ಯ ಸಿದ್ಧತೆ!

ಭಾರತೀಯ ಸೈನ್ಯಕ್ಕೆ ಸೌಕರ್ಯಗಳು!

ಭಾರತೀಯ ಸಕ್ಕರೆ ಕೊಂಡುಕೊಳ್ಳಲಾಗುವುದು!

ಲಕ್ಷ ಟನ್ ಪೆಟ್ರೋಲು ಬೇಕಾಗುವದು ಈ ಪೆಟ್ರೋಲಿನ ಬೇಡಿಕೆಯ ಪೂರೈಕೆ ಸಾಧ್ಯವಿದೆ. ಏಕೆಂದರೆ ಎಲ್ಲ ಪ್ರಜಾಸತ್ತಾತ್ಮಕ ರಾಷ್ಟ್ರಗಳೂ ಬ್ರಿಟನವು ನಡೆಯಿಸಿದ ಯುದ್ಧಕ್ಕೆ ಬೆಂಬಲವೀಯುತ್ತಿವೆ ಆದರೆ ಜರ್ಮನಿಯ ಮಾತು ಹಾಗಲ್ಲ ಜರ್ಮನಿಯು ಯುದ್ಧ ಪೂರ್ವದಲ್ಲಿ ಸ್ವಲ್ಪ ಪೆಟ್ರೋಲು ಸಂಗ್ರಹಿಸಿರಬಹುದು. ಆದರೆ ಸದ್ಯಕ್ಕೆ ನಡೆಯುತ್ತಿರುವ ಪ್ರಚಂಡ ವಿಮಾನ ಹಲ್ಲೆಗಳಿಂದಾಗಿ ಅದು ತೀರುತ್ತ ಬಂದಿದೆ ಪೆಟ್ರೋಲಿನ ಬದಲು ಉಳಿದ ವಸ್ತುಗಳಿಂದ ಅಥವಾ ಅವುಗಳ ಮಿಶ್ರಣದಿಂದ ನಡೆಯುವ ಎಂಜನು ಸಿದ್ಧವಾಗಿವೆಯಂತೆ ಆದರೆ ಇವುಗಳಿಂದ ಉಪಯೋಗ

...ಸಾದ ಲೋರ್ಡ್ ಗೋರ್ಟ್‌ರೊಡನೆ ಮಾತಾಡುತ್ತಿರುವರು

ವಾಗದು. ರಶಿಯ ರುಮಾನಿಯಗಳಿಂದ ಪೆಟ್ರೋಲು ಬರುವಂತಿಲ್ಲ ತನ್ನಲ್ಲಿ ಆ ವಸ್ತುವಿಲ್ಲ ಆದ್ದರಿಂದ ಶಾಂತತಾ ಸಮಯದಲ್ಲಿಯೇ ಜರ್ಮನಿಗೆ ಸಿಗುವ ಪೆಟ್ರೋಲು ಅದಕ್ಕೆ ಸಾಲದು ಅಂದ ಮೇಲೆ ಯುದ್ಧ ಸಮಯದ ಬೇಡಿಕೆಯ ಬಗ್ಗೆ ಹೆಚ್ಚು ಹೇಳುವ ಅವಶ್ಯಕತೆಯೇ ಇಲ್ಲ. ಒಂದಿಲ್ಲೊಂದು ದಿನ ಪೆಟ್ರೋಲಿಲ್ಲದ್ದಕ್ಕಾಗಿ ಜರ್ಮನಿ ಯುದ್ಧ ನಿಲ್ಲಿಸಬೇಕಾಗುವದು.

ಸರ್ವಾಧಿಕಾರಿಗಳ ಸೋಂಕು

ರುಮಾನೀಯಾದಲ್ಲಿ ಸರ್ವಾಧಿಕಾರ

ಯೂರೋಪಿನ ಸರ್ವಾಧಿಕಾರಿಗಳ ದಳದಲ್ಲಿ ರುಮೇನಿಯದ ಅರಸು ಕೆರೋಲರೂ ಸೇರಲು ತವಕಗೊಳ್ಳುವರೆಂದು ತೋರುತ್ತದೆ ಅಲ್ಲಿ ಹೊಸ ಹೊಸ ಕಾನೂನು ಕಾಯದೆಗಳು ಜ್ಯಾರಿಗೆ ತರಲಾಗಿವೆ. 'ರಾಷ್ಟ್ರೀಯ ಪಂಗಡ'ವೆಂಬ ಕೂಟವೊಂದು ಅಲ್ಲಿ ಅಧಿಕಾರ ವಹಿಸಿ ಜನಾಂಗವನ್ನು ನಡೆಸುವುದಾಗಿ ಮುಂದೆ ಬಂದಿದೆ ಅಲ್ಲಿನ ವೃತ್ತ ಪತ್ರಿಕೆಗಳೂ ಸರ್ವಾಧಿಕಾರಿಗಳ ನಡೆನುಡಿಗಳನ್ನೇ ಜನತೆಗೆ ಬೋಧಿಸ ಹತ್ತಿವೆ

ಜಪಾನಿನ ಕುತಂತ್ರ

ಆಸ್ಯಾ ಖಂಡದ ಒಡೆತನಕ್ಕೆ ಜಪಾನರ ಹವಣಿಕೆ

ಹೊಂಕೊಂಗ್‌ನಲ್ಲಿ ಜಪಾನ್ ಸೈನ್ಯ

ಯೂರೋಪಿನ ಕಳವಳ ಪರಿಸ್ಥಿಯ ಸದುಪಯೋಗ ಮಾಡಲು ಜಪಾನು ಹಲವು ತಂತ್ರಗಳನ್ನು ಮಾಡುತ್ತಿದೆ. ಹಾಲೆಂಡ್ ಪರಾಜಯವಾದೊಡನೆ ಅದರ ವಸಾಹತ್ತಾದ ನೆದರ್‌ಲೆಂಡ್ಸ್ ಇಸ್ಟ್ ಇಂಡೀಸ್ ದ್ವೀಪಸ್ತೋಮದಲ್ಲಿ ಜಪಾನ ಕಾರ್ಯಜಾಲವನ್ನು ಹರಡುವುದಕ್ಕಾಗಿ ಅಲ್ಲಿ ಭದ್ರವಾದ ನೌಕಾ ಶಿಬಿರಗಳನ್ನು ಕಟ್ಟಿಕೊಂಡು ... ಕಾಯುತ್ತಿದ್ದಾರೆ ಜಪಾನರು.

ಈಗ ಬರ್ಮದ ಮೇಲೆ ಕಣ್ಣು

ಬ್ರಿಟಿಷ ವಸಹತಿನ ಬರ್ಮದ ಚೀನಕ್ಕೆ ಸರಕುಗಳು ಸಾಗುತ್ತಿವೆ ... ಬಿದ್ದರೆ ... ಜಪಾನ್ ವಿದೇಶಾಂಗ ಕಾರ್ಯದರ್ಶಿ ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆಯನ್ನು ಕಳುಹಿಸಿದ್ದಾರೆ

ಜಪಾನೀ ವಿದ್ಯೆ

ಸಂಕ್ಷೇಪವಾಗಿ ಹೇಳುವುದಾದರೆ ಆಸ್ಯಾಖಂಡದ ಒಡೆತನವನ್ನು ಗಳಿಸುವುದಕ್ಕೆ ಐರೋಪ್ಯದ ಗದ್ದಲವೇ ಸುಸಮಯವೆಂದು ಜಪಾನು ಮನಗಂಡಂತಿದೆ.

ಚೀನವನ್ನು ಹದಮಾಡಿ ತನ್ಮೂಲಕ ಆಸ್ಯಾಖಂಡವನ್ನೇ ನುಂಗುವ ಕುಟಿಲೋಪಾಯಕ್ಕೆ ಕೈಹಾಕಿದೆ ಜಪಾನಿ ಮಿದುಳು.

ಪೌರಾತ್ಯ ಶಕ್ತಿ ರಾಷ್ಟ್ರವೆನಿಸಿದ ಜಪಾನು ತನ್ನ ಹಂಚಿಕೆಯಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಬಲ್ಲದೋ ಹೇಳಬರುವದಿಲ್ಲ.

ಆದರೆ ಒಂದು ವಿಷಯ ಮಾತ್ರ ನಿಜವಿದೆ ಜಪಾನಿನ ಈ ದುರುದ್ದೇಶದಿಂದ ರಕ್ಷಕ್ಕೆ ಹಾನಿ ಇರುವುದರಿಂದ ಅವೆರಡರೊಳಗೆ ಕೈ ಕೈ ಹತ್ತುವುದು ಖಂಡಿತ. ಅಂದಮಾತ್ರಕ್ಕೆ ಜಪಾನಿನ ಅಸ್ತಿತ್ವವು ಸಂದೇಹಾಸ್ಪದವೇ ಸರಿ.

ಯುದ್ಧ ಪಕ್ಷದವರಿಗೆ ಚೀನದಲ್ಲಿ ನೆಲೆಯಿಲ್ಲ.

ಐರೋಪ್ಯ ಯುದ್ಧದಲ್ಲಿ ಪಕ್ಷವಹಿಸಿದ ಜನಾಂಗದವರು ಚೀನದ ಕೆಲವು ಪ್ರಮುಖ್ಯ ಪಟ್ಟಣಗಳ ಅಂತರಾಷ್ಟ್ರೀಯ ವಸಾಹತುಗಳಿಂದ ಹೊರಡಬೇಕೆಂದೂ ಅವರಿಂದ ಅಲ್ಲಿಯ ಶಾಂತತೆಗೆ ಭಂಗ ಬರಬಹುದೆಂದೂ ಜಪಾನಿಯರು ಎಚ್ಚರಿಕೆ ಕೊಟ್ಟಿರುವರು ಐರೋಪ್ಯರನ್ನು ಚೀನಾದಿಂದ ಹೊರಡಿಸುವ ಹಂಚಿಕೆಗಳಲ್ಲಿ ಇದೊಂದು

ಮಹಾತ್ಮರಿಗೆ ವ್ಯಾಸ್‌ರಾಯರ ಆಹ್ವಾನ

ವಾರಾಂತ್ಯದಲ್ಲಿ ಗಾಂಧಿ-ವ್ಯಾಸ್‌ರಾಯ್ ಭೇಟಿ

"ಸಿಮ್ಲಾದಲ್ಲಿ ತಮಗ ಭೇಟಿಕೊಡುವಂತೆ ಮಾನ್ಯ ವ್ಯಾಸ್‌ರಾಯರು ಮಹಾತ್ಮಾ ಗಾಂಧಿಯವರಿಗೆ ಆಹ್ವಾನವನ್ನು ಕಳುಹಿಸಿರುವರೆಂದು ಅಸೋಸಿಯೆಟೆಡ್ ಪ್ರೆಸ್‌ದ ಪ್ರತಿನಿಧಿಗಳಿಗೆ ತಿಳಿದು ಬಂದಿದೆ ಈ ವಾರಾಂತ್ಯದಲ್ಲಿ ಮಹಾತ್ಮರು ಸಿಮ್ಲಾಕ್ಕೆ ಹೋಗುವವರಿದ್ದಾರೆ

ಮಲಯದಲ್ಲಿ ಸೈನ್ಯ ಸಿದ್ಧತೆ

ಭಾರತೀಯ ಸೈನ್ಯಕ್ಕೆ ಸೌಕರ್ಯಗಳು

ಯುದ್ಧದ ಭೀಕರತೆಯು ಹೆಚ್ಚಿದ ತೆಸಾಮ್ರಾಜ್ಯದಲ್ಲಿಯ ... ಭರದಿಂದ ಸಾಗುತ್ತಿವೆ ... ಅತ್ಯವಶ್ಯಕ ... ಬ್ರಿಟನು ... ಸೋಷ್ಟು ... ಬ್ರಿಟಿಷ್ ನೌಕಾ ದಳವು ಸ್ವಭದ್ರವಾಗಿಯೂ ಸುವ್ಯವಸ್ಥಿತ ರೀತಿಯಲ್ಲಿಯೂ ಹಿಂದಿನಂತೆಮರೆಯಲು ಶಕ್ಯವಿದೆ, ಸಾಗರಗಳನ್ನು ಈಗಲೂ ಅದು ಆಳಬಲ್ಲದು.

ಭಾರದ ದಂಡುಗಳು ಆಗಲೇ ಐರೋಪ್ಯ ಯುದ್ಧರಂಗದ ಅನೇಕ ಕಡೆಗಳಲ್ಲಿ ಭಾಗವಹಿಸಿವೆ. ಈಜಿಪ್ಟ ಏಡನ್‌ಗಳಲ್ಲಿ ಹಿಂದೀ ಸೈನಿಕರು ರಾತ್ರಿಹಗಲೆನ್ನದೆ ಕಠಿಣತರಬೇತಿ ಪಡೆಯುತ್ತಿದ್ದಾರೆ.

ಅತ್ಯಾಧುನಿಕ ಶಸ್ತ್ರಗಳನ್ನು ಉಪಯೋಗಿಸುವ ವಿಧಾನಗಳಲ್ಲಿ ಹಿಂದೀಯರು ಒಳ್ಳೇ ತರಬೇತಿ ಪಡೆಯುತ್ತಲಿದ್ದು ಈಗ ಸುವ್ಯವಸ್ಥಿತ ರೀತಿಯಲ್ಲಿ ಸಿದ್ಧವಾಗಿಯೇ ಇದ್ದಾರೆ.

ಸಿಂಗಾಪೂರವು ಒಂದುದೊಡ್ಡ ಬ್ರಿಟಿಷ್ ನೌಕಾ ಶಿಬಿರ ಇಲ್ಲಿಯೂ ಹಿಂದೀ ಸೈನ್ಯಗಳು ಕಳುಹಿಸಲ್ಪಟ್ಟಿವೆ. ಭಾರತದಿಂದ ಹೋಗಿ ಸಾಮ್ರಾಜ್ಯದ ಇತರ ಕಡೆಗಳಲ್ಲಿ ನೆಲೆಸುವ ಸೈನಿಕರಿಗೆ ಸರಕಾರದವರು ಅತ್ಯುತ್ತಮ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ.

ಈ ಸೈನ್ಯಗಳಲ್ಲಿನ ಜನರು ಹೆಚ್ಚಾಗಿ ಹಳ್ಳಿವರ್ಗಗಳಿಂದ ಚುನಾಯಿಸಲ್ಪಟ್ಟಿದ್ದರಿಂದ ಅವರು ತುಂಬಾ ಧೃಢಕಾಯರೂ ಶ್ರದ್ಧೆಯುಳ್ಳವರೇ ಆಗಿರುತ್ತಾರೆ.

ಶಾಂತಿಕಾಲದಲ್ಲಿ ಇವರಿಗೆ ಜೀವನವನ್ನು ಸಂತೋಷಮಯವಾಗಿರಗೊಳಿಸುವ ಎಲ್ಲಾ ತರದ ಸೌಕರ್ಯಗಳೂ ಒದಗಿಸಲಾಗುತ್ತವೆ ಉದಾಹರಣೆಗಾಗಿ ವಿವಿಧ ಆಟಗಳು, ಸಿನೇಮಾ ಪ್ರದರ್ಶನಗಳು, ರೇಡಿಯೋ ಗಾಯನ, ಸಿಂಗಾರ ನೋಟ ಪ್ರಯಾಣ ಇವೇ ಮೊದಲಾದ ಅನೇಕ ಕ್ರೀಡಾ ವಿನೋದಗಳಿವೆ

ಓದು ಬರಹ ಬಲ್ಲವರಿಗೆ ವಾರ್ತಾ ಪತ್ರಿಕೆಗಳನ್ನೂ ಅವರವರ ಅಭಿರುಚಿಯ ಪುಸ್ತಕ ಕಾದಂಬರಿಗಳನ್ನೂ ಅವರಿಗೆ ಪರಬರಾಯಿಸಲಾಗುವುದು.

ಮಲಯದ ಜನರು ಹಿಂದೀ ಸೈನಿಕರನ್ನು ಹೋದೆಡೆಗಳಲ್ಲಿ ಆದರ ಪೂರ್ವಕವಾಗಿ ಸ್ವಾಗತಿಸುತ್ತಾರೆ ಅವರಿಗೆ ಉಪಚಾರದ ಸೌಕರ್ಯಗಳು ಅವರ ... ರೀತಿ ... ಯಾವ ಸೌಕರ್ಯಗಳಿಗೂ ಕುಂದು ಕೊರತೆಗಳಿಲ್ಲ-ಹಿಂದೀಯರ ಸೈನ್ಯ ಶಿಬಿರಗಳಲ್ಲಿ ಅಂದಮೇಲೆ ಅವರ ಸದಾ ಉತ್ಸಾಹಿಗಳಾಗಿರುವುದು ಸ್ವಾಭಾವಿಕವೇ ಸರಿ

ಭಾರತೀಯ ಸಕ್ಕರೆ ಕೊಳ್ಳಲಾಗುವುದು

ಒಂದು ಲಕ್ಷ ಟನ್ ಭಾರತೀಯ ಸಕ್ಕರೆಯನ್ನು ಕೊಂಡುಕೊಳ್ಳಲಾಗುವುದೆಂದು ಸಾರ್ವಭೌಮ್ಯ ಸರಕಾರದವರು ಇಂಡಿಯಾ ಸರಕಾರಕ್ಕೆ ತಿಳಿಸಿರುವರು. ಆದರೆ ಇದಕ್ಕೆ ಅಂತರಾಷ್ಟ್ರೀಯ ಸಕ್ಕರೆ ಒಪ್ಪಂದವನ್ನು ನಡೆಸುವ ಕಾರ್ಯಕಾರಿ ಮಂಡಳಿಯವರ ಒಪ್ಪಿಗೆ ಬೇಕು. ಇವರು ಒಪ್ಪಿದರೆ ಕೊಳ್ಳುವಿಕೆಯ ವ್ಯವಹಾರವನ್ನು ಬ್ರಿಟಿಷ್ ಸರಕಾರದ ಆಹಾರ ಸಂಗ್ರಹ ಇಲಾಖೆಯವರು ಮಾಡುವರು.

ಇಂಡಿಯನ್ ಸುಗರ್ ಸಿಂಡಿಕೇಟಿನವರ ತಪಶೀಲು ಪ್ರಕಾರ ನಮ್ಮ ನೇಕಡ ಉತ್ಪತ್ತಿಯಲ್ಲಿ ೪ ಲಕ್ಷ ಟನ್ ಸಕ್ಕರೆಯು ಮಿಗುತ್ತದೆ.

ಪರಶೂಟ್ ಕೊಡೆಗಳಿಂದ ಇಳಿದು ಬರುವ ವೈರಿಗಳನ್ನು ಎದುರಿಸಲು ಬ್ರಿಟನಿನ ಸಿದ್ಧತೆಗಳು

ಜರ್ಮನಿಯು ಹೊಲೆಂಡ್, ಬೆಲ್ಜಿಯಂ, ಫ್ರಾನ್ಸ್ ದೇಶಗಳಲ್ಲಿ ಪರಶೂಟ್‌ಗಳೆಂಬ ಕೊಡೆಗಳ ಸಹಾಯದಿಂದ ವಿಮಾನಗಳಿಂದ ಸೈನಿಕರನ್ನು ಇಳಿಸಿ ಉಪಾಯಾಂತರಗಳಿಂದ ವಿಚಿತ್ರ ರೀತಿಯ ಜಯವನ್ನು ಪಡೆದಿರಬಹುದು ಈ ಉಪಾಯವನ್ನೇ ಲಿಂಕಾವಾರ್ಸಿಗಳಾದ ಬ್ರಿಟಿಷರ ಮೇಲೂ ಜರ್ಮನಿಯು ಉಪಯೋಗಿಸಬಹುದೆಂಬ ಅನುಮಾನಕ್ಕೆ ಕಾರಣವಿದೆ. ಆದರೆ ಬ್ರಿಟನು ಮಾತ್ರ ಹಾಗೆ ದಂಡೆತ್ತಿ ಬರುವ ವೈರಿಗಳನ್ನು ಇದಿರಿಸಲು ತುಂಬಾ ಸಿದ್ಧವಾಗಿಯೇ ಇದೆ.

ಜರ್ಮನರು ರಾಜ್ಯಗಳನ್ನು ಮುನ್ನುಗ್ಗಿ ಬಂದಂತೆ ತಮ್ಮ ವಿಮಾನಗಳಿಂದ ಮೊದಲೇ ತರಬೇತಿಯಾದ ಸೈನಿಕರನ್ನು ಅವರಿಗೆ ಬೇಕಾದ ಆಯುಧ ಸಮೇತ ಪರಶೂಟ್‌ಗಳಲ್ಲಿ ಕೆಳಗೆ ಇಳಿಸುವರು ಇವರು ತಕ್ಕಷ್ಟು ಮಂದಿ ಒಟ್ಟಾದ ಮೇಲೆ ವೈರಿದಳಗಳನ್ನು ಬೆನ್ನ ಕಡೆಯಿಂದ ಹೊಡೆಯಲಾರಂಭಿಸಿ ಉಪದ್ರ ಕೊಡುವುದು ಇಲ್ಲವೆ ಹಳ್ಳಿಗಳಿಗೆ ಇಳಿದು ಅಲ್ಲಿನ ಜನರನ್ನು ಹಿಂಸಿಸುವುದು, ಇಲ್ಲವೆ ತಮ್ಮ ಸ್ನೇಹಿತರಾದ ವಿಶ್ವಾಸ ಘಾತುಕರನ್ನು ಹೋಗಿ ಸೇರುವುದು ಮತ್ತು ತಮ್ಮ ಕಡೆಯವರಿಗೆ ಬೇಕಾದ ವರ್ತಮಾನಗಳನ್ನು ಸಂಜ್ಞೆಗಳಿಂದ ಕಳುಹಿಸುವುದು ಕೆಲವು ವೇಳೆ ಅವರು ಇಳಿಯುವ ರಾಜ್ಯದ ಸೈನಿಕರ ಪೋಷಾಕನ್ನು ಹಾಕಿಕೊಂಡಿದ್ದು ಮೋಸ ಮಾಡುವುದೂ ಇದೆ. ಇವರು ನಿರ್ದಯರಾಗಿ ಯಾವ ತರದ ನ್ಯಾಯ ನೀತಿ ಸತ್ಯಕ್ಕೂ ಎಡೆಕೊಡದೆ ಕೆಲಸ ಮಾಡುವ ಕಠಿಣ ಹೃದಯರು, ಆದುದರಿಂದ ಇಂತಹರೊಡನೆ ವ್ಯಾಡುವ ವರ್ತನೆಯೂ ನಿರ್ದಯವಾಗಿಯೇ ಇರಬೇಕಾಗಿದೆ ಇದಕ್ಕಾಗಿ ಹೊಸತಾಗಿ ತರಬೇತಿಯಾದ ಬೇರೆ ಸೈನಿಕರೇ (ಸ್ವಯಂ ಸೇವಕರೇ) ಬೇಕಾಯಿತು. ಈ ಅಗತ್ಯವನ್ನು ದೇಶವು ಕಂಡೊಡನೆ ಸರಕಾರದೊಂದಿಗೆ ಸಹಕರಿಸಲು ತಾನಾಗಿ ಮುಂದಾಯಿತು. ಅನೇಕ ಹಳ್ಳಿಗಳು ತಮ್ಮ ಸ್ವಯಂಸೈನ್ಯಗಳನ್ನು ತಯಾರಿಸಿಕೊಂಡು ಅಧಿಕಾರಿಗಳ ಕಡೆಯ ಅಪ್ಪಣೆಯನ್ನು ಎದುರು ನೋಡಿದುವು. ಇದರಿಂದ ಈಗ ಬ್ರಿಟನಿನಲ್ಲಿ ಕ್ರಮಬದ್ಧ ನೆಲ, ಜಲ, ಆಕಾಶ ಸೈನಿಕರಲ್ಲದೆ ಪರಶೂಟುಗಳಿಂದ ಇಳಿಯಲು ಸಾಹಸ ಮಾಡಬಹುದಾದ ಜರ್ಮನ್ ಸೈನಿಕರನ್ನು ಎದುರಾಡಲು ಬೇಕಾದ ಸೈನಿಕರು ಸುಸಜ್ಜಿತರಾಗಿ ಆಯುಧಪಾಣಿಗಳಾಗಿ ಕಾಯುತ್ತಿರುವರು. ಈ ಜನರನ್ನೆಲ್ಲಾ ಅಲ್ಲಲ್ಲಿನ ಸೈನ್ಯಾಧಿಕಾರಿಗಳು ಪ್ರಾಯ ಶಕ್ತಿ ಧೈರ್ಯ ಶಕ್ತಿಗೂ ಸರಿಯಾಗಿ ವಿಭಾಗಪಡಿಸಿ ಅವರವರ ಯೋಗ್ಯತೆಯ ಕೆಲಸವನ್ನು ಕೊಡುವರು. ಈ ಸ್ವಯಂಸೇವಕರಿಗೆ ಬರೇ ತಮ್ಮ ನಿಜವಾದ (ದಿನ) ವೇತನ ದೊರೆಯುತ್ತದಲ್ಲದೆ ಈ ಕೆಲಸಕ್ಕಾಗಿ ಹೆಚ್ಚು ಸಂಬಳ ದೊರೆಯುವುದಿಲ್ಲ. ಕಷ್ಟಕಾಲದಲ್ಲಿ ತಮ್ಮ ದೇಶರಕ್ಷಣೆ ಮಾಡಿದೆವೆಂಬ ಸಮಾಧಾನ ಚಿತ್ತವೇ ಅವರಿಗೆ ದೊರಕುವ ವೇತನ.

ಈ ಭಾಗದ ಸೈನಿಕರಾಗಿ ತೆಗೆದುಕೊಳ್ಳಲಾಗುವವರು ಕಡ್ಡಾಯವಾಗಿ ಸೈನ್ಯಕ್ಕೆ ಸೇರುವವರಿಂದ ಹೊರಗಣವರು. ಈ ಸೈನಿಕರು ನಿರಂತರವೂ ಪರಶೂಟ್ ಸೈನಿಕರು ಯಾವಾಗ ಬರುತ್ತಿರುವರೆಂದು ಕಾಯುತ್ತಿದ್ದು ಅವರು ಬರುವುದನ್ನು ಕಂಡ ಕೂಡಲೇ ಸಮೀಪದ ಸೈನ್ಯ ರಾಣ್ಯಗೆ ತಿಳಿಸಬೇಕು.

ಪರಶೂಟ್ ಸೈನಿಕರು ಕೆಲವೇ ಮಂದಿ ಬಂದಿಳಿದರೆ ಅವರ ಮೇಲೆ ಬಿದ್ದು ಅವರನ್ನು ಕೊಲ್ಲಬಹುದು ಆದರೆ ಅವರ ಮುಖ್ಯ ಕೆಲಸ ಸಮೀಪದ ಸೈನ್ಯಾಧಿಕಾರಿಗೆ ಈ ವಿಚಾರವನ್ನು ತಿಳಿಸುವುದು

ಈ ಕೆಲಸಕ್ಕೆ ಅನೇಕ ಮಂದಿ ಮಹಿಳೆಯರು ಈಗಾಗಲೇ ಸೇರಿಕೊಂಡಿರುವರು ಉತ್ತರ ಫ್ರಾನ್ಸಿನಲ್ಲಿ ಇಂತಹ ಮುಂಜಾಗ್ರತೆ ತೆಗೆದುಕೊಳ್ಳದೆ ಇದ್ದುದರಿಂದ ಜರ್ಮನರು ಮುಂದರಿಯಲು ಶಕ್ತರಾದರೆಂದು ಈಗ ತಿಳಿದುಬಂದಿದೆ

ಇಂಗ್ಲಾಂಡಿಗೆ ಒಂದು ವೇಳೆ ಜರ್ಮನರು ಬಂದಿಳಿದರೆ ಎಲ್ಲಾ ದಾರಿಗಳನ್ನ ಕಟ್ಟಲಾಗುವುದು ರಕ್ಷಣಾ ವಿಮಾನಗಳು ತಮ್ಮ ತಮ್ಮ ಜಾಗಗಳನ್ನು ಸರಿಯಾಗಿ ಕಾವಲಿಟ್ಟು ವೈರಿಗಳನ್ನ ತಡೆಯಬೇಕಾದ ಸೂಚನೆಗಳನ್ನು ಕೊಡುವವು ಜರ್ಮನರ ಆಟವು ಬ್ರಿಟನಿನೊಳಗೆ ನಡೆಯದಂತೆ ಖಂಡಿತವಾಗಿ ಮಾಡಬಹುದೆಂಬ ನಂಬಿಕೆಯು ಇದೆ ಮತ್ತು ವೈರಿಗಳಾಗಲೀ ಅವರ ವಿಮಾನಗಳಾಗಲೀ ಬ್ರಿಟಿಷ್ ದ್ವೀಪಗಲ್ಲಿ ಎಲ್ಲಿಯೂ ಬಂದು ತಂಗದಂತೆ ಖಂಡಿತವಾಗಿ ಮಾಡಬಹುದೆಂಬ ನಂಬಿಕೆಯು ಇದೆ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S. 288/1939 R I A 375/1940

ಸುಬ್ರಹ್ಮಣ್ಯ ಅಡಿಗ— ವಾದಿ Petr.

ರಾಮಕೃಷ್ಣ ಹೆಬ್ಬಾರ ಕೂಡಾ—ಪ್ರತಿವಾದಿರು Respondents

3ನೇ ಪ್ರತಿವಾದಿ. ಸೀತಾರಾಮ ಅಡಿಗ— ಮಂಜುನಾಥ ಅಡಿಗನ ಮಗ— ಹಾಲಿ ರಾಮಕುಂಜ ಗ್ರಾಮ,

ಸದ್ರಿ ವ್ಯವಹರಣೆಯಲ್ಲಿ ದಾವಾ ಆಸ್ತಿ ಮಾರಾಟದಿಂದ ವಾದಿಯು ಆತನ ಆವಜು ವಸೂಲು ಹೊಂದುವರೆ ಪ್ರಿಲಿಮಿನರಿ ಡಿಕ್ರಿಗನುಸಾರವಾಗಿ ಫೈನಲ ಡಿಕ್ರಿ ಕೊಡಿಸಬೇಕಾಗಿ ಬರಕೊಂಡ ಮೇಲಿನ ಅರ್ಜಿಯ ನೋಟೀಸಿನ ವಾಯಿದೆಯು ತಾ 19-7-1940 ಕ್ಕೆಂತ ನಿಶ್ಚೈಸಿರುವುದರಿಂದ ಆ ವಾಯಿದೆಗೆ ಎದ್ರಿರು ಯೇನಾದರೂ ಆಕ್ಷೇಪಗಳು ಹೇಳುವದಿದ್ದರೆ ತಪ್ಪದೆ ಕೋರ್ಟಿಗೆ 11 ಘಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು, ಇದಕ್ಕೆ ತಪ್ಪಿದರೆ ಆತನನ್ನು ಬಿವಾಯ ಎಂತ ಠರಾವಾಗುವದು, ಎಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Puttur 20-6-'40 } S. Ramachandra Rao, M. A., B. L., Pleader for plaintiff

ಪ್ರತೀ ಮನೆಯಲ್ಲುಂಟಾದ ಅಪಘಡಗಳಿಗೆ ದಿವ್ಯ ಔಷಧಿ

ಜ್ಯಾಂಬಕು ಯಾವತ್ತೂ ಚರ್ಮರೋಗಗಳನ್ನು ಗುಣಪಡಿಸುತ್ತದೆ

ಮಕ್ಕಳು ಯಾವಾಗಲೂ ಬಾಧೆಗೊಳಪಡುವರು. ಅವರು ಯಾವಾಗಲೂ ಬಿದ್ದು ಮೊಣಕಾಲು ಮೊಣಕೈ ಗಂಟುಗಳಿಗೆ ಗಾಯಗಳಾಗುವುವು ಅವರ ಕೈಗಳು ಮುರಿದು ಹೋಗುವ ಸಂಭವವು ಒದಗಬಹುದು ಬಿದ್ದು ಮುಖವು ಪರಿಚಿದಂತಾಗಬಹುದು. ಆದರೆ ಈ ಎಲ್ಲಾ ಅಪಘಡಗಳಿಂದುಂಟಾಗುವ ಗಾಯಗಳನ್ನು ವಿಷಹಾರಿ ಜ್ಯಾಂಬಕು ಗುಣಪಡಿಸುವುದು ಜ್ಯಾಂಬಕಿನಲ್ಲಿರುವ ಅಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯು ಆಳವಾಗಿ ನಿಮ್ಮ ನರನಾಡಿಗಳನ್ನು ಹೊಕ್ಕು ನೋವನ್ನು ಗುಣಪಡಿಸಿ ಬಾತುಕೆಯನ್ನು ಕಡಿಮೆಮಾಡುತ್ತದೆ ವ್ರಣಗಳಿಂದ ಬರುವ ರಸಿಗೆ ಯಾ ಕಶ್ಮಲ ನೀರನ್ನು ಒಣಗಿಸಿ ಒಂದೂ ಕಲೆಯುಂಟಾಗದಂತೆ ಜ್ಯಾಂಬಕು ಗುಣಪಡಿಸುತ್ತದೆ ಎಲ್ಲಾ ಔಷಧಿ ವ್ಯಾಪಾರಿಗಳು ಜ್ಯಾಂಬಕನ್ನು ರೂ 1 ಮತ್ತು 2 4 0 ರಂತೆ ಮಾರುತ್ತಾರೆ.



ಏಜಂಟ್ಸ್

ಮೆಸರ್ಸ್ ದಾಥಾ ಮತ್ತು ಕಂಪನಿ ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ ಅಂದರೆ ಗುಣಪಡಿಸುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೀಕು ಕಡಿಮೆಯಾಗುವುದು, ಶೀತದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು ಸಾವಕಾಶವಾಗಿ ರಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು ಪುರೋಹಿತ ಶ್ವಾಸಹಾರಿಯು ೩ ಔ, ೬ ಔ ಮತ್ತು ೧೨ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ.೩-೦, ೬-೦ ಮತ್ತು ೬ ೮ ರಗಳಿಗೆ ಎಲ್ಲ ಕಡೆಸಿಗುವುದು ತಿಳಿಸಿಕೊಳ್ಳುವ ನಿಳಾಸ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು

ವನಮಾಳೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು ಬ್ರೆಂಚ್ ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ 1,00,000 ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 45

„ 6 ತಿಂಗಳಿಗೆ 4%, „ 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡೈರೆಕ್ಟರ್.

ಸಿನೆಮಾ ಪುಟ

ಬಂಗಾಳ ಸೆನ್ಸರ್ ಬೋರ್ಡಿನ ವಿಚಿತ್ರಧೋರಣೆ

ಬಂಗಾಳ ಪ್ರಾಂತ್ಯದಲ್ಲಿ ಚೀನಾ ಜಪಾನ್ ಯುದ್ಧದ ಚಲಚಿತ್ರಗಳನ್ನು ಪ್ರದರ್ಶಿಸಬಾರದೆಂದು ಅಲ್ಲಿನ ಫಿಲ್ಮ್ ಸೆನ್ಸರ್ ಬೋರ್ಡಿನವರು ಆ ಸಮ್ಬಂಧಪಟ್ಟ ಕೆಲವು ಚಿತ್ರಗಳನ್ನು ರದ್ದುಮಾಡಿರುವರು.

ಮೇಲೆ ಹೇಳಿದ ಚಿತ್ರಗಳಲ್ಲಿನ ವಿಷಯಗಳಲ್ಲಿ ವಿಶೇಷದ್ದೇನೂ ಇರಲಿಲ್ಲ. ಚೈನಾದಲ್ಲಿ ಜಪಾನಿಯರಿಂದ ನಡೆದ ಹಾವಳಿ; ಅಲ್ಲಿಯ ಜನರ ಕರುಣಾಜನಕ ಪರಿಸ್ಥಿತಿ, ಇವುಗಳನ್ನು ಇದ್ದಕ್ಕಿದ್ದ ಹಾಗೆ ಚಿತ್ರಿಸಲಾಗಿತ್ತು.

ಇವುಗಳನ್ನು ತೋರಿಸುವದರ ಮೂಲಕ ಭಾರತದಲ್ಲಿ ಜಪಾನೀ ವಿರೋಧ ಚಳವಳಿಗೆ ತುಂಬಾ ಎಡೆಸಿಗುವುದಾಗಿಯೂ ತನ್ಮೂಲಕ ಭಾರತ ಜಪಾನ್ ಒಳಗೆ ಪರಸ್ಪರ ವೈಶಮ್ಯಕ್ಕೆ ಕಾರಣವಾಗುತ್ತದೆಂದೂ ಸೆನ್ಸರ್ ಬೋರ್ಡಿನವರ ತರ್ಕ.

ಇರಲಿ. "ಗುಂಗಾಡಿನ್" "ಬೆಂಗಾಲ್ ಲಾನ್ಸರ್" ಇವೇ ಮೊದಲಾದ ಚಿತ್ರಗಳು ಹಿಂದೆ ಇದೇ ಸೆನ್ಸರ್ ಬೋರ್ಡಿನವರಿಂದ ಯಾವ ಆಕ್ಷೇಪಣೆ ಇಲ್ಲದೆ ಪ್ರದರ್ಶನಕ್ಕೆ ಅರ್ಹವಾದುವುವೆಂದು ಅನುಮೋದಿಸಲ್ಪಟ್ಟಿದೆ.

ಸತ್ಯಸ್ಥಿತಿ ಹೇಳುವುದಾದರೆ ಮೇಲ್ಕಾಣಿಸಿದ ಚಿತ್ರಗಳು ಭಾರತವನ್ನೂ ಭಾರತೀಯರನ್ನೂ ವ್ಯಂಗವಾಗಿ ಹೀಯಾಳಿಸುವಂತಹ ಚಿತ್ರ ನಿರೂಪಣೆಗಳು.

ಜಪಾನಿಯರ ಮನಸ್ಸನ್ನು ನೋಯಿಸಬಾರದೆಂಬ ಉದ್ದೇಶದ ಬಂಗಾಳದ ಸೆನ್ಸರ್ ಬೋರ್ಡಿನವರಿಗೆ ಭಾರತೀಯರ ಮನನೋಯುವಿಕೆಯ ಕಡೆಗೆ ಗಮನವಿಲ್ಲದಿದ್ದುದು ಖೇದಾಸ್ಪದ ವಿಚಾರ.

ಚೀನದ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಗಳನ್ನು ತೋರಿಸುವುದರ ಮೂಲಕ ಭಾರತದಲ್ಲಿ ವಿನಾಶಕಾರಿ ಶಕ್ತಿರಾಷ್ಟ್ರಗಳ ಮೇಲಿನ ತಾತ್ಸಾರವು ಹೆಚ್ಚಿದಂತಾಗಿ ಮಿತ್ರರಾಷ್ಟ್ರಗಳ ವಿಜಯಕ್ಕೆ ಹೆಚ್ಚಿನ ಸಹಾಯವನ್ನು ಭಾರತೀಯರು ನೀಡಲು ಒಂದು ರೀತಿಯ ಸಹಾಯವಾಗುತ್ತೆಂಬ ವಿಷಯವು ಆ ಸೆನ್ಸರ್ ಬೋರ್ಡಿನವರ ಮಿದುಳಿಗೆ ಹೋಗದ ವಿಷಯವು ಇನ್ನೂ ಆಶ್ಚರ್ಯಕರವಾದುದು.

ಭಾರತದಲ್ಲಿ ಇಂಗ್ಲಿಷ್ ಚಿತ್ರ ತಯಾರಿಕೆ

ಅಂತರಾಷ್ಟ್ರೀಯ ಮತ್ತು ಅಂತರ್ ಪ್ರಾಂತೀಯ ಪ್ರದರ್ಶನ ಅನುಕೂಲತೆಗಾಗಿ ಇಂಗ್ಲಿಷ್ ವಾಕ್ಸಲನ ಚಿತ್ರಗಳನ್ನು ತಯಾರಿಸುವ ಉದ್ಯಮದಲ್ಲಿ ಅನೇಕ ಚಲಚಿತ್ರ ಸಂಸ್ಥೆಗಳು ಸಾಹಸ ಪಡುತ್ತಿವೆ. ಇವು ಯಶಸ್ವಿಯಾದರೆ ದೇಶ ವಿದೇಶಗಳಲ್ಲಿ ಈ ಚಿತ್ರಗಳಿಗೆ ತುಂಬಾ ಪ್ರೋತ್ಸಾಹ ದೊರಕಬಹುದು.

ಹಿಂದೂ ಮುಸ್ಲಿಂ ಐಕ್ಯತೆ ಚಲಚಿತ್ರದಿಂದ.

ಪ್ರಭಾತ್ ಕಂಪೆನಿಯವರು "ಪಾದೊಸಿ" ಎಂಬ ಚಿತ್ರ ತಯಾರಿಕೆಯಲ್ಲಿ ತೊಡಗಿರುವರು. ಅದ್ವಿತೀಯ ಶಾಂತಾರಾಮರ ನಿರ್ದೇಶತ್ವದಲ್ಲಿ ಚಿತ್ರವು ರೂಪುಗೊಳ್ಳುತ್ತಿದೆಯೆಂದ ಮೇಲೆ ಅದರಲ್ಲಿ ನೂತನ ಮಾದರಿಯ ತತ್ವಶೀಲಗಳ ನಿರೂಪಣೆಗಳು ಸೇರಿಕೊಂಡಿರಲೇಬೇಕು.

ಈ ಚಿತ್ರವು ಹಿಂದೂ ಮುಸ್ಲಿಂ ಐಕತೆಯನ್ನು ಸಾರುವಂತಹದಿದೆ. ಚಲಚಿತ್ರಗಳಿಂದ ದೇಶ ನೆಮ್ಮದಿಗೆ ಯಾವ ರೀತಿಯ ಸಹಾಯವನ್ನು ಮಾಡಬಹುದೆಂಬುದಕ್ಕೆ ಶಾಂತಾರಾಮರ ಈ ಚಿತ್ರವು ಒಂದು ನಿದರ್ಶನವಾಗಿರುವುದಂತೆ.

ವಾರ್ನರ್ ಬ್ರದರ್ಸ್‌ರ ಆದರ್ಶ

ಅಮೇರಿಕದ ಸುಪ್ರಸಿದ್ಧ ಚಿತ್ರ ತಯಾರಕರಲ್ಲಿ ವಾರ್ನರ್ ಬ್ರದರ್ಸ್ ಸಂಸ್ಥೆಯು ಒಂದು ಉನ್ನತ ಸ್ಥಾನ ಪಡೆದಿದೆ. ಈ ಸಂಸ್ಥೆಯವರು ಸಕಲ ದೃಷ್ಟಿಗಳಿಂದಲೂ ಶ್ರೇಷ್ಠವೆನಿಸಿಕೊಂಡ ಚಿತ್ರಗಳನ್ನು ತೆಗೆದು ಜಗತ್ತಿನ ಶ್ಲಾಘನೆಗೆ ಅರ್ಹರಾಗಿದ್ದಾರೆ.

ಇವರ ಚಿತ್ರಗಳು ಹೆಚ್ಚಾಗಿ ಆದರ್ಶ ಶೀಲ ವ್ಯಕ್ತಿಗಳ ಜೀವನ ಇತಿಹಾಸಗಳು. ಇವರ ಕಥೆಗಳಲ್ಲಿ ನಿರೂಪಿಸಲ್ಪಟ್ಟ ತತ್ವಶೀಲಗಳು ಜಗತ್ತಿನ ಪ್ರಗತಿ ನಾಗರಿಕತೆಗೆ ಮಾರ್ಗ ತೋರಿಸುವಂತಹವುಗಳು. ಅವುಗಳನ್ನು ಜನತೆಯು ಮುಂದಿಡುವುದರಿಂದ ಸಂಸ್ಕೃತಿಯು ಎಷ್ಟೋ ವಿಕಾಸ ಹೊಂದಿದಂತಾಗುವುದು.

"ಎಮಿಲ್ ಜೋಲಾ" "ಲೂಯಿಸ್ ಪೆಸ್ಟ್ಯೂರ್" "ಪ್ಲಾರೆನ್ಸ್ ನ್ಯಾಟಿಂಗೇಲ್" ಇವೇ ಕೆಲವು ಇವರ ತಯಾರಿಕೆಗಳು.

ಹಿಟ್ಲರ್ ಮತ್ತು ಚಾಪ್ಲಿನ್‌ನ ಜಾತಕ ಒಂದೇ!

ಸರ್ವಾಧಿಕಾರಿ ಹಿಟ್ಲರನಿಗೂ ಹಾಸ್ಯರಸ ನಾಯಕನಾದ ಚಾರ್ಲಿ ಚಾಪ್ಲಿನನಿಗೂ ವಯಸ್ಸಿನಲ್ಲಿ ನಾಲ್ಕೇ ದಿನಗಳ ವ್ಯತ್ಯಾಸ.

ಇಬ್ಬರೂ ಒಂದೇ ನಕ್ಷತ್ರದ ವರ್ಚಸ್ಸಿನಲ್ಲಿ ಬೆಳೆದಿರುವರಂತೆ.

ಇಬ್ಬರೂ ಬಾಲ್ಯವನ್ನು ಕಷ್ಟದಲ್ಲಿ ಕಳೆದವರು. ಈಗ ಒಬ್ಬ ಸರ್ವಾಧಿಕಾರಿ. ಒಬ್ಬ "ಸರ್ವಾಧಿಕಾರಿ" ಎಂಬ ಚಿತ್ರವನ್ನು ತೆಗೆಯುತ್ತಿದ್ದಾನೆ.

ಚಾಪ್ಲಿನನು ತನ್ನ ಹೊಸ ಚಿತ್ರದಲ್ಲಿ ಸರ್ವಾಧಿಕಾರಿಗಳನ್ನು ಬಹುವಾಗಿ ಗೇಲಿ ಮಾಡಿದ್ದಾನಂತೆ.

ಈ ಚಿತ್ರವು ಇನ್ನೂ ಪೂರ್ಣವಾಗಲಿಲ್ಲ. ಆಗಲೇ ಸರ್ವಾಧಿಕಾರಿ ರಾಷ್ಟ್ರಗಳಲ್ಲಿ ಅದನ್ನು ಪ್ರದರ್ಶಿಸಬಾರದೆಂಬ ಆಜ್ಞೆಯಾಗಿದೆ.

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೀಕಡಾ ನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳೆಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇರಿಸುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದುದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

Rs. 50/-, 100/-, 500/-, 1,000/- & 5,000/-

are now issued at all our Branches.

For particulars call at or write to

Any of our nearest Branches

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*

ಜೀವನಜ್ಯೋತಿಗಳು:

ಮಹಾಪುರುಷ ಮಹಾತ್ಮಾ ಗಾಂಧಿ

೨

ಚೀನದ ಅನಾಗರಿಕ (?)ರನ್ನು ನಾಗರಿಕರನ್ನಾಗಿ ಮಾಡಲಿಕ್ಕೆ ಯುದ್ಧವನ್ನು ಹೂಡಿರುವ ಜಪಾನಿನಲ್ಲಿಯೇ ಆಗಲಿ, ವರ್ಣದ್ವೇಷದ ಕಿಚ್ಚು ಇನ್ನೂ ಪ್ರಬಲವಾಗಿ ಉರಿಯುತ್ತಿರುವ ಅಮೇರಿಕದಲ್ಲಿಯೇ ಆಗಲಿ ಅಥವಾ ಪ್ರಪಂಚದ ಇನ್ನಾವದೇ ರಾಷ್ಟ್ರದಲ್ಲಾಗಲಿ, 'ಗಾಂಧಿ' ಎಂಬ ಹೆಸರನ್ನು ಜನರು ಪವಿತ್ರ ಭಾವನೆಯಿಂದ ಜಪಿಸುವರು ಎಂದು ಈಗ ತಾನೇ ಪ್ರಪಂಚ ಸಂಚಾರವನ್ನು ಮಾಡಿ ಮರಳಿರುವ ಶ್ರೀ. ಎ. ಕೆ. ಚೆಟ್ಟಿಯಾರರು, ತಾವು ಬರೆದು ಪ್ರಕಟಿಸಿರುವ ಒಂದು ತಮಿಳು ಪುಸ್ತಕದಲ್ಲಿ ಹೇಳಿರುತ್ತಾರೆ.

ಗಾಂಧಿಯವರು ಅದ್ವಿತೀಯರು

ಶ್ರೀ. ಚೆಟ್ಟಿಯಾರರು ಜಪಾನಿನಲ್ಲಿ ಸಂಚಾರ ಮಾಡುತ್ತ ಇದ್ದಾಗ ಊನಾ ಎಂಬ ಒಂದು ಸಣ್ಣ ರೈಲ್ವೆ ಸ್ಟೇಶನಿನಲ್ಲಿ ಇಳಕೊಂಡಿದ್ದರು. ಆಗಲೇ ಇಬ್ಬರು ಜಪಾನಿ ತರುಣರು ಅವರ ಮುಂದೆ ಬಂದು– 'ತಾವು ಗಾಂಧಿ ದೇಶದಿಂದ ಬಂದಿರಾ?' ಎಂದು ಕುತೂಹಲದ ಪ್ರಶ್ನೆಯನ್ನು ಕೇಳಿದರು. 'ಹೌದು' ಎಂದು ಉತ್ತರವನ್ನು ಕೊಟ್ಟಾಗ ಉತ್ತರವನ್ನು ಕೊಟ್ಟಾಗ ಆ ತರುಣರು–'ಗಾಂಧಿಯವರಂಥ ಮಹಾಪುರುಷರು ಜಗತ್ತಿನಲ್ಲಿ ಇನ್ನೊಬ್ಬರಿಲ್ಲ. ಜಪಾನಿನಲ್ಲಿ ಅನೇಕ ಮಂದಿ ವೀರ ಪುರುಷರು ಹುಟ್ಟಿದ್ದಾರೆ. ಅನೇಕ ಮಂದಿ ಸಾರ್ವಭೌಮರಿಗೆ ಜಪಾನು ಜನ್ಮಕೊಟ್ಟಿದೆ. ಆದರೆ ಗಾಂಧಿಯವರಂಥ ಮಹಾತ್ಮರು ಇಲ್ಲಿ ಜನ್ಮ ತಾಳಲೇ ಇಲ್ಲ' ಎಂದು ಮುಕ್ತಕಂಠದಿಂದ ಗಾಂಧಿಯವರನ್ನು ಪ್ರಶಂಸಿಸಿದರು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಭಾವನೆಯು ಹುಟ್ಟಿನಿಂದ ಬಂದಿರುವ ಜಪಾನಿನಲ್ಲಿ, ಜನರು ಗಾಂಧಿಯವರನ್ನು ತಮ್ಮ ಅರಸರಿಗಿಂತಲೂ ಮಿಗಿಲಾಗಿ ಭಾವಿಸಿರುವುದು ಆಶ್ಚರ್ಯಕರವಲ್ಲವೆ?

ಪೋಲಾಂಡಿನಲ್ಲಿ

ಶ್ರೀ ಚೆಟ್ಟಿಯಾರರು ಅಮೇರಿಕವನ್ನು ಸಂಚರಿಸುತ್ತಿದ್ದಾಗ ಅಲ್ಲಿಯೂ ಹೀಗೆಯೇ ಆಯಿತು. ಅವರು ಜಗತ್ಪ್ರಸಿದ್ಧವಾದ ನ್ಯೂಯೋರ್ಕಿನ ಸಾರ್ವಜನಿಕ ಪುಸ್ತಕಾಲಯವನ್ನು ನೋಡಲಿಕ್ಕೆ ಹೋಗಿದ್ದರು. ಅಲ್ಲಿಯ ಅಧಿಕಾರಿಯು ಶ್ರೀ ಚೆಟ್ಟಿಯಾರರನ್ನು ನೋಡಿ–'ನಮ್ಮ ಪುಸ್ತಕಾಲಯದಲ್ಲಿ ಗಾಂಧಿಯವರ ಜೀವನ ಮತ್ತು ಅವರ ಕಾರ್ಯಕಲಾಪಗಳ ಕುರಿತು ೨೬ ಭಾಷೆಗಳಲ್ಲಿ ಬರೆಯಲ್ಪಟ್ಟಿರುವ ಉದ್ಗ್ರಂಥಗಳಿರುತ್ತವೆ. ಇಂಗ್ಲಿಷ ಭಾಷೆ ಒಂದರಲ್ಲೇ ಅವರ ವಿಷಯವಾಗಿ ಬರೆದ ೨೦೦ ಗ್ರಂಥಗಳಿರುವವು. ಮಾತ್ರವಲ್ಲ; ಗಾಂಧಿಯವರು ಸ್ವತಃ ಬರೆದ ಪುಸ್ತಕಗಳೂ ನಮ್ಮಲ್ಲಿವೆ' ಎಂದರು.

ಶ್ರೀ ಚೆಟ್ಟಿಯಾರರು ಅಮೇರಿಕದಿಂದ ಹೊರಟು ಅಟ್ಲಾಂಟಿಕದಲ್ಲಿ ಸಮುದ್ರ ಪ್ರಯಾಣ ಮಾಡುತ್ತಲಿದ್ದರು. ಅವರು ಪ್ರಯಾಣ ಮಾಡುತ್ತಿದ್ದ ಅದೇ ಹಡಗಿನಲ್ಲಿ ಪೋಲಾಂಡಿನ ಒಬ್ಬ ತರುಣಿ ಯೂ ಇದ್ದಳು. ಅವಳು ತನ್ನ ಭಾಷೆಯಲ್ಲಿ ಒಂದು ಗೀತವನ್ನು ಹಾಡುತ್ತಿದ್ದಳು. ಚೆಟ್ಟಿಯಾರರು ಹೋಗಿ ಅವಳ ಹತ್ತಿರ– 'ಅದರ ಭಾವವೇನು'' ಎಂದು ಕೇಳಿದರು. ಅವಳು–'ಇದು ಜಗತ್ತಿನ ಮಹಾಪುರುಷರ ಸ್ತುತಿಪರವಾದ ಒಂದು ಗೀತ. ನಮ್ಮ ದೇಶದಲ್ಲಿ ಈ ಗೀತವು ಸರ್ವಜನಪ್ರಿಯವಾಗಿದೆ. ಇದರಲ್ಲಿ ಪೋಲಾಂಡಿನ ಜನರು ಗಾಂಧಿಯವರನ್ನೇ ಜಗತ್ತಿನ ಮಹಾಪುರುಷರಲ್ಲಿ ಅಗ್ರಗಣ್ಯರೆಂದು ತಿಳಕೊಂಡಿರುವರು' ಎಂದಳು. ಅವಳು ಹಾಡಿದ ಆ ಗೀತದಲ್ಲಿ ಗಾಂಧಿಯವರ ಹೆಸರು ಎರಡು ಕಡೆಗಳಲ್ಲಿ ಬಂದಿತ್ತು.

ಏಸುವಿನ ಎರಡನೆಯ ಅವತಾರ

ಕ್ರೈಸ್ತ ಧರ್ಮೀಯರು ತಮ್ಮ ಅಂಧ ರೂಢಿ ನಿಶ್ವಾಸ, ಆಚಾರವಿಚಾರಗಳನ್ನು ಮೂಲೆಗೆ ತಳ್ಳಿ, ಕೇವಲ ಏಸುವಿನ ಪವಿತ್ರ ಜೀವನವನ್ನು ಅನುಕರಿಸುವರಾದರೆ, ಇಂದು ಯಾರು ತಾನೆ ಕ್ರೈಸ್ತ ಧರ್ಮದಲ್ಲಿ ದೋಷವನ್ನು ಕಾಣಬಹುದು? ಎಂದು 'ಸೆಟರ್ಡೇ ಇವನಿಂಗ್ ಪೋಸ್ಟ' ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆಯುತ್ತಾ ವಿಲ್ ಡೂರಾಂಟ ಎಂಬವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಪವಿತ್ರವಾದ ನೀರೆಲ್ಲ ಹರಿದು ಹೋಗಿ ಈಗ ಕ್ರೈಸ್ತ ಮತಾಚರಣೆಯಲ್ಲಿ ಕೇವಲ ಕಶ್ಮಲ ಮಾತ್ರ ನಿಂತಿರುತ್ತದೆಂದು ಅವರು ಅಭಿಪ್ರಾಯವನ್ನೇ ಕೊಟ್ಟಿರುವರು.

ಗಾಂಧಿಯವರು ಕ್ರೈಸ್ತರಲ್ಲಿಲ್ಲ ಮಹಾಪವಿತ್ರರು ಅವರನ್ನು ಏಸುವಿನ ದ್ವಿತೀಯ ಅವತಾರವೆಂದು ಕರೆದರೂ ಕರೆಯಬಹುದು. ಜೀವಂತ ಕ್ರೈಸ್ತರಲ್ಲಿ ಅವರು ಮಹಾತ್ಮರು ಎನ್ನುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಕ್ರೈಸ್ತನ ಬೋಧನೆಯನ್ನು ಅವರು ತಮ್ಮ ಜೀವನದಲ್ಲಿ ಆಚರಿಸಿದಂತೆ ಬೇರೆ ಯಾರೂ ಆಚರಿಸಿಲ್ಲ.

ಭಾರತದ ಹಿತರಕ್ಷಣೆ

ಗಾಂಧಿಯವರ ನಿಜವಾಗಿಯೂ ಮಹಾತ್ಮರಾಗಿರುವುದರಿಂದ ಭಾರತದ ಹಿತವು ಅವರ ಕೈಯಲ್ಲಿ ಸಭದ್ರವಾಗಿದೆ ಎನ್ನಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಆದುದರಿಂದ ಕಾಂಗ್ರೆಸು ಸ್ವಾತಂತ್ರ್ಯ ಆಂದೋಲನದ ಭವಿಷ್ಯ ಕಾರ್ಯಕ್ರಮವನ್ನು ರೂಪಿಸಿ, ಜನತೆಗೆ ಕರ್ತವ್ಯ ಮಾರ್ಗವನ್ನು ತೋರಿಸುವ ಭಾರವನ್ನು ಗಾಂಧಿಯವರು ಹೇರಿ ಮೇಲೆ ಟು ಅವರ ಧುರೀಣತ್ವವನ್ನು ಸಂಪೂರ್ಣ ಒಪ್ಪಿಕೊಂಡಿರುವುದು ಸಹಜವಾಗಿದೆ. ಲೋಕ ಯುದ್ಧವು ಪ್ರಳಯಕಾರಿಯಾಗಿ ಯೂರೋಪಿನಲ್ಲಿ ನಡೆಯುತ್ತಿರುವಂಥ ಈ ಮಹಾಬಿಕ್ಕಟ್ಟಿನ ಕಾಲದಲ್ಲಿ ಭಾರತೀಯರು ಮಹಾತ್ಮರನ್ನು ಅನುಸರಿಸಿ ಹೋಗುವದರಿಂದಲೇ ಅವರ ಹಿತವಾಗುವದು, ಕಲ್ಯಾಣವಾಗುವದು ಎಂಬುದಕ್ಕೆ ಸಂದೇಹವಿಲ್ಲ. ಭಾರತದ ಮಾತ್ರವಲ್ಲ ಪ್ರಪಂಚದ ಉದ್ಧಾರವೇ ಮಹಾತ್ಮರ ಸತ್ಯ–ಮತ್ತು ಅಹಿಂಸೆಯ ದಿವ್ಯ ಸಂದೇಶವನ್ನು ಕೇಳಿ, ಅದರಂತೆ ನಡಕೊಳ್ಳುವುದರಿಂದ ಆಗುವದು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊರೆದುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ' ಎಂಬ ಸೀಲನ್ನು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ, 'ಗೊನೊಕಿಲರ' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ–ಕೊಕಸ' ಎಂಬ ವಿಷಕಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY 4

Madras Agent: **Appah & Co, China Bazar Madras.**

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1–4–0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೊ.,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O: Peridepi (ನೆಲ್ಲೂರು ಡಿ.).

ಅರಸುತನ ಬೇಕಾದರೆ—?
ಮುಸ್ಸೋಲಿನಿಯ ಮಂತ್ರಾಲೋಚನೆ

ಇಟಲಿಯು ಯುದ್ಧದಲ್ಲಿ ಧುಮು ಕುವ ಯೋಚನೆಯಲ್ಲಿದ್ದಾಗ ಅರಸರಾದ ವಿಕ್ಟರ್ ಇಮಾನ್ಯುವೇಲ್‌ರು ಮುಸ್ಸೋಲಿನಿಯನ್ನು ಕರೆಕಳುಹಿಸಿದರಂತೆ 'ವಿಪರೀತ ಕಾರ್ಯಭಾರ' ದಿಂದ ಮುಸ್ಸೋಲಿನಿಗೆ ರಾಜದರ್ಶನವನ್ನು ಮಾಡಲಾಗಲಿಲ್ಲ.

'ವಿಕ್ಟರರು ಅಸ್ವಾದ ಡ್ಯೂಕರನ್ನು ಮಂತ್ರಿ ಮುಸ್ಸೋಲಿನಿನ ಬಳಿ ಕಳುಹಿಸಿ ಯುದ್ಧದಲ್ಲಿ ಸೇರುವುದರ ಅಪ್ರಯೋಜಕತೆಯನ್ನು ನಿವೇದಿಸಿದರಂತೆ. ತನ್ನ ಯೋಚನೆಯು ನಿರ್ಧರಿಸಲ್ಪಟ್ಟಿದೆಯಾಗಿ ಉತ್ತರ ಕೊಟ್ಟನಂತೆ ಡಿಕ್ಟೇಟರ್ ಮಂತ್ರಿ ಆ ಮೇಲೆ ಅರಸರ ಕಡೆಯಿಂದ ಕಾರ್ಯಭಾರ ವಹಿಸಿಬಂದ ರಾಜಕುಮಾರ ಲೋರ್ವರಿಗೆ ಮುಸ್ಸೋಲಿನಿ ಕೊಟ್ಟ ಉತ್ತರವು ಅರಸರನ್ನು ಬೆಪ್ಪುಗೊಳಿಸಿತಂತೆ. "ಅರಸನಾಗಿ ಉಳಿಯ ಬೇಕಾದರೆ ನನಗೆ ಸಂಬಂಧಪಟ್ಟ ಯಾವ ಕಾರ್ಯದಲ್ಲೂ ವಿಕ್ಟರರು ಕೈಹಾಕಬಾರದು"

ಟರ್ಕಿಯು ಯಾವ ಕಡೆ?
ಬಾಲ್ಕನ್ ರಾಷ್ಟ್ರಗಳಲ್ಲಿ ಕಳವಳ

ಮೊದಲಿಂದಲೂ ಮಿತ್ರರಾಷ್ಟ್ರಗಳ ಪರವಾಗಿ ಸಹಾನುಭೂತಿ ದೋರಣೆ ತೋರಿಸುತ್ತಿದ್ದ ಟರ್ಕಿಯು ಇಟಲಿಯು ಯುದ್ಧ ಪ್ರವೇಶ ದಿನದಿಂದ ಅಗಾಯಿತು ನಿಶ್ಶಬ್ದತೆಯನ್ನು ತೋರಿಸಿರುವುದು ಒಂದು ದೊಡ್ಡ ಸಮಸ್ಯೆಯಾಗಿದೆ

ಇಟಲಿಯ ನಿರ್ಧಾರವಾದ ಕೂಡಲೇ ಜರ್ಮನಿಯು ಟರ್ಕಿಯೊಡನೆ ಒಂದು ವಾಣಿಜ್ಯ ಒಪ್ಪಂದವನ್ನೂ ಮಾಡಿಕೊಂಡಿದೆ.

ಈಗ ಟರ್ಕಿಯು ಯುದ್ಧದಲ್ಲಿ ಸೇರದಂತೆ ರುಮೇನಿಯಾ ಯುಗೋಸ್ಲೇವಿಯಾ ಸರಕಾರಗಳು ಟರ್ಕಿಯೊಡನೆ ಮಾತುಕತೆ ನಡೆಸುವರು. ಟರ್ಕಿಯು ಯುದ್ಧದಲ್ಲಿ ಭಾಗಿಯಾದೊಡನೆ ರಷ್ಯವು ಜರ್ಮನಿಯ ಪರವಾಗಿ ರುಮೇನಿಯಾ ಯುಗೋಸ್ಲೇವಿಯಗಳ ಮೇಲೆ ಕೈಮಾಡುವುದು ಖಂಡಿತವಂತೆ.

ಫ್ರಾನ್ಸಿನ ವಸಾಹತು ಸೈನ್ಯಗಳು ಸಿರಿಯದ ಮೇಲೆ ಕೈಹಾಕಿದರೆ ಟರ್ಕಿಗೆ ಅದರಿಂದ ಅನಾನುಕೂಲವುಂಟಾಗುವುದು. ಸಿರಿಯದ ರಾಯಭಾರಿಯೊಬ್ಬನು ಅಂಕಾರಕ್ಕೆ ಈ ವಿಷಯಗಳ ಕುರಿತು ಚರ್ಚಿಸಲು ಆಹ್ವಾನಿಸಲ್ಪಟ್ಟಿದ್ದಾನೆ.

ಹಿಟ್ಲರ್ ಮುಸ್ಸೋಲಿನಿಗಳ ಯುದ್ಧಗುರಿ

ರಣದೇವತೆಯು ಸರ್ವಾಧಿಕಾರಿಗಳ ಪರವಾಗಿ ಒಲಿದಳೆಂದರೆ ಗೆದ್ದ ರಾಜಗಳನ್ನು ಯಾವ ರೀತಿಯಲ್ಲಿ ಹಂಚಿಕೊಳ್ಳಬೇಕೆಂಬ ಯೋಜನೆಗಳು ಈ ಮೊದಲೇ ತೀರ್ಮಾನಿಸಿ ಕೊಳ್ಳಲಾಗಿವೆಯಂತೆ.

ಫ್ರಾನ್ಸಿನ ವಸಾಹತುಗಳು ಇಟಲಿಯ ವಶವಾಗುವುವು. ಈಜಿಪ್ತ, ಬ್ರಿಟಿಷ್ ಸೋಮಾಲಿಲೆಂಡ್, ಜಿಬ್ರಾಲ್ಟರ್, ಸುವೇಜ್ ಕಾಲುವೆ ಇವುಗಳೂ ಇಟಲಿಯ ಸರ್ವಾಧಿಕಾರಕ್ಕೆ ಸೇರುವವು. ಅಲ್ಲದೆ ದಕ್ಷಿಣ ಫ್ರಾನ್ಸಿನ ಸ್ವಲ್ಪ ಭಾಗವೂ ಮಾಲ್ಟಾ, ಕೊರ್ಸಿಕಾ ಇವುಗಳೂ ಅದರಲ್ಲಿ ಸೇರುವವು.

ಆಫ್ರಿಕದಲ್ಲಿ ಪ್ರಾಮುಖ್ಯ ಬ್ರಿಟಿಷ್ ವಸಾಹತು ಪ್ರದೇಶಗಳು, ಹಿಂದುಸ್ಥಾನ ಮತ್ತು ಪೆಸಿಫಿಕ್ ಸಾಗರದೊಳಗಿನ ವಸಾಹತುಗಳೂ ಹಿಟ್ಲರನ ಪಾಲಿನವುಗಳಾಗುವುವು.

ಅಬಿಸೀನಿಯರ ಸುಸಂಧಿ

ಇಟಲಿಯು ಯುದ್ಧದ ಹೊಲಿನಲ್ಲಿ ಧುಮುಕಿದ ಸುಸಂದರ್ಭದ ಸದುಪಯೋಗವನ್ನು ನೊಂದ ಅಬಿಸೀನಿಯರ ಪಾಳೆಯಗಾರರು ಮಾಡದೆ ಇರಲಾರರೆಂಬುದಕ್ಕೆ ಅಲ್ಲಿಂದ ಬಂದ ದಂಗೆಗಳ ಸುದ್ದಿಯೇ ಆಧಾರವಾಗಿದೆ.

ತನ್ನಲ್ಲಿದ್ದ ಅಲ್ಪ ಸ್ವಲ್ಪ ಆಯುಧಗಳಿಂದ ಹೈಲ್ ಸೆಲಾಸಿಯ ರಾಜ ಸೈನ್ಯ ಮುಖಂಡರು ಇಟಲಿ ಸೈನ್ಯ ದಳಗಳಿಗೆ ಹಲವು ಕಡೆಗಳಿಂದ ಕೊಂದಕೆ ಕೊಡಲು ಪ್ರಾರಂಭಿಸಿರುವರು.

ಜರ್ಮನರೊಡನೆ ಖಾಕ್ಸಾರರ ಸಂಬಂಧ!

ಸರಕಾರದಧಿಕಾರಿಗಳ ವಿಚಾರಣೆಯ ಫಲ.

ಮುಸಲ್ಮಾನ ಸರ್ವಾಧಿಕಾರವನ್ನು ಸ್ಥಾಪಿಸುವುದೇ ಅವರ ಗುರಿ

ಪಂಜಾಬು, ಸಂಯುಕ್ತ ಪ್ರಾಂತ ಇತ್ಯಾದಿ ಉತ್ತರ ಭಾರತದ ಹಲವು ಕಡೆಗಳಲ್ಲಿ ಪ್ರಬಲರಾಗುತ್ತಿರುವ ಖಾಕ್ಸಾರರೆಂಬವರು ಕೇವಲ ಧಾರ್ಮಿಕ ಸುಧಾರಣೆಯನ್ನು ಇಚ್ಛಿಸುವ ಒಂದು ಮುಸಲ್ಮಾನ ಸಾಮಾಜಿಕ ಆಂದೋಲನದವರಾಗಿರುವರೇ ಅಥವಾ ಈ ಖಾಕ್ಸಾರರು ಬೇರೆ ಯಾವದಾದರೂ ಗುಪ್ತ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯಪ್ರವೃತ್ತರಾಗಿರುವರೇ ಎಂಬ ಪ್ರಶ್ನೆಯು ಕೇವಲ ಪ್ರಾಂತೀಯ ಸರಕಾರಗಳನ್ನು ಮಾತ್ರವಲ್ಲ, ಕೇಂದ್ರ ಸರಕಾರವನ್ನೂ ಬಹುಕಾಲದಿಂದ ಯೋಚನೆಗೀಡು ಮಾಡಿದ್ದಿತು. ಆದರೆ ಕಳೆದ ತಿಂಗಳಲ್ಲಿ ಸರಕಾರದ ಗೂಢಚಾರರು ಈ ಆಂದೋಲನದ ಇತಿಹಾಸವನ್ನು ಪೂರ್ಣ ತಿಳಕೊಂಡು ಇದು ವಿಶುದ್ಧ ಧಾರ್ಮಿಕ ಆಂದೋಲನವಾಗಿರುವದಿಲ್ಲವೆಂಬ ನಿಶ್ಚಯಕ್ಕೆ ಬಂದಿರುತ್ತಾರೆ. ಮಾತ್ರವಲ್ಲ, ಖಾಕ್ಸಾರ ಮುಖಂಡರಿಗೂ ಜರ್ಮನಿಯ ನಾಝಿ ಮುಖಂಡರಿಗೂ ಸ್ನೇಹ ಸಂಬಂಧವೂ ವ್ಯವಹಾರ ಸಂಬಂಧವೂ ಇದೆಯಾಗಿ ತಿಳಿದು ಬರುತ್ತದೆ. ಜರ್ಮನ್ ಸರಕಾರದ ಪರವಾಗಿ ಈ ದೇಶದಲ್ಲಿ ಕೆಲಸ ಮಾಡುವ ಉದ್ದೇಶವನ್ನು ಖಾಕ್ಸಾರರು ಇಟ್ಟುಕೊಂಡಿದ್ದಾರಾಗಿ ಗೊತ್ತಾಗಿದೆ.

ನಾಝಿಗಳ ಪ್ರೋತ್ಸಾಹ

ಖಾಕ್ಸಾರರನ್ನು ಎಲ್ಲಾ ವಿಧಗಳಿಂದ ಪ್ರೋತ್ಸಾಹಿಸಿ ಅವರ ಬೆಂಬಲಕ್ಕಿರುವದು ಜರ್ಮನ್ ನಾಝಿಗಳ ಯುದ್ಧನೀತಿಯ ಒಂದು ಅಂಗವಾಗಿರುತ್ತದೆ. ಖಾಕ್ಸಾರರ ಆಂದೋಲನದಲ್ಲಿ ಜರ್ಮನಿಯು ರಹಸ್ಯದಲ್ಲಿ ಕೈ ಆಡಿಸುತ್ತಾ ಇದೆ. ಖಾಕ್ಸಾರರಿಗೆ ಖರ್ಚಿಗೆ ಬೇಕಾಗುವ ಹಣವು ಜರ್ಮನಿಯಿಂದ ಬರುತ್ತದೆ. ಸಾಧಾರಣ ಖಾಕ್ಸಾರರಿಗೆ ಈ ಸಂಗತಿ ಯಾವುದೂ ತಿಳಿದಿರುವದಿಲ್ಲ. ಕೇವಲ ಮುಖಂಡರು ಮಾತ್ರ ನಾಝಿಗಳೊಡನೆ ಗುಪ್ತ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಬಹಳ ಸಮಯದಿಂದ ಖಾಕ್ಸಾರರು ಜರ್ಮನ್ ನಾಝಿಗಳ ಸಿದ್ಧಾಂತಗಳನ್ನು ಒಪ್ಪಿಕೊಂಡು, ಅವರ ವಿಚಾರ ಧಾರೆಯನ್ನು ಸ್ವೀಕರಿಸಿಕೊಂಡಿದ್ದಾರೆ. ಈ ಆಂದೋಲನದ ಮಹಾಮುಖಂಡನಾದ ಅಲ್ಲಾಮಾ ಮಾಶರೀಕಿಯು ಒಮ್ಮೆ ಬರ್ಲಿನ್ ತನಕವೂ ಹೋಗಿ ಬಂದಿದ್ದನು. ಅಲ್ಲಿ ಜರ್ಮನ್ ನಾಝಿಗಳು ಅವನಿಗೆ ಅಪೂರ್ವ ಸ್ವಾಗತವನ್ನು ಕೊಟ್ಟಿದ್ದರು. ಹಿಂದುಸ್ಥಾನದಲ್ಲಿ ಮುಸಲ್ಮಾನ ಸರ್ವಾಧಿಕಾರತ್ವವನ್ನು ಸ್ಥಾಪಿಸುವದೇ ಖಾಕ್ಸಾರರ ಗುರಿಯಾಗಿದೆ.

ಖಾಕ್ಸಾರರ ಸಂಘ ಚಿಹ್ನೆ

ಜರ್ಮನ್ ನಾಝಿಗಳಂತೆ ಖಾಕ್ಸಾರರೂ ಪಿಕಾಸನ್ನು ತಮ್ಮ ಸಂಘಚಿಹ್ನವಾಗಿ ಇಟ್ಟುಕೊಂಡಿರುತ್ತಾರೆ. ಅಲ್ಲಾಮಾ ಮಾಶರೀಕಿಯು ತನ್ನ ಪತ್ರಿಕೆಯಲ್ಲಿ ಜರ್ಮನ್ ನಾಝಿ ತತ್ವಗಳನ್ನೇ ಪ್ರಚಾರ ಮಾಡುತ್ತಿದ್ದಾನೆ. ಅಲ್ಇಸ್ಲಾಹ ಎಂಬ ಅವನ ಪತ್ರಿಕೆಯ ವಿಶೇಷಾಂಕದ ಕೆಲವು ಪ್ರತಿಗಳು ಸರಕಾರದಧಿಕಾರಿಗಳ ಬಳಿ ಇರುತ್ತವೆ. ಅವುಗಳ ಪರಿಶೀಲನದಿಂದ ಜರ್ಮನ್ ನಾಝಿಗಳಿಗೂ ಖಾಕ್ಸಾರರಿಗೂ ಇರುವ ಸಂಬಂಧವು ಒಡೆದು ಕಾಣುತ್ತದೆ. ಖಾಕ್ಸಾರರು ಸಮಯ ಸಮಯ ಮಾರ್ಚ ಮಾಡಿ ಹೋಗುತ್ತಾರೆ. ನಕಲಿ ಲಡಾಯಿಗಳನ್ನು ಮಾಡುತ್ತಾರೆ. ಶಸ್ತ್ರಾಸ್ತ್ರಗಳನ್ನು ಧರಿಸಿ ಅವುಗಳ ಉಪಯೋಗ ಕ್ರಮವನ್ನು ತಿಳಿಯುತ್ತಾರೆ. ಖಾಕ್ಸಾರರ ಕಾರ್ಯಕ್ರಮಗಳ ಕೆಲವು ಚಿತ್ರಗಳೂ ಮಾಶರೀಕಿಯ ಪತ್ರಿಕೆಯ ವಿಶೇಷಾಂಕಗಳಲ್ಲಿ ಕೊಡಲ್ಪಟ್ಟಿವೆ. ಅವುಗಳೂ ಮತ್ತು ಕೋಟೆಯಿಂದ ಕೋಟೆಗಳನ್ನೇ ಸ್ವಾಧೀನಮಾಡಿಕೊಳ್ಳುವಂಥ ಅವರ ಕಲ್ಪನಾತ್ಮಕ ಚಿತ್ರಗಳೂ, ಖಾಕ್ಸಾರರನ್ನು ಹಿಟ್ಲರನ ಕಾರ್ಯಕ್ರಮವನ್ನು ಅಕ್ಷರಶಃ ಅನುಸರಿಸಿ ಹಿಂದುಸ್ಥಾನದಲ್ಲಿ ಮುಸಲ್ಮಾನ ಸರ್ವಾಧಿಕಾರತ್ವವನ್ನು ಸ್ಥಾಪಿಸಲಿಕ್ಕೆ ಪ್ರೇರೇಪಿಸುತ್ತದೆ. ಸಮಾಜ ಸೇವೆಯನ್ನು ಮಾಡುವದೇ ಖಾಕ್ಸಾರರ ಉದ್ದೇಶವಾಗಿರುವದಾದರೆ, ಅವರು ಹಿಟ್ಲರನ ವೀರಪೂಜೆಯನ್ನು ಮಾಡಿ ಅವನನ್ನು ತಮ್ಮ ಪ್ರತಿಯೊಂದು ಕಾರ್ಯದಲ್ಲಿ ಅನುಕರಿಸುವದೂ, ರಾಜ್ಯಸ್ಥಾಪನೆಯ ಕನಸು ಕಾಣುವದೂ ಯಾಕೆ?

ಯುದ್ಧಪ್ರಾರಂಭವಾದ ಮೇಲೆ

ಖಾಕ್ಸಾರರು ಉಡಿಗೆ ತೊಡಿಗೆಗಳ ವಿಚಾರದಲ್ಲಿ ಕೂಡ ಜರ್ಮನ್ ನಾಝಿಗಳನ್ನು ಅನುಕರಿಸಿದ್ದಾರೆ. ಇಚ್ಛರಾದಲ್ಲಿ ಪೋಲೀಸರು ಹೋಗಿ ಝಡತಿ ಮಾಡಿದಾಗ ಅವರಿಗೆ ನಾಝಿಗಳ ಉಕ್ಕಿನ ಶಿರಸ್ತ್ರಾಣವನ್ನು ಹೋಲುವಂಥ ಖಾಕ್ಸಾರರ ಅನೇಕ ಉಕ್ಕಿನ ಶಿರಸ್ತ್ರಾಣಗಳು ದೊರೆತುವು. ಯುದ್ಧಪ್ರಾರಂಭವಾದ ಮೇಲೆ ಬರ್ಲಿನದ ನಾಝಿ ಆಂದೋಲನಕಾರಿಗಳೊಡನೆ ಖಾಕ್ಸಾರರ ವ್ಯವಹಾರ ಸಂಬಂಧವು ಇನ್ನಷ್ಟು ಸ್ಪಷ್ಟವಾಗಿದೆ. ಜರ್ಮನ್ ನಾಝಿ ಅಧಿಕಾರಿಗಳು ಖಾಕ್ಸಾರ ಆಂದೋಲನದಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿದ್ದಾರೆ.

ಸರ್ ಸಿಕಂದರರ ವಿರೋಧ

ಮುಸ್ಲಿಂ ಲೀಗ್ ಮತ್ತು ಅದರ ಸರ್ವಾಧಿಕಾರಿ ಪಟ್ಟದಲ್ಲಿ ಪ್ರತಿಷ್ಠಿತರಾಗಿರುವ ಮಿ. ಜಿನ್ನಾ ಸಾಹೇಬರು ದೇಶದಲ್ಲಿ ಅಶಾಂತಿಯನ್ನು ಹರಡಿಸಲಿಕ್ಕೆ ಕಾರಣೀಭೂತರಾದ ಈ ಖಾಕ್ಸಾರರೊಂದಿಗೆ ಪ್ರತ್ಯಕ್ಷ–ಪರೋಕ್ಷ ಸಹಾನುಭೂತಿಯನ್ನು ತೋರಿಸಿದ್ದಾರಾದರೂ, ಅವರಿಗಿಂತಲೂ ಚೆನ್ನಾಗಿ ಪರಿಸ್ಥಿತಿಯನ್ನು ಬಲ್ಲವರಾದ ಪಂಜಾಬಿನ ಪ್ರಧಾನಮಂತ್ರಿ ಸರ್ ಸಿಕಂದರ್ ಹಯಾತ್ ಖಾನರು ಖಾಕ್ಸಾರ ಆಂದೋಲನದೊಂದಿಗೆ ತಮ್ಮ ನಿಷೇಧವನ್ನು ಸೂಚಿಸಿ, ಅವರಲ್ಲಿ ಸಾರ್ವಜನಿಕ ಶಾಂತಿಗೆ ಭಂಗ ತರುವವರನ್ನು ದಂಡನೆಗೆ ಗುರಿಮಾಡುತ್ತಲಿರುವರು. ಖಾಕ್ಸಾರ ಆಂದೋಲನವನ್ನು ಎಲ್ಲಾ ಉಪಾಯಗಳಿಂದ ಮುರಿಯುವದು ಅಗತ್ಯವಾಗಿದೆ. ಹಿಂದುಸ್ಥಾನದಲ್ಲಿ ಎಲ್ಲಾ ಜಾತಿಮತ ಸಂಪ್ರದಾಯಗಳ ಜನರಿಂದ ಕೂಡಿದ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಡಬೇಕು, ಹೊರತು ಖಾಕ್ಸಾರರು ಇಚ್ಛಿಸುವ ಪ್ರಕಾರ ಮುಸಲ್ಮಾನ ಸರ್ವಾಧಿಕಾರವಲ್ಲ. ಆದುದರಿಂದ ಖಾಕ್ಸಾರ ಆಂದೋಲನವು ಬೆಳೆದು ಮರವಾಗಿ ಹೂ ಬಿಡುವ ಮೊದಲೇ ಅದರ ಎಳೆ ಗಿಡವನ್ನು ಸಮೂಲ ಕಿತ್ತು ನಾಶ ಮಾಡುವದು ಅಗತ್ಯ. ಸರ್ ಸಿಕಂದರರು ಇದೇ ಧೋರಣವನ್ನು ಇಟ್ಟುಕೊಂಡಿರುವದು ಸ್ತುತ್ಯವಾಗಿದೆ. ಎಲ್ಲ ಪ್ರಾಂತೀಯ ಸರಕಾರಗಳೂ ಕೇಂದ್ರ ಸರಕಾರವೂ ಈ ಕಡೆಗೆ ಮೊದಲಿಗಿಂತ ಹೆಚ್ಚು ಗಮನವನ್ನು ಕೊಡಬೇಕಾದ್ದು ಅಗತ್ಯ.

ಫ್ರೆಂಚ್ ಇಂಡೋ ಚೈನಾ

ಫ್ರೆಂಚರ ಈ ವಸಾಹತಿನ ಮೂಲಕ ಚೀನದ ಚುಂಗ್‌ಕಿಂಗ್ ಸರಕಾರಕ್ಕೆ ಯುದ್ಧ ಸಲಕರಣಗಳು ಪೂರೈಸಲ್ಪಡುತ್ತಿವೆ ಎಂದು ಜಪಾನು ಅಲ್ಲಿನ ಫ್ರೆಂಚ್ ಅಧಿಕಾರಿಗಳನ್ನು ಗದರಿಸಿ ಚೀನದ ಆ ಸರಹದ್ದನ್ನು ಬಂದು ಮಾಡಿಸಿತು. ಈ ಸಮಯದಲ್ಲಿ ಪ್ರಾನ್ಸು ಸಂಧಾನ ಕಾರ್ಯದಲ್ಲಿ ತೊಡಗಿದೆ.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly,

Bhuvanendra Products, Ltd.,
Katapady, S. Kanara.
(BRANCH—KUMTA, N KANARA.)
Stockist: **U. Panduranga Nayk,** Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, – ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.



ನೋಟಗಳು

ಬ್ರಿಟನಿನ ಯುದ್ಧ ನಿರ್ಧಾರವು ಅಚಲವೂ, ಗಂಭೀರವೂ, ಪ್ರಶಂಸನೀಯವೂ ಆಗಿದೆ!

—ಸ್ವಾತಂತ್ರ್ಯಕ್ಕಾಗಿ ನಾವಿಂದು ಜರ್ಮನಿಯೊಡನೆ ಕೊನೆ ತನಕ ಕಾದಾಡಬಲ್ಲೆವು ಯುದ್ಧದಲ್ಲಿ ಬ್ರಿಟನು ಏಕಾಂಗಿಯಾಗಿ ಗೆದ್ದರೂ, ವಿಜಯವನ್ನು ಫ್ರಾನ್ಸಿನೊಡನೆ ಹಂಚಿಕೊಳ್ಳುವುದು ಹೀಗೆಂದು ಉದಾತ್ತವಾದ ಮಾತನ್ನು ಹೇಳಿದ್ದಾರೆ ಬ್ರಿಟಿಷ್ ಪ್ರಧಾನರು!

—ಬ್ರಿಟನಿನ ಈ 'ರೌಧ'ಕ್ಕೆ ಹಿಟ್ಲರನು ಕೊಂಚ ಸ್ತಬ್ಧನಾಗಿ ವಿಚಾರ ಮಗ್ನನಾಗಿದ್ದಾನೆ!

◈

—ಬಾಲ್ಟಿಕ್‌ನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಸ್ಟಾಲಿನನು ಇಂದು ಆತುರನಾಗಿದ್ದಾನಂತೆ!

—ಕೆಂಪು ದಳವು ಲಿಥ್ವೇನಿಯಾಕ್ಕೆ ನಡೆಯಿತು!

—ರಷ್ಯದ ಸೈನ್ಯವನ್ನು ಅಲ್ಲಿ ಬಲಗೊಳಿಸಬೇಕೆಂಬುದೇ ಸ್ಟಾಲಿನನ ಕೇಳಿಕೆಯಾಗಿತ್ತು!

—ಹೆಚ್ಚಿನ ಹೋರಾಟವಿರಲಿಲ್ಲ! ಕೆಂಪು ಸೈನ್ಯವು ಆ ಪ್ರದೇಶದಲ್ಲೆಲ್ಲೂ ಪ್ರವಾಹವಾಗಿ ಹರಿಯಿತು!

—ರಷ್ಯದ ಕೇಳಿಕೆಯು ಅಂಗೀಕರಿಸಲ್ಪಟ್ಟಿತ! ಲಿಥ್ವೇನಿಯವು ರಷ್ಯಕ್ಕೆ ಶರಣಾಯಿತು!

ಫ್ರಾನ್ಸಿನಲ್ಲಿ ಒಂದು ವಿಮಾನದ ಮುಂದೆ ಬ್ರಿಟಿಷ್ ಮತ್ತು ಫ್ರೆಂಚ್ ವೈಮಾನಿಕರು ಸಂಭಾಷಿಸುತ್ತಿರುವುದು—ನೆಲದಲ್ಲಿದ್ದಂತೆ ಆಕಾಶದಲ್ಲಿಯೂ ಕೂಡಾ ಮಿತ್ರಪಕ್ಷದವರು ಸಂಗಾತಿಗಳಂತೆ ಸಹಕರಿಸುತ್ತಿರುವರು

ಫ್ರಾನ್ಸು ಹಿಟ್ಲರನೊಡನೆ ಶಾಂತಿಯ ಯತ್ನಕ್ಕಿಳಿದಿದೆ!

—ಗೌರವ ಪೂರ್ವಕವಾದ ಒಪ್ಪಂದಕ್ಕೆ ಮಾತ್ರ ಫ್ರೆಂಚರು ಒಪ್ಪುವರಲ್ಲದೆ ಅಗೌರವಕರವಾದ ತೀರ್ಮಾನಕ್ಕೆ ಅವರು ತಲೆವಾಗುವವರಲ್ಲವೆಂದು, ಫ್ರೆಂಚ ಪ್ರಧಾನ ಮಂತ್ರಿಗಳು ಸಾರಿದರು

—ಫ್ರಾನ್ಸಿನ ಗೌರವಕ್ಕೆ ಹಿಟ್ಲರನು ಏನಾದರೂ ಬೆಲೆ ಕೊಟ್ಟಾನೇ ನೋಡಬೇಕಾಗಿದೆ!

◈

ಪ್ಯಾರಿಸಿನ ಪತನವಾದ ವಾರ್ತೆಯನ್ನು ಕೇಳಿ ಮಾಸ್ಕೋದಲ್ಲಿ ಹಲವು ಚಟುವಟಿಕೆಗಳುಂಟಾಗಿವೆಯೆಂದು ಸುದ್ದಿ!

—ಲೇಟ್ವಿಯಾ ಎಸ್ಟೋನಿಯಗಳೊಡನೆಯೇ ಸ್ಟಾಲಿನನು ಅದೇ ತರದ ಕೇಳಿಕೆಗಳನ್ನು ಮುಂದಿಟ್ಟನು.

—ಅವುಗಳು ಸಿಟ್ಟಿಲ್ಲದೆ ಒಪ್ಪಿಗೆಯಿತ್ತವು!

—ಹಿಟ್ಲರನ ವಿಜಯವನ್ನು ಕಂಡ ಸ್ಟಾಲೀನನ ದೂರಾಲೋಚನೆಯ ಯತ್ನಗಳಿವು!

◈

ಹಿಟ್ಲರನು ಈ ಎಲ್ಲಾ ಚಟುವಟಿಕೆಗಳನ್ನು ನೋಡಿ ಉದಾಸೀನನಾಗಿರುವನೆ?

—ಪ್ರಶ್ಯಿಯನ್ ಗಡಿಯಲ್ಲಿ ನಾಜೀ ಸೈನ್ಯ ಚಟುವಟಿಕೆಗಳು ನಡೆಯುತ್ತಿವೆಯೆಂದು ಸುದ್ದಿ.

◇

ಹಿಟ್ಲರನ ಮನಸ್ಸನ್ನು ಸಂತೋಷಪಡಿಸ ಹೋಗಿ, ಮುಸಲಿನಿಯು ಇಂದು ಪೇಚಾಟದಲ್ಲಿ ಬಿದ್ದಿರುವನು!

—ಅಬಿಸೀನಿಯದಲ್ಲಿ ಪ್ರಚಂಡ ಕ್ರಾಂತಿಯು ತಲೆದೋರಿತೆಂದು ಸುದ್ದಿ!

—೨೦೦,೦೦೦೦ ಸೈನಿಕರು ಸೇಲಾಸಿ ತೊಡಿಗಗಳನ್ನು ತೊಟ್ಟು, ಹಳೆಯ ದಳಪತಿಗಳ ಕೈಕೆಳಗೆ ಹೊಸ ಹುರುಪಿನಿಂದ ಕಾದಾಡುತ್ತಿರುವರಂತೆ!

—ನಾಯುವ್ಯ ಸರಹದ್ದಿನಲ್ಲಿರುವ ಇಟಾಲಿಯನ್ ಸೈನ್ಯ ವ್ಯೂಹವನ್ನು ಅಬಿಸೀನಿಯನ್ ಸೈನಿಕರು ಮುತ್ತಿ ಅವರನ್ನು ಕಂಗಾಲುಗೊಳಿಸಿರುವರಂತೆ!

—ಮೆಶಿನ್‌ಗನ್ ಮತ್ತು ರೈಫಲ್‌ಗಳನ್ನು ಕೈಯಲ್ಲಿ ಹಿಡಕೊಂಡು ದೇಶದ ಎಲ್ಲೆಡೆಗಳಲ್ಲಿಯೂ ಅಬಿಸೀನಿಯನ್ ಸಿಪಾಯಿಗಳು ಚಲಿಸುತ್ತಿದ್ದಾರಂತೆ.

—ಇಂದಿನ ಕ್ರಾಂತಿ ದಳದ ನಾಯಕನು, ಹಿಂದೆ, ಅಡಿಸ್ ಅಬಾಬದಲ್ಲಿ ಪೋಲಿಸ್ ಕಮಿಶನರ್ ಆಗಿದ್ದ, ಅಬಾಟೆ ಅಘಾರಾಗೆ ಎಂಬವನೆಂದೂ ತಿಳಿದುಬಂದಿದೆ!

—ಅಂತೂ ಮುಸಲಿನಿಯು ಇಂದು ಮಹಾ ವಿಪತ್ತಿನಲ್ಲಿ ಸಿಲುಕಿದ್ದಾನೆ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 124/1937

ವಾದಿ—ವಾಸ್ತೇವ ನ್ಯಾಕ—

ಪ್ರತಿವಾದಿರ್ರು—ಕುಕ್ಕಪ್ಪ ಗೌಡ ಸಹಾ

R I A No 1469/1939

R L A No. 1470/1939

1 ಸುಬ್ಬಕ್ಕೆ ಯಾನೆ ದುಕ್ಕಿಣಿ ಹೆಂಗ್ಸು 2 ಶೀತಮ್ಮ ಅರ್ಜಿದಾರರು ಯಾನೆ ದೇವಕಿ ಹೆಂಗ್ಸು.

ಎದ್ರಿ

ಕ್ಷೀ ಹೆಂಗ್ಸು ಕೂಡ 17 ಜನರು ಎದ್ರಿರು

ಸದ್ರಿ ಅರ್ಜಿ ವ್ಯವಹಾರಗಳ 1ನೇ ಎದ್ರಿ ಹಾಲಿ ಕೊಡಗು ಜಿಲ್ಲಾ ಮಡಿಕೇರಿ ತಾಲ್ಲೂ ಬಿಟ್ಟಂಗಾಲ ಎಂಬಲ್ಲಿ 10ನೇ ಮೈಲು ಕಲ್ಲು ಬಳಿಯಲ್ಲಿರುವ ಪಾಲಡ್ಕ ಮುತ್ತಪ್ಪ ಗೌಡರ ಮಗ ಅಪ್ಪಯ್ಯ ಗೌಡರಿಗೆ

ಸದಿ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ವಾದಿ ವಾಸ್ತೇವ ನ್ಯಾಕರು ಮೃತ ಪಟ್ಟದ್ರಿಂದ ಅರ್ಜಿದಾರರು ಮ 1ನೇ ಎದ್ರಿಳನ್ನು ವಾರಿಸದಾರ್ರಿಗೆ ವ್ಯಾಜ್ಯದಲ್ಲಿ ಕೂಡಿಸುವರೆ ಅರ್ಜಿದಾರ್ರು ದಾಖಲು ಮಾಡಿದ R I A 146 /39ನೇ ಅರ್ಜಿ ವ್ಯವಹಾರ್ಣೆಯೂ ಮತ್ತು ಅರ್ಜಿದಾರ್ರು ಮ 1ನೇ ಎದ್ರಿಳ ಹೆಸರಲ್ಲಿ ಫ್ಯಾನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರ್ರು ದಾಖಲು ಮಾಡಿದ R I A 1470/39ನೇ ಅರ್ಜಿ ವ್ಯವಹಾರ್ಣೆ ಸಹಾ ಎದರ ವ್ಯವಹಾರ್ಣೆಗಳು ತನಿಖೆ ಒಗ್ಗೆ 12 7 40ಕ್ಕೆ ಇಟ್ಟಿರುವದರಿಂದ ಈ ಅರ್ಜಿಗಳ ಕುರಿತು ನಿಮಗೆ ಏನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಸದ್ರಿ ತ್ಯಾಜ್ಯ ದಿವಸ ಹಗಲು 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ನೀವು ಖುದ್ದಿನಿಂದಾಗಲೀ ವಕೀಲರ ದ್ವಾರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು ಹಾಗೆ ಹಾಜರಾಗದಿದ್ರೆ ಸದ್ರಿ ವಿಷಯಗಳಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂತಾ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿಯದೆ

ಪುತ್ತೂರು 19 6-40 — H Ganapathi Rao. ಅರ್ಜಿದಾರನ ಕಡೆ ವಕೀಲ

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!

ಭೂವಿವರ

6ನೇ	7ನೇ	8ನೇ ತರಗತಿಗಳಿಗೆ
0—5—0	0—6—0	0—7—0

ನೂತನ ಪಠ್ಯಪಟ್ಟಿಗೆ ಅನುಸಾರವಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟವು

ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ದಣುವನ್ನಾರಿಸಲಿಕ್ಕೆ ಹೊಸ ಪಾನೀಯ

ಕೆಲಸವಮಾಡಿ ದಣುವಾದಾಗ ಅದನ್ನು ನಿವಾರಿಸಲಿಕ್ಕೆ ನಮ್ಮಲ್ಲಿ ಬೆಲ್ಲನೀರು, ಪಾನಕ, ಶರಬತ್ತುಗಳು ಬಹಳ ಪ್ರಸಿದ್ಧವಾಗಿವೆ. ದಣುವಾರಿಸಲಿಕ್ಕೆಂದೇ ನಾವು ಕಾಫಿ, ಚಾ, ಕೊಕ್ಕೊ, ಒವಲ್ಟೀನು ಇತ್ಯಾದಿಗಳನ್ನು ಕುಡಿಯುತ್ತೇವೆ. ಕೆಲಸ ಮಾಡಿ ನಷ್ಟವಾದ ಶರೀರನಿರ್ಮಾಣ ಸಾಮುಗ್ರಿಗಳ ಬದಲಿಗೆ ಅಂಥ ಹೊಸ ಸಾಮಗ್ರಿಗಳು ಉಂಟಾಗಬೇಕೆಂಬುದು ಈ ಪಾನೀಯಗಳನ್ನು ಕುಡಿಯುವ ಉದ್ದೇಶವಾಗಿದೆ ಅಮೇರಿಕದ ವಿಜ್ಞಾನಿಗಳು ಇದೇ ಉದ್ದೇಶದಿಂದ ಇನ್ನೊಂದು ಪಾನೀಯವನ್ನು ಕಂಡುಹಿಡಿದಿರುವರು. ಈ ಪಾನೀಯವು ಮನುಷ್ಯನಿಗೆ ಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುವದರಲ್ಲಿ ಅದ್ವಿತೀಯವಾಗಿರುವದಂತೆ ಕಠಿಣ ಕೆಲಸಗಳನ್ನು ಮಾಡಿ ಬಹಳ ದಣಿಯುವ ಸೈನಿಕರು ಆಟಗಾರರು ಮೊದಲಾದವರಿಗೆ ಈ ಪಾನೀಯವನ್ನು ಕುಡಿಯಲಿಕ್ಕೆ ಕೊಟ್ಟು ವಿಜ್ಞಾನಿಗಳು ಅದರಿಂದ ಅವರ ಶರೀರದ ಮೇಲಾದ ಪರಿಣಾಮಗಳನ್ನು ಬೇರೆ ಬೇರೆ ಉಪಾಯಗಳಿಂದ ತಿಳಿದುಕೊಂಡಿರುವರು ಈ ಪಾನೀಯವು ಶೇಕಡಾ ಆರರಷ್ಟು ಗ್ಲಿಸರೀನ್ ಆಗಿರುವ ಜಿಲಿಟಿನಿನ ಮಿಶ್ರಣವಲ್ಲದೆ ಬೇರೇನೂ ಆಗಿರುವದಿಲ್ಲ. ಪುರುಷರ ಮೇಲೆ ಈ ಪಾನೀಯದ ಪ್ರಯೋಗವನ್ನು ಮಾಡಿದಾಗ, ಅದರಿಂದ ಅವರ ಶರೀರದಲ್ಲಿ ತಕ್ಷಣ ಪರಿಣಾಮವು ಕಂಡು ಬಂದುದು ಮಾತ್ರವಲ್ಲದೆ ಅವರ ಸ್ಫೂರ್ತಿಉತ್ಸಾಹಗಳು ಮೊದಲಿಗಿಂತ ದ್ವಿಗುಣಿತವಾದುದೂ ಗೊತ್ತಾಯಿತು. ಸ್ತ್ರೀಯರ ಶರೀರದ ಮೇಲೆ ಕೂಡ ಈ ಪಾನೀಯದ ಉತ್ತಮ ಪರಿಣಾಮವು ತಿಳಿದು ಬಂದಿದೆ. ಆದರೆ ಅವರಲ್ಲಿ ಅದು ಪುರುಷರಲ್ಲಾದಷ್ಟು ಚೆನ್ನಾಗಿ ಕಂಡುಬರಲಿಲ್ಲ

ಜೀವಾಣುಗಳಿಂದ ಜೀವಾಣುಗಳಿಗೆ ನಾಶ

ಮನುಷ್ಯನಿಗೆ ಅನುಕೂಲವಾದ ಮತ್ತು ಪ್ರತಿಕೂಲವಾದ ಜೀವಾಣುಗಳು ಈ ಪ್ರಪಂಚದಲ್ಲಿ ಇರುತ್ತವೆ. ಹಾಲು ಹೆಪ್ಪು ಕಟ್ಟಿ ಮೊಸರಾಗುವದು ಒಂದು ಜಾತಿಯ ಅನುಕೂಲ ಜೀವಾಣುಗಳಿಂದ. ಮನುಷ್ಯನಿಗೆ ವಾಂತಿಭೇದಿ, ರಕ್ತಭೇದಿ, ಸನ್ನಿಪಾತ ಮೊದಲಾದ ರೋಗಗಳು ಬರುವದು ಒಂದುಜಾತಿಯ ಪ್ರತಿಕೂಲ ಜೀವಾಣುಗಳಿಂದ. ಅನುಕೂಲ ಜೀವಾಣುಗಳನ್ನು ಬೇಕಾದಷ್ಟು ಇರಗೊಳಿಸಿ ಪ್ರತಿಕೂಲ ಜೀವಾಣುಗಳನ್ನು ನಾಶ ಮಾಡುವದರಿಂದ ಅಥವಾ ಅವುಗಳಿಂದ ಆದಷ್ಟು ದೂರವಾಗಿರುವುದರಿಂದ ಆವನು ನಿರೋಗಿಯೂ ಸುಖಿಯೂ ಆಗುತ್ತಾನೆ ಆದರೆ ಪ್ರತಿಕೂಲವಾದ ಜೀವಾಣುಗಳನ್ನು ನಾಶಮಾಡುವ ಮತ್ತು ಅವನ್ನು ದೂರವಾಗಿರಿಸುವ ಉಪಾಯವು ಗೊತ್ತಿರಬೇಕು ಇದಕ್ಕೆ ಅನೇಕ ಉಪಾಯಗಳಿವೆ. ಬಹಳ ಹೆಚ್ಚು ಉಷ್ಣ ಅಥವಾ ಬಹಳ ಹೆಚ್ಚು ಶೀತದಲ್ಲಿ ಯಾವ ಜೀವಾಣುವೂ ಬದುಕಲಾರದು. ಆದರೂ ಜೀವಾಣುಗಳನ್ನು ಕೊಲ್ಲಲಿಕ್ಕೆ ಆರ್ ಜೆ ಡೂಬೋ ಎಂಬವರು ಒಂದು ಹೊಸ ಉಪಾಯವನ್ನು ಕಂಡು ಹಿಡಿದಿದ್ದಾರೆ ಪ್ರಪಂಚದಲ್ಲಿ ಯಾವದು ಹುಟ್ಟುತ್ತದೋ ಅದರ ನಾಶಕ್ಕೂ ಸೃಷ್ಟಿಕರ್ತನು ವ್ಯವಸ್ಥೆ ಮಾಡಿರುತ್ತಾನೆ ಸೃಷ್ಟಿಸ್ಥಿತಿ ಲಯಗಳಿಗೆ ಪ್ರಾಕೃತಿಕ ಉಪಾಯಗಳಿವೆ, ಆದುದರಿಂದ ರೋಗಾಣುಗಳನ್ನು ಕೊಲ್ಲಲಿಕ್ಕಾದರೂ ಪ್ರಾಕೃತಿಕ ಉಪಾಯವಿರಬೇಕು ರೋಗಾಣುಗಳನ್ನು ಕೊಂದ ತಿನ್ನಲಿಕ್ಕೆ ಬೇರೆ ಜೀವಾಣುಗಳ ಇದ್ದಿರಬೇಕು ಒಂದನ್ನೊಂದು ಕೊಂದು ತಿಂದು ಜೀವಿಸುವದು ಪ್ರಾಕೃತಿಕ ನಿಯಮವು ಇದನ್ನು ಆಲೋಚಿಸುತ್ತ ಡಾಕ್ಟರ ಡೂಬೋರವರು ತಮ್ಮ ಶೋಧನೆಯಲ್ಲಿ ತತ್ಪರರಾದರು ಹೀಗೆ ಶೋಧನ ಮಾಡುತ್ತ ಅವರೀಗ ಕೆಲವು ಜಾತಿಯ ರೋಗಾಣುಗಳನ್ನು ತಿಂದು ಬದುಕುವ ಜೀವಾಣುಗಳನ್ನು ಕಂಡು ಹಿಡಿದಿರುತ್ತಾರೆ ಹೀಗೆ ಮನುಷ್ಯನಿಗೆ ಬರುವ ರೋಗಗಳ ಬೇರೆಬೇರೆ ಜಾತಿಯ ಅಣುಗಳನ್ನು ತಿಂದುಬದುಕುವ ಜೀವಾಣುಗಳನ್ನು ಕಂಡುಹಿಡಿದರೆ, ಮತ್ತೆ ಅವುಗಳನ್ನೇ ಸಾಕಿ ಮನುಷ್ಯನು ತನಗೆ ಬರುವ ರೋಗಗಳನ್ನು ದೂರ ಮಾಡಿಕೊಳ್ಳಬಹುದು ಆಗ ಅವನಿಗೆ ವೈದ್ಯರು ಮತ್ತು ಡಾಕ್ಟರುಗಳ ಅಗತ್ಯವೇ ಉಳಿಯಲಿಕ್ಕಿಲ್ಲ

ಅಮೇರಿಕ ಸಮುದ್ರದಿಂದ ಎದ್ದು ಬರುತ್ತದೆ

ಅಮೇರಿಕದ ನೆಲದಲ್ಲಿ ನಮ್ಮ ಸ್ಥೂಲ ದೃಷ್ಟಿಗೆ ತಿಳಿಯದಂಥ ಅನೇಕ ಪರಿವರ್ತನೆಗಳು ಆಗುತ್ತಾ ಇವೆಯೆಂದು ಪನಾಮಾ ಕಾಲುವೆಯ ಇಬ್ಬದಿಯ ದಂಡೆಗಳ ಮಟ್ಟವನ್ನು ಪರೀಕ್ಷಿಸುತ್ತಲಿರುವ ಯುಮ್ ವ್ಲಾಡಿಮಿರ ಫ್ರೊಲೊ ಎಂಬ ಫ್ರೆಂಚ ವಿಜ್ಞಾನಿಯು ತನ್ನ ಅಭಿಪ್ರಾಯಗಳನ್ನು ಕೊಟ್ಟಿದ್ದಾನೆ ಇವನ ಅಭಿಪ್ರಾಯದ ಮೇರೆಗೆ ಉತ್ತರ ಅಮೇರಿಕದ ಕೆಲವು ಸ್ಥಳಗಳ ಸಮುದ್ರದಲ್ಲಿ ಮೆಲ್ಲಗೆ ಮುಳುಗುತ್ತ ಇರುವಾಗ ಕೆಲವುಗಳು ಸಮುದ್ರದಿಂದ, ಮೇಲಕ್ಕೆ ಎದ್ದು ಬರುತ್ತಾ ಇವೆಯಂತೆ ಅತ್ಲಾಂತಿಕ ಮಹಾಸಾಗರದ ಕಡೆಯ ಅಮೇರಿಕದ ಸಮುದ್ರ ಕರಾವಳಿಯು ಸಮುದ್ರದಲ್ಲಿ ಮೇಲಕ್ಕೆ ಎದ್ದು ಬರುತ್ತಲಿರುವಾಗ ಶಾಂತಸಾಗರದ ಕಡೆಯ ಅದರ ಕರಾವಳಿಯು ಸಮುದ್ರದಲ್ಲಿ ಮುಳುಗುತ್ತ ಇದೆ ಇದೇ ಕ್ರಮವು ಇನ್ನು ಸಾವಿರಾರು ವರ್ಷಗಳ ತನಕ ನಡೆಯುತ್ತ ಇರುವದಾದರೆ ಆ ಸಮಯಕ್ಕೆ ಅಮೇರಿಕದ ಭೂಸ್ಥಿತಿಯು ಈಗಿನದಕ್ಕಿಂತ ಸಂಪೂರ್ಣ ಬೇರೆಯಾಗಿ ಇರಬಹುದು.

ಜರ್ಮನಿಯ ವಿಚಿತ್ರ ಟ್ಯಾಂಕು

ಯುರೋಪದ ಈಗಿನ ಯುದ್ಧವು ಟ್ಯಾಂಕು ಮತ್ತು ವಿಮಾನಗಳ ಯುದ್ಧವಾಗಿದೆ ಎಂದರೆ ಅತಿಶಯೋಕ್ತಿ ಆಗದು ಜರ್ಮನ ವಿಜ್ಞಾನಿಗಳು ಹೊಸ ಜಾತಿಯ ಟ್ಯಾಂಕು ಮಾಡಿದ್ದಾರೆ ಈ ಟ್ಯಾಂಕು ಕಪ್ಪೆ ಹಾರುವ ಹಾಗೆ ಹಾರಿ ಹಾರಿ ಹೋಗಬಲ್ಲದು. ಆದ್ದರಿಂದ ಅದರ ಚಲಾವಣೆಯನ್ನು ತಡೆಗಟ್ಟಲಿಕ್ಕೆ ದಾರಿ ಮೇಲೆ ಮರಮಟ್ಟು ಇತ್ಯಾದಿ ಯಾವ ಆತಂಕಗಳನ್ನು ತಂದುಹಾಕಿದರೂ, ಗುರುತಿಸಲಿಕ್ಕಾಗದಂತೆ ಆಳವಾದ ಹೊಂಡಗಳನ್ನು ಕಡಿದಿಟ್ಟರೂ, ಈ ಹೊಸ ಟ್ಯಾಂಕುಗಳು ಅವುಗಳನ್ನೆಲ್ಲಾ ಹಾರಿ ದಾಟಿ ತನ್ನ ಮಾರ್ಗದಲ್ಲಿ ಎಲ್ಲಿಗೆ ಬೇಕಾದರೂ ಹೋಗುತ್ತ ಇರಬಹುದು

ಫಕ್ಕನೇ ಉಂಟಾಗುವ ಥಂಡಿಯು ಶ್ವಾಸಕೋಶಗಳಿಗೆ ಅಪಾಯಕರ!

ಗಂಟಲು, ಎದೆ ಮತ್ತು ಶ್ವಾಸಕೋಶಗಳ ಎಲ್ಲಾ ತರದ ಬಾಧೆಗಳಿಗೆ ಪೆಪ್ಸ ಯೋಗ್ಯ ಗುಣಕಾರಿ

ಎಲ್ಲಾ ಕಡೆಗಳಲ್ಲಿಯೂ ಬುಟ್ಟಿಗೆ ರೂ 1ರಂತೆ ಮಾರಲ್ಪಡುತ್ತದೆ

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ಶ್ವಾಸನೀಯ ಗುಳಿಗೆಗಳು

ನಡುವಿನಲ್ಲಿ ಸಿಗಿಯಲ್ಪಟ್ಟ ಈಗಿನ 7 ಓ' ಕ್ಲಾಕ್ ಬ್ಲೇಡುಗಳು ಹಳೇ ಮಾದರಿಯ ಮೂರು ತೂತುಗಳ ಬ್ಲೇಡುಗಳಿಗಿಂತ ಸುಧಾರಣೆ ಹೊಂದಿವೆ. ಇದರ ಕ್ರಯವು ಅಗ್ಗ ಮಾತ್ರವಲ್ಲದೆ ಚೆನ್ನಾಗಿ ಹರಿತವಾಗಿದ್ದು ಉತ್ತಮವೂ ನುಣುಪೂ ಆದ ಕ್ಷೌರವನ್ನು ಉಂಟುಮಾಡುವುದಲ್ಲದೆ ಅನೇಕ ಕಾಲದ ವರೆಗೆ ಬಾಳುವುದು

7ಓ' ಕ್ಲೋಕ್ ಬ್ಲೇಡುಗಳು ಹಳೇ ಮತ್ತು ಹೊಸ ಮಾದರಿಯ ಬ್ಲೇಡುಗಳಿಗೆ ಅಚ್ಚುಕಟ್ಟಾಗುತ್ತವೆ.

ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಟು ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ–ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕ ವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ನಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS.

The Combined Booking Agency,
MANGALORE

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುತ್ತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತರುವಾಯ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ನಮ್ಮ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವೂ ಮಾಹಿಮು, ತಾನೇ ಈ ಚೂರ್ಣದಿಂದ ಯಾವ ತರದ ಆಪಾಯವೂ ಇಲ್ಲದು ಗರ್ಭಧಾರಣವೂ ಆಗುವುದಿಲ್ಲ. ಪ್ರತಿ ಗಾಣಿಕೆ ಡಬ್ಬಿಯು ಕ್ರಯವೂ ೪–೦–೦ ವಿ. ಪಿ. ಆಗಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S M C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪೆ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮೊಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೂಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುದ್ದು ಮುಡಿಗೆ	2—0—0	
„ ದುಯಂ „ „	1—15—0	
„ ಅವ್ವಲ್ ಸುಗ್ಗಿ „		
„ ದುಯಂ „ „		
ಅಕ್ಕಿ ಅವ್ವಲ್ ಗುದ್ದು „	5—0—0	5—0—0
„ ದುಯಂ „ „	4—12—0	4—14—0
„ ಅವ್ವಲ್ ಸುಗ್ಗಿ „	4—12—0	
„ ದುಯಂ „ „	4—8—0	4—10—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
„ ಸಿಪ್ಪೆ ಇದ್ದದು „	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	52—8—0	
„ ದಿಲ್‌ಪಸಂದ „	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—14—0	8—15—0
ಸಿಪ್ಪೆಯದ್ದು ಅಡಿಕೆ 1000ಕ್ಕೆ	4—0—0	4—4—0
ಗೇರುಬೀಜ ಮುಡಿಗೆ	8—8—0	8—10—0
ಕಬ್ಬಿನ ಬೆಲ್ಲ ಖಂಡಿಗೆ	35—0—0	43—12—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	14—0—0	14—8—0

Date 28-6-1940 ... ಚಂದಾ ರೂ. 2-0-0 ... ಅಂಚೆ ವೆಚ್ಚ ಸೇರಿ ರೂ. 2-13-0 Regd. No. M.3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 28-6-1940 [ಸಂಚಿಕೆ 26

The Bombay Life Assurance Company, Ltd.

(Estd. 1908)

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality.

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To insure or to represent it Pays you to consult

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay City & Suburbs.

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337, Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY, MADRAS, CALCUTTA

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.